ರ ನಂ. ಬಿ. ೧೯೪೭ ವಾ. ಚಂದಾ ೧—೧೪—೦ ಮಾತ್ರ

ಜಯಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ.)

ಯದ್ಯತ್ ಪರವಶಂ ದುಃಖಂ । ಯದ್ಯದಾತ್ಮವಶಂ ಸುಖಮ್ ॥ — ಮನು

ಸಂಪಾದಕರು— ಮಂಗಳವೇಢೇ ರಾಜೇರಾಯರ ಮೊಮ್ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ಪುಷ್ಯ ಬಹುಳ ೪ ಶಕೆ ೧೮೪೮ ತಾ|| ೭ ೧ ೧೯೨೭. | ಸಂಚಿಕೆ ೩೯

ಸಂಪಾದಕರ ಭೂಮಿ

(೬೨)

ನನ್ನ ಮನಸಿನ ಮೋಹಮಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮ।
ನನ್ನ ದಾದರು ಚೆನ್ನ ಮೋಹಬಸ್ತಿಯು ನೊಂದು ಚಿನ್ಮಯಾಕಾಶದಲ್ಲಿ ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೋ॥

— ಅಂಬಿಕಾತನಯದತ್ತ

ಜಾತಿದ್ವೇಷದ ತೀವ್ರ ವಿಷವು ನಾಡಿನ ರಕ್ತಕಣಗಳಲ್ಲಿ ಸೇರಿ ಅವರ ಜೀವವನ್ನೇ ಹೀರುತ್ತಿರುವದೆಂಬ ಮಾತು ಎಲ್ಲ ಜಾತಿಗಳ ಮುಖಂಡರ ಮನಸಿಗೆ ತಿಳಿದಿದೆ. ಈ ವಿಷ ವೃಕ್ಷದ ಮೂಲವನ್ನು ಕಿತ್ತು ಬಿಸುಡಲು ತಿಳುವಳಿಕೆಯುಳ್ಳ ಜನರು ಉದ್ಯುಕ್ತರಾಗತೊಡಗಿರುವುದು ಇಷ್ಟವಾದುದಾಗಿರುತ್ತದೆ. ಮೊನ್ನೆ ದಿಲ್ಲಿಯಲ್ಲಿ ಕೂಡಿದ ನಿಖಿಲ ಭಾರತೀಯ ಮುಸಲ್ಮಾನ ಸಂಘದ ಅಧಿವೇಶನ ಕಾಲಕ್ಕೆ ಈ ಬಗ್ಗೆ ಶ್ರೀ. ಜಿನ್ನಾ ಇವರು ಮಾಡಿದ ಭಾಷಣವು ಸಮಂಜಸವಾಗಿದೆ. "ಜಾತಿ ದ್ವೇಷವು ನಾಡಿನಲ್ಲೆಲ್ಲ ಹಬ್ಬಿರುವುದು ನಿಜ; ಇಲ್ಲವೆಂದೆನ್ನುವುದು ಅನಿಷ್ಟಕರವಾದುದು. ಈ ದ್ವೇಷಾಗ್ನಿಯು ಮಾತಿನ ಮಳೆಯಿಂದ ಶಾಂತವಾಗತಕ್ಕದ್ದಲ್ಲ; ಉದಾರವಾದ ಆಶಯಗಳನ್ನು ಪ್ರಕಟಿಸುವದರಿಂದ, ಇದು ಅಡಗತಕ್ಕದ್ದಲ್ಲ; ಹಿಂದೆ ಆದುದು ಆಗಿಹೋಯಿತು ಹಳೆಯದನ್ನೆಲ್ಲ ಹುಗಿದುಬಿಡಬೇಕು. ನಾವು ಈಗ ಗೆಳೆತನದ ಕೈಯನ್ನು ಚಾಚಿರುವೆವು. ಹಿಂದುಗಳು ಅದನ್ನು ಒಪ್ಪಿನಿಂದ ಅಪ್ಪಿಕೊಳ್ಳಬೇಕು. ಎಲ್ಲ ಜಾತಿಯವರು ಕೂಡಿ, ಜಾತಿಮತ್ಸರವನ್ನು ಇಲ್ಲದಂತೆಮಾಡಲು, ನಿಶ್ಚಿತ ಬುದ್ಧಿಯಿಂದಲೂ, ಅಂತಃಕರಣ ವೃತ್ತಿಯಿಂದಲೂ ಪ್ರಯತ್ನಪಡಬೇಕು. ಹಿಂದು ಮುಸಲ್ಮಾನರ ಮುಖಂಡರಲ್ಲಿ ಮೇಲಿಂದ ಮೇಲೆ ವಿಚಾರ ವಿನಿಮಯವಾಗಬೇಕು. ಇದರಿಂದ ಒಳಿತೆಯು ಹೆಚ್ಚಾಗಿ ತಪ್ಪು ತಿಳುವಳಿಕೆಗಳು ತಲೆಯೆತ್ತದಂತಾಗುವವು." ಈ ಪ್ರಕಾರ ಜಿನ್ನಾ ಇವರು ತಮ್ಮ ಮನಸ್ಸನ್ನು ಬಿಚ್ಚಿ ಇಟ್ಟಿದ್ದಾರೆ. ಈ ಪ್ರಶ್ನೆಯು ಮಹತ್ವವಾದುದು ಇರುವದರಿಂದ ಎಲ್ಲ ಹಿತಚಿಂತಕರು ಇದನ್ನು ಬಿಡಿಸುವದರ ಕಡೆಗೆ ಒಲೆಯತಕ್ಕದ್ದು. ಉತ್ತರದಲ್ಲಿ ಹಿಂದು-ಮುಸಲ್ಮಾನರ ಕಲಹಗಳ ಕಾಟವಿದ್ದಂತೆ, ದಕ್ಷಿಣದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರ ಸಂಕಟವಿದೆ. ಕರ್ನಾಟಕದಲ್ಲಿ ಇದರ ಗೊಂದಲದಿಂದ ಅನರ್ಥಪರಂಪರೆಗಳು ಸಂಭವಿಸುತ್ತಲಿವೆ. "ಸೇಡು ತೀರಿಸಿಕೊಳ್ಳುವ ಬುದ್ಧಿಯು ಯಾವಾಗಲೂ ಕೆಡಕಿನದು." ಕ್ಷಮಾಗುಣವು ದ್ವೇಷ ಗುಣವು ಒಂದು ಜಾತಿಯ ಔದಾರ್ಯವು ಮತ್ತೊಂದು ಜಾತಿಯಲ್ಲಿ ನೆಲಸಿದ ... ರದ ಬೀಜವನ್ನೇ ನಷ್ಟಪಡಿಸಬಲ್ಲ ಸಾಮರ್ಥ್ಯವುಳ್ಳದ್ದು ... ಮಾತಿಗೆ ಮಾತು ಬೆಳೆಸಿದರೆ, ವಿಧಿ ಒಂದು ನಿಲ್ಲುವದು. ಗಂಜ ಸತ್ತರೂ ಚಿಂತೆಯಿಲ್ಲ ಸವತಿ ರಂಡೆಯಾಗಲಿ ಎಂಬ ಮಂಬಲಕ್ಕೆ ಬೆಂಬಲಕೊಡಬಾರದು. ವಿಕಾರದ ವೈಭವವನ್ನು ನಿಗ್ರಹಿಸಿ, ಪ್ರೇಮದ ಅಸ್ತಿವಾರದ ಮೇಲೆ ನಾಡಿನ ಮಂದಿರವನ್ನು ಕಟ್ಟಲು ಹೆಣಗಬೇಕು.

ಮೊನ್ನೆ ಎರಡನೆಯ ತಾರೀಖಿನ ದಿವಸ ಪುಣೆಯಲ್ಲಿ ಸಂಸ್ಕೃತ ವಿದ್ಯಾಲಯವನ್ನು ತೀವ್ರವಾಗಿ ಸ್ಥಾಪಿಸುವಬಗ್ಗೆ ಒಂದು ದೊಡ್ಡ ಸಭೆಯುನೆರೆದಿತ್ತು. ಅದಕ್ಕೆ ಶ್ರೀ. ನರಸಿಂಹ ಚಿಂತಾಮಣಿ ಕೇಳಕರವರು ಅಧ್ಯಕ್ಷರಿದ್ದರು. ಸಂಸ್ಕೃತವಿದ್ಯಾಲಯವನ್ನು ಸ್ಥಾಪಿಸುವದಾದರೆ ಎಲ್ಲಿ ಸ್ಥಾಪಿಸಬೇಕು. ಇಲಾಖೆಯಲ್ಲಿ ಎಲ್ಲ ಸಂಸ್ಕೃತ ಪಾಠಶಾಲೆಗಳನ್ನು ಹೇಗೆ ಪರಸ್ಪರ ಸಹಕಾರಿಗಳನ್ನಾಗಿಮಾಡಬೇಕು. ಎಂಬವೇ ಮೊದಲಾದ ವಿಷಯಗಳ ಚರ್ಚೆಯು ಬಹಳ ಉತ್ಸಾಹದಿಂದ ನಡೆಯಿತು. ಸಂಸ್ಕೃತ ವಿದ್ಯಾಲಯವನ್ನು ಸ್ಥಾಪಿಸುವುದು ಅತ್ಯಂತ-ಇಷ್ಟವಾದುದೂ, ಅವಶ್ಯವಾದುದೂ ಇರುತ್ತದೆ. ಹಿಂದೀ ಸಂಸ್ಕೃತಿಯ ಹಿಂದೀ ಸಭ್ಯತೆಯ- ತಾಯಿಯೇ ಗೀರ್ವಾಣಭಾಷೆಯು. ಶಿಕ್ಷಣ, ಧರ್ಮ, ಇತಿಹಾಸ, ಕಾವ್ಯ ತತ್ವಜ್ಞಾನ ಇವೆಲ್ಲವುಗಳ ದೃಷ್ಟಿಯಿಂದಲೂ, ಸಂಸ್ಕೃತದ ಅಭ್ಯಾಸವು ಅವಶ್ಯಕರ್ತವ್ಯವು. ಮೊದಲಿನ ಋಷಿಗಳು ಜನರು ತಿಳಿದುಕೊಂಡಂತೆ ಜಡರಿದ್ದಿಲ್ಲ. ಅವರು ಕೇವಲ ಈ ಜಗತ್ತನ್ನು ತಿರಸ್ಕರಿಸುವವರಿದ್ದಿಲ್ಲ. "ಈಗಿನವರಿಗೆ ಸಂಸ್ಕೃತದ ಅಭ್ಯಾಸವೆಂದರೆ ತಲೆಚಿಟ್ಟು ಅದರಲ್ಲೇನಿದೆ; ಗೊಳ್ಳು ಸಂಗತಿಗಳು ಸುಳ್ಳು ಪುರಾಣಗಳು" ಎಂದು ಅವಹೇಲನೆಮಾಡುತ್ತಾರೆ. "ವಿಶ್ವಬಂಧುತ್ವ" 'ಸಹಕಾರ' ಮೊದಲಾದ ಲೌಕಿಕ ಸಂಗತಿಗಳನ್ನು ಅವರಷ್ಟು ತಿಳಿದುಕೊಂಡವರು ಮತ್ತಾರೂ ಇದ್ದಿಲ್ಲ. 'ಸಹನಾವವತು ಸಹನೌ ಭುನಕ್ತು ಸಹವೀರ್ಯಂ ಕರವಾವಹೈ' ಎಂಬುದೊಂದೇ ವಾಕ್ಯವು ಅವರ ಲೌಕಿಕಜ್ಞತೆಗೆ ಸಾಕ್ಷಿಯಾಗಿರುವುದು, ಲಜಪತರಾಯರಂಥವರೂ ಕೂಡ ಸಂಸ್ಕೃತ ಅಭ್ಯಾಸಕ್ಕೆ ಅಷ್ಟೊಂದು ಅನುಕೂಲರಿರುವದಿಲ್ಲೆಂಬುದು ಕಾಲನ ದುರ್ವಿಲಸಿತವೇ ಸೈ. ಅದೇ

ಕಾಲವೇ ಈಗ ಅನುಕೂಲ ಪರಿಸ್ಥಿತಿಯನ್ನುಂಟುಮಾಡಲು ಉದ್ಯುಕ್ತವಾಗಿರುವದು. ಪುಣೆಯಲ್ಲಿಯ ಸಭ್ಯಗೃಹಸ್ಥರು ತಮ್ಮ ಚಟುವಟಿಕೆಯನ್ನು ನಿಲ್ಲಿಸದೇ ಸಂಸ್ಕೃತವಿದ್ಯಾಲಯವನ್ನು ಸ್ಥಾಪಿಸಿ, ತಮ್ಮ ವಿಚಾರಕ್ಕೆ ಮೂರ್ತಸ್ವರೂಪ ಕೊಡಬೇಕೆಂದು ನಮ್ಮ ಬಿನ್ನಹ. ಯೋಗ್ಯ ಕಾಲಕ್ಕೆ ಅವರು ಎತ್ತಿಕೊಂಡ ಪ್ರಯತ್ನ ಸಫಲವಾಗುವದಕ್ಕಾಗಿ ಅವರಿಗೆ ಶತಶಃ ಅಭಿನಂದನೆಗಳು. ಅವರ ಪ್ರಯತ್ನಗಳಿಗೆಲ್ಲ ಕರ್ನಾಟಕದ ಬೆಂಬಲವಿರುತ್ತದೆಂದು ನಾವು ವಿಶ್ವಾಸಪೂರ್ವಕವಾಗಿ ಹೇಳುತ್ತೇವೆ. ವಿಜಾಪೂರ ಜಿಲ್ಹೆಯಲ್ಲಿಯ ಬಾಗಲಕೋಟೆ, ಗಲಗಲಿ ಮೊದಲಾದ ಸ್ಥಾನಗಳಲ್ಲಿ ನ್ಯಾಯ ವೇದಾಂತ, ವ್ಯಾಕರಣ, ಅಲಂಕಾರ, ಕಾವ್ಯ ಮೊದಲಾದವುಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದವರು ಇನ್ನೂ ಸಿಕ್ಕುವರು. ಈ ವಿದ್ಯಾಲಯವು ಸ್ಥಾಪಿತವಾಯಿತೆಂದರೆ, ಸಂಸ್ಕೃತದ ದರವಸ್ಥೆಯು ದೂರಾಗಿ, ಮೊದಲಿನಂತೆ ಅದು ವೈಭವದಿಂದ ಮೆರೆಯುವದು. ಇದರಲ್ಲಿ ತಿಲಮಾತ್ರ ಸಂಶಯವಿಲ್ಲ. ಸಂಸ್ಕೃತ ಅಭ್ಯಾಸವು ವ್ಯವಹಾರಕ್ಕೆ ಬಹಳ ಅನುಕೂಲ. ಮರಾಠಿ, ಕನ್ನಡ ಮೊದಲಾದ ಭಾಷೆಗಳಿಗೆ ಅದು ಈಗ ತಾಯಿಯಂತಾಗಿದೆ. ಅವುಗಳ ಸಾಹಿತ್ಯದ ಬೆಳವಣಿಗೆಗೆ ಸಂಸ್ಕೃತವೇ ಆಧಾರವಾಗುವದು. ನವೆನವಿಗಳನ್ನು ತಿದ್ದಲಿಕ್ಕೆ ಅದರಲ್ಲಿಯ ಧಾರ್ಮಿಕ ವಚನಗಳು ಬಹಳ ಪ್ರಯೋಜನಕಾರಿಯಾದವುಗಳು. ಹೀಗೆ ಬಹುಮುಖವಾಗಿ ಜೀವನದ ಕಾರ್ಯ ಶ್ರೇಯಸ್ಸಿಗಾಗಿ— ಉಪಕಾರಿಯಾಗಿರುವ ಭಾಷೆಯನ್ನು ಎತ್ತಿಹಿಡಿಯುವುದು ಅತ್ಯಾವಶ್ಯಕದ ಮಾರ್ಗವಲ್ಲವೆ?

ಈಗ ಪ್ರದರ್ಶನಗಳು ಅಲ್ಲಲ್ಲಿ ಆಗುತ್ತಿರುವವೆಂಬುದು ಪ್ರಸಿದ್ಧ. ಮೊನ್ನೆ ಬೆಂಗಳೂರಿನಲ್ಲಿ ಕಲಾ ಉದ್ಯೋಗ ಕೃಷಿ ವ್ಯವಸಾಯ ಇವುಗಳ ಪ್ರದರ್ಶನವು ಆಯಿತು. ಪ್ರದರ್ಶನಗಳು ಮನುಷ್ಯನ ಪ್ರಗತಿಯನ್ನು ತೋರಿಸತಕ್ಕಂಥವುಗಳು. ಕಲಾ ಕೌಶಲ್ಯ, ವ್ಯಾಪಾರೋತ್ತೇಜನ ಇವೇ ಮೊದಲಾದ ಲಾಭಗಳು ಅದರಿಂದಾಗುವವು. ಸುಂದರ ಪ್ರದರ್ಶನೀಯಗಳಿಂದ ಮನಸು ಮೋದವನ್ನು ತಾಳುವದು. ಇದೆಲ್ಲ ನಿಜವು. ಈಗಿನ ಪ್ರದರ್ಶನಗಳಿಂದ ಆಗಬೇಕಾದಷ್ಟು ಲಾಭವಾಗುವದಿಲ್ಲವೆಂದು ವಿಷಾದಕರವಾದ ಸಂಗತಿಯು. ಪ್ರದರ್ಶನಗಳು ಸಭ್ಯತೆ ಯುಗದ ಗುರುತುಗಳೆಂದು ಯಾರೂ ಭಾವಿಸಕೂಡದು. ಮೊದಲು ಹಿಂದುಸ್ಥಾನದಲ್ಲಿ ಸಂತೆ ಜಾತ್ರೆ- ಇವುಗಳ ರೂಪದಿಂದ ಪ್ರದರ್ಶನಗಳಾಗುತ್ತಿದ್ದವು. ಅಲ್ಲಿ ಒಕ್ಕಲತನ, ಬಡಿಗತನ, ನೇಕಾರಿಕೆ ಮೊದಲಾದ ಮನೆತನದ ಹೋರೆಗಳಿಗೆ ಬೇಕಾಗುವ ಸಾಮಾನುಗಳೆಲ್ಲ ಪ್ರದರ್ಶಿಸಲ್ಪಡುತ್ತಿದ್ದವು, ಎತ್ತು, ಹೋರಿ ಮೊದಲಾದವುಗಳಾದರೂ ಮಾರಲು ಬರುತ್ತಿದ್ದವು. ಒಡವೆಗಳಾದರೂ ಅಲ್ಪವಾದ ಬೆಲೆಗೆ ದೊರೆಯುತ್ತಿದ್ದವು. ಕುಸ್ತಿ ಮೊದಲಾದ ಆಟನೋಟಗಳು ಜರುಗುತ್ತಿದ್ದವು. ಇದರಿಂದ ಅಂಗಸಾಧನೆಯ ಪ್ರದರ್ಶನವಾದರೂ ಆಗುತ್ತಿದ್ದಿತು. ಈಗಿನ ಪ್ರದರ್ಶನಗಳಲ್ಲಿ ವೆಚ್ಚದ ಪ್ರದರ್ಶನವೇ ಹೆಚ್ಚು ಕಂಡುಬರುತ್ತಿದೆ. ಇದರ ಬಗ್ಗೆ ಹೆಚ್ಚಿನ ವಿಚಾರವನ್ನು ಓದುಗರೇ ಮಾಡಬೇಕು.

ಜಾನೇವಾರಿ ಮೂರನೆಯ ತಾರೀಖಿಗೆ ಲಾಹೋರದಲ್ಲಿ ವಿಜ್ಞಾನ ಶಾಸ್ತ್ರಜ್ಞರ ೧೪ನೆಯ ವಾರ್ಷಿಕ ಸಭೆಯು ಸೇರಿತ್ತು. ಶ್ರೀ. ಜಗದೀಶಚಂದ್ರ ಬೋಸರವರು ಆ ಸಭೆಗೆ ಅಧ್ಯಕ್ಷರಾಗಿದ್ದರು. ಜಗದೀಶಚಂದ್ರರು ವನಸ್ಪತಿ ಜಗತ್ತನ್ನು ಚೆನ್ನಾಗಿ ಅರಿತವರಿದ್ದು, ಅರ್ವಾಚೀನ ಶಾಸ್ತ್ರಜ್ಞರನ್ನು ತಮ್ಮ ಶೋಧಗಳಿಂದ ಬೆಂಗುಮಾಡಿಬಿಟ್ಟಿದ್ದಾರೆ. ಜಗತ್ತಿನಲ್ಲಿಯ ಶಾಸ್ತ್ರಜ್ಞರಲ್ಲಿ ಇವರೇ ಹೆಚ್ಚಿನವರೆಂದರೂ ಸಲ್ಲುವುದು. ತಮ್ಮ ಚಿರಕಾಲದ ಶೋಧಗಳಿಂದ ಜೀವನದ ಏಕತೆಯ ಸಾಮಾನ್ಯ ತತ್ವವು ಸಿದ್ಧವಾಗಿರುವದೆಂದೂ ಅದರಿಂದ ಮನುಷ್ಯಪ್ರಯತ್ನಗಳ ಏಕತೆಯಾದರೂ ಸಿದ್ಧವಾಗುವದೆಂದೂ ಅವರು ಹೇಳಿದರು. ಉತ್ಕ್ರಾಂತಿಗೆ ವಿರೋಧವೊಂದೇ ಸಾಧನವೆಂದು ತಿಳಿದರೆ ಸೃಷ್ಟಿನಿಯಮಗಳ ಬಗ್ಗೆ ಅಜ್ಞಾನವನ್ನೇ ಸೂಚಿಸಿದಂತಾಗುವುದು. ಜೀವನದ ರಚನೆಯನ್ನು ನೋಡಿದರೆ, ಪರಸ್ಪರ ವಿರೋಧಕ್ಕಿಂತಲೂ ಪರಸ್ಪರ ಸಹಕಾರಿತೆಯೇ ಹೆಚ್ಚು ಕಂಡುಬರುವುದು. ಜಗತ್ತಿನಲ್ಲಿಯ ಜ್ಞಾನ ವಿಸ್ತಾರವು ಇಂತಹದೊಂದೇ ಜನಾಂಗದಿಂದ ಆಯಿತೆಂದು ಹೇಳುವುದು ಮೂರ್ಖತನವು. ಜಗತ್ತು ಅನ್ಯೋನ್ಯಾವಲಂಬಿಯಾಗಿದೆ. ಅವಿಚ್ಛಿನ್ನವಾಗಿ ಹರಿಯುತ್ತಲಿರುವ ವಿಚಾರ ಪ್ರವಾಹವು ಮೊದಲಿನ ಜ್ಞಾನಭಾಂಡಾರವನ್ನು ಹೆಚ್ಚೆಚ್ಚು ಶುದ್ಧವಾಗಿ ಮಾಡುತ್ತಲಿದೆ. ಈ ಅನ್ಯೋನ್ಯಾವಲಂಬನೆಯ ಭಾವನೆಯಿಂದಲೇ ಜಗತ್ತು ಕೂಡಿನಿಂತಿದೆ. ಇದರಿಂದಲೇ ಸಭ್ಯತೆಯು ಚಿರಾಯುವಾಗಿ ಮುಂದೆ ಪ್ರಗತಿಯನ್ನು ಹೊಂದುತ್ತಲಿದೆ. ಇಲ್ಲಿಯೇ ತಕ್ಷಶಿಲೆಯಲ್ಲಿ ಗ್ರೀಕ ತತ್ವಜ್ಞಾನಿಗಳೂ ಆರ್ಯರೂ ಕೂಡಿ ವಿಚಾರ ವಿನಿಮಯದಿಂದ ಜ್ಞಾನೋತ್ಕರ್ಷವನ್ನು ಮಾಡಿದರು. ಈಗ ಬಹಳ ದಿನಗಳಾದ ಮೇಲೆ ಪೂರ್ವ ಪಶ್ಚಿಮಗಳು ಕೂಡಿವೆ. ಒಂದರ ಸಂಸರ್ಗದಿಂದ ಮತ್ತೊಂದು ಪ್ರೇರಣೆಯನ್ನು ಹೊಂದಿ ಎರಡರಲ್ಲಿಯ ಸಭ್ಯತಾ ವಿಶೇಷಗಳು ಉತ್ಕೃಷ್ಟವಾದವೆಂದರೆ, ನಿಜವಾದ ಲಾಭವಾದಂತಾಗುವುದು. ಸೃಷ್ಟಿಜ್ಞಾನದ ವಿಷಯದಲ್ಲಿ ಭಾರತೀಯರಿಗೆ ಆದರವಿಲ್ಲವೆಂಬ ಮಾತು ತೀರ ತಪ್ಪು. ಪದಾರ್ಥ ವಿಜ್ಞಾನ ಶಾಸ್ತ್ರದ ಬಗ್ಗೆ ಹಿಂದುಸ್ಥಾನದ ಬೇರೆ ಬೇರೆ ಪ್ರಾಂತಗಳಲ್ಲಿಯ ಜನರು ಮಾಡಿದ ಕೆಲಸವು ಉಚ್ಚವಾದುದು ಇರುತ್ತದೆ. ಶಾಸ್ತ್ರೀಯ ಶೋಧಗಳನ್ನು ಮಾಡಲು ಬೇಕಾದ ಎಲ್ಲ ಗುಣಗಳು ಭಾರತೀಯರಲ್ಲಿ ಕಂಡುಬರುತ್ತಿವೆ. ನವನವೋನ್ಮೇಷಶಾಲಿನಿಯಾದ ಪ್ರಜ್ಞೆಯೂ, ಉಜ್ವಲವಾದ ಅಂತರ್ದೃಷ್ಟಿಯೂ, ಪ್ರಚಂಡ ನಿರ್ಮಾಣ ಶಕ್ತಿಯೂ, ಪ್ರಯೋಗ ಕೌಶಲ್ಯವೂ ಭಾರತೀಯರಲ್ಲಿ ಚೆನ್ನಾಗಿ ಕಂಡುಬರುತ್ತಿವೆ. ಆದುದರಿಂದ ಅವರು ಶಾಸ್ತ್ರೀಯ ಜ್ಞಾನವನ್ನು ಬೆಳೆಯಿಸಲು ಹೆಚ್ಚು ಯೋಗ್ಯರಿರುವರು. ಹೀಗಿದ್ದು ವಿಜ್ಞಾನ ಶಾಸ್ತ್ರದ ಹಿಂದೀ ವಿದ್ಯಾರ್ಥಿಗಳು ಏಕೆ ಮುಂದೆ ಬರಬೊಲ್ಲರೆಂಬುದಕ್ಕೆ ಅವರ ಆರ್ಥಿಕ ಸ್ಥಿತಿಯು ನೆಟ್ಟಗಿರದಿರುವುದೇ ಕಾರಣವು. ನಾರ್ವೆ ಮತ್ತು ಡೆನ್ಮಾರ್ಕಗಳಲ್ಲಿ ಬಡತನವು ಕಂಡುಬರುವದಿಲ್ಲ. ದೇಶದಲ್ಲಿಯ ಸಾಮುಗ್ರಿಯನ್ನು ಅವರು ಶಾಸ್ತ್ರೀಯ ಜ್ಞಾನಬಲದಿಂದ ಚೆನ್ನಾಗಿ ಉಪಯೋಗಮಾಡಿಕೊಳ್ಳುತ್ತಾರೆ. ಹಿಂದುಸ್ಥಾನವು ದೊಡ್ಡ ದೇಶವಿರುವದರಿಂದ ಪರಸ್ಪರ ಸಹಕಾರಿಯಾದ ಎರಡು ವ್ಯವಸಾಯಗಳು ಇರಲೇ ಬೇಕು. ಒಂದು ಕೃಷಿಕರ್ಮ ಮತ್ತೊಂದು ಉದ್ಯೋಗ. ಮಳೆಯು ಕಾಲಕಾಲಕ್ಕೆ ಬೀಳದಿರುವದರಿಂದ ಒಕ್ಕಲತನದ ಮೇಲೆಯೇ ಭಾರಹಾಕುವುದು ಒಳಿತಾಗುವದಿಲ್ಲ. ಆದುದರಿಂದ ಖನಿಜ ದ್ರವ್ಯಗಳನ್ನು ಸರಿಯಾಗಿ ವಿನಿಯೋಗಿಸಿದರೆ, ಉದ್ಯೋಗಕ್ಕೆ ಅನುವಾಗುವುದು. ವಿಶ್ವವಿದ್ಯಾಲಯಗಳಿಂದ ಪ್ರತಿ ವರ್ಷ ಎಷ್ಟೋ ವಿಜ್ಞಾನ ಶಾಸ್ತ್ರ ನಿಷ್ಣಾತರು ಹೊರಡುವರು. ಅವರು ಬುದ್ಧಿವಂತರಾದರೂ ಇರುವರು. ಅವರಿಗೆ ಕಾರ್ಯಮಾಡಲು ಅವಕಾಶವೇ ಇಲ್ಲದಾಗಿದೆ. ಇಂಥವರಿಗೆ ಉದ್ಯೋಗ ಹಚ್ಚುವುದು ನಿಜವಾದ ಮುತ್ಸದ್ದಿತನದ ಕೆಲಸವು. ಇದರಿಂದ ದೇಶದ ಹಿತವೇ ಆಗುವುದು. ರಾಷ್ಟ್ರೀ

ಇದಕ್ಕಾಗಿ ಹಣವನ್ನು ವೆಚ್ಚಮಾಡಲು ಸಿದ್ಧವಾಗಬೇಕು. ಹಣವು ಯೋಗ್ಯವಾಗಿ ವಿನಿಯೋಗಿಸಲ್ಪಟ್ಟಿತೆಂದರೆ, ರಾಷ್ಟ್ರದ ಪ್ರಗತಿಯು ಎಲ್ಲ ರೀತಿಯಿಂದಲೂ ಆಗುವದು. ಈ ಪ್ರಕಾರ ಹೊಸದವರು ಹಿಂದುಸ್ಥಾನದ ಆರ್ಥಿಕ ಪ್ರಗತಿಯ ಮಾರ್ಗವನ್ನು ತೋರಿಸಿಕೊಟ್ಟಿದ್ದಾರೆ. ವಿದ್ಯಾಭ್ಯಾಸವನ್ನು ಮಾಡಿ ಹಾಗೆಯೇ ತಿರುಗುವ ಎಷ್ಟೋ ಜನ ಪದವೀಧರರಿಗೂ ಇದರಿಂದ ಉಪಯೋಗವಾಗುವದು. ಆದುದರಿಂದ ಈ ವಿಷಯದ ಕಡೆಗೆ ಜನರ ಲಕ್ಷ್ಯವು ಹರಿಯುವದು ಅವಶ್ಯಕ.

ವಿಮರ್ಶೆ

ಅನುಕೂಲಸಿಂಧು:— ಇದೇ ಗ್ರಂಥಕರ್ತರ ಮೂರನೆಯ ಪುಸ್ತಕವು ಬೆ. ೦-೫-೦ ಇದರಲ್ಲಿಯೂ ಹಿಂದಿಯ ಪ್ರಮಾಣವು ಅತಿಶ್ರೇಷ್ಠವಾಗಿ ಮಹಾರ ಸದ್ಯದ ಸಮಾಜದಲ್ಲಿ ಕಂಡುಬರುವ ಆಚಾರ [illegible] ಇದೊಂದು ಅಪರೂಪದ ಗ್ರಂಥವಂತೆ! ಇದರಲ್ಲಿ ದಶಪ್ರಕರಣಗಳಿವೆ. ಆಯಾ ವಿಷಯಗಳಲ್ಲಿ ವಿವೇಕಿಯು ರಚನೆ [illegible] ಸಿದ್ಧಾಂತಿಸುವ ಈ ಪ್ರಯತ್ನವು ಇಷ್ಟವೇ ನೇರ ಸರಿ ಕೆಟ್ಟ ವಸ್ತುಗಳ ಅನಿಷ್ಟ ಪರಿಣಾಮವನ್ನು ಕಣ್ಮುಂದೆ ತಂದಿಟ್ಟು ಹೆಯ ಬುದ್ಧಿಯನ್ನು ಹುಟ್ಟಿಸುವದೊಂದು ನೀತಿ ಶಿಕ್ಷಣದ ಸಾಧನವು ಆದರೆ ಇದು ನಮ್ಮ ಧರ್ಮಕ್ಕೂ ಸಂಸ್ಕೃತಿಗೂ ಸರಿಹೊಂದುವದಿಲ್ಲ. ನವ ಗಿ [illegible] ನುಡಿದಂತೆ ನಡೆಯುವ ಹಿರಿಯರು; ಹಾಗೂ ಹೀಗೆಯೇ ಮಾಡೆಂದು ಹೇಳುವ ವಿಧಿಗಳು ಅದರೂ ನಗೆ ಮಾಡಿ ನೀತಿಕಲಿಸುವ ಈ ಅನುಕೂಲ ಸಿಂಧುವು ಎಲ್ಲರೂ ಓದಲು ಯೋಗ್ಯವಾಗಿದೆ.

ಅಪರೋಕ್ಷ ಜ್ಞಾನಿಗಳಾದ

ಶ್ರೀ ಪ್ರಾಣೇಶ ವಿಠ್ಠಲ ವಿರಚಿತ

ಶ್ರೀ ಹರಿ ಕೀರ್ತನ ಮಾಲಾ

೧ ಪ್ರಥಮ ಪುಷ್ಪ ಶ್ರೀ ಕೃಷ್ಣ ಲೀಲಾಮೃತ ಬೆಲೆ ೮ ಆಣೆ

೨ ದ್ವಿತೀಯ ಪುಷ್ಪ ತಾರತಮ್ಯ ಸ್ತೋತ್ರ ಯುಕ್ತ ಮುಯ್ಯದ ಪದ ಬೆಲೆ ೮ ಆಣೆ

೩ ತೃತೀಯ ಪುಷ್ಪ ಕನ್ನಡ ವಾಯು ಸ್ತುತಿ ಬೆಲೆ ೫ ಆಣೆ

ಹನುಮಂತರಾವ ವಕೀಲ ಗೋರಾಬಾಳ.

ಪೋಸ್ಟ- ಲಿಂಗಸುಗೂರ ಜಿಲ್ಲಾ ರಾಯಚೂರು (ನಿಜಾಂ)

ಪ್ರಕಟನೆ.

ಆಯುರ್ವೇದ ವಿದ್ಯಾಲಯ ಬೆಳಗಾವಿ.

ಈ ವಿದ್ಯಾಲಯದ ಅಭ್ಯಾಸಕ್ರಮವು ಹೊಸದಾಗಿ ಜಾನೇವಾರೀ ೧೫ ನೇ ತಾರೀಖಿನಿಂದ ಪ್ರಾರಂಭವಾಗುವದದೆ. ಬರತಕ್ಕ ವಿದ್ಯಾರ್ಥಿಗಳು ೧೬ ವರ್ಷಮೀರಿದವರಿದ್ದು ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದವರಾಗಲಿ ಅಥವಾ ಅಲ್ಲಿಯವರೆಗ ಇಂಗ್ಲೀಷ, ಸಂಸ್ಕೃತ, ಮತ್ತು ಶಾಸ್ತ್ರೀಯವಿಷಯಗಳಲ್ಲಿ ಅಭ್ಯಾಸ ಮಾಡಿದಂಥವರಾಗಲಿ ಇರತಕ್ಕದ್ದು; ಮ್ಯಾಟ್ರಿಕ್ ಪರೀಕ್ಷೆ ಪಾಸಾಗದಿದ್ದ ಪಕ್ಷದಲ್ಲಿ ವಿದ್ಯಾರ್ಥಿಗಳ ಪ್ರವೇಶ ಪರೀಕ್ಷೆಯು ತಕ್ಕೊಳ್ಳಲ್ಪಡುವುದು.. ಶಿಕ್ಷಣ ಕ್ರಮದಲ್ಲಿ ಆಯುರ್ವೇದದ ವಿಷಯಗಳೂ ಪಾಶ್ಚಿಮಾತ್ಯ ವೈದ್ಯ ಶಾಸ್ತ್ರದವಿಷಯಗಳೂ ಸಮಾನವಾಗಿ ಸೇರಿಸಲ್ಪಟ್ಟಿವೆ. ಸಂಪೂರ್ಣ ಅಭ್ಯಾಸ ಕ್ರಮವು ನಾಲ್ಕು ವರ್ಷದ್ದಿದೆ. ಪ್ರತಿ ವಾರ್ಷಿಕ ಫೀ ೭೨ ರೂಪಾಯಿಗಳು. ವಿದ್ಯಾಲಯಕ್ಕೆ ಬರಲಿಚ್ಛಿಸುವವರು ಅರ್ಜಿ ಜಾನೇವಾರಿಯೊಳಗೆ ಕೆಳಗೆ ಬರೆದ ವಿಳಾಸಕ್ಕೆ ಬರೆದು ಕೇಳಿಕೊಳ್ಳಬೇಕು. ತಾ|| ೧೯-೧೨-೧೯೪೨.

ಹಣಮಂತ ವೆಂಕಟೇಶ ಸವಣೂರ

ಎಲ್. ಎಮ್. ಎಸ್

ಪ್ರಿನ್ಸಿಪಾಲ ಆಯುರ್ವೇದ ವಿದ್ಯಾಲಯ ಬೆಳಗಾಂವಿ

ಲಿವರಿನ ಗಡಿಯಾರಗಳು.

ಲಿವರಿನ ಕೈ ಗಡಿಯಾರ ರೂ. ೯.

ಲಿವರಿನ ಕಿಸೆಯೊಳಗಿಡುವ ಗಡಿಯಾರ ರೂ. ೭.



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಮೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ತಾಳುವವು. ಬೆಲೆ ಕಡಿಮೆಯೆಂದು ಅಂಜುವ ಕಾರಣವಿಲ್ಲ. ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ. ಅದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ

ಲಿಚೋ ವಾಚ ಕಂ. (ಇಂಡಿಯಾ.) ಬಾಂಬೆ ೩ ೪.

ಬಿ, ಎಂ. ಹೂಗಾರ ಕೃತ

ತಾಳಪ್ರಸ್ತಾರಸಾಗರ,

೧ ನೇ ಭಾಗ.

(ಮೃದಂಗ ವಿದ್ಯಾವಿನೋದ.)

ಈ ಗ್ರಂಥದಲ್ಲಿ ತಾಳಗಳ ಉತ್ಪತ್ತಿ, ಜಾತಿಭೇದದಿಂದ ಹುಟ್ಟಿದ ೩೫ ತಾಳಗಳನ್ನು ಹಿಡಿಯುವ ಕ್ರಮ, ತಬಲಾದಲ್ಲಿ ಅಕರಗಳನ್ನು ನುಡಿಸುವ ಕ್ರಮ, (ಸಚಿತ್ರ) ಪರಿ, ಕಾಲು, ಮುಕ್ಕಾಲು ತಾಳಗಳನ್ನೂ ಮುಗ್ತಾಯಗಳನ್ನೂ ಮಾಡುವ ರೀತಿ, ಮರ್ಮತಾಳ ಲಕ್ಷಣ ಗುಣಿವಾದ್ಯಶಬ್ದಗಳ ವಿಚಾರ, ಎರಡೂ ತಾಳಗಳನ್ನು ಗತಿಭೇದದಿಂದ ಎರಡೂ ಕೈಗಳಿಂದ ಒಮ್ಮೆಲೆ ನಡಿಸುವ ಕ್ರಮ, ಇತ್ಯಾದ್ಯನೇಕ ರಹಸ್ಯವಾದ ವಿಷಯಗಳು ಸ್ಪಷ್ಟವಾಗಿರುವವು. ಗ್ರಂಥದ ಬಗ್ಗೆ ಅನೇಕ ವಿದ್ವಾಂಸರು ತಮ್ಮ ಸದಭಿಪ್ರಾಯವನ್ನು ವ್ಯಕ್ತಪಡಿಸಿರುವರು, ಈ ಗ್ರಂಥವು ಹತ್ತರಿದ್ದರೆ ಒಬ್ಬ ಸಂಗೀತ ವಿದ್ವಾಂಸನೇ ಹತ್ತರಿದ್ದಂತಾಗಿ ಬೋಧಕರ ಸಹಾಯವೇ ಬೇಕ ಗಲಾರದು.

ಈ ಪುಸ್ತಕದ ಬೆಲೆ ೨—೦—೦ ರೂಪಾಯಿ. ಕಾಲ ವಿಳಂಬವಾದರೆ ಪುಸ್ತಕಗಳು ದೊರೆಯಲಾರವು., ಕೆಳಗಿನ ವಿಳಾಸಕ್ಕೆ ಬರೆದು ಬೇಕಾದವರು ತರಿಸಿಕೊಳ್ಳಬೇಕು.

ವಿಳಾಸ- ಬಸಪ್ಪಾ ಮಲ್ಲಪ್ಪಾ ಹೂಗಾರ.

ಸಾ|| ಚಿಂಚಲಿ. ತಾ. ಗದಗ.

ಪೋ|| ಮುಳಗುಂದ. ಜಿಲ್ಲಾ ಧಾರವಾಡ.

ರಂಗಭೂಮಿಗೆ ಕೌಶಿಕನ ಪ್ರತ್ಯುತ್ತರ.

ರಂಗಭೂಮಿಯ ಸಂಪಾದಕರು ಅಕ್ಷರಗಳಿಗಿಂತಲೂ ಮಿಗಿಲಾಗಿ ವಿಷಯ ವಿವರಣೆಯಿಂದಲೇ ತಮ್ಮ ನಮ್ರತೆಯನ್ನು ಹೆಚ್ಚು ಪ್ರಕಟಿಸಿರುವರು ಎಂಬುದು ಆನಂದದಾಯಕ ಸಂಗತಿ. ಶ್ರೀ. ಗರುಡರ ವಾದಮಾಡುವಾಗ ಈ ರೀತಿಯನ್ನೇ ಆದರ್ಶವಾಗಿಟ್ಟುಕೊಳ್ಳಲಿ.

ನಾನು ಪ್ರಥಮತಃ ನನ್ನ ವ್ಯಕ್ತಿದ್ವೇಷವನ್ನು ಸಾಧಿಸಲು ಈ ಲೇಖನಮಾಲೆಯನ್ನು ಉದ್ದೇಶಿಸುವಷ್ಟು ನೀಚಮಾರ್ಗಿಯಲ್ಲವೆಂಬ 'ರಂಗಭೂಮಿ'ಯ ಸಂಪಾದಕರಿಗೆ ತಿಳಿಸದೆ ಇರಲಾರೆ. ಹಾಗಿದ್ದರೆ ನನಗೆ ಈಗಲೂ ಆಶ್ರಯವನ್ನು ಕೊಡುತ್ತಿರುವ ಒಂದು ಸಂಸ್ಥೆಯನ್ನೂ ಕೂಡಿಕೊಂಡು ನನಗೆ ಎಲ್ಲಾ ಸಂಸ್ಥೆಗಳನ್ನು ಖಂಡಿಸುವ ಅವಶ್ಯಕತೆಯಿದ್ದಿಲ್ಲ. ಈ ಸಂಸ್ಥೆಗಳ ನಿಕಟ ಪರಿಚಯದಿಂದ ಇವರು ಸುಧಾರಿಸುವ ಬಯಕೆಯನ್ನು ತೋರುವವರಲ್ಲವೆಂದು ಖಂಡಿತ ತೋರಿಬಂದುದರಿಂದ ಹಾಗೆ ತೀಕ್ಷ್ಣ ಖಂಡನೆಯನ್ನು ಮಾಡಿದೆ. ಸುಧಾರಿಸುವ ಬಯಕೆಯಿಲ್ಲದವರನ್ನು ನಾವು ಹಾಗೆ ಖಂಡಿಸಿದರೆ ದೋಷವಾಗದು. ಕಾರಣ ಅವರು ಪಾವನರಾಗಿರಲಿ, ಬ್ರಹ್ಮಚರ್ಯ ವಿಘಾತಕಮಾರ್ಗವನ್ನೇ ಹಿಡಿಯುವರು. ಮಹಾತ್ಮಾಜೀಯವರಾದರೂ ನಾಟಕದ ಕುರಿತು ಹೀಗೆ ನುಡಿದಿರುವರು. ಅವರೊಡನೆ ನಾನು ಮಾಡಿದ ರಂಗಭೂಮಿಯ ಕುರಿತ ಸಂಭಾಷಣೆಯಲ್ಲಿ ಅದೇ ಅಭಿಪ್ರಾಯವನ್ನು ಪ್ರಕಟಿಸಿರುವರು. ಈಗ ರಂಗಭೂಮಿಗಳಿಂದ ಉಪಯೋಗವಾಗುತ್ತಿಲ್ಲವೆಂದಲ್ಲ ಉಪಯೋಗಕ್ಕೂ ಮಿಗಿಲಾಗಿ ವಿಘಾತವಾಗುತ್ತಿರುವುದು. 'ಬದುಕುವದಕ್ಕಾಗಿ ಹಣಬೇಕು' ಎಂಬ ಮಾತು ನಿಜ. ಆದರೆ ಈಗಣ ಪ್ರಚಲಿತ ಸಂಸ್ಥೆಗಳು 'ಹಣಕ್ಕಾಗಿ ಬದುಕಿರುವುವೇ' ಹೊರತು 'ಬದುಕಿರುವುದರ ಸಲುವಾಗಿ ಹಣ ಹುಡುಕುತ್ತಲಿಲ್ಲ.' ಅಂತೆಯೇ ವಿಧಾನ ವ್ಯತ್ಯಾಸ. ಆದಕ್ಕಾಗಿ ನನ್ನ ಖಂಡನೆ,

ಅವರಿಗೆ ನಾವು ರಂಜನೆಯನ್ನು ಮಾಡಬೇಡಿರಿ ಎಂದೂ ನಾನು ಅನ್ನುವುದಿಲ್ಲ. ಸಮಾಜವಿಘಾತಕ ಉತ್ತಾನ ಶೃಂಗಾರ ತೋರಿಸದಿರಿ ಎಂಬುದು ನನ್ನ ಅಭಿಮತ. ಬದುಕುವುದರ ಸಲುವಾಗಿ ಈ ರೀತಿ ಯತ್ನಿಸಿದ ಜೀವನಕ್ಕಿಂತಲೂ, ನನ್ನ ಅಭಿಪ್ರಾಯದಂತೆ 'ಮರಣ'ವೇ ಲೇಸು. ಹೀಗೆ ರೈತರ ರಕ್ತವನ್ನು ಹೀರಿ ಬದುಕುವ ಧನಿಯು ಮುಂದೆ ಆ ರೈತರ ಉದ್ಧಾರಮಾಡುವುದು ಆಪ್ಪರಲ್ಲಿಯೇ ಇದೆ. ಉಳಿದ ಎಲ್ಲಾ ವಿಷಯಗಳಲ್ಲೂ ನಾನು ನಿಧಾನಿಸುವೆ. ಆದರೆ ಈ ಒಂದು ಮಾರ್ಗದಲ್ಲಿ ನಾನು ಸುಮ್ಮನಿರಲಾರೆ. ಇನ್ನು ಈಗಣ ಸಂಸ್ಥೆಗಳು, ನಿಜವಾಗಿಯೂ ಸುಧಾರಣೆಗಾಗಿ ಯತ್ನಿಸುವವು ಎಂಬ ರೀತಿಯನ್ನು ನನ್ನ ಅಲ್ಪ ಅನುಭವಕ್ಕೆ ವಿರುದ್ಧವಾಗಿ ತೋರಿಸುವುದಾದರೆ, ನನ್ನ ಖಂಡನೆಯ ಮಾತನ್ನು ನಾನು ಹಿಂದೆಗೆಯಲು ಸಿದ್ಧನಿದ್ದೇನೆ.

ಇತರ ಅನೇಕ ವಿಧದ ಸಮಾಜದ ರೀತಿಯನ್ನು ಖಂಡಿಸಿದ ಮಾತ್ರಕ್ಕೆ ಇದನ್ನು ಖಂಡಿಸಿದುದು ತಪ್ಪೆಂದಾಗದು. 'ಸಿನೇಮಾ ಖಂಡಿಸು' ಎಂಬ ಅವರ ನುಡಿಯನ್ನು ನಾನು ಹಿತದ ನುಡಿಯೆಂದೇ ತಿಳಿಯುವೆನು. ಅವುಗಳನ್ನು ಪ್ರಸ್ತುತ ಲೇಖನದಲ್ಲಿ ಖಂಡಿಸದಿದ್ದರೂ, ಅನೇಕ ಭಾಷಣ ಸಂದರ್ಭಗಳಲ್ಲಿ ಖಂಡಿಸಿಯೇ ಇರುವೆನು. ಅವರ ಉತ್ತರ (೪) ಕ್ಕೆ ಅಂದರೆ ನನ್ನ ಮುಖ್ಯ ವಿಷಯದ ಪ್ರಶ್ನೆಗೆ ನನ್ನ ರಂಗಭೂಮಿಯ ಸುಧಾರಣೆ ಲೇಖಾಂಕ ೩ ಇದರಲ್ಲಿಯೇ ಉತ್ತರವು ಅಡಕವಾಗಿದೆ. ಶ್ರೀಯುತರ ಉತ್ತರದ ಆಧಾರದಿಂದ (ಅರ್ಥವ್ಯತ್ಯಾಸದಿಂದ) ಆ ಸಂಸ್ಥೆಯವರು ಒಟ್ಟಾರೆ ಸ್ತ್ರೀ ನಟರನ್ನು ತರಬೇಕೆಂಬ ಲವಲವಿಕೆಯವರಿದ್ದು, ಸುಧಾರಣೆಯ ಮಾನದೃಷ್ಟಿಯಿಂದಲ್ಲ, ಬರೆ ದುಡ್ಡಿನ ದೃಷ್ಟಿಯಿಂದ ಎಂದು ತಿಳಿಯುವುದಕ್ಕಾಗಿ ನಾನು 'ರಂಗಭೂಮಿಗೆ' ಪ್ರಶ್ನೆಯನ್ನು ಕೇಳಿದೆ. ಅವರ ಉತ್ತರವು ನನಗೆ ಸಮಂಜಸವೇ ಇದೆ.

'ರಂಗಭೂಮಿ' ಪತ್ರಿಕೆಯ ಅವಶ್ಯಕತೆಯು ನನಗೆ ತಿಳಿಯದೆ ಇಲ್ಲ. ಕನ್ನಡ ಪತ್ರಕರ್ತರ ಕಷ್ಟ ನಾನೂ ಅನುಭವಿಸದವನಲ್ಲ ಇಲ್ಲವೆ ಶ್ರೀ. ಭಾರದ್ವಾಜರ ಕರ್ತವ್ಯದಲ್ಲಿ ಬಂದ ತೊಡಕುಗಳು ನನಗೆ ತಿಳಿಯದೆಯೂ ಇಲ್ಲ. ಇಷ್ಟಿದ್ದರೂ ಅವರು ತಮ್ಮ ಪತ್ರಿಕೆಯ ಎರಡನೇ ಸಂಪುಟವನ್ನು ಮುಂದೊತ್ತಿದ ಅವರ ಧೈರ್ಯವನ್ನು ನಾನು ಶ್ಲಾಘಿಸದಿರಲಾರೆನು ಇಲ್ಲವೆ ಅವರ ಚಿರಸ್ಥಾಯಿತ್ವಕ್ಕೆ ದೇವರ ಸಹಾಯವನ್ನು ಕೋರದೆಯೂ ಇರಲಾರೆನು. ಆದರೆ ಪರಸ್ಪರ ಅಭಿಪ್ರಾಯ ಭೇದವನ್ನು ನಾವು ಸಹಿಸಿಯೇ ತೀರಬೇಕು. ಇತಿ

— ಕೌಶಿಕ

ಕಬ್ಬನ್ ಪಾರ್ಕಿನ ವಸ್ತುಪ್ರದರ್ಶನ.

"ನನ್ನ ತುಣುಕು— ವಹಿಯಿಂದ"

ವಸ್ತು ಪ್ರದರ್ಶನವು ಆರಂಭವಾದದ್ದು ಡಿಸಂಬರ ೨೦ನೇಯ ತಾರೀಖಿನದಿವಸ ಅಧಿಕಾರಿಗಳು, ಪುರ ಪ್ರಮುಖರು, ಇವರಿಗೆಲ್ಲಾ ಆಹ್ವಾನಪತ್ರಿಕೆಯು ಹೋದುದು ೨೧ನೇಯ ತಾರೀಖು ಶುಭಮಂಗಳವಾರದದಿವಸ. ಹೆಚ್ಚಿಗೆ ವಿಳಂಬವೇನೂ ಆಗಲಿಲ್ಲ. ಕೇವಲ ೨೪ ಘಂಟೆಗಳು.

× × × ×

ಪ್ರದರ್ಶನವು ಮೈಸೂರು ರೆಸಿಡೆಂಟರಾದ ಮಿ॥ ಪಿಯರ್ಸ್ ಸಾಹೇಬರ ಧರ್ಮಪತ್ನಿಯವರಿಂದ ತೆರೆಯಲ್ಪಡಬೇಕೆಂದು ಗೊತ್ತಾಗಿದ್ದಿತು. ತೆರೆದವರು ಮಿ॥ ಪಿಯರ್ಸರವರೇ. ಹೆಚ್ಚಿಗೆ ವ್ಯತ್ಯಾಸವೇನೂ ಕಂಡುಬರಲಿಲ್ಲ. ಮಿಸೆಸ್ ಹೋಗಿ ಮಿಸ್ಟರ ಆಯಿತು! ಪ್ರಾಯಶಃ ಯಾವ ಹಿಂದಿಯನೂ ದೊರಕಲಿಲ್ಲವೇನೋ?

× × × ×

ವಸ್ತುಗಳನ್ನು ಯುಕ್ತರೀತಿಯಿಂದ ಜೋಡಿಸಲು ಹೆಚ್ಚು ಅವಕಾಶದೊರೆಯಲಿಲ್ಲವೆಂದು ಕಾಣುತ್ತದೆ. ಒಂದುಕಡೆ ಪ್ರೇಕ್ಷಣೀಯ ವಸ್ತುಗಳ ಗುಂಪು ಮತ್ತೊಂದುಕಡೆ ಬರಿಯಬಯಲು ಅಂದರೆ ಲಕ್ಷಣವಾಗಿ ಮೂರು ಅಂಗುಲ ಜರತಾರಿ ರುಮಾಲನ್ನು ಧರಿಸಿ ಅದಕನುಗುಣವಾದ ನೇವಿಬ್ಲೂ ಅಂಗಿಯನ್ನೂ ರಂಗು ರಂಗಿನ ಕಂಠಕೌಪೀನ (ನೆಕ್ ಟೈ) ವನ್ನೂ ಧರಿಸಿ ಒಂದು ಕುಸ್ತಿಯ ಕಾಚಾಧರಿಸಿದಂತೆ- ಇತ್ತೆಂದರೆ ಓದುಗರಿಗೆ ಚೆನ್ನಾಗಿ ಅರ್ಥವಾಗಬಹುದು.

× × × ×

ಜೋರೇಗೌಡನ ದೌರ್ಭಾಗ್ಯಕ್ಕೆ ಏನೆಂದು ಹೇಳಲಿ! ಆಂಗ್ಲೇಯ ಭಾಷೆ ಕಲಿಯದಿದ್ದ ಮೇಲೆ ನನ್ನ ಜನ್ಮ ವ್ಯರ್ಥ 'ವೆಂಬ ಭಾವವು ಈ ವಸ್ತು ಪ್ರದರ್ಶನದಿಂದ ಅವನ ಹೃದಯದಲ್ಲಿ ಮೂಡದಿರಲಿಕ್ಕಿಲ್ಲ. ಪ್ರದರ್ಶನವೆಲ್ಲಾ ಆಂಗ್ಲಮಯವೇ! "ಅಂತಾ ರಾಮಮಯಂ-ಜಗಮಂತಾ ರಾಮಮಯಂ" ಎಂದು ಹಾಡಿದ ಕವಿವರ್ಯ ಶ್ರೀ ತ್ಯಾಗರಾಜರೇನಾದರೂ ತಮ್ಮ ಪೂರ್ವಜನ್ಮದ ಸುಕೃತ ವಿಶೇಷದಿಂದ ೨ ಆಣೆ ಕೊಟ್ಟು ಈ ಪ್ರದರ್ಶನಕ್ಕೆ ಒಂದಿದ್ದಲ್ಲಿ ತಮ್ಮ ಕೃತಿಯಲ್ಲಿನ "ರಾಮ" ಪದಕ್ಕೆ ಬದಲಾಗಿ 'ಆಂಗ್ಲ' ಎಂಬ ಪದವನ್ನು ಖಂಡಿತವಾಗಿಯೂ ಹಾಕುತ್ತಿದ್ದರೆಂದು ನನಗೆ ಪೂರ್ಣನಂಬಿಕೆಯಿದೆ. ಹೆಸರು "ವ್ಯವಸಾಯಿಕ-ವಿಭಾಗ" ಇರುವುದು ವ್ಯವಸಾಯಕ್ಕೆ ಸಂಬಂಧ ಪಟ್ಟ ವಿಷಯಗಳು-ಸೂಚನೆವರ್ಣನೆಗಳೆಲ್ಲ ಆಂಗ್ಲೇಯ ಭಾಷೆಯಲ್ಲಿ ಇದರ ರಹಸ್ಯವೇನಿರಬಹುದೋ? ಮಂದಮತಿಯಾದ ನನಗೇಕೆ! ಮುಖ್ಯ ಇದು ಮೈಸೂರಿನವರ ನಡವಳಿಕೆಯ ವೈಶಿಷ್ಟ್ಯವೆಂದು ಕನ್ನಡಿಗರು ಅರಿತರೆಸಾಕು

× × × ×

ಅನೇಕ ಸ್ತ್ರೀ ಪುರುಷರಿಗೆ "ಜೂಜು" ಯಂದರೇನೆಂಬುದು ತಿಳಿದಿರಲಿಲ್ಲ. ಸರ್ವಜ್ಞಮೂರ್ತಿಗಳಾದ ನಮ್ಮ ಇಂದಿನ ತರುಣರು ಈ ಸಂದರ್ಭದಲ್ಲಿ ಇದರ ಪೂರ್ಣಪರಿಚಯವನ್ನು ಮಾಡಿಕೊಂಡೇ ಇರುವರು. ಪ್ರದರ್ಶನದಲ್ಲಿನ ಒಂದು ಅಂಚೆಲ್ಲಾ ಜೂಜಿನ ಕಟ್ಟೆಗಳಮಯ. ನನ್ನ ವಿಹಂಗಮದೃಷ್ಟಿಗೆ ೬೦ ಕಟ್ಟೆಗಳು ಕಂಡುಬಂದವು ದೇವಾಲಯಕ್ಕೆ ಹೋದವರು ದೇವರ ಹುಂಡಿಗೆಗೆ ಕಾಣಿಕೆಹಾಕಿ ಬರಬೇಡವೇ?!! ಸಿರಿಮನೆಗೆ ಹೋಗಲು ಇದು ಬಹು ಹತ್ತಿರದದಾರಿಯಲ್ಲವೇ?! ನಮ್ಮ ಡಿಸ್ಟ್ರಿಕ್ಟ ಬೋರ್ಡಿನವರ ದೂರದರ್ಶಿತ್ವದ ಚಾಣಕ್ಯಬುದ್ಧಿಗೆ ಏನು ಕೊಟ್ಟರೂ ಸ್ವಲ್ಪವೇ? ಜೂಜಿನ ಕಟ್ಟೆಯನ್ನಿಟ್ಟಿದ್ದವರಲ್ಲಿ ನೂರಕ್ಕೆ ೩೩ ಆಂಗ್ಲೇಯರು.

" ೨೭—ಮುಸಲ್ಮಾನರು

" ೧೦—ಹಿಂದುಗಳು

" ೩೦—ಆಂಗ್ಲೇಯರು ಮತ್ತು ಮುಸಲ್ಮಾನರು ಸೇರಿ ಇಟ್ಟಿದ್ದ ಕಟ್ಟೆಗಳು. ಹಣಹಾಕಿ ಕಳೆದುಕೊಂಡವರಲ್ಲಿ ಹಿಂದುಗಳೇ ಹೆಚ್ಚು ಒಂದು ನಾಗರೀಕತೆಯ ಕುರುಹು.

× × × ×

ಜರ್ಮನಿಯಿಂದ ಹಿಗನ್‌ಬೆಕ್ ಎಂಬುವನೊಬ್ಬನು ಹಿಂದುಗಳನ್ನು ನಮ್ಮ ದೇಶದಿಂದ ಕೊಂಡೊಯ್ದು ಬರ್ಲಿನ್ ನಗರದ (ಜೂ) ಪಶು ಪ್ರದರ್ಶನಾಲಯದಲ್ಲಿಟ್ಟು ಅವರಿಂದ ಹೇಸಿಗೆಯಾದ ಕೆಲಸಗಳನ್ನು ಮಾಡಿಸಿ ಜರ್ಮನಿಯವರಿಗೆ ವಿನೋದವನ್ನುಂಟುಮಾಡಿದನಷ್ಟೇ! ನಮ್ಮ ಪ್ರದರ್ಶನ ಕಾರ್ಯದರ್ಶಿಗಳು ಅವನ ಮೇಲ್ಪಂಕ್ತಿಯನ್ನನುಸರಿಸಿದಂತೆ ಕಾಣುತ್ತದೆ. ನಮ್ಮ ದೇಶೀಯರಾದ ಲಂಬಾಣಿಗರು ಕೋಲಾಟವಾಡುತ್ತಾ ಕುಣಿಯುವುದು, ಅವರ ಸುತ್ತಲೂ ಆಂಗ್ಲೇಯರೂ ಹಿಂದುಗಳೂ ಹಲ್ಲುಬಿಡುತ್ತಾ ನಿಂತು ನಗುವುದು. ಹೋಗುವಾಗ ಬಹು ಉದಾರಮತಿಯಿಂದ ಒಂದು ತಾಮ್ರದ ಬಿಲ್ಲೆಯನ್ನು ಅವರಿಗೆ ಬಿಸಾಡುವುದು! ಈ ಕೋಲಾಟದ ಚಿತ್ರವನ್ನು (ಫೋಟೋಗ್ರಾಫ) ತೆಗೆದುಕೊಂಡು ಹೋದ ಆಂಗ್ಲೇಯರ ಆನಂದಕ್ಕೆ ಪಾರವೇಇಲ್ಲ! ಹೀಗಿರುತ್ತಾ ಹಿಗಿನ್‌ಬೆಕ್ಕನನ್ನೇಕೆ ನಾವು ನಿಂದಿಸಬೇಕು.?

× × × ×

ಈ ಪ್ರದರ್ಶನದಲ್ಲಿ ಓಗಲೆಯವರ ಕಾಜಿನ ಸಾಮಾನು ೧೪ ಕಿರ್ಲೋಸ್ಕರರವರ ಕಬ್ಬಿಣದ ಸಾಮಾನುಗಳೂ ಎಲ್ಲರಿಗೂ ವಿಸ್ಮಯವನ್ನುಂಟುಮಾಡಿತು. ಏನು ಮಾಡಿದರೇನು? ಸಾಮಾನುಗಳನ್ನು ನೋಡಿ ಹಲ್ಲುಕಿರಿಯುವುದು. ಮನೆಗೆ ಹೋದಕ್ಷಣವೇ ಡೀಟ್ಸ್‌ಲ್ಯಾಂಟ್ರನ್ನಿಗೂ— ಮೇಯರ್ ಕಂಪನಿಗೂ ಬರೆಯುವುದು— ಯಾಕಂದರೆ ನಮ್ಮ ದೇಶದ ಸಾಮಾನುಗಳಲ್ಲಿ ರಮ್ಯತೆಯಿಲ್ಲವಂತೆ ಕೆಲಸದಲ್ಲಿ ನಯವಿಲ್ಲವಂತೆ! ಬೆಲೆ ಹಿರಿದಂತೆ! ಹೆಚ್ಚೇನು ನನ್ನ ಗೆಳೆಯರೊಬ್ಬರು ಹೇಳಿದಂತೆ ಅವರ ಮಿದುಳೆಲ್ಲಾ ಲಾಯಿಡ್ ಜಾರ್ಜ್, ಚಾರ್ಲ್ಸ್‌ನ್‌ರ ಒಟ್ಟಿನಧೂಳಂತೆ!!!

× × × ×

ಕರ್ನಾಟಕದಲ್ಲಿ ಕಿರ್ಲೋಸ್ಕರ ಅಂತಹ ಕಬ್ಬಿಣಸಾಮಾನಿನ ಕಾರ್ಖಾನೆಯೂ, ಓಗಲೆಯವರ ಕಾರ್ಖಾನೆಯಂತಹ ಗಾಜಿನ ಕಾರ್ಖಾನೆಯೂ ಆಗುವುದಾವಾಗ? "ನಮ್ಮನಾಗಕ್ಕೆ ಮೊಸೆಬಂದಾಗ"

× × × ×

೨೭ ನೇಯತಾರೀಖಿನ ದಿವಸ ಪ್ರದರ್ಶನದಲ್ಲಿ ಇದ್ದ ಕೆಲವು ಅಂಗಡಿಗಳಿಗೆ ಬಿಟ್ಟ ಬಾಣಬಿರುಸುಹೊಡೆಯುವವನ ಅಜಾಗರೂಕತೆಯಿಂದ ಬೆಂಕಿಬಿದ್ದು ಎರಡು ಲಕ್ಷರೂಪಾಯಿಗಳ ವರೆಗೆ ನಷ್ಟವಾದದ್ದು ಶೋಚನೀಯವಾಗಿದೆ. ಮಾವನಮನೆಗೆ ಹೋದ ಅಳಿಯನು ಕಂದೀಲನ್ನು ಸೂರ್ಯನ ಮರಿಯೆಂದುಭ್ರಮಿಸಿ ಕದ್ದು ತನ್ನಊರಿಗೆ ತೆಗೆದುಕೊಂಡು ಹೋಗಲಪೇಕ್ಷಿಸಿ ಅದನ್ನು ಹುಲ್ಲಿನ ಮೆದೆಯಲ್ಲಿ ಬಚ್ಚಿಟ್ಟ ಕತೆಯು ಈಗ ಜ್ಞಾಪಕ್ಕೆ ಬರುತ್ತದೆ. ಬಾಣಬಿರುಸುಗಳಿಲ್ಲದಿದ್ದರೆ ಪ್ರೇಕ್ಷಕ (ಶಿಶು) ವೃಂದವು ಸುಮ್ಮನಾಗುತ್ತಿರಲಿಲ್ಲವೋ ಏನೋ?

× × × ×

ಒಟ್ಟಿನಲ್ಲಿ ಕನ್ನಡಿಗರಿಗೆ ಬಹಿಷ್ಕಾರ, ಕನ್ನಡಕ್ಕೆ ತಿರಸ್ಕಾರ, ಜೋರೇಗೌಡನಿಗೆ ಮಂಕುಬೂದಿ, ಆಂಗ್ಲೇಯರಿಗೆ ಆನಂದ, ಜೂಜಿನಕಟ್ಟೆಯಮಾಲೀಕರಿಗೆ ಹಿಡಿಹೊನ್ನು, ಬಡವರಿಗೆ ಬಡತನ, ಸಿರಿವಂತನಿಗೆ ಸಿರಿತನ ಆದರೂ ಮೈಸೂರನ್ನು ಮಾದರಿ ಸಂಸ್ಥಾನವನ್ನಾಗಿ ಮಾಡಿ ಜೋರೇಗೌಡನನ್ನೂ ಭಾಗ್ಯವಂತನನ್ನಾಗಿ ಮಾಡಲು ಹಲವು ಸಲಹೆಗಳು ದೊರೆಯುತ್ತಿದ್ದು (ಸೂಕ್ಷ್ಮಗ್ರಾಹಿಗೆ) ಮರದಪುಡಿಯಲ್ಲಿ ನೆಲಕ್ಕೆಹಾಸುವ ಹಂಚುಗಳನ್ನು ಮಾಡಿ ಶ್ರೀ ಎಸ್. ಜಿ ಶಾಸ್ತ್ರಿಗಳು ಪ್ರದರ್ಶಿಸಿದ್ದರು. ಇದು ಒಳ್ಳೆಯ ಕೈಗಾರಿಕೆಯನ್ನುವದರಲ್ಲಿ ಸಂದೇಹವಿಲ್ಲ ಕನ್ನಡಿಗರೇ ಆರಂಭಿಸುವರೋ ಇಲ್ಲಾ ತಮ್ಮ ಯಥಾಸಾವಕಾಶದ ಗುಣದಿಂದ ಮದರಾಸಿನವರಿಗೆ ಅಥವಾ ಬೊಂಬಾಯಿಯವರಿಗೆ ವಶಪಡಿಸುವರೋ ನೋಡಬೇಕಾಗಿದೆ.

ವಿಶ್ವಭ್ರಾತಾ

ಪತ್ರವ್ಯವಹಾರ.

ಶ್ರೀ ವೇದವ್ಯಾಸಾಯ ನಮಃ

ಸಂಪಾದಕ ಮಹಾಶಯರೇ

ಈ ವರ್ಷದ ೩೦ ನೇ ಸಂಚಿಕೆಯ ಕನ್ನಡಿಗನಲ್ಲಿ ನಮ್ಮ ಪಾಠಶಾಲೆಯ ಬಗ್ಗೆ ಶ್ರೀ ಶ್ರೀಮದುತ್ತರಾದಿ ಮಠಾಧೀಶರ ವಿಷಯವಾಗಿ ಅಸದಭಿಪ್ರಾಯವನ್ನು ಪ್ರಕಟಿಸಿದ್ದರಿಂದ ನಾವು ಪ್ರಸ್ತಾ

ಸಿಸಬೇಕಾಗಿಬಂದಿದೆ. ಶ್ರೀ. ಶ್ರೀಸತ್ಯಧ್ಯಾನತೀರ್ಥ ಸ್ವಾಮಿಗಳವರ ದಿವ್ಯಚರಿತ್ರವೇ ವಿದ್ಯಾಭಿವೃದ್ಧಿ ಸದ್ಧರ್ಮ ರಕ್ಷಣರೂಪವಾಗಿರುವದೆಂಬುದನ್ನು ಕರ್ನಾಟಕದಲ್ಲಿ ಹೊಸದಾಗಿ ಹೇಳಬೇಕಾಗಿಲ್ಲ.

ಆ ಉದಾರಚರಿತರಾದ ಮಹನೀಯರು ಪ್ರತಿವರ್ಷ ಮಹಾಸಮಾರಾಧನೆಯ ಸಮಯದಲ್ಲಿ ವಿದ್ವದ್ವಿದ್ಯಾರ್ಥಿಗಳಿಗೆ ಲಕ್ಷ್ಯಾವಧಿ ರೂಪಾಯಿಗಳನ್ನು ಖರ್ಚುಮಾಡುವದನ್ನು ನೋಡಿದರೆ ವರಮಾನಂಬಿಂದ ಪರವಶರಾಗಿ ಧನ್ಯಧನ್ಯ ಇಂಥ ಗುರುಗಳು ಲಭಿಸಿದ್ದಕ್ಕೆ ನಾವೇ ಧನ್ಯರೆಂದು ಉದ್ಗಾರತೆಗೆಯುವ ಸಾವಿರಾರು ಜನರೇ ಇವರ ಅನುಪಮ ಚರಿತ್ರಕ್ಕೆ ಸಾಕ್ಷಿಗಳು. ಈ ಮಹಾನುಭಾವರು ವಿದ್ಯಾರ್ಥಿಗಳ, ಮತ್ತು ವಿದ್ವಾಂಸರ ಅನಾನುಕೂಲತೆಗಳನ್ನು ಪರಿಹರಿಸುವದರಲ್ಲಿ ಬದ್ಧಪರಿಕರರು. ಪಾಠಶಾಲೆಯು ಅಧ್ಯಾಪಕನಾಗಿರುವ ನಾನು ಸ್ವನಂಧಯಶಿಶುವಾಗಿರಲು ಪ್ರಾರಂಭಿಸಿ ಈವರೆಗೂ ಶ್ರೀಗಳವರ ಪರಮಾನುಗ್ರಹದಿಂದಲೇ ಅಭಿವೃದ್ಧನಾಗಿ ಅವರ ಕೃಪಾಬಲದಿಂದಲೇ ಪ್ರಸನ್ನವಾಗುತ್ತಲಿದ್ದೇನೆ. ಆ ಮಹನೀಯರ ಕೃಪಾಕಟಾಕ್ಷಬಲವೇ ನನಗೂ ನನ್ನ ಕಾರ್ಯಕ್ಕೂ ಪ್ರತಿಕ್ಷಣದಲ್ಲಿಯೂ ರಕ್ಷಣದಲ್ಲಿ ದತ್ತದೀಕ್ಷವಾಗಿದೆ. ಅವರು ದಯಪಾಲಿಸಿದ ಅನುಪಮ ಸಹಾಯವು ಜನ್ಮಜನ್ಮಗಳಲ್ಲಿಯೂ ಅವಿಸ್ಮರಣೀಯವಾಗಿರುವದರಿಂದ ನಾವು ಎಷ್ಟು ವರ್ಣಿಸಿದರೂ ಸಾಲದು.

ಇಂಥ ಅಸದೃಶ ಪರೋಪಕಾರಿಗಳೂ ಉದ್ಧಾರಕರೂ ಆಗಿರುವ ಶ್ರೀ. ಶ್ರೀಗಳವರ ವಿಷಯದಲ್ಲಿ ವಾಚಕರು ವಿಶೇಷವಾಗಿ ತಿಳಿಯಬೇಕೆಂದು ಪ್ರಾರ್ಥಿಸುವೆನು.

ವೇದವ್ಯಾಸಾಚಾರ್ಯ ಮಳಗಿ.
ಪಾಣಿನಿವಿಲಾಸ ಸಂಸ್ಕೃತ ಪಾಠಶಾಲೆ
ಬಾಗಲಕೋಟೆ

ವರ್ತಮಾನಸಾರ.

ಇಹವೃತ್ತ

ಜಾನೇವಾರಿ ೧ ನೇ ತಾರೀಖಿನ ದಿವಸ, ವಿಜಾಪುರ ಜಿಲ್ಲೆಯ ಶಿಕ್ಷಕರ ಸಭೆಯು ಕೂಡಿತ್ತು. ಸಭೆಗೆ ಮುದ್ದೇಬಿಹಾಳ ವಕೀಲರಾದ ಶ್ರೀಯುತ ವೀರಭದ್ರಪ್ಪನವರು ಅಧ್ಯಕ್ಷರಿದ್ದರು. ಸಭೆಯಲ್ಲಿ ಪಾಸಾದ ಮುಖ್ಯ ಠರಾವುಗಳೆಂದರೆ ೧-ರ್‍ವ್ಹಟ ಲರಾವನ್ನು ತಿದ್ದುಪಡಿಯನ್ನು ವಿರೋಧಿಸುವದು. ೨ ನಾಲ್ಕು ವರ್ಷದ ತಿದ್ದಪಡಿಯು ಆಮೇಲಿನದ್ದು ತರದ ಸರಕಾರಕ್ಕೆ ಕೇಳುವದು. ೩ ಶಿಕ್ಷಕರ ಸಂಘದ ಸುವ್ಯವಸ್ಥೆಯ ಕುರಿತು. ಜಿಲ್ಲಾ ಶಿಕ್ಷಕರಸಭೆಯನ್ನು ಮುಂದೆ ತಿಂಗಳಲ್ಲಿ ಕರೆಯುವದು ಸಭೆಗೆ ಎಲ್ಲ ತಾಲೂಕಗಳಿಂದಲೂ ಶಿಕ್ಷಕರು ಬಂದಿದ್ದರು ಅಜಮಾಸು ೧೦೦ ಜನ ಶಿಕ್ಷಕರು ಸಭೆಗೆ ಸೇರಿದ್ದರು.

ವಿಜಾಪುರ ಜಿಲ್ಲೆಯ ಡಿ. ಡಿ. ಕಲೆಕ್ಟರ ಉತ್ತರಭಾಗದವರ ೧೯೨೭ ನೇ ಜಾನೇವಾರಿ ತಿಂಗಳ ಮುಕ್ಕಾಮುಗಳು ೬ ರಿಂದ ೮ ಕಲ್ಹರ ೯ ರಿಂದ ೧೮ ವಿಜಾಪುರ ೧೯ ರಿಂದ ೨೪ ಹೊನವಾಡ ೨೫ ರಿಂದ ೨೮ ತಿಕೋಟಾ ೨೯ ರಿಂದ ಫೆಬ್ರುವರಿ ೧ ರ ವರೆಗೆ ಬಾಬಾನಗರ, ೨ ರಿಂದ ೫ ಜೈನಾಪೂರಗಳಲ್ಲಿ ಇರುವವು.

ಮೈಸೂರ ಕರ್ನಾಟಕ.

ಮೊನ್ನೆ ಆದಿತ್ಯವಾರದಿವಸ ಬೆಂಗಳೂರು ವಿದ್ಯೋದ್ಯೋಗಿಕ ಕಲಾಶ್ರಮದ ಶಂಕುಸ್ಥಾಪನ ಜರುಗಿತು. ಮೈಸೂರ ದಿವಾನರು ಇದು ಬಹಳ ಅವಶ್ಯಕವಾದ ಯೋಜನೆಯೆಂದು ಹೇಳಿದರು

ಹಿಂದುಸ್ಥಾನ.

ಕಲಕತ್ತೆಯಲ್ಲಿ ಔದ್ಯೋಗಿಕ ಮತ್ತು ವ್ಯವಹಾರಿಕ ಕಾಂಗ್ರೆಸ್ಸು ಜಾನೇವಾರಿ ೩ ನೇ ತಾರೀಖಿಗೆ ನೆರವೇರಿತು

ಹಿಂದೀ ಅರ್ಥಿಕ ಪರಿಷತ್ತು ಕಲಕತ್ತೆಯಲ್ಲಿ ಮೊನ್ನೆ ಸೋಮವಾರ ತನ್ನ ಹತ್ತನೇ ಅಧಿವೇಶನವನ್ನು ಜರುಗಿಸಿತು ಅದರಲ್ಲಿ ಹಿಂದುಸ್ಥಾನದ ಚಲನಪದ್ಧತಿ ಮತ್ತು ವಿನಿಮಯ ಈ ವಿಷಯಗಳು ಚರ್ಚಿಸಲ್ಪಟ್ಟವು

ಪುಣೆಯಲ್ಲಿ ಮೊನ್ನೆ ಆದಿತ್ಯವಾರ ಸಂಸ್ಕೃತ ವಿದ್ಯಾಲಯವನ್ನು ಶೀಘ್ರವಾಗಿ ಸ್ಥಾಪಿಸುವ ಕುರಿತು ಒಂದು ದೊಡ್ಡ ಸಭೆಯು ನೆರೆದಿದ್ದಿತು

ಹೊಸ ಶಿಕ್ಷಣ ಮಂತ್ರಿಗಳಾದ ರಾವಬಹಾದ್ದೂರ ಪಾಟೀಲರವರು ಸಾಯಂಕಾಲ ಒಂದು ಭೋಜನ ಸಮಾರಂಭದಲ್ಲಿ ಹೇಳಿದ್ದೇನಂದರೆ ಪಾಠಶಾಲೆ ಮತ್ತು ಶಾಂತಿಕತ್ವ ಇವುಗಳಿಂದ ಕೂಡಿರುವ ಧೋರಣವನ್ನು ನಾನು ಸ್ವೀಕರಿಸುವೆನು. ಹಣದ ಕೊರತೆ ಇದ್ದಾಗ್ಯೂ ಕೂಡಾ ಇದ್ದ ಶಿಕ್ಷಣದ ಅವಕಾಶಯನ್ನು ಹೆಚ್ಚು ಸುವ್ಯವಸ್ಥಿತ ಮಾಡಲು ಯತ್ನಿಸುವೆ

ಗಾಂಧೀಯವರು ೩ನೇ ತಾರೀಖಿನದಿವಸ ಚಿತ್ತರಂಜನ ಸೇವಾಸದನದ ಕಟ್ಟಡಕ್ಕೆ ಅಡಿಗಲ್ಲನ್ನು ಇಟ್ಟರು ಆ ಸೇವಾಸದನವು ಎಲ್ಲ ಜಾತಿಯವರ ಜನರಿಂದಲೂ ಎಲ್ಲ ಪಂಥದವರ ಮತದಿಂದಲೂ ಇರುತ್ತದೆಂದು ಗಾಂಧಿಯವರು ಹೇಳಿದರು.

೧೨ನೇಯ ಮಾರ್ಚ್, ಯಂ, ಸಿ, ಎ, ನ್ಯಾಶನಲ್ ಕೌನಸಿಲ್ಲನ್ನು ಡಿಸೆಂಬರ ೩೧ ನೇ ತಾರೀಖಿನದಿವಸ ಪುನಃಕೂಡಿ ಜಾತಿದ್ವೇಷವನ್ನು ತೆಗೆದು ಹಾಕಲು ಕೆಲವು ಉಪಾಯಗಳನ್ನು ಸೂಚಿಸಿತು

ಹೊಸ ಮಂತ್ರಿಗಳು ರಾಜನಿಷ್ಠೆಯ ಪ್ರತಿಜ್ಞೆಯನ್ನು ಸೋಮವಾರದಿವಸ ಅಧಿಕಾರ ವಹಿಸಿಕೊಳ್ಳುವ ಮುಂಚೆ ಮಾಡಿದರು.

ಡಾಕ್ಟರ ಹರಿಸಿಂಗಗೌಡರ ತಂದೆಯವರು ತೀರಿದ ಕಾರಣ ದ್ವಿಯ ಅವರು ಮಂತ್ರಿಪದವನ್ನು ಸ್ವೀಕರಿಸಿದರೋ ಇಲ್ಲವೋ ಇನ್ನೂ ತಿಳಿಯಲಿಲ್ಲ.

ಕಲಕತ್ತಾ ಕಾರ್ಪೊರೇಶನದವರು ಶ್ರೀನಿವಾಸಅಯ್ಯಂಗಾರರಿಗೆ ೨ನೇ ತಾರೀಖಿನದಿವಸ ಮಾನಪತ್ರವನ್ನು ಅರ್ಪಿಸಿದರು ಮಾನಪತ್ರಕ್ಕೆ ಉತ್ತರ ಕೊಡುವಾಗ ಮುನಿಸಿಪಾಲಿಟೀ ಯಂಥ ಸಂಸ್ಥೆಯು ಸ್ವಾತಂತ್ರ್ಯದಿಂದ ಬಂದದ್ದಲ್ಲ ಆಶೋತ್ತರವಾಗಿದೆ ಇಂಥ ಸಂಸ್ಥೆಗಳಿಂದ ದೇಶವು ಉನ್ನತಿಗೇರುವದು ಎಂದು ಹೇಳಿದರು.

ಮುಂಬಯಿ ಕರ್ನಾಟಕ.

೧೯೨೬ನೇ ಇಸವಿಯ ನವಂಬರ ಅಕ್ಟೋಬರ ತಿಂಗಳಬಗ್ಗೆ ಬೆಳಗಾವ ಆರೋಗ್ಯ ಖಾತೆಯವರು ಪ್ರಸಿದ್ಧಿಸಿರುವ ಜನನ ಮರಣ ಪತ್ರಿಕೆಯಲ್ಲಿ ಕರ್ನಾಟಕದ ಕೆಲವು ದೊಡ್ಡ ಪಟ್ಟಣಗಳಲ್ಲಿಯ ಸಂಖ್ಯೆಯು ಕೆಳಗೆ ಕೊಡಲ್ಪಟ್ಟಿದೆ.

ಪಟ್ಟಣ	ಹುಟ್ಟಿದ್ದು	ಸತ್ತದ್ದು (ಇದರಲ್ಲಿ)	ಪ್ಲೇಗದಿಂದ	ಮೈಲಿ
ಬೆಳಗಾವ	೧೯೪	೧೭೭	೬	೧
ಧಾರವಾಡ	೧೮೪	೨೨೯	೪೬	೦
ಹುಬ್ಬಳ್ಳಿ	೪೩೨	೪೮೨	೭೭	೦
ಗದಗಬೆಟಗೇರಿ	೩೯೩	೨೫೪	೫೦	೦
ವಿಜಾಪುರ	೧೮೨	೧೭೪	೩೯	೦
ಬಾಗಲಕೋಟೆ	೧೪೦	೧೪೩	೦	೦
ಕಾರವಾರ	೫೯	೩೪	೦	೦

ನಿಜಾಂಸರಕಾರದವರಿಗೆ ೫೦ ವರ್ಷಗಳು ತುಂಬಿದ್ದರಿಂದ ರಾಜ್ಯದಲ್ಲಿಯ ಎಲ್ಲ ಪ್ರಜೆಗಳು ಅವರ ಜನ್ಮದಿವಸದ ಉತ್ಸವವನ್ನು ಜರುಗಿಸಿದರು ಉಸ್ಮಾನಿಯಾ ವಿಶ್ವವಿದ್ಯಾಲಯವನ್ನು ನಿರ್ಮಿಸಲಾದ ಕಟ್ಟಡಗಳನ್ನು ಸ್ಥಾಪಿಸಲಿಕ್ಕೆ ಇದೆ.

ದಿ ಮಿಯನಾಟೆಕ್ ಗಾರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೬ ನೇ ಇಸ್ವಿಯ ಜುಲೈ ೩೧ ನೇ ತಾ॥ ದಿವಸ ೬.೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇಅರಮನಾದ ರಾವಸಾಹೇಬ ಡಾಕ್ಟರ, ಕೆ ಎಸ್. ಭಾಸ್ಕರ L. R. C. P L. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸಧ್ಗ್ರುಹಸ್ತರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತುಃ—

(೧) ಎಲ್. ಬಿ ಸಿ ನಂ. ೬೪೪. ಮಿ. ಮಹಮ್ಮದ ಯುಸುಫ ಡಿಸ್ಟಿಲರಿ ಗಾರ್ಡ. ನಾರಾಯಣ ಗುಡ ಡಿಸ್ಟಿಲರಿ, ಹೈದರಾಬಾದ್ಡೆಕನ್ನ ರೂ ೧೦೦೦

(೨) ಎಲ್. ಬಿ. ಸಿ. ನಂ ೫೧೨ ಮಿ. ಸೈಯದ್ ಜಹೂರಅಲಿ ಬಿ. ಎ ಬಿ. ಟಿ. ಶಾಲಾಗಳ ಡಿವಿಜನಲ್ ಇನ್‌ಸ್ಪೆಕ್ಟರ್ ಔರಂಗಬಾದ ಸಿಟಿ, ನೈಜಾಮ ಇಲಾಖಾ ರೂ. ೧೦೦೦

(೩) ಎಲ್. ಬಿ ಸಿ ನಂ ೨೬೬೯ ಮಿ. ದೇವನ ವಾಸುದೇವನ ನಂಬೂದ್ರಿಪಾದ ಜಮೀನದಾರ ಐಡಪಲ್ಲಿ ಅಲ್ವಾಯಿ ರೂ ೬೦೦

(೪) ಬಾಂಡ ನಂಬರು ೯೬೩೦ ಮಿ. ಶಂಕರಪ್ಪಾ ಬಸಪ್ಪಾ ದೆವನಕೊಂಡ, ಅಕ್ಕಸಾಲೆ ಜಡಿಗಾರಗಲ್ಲಿ ಹುಬ್ಬಳ್ಳಿ ರೂ. ೧೦೦೦

(೫) ಬಾಂಡ ನಂಬರು ೧೪೨೦೬ ಮಿ. ಶೇಕ ಬಾಪುಮಿಯಾ ಶೇಕ ಮಹಮ್ಮದ ನಳ ತಯಾರ ಮಾಡುವವರು ೬೧೫ ಭವಾನಿಪೇಟ ಪುನಾ ೧೦೦೦

ಬಿ. ಎನ್. ಆರಾಧ್ಯ

ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ)

ಕಿರ್ಲೋಸ್ಕರ

ಕಬ್ಬಿಣ ನೇಗಿಲುಗಳು.

ಹಂಗಾಮು (ಸುಗ್ಗಿ) ಸಮಿಪಿಸಿತು. ಈ ವರ್ಷ ಮಳೆ ಬೆಳೆ ಚನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವುದು. ಕಿರ್ಲೋಸ್ಕರ ನೇಗಿಲು ನಂ ೧೧, ೯, ೮ ಇವು ಒಕ್ಕಲಿಗರಿಗೆ ಬಹಳೇ ಉಪಯೋಗ ಬೀಳುತ್ತವೆ. ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುತ್ತವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್. ಕಿರ್ಲೋಸ್ಕರವಾಡಿ ಜಿಲ್ಲೆ ಸಾತಾರೆ

ಗವರ್ನಮೆಂಟಿನಲ್ಲಿ ರಜಿಸ್ಟರ ಮಾಡಲ್ಪಟ್ಟ ಜಗಪ್ರಸಿದ್ಧವಾದ



ಎಲ್ಲ ರೋಗಗಳಿಗೆ ಒಂದೇ ಔಷಧ.

ಅರ್ಕಶಫಾ ಅಥವಾ ಆರೋಗ್ಯ ಬಿಂದು

ಪ್ರಜಾಹಿತಮಿತ್ರ. ಮೂರ್ತಿಮಂತವೈದ್ಯ

ಇದು ಅರ್ಕವಿದ್ದು ಇದರಲ್ಲಿ ನೀರು ರಸಾಯನ ಕೂಡಿರುವದಿಲ್ಲ. ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ಇದು ಪ್ರಸಿದ್ಧವಾಗಿ ೧೬ ವರ್ಷಗಳು ಆಗುತ್ತ ಬಂದವು ಈವತ್ತಿನವರಿಗೆ ಎರಡು ಲಕ್ಷಗಳವರಿಗೆ ಬಾಟಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತರ ಬೇಡುವ ಪತ್ರಗಳು ವ್ಹಿ. ಪಿ. ಮಾಡಿದ ದಾಖಲೆಗಳು ಪೋಸ್ಟ ಪಾವತಿಗಳು ಬಾರನಿಸಿ ಬುಕ್ಕುಗಳು ಇರುತ್ತವೆ ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಸಟಿಯೆಂದು ಸಿದ್ಧ ಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳು ಇನಾಮು ಕೊಡಲ್ಪಡುವವು. ಈ ಔಷಧವು ಅಮೃತಸರಿಯುಳ್ಳದ್ದು ಇರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು ಎಂಥಾ ಭಯಂಕರ ರೋಗವು ಇದ್ದರೂ ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರಟಿಫಿಕೇಟುಗಳು ನಮ್ಮ ಹತ್ತರ ಹಾಜರ ಇರುತ್ತವೆ. ಇವನ್ನು ಬರೆಯಲಿಕ್ಕೆ ಕಾಗದವು ಸಾಲದು. ಕಾರಣ ಒಂದುಸಾರೆ ತಕ್ಕೊಂಡು ಅನುಭವ ನೋಡಿರಿ. ರೋಗದ ನಾಮಗಳುಃ— ಕ್ಷಯರೋಗ, ಪಾಣಾಂತಿರೋಗ, ಹಡೆದನಂಜು ದಮ್ಮು, ಕೆಮ್ಮು, ಅಡಗ್ಗಿ, ಕಾಲರಾ (ಮಾರಿಕಾ), ಪ್ಲೇಗ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮಲರೋಗ, ಗಂಡಮಾಲೆ, ನಾರಹುಣ್ಣು, ಶಸ್ತ್ರಗಾಯ, ಕಿವಿಶೂಲಿ ಮೂಗಿನೊಳಗಿನ ಪಿನಸಿ, ಮೊದಲಾದವುಗಳು. ಕಣ್ಣುನೋವು ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ ಹೊಟ್ಟೆಶೂಲಿ, ಸಣ್ಣ ಕೂಸುಗಳಿಗೆ ಆದ ರೋಗಗಳು ಬಾಲಗ್ರಹ, ಅರಿವಿ ಮುಟ್ಟದೋಷ ಹೊಟ್ಟೆ ದೊಡ್ಡದಾಗೋಣ, ಕೋಡಿಗೆಮ್ಮು, ವೈ ಹೊರಬೀಳೋಣ, ಮತ್ತು ಡಾಕ್ಟರಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನಿಂದ ಖಾತ್ರಿಯಿಂದ ಗುಣಬರವದು. ಚೇಳು ವ ಸರ್ಪದಂಶಕ್ಕೆ ತತಕ್ಷಣ ಗುಣಬರುವದು. ೧ ಕಾಲುತೊಲಿ ಬಾಟ್ಲಿ ಒಂದಕ್ಕೆ ೨ ರೂಪಾಯಿ ನಮೂನೆ ಉದ್ರಿಕ ೫ ಆಣೆ ತೂಕದ ಬಾಟ್ಲಿ ಒಂದಕ್ಕೆ ೮ ಆ ಖರ್ಚು ಬೇರೆ. ೮ ಆಣೆಯ ಒಂದೇ ಬಾಟ್ಲಿ ಕಳಿಸಲಾಗದು. ೨ ರೂಪಾಯಿ ಆರ್ಡರ ಬಂದರೆ ಕಳಿಸಲಾದೀತು ಅದರ ಖರ್ಚು ೬ ಆಣೆ ಚಿಕ್ಕ ಬಾಟ್ಲಿ ಒಂದು ಡಜನ ತಕ್ಕೊಳ್ಳುವವರಿಗೆ ನಾಲ್ಕು ಬಾಟ್ಲಿಗಳು ಕಮಿಶನ್ ಸಿಗುತ್ತವೆ. ಖರ್ಚು ೯ ಆಣೆ. ಡಜನದ ಒಳಗಾಗಿ ಹನ್ನೊಂದು ಬಾಟ್ಲಿ ತಕ್ಕೊಂರೆ –ಕಮಿಶನ್ ಇಲ್ಲ. ಪೋಷ್ಟ ೬ ಆಣೆ. ೧ ಕಾಲುತೊಲಿ ಬಾಟ್ಲಿ ಒಂದೇಸಾರೆ ಮೂರು ತಕ್ಕೊಳ್ಳುವವರಿಗೆ ಒಂದು ಬಾಟ್ಲಿ ಕಮಿಶನ್ ಸಿಗುತ್ತದೆ. ಖರ್ಚು ೯ ಆಣೆ. ಒಂದು ಎರಡು ತಕ್ಕೊಂಡರೆ ಕಮಿಶನಿಲ್ಲ ಖ ೬ ಆ. ಪ್ರಮಾಣ ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ಛಾಪಿಸಿರುತ್ತವೆ. ಪಸಂದಿಪ್ರಕಾರ ಬಾಟ್ಲಿಗೂಡ ಸಿಗುವದು ಈ ಔಷಧವು ಖೋಟಿ ಹೊರಟರೆ ಶಿಲ್ಲಕ ಉಳಿದಮಾಲು ಪರತ ತಕ್ಕೊಂಡು ಅದರ ಬೆಲೆ ವಾಪಸ ಕೊಡುವೆವು. ಈ ಅರ್ಕಶಫಾ ಇಡೀ ಕರ್ನಾಟಕದಲ್ಲೆಲ್ಲಾ ಹೋಗುತ್ತದೆ. ಇದರ ಬಗ್ಗೆ ನಮಗೆ ಬಹಳ ಶಿಫಾರಸ್ ಮಾಡಬೇಕಾಗಿಲ್ಲಾ ತಮ್ಮ ವಿಳಾಸ ಕನ್ನಡದಲ್ಲಿ ಅಥವಾ ಇಂಗ್ಲೀಷದಲ್ಲಿ ಪೂರ್ಣ ಜಿಲ್ಹಾ ಪಗೈರೆ ಸ್ಪಷ್ಟವಾಗಿ ಬರೆಯಿರಿ ನಮ್ಮ ವಿಳಾಸಃ— **ಎಚ್. ಎಮ್. ಮುಲ್ಲಾ-**

ಸಂಪಾದಕ ಅರ್ಕಶಫಾ ಹೆಡ್ ಆಫಿಸ ಪೋಸ್ಟ ರಜಾಪೂರ (ಬೆಳಗಾವಿ

ಕನ್ನಡ ಬಂಧುಗಳೇ! ... ತಿಳಿದುಕೊಳ್ಳಬೇಡಿರಿ.
ನಿಮ್ಮ ಸಲುವಾಗಿಯೇ ಕನ್ನಡ ... ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವುದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು, ಅವುಗಳೊಳಗಿನ ಕೆಟ್ಟುಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದು. ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಪರಿಪಕ್ವರಾಗುವದಲ್ಲದೆ ಸುರಕ್ಷಿತರಾಗುತ್ತಾರೆ. ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಉಳಿದ ಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೇ ಬರೆದು ಕೊಳ್ಳಿರಿ!

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.
೪೯೫ ಶನಿವಾರ ಪೇಠ ಜಮುಖಂಡಿಕರ ವಾಡೆ ಪುಣೆ ಶಹರ.

ಪುಕ್ಕಟೆ! ಪುಕ್ಕಟೆ!! ಪುಕ್ಕಟೆ!!!

ಕಂತುಗಳನ್ನು ಎಂದೂ ಕೊಡಬೇಡಿ!

ನೀವು ವಿಮೆ ಇಳಿಸಬೇಕಾಗಿದ್ದರೆ ನಾವು ನಿಮ್ಮ ಕಡೆಯಿಂದ ಹಣವನ್ನು ತೆಗೆದುಕೊಳ್ಳದೆ ಕೇವಲ ಪುಕ್ಕಟೆಯಾಗಿ ನಿಮ್ಮ ಜೀವದ ವಿಮೆ ಇಳಿಸುವೆವು.

ವಿಶೇಷ ಸಂಗತಿಗಳಿಗಾಗಿ ೨ ಆಣೆಗಳ ಟಿಕೇಟು ಕಳಿಸಿರಿ.

ಇನ್‌ಸ್ಪೆಕ್ಟರ ಆಫ್ ಎಜೆನ್ಸಿ
ದಿ ವೇನಸ್ ಅಶ್ಯುರನ್ಸ ಬ್ಯಾಂಕ ಲಿಮಿಟೆಡ್
ಧಾರವಾಡ ಬ್ರ್ಯಾಂಚ ಧಾರವಾಡ.

ಡಾಕ್ಟರ ಒಸಪ್ಪ ಸಂಗಪ್ಪ ಪಾಟೀಲ.
ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವು ಹಲ್ಲುಗಳ ನೋವುಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರ ನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು, ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸ ಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು ಹಲ್ಲುಗಳ ಪೂರ್ಣ ಸೆಟ್ಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು

S. U. Narayana harya & Co.
Chaukkamba Benares City.



ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ, ಜರಿಕಣ, ಜರಿಸೀರೆ, ಕಾಶ್ಮೀರ್ ಶಾಲು, ತರವಾರಿ ರುದ್ರಾಕ್ಷಿ, ಕಸ್ತೂರಿ. ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲುಗಳ ಕ್ಯಾಟಲಾಗ ಕೋರುವವರಿಗೆ ಇನಾಮವಾಗಿ ಕಳಿಸಲಾದೀತು.

ವಿಳಾಸ-ಶಿರೋಮಣಿ ನಾರಾಯಣಾಚಾರ್ಯ ಕಂಪನಿ ಚೌಕಾಂಬಾ ಕ

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ಪುಸ್ತಕ ಪರಿಚಯ:

ಉಪನಿಷತ್ ಪ್ರಕಾಶವು.— (ಭಾಗ ೧)

ಕಿ ೦-೧೨-೦ ಅನುವಾದಕರು:— **ರಂಗನಾಥ ರಾಮಚಂದ್ರ ದಿವಾಕರ** ಧಾರವಾಡ.

ಉತ್ಕಟ ದೇಶಭಕ್ತರಾದ ರಂಗರಾವ ದಿವಾಕರ ಇವರಿಂದ ರಚಿತವಾದ ಉಪನಿಷತ್ತುಗಳ ಕನ್ನಡ ಅನುವಾದವಿದು. "ದಗ್ಧ ಪುನರ್ಮಾಯಿಭವಂತಿ ಗುಣಾತಿರೇಕಾ" ಎಂಬ ವಚನದ ಯಥಾರ್ಥವನ್ನು ದಿವಾಕರರಂಥ ಮಹನೀಯರಲ್ಲಲ್ಲದೆ ಇನ್ನಾರಲ್ಲಿ ಕಾಣಬಹುದು! ತಮಗೊದಗಿದ ಬಂದಿವಾಸದಿಂದ ತಾವು ಕೈಕೊಂಡ ದೇಶೋದ್ಧಾರದ ಮಾರ್ಗವು ವಿರಳವಾದದ್ದನ್ನು ನಿರೀಕ್ಷಿಸಿ, ದಿವಾಕರರು ಇನ್ನುಳಿದವರಂತೆ ಎದೆಗುಂದಿ ಕೈಮುಚ್ಚಿಕೊಂಡು ಕೂಡ್ರದೆ ಆತ್ಮೋದ್ಧಾರಕ್ಕಾಗಿ ಅಧ್ಯಾತ್ಮ ವಿದ್ಯೆಯಲ್ಲಿ— ವೇದಾಂತದಲ್ಲಿ ಸಂಚರಿಸಹತ್ತಿದರು. ಅಲ್ಪಾವಧಿಯಲ್ಲಿಯೇ ಆತ್ಮಜ್ಞಾನವನ್ನು ಸಂಪಾದಿಸಿ ಸ್ವಾನಂದವನ್ನೈದಿದರು. ಆದರೆ ದಿವಾಕರರಂಥ ದೀನ ದಯಾಳುಗಳಿಗೆ ತಮ್ಮೊಬ್ಬರ ಸಮ್ಮೋದದಿಂದಲೇ ಮಾತ್ರ ಎಂದೆಂದಿಗೂ ತೃಪ್ತಿಯಾಗದು. 'ಮಮಾತ್ಮಾ ಸರ್ವಭೂತಾತ್ಮಾ' ಎಂಬ ಉದಾತ್ತ ಜೀವಿಗಳ ದೃಷ್ಟಿಯು ಯಾವ ಕಾಲಕ್ಕೂ ಲೋಕ ಕಲ್ಯಾಣದಲ್ಲಿಯೇ ನಟ್ಟಿರುತ್ತದಷ್ಟೆ! ತಮ್ಮಂತೆ ತಮ್ಮ ಕನ್ನಡ ಬಾಂಧವರೂ ಈ ಆತ್ಮಜ್ಞಾನದಿಂದ ನಿತ್ಯಾನಂದವನ್ನು ಹೊಂದಲೆಂಬ ಹಂಬಲದಿಂದ ಉಪನಿಷತ್ತುಗಳನ್ನು ಕನ್ನಡದಲ್ಲಿ ಅನುವಾದಿಸಿದರು. ಇಂತು ಈ ಉಪನಿಷತ್ ಪ್ರಕಾಶದ ಜನ್ಮವು ಕಾರಾಗೃಹದಲ್ಲಿ ಆಯಿತು. ಹಿಂದಕ್ಕೆ ಶ್ರೀಕೃಷ್ಣನು ಕೂಡಾ ಕಾರಾಗೃಹದಲ್ಲಿಯೇ ಜನ್ಮವೆತ್ತಿ ತನ್ನ ದಿವ್ಯ ವಾಣಿಯಿಂದ ಇಡೀ ಪ್ರಪಂಚವನ್ನೇ ಉದ್ಧರಿಸಿದಂತೆ ಈ ಉಪನಿಷತ್ಪ್ರಕಾಶವಾದರೂ ತನ್ನ ಜ್ಞಾನ ಕಿರಣಗಳಿಂದ ನಮ್ಮ ಕನ್ನಡ ನಾಡನ್ನೆಲ್ಲ ಬೆಳಗಲೆಂದು ನಮ್ಮ ಆಶೆ.

ಆದರೆ ಈ ನಮ್ಮ ಆಶೆಯು ಕೊಂಚ ಚಿಂತಾಗ್ರಸ್ತವಾಗಿದೆ. ಪ್ರಕಾಶಕಕಾರರು ಈ ನಮ್ಮ ಚಿಂತೆಯನ್ನು ಮುಂಚಿತವಾಗಿಯೇ ತಮ್ಮ ಮುನ್ನುಡಿಯಲ್ಲಿ ಆಲೋಚಿಸಿದ್ದೇನೋ ನಿಜ ಆದರೆ ಅಷ್ಟರಿಂದಲೇ ಅದರ ನಿವಾರಣೆಯಾಗಲಿಲ್ಲ. ಓಘದಿಂದಲೂ ಓಜಸ್ಸಿನಿಂದಲೂ ತುಂಬಿ ಸ್ವೇಚ್ಛೆಯಿಂದ ಹರಿಯುತ್ತಿರುವ ಋಷಿಗಳ ವಾಚಾಪ್ರವಾಹವನ್ನು ಯದ್ಯಪಿ ದಿವಾಕರರು ತಮ್ಮ ಜ್ಞಾನಬಲದಿಂದ ಕಟ್ಟಿಹಿಡಿದಿದ್ದರೂ, ಕನ್ನಡದಲ್ಲಿ ಇವರು ಹರಿಯಗೊಟ್ಟಿರುವ ಇದೇ ಪ್ರವಾಹವು ಅದೇಕೋ ನಿರ್ಜೀವವಾಗಿದೆ. ಭಾಷಾಂತರದಲ್ಲಿ ಋಷಿಗಳ ಆ ಗಾಂಭೀರ್ಯವಿಲ್ಲ, ವೀರ್ಯವಿಲ್ಲ, ಆ ಪ್ರಸನ್ನತೆಯೂ ಇರುವದಿಲ್ಲ. ಮೂಲವನ್ನು ಓದಿದ ಮಾತ್ರದಿಂದಲೇ ಮನಸ್ಸಿಗೆ ಒಂದು ತರದ ಉತ್ಕರ್ಷೆಯನಿಸುತ್ತದಲ್ಲವೇ, ಅದನ್ನೆಲ್ಲ ಭಾಷಾಂತರದಲ್ಲಿ ಒಯ್ಯುವದು ಅಶಕ್ಯತನವೆಂದು ಒಪ್ಪಿದರೂ ಹತ್ತರಲ್ಲಿ ಒಂದೆರಡು ಗುಣಗಳಾದರೂ ಭಾಷಾಂತರದಲ್ಲಿ ಕಾಣಿಸಿಕೊಳ್ಳಬೇಕಾಗಿತ್ತೆಂಬ ನಮ್ಮ ಕೋರಿಕೆ. ಇನ್ನು 'ಇದೊಂದು ಸಾಂಪ್ರದಾಯ ವಿರಹಿತವಾದ ಭಾಷಾಂತರವೆನ್ನಬಹುದು.' ಎಂದು ಮುನ್ನುಡಿಯಲ್ಲಿ ಪ್ರಕಾಶಕರ್ತರು ಬರೆದಿರುವರು ಇರಲಿ ಎಲ್ಲ ನುಡಿಗಳಿಗೂ ಏಕವಾಕ್ಯತೆಯನ್ನಾದರೂ ಮಾಡಲುದ್ಯೋಗಿಸಿದ್ದರೆ ಏನೂ ಹಾನಿ ಇದ್ದಿಲ್ಲವಷ್ಟೆ?

ಈಗಿದ್ದ ಭಾಷಾಂತರದಲ್ಲಿಯಾಗಲಿ 'ನಾಲ್ಕು ಮಾತುಗಳ'ಲ್ಲಿಯಾಗಲಿ ಒತ್ತಟ್ಟಿಗೆ ದ್ವೈತ ಪರವಾಗಿಯೂ ಇನ್ನೊತ್ತಟ್ಟಿಗೆ ಅದ್ವೈತ ಪರವಾಗಿಯೂ ಬೋಧಿಬರುವಂತಿರುವದರಿಂದ ಯಾವದೂ ನಿಶ್ಚಯಜ್ಞಾನವಾಗುವಂತಿಲ್ಲ. ಆದ್ದರಿಂದ ಯಾವ ಮತಸ್ಥರಿಗೂ ಸಮಾಧಾನವಾಗದಂತಾಗಿದೆ. ಇದಕ್ಕಾಗಿ ಇವರ ಪ್ರಸ್ತಾವನೆಯ ದಾರಿಯನ್ನೇ ಕಾಯ್ದುಕೊಂಡಿದ್ದೇವೆ. ದಿವಾಕರರು ಅರಿದಂತೆ ಉಪನಿಷತ್ತುಗಳಂಥ ಉದ್ಗ್ರಂಥಗಳ ಕೇವಲ ಭಾಷಾಂತರದಿಂದ ಯಾವ ಉದ್ದೇಶವು ಸಿದ್ಧಿಸದೆಂಬ ಮಾತು ನಿಜವಾದದ್ದೆ ಸರಿ ಆದ್ದರಿಂದನೆ ಇವರು ಭಾಷಾಂತರಕ್ಕೆ ಜೋಡಿಸಿದ 'ನಾಲ್ಕು ಮಾತುಗಳು' ಇನ್ನೂ ವಿಶದವಾಗಿಯೂ ಹೇರಳವಾಗಿಯೂ ಇರಬೇಕಾಗಿತ್ತು. ಇಲ್ಲವಾದರೆ ಉಪನಿಷತ್ ವಾಕ್ಯಗಳು ಅಸಂಸ್ಕೃತರ ಮನಸ್ಸಿಗೆ ತಾಕದೆ ತಟ್ಟದೆ ತುಟಿಯಿಂದ ಬಿದ್ದುಬಿಡುವವು. ಉಪನಿಷತ್ತುಗಳ ಮರ್ಮವನ್ನರಿತುಕೊಳ್ಳಬೇಕೆಂಬ ಜಿಜ್ಞಾಸುಗಳಿಗೂ ಅವುಗಳ ವೀರ್ಯವನ್ನೇ ಹೀರಿ ಕುಡಿಯಬೇಕೆಂಬ ಆಕಾಂಕ್ಷಿಗಳಿಗೂ ಈ ಪ್ರಕಾಶದಿಂದ ಅರಹೊಟ್ಟೆಯಾದಂತಾಗಿ ಓದಿ ಕೆಟ್ಟೆವಲ್ಲಾ ಎಂದೆನಿಸಹತ್ತಿದೆ. ಇಂಥವರನ್ನು ದಡಕ್ಕೆ ಹಚ್ಚುವ ಭಾರವನ್ನು ದಿವಾಕರರೇ ಹೊರಬೇಕೆಂದು ಅವರಿಗೆ ನಮ್ಮ ಸವಿನಯ ಪ್ರಾರ್ಥನೆ. ಗುರುಮುಖದಿಂದ ಶಾಂತಿಹೊಂದಿರೆಂದು ಹೇಳಿ ಇವರು ಪಾರಾಗಬಾರದು. ಇಷ್ಟೇ ನಮ್ಮ ಕೋರಿಕೆ.

ಸಮೂಲ ಭಾಷಾಂತರ ಲೇಖಕರು-ಕಡೋಡಿ ಗುರು ಸುಬ್ಬರಾವ ಬಿ. ಎ. ಕಿ. ೦-೬-೦ ಬರೆಸಿದ ಐವತ್ತು ಸಂಸ್ಕೃತ ಶ್ಲೋಕಗಳಿಗೆ ಸಮಾನಾರ್ಥ (?) ವಾದ ಕನ್ನಡಕಂದ, ವಿವರಣೆ ಆಂಗ್ಲಪದ್ಯಗಳಿಂದ ಕೂಡಿದ ಚಿಕ್ಕ ಪುಸ್ತಕವು. ತುದಿಗೆ ತಲೆಭಾರವಾದ ಪೀಠಿಕೆಯಿದೆ ಕ್ರಮವಾಗಿ ಪಾತ್ರ ದೇಶ ರಾಜ ಭಾಷೆಗಳಾದ ಸಂಸ್ಕೃತ, ಕನ್ನಡ ಆಂಗ್ಲ ಭಾಷೆಗಳ "ಪರಿಚಯವು ಕನ್ನಡಿಗರಲ್ಲಿ ತಕ್ಕಮಟ್ಟಿಗಾದರೂ ಆದೀತೆಂಬುದು" ಈ ಗ್ರಂಥದ ಮುಖ್ಯೋದ್ದೇಶವಂತೆ! ಈ ಗ್ರಂಥಕರ್ತರ ಇದೊಂದು ನೂತನ ಶಿಕ್ಷಣಪದ್ಧತಿಯೋ ಏನೋ? ಇದನ್ನೋದುವವರಿಗೆಮಾತ್ರ— 'ಪರಿಚಯವಾಗುವದು ದೂರವಾಗಿರಲಿ! ಇದ್ದ ಆದರವು ಮಾತ್ರ ಹೋಗದಿರಲಿ-ಯೆನ್ನುವಹಾಗೆ ಆದೀತೆಂದು ಅನಿಸುವದು. ಇಷ್ಟಕ್ಕೆ ಮುಗಿಯಲಿಲ್ಲ. ನಮ್ಮ ಗತವೈಭವದ ಪುನರುಜ್ಜೀವನ ದೇಶಸೇವೆ ಜನಸೇವೆಯಾದರೂ ಈ ಹಂಡಬಂಡ ಪದ್ಯಗಳಿಂದ ಸಾಧಿಸಿದೆವೆಂದು ತಾವೇ ಬೆನ್ನುತಟ್ಟಿಸಿಕೊಂಡಿದ್ದಾರೆ ಸಾಧು! ಮಹಾಶಯರೇ! ಎಷ್ಟು ಸುಲಭವಾಗಿ ಪುರುಷಾರ್ಥಗಳನ್ನು ಸಾಧಿಸಿಕೊಂಡಿರುವಿರಿ! ಮೂಲಕ್ಕೂ ಅವುಗಳ ವಿಜಾತೀಯ ಮರಿಗಳಿಗೂ ಮೇಳವೇಯಿಲ್ಲ. ಇನ್ನು ಆಂಗ್ಲಪದ್ಯಗಳನ್ನು ನೋಡಿದರೆ ಕಡೆಯ ಮಾತ್ರ ಸ್ವರಗಳು ಕೂಡುವಹಾಗೆ ಕಟ್ಟಿದ ಶಬ್ದಗಳ ಪೊಳ್ಳುಜಾಲಗಳು ಇರಲಿ. ಹೊಸಬರು ಹತಾಶರಾಗುವಂತೆ ಹೀಗೆ ತಪ್ಪುಗಳ ತಿಪ್ಪೆಯನ್ನು ಕೆದರಲು ನಾವು ಕೂತಿಲ್ಲ. ಆದರೆ ಹಕ್ಕಿಯಂತೆ ಹಾರಿ ಕೀರ್ತಿಯನ್ನು ಹಿಡಿಯುತಲು ಹವಣಿಸುವ ಹೊಸಬರಿಗೆ ಇದೊಂದು ನಮ್ಮ ನಮ್ರಸೂಚನೆಯೂ ಸರಿ. ಯಾಚನೆಯೂ ಸರಿ. ಮೂರು ಭಾಷೆಗಳಲ್ಲಿರುವ ಈ ಸುಭಾಷಿತಗಳ ಸಂಗ್ರಹವನ್ನು ಸರ್ವರೂ ಅವಶ್ಯವಾಗಿ ಸಂಗ್ರಹಿಸಬೇಕು.

ಶ್ರೀಕೃಷ್ಣ ಜೋಗುಳ ಮೇಲಿನ ಗ್ರಂಥಕರ್ತರ ಎರಡನೇ ಪುಸ್ತಕವು. ಬೆಲೆ ೦-೧-೦ ಪೀಠಿಕೆಯಲ್ಲಿ ಮೇಲಿನಂತೆ ತಮ್ಮ ಪುರಾಣವನ್ನು ಬಿಚ್ಚಿದ್ದಾರೆ. ಆದರೂ ರಾಮ ಕೃಷ್ಣ ಮೊದಲಾದ ಅವತಾರಗಳ ಲೀಲೆಯನ್ನು ಸರಸವಾಗಿಯೂ ಸರಳವಾಗಿಯೂ ವರ್ಣಿಸುವ ಈ ಪದಗಳು ಭಕ್ತಿಯನ್ನು ಹುಟ್ಟಿಸುವಂತಹಗಳಾಗಿರುವವು. ಹೆಂಣುಮಕ್ಕಳಿಗೆ ಸ್ಮರಣೀಯವಾಗುವದರಲ್ಲಿ ಸಂದೇಹವಿಲ್ಲ. 'ಆ ದಿವ್ಯತನುವನು ರತಿಸಿದೆ'- ಮೊದಲಾದ ಕೆಲವು ಪ್ರಯೋಗಗಳು ಅಷ್ಟು ಸಾಧುವಾಗಿ ತೋರುವದಿಲ್ಲ.

—**ಶ್ಯಾಮ**

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆ ಮಾಡಿರಿ ! ತ್ವರೆ ಮಾಡಿರಿ



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ಜ ಪಟ್ಟಿಗನಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಪಡೆದು, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯ್ವಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಲ್ಲಿಯ ಪ್ರತಿಷ್ಠ ಹಿಂದುಸ್ತಾನದ ಸರಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ. ವಿಶೇಷ ಸಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪತ್ತಾ:—ದಿ ಪಾಪ್ಯುಲರ ಮೋಟಾರ ಡ್ರಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೧ ಬುಧವಾರ ಪೇಠ ಜುನಿ ತಪಕೀರಗಲ್ಲಿ ಪುಣೆ ಸಿಟಿ.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ'ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿಸಿ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಣೀ, ಜೀರ್ಣಜ್ವರ, ಅಗ್ನಿಮಾಂದ್ಯ ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶ ನಾಶವಾಗುವವು. ಹಾಗೂ ಮೂತ್ರ ಬರುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು.) ಇದರಿಂದ ಮೈಯಲ್ಲಿಯ ಗರಮಿಯ ಎಲ್ಲಾತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೇ ಯೋಗ್ಯತೆಯು ಸೇವಿಸಿ ನೋಡಿದರೆ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೨-೦, ಟಪಾಲು ಖರ್ಚ ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯು ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಕ್ರಾಸಃ—

ಎಸ್. ಬಿ. ಕದಮ್ ಮತ್ತು ಸನ್ಸ್.

ಮು. ಪೋಸ್ಟ ನಿಪ್ಪಾಣಿ (ಜಿ. ಬೆಳಗಾಂವ.)

೧,೪೨,೦೦,೦೦೦

ರೂಪಾಯಿಗಳು!

ಪರದೇಶಗಳಿಂದ ತರಿಸಲ್ಪಟ್ಟ ಸಾಬೂನುಗಳಿಗೋಸ್ಕರ ಪ್ರತಿವರುಷವೂ ಒಂದುಕೋಟಿ ನಾಲ್ವತ್ತೆರಡು ಲಕ್ಷರೂಪಾಯಿಗಳನ್ನು ನಮ್ಮ ದೇಶದಿಂದ ಪರದೇಶಕ್ಕೆ ತೆರುತ್ತಿದ್ದೇವೆ. ಮಹಾಜನಗಳೆಲ್ಲರೂ ಒಕ್ಕಟ್ಟಾಗಿ ಸಂಕಲ್ಪಮಾಡಿದರೆ ತಾನೇ ಈ ಹಣವನ್ನೂ ನಮ್ಮ ದೇಶದಲ್ಲಿ ಉಳಿಸಿಕೊಳ್ಳಬಹುದು. ಸ್ವದೇಶದ ಸಾಬೂನನ್ನು ಬಿಟ್ಟು ಪರದೇಶದ ಸಾಬೂನನ್ನು ಕೊಳ್ಳುವ ಪ್ರತಿಯೊಬ್ಬ ವಿದ್ಯಾವಂತನೂ ಅನ್ಯ ದೇಶದ ಕೈಗಾರಿಕೆಗಳಿಗೆ ಉಪಕಾರಮಾಡಿ, ಸ್ವದೇಶದ ಕೈಗಾರಿಕೆಗಳಿಗೆ ಅಪಕಾರಮಾಡುತ್ತಾನೆ. ಪ್ರತಿಯೊಬ್ಬ ದೇಶಬಾಂಧವನೂ ಸ್ವದೇಶೀ ಮಾಲುಗಳನ್ನೇ ಕೊಳ್ಳುವನು. ಮೈಸೂರು ಗೌರ್ನಮೆಂಟ ಸೋಪ್ ಫ್ಯಾಕ್ಟರಿಯಲ್ಲಿ ಸರ್ವಗ್ರಾಹ್ಯವಾದ ಉತ್ತಮವಾದ ಸಾಬೂನುಗಳನ್ನು ತಯಾರುಮಾಡುತ್ತಾರೆ. ನಾವು ತಯಾರುಮಾಡುವ ಶ್ರೀಗಂಧ ಪರಿಮಳವುಳ್ಳ ಸಾಬೂನೊಂದನ್ನು ಕೊಂಡು ತಾವೇ ಪರೀಕ್ಷೆಮಾಡಿನೋಡಿರಿ. ತಮಗೆ ನಮ್ಮ ಸಾಬೂನುಗಳು ಸಿಗಲಸಾಧ್ಯವಾದಲ್ಲಿ ದಯವಿಟ್ಟು ನಮಗೆ ಪತ್ರವೊಂದನ್ನು ಬರೆದರೆ, ತಾವು ಇಚ್ಛಿಸುವ ಅಂಗಡಿಯಲ್ಲಿಯೇ ನಮ್ಮ ಮಾಲುಗಳು ತಮಗೆ ದೊರೆಯುವಂತೆ ಏರ್ಪಡಿಸಿಕೊಡುತ್ತೇವೆ.

ಗೌರ್ನಮೆಂಟ ಸೋಪ್ ಫ್ಯಾಕ್ಟರಿ

ಬೆಂಗಳೂರು.

ರ ನಂ. ಬಿ. ೧೯೪೭

ವಾ ಚಂದಾ ೧-೧೨-೦ ಮಾತ್ರ

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ.)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ಪೌಷ್ಯ ಶುದ್ಧ ೧೨ ಶಕ ೧೮೪೮ ತಾ|| ೧೪-೧-೧೯೨೭. | ಸಂಚಿಕೆ ೪೦

ಸಂಪಾದಕರ ಭೂಮಿಕೆ

(೬೦)

ನನ್ನ ಮನದಿಂದ ಮೋಹವನ್ನು ಹೊಡೆದೋಡಿಸು ।
ನಿನ್ನ ವೇದದ ಸಾರದಿಂದ ನನ್ನ ಕಣ್ಣು ತೆರೆಸು ।
ನನ್ನ ಪಾದಗಳು ನಿನ್ನ ಸಾನ್ನಿಧ್ಯವನ್ನು ಹೊಂದುವ ಅನ್ಯಮಾರ್ಗಕ್ಕೆ ತಿರುಗದಿರಲಿ ॥
ನನ್ನ ದೇಹವು ನಿನ್ನ ಸೇವಾಸಾಧನವಾಗಲಿ ।
ಕಣ್ಣುಗಳು ಕಲ್ಯಾಣವನ್ನು ನೋಡಲಿ ।
ನನ್ನ ಕಿವಿಗಳು ನಿನ್ನ ಗುಣಗಾನವನ್ನು ಕೇಳುತ್ತ ಆನಂದಪಡಲೆಂದು ಬೇಡುವೆ ॥

— ಅಂಬಿಕಾತನಯ ದತ್ತ

'ಅಸಹಕಾರವು ಸತ್ತು ಹೋಗಿದೆ. ಅದರ ಕಾರ್ಯಕ್ರಮವು ದೇಶಕ್ಕೆ ಬೇಸರಿಕೆಯಾಗಿ ಹೋಗಿದೆ.' ಎಂದೆನ್ನುವವರು ಪತ್ರಿಕೆಗಳಲ್ಲಿ ಬರೆಯುವರು. ಇವರು ಪರಸ್ಪರ ವಿರೋಧಬುದ್ಧಿಗಳು. ಕಣ್ಣಿದ್ದು ಕಾಣದವರು; ಕಿವಿಯಿದ್ದು ಕಿವುಡರು. ಅಸಹಕಾರವು ಹುಟ್ಟಿದಾಗ ಸಾಯುವದೆಲ್ಲಿದೆ ? ಈ ತತ್ವವು ತ್ರಿಕಾಲಾಬಾಧಿತವಾದುದು. ಪರಮಾತ್ಮನಂತೆ ಅನಾದ್ಯನಂತವಾದುದು. ಅಂದ ಮೇಲೆ ಇದು ಅಳಿದು ಅನ್ಯಾಯವನ್ನು ಸಮೂಲ ನಾಶಪಡಿಸಿ ರಾಮರಾಜ್ಯವನ್ನು ಸ್ಥಾಪಿಸಲು ಅರ್ಹತೆಯುಳ್ಳದು. ಅಸಹಕಾರವು ಮೆಲ್ಲ ಮೆಲ್ಲನೆ ಹಬ್ಬಹತ್ತಿ ಕೊಡಗಿದೆ. ಅಸಹಕಾರದ ಮುಖ್ಯಾಂಗವಾದ ಖಾದಿಯು ಈಗ ಜನರಲ್ಲಿ ಸ್ಪಷ್ಟವಾದ ತಿಳುವಳಿಕೆಯ ಭಾವನೆಗಳನ್ನು ಹುಟ್ಟಿಸುತ್ತಿದೆ. ಅದರ ಪ್ರೇಮದ ವಾಣಿಯು ಈಗ ಮಧುರವಾಗಿ ಜನರ ಶ್ರುತಿಗಳಲ್ಲಿ ಸುಳಿಯತೊಡಗಿದೆ. ಶ್ರೀ. ರಾಜಗೋಪಾಲಾಚಾರ್ಯರು ಖಾದಿಪ್ರಸಾರಕ್ಕಾಗಿ ಸೂಚಿಸಿದ ಮಾರ್ಗಗಳನ್ನು ಜನರು ಅವಲಂಬಿಸಲಿದ್ದಾರೆ. ಮೊನ್ನೆ ರವಿವಾರ ಇಲ್ಲಿಯ ವಕೀಲ ಮುಂತಾದ ಸದ್ಗೃಹಸ್ಥರು ಖಾದಿಯ ಬೆಳವಣಿಗೆಯ ಸಲುವಾಗಿ ಒಂದು ಮಂಡಲವನ್ನೇರ್ಪಡಿಸಿದ್ದಾರೆ. ಒಂದು ಮಂಡಲದಲ್ಲಿ ೨೪ ಜನವಿರಬೇಕೆಂದು ನಿರ್ಣಯ. ಅನುಕೂಲತೆಗಾಗಿ ಹೀಗೆ ನಿರ್ಬಂಧ ಮಾಡಿದೆ. ಪ್ರತಿಯೊಬ್ಬ ಸಭಾಸದನು ತಿಂಗಳಿಗೆ ಎರಡು ರೂಪಾಯಿಗಳನ್ನು ಕೊಡಬೇಕು. ಹೀಗೆ ಮಾಡಿದರೆ ತಿಂಗಳಿಗೆ ೪೮ ರೂಪಾಯಿಗಳು ಕೂಡುವವು. ಮೊದಲು ರೂಪಾಯಿಗಳನ್ನು ವಸೂಲು ಮಾಡಿಕೊಂಡು, ಪ್ರತಿ ತಿಂಗಳ ಚೀಟಿ ಹಾಕಿ, ಒಬ್ಬರಿಗೆ ಖಾದಿಯನ್ನು ಕೊಡತಕ್ಕದ್ದು. ಇವರಿಂದ ಪ್ರತಿಯೊಬ್ಬನಿಗೆ ೨೪ ರೂಪಾಯಿ (ಅಂದರೆ ವರ್ಷದ) ಬಟ್ಟೆಯು ದೊರೆಯುವುದು. ಅವನಿಗೆ ವಿಶೇಷ ಭಾರವಾಗುವದಿಲ್ಲ. ಖಾದಿಯ ಪ್ರಸಾರವು ಹೆಚ್ಚುತ್ತಿದೆ. ವರ್ಷದೊಳಗೊಮ್ಮೆ ಪ್ರತಿಯೊಬ್ಬನಿಗೂ ಸರತಿ ಬಂದೇ ತೀರುವುದು. ಹಾನಿಯು ಸ್ವಲ್ಪವೂ ಇಲ್ಲವಲ್ಲ. ಒಬ್ಬನಿಗೆ ಬಟ್ಟೆಯ ಅಡಚಣೆಯು ಬರಲಾರದು. ಚೀಟಿಯಲ್ಲಿ ಹೆಸರು ಬಂದ ಗೃಹಸ್ಥನಿಗೆ ಕೇಳಿಕೊಂಡರೆ, ಗದ್ದವನು ಕೊರತೆಯುಳ್ಳವನಿಗೆ ಬಿಟ್ಟುಬಿಡಲು ಬರುತ್ತದೆ. ಇದರಿಂದ ಸಹ ಕಾರವು ಬೆಳೆಯುತ್ತದೆ. ವರ್ಷಕ್ಕೆ ಮನೆಯೊಂದರೊಳಗೆ ೨೮೦ ರೂ. ಖಾದಿಯ ವ್ಯಾಪಾರವು ಆಗಿಯೇ ತೀರುವದು. ನೂಲುವವರಿಗೂ ನೇಯುವವರಿಗೂ ಕೆಲಸ ದೊರೆತು ಅವರಲ್ಲಿ ನೆಮ್ಮದಿಯು ಹುಟ್ಟುವುದು. ಮನೆವಾರಿಗೆಯ ವ್ಯವಸಾಯಗಳು ಮತ್ತೆ ಜೀವಂತವಾಗುವವು. ಸ್ತ್ರೀಯರಿಗೆ ಮರ್ಯಾದೆಯ ದೊರೆಯಾಗುವದು ನಾಡಿನ ಉತ್ಕರ್ಷವಾಗುವದು. ಬಾಗಲಕೋಟೆಯಲ್ಲಿ ಈ ತರದ ಮಂಡಲಗಳನ್ನು ಅಲ್ಲಲ್ಲಿ ಏರ್ಪಡಿಸಲು, ಇಲ್ಲಿಯ ವಕೀಲರು ಪ್ರಯತ್ನಪಡುತ್ತಲಿದ್ದಾರೆ. ಅವರ ಈ ಪ್ರಯತ್ನಗಳಿಗೆ ಒಳ್ಳೆಯ ಫಲಗಳು ಬರಲೆಂದು ನಾವು ಹಾರೈಸುತ್ತೇವೆ. ಬಾಗಲಕೋಟೆಯ ಉದಾಹರಣವನ್ನು ದೊಡ್ಡ ದೊಡ್ಡ ಪಟ್ಟಣಗಳು ಅನುಕರಿಸಬೇಕಾಗಿ ಬೇಡಿಕೆ.

ಕಾಸರಗೋಡಿನಲ್ಲಿ ದಕ್ಷಿಣಕನ್ನಡ ದ್ರಾವಿಡಬ್ರಾಹ್ಮಣರ ಏಳನೇಪರಿಷತ್ತು. ಮೊನ್ನೆ ಮೊನ್ನೆ ಆಯಿತು. ಅದಕ್ಕೆ ಶ್ರೀ. ಕಲ್ಮಾಡಿ ಲಕ್ಷ್ಮೀನಾರಾಯಣರಾಯರು ಅಧ್ಯಕ್ಷರಿದ್ದರು. ಅವರು ತಮ್ಮ ಭಾಷಣದಲ್ಲಿ ಬ್ರಾಹ್ಮಣರ ಧರ್ಮ, ನೀತಿ, ಸಮಾಜ, ವಿದ್ಯಾಭ್ಯಾಸ ಮೊದಲಾದವುಗಳ ಬಗ್ಗೆ ಹೇಳಿದರು. ಬ್ರಾಹ್ಮಣರ ಸಮಾಜವು ಸುಧಾರಿಸಬೇಕಾದರೆ ಪ್ರಾಚೀನ ಸಂಸ್ಕೃತಿಯ ಮೂಲವಾದ ಸಂಸ್ಕೃತದ ಅಭ್ಯಾಸವು ಅರ್ವಾಚೀನ ವಿಚಾರದಡಿಗೆಸೇರುವದು ಅತ್ಯಾವಶ್ಯಕ. ದ್ವೈತಾದ್ವೈತ ಮೊದಲಾದ ವೈಷಮ್ಯವನ್ನುಂಟು ಮಾಡುವ ವಾದಗಳ ತೊಡಕುಗಳು ದೂರಾಗಬೇಕು. ಇವೇ ಮೊದಲಾದವುಗಳನ್ನು ಹೇಳಿ ಆಧುನಿಕ ವಿದ್ಯಾಭ್ಯಾಸದ ಕಡೆಗೆ ಅವರು ತಿರುಗಿದರು. ಆಧುನಿಕ ವಿದ್ಯಾಭ್ಯಾಸದಲ್ಲಿ ಎಷ್ಟು ಮುಂದುವರಿದರೂ ಪ್ರಯೋಜನವೇನು? ಸರಕಾರೀ ಇಲಾಖೆಗಳಲ್ಲಿ ಸಾಮಾನ್ಯವಾಗಿ ನಮಗೆ ಪ್ರವೇಶವಿಲ್ಲದಂತಾಗಿದೆ? ಎಂದು ಹಲವರಿಗೆ ತೋರಬಹುದು. ನ್ಯಾಯವಾದ ಯೋಚನೆಯಿದು. ಆದರೆ ಈಗಿನ ಕಾಲಕ್ಕೆ ಇಂಗ್ಲಿಷ ವಿದ್ಯಾಭ್ಯಾಸವನ್ನು ಬಿಟ್ಟು ಬಿಡುವದೆಂದರೆ ಲೋಕಕ್ಕೆ ವಿಮುಖವಾಗಿ ಕೂತುಕೊಂಡಂತೆಯೇ ಸರಿ. ನಮ್ಮ ಹುಡುಗರು ಇಂಗ್ಲೀಷವನ್ನ ಭ್ಯಸಿಸುವುದು ಸರಕಾರೀ ಕೆಲಸಕ್ಕಾಗಿಯೇ ಎಂಬದಾಗಿ ಭಾವಿಸಿಕೊಂಡಿದ್ದುವೇ ನಮ್ಮ ತಪ್ಪು ಎಂದು

ವಿದ್ಯೆಯನ್ನು ವಿದ್ಯೆಗಾಗಿಯೇ ಕಲಿಯಬೇಕು. ಆದರೆ ಕೆಲಸದ ಆಕಾಂಕ್ಷೆಯಿಂದಲ್ಲವೆಂದು ಹೇಳಿರುವರು. ಆದರೂ ಉಪಜೀವನಕ್ಕಾಗಿ ಏನಾದರೊಂದು ಸಾಧನವು ಬೇಕಲ್ಲವೆ? ವಿದ್ಯೆಯಿಂತೂ ಅರ್ಥಕರಿಯಲ್ಲ ಆದ್ದರಿಂದ ಕೃಷಿ ಕೈಗಾರಿಕೆ ವ್ಯಾಪಾರ ಮೊದಲಾದ ಸ್ವತಂತ್ರೋದ್ಯೋಗಗಳನ್ನು ಕೈಕೊಳ್ಳಲು ಅವರು ಮೆಲ್ಲನೆ ಸೂಚಿಸಿದ್ದಾರೆ. ನಿಜವಾಗಿ ಈ ಬ್ರಾಹ್ಮಣರು ಏನು ಮಾಡಬೇಕೆಂಬ ಪ್ರಶ್ನೆಕ್ಕೆ ಉತ್ತರಕೊಡುವದು ಸುಲಭಸಾಧ್ಯವಲ್ಲ, ಕೈಗಾರಿಕೆ ವ್ಯಾಪಾರ ಮೊದಲಾದವುಗಳಲ್ಲಿ ಈಗಾಗಲೇ ಸಾಕಷ್ಟು ಜನರಿರುವರು ಕಂಬಾರಿಕೆ ಬಡಿಗತನ ನೇಕಾರಿಕೆ ಮೊದಲಾದವುಗಳು ಅದಿಬಸಾದಿಯಿಂದ ಕೇವಲ ವಿಶಿಷ್ಟ ಜನರಕೈಯಲ್ಲಿ ಇವೆ. ಇವರಲ್ಲಿ ಒಂದು ಪ್ರಕಾರದ ಆನುವಂಶಿಕ ಕೌಶಲ್ಯವು ಇಳಿದು ಬಂದಿರುತ್ತದೆ ಆದರಿಂದ ಅವರು ತಮ್ಮ ವ್ಯವಸಾಯಗಳನ್ನು ಕಾಯ್ದುಕೊಂಡು ಹಾಗು ಹೀಗೆ ಮಾಡಿ ಹೊಟ್ಟೆಹೊರೆಕೊಳ್ಳುತ್ತಿದ್ದಾರೆ. ಅದರಲ್ಲಿ ಸೇರಿದರೆ ಅವರ ತುತ್ತನ್ನು ಕಸಿದುಕೊಂಡಹಾಗೆಯೇ. ಅಂಥವರಲ್ಲಿ ಬ್ರಾಹ್ಮಣರು ಸೇರಿದರೆ ಆಗುವ ಲಾಭವೇನು? ವ್ಯಾಪಾರದ ಪ್ರಕಾರವಾದರೂ ಹೀಗೆಯೇ ಇರುವುದು. ಉಳಿದುದೊಂದು ಕೃಷಿ ಕೃಷಿಕರ್ಮ ಮಾಡಬೇಕೆಂದರೆ ಮೇಘರಾಜನ ಅವಕೃಪೆ ಹೀಗಾಗಿ ಪರಿಸ್ಥಿತಿಯು ಬಿಕ್ಕಟ್ಟಿನದಾಗಿದೆ. ಮೊದಲು ಬ್ರಾಹ್ಮಣರ ಸಮಾಜವು ಏಕಮತದಿಂದ ನಡೆಯುತಲಿದ್ದಿತು. ಸಮಾಜದ ವ್ಯವಸ್ಥೆಯಾದರೂ ಚೆನ್ನಾಗಿದ್ದಿತು. ' ತಕ್ಕಮಟ್ಟಿಗೆ ದೊಡ್ಡವಾದ ಊರಲ್ಲಿ ಒಬ್ಬ ಪುರಾಣಿಕ ಒಬ್ಬ ಜೋಯಿಸ, ಒಬ್ಬ ಪುರೋಹಿತ, ಒಬ್ಬ ವೈದ್ಯ, ಒಬ್ಬ ಕೀರ್ತನಕಾರ, ಒಬ್ಬ ಅಧ್ಯಾಪಕ ಈ ಪ್ರಕಾರವಾಗಿ ಜನರು ಕಂಡುಬರುತ್ತಿದ್ದರು. ಸಮಾಜವಾದರೂ ಅವರನ್ನು ಆದರಭಾವದಿಂದ ನೋಡುತ್ತಿದ್ದರು ಅವರು ತಮ್ಮ ಕರ್ತವ್ಯವನ್ನು ಏಕನಿಷ್ಠೆಯಿಂದ ಮಾಡುತ್ತಿದ್ದರು. ಅದರಿಂದ ನೌಕರಿಯ ಆಶೆಯಿಲ್ಲದೆ ಎಲ್ಲವೂ ಚೆನ್ನಾಗಿ ಸಾಗುತ್ತಿತ್ತು. ನೌಕರಿಯಿಂದ ಬ್ರಾಹ್ಮಣರು ಶೂದ್ರತ್ವವನ್ನು ಹೊಂದಿರಬಹುದು. ಏನೇ ಇರಲಿ ಎಲ್ಲ ಬ್ರಾಹ್ಮಣರೂ ಒಟ್ಟುಗೂಡಿ ಬ್ರಾಹ್ಮಣರ ನಿಕೃಷ್ಟಾವಸ್ಥೆಯನ್ನು ದೂರಮಾಡಬೇಕೆಂದು ಸೂಚನೆ.

'ಲೋಕಲ್ ಫಂಡವನ್ನು ಇಮ್ಮಡಿಮಾಡಬೇಕೆಂಬುದರ ಬಗ್ಗೆ ಒಂದು ಠರಾವು ಜಿಲ್ಲಾ ಲೋಕಲ್ ಬೋರ್ಡಿನ ಮುಂದೆ ಬಂದಿರುವುದು. ಅದರ ಬಗ್ಗೆ ಒಬ್ಬ ಮೆಂಬರರು ತಮ್ಮ ಅಭಿಪ್ರಾಯವನ್ನು ನಮ್ಮೆಡೆಗೆ ಕಳುಹಿಸಿದ್ದಾರೆ. ಅದನ್ನು ಬೇರೊಂದೆಡೆಯಲ್ಲಿ ಮುದ್ರಿಸಿದ್ದೇವೆ. ಸಾರ್ವತ್ರಿಕ ಶಿಕ್ಷಣಕ್ಕಾಗಿ ಫಂಡವನ್ನು ಇಮ್ಮಡಿಮಾಡಬೇಕೆಂದು ಬೋರ್ಡಿನ ಉದ್ದೇಶ. ಶಿಕ್ಷಣಕ್ಕಾಗಿಯೆಂದರೆ ಯಾರೂ ಅಡ್ಡಿಯನ್ನುಂಟುಮಾಡುವದಿಲ್ಲೆಂದು ಮನಗಂಡು ಈ ಪ್ರಕಾರದ ಠರಾವು ತರಲ್ಪಟ್ಟಿದೆ. ರೈತರ ಕೈವಾರಿಗಳೆಂದು ಘಂಟಾಘೋಷವಾಗಿ ಹೇಳಿಕೊಳ್ಳುತ್ತಿರುವ ಜನರೇ ರೈತರ ಗೋಣನ್ನು ಒತ್ತಿ ಅದರ ಸೊಂಟ ಮುರಿಯಲು ಪ್ರವೃತ್ತರಾದುದು ಸೋಜಿಗದ ಮಾತೇ ಸರಿ. 'ಶಿಕ್ಷಣವು ಬೇಕು.' 'ಅವಶ್ಯವಾಗಿ ಬೇಕು' 'ಜ್ಞಾನದಂತಹ ಪವಿತ್ರವಾದ ವಸ್ತುವು ಜಗತ್ತಿನಲ್ಲಿ ಮತ್ತೊಂದಿಲ್ಲ.' ಇದರ ಬಗ್ಗೆ ಮತಭೇದವಿಲ್ಲ ಶಿಕ್ಷಣದ ಬಗ್ಗೆ ಹೆಚ್ಚಿನ ಕರವನ್ನು ಕೂಡಿಸಲಾದರೂ ಅನುಕೂಲ ಪರಿಸ್ಥಿತಿಯು ಬೇಕಲ್ಲವೇ? ಜಿಲ್ಲೆಯಲ್ಲಿ ಒಂದೇ ಸವನೆ ಐದು ವರ್ಷಗಳ ವರೆಗೆ ಬರಗಾಲದ ಪಿಸುಗು ಬೆನ್ನುಹತ್ತಿ ಜನರನ್ನು ಹಣ್ಣಾಗಾಯಿ ನೀರುಗಾಯಿ ಮಾಡಿಬಿಟ್ಟಿದೆ. ಜನರೆಲ್ಲರೂ ಅನ್ನ ನೀರಿಲ್ಲದೆ ಕಂಗೆಟ್ಟು ಬಾಯಿ ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಹೊಟ್ಟೆಗಿಲ್ಲದಾಗ ನೆತ್ತಿಯ ಚಿಂತೆಯೇಕೆ? ಹೊಟ್ಟೆತುಂಬಿದ ಮೇಲೆ ಬಿದುಳಿನ ವಿಚಾರ. ಜಗತ್ತಿನ ಇತಿಹಾಸವನ್ನೋದಿದರೆ, ಇದರ ಇಂಗಿತವು ತಿಳಿಯುವುದು. ಹಸಿವೆಯು ಅಸುವನ್ನು ಹೀರುವಂಥ ಶಕ್ತಿಯು. ಫ್ರಾನ್ಸ ದೇಶದ ರಾಜ್ಯಕ್ರಾಂತಿಗೆ ಹಸಿವೆಯೇ ಕಾರಣವು. ಹಸಿವೆಯು ಹಳ್ಳಿಯಲ್ಲಿಯ ಚಿಂದೆ ಚಿಂದೆಗಳಲ್ಲಿಯೂ, ಪಟ್ಟಣದ ಸಂದು ಸಂದುಗಳಲ್ಲಿಯೂ ತನ್ನ ಹಾವಳಿಯನ್ನು ಹಬ್ಬಿಸಿದೆ. ಬೋರ್ಡಿನ ಸಭಾಸದರು ಹಸಿವೆಯನ್ನು ತಡೆಯದೆ, ಬೇರೊಂದು ಮಾರ್ಗದಿಂದ ಹಣವನ್ನು ಉಳಿಸಿ, ಜನರ ಹಿತಮಾಡಬೇಕಾಗಿ ಸೂಚನೆ.

ಬಾಗಲಕೋಟೆ—ಇಲಕಲ್ಲ ರೇಲ್ವೆ ಲೈನ ಮತ್ತು ಸ್ಟೇಶನ್‌ಗಳ ಬಗ್ಗೆ ರೇಲ್ವೆ ಕಂಪನಿಯವರು ಸ್ಥಲವನ್ನು ನೋಡಿ ಗೊತ್ತುಪಡಿಸುವ ವಿಚಾರದಲ್ಲಿ ಇರುವರು. ಇಲಕಲ್ಲ ಗ್ರಾಮದ ಉತ್ತರಭಾಗಕ್ಕೆ ರೇಲ್ವೆಸ್ಟೇಶನ್ ಆಗುವದೆಂದು ತಿಳಿದುಬರುತ್ತದೆ. ಆದರೆ ಈ ಸ್ಥಳದಕಿಂತಲೂ ಇಲಕಲ್ಲ ದಕ್ಷಿಣ ಭಾಗಕ್ಕೆ ವಿಶೇಷ ಸೌಕರ್ಯವಿದ್ದು ನೀರು. ಕಲ್ಲುಗಳ ವಿಪುಲತೆಯದೆ. ಮತ್ತು ವ್ಯಾಪಾರದೃಷ್ಟಿಯಿಂದ ಮೊಗಲಾಯಿ ಇಲಾಖೆಯವರಿಗೂ ಅನುಕೂಲವಾಗುವದು. ಆದ್ದರಿಂದ ಕಂಪನಿಯವರಿಗೆ ಯೋಗ್ಯತೋರಿದಲ್ಲಿ ದಕ್ಷಿಣಭಾಗಕ್ಕೆ ಸ್ಟೇಶನ್ ಮಾಡಬೇಕೆಂದು ಸೂಚನೆಗಳು ನಮ್ಮ ಕಡಿಗೆ ಬಂದಿವೆ ಇತ್ತಕಡೆಗೆ ಕಂಪನಿಯವರು ಲಕ್ಷ್ಯಗೊಡಬೇಕು.

ಅಫಗಾನಿಸ್ಥಾನದ ಸದ್ಯಸ್ಥಿತಿಯು.

ಶ್ರೀ ಅಚ್ಯುತ ದಾಮೋದರ ಪಟವರ್ಧನರು ಇಂಗ್ಲಂಡ ಜರ್ಮನಿಗಳಲ್ಲಿ ಹೋಗಿ ವಿಮಾನವಿದ್ಯೆಯನ್ನು ಕಲಿತು ಬಂದಮೇಲೆ ೨ ವರ್ಷ ಅಫಗಾನಿಸ್ಥಾನದಲ್ಲಿದ್ದರಷ್ಟೇ? ಅವರು ಅಫಗಾನದ ವಿಷಯಕ್ಕೆ ಹೇಳುವದೇನಂದರೆ— ಅಫಗಾನದ ಅಮೀರಸಾಹೇಬರು ತರುಣರೂ ಸುಶೀಲರೂ ನೀತಿವಂತರೂ ಏಕಪತ್ನೀ ವ್ರತಸ್ಥರೂ ಆಗಿದ್ದಾರೆ ಮತ್ತು ನ್ಯಾಯ ನೀತಿ ಪರರನ್ನೇ ರಾಜ್ಯಕಾರ್ಯಗಳಲ್ಲಿ ಸೇರಿಸಿಕೊಳ್ಳುತ್ತಾರೆ ಇವರ ರಾಜ್ಯದಲ್ಲಿ ಹಿಂದೂ ಮುಸಲ್ಮಾನರ ಕಲಹಗಳಿಲ್ಲ. ಎಲ್ಲರೂ ಸಮಾನ ಹಕ್ಕುಳ್ಳವರಾಗಿದ್ದಾರೆ. ಹಿಂದುಗಳ ಉತ್ಸವಕ್ಕೆ ಸ್ವತಃ ಅಮೀರಸಾಹೇಬರವರಿಂದ ದೇಣಿಗೆ ಕಳಿಸಲ್ಪಡುತ್ತದೆ. ಇವರ ರಾಜ್ಯದಲ್ಲಿ ವೇಶ್ಯಾವೃತ್ತಿಗೆ ಅವಕಾಶವಿಲ್ಲ. ಮದ್ಯಪಾನಕ್ಕೆ ಬಲವಾದ ಪ್ರತಿಬಂಧವಿದೆ. ಸರಕಾರಿ ಅಧಿಕಾರಿಗಳು ಸ್ವದೇಶದ ಬಟ್ಟೆಗಳನ್ನೇ ಉಡಬೇಕೆಂದು ಕಟ್ಟಪ್ಪಣೆಯಿದೆ. ಆದುದರಿಂದ ಆ ದೇಶದ ನೂಲುವ ನೇಯುವ ಎಲ್ಲ ಉದ್ಯೋಗಗಳಿಗೆ ಪ್ರೋತ್ಸಾಹವಿದೆ. ಶಿಕ್ಷಣವು ಬಲಾತ್ಕಾರದಿಂದ ಕೊಡಲ್ಪಡುತ್ತದೆ. ಇಂಗ್ಲೀಷ ಶಿಕ್ಷಣವನ್ನು ಸಂಪೂರ್ಣ ನಿಲ್ಲಿಸಿ. ಜರ್ಮನ್ ಫ್ರೆಂಚ ಭಾಷೆಗಳಿಗೆ ಆರಂಭಿಸಿದ್ದಾರೆ. ವಿದ್ಯಾರ್ಥಿಗಳಿಗೆ ಸ್ವದೇಶದ ಉಡುಪು, ಯುದ್ಧ ಶಿಕ್ಷಣವೂ ಬಲಾತ್ಕಾರದಿಂದಲೇ ಕೊಡಲ್ಪಡುವದು. ಬಡವಿದ್ಯಾರ್ಥಿಗಳಿಗೆ ೧೫ ರೂಪಾಯಿ ಶಿಷ್ಯವೃತ್ತಿ ಸಿಗುವದು. ಅಫಗಾನಿಸ್ಥಾನದ ಜನರು ತರುಣ ವಯಸ್ಕರಾದ ಕೂಡಲೇ ಒಬ್ಬ ಕನ್ನೆಯನ್ನು ವಿವಾಹವಾಗುವದಕ್ಕಿಂತ ಬಂದು ಸಲ್ಲಕ್ಷಣವಾದ ಕುದುರೆಯನ್ನೂ ಒಂದು ಒಳ್ಳೇ ಬಂದೂಕನ್ನು ತೆಗೆದುಕೊಳ್ಳುವದು ಹೆಚ್ಚು ಸುಖಕರವೆಂದು ತಿಳಿಯುತ್ತಾರೆ. ಒಟ್ಟಿನಮೇಲೆ ಅಫಗಾನಿಸ್ಥಾನವು ಅನುಕರಣೀಯವಾಗಿದೆ. ಅಮೀ

ರಸಾಹೇಬರು ತಮ್ಮ ನ್ಯಾಯನೀತಿಯಿಂದ ಲೋಕಪ್ರಿಯರಾಗಿ ದ್ದಾರೆ ಅಫಗಾನಿಸ್ಥಾನದ ವಿಷಯದಲ್ಲಿದ್ದ ಜನರ ತಪ್ಪುತಿಳುವಳಿಕೆಗಳು ಪಟವರ್ಧನರವರ ಹೇಳಿಕೆಯಿಂದ ಅಳಿಸಿಹೋಗುವದುನಿಶ್ಚಯ.

ಉಚಿತ! **ಸಮಯ!!** **ಉಚಿತ!!!**

ನನ್ನ ಶಾಸ್ತ್ರೀಯವಾದ ಶಾರೀರಕ ಶಿಕ್ಷಣ

ಈ ಪುಸ್ತಕದಲ್ಲಿ ನನ್ನ ಮುಕ್ತ ನನ್ನ ಶಿಷ್ಯರ ಅಂಗಸೌಷ್ಠವ ವನ್ನು ತೋರಿಸುವ ಸೊಗಸಾದ ಚಿತ್ರಗಳಿರುವವಲ್ಲದೆ, ಅಂತಹ ಶರೀರ ದಾರಢ್ಯವು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದು. ನನ್ನಲ್ಲಿ ತರಬೇತುಪೈದವರ ಅಭಿಪ್ರಾಯಗಳೂ ಇವೆ ಲ್ಲೀವೆ. ಈ ಪುಸ್ತಕವನ್ನು ... ಪ್ರತಿಯೊ... ರೂ ತಮ್ಮ ದೇಹವನ್ನು ಹೇಗೆ ಬಲಪಡಿಸ ... ಯವಾದ ಮಾರ್ಗವನ್ನು ತಿಳಿಸುತ್ತದೆ. ಟಪ್ಪಾಲು ... ತ ಅಣೆಯ ಸ್ಟಾಂಪುಗಳನ್ನು ಕಳಿಸಿಕೊಟ್ಟ ವರಕ್ಕೆ ಈ ಪುಸ್ತಕವನ್ನು ಅವರಿಗೆ ಉಚಿತವಾಗಿ ರವಾನಿಸುತ್ತೇವೆ. ಈ ಸಮಯವನ್ನು ಕಳೆದುಕೊಳ್ಳದೆ ಕಾಲಾತೀತವಾದದೆ ಇನ್ನೂ ಈ ಜಾಹೀರಾತಿನಲ್ಲಿ ಸೂಚಿಸಿದಂತೆ ಈ ಪುಸ್ತಕಕ್ಕಾಗಿ ಬರೆಯಿರಿ

ನಮ್ಮ ವಿಳಾಸ,
ಪ್ರೊಫೆಸರ್ ಎ. ವಿ. ಕೃಷ್ಣರಾವ್.
ಬಸವನಗುಡಿ. ಬೆಂಗಳೂರು ಸಿಟಿ

ಅಪರೋಕ್ಷ ಜ್ಞಾನಿಗಳಾದ

ಶ್ರೀ ಪ್ರಾಣೇಶ ವಿಠಲ ವಿರಚಿತ

ಶ್ರೀ ಹರಿ ಕೀರ್ತನ ಮಾಲಾ

೧ ಪ್ರಥಮ ಪುಷ್ಪ ಶ್ರೀ ಕೃಷ್ಣ ಲೀಲಾಮೃತ ಬೆಲೆ ೮ ಆಣೆ
೨ ದ್ವಿತೀಯ ಪುಷ್ಪ ತಾರತಮ್ಯ ಸ್ತೋತ್ರ
ಯುಕ್ತ ಮಧ್ವಮತ ಪದ ಬೆಲೆ ೮ ಆಣೆ
೩ ತೃತೀಯ ಪುಷ್ಪ ಕನ್ನಡ ವಾಯುಸ್ತುತಿ ಬೆಲೆ ೫ ಆಣೆ

ಹನುಮಂತರಾವ ವಕೀಲ ಗೋರಾಬಾಳ.
ಪೋಸ್ಟ- ಲಿಂಗಸುಗೂರ ಜಿಲ್ಲಾ ರಾಯಚೂರು (ನಿಜಾಂ)

ಪ್ರಕಟನೆ.

ಆಯುರ್ವೇದ ವಿದ್ಯಾಲಯ ಬೆಳಗಾವಿ.

ಈ ವಿದ್ಯಾಲಯದ ಅಭ್ಯಾಸಕ್ರಮವು ಹೊಸದಾಗಿ ಜಾನೇವಾರಿ ೧೫ ನೇ ತಾರೀಖಿನಿಂದ ಪ್ರಾರಂಭವಾಗುವದದೆ. ಬರತಕ್ಕ ವಿದ್ಯಾರ್ಥಿಗಳು ೧೬ ವರ್ಷ ಮೀರಿದವರಿದ್ದು ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದವರಾಗಲಿ ಅಥವಾ ಅಲ್ಲಿಯವರೆಗೆ ಇಂಗ್ಲೀಷ, ಸಂಸ್ಕೃತ, ಮತ್ತು ಶಾಸ್ತ್ರೀಯವಿಷಯಗಳಲ್ಲಿ ಅಭ್ಯಾಸ ಮಾಡಿದಂಥವರಾಗಲಿ ಇರತಕ್ಕದ್ದು ; ಮ್ಯಾಟ್ರಿಕ್ ಪರೀಕ್ಷೆ ಪಾಸಾಗದಿದ್ದ ಪಕ್ಷದಲ್ಲಿ ವಿದ್ಯಾರ್ಥಿಗಳ ಪ್ರವೇಶ ಪರೀಕ್ಷೆಯು ತೆಗೆದುಕೊಳ್ಳಲ್ಪಡುವುದು. ಶಿಕ್ಷಣ ಕ್ರಮದಲ್ಲಿ ಆಯುರ್ವೇದದ ವಿಷಯಗಳೂ ಪಾಶ್ಚಿಮಾತ್ಯ ವೈದ್ಯ ಶಾಸ್ತ್ರದವಿಷಯಗಳೂ ಸಮಾನವಾಗಿ ಸೇರಿಸಲ್ಪಟ್ಟಿವೆ. ಸಂಪೂರ್ಣ ಅಭ್ಯಾಸ ಕ್ರಮವು ನಾಲ್ಕು ವರ್ಷದ್ದಿದೆ. ಪ್ರತಿ ವಾರ್ಷಿಕ ಫೀ ೩೬ ರೂಪಾಯಿಗಳು. ವಿದ್ಯಾಲಯಕ್ಕೆ ಬರಬಿಚ್ಛಿಸುವವರು ಜಾನೇವಾರಿಯೊಳಗೆ ಕೆಳಗೆ ಬರೆದ ವಿಳಾಸಕ್ಕೆ ಬರೆದು ಕೇಳಿಕೊಳ್ಳಬೇಕು. ತಾ|| ೧೫.೧೨-೧೯೩೭

ಹಣಮಂತ ವೇಂಕಟೇಶ ಸವಣೂರ
ಎಲ್, ಎಮ್, ಎಸ್
ಪ್ರಿನ್ಸಿಪಾಲ ಆಯುರ್ವೇದ ವಿದ್ಯಾಲಯ ಬೆಳಗಾಂವಿ

ಲಿವರಿನ ಗಡಿಯಾರಗಳು.

ಲಿವರಿನ ಕೈ ಗಡಿಯಾರ ರೂ. ೯.
ಲಿವರಿನ ಕಿಸೆಯೊಳಗಿಡುವ ಗಡಿಯಾರ ರೂ. ೬.



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅತಿಮೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ತಾಸುವವು. ಬೆಲೆ ಕಡಿಮೆಯಿದೆಂದು ಅಂಜುವ ಕಾರಣವಿಲ್ಲ. ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ. ಆದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ.

ವಿಜೋ ವಾಚ ಕಂ. (ಇಂಡಿಯಾ.) ಬಾಂಬೆ ೪ ೪.

ಬಿ, ಎಂ. ಹೂಗಾರ ಕೃತ

ತಾಳಪ್ರಸ್ತಾರಸಾಗರ.

೧ ನೇ ಭಾಗ.

(ಮೃದಂಗ ವಿದ್ಯಾವಿನೋದ.)

ಈ ಗ್ರಂಥದಲ್ಲಿ ತಾಳಗಳ ಉತ್ಪತ್ತಿ, ಜಾತಿಭೇದದಿಂದ ಹುಟ್ಟಿದ ೩೫ ತಾಳಗಳನ್ನು ಹಿಡಿಯುವ ಕ್ರಮ, ತಬಲಾದಲ್ಲಿ ಅಕ್ಷರಗಳನ್ನು ನುಡಿಸುವ ಕ್ರಮ, (ಸಚಿತ್ರ) ವರಿ, ಕಾಲು, ಮುಕ್ಕಾಲು ತಾಳಗಳನ್ನೂ ಮುಗುತಾಯಗಳನ್ನೂ ಮಾಡುವ ರೀತಿ, ಮರ್ಮ ತಾಳ ಲಕ್ಷಣ ಗುಣವಾದ್ಯಶಬ್ದಗಳ ವಿಚಾರ, ಎರಡೂ ತಾಳಗಳನ್ನು ಗತಿಭೇದದಿಂದ ಎರಡೂ ಕೈಗಳಿಂದ ಒಮ್ಮೆಲೆ ನಡಿಸುವ ಕ್ರಮ, ಇತ್ಯಾದ್ಯನೇಕ ರಹಸ್ಯವಾದ ವಿಷಯಗಳು ಸ್ಪಷ್ಟವಾಗಿರುವವು. ಗ್ರಂಥದ ಬಗ್ಗೆ ಅನೇಕ ವಿದ್ವಾಂಸರು ತಮ್ಮ ಸದಭಿಪ್ರಾಯವನ್ನು ವ್ಯಕ್ತಪಡಿಸಿರುವರು, ಈ ಗ್ರಂಥವು ಹತ್ತರಿದ್ದರೆ ಒಬ್ಬ ಸಂಗೀತ ವಿದ್ವಾಂಸನೇ ಹತ್ತರಿದ್ದಂತಾಗಿ ಬೋಧಕರ ಸಹಾಯವೇ ಬೇಕಾಗಲಾರದು.

ಈ ಪುಸ್ತಕದ ಬೆಲೆ ೨—೦—೦ ರೂಪಾಯಿ. ಕಾಲ ವಿಲಂಬವಾದರೆ ಪುಸ್ತಕಗಳು ದೊರೆಯಲಾರವು. ಕೆಳಗಿನ ವಿಳಾಸಕ್ಕೆ ಬರೆದು ಬೇಕಾದವರು ತರಿಸಿಕೊಳ್ಳಬೇಕು.

ವಿಳಾಸ:- **ಬಸಪ್ಪಾ ಮಲ್ಲಪ್ಪಾ ಹೂಗಾರ**
ಸಾ|| ಚಿಂಚಲಿ. ತಾ. ಗದಗ.
ಪೋ|| ಮುಳಗುಂದ. ಜಿಲ್ಲಾ ಧಾರವಾಡ.

ಹಳ್ಳಿಯ ಹಣವು ಹಳ್ಳಿಗೆ ತಿರುಗಲಿ.

(ಸಿ. ರಾಜಗೋಪಾಲಾಚಾರ್ಯರು)

ದಿವಾನ ಬಹಾದ್ದೂರ ಆರ್ ರಾಮಚಂದ್ರರಾಯರು ಸರಕಾರೀ ನೌಕರಿಯಿಂದ ನಿವೃತ್ತರಾದವರು. ಅವರು ಎಷ್ಟೋ ಜಿಲ್ಲೆಗಳಲ್ಲಿ ಜಿಲ್ಲಾಧಿಪತಿಯ (ಕಲೆಕ್ಟರ) ಕೆಲಸವನ್ನು ಮಾಡಿದವರು. ಮದ್ರಾಸ ಇಲಾಖೆಯಲ್ಲಿ ಸಹಕಾರಿ ಸಂಘಗಳ ರೆಜಿಸ್ಟ್ರಾರರು ಇದ್ದು ಆ ಸಂಘಗಳನ್ನು ಒಳ್ಳೇ ಭರಕ್ಕೆ ತಂದವರು. ಮುಂದೆ ಅವರು ಸರಕಾರದವರು ಕಾಯ್ದಿಟ್ಟ ಖಾತೆಯಲ್ಲಿಯ ಒಳ್ಳೇ ಘನವಾದ ಸೆಕ್ರೆಟರಿ ಪದವಿಗೆ ಆರೂಢರಾದರು. ಸರಕಾರದವರು ಅವರ ಕೆಲಸಕ್ಕೆ ಮೆಚ್ಚಿ ಮೊದಲು ದಿವಾನ ಬಹಾದ್ದೂರ, ಆಮೇಲೆ ಸಿ ಆಯ್ ಈ ಎಂಬ ಪದವಿಗಳನ್ನೂ ಕೊಟ್ಟರು. ಅವರು ಜಿಲ್ಲಾಧಿಕಾರಿಗಳಾಗಿದ್ದಾಗ, ಹಳ್ಳಿಗಳಲ್ಲಿ ಬಳಕೆಯು ಹೆಚ್ಚಾಗಿ, ಹಳ್ಳಿಗಾಡವರ ದಾರಿದ್ರ್ಯ, ದುರ್ವ್ಯವಸ್ಥೆಗಳ ಬಗ್ಗೆ ತಿಳಿದುಕೊಳ್ಳಲು ಅನುವಾಯಿತು. ಬಡ ಒಕ್ಕಲಿಗರಿಗೆ ಒಕ್ಕಲುತನದ ಬೇಸಾಯದ ನಂತರ ರಾಟಿಯೇ ಮುಖ್ಯವಾದ ಬೇಸಾಯವೆಂದೂ, ಅದರಿಂದಲೇ ಅವರಿಗೆ ಉಪ್ಪು ಮೆಣಸಿನ ಕಾಯಿ ಮುಂತಾದ ಜೀವನೋಪಾಯಕ್ಕೆ ಬೇಕಾಗುವ ನಾಲ್ಕು ವಸ್ತುಗಳು ದೊರೆಯುವವೆಂದೂ ಅವರು ಹೇಳಿದ್ದಾರೆ. **ಬಡವ ಸಿರಿವಂತರಲ್ಲಿ ಬಳಿಕೆ ಹೆಚ್ಚಾಗಿ ಪ್ರೇಮ ಬೆಳೆಯಬೇಕಾದರೆ** ಖಾದಿಯು ಅತ್ಯಾವಶ್ಯಕವಾದುದೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಮತ್ತು ಎಲ್ಲ ಜನರೂ ಖಾದಿಯನ್ನು ಧರಿಸಲು ಒಳ್ಳೇ ಮನಃಪೂರ್ವಕವಾಗಿ ವಿನಯಿಸಿದ್ದಾರೆ. ಖಾದಿಯಲ್ಲಿ ವಿಶ್ವಾಸವಿಲ್ಲದವರಿಗೂ ಕೂಡ ಇದರಿಂದ ನಂಬುಗೆ ಹುಟ್ಟುವಂತಿದೆ. ಟನೆವಲ್ಲಿಯಲ್ಲಿ ಸಹಕಾರದ ಚಳುವಳಿಯ ಬಗ್ಗೆ ಮಾತಾಡುವಾಗ, ಅವರು ಖಾದಿಯ ಪ್ರಚಾರದ ವಿಷಯದಲ್ಲಿ ಒಳ್ಳೇ ಕಳಕಳಿಯಿಂದಲೂ ಸಹಾನುಭೂತಿಪರರಾಗಿಯೂ ಮಾತಾಡಿದ್ದಾರೆ. ಅವರು ಅಸಹಕಾರದಲ್ಲಿ ಅಡಕವಾಗಿರುವ ಮುಖ್ಯವಾದ ತತ್ವಗಳನ್ನು ಬಹಳೇ ಸ್ತುತಿಸಿದರು. ಅವರು ನುಡಿದದ್ದು:—

"ನಾನು ಬಹಳ ದೊಡ್ಡವರಾದ ಮಹಾತ್ಮರ ಹೆಸರನ್ನೆತ್ತುವೆನು. ಅವರು ಜಗತ್ತಿಗೆಲ್ಲ ಅಹಿಂಸೆಯ ಮತ್ತು ಸಹಕಾರ (ಪ್ರೇಮ)ದ ಸಂದೇಶವನ್ನು ಹರಡಿದ್ದಾರೆ. ಅವರ ಚಳವಳಿಗೆ ಅಸಹಕಾರವೆಂಬ ಹೆಸರು ಬಂದದ್ದು ದುರ್ದೈವದ ಸಂಗತಿಯು. ಸೂಕ್ಷ್ಮ ರೀತಿಯಿಂದ ವಿವೇಚಿಸಿ ನೋಡಿದರೆ, ಅವರ **ನೀತಿಯು ಪ್ರೇಮದ ನೀತಿ**ಯಿರುವುದು. ಅವರು ಬಡವರಿಗೂ ಶ್ರೀಮಂತರಿಗೂ ಶಿಕ್ಷಿತರಿಗೂ, ಅಶಿಕ್ಷಿತರಿಗೂ, ಉಚ್ಚ ಜಾತಿಯವರಿಗೂ, ನೀಚ ಕುಲೋತ್ಪನ್ನರಿಗೂ ಸಹಕಾರಮಾಡಲು ಕರೆಯುತಲಿದ್ದಾರೆ; ಕೂಡಿ ಕೆಲಸಮಾಡಲು ಬೇಡುತಲಿದ್ದಾರೆ." ವಿಶೇಷತಃ ಖಾದಿಯ ಬಗ್ಗೆ ಅವರ ಅಭಿಪ್ರಾಯವೇನೆಂದರೆ "ಮಹಾತ್ಮರ ಖಾದೀ ಚಳುವಳಿಯು ಬಹಳೇ ಅರ್ಥಗರ್ಭಿತವಾದುದು. ಖಾದಿಯ ತುಣುಕನ್ನು ಧರಿಸುವ ಮನುಷ್ಯನು ದೇವ ಸಮಾನನು. ಯಾಕೆಂದರೆ ಖಾದಿಯನ್ನು ಧರಿಸುವದರಿಂದ ಅವನು ಬಡವರ ವಿಷಯಕ್ಕಿದ್ದ ತನ್ನ ಸಹಾನುಭೂತಿಯನ್ನೂ ಕರ್ತವ್ಯಬುದ್ಧಿಯನ್ನೂ ವ್ಯಕ್ತಪಡಿಸುವನು. "ನೀತಿ ದೃಷ್ಟಿಯಿಂದಲೂ, ಅರ್ಥಶಾಸ್ತ್ರ ದೃಷ್ಟಿಯಿಂದಲೂ ಖಾದಿ ವಿಚಾರಾಂಶದ ವಿವರಣವನ್ನು ಇದಕ್ಕಿಂತ ಹೆಚ್ಚು ಸ್ಪಷ್ಟವಾಗಿ ಹೇಳುವುದು ಶಕ್ಯವಿಲ್ಲ. ಮುಂದೆ ಅವರು ಖಾದಿಯೆಂದರೆ ನಿಜವಾದ 'ಸಹಕಾರ'ವೆಂಬ ಮಾತನ್ನು ವಿಸ್ತಾರವಾಗಿ ತಿಳಿಸಿದರು.

"ಸಹಕಾರವು ಸರ್ವವ್ಯಾಪಿಯಾದ ವಿಷಯವು." ಈಗ ಅದರದೊಂದು ಭಾಗದ ಬಗ್ಗೆ ನಮಗೆ ಮಾತಾಡಬೇಕಾಗಿದೆ. ಈಗ ಸುಶಿಕ್ಷಿತರೆಂದೆನಿಸಿಕೊಳ್ಳುವವರು ಬಡವರ ದ್ರವ್ಯದಮೇಲೆಯೇ ತಮ್ಮ ಶಿಕ್ಷಣದ ನಿರ್ವಾಹವನ್ನು ಮಾಡಿಕೊಂಡಿರುವರು. ಶ್ರೀಮಂತರೂ ಮಧ್ಯಮ ಸ್ಥಿತಿಯಲ್ಲಿಯ ಜನರೂ ಭೂಮಿಯನ್ನಾಳುವ ಬಡ ಒಕ್ಕಲಿಗರಿಗೆ ಋಣಬದ್ಧರಾಗಿದ್ದಾರೆ. ಅವರಿಗೆ ತಮ್ಮ ಋಣವನ್ನು ತೀರಿಸಬೇಕಾದರೆ, ಖಾದಿಯನ್ನು ಧರಿಸಬೇಕಾಗುವುದು. ಅಂದರೆ ಅವರು ಕರ್ತವ್ಯವನ್ನು ಮಾಡಿದಂತಾಗುವುದು."

ಮದ್ರಾಸ ಸೆಂಟ್ರಲ್ ಬ್ಯಾಂಕಿನಲ್ಲಿ ಕೋಟಿಗಟ್ಲೆ ಹಣವು ಉಚಿತವಾದ ವಿನಿಯೋಗವಿಲ್ಲದೆ ಬಿದ್ದಿರುವದಕ್ಕಾಗಿ ದಿವಾನ ಬಹಾದ್ದೂರರವರು ಹಳಹಳಿಸಿದರು. ಈ ಹಣವು ಹಳ್ಳಿಯವರ ಬಗ್ಗೆ ವೆಚ್ಚವಾಗಿತ್ತೆಂದರೆ ನೆಟ್ಟಗಾಗುತ್ತಿತ್ತೆಂದು ಅವರು ಅಭಿಪ್ರಾಯಪಟ್ಟರು. "ಒಂದೆಡೆಗೆ ಹಣವಿಲ್ಲದ್ದಕ್ಕಾಗಿ ಕೆಲಸ ಬೊಗಸೆಗಳನ್ನು ಬಿಟ್ಟುಕೊಟ್ಟ ಸಾಲಗಾರರಾದ ಬಡ ರೈತರು; ಮತ್ತೊಂದೆಡೆಯಲ್ಲಿ ಕೋಟಿಶಃ ದ್ರವ್ಯವನ್ನು ಕಾಯ್ದುಕೊಂಡು ಬಿದ್ದಿರುವ ಸೆಂಟ್ರಲ್ ಬ್ಯಾಂಕು. ಸಹಕಾರದ ಚಟುವಟಿಕೆಯನ್ನು ಹರಡಿಸಲು ಅಂತಹ ಮಹತ್ವದ ಯಾವ ಕೆಲಸವನ್ನೂ ಕೈಕೊಂಡಂತೆ ಕಂಡುಬರುವದಿಲ್ಲ. ಸಹಕಾರೀ ಚಟುವಟಿಕೆಗಾಗಿ ಕೂಡಿಹಾಕಿದ ಹಣದೊಳಗಿನ ಪ್ರತಿಯೊಂದು ಪೈಯು ರೈತರ ಹಿತಕ್ಕಾಗಿ ವಿನಿಯೋಗಿಸಲ್ಪಟ್ಟು ಅದರಿಂದ ಅವರ ಹಿತವು ಸಾಧ್ಯವಾಗುವಂತೆ ನೋಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ.

ಹಳ್ಳಿಗಾಡಿನ ಕೆಲಸಕ್ಕಾಗಿ ಹಣವನ್ನು ವೆಚ್ಚಮಾಡಲು ಹಿಂದುಮುಂದೆ ನೋಡುವುದು ತರವಲ್ಲವೆಂದು ಬಹಾದ್ದೂರರವರು ಹೇಳಿದರು.

"ವ್ಯಾಪಾರದಲ್ಲಿ ಲಾಭವೆಂದೇ ಬರಲಿ, ನೌಕರಿಯಲ್ಲಿ ಸಂಬಳವೆಂದೇ ಬರಲಿ, ನಮಗೆ ದೊರೆಯುವ ಎಲ್ಲ ಹಣವೂ ಒಕ್ಕಲಿಗನಿಂದಲೇ ಬರುತ್ತದೆಂಬ ಮಾತನ್ನು ನಾವು ಲಕ್ಷ್ಯದಲ್ಲಿಡತಕ್ಕದ್ದು. ರೈತನನ್ನೂ, ಒಕ್ಕಲಿಗನನ್ನೂ ಉಳಿದರೆ, ಯಾವ ಸಹಕಾರವೂ ಬೆಳವಣಿಗೆಯನ್ನು ಹೊಂದಲಾರದು."

ಇದರಿಂದ ದಿವಾನಬಹಾದ್ದೂರರವರ ಸ್ವದೇಶಪ್ರೇಮವೂ ಸತ್ಯವನ್ನು ನುಡಿಯುವ ಧೈರ್ಯವೂ ವ್ಯಕ್ತವಾಗುತ್ತದೆ. ಬಡವರ ವಿಷಯದಲ್ಲಿ ಅವರ ಕರ್ತವ್ಯಬುದ್ಧಿಯು ಬಹಳ ತೀವ್ರವಾದುದಿರುತ್ತದೆ. ಅಂಜಿಕೆಯನ್ನು ದೂಡಿ ಹಳ್ಳಿಗಾಡಿನ ಸಲುವಾಗಿ ಬಂಡವಾಳವನ್ನು ವಿನಿಯೋಗಿಸಲು ಅವರು ಎಲ್ಲ ಸಹಕಾರಿಗಳಿಗೂ ಉಪದೇಶಿಸಿದ್ದಾರೆ. ಇದರಿಂದ ರಾಟೆಯ ಬೆಲೆಯು ಎಷ್ಟೆಂಬುದು ತಾನೇ ವ್ಯಕ್ತವಾಗುತ್ತಿದೆ. ಇದರಿಂದ ಹಳ್ಳಿಯ ಬಡತನವು ಅಳಿಯುವದು. ಶ್ರೀಮಂತರೂ ಮಧ್ಯಮ ಸ್ಥಿತಿಯವರೂ ತಮ್ಮ ಕರ್ತವ್ಯವನ್ನರಿತು ಖಾದಿಗೆ ಆಶ್ರಯವನ್ನು ಕೊಡಬೇಕೆನ್ನುವದು ಸಿದ್ಧವಾಗುವುದು.

ಯಂಗ ಇಂಡಿಯಾ

ರೈತರಮೇಲೆ ಹೊಸ ಗಂಡಾಂತರ

ಲೋಕಲ್ ಫಂಡ ಇಮ್ಮಡಿಯಾಗುವದು.

ರೈತರು ಅದನ್ನು ನಿಷೇಧಿಸಬೇಕು—

ಎಚ್ಚರಿಕೆ.

ನನ್ನ ಪ್ರಿಯ ಬಾಂಧವರೇ!

ಲೋಕಲ್ ಫಂಡ ಇಮ್ಮಡಿಮಾಡಬೇಕೆಂದು ಒಂದು ಠರಾವು ಜಿಲ್ಹಾ ಲೋಕಲ್‌ಬೋರ್ಡಿನವರ ಮುಂದೆ ವಿಚಾರಾರ್ಥವಾಗಿ ಬಂದಿದೆ; ಜನರು ಅದನ್ನು ಯೋಗ್ಯಕಾಲದಲ್ಲಿ ನಿಷೇಧಿಸದಿದ್ದರೆ ಲೋಕಲ್ ಫಂಡು ಇಮ್ಮಟ್ಟಾಗುವದು. ಇದರಲ್ಲಿ ಎಳ್ಳಷ್ಟಾದರೂ ಸಂದೇಹವಿಲ್ಲಾ. ಲೋಕಲ್ ಬೋರ್ಡಿನಮುಂದೆ ಬಂದ ಠರಾವು ಜನರ ಅಭಿಪ್ರಾಯದಸಲುವಾಗಿ ಮುಂದೆಹಾಕಲ್ಪಟ್ಟಿದೆ ಆ ಠರಾವು ಪುನಃ ಲೋಕಲ್ ಬೋರ್ಡಿನವರು ವಿಚಾರಮಾಡುವ ಪೂರ್ವದಲ್ಲಿಯೇ ಜನರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕು.

ಕಳೆದ ನಾಲ್ಕೆಂಟುವರ್ಷಗಳಿಂದ ನಮ್ಮ ಜಿಲ್ಹೆಯಲ್ಲಿ ದುಷ್ಕಾಳ ಬೀಳುತ್ತಿದ್ದುದರಿಂದ ಹೊಸ ಪಟ್ಟಿಯನ್ನು ಕೊಡುವ ಸಾಮರ್ಥ್ಯ ಜನರಲ್ಲಿ ಇಲ್ಲ. ವಿಶೇಷತಃ ಈ ವರ್ಷದಲ್ಲಿ ಭಯಂಕರ ದುಷ್ಕಾಳ ಬಿದ್ದದೆ. ಹೀಗಿದ್ದು ಬೋರ್ಡಿನವರು ಕರಹೆಚ್ಚು ಮಾಡುವದು ಶುದ್ಧ ಅನ್ಯಾಯವಾಗಿ ನಮಗೆ ತೋರುತ್ತದೆ. ನನ್ನ ಅಭಿಪ್ರಾಯವನ್ನು ನಾನು ಬೋರ್ಡಿನವರಿಗೆ ಸ್ಪಷ್ಟತಿಳಿಸಿದ್ದೇನೆ. ತಾವು ಚುನಾಯಿಸಿಕೊಟ್ಟಂಥ ಮೆಂಬರರು ಏನುಮಾಡುತ್ತಾರೆಂಬದನ್ನು ತಾವು ನೋಡಬೇಕು. ತಮಗೆ ಈ ಕರಭಾರವು ಬೇಕಾಗಿದ್ದರೆ ಮತ್ತು ಅದನ್ನು ಹೊರುವಷ್ಟು ಸಾಮರ್ಥ್ಯ ತಮ್ಮಲ್ಲಿದ್ದರೆ ಬೋರ್ಡಿನವರಿಗೆ ಆ ಪ್ರಕಾರ ತಿಳಿಸಬೇಕು. ಇಲ್ಲದಿದ್ದರೆ ಲೋಕಲ್ ಫಂಡು ಹೆಚ್ಚು ಮಾಡಬಾರದಾಗಿ ಸ್ಪಷ್ಟವಾಗಿ ನನಗೂ, ಬೋರ್ಡಿನ ಪ್ರೆಸಿಡೆಂಟರಿಗೂ, ಪತ್ರದ್ವಾರ ತಿಳಿಸಬೇಕು.

ಇನ್ನು ತಮಗೆ ಶಿಕ್ಷಣ ಸಾರ್ವತ್ರಿಕ ಮತ್ತು ಆವಶ್ಯವಾದದ್ದು ಮಾಡಬೇಕಾಗಿದೆ ಅದಕ್ಕೆ ದ್ರವ್ಯನಿಧಿಬೇಕು. ಇಲ್ಲವಾದರೆ ಅವೆಲ್ಲ ಆಗುವದಿಲ್ಲೆಂದು ನಿಮ್ಮಕಣ್ಣಲ್ಲಿ ಮಣ್ಣು ಹಾಕುವ ಪ್ರಯತ್ನ ಕೆಲವರು ಮಾಡುವರು ಅದರಮೇಲೆ ತಾವು ಎಳ್ಳಷ್ಟಾದರೂ ವಿಶ್ವಾಸ ವಿಡಕೂಡದು ಅದೆಲ್ಲ ಸುಳ್ಳು. ನಮ್ಮ ಜಿಲ್ಹೆಯಲ್ಲಿ ಅಬಕಾರಿ ಉತ್ಪನ್ನವು ದಿನೇ ದಿನೇ ಹೆಚ್ಚುತ್ತಲಿದೆ ಆ ಖಾತೆಯಲ್ಲಿ ಉಳಿದ ದ್ರವ್ಯಕ್ಕೆ ನಾವೇ ಹಕ್ಕದಾರರಿರುತ್ತೇವೆ ಅದರ ಪೈಕಿ ಕೆಲವು ಹಣ ನಮಗೆ ಕೊಟ್ಟರೂ ನಮ್ಮ ಶಿಕ್ಷಣದ ಖರ್ಚು ತೀರುವದು. ಹೀಗಿದ್ದು ಪುನಃ ನಮ್ಮ ಮೇಲೆಯೇ ಕರಕೂಡಿಸುವದು ಅನ್ಯಾಯವೆಂದು ನಾವು ಸ್ಪಷ್ಟವಾಗಿ ಬೋರ್ಡಿನವರಿಗೆ ತೀವ್ರವೇ ತಿಳಿಸಬೇಕು

ಇನ್ನೊಂದು ಸಂಗತಿ ಈಗಿನಿಂದಲೇ, ಇಮ್ಮಡಿಮಾಡುವದಿಲ್ಲ ಸದ್ಯಕ್ಕೆ ಠರಾವುಮಾಡಿ ಇಡೋಣ ಬೇಕಾದವೇಳೆಯಲ್ಲಿ ಅದರ ಅಮಲಬಜಾವಣಿಮಾಡಲು ಬಂದೀತೆಂದು ನಿಮಗೆ ಕೆಲವರು ಹೇಳುವರು ಅದು ತೀರಸುಳ್ಳು. ಒಮ್ಮೆ ನೀವು ಕೈ ಕಟ್ಟಿಸಿಕೊಂಡು ಕೂತನಂತರ ನಿಮಗೆ ಹೇಳದಲೇ ಆ ಠರಾವು ಒಮ್ಮೆಲೆ ಅಮಲಬಜಾವಣಿಯಲ್ಲಿ ಬರುವದು. ಸರಕಾರಿಯು ಅಧಿಕಾರಿಗಳು ನಿಮ್ಮ ಊರಿಗೆ ಬಂದಾಗ್ಗೆ ನಿಮ್ಮ ಅಭಿಪ್ರಾಯಗಳನ್ನು ಸ್ಪಷ್ಟರೀತಿಯಿಂದ ಅವರ ಮುಂದೆ ಹೇಳಬೇಕು. ಕೆಲವರು ಸರಕಾರಿ ಅಧಿಕಾರಿಗಳ ಮರ್ಜಿ ಸಂಪಾದನೆಯ ದೆಶೆಯಿಂದ ಸುಳ್ಳುಹೇಳುವರು. ತಾವು ಲೋಕಲ್ ಫಂಡು ಹೆಚ್ಚಿಗೆ ಕೊಡಲಿಕ್ಕೆ ಒಪ್ಪುವರೆಂದು ಹೇಳುವರು. ಅದೆಲ್ಲ ತಿಳಿದುಕೊಂಡು ತಾವು ತಮ್ಮ ಅಭಿಪ್ರಾಯವನ್ನು ಹೇಳಬೇಕು. ಅದರಂತೆ ಊರಲ್ಲಿ ಒಂದು ಸಭೆಮಾಡಿ ಅದರ ಠರಾವು ನನ್ನ ಕಡೆಗೆ ಒಂದು ಮತ್ತು ಪ್ರೆಸಿಡೆಂಟರ ಕಡೆಗೆ ಒಂದು ಕಳಿಸಬೇಕು.

ಸೊಲಾಪೂರದ ರೈತರು ಈಗ್ಗೆ ಗೋಳಾಡುವಂತೆ ತಮ್ಮಮೇಲೆ ಮುಂದೆ ಗೋಳಾಡುವ ಪ್ರಸಂಗ ಬಂದೀತೆಂದು ತಿಳಿದು ತಮಗೆ ಎಚ್ಚರಿಕೆ ಕೊಡುವ ನನ್ನ ಕರ್ತವ್ಯವನ್ನು ನಾನು ಮಾಡಿದ್ದೇನೆ. ತಾವು ಹೇಳಿದಂತೆ ತಮ್ಮ ಕೆಲಸವನ್ನು ಮಾಡಲಿಕ್ಕೆ ನಾನು ಸಿದ್ಧನಿದ್ದೇನೆ.

ತಾ|| ೫-೧-೧೯೨೭

ರಘೋತ್ತಮಾಚಾರ್ಯ ರಾಮಚಂದ್ರಾಚಾರ್ಯ

ಜಾಹಗಿರದಾರ ಭೂಯಾರ.

ಮೆಂಬರ ಜಿಲ್ಹಾ ಲೋಕಲ್ ಬೋರ್ಡ ವಿಜಾಪುರ.

ಭಾರತ ವಿಲಾಪ.

(ಸ್ವಾಮಿ ಶ್ರದ್ಧಾನಂದರ ಮರಣ)

೨೩-೧೨-೧೯೨೬

(ಸ್ವಾಮಿದೇವನೆ । ಲೋಕಪಾಲಕ) ಎಂಬಂತೆ

ಕೊಂದರೇ ಹಾ! ರಾಷ್ಟ್ರಯೋಧನ! ಶ್ರೀಸ್ವಶ್ರದ್ಧಾನಂದನ || ಪ ||
ಕೊಂದರೇ ಹಾ! ಧರ್ಮವೀರನ | ಕರ್ಮಶೂರನ ಧೀರನ || ಅ. ಪ ||
ಗುರುಕುಲೋದ್ಧಾರಕನ ತರಿದರೆ | ಗುರುವಿಘಾತಕ ಗೈದರೇ ||
ಕರುಣವಿಲ್ಲದೆ ಹರಣ ತೆಗೆದರೆ | ಮರಣವನ್ನೇ ಬಗೆದರೇ! || ೧ ||
ಅಮಲ ಹಿಂದೂ ಧರ್ಮರಕ್ಷಣೆ | ಗಾಗಿ ತನುಮನಧನವನು ||
ಅಮಿತ ಸಂತೋಷದಲಿ ನೀಡುವೆ | ನೆಂದ ಶ್ರದ್ಧಾನಂದನು || ೨ ||
ತನ್ನ ಧರ್ಮೋದ್ಧಾರಕಾರ್ಯಕೆ | ತನುವನಾಂತನು ಸಂತನು ||
ತನ್ನ ಧರ್ಮಕ್ಕಾಗಿ ಮಡಿದನು | ಗುಂಡಿಗಾಹುತಿಯಾದನು || ೩ ||
ಆರ್ಯಧರ್ಮವಿಚಾರ ಪಾರಂ | ಗತನು- ಆತನು- ಖ್ಯಾತನು ||
ಕಾರ್ಯದಕ್ಷನು ಮೋಕ್ಷಕಾಮನು | ಆತ್ಮಯಜ್ಞವಗೈದನು || ೪ ||
ಆ ದಯಾನಂದಾರ್ಯ ಪಂಥಕೆ | ಸಿದ್ಧ ಶ್ರದ್ಧಾನಂದನು ||
ಸಾಧುವರ್ಯರ ಬಂಧುವಳಿದನು | ಕೀರ್ತಿಕಾಯವನುಳಿದನು || ೫ ||
ಶಾಂತಿ-ಹಿಂದೂ-ಮಹಮದೀಯರ | ಭೇದಗೊಂಡ ಮನಸ್ಸಿಗೆ ||
ಶಾಂತಿ- ಶ್ರದ್ಧಾನಂದನಾತ್ಮಕೆ | ಶಾಂತಿ- ಭಾರತ ಮಾತೆಗೆ || ೬ ||

ಗುಣಿಂಚಶಾಸ್ತ್ರಿ

ಮುಂಗಸೂಹ.

ವರ್ತಮಾನಸಾರ.

ಮುಂಬಯಿ ಕರ್ನಾಟಕ.

ಬಿಜಾಪೂರ ಮಠದ ಶ್ರೀಮದಾನಂದತೀರ್ಥ ಸ್ವಾಮಿಯವರು ಸೋಮವಾರ ರಾತ್ರಿಗೆ ಒಂದು ಗೋಕರ್ಣ ಮಾರ್ಗವಾಗಿ ಮೋಟಾರಿನಿಂದ ಹೃಷೀಕೇಶಕ್ಕೆ ಹೋದರು. ಯೋಗಾಭ್ಯಾಸಕ್ಕಾಗಿ ಅವರು ಆ ಕ್ಷೇತ್ರಕ್ಕೆ ಹೊರಟಿದ್ದಾರೆ.

ಸಹಕಾರಸಂಘಗಳ ಮುಂಬಯಿ ಇಲಾಖೆಯ ವರದಿಯು ಪ್ರಕಟವಾಗಿದೆ. ಸಹಕಾರದಲ್ಲಿ ಮುಂಬಯಿ ಕರ್ನಾಟಕವು ಒಳ್ಳೇ ಮುಂದಾಗಿರುವದೆಂಬುದಾಗಿ ತೋರಿಸಿದ್ದಾರೆ. ಧಾರವಾಡವು ಗದಗ ಮುಂತಾದ [illegible] ಗಿಯ ಮೊದಲಿನಿಂದಲೂ ಸೊಸಾಯಿಟಿ ಚಳುವಳಿಯ [illegible] ಸಾತಾರಾ ಜಿಲ್ಲೆಯಲ್ಲಿಯ ಎಲ್ಲೂರ ಯೂನಿಯನ್ ಇವು ಒಳ್ಳೇ ಊರ್ಜಿತಸ್ಥಿತಿಯಲ್ಲಿವೆ.

ಜನಗಳ ಊಸಿಕಟ್ಟಿದ ಸೊಸಾಯಿಟಿಗಳು ಮುಂಬಯಿ ಇಲಾಖೆಯಲ್ಲಿ ಗಲಭೆ ಅವುಗಳಲ್ಲಿ [illegible] ಕಿವಿಗೆಬಿದ್ದಿವೆ. ಆದರೆ ಕರ್ನಾಟಕದಲ್ಲಿಯ ಊರ ಮತ್ತು ಸಿದ್ದೇಶ್ವರಗಳಲ್ಲಿಯ ಸೊಸಾಯಿಟಿಗಳು ಸ್ವಾಮಿತ್ವಕ್ಕೆ ಬಂದಿವೆ.

ಬಿನ್ನಹಾಕಿದ ಸೊಸಾಯಿಟಿಗಳು ಇಲಾಖೆಯಲ್ಲಿ ಮೂರೇ ಇವೆ. ಅವು ಎಲ್ಲವೂ ಕನ್ನಡನಾಡಿನಲ್ಲಿಯೇ ಇವೆ. ಕಾರವಾರ ಜಿಲ್ಲೆಯ ಮುಂಡಗೋಡ ತಾಲೂಕಿನಲ್ಲಿ, ಧಾರವಾಡ ಜಿಲ್ಲೆಯ ಯಲಬುರ್ಗಿಯಲ್ಲಿ ಒಟ್ಟು ಕೂಡಿ ಒಂದು ಸೊಸಾಯಿಟಿಯು ಮುಖಾಂತರವಾಗಿ ೧೭೦ ಎಕರೆ ಪಡ ಜಮೀನುಗಳನ್ನು ಸಾಗವಳಿ ಮಾಡುತ್ತಿದ್ದಾರೆ.

ಕನ್ನಡದ ಸೊಸಾಯಿಟಿಗಳು ಇಲಾಖೆಯಲ್ಲಿ ಹಲವಿವೆ ಆದರೆ ಈಗ ವ್ಯಾಪಾರವು ಮಂದವಾಗಿರುವದರಿಂದ ಈ ಸೊಸಾಯಿಟಿಗಳ ಕೆಲಸವು ಭರದಿಂದಸಾಗಿಲ್ಲ.

ಧಾರವಾಡದಲ್ಲಿ ಸಾರಸ್ವತ ಸೊಸಾಯಿಟಿಯವರು ೪೬ ಕಟ್ಟಡಗಳಲ್ಲಿ ೩೨ ಕಟ್ಟಡಗಳನ್ನು ಕಟ್ಟಿದ್ದಾರೆ. ಲಿಂಗಾಯತರು ೧೬ ಕಟ್ಟಡಗಳನ್ನು ಸಹಕಾರವಾಗಿ ಕಟ್ಟಿದ್ದಾರೆ.

ಗದಗ ಮತ್ತು ಹುಬ್ಬಳ್ಳಿಗಳಲ್ಲಿಯ ಕೆಲವು ಉತ್ತಮವಾದ ಕಲ್ಲಿನ ಮನೆಗಳು ದೂರದಿಂದ ಅವನ್ನು ಮುಂಬಯಿಯ 'ಪ್ರಿನ್ಸ್ ಆಫ್ ವೇಲ್ಸ್ ಮ್ಯೂಝಿಯಂ'ದಂತೆ ಕಾಣುತ್ತಿವೆ.

ಧಾರವಾಡ ಮುನಸಿಪಾಲಿಟಿಯಲ್ಲಿ ಹಣದ ಮುಗ್ಗಟ್ಟು ಹೆಚ್ಚಾಗಿ ತೋರುತ್ತದೆ. ಚೀಫ್ ಆಫೀಸರ ಸೆಕ್ರೆಟರಿ ಮತ್ತು ಹೆಲ್ತ ಆಫೀಸರ ಇವರೆಲ್ಲರಿಗೂ ಹಿತ್ತಲಿನಿಂದ ರಜೆಯು ಕೊಡಲ್ಪಟ್ಟಿದೆ. ಕೆಲವು ತಿಂಗಳ ನಂತರ ಈಗ ತಕರಾರಿನಲ್ಲಿ ಬಂದ ಅಧ್ಯಕ್ಷರು [illegible] ಮುನಸಿಪಾಲ್ಟಿಗೆ ಆದಾಯವು ತಗ್ಗಿದ್ದರಿಂದ ಬರೆದಿರುವರು. ಕೆಲವು ಕಚೇರಿಗಳು ಗುತ್ತಿಗೆ ಸ್ವರೂಪವಾದವು ಇರುತ್ತವೆಂದು ಕಲೆಕ್ಟರರು ಬರೆದಿರುವರು.

ಮೈಸೂರ ಕರ್ನಾಟಕ.

ಮೈಸೂರ ಸರಕಾರದವರು ಹಿಂದುಸ್ಥಾನ ಸರಕಾರಕ್ಕೆ ಕೊಡತಕ್ಕ ಕಾಣಿಕೆ ಮೈಸೂರ ರೈಲ್ವೇಗಳ ಅಭಿವೃದ್ಧಿ ಮತ್ತು ವಿದೇಶಿ ಒಡವೆಗಳ ಮೇಲಿನ ಕರ ಇವುಗಳ ಬಗ್ಗೆ ದಿವಾನರವರು ವ್ಹಾಯಿಸರಾಯರವರಿಗೆ ವಿಶದವಾಗಿ ಮಾತನಾಡಿದರು. ವ್ಹಾಯಿಸರಾಯರವರು ಈ ಪ್ರಶ್ನೆಗಳನ್ನು ಸಮಾಧಾನಕರವಾಗಿ ಬಗೆಹರಿಸುವೆವೆಂಬ ಧೋರಣದ ಉತ್ತರವನ್ನು ಕೊಟ್ಟರಂತೆ.

ಮೈಸೂರ ಮಹಾರಾಜರು ಈ ತಿಂಗಳ ೩ನೇ ತಾರೀಖಿನಲ್ಲಿ ಗೋದಾವರಿಯ ಮೇಲಿಂದ ನದಿಯ ಮೇಲೆ ಕಟ್ಟಿಸಿದ ಹೊಸ ಸೇತುವೆಯನ್ನು ಪ್ರಾರಂಭಿಸುವವರಿದ್ದಾರೆ. ಇದು ಹಾಸನ ಜಿಲ್ಲೆಯಲ್ಲಿ [illegible] ಹೆಸರನ್ನು ಕಟ್ಟಿಸಿದ್ದಾರೆ.

ಮೈಸೂರಿನ್ನ ಸುಶಿಕ್ಷಿತರಿಗೆ [illegible] ನಕ್ಷದ ಇರುವದರಿಂದ ಇವ

ರಿಗೆ ಉದ್ಯೋಗದೊರೆಯುವ ಹಂಚಿಕೆಗಳನ್ನು ಮಾಡಲು ಹತ್ತುಮಂದಿ ಅಧಿಕಾರಿಗಳ ಮತ್ತು ಬಿನ್ ಅಧಿಕಾರಿಗಳ ಮಂಡಳವು ಸ್ಥಾಪಿತವಾಗಿದೆ ಈ ಮಂಡಳದ ಅಧ್ಯಕ್ಷರು ಬಾಲಸುಬ್ರಹ್ಮಣ್ಯ ಅಯ್ಯರವರು ಇರುವರು. ಎಲ್ಲಕಡೆಯಲ್ಲಿಯೂ ಮಧ್ಯಮಸ್ಥಿತಿಯ ಸುಶಿಕ್ಷಿತರು ಕೆಲಸವಿಲ್ಲದೆ ತಿರುಗುತ್ತಿರುವದು ಎಲ್ಲರಿಗೂ ಗೊತ್ತಿರುವ ಮಾತೇ ಇದೆ. ಇದಕ್ಕೆ ಎಲ್ಲರೂ ಲಕ್ಷಕೊಡಬೇಕು.

ಮದ್ರಾಸ ಕರ್ನಾಟಕ

ಬಯಾಮೇರಿನ ಔಷಧಾಲಯಕ್ಕೆ ಮಂಗಳೂರ ಮುನಸಿಪಾಲಟಿಯವರು ಆಶ್ರಯಕೊಟ್ಟರು. ಕರ್ನಾಟಕದ ಮುನಸಿಪಾಲ್ಟಿಗಳಲ್ಲಿ ಒಂದು ಮುನಸಿಪಾಲಿಟಿಯಾದರೂ ಆಯುರ್ವೇದದ ಬಗ್ಗೆ ಅಭಿಮಾನವಿಟ್ಟದ್ದು ಸಂತೋಷದ ಮಾತು. ಕರ್ನಾಟಕದ ಉಳಿದ ಮುನಸಿಪಾಲಿಟಿಯವರು ಇದನ್ನು ಅನುಕರಿಸುವರೋ?

ಕೊಡಗು ಕರ್ನಾಟಕ

ಚಿಟ್ಟಿಕೇರಿಯಲ್ಲಿ ಒಂದು ಹಂದಿಯ ಮರಿಗೆ ಹಣೆಯಲ್ಲಿ ಆನೆಯ ಸೊಂಡಿಲಿನಂತೆ ಅಂಗವೂ ಹಲ್ಲುಗಳೂ ಇದ್ದವು ಸತ್ತುಹೋದ ಈ ಮರಿಯನ್ನು ಮಡಿಕೇರಿ ಆಸ್ಪತ್ರೆಯಲ್ಲಿ ಔಷಧಿಯಲ್ಲಿ ಹಾಳಾಗದಂತೆ ಇಟ್ಟಿರುವರು

ಹಿಂದುಸ್ಥಾನ

ಗುರುಗೋವಿಂದ ಸಿಂಗನ ಸ್ಮಾರಕದ ದಿವಸ ಕಲಕತ್ತೆಯಲ್ಲಿ ಎಷ್ಟೋ ಕೊಲೆಗಳಾದವೆಂದು ಸುದ್ದಿ ಇದೆ

ಶನಿವಾರದಿವಸ ಮುಂಬಯಿಯ ಹಿಂದೂ ಮಹಿಳೆಯರ ಒಂದು ಪ್ರತಿನಿಧಿಯ ಮಂಡಳವನ್ನೇರ್ಪಡಿಸಿ ಗವರ್ನರರ ಭೆಟ್ಟಿಗೆ ಹೋಗಿದ್ದರು ಶಾರದಾ ಕಾಯದೆಯನ್ನು ಸ್ತ್ರೀಯರಿಗೆ ಒಂದು ಸ್ಥಾನದೊರೆಯಬೇಕೆಂಬುದೇ ಅವರ ಉದ್ದೇಶ

ಪುಣೆಯಲ್ಲಿ ೭ನೇ ತಾರೀಖಿನದಿವಸ ಗಾಯಕವಾಡ ಮಹಾರಾಣಿಯವರ ಅಧ್ಯಕ್ಷತೆಯಲ್ಲಿ ಅಖಿಲಭಾರತೀಯ ಮಹಿಳಾಪರಿಷತ್ತು ಜರುಗಿತು ಇದರಲ್ಲಿ ಕರ್ತವ್ಯ ಮತ್ತು ಉತ್ಸಾಹ ಪೂರ್ಣರಾದ ಮಕ್ಕಳುಗಳು ಬೇಕಾದರೆ ತಾಯಂದಿರುವರು ಕಸುವುಳ್ಳವರೂ, ಸಶಕ್ತರಿಗೆ ಬಂದವರಿರಬೇಕು. ಇದಕ್ಕಾಗಿ ಬಾಲ್ಯವಿವಾಹವನ್ನು ತಡೆಹಿಡಿಯುವ ಕಾರ್ಯ ಬೇಕೆಂಬುದಾಗಿ ಹೇಳಿದರು ೮ನೇ ತಾರೀಖಿನದಿವಸ ಈ ಪರಿಷತ್ತು ಜರುಗಿತು ಶಾಲೆಗಳ ಅಭ್ಯಾಸದ ಕ್ರಮದಲ್ಲಿ ಲಲಿತ ಕಲಾ, ಗೃಹಕಾರ್ಯಶಾಸ್ತ್ರ ಪ್ರಸೂತಿಶಾಸ್ತ್ರ, ಆರೋಗ್ಯಶಾಸ್ತ್ರ, ಶಿಲ್ಪಶಾಸ್ತ್ರ, ಇವೇ ಮೊದಲಾದವುಗಳನ್ನು ವಿದ್ಯಾರ್ಥಿಯರಲ್ಲಿ ಕಡ್ಡಾಯ ವಿಷಯವಾಗಿ ಕಲಿಸಬೇಕೆಂದು ನಿರ್ಣಯವಾಯಿತು.

ಬಾಹೋರದಲ್ಲಿಯ ಸಾಯನ್ಸ ಕಾಂಗ್ರೆಸ್ಸಿನಲ್ಲಿ ಕೃಷಿಕರ್ಮದ ವಿಷಯವಾಗಿ ಎಷ್ಟೋ ಮಹತ್ವದ ಠರಾವುಗಳು ಓದಲ್ಪಟ್ಟವು.

ಮದ್ರಾಸಿನಲ್ಲಿ ೭ನೇ ತಾರೀಖಿನದಿವಸ ಬ್ರಾಹ್ಮಣೇತರರ ಒಂದು ಸಭೆಯು ಕೂಡಿತ್ತು. ಅದರಲ್ಲಿ ಹಳ್ಳಿಯಲ್ಲಿಯ ಕೆಲಸವು ಸುಸಂಘಟಿತವಾಗಬೇಕೆಂದೂ ಮತ್ತು ಬ್ರಾಹ್ಮಣೇತರ ವೃತ್ತಪತ್ರಗಳು ಹೆಚ್ಚು ಸ ಧಾರಿಸಬೇಕೆಂದೂ ಭಾಷಣಗಳಾದವು.

ಸೋಜಿಗದ ಸುದ್ದಿಗಳು

ಕೊಲ್ಹಾಪುರ ಸಂಸ್ಥಾನದ ಪಳಕೃದೆ ಎಂಬ ಊರಲ್ಲಿ ೨೫-ವರ್ಷದ ಒಬ್ಬ ತರುಣನಿರುವನು ಅವನ ಒಂದು ಕಣ್ಣು ವಿಚಿತ್ರ ಇದ್ದು ಕತ್ತೆಯ ಹುಬ್ಬು ಕಣ್ಣಿನ ರೆಪ್ಪೆಗಳ ಕೂದಲುಗಳು ಹದಿನೈದುದಿವಸಗಳವರೆಗೆ ಬೆಳ್ಳಗಾಗಿ ಪುನಃ ಕಪ್ಪಾಗುತ್ತವೆ, ಆಗ ತದ್ವಿರುದ್ಧ ದಿಕ್ಕಿನ ಹುಬ್ಬು ಕೂದಲುಗಳು ಬೆಳ್ಳಗಾಗುತ್ತವೆ, ಈ ಕ್ರಮವು ಹುಟ್ಟಿದಾಗಿನಿಂದ ನಡೆದಿದೆ ಎಂದು ತಿಳಿಯುತ್ತದೆ. ಕಣ್ಣುಗಳಿಗೂ ಹಾಗೆಯೇ ಅವಸ್ಥೆಗಳು ಪ್ರಾರಂಭವಾಗಿರುವವು.

ದಿ ಶಿಯರಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೭ ನೇ ಇಸ್ವಿಯ ಜುಲೈ ೩೧ ನೇ ತಾ|| ದಿವಸ ೪-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ್ ಚೇಅರಮನಾಠಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗ್ರಹಸ್ಥರಿಗೆ ಬಡ್ಡಿ ಮತ್ತು ಪತಿ, ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ. ೬೪೪. ಮಿ. ಮಹಮ್ಮದ ಯುಸುಫ ಡಿಸ್ಟಿಲೆರಿಗಾರ್ಡ, ನಾರಾಯಣ ಗುಡ ಡಿಸ್ಟಿಲೆರಿ, ಹೈದರಾಬಾದ್ ಡೆಕ್ಕನ್ನ ರೂ ೧೦೦೦

(೨) ಎಲ್. ಬಿ. ಸಿ. ನಂ. ೫೧೮ ಮಿ. ಸೈಯದ್ ಜಹೂರಅಲಿ ಬಿ. ಎ ಬಿ. ಟಿ. ಶಾಲಾಗಳ ಡಿವಿಜನಲ್ ಇನ್ಸ್‌ಪೆಕ್ಟರ್ ಔರಂಗಬಾದ ಸಿಟಿ, ನೈಜಾಮ ಇಲಾಖಾ ರೂ. ೧೦೦೦

(೩) ಎಲ್. ಬಿ. ಸಿ. ನಂ. ೨೧೭೯ ಮಿ. ದೇವನ ವಾಸುದೇವನ ನಂಬೂದ್ರಿಪಾದ ಜಮೀನದಾರ ಬಡಸಲ್ಲಿ ಅಲ್ವಾಯಿ ರೂ ೭೦೦

(೪) ಬಾಂಡ ನಂಬರು ೯೭೩೦ ಮಿ. ಶಂಕರಪ್ಪಾ ಬಸಪ್ಪಾ ದೇವನಕೊಂಡ, ಅಕ್ಕಸಾಲಿ ಬೆಡೀಗಾರಗಲ್ಲಿ ಹುಬ್ಬಳ್ಳಿ ರೂ. ೧೦೦೦

(೫) ಬಾಂಡ ನಂಬರು ೧೪೨೦೬ ಮಿ. ಶೇಕ ಬಾಪುಮಿಯಾ ಶೇಕ ಮಹಮ್ಮದ ನಳ ತಯಾರ ಮಾಡುವವರು ೭೧೫ ಭವಾನಿಪೇಟ ಪುನಾ ೧೦೦೦

ಬಿ. ಎನ್. ಆರಾಧ್ಯ
ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ.)

ಕಿರ್ಲೋಸ್ಕರ

ಕಬ್ಬಿಣ ನೇಗಿಲುಗಳು

ಹಂಗಾಮು (ಸುಗ್ಗಿ) ಸಮೀಪಿಸಿತು. ಈ ವರ್ಷ ಮಳೆ ಬೆಳೆ ಚನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವುದು. ಕಿರ್ಲೋಸ್ಕರ ನೇಗಿಲು ನಂ. ೧೧, ೯, ೮ ಇವು ಒಕ್ಕಲಿಗರಿಗೆ ಬಹಳೇ ಉಪಯೋಗ ಬೀಳುತ್ತವೆ ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗ್ತುವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.	ಕಿರ್ಲೋಸ್ಕರವಾಡಿ ಜಿಲ್ಲೆ ಸಾತಾರೆ

ಗವ್ಹರ್ನಮೆಂಟಿನಲ್ಲಿ ರಜಿಷ್ಟರ ಮಾಡಲ್ಪಟ್ಟ ಜಗತ್ಪ್ರಸಿದ್ಧವಾದ



ಎಲ್ಲ ರೋಗಗಳಿಗೆ ಒಂದೇ ಔಷಧ.

ಅರ್ಕಶಫಾ ಅಥವಾ ಆರೋಗ್ಯ ಬಿಂದು

ಪ್ರವಾಶಿಮಿತ್ರ. ಮೂರ್ತಿಮಂತವೈದ್ಯ

ಇದು ಅರ್ಕವಿದ್ದು ಇದರಲ್ಲಿ ನೀರು ರಸಾಯನ ಕೂಡಿರುವದಿಲ್ಲ. ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ಇದು ಪ್ರಸಿದ್ಧವಾಗಿ ೧೨ ವರ್ಷಗಳು ಆಗುತ್ತ ಬಂದವು ಈವತ್ತಿನವರಿಗೆ ಎರಡು ಲಕ್ಷಗಳವರಿಗೆ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತರ ಬೇಡುವ ಪತ್ರಗಳು ವ್ಹಿ. ಪಿ. ಮಾಡಿದ ದಾಖಲೆಗಳು ಪೋಷ್ಟ ಪಾವತಿಗಳು ಬಾರನಿಸಿ ಬುಕ್ಕುಗಳು ಇರುತ್ತವೆ. ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಸಟೆಯೆಂದು ಸಿದ್ಧ ಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳು ಇನಾಮು ಕೊಡಲ್ಪಡುವವು. ಈ ಔಷಧವು ಅಮೃತಸರಿಯುಳ್ಳದ್ದು ಇರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು ಎಂಥಾ ಭಯಂಕರ ರೋಗವು ಇದ್ದರೂ ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರಟಿಫಿಕೇಟುಗಳು ನಮ್ಮ ಹತ್ತರ ಹಾಜರ ಇರುತ್ತವೆ. ಇವನ್ನು ಬರೆಯಲಿಕ್ಕೆ ಕಾಗದವು ಸಾಲದು. ಕಾರಣ ಒಂದುಸಾರೆ ತಕ್ಕೊಂಡು ಅನುಭವ ನೋಡಿರಿ. ರೋಗದ ನಾವುಗಳು:— ಕ್ಷಯರೋಗ, ಖಾನಾಂತರೋಗ, ಹತ್ತೆದನಂಜು ದಮ್ಮು, ಕೆಮ್ಮು, ಅಡಗ್ಗೆ, ಕಾಲರಾ (ಮಾರಿಕಾ), ಪ್ಲೇಗ, ಇನ್‌ಪ್ಲುಯಂಜಾಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮಲರೋಗ, ಗಂಡಮಾಲೆ, ನಾರಹುಣ್ಣು, ಶಸ್ತ್ರಗಾಯ, ಕಿವಿಶೂಲಿ ಮೂಗಿನೊಳಗಿನ ಪಿನಸಿ, ಮೊದಲಾದವುಗಳು. ಕಣ್ಣುನೋವು ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ ಹೊಟ್ಟೆಶೂಲಿ, ಸಣ್ಣ ಕೂಸುಗಳಿಗೆ ಆದ ರೋಗಗಳು ಬಾಲಗ್ರಹ, ಅರಿವಿ ಮುಟ್ಟದೋಷ ಹೊಟ್ಟೆ ದೊಡ್ಡದಾಗೋಣ, ಕೋಡಿಗೆಮ್ಮು, ಮೈ ಹೊರಬೀಳೋಣ, ಮತ್ತು ಡಾಕ್ಟರಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನಿಂದ ಖಾತ್ರಿಯಿಂದ ಗುಣಬರವದು. ಚೇಳು ವ ಸರ್ಪದಂಶಕ್ಕೆ ತತಕ್ಷಣ ಗುಣಬರುವದು. ೧ ಕಾಲುತೊಲಿ ಬಾಟ್ಲಿ ಒಂದಕ್ಕೆ ೨ ರೂಪಾಯಿ ನಮೂನೆ ಉಸ್ತಿತ ೫ ಆಣೆ ತೂಕದ ಬಾಟ್ಲಿ ಒಂದಕ್ಕೆ ೮ ಆ ಖರ್ಚ ಬೇರೆ. ೮ ಆಣೆಯ ಒಂದೇ ಬಾಟ್ಲಿ ಕಳಿಸಲಾಗದು. ೨ ರೂಪಾಯಿ ಆರ್ಡರ ಬಂದರೆ ಕಳಿಸಲಾದೀತು ಅದರ ಖರ್ಚ ೭ ಆಣೆ ಚಿಕ್ಕ ಬಾಟ್ಲಿ ಒಂದು ಡಜನ ತಕ್ಕೊಳ್ಳುವವರಿಗೆ ನಾಲ್ಕುಬಾಟ್ಲಿಗಳು ಕಮಿಶನ್ ಸಿಗುತ್ತವೆ. ಖರ್ಚ ೯ ಆಣೆ. ಡಜನದ ಒಳಗಾಗಿ ಹನ್ನೊಂದು ಬಾಟ್ಲಿ ತಕೊಂಡರೆ ಕಮಿಶನ್ ಇಲ್ಲ. ಪೋಷ್ಟ ೭ ಆಣೆ. ೧ ಕಾಲುತೊಲಿ ಬಾಟ್ಲಿ ಒಂದೇಸಾರೆ ಮೂರು ತಕ್ಕೊಳ್ಳುವವರಿಗೆ ಒಂದು ಬಾಟ್ಲಿ ಕಮಿಶನ್ ಸಿಗುತ್ತದೆ. ಖರ್ಚ ೯ ಆಣೆ. ಒಂದು ಎರಡು ತಕ್ಕೊಂಡರೆ ಕಮಿಶನಿಲ್ಲ ಖ ೭ ಆ. ಪ್ರಮಾಣ ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ಛಾಪಿಸಿರುತ್ತವೆ. ಪಸಂದಿಪ್ರಕಾರ ಬಾಟ್ಲಿ ಗೂಡಿಗೆ ಬರುವದು ಈ ಔಷಧವು ಖೋಟಿ ಹೊರಟರೆ ಶಿಲ್ಲಕ ಉಳಿದ ಮಾಲ ಪರತ ತಕ್ಕೊಂಡು ಅದರ ಬೆಲೆ ವಾಪಸ ಕೊಡುವೆವು. ಈ ಅರ್ಕಶಫಾ ಇಡೀ ಕರ್ನಾಟಕದಲ್ಲೆಲ್ಲಾ ಹೋಗುತ್ತದೆ. ಇದರ ಬಗ್ಗೆ ನಮಗೆ ಬಹಳ ಶಿಫಾರಸ ಮಾಡಬೇಕಾಗಿಲ್ಲ. ತಮ್ಮ ವಿಳಾಸ ಕನ್ನಡದಲ್ಲಿ ಅಥವಾ ಇಂಗ್ಲೀಷದಲ್ಲಿ ಪೋಸ್ಟ ಜಿಲ್ಲಾ ವಗೈರೆ ಸ್ಪಷ್ಟವಾಗಿ ಬರೆಯಿರಿ ನಮ್ಮ ವಿಳಾಸ:— **ಎಚ್. ಎಮ್. ಮುಲ್ಲಾ.**

ಕಂಪಾನಿಯ ಅರ್ಕ ಶಫಾ ಹೆಡ್ ಆಫಿಸ ಪೋಷ್ಟ ಶಹಾಪೂರ (ಬೆಳಗಾಂವ)

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ.
ನಿಮ್ಮ ಸಲುವಾಗಿಯೇ ಕನ್ನಡ ಮುಖಾಂತರ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಎಲ್ಲ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಚ್ಚುವದು ಮತ್ತು ಜೋಡಿಸುವದು, ಅವುಗಳೊಳಗಿನ ಕೆಟ್ಟುಹೋದ ಮುರಿದ-ಹರಿದ ಭಾಗಗಳ ದುರಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಮ್ಮ ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಪಾಸಾಗುತ್ತಾರೆ. ಇಲ್ಲಿ ... ಆದಕಾರಣ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ತಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಹೊಗಿಸುವಂತಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಬೇರೆ ಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೇ ಬರೆದು ಕೊಳ್ಳಿರಿ!

ವಿಳಾಸಃ—ಕುಲಕರ್ಣಿ ಮೋಟಾರ ಸ್ಕೂಲ.
ಶನಿವಾರ ಪೇಠ ... ಪುಣೆ ಶಹರ.

ಪುಕ್ಕಟೆ! ಪುಕ್ಕಟೆ!! ಪುಕ್ಕಟೆ!!!

ಕಂತುಗಳನ್ನು ಎಂದೂ ಕೊಡಬೇಡಿ!

ನೀವು ವಿಮೆ ಇಳಿಸಬೇಕಾಗಿದ್ದರೆ ನಾವು ನಿಮ್ಮ ಕಡೆಯಿಂದ ಹಣವನ್ನು ತೆಗೆದುಕೊಳ್ಳದೆ ಕೇವಲ ಪುಕ್ಕಟೆಯಾಗಿ ನಿಮ್ಮ ಜೀವದ ವಿಮೆ ಇಳಿಸುವೆವು.

ವಿಶೇಷ ಸಂಗತಿಗಳಿಗಾಗಿ ೨ ಆಣೆಗಳ ಟಿಕೀಟು ಕಳಿಸಿರಿ.

ಇನ್‌ಸ್ಪೆಕ್ಟರ ಆಫ್ ಎಜೆನ್ಸಿ
ದಿ ಬೇನಸ್ ಅಶ್ಯುರನ್ಸ ಬ್ಯಾಂಕ ಲಿಮಿಟೆಡ್
ಧಾರವಾಡ ಬ್ರ್ಯಾಂಚ ಧಾರವಾಡ.

ಡಾಕ್ಟರ ಬಸಪ್ಪ ಸಂಗಪ್ಪ ಪಾಟೀಲ.
ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲಿನ ಕೆಲಸವನ್ನು ಚನ್ನಾಗಿ ಕಲಿತಿರುವೆವು ಹಲ್ಲುಗಳ ನೋವುಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರ ನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಗಳಾಡುವ ಹಲ್ಲುಗಳನ್ನು ಮನಃಪೂರ್ವಕ ದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸ ಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಆಗುವಂತೆ ಮಾಡುವೆವು ಹಲ್ಲುಗಳ ಪೂರ್ಣ ಸೆಟ್ಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

S. U. Narayanacharya & Co.
Chaukhamba Benares City


S.U.N.&CO.
BENARES CITY.

ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪೀತಾಂಬರ ಜರಿಕಣ, ಜರಿಸೀರೆ, ಕಾಶ್ಮೀರ ಶಾಲು, ತರವಾರಿ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲೆಗಳ ಕ್ಯಾಟಲಾಗ ಕೋರುವವರಿಗೆ ಇನಾಮಾಗಿ ಕಳಿಸಲಾದೀತು
ವಿಳಾಸ- ಶಿರೋಮಣಿ ನಾರಾಯಣಾಚಾರ್ಯ ಕಂಪನಿ ಚೌಕಾಂಬಾ

ಈ ಪತ್ರಿಕೆಯು ಮಂಗಳವೇಢೆ ರಾಘವೇಂದ್ರರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ವಾಙ್ಮಯ ಪರಿಚಯ.

ದೈಘಾತ:— ಲೇಖಕರು ಸಂ. ಕ. ಎಡವಣ್ಣಾನವರು ಬೆಲೆ ೦-೪-೦ ಇದೊಂದು ಜ್ಯೋತಿಷ್ಯದ ಚಿಕ್ಕ ಗ್ರಂಥವು. ವರ್ಷ ಫಲ, ಮಾಸ ಫಲ, ಮಳೆ ಬೆಳೆ, ಸುಖ ದುಃಖ ಮೊದಲಾದವುಗಳನ್ನು ಗ್ರಹಗಳ ಸ್ಥಿತಿಗತಿಗಳ ಅವಲೋಕನದಿಂದ ಸ್ವಂತವಾಗಿ ತಿಳಿದುಕೊಳ್ಳಲಸುವಾಗುವಂತೆ ಬರೆದಿರುವರು. ಅನುಭವ ಶಿಖಾಮಣಿಯಾದ ಸರ್ವಜ್ಞ ಕವಿಯು ಜ್ಯೋತಿಷ್ಯ ಮೊದಲಾದವುಗಳ ವಿಷಯಕ್ಕಿರುವ ಸೂತ್ರ ಪ್ರಾಯವಾದ ವಚನಗಳನ್ನು ಜೋಡಿಸಿರುವದರಿಂದ ಹೆಚ್ಚು ಉಪಯುಕ್ತವಾಗುವಂತಿವೆ. 'ಕನ್ನಡಿಗ'ನ ಮನೆಯಲ್ಲಿಯೇ ಹುಟ್ಟಿರುವ ಇವೆಲ್ಲ ಮುದ್ರಣ ದೋಷಗಳು ತೀರ ಕಡಿಮೆಯಾಗಿವೆ.

ಇಸ್ಲಾಮಿ ಗೋರಕ್ಷಣ:— ದಾವಣಗೆರೆಯ ಪ್ರಾಣಿದಯಾ ಜ್ಞಾನ ಪ್ರಸಾರಕ ಸಂಘದಿಂದ ದೊರೆತ ಉಚಿತ ಪುಸ್ತಕವು. ಗೋರಕ್ಷಣೆ- ಅಹಿಂಸೆ-ಗಳೇ ಧ್ಯೇಯವಾಗಿಟ್ಟುಕೊಂಡು ಈ ಸಂಸ್ಥೆಯು ಮಾಡುವ ನಿಃಸ್ವಾರ್ಥ ಸೇವೆಯು ಸರ್ವರಿಗೂ ಗೊತ್ತಿದ್ದ ಮಾತೇ ಆಗಿರುವದು. ವಿಶೇಷ ಸಂಗತಿಯೆಂದರೆ ಈ ಸಂಸ್ಥೆಯು ಎಲ್ಲ ಕೆಲಸಗಳೂ ಅಚ್ಚುಕಟ್ಟಾಗಿಯೂ ಸುಸಂಘಟಿತವಾಗಿಯೂ ಸಾಗಿರುವವು. ಪ್ರತಿ ವರುಷ ಹೊರಡಿಸುವ ಚಿಕ್ಕ ಪುಸ್ತಕಗಳಿಂದ- ಅಹಿಂಸೆ –ಗೋರಕ್ಷಣೆಯ ಮೇಲೆ ಇವರೊಂದು ಕನ್ನಡದಲ್ಲಿ ವಾಙ್ಮಯವನ್ನೇ ನಿರ್ಮಾಣಮಾಡಿರುವರು. ದೊಡ್ಡ ನದಿಗಳ ಉಗಮವು ಅಜ್ಞಾತವಾದ ಸಣ್ಣ ಝರಿಯಲ್ಲಿರುವಂತೆ ದೊಡ್ಡ ಕಲಹಗಳಿಗಾದರೂ ತಪ್ಪು ತಿಳುವಳಿಕೆಯೇ ಬಹುಶಃ ಕಾರಣವಾಗಿರುತ್ತವೆ. ಸಧ್ಯಕ್ಕೆ ಸಂಭವಿಸುತ್ತಿರುವ ಹಿಂದೂ-ಮುಸಲ್ಮಾನ ದೊಂಬಿಗಳಿಗೆ ಗೋವಧದ ಬಗ್ಗೆ ಇರುವ ತಪ್ಪುತಿಳುವಳಿಕೆಯೇ ಬಹ್ವಂಶದಿಂದ ಕಾರಣವಾಗಿರುವದು. ಮೇಲಿನ ಪುಸ್ತಕವು ಸೀತಾಪೂರದ (ಯಾ. ಪಿ.) ವಕೀಲರಾದ ಸೈಯ್ಯದ್ ನಜೀರ ಅಹಮ್ಮದ್ ಸಾಹೇಬರವರು ಉರ್ದು ಭಾಷೆಯಲ್ಲಿ ಬರೆದ -ಇಸ್ಲಾಮಿ ಗೋರಕ್ಷಾಯೆಂಬ ಪುಸ್ತಕದ ಭಾಷಾಂತರವು. ಇದರಲ್ಲಿ ಖುರಾನದ ಅಮೂಲ್ಯವಾದ ಆಧಾರಗಳಿಂದಲೂ, ಮಹಮ್ಮದ ಪೈಗಂಬರರ ವಚನಗಳಿಂದಲೂ ಗೋರಕ್ಷಣೆಯೇ ಮುಸಲ್ಮಾನರ ಕರ್ತವ್ಯವೆಂದು ಸಾಧಾರವಾಗಿ ಸಾರಿ ಹೇಳಿರುವರು. ಇದರಿಂದ ನಮ್ಮ ಮುಸಲ್ಮಾನ ಬಂಧುಗಳು ಧರ್ಮದ ನೆವದಿಂದ ಮಾಡುವ ಗೋವಧೆಯನ್ನು ನಿಲ್ಲಿಸಿ, ಹಿಂದೂಗಳೊಡನೆ ಗೋರಕ್ಷಣೆಯಲ್ಲಿ ಸಹಕಾರಿಗಳಾಗಬೇಕೆಂದು ಬಿನ್ನಹ. ಗೋರಕ್ಷಣದಲ್ಲಿ ಟೊಂಕಕಟ್ಟಿ ಕೆಲಸಮಾಡುತ್ತಿರುವ ಮೇಲಿನ ಗೃಹಸ್ಥರಿಗೆ ಉದಾರ ಬುದ್ಧಿಯ ಕನ್ನಡಿಗರು ಧನ ಸಹಾಯಮಾಡಿ ಪ್ರೋತ್ಸಾಹಕರಾಗಬೇಕೆಂದು ಪ್ರಾಣಿದಯಾ ಸಂಘದ ವಿಜ್ಞಾಪನೆಯು.

ಶ್ಯಾಮ

ನೋಟೀಸು.

ಪರಸಪ್ಪಾ ತಂದಿ ಮಲ್ಲಪ್ಪಾ ಒಳಕೋಟಿ ಸಾ॥ ನರೆಗಲ್ಲ ತಾಲೂಕ ರೋಣ ಜಿಲ್ಲಾ ಧಾರವಾಡ ಇವರಿಗೇ —

ದ್ಯಾಮವ್ವಾ ಉರ್ಫ ಬಸವ್ವಾ ಗಂಡಾ ಪರಸಪ್ಪಾ ಒಳಕೋಟಿ ಹಾಲಿ ವಸ್ತಿ ಗುಳೇದಗುಡ್ಡ ತಾಲೂಕ ಬದಾಮಿ ಜಿಲ್ಲಾ ವಿಜಾಪೂರ ಇವಳಿಂದ ನೋಟಿಸು ಕೊಡುವದೇನಂದರೆ ಬರುತ್ತದಲ್ಲಾ ನೀನು ನನ್ನ ಮದುವೆಯ ಗಂಡನಿದ್ದು ಈಗ ಅಜಮಾಸು ೫ ವರ್ಷದ ಕೆಳಗೆ ನನ್ನ ನಿಷ್ಕಾರಣವಾಗಿ ಮುಂದಿ ಮಾತು ಕೇಳಿ ಹೊಡೆದು ಹೊರಗೆಹಾಕಿದಿ. ಆ ವ್ಯಾಳ್ಯಕ್ಕೆ ನಾನು ಹೊಟ್ಟಿಲೆ ಇದ್ದೆ. ಮುಂದೆ ಬಾಣಂತಿತನಾ ಮತ್ತು ಈ ವರೆಗೂ ನಾನು ಹೊಟ್ಟಿಯ ಸಲುವಾಗಿ ಎಸಿಕೆ ರಕಮು ಅಂದರೆ ೩೦೦ (ರೂಪಾಯಿ) ಸಾಲಾಮಾಡಿದ್ದೇನೆ.

ಈಗ ನೀನು ಬೇರೆ ಹೆಣ್ಣೊಬ್ಬಳ ಸಂಗಡಾ ಮದುವೆಯಾಗುತ್ತಿ ಅಂತಾ ಕೇಳಿದ್ದೇನೆ. ಕಾರಣಾ ಮದುವೆಯಾಗಲಿಕ್ಕೆ ನನ್ನ ಅಡ್ಡಿ ಇಲ್ಲ ಆದರೆ ಈ ವರೆಗೆ ನಾನು ಮಾಡಿದ ಸಾಲಾ ತೀರಿಸಲಿಕ್ಕೆ ನೀನು ಬಾಧ್ಯನಿದ್ದಮೂಲಕಾ ಸದರೀ ಸಾಲಾ ತೀರಿಸಿ ನನ್ನನ್ನು ನಿನ್ನ ಮನೆಗೆ ಕರಕೊಂಡು ಹೋಗಿ ಸುರಕ್ಷಿತ ಸಂಸಾರ ಮಾಡಬೇಕು. ಇಲ್ಲದೆ ನನಗೆ ವರ್ಷಕ್ಕೆ ಇಂತಿಷ್ಟು ರಕಮಿನಂತೆ ಪೋಟಗಿ ಕೊಡುತ್ತಾ ಹೋಗಬೇಕು. ಜರ ಈ ನೋಟಿಸು ಮುಟ್ಟಿದ ೧೫ ದಿವಸಗಳೊಳಗಾಗಿ ಮೇಲಿನಂತೆ ಮಾಡದಿದ್ದರೆ ಕೋರ್ಟಿನಿಂದ ನಿನ್ನ ಮೇಲೆ ದಾವೇ ತಂದು ಪೋಟಗಿ ತಕ್ಕೊಂಬುವದರಲ್ಲಿ ಒಂದೀತು. ನಾನು ಉಡಿಕೆ ವಗ್ಯೆರೆ ಆಗಲಿಕ್ಕೆ ಕಬೂಲು ಇರೋದಿಲ್ಲಾ. ನೋಟಿಸಿನ ಉತ್ತರಾ ೧೫ ದಿವಸಗಳೊಳಗಾಗಿ ಕೊಡಬೇಕು. ಮತ್ತು ಈ ನೋಟಿಸಿನ ಖರ್ಚ ನಿನ್ನ ತಲೆಯಮೇಲೆ ಇದೆ ಅಂತಾ ಬರೆದುಕೊಟ್ಟ ನೋಟೀಸಿನ ತಾ॥ ೮-೧-೧೯೩೭.

() ಈ ಎಡಗೈ ಹೆಬ್ಬೆರಳಿನ ಗುರ್ತಾ ದ್ಯಾಮವ್ವಾ ಉರ್ಫ ಬಸವ್ವಾ ಗಂಡಾ ಪರಸಪ್ಪಾ ಇವಳು ಮಾಡಿದ್ದು ಅದೆ.

ದ॥ ರಾಗೋ ರಾಘವೇಂದ್ರ ಕೊಪಗಲಿ ಸಾಕೀನ ಗುಳೇದಗುಡ್ಡ

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮ ಮೋಕ್ಷಾದಿಗಳನ್ನು ಕೊಡುವ

ಕ್ರಯವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ. ಬಾಗಲಕೋಟೆಯಲ್ಲಿ ನಮ್ಮ ಆಯುರ್ವೇದ ಔಷಧಿಗಳನ್ನು ಮಾರುವದಕ್ಕೆ ಏಜೆಂಟರು ಬೇಕಾಗಿದೆ. ಪುಷ್ಕಳ ಕಮೀಶನ್ ದೊರೆಯುವದು.

ರಾಜವೈದ್ಯ ನಾರಾಯಣಜಿ ಕೇಶವಜಿ,

೫೬, ಬೀನಾಬಜಾರ್, ಮದ್ರಾಸು

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆ ಮಾಡಿರಿ ! ತ್ವರೆ ಮಾಡಿರಿ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯ್ವಿಂಗದ ಪೂರ್ಣಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಶ ಹಿಂದುಸ್ತಾನದ ಸರಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ. ವಿಶೇಷ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರ.

ಪತ್ತಾ:—ದಿ ಪಾಪ್ಯುಲರ ಮೋಟಾರ ಡ್ರಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೦ ಬುಧವಾರ ಪೇಠ ಜುನಿ ತಪಕೀರಗಲ್ಲಿ, ಪುಣೆ ಸಿಟಿ.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಣೀ, ಜೀರ್ಣಜ್ವರ, ಅಗ್ನಿಮಾಂದ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶ ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು.) ಇದರಿಂದ ಮ್ಯೆಯ್ಯುರಿ ವ ಗರಮಿಯ ಎಲ್ಲಾ ತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೇ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೨-೦, ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯು ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸಃ—

ಎಸ್. ಬಿ ಕದಮ್ ಮತ್ತು ಸನ್ಸ್.

ಮು. ಪೋಷ್ಟ ನಿಪ್ಪಾಣಿ (ಜಿ. ಬೆಳಗಾಂವ.)

೧,೪೨,೦೦,೦೦೦

ರೂಪಾಯಿಗಳು!

ಪರದೇಶಗಳಿಂದ ತರಿಸಲ್ಪಟ್ಟ ಸಾಬೂನುಗಳಿಗೋಸ್ಕರ ಪ್ರತಿವರುಷವೂ ಒಂದುಕೋಟಿ ನಾಲ್ವತ್ತೆರಡು ಲಕ್ಷರೂಪಾಯಿಗಳನ್ನು ನಮ್ಮ ದೇಶದಿಂದ ಪರದೇಶಕ್ಕೆ ತೆರುತ್ತಿದ್ದೇವೆ. ಮಹಾಜನಗಳೆಲ್ಲರೂ ಒಕ್ಕಟ್ಟಾಗಿ ಸಂಕಲ್ಪಮಾಡಿದರೆ ತಾನೇ ಈ ಹಣವನ್ನೂ ನಮ್ಮ ದೇಶದಲ್ಲಿ ಉಳಿಸಿಕೊಳ್ಳಬಹುದು. ಸ್ವದೇಶದ ಸಾಬೂನನ್ನು ಬಿಟ್ಟು ಪರದೇಶದ ಸಾಬೂನನ್ನು ಕೊಳ್ಳುವ ಪ್ರತಿಯೊಬ್ಬ ವಿದ್ಯಾವಂತನೂ ಅನ್ಯ ದೇಶದ ಕೈಗಾರಿಕೆಗಳಿಗೆ ಉಪಕಾರಮಾಡಿ, ಸ್ವದೇಶದ ಕೈಗಾರಿಕೆಗಳಿಗೆ ಅಪಕಾರಮಾಡುತ್ತಾನೆ. ಪ್ರತಿಯೊಬ್ಬ ದೇಶಬಾಂಧವನೂ ಸ್ವದೇಶೀ ಮಾಲುಗಳನ್ನೇ ಕೊಳ್ಳುವನು. ಮೈಸೂರು ಗೌರ್ನಮೆಂಟ ಸೋಪ್ ಫ್ಯಾಕ್ಟರಿಯಲ್ಲಿ ಸರ್ವಗ್ರಾಹ್ಯವಾದ ಉತ್ತಮವಾದ ಸಾಬೂನುಗಳನ್ನು ತಯಾರುಮಾಡುತ್ತಾರೆ. ನಾವು ತಯಾರುಮಾಡುವ ಶ್ರೀಗಂಧ ಪರಿಮಳವುಳ್ಳ ಸಾಬೂನೊಂದನ್ನು ಕೊಂಡು ತಾವೇ ಪರೀಕ್ಷೆಮಾಡಿನೋಡಿರಿ. ತಮಗೆ ನಮ್ಮ ಸಾಬೂನುಗಳು ಸಿಗಲಸಾಧ್ಯವಾದಲ್ಲಿ ದಯವಿಟ್ಟು ನಮಗೆ ಪತ್ರವೊಂದನ್ನು ಬರೆದರೆ, ತಾವು ಇಚ್ಛೆಪಡುವ ಅಂಗಡಿಯಲ್ಲಿಯೇ ನಮ್ಮ ಮಾಲುಗಳ ತಮಗೆ ದೊರೆಯುವಂತೆ ಏರ್ಪಡಿಸಿಕೊಡುತ್ತೇವೆ.

ಗೌರ್ನಮೆಂಟ ಸೋಪ್ ಫ್ಯಾಕ್ಟರಿ

ಬೆಂಗಳೂರು.

ರ ನಂ. ೬೨ ೧೯೪೭ ವಾ ಚಂದಾ ೧—೧೪—೦ ಮಾತ್ರ

[illegible]

ಸಂಪಾದಕರ — [illegible]

ಪು ೩ | [illegible] | ಸಂಚಿಕೆ ೬೧

ಸಂಪಾದಕರ ಬರಹ

(೬೦)

ನನ್ನ ಮನಸಿನ [illegible]

[illegible]

[illegible]

[illegible]

ಕನ್ನಡ [illegible]

[illegible]

—[illegible]

ವಿಜಾಪುರದಲ್ಲಿರುವ ಅನಾಥ [illegible] ಸಾದ [illegible] ಅದರ ಕಾರ್ಯಕರ್ತರು ಶ್ರೀ [illegible] ಸಮ್ಮತಿಗೆ ಕಳುಹಿಸಿದ್ದಾರೆ. ' ಹಸಿದವರಿಗೆ ಅನ್ನ [illegible], ವಸ್ತ್ರಹೀನರಿಗೆ ವಸ್ತ್ರಗಳನ್ನು ಕೊಡಬೇಕು ಮನೆಯಿಲ್ಲದವರಿಗೆ ಆಶ್ರಯ ಕೊಡಬೇಕು " ಎಂಬ ತತ್ವಗಳು ಎಲ್ಲ ಧರ್ಮಕ್ಕೂ ಸಮ್ಮತವಾದವುಗಳು. ಹಿಂದುಸ್ಥಾನದಲ್ಲಿ ಧಾರ್ಮಿಕ ಕೃತಿಗಳು [illegible] ನಡೆಯುತ್ತ ಬಂದೇ ಇವೆ [illegible] ನಡೆಯಬೇಕೆಂಬ ಆಶೆ. ಯಾಕೆಂದರೆ ನಮ್ಮವರ ಸಂಸ್ಕೃತಿಯೇ ಹೀಗೆ. ಧರ್ಮಶಾಲೆ, ಗುಡಿ, ಗುಂದಾರ, ಅನ್ನಛತ್ರ, ಕೆರೆಭಾವಿ, ಮೊದಲಾದವುಗಳು ಬಡಬಗ್ಗರ ಸಲುವಾಗಿಯೇ ಅಲ್ಲವೇ ? ' ಇಷ್ಟಾಪೂರ್ತ ' ಕರ್ಮಗಳು ಸ್ವರ್ಗಸಾಧನಗಳೆಂದು ಹಿಂದೂಧರ್ಮದಲ್ಲಿ ಹೇಳಿಯಿದೆ ಆದುದರಿಂದ ಇಂತಹ ಕೃತಿಗಳ ವಿಷಯದಲ್ಲಿ ಹೊಗಳು ಹೇಳಿಕೊಳ್ಳುವ ಕಾರಣವಿರುತ್ತಿದ್ದಿಲ್ಲ. ಈಗಿನ ಪರಿಸ್ಥಿತಿಯೇ ಭಿನ್ನವಾಗಿದೆ. ಮೊದಲಿನ ಧ್ಯೇಯಗಳೆಲ್ಲ ಕಣ್ಮರೆಯಾಗಹತ್ತಿವೆ. ಏನೋ ಒಳ್ಳೇ ಧ್ಯೇಯದ ಒಂದು ಯೋಜನಾದರೊಬ್ಬನಿಗೆ ಹೊಳೆಯಿತೆಂದರೆ, ಅವನು ಅನಾಥಾಲಯ, ಸೇವಾಸದನ ಮೊದಲಾದವುಗಳನ್ನು ಸ್ಥಾಪನ ಮಾಡುತ್ತಾನೆ. ಮೊದಲು ಯಾವ ಧರ್ಮದ ಕೆಲಸಕ್ಕೆ ಎರಡನೇಯವರ ಒತ್ತಾಯವು ಕಾರಣವಾಗುತ್ತಿದ್ದಿಲ್ಲವೋ ಅದಕ್ಕೆ ಈಗ ಒತ್ತಾಯವು ಆವಶ್ಯಕವಾಗಿದೆ. ಎರಬಡುತ್ತ ಒತ್ತಾಯಮಾಡಿದರೂ ಧರ್ಮದ ಕೆಲಸಗಳು ಸಾಗಲಾರವೆಂಬಂತೆ ತೋರುತ್ತದೆ. ಇಂತಹ ಬಿಕ್ಕಟ್ಟಿನಲ್ಲಿ ಸಾರ್ವಜನಿಕ ಸಂಸ್ಥೆಗಳನ್ನು ನಡೆಯಿಸುವದು ಎಷ್ಟು ಕಷ್ಟಕರವಾದುದು ? ಆದರೂ ಒಂದಿಲ್ಲೊಂದು ರೂಪದಲ್ಲಿ ಜನತೆಯು ಸೇವೆಯನ್ನು ಮಾಡುವುದು ಇಷ್ಟವೇ? ಮೊದಲಿನ ನಿಸ್ಪೃಹವೃತ್ತಿ, ಸ್ತುತಿಯ ಆಶೆಯಿಲ್ಲದೆ ದಾನಧರ್ಮಮಾಡುವ ಹವಣಿಕೆ. [illegible] ತತ್ವದವರಿಗೆ [illegible] ಸಂಪಾದಕರನಾ[illegible] ಈಗ [illegible] ದಾಗಿದ್ದಾರೆ. ಅವರ ವಿದ್ಯಾಭ್ಯಾಸಕ್ಕೆ [illegible] ನಡೆಸುವದರಿಂದ ತಿಳಿಯುತ್ತದೆ. ಅದ[illegible] ಸಹ [illegible] ದಲ್ಲೂ [illegible] ತಿಳಿಯುತ್ತದೆ. [illegible] ಧವನ್ನು [illegible] ದ ಹುಡುಗರಿಗೆ [illegible], ವಿದ್ಯಾಭ್ಯಾಸ ಮಾಡಿಸಿ, ಹಾಗೆ ಹುಡುಗರ ಸಂಸ್ಥೆಯು [illegible] ಸರ್ಕಾರದ [illegible] ಹಿತದ ದೃಷ್ಟಿಯಿಂದ ಇದು ಶ್ಲಾಘನೀಯ [illegible] ಗರನ್ನು [illegible], ವಸ್ತ್ರಪ್ರಸ್ತುತಿ [illegible] ವ ಸಂಚಾರ [illegible] ಸರ್ಕಾರಕ್ಕೆ [illegible] ವರು. ಈ ಸಂಸ್ಥೆಯು [illegible] ಯನ್ನು ಅವಲಂಬಿಸಿರುತ್ತದೆ [illegible] ಲೋಕಲ್ ಬೋರ್ಡಿನವರೂ ತಾವು ಕೊಡುತ್ತಲಿದ್ದ ಧನಸಹಾಯವನ್ನು [illegible] ಬಿಟ್ಟಿದ್ದಾರೆ. ಹೀಗಾಗಿ ಸಂಸ್ಥೆಗೆ [illegible] ಬಂದಿದೆ. ಆದರೆ ಈಗ ಸಂಸ್ಥೆಗೆ ಅಧ್ಯಕ್ಷರಾಗಿರುವ ಶ್ರೀ [illegible] ಕಲೆಕ್ಟರರು ಸರಕಾರಕ್ಕೆ ಸಹಾಯಧನದ ಸಲುವಾಗಿ ಬರೆಯುವೆವೆಂದು ಆಶ್ವಾಸನಕೊಟ್ಟಿದ್ದಾರೆ. ಇದರ ಹಿತವು ಅನಂತರ ಯೋಗ್ಯರನ್ನೇ ಕೂಡಿಯಿದೆ. ಈ ಸಂಸ್ಥೆಯು ಭರಭರಾಟೆಯಾಗುವದೆಂದು ನಾವೆಲ್ಲರೂ ಆಶಿಸೋಣ.

ಕರ್ನಾಟಕ ವಿಶ್ವವಿದ್ಯಾಲಯದವರು ವಿಶ್ವವಿದ್ಯಾಲಯವು ತೀವ್ರವಾಗಿ ಸ್ಥಾಪಿತವಾಗಬೇಕೆಂದು ಹಾತೊರೆಯುತ್ತಿರುವುದು ಸ್ವಾಭಾವಿಕ ಅವರು ಅದರ ಪೂರ್ವಸಿದ್ಧತೆಗಾಗಿ ಕೆಲವು ಸಂಗತಿಗಳ ಬಗ್ಗೆ ಕರ್ನಾಟಕದಲ್ಲಿಯ ಎಲ್ಲ ಹೈಸ್ಕೂಲಗಳಿಗೂ ಬರೆದುಕೊಂಡಿದ್ದರು ಅವರಿಗೆ ಬೇಕಾದ ಸಂಗತಿಗಳನ್ನು ಬಿನ್‌ಸರಕಾರೀ ಹೈಸ್ಕೂಲಗಳೆಲ್ಲ ಕಳುಹಿಸಿಕೊಟ್ಟಿರುತ್ತವೆ. ಸರಕಾರೀ ಹೈಸ್ಕೂಲುಗಳ ಹೆಡ್‌ಮಾಸ್ತರರು ಮಾತ್ರ ಎಜ್ಯುಕೇಶನಲ್ ಇನ್ಸ್‌ಪೆಕ್ಟರರ ಅಪ್ಪಣೆಯಾದರೆ ಮಾಹಿತಿಯನ್ನು ಕೊಡುವೆವೆಂದು ಉತ್ತರಕೊಟ್ಟರು. ಆ ಪ್ರಶ್ನವು ಮೇಲಧಿಕಾರಿಗಳ ಕಡೆಗೆ ಹೋಗಿ, ಕೊನೆಗೆ ಸರಕಾರೀ ಶಾಲೆಗಳ ಹೆಡ್‌ಮಾಸ್ತರರಿಗೆ ಮಾಹಿತಿಯನ್ನು ಕೊಡಲು ಏನೂ ಅಡ್ಡಿಯಿಲ್ಲವೆಂದು ಬರೆದು ಬಂದಿದೆ. ಸ್ವಲ್ಪರಲ್ಲಿ ಆಯಾ ಹೈಸ್ಕೂಲಗಳವರೂ ಮಾಹಿತಿಯನ್ನು ಕಳುಹಿಸಬಹುದು. ಆದ್ದರಿಂದ ಮಂಡಲದವರು ತಮ್ಮ ಚಟುವಟಿಕೆಯನ್ನು ಭರದಿಂದ ಸಾಗಿಸಬೇಕು. ಎದ್ದರೆ ವಿಶ್ವವಿದ್ಯಾಲಯ ಕುಳಿತರೆ ವಿಶ್ವವಿದ್ಯಾಲಯ ಎಂದು ನೆನೆದು ಕಾರ್ಯಮಾಡಬೇಕು. ಅವಿಶ್ರಾಂತವಾದ ಚಟುವಟಿಕೆಯಲ್ಲಿಯೇ ಕಾರ್ಯಸಿದ್ಧಿಯ ಬೀಜವಿರುವುದು.

ಕರ್ನಾಟಕದಲ್ಲಿ ಎಷ್ಟೋ ಬಿನ್ ಸರಕಾರೀ ಹೈಸ್ಕೂಲುಗಳಿವೆ. ಇವುಗಳ ಆಡಳಿತೆಯು ಎಷ್ಟು ಸುಖಕರವಿರಬೇಕು ಅಷ್ಟು ಇರುವದಿಲ್ಲ. ಶಿಕ್ಷಕರಿಗೂ ಸಂಸ್ಥೆಯ ಚಾಲಕರಿಗೂ ಇರಬೇಕಾದಷ್ಟು ಸೌಖ್ಯವು ಇರುವದಿಲ್ಲ. ಶಿಕ್ಷಕರೆಂದರೆ ಕೈಕೆಳಗಿನ ಗುಲಾಮರೆಂದು ಚಾಲಕರ ಭಾವನೆ. ಶಿಕ್ಷಕರಿಗೂ ಸಮಾಜದಲ್ಲಿ ಪ್ರತಿಷ್ಠೆಯಿರಬೇಕೆಂದು ಶಿಕ್ಷಕರ ಹೋರಾಟ. ಇದರಿಂದ ಒಬ್ಬರೊಬ್ಬರಲ್ಲಿ ವೈಮನಸ್ಯ. ಒಟ್ಟಿನ ಮೇಲೆ ಶಿಕ್ಷಣದ ಕಾರ್ಯವು ಸತ್ತುಹೋಗುವುದು ನಿಜ. ಸರಕಾರದವರು ಸಹಾಯ ದ್ರವ್ಯವನ್ನು ಕೊಟ್ಟು, ಸುಮ್ಮನೆ ಕುಳಿತುಬಿಡುವರು ಇದು ಸರಿಯಾದ ಮಾರ್ಗವಲ್ಲ. ಶಿಕ್ಷಕರ ನಡುವೆಯೂ, ಚಾಲಕರ ನಡುವೆಯೂ ಪ್ರೇಮದ ಬಳಕೆಯು ಇದೆಯೋ ಇಲ್ಲವೋ ಎಂಬುವದನ್ನು ನೋಡುವುದು ಅವರ ಪವಿತ್ರವಾದ ಕರ್ತವ್ಯ. ಶಿಕ್ಷಕರನ್ನು ಸಿಕ್ಕಸಿಕ್ಕ ಹಾಗೆ ಚಾಲಕರು ತೆಗೆಯುವರು. ನಾಲ್ವತ್ತಾರು ವರ್ಷ ಮನಮುಟ್ಟಿ ಒಂದು ಸಂಸ್ಥೆಗೆ ಅಂಟಿಕೊಂಡುಹೋದ ಶಿಕ್ಷಕರನ್ನು ತೆಗೆಯುವದೆಂದರೆ, ಅಮಾನುಷವಾದ ಕೆಲಸ. ಇದರಿಂದ ಶಿಕ್ಷಣಕ್ಕೆ ಹಾನಿ ತಟ್ಟುವದಲ್ಲದೆ, ಮನುಷ್ಯತೆಯ ಮೂಲ ತತ್ವಕ್ಕೂ ಬಾಧೆ ತಟ್ಟುತ್ತದೆ. ಆದ್ದರಿಂದ ಚಾಲಕರ ನಡುವೆಯೂ, ಶಿಕ್ಷಕರ ನಡುವೆಯೂ ಜಗಳ ಬಂದಲ್ಲಿ, ಒಂದು ಪಂಚ ಮಂಡಲವು ಏರ್ಪಡಬೇಕು. ಅದರಲ್ಲಿ ಊರಲ್ಲಿಯ ಎಲ್ಲ ಜಾತಿಯ ಜನರ ಮುಖಂಡರೂ, ಎಜ್ಯುಕೇಶನಲ್ ಇನ್ಸಪೆಕ್ಟರರೂ, ಯುನಿವ್ಹರ್ಸಿಟಿ ಕಡೆಯಿಂದ ಒಬ್ಬ ಪ್ರತಿನಿಧಿಯೂ ಇರತಕ್ಕದ್ದು. ಯಾಕಂದರೆ ಶಿಕ್ಷಕರ ದೋಷವನ್ನು ವರ್ಣಿಸಲು ಚಾಲಕ ಮಂಡಲಕ್ಕೆ ಬಲು ಸುಲಭ. ಅವರು ನೋಡುವದೆಲ್ಲ ದೋಷದ ದೃಷ್ಟಿಯಿಂದಲೇ. ಮತ್ತು ಶಿಕ್ಷಕರ ದಾರಿದ್ರ್ಯದ ಮೂಲಕವಾಗಿ ಎಷ್ಟೋ ಸಾರೆ ಅವರಿಗೆ ಅನ್ಯಾಯ ಸಹನಮಾಡಿಕೊಂಡು ಸುಮ್ಮನೆ ಕೂಡಬೇಕಾಗುತ್ತದೆ. ಪಗಾರ, ಪ್ರೊವಿಡಂಟ ಫಂಡು, ಇವೇ ಮೊದಲಾದವುಗಳ ಬಗ್ಗೆಯಾದರೂ ಅನೇಕ ತೊಂದರೆಗಳಿರುವವು. ಇವೆಲ್ಲ ತೊಂದರೆಗಳು ನಷ್ಟವಾಗಬೇಕಾದರೆ ಶಿಕ್ಷಣ ಖಾತೆಯ ಡಿರೆಕ್ಟರರೂ, ಎಜ್ಯುಕೇಶನಲ್ ಇನ್ಸಪೆಕ್ಟರರೂ, ಸಮಾಜದಲ್ಲಿಯ ಸುಶಿಕ್ಷಿತರೂ ಎಚ್ಚರಿಕೆಯುಳ್ಳವರಾಗಬೇಕು.

ವಿಜಾಪೂರ ಜಿಲ್ಲೆಗೆ ಬರಗಾಲದ ತವರುಮನೆಯೆಂದರೆ ಸಲ್ಲುವುದು. ಯಾಕಂದರೆ ಈ ಜಿಲ್ಲೆಯ ಬರಗಾಲಕ್ಕೆ ಬರಗಾಲವೇ ಇಲ್ಲ; ಇದರಿಂದ ಜನರ ಬಲ ಕಾಲವು ಹಾರಿದಂತಾಗಿದೆ. ಜಿಲ್ಲೆಯಲ್ಲೆಲ್ಲ ಅಡ್ಡಾಡಿ ನೋಡಿದರೆ, ಭಯಾನಕವಾದ ನೋಟವೇ ದೃಗ್ಗೋಚರವಾಗುತ್ತಿದೆ. ನೀರಿಲ್ಲದೆ ಕೂಳಿಲ್ಲದೆ ಜನರು ಕಳವಳಪಡುತಲಿದ್ದಾರೆ. ಇಂತಹ ಸಮಯದಲ್ಲಿ ಅವರು ಸಹಾಯಕ್ಕಾಗಿ ಸರಕಾರದ ಕಡೆಗೆ ಒಲೆಯುವುದು ಸ್ವಾಭಾವಿಕವಾದುದು. ನಮ್ಮ ಜಿಲ್ಲೆಯ ಮಟ್ಟಿಗೆ ಮಾತಾಡಬೇಕಾದರೆ, ಕಲೆಕ್ಟರವರೇ ನಮಗೆ ಹಿತಚಿಂತಕರು. ಅವರನ್ನು ಬಿಡು ಜನರಿಗೆ ಗತಿಯಿಲ್ಲ. ಮೊನ್ನೆ ಮೊನ್ನೆ ವಿಜಾಪುರದಲ್ಲಿಯ ಮುಖ್ಯ ಮುಖ್ಯ ಜನರು ಬರಗಾಲದ ನಿವಾರಣೆಗಾಗಿ ಏನು ಯೋಜಿಸಿರುವಿರೆಂದು ಕೇಳಲು ಕಲೆಕ್ಟರವರ ಕಡೆಗೆ ಹೋಗಿದ್ದರೆಂದೂ, ಅವರಿಂದ ಸಮಾಧಾನಕರವಾದ ಉತ್ತರವು ದೊರೆಯಲಿಲ್ಲವೆಂದೂ ವೃತ್ತ ಪತ್ರಗಳಿಂದ ತಿಳಿದುಬರುತ್ತಿದೆ. ಜಿಲ್ಲೆಯ ಕಲ್ಯಾಣವನ್ನೇ ಮಾಡಲು ವಹಿಸಿಕೊಂಡ ಕಲೆಕ್ಟರವರು ತಮ್ಮ ಮೇಲಿನ ಜವಾಬುದಾರಿಯನ್ನು ಹಾರಿಸಿಕೊಳ್ಳುವುದು ಸರ್ವಥಾ ಕರ್ತವ್ಯವಲ್ಲ. ಪ್ರಜಾಪಾಲನದಂತ ಶ್ರೇಷ್ಠವಾದ ಕೆಲಸವು ಮತ್ತೊಂದಾವುದೂ ಇರುವದಿಲ್ಲ. "ವರ್ಧನಾತ್ ರಕ್ಷಣಂ ಶ್ರೇಯಃ" ಎಂಬುವದನ್ನು ನೆನೆದರೆ, ಜನರನ್ನು ಪೀಡಿಸಿ, ಬೊಕ್ಕಸವನ್ನು ತುಂಬುವದಕ್ಕಿಂತಲೂ, ಅವರ ರಕ್ಷಣೆಯನ್ನು ಮಾಡುವದಕ್ಕೆ ಅದನ್ನು ಬರಿದು ಮಾಡುವುದು ಇಷ್ಟವಾದ ಮಾರ್ಗ. ಹೀಗೆ ಮಾಡಿದರೆ ಕಲೆಕ್ಟರವರು ಜನರ ಹೃದಯಮಂದಿರದಲ್ಲಿ ಚಿರಂಜೀವಿಗಳಾಗಿ ಬಾಳುವರು.

ವಾಙ್ಮಯ ಪರಿಚಯ.

ಸ್ವೀಕಾರ.

ಉಪನಿಷತ್-ಪ್ರಕಾಶವು ೨ ನೇ ಭಾಗ ಬೆಲೆ ೦-೧೨-೦
ಅನುವಾದಕರು:- **ರಂಗನಾಥ ರಾಮಚಂದ್ರ ದಿವಾಕರರವರು.**
ವಿಮರ್ಶೆಯು ಯಥಾವಕಾಶ.

೧ ನೇ ಭಾಗ ಅಂಕಗಣಿತ.

ಶ್ರೀಯುತ ಕೃಷ್ಣಾಜಿ ಗೋವಿಂದ ಗೆಜ್ಜೆಯವರು ಪ್ರೇಮಪೂರ್ವಕವಾಗಿ ನಮ್ಮೆಡೆಗೆ ಕಳುಹಿಸಿದ ಗಣಿತವನ್ನು ಆನಂದದಿಂದ ಸ್ವೀಕರಿಸುವೆವು. ಇವರು ಭಾಷೆಯ ಏಕೀಕರಣದ ವಿಷಯದಲ್ಲಿ ಆದರವುಳ್ಳವರಾಗಿ ತಮ್ಮ ಗಣಿತವನ್ನು ಭಾಷಾದೃಷ್ಟಿಯಿಂದ ಸಾಹಿತ್ಯಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಶ್ರೀ ವೆಂಕಟನಾರಾಯಣಪ್ಪನವರ ಸಲಹೆಗಳನ್ನು ಪಡೆದು ತಿದ್ದುಪಡೆಯನ್ನುಮಾಡಿದ್ದಾರೆ. ಈ ಪ್ರಕಾರ ತಿದ್ದುವದರಿಂದ ಭಿನ್ನಭಿನ್ನ ಕನ್ನಡ ಪ್ರಾಂತೀಯರಿಗೆ ಲಾಭವಾಗುವದೆಂದು ಬೇರೆ ಹೇಳಲು ಆವಶ್ಯವಿಲ್ಲ. ಶ್ರೀ ಗೆಜ್ಜೆಯವರು ತಿದ್ದಿಸಿ ಮುದ್ರಿಸಿದ ೫ ನೇ ಆವೃತ್ತಿಯ ಲಾಭವನ್ನು ಎಲ್ಲ ಕನ್ನಡಿಗರೂ ಪಡೆಯಬೇಕೆಂದು ಹಾರೈಕೆ.

ಸಂಗೀತ ಶಿಬಿಚಕ್ರವರ್ತಿ ನಾಟಕವು— ಲೇಖಕರು ಹಣಮಂತರಾವ ಕುಲಕರ್ಣಿ- ಲಿಂಗಸೂರ. ಕ್ರಯ ೦-೨-೦ ವಾರ್ಷಿಕೋತ್ಸವ- ಸಮ್ಮೇಲನಗಳಲ್ಲಿ ಬಾಲಕರಿಂದ ಅಭಿನಯಿಸುವ ಚಿಕ್ಕ ನಾಟಕವು. ಇದೇ ಹೆಸರಿನ ಚಿಕ್ಕ ನಾಟಕವೊಂದು ಬೇರೆಯುಂಟು ವಿಷಯಾಂತರವನ್ನು ಯೋಜಿಸಿದ್ದರೆ ನೆಟ್ಟಗಾಗುತ್ತಿತ್ತು. "ಓರ್ವ ಕನ್ನಡಿಗ" ರಾದ ಲೇಖಕರು ಕರ್ನಾಟಕ ಅರಸರ ಜೀವನದಲ್ಲಿಯ ಸರಸಪ್ರಸಂಗಗಳನ್ನು ಆರಿಸ್ಸು ಚಿತ್ರಿಸಿದರೆ ಹೆಚ್ಚು ಉಪಯುಕ್ತವಾಗುವಂತಿದೆ.

ಕ್ರಮಿಕ ಪುಸ್ತಕದಲ್ಲಿ ಶಿಬಿಚಕ್ರವರ್ತಿಯ ಮೇಲಿನ ಕವಿತೆಗೆ ಇದು — ಪೂರಕ- ವಾಗುವದೇನೋ ನಿಜವು. ಆದರೆ— ಭಾಷೆಯುಮಾತ್ರ ಬಾಲಕರಿಗೆ ಬೋಧವಾಗದಷ್ಟು ಗಡಚಾಗಿದೆ. "ಕರ್ಮಕರ್ತೃಮನ-ಧಾರಕರ್ತೃ"- 'ಸ್ಮರಣಾಲಂಕಾರ'- ಇವು ಚಿಕ್ಕ ಬಾಲಕರ ಬಾಯಲ್ಲಿ ಹಿಡಿಸಲಾರದ ಶಬ್ದಗಳಲ್ಲಿ ಕೆಲವು. 'ಸೇನಾಪತಿ' 'ಶುಲಭ' 'ಸೇವಾ'ಗಳಲ್ಲಿ ಅಯೋಗ್ಯವಾದ 'ಶ' ಕಾರಕ್ಕೆ ಮಮತೆಯೇಕೆ? ಮಿತಿ ಮೀರಿದ ಮುದ್ರಣ ದೋಷಗಳನ್ನು ತಿದ್ದಿಕೊಳ್ಳಬೇಕು. — ಶ್ಯಾಮ

ಅಭಿಪ್ರಾಯ.

ಬೆಂಗಳೂರಿನ ಚಿಕ್ಕಪೇಟೆಯಲ್ಲಿರುವ ಯಜಮಾನ ಮತ್ತು ಕಂಪನಿಯವರು. ಜಾಹೀರಾತಿನ ಬೆಲೆಯನ್ನು ಕಲೆಯ ನ್ನು ಚ ನ್ನಾ ಗಿ ಅ ರಿ ತಿ ರು ವ ರು. ಮೈಸೂರುದೇಶದ ವ್ಯಾಪಾರಸ್ಥರಲ್ಲಿ ಜಾಹೀರಾತವನ್ನು ಉತ್ಕೃಷ್ಟ ರೀತಿಯಿಂದ ತಯಾರಿಸಿದವರಲ್ಲಿ ಇವರು ಅಗ್ರೇಸರರು ನಿಶ್ಚಯ

ಹಾಸಿ ಪದಾರ್ಥಗಳನ್ನು ಕಂಡುಹಿಡಿಯುವದರಲ್ಲಿ ಇವರು ಕುಶಲರು. ಶ್ರೀಮನ್ಮಹಾರಾಜರ ಭಾವಚಿತ್ರವನ್ನು ರಬ್ಬರ ಸ್ಟಾಂಪಿನಲ್ಲಿ ಇವರು ತಯಾರುಮಾಡಿರುವರು ಈಸಾರೆಯ ವಸ್ತುಪ್ರದರ್ಶನದಲ್ಲಿ ಇವರಿಗೆ ಬಂಗಾರದ ಪದಕವು ದೊರೆತಿರುವದು. ಸಮಾಜಕ್ಕೆ ಸಿರಿ ಮಿನಲಿಯುವಮಳಿಂಬಸಾತನ್ನು ಇವರು ಸಿದ್ಧಪಡಿಸಿದ್ದಾರೆ.

ಲೆವರಿನ ಗಡಿಯಾರಗಳು.

ಲೆವರಿನ ಕೈ ಗಡಿಯಾರ ರೂ. ೯.

ಲೆವರಿನ ಕಿಸೆಯೊಳಗಿಡುವ ಗಡಿಯಾರ ರೂ. ೭.



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅತಿಸೌಖ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹಳ ದಿವಸ ನಡೆಯುವವು. ಮತ್ತು ತಾಳುವವು. ಬೆಲೆ ಕಡಿಮೆಯಿಂದು ಅಂಜುವ ಕಾರಣವಿಲ್ಲ. ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸುತ್ತೇವೆ ಆದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ

ಲೆಕೋ ವಾಚ ಕಂ. (ಇಂಡಿಯಾ.) ಬಾಂಬೆ ಕೆ ೪.

ಬಿ, ಎಂ. ದೂಗಾರ ಕೃತ

ತಾಳಪ್ರಸ್ತಾರಸಾಗರ,

೧ ನೇ ಭಾಗ.

(ಮೃದಂಗ ವಿದ್ಯಾವಿನೋದ.)

ಈ ಗ್ರಂಥದಲ್ಲಿ ತಾಳಗಳ ಉತ್ಪತ್ತಿ, ಜಾತಿಭೇದದಿಂದ ಹುಟ್ಟಿದ ೩೫ ತಾಳಗಳನ್ನು ಹಿಡಿಯುವ ಕ್ರಮ. ತಬಲಾದಲ್ಲಿ ಅಕ್ಷರಗಳನ್ನು ನುಡಿಸುವ ಕ್ರಮ, (ಸಚಿತ್ರ) ಪರಿ, ಕಾಲು, ಮುಕ್ತಾಯ ತಾಳಗಳನ್ನೂ ಮುಗಿತಾಯಗಳನ್ನೂ ಮಾಡುವ ರೀತಿ, ಮರ್ಮತಾಳ ಲಕ್ಷಣ ಗುಣಿವಾದ್ಯಶಬ್ದಗಳ ವಿಚಾರ, ಎರಡೂ ತಾಳಗಳನ್ನು ಗತಿಭೇದದಿಂದ ಎರಡೂ ಕೈಗಳಿಂದ ಒಮ್ಮೆಲೆ ನಡಿಸುವ ಕ್ರಮ, ಇತ್ಯಾದ್ಯನೇಕ ರಹಸ್ಯವಾದ ವಿಷಯಗಳು ಸ್ಪಷ್ಟವಾಗಿರುವವು ಗ್ರಂಥದ ಬಗ್ಗೆ ಅನೇಕ ವಿದ್ವಾಂಸರು ತಮ್ಮ ಸದಭಿಪ್ರಾಯವನ್ನು ವ್ಯಕ್ತಪಡಿಸಿರುವರು, ಈ ಗ್ರಂಥವು ಹತ್ತರಿದ್ದರೆ ಒಬ್ಬ ಸಂಗೀತ ವಿದ್ವಾಂಸನೇ ಹತ್ತರಿದ್ದಂತಾಗಿ ಬೋಧಕರ ಸಹಾಯವೇ ಬೇಕಾಗಲಾರದು.

ಈ ಪುಸ್ತಕದ ಬೆಲೆ ೨—೦—೦ ರೂಪಾಯಿ. ಕಾಲ ವಿಲಂಬವಾದರೆ ಪುಸ್ತಕಗಳು ದೊರೆಯಲಾರವು. ಕೆಳಗಿನ ವಿಳಾಸಕ್ಕೆ ಬರೆದು ಬೇಕಾದವರು ತರಿಸಿಕೊಳ್ಳಬೇಕು.

ವಿಳಾಸ:- ಬಸಪ್ಪಾ ಮಲ್ಲಪ್ಪಾ ದೂಗಾರ.
ಸಾ|| ಚಿಂಚಲಿ. ತಾ. ಗದಗ.
ಪೋ|| ಮುಳಗುಂದ. ಜಿಲ್ಲಾ ಧಾರವಾಡ.

ಯಾವದೇ { ಆಕಾರದ ನಕ್ಷೆಯ ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ. ೧೪, ಅರ್ಧ ಬೆಲೆ ರೂ. ೭



ಬರೇ ಒಂದು ತಿಂಗಳ ಬಗ್ಗೆ ನಾವು ಈ ದಾನವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ ಬೆಲೆ ರೂ ೭

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ರ:— ಸ್ವಾನ ಹೌಸ ಪಿ. ಬಿ ೫೦೮. ಪಿ. ಟಿ. ಮದ್ರಾಸ

ಅತ್ಯಲ್ಪವಿವೆ ಉಚಿತ!

ಕೇವಲ ಉಚಿತ ಕೇವಲ ಉಚಿತ



" ತಾರಾ " ಲೀವರ ರಜಿಸ್ಟರ್ಡ್ ಪೋಕೆಟ್ ವಾಚ್ ೧೮ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚು ಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ " ಸಿ " ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು " ತಾರಾ " ಲೀವರ್ ರಿಜಿಸ್ಟರ್ಡ್ ೧೮ ಕೆರೆಟ್ ರೋಲ್ಡ್ ಗೋಲ್ಡಿನ ಪೋಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪ್ಟನ್ ವಾಚ್ ಕಂ , ಪಿ ಬಿ. ೨೬೫, ಮದ್ರಾಸ

ಶ್ರೀಮಾನ್ ನರಸಿಂಹಾಚಾರ್ಯರೂ,

ಡಾಕ್ಟರ್ ವೆಂಕಟಸುಬ್ಬಯ್ಯನವರೂ—

(ಗೆಳೆಯರಗುಂಪಿನ ಚೆನ್ನಮಲ್ಲ ಬರೆದದ್ದು)

ಇದೀಗ ನನಗೆ— ಅಂತರಂಗದ ಜೀವನದ ಅನಿವಾರ್ಯ ಸಂಕಟಗಳ ಮೂಲಕ ಓದುವದಕ್ಕೂ, ಬರೆಯುವದಕ್ಕೂ ಎಷ್ಟೂ ಇಷ್ಟವಿಲ್ಲದಿದ್ದರೂ, ಶ್ರೀ ಆಚಾರ್ಯರ ವಿಷಯದಲ್ಲಿ ನನಗಿದ್ದ ಅಖಂಡ ಪೂಜ್ಯಭಾವವು ಈ ನಾಲ್ಕು ಪಂಕ್ತಿಗಳನ್ನು ಬರೆಯುವು ದಕ್ಕೆ ಹಚ್ಚಿತು! ನನಗೆ ಆಚಾರ್ಯರ ವಿಷಯದಲ್ಲಿರುವಷ್ಟು ಪೂಜ್ಯಭಾವವು ಡಾಕ್ಟರ್ ಮಹಾಶಯರ ವಿಷಯದಲ್ಲಿ ಇರುವದಕ್ಕೆ ಕಾರಣಗಳಿಲ್ಲದಿದ್ದರೂ— ಅವರೂ ಕನ್ನಡನಾಡಿನ ಕುಲಶ್ರೇಷ್ಠರಲ್ಲೊಬ್ಬರೆಂಬ ಅಭಿಮಾನವಿಲ್ಲದೆಯಿಲ್ಲ!!! ಆಚಾರ್ಯರಂತೆ ಡಾಕ್ಟರ ಮಹಾಶಯರೂ ಪ್ರಚಂಡ ಸಾಹಿತಿಗಳು! ಇಂಥವರು ತಮ್ಮ ಪ್ರಬಂಧಗಳಲ್ಲಿ ಮುಪ್ಪಿನ ಆಚಾರ್ಯರ ವಿಷಯದಲ್ಲಿ ಅಗೌರವವನ್ನು ಸೂಚಿಸಿ ಅಭದ್ರವಾಗಿ ಬರೆಯಬೇಕಾದ ಕಾರಣವು ತೋರಲೊಲ್ಲದು! ಈ ವಿಷಯದಲ್ಲಿ ಆಚಾರ್ಯರಂಥ ಅಷ್ಟು ಕುಲಪೂಜ್ಯರಿಗಾದ ಅಲ್ಪಸ್ವಲ್ಪ ನೋವು ಸಾಮಾನ್ಯವಲ್ಲ!

ಶ್ರೀ ಆಚಾರ್ಯರ — ೬೦, ೩೧ ೭ ಇವುಗಳಲ್ಲಿ ನನಗೆ ಬರೆದೋಲೆಯಲ್ಲಿ—

"ನನಗೂ ವೃದ್ಧಾಪ್ಯವಾಗುತ್ತಿದೆ, ಇದೆ. ೬೬ ವಯಸ್ಸಾಯಿತು. ಭಾಷಾಸೇವೆಯನ್ನು ಅವಿಚ್ಛಿನ್ನವಾಗಿ ಮಾಡಬೇಕೆಂಬ ಉತ್ಸಾಹ ಕಲವಿದೆ. ನಡೆವುದು ಕಷ್ಟ. ಕಣ್ಣು ಮಬ್ಬಾಗುತ್ತ ಬಂದಿದೆ ದೇಹದಲ್ಲಿ ಅಷ್ಟೇನೂ ದೌರ್ಬಲ್ಯ ತೋರುತ್ತಿಲ್ಲ. ಆದರೂ ಮುಪ್ಪಿನ ಫಲ ಅನಿವಾರ್ಯ. ಪ್ರಬುದ್ಧ ಕರ್ಣಾಟಕದಲ್ಲಿ ಡಾ॥ ವೆಂಕಟಸುಬ್ಬಯ್ಯನವರು ಮನಸ್ಸಿಗೆ ತೋರಿದಂತೆ ಖಂಡನೆಗೆ ಆರಂಭಿಸಿದ್ದಾರೆ." ಎಂಬುದಾಗಿ ಬರೆದು—ತಮ್ಮ ಉಜ್ವಲ ಸ್ಥೈರ್ಯವನ್ನೂ ಆಂತರಿಕ ವ್ಯಥೆಯನ್ನೂ ಕೂಡಿಯೇ ವ್ಯಕ್ತಪಡಿಸಿರುವದನ್ನು "ಕನ್ನಡಿಗ" ದಿಗೆ ಆಗಲೇ ಅಂಕಿತಪಡಿಸಿ ಪ್ರಬುದ್ಧ ಕರ್ನಾಟಕಕ್ಕೂ (ಕನ್ನಡಿಗ—ನ, ಮುದ್ರಾಂತರವಾಗಿ) ವಿದಿತ ಪಡಿಸಿದ್ದೆನು. ಶ್ರೀಯುಕ್ತ ಟಿ ಎಸ್. ವೆಂಕಣ್ಣಯ್ಯನವರಂಥ ಪ್ರಬುದ್ಧ ಸಂಪಾದಕರು ಈ ವಿಷಯಕ್ಕೆ ಗಮನಕೊಟ್ಟಿಲ್ಲವೆಯೇನು? ಡಾಕ್ಟರ್ ಮಹಾಶಯರ ಪ್ರಬಂಧಮಾಲೆಯಲ್ಲಿಯ ಮೊದಲು ಕಾಣುತ್ತಿದ್ದ- "ಕವಿಚರಿತ್ರಕಾರರ ಭ್ರಮೆ" ಯು— ಈಚೆಗೆ ಬದಲಾದಹಾಗಿದೆ. ಸ್ತುತ್ಯ!!!

ಮಾತು ಮಾಯವಾದರೂ ಭಾವವೇನೂ ಬೆನ್ನು ಬಿಟ್ಟಿಲ್ಲ. ಆ ಪ್ರಬಂಧಮಾಲೆಯ ಜನ್ಮವೇ ಮೂಲತಃ ಆಚಾರ್ಯರ ಟೀಕೆಯ ಸಲುವಾಗಿಯೆಂದು ವಾಚಕರಿಗೆಲ್ಲ ಥಟ್ಟನೆ ಗೊತ್ತಾಗುವಂತಿದೆ. ಹೆಜ್ಜೆಹೆಜ್ಜೆಗೂ ಅಕಾರಣವಾಗಿ- "ಮನಸ್ಸಿಗೆ ತೋರಿದಂತೆ"— ಯೋಚಿಸಿ "ಕವಿಚರಿತ್ರಕಾರರ ಭ್ರಮೆ, ಕವಿಚರಿತ್ರಕಾರರ ಭ್ರಮೆ" ಯೆಂದು ಕೂಗಿಕೊಳ್ಳುವದು ಹೇಗೆ ಉಚಿತವೋ ತಿಳಿಯದು! ಈಚೆಗೆ ಡಾಕ್ಟರ್ ಮಹಾಶಯರ ಮನಸ್ಸಿಗೆ ತಟ್ಟಿದ್ದ ಕಟ್ಟಿಕ್ಕಿದ ಮಾತು- "ಭ್ರಮೆ"- ಮಾಯವಾಗಿದ್ದರೂ ಆ ಮಾತಿನ ಭಾವವೇನೂ ಬಯಲಾಗಿಲ್ಲ. ಇದೀಗ ತಾನೆ ಹೊಸದಾಗಿ ಹೊರಬಿದ್ದ ೨೮ ನೆಯ ಸಂಚಿಕೆಯಲ್ಲಿ ಬಂದಿರುವ ಒಂಬತ್ತನೆಯ ಪ್ರಬಂಧವನ್ನು ಒಂದಿಷ್ಟು ನೋಡುವಾ—

ಡಾಕ್ಟರ್ ಮಹಾಶಯರು ಈ ಸಲ "ನೇಮಿಚಂದ್ರ"ನ ವಿಷಯವಾಗಿ ವಿವೇಚಿಸಿದ್ದಾರೆ ನೇಮಿಚಂದ್ರನ ಆಶ್ರಯದಾತನ ಸ್ವಾಮಿಯಾದ ವೀರಬಲ್ಲಾಳನ ಒಂದು ಸಮರ ವಿಜಯವನ್ನು ಕುರಿತು ಹೇಳುವಾಗ ಅಡಿಟಿಪ್ಪಣಿಯಲ್ಲಿ— ಚನ್ನರಾಯನು ಬರೆದ ಒಂದು ಶಾಸನದ ಕಾಲವನ್ನು ನಿರ್ಣಯಿಸಕೊಂಡಿದ್ದಾರೆ (ಚೆನ್ನರಾಯಪಟ್ಟಣ ತಾಲೂಕಿನ ೧೭೯ ನೆಯ ಶಾಸನ.) ಮೂಲ ಶಾಸನದಲ್ಲಿ "ಸಕವರ್ಷ, ೧೧೧೩ ನೆಯ ಸೌಮ್ಯ ಸಂವತ್ಸರದ ಪುಷ್ಯ ಬಹುಳ ೧೧ ಆದಿತ್ಯವಾರದುತ್ತರಾಯಣ ಸಂಕ್ರಮಣದಂದು" ಎಂದು ಕಾಲವನ್ನು ಹೇಳಿದೆ. ಇಲ್ಲಿ ಹೆಚ್ಚಿನದೇನೂ ಇಲ್ಲ ಶಕವರ್ಷವನ್ನು ಇಸವಿಮಾಡಿ ಹೇಳುವದಷ್ಟೆ ಬಡಿವಾರ! ಇಷ್ಟಕ್ಕಾಗಿ ಡಾಕ್ಟರ್ ಮಹಾಶಯರು ಆರ್ಯಸಿದ್ಧಾಂತ, ಸೂರ್ಯಸಿದ್ಧಾಂತ ಮುಂತಾದ ಜ್ಯೋತಿಷ್ಯ ಗ್ರಂಥಗಳನ್ನೆಲ್ಲ ಬಿಚ್ಚಿದ್ದಾರೆ!

ನಮ್ಮಲ್ಲಿಯ (ಶಾಲಿವಾಹನ) ಶಕವು ೭೮ ನೆಯ ಇಸವಿಯ ಮಾರ್ಚ, ೧೪ ನೆಯ ತಾರೀಖಿಗೆ ಆರಂಭವಾಯಿತೆಂದು ಪಂಡಿತರ ಮತ. ಆದ್ದರಿಂದ ಶಕವರ್ಷವನ್ನು ಇಸವಿಯಲ್ಲಿ ಹೇಳುವಾಗ, ಶಕವರ್ಷದ ಸಂಖ್ಯೆಗೆ ಸಾಮಾನ್ಯವಾಗಿ ಈ ಎಪ್ಪತ್ತೆಂಟನ್ನು ಬೆರಿಸಿ ಹೇಳುವ ರೂಢಿಯಿದೆ ಸೂಕ್ಷ್ಮವಾಗಿ ನೋಡಿದರೆ ಆ ಶಕವರ್ಷವು ಕೊನೆಮಾಸವನ್ನು ಹೊಂದುವದಕ್ಕಿದ್ದರೆ ಅದಕ್ಕೆ ೭೯ ಸೇರಿಸ ಬೇಕಾಗುವದೇನೋ ಸರಿ. ಸಾಮಾನ್ಯವಾಗಿ ಹೇಳುವುದಾದಾಗ ಕೆಲವು ಎಪ್ಪತ್ತೆಂಟನ್ನೇ ಸೇರಿಸಿ ಹೇಳುವ ವಾಡಿಕೆಯಿದೆ.

ಆಚಾರ್ಯರು ಕವಿಚರಿತ್ರೆಯಲ್ಲಿ ಈ ಶಾಸನವನ್ನು ಬರೆದ ಚನ್ನಕವಿಯ ಚರಿತ್ರೆಯನ್ನು ಹೇಳುವಾಗ ಸಾಮಾನ್ಯವಾಗಿ (೧೧೧೩+೭೮=) ೧೧೯೧ ನೆಯ ಇಸವಿಯಲ್ಲಿ ಈ ಶಾಸನವು ಬರೆಯಲ್ಪಟ್ಟಿತೆಂದು ಹೇಳಿದ್ದಾರೆ. ಆದರೆ ಡಾಕ್ಟರ್ ಮಹಾಶಯರು ಇದನ್ನು ತಪ್ಪೆಂದು ತೋರಿಸುವುದಕ್ಕೆ ಹೊರಟು ಜ್ಯೋತಿಷ್ಯ ಶಾಸ್ತ್ರಗಳನ್ನೂ, ಘಳಿಗೆ ಪಳ ವಿಪಳಗಳನ್ನೂ ಓದಾಡಿಸಿ- ೧೧೯೧ ನೇ ಡಿಸೆಂಬರ್ ೨೩ನೇ ತಾರೀಖೆಂದು ಸಿದ್ಧಪಡಿಸಿದ್ದಾರೆ. ಅಬ್ಬಬ್ಬಾ! ಬುಧವಾರದ ಉಚಿತಾಯ! ಇಷ್ಟು ಎಂಟು ದಿನಕ್ಕೆ ಆಚಾರ್ಯರು ಹೇಳಿದ ಇಸವಿಯು ಬದಲಿಸಬೇಕಿತ್ತಲ್ಲವೆ!

ಇದೇನೇ ಇರಲಿ ಮೂಲಶಾಸನದಲ್ಲಿಯೇ ಕಾಲವು ತಪ್ಪಿ ಹೋಗಿದೆ ಶಕ ಸಂಖ್ಯೆಯಲ್ಲಿ ೧೨ ನ್ನು ಬೆರಿಸಿ ೬೦ ರಿಂದ ಭಾಗಿಸಿ ಉಳಿದದ್ದನ್ನು ಪ್ರಭವಾದಿಯಾಗಿ ಎಣಿಸಿದರೆ ಸಂವತ್ಸರವು ಹೊರಡುತ್ತದೆಂದು ಒಂದು ನಿಯಮ. ಈ ನಿಯಮದಂತೆ ೧೧೧೩ ನೆಯ ಶಕ ವರ್ಷದಲ್ಲಿ (೧೧೧೩+೧೨=೧೧೨೫÷೬೦; ಶೇಷ ೪೫. ಆದ್ದರಿಂದ ಪ್ರಭವದಿಂದ ೪೫ ನೇ ಸಂವತ್ಸರವು) ವಿರೋಧಿಕೃತ್ ಇದ್ದಿತಲ್ಲದೆ ಶಾಸನದಲ್ಲಿ ಹೇಳಿದ ಸೌಮ್ಯಸಂವತ್ಸರವಿರಲಿಲ್ಲ. ಸೌಮ್ಯ ಸಂವತ್ಸರವು ೪೩ ನೆಯದು. ಆದ್ದರಿಂದ ವಿರೋಧಿಕೃತ್ತಿಗಿಂತ ಎರಡು ವರುಷಕ್ಕೆ ಮುಂಚೆ ಎಂದರೆ ೧೧೧೧ ನೆಯ ಶಕ ವರ್ಷದಲ್ಲಿ ಆ ಸೌಮ್ಯವಿತ್ತು ಮೂಲಶಾಸನದಲ್ಲಿಯೇ ಅಂಕೆ ತಪ್ಪಿಬಿದ್ದಿದೆ. ಆದುದರಿಂದ ೧೧೧೧ ನೆಯ ಶಕವರ್ಷದ ಮಕರಸಂಕ್ರಾಂತಿಯು (೧೧೧೧+೭೮=) ೧೧೮೯ ನೆಯ ಇಸವಿಯ ಡಿಸೆಂಬರ್ ತಿಂಗಳಲ್ಲಿ ಬರಬೇಕು. ಹೀಗಾದರೆ ಡಾಕ್ಟರ್ ಮಹಾಶಯರ ಆಶಯವೂ ತಪ್ಪಿಹೋಗುವಂತಿದೆ. ಇದಿರಲಿ.

ಈ ಚನ್ನನ ಶಾಸನದ ತಾರೀಖು ಘಂಟೆಗಳನ್ನೆಲ್ಲ ಹೇಳಿತೀರಿಸಿದ ಮೇಲೆ ಡಾಕ್ಟರ್ ಮಹಾಶಯರು-

"ಕವಿಚರಿತಕಾರರು ತಮ್ಮ ಗ್ರಂಥದ ಅನೇಕಕಡೆಗಳಲ್ಲಿ-ಕರ್ನಾಟಕ ದೇಶದ ಶಾಸನಗಳಿಗೆ ಹೇಳಿರುವ ಕ್ರಿಸ್ತಶಕವರ್ಷಗಳು ಹೀಗೆಯೇ ತಪ್ಪಾಗಿರುವವು. ಇಂಥವುಗಳಲ್ಲಿ ಕೆಲವನ್ನು ಇಲ್ಲಿ ನಾವು ಉದಾಹರಿಸುವೆವು:-"

ಎಂದು ಹೇಳಿ-ತಮ್ಮ ಪ್ರಬಂಧ ನಾಯಕನಾದ ನೇಮಿಚಂದ್ರನನ್ನೆಲ್ಲಿಯೋ ಬಿಟ್ಟು, ಪರಕೀಯ ಟಿಪ್ಪಣಿಯಲ್ಲಿಯೇ ಮುಂದುವರಿದು ಐದು ದೃಷ್ಟಾಂತಗಳನ್ನು ಕೊಡುವಷ್ಟರಲ್ಲಿ ಪ್ರಬಂಧವು ಸಶೇಷವಾಗಿಹೋಗಿದೆ!!' ಪಾಪ! ಮುಂದಿನ ಸಂಚಿಕೆಯಲ್ಲಿ ಇನ್ನೂ ಬರಬಹುದು! ಈ ಐದರಲ್ಲಿ- ಸಂದರ್ಭಸಾರದ ಉಳಿತಾಯವನ್ನು ಮಾಡಿಕೊಟ್ಟಿರುವವುಗಳೇ ಪರೋಪಕಾರ್ಯಕ್ಕಿರುವವೆ! ಒಂದೇನೋ ಬರುವವರ್ಷಗಳನ್ನು ಸಾಧನಮಾಡಿಕೊಟ್ಟಿದೆ!! ಅದನ್ನಿಷ್ಟು ನೋಡಿ ಮುಗಿಸುವಾ—

"ಸೊರಬದ ೧೮೪ ನೆಯ ಶಾಸನವು ಕ್ರಿಸ್ತಶಕ ೧೦೩೭ ರಲ್ಲಿ ಹುಟ್ಟಿತೆಂದು.......... (ಕವಿಚರಿತೆಯ) ೭೪ ನೆಯ ಪುಟದಲ್ಲಿ ಹೇಳಲ್ಪಟ್ಟಿರುವುದು. ಇದು ತಪ್ಪು. ಈ ಶಾಸನವು ವಸ್ತುತಃ ಕ್ರಿಸ್ತಶಕ ೧೦೩೭ ನೆಯ ಡಿಸೆಂಬರ್ ೨೪ ನೇ ತಾರೀಖು ಶನಿವಾರ ಹುಟ್ಟಿತು."

ಇಲ್ಲಿ ಒಂದುಮಾತನ್ನು ಹೇಳದಿರಲಿಕ್ಕೆ ಆಗುವದೇ ಇಲ್ಲ. ಆದ್ದರಿಂದ ಹೇಳುವೆ. ಬಹುಶಃ ಸರ್ವತ್ರವಿರುವಂತೆ ನಮಗೂ ಕಾಂಚನದ ಅಭಾವಕ್ಕೆ ಕೊರತೆಯಿಲ್ಲ. ಇಂಥದರಲ್ಲಿ ಶಾಸನ ಪುಸ್ತಕಗಳಂಥ ಬಹುಬೆಲೆಯ ಗ್ರಂಥಗಳನ್ನು ಸಂಗ್ರಹಿಸುವುದು ತೀರ ಅಶಕ್ಯ. ಇಂಥ ಹೊತ್ತಿಗೆ ಶ್ರೀ ಆಚಾರ್ಯರು ನಮ್ಮ ಗೆಳೆಯರ ಗುಂಪಿನ ವಾಚನಾಲಯಕ್ಕೆ ಶಾಸನ ಪುಸ್ತಕಗಳೇ ಮೊದಲಾದ ೭೫ ರೂಪಾಯಿ ಬೆಲೆ ಬಾಳುವ ಗ್ರಂಥಗಳನ್ನು ಅತ್ಯಂತ ಸಂತೋಷದಿಂದ ದಯಪಾಲಿಸಿ ಮಹೋಪಕಾರ ಮಾಡಿದರು (ತಾ॥ ೨೮-೪-೨೪) "ಥ್ಯಾಂಕ್‌ಯೂ" ಎಂದು ಹೇಳಿ ಬೊಗಳುಹೋಗುವ ಈ ಕಾಲದಲ್ಲಿ ಹೀಗೆ ಕೃತಘ್ನತೆಯನ್ನು ಮುಂದರಿಸುವುದು ಸಾಮಾನ್ಯವೇ!? ಆಚಾರ್ಯರವರು ಕಳುಹಿಸಿರುವ ಶಾಸನ ಪುಸ್ತಕಗಳೇ ಈಗ ನಮಗೆ ಮೂಲವನ್ನು ನೋಡಿಕೊಳ್ಳುವುದಕ್ಕೆ ಸಹಾಯಕಗಳು.—ಇದೀಗ ಸರಿ.

ಮೇಲೆಕಾಣಿಸಿದ ಸೊರಬದ ೧೮೪ ನೆಯ ಶಾಸನದಲ್ಲಿ ಅದರ ಕಾಲವು ಹೀಗೆ ಹೇಳಿದೆಯೆಂದರೆ— "ಶಕನೃಪ ಕಾಳಾತೀತ ಸಂವತ್ಸರ ಶತಂಗಳೊಂಬಯ್ನೂರಯ್ವತ್ತೊಂಬತ್ತನೆ ಯಂಗಿರ ಸಂವತ್ಸರದ ಪೌಷ್ಯದ ಪುಣ್ಣಮಿ ಪಡ್ಡವಾರದುತ್ತರಾಯಣ ಸಂಕ್ರಾಂತಿಯೆಂದು-" ಇಲ್ಲಿ ಕೂಡ ತಪ್ಪಾಗಿದೆ. ೯೫೯ನೆಯ ಶಕ ವರ್ಷದಲ್ಲಿ ಲೆಕ್ಕದಂತೆ ಈಶ್ವರ ಸಂವತ್ಸರವಿತ್ತು. ೯೫೯+೧೨=೯೭೧-೬೦. ೯೭೧ ೧೧. ಆದ್ದರಿಂದ ಪ್ರಭವದಿಂದ ಹನ್ನೊಂದನೆಯದು ಈಶ್ವರ ಸಂವತ್ಸರವು.) ಆದರೆ ಮೂಲ ಶಿಲಾಲಿಪಿಯಲ್ಲಿ ಅಂಗಿರ ಸಂವತ್ಸರವು ಈಶ್ವರ ಸಂವತ್ಸರಕ್ಕಿಂತ ಆರುವರ್ಷ ಮುಂಚಿತವಾಗಿದ್ದಿತು. ಎಂದರೆ ೯೫೩ ನೆಯ ಶಕವರ್ಷವು ಶಾಸನಕಾಲವಾಗುತ್ತದೆ. ಆಗ ಡಿಸ್ಸೆಂಬರಿನಲ್ಲಿ ಮಕರಸಂಕ್ರಾಂತಿಯಾಗುತ್ತಿದ್ದಿತೆಂದು ಡಾಕ್ಟರ್ ಮಹಾಶಯರೇ ಸಿದ್ಧಪಡಿಸಿರುವರಾದ್ದರಿಂದ ಈ ಶಾಸನದ ಕಾಲವು (೯೫೩+೭೮=)೧೦೩೧ ನೇ ಇಸವಿಯ ಡಿಸ್ಸೆಂಬರ್ ತಿಂಗಳಾಯಿತು ಆಚಾರ್ಯರು ಹೇಳಿರುವ ೧೦೩೭ ಕ್ಕೂ ಇದಕ್ಕೂ ಆರು ವರ್ಷಕ್ಕಿಂತ ಇನ್ನೇನು ಹೆಚ್ಚು? ಡಾಕ್ಟರ್ ಮಹಾಶಯರ ಘಂಟೆ ಮಿನಿಟು ಸೆಕೆಂಡುಗಳಿಗೆಲ್ಲಿ ನೆಲೆಯೋ ತಿಳಿಯದು!

ಇದುವರೆಗೆ ತೋರಿಸಿದ ನನ್ನ ಲೆಕ್ಕವೆಲ್ಲ ತಪ್ಪಿಹೋಗಿದ್ದರೂ ಹೋಗಿರಬಹುದು. ನಾನು ಯಾವ ಜ್ಯೋತಿಷ್ಯಶಾಸ್ತ್ರಗಳನ್ನೂ, ಇಂಗ್ಲೀಷ ಜಂತ್ರಿಗಳನ್ನೂ ಓದಿದವನಲ್ಲ ಅಲ್ಲದೆ ಡಾಕ್ಟರ ಮಹಾಶಯರ ಅಭಿಪ್ರಾಯದಂತೆ ಪರಿಶೀಲಿಸಿದ ಶಾಸನಗಳಲ್ಲಿಯೂ ಉತ್ತರ ಹಿಂದುಸ್ಥಾನದ ಸಂವತ್ಸರಗಳನ್ನು ಹೇಳಿದರೆ ಅದು ನನಗೆ ಗೊತ್ತಿಲ್ಲ. ಇದಿರಲಿ; ಸಂಶೋಧನ ವಿಶಾರದರೂ, ಘನವಿದ್ವಾಂಸರೂ ಆದ ಡಾಕ್ಟರ್ ಮಹಾಶಯರಮುಂದೆ ನನ್ನ ಹೆಸ್ಸೆಯೆಷ್ಟು?! ಅಲ್ಲದೆ ವಯಸ್ಸು ಇಪ್ಪತ್ತೈದಕ್ಕೂ ಕೂಡಬಾರದ ಅನನುಭವಿಕ ನಾನು! ಡಾಕ್ಟರ್ ಮಹಾಶಯರ ಲೆಕ್ಕವೇ ಸರಿಯಾಗಿದ್ದರೂ ನನಗೆ ಬಾಧೆಯಿಲ್ಲ ಅವರ ತಪ್ಪನ್ನು ತೋರಿಸಿಕೊಡುವದು ಮೂಲತಃ ನನ್ನ ಉದ್ದೇಶವೇ ಅಲ್ಲ ಒಟ್ಟಿಗೂ ಯಾವದೋ ಒಂದು ಒಳಗಿನಿಂದ ಡಾಕ್ಟರ್ ಮಹಾಶಯರು ಆಚಾರ್ಯರ ಮೇಲೆ ಹರಿಹಾಯ್ದು ಬರೆಯುತ್ತಿದ್ದಾರೆಂದು ತೋರಿಸಿಕೊಟ್ಟು,— ಕುಲಶ್ರೇಷ್ಠರುಗಳಲ್ಲಿ ಈ ತೆರನಾದ ಭಾವಾಂತರವಿರುವುದು ನಮ್ಮಂಥ ಎಳೆಯರಿಗೂ ಕೂಡ ಅಸಹ್ಯವೆಂಬುದನ್ನು ಬಿನ್ನವಿಸುವದಿದಿಷ್ಟು ಮಾತ್ರ ನನ್ನ ಕೆಲಸ! ನಾನು ತಕ್ಕ ಪಾಂಡಿತ್ಯವಿಲ್ಲದೆ ಬರಿ ಭಾವವೊಂದನು ಮಾತ್ರವೆಳೆಚ್ಚಿ ಏನೇನೋ ಬರೆದುದಕ್ಕೆ ಶ್ರೀಮಾನ್ ಡಾಕ್ಟರ್ ಮಹಾಶಯರಲ್ಲಿ ಕ್ಷಮೆಯನ್ನು ಪ್ರಾರ್ಥಿಸುವೆ ಇತಿ॥ ಓಂ ಶ್ರೀ ಓಂ.

'ನನ್ನ ತುಣುಕು ನಡಿಯಿಂದ'

ನಮ್ಮ ಮಹಾರಾಜಾ ಸರಕಾರದವರು ಮಿಲ್ಲರ್ ಕಮಿಟಿ ವರದಿಯ ಅನುಮತಿಗಳು. ಹಿಂದುಳಿದವರನ್ನು ಮುಂದೆ ತರುತ್ತದೇ ಇದರ ಉದ್ದೇಶ್ಯ ಬ್ರಾಹ್ಮಣರೆಲ್ಲರೂ ಉತ್ತಮಸ್ಥಿತಿಯಲ್ಲಿರುವರೆಂದೇ ಅವರ ಅಭಿಪ್ರಾಯ. ಇಂತಹ ಸೂತ್ರಚಾಲಕರಾದ ಸರಕಾರದವರು ಸರ್ ಕೆ. ಪಿ. ಪುಟ್ಟಣ್ಣಸೆಟ್ಟಿಯವರ ಮೊಮ್ಮಗನನ್ನೂ, ಶ್ರೀಮಂತ ರಾಮಚಂದ್ರರಾವ್ ಸಿಂಧ್ಯೆಯವರ ಮಗನನ್ನೂ, ಸಂಸ್ಥಾನದ ವಿದ್ಯಾಖಾತೆಯ ಅಧಿಪತಿಗಳಾಗಿರುವ ಮ್ಯಾಥನ್ ರವರ ಮಗನನ್ನೂ "ಹಿಂದುಳಿದವರ" ಸಂಗಡಕ್ಕೆ ಸೇರಿಸಿ ೮೦ ರೂಪಾಯಿ ವಿದ್ಯಾಶಾಸನದ ಪ್ರೊಬೇಷನರಿ ಹುದ್ದೆಗಳನ್ನು ಕೊಟ್ಟಿರುವುದು ಯಾವ ರಾಜಕಾರ್ಯ ಕೌಶಲ್ಯದ ಆಚರಣೆಗೋ ಕಾಣೆ!! ಮುದ್ದೆ ದೊರಕಿದರೂ ಅಚಂದ್ರಾರ್ಕವಾದ "ಹಿಂದುಳಿದವರು" ಎಂಬ ಮುದ್ರೆ ಒತ್ತಿಸಿಕೊಂಡ ಈ ತರುಣರಿಗಾಗಿ ನಾನು ಪರಿತಾಪ ಪಡುತ್ತೇನೆ. ಮಾನನಷ್ಟಕ್ಕೆ ಸರಕಾರದ ಮೇಲೆ ದಾವೆ ಮಾಡುವಂತೆ ಕಾಣಬರಲಿಲ್ಲ!! ಇದಲ್ಲವೇ ಹಣದ ಮಹಿಮೆ.

+ +

ವಸ್ತುಪ್ರದರ್ಶನಕ್ಕೆ ಸಾಮಾನು ತಂದಿದ್ದವರಿಗೆಲ್ಲಾ ಬಹುಮ ಬಿಲ್ಲೆಗಳು, ಬಹುಮಾನಗಳು ದೊರಕಿವೆ. ಪದಾರ್ಥಗಳನ್ನು ಪ್ರದರ್ಶಿಸಿ ಬಹುಮಾನ ಪಡೆಯದವನೇ ಪಾಪಿ. ಇದಲ್ಲವೇ ಯಜ್ಞೇಶ್ವರನ ಪ್ರಭಾವ.

+ +

ಈ ಪ್ರದರ್ಶನದಲ್ಲಿ ಒಂದು ವೈಶಿಷ್ಟ್ಯವಿತ್ತು. ಉಪಹಾರ ಮಂದಿರಗಳನ್ನಿಟ್ಟಿದ್ದ ಇಬ್ಬರು ಕರ್ತರಿಗೂ ಪದಕಗಳು ದೊರೆತವು. ಇದನ್ನು ಕೇಳಿ ಅನೂಚಾನದಿಂದ ನಡೆದುಬಂದ ಕ್ಷತ್ರಿಯರು ಬಹು ನೊಂದುಕೊಂಡರು.

"ಪಂಜರದ ಹಿಲ್ಲು"

ವರ್ತಮಾನಸಾರ.

ಇಹವೃತ್ತ

ಇಲ್ಲಿಯ ವಿಶ್ವಬ್ರಹ್ಮಕಪೂಜಕರ ಶ್ರೀ ಕಾಳಿಕಾದೇವಿಯ ಪೂಜೆ ಮಾಡಿಕೊಂಡಿದ್ದ ಪರೋಪಕಪ್ಪ ಪತ್ತಾರ ಎಂಬ ಅರ್ಚಕನು ದೇವಿಯ ಆಭರಣಗಳನ್ನು ಕದ್ದುಕೊಂಡು ಹೋಗಿರುವನೆಂದು ವಿಶ್ವಬ್ರಹ್ಮಕ ಪೂಜಕರು ಹಸ್ತಪತ್ರಿಕೆಗಳನ್ನು ಹಂಚಿದ್ದಾರೆ. ಅರ್ಚಕನಿಗೆ ಗಾಂಜಿ ಕಲಬು ಇತ್ತಂತೆ. ದೇವರ ಪೂಜಾರಿಗಳು ಗಾಂಜಿಬಡಕರೂ ಪರಿಗು ಪಾತಕರೂ ಇದ್ದರೆ ಹೀಗಾಗದೆ ಬಿಟ್ಟೀತೇ?

ಮುಂಬೈ ಕರ್ನಾಟಕ.

ಧಾರವಾಡದಲ್ಲಿ ಪ್ರಜಾಶಾಸ್ತ್ರಮಂಡಲವು ಪ್ರಾರಂಭಿಸಲ್ಪಟ್ಟಿತು. ಅಲ್ಲಿಯ ಕಲೆಕ್ಟರರಾದ ಶ್ರೀಯುತ ಪೂಸ್ತಕರವರು ಅದಕ್ಕೆ ಅಧ್ಯಕ್ಷರು. ಅದರ ಮೊದಲನೇ ಕೂಡುವಿಕೆಯು ಜನೆವರಿ ೧೩ನೇ ತಾರೀಖಿನ ದಿವಸ ಕೂಡಿತ್ತು. ಶ್ರೀ ಪೂಸ್ತಕರರು ಸ್ಥಾನಿಕ ಸಂಸ್ಥೆಗಳ ಅಧ್ಯಕ್ಷರ ಕರ್ತವ್ಯಗಳು ಎಂಬ ಬರಹವನ್ನು ಓದಿದರು. ರಾವಬಹಾದ್ದೂರ ಕಂಬಳಿ ಬಿ, ಎಲ್, ಪಾಟೀಲ ಮೊದಲಾದವರು ಈ ಮಂಡಲಕ್ಕೆ ಸೇರಿದ್ದಾರೆ ಎರಡನೇ ಸಭೆಯು ಫೆಬ್ರುವರಿ ೧೩ನೇ ತಾರೀಖಿಗೆ ಕೂಡುವದು

ವಿಜಾಪುರ ಜಿಲ್ಲೆಯ ಕಲೆಕ್ಟರ ಸಾಹೇಬರವರು ಈ ತಿಂಗಳ ೨೪ನೇ ತಾರೀಖಿನಿಂದ ೨೭ರವರೆಗೆ ಬಾಗಲಕೋಟೆ ೩೦ರಿಂದ ಮುಂದೆ ಬಾಗೇವಾಡಿ ಮುಕ್ಕಾಮುಗಳನ್ನು ಮಾಡುವರು.

ಮೈಸೂರ ಕರ್ನಾಟಕ.

ಬೆಂಕಿಪೆಟ್ಟಿಗೆ ಹಾಗು ಕಾಗದಗಳ ಗಿರಣಿಗಳನ್ನು ಸ್ಥಾಪಿಸಲು ಸರಕಾರದವರು ವಿಚಾರಿಸುತ್ತಲಿರುವರು.

ನಿಜಾಮ ಕರ್ನಾಟಕ.

ಹೈದರಾಬಾದ ಸಂಸ್ಥಾನದಲ್ಲಿ ಕಾಗದಗಳನ್ನು ಮಾಡಲು ಬೇಕಾಗುವ ಸಾಧನ ಸಾಮಗ್ರಿಗಳಿದ್ದುದರಿಂದ ತ್ರ್ಯಂಬಕಲೋಕನ ಓರ್ವ ಕಾಗದಗಿರಣಿಯ ಮಾಲೀಕನು ಅಲ್ಲಿ ೩ ಗಿರಣಿಗಳನ್ನು ಬೇರೆ ಬೇರೆ ಕಡೆಗೆ ತೆಗೆಯುವ ವಿಚಾರಮಾಡುತ್ತಲಿದ್ದಾನೆ.

ಕಲ್ಯಾಣಿಯಲ್ಲಿ ಸಂಕ್ರಮಣ ದಿನ ಪರ್ವದಂತೆ ಸೋಮನಾಥ ದೇವರ ಉತ್ಸವವು ಒಳ್ಳೇರೀತಿಯಿಂದ ಜರುಗಿತೆಂದು ಅಲ್ಲಿಯ ನಿವಾಸಿಗಳೊಬ್ಬರು ತಿಳಿಸಿದ್ದಾರೆ.

ಕಲ್ಯಾಣಿ ವಿದ್ಯಾವರ್ಧಕಸಂಘದವರಿಗೆ ಅಲ್ಲಿಯನಿವಾಸಿಗಳು ಸಹಾಯಕೊಡದೆ ಹೊಳೆಗೊತ್ತಬೇಕೆಂದು ಮಾಡಿರುವರೆಂದು ಸಂಘದ ಕಾರ್ಯದರ್ಶಿಗಳು ಬರೆಯುತ್ತಾರೆ ಈ ಸಮಯದಲ್ಲಿ ಕಾರ್ಯದರ್ಶಿಗಳು ತಮ್ಮ ಕಾರ್ಯಕ್ರಮವನ್ನು ಮರೆಯಕೂಡದೆಂದು ನಮ್ಮ ಸೂಚನೆ.

ಹಿಂದುಸ್ಥಾನ

ಗುರುಕುಲದಲ್ಲಿ (ಹರಿದ್ವಾರ) ಓದ್ಯೋಗಿಕ ಶಾಲೆಯನ್ನು ಸ್ಥಾಪಿಸಬೇಕೆಂದು ಶ್ರೀ ಶ್ರದ್ಧಾನಂದರ ವಿಚಾರವಿತ್ತು. ಅದಕ್ಕೆ ಮೂಲಧನಕ್ಕಾಗಿ ೨ ಲಕ್ಷ ರೂಪಾಯಿಗಳನ್ನು ಕೂಡಿಸಬೇಕಾಗಿ ಆರ್ಯಸಮಾಜವು ಪ್ರಯತ್ನಿಸುತ್ತಲಿದೆ.

ರೇಲ್ವೆಗಳಿಗೆ ಬೇಕಾಗುವ ಸಾಮಾನುಗಳನ್ನು ಹಿಂದುಸ್ಥಾನದಲ್ಲಿಯೇ ಸಿದ್ಧಪಡಿಸಬೇಕೆಂಬುದಾಗಿ ಹಿಂದುಸ್ಥಾನ ಸರಕಾರವು ವಿಚಾರಿಸುತ್ತಲಿದೆ.

ಅಹಮದಾಬಾದ ಮುನಸಿಪಾಲ್ಟಿಯು ಶಾಸನಸಭೆಗೆ ಸಾರೀ ಮುಡಿಯುವ [illegible] ನೀಲಕಂಠ ಇವರನ್ನು ನೇಮಿಸುವದಿದ್ದಾರೆ ಇವರು ಒಮ್ಮೆ ಮುನಸಿಪಾಲ್ಟಿಯಲ್ಲಿ [illegible] ಕೆಲಸ ಮಾಡಿದವರಿದ್ದಾರೆ.

ಕಾಠಿಯಾವಾಡದಲ್ಲಿ ಗೋದಿ ಮುಂತಾದ ಕಾಳುಗಳಿಗೆ ಚಳಿಗೆ ಹುಳಗಳಿಂದ ಬಹಳೇ ಹಾನಿಯು ತಟ್ಟಿದೆ ಅದರಂತೆ ಕರಾಚಿ ಮತ್ತು ಹತ್ತಿ ಕಟ್ಟೆಗಳಿಗೂ ಹಾನಿತಟ್ಟಿದೆ.

ಆದಿತ್ಯವಾರದಿವಸ ಮುಂಜಾನೆ ಮುಂಬೈಯಲ್ಲಿ ಗಿರಣಿಯ ಯಂತ್ರ ಸಂಪೂರ್ಣಯುತ ತೊಂದರೆಯಾಗಬಾರದೆಂದು ಪೋಲೀಸರನ್ನು ಉಪಯೋಗಿಸಬೇಕಾಯಿತು.

ಸೋಜಿಗದ ಸುದ್ದಿಯು

ಸಮುದ್ರದಲ್ಲಿ ದೂರದ ಸ್ಥಳಗಳಿಗೆ ಹೋಗುವ ಹಡಗುಗಳಿಗೆ ಹಾಗೂ ಪ್ರವಾಸಿಕರಿಗೆ ಬೇಕಾಗುವ ಸೌಕರ್ಯಗಳನ್ನು ಒದಗಿಸಿಕೊಡಲು ಅಲ್ಲಲ್ಲಿ ನಡುಸಮುದ್ರದಲ್ಲಿಯೇ ಕೃತ್ರಿಮ ನಡುಗಡ್ಡೆಗಳನ್ನು ಕಟ್ಟಿಸಬೇಕಾಗಿ ಫ್ರಾನ್ಸದ ಓರ್ವ ಶಾಸ್ತ್ರಜ್ಞನು ಪ್ರಯತ್ನಿಸುತ್ತಲಿದ್ದಾನೆ ಅಲ್ಲಿ ಬಂದರವು ಸಹ ಇರತಕ್ಕದು ಹಡಗದಂತೆ ಆ ನಡುಗಡ್ಡೆಯು ಆಧಾರವಿದ್ದು ಅದು ಯಾವಾಗಲೂ ತೇಲುತ್ತಿರಬೇಕಾಗುವದು ಈ ನಡುಗಡ್ಡೆಯ ಉದ್ದಳತೆ ೧೪೦೦ ಫೂ, ಅಗಲ ೬೭೫ ಫೂಟು ನೀರಿನಲ್ಲಿ ೨೦ ಫೂಟಿನವರೆಗೆ ಇಳಿಯುವದು. ಬಂದರದ ಬಾಗಿಲು ೨೫೫ ಫೂಟ ಅಗಲವಾಗುವದು.

ಕರ್ನಾಟಕ ಸೇವಾದಳದ ಕಾರ್ಯಕ್ರಮವು ಮುಂದೆ ಹಾಕಲ್ಪಟ್ಟಿದೆ.

ದಳವು ಮಾರ್ಚ ೧ನೇ ತಾರೀಖಿನಿಂದ ಖಾದೀಮಾರಾಟವನ್ನು ಪ್ರಾರಂಭಿಸುವದೆಂದು ಡಾ|| ಹರ್ಡೀಕರರವರು ಉತ್ಸಾಹದಿಂದ ತಂತಿಮೂಲಕವಾಗಿ ತಿಳಿಸುತ್ತಾರೆ

ಸೆಕ್ರೇಟರಿ—ಲೋಕಲ

ಹಿಂ. ಸೇ. ದಲ

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ. ಬಾಗಲಕೋಟೆಯಲ್ಲಿ ನಮ್ಮ ಆಯುರ್ವೇದ ಔಷಧಿಗಳನ್ನು ಮಾರುವದಕ್ಕೆ ಏಜೆಂಟರು ಬೇಕಾಗಿದೆ. ಪುಷ್ಕಳ ಕಮಿಷನ್ ದೊರೆಯುವದು.

ರಾಜವೈದ್ಯ ನಾರಾಯಣಜಿ ಕೇಶವಜಿ.

೫೭. ಜೇನಾಬಜಾರ್, ಮದ್ರಾಸು

ದಿ ಕ್ರಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟಣೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೭ ನೇ ಇಸ್ವಿಯ ಜುಲೈ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಜುನಾಯಿಸಲ್ಪಟ್ಟ ಬೋರ್ಡ ಅಫ್ ಡಾಯರೆಕ್ಟರ್ಸ ಚೇಅರಮನರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು—

(೧) ಎಲ್. ಬಿ. ಸಿ. ನಂ. ೬೪೪. ಮಿ. ಮಹಮ್ಮದ ಯುಸುಫ ಡಿಸ್ಟಿಲೆರಿಗಾರ್ಡ. ನಾರಾಯಣ ಗುಡ ಡಿಸ್ಟಿಲೆರಿ, ಹೈದರಾಬಾದ್ದೆಕನ್ನ ರೂ ೧೦೦೦

(೨) ಎಲ್. ಬಿ. ಸಿ. ನಂ. ೫೧೮ ಮಿ. ಸೈಯದ್ ಜಹೂರಅಲಿ ಬಿ. ಎ. ಬಿ. ಟಿ. ಶಾಲಾಗಳ ಡಿವಿಜನಲ್ ಇನ್‌ಸ್ಪೆಕ್ಟರ್ ಔರಂಗಬಾದ ಸಿಟಿ, ನೈಜಾಮ ಇಲಾಖಾ ರೂ. ೧೦೦೦

(೩) ಎಲ್. ಬಿ. ಸಿ. ನಂ. ೨೦೭೯ ಮಿ. ದೇವನ ವಾಸುದೇವನ ನಂಬೂದ್ರಿಪಾದ ಜಮೀನದಾರ ಐಡಪಲ್ಲಿ ಅಲ್ವಾಯಿ ರೂ ೬೦೦

(೪) ಬಾಂಡ ನಂಬರು ೯೭೭೦ ಮಿ. ಶಂಕರಪ್ಪಾ ಬಸಪ್ಪಾ ದೆವನಕೊಂಡ, ಅಕ್ಕಸಾಲೆ ಬಡಿಗಾರಗಲ್ಲಿ ಹುಬ್ಬಳ್ಳಿ ರೂ. ೧೦೦೦

(೫) ಬಾಂಡ ನಂಬರು ೧೪೨೦೬ ಮಿ. ಶೇಕ ಬಾಪುಮಿಯಾ ಶೇಕ ಮಹಮ್ಮದ ನಳ ತಯಾರ ಮಾಡುವವರು ೬೧೫ ಭವಾನಿಪೇಟ ಪುನಾ ೧೦೦೦

ಬಿ. ಎಸ್. ಆರಾಧ್ಯ

ಚೀಫ ಏಜಂಟ ಹುಬ್ಬಳ್ಳಿ(ಮುಂಬಯಿ ಇಲಾಖಾ.)

ಕಿರ್ಲೋಸ್ಕರ

ಕಬ್ಬಿಣ ನೇಗಿಲುಗಳು

ಹಂಗಾಮು (ಸುಗ್ಗಿ) ಸಮಿಾಪಿಸಿತು. ಈ ವರ್ಷ ಮಳೆ ಬೆಳೆ ಚೆನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿಮಾಡಲಿಕ್ಕೆ ಅನುಕೂಲವಾಗಿರುವುದು. ಕಿರ್ಲೋಸ್ಕರ ನೇಗಿಲು ನಂ. ೧೧, ೯, ೮ ಇವು ಒಕ್ಕಲಿಗರಿಗೆ ಬಹಳೇ ಉಪಯೋಗ ಬೀಳುತ್ತವೆ. ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುತ್ತವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್. } ಕಿರ್ಲೋಸ್ಕರವಾಡಿ ಜಿಲ್ಲೆ . ಸಾತಾರೆ

ಗವ್ಹರ್ನಮೆಂಟನಲ್ಲಿ ರಜಿಷ್ಟರ ಮಾಡಲ್ಪಟ್ಟ ಜಗಪ್ರಸಿದ್ಧವಾದ

ಎಲ್ಲ ರೋಗಗಳಿಗೆ ಒಂದೇ ಔಷಧ.

ಅರ್ಕಶಫಾ ಅಥವಾ ಆರೋಗ್ಯ ಬಿಂದು

ಪ್ರವಾಶಿಮಿತ್ರ. ಮೂರ್ತಿವಂತವೈದ್ಯ

ಇದು ಅರ್ಕವಿದ್ದು ಇದರಲ್ಲಿ ನೀರು ರಸಾಯನ ಕೂಡಿರುವದಿಲ್ಲ. ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ಇದು ಪ್ರಸಿದ್ಧವಾಗಿ ೧೬ ವರ್ಷಗಳು ಆಗುತ್ತ ಬಂದವು. ಈವತ್ತಿನವರೆಗೆ ಎರಡು ಲಕ್ಷಗಳವರೆಗೆ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತರ ಬೇಡುವ ಪತ್ರಗಳು ವ್ಹಿ. ಪಿ. ಮಾಡಿದ ದಾಖಲೆಗಳು ಪೋಸ್ಟ ಪಾವತಿಗಳು ಬಾರಸಿಸಿ ಬುಕ್ಕುಗಳು ಇರುತ್ತವೆ. ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಸಟಿಯೆಂದು ಸಿದ್ಧ ಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳು ಇನಾಮು ಕೊಡಲ್ಪಡುವವು. ಈ ಔಷಧವು ಅಮೃತಸರಿಯುಳ್ಳದ್ದು ಇರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು ಎಂಥಾ ಭಯಂಕರ ರೋಗವು ಇದ್ದರೂ ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರಟಿಫಿಕೀಟುಗಳು ನಮ್ಮ ಹತ್ತರ ಹಾಜರ ಇರುತ್ತವೆ. ಇವನ್ನು ಬರೆಯಲಿಕ್ಕೆ ಕಾಗದವು ಸಾಲದು. ಕಾರಣ ಒಂದುಸಾರೆ ತಕ್ಕೊಂಡು ಅನುಭವ ನೋಡಿರಿ. ರೋಗದ ನಾಮಗಳು— ಕ್ಷಯರೋಗ, ಬಾಣಂತಿರೋಗ, ಹಡೆದನಂಜು ದಮ್ಮು, ಕೆಮ್ಮು, ಅಡಗ್ಗೆ, ಕಾಲರಾ (ಮಾರಿಕಾ), ಪ್ಲೇಗ, ಇನ್‌ಪ್ಲುಯಂಜಾಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮಲರೋಗ, ಗಂಡಮಾಲೆ, ನಾರಹುಣ್ಣು, ಶಸ್ತ್ರಗಾಯ, ಕಿವಿಶೂಲಿ ಮೂಗಿನೊಳಗಿನ ಪಿನಸಿ, ಮೊದಲಾದವುಗಳು. ಕಣ್ಣುನೋವು ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ ಹೊಟ್ಟೆಶೂಲಿ, ಸಣ್ಣ ಕೂಸುಗಳಿಗೆ ಆದ ರೋಗಗಳು ಬಾಲಗ್ರಹ, ಅರಿವೆ ಮಟ್ಟದೋಷ ಹೊಟ್ಟೆ ದೊಡ್ಡದಾಗೋಣ, ಕೋಡಿಗೆಮ್ಮು, ಮೈ ಹೊರಬೀಳೋಣ, ಮತ್ತು ಡಾಕ್ಟರಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನಿಂದ ಖಾತ್ರಿಯಿಂದ ಗುಣಬರತದು. ಚೇಳು ವ ಸರ್ಪದಂಶಕ್ಕೆ ತತಕ್ಷಣ ಗುಣಬರುವದು. ೧ ಕಾಲುಶೇರಿ ಬಾಟ್ಲಿ ಒಂದಕ್ಕೆ ೨ ರೂಪಾಯಿ ನಮೂನೆ ಬುದ್ದಿಕ ೫ ಆಣೆ ಟಪಾಲ ಖರ್ಚು ಬೇರೆ. ೮ ಆಣೆಯ ಒಂದೇ ಬಾಟ್ಲಿ ಕಳಿಸಲಾಗದು. ೨ ರೂಪಾಯಿ ಆರ್ಡರ ಬಂದರೆ ಕಳಿಸಲಾಗುದೀತು. ಅದರ ಖರ್ಚು ೬ ಆಣೆ ಚಿಕ್ಕ ಬಾಟ್ಲಿ ಒಂದು ಡಜನ ತಕ್ಕೊಳ್ಳುವವರಿಗೆ ನಾಲ್ಕುಬಾಟ್ಲಿಗಳು ಕಮಿಶನ್ ಸಿಗುತ್ತವೆ. ಖರ್ಚು ೯ ಆಣೆ. ಡಜನದ ಒಳಗಾಗಿ ಹನ್ನೊಂದು ಬಾಟ್ಲಿ ತಕ್ಕೊಂಡರೆ ಕಮಿಶನ್ ಇಲ್ಲ. ವೆಚ್ಚ ೬ ಆಣೆ. ೧ ಕಾಲುಶೇರಿ ಬಾಟ ಒಂದೇಸಾರೆ ಮೂರು ತಕ್ಕೊಳ್ಳುವವರಿಗೆ ಒಂದು ಬಾಟ್ಲಿ ಕಮಿಶನ್ ಸಿಗುತ್ತದೆ. ಖರ್ಚು ೯ ಆಣೆ.ಒಂದು ಎರಡುತಕ್ಕೊಂಡರೆ ಕಮಿಶನಿಲ್ಲ ಖ ೬ ಆ. ಪ್ರಮಾಣ ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ಛಾಪಿಸಿರುತ್ತವೆ. ಪಸಂದಿಪ್ರಕಾರ ಬಾಟ್ಲಿಗೊಳಗಿರುವದು ಈ ಔಷಧವು ಖೋಟಿ ಹೊರಟರೆ ಶಿಲ್ಲಕ ಉಳಿದಮಾಲು ಪರತ ತಕ್ಕೊಂಡು ಅದರ ಬೆಲೆ ವಾಪಸ ಕೊಡುವೆವು. ಈ ಅರ್ಕಶಫಾ ಇಡೀ ಕರ್ನಾಟಕದಲ್ಲೆಲ್ಲಾ ಹೋಗುತ್ತದೆ. ಇದರ ಬಗ್ಗೆ ನಮಗೆ ಬಹಳ ಶಿಫಾರಸ್ ಮಾಡಬೇಕಾಗಿಲ್ಲಾ ತಮ್ಮ ವಿಳಾಸ ಸ್ಪಷ್ಟವಾಗಿ ಅಥವಾ ಇಂಗ್ಲೀಷದಲ್ಲಿ ಪೂರ್ತ ಬರೆದು ಪತ್ರ ಬರೆಯಬೇಕು. ನಮ್ಮ ವಿಳಾಸ:— ಎಚ್. ಎಮ್. ಮುಲ್ಲಾ.

ಸಂತಾಪದ ಅರ್ಕ ಶಫಾಜಿ ಅಥಸಟೋಸ್ಟ ಶಹಾಪುರ (ಬೆಳಗಾವಿ

ಕನ್ನಡ ಬಂಧುಗಳೇ ! ಈ ಸಂಧಿಯನ್ನು ಕಳೆದುಕೊಳ್ಳಬೇಡಿರಿ
ನಿಮ್ಮ ಸಲುವಾಗಿಯೇ ಕನ್ನಡ ನುಡಿಯ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನೇಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಚ್ಚುವದು ಮತ್ತು ಜೋಡಿಸುವದು, ಅವುಗಳೊಳಗಿನ ಕಟ್ಟುಪಟ್ಟ ಮುರಿದ-ಹಾಳಾದ ಭಾಗಗಳ ದುರಸ್ತಿಯನ್ನು ಕಲಿಸುವದು. ಇವೆಲ್ಲವುಗಳನ್ನು ಸ್ವತಃ ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಬೇಗನೆ ಪರೀಕ್ಷೆಯಲ್ಲಿ ಪಾಸಾಗುತ್ತಾರೆ. ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸರ್ವಪ್ರಕಾರದ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಬೇಕಾದಲ್ಲಿ ಲಕ್ಷಣವು ಆಕರ್ಷಕ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳು ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೇ ಬರೆಯಿರಿ ಕೇಳಿರಿ !

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.
ಕೆಸ್ಟ್ಲ ರಸಿನಾರ ಪೇಠ ಜಮಖಂಡಿಕರ ವ ರಾವುಗೆ ಕಟ್ಟಿ

ಅಪರೋಕ್ಷ ಜ್ಞಾನಿಗಳಾದ
ಶ್ರೀ ಪ್ರಾಣೇಶ ವಿಠ್ಠಲ ವಿರಚಿತ
ಶ್ರೀ ಹರಿ ಕೀರ್ತನ ಮಾಲಾ

೧ ಪ್ರಥಮ ಪುಷ್ಪ ಶ್ರೀ ಕೃಷ್ಣ ಲೀಲಾಮೃತ ಬೆಲೆ ೮ ಆಣೆ
೨ ದ್ವಿತೀಯ ಪುಷ್ಪ ಕಾಲಕೆಮ್ಮ ಸ್ತೋತ್ರ
ಯುಕ್ತ ಮುಯ್ಯದ ಪದ ಬೆಲೆ ೮ ಆಣೆ
೩ ತೃತೀಯ ಪುಷ್ಪ ಕನ್ನಡ ವಾಯುಸ್ತುತಿ ಬೆಲೆ ೫ ಆಣೆ

ಹನುಮಂತರಾವ ವಕೀಲ ಗೋರೆಬಾಳ.
ಪೋಸ್ಟು-ಲಿಂಗಸುಗೂರ ಜಿಲ್ಲಾ ರಾಯಚೂರು (ನಿಜಾಂ)

ಡಾಕ್ಟರ ಒಸಪ್ಪಾ ಸಂಗಪ್ಪಾ ಪಾಟೀಲ.
ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಕಲ್ಲಿನ ಕಲೆಯನ್ನು ಚನ್ನಾಗಿ ಅರಿತಿರುವವು ಹಲ್ಲುಗಳ ನೋವುಗಳನ್ನು ಕಳಿಯುವೆವು, ಕಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು ಹಲ್ಲುಗಳ ಪೂರ್ಣ ಸೆಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

S. U. Narayanacharya & Co.
Chaukhamba Benares City

S.U.N.&CO. BENARES CITY.

ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪೀತಾಂಬರ, ಜರಿಕಣ, ಜರಿಸೀರೆ, ಕಾಶ್ಮೀರಿ ಶಾಲು, ಕರವಾರಿ ರುದ್ರಾಕ್ಷಿ, ಕಸ್ತೂರಿ ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲೆಗಳ ಕ್ಯಾಟಲಾಗ ಕೋರುವವರಿಗೆ ಇನಾಮಾಗಿ ಕಳಿಸಲಾದೀತು.

ವಿಳಾಸ-ಶಿರೋಮಣಿ ನಾರಾಯಣಾಚಾರ್ಯ ಕಂಪನಿ ಚೌಖಾಂಬಾ ಕಾ

ಈ ಪತ್ರಿಕೆಯು ಮಂಗಳವೇಢೆ ಆಚಾರ್ಯ ರಾಘವೇಂದ್ರಾಚಾರ್ಯರ ಪುತ್ರರಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

— ಕೈ. ವಾ. ಶಾಹುಛತ್ರಪತಿಯವರ —

ಆಕಾಶವಾಣಿಯು.

(ಗೋವಿಂದ ಕನಯ ನಾಗನೂರ)

ಪ್ರಶ್ನೆ :— ನೀವು ಕೊಲ್ಲಾಪೂರದ ಛತ್ರಪತಿಗಳೇನು ?

ಉ— ಹೌದು.

ಪ್ರಶ್ನೆ :— ಪ್ರಕೃತದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರ ಚಳವಳಿಯಲ್ಲಿ ತಮ್ಮ ಚಿ|| ಶ್ರೀ ರಾಜಾರಾಮ ಮಹಾರಾಜ ಛತ್ರಪತಿಯು ನೀವು ಹಿಡಿದದಾರಿಯಂತೆಯೇ ನಡೆಯುವರು ಇದಕ್ಕೆ ತಮ್ಮ ಸಂದೇಶ ಏನಾದರೂ ಕೊಡುವಿರೇನು?

ಉ:— ಕೊಡುವೆನು. ಈ ಸಂಧಿಯನ್ನೇ ನಾನು ನೋಡುತ್ತಿದ್ದೆನು.

ಮೊದಲನೆಯದಾಗಿ, ನನ್ನ ಮಗನು ನನ್ನ ದಾರಿಯನ್ನೇ ಹಿಡಿದು ನಡೆಯುತ್ತಿದ್ದದ್ದು ಜನರಿಗೆಗೊತ್ತಿಲ್ಲ ಹಿಂದು ಧರ್ಮದಲ್ಲಿಯಷ್ಟೇ ಅಲ್ಲ. ಯಾವದೇ ಧರ್ಮದಲ್ಲಿಯಾಗಲಿ ಅಥವಾ ಸಮಾಜದಲ್ಲಾಗಲೀ ಪುರೋಹಿತವರ್ಗವು ಹೊಟ್ಟೆಬಾಕ ಅಥವಾ ಅರಿಬುದ್ಧಕವರ್ಗವಿರುವದು. ದಕ್ಷಿಣದಲ್ಲಿನ ಬ್ರಾಹ್ಮಣರಾದರೂ ಅನ್ಯ ಸಮಾಜದವರ ಪ್ರವೃತ್ತಿಯು ನೀಚತನದ ಕಡೆಗೆ ಒಲಿಯುವದೆಂದು ವ್ಯವಹಾರ ಶಾಸ್ತ್ರದಲ್ಲಿಯು ತ್ರಿಕಾಲ ಬಾಧಿತ ಸಿದ್ಧಾಂತವಿದೆ.

ಪರಂಪರಾಗತ ಪುರೋಹಿತತನವು, ಬ್ರಾಹ್ಮಣರಕಡೆಗೇ ನಡೆಯುತ್ತಬಂದದರಿಂದ ಅವರಲ್ಲಿ ಆಪಾದನ ಮತ್ತು ಅಸಭ್ಯತನದ ದುರ್ಗುಣಗಳು ಉತ್ಪನ್ನವಾಗಿರುವವು ನನ್ನ ಅನುಭವದಿಂದಲೂ ಸಂಗತಿಯಾದ್ದರಿಂದ ನಾನು ಬ್ರಾಹ್ಮಣರವಿರುದ್ಧ ಕಲ್ಪಿಸುತ್ತಿದೆನು.

ಇದರಲ್ಲಿ ಬ್ರಾಹ್ಮಣರನ್ನೂ ವರ್ಣಾಶ್ರಮ ಧರ್ಮವನ್ನೂ ನಾಶಮಾಡಬೇಕೆಂಬುವದು ಪ್ರಾಯಶಃ ನನ್ನ ಉದ್ದೇಶವಿಲ್ಲ. ಕೇವಲ ಪರಂಪರಾಗತ ಧಾರ್ಮಿಕ ಶ್ರೇಷ್ಠತ್ವದ ಬಲದಿಂದಲೂ, ಬ್ರಾಹ್ಮಣರ ತಾಯಿತಂದೆಗಳ ಹೊಟ್ಟೆಯಲ್ಲಿ ಜನಿಸಿದ್ದರಿಂದಲೂ, ನಾಲ್ಕು ವರ್ಣಗಳಲ್ಲಿ ಶ್ರೇಷ್ಠತ್ವದ ತಾಮ್ರಪಟವನ್ನು ಪರಮೇಶ್ವರನು ಅವರಿಗೆ ಕೊಟ್ಟಿರುವನೆಂದು ಆ ಬ್ರಾಹ್ಮಣರು ತಮ್ಮ ವಿಹಿತ ಕರ್ತವ್ಯಕರ್ಮವನ್ನು ಮರೆತು, ನಿಜವಾದ ಬ್ರಾಹ್ಮಣತ್ವವನ್ನು ನಾಶ ಮಾಡುತ್ತಿರುವರು.

ಈ ನಾಶದ ಕಡೆಗೆ ವರ್ಣಾಶ್ರಮ ಧರ್ಮದ ತತ್ವದ ಮೇಲೆ ನಿಂತಿರುವ ಸಾಮಾಜಿಕ ವ್ಯವಸ್ಥೆಯು ಸಾಗುತ್ತಾಗಿ ನಡೆಯುತ್ತಿರುವದೆಂದು ಬ್ರಾಹ್ಮಣರ ವಿರುದ್ಧ ನಾನು ಬ್ರಾಹ್ಮಣೇತರರನ್ನು ಬೆಂಗಾವಲಿಸಿದೆನು ನಾನು ಜಾತಿ ಭೇದದ ವಿರುದ್ಧ ಇದ್ದರೂ ವರ್ಣಾಶ್ರಮ ಧರ್ಮದ ವಿರುದ್ಧ ಇಲ್ಲ. ನನಗೆ ಹಿಂದು ಧರ್ಮದಲ್ಲಿ ಅತ್ಯಂತ ಅಭಿಮಾನವಿದೆ ಆದರೆ ಆ ಅಭಿಮಾನವು ಜಾತಿ ವಿಷಯಕ್ಕೆಂದೆ ವಿಸ್ತೃತವಿದೆ ಹಿಂದು ಧರ್ಮವು ಇದೆ. ಜಗತ್ತಿನ ಧರ್ಮವಿದೆ ಜಗತ್ತಿನ ಜನರೆಲ್ಲರೂ ಹಿಂದು ಧರ್ಮವನ್ನು ಸ್ವೀಕರಿಸಿ ವರ್ಣಾಶ್ರಮ ಧರ್ಮದಂತೆ ನಡೆಯಲಿ ಜಗತ್ತಿನಲ್ಲಿಯ ಯಾವದೇ ಧರ್ಮದ ಅಥವಾ ಪಂಥದ ಸ್ತ್ರೀ ಪುರುಷರಿಗೆ ಹಿಂದು ಧರ್ಮದ ಮಹಾದ್ವಾರವು ಯಾವಾಗಲೂ ತೆರೆದಿಡಲಿ ಧಾರ್ಮಿಕ ಮತ್ತು ಸಾಮಾಜಿಕ ವ್ಯವಹಾರದಲ್ಲಿಯ ಭೇದ ತೀರಿ ಸಾಮಾಜಿಕ ಮತ್ತು ಧಾರ್ಮಿಕಸ್ಥಿತಿಯಲ್ಲಿ ಸರಿ ಪಡಿಸಿಕೊಳ್ಳಬೇಕು ಈ ತರದ ಮತವು ನನ್ನದು ಇದೆ.

ಈ ಕಾರ್ಯವು ಸತ್ಯಶೋಧಕ ಸಮಾಜದವರಿಂದ ಆಗುವದೆಂದು ತಿಳಿದು ಅವರ ಕಡೆಗೆ ಮೊದಲು ಒಲಿದೆನು ಆದರೆ ಈ ಚಳವಳಿಯು ಆ ದೂರದರ್ಶಕ ಜನರ ಕೈಯೊಳಗೆ ಸೇರಿದ್ದರಿಂದ ವಿಶ್ವಪ್ರೇಮಮೂಲಕ ನಡಿಯದೇ ಜಾತಿ ದ್ವೇಷ ಮೂಲಕವಾಗಿ ನಡಿಯ ಹೊಡಗಿದ್ದು ನೋಡಿ ಆರ್ಯ ಸಮಾಜದವರ ಕಡೆಗೆ ಒಲಿದೆನು ಆದರೆ ಆರ್ಯ ಸಮಾಜದವರಲ್ಲಿ ವೈದಿಕ ಕಾಲದಲ್ಲಿ ಹಳೇದು ಇದ್ದಷ್ಟು ಒಳ್ಳೇದು ಈ ಮಾತಿನ ಹಟದ ಅತಿರೇಕವಾದದರಿಂದ ವಿಶ್ವ ಧರ್ಮದ ಮಾನ್ಯತೆಯು ಈ ಸಮಾಜಕ್ಕೆ ಆಗುವದಿಲ್ಲ ನನ್ನ ಇರುವಿಕೆಯಲ್ಲಿಯೇ ಹಲವರಿಗೆ ನನ್ನ ಚಳವಳಿಯು ಯಥಾರ್ಥ ಸ್ವರೂಪದ್ದಾಗಿ ಕಾಣಿಸಿತು ಮತ್ತು ನನ್ನ ಪಶ್ಚಾತ ಅದರಂತೆಯೇ ಕಾಣುತ್ತದೆ ಆದರೆ ಇದಕ್ಕೆ ಉಪಾಯವಿಲ್ಲ ಹುಟ್ಟಿದಲ್ಲಿಯ ರೋಗ ತಿನೆಯುವಾಗ್ಯೆ ರೋಗಿಗೆ ನೋವೆನಿಸಿ ಬಿಸ್ಸು ಕ್ರಿಯೆ ಕೂ ವಿಕಾರದಸಿಗೆ ಹೆಸರು ಡುವದು ಸ್ವಾಭಾವಿಕವೇ ಸರಿ.

ಸದ್ಯಕ್ಕೆ ಬ್ರಾಹ್ಮಣ ಬ್ರಾಹ್ಮಣೇತರ ಚಳವಳಿಯೆಂದರೆ ನಾನು ಯಾವ ಪ್ರತಿಕೂಲಸ್ಥಿತಿಯನ್ನು ನಾಶಮಾಡುವದಕ್ಕೆ ಹೆಣಗಾಡುತ್ತಿದ್ದೆನೋ ಆ ಪ್ರತಿಕೂಲತೆಯು ಗರ್ಭ ಧಾರಣಮಾಡುವ ಚಾಳ್ವಸೀ ಗರ್ಭಿಣಿಯಂತಾಗಿ ನನಗೆ ತೋರುತ್ತಲಿದೆ.

ಸೂಚನೆ :—ಇದು ವಾಸ್ತವಿಕವಾದ ನಾಟಕೀಯ ಸಿರಪ್ಸಂಪ್ರದಾಯದಲ್ಲಿ " ಪ್ಲಾಂಚೆಟ್ " ಸಹಾಯದಿಂದ ಬರೆದ ಲೇಖನದ ಆಧಾರದಿಂದ ಬರೆದುದು

ನೋಟೀಸು

ಕೆಳಗೆ ಸಹಿ ಮಾಡುವ ಶಂಕರಪ್ಪಾ ತಂದೆ ಕಮ್ಮಣಪ್ಪ ಚಾಮುಂಡಿ ಸಾಕಿನ ಇನಾಂ ಗ್ರಾಮ ಗಣಿ ತಾ|| ಬಾಗೆವಾಡಿ ಇವರ ಕಡೆಯಿಂದ ನೋಟೀಸ ಕೊಡುವದರಲ್ಲಿ ಬರುತ್ತದೆಲ್ಲಾ

ನನ್ನ ಮಾಸ ಹಿರೇ ಮಗಾ ಬಸಪ್ಪಾ ಶಂಕರಪ್ಪಾ ಚಾಮುಂಡಿ ಸಾಕಿನ ಇನಾಂ ಗ್ರಾಮ ಗಣಿ ಹಳ್ಳಿ ವಸ್ತಿ ಕೆಲವು ಕಾಲ ಉಡಾಳ ಜನರ ಸಂಗತಿ ಬಿದ್ದು ಘಟಿಂಗಿತನಕ್ಕೆ ಹಚ್ಚಿ ಬಿಟ್ಟಿರ ತಾನೆ ಇದರಿಂದ ಬೇರೆ ಜನರ ಹತ್ತಿರ ಅಜಮಾಸ (೭೫೦) ರುಪಾಯಿ ಸಾಲ ಮಾಡಿದ್ದು ಅದನ್ನು ನಾವು ತೀರಿಸುತ್ತೇವೆ ಇನ್ನು ಮುಂದೆ ಇವನಿಗೆ ಸಾಲ ವಗೈರೆ ಯಾರಾದರೂ ಕೊಡಬಾರದು ಕೊಟ್ಟರೆ ಅವನು ಮಾಡಿದ ಸಾಲಕ್ಕೆ ನಮ್ಮ ಸ್ವತ್ತು ಅಗಲಿ ಜವಾಬದಾರಿ ಯಾವದೂ ಹಾಕ್ರವಿಲ್ಲ. ಈ ಅವನ ಸಾಲ ನಾವು (೭೫೦) ರು ತೀರಿಸಿದ್ದರಲ್ಲಿ ಸದ್ರಿಯವನು ನನ್ನ ಆಸ್ತಿಯಲ್ಲಿ ತನಗೆ ಬರತಕ್ಕ ಪಾಲು ವಗೈರೆ ಸಿಕಾಲಿ ಮಾಡಿಕೊಂಡಿರುತ್ತಾನೆ ಅವನಿಗೆ ನನ್ನ ಆಸ್ತಿಯಲ್ಲಿ ಇನ್ನು ಮುಂದೆ ಏನೂ ಪಾಲ ವಗೈರೆ ಕೊಡುವದು ಇರುವದಿಲ್ಲ ಇನ್ನು ಮುಂದೆ ಯಾರೂ ಸಾಲ ಕೊಡಬಾರದು. ಕೊಟ್ಟರೆ ನಾವು ಯಾವ ರೀತಿಯಿಂದಲೂ ಜವಾಬದಾರರಿರುವದಿಲ್ಲ ಅಂತಾ ಕೊಟ್ಟ ನೋಟೀಸ ಸಹಿ ತಾರೀಖು ೧೪ ಜನವರಿ ೧೯೨೯

ಶಂಕರಪ್ಪಾ ದ್ಯಾಮು

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆ ಮಾಡಿರಿ ! ತ್ವರೆ ಮಾಡಿ.

ಮೋಟಾರ ಡ್ರಾಯುವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯ್ವಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಶ ಹಿಂದುಸ್ತಾನದ ಸರಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ ವಿಶೇಷ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರ.

ಪತ್ತಾ:—ದಿ ಪಾಪ್ಯುಲರ ಮೋಟಾರ ಡ್ರಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೧ ಬುಧವಾರ ಪೇಠ ಜುನಿ ತಪಕೀರಗಲ್ಲಿ, ಪುಣೆ ಸಿಟಿ.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿಸಿ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಣೀ, ಜೀರ್ಣಜ್ವರ, ಅಗ್ನಿಮಾಂಧ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಚಾರಗಳೂ, ನಾಶ ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು.) ಇದರಿಂದ ಮೈಯಲ್ಲಿಯ ಗರಮಿಯ ಎಲ್ಲಾ ತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೇ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೨-೦, ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯು ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ. ವಿಳಾಸ:—

ಎಸ್. ಬಿ ಕದಮ್ ಆಣ್ಡ ಸನ್ಸ್.

ಮು. ಪೋಸ್ಟ ನಿಪ್ಪಾಣಿ (ಜಿ ಬೆಳಗಾಂವ.)

೧,೪೨,೦೦,೦೦೦

ರೂಪಾಯಿಗಳು!

ಪರದೇಶಗಳಿಂದ ತರಿಸಲ್ಪಟ್ಟ ಸಾಬೂನುಗಳಿಗೋಸ್ಕರ ಪ್ರತಿವರುಷವೂ ಒಂದುಕೋಟಿ ನಾಲ್ವತ್ತೆರಡು ಲಕ್ಷರೂಪಾಯಿಗಳನ್ನು ನಮ್ಮ ದೇಶದಿಂದ ಪರದೇಶಕ್ಕೆ ತೆರುತ್ತಿದ್ದೇವೆ ಮಹಾಜನಗಳೆಲ್ಲರೂ ಒಕ್ಕಟ್ಟಾಗಿ ಸಂಕಲ್ಪಮಾಡಿದರೆ ತಾನೇ ಈ ಹಣವನ್ನು ನಮ್ಮ ದೇಶದಲ್ಲಿ ಉಳಿಸಿಕೊಳ್ಳಬಹುದು. ಸ್ವದೇಶದ ಸಾಬೂನನ್ನು ಬಿಟ್ಟು ಪರದೇಶದ ಸಾಬೂನನ್ನು ಕೊಳ್ಳುವ ಪ್ರತಿಯೊಬ್ಬ ವಿದ್ಯಾವಂತನೂ ಅನ್ಯ ದೇಶದ ಕೈಗಾರಿಕೆಗಳಿಗೆ ಉಪಕಾರವಮಾಡಿ, ಸ್ವದೇಶದ ಕೈಗಾರಿಕೆಗಳಿಗೆ ಅಪಕಾರವಮಾಡುತ್ತಾನೆ. ಪ್ರತಿಯೊಬ್ಬ ದೇಶಬಾಂಧವನೂ ಸ್ವದೇಶೀ ಮಾಲುಗಳನ್ನೇ ಕೊಳ್ಳಲಿ. ಮೈಸೂರು ಗವರ್ನಮೆಂಟ ಸೋಪ್ ಫ್ಯಾಕ್ಟರಿಯಲ್ಲಿ ಸರ್ವಗ್ರಾಹ್ಯವಾದ ಉತ್ತಮವಾದ ಸಾಬೂನುಗಳನ್ನು ತಯಾರುಮಾಡುತ್ತಾರೆ. ನಾವು ತಯಾರುಮಾಡುವ ಶ್ರೀಗಂಧ ಪರಿಮಳವುಳ್ಳ ಸಾಬೂನೊಂದನ್ನು ಕೊಂಡು ತಾವೇ ಪರೀಕ್ಷೆಮಾಡಿನೋಡಿರಿ. ತಮಗೆ ನಮ್ಮ ಸಾಬೂನುಗಳು ಸಿಗಲಸಾಧ್ಯವಾದಲ್ಲಿ ದಯವಿಟ್ಟು ನಮಗೆ ಪತ್ರವೊಂದನ್ನು ಬರೆದರೆ, ತಾವು ಇಚ್ಛಿಸತಕ್ಕ ಅಂಗಡಿಯಲ್ಲಿಯೇ ನಮ್ಮ ಮಾಲುಗಳ ತಮಗೆ ದೊರೆಯುವಂತೆ ಏರ್ಪಡಿಸಿಕೊಡುತ್ತೇವೆ

ಗೌರ್ನಮೆಂಟ ಸೋಪ್ ಫ್ಯಾಕ್ಟರಿ

ಬೆಂಗಳೂರು.

ರ ನಂ. ಬಿ. ೧೯೪೭ ವಾ ಚಂದಾ ೧–೧೪–೦ ಮಾತ್ರ

ಕನ್ನಡಿಗ.

(ಇದರಲ್ಲಿ ಕನ್ನಡ ನಾಡಿನ ... ಸಮಾಪಿಸ್ಟವಾಗಿ)

... — ...

ಸಂಪಾದಕರು— ಬಾಗಲಕೋಟೆ ದಾಜಿರಾಯರ ಮುಖ್ಯ ... ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ಪೌಷ್ಯ ಬಹುಳ ೧೦ ಶಕೆ ೧೮೬೮ ತಾ|| ೨೭-೧-೧೯೪೭. | ಸಂಚಿಕೆ ೪೨

ಸಂಪಾದಕರ ಭೂಮಿ

(೩೦)

ನನ್ನ ಮನಸಿನ ಮೋಜಮಾಡಿ ಕಟ್ಟಿದೆನಾನು ।
ನಿನ್ನ ಬೆಸನವ ಮಾಡಿದಂಥ ಮುಕ್ಕಳ ಗೂಡು ।
... ಚಿನ್ನ ಸೋಜಿಗದಿಯ ನೊಂದು ಚಿನ್ನದಯಾತ್ರದಲ್ಲಿ ।
ನನ್ನ ಬೇಸವು ನಿನ್ನ ವಿಲಾಸನಕಾಗಿ ।
ಕನ್ನಡ ಕಲ್ಲಾಗಿ ನಿಕ್ಷಗಲು ಸಿದ್ಧನಿದೆ ।
ನನ್ನ ... ನಿನ್ನ ಗಂಧವನು ... ಗಂಧವಹವೆಂದು ತಿಳಿಯಿ ।

—ಅಂಬಿಕಾತನಯದತ್ತ

ಬಾಗಲಕೋಟೆಯು ಕನ್ನಡದ ಕೇಂದ್ರವು. ಹಿಂದಿನ ಕಾಲದಲ್ಲಿ ಕನ್ನಡ ನಾಡಿನ ವೈಭವದ ಸೀಮೆಯಾಗಿದ್ದುದರಿಂದ ಅದರ ಬಗ್ಗೆ ಹೆಚ್ಚಿಗೆ ಬರೆಯುವ ಅವಶ್ಯಕತೆಯಿಲ್ಲ. ಈಗಿನ ಅಲ್ಲಿಯ ಸ್ಥಿತಿಯನ್ನು ನೋಡಿದರೆ, ಮನಸ್ಸು ಖಿನ್ನವಾಗಿ ಕಿಂಕರ್ತವ್ಯತಾಮೂಢವಾಗುತ್ತದೆ. ಮಾತಾಡುವದೆಲ್ಲ ಬಂಬಾಯ ಕನ್ನಡ; ... ನುಡಿಯುವ ... ಸರಸವಾದ ಕನ್ನಡವೇ ... ಗಳಲ್ಲಿ ತೆಲುಗಿನ ಅಭ್ಯಾಸ. ಅಲ್ಲಿಯ ಬಾಲೆಯ ಹುಡುಗರಿಗೆ ಕನ್ನಡವನ್ನು ಓದಲು ಸಹ ಬರುವದಿಲ್ಲ. ಈ ಸ್ಥಿತಿಯು ಹೀಗೆಯೇ ಉಳಿಯಬಂದರೆ, ಹೊಸಪೇಟೆಯಾದರೂ ಕನ್ನಡಿಗರ ಕೈಬಿಡುವದು. ಇನ್ನೂ ಸಮಯದ, ಎಳಕವಿದೆ. ಈಗಿನಿಂದಲೇ ಮುಂದಾಳುಗಳು ಪ್ರಯತ್ನಗಳನ್ನು ಮಾಡತಕ್ಕದ್ದು. ಕೈಮೀರಿ ಹೋದಮೇಲೆ ಅತ್ತರೂ ಇಲ್ಲ ಕರೆದರೂ ಇಲ್ಲ. ಕನ್ನಡ ನಾಡಿನ ಬಗ್ಗೆ ತನುಮನಧನಗಳನ್ನು ನೀಡುವ ಔದಾರ್ಯಶಾಲಿಗಳು ಯಾರೂ ಇಲ್ಲವೇ? ಒಂದು ಲಂಗೋಟಿಯನ್ನು ಧರಿಸಿ, ಕರ್ನಾಟಕದಲ್ಲೆಲ್ಲ ಸಂಚಾರಮಾಡುತ್ತ ಏಕೀಕರಣದ ಭಾವನೆಯನ್ನುಂಟು ಮಾಡುವ ಮಹಾತ್ಮನು ಯಾವನೂ ಇಲ್ಲವೇ? ಕನ್ನಡಿಗರು ಕೈಯಲ್ಲಿ ಬಳೆಯನ್ನಿಟ್ಟುಕೊಂಡಿರುವರೇ? ಈ ಕುರುಡತನಕ್ಕೆ ಕೊನೆಯಿಲ್ಲದಂತಾಯಿತಲ್ಲವೇ? ಸ್ವೈಸದ ರಾಟಿಯು ಇನ್ನೂ ನಿಮ್ಮ ಕೈಯಲ್ಲಿದೆ. ಅದನ್ನು ಯೋಗ್ಯ ರೀತಿಯಿಂದ ನಿಮ್ಮೆಡೆಗೆ ತಿರುಗಿಸಿಕೊಳ್ಳಿರಿ! ನಿಶ್ಚಿತ ತಪ್ಪಿತೆಂದರೆ, ಅಂಥ ತಪ್ಪಿನ ಆಳವಾದ ಕೊಳ್ಳದಲ್ಲೇ—

ಕೊಲ್ಲಾಪುರದ ಹೆಜ್ಜೆಗಳು ನಮ್ಮ ಕನ್ನಡಿಗರಿಗೆ ಮಾದರಿಯಾಗಬಾರದೇ? ಪ್ರತಿಯೊಂದು ಪ್ರಾಂತವು ತನ್ನ ಹಿತ, ತನ್ನ ನುಡಿಯ ಹಿತ ಕಾಯ್ವೇ ಮೊದಲಾದವುಗಳ ಬಗ್ಗೆ ಎಚ್ಚರಿಕೆಯಿಂದ ಕೆಲಸಮಾಡುತ್ತಲಿವೆ. ಕನ್ನಡ ನಾಡು ಮಾತ್ರ ಇನ್ನೂ ಘೋರವಾದ ನಿದ್ರೆಯಲ್ಲಿಯೇ ಬಿದ್ದಾಗಿ ಹೋಗಿದೆ. ಆಂಧ್ರರಿಗೆ ಪ್ರತ್ಯೇಕವಾಗಿ ಭಾಷಾವಾರ ಪ್ರಾಂತವನ್ನು ಕೊಡಬೇಕೆಂದು ಒಂದು ಗೊತ್ತುವಳಿಯು ಮದ್ರಾಸ ನ್ಯಾಯ ವಿಧಾಯಕ ಸಭೆಯಲ್ಲಿ ... ಆಂಧ್ರರು ಒಟ್ಟಾಗಿ ಒಂದೇ ಗುರಿಯಿಂದ ಹೇಗೆ ಕೆಲಸ ಮಾಡುತ್ತಿರುವರೆಂಬುದನ್ನು ಕನ್ನಡಿಗರು ನೋಡಿಕೊಳ್ಳಲಿ. ಕರ್ನಾಟಕದ ಏಕೀಕರಣ ಸಭೆಯು ಏನು ಮಾಡುತ್ತಿರುವದು? ಕನ್ನಡಿಯಲ್ಲಿ ನಿಮ್ಮ ಮುಖವು ನಿಮಗೆ ತೋರುವದಿಲ್ಲವೋ? ಕರ್ನಾಟಕದ ಕೌನ್ಸಿಲರರೇ, ನೀವು ಎಚ್ಚತ್ತಿರುವಿರೇ? ನೀವು ... ಎಚ್ಚರುವದಾದರೂ ಎಷ್ಟು? ಕುಂಭಕರ್ಣನ ನಿದ್ರೆಗಿಂತಲೂ ನಿಮ್ಮ ನಿದ್ರೆಯು ಬಲವಾಗಿದೆ. ಆದದ್ದಾಯಿತು. ಇನ್ನು ಮುಂದಾದರೂ ... ಮಾತೃಯಾದ ನಿಮ್ಮ ತಾಯಿಯ ಕಡೆಗೆ ತಿರುಗಿ ಆಕೆಯ ಕಂಬನಿಯ ಮೊರೆಗೆ ಎಚ್ಚರುಳ್ಳವರಾಗಿರಿ!

ವೀರಶೈವ ವಿದ್ಯಾಲಯವೊಂದು ಇದೇ ಜಿಲ್ಲೆಯಲ್ಲಿಯ ಬಾಗೇವಾಡಿ ತಾಲೂಕಿನ ... ಯಲ್ಲಿ ತೀವ್ರವಾಗಿಯೇ ಸ್ಥಾಪಿತವಾಗುವದು. ಸ್ವಾಮಿಗಳು ಮಂಡಿ ಶಮಪ್ರಧಾನವಾದ ... ಸಮೀಪ ಪ್ರಾಚೀನ ಅರ್ವಾಚೀನಗಳ ಮೇಳದ ಪ್ರಕಟನೆಯಲ್ಲಿ ಶಿಕ್ಷಣದ ಸಾಮಾನ್ಯ ಸ್ವರೂಪವನ್ನಾದರೂ ನಿರೂಪಿಸಿದ್ದಾರೆ. ಕನ್ನಡ ನಾಲ್ಕನೇಯ ತರಗತಿಯಲ್ಲಿ ಉತ್ತೀರ್ಣನಾದ ಅಥವಾ ಅಷ್ಟು ವಿದ್ಯಾಭ್ಯಾಸವಾದ ವಿದ್ಯಾರ್ಥಿಯನ್ನೇ ವಿದ್ಯಾಲಯದಲ್ಲಿ ಸೇರಿಸಿಕೊಳ್ಳುವದು. ಅಲ್ಲಿ ಕೃಷಿವರ್ಗ ವಾಣಿಜ್ಯವರ್ಗ ಉಪದೇಶಕವರ್ಗ ಅಧಿಕಾರಿವರ್ಗ ಹೀಗೆ ವರ್ಗಗಳನ್ನು ಕಲ್ಪಿಸಿರುವರು. ಈ ವಿದ್ಯಾಲಯವು ಹೊಸತರದ್ದಾಗುವದು. ಪುಸ್ತಕ ಜ್ಞಾನವನ್ನು ಮಾಡಿಕೊಡುವ ವಿದ್ಯಾಲಯಗಳು ನಮಗೆ ಈಗ ಬೇಕಿಲ್ಲ. ವ್ಯವಹಾರಕ್ಕೆ ಉಪಯುಕ್ತವಾಗಿ ನಮ್ಮ ಮತ್ತು ನಮ್ಮ ನಾಡಿನ ಹಿತವನ್ನುಂಟುಮಾಡುವ ವಿದ್ಯಾಲಯಗಳು ನಮಗೆ ಬೇಕು. ಆಂಗ್ಲಭಾಷೆಯನ್ನಷ್ಟೇ ಓದಿದ ವೀರಶೈವನು ಹಸ್ತಕೌಶಲ್ಯದ ಕೆಲಸಕ್ಕೆ ಒಪ್ಪುವದಿಲ್ಲ. ಅಂಥ ಕೆಲಸಗಳನ್ನು ಮಾಡುವದರಿಂದ ತಮ್ಮ ಸುಶಿಕ್ಷಿತತನಕ್ಕೆ ಕಲಂಕ ತಗಲುವದೆಂದು ಅವರ ಭಾವನೆಯಾಗಿಹೋಗಿದೆ. ಇಂಥವರ ಬಗ್ಗೆ ... ಈ ವಿದ್ಯಾಲಯವು ... ಪ್ರತಿಯೊಬ್ಬ ವಿದ್ಯಾರ್ಥಿಯು ವಿದ್ಯಾಲಯದ ... ದಲ್ಲಿಯೇ ಇರತಕ್ಕದ್ದು. ಅವನು ಬ್ರಹ್ಮಚಾರಿಯಾ

ಗಿರಬೇಕು. ಪ್ರತಿ ಹೊಬ್ಬ ವಿದ್ಯಾರ್ಥಿಗೆ ೨೦೦ ರೂ ವೆಚ್ಚವು ತಗಲುವದು. ಪಂಚಮಸಾಲಿಯವರು ತಮ್ಮ ಸಮಾಜದ ಏಳ್ಗೆಗಾಗಿ ಶತಮುಖವಾಗಿ ಹೆಣಗುತ್ತಲಿರುವದು ಸತ್ಯ. ನಮ್ಮ ಜಾತ್ಯಾಭಿಮಾನಿ ಬಂಧುಗಳು ಕಣ್ಣು ತೆರೆದು ನೋಡುತ್ತಿರುವರಿಲ್ಲವಲ್ಲ!

ಬಾಗಲಕೋಟೆಯ ಬಾಜಾರವು ಬಹಳ ಇಕ್ಕಟ್ಟಾಗಿದ್ದು ಮೋಟಾರು ದಿನ್ನದಲ್ಲಿಯೂ ಅಲ್ಲಿ ಓಡಾಡುವುದು ದುಸ್ತರವಾಗುತ್ತಿದ್ದದ್ದರಿಂದ, ಬಾಗಲಕೋಟೆಯ ಶಹರ ವಿಸ್ತಾರಮಾಡುವದಕ್ಕೆ ಡಾಕ ಬಂಗಲೆದಿಂದ ಸ್ಟೇಶನ್ನದ ಬಾಜೂಕ್ಕೆ ಇದ್ದ ಸ್ಥಳದಲ್ಲಿ ಮಾರ್ಕೆಟ ಬಜಾರ ಮನೆ ಮುಂತಾದವುಗಳು ಕಟ್ಟಬಹುದೆಂದು ಈಚೆಗೆ ನಿರ್ಣಯವಾಗಿದೆ. ಆದರೆ ಅಲ್ಲಿ ನೀರಿನ ಸೌಕರ್ಯವಿಲ್ಲದ್ದರಿಂದ ಜನರು ಅಲ್ಲಿ ವಾಸಮಾಡಲಿಕ್ಕೆ ಅನುಮಾನಮಾಡುತ್ತಿರುವರು. ನೀರಿನ ಸೌಕರ್ಯವನ್ನು ಮ್ಯುನಿಸಿಪಾಲಿಟಿಯವರು ಮಾಡತಕ್ಕದ್ದಾಗಿದೆ. ಇತ್ತಕಡೆಗೆ ಮ್ಯುನಿಸಿಪಾಲಿಟಿಯವರು ಲಕ್ಷಗೊಡಬೇಕು ಮತ್ತು ಸರಕಾರದವರು ಶೀಘ್ರವಾಗಿ ಈ ಕೆಲಸವನ್ನು ಮ್ಯುನಿಸಿಪಾಲಿಟಿಯವರು ಮಾಡುವಂತೆ ಏರ್ಪಾಡಮಾಡಬೇಕು.

ತೃತೀಯ ಕರ್ನಾಟಕ ಆಯುರ್ವೇದೀಯ ಸಮ್ಮೇಲನವು ಬೆಂಗಳೂರಿನಲ್ಲಿ ನಿಶ್ಚಯವಾದಂತೆ ಈಮೊದಲೇ ವಿಜಾಪುರದಲ್ಲಿ ಜರಿಗುಬೇಕಾಗಿತ್ತು. ಆದರೆ ವಿಜಾಪುರದಲ್ಲಿ ಪ್ಲೇಗವು ಹೆಚ್ಚು ಪ್ರಾರಂಭಿಸಿದ್ದರಿಂದ ಈ ಕಾರ್ಯವು ಈವರೆಗೂ ನಿಂತುಹೋಗಿತ್ತು. ವಿಜಾಪುರದ ಮಹಾಜನರ ಸಭೆಯು ತಾರೀಖು ೧೫ನೇ ಜನವರಿ ದಿವ ರಾವಬಹಾದ್ದೂರ ರಾಘವೇಂದ್ರರಾವ ಕೆಂಭಾವಿಯವರ ಅಧ್ಯಕ್ಷತೆಯಲ್ಲಿ ಸೇರಿ ತಾತ್ಕಾಲಿಕ ಸ್ವಾಗತಮಂಡಲವು ಸ್ಥಾಪಿಸಲ್ಪಟ್ಟಿದೆ. ಸಮ್ಮೇಲನವು ಮಾರ್ಚ ತಿಂಗಳಲ್ಲಿ ಮಾಡುವದು ನಿಶ್ಚಿತವಾಗಿರುತ್ತದೆ. ಈ ರೀತಿಯಾದ ಸಮ್ಮೇಲನಗಳು ನಡೆಯುವದರಿಂದ ಆಯುರ್ವೇದದ ಪುನರುಜ್ಜೀವನ ಉಂಟಾಗಿ ಸಾಂಪತ್ತಿಕ ಅಭಿವೃದ್ಧಿಯಾಗುವದು ಯಾಕಂದರೆ ಔಷಧಗಳಿಗಾಗಿ ಪರದೇಶಕ್ಕೆ ಹೋಗುವ ಸಂಪತ್ತಿಯು ಇಲ್ಲಿಯೇ ನಿಲ್ಲುವದು. ಆರ್ಯ ಔಷಧಿಗಳು ಅಗ್ಗವಾಗಿ ಸಿಗುವವು. ಇದರಿಂದ ಬಡಬಗ್ಗರಿಗೆ ಹೆಚ್ಚು ಸೌಕರ್ಯವಾಗುವದು. ವನಸ್ಪತಿ ಔಷಧಗಳ ಪ್ರಸಾರವಾಗುವದರಿಂದ ಹಳ್ಳಿಯ ಜನರಿಗೆ ತಮ್ಮಲ್ಲಿ ಸುಲಭವಾಗಿ ಸಿಗುವ ವನಸ್ಪತಿಗಳಿಂದ ರೋಗಮುಕ್ತರಾಗಲು ಸಹಾಯವಾಗುವದು. ಇಂಥ ಸಮ್ಮೇಲದ ಕಾರ್ಯಕ್ಕೆ ನಮ್ಮ ವಿಜಾಪುರ ಜಿಲ್ಹೆಯ ಮಹಾಜನಗಳು ಸ್ವಹಸ್ತ ಪರಹಸ್ತಗಳಿಂದ ಸಹಾಯಮಾಡಿ ಪ್ರೋತ್ಸಾಹವನ್ನುಂಟುಮಾಡಬೇಕಾಗಿ ನಮ್ಮ ಕೋರಿಕೆ.

ಬಾಗಲಕೋಟೆಯ ವೀರಶೈವ ತರುಣ ಸಂಘದವರು ಬಾಗಲಕೋಟೆ ತಾಲೂಕಿನ ಎಲ್ಲ ಹಳ್ಳಿಗಳಲ್ಲಿಯೂ ತಿರುಗಾಡಿ ಮಳೆ ಬೆಳೆಗಳ ನಿಜವಾದ ಸ್ಥಿತಿಗತಿಗಳನ್ನು ಕಂಡು ಹಿಡಿದು ಸರಕಾರದವರಿಗೆ ತಿಳಿಸತಕ್ಕವರಿರುವದನ್ನು ನೋಡಿ ನಮಗೆ ಸಂತೋಷವೆನಿಸುತ್ತದೆ. ಲೋಕೋಪಕಾರವಾದ ಈ ಸ್ತುತ್ಯ ಕಾರ್ಯವನ್ನು ಕೈಕೊಂಡ ಈ ಸಭೆಯವರಿಗೆ ನಾವು ಅಭಿನಂದಿಸದೆ ಇರಲಾರೆವು. ನಮ್ಮ ವಿಜಾಪುರ ಜಿಲ್ಹೆಯಲ್ಲಿ ಅನೇಕ ವೀರಶೈವ ತರುಣ ಸಂಘಗಳಿರುವವಲ್ಲವೇ! ಅವು ದಯವಿಟ್ಟು ಬಾಗಲಕೋಟೆಯ ತರುಣರಂತೆ ಈ ಕಾರ್ಯವನ್ನು ಕೈಕೊಂಡರೆ ಹೆಚ್ಚು ಹಿತವಾದೀತು.

ಪುಸ್ತಕ ಪರಿಚಯ.

ಸ್ವೀಕಾರ.

ಬೆಂಗಳೂರು ಚಿಕ್ಕಪೇಟೆಯಲ್ಲಿರುವ ಎನ್. ಎಮ್. ಮುಷ್ಟಿಮೂನ ಮತ್ತು ಸನ್ಸ ಕಂಪನಿಯವರಿಂದ ಪ್ರಕಟಿಸಲ್ಪಟ್ಟ ಕ್ಯಾಲೆಂಡರುಗಳು ನಮ್ಮ ಕೈಸೇರಿದವು. ಕ್ಯಾಲೆಂಡರವು ಚನ್ನಾಗಿರುತ್ತದೆ.

ವನೌಷಧಿ ಪ್ರಕಾಶಿಕೆ [೧ನೇ ಭಾಗ] ವೈದ್ಯಸಿಂಧು ಗ್ರಂಥಮಾಲಿಕೆಯ ೨೪ನೇ ಗ್ರಂಥವಿದು. ಬರೆದವರು.— **ವೈದ್ಯ ಪಂಚಾನನ ವ್ಹಿ. ಡಿ. ಪಂಡಿತ ಅ. ವಿ. ಸ. ಸ. ಭಾ ಮಸ** ರವರು ಬೆಲೆ ೦—೧—೦

ಇದು ವನಸ್ಪತಿಗಳ ಗುಣಧರ್ಮಗಳನ್ನೂ ಅವುಗಳನ್ನು ಪ್ರಯೋಗಿಸುವ ಕ್ರಮವನ್ನೂ ಬರೆದೊಂದು ಹೊತ್ತಿಗೆ. ಇದರಲ್ಲಿ ಅಲ್ಲಲ್ಲಿ ಚಿಕಿತ್ಸೆಯು ಕೊಡಲ್ಪಟ್ಟಿದೆ. ಪುಸ್ತಕದ ಕೊನೆಯಲ್ಲಿ ವನಸ್ಪತಿಗಳ ಚಿತ್ರಗಳನ್ನು ಹಾಕಿರುತ್ತಾರೆ ಪ್ರತಿಯೊಬ್ಬನು ತಮ್ಮ ಸಂಗ್ರಹದಲ್ಲಿ ಇಡಲು ಯೋಗ್ಯವಾಗಿದೆ. ಆದರೆ ಔಷಧಗಳ ಉಪಯೋಗವನ್ನು ಹೇಳುವಾಗ ಒಮಳ ಕಡೆಗೆ ಪ್ರಮಾಣ (ಅಳತೆ ತೂಕ ಇತ್ಯಾದಿ)ಗಳನ್ನು ಹೇಳಿಲ್ಲ ಆದದರಿಂದ ಉಪಯೋಗಿಸುವದು ಕಠಿಣ. ಉಪಯುಕ್ತವಾದ ಸಂಗತಿಗಳಿದ್ದರೂ ಉಪಯೋಗಿಸಲು ತಿಳಿಯದ್ದರಿಂದ ಒರಿಗೈಯಿಂದ ರಣವನ್ನು ತುಳಿದ ಹೀರನಂತೆ ನಿರುತ್ಸಾಹವಾಗಬೇಕಾಗುತ್ತದೆ. ಕೊನೆಯಲ್ಲಿ ಮೋಡಿಸಿರುವ ವನಸ್ಪತಿ ಚಿತ್ರಗಳು ಸರಿಯಾಗಿ ಬೋಧೆಯಾಗುವಂತೆ ಇಲ್ಲ. ಎರಡನೇ ಭಾಗದಲ್ಲಿ ಚಿತ್ರಗಳ ವಿಷಯಕ್ಕೂ ಔಷಧಿಗಳ ಪ್ರಮಾಣಗಳ ವಿಷಯಕ್ಕೂ ಹೆಚ್ಚು ಪರಿಶ್ರಮತೆಗೆದುಕೊಂಡದಾದರೆ ಅವರ ಶ್ರಮವು ಸಾರ್ಥಕವಾಗುವದಲ್ಲದೆ ಎಲ್ಲ ಜನರಿಗೂ ಉಪಯೋಗಬೀಳುವ ಪುಸ್ತಕವನ್ನು ಪಂಡಿತರವರು ಪೂರೈಸಿಕೊಟ್ಟಿದ್ದಕ್ಕಾಗಿ ಸಮಾಜಕ್ಕೊಂದು ಉಪಕಾರವಾದಂತಾಗುವದು. ಅವಶ್ಯವಾಗಿ ಸಂಗ್ರಹಿಸುವ ಇಂಥ ಪುಸ್ತಕಗಳ ಮುದ್ರಣಕ್ಕೆ ಒಳ್ಳೇ ಕಾಗದಗಳನ್ನು ಉಪಯೋಗಿಸುವದು ಹೆಚ್ಚು ಹಿತಕರವು. ಕಾ.

ಜಗತ್ಪಾವನ.

(ಬೆಂಗಳೂರ ಪಟ್ಟಣ.)

ಇದೊಂದು 'ಕುರುಬರ' ಹಿತವನ್ನು ಸಮಗ್ರವಾಗಿ ಸಂರಕ್ಷಿಸಿ ಅಭಿವೃದ್ಧಿಗೊಳಿಸಲು ಹೊರಟ ಮಾಸ ಪತ್ರಿಕೆಯು. 'ಕುರುಬರ'ಂದೊಡನೆ ಕುರುಬ ಸಮಾಜಕ್ಕಷ್ಟೇ ಅನುಕೂಲವಾಗಿ 'ಕುರುಬೇತರ' ಸಮಾಜಕ್ಕೆ ವಿರುದ್ಧವಾದ ಮಾಸಪತ್ರಿಕೆಯೆಂದು ಯಾರೂ ಭಾವಿಸಕೂಡದು. ಈ ಪತ್ರಿಕೆಯ ಆಶಯವು ಬಹಳ ಉದಾರವಾದುದು ಇರುತ್ತದೆ. 'ಮಮತೆಯು ಸಮತೆಯಲ್ಲಿ ಪರಿಣಮಿಸಬೇಕೆಂಬುದೇ ಇದರ ಗುರಿಯು.' ಜಾತಿ-ಮಾತ್ಸರ್ಯದ ವಿಷವು ತೀವ್ರವಾಗಿ ಹರಡುತ್ತಲಿರುವ ಈ ಕಾಲದಲ್ಲಿ, ಸಕಲರ ಪ್ರೇಮ ಮೊದಲಾದವುಗಳನ್ನು ಉಪದೇಶಿಸುತ್ತ ಸಂಚರಿಸುವ ಈ ಮಾಸಪತ್ರಿಕೆಯನ್ನೆಷ್ಟು ಬಣ್ಣಿಸಿದರೂ ಕಡಿಮೆಯೇ. ಇದಕ್ಕೆ "ಜಗತ್ಪಾವನ"ವೆಂಬ ಹೆಸರು ಯಥಾರ್ಥವಿದೆಯೆಂದು ನಮಗೆ ತೋರುತ್ತದೆ. ಸಂಪಾದಕರಾದ ಎಸ್. ಎಸ್. ಲಿಂಗಪ್ಪನವರು ಉಚ್ಚ ವಾತಾವರಣದಲ್ಲಿ ವಿಹರಿಸುವ ಧ್ಯೇಯವಾದಿಗಳಲ್ಲೊಬ್ಬರಾಗಿದ್ದಾರೆ. ನಮ್ಮ ಮಾತಿನ ಸ್ಪಷ್ಟೀಕರಣಕ್ಕಾಗಿ, ಇದರಲ್ಲಿಯ ಕೆಲವೊಂದು ಭಾಗವನ್ನು ಕೊಡುತ್ತೇವೆ. "ಪ್ರತಿಯೊಂದು ಜಾತಿಯವರೂ ಎಲ್ಲರಲ್ಲಿಯೂ ಹಿತೇಚ್ಛುಗಳಾಗಿರುತ್ತ, ಯಾರನ್ನೂ ದ್ವೇಷಿಸದೆ, ಯಾರಿಗೂ ಅಪಕಾರಮಾಡದೆ— ತಮ್ಮ ಜಿವನಗಳ

ನ್ನ ಸ್ವಧರ್ಮಾನುಷ್ಠಾನಗಳಲ್ಲಿಯೇ ಕಳೆಯುತ್ತಾ ಬರಬೇಕು” “ನನ್ನ ವಟ್ಟಿಗೆ ನಾವು ಸುಖವಾಗಿರೋಣ.” ವೆಂದು ಪರರಲ್ಲಿ ದ್ರೋಹವನ್ನೆ ಸಗಲಾರಂಭಿಸುವುದು ನ್ಯಾಯವಾದದ್ದಲ್ಲ; ಯಾಕಂದರೆ ನಮ್ಮ ಕ್ಷೇಮವು ಸರ್ವರ ಕ್ಷೇಮದಲ್ಲಿಯೇ ಅನುಸ್ಯೂತನಾಗಿರುವದೆಂಬುದರ ಗೂಢ ತತ್ವವನ್ನು ಚನ್ನಾಗಿ ಮನನಮಾಡಿಕೊಳ್ಳಬೇಕು.” ಇವರ ಧ್ಯೇಯಕ್ಕೆ— ಶುದ್ಧ ಭಾವದ ಜೋಡಿರಲು ಜಯವಾಗುವದು ನಿಶ್ಚಿತ.

[ಇವರಲ್ಲಿ ಕೆಲವು ವಾದಗ್ರಸ್ತ ವಿಷಯಗಳಿವೆ; ಅವುಗಳಿಂದ ಧ್ಯೇಯಕ್ಕೇನೂ ಕುಂದು ಬರುವಂತಿಲ್ಲ ಆದ್ದರಿಂದ ಅವುಗಳನ್ನೆ ಶ್ರವುನು ನಮಗೆ ಅಪ್ರಸ್ತುತವಾಗಿ ತೋರಿದ್ದರಿಂದ ಬಿಟ್ಟಿದ್ದೇವೆ]

ಲಿವರಿನ ಗಡಿಯಾರಗಳು.

ಲಿವರಿನ ಕೈ ಗಡಿಯಾರ ರೂ. ೯.

ಲಿವರಿನ ಕಿಸೆಯೊಳಗಿಡುವ ಗಡಿಯಾರ ರೂ. ೭.

ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಮೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವುದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ತಾಳುವವು. ಬೆಲೆ ಕಡಿಮೆಯೆಂದು ಅಂಜುವ ಕಾರಣವಿಲ್ಲ. ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ. ಆದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ.

ಲಿಟೋ ವಾಚ ಕಂ. (ಇಂಡಿಯಾ.) ಬಾಂಬೆ. ಕೆ. ೪.

ಬಿ, ಎಂ. ಹೂಗಾರ ಕೃತ

ತಾಳಪ್ರಸ್ತಾರಸಾಗರ.

೧ ನೇ ಭಾಗ.

(ಮೃದಂಗ ವಿದ್ಯಾವಿನೋದ.)

ಈ ಗ್ರಂಥದಲ್ಲಿ ತಾಳಗಳ ಉತ್ಪತ್ತಿ, ಜಾತಿಭೇದದಿಂದ ಹುಟ್ಟಿದ ೩೫ ತಾಳಗಳನ್ನು ಹಿಡಿಯುವ ಕ್ರಮ, ತಬಲಾದಲ್ಲಿ ಅಕರಗಳನ್ನು ನುಡಿಸುವ ಕ್ರಮ, (ಸಚಿತ್ರ) ವರಿ, ಕಾಲು, ಮುಕ್ಕಾಲು ತಾಳಗಳನ್ನೂ ಮುಗುತಾಯಗಳನ್ನೂ ಮಾಡುವ ರೀತಿ, ಮರ್ಮ ತಾಳ ಲಕ್ಷಣ ಗುಣೆವಾದ್ಯಶಬ್ದಗಳ ವಿಚಾರ, ಎರಡೂ ತಾಳಗಳನ್ನು ಗತಿಭೇದದಿಂದ ಎರಡೂ ಕೈಗಳಿಂದ ಒಮ್ಮೆಲೆ ನಡಿಸುವ ಕ್ರಮ, ಇತ್ಯಾದ್ಯನೇಕ ರಹಸ್ಯವಾದ ವಿಷಯಗಳು ಸ್ಪಷ್ಟವಾಗಿರುವವು ಗ್ರಂಥದ ಬಗ್ಗೆ ಅನೇಕ ವಿದ್ವಾಂಸರು ತಮ್ಮ ಸದಭಿಪ್ರಾಯವನ್ನು ವ್ಯಕ್ತಪಡಿಸಿರುವರು, ಈ ಗ್ರಂಥವು ಹತ್ತರಿದ್ದರೆ ಒಬ್ಬ ಸಂಗೀತ ವಿದ್ವಾಂಸನೇ ಹತ್ತರಿದ್ದಂತಾಗಿ ಬೋಧಕರ ಸಹಾಯವೇ ಬೇಕಾಗಲಾರದು.

ಈ ಪುಸ್ತಕದ ಬೆಲೆ ೨—೦—೦ ರೂಪಾಯಿ. ಕಾಲ ವಿಲಂಬವಾದರೆ ಪುಸ್ತಕಗಳು ದೊರೆಯಲಾರವು. ಕೆಳಗಿನ ವಿಳಾಸಕ್ಕೆ ಬರೆದು ಬೇಕಾದವರು ತರಿಸಿಕೊಳ್ಳಬೇಕು.

ವಿಳಾಸ:- **ಬಸಪ್ಪಾ ಮಲ್ಲಪ್ಪಾ ಹೂಗಾರ.**

ಸಾ॥ ಚಿಂಚಲಿ. ತಾ. ಗದಗ.

ಪೋ॥ ಮುಳಗುಂದ. ಜಿಲ್ಲಾ ಧಾರವಾಡ.

ಯಾವದೇ { ಆಕಾರದ / ನಕ್ಷೆಯ / ಸಂಬರದ } ಗಡಿಯಾರವನ್ನು

ಬರೆ, ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ. ೧೪, **ಅರ್ಧ ಬೆಲೆ ರೂ. ೭**



ಬರೇ ಒಂದು ತಿಂಗಳ ಒಗ್ಗೆ ನಾವು ಈ ದಂಪನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ಸಂಬರದ ಕೈಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ **ಬೆಲೆ ರೂ. ೭**

ಅಪ್ಪನೇ ಇದೆ; ಈಗಲೇ ಬೇಡಿರಿ.

ಪತ್ತೆ:— ಸ್ವಿಸ **ಹೌಸ** ಪಿ. **ಬಿ. ೫೦೮.** ಪಿ. **ಟಿ.** ಮದ್ರಾಸ

ಅತ್ಯಲ್ಪವಿದೆ ! ಉಚಿತ !

ಕೇವಲ ಉಚಿತ **ಕೇವಲ ಉಚಿತ**



“ ತಾರಾ ” ಲೀವರ್ ರಜಿಸ್ಟರ್ಡ್ ಪೋಕೆಟ್ ವಾಚ್ ೧೮ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚುಹೊಡೆದಿರುವರು. **ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ “ ಸಿ ” ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ.** ಇದೊಂದು ಅಪೂರ್ವ **ಕಾಣಿಕೆ.** ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು “ ತಾರಾ ” ಲೀವರ್ ರಜಿಸ್ಟರ್ಡ್ ೧೮ ಕೆರೆಟ್ ರೋಲ್ಡ್ ಗೋಲ್ಡಿನ ಪೋಕೆಟ್ ವಾಚ್ ಗಡಿಯಾರಗಳಿಗೆ **ಕೂಡಿ** ಬರೇ **ರೂಪಾಯಿ ೫**

ಕ್ಯಾಪ್ಟನ್ ವಾಚ್ ಕಂ , ಪಿ ಬಿ. ೩೩೫ ಮದ್ರಾಸ

ಕನ್ನಡ ನುಡಿಯ ಹೊಸ ಒಲವುಗಳು.

(ಬರಹ ೨)

ಜಗತ್ತಿನಲ್ಲಿಯ ಎಲ್ಲ ಚಟುವಟಿಕೆಗಳಿಗೂ ನುಡಿಯು ಒಂದಿಲ್ಲೊಂದು ರೂಪದಲ್ಲಿ ಮೂಲಾಧಾರ. ಒಂದು ಜನಾಂಗದ ಹಾಳುಬಾಳುಗಳು ಅದನ್ನೇ ನಂಬಿಕೊಂಡಿರುತ್ತವೆ. ನುಡಿಯು ಒಡಲೊಳಗೆ ಶತ್ರುಗಳ ಶಸ್ತ್ರಾಸ್ತ್ರ ಜ್ವಾಲೆಯನ್ನು ಅಣಕಿಸಿ ನೊಂದಿಸುವ ಸುಂದರವಾದ ಶಕ್ತಿಯಿರುತ್ತದೆ. ಒಂದೇ ಜನಾಂಗದಲ್ಲಿಯ ಜನತೆನ್ನೆಲ್ಲ ಒಂದು ಕಟ್ಟಾಗಿ ಕಟ್ಟುವ ಜೀವಂತವಾದ ಸಂಘಟನೆಯ ಬೀಜವು ಅದರೊಳಗೆಯೇ, ಭೇದದ ಕೃಂಬಿಕೆಗಳನ್ನು ಕಡಿದು ಜೀದದ ಕತ್ತಲೆಯನ್ನು ಕತ್ತರಿ, ಸ್ನೇಹದ ಹಾದಿಯಲ್ಲಿ ಎಳೆದಾಡಲು ಅನುವು ಮಾಡಿಕೊಡುವ ಇಂದ್ರಜಾಲವು ಅದರಲ್ಲಿಯೇ! ಮರವನ್ನು ಚಿವನ್ನಾಗಿ ಮಾಡುವುದಾದರೂ ತ್ರಾಸವೇ. ಒಳಗಡಿಯಲ್ಲಿಯೇ ದೇವರ ಗುಡಿಯಿರುವುದು. ಇವರ ಗುಟ್ಟನ್ನರಿತುಕೊಂಡು ನುಡಿಯು ಆಳಾಗಿ ದುಡಿಯುವವರು ಮಹರ್ಷಿಗಳಲ್ಲವೇ?

ಜಗತ್ತಿನಲ್ಲಿಯ ಒಡವೆಗಳೆಲ್ಲ ಒದಗಿದಾದವುಗಳು ನುಡಿಯು ಮಾತು ಹೀಗಲ್ಲ. ಅದು ದೇವನ ಉಸುರು. ಜೀವಿನ ಒಸರಿನೊಳಗಿಂದ ಬಂದುದು. ಬೆಳಕಿನ ಮೊಳೆಯಿಂದ ಬೆಳೆದು ಬಲಿಯತಕ್ಕುದು. ಬೆಳಕೇ ಅದರ ಉಸಿರು, ಬೆಳಕೇ ಅದರ ಉಸಿರು. ಅದರ ಮೂಲ ಸ್ವರೂಪವು ಅಭಿನ್ನವಾದುದು. ಹೊರಗಣ ಹೊದಿಕೆಯು, ರೂಪಾಂತರವನ್ನು ಹೊಂದಿ, ಹೊಂದುತ್ತಿದ್ದ ಹೊತ್ತುಗೊತ್ತುಗಳ ಅಳವಿನೊಳಗಿದ್ದ ಜೀವವಾಣಿಯನ್ನು, ಅವುಗಳನ್ನು ಮಿಕ್ಕಿನಿಂತ ಅಚಲಾನಂದ ಸ್ವರೂಪಿಯಾದ ದೇವವಾಣಿಯನ್ನಾಗಿ ಮಾಡುವುದೇ ಬರಹಗಾರರ ಹಂಬಲ.

ಜಗತ್ತಿನಲ್ಲಿರುವವರಿಗೆ ಉಪಾಧಿಯ ಬಾಧೆಯು ಯಾರಿಗೂ ತಪ್ಪಿಲ್ಲ. ಕವಿಯೇ ಇರಲಿ ಕತೆಗಾರನೇ ಇರಲಿ ಬಾಹ್ಯಪ್ರಪಂಚದ ತೊಡಕನ್ನು ತಪ್ಪಿಸಿ ಹೋಗಲಾರನು. ಉಪಾಧಿಗಳ ಸುಳಿಯಲ್ಲಿ ಸಿಕ್ಕು ಅವುಗಳ ಬಿಗಿಯನ್ನು ಜಗ್ಗಿ, ಅವನ ವಾಣಿಯು ಸ್ವತಂತ್ರವಾಗಿ ಮೇಲೇಳುತ್ತದೆ. ಅಷ್ಟೇಕೆ ಅನಂತವಾದ ವಿಶ್ವಜೀವನದ ಒಡಲೊಳಗಿಂದಲೇ ಅವನ ನುಡಿಯು ಒಡೆಯುತ್ತದೆ. ಆದುದರಿಂದ ಜೀವನದ ಒಲವು ಸಲಿವುಗಳು ಜೀವ-ಚಂದಗಳು ನುಡಿಯ ಶುದ್ಧವಾದ ಅಂತರಂಗದಲ್ಲಿ ಪಡಿಮೂಡುವವು.

"Change less change is the eternal condition of life" ಎಂಬಂತೆ ಸ್ಥಿತ್ಯಂತರ ಹೊಂದುವುದು ಪ್ರಕೃತಿಯ ಶಾಶ್ವತವಾದ ನಿಯಮವು. ಈ ಮಾತು ಮನೋಲೋಕಕ್ಕಾದರೂ ಸರಿ ಹೋಗುವುದು. ಮನದ ಮಾತುಗಳೆಲ್ಲ ನುಡಿಯ ಬಗೆಯಲ್ಲಿ ಬರುವವು. ಆದ್ದರಿಂದ ಮನದ ಒಲವು ಬದಲಾದಂತೆ ನುಡಿಯ ಒಲವುಗಳು ಬದಲಾಗುವವು. ಕನ್ನಡ ಬರಹದ ಈಗಿನ ಸ್ಥಿತಿಯನ್ನು ನೋಡಿದರೆ, ಮೇಲ್ಕಾಣಿಸಿದ ಸಂಗತಿಯು ಸತ್ಯತೆಯು ಸ್ಪಷ್ಟವಾಗಿ ತೋರುವುದು. ಬಂಗಾಲಿ ಭಾಷೆಯ ಸುಳುವಿನಿಂದಲೂ, ಆಂಗ್ಲ ಸಂಸ್ಕೃತಿಯ ಸಂಪರ್ಕದಿಂದಲೂ, ಅಂತರಂಗ ಸ್ವಾತಂತ್ರ್ಯದೇವತೆಯ ಪ್ರೇರಣೆಯಿಂದಲೂ ಕನ್ನಡಿಗರ ಮನಸ್ಸು ಹೊಸವಾದ ದಿಕ್ಕಿನಲ್ಲಿ ಸಂಚರಿಸುತ್ತಿದೆ. ಮೊದಲಿನ ಗೊಡ್ಡು ಕಟ್ಟುಮುರಿದುಕೊಂಡು ಕೂಡುವುದು ಕನ್ನಡ ಹಕ್ಕಿಗೆ ಬೇಕಿಲ್ಲ. ರೆಕ್ಕೆಗಳನ್ನು ಧಾರಾಳವಾಗಿ ಹರಹಿ, ಸೌಂದರ್ಯದೇವಿಯ ಸಾಕ್ಷಾತ್ಕಾರದ ಸವಿಯಾದ ಹಾಡುಗಳನ್ನು ಹಾಡುತ್ತ ಸ್ವತಂತ್ರವಾದ ವಾತಾವರಣದಲ್ಲಿ ವಿಹರಿಸಲೆಳಸುತ್ತಿದೆ. ಅದು 'ನಿರಂತರ ನಿರ್ಝರ'ತೆಯ ಪದವಿಯಲ್ಲಿ ಅಡಿಯನ್ನಿಡಲು ಉದ್ಯುಕ್ತವಾಗಿದೆ. ಹಗಲಿನ ಹಣ್ಣನ್ನುಂಡು, ಶಾಂತಿಯ ಕಾಂತಿಯಲ್ಲಿ ಕಳೆಗೊಂಡು ಅಚ್ಯುತನಂತೆ ಮೆರೆಯಬೇಕೆಂದೆನ್ನುತ್ತದೆ.

ಈಗಿನ ಸಾಹಿತ್ಯದಲ್ಲಿ ಒಡಮೂಡಿರುವ ಒಲವುಗಳನ್ನು ಸ್ಪಷ್ಟವಾಗಿ ಗುರುತಿಸಬೇಕಾದರೆ ಹಿಂದಿನ ಸಾಹಿತ್ಯದ ಹಜ್ಜೆಗಳನ್ನು ನೋಡಬೇಕಲ್ಲವೇ? ಹಿಂದಿನದು ಮುಂದಿನದಕ್ಕೆ ದಾರಿಯಾಗಿಯೇ ಇರುವುದು. ಹಿಂದಿನ ಸಾಹಿತ್ಯದ ವೈಶಿಷ್ಟ್ಯಗಳನ್ನರಿತ ಹೊರತು, ಮುಂದಿನ ಸಾಹಿತ್ಯದ ಗುಣವಿಶೇಷಗಳು ಹೊಳೆದು ದೃಷ್ಟಿಗೋಚರವಾಗವು. ಕನ್ನಡ ನಾಡಿನ ಪ್ರಾಚೀನ ಭಾಂಡಾರವು ಅಪಾರವಾದುದೆಂಬುದು ನಿಜ. ಅದರಲ್ಲಿ ವೈಚಿತ್ರ್ಯಕ್ಕೆ ಕೊರತೆಯಿರುವುದಿಲ್ಲ. ವಿಷಯದಲ್ಲಿಯೂ ಭಿನ್ನತೆಯ ಅಭಾವ, ಭಾಷೆಯಲ್ಲಿಯೂ ಬಹುಮಟ್ಟಿಗೆ ಅದೇ ಮಾತು. ಕಾವ್ಯದ ವಿಷಯಗಳು ಅದೇ ಪುರಾಣಗಳೇ. ಯಾರು ಬರೆದರೂ, ಅವುಗಳೇ ಪುನರಾವೃತ್ತವಾಗುವವು. ಪ್ರಾಚೀನಭಾಷೆಯಲ್ಲಿ ಗಂಭೀರಭಾವವಿದೆ, ಶಬ್ದ ಸಾಮರ್ಥ್ಯವಿದೆ. ಅರ್ಥಾಲಂಕಾರಗಳಿಗೆ ಕಡಿಮೆಯಿಲ್ಲ, ಬೆಡಗಿನ ಬಣ್ಣನೆಗಳಿಗೆ ಕೊರತೆಯಿಲ್ಲ. ಆದರೆ ಜೀವನದ ಗಂಧವು ಮಾತ್ರ ಅಪರೂಪ. ಅಂದರೆ ಚಿತ್ರ ಕಾವ್ಯಗಳು ಬೇಕಾದಷ್ಟು. ಭಾವದ ಹೂವುಗಳ ಸುಗ್ಗಿಯು ವಿರಳ. ಪುರಂದರ, ಕನಕ ಮೊದಲಾದವರು ಭಕ್ತಿಭಾವದ ಹಾಡನ್ನು ಹಿಡಿದಿದ್ದಾರೆ. ಅದನ್ನು ಎಲ್ಲರೂ ಒಪ್ಪಬೇಕು. ಆದರೆ ಅವರಾದರೂ ಒಂದು ಬಗೆಯ ಪುರಾಣ ಪದ್ಧತಿಯನ್ನೇ ಅನುಸರಿಸಿದ್ದಾರೆ. ಅರವಿಂದ, ರವೀಂದ್ರ, ಈಟ್ಸ 'ಏ, ಈ,' ಗಳಲ್ಲಿಯ ಭಾವೋದ್ರೇಕತ್ವವೂ, ರಸೋತ್ಪಾದಕತ್ವವೂ ಅವರಲ್ಲಿಲ್ಲ. ವರ್ಣನಾಂತರಗಳ ಹೆಚ್ಚು, ಒಳಗೆ ಹೃತ್ಕಮಲಕ್ಕೆ ತಾಗಿ ಅದರ ಭಿನ್ನಭಿನ್ನ ಎಸಳುಗಳಂತಿರುವ ನಾನಾತರದ ಭಾವಗಳನ್ನು ಅರಳಿಸುವ ಸಾಮರ್ಥ್ಯವು ದಾಸರ ಹಾಡುಗಳಲ್ಲಿಲ್ಲವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಓದುಗರನ್ನು ಭಾವದ ಗರಿಗಳಮೇಲೆ ಕೂಡಿ ಒಯ್ಯುವ ಶಕ್ತಿಯು ಎಲ್ಲಿ ನೋಡಿದರೂ ಕಡಿಮೆಯೇ ಎಂದು ಹೇಳಬಹುದು. ಜೀವನವು ಬಹಳ ವ್ಯತಿಕರಗಳಿಂದ ಜೀವಿಸತಕ್ಕದ್ದು. ಅದರಲ್ಲಿಯ ತೊಡಕುಗಳೂ ಹೋರಾಟಗಳೂ ಹೃದಯಂಗಮವಾದವುಗಳು. ಜೀವನದ ಸನ್ನಿವೇಶಗಳಿಲ್ಲದ ಬರಹವು ಜೀವನವಿಡಿಯನ್ನು ಹಿಡಿಯಲಾರದು. ಪ್ರಾಚೀನಕಾಲದ ಕಾವ್ಯಗಳಲ್ಲಿ ಜೀವನದ ಸ್ವಾನುಭೂತವಾದ ಅಂಶಗಳಿಲ್ಲದುದರಿಂದಲೇ ಅವು ಈಗಿನವರಿಗೆ, ನಿರ್ಗಂಧಕುಸುಮಗಳಾಗಿ ತೋರುತ್ತಿವೆ. ಇದರಿಂದ ಅವುಗಳಲ್ಲಿ ಸಾರವಿಲ್ಲೆಂದು ಯಾರೂ ತಿಳಿಯಕೂಡದು.

ಸ್ವಾತಂತ್ರ್ಯದ ಕುಣಿಕೆಯಿಂದ

ಅಗ್ನಿಯ ಅನಾಹುತದಿಂದ ನೊಂದ ಪ್ರದರ್ಶನಗಾರರ ಸಹಾಯಾರ್ಥವಾಗಿ ಬೆಂಗಳೂರಿನ ಅಮೆಚೂರ್ ನಾಟಕ ಮಂಡಳಿಯವರು ಒಂದು ನಾಟಕದ ಉತ್ಪತ್ತಿಯನ್ನು ಜನರಲ್ ಮತ್ತು ಲೇಡಿ ಸ್ಮಿತ್ ಅವರಿಗೆ ಒಪ್ಪಿಸಿದರು. ಎರಡು ನಾಟಕಗಳ ಉತ್ಪತ್ತಿಯನ್ನು ದಾನ ಮಾಡಿದರು. ಸತ್ಪಾತ್ರ ಪರೀಕ್ಷೆ ದಾನವಾಗಿದ್ದರೆ ನೊಂದ ಪ್ರದರ್ಶನಗಾರರಭಿಪ್ರಾಯ; ಇದರಲ್ಲಿ ಯುಕ್ತಾಯುಕ್ತ ವಿವೇಚನೆಯಿಲ್ಲವೆಂದೇ ಸಾರ್ವಜನಿಕರ ಅಭಿಪ್ರಾಯ.

† † †

ಮಾರ್ಚ ೧೫ನೆಯ ತಾರೀಕಿಗೆ ಬರುವ ಪ್ರಜಾಪ್ರತಿನಿಧಿ ಸಭೆಯ ಆ ನಾವಣೆಗೆ ಉಮೇದವಾರರಾಗಲೇ ತಮ್ಮ ಭಿಕ್ಷಾಪಾತ್ರೆಗೆ ಚೆನ್ನಾಗಿ ತುಳಿಯಿಟ್ಟು ತೊಳೆಯಲಾರಂಭಿಸಿದ್ದಾರೆ. ವೃತ್ತಪತ್ರಿಕೆಗಳ ಪ್ರತಿನಿಧಿಗಳಿಗೆ ಇದು ಬಹಳ ಸಡಗರದ ಕಾಲ....... (ವಿವಿಧ ಕಾರಣಗಳಿಗೆ.. ..) ಈ ನಗರದಿಂದ ಸಭೆಗೆ ನಾಲ್ವರು ಹೋಗಬಹುದು. ಹನ್ನೆರಡು ಮಂದಿ ಹೋಗಲು ಸಿದ್ಧರಾಗಿದ್ದಾರೆ. ಇನ್ನೂ ಎಷ್ಟು ಮಂದಿ ಸಿದ್ಧರಾಗುವರೋ ಕಾಣೆ. ಸರ್ಕಾರದವರು ಪ್ರತಿನಿಧಿಗಳಿಗೆ ಊಟ, ಪ್ರಯಾಣ ವಗೈರೆ ಸೌಕರ್ಯಗಳನ್ನು ಕೊಡುವುದಿಲ್ಲವೆಂದು ಪ್ರಕಟಿಸಿದರೆ.................ಹೇ ದಯಾಳುವಾದ ಭಗವಂತನೇ ಸದ್ಯಃ ಹಾಗೆ ಮಾಡದಿರು!!!

† † †

ನಮ್ಮ ಪುರಪಿತಾಮಹರಿಗೆ (ಮುನಿಸಿಪಲ್ ಸದಸ್ಯರು) ಆಚಾರ್ಯ ಪ್ರಫುಲ್ಲ ಚಂದ್ರರಾಯರವರು ಒಂದು ಮಾನಪತ್ರಕ್ಕೆ ಅರ್ಹರಾಗಿ ಕಂಡುಬರಲಿಲ್ಲ. ಏಪ್ರಿಲ್ ತಿಂಗಳಿಗೆ ಜಗಮಾನ್ಯ ಮಹಾತ್ಮಾಜೀಯವರೇ ಇಲ್ಲಿಗೆ ಬರತಕ್ಕವರಿದ್ದಾರೆ. ಪ್ರಾಯಶಃ ಅವರೂ ಅನರ್ಹರಾಗುವರೋ ಏನೋ? ಯಾರೇ ಅನರ್ಹರಾದರೂ ಜೂಲೈ ತಿಂಗಳಲ್ಲಿ ಇಲ್ಲಿಗೆ ಬಿಜಯಂಗೈಯುವ ವೈಸರಾಯ ಲಾರ್ಡ್ ಇರ್ವಿನ್ ಸಾಹೇಬರು ಅರ್ಹರಾಗಿಯೇ ಆಗುತ್ತಾರೆ. ಕಲಿಮಹಿಮೆಯೆನ್ನುವುದು ಇದಕ್ಕಲ್ಲವೇ?

† . † †

ಪ್ರಾಕ್ತನ ವಿಮರ್ಶ ವಿಚಕ್ಷಣ. ರಾವ್ ಬಹದ್ದೂರ ಶ್ರೀ. ಆರ್. ನರಸಿಂಹಾಚಾರ್ಯರ (ವಿಶ್ವವಿದ್ಯಾಲಯ-ವಿಸ್ತಾರ) ಭಾಷಣಗಳು ಆರಂಭವಾಗಿವೆ. ಇವು ಮೊದಲು ಮೈಸೂರಿನಲ್ಲಿ ನಡೆದವು. ಮೈಸೂರಿನಲ್ಲಿ ಈ ಭಾಷಣಗಳು ನಡಿಯುತ್ತಿರುವಾಗಲೇ "ವಿಶ್ವಕರ್ನಾಟಕ, ಪ್ರಜಾಮಿತ್ರ, ಸಂಪದಭ್ಯುದಯ, ಕನ್ನಡಿಗ" ಪತ್ರಿಕೆಗಳು ಭಾಷಣಗಳು ಕನ್ನಡದಲ್ಲಾಗಬೇಕೆಂದು ಆಶಿಸಿದುವು. ಕನ್ನಡಿಗರೂ ಈ ಸುಧಾರಣೆಗಾಗಿ ಕಾಯುತ್ತಿದ್ದರು. ಬಡ ಕನ್ನಡಿಗರ ಮತ್ತು ಪತ್ರಿಕಾಕರ್ತರ ಆರ್ತಧ್ವನಿಯು ಆಚಾರ್ಯರ ಮತ್ತು ವಿಶ್ವವಿದ್ಯಾನಿಲಯದವರ ಕಿವಿಗಳಿಗೆ ಬೀಳದಿರುವುದು ಆಶ್ಚರ್ಯಕರವಾಗಿದೆ. ಎಷ್ಟಾದರೂ ಮಹೀಶೂರರು.

† † †

ದಿವಾನ್ ಮಿರ್ಜಾ ಸಾಹೇಬರು ತಾವು ಪ್ರವಾಸಿಸುವ ಎಡೆಯಲ್ಲೆಲ್ಲಾ ನಗರಶೃಂಗಾರದ ಪಲ್ಲವಿಯನ್ನು ಹಾಡಹತ್ತಿರುವರು. ನಮ್ಮ ನಗರಿಯ ಶೃಂಗಾರಕ್ಕೆ ಹಣವು ಧಾರಾಕಾರವಾಗಿ ಸುರಿಯಹತ್ತಿರುವುದು. ಪ್ರಜೆಗಳು ಹಳ್ಳಿಗಳ ಸುಧಾರಣೆ, ಗೋಸಂರಕ್ಷಣೆ, ಬಾಲಕರಿಗೆ ಶಾಲೆಗಳು, ನಿರುದ್ಯೋಗ ನಿವಾರಣೆ ಇವುಗಳ ಮಾತೆತ್ತಿದರೆ "ಈಗ ಸರ್ಕಾರದಲ್ಲಿ ಹಣದ ಕೊರತೆಯುಂಟಾಗಿರುವುದು. ಮುಂದೆ ಈ ವಿಷಯವನ್ನು ಸುಮುಖವಾಗಿ ಯೋಚಿಸಲಾಗುತ್ತದೆ." ಎಂದು ಗಂಭೀರವಾಗಿ ಸರ್ಕಾರದವರು ನುಡಿಯುವರು. ವರ್ತುಲಗಳು, ವಿಹಾರಗಳು, ಒಮ್ಮುಖಿಕೆ ದೀಪಗಳು, ಪಾರ್ಕ್ಕು ವೇದಿಕೆಗಳು, ಹೊಸ ಕಟ್ಟಡಗಳು ಇವುಗಳಿಗೆ "ಸರ್ಕಾರದಲ್ಲಿ ಹಣದ ಕೊರತೆಯಿಲ್ಲವೇನೋ" ಬೋರೇಗೌಡ ಇವ್ವಕದ ಅಭಾವ- ಕೊರತೆ ಇವುಗಳಿಷ್ಟೇ ಇರಬೇಕಲ್ಲವೆ??

† † †

ಈ ತಿಂಗಳು ೯ನೇಯ ಭಾನುವಾರದ ದಿವಸ, ಸ್ವಾಮಿ ಶ್ರದ್ಧಾನಂದ ಸನ್ಯಾಸಿಯವರ ಆಕಸ್ಮಿಕನಿಧನದ ಒಗ್ಗೆ ಅನುತಾಪವನ್ನು ಸೂಚಿಸಲು ನೆರೆದಿದ್ದ ಪುರಜನರ ಸಭೆಯಲ್ಲಿ ಸ್ವಾಮಿಗಳ ಗುಣಕಥನಮಾಡುತ್ತಾ ಪೌರ ಸಭೆಯ ಅಧ್ಯಕ್ಷರಾದ ಶ್ರೀ ಅಬ್ದುಸ್ ಖಾನಾಸಾಹೇಬರು ಮೌಲಾನಾ ಮಹಮ್ಮದಅಲ್ಲಿಯವರು ದಿಲ್ಲಿಯಲ್ಲಿ ಹೇಳಿದಂತೆ ಹಿಂದುಗಳೂ ಮುಸಲ್ಮಾನರೂ ಒಂದಾಗಿ ದೇಶಸೇವೆ ಮಾಡ ಹೋಡಬೇಕು. ಸ್ವಾಮಿ ಶ್ರದ್ಧಾನಂದರ ಮೃತಿಯದುಃಖವು ಪ್ರತೀಕಾರವಾಗಿ ಮಹಮ್ಮದೀಯನಪ್ರಾಣತೆಗೆಯುವುದರಲ್ಲಿ ನಿಮಗೆ ಉಪಶಮನವಾಗುವಹಾಗಿದ್ದರೆ ನಾನೂ ಮಹಮ್ಮದೀಯನಂತೆ ಪ್ರಾಣಒಪ್ಪಿಸಲು ಸಿದ್ಧನಿದ್ದೇನೆ. ಎಂದರು ಸಭಿಕರು ಆನಂದ ಪರವಶರಾದರು. ಇದೇನು ಮನೋಸಾಗರದ ಆವೇಶವಾದನುಡಿಯೋ ಅಥವಾ ಉದ್ವೇಗದನುಡಿಯೋ ಎಂದು ನನಗೆ ಕೊಂಚ ಸಂಶಯವುಂಟಾಗಿದೆ. ಶ್ರೀ ಖಾನರವರು ತಾವು ಹೇಳುವುದನ್ನು ಮನಃಪೂರ್ವಕವಾಗಿ ಆಚರಿಸುವವರಿದ್ದರೆ ಬ್ರಾಹ್ಮಣ ಅಬ್ರಾಹ್ಮಣ ಗೊಂದಲಗಳಲ್ಲಿ ಏಕೆ ಬರೆತು ಅಬ್ರಾಹ್ಮಣ ಸಂಗಡ ಮುಖಂಡ"ರೆಂದೆನಿಸಿಕೊಳ್ಳಲು ಹಾತೊರೆಯುತ್ತಿದ್ದರು??

† † †

ಈ ಊರಲ್ಲಿ ಹೊಸದೊಂದು ರಾಜಕೀಯ ಸಂಗಡವು ಸ್ಥಾಪನೆಯಾಗಿದೆ. ಹೆಸರು" ರಾಷ್ಟ್ರೀಯಪ್ರಗತಿಸಂಗಡವೆಂದು" ಧ್ಯೇಯ ಕಾರ್ಯಕ್ರಮಗಳೊಂದೂ ಎವರವಾಗಿ ತಿಳಿಯಬಂದಿಲ್ಲ. ಉತ್ತರ ಹಿಂದುಸ್ಥಾನದ ಸಂಗಡ ಅಪವರ್ತ್ಯತೆಯು ಹುಚ್ಚು ಮೈಸೂರಿನವರಿಗೂ ಹಿಡಿಯಲಾರಂಭಿಸಿರುವುದು ನಾಡಿನ ಪ್ರಗತಿಯ ದೃಷ್ಟಿಯಲ್ಲಿ ಹಿತಕರವಾಗಿಲ್ಲವೆಂದು ಇಲ್ಲಿನರಾಜಕೀಯ ಪಟುಗಳು ಅಭಿಪ್ರಾಯಪಡುತ್ತಾರೆ. ಹೀಗೆ ಹೊಸ ಸಂಗಡಗಳ ಸ್ಥಾಪನೆಯನಾಯಕ ಎಲ್ಲರೂ ಮುಂದಾಳುಗಳಾದರೆ ಇವರ ಅನುಯಾಯಿಗಳಾಗುವವರಾರು? "ಎಲ್ಲರೂ ಮೇನೆಯಮೇಲೆ ಕುಳಿತುಕೊಳ್ಳುವವರಾದರೆ ಮೇನೆಹೊರುವ ಬೋಯಿಗಳಾರು? ಉತ್ತರಃ- ಅನನ್ಯಜ್ಞರಾದ ಬೋರೇಗೌಡರು.

† † †

ಈಬಾರಿ ನ್ಯಾಯವಿಧಾಯಕ ಸಭೆಯ ಚುನಾವಣೆಗೆ, ಹುರುಪಿನ ತರುಣರಿಗೆ ಎದೆಕೊಡಲೋಸುಗ ನಗರ ಪಿತಾಮಹರ್ ಶ್ರೀ. ಕೆ ಸಿ. ಪುಟ್ಟಣ್ಣಶೆಟ್ಟರವರು, ನಿಲ್ಲುವದಿಲ್ಲವೆಂದು ಬಲವಾದ ವದಂತಿಯಿದೆ. ಇದು ನಿಜವಾಗಲೆಂದೇ ಎನ್ನ ಹಾರೈಕೆ. ಇವರಬದಲು ಒಂದುವೇಳೆ ಮುರ್ಶಿಉಲ್ ಮುಲ್ಕ್ ಶ್ರೀ ಮಿರ್ ಹಂಜಾ ಹುಸೇನ್ ಸಾಹೇಬರು ನಿಂತರೆ?... ಅಭ್ಯರ್ಥಿಕೊಡು ಆಕಾಶವಾಣೀ"

† † †

ಮಹಾತ್ಮಾಗಾಂಧಿಯವರು ಇಲ್ಲಿಗೆ ಏಪ್ರಿಲ್ ತಿಂಗಳಲ್ಲಿ ಬರುವವರಿದ್ದಾರಷ್ಟೆ. ಮಹಾತ್ಮರನ್ನು ಆದರಿಸುವದಕ್ಕೆ ಒಂದು ಸ್ವಾಗತ ಮಂಡಳಿಯು ಏರ್ಪಟ್ಟಿವೆ. ಸ್ವಾಗತಮಂಡಳಿಯಲ್ಲಿ ಪಾಶ್ಚಿಮಾತ್ಯ ದಿರಿಸಿನವರೇ ಹೆಚ್ಚುಮಂದಿ ಇರುವುದರ ತಪ್ಪನೆ ನೋಡಬೇಕಾಗಿದೆ. ಸತ್ಕಾರ್ಯಕ್ಕೆ ಕನ್ನಡಿಗರು ಆದಿಗುರುಗಳು ನಮ್ಮ ಸ್ವೀಯರು ಕನ್ನಡಿಗರು ಖಾದಿಯಧಿದೇವತೆಯಾದ ಗಾಂಧಿಮಹಾತ್ಮರಿಗೆ ನಮಿಸಿ ಸತ್ಕಾರಮಾಡುವಂತಿವೆ. ಪ್ರಾಯಶಃ ನಾನಸಭ್ಯದಲ್ಲಿ" ಮಹಾತ್ಮಾಜಿಯವರು, ಇವೆಲ್ಲಿಯವು ಸ್ವಾಮಿಗೆ ಸೊಗಸಾದ ಪಂಟಾಲೂನ್, ಟೈ, ಸರ್ಜ್, ಸೋಫಾ ಇವುಗಳನ್ನು ಬಿಟ್ಟು ಹಾಳು ಆ ಖಾದಿ ಬಾದಿಬಟ್ಟೆಯನ್ನುಟ್ಟು ಯಾಕೆ ತಾಪತ್ರಯಪಡುವಿರಿ" ಎಂದು ಸೂಚಿಸುವರೋ ಏನೋ? ಇದಲಿನೋಡುವ

—"ವಿಶ್ವಭ್ರಾತಾ"

ವರ್ತಮಾನಸಾರ.

ಇಹವೃತ್ತ

ದಿನೇ ದಿನೇ ಚಳಿಯು ಕಡಿಮೆಯಾಗುತ್ತಲೂ ಬಿಸಿಲು ಹೆಚ್ಚುತ್ತಲೂ ನಡೆದಿದೆ

ಹರ್ಷವರ್ಧನ ಸರ್ಕಸಿನವರು ೨೭ ನೇ ತಾರೀಖಿನಿಂದ ತಮ್ಮ ದಿವ್ಯ ಸಾಹಸದ ಆಟಗಳನ್ನು ಆರಂಭಿಸಿದ್ದಾರೆ.

ತಾರೀಖು ೨೬ ನೇ ದಿವಸ ವಿಶ್ವೇಶ್ವರ ತರುಣಸಂಘದವರು ಸಭೆ ಸೇರಿ ಬಂಗಾಲದ ಬವಣೆಗೆ ಸಿಲುಕಿರುವ ರೈತರಕಷ್ಟಗಳನ್ನು ಸರಕಾರಕ್ಕೆ ತಿಳಿಸಲು ಪಳ್ಳಿಗಳ ಬೆಳೆಪತ್ರಿಕೆಯನ್ನು ಬೇಗನೇ ತಯಾರಿಸುವದನ್ನು ಗೊತ್ತುಮಾಡಿದರು. ಮತ್ತು ಖಾದೀಮಾರಾಟದ ಬೆಳವಣಿಗೆಯ ದೃಷ್ಟಿಯಿಂದ ೧೨ ಜನರದೊಂದು ಸಂಘವನ್ನು ಏರ್ಪಡಿಸಿ ಪ್ರತಿಯೊಬ್ಬನಿಂದ ತಿಂಗಳೊಂದಕ್ಕೆ ೨ ರೂಪಾಯಿಗಳಂತೆ ಕೂಡಿಸಿ ೨೪ ರೂಪಾಯಿಗಳ ಖಾದೀ ಅರಿವೆಯನ್ನು ತಿಂಗಳಿಗೆ ಒಬ್ಬನಂತೆ ತೆಗೆದುಕೊಳ್ಳಬೇಕೆಂದು ನಿರ್ಣಯಿಸಿದರು. ಉಳಿದ ಸಂಘಗಳು ಅನುಕರಿಸುವವೋ?

ತೃತೀಯ ಆಯುರ್ವೇದೀಯ ಸಮ್ಮೇಲನದ ಸಹಾಯ ದ್ರವ್ಯಕ್ಕಾಗಿ ಡಾ। ಮಂಗಳವೇಢೇಕರ ಮತ್ತು ಪಂಡಿತ ಅನಂತಾಚಾರ್ಯ ಜಪ ಇವರು ಇಲ್ಲಿಗೆ ಬಂದಿದ್ದಾರೆ ಸಮ್ಮೇಲನದ ಕೆಲಸವು ಭರದಿಂದ ಸಾಗುತ್ತಿದಂತೆ ತೋರುತ್ತದೆ, ಇಲ್ಲಿಯವರು ಯೋಗ್ಯ ಸಹಾಯ ಮಾಡುವರೆಂದು ಆಶಿಸುತ್ತೇವೆ

ಇಲ್ಲಿಯ ಶ್ರೀ. ಕಂಚೀ ಭೀಮಾಚಾರ್ಯರು “ ಕರ್ನಾಟಕ ವೈಭವ ” ಕ್ಕೆ ಗಲಗಲೀ ಪ್ರಕರಣದ ಬಗ್ಗೆ ಕಳಿಸಿದ ಪ್ರತಿಪಕ್ಷದ ಲೇಖನವನ್ನು ‘ ವೈಭವ ’ಕಾರರು ಪ್ರಕಟಿಸುತ್ತೇವೆಂದು ವಚನಕೊಟ್ಟಿದ್ದರೂ ಯಾಕೆ ಪ್ರಸಿದ್ಧಿಸಿಲ್ಲವೆಂದು ಬರೆದ ಒಂದು ಲೇಖನವನ್ನೂ ಮೂಲಲೇಖನವನ್ನೂ ನಮ್ಮೆಡೆಗೆ ಕಳಿಸಿದ್ದಾರೆ. ಒಂದು ಪಕ್ಷದ ಲೇಖನವನ್ನು ಪ್ರಕಟಿಸಿದ ಪತ್ರಿಕೆ ಇನ್ನೊಂದು ಪಕ್ಷದ ಉತ್ತರವನ್ನು ಪ್ರಸಿದ್ಧಿಸಬೇಕು. ಆಶ್ವಾಸನಕೊಟ್ಟಿದ್ದರಂತೂ ಮೊದಲು ಪ್ರಸಿದ್ಧಿಸಬೇಕೆಂದು ನಾವು ‘ವೈಭವ ’ ಕಾರರಿಗೆ ಸೂಚಿಸುತ್ತೇವೆ

ಮುಂಬೈ ಕರ್ನಾಟಕ.

ವನಗೂಳಿಯ ಕೋಟ್ಯಾಳಕರ ಶ್ರೀ. ಬಸವಣ್ಣನವರು ಈಗ ಹೆಟ್ಟಿನ ಕಲಾಕುಶಲರಲ್ಲೊಬ್ಬರು ಸೊಲ್ಲಾಪುರದ ಜಾತ್ರೆಯಲ್ಲಿ ಅವರ ಕಲಾಪ್ರದರ್ಶನವಾಗಿತ್ತು. ಅದರಲ್ಲಿ ಶ್ರೀಯಾಳ ಸತ್ವಪರೀಕ್ಷೆ. ಮತ್ತು ಕೀಚಕ ವಧೆಗೆ ಸಂಬಂಧಿಸಿದ ಏಳೆಂಟು, ತಕ್ಕ ಭಾವದ ತಕ್ಕ ನಿಲುವಿನ ಗೊಂಬೆಗಳು ಕಂಗೊಳಿಸುತ್ತಿದ್ದವು. ಸಂಕ್ರಾಂತಿಯು ನಿಜವಾಗಿಯೂ ಮಹಾರಾಷ್ಟ್ರದಲ್ಲಿ ಕನ್ನಡಿಗರ ಪಾಲಿಗೆ ಅನ್ವರ್ಥಕವಾಗಿ ಪರಿಣಮಿಸಿತು ! ಹುಂಬರಿಂದ ಬಲ್ಲವರ ವರೆಗೆ ಎಲ್ಲರಿಗೂ ಶ್ರೀ ಬಸವಣ್ಣನವರ ಮೂರ್ತಿ ನಿರ್ಮಾಣ ಕಲಾಕೌಶಲ್ಯವು ದಂಗುಬಡಿಸಿತು ! ಜಯ ಕರ್ನಾಟಕ !

ಬಿಜಾಪೂರ ಜಿಲ್ಲೆ ದಕ್ಷಿಣ ಭಾಗದ ಮೆ॥ ಆಸಿಸ್ಟಂಟ ಕಲೆಕ್ಟರರ ಪ್ರವಾಸವು ೨೯ ಜನೇವರಿಯಿಂದ ೧೦ ನೇ ಫೆಬ್ರುವರಿವರೆಗೆ ಮುಕ್ಕಾಂ ೯೧ ರಿಂದ ೧೪ ವರೆಗೆ ಮುದ್ದೇಬಿಹಾಳ ತಾಲೂಕ ಸೈಕ ಹಳ್ಳೂರ

ಬಿಜಾಪೂರ ಜಿಲ್ಲೆಯ ಕಲೆಕ್ಟರರ ಪ್ರವಾಸವು ಜನವರಿ ೨೪ ರಿಂದ ೧-೨-೩೭ ರ ವರೆಗೆ ದೇವರಹಿಪ್ಪರಗಿ ೨ ೨-೩೭ ಬಿಜಾಪೂರ.

ಮೈಸೂರ ಕರ್ನಾಟಕ

ವಿಶ್ವೇಶ್ವರಯ್ಯನವರು ಬೆಲ್ಜಿಯಮ್‌ದಿಂದ ಅಮೇರಿಕೆಗೆ ಹೋಗಿರುವರೆಂದು ಸುದ್ದಿ ಅವರು ಮಾರ್ಚದ ಕೊನೆಯ ವರೆಗೆ ಇಲ್ಲಿಗೆ ಬರುವದಿಲ್ಲ. ಆದ ಕಾರಣ ಕನ್ನಂಬಾಡಿಯ ಕಾಲುವೆಯ ಯೋಜನೆಯು ಮುಂದೆ ಹಾಕಲ್ಪಟ್ಟಿದೆ.

ಮೈಸೂರಲ್ಲಿ ಬಿಡುಗಡೆ ಹೊಂದಿದ ಕೈದಿಗಳ ಸಹಾಯಾರ್ಥವಾಗಿ ಒಂದು ಸಂಘವು ದಿವಾನರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ಚುಂಚನಕಟ್ಟೆಯಲ್ಲಿಯು ರಥೋತ್ಸವದ ಕಾಲಕ್ಕೆ ದನಗಳ ದೊಡ್ಡ ಜಾತ್ರೆಯಾಯಿತು.

ಸರ್ ಚಾರ್ಲ್ಸ ಟೋಡಂಟರವರು ಈ ತಿಂಗಳ ಕೊನೆಗೆ ಬಂದು ಪುನಃ ತಮ್ಮ ಖಾಸಗೀ ಕಾರ್ಯದರ್ಶಿ ಪದವನ್ನು ಸ್ವೀಕರಿಸುವರು.

ವಿಶ್ವವಿದ್ಯಾಲಯದ ಉಪಕುಲಪತಿಯಾದ ಬ್ರಜೇಂದ್ರನಾಥ ಶೀಲರಿಗೆ ಮತ್ತೆ ಮೂರುತಿಂಗಳ ರಜೆಯು ದೊರೆತಿದೆ.

ಹಿಂದುಸ್ಥಾನ.

ಮುಂಬೈ ಇಲಾಖೆಯಲ್ಲಿಯ ಸರಕಾರೀ ಇಂಗ್ಲೀಷ ಕಾಲೇಜಗಳಲ್ಲಿ ಕೆಳಗೆ ಕಾಣಿಸಿದಂತೆ ಪ್ರತಿಯೊಬ್ಬ ವಿದ್ಯಾರ್ಥಿಯ ಒಗ್ಗೆ ಸರಕಾರವು ಪ್ರತಿ ವರ್ಷ ವೆಚ್ಚಮಾಡುತ್ತಲಿದೆ:- ಎಲಿಫಿನ್‌ಸ್ಟನ್ ಕಾಲೇಜ = ೨೯೫; ಗುಜರಾತ ಕಾಲೇಜ ೧೮೪, ಕರ್ನಾಟಕ ಕಾಲೇಜ = ೪೪ ಆದರೆ ಡೆಕ್ಕನ್ ಕಾಲೇಜದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗಾಗಿ ೫೭೫ ರೂ. ವೆಚ್ಚವಾಗುತ್ತದೆ ಆದ್ದರಿಂದ ಈ ಕಾಲೇಜನ್ನು ತೆಗೆದುಹಾಕಬೇಕಾಗಿ ಜನರಮತವಿದೆ ಸರಕಾರವು ಇದಕ್ಕೆ ಒಪ್ಪುವದೋ?

ಬ್ರಿಟಿಶ್ ಪಾರ್ಲಮೆಂಟಿನ ಭಾರತೀಯ ಸಭಾಸದರಾದ ಶ್ರೀ. ಶಕ್ಲಾತವಾಲರವರು ಪತ್ನೀಸಮೇತರಾಗಿ ಹಿಂದುಸ್ಥಾನಕ್ಕೆ ಕಳೆದವಾರದಲ್ಲಿ ಬಂದರು. ಮುಂಬೈಯಲ್ಲಿಳಿದಕೂಡಲೇ ನೆಟ್ಟಗೆ ಚೌಪಾಟಿಗೆ ಹೋಗಿ ಲೋಕಮಾನ್ಯರ ದಹನದ ಪುಣ್ಯಭೂಮಿಗೆ ಪೂಜೆಮಾಡಿದರು! ಇವರು ಭರತಖಂಡದ ಎಲ್ಲ ಮುಖ್ಯನಗರಗಳನ್ನು ಸಂದರ್ಶಿಸುವರು ಇವರು ಭರತಖಂಡಕ್ಕೆ ಹೊರಡುವಾಗ್ಗೆ ವಿಲಾಯತಿಯಲ್ಲಿ ಇವರಿಗೆ ಹಿಂದುಸ್ಥಾನಕ್ಕೆ ಹೋಗಲು “ ಪಾಸಪೋರ್ಟ ” ನ್ನು ಕೊಡಲು ಮುಖ್ಯಮಂತ್ರಿಗಳು ಅಂಜುಬುರುಕರಂತೆ ನಟಿಸಿದರು ಆದರೆ ಶ್ರೀ ಶಕ್ಲಾತವಾಲರವರು ತಮ್ಮ ಧೈರ್ಯದಿಂದ ಪಡೆದುಕೊಂಡರು

ಚೀನದೇಶದಲ್ಲಿದ್ದ ಒಳ್ಳೇ ಭಯಂಕರಸ್ಥಿತಿಯಬಗ್ಗೆ ಸ್ವಾಯಸ ರಾಯರು ೩ ನೇ ತಾರೀಕೂಡಿದ ಹಿಂದೀ ಸಭೆಯಲ್ಲಿ ಮಾತನಾಡಿದರು ಹಿಂದೀ ಜನರ ಒಂದು ಸೈನ್ಯದ ಭಾಗವನ್ನು ಕಳುಹಿಸಲು ಹಿಂದುಸ್ಥಾನ ಸರಕಾರವು ಒಪ್ಪಿದೆಯೆಂದು ಹೇಳಿದರು

ಹಿಂದುಸ್ಥಾನವು ಸರಕಾರಕ್ಕೆ ಬೆದರಿಕೆಯನ್ನು ಹಾಕಿದರೆ ಅವರು ಬೆದರುವದಿಲ್ಲ ಆದರೆ ಜವಾಬದಾರಿಯನ್ನು ಅರಿತುಕೊಂಡು ಸಹಕಾರಿತೆ ಮತ್ತು ಜನಸೇವೆಮಾಡಿದರೆ ಮಾತ್ರ ರಾಜಕೀಯ ಹಕ್ಕುಗಳು ದೊರೆಯುವವೆಂದು ಹೇಳಿದರು

ದಿಲ್ಲಿಯಲ್ಲಿ ಒಬ್ಬ ವ್ಯಾಪಾರಸ್ಥನ ಮನೆಗೆ ದರೋಡೆಯಾಗಿದೆ. ಕಳವುಗಾರರು ಪಿಸ್ತೂಲಧಾರಿಗಳಾಗಿ ಬಂದಿದ್ದರಂತೆ ಶೋಧವು ನಡೆದಿದೆ.

ಪರದೇಶ.

ಶ್ರೀ ಮಲಬಾರಿ ಎಂಬ ಭಾರತೀಯ ಶಾಸ್ತ್ರಜ್ಞರು ೧೪ವರ್ಷಗಳಿಂದ ಲಂಡನ್ನಿನ ‘ರಾಯಲ್ ಫೋಟೋಗ್ರಾಫಿಕ್ ಸೊಸಾಯಟಿ’ಯಲ್ಲಿ ಅಭ್ಯಾಸಿಸಿ, ಬೆಂಕಿ ತಗಲದಂತಹ ಚಿತ್ರಪಟಗಳನ್ನು ಶೋಧಿಸಿದ್ದಾರೆ.

ಸೋಜಿಗದ ಸುದ್ದಿಯು

ಮುಂಬೈಯಲ್ಲಿ “ಬಾಂಬೆ ಗ್ಯಾರೇಜ' ದವರು ೬ ಗಾಲಿಯ ಒಂದು ದೊಡ್ಡ ಮೋಟಾರ ಸಿದ್ಧಪಡಿಸಿದ್ದಾರೆ ಸವಾರರಿಗೆ ಪ್ರವಾಸದಲ್ಲಿ ಅನೇಕ ಬಗೆಯ ಸೌಕರ್ಯಗಳು ದೊರೆಯುವದಿಲ್ಲವಾದ್ದರಿಂದ ಆ ತೊಂದರೆಗಳನ್ನು ದೂರಮಾಡುವದೇ ಇದರ ಉದ್ದೇಶ ಇದರಲ್ಲಿ ಒಟ್ಟು ಲುಮಾನಿ, ರೂಮಕ್ಕಾಗಿ ಮೇಜು, ಪಲಂಗ, ಸ್ನಾನಗೃಹಗಳಿವೆ.

ದಿ ಶಿವಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ
ಲಾಯಿಫ ಅಶ್ಯೂರನ ಕಂ. ಬೆಂಗಳೂರ ಸಿಟಿ.
ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೬ ನೇ ಇಸ್ವಿಯ ಜುಲೈ ೩೧ ನೇ ತಾ|| ದಿವ್ಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ್ ಚೇಅರಮನರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗ್ರಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತುಃ—

(೧) ಎಲ್. ಬಿ ಸಿ ನಂ ೩೪೪. ಮಿ. ಮಹಮ್ಮದ ಯುಸುಫ ಡಿಸ್ಟಿಲೆರಿಗಾರ್ಡ, ನಾರಾಯಣ ಗುಡ ಡಿಸ್ಟಿಲೆರಿ, ಹೈದರಾಬಾದ್ದೆಕನ್ನ ರೂ. ೧೦೦೦

(೨) ಎಲ್. ಬಿ. ಸಿ. ನಂ. ೫೧೮ ಮಿ. ಸೈಯದ್ ಜಹೂರಅಲಿ ಬಿ. ಎ. ಬಿ. ಟಿ. ಶಾಲಾಗಳ ಡಿವಿಜನಲ್ ಇನ್ಸ್ಪೆಕ್ಟರ್ ಔರಂಗಬಾದ ಸಿಟಿ, ನೈಜಾಮ ಇಲಾಖಾ ರೂ. ೧೦೦೦

(೩) ಎಲ್. ಬಿ. ಸಿ. ನಂ. ೨೦೩೯ ಮಿ. ದೇವನ ವಾಸುದೇವನ ನಂಬೂದ್ರಿಪಾದ ಜಮೀನದಾರ ಏಡಪಲ್ಲಿ ಅಲ್ವಾಯಿ ರೂ ೭೦೦

(೪) ಬಾಂಡ ನಂಬರು ೯೭೭೦ ಮಿ. ಶಂಕರಪ್ಪಾ ಬಸಪ್ಪಾ ದೆವನಕೊಂಡ, ಅಕ್ಕಸಾಲೆ ಬೆಡೀಗಾರಗಲ್ಲಿ ಹುಬ್ಬಳ್ಳಿ ರೂ. ೧೦೦೦

(೫) ಬಾಂಡ ನಂಬರು ೧೪೨೦೭ ಮಿ. ಷೇಕ ಬಾಪುಮಿಯಾ ಷೇಕ ಮಹಮ್ಮದ ನಳ ತಯಾರ ಮಾಡುವವರು ೭೧೫ ಭವಾನಿಪೇಟ ಪುನಾ ೧೦೦೦

ಬಿ. ಎನ್. ಆರಾಧ್ಯ
ಚೀಫ ಏಜಂಟ ಹುಬ್ಬಳ್ಳಿ(ಮುಂಬಯಿ ಇಲಾಖಾ.)

ಕಿರ್ಲೋಸ್ಕರ
ಕಬ್ಬಿಣ ನೇಗಿಲುಗಳ

ಹಂಗಾಮು (ಸುಗ್ಗಿ) ಸಮೀಪಿಸಿತು. ಈ ವರ್ಷ ಮಳೆ ಬೆಳೆ ಚನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವುದು. ಕಿರ್ಲೋಸ್ಕರ ನೇಗಿಲು ನಂ. ೧೧, ೯, ೮ ಇವು ಒಕ್ಕಲಿಗರಿಗೆ ಬಹಳೇ ಉಪಯೋಗ ಬೀಳುತ್ತವೆ. ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುತ್ತವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್. } ಕಿರ್ಲೋಸ್ಕರವಾಡಿ ಜಿಲ್ಲೆ ಸತಾರೆ

ಗವ್ಹರ್ನಮೆಂಟಿನಲ್ಲಿ ರಜಿಸ್ಟರ ಮಾಡಲ್ಪಟ್ಟ ಜಗಪ್ರಸಿದ್ಧವಾದ

ಎಲ್ಲ ರೋಗಗಳಿಗೆ ಒಂದೇ ಔಷಧ.
ಅರ್ಕಶಫಾ ಅಥವಾ ಆರೋಗ್ಯ ಬಿಂದು
ಪ್ರವಾಶಿಮಿತ್ರ. ಮೂರ್ತಿಮಂತವೈದ್ಯ

ಇದು ಅರ್ಕವಿದ್ದು ಇದರಲ್ಲಿ ನೀರು ರಸಾಯನ ಕೂಡಿರುವದಿಲ್ಲ. ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ಇದು ಪ್ರಸಿದ್ಧವಾಗಿ ೧೬ ವರ್ಷಗಳು ಆಗುತ್ತ ಬಂದವು ಈವತ್ತಿನವರಿಗೆ ಎರಡು ಲಕ್ಷಗಳವರಿಗೆ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತರ ಬೇಡುವ ಪತ್ರಗಳು ವ್ಹಿ. ಪಿ. ಮಾಡಿದ ದಾಖಲೆಗಳು ಪೋಷ್ಟ ಪಾವತಿಗಳು ಬಾರನಿಸಿ ಬುಕ್ಕುಗಳು ಇರುತ್ತವೆ. ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಸಟೆಯೆಂದು ಸಿದ್ಧ ಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳು ಇನಾಮು ಕೊಡಲ್ಪಡುವವು. ಈ ಔಷಧವು ಅಮೃತಸರಿಯುಳ್ಳದ್ದು ಇರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು ಎಂಥಾ ಭಯಂಕರ ರೋಗವು ಇದ್ದರೂ ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರಟಿಫಿಕೀಟುಗಳು ನಮ್ಮ ಹತ್ತರ ಹಾಜರ ಇರುತ್ತವೆ. ಇವನ್ನು ಬರೆಯಲಿಕ್ಕೆ ಕಾಗದವು ಸಾಲದು. ಕಾರಣ ಒಂದುಸಾರೆ ತಕ್ಕೊಂಡು ಅನುಭವ ನೋಡಿರಿ. ರೋಗದ ನಾಮುಗಳುಃ— ಕ್ಷಯರೋಗ, ಪಾಣಾಂತಿರೋಗ, ಹಡೆದನಂಜು ದಮ್ಮು, ಕೆಮ್ಮು, ಉಡಗ್ಯ, ಕಾಲರಾ (ಮಾರಿಕಾ), ಪ್ಲೇಗ, ಇನ್ಫ್ಲುಯಂಜಾಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮಲರೋಗ, ಗಂತಮಾಲೆ, ನಾರಹುಣ್ಣು, ಶಸ್ತ್ರಗಾಯ, ಕಿವಿಶೂಲಿ ಮೂಗಿನೊಳಗಿನ ಪಿನಸಿ, ಮೊದಲಾದವುಗಳು. ಕಣ್ಣುನೋವು ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ ಹೊಟ್ಟೆಶೂಲಿ, ಸಣ್ಣ ಕೂಸುಗಳಿಗೆ ಆದ ರೋಗಗಳು ಬಾಲಗ್ರಹ, ಅರಿವೆ ಮುಟ್ಟದೋಷ ಹೊಟ್ಟೆ ದೊಡ್ಡದಾಗೋಣ, ಕೋಡಿಗೆಮ್ಮು. ವೈ ಹೊರಬೀಳೋಣ, ಮತ್ತು ಡಾಕ್ಟರಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನಿಂದ ಖಾತ್ರಿಯಿಂದ ಗುಣಬರವದು. ಚೇಳು ವ ಸರ್ಪದಂಶಕ್ಕೆ ತತಕ್ಷಣ ಗುಣಬರುವದು. ೧ ಕಾಲು ತೊಲಿ ಬಾಟ್ಲಿ ಒಂದಕ್ಕೆ ೨ ರೂಪಾಯಿ ನಮೂನೆ ಉಪ್ಪಿಲ ೫ ಆಣೆ ತೂಕದ ಬಾಟ್ಲಿ ಒಂದಕ್ಕೆ ೮ ಆ ಖರ್ಚ ಬೇರೆ. ೮ ಆಣೆಯ ಒಂದೇ ಬಾಟ್ಲಿ ಕಳಿಸಲಾಗದು. ೨ ರೂಪಾಯಿ ಆರ್ಡರ ಬಂದರೆ ಕಳಿಸಲಾದೀತು ಅದರ ಖರ್ಚ ೭ ಆಣೆ ಚಿಕ್ಕ ಬಾಟ್ಲಿ ಒಂದು ಡಜನ ತಕ್ಕೊಳ್ಳುವವರಿಗೆ ನಾಲ್ಕುಬಾಟ್ಲಿಗಳು ಕಮಿಶನ್ ಸಿಗುತ್ತವೆ. ಖರ್ಚ ೯ ಆಣೆ. ಡಜನದ ಒಳಗಾಗಿ ಹನ್ನೊಂದು ಬಾಟ್ಲಿ ತಕ್ಕೊಂಡರೆ -ಕಮಿಶನ್ ಇಲ್ಲ. ವೆಚ್ಚ ೭ ಆಣೆ. ೧ ಕಾಲು ತೊಲಿ ಬಾಟಲಿ ಒಂದೇಸಾರೆ ಮೂರು ತಕ್ಕೊಳ್ಳುವವರಿಗೆ ಒಂದು ಬಾಟ್ಲಿ ಕಮಿಶನ್ ಸಿಗುತ್ತದೆ. ಖರ್ಚ ೯ ಆಣೆ. ಒಂದು ಎರಡು ತಕ್ಕೊಂಡರೆ ಕಮಿಶನಿಲ್ಲ ೭ ಆ ಪ್ರಮಾಣ ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಭಾಷೆಯ ಛಾಪಿಸುತ್ತವೆ ಪಸಂದಿಪ್ರಕಾರ ಬಾಟ್ಲಿಗೂಡೆ ಸಿಗುವದು ಈ ಔಷಧವು ಖೋಟಿ ತೋರಟರೆ ಶಿಲ್ಲಕ ಉಳಿದ ಮಾಲು ಪರತ ತಕ್ಕೊಂಡು ಅದರ ಬೆಲೆ ವಾಪಸ ಕೊಡುವೆವು. ಈ ಅರ್ಕಶಫಾ ಇಡೀ ಕರ್ನಾಟಕದಲ್ಲೆಲ್ಲಾ ಹೋಗುತ್ತದೆ. ಇದರ ಬಗ್ಗೆ ನಮಗೆ ಬಹಳ ರಿಕಮಂಡ್ ಮಾಡಬೇಕಾಗಿಲ್ಲಾ. ತಮ್ಮ ವಿಳಾಸ ಕನ್ನಡದಲ್ಲಿ ಅಥವಾ ಇಂಗ್ಲೀಷದಲ್ಲಿ ಪೋಷ್ಟ ಜಿಲ್ಲಾ ವಗೈರೆ ಸ್ಪಷ್ಟವಾಗಿ ಬರೆಯಿರಿ ನಮ್ಮ ವಿಳಾಸಃ— **ಎಚ್. ಎಮ್. ಖಲ್ಪಾ.**

ಸಂಪಾದಕ ಅರ್ಕ ಶಫಾ ಶಿರ್ ಆಫೀಸಪೋಷ್ಟ ಶಹಾಪೂರ (ಬೆಳಗಾವಿ

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ.
ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ... ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ... ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ... ಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು, ಅವುಗಳೊಳಗಿನ ಕೆಟ್ಟು ... ದುರಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ಸಹ ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ... ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ. ... ಕನ್ನಡ ಜನರಿಗೆ ... ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ತಾನದಲ್ಲೆಲ್ಲ ... ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ... ಮೋಟಾರ ನಡೆಯಿಸಲು ಕಲಿಸುವರೀತಿಯು ಬಹಳೇ ಸುಲಭವಾ ... ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಉಳಿದಕಡೆ ... ಫೀಗೆ ... ದನ್ನು ಲಕ್ಷ್ಯದಲ್ಲಿಡಿರಿ.

ಕಲಿಯುವ ಅವಧಿಯು (... ಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದು ಕೊಳ್ಳಿರಿ!

ವಿಳಾಸಃ—ಕುಲಕರ್ಣಿ ಮೋಟಾರ ಸ್ಕೂಲ.
... ನಿವಾರ ಪೇಠ ಜಮಖಂಡಿಕರ ವಾಡ ಪುಣೆ ಶಹರ.

ಅಪರೋಕ್ಷ ಜ್ಞಾನಿಗಳಾದ

ಶ್ರೀ ಪ್ರಾಣೇಶ ವಿಠ್ಠಲ ವಿರಚಿತ

ಶ್ರೀ ಹರಿ ಕೀರ್ತನ ಮಾಲಾ

೧ ಪ್ರಥಮ ಪುಷ್ಪ ಶ್ರೀಕೃಷ್ಣ ಲೀಲಾಮೃತ ಬೆಲೆ ೮ ಆಣೆ.
೨ ದ್ವಿತೀಯ ಪುಷ್ಪ ತಾರತಮ್ಯ ಸ್ತೋತ್ರ
ಯುಕ್ತ ಮುಖ್ಯದ ಪದ ಬೆಲೆ ೮ ಆಣೆ
೩ ತೃತೀಯ ಪುಷ್ಪ ಕನ್ನಡ ವಾಯುಸ್ತುತಿ ಬೆಲೆ ೫ ಆಣೆ

ಹನುಮಂತರಾವ ವಕೀಲ ಗೋರೇಬಾಳ.

ಪೋಸ್ಟ- ಲಿಂಗಸುಗೂರ ಜಿಲ್ಲಾ ರಾಯಿಚೂರು (ನಿಜಾಂ)

ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಳೆಯನ್ನು ... ರಿಕರುವೆವು ಹಲ್ಲುಗಳ ರೋಗಗಳನ್ನು ... ಕ್ಷಿಸಲ್ಪಡ ... ಕಿತ್ಸವನ್ನು ತೀವ್ರವಿಕ್ಷಿಸುವೆವು. ... ಂದ ಸ್ವಚ್ಛ ಮಾಡುವೆವು ಅಗಳಿಸುವ ಹಲ್ಲುಗಳನ್ನು ಬಹಳ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ಶಕ್ಕನ್ನು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು ಹಲ್ಲುಗಳ ಪೂರ್ಣ ಸೆಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

S. U. Narayanacharya & Co.

Chaukkamba Benares City.

S.U.N.& CO.
... CITY.

ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ, ಜರಿಕಣ, ಜರಿಸೀರೆ, ಕಾಶ್ಮೀರ ಶಾಲು, ತುಳಸಿಮಣಿ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲುಗಳ ಕ್ಯಾಟಲಾಗ ಕೇಳುವವರಿಗೆ ಇನಾಮಾಗಿ ಕಳಿಸಲಾಗುವದು.

ವಿಳಾಸ–ಶಿರೋಮಣಿ ನಾರಾಯಣಾಚಾರ್ಯ ಕಂಪನಿ ಚೌಖಾಂಬಾ ಕಾಶಿ.

ಈ ಪತ್ರಿಕೆಯು ... ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾ ... ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ಹಿಂದುಸ್ಥಾನ

ಹೊಸ ದಿಲ್ಲಿಯಲ್ಲಿ ಮಂಗಳವಾರ ದಿವಸ ಒಳ್ಳೇ ವೈಭವದಿಂದ ಸಭಾಗ್ರಹವು ಪಾರ್ಲಮೆಂಟ ಖೊಸವು ತೆರೆಯಲ್ಪಟ್ಟಿತು.

ಮಹಾದೇವ ಗೋವಿಂದ ರಾನಡೆಯವರ ಪುಣ್ಯತಿಥಿಯು ಪುಣೆಯಲ್ಲಿ ಇದೇ ತಿಂಗಳ ೧೮ನೇ ತಾರೀಖಿನಲ್ಲಿ ಆಯಿತು.

ನೋಟೀಸು

ಬಸು ಕೋಂ ರುದ್ರಯ್ಯಾ ಪತ್ರಿ ಸಾ| ಬೀಳಗಿ ಮು. ಹಳ್ಳೂರ ತಾ| ಬಾಗಲಕೋಟ ಇವಳಿಗೆ

ಕೆಳಗೆ ಸಹಿ ಮಾಡುವವರ ಕಡೆಯಿಂದ ನೋಟಿಸ ಕೊಡುವದೇನಂದರೆ— ನೀನು ನನ್ನ ವುಡಕಿ ಹೆಂಡತಿ ಇದ್ದಿ ವುಡಕಿ ಆದನಂತರಾ ೧|೨ ತಿಂಗಳ ಬಾಡು ನಡೆದು ಹೋದಿ ಮುಂದು ಸಾರೆ ಕರಿಯಲಿಕ್ಕೆ ಮುದ್ದಾಂ ನಾನೇ ಬಂದೆನು ಆಗ್ಗೆ ನೀನು ಮೋತಿ ತಪ್ಪಿಸಿದಿ ನನ್ನ ಲಗ್ನದ ಮೊದಲನೆ ಹೆಂಡತಿ ಚಲೋ ವರ್ತನೂಕಿಯವಳಿಲ್ಲವೆಂದು ನಿನ್ನನ್ನು ವುಡಕಿಯಾದರೆ ನೀನಾದರೂ ಅದೇ ದುರ್ಮಾರ್ಗಿಯವಳಿರುವಿಯೆಂದು ನಾನು ಪರತ ಒಂದು ನನ್ನ ಸಂಸಾರ ಹಿತಕ್ಕಾಗಿ ನಡೆಸುವದನ್ನು ಮಾಡಿಕೊಂಡೆನು ಹೀಗಿದ್ದು ೭ ೮ ವರ್ಷ ನನ್ನನ್ನು ಬಿಟ್ಟು ನೀನು ನಿನ್ನ ಗೈರ ವರ್ತನೂಕಿ ಹಿತಕ್ಕಾಗಿ ತವರ ಮನಿಯಲ್ಲಿರುವದರಿಂದ ನಿನ್ನ ಹೊಟ್ಟೆಯಿಂದ ಏನಾದರೂ ಸಂತಾನವಾದರ ಅದಕ್ಕೆ ನಾನು ಏನೂ ಸಮ್ಮಂಧಿಕನಲ್ಲ ಈ ನೋಟಿಸ ಮುಟ್ಟಿದ ೮ ದಿನ್ನಗಳಲ್ಲಿ ವುಡಕಿ ಬಗ್ಗೆ ಆದ ಖರ್ಚಿನ ಹಣಾ ಕೊಟ್ಟು ನನ್ನಿಂದಾ ವಾಪತಿ ತಗೋ ಬೇಕು ಇಲ್ಲದಿದ್ದರೆ ಈ ನೋಟಿಸು ಫಾರಿಖತ್ತು ಅಂತಾ ತಿಳಿದು ನಿನ್ನ ಮೇಲೆ ಖರ್ಚಿನ ಹಣದ ಬಗ್ಗೆ ಕಾಯದೇಶೀರ ಇಲಾಜ ಮಾಡತೇನೆ ಈ ನೋಟಿಸಿನ ಖರ್ಚು ನಿನ್ನ ಮೇಲೆ ಅದೆ. ಅಂತಾ ಕೊಟ್ಟ ನೋಟೀಸ ಸಹಿ ತಾ| ೧೨-೧ ೩-ಇಸ್ವಿ.

() ಈ ಎಡಗೈ ಹೆಬ್ಬಟ್ಟಿನ ಗುರ್ತ ರುದ್ರಯ್ಯಾ ಸಿಂಗಯ್ಯಾ ಪತ್ರಿ ಬೀಳಗಿ ಈತನದು ಅದೆ.

ನೋಟೀಸು

ರಾಚಿ ಕೋಂ ರುದ್ರಯ್ಯಾ ಪತ್ರಿ ಸಾ|| ಬೀಳಗಿ ಮು. ಟಕ್ಕಳಕಿ ತಾ|| ಬಾಗೆವಾಡಿ ಇವಳಿಗೆ

ಕೆಳಗೆ ಸಹಿ ಮಾಡುವವರ ಕಡೆಯಿಂದ ಈ ನೋಟೀಸಿನ ಮೂಲಕ ತಿಳಿಸುವದೇನಂದರೆ ನಿನ್ನನ್ನು ನಾನು ಲಗ್ನವಾಗಿ ೪, ೫ ವರ್ಷಗಳಾದವು ಈ ಅವಧಿಯಲ್ಲಿ ಒಮ್ಮೆ ಬಂದು ಒಂದು ತಿಂಗಳ ಇದ್ದು ಹೊರಟು ಹೋಗುವಕಾಲಕ್ಕೆ ಲಗ್ನದಲ್ಲಿ ನಾವು ಕೊಟ್ಟ ದಾಗೀನೆಗಳನ್ನು ತಗೊಂಡು ಹೋದಿ ಅವುಗಳ ತಪಶೀಲು

೧ ಭಂಗಾರ ಬೆಳಿ ಜೋಡು ೧ ತೊಲಿ ೬ ಆಣೆ ಮಾಸಕಿ ||೧೩೫

೨ ಬೆಳ್ಳಿ ಸರಪಳಿ ಜೋಡು ೧ ಸೇರು ೬ ಆಣೆ ಮಾಸ ಕಿ|| ೧೨೫

೩ ಬೆಳ್ಳಿ ಚೌಕ ಮಾಮು ತೊಲಿ ೧೦ ಆಣೆ ಮಾಸ ಕಿ| ೧೦

೪ ಭಂಗಾರ ಘಂಟಿ ಜೋಡು ೧ ಆಣೆ ಮಾಸ ಕಿ|| ೧೮

ಒಟ್ಟು ೨೮೮

ಈ ಪ್ರಕಾರ ಸಾಮಾನ ತಗೊಂಡು ಹೋದಿ. ಮುಂದೆ ನಿನ್ನನ್ನು ಕರೆಯಲಿಕ್ಕೆ ೧|೨ ಸಾರೆ ಕಳ್ಸಿದೆನು ಆಗ್ಗೆ ನೀನು ಮೋರಿ ತಪ್ಪಿಸಿದಿ. ಮುಂದೆ ನಾನೇ ಬಂದೆನು. ಆಗ್ಗೆ ನಿನ್ನ ಮೈ ಮೇಲೆ ದಾಗೀನೆಗಳು ಇಲ್ಲದ್ದಕ್ಕೆ ನೀನು— ನನ್ನ ಮನೆಯವರು ಅಡಚಣಿ ಸಲುವಾಗಿ ತಗೊಂಡಿದ್ದಾರೆ ಅವುಗಳನ್ನು ೮|೧೦ ದಿವಸಗಳಲ್ಲಿ ಇಸಕೊಂಡು ಬರತೇನೆಂದು ಸಬಬು ತೋರಿಸಿ ಈವತ್ತಿಗೂ ಬರಲಿಲ್ಲ ಕಾರಣ ನಿನ್ನ ಮೇಲೆ ನೋಟಿ ನಾನು ಬರೆಸಿದೆನು. ನಿನ್ನ ಹಾಲಿ ವರ್ತನೆ ಬರೋಬರಿ ಇದ್ದಂತೆ ತೋರುವದಿಲ್ಲ ನಿನ್ನ ಹೊಟ್ಟೆಯಿಂದ ಏನಾದರೂ ಸಂತಾನವಾದರೆ ನಾನು ಸಮ್ಮಂಧನಲ್ಲ ಈ ನೋಟೀಸು ಮುಟ್ಟಿದ ೧೫ ದಿವಸಗಳಲ್ಲಿ ಮೇಲೆ ನಮೂದ ಇದ್ದ ನೀನು ತಗೊಂಡ ಸಾಮಾನುಗಳನ್ನು ವ ಲಗ್ನದ ಬಗ್ಗೆ ಆದ ಖರ್ಚ ಎರಡುನೂರು ರೂಪಾಯಿ ಕೊಟ್ಟು ನನ್ನಿಂದಾ ವಾಪತ ತಗೋಬೇಕು ಇಲ್ಲದಿದ್ದರೆ ಇದೇ ಫಾರಖತ್ತು ಅಂತಾ ತಿಳಿದು ಯೋಗ್ಯ ಕೋರ್ಟಿನಲ್ಲಿ ಇಲಾಜ ಮಾಡತೇನೆ ಅಂತಾ ಕೊಟ್ಟ ನೋಟೀಸು ಸಹಿ ತಾ ೧೨-೧ ೩೭

() ಈ ಎಡಗೈ ಹೆಬ್ಬೆಟ್ಟಿನ ಗುರ್ತು ರುದ್ರಯ್ಯಾ ಸಿಂಗಯ್ಯಾ ಪತ್ರಿ ಸಾ|| ಬೀಳಗಿ ಈತನದು ಅದೆ

ಉಚಿತ! ಸಮಯ!! ಉಚಿತ!

ನಮ್ಮ ಶಾಸ್ತ್ರೀಯವಾದ ಶಾರೀರಕ ಶಿಕ್ಷಣ

ಈ ಪುಸ್ತಕದಲ್ಲಿ ನನ್ನ ಮತ್ತು ನನ್ನ ಶಿಷ್ಯರ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವದಲ್ಲದೆ, ಅಂತಹ ಶರೀರ ದಾರ್ಢ್ಯವು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದು. ನನ್ನಲ್ಲಿ ಶರೀರೋತ್ಸಾಹದವರ ಅಭಿಪ್ರಾಯಗಳೂ ಅದರಲ್ಲಿರುವವು ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಬೇಕೆಂಬ ನಿಯಮಿತ ಮಾರ್ಗವನ್ನು ತಿಳಿಯುತ್ತಾರೆ ಅಂಚೆ ಖರ್ಚಿನ ಸಲುವಾಗಿ ಅಣೆಯ ಸ್ಟಾಂಪುಗಳನ್ನು ಕಳುಹಿಸಿದವರಿಗೆ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ. ಈ ಸಮಯವನ್ನು ಕಳೆದುಕೊಳ್ಳದೆ ಶಾಂತತೆಯ ಈ ದಿನವೇ ಬರೆದು ಈ ಪುಸ್ತಕಕ್ಕಾಗಿ ಬರೆಯಿರಿ

ನಮ್ಮ ವಿಳಾಸ,
ಪ್ರೊಫೆಸರ್ ಎಂ. ವಿ. ಕೃಷ್ಣರಾವ್.
ಬಸವನಗುಡಿ, ಬೆಂಗಳೂರು ಸಿಟಿ

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಬಯಕೆಯಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು ಇಲ್ಲದೆ ಸರ್ವರಿಗೂ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ ಬಾಗಲಕೋಟೆಯಲ್ಲಿ ನಮ್ಮ ಆಯುರ್ವೇದ ಔಷಧಿಗಳನ್ನು ಮಾರುವದಕ್ಕೆ ಏಜಂಟರು ಬೇಕಾಗಿದೆ. ಪುಷ್ಕಳ ಕಮೀಷನ್ ದೊರೆಯುವದು.

ರಾಜವೈದ್ಯ ನಾರಾಯಣಜಿ ಕೇಶವಜಿ,
೫೭. ಜೇನಾಬಜಾರ್, ಮದ್ರಾಸು

ಕನ್ನಡಿಗರ ಬಗ್ಗೆ ಸ್ಪೆಶಲ್ ವ್ಯವಸ್ಥೆ !!

ತ್ವರೆ ಮಾಡಿರಿ ! ತ್ವರೆ ಮಾಡಿರಿ



ಮೋಟಾರ ಡ್ರ್ಯಾಯವ್ಹಿಂಗ ಕ್ಲಾಸು.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಾಗಿಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರ್ಯಾಯ್ವಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಶ ಹಿಂದುಸ್ಥಾನದ ಸರಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ. ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪತ್ತಾ—ದಿ ಪಾಪ್ಯುಲರ ಮೋಟಾರ ಡ್ರ್ಯಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೧ ಬುಧವಾರ ಪೇಠ ಜುನಿ ತಪಕೀರಗಲ್ಲಿ ಪುಣೆ ಸಿಟಿ

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಿಣೀ, ಜೀರ್ಣಜ್ವರ, ಅಗ್ನಿಮಾಂದ್ಯ ಕೈರತ್ತು, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶವಾಗುವವು ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು) ಇದರಿಂದ ಪ್ರೈಯ್ಯುರಿ ವ ಗರಮಿಯ ಎಲ್ಲಾತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೇ ಯೋಗ್ಯತೆಯು ಸೇವಿಸಿ ನೋಡಿದರೆ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೨-೦, ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯು ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸಃ—

ಎಸ್ ಬಿ ಕದಮ್ ಮತ್ತು ಸನ್ಸ್.

ಮು ಪೋಷ್ಟ ನಿಪ್ಪಾಣಿ (ಜಿ ಬೆಳಗಾಂವ.)

೧,೪೨,೦೦,೦೦೦

ರೂಪಾಯಿಗಳು!

ಪರದೇಶಗಳಿಂದ ತರಿಸಲ್ಪಟ್ಟ ಸಾಬೂನುಗಳಿಗೋಸ್ಕರ ಪ್ರತಿವರುಷವೂ ಒಂದುಕೋಟಿ ನಾಲ್ವತ್ತೆರಡು ಲಕ್ಷರೂಪಾಯಿಗಳನ್ನು ನಮ್ಮ ದೇಶದಿಂದ ಪರದೇಶಕ್ಕೆ ತೆರುತ್ತಿದ್ದೇವೆ. ಮಹಾಜನಗಳೆಲ್ಲರೂ ಒಕ್ಕಟ್ಟಾಗಿ ಸಂಕಲ್ಪಮಾಡಿದರೆ ತಾನೇ ಈ ಹಣವನ್ನು ನಮ್ಮ ದೇಶದಲ್ಲಿ ಉಳಿಸಿಕೊಳ್ಳಬಹುದು. ಸ್ವದೇಶದ ಸಾಬೂನನ್ನು ಬಿಟ್ಟು ಪರದೇಶದ ಸಾಬೂನನ್ನು ಕೊಳ್ಳುವ ಪ್ರತಿಯೊಬ್ಬ ವಿದ್ಯಾವಂತನೂ ಅನ್ಯ ದೇಶದ ಕೈಗಾರಿಕೆಗಳಿಗೆ ಉಪಕಾರಮಾಡಿ, ಸ್ವದೇಶದ ಕೈಗಾರಿಕೆಗಳಿಗೆ ಅಪಕಾರಮಾಡುತ್ತಾನೆ. ಪ್ರತಿಯೊಬ್ಬ ದೇಶಬಾಂಧವನೂ ಸ್ವದೇಶೀ ಮಾಲುಗಳನ್ನೇ ಕೊಳ್ಳುವನು. ಮೈಸೂರು ಗವರ್ನ್ಮೆಂಟ ಸೋಪ್ ಫ್ಯಾಕ್ಟರಿಯಲ್ಲಿ ಅಗ್ರಗಣ್ಯವಾದ ಉತ್ತಮವಾದ ಸಾಬೂನುಗಳನ್ನು ತಯಾರುಮಾಡುತ್ತಾರೆ. ನಾವು ತಯಾರುಮಾಡುವ ಶ್ರೀಗಂಧ ಪಾಮೊಳವ್ಯ ಸಾಬೂನೊಂದನ್ನು ಕೊಂಡು ತಾವೇ ಪರೀಕ್ಷೆಮಾಡಿನೋಡಿರಿ. ತಮಗೆ ನಮ್ಮ ಸಾಬೂನುಗಳು ಸಿಗಲಸಾಧ್ಯವಾದಲ್ಲಿ ದಯವಿಟ್ಟು ನಮಗೆ ಪತ್ರವೊಂದನ್ನು ಬರೆದರೆ, ತಾವು ಇಚ್ಛೆಪಡುವ ಅಂಗಡಿಯಲ್ಲಿಯೇ ನಮ್ಮ ಮಾಲುಗಳು ತಮಗೆ ದೊರೆಯುವಂತೆ ಏರ್ಪಡಿಸಿಕೊಡುತ್ತೇವೆ.

ಗೌರ್ನಮೆಂಟ ಸೋಪ್ ಫ್ಯಾಕ್ಟರಿ

ಬೆಂಗಳೂರು.

ರ ನಂ. ಬಿ. ೧೯೪೭ ವಾ ಚಂದಾ ೧—೧೩—೦ ಮಾತ್ರ

(ಇದರಲ್ಲಿ ಕನ್ನಡ ನವಜೀವನವು ನವಾಹಿಸ್ಟಬೇಕಾಗಿದೆ.)

[illegible] — ಶ್ರುತಿ

ಸಂಪಾದಕರು— ಮಂಗಳವೇಢೇ ರಾಜೇಂದ್ರರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಚಂದ್ರಮಾನ ಮಿತಿ ಮಾಘ ಶುದ್ಧ ೩ ಶಕೆ ೧೮೪೫ ತಾ|| ೪ ೨-೧೯೨೭. | ಸಂಚಿಕೆ ೪೩

ಸಂಪಾದಕರ ಭೂಮಿ

(೩೦)

ನನ್ನ ಮನಸಿನ ಮೋಹನವಾದ ಕಟ್ಟುವೆನಾನು ।
ನಿನ್ನ ಬೆಸನದ ಹಾಗಿದಂಥ ಮುಕ್ಕಳ ದೊಣೆ ।
ಚಿನ್ನ ದಾಗದು ಚೆನ್ನ ಕೋಣಬಸ್ತಿಯು ನೋಂದು ಚಿನ್ನಯಾಕಾರವಕ್ಕೆ ॥
ನನ್ನ ದೇಹವು ನಿನ್ನ ಹೀರದಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಳಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಹೀರಬಹ ಗಂಧವಹನೆಂದು ತಿಳಿಯೆ ॥

—ಅಂಬಿಕಾತನಯ ದತ್ತ

ಧಾರವಾಡದಲ್ಲಿ ಜೀವನಿದೆ; ಜೀವಕ್ಕೆ ಗತಿಯಿದೆ. ನಿಂತ ನೀರಲ್ಲ ಧರಿಯುವ ಸ್ವಾಭಾವಿಕವಾದ ಸ್ಥಿತಿಯು. ಅಲ್ಲಿ ಒಂದಿಲ್ಲೊಂದು ವಿಧದ ಚಟುವಟಿಕೆಯು ಎದ್ದೇ ಇರುತ್ತದೆ. ಯಾರಾದರೂ ಹೊಸಬರು ಒಂದು ಹೊಸ ಹೆಜ್ಜೆಗಳನ್ನಿಟ್ಟೇ ತೀರುವರು. ಧಾರವಾಡದ ಸ್ವಭಾವದಲ್ಲಿ ಇನ್ನ ತಿಯೇ ಇಲ್ಲೆಂದು ಹಾರೈಕೆ. ಒಮ್ಮೆ ಶ್ರೀ. ಸಂಪದ್ಗಿರಿರಾಯರ ಚಿಲುಮೆಯಂತೆ ಪ್ರವಾಹವಾಗಿ ಹರಿಯುವ ವಿನೋದ ಪ್ರಚುರವಾದ ವ್ಯಾಖ್ಯಾನವು. ಮತ್ತೊಮ್ಮೆ ಶ್ರೀ. ಬಿಂದುರಾಯರ ಮಹಾಭಾರತ ವಾಚನದ ಸವಿಯು ಸೊಬಗು. ಇನ್ನೊಮ್ಮೆ ಶ್ರೀಮತಿ ಜಯಮ್ಮನವರ ಹೃದಯಸ್ಪರ್ಶಿಯಾದ ವೀಣಾವಾದನ ಕೌಶಲ್ಯವು. ಹೀಗೆ ಬಗೆ ಬಗೆಯ ಭಾವನೆಗಳಿಗೆ ಬಣ್ಣಕೊಡುವ ಬಟ್ಟೆಗಳು ಬಹುಮುಖವಾಗಿ ಕಂಡುಬರುವವು. ಮೊನ್ನಿನ ಶನಿವಾರ ಶ್ರೀ. ಮಾಸ್ತಿ ವೆಂಕಟೇಶಯ್ಯಂಗಾರರು ಧಾರವಾಡದ ಕಾಲೇಜಿನ ಕರ್ನಾಟಕ ಸಂಘದವರ ಮುಂದೆ ಒಂದು ಬರೆದುಕೊಂಡುಬಂದ ಉಪನ್ಯಾಸವನ್ನು ಓದಿದರು. ಅದು ಆಂಗ್ಲ ಭಾಷೆಯಲ್ಲಿ. ಆ ಭಾಷೆಯ ಬೆಡಗು ಅದರಲ್ಲಿ ಚೆನ್ನಾಗಿ ಒಡಮೂಡಿತ್ತೆಂದು ಬಲ್ಲವರು ಹೇಳುವರು. ನಾನು ಕನ್ನಡಿಗ. ಕನ್ನಡದ ಬೆಡಗು ನನಗೆ ಅದರಲ್ಲಿ ತೋರಲಿಲ್ಲ. ಕನ್ನಡಿಗನಿಗೆ ಕನ್ನಡದ ಗುಡಿಯಲ್ಲಿ ಸ್ವತಂತ್ರವಾಗಿ ವಿಹಾರಮಾಡಲು ಬರುವಂತೆ, ಕ್ರೈಸ್ತಾಲಯದಲ್ಲಿ ಬರುವದೆಂತು? ಸ್ವಲ್ಪಾದರೂ ತಡೆಯುಂಟಾಗದೆ ಬಿಡದು. ನಾನು ಹೇಳುವದನ್ನು ಬಿಟ್ಟುಕೊಟ್ಟು ಎತ್ತ ಕಡೆಯೋ ನಡೆದೆವು. ಧಾರವಾಡದವರು ಬೇರೆ ಬೇರೆ ಭಾಗದ ಕನ್ನಡಿಗರನ್ನು ಬರಮಾಡಿಕೊಂಡು ಬಳಕೆಯನ್ನು ಬೆಳಿಸುತಲಿದ್ದಾರೆ. ಇದರಿಂದ ಏಕೀಕರಣದ ಕಾರ್ಯವು ಅವ್ಯಕ್ತವಾಗಿ - ಆದರೂ ಅಪ್ರತಿಹತವಾಗಿ - ನಡೆಯುತೊಡಗಿದೆ. ವಿಜಾಪುರ, ಬಾಗಲಕೋಟೆ, ಬೆಳಗಾವಿ ಮೊದಲಾದವರು ಒಂದು ಸ್ವಲ್ಪವಾದರೂ ಈ ಬಿಕ್ಕಟಿನ ಪ್ರಯತ್ನ ಪಡುವದಿಲ್ಲ. ವಿಜಾಪುರದಲ್ಲಿ ಒಂದು ಸಾರೆ ವ್ಯಾಖ್ಯಾನ ಮಾಲೆಯಿದ್ದಿತು. ಆಗ ಅಲ್ಲಿಯವರು ಕನ್ನಡಿಗರಲ್ಲಿ ವ್ಯಾಖ್ಯಾನ ಕಾರರೇ ಇಲ್ಲವೆಂದೆನ್ನುತ್ತಿದ್ದರು. ಈಗ ವ್ಯಾಖ್ಯಾನಮಾಲೆಯು ಇದ್ದುದೇ ಆದರೆ, ಶ್ರೀ ಸಂಪದ್ಗಿರಿರಾಯರನ್ನು ಕರೆಯಿಸಿಕೊಳ್ಳಬೇಕು. ಶ್ರೀ ಬಿಂದುರಾಯರನ್ನು ಬರಮಾಡಿಕೊಳ್ಳಬೇಕು. ಅದರಿಂದ ಪರಸ್ಪರರಲ್ಲಿ ಬಳಕೆಯಾಗುವದಲ್ಲದೆ ಬೋಧ ದೊರೆತು ಏಕೀಕರಣದ ಭಾವನೆಯು ಸಹಜವಾಗಿಯೇ ಬಲಿಸುವದು. ಬಲಿಸಟ್ಟ ಮೂರ್ತಸ್ವರೂಪವನ್ನು ತಾಳುವದು.

ವೆಂಕಟೇಶಯ್ಯಂಗಾರರು ಮಹಾರಾಜ ಕಾಲೇಜಿನ ಪ್ರೊಫೆಸರ್‌ರಾದರೂ ನಾಟಕಕರ್ತರುಗಳೂ ಆಗಿರುವರು. ಅವರ ಮುಖದಲ್ಲಿ ಎಳೆನಗೆಯು ಮನೆ ಗುತ್ತಿರುವದು. ಅವರ ಸ್ವಭಾವವು ಹಸುಗೂಸಿನಂತಿರುವುದು. ಚಿಕ್ಕಮಕ್ಕಳೊಡನೆ ಚೆಲ್ಲಾಟವಾಡುವದು ಅವರಿಗೆ ಬಹಳ ಸೇರುವಂತೆ ಕಾಣುತ್ತಿದೆ. ಅವರು ಎಳೆಯರೊಡನೆ ಸ್ವೈರವಾಗಿ ಕಳೆಯುವರು. ಧಾರವಾಡದಲ್ಲಿ ಗೆಳೆಯರ ಗುಂಪಿನೊಡನೆ ಅವರು ಒಳ್ಳೇ ಸಲಿಗೆಯನ್ನು ಬೆಳೆಸಿದರು. ಗುಂಪಿನವರು ತಮ್ಮ ಕಾವ್ಯಗಳನ್ನು ಕೆಲವು ಓದಿ ತೋರಿಸಿದರು. ತಾವೂ ಅವರಿಗೆ ತಮ್ಮ ಉಷೆಯೆಂಬ ಚಿಕ್ಕ ನಾಟಕವನ್ನು ಓದಿ ತೋರಿಸಿದರು. ಶ್ರೀ ಕೃಷ್ಣ ಬೆಟಗೇರಿಯವರಿಗೆ ಅವರು ಸೂಚನೆಯನ್ನು ಮಾಡಬೇಕಾದರೆ ಒಳ್ಳೇ ನನ್ನೆಯಿಂದ ಮಾಡಿದರು. 'ನಾನು ನಿಮಗಿಂತಲೂ ಹಿರಿಯ; ನಿಮಗೆ ಬುದ್ಧಿಯನ್ನು ಹೇಳಲು, ನನಗೆ ಅಧಿಕಾರವಿದೆ' ಎಂದು ಬೆಟಗೇರಿಯವರನ್ನು ಮನ್ನಿಸಿದರು. ನಮಗೆ ಬೇಕಾದ ಸಜ್ಜನರು ಇವರೇ. ಇವರು ಅಸಿಸ್ಟೆಂಟ ಕಮಿಶನರರಿರುವರೆಂಬ ಮಾತು ಹೇಳಿದ ಹೊರ್ತು ಹೊಳೆಯುವಂತಿಲ್ಲ.

ಅಂಗಾಲಿಗೆ ಹೇಸಿಕೆಯಿಲ್ಲ ಅಂತಃಕರಣಕ್ಕೆ ನಾಚಿಕೆಯಿಲ್ಲ ಎಂಬ ನಾಣ್ನುಡಿಯು ಎಷ್ಟು ನೆಚ್ಚಿಕೆಯದು ನೋಡಿ! ಬಳ್ಳಾರಿಯು ಆಂಧ್ರರ ಕೈಯಲ್ಲಿ ಸಿಕ್ಕರೂ, ಅದರ ವಿಷಯದಲ್ಲಿಯ ಕನಸುಗಳೂ ಕನವರಿಕೆಗಳೂ ಮಾಯವಾಗಲೊಲ್ಲವು. ಮಮತೆಯ ಮೋಹವನ್ನಾರು ಮೀರಬಲ್ಲರು? ಬಳ್ಳಾರಿಯ ಸುತ್ತುಮುತ್ತು ಒಳಗೆ ಹೊರಗೆ ಅಡ್ಡಾಡಿ ನೋಡಿದರೆ, ಕನ್ನಡದ ಬಿಸ್ತೋತೋರುವುದು. ಬಳಕೆಯ ಭಾಷೆಯು ಕನ್ನಡವೇ ಆಗಿದೆ. ಎಲ್ಲಾದರೊಮ್ಮೊಮ್ಮೆ ತೆಲುಗಿನ ಸದ್ದು ಕೇಳಬರುವುದು. ಇಲ್ಲಿ ಕನ್ನಡದ ಸಸಿಯನ್ನು ನೆಡುವ ಕಾರಣವೇನೂ ಇಲ್ಲ. ಸಸಿಯು ಇದೆ. ಅದಕ್ಕೆ ನೀರು

ಗೋಳುಗಳು ಪ ತ ಒಕ್ಕೇ ಹದವಸರಿತ ತೋಟಿಗನ ಬಂಕಾ ಗಿರುವನ. ಅಂದವರೂ ಮೂರಿತಸಂದರೆ ಕನ್ನಡಪ ಕಮಲ ಗಳೆಲ್ಲ ಅರಿತ ಪುಸ್ತಕದಲ್ಲಿ ಮಕರಂದವನ್ನು ಡುಗುಪವು. ಕೃಪವು

ಸಾಧ್ಯವಾಗಬೇಕಾದರೆ ಪೌರುಷವು ಬೇಕಲ್ಲವೇ? ಕನ್ನಡದ ಸಿಂಹವು ಎದ್ದು ಆಯಾಳವನ್ನು ಸರಿಪಡಿಸಿಕೊಂಡು ಸಿದ್ಧವಾಗಬೇಕಲ್ಲವೇ?

ಬಾಗಲಕೋಟೆಯ ವೀರಶೈವ ತರುಣಸಂಘದವರು ಹೋದವಾರದಲ್ಲಿ ಸಭೆಸೇರಿಗೊತ್ತು ಮಾಡಿದ ಪ್ರಕಾರ ಬಾಗಲಕೋಟ ತಾಲೂಕಿನ ಹಳ್ಳಿಗಳಲ್ಲಿ ತಿರುಗಾಡಿ ಅಲ್ಲಿನ ಮುಖ್ಯ ಬೆಳೆಗಳ ಸ್ಥಿತಿಗತಿಗಳ ವಿಷಯಕ್ಕೆ ಬರೆದು ಕಳುಹಿಸಿದ ಪತ್ರಿಕೆಯನ್ನು ಇದರಡಿಯಲ್ಲಿ ಮುದ್ರಿಸಿದ್ದೇವೆ. ನಮ್ಮ ಅಭಿಪ್ರಾಯವನ್ನು ಮುಂದಿನ ಸಲ ಪ್ರಕಟಿಸುತ್ತೇವೆ

ಊರುಗಳ ಹೆಸರು	ಸಾಗುಕ್ಷೇತ್ರ	ನೀರಾ	ಜನೇವಾರಿ	ಊರಬಿಟ್ಟು ಹೋದಜನರು	ದನಗಳ ಪರಿಗಣನೆ
ಮುಗಳೊಳ್ಳಿ	೩೪೦	೨೦೫	೨ ಆಣೆ	೩೦	೪೦೦ ಇಸವಿ ೧೯೨೫ ೨೬ ೨೦೦ ಸದ್ಯಕ್ಕೆ
ಸಂಗಾಪುರ	೪೬೦	೧೦	೨	ಇಲ್ಲ	೧೬೦ ಇಸವಿ ೧೯೨೫ ೨೬ ಅಷ್ಟೆ ಸದರ
ಹೆರಕಲ್	೨೬೦೦	೮೦೦	೩	೫೦	೮೦೦ ಇಸವಿ ೧೯೨೫ ೨೬ ರಲ್ಲಿ ೬೦೦ ಸದ್ಯಕ್ಕೆ
ಯಡಹಳ್ಳಿ	೧೨೦೯	ಇಲ್ಲ	೪ ಮೂರು	೬೦	೨೦೦ ಸದ್ಯಕ್ಕೆ ೧೯೨೫-೨೬
ಬಿದರಿ ಕುಂಟಿ	೧೨೦೦	೧೨೨	೨	೨೦	೪೦೦ ಇಸವಿ ೧೯೨೦ ೨೧ ರಲ್ಲಿ ೩೦೦ ಸದ್ಯಕ್ಕೆ
ಬೆಣ್ಣೂರ	೧೨೦೨	೧೨೫	೨	೫೨	೨೦೦ ಸದ್ಯಕ್ಕೆ
ಕಂದಗಲ್ಲ	೨೧೫೦	೮೨	೩	೧೦೦	೬೦೦ ಇಸವಿ ೧೯೨೫ ೨೬ ೪೦೦ ಸದ್ಯಕ್ಕೆ
ಇಲಾಳ	೨೦೦೦	೧೦೦	೧	೨೦	೯೫೦ ಇಸವಿ ೧೯೨೫ ೨೬ ಅಷ್ಟೆ ಸದರ
ಮುಂಡಗನೂರ	೧ ೨	೭೫೦	೩	ಇಲ್ಲ	ಸದ್ಯಕ್ಕೆ ೧೦೦, ೧೯೨೫ ೨೬
ಹೊನ್ನಾಕಟ್ಟಿ	೩೬೫೦	೪೦	೩	೮೦	೩೦೦ ಇಸವಿ ೧೯೨೫ ೨೬ ೨೫೦ ಸದ್ಯಕ್ಕೆ
ಕಲಾದಗಿ	೨೯೮	೨೫	೧೦೦ ೩ ಮೂರು	ಇಲ್ಲ	೩೦೦ ಸದ್ಯಕ್ಕೆ
ಅಂಕಲಗಿ ಬೆಣಕನಾಳ	೨೯೪	೧೦	ಮೂರು ೧೦೦	ಇಲ್ಲ	೩೧ ಸದ್ಯಕ್ಕೆ
ಹೀರೆಬೂದಿಹಾಳ	೧೯	೧೨೯	೩ ಮೂರು ೧೦೦	ಇಲ್ಲ	೩೪೮ ಸದ್ಯಕ್ಕೆ
ಸಾಳಗುಂದಿ	೨೨೪	೭೨	೩ ಮೂರು ೧೦೦	ಇಲ್ಲ	೧೨೯ ಸದ್ಯಕ್ಕೆ
ಹಿರೇನಾಳ	೬೭	೬	೩ ಮೂರು ೧೦೦	ಇಲ್ಲ	೩೩ ಸದ್ಯಕ್ಕೆ
ನೆಲವಿಗಂಡಿ	೨೬೦	ಇಲ್ಲ	೩	ಇಲ್ಲ	೨೫೦ ಸದ್ಯಕ್ಕೆ
ಸೋರಕೊಪ್ಪ	೬೦೨	ಇಲ್ಲ	೩ ಮೂರು ೧೦೦	ಇಲ್ಲ	೨೭೫ ಸದ್ಯಕ್ಕೆ
ಭಗವತಿ	೩೬೦	೮೦	೩	೫೦	೬೨೮ ಇಸ್ವಿ ೧೯೨೦ ೨೧ ರಲ್ಲಿ ೫೪೪ ಇಸ್ವಿ ೨೪ ೨೫ ರಲ್ಲಿ
ಹಳ್ಳೂರು	೬೬೦೦	ಇಲ್ಲ	೩	೭೦೦	೧೫೦೦ ಸದ್ಯಕ್ಕೆ
ಬೇವೂರ	೭೨೧೨೬	೩೦೦	೨	೫೦೦	೧೭೫೦ ಇಸ್ವಿ ೨೪ ೨೫ ರಲ್ಲಿ ೧೩೦೦ ಸದ್ಯಕ್ಕೆ
ಬೆನಕಟ್ಟಿ	೨೦೯೦	೬೦	೩	ಇಲ್ಲ	೪೮೮ ಸದ್ಯಕ್ಕೆ ೬೫೬ ಇಸ್ವಿ ೧೯೨೦-೨೧ ರಲ್ಲಿ
ಬಿಳ್ಳಕೇರಿ	೩೧೦೦	೫೦	೩	೧೦೦	೫೦೦ ಇಸ್ವಿ ೧೯೨೦ ೨೧ರಲ್ಲಿ ೪೦೦ ಸದ್ಯಕ್ಕೆ
ತ್ರೈರಮಟ್ಟಿ	೨೫೦೦	ಇಲ್ಲ	೪	ಇಲ್ಲ	೬೦೦ ಇಸ್ವಿ ೧೯೨೦ ೨೧ ರಲ್ಲಿ ೪೦೧ ಸದ್ಯಕ್ಕೆ
ಸಂಗಾಪೂರ	೧೩೦೦	ಇಲ್ಲ	೩	೫೦	೩೫೦ ಇಸ್ವಿ ೧೯೨೦ ೨೧ ರಲ್ಲಿ ೩೦೦ ಸದ್ಯಕ್ಕೆ
ಶಿವಾಪೂರ	೬೦೦	೨೫	೩	೨೫	೬೫೦ ಇಸ್ವಿ ೧೯೨೦-೨೧ ರಲ್ಲಿ ೩೦೧ ಸದ್ಯಕ್ಕೆ
ಬೌದಾಪೂರ	೨೪೦೦	ಇಲ್ಲ	೩	ಇಲ್ಲ	೬೨೪ ಇಸ್ವಿ ೧೯೨೦ ೨೧ ರಲ್ಲಿ ೫೦೦ ಸದ್ಯಕ್ಕೆ

ಪುಸ್ತಕ ಪರಿಚಯ

ಸ್ವೀಕಾರ.

ನೀತಿಗಳ ನೆಚ್ಚಿಗಟ್ಟು— ಗ್ರಂಥಕರ್ತರು ಹೊಸಕೇರಿ ಚಿದಂಬರಯ್ಯನವರು. ಬೆಲೆ ೧-೮-೦

ತಾರಾನಾಥ – ತರ್ಕವಾಚಸ್ಪತಿ. ಇದೇ ಗ್ರಂಥಕರ್ತರಿಂದ ಬರೆಯಲ್ಪಟ್ಟ ಗ್ರಂಥವು. ಬೆಲೆ ೦-೧೦-೦

ಸಮಾಲೋಚನೆಯು ಮುಂದಿನ ಸಂಚಿಕೆಯಲ್ಲಾಗಿ ಮಾಡಲ್ಪಡುವದು

ಲಿವರಿನ ಗಡಿಯಾರಗಳು.

ಲಿವರಿನ ಕೈ ಗಡಿಯಾರ ರೂ. ೯.

ಲಿವರಿನ ಕಿಸೆಯೊಳಗಿಡುವ ಗಡಿಯಾರ ರೂ. ೭



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಮೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವದು. ಅದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ತಾಳುವವು. ಬೆಲೆ ಕಡಿಮೆಯಿಂದು ಅಂಜುವ ಕಾರಣವಿಲ್ಲ ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚ ಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ. ಅದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ

ಲಿಬರ್ಟಿ ವಾಚ ಕಂ (ಇಂಡಿಯಾ.) ಬಾಂಬೆ. ಕೆ. ೪

ಬಿ, ಎಂ. ಹೂಗಾರ ಕೃತ

ತಾಳಪ್ರಸ್ತಾರಸಾಗರ.

೧ ನೇ ಭಾಗ

(ಮೃದಂಗ ವಿದ್ಯಾವಿನೋದ.)

ಈ ಗ್ರಂಥದಲ್ಲಿ ತಾಳಗಳ ಉತ್ಪತ್ತಿ. ಜಾತಿಭೇದದಿಂದ ಹುಟ್ಟಿದ ೩೫ ತಾಳಗಳನ್ನು ಹಿಡಿಯುವ ಕ್ರಮ. ತಬಲಾದಲ್ಲಿ ಅಕ್ಷರಗಳನ್ನು ನುಡಿಸುವ ಕ್ರಮ, (ಸಚಿತ್ರ) ವರಿ. ಕಾಲು, ಮುಕ್ಕಾಲು ತಾಳಗಳನ್ನೂ ಮುಗುತಾಯಗಳನ್ನೂ ಮಾಡುವ ರೀತಿ, ಮಾರ್ಗ ತಾಳ ಲಕ್ಷಣ ಗುಣೆನಾಟ್ಯಶಬ್ದಗಳ ವಿಚಾರ, ಎರಡೂ ತಾಳಗಳನ್ನು ಗತಿಭೇದದಿಂದ ಎರಡೂ ಕೈಗಳಿಂದ ಒಮ್ಮೆಲೆ ನಡಿಸುವ ಕ್ರಮ, ಇತ್ಯಾದ್ಯನೇಕ ರಹಸ್ಯವಾದ ವಿಷಯಗಳು ಸ್ಪಷ್ಟವಾಗಿರುವವು ಗ್ರಂಥದ ಬಗ್ಗೆ ಅನೇಕ ವಿದ್ವಾಂಸರು ತಮ್ಮ ಸದಭಿಪ್ರಾಯವನ್ನು ವ್ಯಕ್ತಪಡಿಸಿರುವರು, ಈ ಗ್ರಂಥವು ಹತ್ತರಿದ್ದರೆ ಒಬ್ಬ ಸಂಗೀತ ವಿದ್ವಾಂಸನೇ ಹತ್ತರಿದ್ದಂತಾಗಿ ಬೋಧಕರ ಸಹಾಯವೇ ಬೇಕಾಗಲಾರದು.

ಈ ಪುಸ್ತಕದ ಬೆಲೆ-೨—೦ —೦ ರೂಪಾಯಿ ಕೆಲ ದಿವಸದವರೆಗೆ ಪುಸ್ತಕಗಳು ದೊರೆಯಲಾರವು. ಕೆಳಗಿನ ವಿಳಾಸಕ್ಕೆ ಬರೆದು ಬೇಕಾದವರು ತರಿಸಿಕೊಳ್ಳಬೇಕು.

ವಿಳಾಸ. **ಬಸಪ್ಪಾ ಮಲ್ಲಪ್ಪಾ ಹೂಗಾರ.**

ಸಾ॥ ಚಿಂಚಲಿ. ತಾ. ಗದಗ.

ಪೊ ॥ ನರೇಗುಂದ. ಜಿಲ್ಲಾ ಧಾರವಾಡ.

ಯಾವದೇ { ತರಂಗ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೆದವರಿಗೆ ಕೊಡುತ್ತೇವೆ.

ಮೂಲ ಬೆಲೆ ರೂ. ೧೦ ಅರ್ಧ ಬೆಲೆ ರೂ. ೭



ಬರೇ ಒಂದು ತಿಂಗಳ ಒಳಗೆ ಮಾತ್ರ ಈ ದರವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯಂತ ಸುಂದರ! ಹೊಸ ಯಂತ್ರ ರಚನೆ!! ದೀರ್ಘ ಬಾಳಿಕೆ ಹಾಗೂ ರಕ್ಷಣೆ!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ **ಬೆಲೆ ರೂ ೭**

ಅಂಚೆ ಖರ್ಚು ಬೇರೆ

ಪತ್ತೆ — ಸ್ಟಾರ ಹೌಸ ಪಿ. ಬಿ ೫೦೮. ಜಿ. ಟಿ. ಮದ್ರಾಸ

ಅತ್ಯಂತ ಚಿಪೆ ! ಉಚಿತ !

ಕೇವಲ ಉಚಿತ **ಕೇವಲ ಉಚಿತ**



“ ತಾರಾ ” ಲೀವರ ರಜಿಸ್ಟರ್ಡ ಪೊಕೆಟ್ ವಾಚ್ ೧೪ ಕೆರೆಟ್ ರೋಲ್ಡ ಗೋಲ್ಡಿನದು. ಮುಚ್ಚಳದ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚುಹೊಡೆದಿರುವರು ಈ ಗಡಿಯಾರವನ್ನು **ಕೊಂಡುಕೊಳ್ಳುವವರಿಗೆ** ನಾವು ನಮ್ಮ “ ಸಿ ” ರಜಿಸ್ಟರ್ಡ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ **ಕಾಣಿಕೆ. ಕೆಲವೇ** ಗಡಿಯಾರಗಳಿವೆ. ಬೇಗ್ಗ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು “ ತಾರಾ ” ಲೀವರ ರಿಜಿಸ್ಟರ್ಡ ೧೪ ಕೆರೆಟ ರೋಲ್ಡ ಗೋಲ್ಡಿನ ಪೊಕೆಟ ವಾಚ್ ಗಡಿಯಾರಗಳಿಗೆ ಕೂಡಿ ಬರೇ **ರೂಪಾಯಿ ೫**

ಕ್ಯಾಪ್ಟನ್ ವಾಚ್ ಕಂ.. ಪಿ ಬಿ. ೨೬೫ ಮದ್ರಾಸ

ರಂಗಭೂಮಿಯ ಸುಧಾರಣೆ.

(ಲೇಖಾಂಕ ೫)

ನಾಟಕದಲ್ಲಿ ಸಂಗೀತ

ಕಳೆದ ಲೇಖನದಲ್ಲಿ ನಾವು ನಾಟಕದಲ್ಲಿ ಗದ್ಯ ಭಾಗದ ಪ್ರಾಮುಖ್ಯತೆಯನ್ನು ಅರಿದೆವು. ಈಗ ಅಷ್ಟೇ ಮಹತ್ವವನ್ನು ಸಂಗೀತಕ್ಕೆ ಸಹ ಕೊಟ್ಟು ಬರೆಯಲಾರೆವು. ನಾಟಕದಲ್ಲಿ ಸಂಗೀತದ ಅವಶ್ಯಕತೆಯೇ ಇಲ್ಲವೆ ಎಂಬುದೇ ವಿವಾದಾಸ್ಪದವಾದ ವಿಷಯವಾಗಿರುತ್ತದೆ. ನಮ್ಮ ಅಭಿಪ್ರಾಯವು ಹಾಗೇನೂ ಇದೆಯೆಂದು ನಾವು ತಿಳಿಸಲು ಇಚ್ಛಿಸುವುದಿಲ್ಲ. ನಾಟಕದ ಪ್ರಥಮ ಉದ್ದೇಶವು ನಟನೆಯೆಂಬುದು ನಿಜವಾದರೆ ಅದರಲ್ಲಿ ನಾವು ಸಂಗೀತಕ್ಕೆ ಪ್ರಾಮುಖ್ಯತೆಯನ್ನು ಕೊಡುವ ಕಾರಣವಿಲ್ಲವೆಂಬುದೇ ನಮ್ಮ ಮತ.

ಮೊದಲಿನ ನಾಟಕಗಳಲ್ಲಿ, ಗದ್ಯ, ನರ್ತನ, ಮತ್ತು ಸಂಗೀತ ಇವುಗಳು ಹೆಚ್ಚಾಗಿದ್ದುವು. ಗದ್ಯದ ಪ್ರಾಮುಖ್ಯತೆಯು ಬಹಳ ಕಡಿಮೆ ಇದ್ದಿತು. ಮತ್ತು ನರ್ತನವು ಸಂಗೀತದಷ್ಟು ಧಾರಾಳವಾಗಿ ಉಪಯೋಗಿಸಲ್ಪಡುತ್ತಿತ್ತು. ನಾವು ಬಯಲಾಟಗಳಲ್ಲಿ ಇಂದೂ ಸಹ ನರ್ತನದ ಪ್ರಾಬಲ್ಯವನ್ನು ಕಾಣುತ್ತಿರುವೆವು. ರಾಮ, ಲಕ್ಷ್ಮಣ, ಸೀತೆಯರೆಲ್ಲರೂ ಕುಣಿಯುವರು. ಆದರೆ, ದಿನೇ ದಿನೇ ಅದರ ಪ್ರಾಮುಖ್ಯತೆಯು ಕಡಿಮೆಯಾಗುತ್ತ ನರ್ತನೆಯ ಕಾರ್ಯವು ಒಬ್ಬ ನರ್ತಕಿಯರಿಗೇ ಈಗ ವಹಿಸಲ್ಪಟ್ಟಿದೆ. ಇನ್ನುಳಿದ ಭಾಗಗಳೆಂದರೆ ಗಾಯನ, ಮತ್ತು ಗದ್ಯ. ಮೊದಮೊದಲಿನ ನಾಟಕಗಳಲ್ಲಿ ನಾವು ಬರೇ ಸಂಗೀತದ ಹಾವಳಿಯನ್ನು ಮಾತ್ರ ಕಾಣುವೆವು. ಈಗಲೂ ಅಂತಹ ನಾಟಕಗಳು ನಮ್ಮಲ್ಲಿ ವಾಡಿಕೆಯಲ್ಲಿವೆ. ಎರಡು ಮಾತುಗಳಿದ್ದರೆ ಹತ್ತು ಹಾಡುಗಳು ಇರುವವು. ಇದರ ದೆಸೆಯಿಂದ ಇಂದು ನಮ್ಮ ನಾಡಿನಲ್ಲಿ, ಚೆನ್ನಾಗಿ ಹಾಡಲು ಬಂದವನೇ ಉತ್ತಮ ನಟನೆನಿಸಿಕೊಂಡಿರುವನು. ಇದರಿಂದ ನಾಟಕದ ಶ್ರೇಷ್ಠ ಸಾರವಾದ ನಟನೆಯ ಮೇಲೆ ಯಾವ ಪರಿಣಾಮವಾಗಿದೆ ಎಂಬುದನ್ನು ನಾವು ಚೆನ್ನಾಗಿ ಪರಿಶೀಲಿಸಬೇಕಾಗಿದೆ. ಎಂದಿನವರೆಗೆ ಸಂಗೀತವು ನಟನೆಯ ಮೇಲೆ ಅಧಿಕಾರವನ್ನು ನಡೆಯಿಸುವುದೋ ಅಂದಿನವರೆಗೆ ನಮ್ಮಲ್ಲಿ ಉತ್ತಮ ನಟರ ಉತ್ಪತ್ತಿಯು ಸಾಧ್ಯವಿಲ್ಲ. ಹಾಡು ಬಂದೊಡನೆಯೇ ಅಭಿನಯದ ಕೊಲೆಯು ನಡೆಯುವದು. ಹಾಡುಗಾರನು, ತಾನು ಅದುವರೆಗೆ ಗದ್ಯರೂಪದಿಂದ ಎತ್ತಿ ತಂದಿದ್ದ ರಸದ ಪ್ರವಾಹದ ಶೋಭೆಯನ್ನು ಸಂಗೀತದಿಂದ ಮುರಿಯುವನು. ಇತ್ತ, ಅವನ ಬಳಿಯಲ್ಲಿರುವ ಇತರ ನಟರಂತೂ, ಇವನು ಸಂಗೀತದಲ್ಲಿ ಕುಣಿದಾಡುತ್ತಿರುವಾಗ, ಅವರು ಕಲ್ಲು ಬೊಂಬೆಗಳಂತೆ ನಿಲ್ಲಬೇಕಾಗುವುದು. ಸಂಗೀತವು ಮೊದಲು ರಸಾಭಾಸವನ್ನು ತಂದು ಹಾಕುವದೆಂದು ರಂಗಭೂಮಿಯ ಮೇಲೆ ಸುಳಿದಾಡುವವರ ಮುಳಿಸುತ್ತದೆ. ಹೆಚ್ಚೇನು? ಕೈ. ವರದಾಚಾರ್ಯರಂತಹ ಸುಪ್ರಸಿದ್ಧ ನಟರೂ ಸಹ, ಹಾಡುವಾಗ, ರಸದ ಉದ್ರೇಕವನ್ನು ಮರೆತು ಆಲಾಪನೆಗೂ, ಸಂಗತಿಗಳಿಗೂ ಸರಿಯಾಗಿ ಕೈ ಹ್ಯಾಲಾಡಿಸುತ್ತಿದ್ದರೆಂದರೆ ಯಾರಿಗೆ ವಿಷಾದವಾಗದು!

ಎರಡನೆಯದಾಗಿ, ದುಃಖ, ಕೋಪ, ಆನಂದಗಳಲ್ಲಿ ಮೆರೆಯುವ, ರಾಮ, ರಾವಣ, ದುಷ್ಯಂತ ಮೊದಲಾದವರು ಸದಾ ಗಾಯಕರಂತೆ ತಮ್ಮ ಭಾವನೆಯನ್ನು ಪ್ರಕಟಿಸುತ್ತಿದ್ದರೆಂದರೆ ಅದು ನಮಗೆ ಒಪ್ಪುವದಿಲ್ಲ! ಹೀಗೆ ನಾವು ಟೀಕೆ ಮಾಡುವಾಗ ಸಂಗೀತಪ್ರಿಯರು ನಮ್ಮ ಮೇಲೆ ಕೈಮಾಡಬಹುದು. ಸಂಗೀತದಲ್ಲಿ ನಮಗೂ ಅವರ ಆಸಕ್ತಿ ತುಂಬಾ ಇದೆ. ಆದರೆ ಅದನ್ನು ರಂಗಭೂಮಿಯ ಜತೆಯಲ್ಲಿರಿಸುವಾಗ ನಾವು ಅದಕ್ಕೆ ಇಲ್ಲದ ಸ್ಥಾನವನ್ನು ಕೊಡಲಾರೆವು.

ನರ್ತನೆಯಂತೆಯೇ ಸಂಗೀತಕ್ಕೂ ಒಂದು ನಿಯಮಿತಸ್ಥಾನವಿರುವುದು. ನಮಗೆ ಒಪ್ಪುವ ವಿಷಯ ದೇವರ ಸ್ತೋತ್ರವನ್ನು ಮಾಡುವಾಗ, ಮೊದಲನೆಯ ಕೆಲವು ಸ್ಥಳಗಳಲ್ಲಿ ಒಂದು ಬಾರಿ. ಮತ್ತು ಹಾಡುಗಳು ಬರುವಾಗ ರಂಗಭೂಮಿಯಲ್ಲಿ ಒಬ್ಬನೇ ನಟನಿರುವಾಗ ಇರಬೇಕು. ಅಂದರೆ ಅವನು ತನ್ನ ಪ್ರೇಮವನ್ನು ಪ್ರಕಟಿಸುವಾಗ (ಅಂದರೆ, ರಾಗ ವಿಸ್ತಾರ ಮೊದಲಾದುವನ್ನು ತೋರಿಸುವಾಗ) ಇತರ ನಟರನ್ನು ಸಂಕಟಕ್ಕೆ ಸಿಕ್ಕಿಸುವದಿಲ್ಲ. ಇನ್ನು ಬಹಳ ಮಂದಿ ನಟರು ರಂಗಭೂಮಿಯಲ್ಲಿ ನೆರೆದಾಗ ಒಬ್ಬನು ತನ್ನ ಹಾಡಿನ ಹೊಳೆಯನ್ನು ಹರಿಸತೊಡಗಲಿ, ಇತರರಿಗೆ ವೇಳೆಯಿಲ್ಲದೆ ಭಾವಶೂನ್ಯವಾದ ಒಂದು ಆಲಾಪನದ ತೆರೆಗಳನ್ನು ನೋಡುವುದಾಗಲಿ ಅಸಮಂಜಸವಾದುದು. ಊಟದಲ್ಲಿ ಉಪ್ಪಿನಕಾಯಿಯಂತೆ ಸಂಗೀತವು ನಾಟಕದಲ್ಲಿರಲಿ. ಬದಲು ಅನ್ನದಷ್ಟೇ ಉಪ್ಪಿನಕಾಯಿಯನ್ನು ಸೇವಿಸಿದರೆ ಆಗ ನಮ್ಮ ಬಾಯಿ ಖಂಡಿತವಾಗಿ ಕೆಟ್ಟುಹೋಗುವದು.

ಈ ವಿಷಯದಲ್ಲಿ ನಾವು ಮರಾಠೀ ನಾಟಕ ಮಂಡಳಿಗಳನ್ನು ಹೆಚ್ಚಾಗಿ ಅನುಕರಿಸಬೇಕು. ಅವರಲ್ಲಿ ಅನೇಕ ಮಂಡಳಿಗಳು ಬರೇ ಗದ್ಯನಾಟಕಗಳನ್ನಾಡುತ್ತಿವೆ. ಗದ್ಯನಾಟಕಗಳು ಜನರಂಜನೆಯನ್ನು ಮಾಡಲಾರವು ಎಂಬುದು ಸುಳ್ಳೆಂದು ನಾವು ಅವರಿಂದ ತಿಳಿಯಬೇಕು. ಕೈ। ಗಣಪತರಾವ, ಶ್ರೀ ಜೋಷಿ ಮೊದಲಾದವರು ಸಂಗೀತದ ಗಂಧವಿಲ್ಲದೆ ನಟಿಸಿ ಎಂತಹ ಪರಿಣಾಮವನ್ನುಂಟುಮಾಡಲು ಶಕ್ತರಾದರು! ಶ್ರೀ ಬಾಲಗಂಧರ್ವರಿಗಿಂತಲೂ ಮಿಗಿಲಾದ ಹಾಡುಗಾರರು ಈಗ ಇರುವರಾದರೂ ಅವರ ಅಸಾಧಾರಣ ಅಭಿನಯ ಪರಿಜ್ಞಾನದ ದೆಸೆಯಿಂದ ಅವರು ಜನರ ಮನಸ್ಸನ್ನು ಆಕರ್ಷಿಸಲು ಶಕ್ತರಾಗಿರುವರು. ಹೆಚ್ಚೇನು— ಈಗಲೂ, ನಮ್ಮೊಡನೆಯಲ್ಲಿ ಸಂಚರಿಸುತ್ತಿರುವ ಶ್ರೀ ರಾಘವಾಚಾರ್ಯರು, ಸಂಗೀತಕ್ಕೂ ಮಿಗಿಲಾಗಿ ನಾಟಕ ಸಾಮ್ರಾಜ್ಯದಲ್ಲಿ ಗದ್ಯಕ್ಕಿರುವ ಪ್ರಾಮುಖ್ಯತೆಯನ್ನು ವ್ಯಕ್ತಪಡಿಸಿರುವರೆಂದರೆ ನಮಗೆ ಆಶ್ಚರ್ಯವಾಗದಿರದು.

ಕನ್ನಡ ರಂಗಭೂಮಿಯಲ್ಲಿ ಇಂದು ಎಲ್ಲಿ ನೋಡಿದರೂ ಉತ್ತಮ ಅಭಿನಯಕಾರರ ಕೊರತೆಯು ಕಂಡುಬರುವುದು. ಇದಕ್ಕೆ ನಾವು ಸಂಗೀತಕಾರರಿಗೆ ನಟರೆಂದು ಕರೆಯುವ ಅಭ್ಯಾಸವನ್ನು ಮರೆತರೆ ತಕ್ಕ ಚಿಕಿತ್ಸೆಯನ್ನು ಮಾಡಿದಂತಾಗುವದು. ಹಾಗಾದರೆ ಮತ್ತೊಂದು ವರುಷಗಳಲ್ಲಿ ನಾವು ಎಲ್ಲಿಯೂ ಉತ್ತಮ ನಟರನ್ನು ಕಾಣುವುದಕ್ಕೆ ಇಲ್ಲವೆ, ಕನ್ನಡ ಭಾಷಾಸೇವೆಯನ್ನು ನಡೆಸಲಿಕ್ಕೆ ಶಕ್ತರಾಗುವೆವು. ಇತಿ

ಕೌಶಿಕ

ಬೇಕು.

(ವೀರವಂಶಜನಿಂದ.)

ಬೇಕು. ಮುಂದಾಳುಗಳು ಬೇಕು. ನ್ಯಾಯ ನೀತಿ ಪರರಾದ ಅಧಿಕಾರವರ್ಗದವರು ಬೇಕು. ಮನಮುಟ್ಟಿ ಪರರ ಕಷ್ಟಗಳನ್ನು ಪರಿಹರಿಸುವ ವೀರ ಕೌನ್ಸಿಲ್‌ರರು ಬೇಕು. ಬೇಕು. ವಿಶ್ವಪ್ರೇಮಿಗಳು ಬೇಕು. ನಮ್ಮ ಪೂರ್ವಜರು ಜೀವಕೋಟಿಯದೆಲ್ಲ ವಲ್ಲದೆ ಅಣುರೇಣುತೃಣಕಾಷ್ಟಗಳಲ್ಲೆಲ್ಲ ಪರಮಾತ್ಮನಿರುವನೆಂದೂ, ಎಲ್ಲಕ್ಕೂ ಈಶ್ವರೀಪ್ರೇಮದ ಬಂಧನವಿದೆಯೆಂದೂ ತುಂಬಾ ನಂಬಿದವರಾಗಿದ್ದರು ವಿಶ್ವಪ್ರೇಮಿಗಳಾಗಿದ್ದರು. ವಿಶ್ವಬಂಧುಗಳಾಗಿದ್ದರು ಅಂತೆಯೇ ಅವರ ಕೀರ್ತಿಯು ಈವರೆಗೆ ಅಜ್ಞಳಿಯದೆ ಮೆರೆಯುತ್ತಿದೆ. ಅವರಕಾಲದಲ್ಲಿ ಸ್ವರ್ಣಭೂಮಿಯೆಂದು ಕರೆಯಿಸಿಕೊಂಡು ಸೌಖ್ಯದ ಸಾಗರವೆನಿಸಿದ ಈ ಭರತಭೂಮಿಯು ದಾರಿದ್ರ್ಯದಲ್ಲಿಸಿಕ್ಕು ಪೇಚಾಡುತ್ತಿರುವದಕ್ಕೆ ಕಾರಣವು ನಮ್ಮ ಹೇಡಿತನವೂ, ಮನೋದೌರ್ಬಲ್ಯವೂ ಅಲ್ಲದೆ ಮತ್ತೇನು? ಮತಬೇಧಗಳಿಂದ, ಸ್ವಾರ್ಥದೃಷ್ಟಿಯಿಂದ, ನಮ್ಮ ಕ್ಷುದ್ರ ಭಾವನೆಗಳಿಂದ, ದಾಸ್ಯದ ತವರ್ಮನೆಯಾದ ಸಂಕುಚಿತ ಭಾವನೆಗಳಿಂದ, ನಮ್ಮ ಈ ಚಿನ್ನದ ನಾಡನ್ನು ಬನ್ನದ ಕಾಡನ್ನಾಗಿಮಾಡಿಬಿಟ್ಟಿರುವೆವು. ಹಿಂದೆ ನಮ್ಮ ವಿಜಾಪುರ ಜಿಲ್ಹೆಯಲ್ಲಿಯೇ ಪಟ್ಟದಕಲ್ಲು ನಾಲುಟಗಿಗಳಲ್ಲಿ ವಿಶ್ವವಿದ್ಯಾಲಯಗಳು ಮೆರೆದುದು ಕನ್ನಡನಾಡಿನಲ್ಲಿಯೇ ಅಲ್ಲವೇ? ಈಗಾವ ವಿದ್ಯಾಲಯಗಳಿವೆ? ಬೇಕು. ಮೊದಲು ಸತ್ಯ ಶಿಕ್ಷಣದ ಬೆಳವಣಿಗೆಯಾಗಬೇಕು. ಇಂಥ ಕಾರ್ಯಗಳಿಗಾಗಿ ನಿಸ್ವಾರ್ಥಿಗಳ ಉದಯವಾಗಬೇಕು. ಹೊಟ್ಟೇವಾಡಿನವರಿಂದ ಏನಾಗ್ದೀತು? ಜನರಕಷ್ಟಗಳನ್ನು ನೋಡಿ ಕಂಬನಿಗರೆಯುವವರು ಬೇಕು. ಪರದುಃಖ ಪರಪೀಡೆಗಳಿಗೆ ಹೃದಯಕರಗಿ ನೀರಾಗುವವರು ಬೇಕು. ಜನಸೇವೆಯಲ್ಲಿಯೇ ಜೀವನವನ್ನು ಪೂರ್ತಿಗೊಳಿಸುವವರು ಬೇಕು. ಜನತಾರೂಪೀ ಜನಾರ್ದನನ್ನು ಆರಾಧಿಸುವವರು ಬೇಕು. ಅಧಿಕಾರಬಲದಿಂದಲೂ, ಆಡಂಬರದ ಗೌರವದಿಂದಲೂ ಧನ್ಯರಾದೆವೆಂದು ತಿಳಿದು ಕಣ್ಮುಚ್ಚಿಕುಳಿತು ಕೌಲೆತ್ತಿನಂತೆ ಗೋಣುಹಾಕುವ ಅನ್ಯಾಯಿಗಳು ಹೇಳಹೆಸರಿಲ್ಲದೇ ಹೋಗಬೇಕು. ಆದಿನವೇ ನಮ್ಮನಾಡಿನ ಉದಯಕಾಲ. ನನ್ನ ತರುಣಬಂಧುಗಳೇ ಏಳಿರಿ ಕಣ್ತೆರೆಯಿರಿ ರಕ್ತವು ಬಿಸಿಇರುವಾಗಲೇ ತೂರಿಕೊಳ್ಳಿರಿ. ಶೌರ್ಯದ ಪ್ರಕಾಶವನ್ನು ತೋರಿಸಿರಿ. ಸ್ವಾರ್ಥವನ್ನು ತುಳಿದು 'ಮಹಾತ್ಮಾಸಾಧು' ಪುರುಷನನ್ನು ಹಿಂಬಾಲಿಸಿರಿ ಕನ್ನಡನಾಡು ಕನ್ನಡ ನುಡಿಗಳನ್ನು ಮೊದಲಿನಂತೆ ಮೆರೆಯಿಸಲು ಸಿದ್ಧರಾಗಿರಿ. ಕನ್ನಡದ "ಜಯ" ಭೇರಿಯನ್ನು ನುಡಿಸಿರಿ.

ಅಮೃತ ವಚನಗಳು.

ಲೇ:— ಪಿ. ಸ್ವಾ, ಲಕ್ಷ್ಮೀಶವರ್ಮ, ಸುಂಡಿಲಾಪುರ.

ದೇವನು ನಿನ್ನ ಮೇಲೆ ಕೃಪೆ ಮಾಡಬೇಕೆಂಬ ಇಚ್ಛೆಯಿದ್ದರೆ ಆತನಿಂದುತ್ಪನ್ನವಾದ ಪ್ರಾಣಿಮಾತ್ರಕ್ಕೂ ಉಪಕಾರ ಮಾಡು; ಮತ್ತು ಅವರ ಕೂಡ ಉದಾರತನದಿಂದ ನಡೆದುಕೊಳ್ಳು; ಅರಸಾಳುಗಳ ಸ್ನೇಹದ ಮೇಲೂ, ಹುಡುಗರ ಮಧುರವಾದ ಧ್ವನಿಯ ಮೇಲೂ, ವಿಶ್ವಾಸವಿಡಬೇಡ ಅವು ಸ್ವಲ್ಪ ನಿಸ್ಸಹೋಗುವದರೊಳಗೆ ಒಡೆದು ಕೆಡುತ್ತದೆ

† † †

ಪರಮೇಶ್ವರನ ಆಜ್ಞಾಧಾರಕ ಸೇವಕನಾದ ರಾಜನೇ! ನೀನು ರಾಜ್ಯಾಧಿಕಾರ ನಡೆಯಿಸಲಿಕ್ಕೆ ಎಂದೂ ಮುಟ್ಟಿ ಬರಬೇಡ.

† † †

ಮೊದಲು ಮನುಷ್ಯರಲ್ಲಿ ಸಾರಾಸಾರ ವಿಚಾರ, ಜಾಣತನ ಮತ್ತು ಬುದ್ಧಿ ಇವು ಇರಬೇಕು ಆಮೇಲೆ ಅವನಿಗೆ ಅಧಿಕಾರವು ದೊರೆಯಬೇಕು. ಮೂರ್ಖ ಮನುಷ್ಯನ ಕೈಯೊಳಗೆ ಅಧಿಕಾರವೂ ಸಂಪತ್ತೂ ಇದ್ದರೆ ಅವು ಅವನ ನಾಶಕ್ಕೂ ಜೀವರ ವಿರೋಧಕ್ಕೂ ಕಾರಣವಾಗುತ್ತವೆ.

† † †

ಮನಃಪೂರ್ವಕವಾಗಿ ಪ್ರಾರ್ಥನೆಯನ್ನು ಮಾಡಬೇಕೆಂದು ಕಟ್ಟುತ್ತಿದ್ದ ಪಾಪಿಯು, ಅಭಿಮಾನಿಯಾದ ಭಕ್ತನಿಗಿಂತ ಲೇಸು. ಅದರಂತೆಯೇ ಆನಂದವುಳ್ಳವನೂ, ಮನವೊಲಿಸುವವನೂ ಆದ ಬಗರಿನ ಅಧಿಕಾರಿಯು ಪ್ರಜಾಪೀಡಕನಾದ ವಿದ್ವಾಂಸ ಅಧಿಕಾರಿಗಿಂತ ಒಳ್ಳೆಯವನು.

† † †

ತನ್ನ ಅಂತಃಪ್ರಾಣ- ಬಹಿಃಪ್ರಾಣ ಅಂದರೆ ಜೀವ ಮತ್ತು ದ್ರವ್ಯಗಳು ಹೋದರೂ ಯೋಜನೆಯಿಲ್ಲವೆಂಬುವಂಥ ಸ್ವಾರ್ಥತ್ಯಾಗವುಳ್ಳವನೇ ಅರಸಾಳುಗಳ ವಿರುದ್ಧ ಹೋರಾಡಲಿಕ್ಕೆ ತಕ್ಕವನು.

† † †

ಓ ಅರಸರೇ! ಯಾವತ್ತು ದೇಶವು ಸಹಕಾರಿಯಾಗುವದು ಸಾರ್ವಭೌಮತ್ವಕ್ಕೆ ಕಾರಣವಿದ್ದ ಪಕ್ಷಕ್ಕೆ ತಾವುಗಳು ಸರ್ವದೇಶಕ್ಕೂ ತ್ರಾಸವನ್ನೇಕೆ ಕೊಡುವಿರಿ? ಸರ್ವರಮೇಲೂ ದಯೆ ಮಾಡುವವನ ರಾಜ್ಯದಲ್ಲಿ ಪ್ರಜೆಗಳು ನಿರ್ಭೀತಿಯಿಂದಿರುತ್ತಾರೆ. ತಮ್ಮ ಹತ್ತಿರ ಒಂದೂ ಇಲ್ಲ. ನ್ಯಾಯೀ ಸಾರ್ವಭೌಮನಿಗೆ ಅವನ ಪ್ರಜೆಗಳೇ ನಿಜವಾದ ಸೈನಿಕರು

† † †

—ಪರ್ಶಿಯನ್ ಕವಿ ಶೇಖಸಾದಿ.

ನೋಟೀಸು

ಈ ನೋಟೀಸಿನ ಮೂಲಕವಾಗಿ ಯಾವತ್ತು ಜನರಿಗೆ ತಿಳಿಯಪಡಿಸುವದೇನಂದರೆ—

ನನ್ನ ತಿಸೇ ಮಗಾ ಗೋವಿಂದಗೌಡಾ ಅಂಬುವವನು ಏಲಿಕಡಿಗೆ ದುರ್ವ್ಯಸನಕ್ಕೆ ಬಿದ್ದು ರಾಂಡಬಾಜ ವಗೈರೇ ಮಾಡತಾನೆ ಮನೆಯಲ್ಲಿ ಇದ್ದು ಚಲೋ ರೀತಿ ಬಾಳ್ವೆಮಾಡುವದಿಲ್ಲಾ. ಆತನು ತನ್ನ ದುರ್ವ್ಯಸನಕ್ಕೆ ಈಗ ೨೦೦।೩೦೦ ರೂ ಸಾಲಾಮಾಡಿದ್ದು ಆತನಿಗೆ ಬುದ್ಧಿಹೇಳಿ ಆ ಸೇಡ ತೀರಿಸಿದೆ. ಅದರೂ ಆತನು ನನ್ನ ಬುದ್ಧಿಮಾತು ಕೇಳದೇ ತನ್ನ ಮನಸಿಗೆ ಬಂದಂತೆ ಉಡಾಳನಾಗಿ ತಿರಗಹತ್ತಿದಾ. ಆದ್ದರಿಂದಾ ಈ ನೋಟೀಸಿನಿಂದ ತಿಳಿಯ

ಪಡಿಸುವದೇನಂತ್ರೆ ಆತನಿಗೆ ಯಾವ [illegible] ಇರಲಿಲ್ಲ. ಆತನ ತಾಬೇದಲ್ಲಿ ಯಾವ ಮಿಳಕತು ಇರಲಿಲ್ಲ. ಕಾರಣಾದೇಣೆ ಕೊಟ್ಟರೆ ಆ ದೇವ ನನಗೆ ಮ ನನ್ನ [illegible] ಗಿ ಏನೂ ಸಂಬಂಧ ಇರುವುದನ್ನು ಮತ್ತು ನನ್ನ ಪಿತ್ರಾರ್ಜಿತ ಆಸ್ತಿಯಲ್ಲಿ ಆತನು ಹಿಸೆ ಸಮಾ [illegible] ವಿಚಾರಿಸಲಿಲ್ಲ. ಯಾಕಂದ್ರೆ ಆತನ ಮಂತ ತಿ ಇದ್ದ ಇವರು ಉಪಭೋಗಮಾಡತಕ್ಕ [illegible] ಆಗಿಯೊಂದು.

ತಾರೀಖು ೧೧ ಜ್ಯಾನೇವಾರೀ ಸನ್ನ ೧೯೨೭ ಇಸ್ವಿ.

() ಈ ಧಂಯು ಹಸ್ತಾಕ್ಷರದ ಗೋವಿಂದ [illegible] ಪಾಟೀಲ ಈತನದು ಇದೆ.

ವರ್ತಮಾನಸಾರ.

ಇಹವೃತ್ತ

ಶ್ರೀ ಬಸವೇಶ್ವರ ಹಾಯಸ್ಕೂಲಿನ ಓರ್ವ ಶಿಕ್ಷಕರಾದ ಶ್ರೀ. [illegible] ಪಾಟೀಲ ಇವರಿಗೆ ಮಾರ್ಚ ತಿಂಗಳಿನಿಂದ ಕೆಲಸದಮೇಲಿಂದ ತಗಿದು ಹಾಕಿದ ಬಗ್ಗೆ ತಿಳಿದಿದೆ. ಅವರ ಬದಲು ಇನ್ನೂ ಯಾರು ಬರುವರು ಇದಲ್ಲದೆ ಇನ್ನೂ ಕೆಲವರನ್ನು ತಗಿದುಹಾಕಿದರೋ ತಿಳಿಯದು. ಇನ್ನೂ ಕೆಲವು ಶಿಕ್ಷಕರನ್ನು ತೀವ್ರವಾಗಿ ತೆಗೆಯುವರೆಂಬ ಸುದ್ದಿಯು ಊರಲ್ಲಿ ಹಬ್ಬಿದೆ.

ಟಿಕ್ಕೆಟಿನ ಪಾರ್ಲರ ತರು ಹಾಕಿ ಕೊಳ್ಳುವ ಮಂಡಲಗಳನು ವಿಸರ್ಜಿಸಲು ಬಹಳ ಪ್ರಯತ್ನಮಾಡುತ್ತಲಿದ್ದರೂ ಸಭಾಸದರನ್ನು ಕೂಡಿಸಲು ದಿನಾಲು ಮಂಜೂರಿ [illegible] ತ್ತಾರೆ.

ಮುಂಬೈ ಕರ್ನಾಟಕ.

ಬಿಜಾಪುರ ಜಿಲ್ಲೆಯ ಮೆ. ಅಸಿಸ್ಟೆಂಟ ಕಲೆಕ್ಟರ ದಕ್ಷಿಣ ಭಾಗ ಇವರು ಫೆಬ್ರುವರಿ ಮತ್ತು ಮಾರ್ಚ ತಿಂಗಳುಗಳಲ್ಲಿ ಕೆಳಗೆ ಬರೆದಂತೆ ತಮ್ಮ ಪ್ರವಾಸವನ್ನು ಗೊತ್ತುಮಾಡಿರುವರು.

ಫೇಬ್ರುವರಿ ೧೧ನೇ ತಾರೀಖಿಗೆ ಪುಣೆಯಿಂದ ಬರುತ್ತಾರೆ. ೧೨ರಿಂದ ೧೪ ಹೆಡ್ ಕ್ವಾರ್ಟರ್ಸ್ ೧೫ ಹೊರಡುವರು. ೧೬ ರಿಂದ ೧೮ ಮುದ್ದೇಬಿಹಾಳ ತಾಲೂಕ ಪೈಕಿ ಹುಲ್ಲೂರು ೧೯ ರಿಂದ ೨೭ ಮುದ್ದೇಬಿಹಾಳ. ೨೮ ರಿಂದ ಮಾರ್ಚ ೩ ನಾಲತವಾಡ ೪ ರಿಂದ ೭ ತಾಳೀಕೋಟೆ. ೮ ರಿಂದ ೧೦ ಢವಳಗಿ. ೧೧ನೇ ತಾರೀಖಿಗೆ ಬೀಳಗಿ [illegible]

ಬಿಜಾಪುರ ಜಿಲ್ಲಾ ಲೋಕಲ್‌ಬೋರ್ಡಿನವರು ಪ್ರಾಥಮಿಕ ಶಿಕ್ಷಣ, ರಸ್ತೆ, ದವಾಖಾನೆ, ಭಾವಿಗಳು ಇತ್ಯಾದಿ ಕೆಲಸಗಳಿಗಾಗಿ ಲೋಕಲ್ ಫಂಡನ್ನು ಇಮ್ಮಡಿ ಮಾಡುವದೆಂತೆ ವೃತ್ತಪತ್ರಕರ್ತರೂ ಇತರ ಟೀಕಾಕಾರರೂ ಜನರಲ್ಲಿ ತಪ್ಪುತಿಳುವಳಿಕೆಗಳನ್ನುಂಟುಮಾಡುವ ಸಂಭವವಿರುವದೆಂದು ಈಗಿನ ಬೋರ್ಡಿನ ಆರ್ಥಿಕ ಸ್ವರೂಪವನ್ನು ಜನರಿಗೆ ತಿಳಿಸಲು ಒಂದು ಪ್ರಕಟನೆಯನ್ನು ತೆಗೆದಿರುವರು.

ಗದಗಿನ ವೀರನಾರಾಯಣ ದೇವಾಲಯದಲ್ಲಿ ವೇದಶಾಸ್ತ್ರ ಸಂಪನ್ನರಾದ ನಾರಾಯಣಾಚಾರ್ಯ ಶಿರಹಟ್ಟಿಯವರು ಶ್ರೀಮದ್ಭಾಗವತ ಪುರಾಣವನ್ನು ೭ ದಿವಸಗಳಲ್ಲಿಯೇ ಪೂರ್ತಿ ಹೇಳಿ ಮುಗಿಸಿದರು. ಪ್ರತಿ ದಿವಸ ಪುರಾಣ ಶ್ರವಣಕ್ಕೆ ವಿಶೇಷ ಜನರು ಸೇರುತ್ತಿದ್ದರು. ಪುರಾಣ ಸಮಾಪ್ತಿಯ ದಿವಸ [illegible] ಎಲ್ಲ ಜನರೂ ನೆರೆದಿದ್ದರು. ಪುರಾಣಿಕರು [illegible] ಅಪ್ಪಟ ವಚನವನ್ನು ಹೇಳಿದರು. [illegible] ಉಪಾಧ್ಯಾಯರಾದ ವೇದಮೂರ್ತಿ [illegible] ಭಾಗವತ [illegible] ಸಂಪ್ರದಾಯ [illegible] ಮಾಡಿದರು.

ಮೈಸೂರ ಕರ್ನಾಟಕ

ಬೆಂಗಳೂರಿನ ಶ್ರೀ. ಲಂಬಾ ಪ್ರಸಾದಿಕ ಕರ್ನಾಟಕ ಸಂಗೀತ ನಾಟಕ ಮಂಡಳಿಯವರಿಗೆ ತೀರ್ಥಹಳ್ಳಿಯ ಮಹಾಜನಗಳು ಅವರ ಮುಖ್ಯ ಕೆಲಸಗಾರರ ಪಾತ್ರಯ, ವಿಷಯ ಪ್ರಸ್ತಾರ, ಶಾಂತಭಾವ, ಹಾಸ್ಯರಸಾದಿ ನವರಸಗಳಿಗೆ ಸಂತೋಷಪಟ್ಟವರಾಗಿ ಸುವರ್ಣ ಪದಕದೊಂದಿಗೆ ಮಾನಪತ್ರವನ್ನು ಸಮರ್ಪಿಸಿದರು.

ಹಿಂದುಸ್ಥಾನ

ಅನಂತಪುರದ ಮ್ಯುನಿಸಿಪಾಲಿಟಿಯು ಅಸ್ಪೃಶ್ಯ ಹುಡುಗರನ್ನು ಶಾಲೆ ಸಿಬ್ಬಂದಿಯಲ್ಲಿ ತೆಗೆದುಕೊಳ್ಳುವರು.

ಪಟಿಯಾಲಾದಲ್ಲಿ ನಾಯಿಗಳದೊಂದು ದೊಡ್ಡ ಪ್ರದರ್ಶನವಾಯಿತು.

ನವಸಾರಿ ಪ್ರಾಂತದಲ್ಲಿ ಯೋಗವ್ಯಾಯಾಮ [illegible] ಮತ್ತು ಆರೋಗ್ಯದ ಪ್ರದರ್ಶನವು ಫೇಬ್ರುವರಿ ೭-೮ ತಾರೀಖಿನ ದಿವಸ ಜರಗುವದು.

ಕಲಕತ್ತದಲ್ಲಿ ಕಲಾಕೌಶಲ್ಯದ ಪ್ರದರ್ಶನವಾಯಿತು. ಹಿಂದೀ ಕಲೆಯ ವಸ್ತುಗಳು ಅಲ್ಲಿ ಪ್ರದರ್ಶನೀಯವಾಗಿದ್ದವು. ಅಲ್ಲದೆ ಈಗಿನ ಹಿಂದೀ ಚಿತ್ರಗಳು ಮುಖ್ಯವಾಗಿ ಪ್ರದರ್ಶಿಸಲ್ಪಟ್ಟಿದ್ದವು.

"ಸ್ಯಾಂಡಸ್ಟರ್ ರಾಯಲ್ ಮಿಲಿಟರೀ ಕಾಲೇಜಿನಲ್ಲಿ ಹೋಗಲಿಚ್ಛಿಸುವ ಜನರ ಸಲುವಾಗಿ ಪ್ರವೇಶ ಪರೀಕ್ಷೆಯು ಡೆಹ್ರಾಡೂನದಲ್ಲಿ ಇದೇ ವರ್ಷ ಮೇ ತಿಂಗಳ ಕೊನೆಯ ಭಾಗದಲ್ಲಿ ಆಗುವದು. ಸರಿಯಾದ ತಾರೀಖು ಹಿಂದುಗಡೆಯಿಂದ ತಿಳಿಸಲ್ಪಡುವದು. ಪ್ರವೇಶ ಪರೀಕ್ಷೆಗೆ ಕೂಡುವ ವಿದ್ಯಾರ್ಥಿಗಳು ಹದಿನೆಂಟು ಇಪ್ಪತ್ತು ವರ್ಷದವರಿರಬೇಕು.

ಮುಂಬೈ ಇಲಾಖೆಯಲ್ಲಿ ಬೇರೆ ಬೇರೆ ಜಿಲ್ಲೆಗಳಲ್ಲಿ ಬೆಟ್ಟಗಳ ಹಾವಳಿಗಳನ್ನು ಕಡಿಮೆ ಮಾಡಲಿಕ್ಕೆ ಕೃಷಿ ಖಾತೆಯು ತೀವ್ರವಾಗಿ ಉದ್ದೀಕ್ತವಾಗುವದು.

ಮದ್ರಾಸ ಕಾಯದೇ ಕೌನ್ಸಿಲಿನ ದಾಕ್ಟರ ಮುತ್ತು ಲಕ್ಷ್ಮೀ ಎಂಬ ರೆಡ್ಡಿ ನಾರೀಮಣಿಯರು ಕೌನ್ಸಿಲ್‌ದ ಡೆಪ್ಯುಟಿ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿದ್ದಾರೆ.

ಹೈದರಾಬಾದದ ನಿಜಾಮರ ಸರಕಾರದ ಮುಖ್ಯ ಕಾರ್ಯದರ್ಶಿ ಪದಕ್ಕೆ ಹಾಟಿನಾದ ನವಾಬ ಸೈಯದ ನಾಸೀರ ಹುಸೇನ ಖಾನ ವಿಯಾಲ ಇವರು ಬರುವರೆಂಬ ಸುದ್ದಿಯು ಸುಳ್ಳು ಇರುವದು.

ಪರದೇಶ.

ಅಲಸ್ಕದಲ್ಲಿ ಒಂದು ಆನೆಯ ಕೋರೆದು ಮಂಜಿನೊಳಗಿಂದ ಸಿಕ್ಕಿರುವದು; ಅದರಲ್ಲಿ ತುಂಬ ಭಂಗಾರವಿರುವದು. ಕೋರೆಗೆ ಯಾವದಂತಕ್ಕೆ ಭಂಗಾರ ತಾನೇ ಅಂಟಿಕೊಂಡಿರುವದರಿಂದ ಅದನ್ನು ಹಲವು ಶತಮಾನ ಮೊದಲೇ ಯಾರೋ ಹುಗಿದಿರಬಹುದೆಂದು ಊಹಿಸುವರು. ಇದರ ಭಾರ ೭೫೦ ಪೌಂಡು.

ಯುರೋಪಿನಲ್ಲಿ ಕ್ಯೂಬಾ ಬರವ ಒಬ್ಬಳು [illegible] ವರ್ಷ ಪ್ರಾಯದ ಎಲಿಜಬೆತ ಬಿಚಿಲ್ ಎಂಬಾಕೆಯು ಬಹು ಖ್ಯಾತಿ ಪಡೆದಿರುವ ತರುಣಿಯಾಗಿರುವಳು. ಒಂದು ನಿಮಿಷಕ್ಕೆ ೧೮೩ ಶಬ್ದಗಳನ್ನು ಬರೆಯುವಳು.

ಜರ್ಮನಿಯಲ್ಲಿ ಕವಿ ರವೀಂದ್ರನಾಥ ಠಾಗೋರರವರು ಒಂದು ಸ್ಥಾನಕ್ಕೆ ತತ್ವ ಮನಗಳ ವಿಚಾರದಿಂದಾಗಿ ಒಂದು ಉಪನ್ಯಾಸ ಕೊಟ್ಟರು. ಅದರ [illegible] ಜರ್ಮನಿಯ ಭಾಷೆಯಲ್ಲಿ ಭಾಷಾಂತರಿಸಲ್ಪಟ್ಟಿತು. ಅದನ್ನು ಕೇಳಲಿಕ್ಕಾಗಿ ೫೦೦೦ ಮಂದಿ ೧೨ ಶಿಲಿಂಗು ಕೊಟ್ಟು ಹೋಗಿದ್ದರು.

ದಿ ಶಿಯರಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೊಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೬ ನೇ ಇಸ್ವಿಯ ಜುಲೈ ೩೧ ನೇ ತಾ॥ ದಿವ್ಸ ೩ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಬೋರ್ಡ ಆಫ್ ಡಾಯರೆಕ್ಟರ್ಸ್ ಚೇಅರಮನರಾದ ರಾವಸಾಹೇಬ ಡಾಕ್ಟರ. ಕೆ ಎಸ್ ಭಾಸ್ಕರ L. R. C P M. I. C S. ಅವರ ಅಧ್ಯಕ್ಷತೆಯಲಿ ನಡೆದು ಕೆಳಗೆ ಕಾಣಿಸಿದ ಸರ ಹಸರಿನ [illegible] ನತಿ ಇಲ್ಲದೆ ೧೦೦೦ ರೂ. ಸಲ್ಲತಕ್ಕದ್ದೆಂದು ನಿರ್ಣಯವಾಯಿತು—

(೧) ಎಲ್. ಪಿ [illegible] ಮಹಮ್ಮದ ಯುಸೂಫ ಡಿಸಿಲ್ರಿರ [illegible] ಗುಡ ಡಿಸ್ಟ್ರಿಕ್ಟ, ಹೈದರಾಬಾ ಡ್ಡೆಕ್ಕನ, ರೂ ೧೦೦೦

(೨) ಎಲ್ [illegible] ನಂ [illegible] ಸೆಯದ್ ಜಹೂರಅಲಿ [illegible] ಇನ್ಸ್ಪೆಕ್ಟರ್ ಔರಂಗಬಾದ [illegible] ರೂ ೧೦೦೦

(೩) ಎಲ್ ಪಿ ಪಿ ನಂ [illegible] ದೇವನ ವಾಸುದೇವನ ನಂ [illegible] ನಗಾರ ಐಡಗಲ್ಲಿ ಅಲ್ವಾಯಿ ರೂ ೭೦೦

(೪) ಬಾಂಡ ನಂ [illegible] ಮಿ ಶಂಕರಪ್ಪಾ ಬಸಪ್ಪಾ ದೇವನಹಂಚ, ಅಕ್ಕಸಾಲಿ ಬೆಡೀಗಾರಗಲ್ಲಿ ಹುಬ್ಬಳ್ಳಿ ರೂ ೧೦೦೦

(೫) ಬಾಂಡ ನಂಬರು ೧೪೨೦೭ ಮಿ ಸೇಠ ಬಾಪುಮಿಯಾ ಸೇಠ [illegible] ತಯಾರ ಮಾಡುವವರು ೭೧೫ ಭವಾನಿಪೇಟ ಪುಣಾ ೧೦೦೦

ಬಿ. ಎನ್. ಆರಾಧ್ಯ
ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ)

ಕಿರ್ಲೋಸ್ಕರ

ಕಬ್ಬಿಣ ನೇಗಿಲುಗಳು

ಹಂಗಾಮು (ಸುಗ್ಗಿ) ಸಮೀಪಿಸಿತು. ಈ ವರ್ಷ ಮಳೆ ಬೆಳೆ ಚನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವುದು ಕಿರ್ಲೋಸ್ಕರ ನೇಗಿಲು ನಂ ೧೧, ೯, ೮ ಇವು ಒಕ್ಕಲಿಗರಿಗೆ ಬಹಳ ಉಪಯೋಗ ಬೀಳುತ್ತವೆ. ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುತ್ತವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್. } ಕಿರ್ಲೋಸ್ಕರವಾಡಿ ಜಿಲ್ಲೆ ಸಾತಾರೆ

ಗವರ್ನಮೆಂಟಿನಲ್ಲಿ ರಜಿಸ್ಟರ ಮಾಡಲ್ಪಟ್ಟ ಜಗತ್ಪ್ರಸಿದ್ಧವಾದ

ಎಲ್ಲ ರೋಗಗಳಿಗೆ ಒಂದೇ ಔಷಧ.

ಅರ್ಕಶಫಾ ಅಥವಾ ಆರೋಗ್ಯ ಬಿಂದು

ಪ್ರವಾಶಿಮಿತ್ರ ಮೂರ್ತಿಮಂತವೈದ್ಯ

ಇದು ಅರ್ಕವಿದ್ದು ಇದರಲ್ಲಿ ನೀರು ರಸಾಯನ ಕೂಡಿರುವದಿಲ್ಲ. ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ಇದು ಪ್ರಸಿದ್ಧವಾಗಿ ೧೬ ವರ್ಷಗಳು ಆಗುತ್ತ ಬಂದವು. ಈವತ್ತಿನವರಿಗೆ ಎರಡು ಲಕ್ಷಗಳವರಿಗೆ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತಿರ ಬೇಡುವ ಪತ್ರಗಳು ವ್ಹಿ. ಪಿ. ಮಾಡಿದ ದಾಖಲೆಗಳು ಪೋಷ್ಟ ಪಾವತಿಗಳು ಬಾರನಿಸಿ ಬುಕ್ಕುಗಳು ಇರುತ್ತವೆ. ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಸಟಿಯೆಂದು ಸಿದ್ಧ ಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳು ಇನಾಮು ಕೊಡಲ್ಪಡುವವು. ಈ ಔಷಧವು ಅಮೃತಸರಿಯುಳ್ಳದ್ದು ಇರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು ಎಂಥಾ ಭಯಂಕರ ರೋಗವು ಇದ್ದರೂ ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರಟೀಪಿಕೆಟುಗಳು ನಮ್ಮ ಹತ್ತಿರ ಹಾಜರ ಇರುತ್ತವೆ ಇವನ್ನು ಬರೆಯಲಿಕ್ಕೆ ಕಾಗದವು ಸಾಲದು. ಕಾರಣ ಒಂದುಸಾರೆ ತಕ್ಕೊಂಡು ಅನುಭವ ನೋಡಿರಿ. ರೋಗದ ನಾಮಗಳು:— ಕ್ಷಯರೋಗ, ಪ್ರಾಣಾಂತಿರೋಗ. ಹಡೆದನಂಜು ದಮ್ಮು, ಕೆಮ್ಮು, ಆಡಗ್ಯೆ, ಕಾಲರಾ (ಮಾರಿಕಾ), ಪ್ಲೇಗ, ಇನ್ಫ್ಲುಯಂಜಾಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮಲರೋಗ, ಗಂಡಮಾಲೆ. ನಾರಹುಣ್ಣು, ಶಸ್ತ್ರಗಾಯ, ಕಿವಿಶೂಲಿ ಮೂಗಿನೊಳಗಿನ ಪಿನಸಿ, ಮೊದಲಾದವಗಳು ಕಣ್ಣುನೋವು ಕಣ್ಣೊಳಗೆ ಹೂವ ಬೀಳೋಣ, ಅಜೀರ್ಣ ಹೊಟ್ಟಶೂಲಿ, ಸಣ್ಣ ಕೂಸುಗಳಿಗೆ ಆದ ರೋಗಗಳು ಬಾಲಗ್ರಹ, ಅರಿವೆ ಮುಟ್ಟದೋಷ ಹೊಟ್ಟೆ ದೊಡ್ಡದಾಗೋಣ, ಕೊಡಿಗೆಮ್ಮು, ಸೈ ಹೊರಬೀಳೋಣ, ಮತ್ತು ಡಾಕ್ಟರಿಗೆ ವೈದರಿಗೂ ಸಹ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನಿಂದ ಖಾತ್ರಿಯಿಂದ ಗುಣಬರವದು [illegible] ಸರ್ಪದಂಶಕ್ಕೆ ತತ್ಕ್ಷಣ ಗುಣಬರುವದು ೧ ಕಾಲುತೊಲಿ ಬಾಟ್ಲಿ ಒಂದಕೆ ೨ ರೂಪಾಯಿ ನಮೂನೆ ಉದ್ರಿಕ [illegible] ಆಣೆ ತೂಕದ ಬಾಟ್ಲಿ ಒಂದಕ್ಕೆ ೮ ಆ ಖರ್ಚು ಬೇರೆ ೮ ಆಣೆಯ ಒಂದೇ ಬಾಟ್ಲಿ ಕಳಿಸಲಾಗದು ೨ ರೂಪಾಯಿ ಆರ್ಡರ ಬಂದರೆ [illegible] ಅದರ ಖರ್ಚು ೭ ಆಣೆ ಚಿಕ್ಕ ಬಾಟ್ಲಿ ಒಂದು ಡಜನ [illegible] ವವರಿಗೆ ನಾಲ್ಕು ಬಾಟ್ಲಿಗಳು ಕಮಿಶನ್ ಸಿಗುತ್ತವೆ [illegible] ಆಣೆ. ಡಜನದ ಒಳಗಾಗಿ ಹನ್ನೊಂದು ಬಾಟ್ಲಿ ತಕ್ಕೊಂಡರೆ ಕಮಿಶನ್ ಇಲ್ಲ. ವೆಚ್ಚ ೭ ಆಣೆ. ೧ ಕಾಲುತೊಲಿ ಬಾಟ್ಲಿ [illegible] ತಕ್ಕೊಳ್ಳುವವರಿಗೆ ಒಂದು ಬಾಟ್ಲಿ ಕಮಿಶನ್ ಸಿಗುತ್ತದೆ. ಖರ್ಚು [illegible] ಆಣೆ. ಒಂದು ಎರಡು ತಕ್ಕೊಂಡರೆ ಕಮಿಶನ್ ಇಲ್ಲ ಖ ೭ ಆ ಪ್ರಮಾಣ ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಭಾಷೆಯ ಛಾಪಿಸಿರುತ್ತವೆ. ಪಸಂದಿಪ್ರಕಾರ ಬಾಟ್ಲಿಗೂಡ ತಿಗುವದು ಈ ಔಷಧವು ಖೋಟಿ ಹೊರಟರೆ ಬಿಲ್ಲಕ ಉಳಿದ ಮಾಲು ಪಂಕ ತಕ್ಕೊಂಡು ಅದರ ಬೆಲೆ ವಾಪಸ ಕೊಡುವೆವು. ಈ ಅರ್ಕಶಫಾ [illegible] ಕರ್ನಾಟಕದಲ್ಲೆಲ್ಲಾ ಹೋಗುತ್ತದೆ. ಇದರ ಬಗ್ಗೆ [illegible] ಶಿಫಾರಸ್ ಮಾಡಬೇಕಾಗಿಲ್ಲ ತಮ್ಮ ವಿಳಾಸ [illegible] ಇಂಗ್ಲೀಷದಲ್ಲಿ ಪೂರ್ತಿ ಸ್ಪಷ್ಟ ಬರೆಯಬೇಕು [illegible] ನಮ್ಮ ವಿಳಾಸ:— **ಎಚ್. ಎಮ್. [illegible]**
[illegible] ಅರ್ಕಶಫಾ ಹೆಡ್ ಆಫೀಸ ಪೋಸ್ಟ ಪಟಾಪೂರ (ಬೆಳಗಾವ

ಕನ್ನಡ ಬಂಧು ಗಳೆ ! ಈ ಸಂಧಿಯನ್ನು ಕಳೆದುಕೊಳ್ಳಬೇಡಿರಿ
ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ವ್ಯವಸ್ಥೆ ಮಾಡಿದ ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವದು ಮತ್ತು ಜೋಡಿಸುವದು ಅವುಗಳೊಳಗಿನ ಕೆಟ್ಟುಹೋಗಿಟ್ಟ ಮುರಿದುಹೋದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುತ್ತೇವೆ. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯದೆ ಬಲ್ಲ ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕಾ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಬೇರೆ ಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ಶೀಘ್ರವೆ ಬರೆದುಕೊಳ್ಳಿರಿ !

ವಿಳಾಸ—ಕುಲಕರ್ಣಿ ಮೋಟಾರ ಸ್ಕೂಲ.
೪೯೫ ಶನಿವಾರ ಪೇಠ ಜಮಖಂಡಿಕರ ವಾಡೆ ಪುಣೆ ಶಹರ

ನಪುಂಸಕತ್ವ

ಧಾತು ವಿಕಾರ, ಸ್ವಪ್ನಾವಸ್ಥೆ, ಅಶಕ್ತತೆ ಇತ್ಯಾದಿಗಳಮೇಲೆ ಖಂಡಿತವಾಗಿ ಗುಣಕೊಡುವ ಮತ್ತು ಕಡೆತನಕ ಬಾಳುವ ದಿವ್ಯ ಔಷಧಿ! ಒಂದೇ ಗುಳಿಗೆ!!

ವಿಶೇಷ ಮಾಹಿತಿ ಪತ್ರದ್ವಾರ ತಿಳಿಯಿರಿ.

ವಾದಿರಾಜ ಜಹಾಗೀರದಾರ.

ಮು. ಪೋ: ಇಲಕಲ್ಲ. (ವಿಜಾಪೂರ)

ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟಿ.

ನಾವು ಹಲ್ಲುಗಳ ಕೆಲಸವನ್ನು ಚನ್ನಾಗಿ ಅರಿತಿರುವೆವು ಹಲ್ಲುಗಳ ರೋಗಗಳನ್ನು ಕಳೆಯುವೆವು ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರದಲ್ಲಿ ನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು ಹಲ್ಲುಗಳ ಪೂರ್ಣ ಸೆಟ್ಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

S. U. Narayanacharya & Co.

Chaukhamba Benares City.

ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ, ಜರಿಕಣ, ಜರಿಸೀರೆ, ಕಾಶ್ಮೀರ ಶಾಲು, ತರವಾರಿ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲಗಳ ಕ್ಯಾಟಲಾಗ ಕೋರುವವರಿಗೆ ಇನಾಮಾಗಿ ಕಳಿಸಲಾಗುತ್ತದೆ

ವಿಳಾಸ-ಶಿರೋಮಣಿ ನಾರಾಯಣಾಚಾರ್ಯ
ಕಂಪನಿ ಚೌಕಾಂಬಾ ಕಾಶಿ

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿತು.

ಹರಟೆ.

ಪರೀಕ್ಷೆಯು ಬೇಕು.

| **ಸಗೆಗಾರನಿಂದ** |

ನಾವು ಸ್ಥಾನಿಕಸಂಸ್ಥೆಗಳಿಗೂ ಕೌನ್ಸಿಲುಗಳಿಗೂ ಮೆಂಬರ ಆರಿಸಿಕೊಡುವುದೇಕೆ? ನಮ್ಮ ಹಿತಕ್ಕೋ? ಮೆಂಬರುಗಳ ಹಿತಕ್ಕೋ? ವಿಚಾರಾರ್ಹವಾದ ವಿಷಯವಲ್ಲ. ಇವನ್ನು ಆರಿಸಿಸುವವರಾದ ನಮ್ಮ ಜಾಣತನವೂ ಸ್ಪಷ್ಟ. (?) ಹಳ್ಳಿಗಳಲ್ಲಿ ಇದರೆ ೧೦೦ಕ್ಕೆ ೧೦ ಜನರು ಮತದಾರರು ಸುಶಿಕ್ಷಿತರಿರುವ ಮತಕೊಡುವದೆಂದರೇನೇ ಅವರಿಗೆ ಗೊತ್ತಿರುವದಿಲ್ಲ. ಯಾರು ನ್ನು ಮೋಟಾರಿನಲ್ಲಿ ಕರೆದೊಯ್ಯುವರೋ ಯಾರು ಜಹಾಗಿಗಳನ್ನು ಕೊಡಿಸುವರೋ ಅವರ ಹೆಸರಿಗೆ ಕತ್ತರಿ (×) ನ್ನು ಮಾಡಿಸಿಬಿಡುವವರೇ ಹೆಚ್ಚು. ತಮ್ಮ ಕರ್ತವ್ಯವನ್ನು ತಿಳಿಯದ ಅಶಿಕ್ಷಿತರು ಮೆಂಬರರ ಕರ್ತವ್ಯವೇನೆಂಬುವನ್ನು ರಲು ಸಾಧ್ಯವಿಲ್ಲ. ಇದು ದೊಡ್ಡ ಪಟ್ಟಣದಲ್ಲಿ ಗಾಡಿಯ ಹೊಡೆಯುವವರಿಗೆ ತಿಳಿಯುವಂತಿಲ್ಲ. ಅವರು ಹಳ್ಳಿಗ ಸಂಪರ್ಕಿಸಿದರೆ ಅಲ್ಲಿನ ಸ್ಥಿತಿಯು ತಿಳಿಯಬಹುದು. ತಿಳಿಯದ ಜನರಿಂದ ಮತಗಳನ್ನು ದೊರಕಿಸಿ ಮೆಂಬರರಾಗು ಲ್ಲೇನೂ ಅರ್ಥವಿಲ್ಲ. ಪ್ರಯೋಜನವೂ ಇಲ್ಲ. ಈ ಪದ್ಧತಿ ದ ನಮಗೇನೂ ಹಿತವೆನಿಸುವದಿಲ್ಲ. ಮತದಾರರು ವಿದ್ಯಾರಾದರೂ ಇರಬೇಕು. ಇಲ್ಲವೆ ಕೌನ್ಸಿಲರರು ಬುದ್ಧಿವಂತರಾಗಿರಬೇಕು. ಎರಡರಲ್ಲಿ ಎರಡೂ ಇಲ್ಲದ ದಶೆ ಮಾಡುವ? ಅದೊಂದು ಮಕ್ಕಳಾಟಿಕೆಯನ್ನು ತೋರಿಸುವದಲ್ಲಿ ಸಂವಿಲ್ಲ. ಈ ಪದ್ಧತಿಯೇ ಬೇಕಾಗಿದ್ದರೆ ಮೊದಲು ಮತದಾರ ಸುಶಿಕ್ಷಿತರನ್ನಾಗಿ ಮಾಡಿರಿ. ಇಲ್ಲವೇ ಮತಗಳು ಕಡಿಮೆಯಾದರೂ ಚಿಂತೆಯಿಲ್ಲ. ಸಾಧಾರಣ ಓದು ಬರಹ ಕಲಿತಗೆ ಮತ ಕೊಡುವ ಅಧಿಕಾರವಾದರೂ ಇರಲಿ. ಬೇಡವಾದರೆ ಯಾವದೂ ಬೇಡ. ಬೇರೊಂದು ಮಾತೆಂದರೆ- ಪರೀಕ್ಷೆ. ಬಂಗಾಲದಲ್ಲಿ ವಕೀಲರಿಗೆ ಸ್ಪೇಶಲ್ ಪರೀಕ್ಷೆಯನ್ನು ಇಟ್ಟು ಜಜ್ಜರು ಗೆದುಕೊಳ್ಳುವಂತೆ ನಮ್ಮ ಮ್ಯುನಿಸಿಪಾಲ್ಟಿ, ಲೋಕಲ್ ಬೋರ್ಡು ಕೌನ್ಸಿಲ್‌ಗಳ ಮೆಂಬರುಗಳಿಗೆ ಒಂದು ಪರೀಕ್ಷೆಯನ್ನು ಇಡದೇ ನಮ್ಮ ಮತ.

ಸರಕಾರದವರಾಗಲೀ, ವಿದ್ಯಾವಂತ ಸಮಾಜವಾಗಲೀ ಒಂದು ಕಮೀಟಿಯನ್ನು ನಿಯಮಿಸಿ ಪಂಕ್ತಿಗೆ ತಕ್ಕ ನ್ಯಾಯ, ನೀತಿ, ಧರ್ಮ, ರೀತಿಗಳ ವಿಷಯಗಳನ್ನು ಇಟ್ಟು ಈ ಯಲ್ಲಿ ತೇರ್ಗಡೆಯಾದವರು ಮಾತ್ರ ಅವರವರ ಯೋಗ್ಯತೆಗೆ ಮೆಂಬರುಗಳು ಅಧ್ಯಕ್ಷರೂ ಉಪಾಧ್ಯಕ್ಷರೂ ಆಗ ಇದೂ ಆಗದಿದ್ದರೆ ಏನೂ ಪ್ರಯೋಜನವಿಲ್ಲ ಅಷ್ಟೇ? ಗೋವಿಂದಾ — ಹಾಡಿನ್ನೇ ಹಾಡೋ ಕಿಸಬಾಯಿ, ದಾಸರಾ ತಿರೋ ಸರ

ಸ್ವೋಜಿಗದ ಸುದ್ದಿಗಳು.

ಗಣಿತ ಜ್ಯೋತಿಷ್ಯದಿಂದ ಪರಶುರಾಮನು ಹದಿಮೂರು ವರುಷಗಳಾಚೆಯಲ್ಲಿಯೂ, ರಾಮನು ಹತ್ತು ಸಾವಿರಗಳ ಮೊದಲೂ, ಕೃಷ್ಣ ಪಾಂಡವರು ಏಳು ಸಾವಿರ ನೂರ ಎಪ್ಪತ್ತಾಲ್ಕು ವರುಷಗಳ ಮೊದಲೂ ಭರತಖಂಡದವರು ತಿಳಿಯುವುದು.

ಲಂಡನ್ನಿನ ಲಾಲಬಾಗಿನಲ್ಲಿ ಒಂದು ಕೋತಿಯಿದೆ. ಅದಕ್ಕೆ ಒಂದು ರಾಜಭವನ; ಹವಳದ ನೆಲ, ಸ್ಪ್ರಿಂಗ್ ಕವಾಟು, ಗಾಜಿನ ಕಿಟಿಕಿಗಳು; ಸ್ನಾನಕ್ಕೊಂದು ಕುರ್ಚಿ; ಮಲಗಲಿಕ್ಕೊಂದು ಮಂಚ. ಅಂತು ರಾಜಭೋಗ ನಡೆಯುತ್ತಿದೆ.

ಅಮೇರಿಕೆಯಲ್ಲಿ ೫೫ ಘಂಟೆಗಳ ಒಂದು ಗೊಂಚಲು ಸಿದ್ಧವಾಗುತ್ತಿರುವದೆಂದೂ ಅವನ್ನು ಬಾರಿಸುವಾಗ ಅದರ ಪ್ರತಿಧ್ವನಿಯು ಪ್ರಾನ್ಸ್, ಇಂಗ್ಲಂಡ, ದಕ್ಷಿಣ ಆಫ್ರಿಕಾ, ಹಿಂದುಸ್ಥಾನ, ಆಸ್ಟ್ರೇಲಿಯಗಳಿಗೂ ಕೇಳಬರುವದೆಂದೂ ತಿಳಿಯುತ್ತಿದೆ.

ಲೀಡ್ಸದಲ್ಲಿ ಒಂದು ಹುಡುಗಿಯ ಜೊತೆಗೆ ಆಕೆಯು ಸಾಕಿದ ನಾಯಿಯೂ ಶಾಲೆಗೆ ಹೋಗುತ್ತದೆ. ಆದರೆ ಸುಮ್ಮನೇ ಹೋಗುವದಿಲ್ಲ ಅಲ್ಲಿ ಕಲಿಯುತ್ತದೆ. ಈಗ ಅನೇಕ ಈಯತ್ತೆಯಲ್ಲಿದೆಯಂತೆ!

ಉಚಿತ! ಸಮಯ!! ಉಚಿತ!!!

ನನ್ನ ಶಾಸ್ತ್ರೀಯವಾದ ಶಾರೀರಕ ಶಿಕ್ಷಣ

ಈ ಪುಸ್ತಕದಲ್ಲಿ ನನ್ನ ಮತ್ತು ನನ್ನ ಶಿಷ್ಯರ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವವಲ್ಲದೆ, ಅಂತಹ ಶರೀರ ದಾರಢ್ಯವು ಹೇಗೆ ಒಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವುದು. ನನ್ನಲ್ಲಿ ತರಬೆಯುತ್ತಾದವರ ಅಭಿಪ್ರಾಯಗಳೂ ಅದರಲ್ಲಿರುವವು. ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ. ಟಪ್ಪಾಲು ಹಾಸಲು ೩ ಆಣೆಯ ಸ್ಟಾಂಪುಗಳನ್ನು ಕಳುಹಿಸಿಕೊಟ್ಟ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇನೆ. ಈ ಸುಸಮಯವನ್ನು ಕಳೆದುಕೊಳ್ಳದೆ ಕಾಲಾತೀತಮಾಡದೆ ಇನ್ನೂ ಈ ಯೋಚನೆಯಲ್ಲಿ ನೀವಿರುವಾಗಲೇ ಈ ಪುಸ್ತಕಕ್ಕಾಗಿ ಬರೆಯಿರಿ.

ನಮ್ಮ ವಿಳಾಸ,

ಪ್ರೊಫೆಸರ್ ಎಂ. ವಿ. ಕೃಷ್ಣರಾವ್.

ಬಸವನಗುಡಿ, ಬೆಂಗಳೂರು ಸಿಟಿ

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು.

ಇಲ್ಲದೆ ಸರ್ವರಿಗೂ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ. ಬಾಗಲಕೋಟೆಯಲ್ಲಿ ನಮ್ಮ ಆಯುರ್ವೇದ ಔಷಧಗಳನ್ನು ಮಾರುವವರಿಗೆ ಏಜಂಟರು ಬೇಕಾಗಿದೆ. ಪುಸ್ತಕ ಕಮೀಷನ ದೊರೆಯುವದು.

ರಾಜವೈದ್ಯ ನಾರಾಯಣಜಿ ಕೇಶವಜಿ.

೫೫, ಚೀನಾಬಜಾರ್, ಮದ್ರಾಸು

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆ ಮಾಡಿರಿ ! ತ್ವರೆ ಮಾಡಿರಿ



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು ಈ ಕ್ಲಾಸಿನಲ್ಲಿ ಮೋಟರ ಸವಾರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯ್ವಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಶ ಹಿಂದುಸ್ತಾನದ ಸರಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು ಫೀ ರೂಪಾಯಿ ೭೦ ಇರುತ್ತದೆ. ವಿಶೇಷ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರ

ಪತ್ತಾ.—ದಿ ಪಾಪ್ಯುಲರ ಮೋಟಾರ ಡ್ರಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೨ ಬುಧವಾರ ಪೇಠ ಜುನಿ ತಪಕೀರಗಲ್ಲಿ ಪುಣೆ ಸಿಟಿ.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಣೀ, ಜೀರ್ಣಜ್ವರ, ಅಗ್ನಿಮಾಂಧ್ಯ ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶ ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ (ಏಳೇ ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು.) ಇದರಿಂದ ಮೈಯ್ಯುರಿ ವ ಗರಮಿಯು ಎಲ್ಲಾತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ ಇದರ ಖರೇ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೨-೦, ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯು ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ

ವಿಳಾಸಃ—

ಎಸ್. ಬಿ ಕದಮ್ ಮತ್ತು ಸನ್ಸ್.

ಮು. ಪೋಷ್ಟ ನಿಪ್ಪಾಣಿ (ಜಿ ಬೆಳಗಾಂವ.)

೧,೪೨,೦೦,೦೦೦

ರೂಪಾಯಿಗಳು!

ಪರದೇಶಗಳಿಂದ ತರಿಸಲ್ಪಟ್ಟ ಸಾಬೂನುಗಳಿಗೋಸ್ಕರ ಪ್ರತಿವರುಷವೂ ಒಂದುಕೋಟಿ ನಾಲ್ವತ್ತೆರಡು ಲಕ್ಷರೂಪಾಯಿಗಳನ್ನು ನಮ್ಮ ದೇಶದಿಂದ ಪರದೇಶಕ್ಕೆ ತೆರುತ್ತಿದೇವೆ. ಮಹಾಜನರೆಲ್ಲರೂ ಒಕ್ಕಟ್ಟಾಗಿ ಸಂಕಲ್ಪಮಾಡಿದರೆ ತಾನೇ ಈ ಹಣವನ್ನು ನಮ್ಮ ದೇಶದಲ್ಲಿ ಉಳಿಸಿಕೊಳ್ಳಬಹುದು. ಸ್ವದೇಶದ ಸಾಬೂನನ್ನು ಬಿಟ್ಟು ಪರದೇಶದ ಸಾಬೂನನ್ನು ಕೊಳ್ಳುವ ಪ್ರತಿಯೊಬ್ಬ ವಿದ್ಯಾವಂತನೂ ಅನ್ಯ ದೇಶದ ಕೈಗಾರಿಕೆಗಳಿಗೆ ಉಪಕಾರಮಾಡಿ, ಸ್ವದೇಶದ ಕೈಗಾರಿಕೆಗಳಿಗೆ ಅಪಕಾರಮಾಡುತ್ತಾನೆ. ಪ್ರತಿಯೊಬ್ಬ ದೇಶಬಾಂಧವನೂ ಸ್ವದೇಶೀ ಮಾಲುಗಳನ್ನೇ ಕೊಳ್ಳುವನು. ಮೈಸೂರು ಗೌರ್ನಮೆಂಟ ಸೋಪ್ ಫ್ಯಾಕ್ಟರಿಯಲ್ಲಿ ಸರ್ವಗ್ರಾಹ್ಯವಾದ ಉತ್ತಮವಾದ ಸಾಬೂನುಗಳನ್ನು ತಯಾರುಮಾಡುತ್ತಾರೆ ನಾವು ತಯಾರುಮಾಡುವ ಶ್ರೀಗಂಧ ಪರಿಮಳವುಳ್ಳ ಸಾಬೂನೊಂದನ್ನು ಕೊಂಡು ತಾವೇ ಪರೀಕ್ಷೆಮಾಡಿನೋಡಿರಿ. ತಮಗೆ ನಮ್ಮ ಸಾಬೂನುಗಳು ಸಿಗಲಸಾಧ್ಯವಾದಲ್ಲಿ ದಯವಿಟ್ಟು ನಮಗೆ ಪತ್ರವೊಂದನ್ನು ಬರೆದರೆ, ತಾವು ಇಚ್ಛೆಪಡುವ ಅಂಗಡಿಯಲ್ಲಿಯೇ ನಮ್ಮ ಮಾಲುಗಳ ತಮಗೆ ದೊರೆಯುವಂತೆ ಏರ್ಪಡಿಸಿಕೊಡುತ್ತೇವೆ.

ಗೌರ್ನಮೆಂಟ ಸೋಪ್ ಫ್ಯಾಕ್ಟರಿ

ಬೆಂಗಳೂರು.

ರ ನಂ. ಬಿ ೧೯೪೭ ವಾ ಚಂದಾ ೧—೧೨—೦ ಮಾತ್ರ

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ.)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು — ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ಮಾಘ ಶುದ್ಧ ೧೦ ಶಕ ೧೮೫೯ ತಾ|| ೧೧-೨-೧೯೩೮. | ಸಂಚಿಕೆ ೬೪

ಸಂಪಾದಕರ ಭೂಮಿ

(ಓಂ)

ನನ್ನ ಮನಸಿನ ಮೋಣವಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮೆ।
ಅನ್ನದಾದರು ಚಿನ್ನ ಸೋಣಬಸ್ತಿಯು ಸೊಂದು ಚಿನ್ಮಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೊ॥

— ಅಂಬಿಕಾತನಯ ದತ್ತ

ಬಾಗಲಕೋಟೆ ಪಟ್ಟಣವು ಈಗ ಪಶ್ಚಿಮಕ್ಕೆ ಅಂದರೆ ಕಲಾದಗಿಯ ದಿಕ್ಕಿನಲ್ಲಿ ಬೆಳೆಯುತ್ತಿದೆ. ಇದು ಆರೋಗ್ಯದೃಷ್ಟಿಯಿಂದ ಹಿತಕರವಾದುದಲ್ಲ. ಭೂಮಿಯು ತಗ್ಗಿದ್ದು, ಊರ ಹೊಲಸೆಲ್ಲ ಅತ್ತಕಡೆಗೇ ಹೋಗುತ್ತದೆ. ವೆಂಕಟಪೇಟೆಯಲ್ಲಿರುವವರಿಗೆ ಸೊಳ್ಳೆಗಳಿಂದ ಎಷ್ಟು ತೊಂದರೆಯಾಗುತ್ತಿದೆಂಬುದು ಗೊತ್ತಿದ್ದ ಮಾತಾಗಿದೆ. ಈ ಸೊಳ್ಳೆಗಳು ಚಳಿಜ್ವರಗಳನ್ನುಂಟು ಮಾಡುವದರಲ್ಲಿ ಹಿರಿಯವು. ಆದುದರಿಂದ ನಗರಸಭೆ (ಮುನಸಿಪಾಲ್ಟಿ) ಯವರು ಊರು ಸ್ಟೇಶನದ ಕಡೆಗೆ ಬೆಳೆಯುವಂತೆ ಮಾಡಬೇಕು. ನಗರ ಹಿತಗಳನ್ನು ಕಾಯುವುದು ನಗರಪಿತಾಮಹರ ಆದ್ಯಕರ್ತವ್ಯ. ಜನರ ಆರೋಗ್ಯ ಸ್ವಚ್ಛ ಅನುಕೂಲತೆಗಳಿಗೆ ಅನುವಾಗುವುದು ಅವರ ಧರ್ಮ. ಸ್ಟೇಶನದ ಕಡೆಗೆ ಊರು ವಿಸ್ತಾರವಾಗಬೇಕೆಂದು ಹೊಸನಗರ ರಚನೆಯು ಉದ್ದಿಷ್ಟವಾಗಿದೆ.- ಅಲ್ಲಿ ನೀರಿನ ಅನನುಕೂಲತೆಯಿರುವದರಿಂದ, ಊರು ಬೆಳೆಯಲೊಲ್ಲದು. ಭೂಮಿಯು ಎತ್ತರವಾಗಿದ್ದು, ಆರೋಗ್ಯಕ್ಕೆ ಅನುಕೂಲವಿರುವದು. ಮುನಸಿಪಾಲ್ಟಿಯವರು ನಳಗಳನ್ನು ಕಲ್ಪಿಸಿಕೊಟ್ಟಲ್ಲಿ ಸ್ಟೇಶನ್ನದತ್ತ ನಗರ ವಿಸ್ತಾರಕ್ಕೆ ಎಡೆಯಾಗುವುದು. ನದಿಯಿರುವದರಿಂದ, ನಳಗಳನು ಒಯ್ಯುವುದಕ್ಕೆ ವಿಶೇಷ ವೆಚ್ಚ ತಗಲುವದಿಲ್ಲ. ಬಾಗಲಕೋಟೆಯಲ್ಲಿ ಗಟಾರಗಳು ಇಲ್ಲವೆಯೇ ಇರುತ್ತವೆ. ಅವು ನೀರಿಲ್ಲದ್ದಕ್ಕೆ ಹೊಲಸಾಗಿರುತ್ತವೆ. ಬಾವಿಯಿಂದ ನೀರು ಜಗ್ಗಿ ಗಟಾರಗಳನ್ನು ತೊಳೆಯುವದು ಅಶಕ್ಯವಾದ ಮಾತು. ನಳಗಳಾದರೆ, ಊರ ಗಟಾರಗಳಲ್ಲಿ ನೀರು ಬಿಟ್ಟು ಅವುಗಳನ್ನು ತೊಳೆಯುವುದು ಬಹಳ ಸುಲಭವಾಗುವುದು. ಉಳಿದ ಊರುಗಳಲ್ಲಿ ಗಟಾರಗಳು ಹೆಚ್ಚಾಗಿಲ್ಲದಿರುವದರಿಂದ ಒಳ ಒಡೆದ ಹಾದಿಯಾಗುವ ಸಂಭವ [illegible] ಇಲ್ಲಿ [illegible] ಇಳಿಯಾಗಿರುವದರಿಂದ, ರೋಗಾದಿಗಳ ಸಂಭವವಿಲ್ಲ. ಇಷ್ಟೇ ಅಲ್ಲ- ಅವೇ ಆರೋಗ್ಯಕ್ಕೆ ಮತ್ತಿಷ್ಟು ಸಹಾಯವಾಗುವವು. ಈಗ ಬಸವೇಶ್ವರ ಹೈಸ್ಕೂಲಿನ ಹೊಸ ಕಟ್ಟಡವು ಅತ್ತ ಆಗಹತ್ತಿದೆ. ಎಷ್ಟು ಆಗಿದರೂ ಅಲ್ಲಿಯ ಬಾವಿಯಲ್ಲಿ ನೀರು ಜೀರಿಕೊಳ್ಳವು. ಆದ್ದರಿಂದ, ನಳಗಳ ಯೋಜನೆಯನ್ನು ಮಾಡಿದರೆ ಎಲ್ಲ ರೀತಿಯಿಂದಲೂ ಸುಖಕರವಾಗುವುದು. ಊರಲ್ಲಿ ಒಳಕೆಯ ಬೀದಿಗಳೆಲ್ಲ ಧೂಳಿನಿಂದ ಮುಸುಕಿರುವವು. ಬಾಜಾರದಲ್ಲಿ ಹೋಗುವಾಗ, ಧೂಳಿನ ಕಾಟ, ಮೋಟಾರಕಾರುಗಳ ಕಾಟ, ಇವೆಲ್ಲವುಗಳಿಂದ ಗಂಟಲವು ಮುಸುಕಿ ಹೋಗಿ ಉಸುರಾಡಿಸಲು ಶಕ್ತಿಯಿಲ್ಲದೆ ಹೋಗುವುದು. ಪೇಟೆಯೊಳಗೆ ತಂದು ನೀರನ್ನು ಹೊಯ್ದರೆ ಪುರೈಸದು. ನಳಗಳನ್ನು ಹಾಕಿದರೆ, ಈ ಎಲ್ಲ ಕಷ್ಟಗಳು ತಾವಾಗಿಯೇ ನಷ್ಟವಾಗುವವು. ಒಮ್ಮೆ ವೆಚ್ಚ ಮಾಡಿದರೆ, ಕಡೆತನಕ ನಗರದ ಹಿತವಾಗುವದು. ನದಿಯು ಇರುವದರಿಂದ ನೀರಿನ ಸಮೃದ್ಧಿ. ಕೆರೆಕಟ್ಟಿಸುವ ಕಾರಣವಿಲ್ಲ. ಗಟಾರಗಳಿರುವದರಿಂದ ಊರು ಸ್ವಚ್ಛವಾಗುವುದು. ಆರೋಗ್ಯವು ಬೆಳೆಯುವುದು. ಹವೆಯಾಡುವ ಸ್ಥಾನವು ಇರಲು ದೊರೆಯುವದು. ಆದ್ದರಿಂದ ಸ್ಟೇಶನದ ಕಡೆಗೆ ವಿಸ್ತಾರವಾಗುವಂತೆ ನಗರಸಭೆಯು ಪ್ರಯತ್ನಪಟ್ಟು ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕು.

ಬಾಗಲಕೋಟೆಯ ವೀರಶೈವ ತರುಣ ಸಂಘದವರು ತಯಾರಿಸಿರುವ ಹಳ್ಳಿಗಳ ಸ್ಥಿತಿಗತಿಗಳ ಪತ್ರಿಕೆಯನ್ನು ಹೋದವಾರದಲ್ಲಿ ಪ್ರಕಟಿಸಿರುವೆವು (ಈ ಸ್ಥಿತಿಗೂ ಸಂಕೀರ್ಣ ರಿಪೋರ್ಟಿಗೂ ಅಭ್ಯಂತರವಿದೆ) ಪ್ರತಿಯೊಂದು ಹಳ್ಳಿಯಲ್ಲಿ ದನಗಳ ಸಂಖ್ಯೆಯು ಕಡಿಮೆಯಾಗಿವೆ. ಬೆಳೆಯಿಲ್ಲದ್ದರಿಂದ ದನಗಳಿಗೆ ಮೇವಿನ ಕೊರತೆಯಿಂದಲೂ, ತಮ್ಮ ಚರಿತಾರ್ಥವು ಸಾಗದ್ದರಿಂದಲೂ ಈಗಿದ್ದ ದನಕರುಗಳನ್ನು ಕೂಡ ಜನರು ಒಂದೇಸವನೇ ಮಾರುತ್ತಿರುವರು. ಎಷ್ಟೋ, ಬಾದರದಿನ್ನಿ ಮೊದಲಾದ ಹಳ್ಳಿಗಳ ಜನರು ಹೊಟ್ಟೆ ತುಂಬಿಕೊಳ್ಳುವದಕ್ಕೆ ಹುಬ್ಬಳ್ಳಿ, ಗೋವಾ ಇತ್ಯಾದಿ ಕಡೆಗೆ ಹೋಗಿದ್ದಾರೆ. ಹೋಗಹತ್ತಿದ್ದಾರೆ. ಎಷ್ಟೋ ಕಡೆಗೆ ನೀರಿನ ಕೊರತೆಯು ಹೆಚ್ಚಾಗಿದೆ. ಭಗವತಿ, ಬೇವೂರ, ಹಳ್ಳೂರ, ಬೆನಕಟ್ಟಿ ಮೊದಲಾದ ಊರವರು ಮೈಲಿಂದ ಮೈಲುಗಳ ಅಂತರದಿಂದ ನೀರು ತಂದುಕೊಳ್ಳಬೇಕಾಗುತ್ತದೆ. ಇಂಥ ಪ್ರಸಂಗದಲ್ಲಿ ಹೆರಕಲ್ಲ ಪತ್ತರ ಬಂದ- ಕೆರೆಕಟ್ಟುವ ಯೋಜನೆಯನ್ನು ಸರಕಾರದವರು ಮಾಡಿ ಬೇಗನೇ ಪ್ರಾರಂಭ ಮಾಡಿದರೆ ಕೂಳು ನೀರಿಲ್ಲದೆ ಸಾಯುವ ಜನರಿಗೆ ಕೆಲಸವು ದೊರೆತು [illegible]

ರ ನಂ. ಬಿ ೧೯೪೭ ವಾ ಚಂದಾ ೧—೧೪—೦ ಮಾತ್ರ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ.)

ಯದ್ಯತ್ ಪರವಶಂ ದುಃಖಂ । ಯದ್ಯದಾತ್ಮವಶಂ ಸುಖಮ್ ॥ — ಮನು

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ಮಾಘ ಶುದ್ಧ ೧೦ ಶಕೆ ೧೮೫೮ ತಾ|| ೧೧-೨-೧೯೩೭ | ಸಂಚಿಕೆ ೬೪

ಸಂಪಾದಕರ ಭೂಮಿ

(೬೦)

ನನ್ನ ಮನಸಿನ ಮೋಣಮಾಡಿ ಕಟ್ಟಿನೆನಾನು ।
ನಿನ್ನ ಬೆಸವವ ಮಾಡಿದಂಥ ಮಕ್ಕಳ ದೊಮ್ಮ।
ಚಿನ್ನದಾದರು ಚಿನ್ನ ಕೋಣಬಸ್ಸಿಯು ನೊಂದು ಚಿನ್ನಯೂಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೊ॥

—ಅಂಬಿಕಾ ತನಯ ದತ್ತ

ಬಾಗಲಕೋಟೆ ಪಟ್ಟಣವು ಈಗ ಪಶ್ಚಿಮಕ್ಕೆ ಅಂದರೆ ಕಲಾದಗಿಯ ದಿಕ್ಕಿನಲ್ಲಿ ಬೆಳೆಯುತ್ತಿದೆ ಇದು ಆರೋಗ್ಯದೃಷ್ಟಿಯಿಂದ ಹಿತಕರವಾದುದಲ್ಲ ಭೂಮಿಯು ತಗ್ಗಿದ್ದು, ಊರ ಹೊಲಸೆಲ್ಲ ಅತ್ತ ಕಡೆಗೇ ಹೋಗುತ್ತದೆ ವೆಂಕಟಪೇಟೆಯಲ್ಲಿರುವವರಿಗೆ ಸೊಳ್ಳೆಗಳಿಂದ ಎಷ್ಟು ತೊಂದರೆಯಾಗುತ್ತಿದೆಂಬುದು ಗೊತ್ತಿದ್ದ ಮಾತಾಗಿದೆ ಈ ಸೊಳ್ಳೆಗಳು ಚಳಿಜ್ವರಗಳನ್ನುಂಟು ಮಾಡುವದರಲ್ಲಿ ಹಿರಿಯವು ಆದುದರಿಂದ ನಗರಸಭೆ (ಮುನಸಿಪಾಲ್ಟಿ) ಯವರು ಊರು ಸ್ಟೇಶನದ ಕಡೆಗೆ ಬೆಳೆಯುವಂತೆ ಮಾಡಬೇಕು. ನಗರ ಹಿತಗಳನ್ನು ಕಾಯುವುದು ನಗರಪಿತಾಮಹರ ಆದ್ಯಕರ್ತವ್ಯ. ಜನರ ಆರೋಗ್ಯ ಸುಖ ಅನುಕೂಲತೆಗಳಿಗೆ ಅನುವಾಗುವುದು ಅವರ ಧರ್ಮ. ಸ್ಟೇಶನದ ಕಡೆಗೆ ಊರು ವಿಸ್ತಾರವಾಗಬೇಕೆಂದು ಹೊಸನಗರ ರಚನೆಯು ಉದ್ದಿಷ್ಟವಾಗಿದೆ. ಅಲ್ಲಿ ನೀರಿನ ಅನನುಕೂಲತೆಯಿರುವದರಿಂದ, ಊರು ಬೆಳೆಯಲೊಲ್ಲದು. ಭೂಮಿಯು ಎತ್ತರವಾಗಿದ್ದು, ಆರೋಗ್ಯಕ್ಕೆ ಅನುಕೂಲವಿರುವುದು. ಮುನಸಿಪಾಲ್ಟಿಯವರು ನಳಗಳನ್ನು ಕಲ್ಪಿಸಿಕೊಟ್ಟಲ್ಲಿ ಸ್ಟೇಶನ್ನದತ್ತ ನಗರ ವಿಸ್ತಾರಕ್ಕೆ ಎಡೆಯಾಗುವುದು ನದಿಯಿರುವದರಿಂದ, ನಳಗಳನು ಒಯ್ಯುವುದಕ್ಕೆ ವಿಶೇಷ ವೆಚ್ಚ ತಗಲುವದಿಲ್ಲ ಬಾಗಲಕೋಟೆಯಲ್ಲಿ ಗಟಾರಗಳು ಇಲ್ಲವೆಯೇ ಇರುತ್ತವೆ. ಅವು ನೀರಿಲ್ಲದ್ದಕ್ಕೆ ಹೊಲಸಾಗಿರುತ್ತವೆ ಬಾವಿಯಿಂದ ನೀರು ಜಗ್ಗಿ ಗಟಾರಗಳನ್ನು ತೊಳೆಯುವುದು ಅಶಕ್ಯವಾದ ಮಾತು ನಳಗಳಾದರೆ, ಊರ ಗಟಾರಗಳಲ್ಲಿ ನೀರು ಬಿಟ್ಟು ಅವುಗಳನ್ನು ತೊಳೆಯುವುದು ಬಹಳ ಸುಲಭವಾಗುವುದು ಉಳಿದ ಊರುಗಳಲ್ಲಿ ಗಟಾರಗಳು [illegible] ದರಿಂದ [illegible] ಬಾಧೆಯಾಗುವ ಸಂಭವ [illegible] ಅಲ್ಲ [illegible] ಇಲ್ಲವಾಗಿರುವ ದರಿಂದ, ರೋಗಾದಿಗಳ ಸಂಭವವಿಲ್ಲ ಇಷ್ಟೇ ಅಲ್ಲ- ಅವೇ ಆರೋಗ್ಯಕ್ಕೆ ಮತ್ತಿಷ್ಟು ಸಹಾಯವಾಗುವವು. ಈಗ ಬಸವೇಶ್ವರ ಹೈಸ್ಕೂಲಿನ ಹೊಸ ಕಟ್ಟಡವು ಅತ್ತ ಆಗಹತ್ತಿದೆ ಎಷ್ಟು ಆಗಿದರೂ ಅಲ್ಲಿಯ ಬಾವಿಯಲ್ಲಿ ನೀರು ಬೀಳೊಲ್ಲವು ಆದ್ದರಿಂದ, ನಳಗಳ ಯೋಜನೆಯನ್ನು ಮಾಡಿದರೆ ಎಲ್ಲ ರೀತಿಯಿಂದಲೂ ಸುಖಕರವಾಗುವುದು- ಊರಲ್ಲಿ ಬಳಕೆಯ ಬೀದಿಗಳೆಲ್ಲ ಧೂಳಿನಿಂದ ಮುಸುಕಿರುವವು ಬಾಜಾರದಲ್ಲಿ ಹೋಗುವಾಗ, ಧೂಳಿನ ಕಾಟ, ಮೆಣಸಿನಕಾಯಿಗಳ ಕಾಟ, ಇವೆಲ್ಲವುಗಳಿಂದ ಗಂಟಲವು ಮುಸುಕಿ ಹೋಗಿ ಉಸುರಾಡಿಸಲು ಶಕ್ತಿಯಿಲ್ಲದೆ ಹೋಗುವುದು. ಪೀಪಿನೊಳಗೆ ತಂದು ನೀರನ್ನು ಹೊಯ್ದರೆ ಪ್ರೂರ್ಯಸವು. ನಳಗಳನ್ನು ಹಾಕಿದರೆ, ಈ ಎಲ್ಲ ಕಷ್ಟಗಳು ತಮಗಾಗಿಯೇ ನಷ್ಟವಾಗುವವು ಒಮ್ಮೆ ವೆಚ್ಚ ಮಾಡಿದರೆ, ಕಡೆತನಕ ನಗರದ ಹಿತವಾಗುವದು. ನದಿಯು ಇರುವದರಿಂದ ನೀರಿನ ಸಮೃದ್ಧಿ. ಕೆರೆಕಟ್ಟಿಸುವ ಕಾರಣವಿಲ್ಲ. ಗಟಾರಗಳಿರುವದರಿಂದ ಊರು ಸ್ವಚ್ಛವಾಗುವುದು. ಆರೋಗ್ಯವು ಬೆಳೆಯುವುದು. ಹವೆಯಾಡುವ ಸ್ಥಾನವು ಇರಲು ದೊರೆಯುವದು. ಆದ್ದರಿಂದ ಸ್ಟೇಶನದ ಕಡೆಗೆ ವಿಸ್ತಾರವಾಗುವಂತೆ ನಗರಸಭೆಯು ಪ್ರಯತ್ನಪಟ್ಟು ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕು

ಬಾಗಲಕೋಟೆಯ ವೀರಶೈವ ತರುಣ ಸಂಘದವರು ತಯಾರಿಸಿರುವ ಹಳ್ಳಿಗಳ ಸ್ಥಿತಿಗತಿಗಳ ಪತ್ರಿಕೆಯನ್ನು ಹೋದವಾರದಲ್ಲಿ ಪ್ರಕಟಿಸಿರುವೆವು (ಈ ಸ್ಥಿತಿಗೂ ಸರಕಾರಿ ರಿಪೋರ್ಟಿಗೂ ಅಭ್ಯಂತರವಿದೆ) ಪ್ರತಿಯೊಂದು ಹಳ್ಳಿಯಲ್ಲಿ ದನಗಳ ಸಂಖ್ಯೆಯು ಕಡಿಮೆಯಾಗಿವೆ ಬೆಳೆಯಿಲ್ಲದ್ದರಿಂದ ದನಗಳಿಗೆ ಮೇವಿನ ಕೊರತೆಯಿಂದಲೂ, ತಮ್ಮ ಜರಿತಾರ್ಥವು ಸಾಗದ್ದರಿಂದಲೂ ಈಗಿದ್ದ ದನಕರುಗಳನ್ನು ಕೂಡ ಜನರು ಒಂದೇಸವನೇ ಮಾರುತ್ತಿರುವರು ಎಕ್ಕಟ್ಟಿ, ಬಾದರದಿನ್ನಿ ಮೊದಲಾದ ಹಳ್ಳಿಗಳ ಜನರು ಹೊಟ್ಟೆತುಂಬಿಕೊಳ್ಳುವದಕ್ಕೆ ಹುಬ್ಬಳ್ಳಿ, ಗೋವಾ ಇತ್ಯಾದಿ ಕಡೆಗೆ ಹೋಗಿದ್ದಾರೆ. ಹೋಗಹತ್ತಿದ್ದಾರೆ. ಎಷ್ಟೋ ಕಡೆಗೆ ನೀರಿನ ಕೊರತೆಯು ಹೆಚ್ಚಾಗಿದೆ. ಭಗವತಿ, ಬೇವೂರ, ಹಳ್ಳೂರ, ಬೆನಕಟ್ಟಿ ಮೊದಲಾದ ಊರವರು ಇಮ್ಮೈಲಿಂದ ಒಮ್ಮೈಲುಗಳ ಅಂತರದಿಂದ ನೀರು ತಂದುಕೊಳ್ಳಬೇಕಾಗುತ್ತದೆ. ಇಂಥ ಪ್ರಸಂಗದಲ್ಲಿ ಹೆರಕಲ್ಲ ಹತ್ತರ ಬಂದ ಕೆರೆಕಟ್ಟುವ ಯೋಜನೆಯನ್ನು ಸರಕಾರದವರು ಮಾಡಿ ಬೇಗನೇ ಪ್ರಾರಂಭ ಮಾಡಿದರೆ ಕೂಲು ನೀರಿಲ್ಲದೆ ಸಾಯುವ ಜನರಿಗೆ ಕೆಲಸವು ದೊರೆತು ಸ್ವಲ್ಪ ಮಟ್ಟಿಗೆ [illegible]

ದರೂ ಊಟವಾಡಿ ಕಾಲಹರಣ ಮಾಡುವರು. ಮತ್ತು ಈ ಕೆರೆಯಿಂದ ಮುಂದೆ ಜನರಿಗೆ ನೀರಿನ ಕೊರತೆಯು ತಪ್ಪುವದಲ್ಲದೆ ನೀರಾವರಿಗೂ ಉಪಯೋಗವಾಗುವದು. ಇದಲ್ಲದೆ ಸರಕಾರದವರು ತರುಣೋಪಾಯದವರ ಪತ್ರಿಕೆಯನ್ನು ಗಮನಿಸಿದರೆಂದು ಈ ವರ್ಷದ ತೆರಿಗೆಯನ್ನು ಸೂಟು ಕೊಟ್ಟಲ್ಲಿ ಪ್ರಜೆಗಳಿಗೆ ಹಿತವಾಗುವದು. ರೈತರ ಕಷ್ಟಕಾಲದಲ್ಲಿ ಸಹಾಯ ಮಾಡಿ ಬದುಕಿಸುವ ಕರ್ತವ್ಯವು ಸರಕಾರದ್ದೇ ಇರುತ್ತದೆ. ಬಳ್ಳಾರಿ ಮೊದಲಾದ ಕಡೆಗೆ ಆದರೂ ಬರಗಾಲವು ಭಯಂಕರ ಸ್ವರೂಪವನ್ನು ಧರಿಸುತ್ತದೆ. ಅದರ ಬಗ್ಗೆ ಪ್ರಸಂಗಾನುಸಾರವಾಗಿ ಬರೆಯುವೆವು.

ಪತ್ರವ್ಯವಹಾರ.

ರಾ|| ರಾ|| "ಕನ್ನಡಿಗ" ಸಂಪಾದಕ ಇವರಿಗೆ—

ಬಾಗಲಕೋಟೆ ಪೀಪಲ್ಸ ತರುಣ ಸಂಘದ ಪ್ರತಿನಿಧಿ. ಬಾಗಲಕೋಟೆ ತಾಲೂಕಿನಲ್ಲಿ ಆಯಾ ಹಳ್ಳಿಗಳ ಬೆಳೆಗಳ ನಿರ್ಣಯ ಮಾಡುವ ಕುರಿತು ನಾನು ಹಳ್ಳಿಗಳಲ್ಲಿ ಸಂಚರಿಸಿದ್ದೆನೆ. ಹೋದ ವರ್ಷದಲ್ಲಿ ಬರಗಾಲವು ಈ ಸಾರೆ ಎಷ್ಟು ಭಯಂಕರ ಸ್ವರೂಪವನ್ನು ಹೊಂದಿರುತ್ತದೆಂಬುವದು ನನಗೆ ಮನವರಿಕೆಯಾಗಿ ಹೋಯಿತು. ಇದರ ಜೊತೆ ಬೆಳೆಗಳ ನಿರ್ಣಯದ ಪತ್ರಿಕೆಯು ಬೆಳೆಗಳ ನಿಜ ಸ್ಥಿತಿಯನ್ನು ವ್ಯಕ್ತಪಡಿಸುತ್ತದೆ. ಅನೇಕ ಹಳ್ಳಿಗಳಲ್ಲಿ ಮಳೆಯ ಕೊರತೆಯಿಂದ ಬೆಳೆಯು ರೈತರ ಕೈಗೆ ಹತ್ತಿಲ್ಲ. ಸರಕಾರದಲ್ಲಿ ಸಾಲವನ್ನು ತಂದು ಅದನ್ನು ತೀರಿಸುವ ಸಾಧನ ಇಲ್ಲದ್ದಕ್ಕಾಗಿ ತಮ್ಮ ಮನೆಗಳನ್ನು ಹೊಲಗಳನ್ನು ಮಾರಿ ಅಥವಾ ಸಾವಕಾರರಲ್ಲಿ ಇಟ್ಟು ತಮ್ಮ ಉಪಜೀವನಾರ್ಥಕ್ಕಾಗಿ ಎಷ್ಟೋ ಜನರು ತಮ್ಮ ಪ್ರೀತಿಯ ದನಗಳನ್ನು ಮಾರುತ್ತಲಿದ್ದಾರೆ. ಇದರಿಂದ ದನಗಳ ಸಂಖ್ಯೆಯು ಆಯಾ ಗ್ರಾಮಗಳಲ್ಲಿ ಹೇಗೆ ಕಡಿಮೆಯಾಗುತ್ತಾ ನಡೆದಿರುತ್ತದೆಂಬುವದು ಕೆಳಗೆ ಕೊಟ್ಟ ದನಗಳ ಪರಿಗಣನೆಯಿಂದ ಸ್ಪಷ್ಟವಾಗುತ್ತದೆ. ನಾನು ಸಂಚರಿಸಿದ ಹಳ್ಳಿಗಳ ಪೈಕಿ ಎತ್ತಿ ಹೇಳತಕ್ಕ ಗ್ರಾಮಗಳಲ್ಲಿ ಅತ್ಯಂತ ಹೃದಯದ್ರಾವಕ ನೋಟವು ನನ್ನ ದೃಷ್ಟಿಗೆ ಬಿತ್ತು. ಆ ಗ್ರಾಮದಲ್ಲಿ ನಾನು ಅಲ್ಲಿಗೆ ಹೋಗುವ ಮುಂಚಿತವಾಗಿ ಅಜಮಾಸ ೬೦-೭೦ ಜನರು ಗತಿಗಾಣದೆ ಕೇವಲ ಉಪಜೀವನಾರ್ಥಕ್ಕಾಗಿ ಬೇರೆ ಪ್ರಾಂತಗಳಿಗೆ ಹೋಗಿದ್ದರು. ನಾನು ಹೋದ ದಿವಸವೇ ಅಜಮಾಸ ೩೦-೪ ಜನರು ತಮ್ಮ ಹೀನಾವಸ್ಥೆಯನ್ನು ತಾಳಲಾರದೆ ತಮ್ಮ ಹೊಲ ಮನೆಗಳನ್ನು ಮಾರಾಟಮಾಡಿ ಯಾವತ್ತು ಗಂಟು ಕಟ್ಟಿಕೊಂಡು ಪರಗ್ರಾಮಗಳಿಗೆ ಅಂದರೆ ಗೋವಾ ಹುಬ್ಬಳ್ಳಿ ಸೊಲ್ಲಾಪೂರ ಈ ಪ್ರಾಂತಗಳಿಗೆ ಹೋಗಲಿಕ್ಕೆ ಸನ್ನದ್ಧರಾಗಿದ್ದರು. ಈ ಪ್ರಕಾರ ಜನರು ತಮ್ಮ ಗ್ರಾಮಗಳನ್ನು ಬಿಡಹತ್ತಿದರೆ ಇನ್ನು ಸ್ವಲ್ಪ ದಿವಸಗಳಲ್ಲಿ ಅನೇಕ ಹಳ್ಳಿಗಳು ನಿರ್ಜನವಾಗಿ ಪರಿಣಮಿಸುವದರಲ್ಲಿ ಸಂದೇಹವಿಲ್ಲ. ಮುಂದೆ ನಾನು ಭಗವತಿ ಹಳ್ಳೂರ ಬೀಳೂರ ಗ್ರಾಮಗಳ ಕಡೆಗೆ ಮತ್ತು ತೋಳಮಟ್ಟಿ ತುಂಮರಮಟ್ಟಿ ಮುನಗಾ ಈ ಗ್ರಾಮಗಳ ಕಡೆಗೆ ಸಂಚರಿಸುವಾಗ್ಗೆ ಅಲ್ಲಿ ಮತ್ತೊಂದು ಹೃದಯದ್ರಾವಕ ನೋಟ ಕಣ್ಣಿಗೆ ಬಿತ್ತು. ಅಂದರೆ ಅಲ್ಲಿ ಬೆಳೆಗಳು ಸಾಧಾರಣವಾಗಿ ಬಂದಿದ್ದರೂ ನೀರಿನ ಅಭಾವದಿಂದ ಜನರು ಪೇಚಾಡುತ್ತಿದ್ದರು. ಕೆಲವು ಕಡೆಯಲ್ಲಿ ಅಜಮಾಸ ೩-೭ ಮೈಲುಗಳ ಮೇಲಿಂದ ನೀರು ಹೊತ್ತು ತರಬೇಕಾಗುವದು. ಇತ್ತ ಕಡೆಗೆ ಸರಕಾರದವರು ತೀವ್ರವಾಗಿ ಲಕ್ಷ್ಯಕೊಡದಿದ್ದರೆ ನೀರಿನ ಕೊರತೆಯು ಮತ್ತಿಷ್ಟು ಉಗ್ರಸ್ವರೂಪವನ್ನು ಹೊಂದುವದು. ಕುಡಿಯಲಿಕ್ಕೆ ನೀರಿಲ್ಲ, ತಿನ್ನಲಿಕ್ಕೆ ತಿಂಡಿಇಲ್ಲ. ಹೊಲಗಳನ್ನು ಮುಂದೆ ನಾಗಮಾಡಬೇಕಾದರೆ ದನಗಳ ಸಂಖ್ಯೆಯು ಕಡಿಮೆಯಾಗಹತ್ತಿರುವದು. ಎಲ್ಲಿ ನೋಡಿದರೂ ದುಃಖ ಸಹ ಹುಟ್ಟುವದು. ಈ ವರ್ಷ ಎಷ್ಟೋ ಹಳ್ಳಿಗಳಲ್ಲಿಯ ಬೆಳೆಗಳನ್ನು ತನಾಸಮಾಡಿ ನೋಡಲಾಗಿ ೨ ಆಣೆ ಕಿಂತಾ ಹೆಚ್ಚು ಹೊರಡುವದು ದುಸ್ತರವು. ಹೀಗಿದ್ದು ಸರಕಾರದವರು ತೆರಿಗೆಯನ್ನು ಮತ್ತು ತಗಾಯಿಯನ್ನು ಎತ್ತುವರೆಂಬ ಸುದ್ದಿ ವಾರ್ತೆಯು ಹುಣ್ಣಿನ ಮೇಲೆ ಉಪ್ಪು ಸುರವಿದಂತಾಗುವದು.

ಇಂಥ ಅವನತ ಸ್ಥಿತಿಯಲ್ಲಿ ಸರಕಾರದವರು ತೆರಿಗೆಯನ್ನು ಸೂಟ ಬಿಡುವದು ಆಯಾ ಗ್ರಾಮಸ್ಥರಿಗೆ ಅನುಕೂಲವಾಗುವಂತೆ ದೊಡ್ಡ ಪ್ರಮಾಣದಿಂದ ಕೆಲಸಗಳನ್ನು (ಕೆರೆ ಕಾಲುವೆಗಳನ್ನು) ಪ್ರಾರಂಭ ಮಾಡುವದು ಸಧ್ಯಕ್ಕೆ ತರುಣ ಉಪಾಯಗಳಾಗಿವೆ. ಈ ಸಂದರ್ಭದಲ್ಲಿ ಹೆರಕಲ್ಲ ಕಾಲಿವೆ ಕೆಲಸಗಳನ್ನು ಸರಕಾರದವರು ತೀವ್ರವಾಗಿ ಕೈಕೊಂಡರೆ ಸುತ್ತುಮುತ್ತಲಿನ ಅನೇಕ ಹಳ್ಳಿಗಳಿಗೆ ನೀರಿನ ಪೂರೈಕೆಯಾಗಿ ಬರಗಾಲ ನಿವಾರಣೆಯ ಕಾರ್ಯವು ಸುಲಭವಾಗುವದು. ಈ ವಿಷಯದಲ್ಲಿ ಜನರ ಬೆಂಬಲವು ಎಷ್ಟು ಒಲಿದವರಾಗಿರುತ್ತದೆಂಬದನ್ನು ಅಧಿಕಾರಿಗಳು ಸ್ವತಂತ್ರ ರೀತಿಯಿಂದ ವಿಚಾರಿಸಬೇಕಾಗಿ ಆಶಿಸುತ್ತೇನೆ.

ಬಾಗಲಕೋಟೆ,
ತಾ|| ೯-೨-೨೭

ತಮ್ಮ ಕೃಪಾಭಿಲಾಷಿ
ನಾಗಪ್ಪಾ ಬ್ಯಾಳಿ.

ಊರುಗಳ ಹೆಸರುಗಳು	ಸಾಗುವಳಿ	ಪಡ	ಆಣೆವಾರಿ	ಊರುಬಿಟ್ಟು ಹೋದವರು	ದನಗಳ ಪರಿಗಣನೆ
ತೋಳಮಟ್ಟಿ	೧೯೫೦	೧೫೦	೪ ಆಣೆ	೨೦೦	ಸಧ್ಯಕ್ಕೆ ೨೦೬
ಶಿರೂರು	೧೫೭೨೪	೬೪೯	೨|| ಮು. ೧ಹಿ.	೧೦೦	೨೦೦೦ ಸನ್ ೧೯೨೧ ರಲ್ಲಿ ೧೫೦೦ ಸಧ್ಯಕ್ಕೆ
ಆಚನೂರು	೨೩೬೪	ಇಲ್ಲ	೩ ಮು. ೨ ಹಿ.	೨೫	೬೨೧ ಸನ್ ೧೯೨೧, ೪೬೦ ಸಧ್ಯಕ್ಕೆ
ಕಡ್ಲಿಮಟ್ಟಿ	೧೫೬೪	ಇಲ್ಲ	೨ ಮು. ೧ ಹಿ.	೨೫	೬೨೦ ಸನ್ ೧೯೨೦ ೫೦೦ ಸಧ್ಯಕ್ಕೆ
ಮುನ್ನೀಕೇರಿ	೩೪೦೦	೧೨	೨ ಆಣೆ	೩೦೦	
ಜಾನಮಟ್ಟಿ	೨೦೫೬	ಇಲ್ಲ	೨ ಆಣೆ	೧೫೦	
ಬಾದರದಿನ್ನಿ	೨೦೦೦	೫೦	೨ ಮು ೧ ಹಿ.	೫೦	೭೫೦ ಸನ್ ೧೯೨೦ ೧೫೦ ಸಧ್ಯಕ್ಕೆ
ಮಲ್ಲಾಪೂರ	೨೩೬೦	೧೦೦	೨ ಮು. ೧ ಹಿ.	ಇಲ್ಲ	೨೦೦ ಸನ್ ೧೯೨೫ ೧೦೦
ಹೊನ್ನಾಕಟ್ಟಿ	೧೧೦೦೦	೩೦೦	೨ ಮು ೧ ಹಿ.	ಇಲ್ಲ	೩೦೦ ಸನ್ ೧೯೨೫ ೨೦೦ ಸಧ್ಯಕ್ಕೆ

ನಟವರ್ಗದವರು ಬೇಕು.

ಕೊಂಬಳ ಸಂಗೀತ ನಾಟಕ ಮಂಡಳಿ ಸಲುವಾಗಿ ಜೋಡು ಸೆಟ್ಟಿಗೆ ಬಾಲ, ಸ್ತ್ರೀ ಪುರುಷ ಪಾರ್ಟೀ ಸಲುವಾಗಿ ಕಾಯಂ ಸರ್ವೀಸ ಮಾಡುವ ಜನರು ಬೇಕು. ಬರಲಿಕ್ಕೆ ಇಚ್ಛಿಸುವರು ಕೆಳಗಿನ ವಿಳಾಸಕ್ಕೆ ಬಂದು ಭೆಟ್ಟಿ ಆಗಬೇಕು. ಕಾಯಂ ಆದ ಜನರ ಗಾಡಿ ಚಾರ್ಜು ಕೊಡಲ್ಪಡುವದು.

ಕ್ಯಾಂಪ— ಗದಗಬೆಟಗೇರಿ ಮ್ಯಾನೇಜರ

ಕೊಂಬಳ ಸಂಗೀತನಾಟಕ ಮಂಡಳಿ

(ಭವಾನಿಸಾ॥ ಕಲಾಡಿಯವರ ಬಂಗ್ಲೆದಲ್ಲಿ) ಪೋ ಗದಗ ಬೆಟಗೇರಿ

ಲಿವರಿನ ಗಡಿಯಾರಗಳು.

ಲಿವರಿನ ಕೈ ಗಡಿಯಾರ ರೂ. ೯.

ಲಿವರಿನ ಕಿಸೆಯೊಳಗಿಡುವ ಗಡಿಯಾರ ರೂ. ೭.



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಮೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ತಾಳುವವು. ಬೆಲೆ ಕಡಿಮೆಯಿದೆಂದು ಅಂಜುವ ಕಾರಣವಿಲ್ಲ. ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ಸ್ಪರ್ಧೆಯಾಗಿ ಬಹಳ ವೆಚ್ಚತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚ ಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇನೆ. ಆದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ.

ಲಿಚೋ ವಾಚ ಕಂ. (ಇಂಡಿಯಾ.) ಬಾಂಬೆ. ೩. ೪.

ಬಿ. ಎಂ. ಹೂಗಾರ ಕೃತ

ತಾಳಪ್ರಸ್ತಾರಸಾಗರ.

೧ ನೇ ಭಾಗ.

(ಮೃದಂಗ ವಿದ್ಯಾವಿನೋದ.)

ಈ ಗ್ರಂಥದಲ್ಲಿ ತಾಳಗಳ ಉತ್ಪತ್ತಿ, ಜಾತಿಭೇದದಿಂದ ಹುಟ್ಟಿದ ೩೫ ತಾಳಗಳನ್ನು ಹಿಡಿಯುವ ಕ್ರಮ, ತಬಲಾದಲ್ಲಿ ಅಕ್ಷರಗಳನ್ನು ನುಡಿಸುವ ಕ್ರಮ, (ಸಚಿತ್ರ) ಪರಿ; ಕಾಲು, ಮುಕ್ಕಾಲು ತಾಳಗಳನ್ನೂ ಮುಗುತಾಯಗಳನ್ನೂ ಮಾಡುವ ರೀತಿ, ಮರ್ಮ ತಾಳ ಲಕ್ಷಣ, ಗುಣಿವಾದ್ಯಶಬ್ದಗಳ ವಿಚಾರ, ಎರಡೂ ತಾಳಗಳನ್ನು ಗತಿಭೇದದಿಂದ ಎರಡೂ ಕೈಗಳಿಂದ ಒಮ್ಮೆಲೆ ನಡಿಸುವ ಕ್ರಮ, ಇತ್ಯಾದ್ಯನೇಕ ರಹಸ್ಯವಾದ ವಿಷಯಗಳು ಸ್ಪಷ್ಟವಾಗಿರುವವು. ಗ್ರಂಥದ ಬಗ್ಗೆ ಅನೇಕ ವಿದ್ವಾಂಸರು ತಮ್ಮ ಸದಭಿಪ್ರಾಯವನ್ನು ವ್ಯಕ್ತಪಡಿಸಿರುವರು, ಈ ಗ್ರಂಥವು ಹತ್ತರಿದ್ದರೆ ಒಬ್ಬ ಸಂಗೀತ ವಿದ್ವಾಂಸನೇ ಹತ್ತರಿದ್ದಂತಾಗಿ ಬೋಧಕರ ಸಹಾಯವೇ ಬೇಕಾಗಲಾರದು.

ಈ ಪುಸ್ತಕದ ಬೆಲೆ ೨—೦—೦ ರೂಪಾಯಿ. ಕಾಲ ವಿಲಂಬವಾದರೆ ಪುಸ್ತಕಗಳು ಸಿಗಲಾರವು. ಕೆಳಗಿನ ವಿಳಾಸಕ್ಕೆ ಬೇಕಾದವರು ತಕ್ಷಣ ಬರೆದು ಕೊಳ್ಳಬೇಕು.

ವಿಳಾಸ:— **ಬಸಪ್ಪ ಮಲ್ಲಪ್ಪ ಹೂಗಾರ.**

ಸಾ॥ ಬೆಂತಲಿ. ತಾ. ಗದಗ.

ಪೊ॥ ಮುಳಗುಂದ. ಜಿಲ್ಲಾ ಧಾರವಾಡ.

ಯಾವದೇ {ಆಕಾರದ / ನಕ್ಷೆಯ / ಬಣ್ಣದ} ಗಡಿಯಾರವನ್ನು

ಒಂದೇ ೭ ರೂಪಾಯಿಗೆ ಕೊಡುತ್ತೇವೆ.

ಮೂಲ ಬೆಲೆ ರೂ. ೧೪, ಅರ್ಧ ಬೆಲೆ ರೂ. ೭



ಬರೇ ಒಂದು ತಿಂಗಳ ಬಗ್ಗೆ ನಾವು ಈ ದರವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಜರ್ಮನ್ ನಿರ್ದೋಷ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. **ಯಾವದೇ** ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ **ರೇಶಿಮೆ** ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ **ಬೆಲೆ ರೂ. ೭**

ಅವಕಾಶ ಇದೆ; ಈಗಲೇ ಬರೆಯಿರಿ

ಪತ್ತೆ:— ಸ್ಟ್ಯಾನ ಡಾಸ ಪಿ. ಬಿ. ೫೦೮. ಪಿ. ಟಿ. ಮದ್ರಾಸ

ಆಶ್ಚರ್ಯವಿದೆ! ಉಚಿತ!

ಕೇವಲ ಉಚಿತ **ಕೇವಲ ಉಚಿತ**



" ತಾರಾ " ಲೀವರ ರಜಿಸ್ಟರ್ಡ್ ಪೋಕೆಟ್ ವಾಚ್ ಗಳು ಕೆರೆಟ್ ರೋಲ್ಡ್ ಗೋಲ್ಡಿನದು. ಮುಚ್ಚಳಿಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚು ಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "೩" ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು " ತಾರಾ " ಲೀವರ ರಿಜಿಸ್ಟರ್ಡ್ ಗಳ ಕೆರೆಟ್ ರೋಲ್ಡ್ ಗೋಲ್ಡಿನ ಪೋಕೆಟ್ ಲೀವರ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಸ್ಟ್ಯಾನ ಡಾಸ ೫೦ . ಪಿ. ಟಿ. ೫೦೮ ಮದ್ರಾಸ

೨೨೫೦ ವರುಷಗಳ ಪೂರ್ವದಲ್ಲಿದ್ದ

• ಅಶೋಕ ಮಹಾರಾಯನ ಆಳಿಕೆ •

(ಗೆಳೆಯರ ಗುಂಪಿನಿಂದ)

— ಪ್ರಥಮ ಲೇಖಾಂಕ. —

ತಾನೆಷ್ಟರವನೆಂದು ತನಗೆ ಗೊತ್ತಿಲ್ಲದಾಗ ತಾನೇ ಇಂದ್ರ-ಚಂದ್ರನೆಂಬ ಭ್ರಾಂತಿಯಿರುತ್ತದೆ ತಾನೊಬ್ಬ ದೊಡ್ಡವನೆಂಬ ಭ್ರಾಂತಿಯಿರುವಾಗ ಉಳಿದವರೆಲ್ಲ ಕ್ಷುದ್ರರೆಂದು ಭಾಸವಾಗುತ್ತದೆ. ಇಂಥ ದೊಡ್ಡಸ್ತಿಕೆಯಿರುವ ವರೆಗೆ ಜ್ಞಾನವೂ ಯಥಾರ್ಥವಾಗಿ ಗೊತ್ತಾಗುವಂತಿಲ್ಲ ಯಾಕೆಂದರೆ ತನ್ನಲ್ಲಿಯೇ ಮೊದಲು ಅರ್ಥವಿರುವದಿಲ್ಲ ಇಂಥವರು ತಮಗನಿಸಿದ ತಮ್ಮ ದೊಡ್ಡಸ್ತಿಕೆಯನ್ನು ಲೋಕದಲ್ಲಿ ಸ್ಥಿರಪಡಿಸುವುದರಲ್ಲಿಯೇ ತೃಪ್ತಿಯನ್ನು ಕಲ್ಪಿಸಿಕೊಂಡು ಜೀವನವನ್ನು ಮುಗಿಸುವರು. ಮಾನವಮಾತ್ರರೆಲ್ಲರೂ ಹೀಗೆ ತಮ್ಮ ಮಟ್ಟಿಗೆ ತಾವು ಕುಸ್ತುವಿಲ್ಲತನವು ಹೆಚ್ಚಿನವರೆಂದೇ ಭಾವಿಸುವರು ಇದು ಸಮಸ್ತ ಮಾನವಕೋಟಿಗೇ ಅಂಟಿಕೊಂಡಿರುವ ಗುಣವು. ಇಂಥ ಸರ್ವಸಾಮಾನ್ಯವಾಗಿರುವ ಕೀಳು ದೊಡ್ಡಿಸ್ತನವು ಹಾಳಾಗಿ ಹೋದಾಗಲೇ ಸಾಮಾನ್ಯರೊಳಗೆ ಅಸಾಮಾನ್ಯತೆ ಮೈದೋರುವದು ಆಗ ತನ್ನ ಬೆಲೆ ತನಗೆ ತಿಳಿಯುವದು. ಮೊದಲಿದ್ದ ಪಶುವಾಗ-ಮನುಷ್ಯನಾಗುವದು. ಎಲ್ಲಾ ತನ್ನಂತೆಯೇ ದು ಆಗ ಅರಿವಾಗುವದು - ಇಂಥ ಸರ್ವಸಮಾನತೆಯೇ ಸಮಸ್ತದಲ್ಲಿ ಸಮರಸವಾಗುವ ಹಾದಿ. ತನ್ನ ಅರಿವಾದಾಗಲೇ ಲೋಕದ ಪರಿವೆಯಾಗುವದು. ಅದು ವರೆಗೆ ಬರಿ ಜೊಳ್ಳು, ದೊಡ್ಡಸ್ತಿಕೆಯ ಹುಚ್ಚಾಟ. ದಯೆ, ಕ್ಷಮೆ, ಸಹಾನುಭೂತಿ, ಸೇವೆ ಎಂಬುವು ಮಾನವನ ಧರ್ಮಗಳಲ್ಲದೆ ಪಶುವಿನವಲ್ಲ. ಮನುಷ್ಯತ್ವವುಂಟಾಗುವ ವರೆಗೆ ಇವುಗಳ ಸುದ್ದಿಯನ್ನೇ ಕೇಳಬಾರದು ತನ್ನ ಹೊಟ್ಟೆಗೆ ಅನ್ಯರನ್ನು ಬಲಿಕೊಡುವ ಪಶುವಿಗೆ ದಯೆಯುಂಟೇ? ತಾಳ್ಮೆಯಿಲ್ಲದ-ಉರವಣಿಗೆಯ ದನಕ್ಕೆ ಕ್ಷಮೆಯೆಂದರೇನು ಗೊತ್ತು? ಸ್ವಾರ್ಥಕ್ಕೆ ಅಡ್ಡಿಯಾಗುವದೇನಿದ್ದರೂ ಅದನ್ನು ಹೊಡೆದು ಹಾರಿಸುವ ಅರುವಾಳಿಗೆ ಮರುಕವುಂಟೇ? ತನ್ನ ಸೇವೆಯಲ್ಲಿಯೇ ತಾನು ಮುಬ್ಬಾಗಿ ಹೋಗಿರುವ ಪಾಪಿಗೆ ಹೆರವರ ಸೇವೆ ಮಾಡಲಿಕ್ಕಾದೀತೇ? ಮನುಷ್ಯತ್ವವಿಲ್ಲದಲ್ಲಿ ಪ್ರೇಮವಿಲ್ಲ ಪ್ರೇಮ ಚತುರ್ಮುಖನ ಗದ್ದುಗೆಯು ಮನುಷ್ಯತ್ವವೇ ಮನುಷ್ಯತ್ವವುಂಟಾಗುತ್ತಲೆ ಬೇಕಾದವರೆಲ್ಲ ಬೇಕಾದವರಾಗುವರು. ಆಗ ಬೇಡಾದವರೊಬ್ಬರೂ ಇಲ್ಲ. ಬೇಕಾದವರು ಬೇಕಾದ್ದು ಮಾಡಿದರೂ ಅದು ಬೇಕಾದದ್ದೇ ಆಗುವದರಿಂದ ಆಗ ಕ್ಷಮೆಯ ಸಂಪೂರ್ಣ ಶುದ್ಧ ಸ್ವರೂಪವು ಪ್ರಕಟವಾಗುವದು. ಎಲ್ಲರೂ ತನ್ನಂತೆಯಾದ್ದರಿಂದ ಎಲ್ಲರ ಕಷ್ಟನಷ್ಟಗಳು ತನ್ನಲ್ಲಿ ಸಹಾನುಭೂತವಾಗುವವು. ಈ ಮರುಗಿನಿಂದಲೇ ಸಮಸ್ತವನ್ನು ಸೇವಿಸುವನು. ಇಂಥ ಮಾನ್ಯವಾದ ಮಾನ್ಯತೆಯುಂಟಾಗುವ ವರೆಗೆ ಪ್ರೇಮಗಂಧವೆಲ್ಲಿಯದು? ಪಾಶವ ಸ್ಥಿತಿಯಲ್ಲಿ ಮೋಹಕ್ಕೆ ಪ್ರೇಮವೆನ್ನುವರು, ಹೆಮ್ಮೆಯ ಗೊಡ್ಡುಲೋಭಕ್ಕೆ ದಯಾಧ್ಯಾನವೆನ್ನುವರು, ಸ್ವಾರ್ಥಸಾಧನೆಯ ಸಾವಧಾನತೆಗೆ ಕ್ಷಮೆಯೆನ್ನುವರು. ಹೊಗಳಿಕೆಗೆ ಮೆಚ್ಚಿ ಕುಣಿಯುವ ಕುಣಿತಕ್ಕೆ ಸೇವೆಯೆನ್ನುವರು ಇದೆಲ್ಲಾ ಭ್ರಾಂತಿ.

ಇಂಥ ಭ್ರಮೆಯನ್ನು ಬೋಳುಮಾಡಿದ ಬುದ್ಧದೇವನ ಬಲಗೈಯಂತಿದ್ದ ವೀರ ನರಸಿಂಹನೇ ಅಶೋಕ ಮಹಾರಾಯನು. ತನ್ನ ಪ್ರಜೆಗಳು ಪಶುತ್ವವನ್ನು ಕಳೆಕೊಂಡು ಮಾನವರಾಗಿ, ವಿಶುದ್ಧತೆಯ ಬಲದಿಂದ ಪ್ರೇಮಚತುರ್ಮುಖನ ವರದಿಂದ ದೇವತೆಗಳಾಗಿ ಭೂಲೋಕವನ್ನು ಸ್ವರ್ಗಧಾಮವನ್ನಾಗಿ ಮಾಡುವುದಕ್ಕೆ ಆಯುಷ್ಯವನ್ನು ಸವೆಸಿದ ರಾಜಶಿಖಾಮಣಿಯಾದ ಅಶೋಕನ ಆಳಿಕೆಯು ಕನ್ನಡಿಗರನ್ನೂ ಸುತ್ತುಮುತ್ತಿದ್ದದ್ದರಿಂದ ಕನ್ನಡಿಗರಿಗೆ "ಕನ್ನಡಿಗ"ನ ಮುಖಾಂತರವಾಗಿ ಆ ಪುಣ್ಯ ಪ್ರಸಂಗವು ವಿದಿತವಾಗಬೇಕಾದದ್ದು ಉಚಿತವಲ್ಲವೇ!

ಎರಡುಸಾವಿರದೆರಡೂವರೆ ನೂರು ವರುಷಗಳ ಹಿಂದೆ ವಿಸ್ತಾರವಾದ ಸಾಮ್ರಾಜ್ಯಕ್ಕೆ ಏಕೈಕ ಛತ್ರಪತಿಯಾಗಿ ಜನವನ್ನೂ ಮನವನ್ನೂ ಕೂಡಿಯೇ ಆಳಿದ ಅಶೋಕ ಮಹಾರಾಯನು ದೇಶದಲ್ಲಿ ಬಹುಜನರ ದೃಷ್ಟಿಗೆ ಬೀಳುವಂಥ ಗುಡ್ಡದ ಬಂಡೆಗಳ ಮೇಲೆಯೂ, ಪುಣ್ಯ ಕ್ಷೇತ್ರಗಳಲ್ಲಿ ಕಲ್ಲುಕಂಬಗಳ ಮೇಲೆಯೂ ಪ್ರಜೆಗಳನ್ನೂ, ಅಧಿಕಾರಿಗಳನ್ನೂ ಕುರಿತು ದೊಡ್ಡ ದೊಡ್ಡ ಅಕ್ಷರಗಳಿಂದ ಸರಳವಾಗಿ "ಹಳ್ಳೀ" ಭಾಷೆಯಲ್ಲಿ ರಾಜಾಜ್ಞೆಯ "ಧರ್ಮಲಿಪಿ"ಗಳನ್ನು ಬರೆಯಿಸಿ, "ದೇವಪ್ರಿಯ" "ಪ್ರಿಯದರ್ಶಿ" ಯೆಂಬ ತನ್ನ ಬಿರುದಾವಳಿಯನ್ನು ಯಥಾರ್ಥಗೊಳಿಸಿರುವನು. ನಮ್ಮ ಕನ್ನಡನಾಡಿನಲ್ಲಿ— ಚಿತ್ರದುರ್ಗ ಜಿಲ್ಲೆಯಲ್ಲೂ, ರಾಯಚೂರು ಜಿಲ್ಲೆಯಲ್ಲೂ ಈ ಧರ್ಮಲಿಪಿಗಳ ಪುಣ್ಯದರ್ಶನವು ಈಗಲೂ ಆಗುವದು! ಅಶೋಕ ಮಹಾರಾಯನ ಜೀವನ ಸೂತ್ರವನ್ನೂ ಪ್ರಜಾಮಮತೆಯ ಮೇರೆಯನ್ನೂ, ಅವನ ಶ್ರೀಮುಖದಿಂದ ಒಂದ ಶ್ರೀವಚನಗಳಿಂದಲೇ ವಿಸ್ತರಿಸಿ ಈ ಪ್ರಥಮ ಲೇಖಾಂಕವನ್ನು ಮುಗಿಸುವೆನು ——

"ಸಮಸ್ತ ಪ್ರಜೆಗಳ ಕಲ್ಯಾಣಸಾಧನೆಯೇ ನನ್ನ ಕರ್ತವ್ಯಕರ್ಮವು .... ಸರ್ವಲೋಕದ ಹಿತಸಾಧನೆಗಿಂತ ಹೆಚ್ಚಿನ ಕೆಲಸವೇ ಇಲ್ಲ. ನಾನು ಕಷ್ಟಪಟ್ಟು ಮಾಡುತ್ತಿರುವದೆಲ್ಲಾ ಸರ್ವಪ್ರಾಣಿಗಳ ರಿಣವನ್ನು ತೀರಿಸುವದಕ್ಕಾಗಿಯೇ. ಇಲ್ಲಿ ನಾನು ಸಕಲರಿಗೂ ಸುಖಕೊಟ್ಟು ಸ್ವರ್ಗದ ದಾರೀ ತೋರಿಸುವೆ"

—ಗಿರ್ನಾರ ಪರ್ವತದ ಆರನೇ ಲಿಪಿ.

"ಪಾಪವೇ ವಿಪತ್ತಿಯ ಮೂಲ ಸಕಲರೂ ವಿಪತ್ತಿಯಿಲ್ಲದವರಾಗಿ ಬಾಳಲಿ. ದೇವಪ್ರಿಯನಾದ ಪ್ರಿಯದರ್ಶಿ ರಾಜನು ಮಾಡುತ್ತಿರುವುದೆಲ್ಲಾ ಪರಲೋಕಕ್ಕಾಗಿಯೇ."

—ಗಿರ್ನಾರದ ಹತ್ತನೇ ಗಿರಿಲಿಪಿ.

"ಧರ್ಮದಾನವೇ ದಾನ. ಧರ್ಮ ಪರಿಚಯವೇ ಪರಿಚಯ. ಧರ್ಮಾನುಗ್ರಹವೇ ಅನುಗ್ರಹ. ಧರ್ಮಬಂಧುತ್ವವೇ ಬಂಧುತ್ವ. ಇವುಗಳಂಥವಿನ್ನಾವವೂ ಇಲ್ಲ."

— ೧೧ನೇ ಗಿರಿಲಿಪಿ.

"ಮನುಷ್ಯಮಾತ್ರರೆಲ್ಲ ನನ್ನ ಮಕ್ಕಳು. ನನ್ನ ಹೊಟ್ಟೆಯ ಮಕ್ಕಳ ಇಹಪರ ಸುಖಕ್ಕಾಗಿ ಎಷ್ಟು ಯತ್ನಿಸುವೆನೋ ಅಷ್ಟೇ ನಾನು ಸಮಸ್ತ ಮಾನವರ ಸುಖಕ್ಕಾಗಿ ಚಿಂತಿಸುವೆ."

— ಜೌಗಡದ ಕಾಲಿಂಗ ಶಾಸನ ೧

"ಅಧಿಕಾರಿಗಳಿರಾ, ಚಲೋ ಸಾಕುವವಳ ಕೈಯಲ್ಲಿ ಮಕ್ಕಳನ್ನೊಪ್ಪಿಸಿ, ಇವಳು ಚೆನ್ನಾಗಿ ಸಾಕುವಳೆಂದು ನಂಬಿ ನಿಶ್ಚಿಂತೆಯಿಂದಿರುವಂತೆ, ನಾನು ನನ್ನ ಪ್ರಜೆಗಳ ಮೇಲೆ ನಿಮ್ಮನ್ನು ನಿಯಮಿಸಿರುವೆ. ದೇಶವಾಸಿಗಳಿಗೆ ಕಲ್ಯಾಣವಾಗಬೇಕೆಂಬುದನ್ನು ಸದಾ ನೆನಪಿನಲ್ಲಿಟ್ಟು ನಡೆಯಿರಿ."

— ೪ನೇ ಸ್ತಂಭ ಲಿಪಿ

ಮಹಾತ್ಮಾ ಗಾಂಧಿಯವರೂ
ಮತ್ತು
ಕವಿಚಕ್ರವರ್ತಿ ರವೀಂದ್ರನಾಥ ಟಾಗೋರರವರೂ.

ಅ:— ಗಳಿಯು,

ರವೀಂದ್ರರು ಕವಿಚಕ್ರವರ್ತಿಗಳು. ಗಾಂಧಿಯವರು ಮಹಾತ್ಮರು. ನಾವು ಮಹಾತ್ಮಾಜಿಯವರಿಗೂ ಕವಿಗಳೆಂದು ಕರೆದರೆ ತಪ್ಪಾಗಲಿಕ್ಕಿಲ್ಲ ಯಾಕೆಂದರೆ ಕವಿತೆಯು ಸತ್ಯ-ಸುಂದರ ಮತ್ತು ಪರಮಾತ್ಮ ಸ್ವರೂಪವಿದೆ. ಮಹಾತ್ಮಾ ಗಾಂಧಿಯವರಾದರೂ ಹಾಗೆಯೇ ಇರುವರು. ಮೂರ್ತಿಮಾನ ಕವಿತ್ವವೇ ಅವರಾಗಿರುವರು.

ಮಹಾತ್ಮಾ ಗಾಂಧೀಯವರ ಹೆಸರು ಭಾರತವರ್ಷದಲ್ಲಿಯೇ ಅಲ್ಲ, ಭೂಮಂಡಲದಲ್ಲಿಯು ಎಲ್ಲ ಶಿಕ್ಷಿತ ಅಶಿಕ್ಷಿತರೂ ಬಲ್ಲರು. ಅಶಿಕ್ಷಿತಜನರಂತೂ ಈ ಹೊತ್ತು ಅವರಿಗೆ ತಂದೆ ಎಂದು ಭಾವಿಸುತ್ತಾರೆ. ಠಾಕೂರ ಮಹೋದಯರ ಖ್ಯಾತಿಯು ಅಧಿಕವಾಗಿ ಶಿಕ್ಷಿತರಲ್ಲಿಯೇ ಹೆಚ್ಚು ಬಂಗಾಲದಲ್ಲಿ ಮಾತ್ರ ಹೆಚ್ಚು ಪರಿಚಿತರು.

ಅಸಹಯೋಗವೇ ಮಹಾತ್ಮಾ ಗಾಂಧೀಯವರ ಸಂದೇಶವು. ಅಸಹಯೋಗವೆಂದರೆ ಸತ್ಪ್ರವೃತ್ತಿಗಳ ಸತ್ಕಾರವು. ದುಷ್ಪ್ರವೃತ್ತಿಗಳ ತ್ಯಾಗವು. ವಿಶ್ವಪ್ರೇಮವೇ ರವೀಂದ್ರರ ಸಂದೇಶವಾಗಿದೆ.

ಮಹಾತ್ಮಾಜಿಯವರು ಅಹಮ್ಮದಾಬಾದಿನಲ್ಲಿ "ಸತ್ಯಾಗ್ರಹ" ಆಶ್ರಮವನ್ನು ಸ್ಥಾಪಿಸಿ ದಿವ್ಯ ಜೀವನದ ಮಿಂಚನ್ನು ಮಿನುಗಿಸಹತ್ತಿದ್ದಾರೆ. ಇದರಲ್ಲಿ ತಪಸ್ಸಿದೆ. ಆತ್ಮನಿರ್ಭರತೆ ಇದೆ. ಅಲ್ಲಿ ಬುದ್ಧಿಯ ಮೇಲೆ ಹೃದಯದ ವಿಜಯಪತಾಕೆಯು ಹಾರಾಡುತ್ತಿದೆ. ಇತ್ತ ಬೋಲಪುರದಲ್ಲಿ ರವೀಂದ್ರರ ದಿವ್ಯ "ಶಾಂತಿನಿಕೇತನ"ವು ವಿಚಿತ್ರ ಪ್ರಕಾಶವನ್ನು ಕೊಡುತ್ತಿದೆ. ಇಲ್ಲಿ ಬುದ್ಧಿವಾದ ಬಲದಿಂದ ವಿಶ್ವಪ್ರೇಮದ ಶಿಕ್ಷಣವು ಕೊಡಲ್ಪಡುತ್ತಿದೆ. ಇದರಲ್ಲಿ ಬುದ್ಧಿವೈಭವದ ಠಿಕ್ಕಾಣವಿದೆ. ಇದು ಪ್ರಾಚೀನ ಭಾರತದ ಅಧ್ಯಯನದ ಪ್ರಸ್ತಾವನೆಯಾಗಿದೆ. ಮತ್ತು ವಿಶ್ವಪ್ರೇಮದ ಪ್ರದರ್ಶನವಾಗಿದೆ.

ಮಹಾತ್ಮಾ ಗಾಂಧಿಯವರ ದೃಷ್ಟಿಯಲ್ಲಿ ಆಧುನಿಕ ಭಾರತದ ಆಧಾರಗಳೆಂದರೆ ರಾಟಿ ಮತ್ತು ಖದ್ದರಗಳು. ಖದ್ದರ ಮತ್ತು ರಾಟಿಗಳ ಆರ್ಥಿಕ ಮಹತ್ವವು ಅಷ್ಟಿಲ್ಲದಿದ್ದರೂ ಸರಲ ಜೀವನವು ಸ್ಪಷ್ಟವಾಗಿ ಒಡೆದು ತೋರುತ್ತದೆ. ಆದುದರಿಂದಲೇ ಮಹಾತ್ಮಾಜಿಯವರು ಎಲ್ಲ ಜನರ ಪರಸ್ಪರ ಸಹಾನುಭೂತಿಯ ಹೆಚ್ಚಳಕ್ಕಾಗಿ ಈ ವಸ್ತುಗಳನ್ನು ಅನಿವಾರ್ಯ ಪ್ರೀತಿಯಿಂದ ಅಂಗೀಕರಿಸಿರುವರು. ರವೀಂದ್ರರಿಗೆ ರಾಟಿ ಮತ್ತು ಖದ್ದರಗಳಲ್ಲಿ ವಿಶ್ವಾಸವು ಬಹಳ ಕಡಿಮೆ. ಬೇರೆ ಬೇರೆ ಜಾತಿಯ ವಿದ್ವಜ್ಜನರ ಪರಸ್ಪರ ಕೂಡುವಿಕೆಯಿಂದ ಮತ್ತು ವಿಚಾರ ವಿನಿಮಯದಿಂದ ಯಾವ ಸಹಿಷ್ಣುತೆಯೂ, ಪ್ರೇಮವೂ, ಸಹಾನುಭೂತಿಯೂ ಆವಿರ್ಭವಿಸುವವೋ ಅವುಗಳಿಂದಲೇ ಭಾರತದ ಉದ್ಧಾರವೆಂದು ಅವರ ನಂಬುಗೆ ಇದೆ. ಇದರ ಹೊರ್ತು ಬೇರೆ ಉಪಾಯವಿಲ್ಲೆಂದು ಅವರ ಹೇಳಿಕೆ.

ಭಾರತವರ್ಷದ ಮುಸಲ್ಮಾನ ಬಂಧುಗಳು ರವೀಂದ್ರರಿಗಿಂತ ಮಹಾತ್ಮರ ಮೇಲೆ ಹೆಚ್ಚು ವಿಶ್ವಾಸವುಳ್ಳವರಾಗಿದ್ದಾರೆ.

ರಾಕೂರರು ಸಾಹಿತ್ಯದ ನಿರ್ಮಾಣಮಾಡಿ ಅದರ ಸಹಾಯದಿಂದ ವಿಚಾರಕ್ರಾಂತಿಯನ್ನುಂಟುಮಾಡಲು ಇಚ್ಛಿಸುತ್ತಾರೆ. ಮಹಾತ್ಮಾಜಿಯವರು ತಮ್ಮ ಆದರ್ಶ ಪವಿತ್ರ ಜೀವನದಿಂದ ಜನರ ಹೃದಯವನ್ನು ಅರಳಿಸಲು ಇಚ್ಛಿಸುತ್ತಾರೆ.

ರವೀಂದ್ರರು ಎಷ್ಟು ಸಾಹಿತ್ಯದ ನಿರ್ಮಾಣಮಾಡಿರುವರೋ ಅಷ್ಟು ಗಾಂಧಿಜಿಯವರು ಮಾಡಿಲ್ಲ. ಆದರೆ ಈ ಸಿದ್ಧಾಂತ ನಿರ್ಧಾರದಲ್ಲಿ ಮಹಾತ್ಮರ ಶರೀರಕ್ಕೆ ಎಷ್ಟು ಕಷ್ಟದ ಹೊರೆಯ ಭಾರವು ಬಿದ್ದಿರುವದೋ ಅದರ ಕಿಂಚಿತ್ತು ಅಂಶವಾದರೂ ರವೀಂದ್ರರಿಗೆ ಬಿದ್ದಿಲ್ಲ.

ಭಾರತ ಸರಕಾರದವರು ರವೀಂದ್ರರಿಗೆ ಗಾಂಧೀಜಿಯವರಿಗಿಂತ ಹೆಚ್ಚು ಸತ್ಕಾರವನ್ನು ಮಾಡಿರುವರು.

ಠಾಕೂರರವರು ಶ್ರೀಮಂತರು. ಧನಿಕರು. ಧನವಂತನಾಗಿ ಬಿಚ್ಛಿಸುವದು ಪಾಪವೆಂದು ಅವರು ಎಂದೂ ಒಪ್ಪುವದಿಲ್ಲ. ಗಾಂಧಿಯವರು ನಿರ್ಧನರು. ದರಿದ್ರರು. ಆದರೆ ಅವರು ಈ ಸ್ಥಿತಿಯಿಂದ ಆನಂದವುಳ್ಳವರೇ ಆಗಿರುವರು. ಧನವಂತನಿಗಿಂತಲೂ ನಿರ್ಧನನಿಗೆ ಹೆಚ್ಚು ಸುಖ ದೊರೆಯುವದೆಂಬುದು ಅವರ ಅನುಭವದ ನಂಬುಗೆ.

ಪರದೇಶದಲ್ಲಿ ಇವರಿಬ್ಬರ ಹೆಸರೂ ತುಂಬಾ ಹರಡಿದೆ. ಸಾಹಿತ್ಯ ಲೋಕದಲ್ಲಿ ರವೀಂದ್ರರು ಪೂಜಿಸಲ್ಪಡುತ್ತಾರೆ. ಆದರೆ ಮಾನವತೆ, ಉದಾರತೆ, ಮತ್ತು ಉಚ್ಚ ಆದರ್ಶದೃಷ್ಟಿಯಿಂದ ಜನರು ಗಾಂಧಿಯವರಮೇಲೆ ತನುಮನ ಧನಗಳನ್ನು ಸೂರೆಮಾಡಲು ಸಿದ್ಧರಿರುವರು. ಮಾಡುತ್ತಿರುವರು.

ರವೀಂದ್ರನಾಥರು ಆಧುನಿಕ ಪ್ರತಿನಿಧಿ ಕವಿಗಳಾಗಿರುವರು. ಈಸಮಯದಲ್ಲಿ ನಡೆದಿರುವ ಸಮಾಚಾರಗಳಿಗೆ ಒಳ್ಳೇಸಮಯವೆಂದು ಅವರ ಗ್ರಹಿಕೆ ಇರುವದು. ಏನು ನಡೆದಿರುವದೆಂಬುದನ್ನು ತೋರಿಸುವವರೇ ಇವರಾಗಿರುವರು. ಆದರೆ ಮಹಾತ್ಮಾ ಗಾಂಧೀಜಿಯವರು ಭಾವೀ ಸಂತತಿಯ ಪೈಗಂಬರರಾಗಿರುವರು. ಅವರ ದೃಷ್ಟಿಯು ಕೇವಲ ಈ ಹೊತ್ತಿನ ಮಟ್ಟಿಗೆ ಇಲ್ಲ. ಅವರು ಈಗ ನಡೆದಿರುವದೇನೆಂಬುದನ್ನು ಲಕ್ಷಿಸುವದಕ್ಕಿಂತ ಏನು ಬೇಕಾಗಿರುವದೆಂಬುದನ್ನು ತೋರಿಸುವದು ಅವಶ್ಯವಿದೆಂದು ಸಾರಿಸಾರಿ ಹೇಳುತ್ತಿರುವರು.

ಒಟ್ಟಿನ ಮೇಲೆ ಹೇಳುವದೇನಂದರೆ ಭಾರತದ ಮನವೇ ಕವಿಚಕ್ರವರ್ತಿ ರವೀಂದ್ರರು. ಭಾರತದ ಪ್ರಾಣವೇ ಮಹಾತ್ಮಾ ಗಾಂಧೀಜಿಯವರು.

—ಅಲ್ಲಾವು ಅಕಬರ.—

ಉಚಿತ! ಸಮಯ!! ಉಚಿತ!!!

ನನ್ನ ಶಾಸ್ತ್ರೀಯವಾದ ಶಾರೀರಕ ಶಿಕ್ಷಣ

ಈ ಪುಸ್ತಕದಲ್ಲಿ ನನ್ನ ಮತ್ತು ನನ್ನ ಶಿಷ್ಯರ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವವಲ್ಲದೆ, ಅಂತಹ ಶರೀರ ದಾರಢ್ಯವು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವದು. ನನ್ನಲ್ಲಿ ತಂಬಿಯತ್ತಾದವರ ಅಭಿಪ್ರಾಯಗಳೂ ಅದರಲ್ಲಿರುವವು. ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮದೇಹವನ್ನು ಹೇಗೆ ಬಲಪಡಿಸಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ. ಟಪಾಲು ಹಾಸಲು ೩ ಆಣೆಯ ಸ್ಟ್ಯಾಂಪುಗಳನ್ನು ಕಳುಹಿಸಿ ಬಿಟ್ಟ ಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇವೆ. ಈ ಸುಸಮಯವನ್ನು ಕಳೆದುಕೊಳ್ಳದೆ

ಕಾಲಾತೀತವಾಗದ ಇನ್ನೂ ಈ ಯೋಜನೆಯಲ್ಲಿ ಸೇರಿರುವಾಗಲೇ ಈ ಪುಸ್ತಕಕ್ಕಾಗಿ ಬರೆಯಿರಿ

ನಮ್ಮ ಶೀಲ,

ಪ್ರೊಫೆಸರ್ ಎಂ. ವಿ. ಕೃಷ್ಣರಾವ್
ಬಸವನಗುಡಿ, ಬೆಂಗಳೂರು ಸಿಟಿ

ವರ್ತಮಾನಸಾರ.

ಇರಲ್ಪತ್ತಿ

ಇದರ ಸಂಬಂಧವಾಗಿ ೨೨ ಪತ್ರಂಗಳಿಯವರಿಗೆ ಚಿಕಿತ್ಸೆ ಬಗೆ ನಗರ ಆಗಿದೆಯೆಂದೂ ಇಂದು ಸ್ಥಿತಿ ಅಲ್ಪೋಣಿಯವರು ಬರುತ್ತಾರೆಂದು ಸಾರಲಾಗಿದೆ.

[illegible] ದರದ ಪ್ರಶೆಯು ಇನ್ನೂ ಅದೇ ಚಿಂತಾಜನಕ ವಾದ ಸ್ಥಿತಿಯಲ್ಲಿದೆ

ಮುಂಬೈ ಕರ್ನಾಟಕ.

ಚೀನಜನರ ಸಹಾಯಕ್ಕಾಗಿ ಕಳುಹಿಸಲ್ಪಟ್ಟವರಿಗೆ ರುಜ್ಜೂಷೆಮಾಡಲು ಹಿಂದುಸ್ಥಾನದಿಂದ ಒಂದು ಸ್ವಯಂಸೇವಕರ ಪಥಕವನ್ನು ಚೀನಕ್ಕೆ ಕಳಿಸಬೇಕಾಗಿ [illegible] ವಿಚಾರಿಸುತ್ತಲಿದ್ದಾರೆ ಈ ಪಥಕದ ಅರ್ಧವನ್ನು ಜನರು ಕನ್ನಡಿಗರೇ ಇರಬೇಕಾಗಿ [illegible]

ಶ್ರೀ ರಾಘವೇಂದ್ರರಾವ ಕಡಪಾ ಇವರ ಹೊಟ್ಟೆಯಲ್ಲಿ ಒಂದು ಗಾಯವು ಉದ್ಭವವಾದುದರಿಂದ ಬೆಳಗಾವಿಯಲ್ಲಿ ಡಾಕ್ಟರ ಕೊಕಟನೂರಕರರು ಅವರಿಗೆ ಆಪರೇಶನ್ ಮಾಡಿದ್ದಾರೆ ಇನ್ನೊಂದು ಸಲ ಮಾಡತಕ್ಕದಿದೆ ದೇವರು ಇವರನ್ನು ಈ ಕಂಟಕದೊಳಗಿಂದ ಪಾರು ಮಾಡಬೇಕೆಂದು ಪ್ರಾರ್ಥಿಸುತ್ತೇವೆ

ವಿಜಾಪುರ ಜಿಲ್ಲೆಗೆ ಸೇರಿದ ಹಲಸಂಗಿಯಲ್ಲಿ ಫೆಬ್ರುವರಿ ೧ ನೇ ತಾರೀಖಿಗೆ ಶ್ರೀ ದತ್ತಾತ್ರೇಯ ಕೃಷಿ ಸಹಕಾರ ಸಂಘವು ಸ್ಥಾಪಿಸಲ್ಪಟ್ಟಿತು. ಈ ಸಹಕಾರ ಸಂಘವನ್ನು ಸ್ಥಾಪಿಸಲು ಅಲ್ಲಿಯ ಮಾಸ್ತರರಾದ ದತ್ತಾತ್ರಯ ದೇಶಪಾಂಡೆಯವರು ಹೆಚ್ಚು ಪರಿಶ್ರಮ ತೆಗೆದುಕೊಂಡರು ಸ್ಥಾಪನಾಕಾಲಕ್ಕೆ, ಅದಕ್ಕೆ ಪಾಟೀಲ ಇಂಡಿ ಶಾಲಾ ಮಾಸ್ತರರು ಮತ್ತು ಹಬ್ಬುಮಾಸ್ತರರು ಬಂದಿದ್ದು ಸಂಘದ ಸಂಘಟನೆಯ ಬಗ್ಗೆ ಯೋಗ್ಯ ಜನರನ್ನು ನಿಯಮಿಸಿ ಸಹಕಾರದ ವಿಷಯದಲ್ಲಿ ತಿಳಿಸಿಹೇಳಿದರು. ಶ್ರೀ ದತ್ತಾತ್ರಯ ಗಣೇಶ [illegible] ಇವರು ಸಂಘದ ಕಾರ್ಯದರ್ಶಿಗಳಾಗಿ ನಿಯಮಿಸಲ್ಪಟ್ಟರು.

ವಿಜಾಪುರ ಜಿಲ್ಲೆ ಮೋ ಡಿಸ್ಟ್ರಿಕ್ಟ ದೆಪ್ಯುಟಿ ಕಲೆಕ್ಟರ ಉತ್ತರ ಭಾಗ ಇವರು ತಮ್ಮ ಪ್ರವಾಸವನ್ನು ಕೆಳಗೆ ಬರೆದಂತೆ ಗೊತ್ತುಮಾಡಿರುವರು.

ಫೆಬ್ರುವರಿ ೭ನೇ ತಾರೀಖಿನಿಂದ ೭ನೆವರೆಗೆ ಮುಕ್ಕಾಮ, ೮ರಿಂದ ೧೩ ಚಿಮ್ಮಲಗಿ, ೧೪ ರಿಂದ ೧೬ ಹೆಬ್ಬಾಳ, ೧೭ ರಿಂದ ೨೦ ಸಿಂದಗಿ, ೨೧ ರಿಂದ ೨೪ ಕಲಕೇರಿ, ೨೫ ರಿಂದ ೨೮ ದೇವರ ಹಿಪ್ಪರಗಿ. ಮಾರ್ಚ ೧ ನೇ ತಾರೀಖಿನಿಂದ ೫ ರವರೆಗೆ ಸಿಂದಗಿ, ೬ ರಿಂದ ೯ ಚಾಂದಕವಟೆ ೧೦ ರಿಂದ ೧೩ ಆಲಮೇಲ, ೧೪ ರಿಂದ ೧೬ ಕಡವಲಗಿ ೧೭ ರಿಂದ ೨೦ ಸಿಂದಗಿ, ೨೧ ರಿಂದ ೨೭ ಇಂಡಿ, ೨೮ ರಿಂದ ೩೧ ಅಗರಖೇಡ, ಎಪ್ರೀಲ ೧ ನೇ ತಾರೀಖಿನಿಂದ ೪ ನೇ ತಾರೀಖಿನವರೆಗೆ ಹಲಸಂಗಿ, ೫ ರಿಂದ ೮ ಹೊರ್ತಿ

ಬೆಳಗಾವಿಯ ವಾಚನಾಲಯವು ದಜೆಸ್ಟರ ಆಗಿದ್ದರೂ, ಆ ವ್ಯವಸ್ಥೆಗೆ [illegible] ಬಗೆಗೆ "ಓದುಗ ಪ್ರವಾಸಿಯು" ಕರ್ನಾಟಕ ವೈಭವದಲ್ಲಿ ಬರೆಯುತ್ತಾನೆ [illegible] [illegible] [illegible]

ಘಂಟೆಯಿದೆಯಂತೆ, ಅದು ಎಲ್ಲಿರುವದೋ ದೇವರೆ ಬಲ್ಲ" ಇದಲ್ಲ ನಿಜವಿದ್ದುದಾದರೆ ಬೇಗನೆ ನಿವಾಸಿಗಳಿಗೆ ಸಲ್ಲದ ಸಂಗತಿಯು. ಈಗಿನ ಕಾಲದಲ್ಲಿ ವಾಚನಾಲಯಗಳಿಗಿರುವ ಮಹತ್ವವನ್ನು ಲಕ್ಷ್ಯಕ್ಕೆ ತಂದು ಅಲ್ಲಿಯ ನಾಗರೀಕರು ಯೋಗ್ಯ ಸುಧಾರಣೆಮಾಡಬೇಕೆಂದು ನಮ್ಮ ಸೂಚನೆ

ಮೈಸೂರ ಕರ್ನಾಟಕ

ಬೆಂಗಳೂರ ಕಲಾಮಂದಿರದ ಏಳನೇ ವಾರ್ಷಿಕೋತ್ಸವದ ಸಮಯದಲ್ಲಿ ಕೈಕೆಲಸಿನ ಸಾಮಾನುಗಳ ಪ್ರದರ್ಶನವು ಫೆಬ್ರುವರಿ ೨೬ ನೇ ತಾರೀಖಿಗೆ ತೆರೆಯಲ್ಪಡುವದು ಪ್ರದರ್ಶನಕ್ಕೆ ಕಳಿಸತಕ್ಕ ವಸ್ತುಗಳನ್ನು ೨೦ ನೇ ತಾರೀಖಿನ ಒಳಗಾಗಿ ಕಳಿಸತಕ್ಕದ್ದು ವಿಶೇಷ ಸಂಗತಿಬೇಕಾಗಿದ್ದರೆ ಎಸ್ ಸುಬ್ಬರಾವ್ ಪ್ರದರ್ಶನ ಕಾರ್ಯದರ್ಶಿ ಸುಲ್ತಾನಪೇಟೆ ಬೆಂಗಳೂರ ಇವರ ಕಡೆಗೆ ಬರೆದು ತಿಳಿದುಕೊಳ್ಳತಕ್ಕದ್ದು

ಮೈಸೂರಲ್ಲಿ ಒಂದು ಇನಾಮದಾರರ ಸಂಘವು ಸ್ಥಾಪಿತವಾಗಿ ಅವರು ಮೈಸೂರ ಸರಕಾರದವರ ಮೊನ್ನೆ ಹೊಸ ಜೋಡಿ ಕೆಲವು ಸರಕಾರೀ ಅಪ್ಪಣೆಗಳನ್ನು ಆಕ್ಷೇಪಿಸಿದ್ದಾರೆ. ಅವರು ಅನ್ನುವದೇನಂದರೆ. ಇನಾಮದಾರರ ಸ್ವಾತಂತ್ರ್ಯ ಮತ್ತು ಹಕ್ಕುಗಳ ಮೇಲೆ ಗದೆಯನ್ನು ಬೀಸುವಂತಿವೆ ಸರಕಾರದವರ ಉತ್ತರವೇನಂದರೆ ಇನಾಮದಾರರೆಂದರೆ ಆಳುವವರಲ್ಲ ಫಕ್ತ [illegible] ಲಾವಣಿಯನ್ನು ವಸೂಲ ಮಾಡಿಕೊಳ್ಳತಕ್ಕದೇ ಅವರ ಕರ್ತವ್ಯ ಹಳ್ಳಿಯ ಜನರ ಸಂರಕ್ಷಣೆಯಲ್ಲಿ ಸರಕಾರದ ಕರ್ತವ್ಯ.

ಮೈಸೂರ ಮಹಾರಾಜರು ತೀವ್ರವೇ ಉತ್ತರ ಹಿಂದುಸ್ಥಾನದಲ್ಲಿ ಪ್ರವಾಸಕ್ಕಾಗಿ ೨ ತಿಂಗಳು ಹೋಗುವವರಿದ್ದಾರೆ

ಹಿಂದುಸ್ಥಾನ

ಅಹಮದಾಬಾದಿನಲ್ಲಿ ಶಿಕ್ಷಣ ಮಂತ್ರಿಗಳಾದ ಸರಿಲಾಲ ದೇಸಾಯಿಯವರು ಮೇಲಿಂದ ಮೇಲೆ ಪಠ್ಯಪುಸ್ತಕಗಳನ್ನು ಬದಲಾಯಿಸುವದು ಯೋಗ್ಯವಲ್ಲೆಂದು ಅಭಿಪ್ರಾಯಪಟ್ಟರು

ಮುಂಬೈಯಲ್ಲಿಯ ಹಿಂದೀ ಬ್ಯಾಂಕಿನವರು ಬ್ಯಾಂಕರ ಜನರ ಹಿಂದೀ ಸಂಸ್ಥೆಯನ್ನು ಸ್ಥಾಪಿಸುವ ಸೂಚನೆಗೆ ಅನುಕೂಲರಿರುತ್ತಾರೆ.

ಹೊಸಬರಂದ ೧೧ ಮಂದಿ ಆಯ್, ಸಿ, ಎಸ್ ಜನರು ಹೊಲದೊಳಗಿನ ಬೆಳೆಗಳ ಬೆಳೆಸುವ ರೀತಿಗಳನ್ನು ಕೃಷಿಖಾತೆಯ ಚಾಲಕರಾದ ಡಾಕ್ಟರ ಮ್ಯಾನ್ ರವರಿಂದ ಕಲಿಯಹತ್ತಿದ್ದಾರೆ

ಕುಷ್ಟರೋಗನಿವಾರಣೆಗಾಗಿ ಹಿಂದುಸ್ಥಾನದಲ್ಲಿ, ಬೇರೆ ಬೇರೆ ಕೇಂದ್ರಗಳು ಕಲ್ಪಿಸಲ್ಪಡುತ್ತವೆ. ಸೌಥ ಆಫ್ರಿಕೆಗೆ ಹೋದ ಹಿಂದೀ ಶಿಷ್ಟಮಂಡಲದವರು ರೌಂಡ ಟೇಬಲ್ ಕಾನ್ಫರನ್ಸಿನಲ್ಲಿ ಜರಗಿದ್ದ ಕೆಲಸದ ಬಗ್ಗೆ ತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ

ದಕ್ಷಿಣ ಹಿಂದುಸ್ಥಾನದಲ್ಲಿಯ ಕಾಕಿನಾಡದಲ್ಲಿ ಮುಸಲ್ಮಾನರು ಮುಖ್ಯಸ್ಥರಾದ ರಡ್ಡೀ ಜನರಮೇಲೆ ಹಲ್ಲೆಯನ್ನುಮಾಡಿದರು ಪೋಲೀಸರು ಬರುವದರೊಳಗೆ ಅವರು ಗುಂಡಾಗಾರರು ಓಡಿಹೋಗಿಬಿಟ್ಟರು. ಮುಂದೆ ಪೋಲೀಸರು ಬಂದು ಅಲ್ಲಿಯ ಒಂದು ಮನೆಯಲ್ಲಿ ಅಡಗಿರುವ ೧೮ ಜನರನ್ನು ಎಂದು ಗುಂಡು ಸಹಿತ ಹಿಡಿದರು

ಗಾಂಧೀಯವರು ೨೪ ನೇ ತಾರೀಖಿನದಿವಸ ಸಾತಾರೆಗೆ ಬರತಕ್ಕವರಿದ್ದಾರೆ. ಆಗ ನಗರ ಸಭೆಯವರು ಅವರಿಗೆ ಮಾನಪತ್ರವನ್ನು ಕೊಡುವರು

ಸರ್ ಚಮನ್‌ಲಾಲ ಸೆಟಲವಾಡರವರು ಗುಜರಾತ ಕಾಲೇಜದಲ್ಲಿಯ ವಿದ್ಯಾರ್ಥಿಗಳಿಗೆ ಸಮ್ಮೇಲನಕಾಲದಲ್ಲಿ ಈ ಪ್ರಕಾರ ಉಪದೇಶಿಸಿದರು:- ದೇಶದಲ್ಲಿ ಧರ್ಮ ಮತ್ತು ತತ್ವಜ್ಞಾನ ಇವುಗಳ ಬದಿವಾರವೇನಡೆದಿದೆ ಅರಾಜಕಯಾನಗಳ ಈ ಅಲ್ಪಕಯುಗದಲ್ಲಿ ರಾಟೆಯ ಮಹಾತ್ಮೆಯನ್ನು ಹಾಡುತ್ತ ಅದರಲ್ಲಿಯೇ ಮುಕ್ತಿಸಿಗುವದೆಂದು ನಂಬುತ್ತ ಕೂಡುವದು ಯೋಗ್ಯವಲ್ಲ ಅರ್ವಾಚೀನ ಪದ್ಧತಿಗನುಸರಿಸಿ ನಮಗೆ ವಿದ್ಯಾಭ್ಯಾಸವು ಬೇಕು [illegible] ಶಿಕ್ಷಣಕ್ಕೆ ನಾವೇನು ಅಷ್ಟು ಮಹತ್ವ ಕೊಡುವದಿಲ್ಲ ಜನರು ಕೇವಲ ಓದು ಬರೆಗಳನ್ನು ಕಲಿಯದೆ ಹೇಗೆ ಸಾಧಾರಣ [illegible] ಕಲಿಸಬೇಕು ?

ದಿ ಶಿಯರಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚಿಂಟಿ ಎತ್ತುವ ಕ್ರಮವು ೧೯೨೬ ನೇ ಇಸ್ವಿಯ ಜುಲೈ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ್ ಚೇಅರಮನಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ ನಂ ೬೪೪ ಮಿ ಮಹಮ್ಮದ ಯುಸುಫ ಡಿಸ್ಟಿಲರಿಗಾರ್ಡ, ನಾರಾಯಣ ಗುಡ ಡಿಸ್ಟಿಲರಿ, ಹೈದರಾಬಾದ್ಡೆಕನ್ನ ರೂ ೧೦೦೦

(೨) ಎಲ್. ಬಿ. ಸಿ. ನಂ ೫೧೭ ಮಿ ಸೈಯದ್ ಜಹೂರಅಲಿ ಬಿ. ಎ. ಪ. ಟಿ ಶಾಲಾಗಳ ಡಿವಿಜನಲ್ ಇನ್‌ಸ್ಪೆಕ್ಟರ್ ಔರಂಗಬಾದ ಸಿಟಿ, ನೈಜಾಮ ಇಲಾಖಾ ರೂ. ೧೦೦೦

(೩) ಎಲ್. ಬಿ. ಸಿ. ನಂ. ೨೦೬೯ ಮಿ. ದೇವನ ವಾಸುದೇವನ ನಂಬೂದ್ರಿಪಾದ ಜಮೀನದಾರ ಐಡಕಲ್ಲಿ ಅಲ್ವಾಯಿ ರೂ ೭೦೦

(೪) ಬಾಂಡ ನಂಬರು ೯೭೭೦ ಮಿ. ಶಂಕರಪ್ಪಾ ಬಸಪ್ಪಾ ದೇವನಕೊಂಡ, ಅಕ್ಕಸಾಲೆ ಬೆಡೀಗಾರಗಲ್ಲಿ ಹುಬ್ಬಳ್ಳಿ ರೂ. ೧೦೦೦

(೫) ಬಾಂಡ ನಂಬರು ೧೪೨೦೬ ಮಿ. ಷೇಕ ಬಾಪುಮಿಯಾ ಷೇಕ ಮಹಮ್ಮದ ನಳ ತಯಾರ ಮಾಡುವವರು ೭೧೪ ಭವಾನಿಪೇಟ ಪುನಾ ೧೦೦೦

ಬಿ. ಎನ್. ಆರಾಧ್ಯ

ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ.)

ಕಿರ್ಲೋಸ್ಕರ

ಕಬ್ಬಿಣ ನೇಗಿಲುಗಳು

ಹಂಗಾಮು (ಸುಗ್ಗಿ) ಸಮೀಪಿಸಿತು. ಈ ವರ್ಷ ಮಳೆ ಬೆಳೆ ಚನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವುದು. ಕಿರ್ಲೋಸ್ಕರ ನೇಗಿಲು ನಂ. ೧೧, ೯, ೮ ಇವು ಒಕ್ಕಲಿಗರಿಗೆ ಬಹಳೇ ಉಪಯೋಗ ಬೀಳುತ್ತವೆ. ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುತ್ತವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬ್ರಧರ್ಸ್, ಲಿಮಿಟೆಡ್. } ಕಿರ್ಲೋಸ್ಕರವಾಡಿ ಜಿಲ್ಲೆ ಸಾತಾರೆ

ಗವರ್ನಮೆಂಟಿನಲ್ಲಿ ರಜಿಸ್ಟರ ಮಾಡಲ್ಪಟ್ಟ ಜಗತ್ಪ್ರಸಿದ್ಧವಾದ

ಎಲ್ಲ ರೋಗಗಳಿಗೆ ಒಂದೇ ಔಷಧ

ಅರ್ಕ ಶಫಾ ಅಥವಾ ಆರೋಗ್ಯ ಬಿಂದು

ಪ್ರವಾಶಿಮಿತ್ರ. ಮೂರ್ತಿಮಂತವೈದ್ಯ

ಇದು ಅರ್ಕವಿದ್ದು ಇದರಲ್ಲಿ ಸೀಸ ರಸಾಯನ ಕೂಡಿರುವದಿಲ. ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ಇದು ಪ್ರಸಿದ್ಧವಾಗಿ ೧೭ ವರ್ಷಗಳು ಆಗುತ್ತ ಬಂದವು. ಈವತ್ತಿನವರಿಗೆ ಎರಡು ಲಕ್ಷಗಳವರಿಗೆ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತರ ಬೇಕಾದ ಪತ್ರಗಳು ವ್ಹಿ. ಪಿ ಮಾಡಿದ ದಾಖಲೆಗಳು ಪೋಸ್ಟ ವಾವತಿಗಳು ಜಾರನಿಸಿ ಬುಕ್ಕುಗಳು ಇರುತ್ತವೆ ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಸಟೆಯೆಂದು ಸಿದ್ಧ ಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳು ಇನಾಮು ಕೊಡಲ್ಪಡುವವು. ಈ ಔಷಧವು ಅಮೃತಸರಿಯುಳ್ಳದ್ದು ಇರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು ಎಂಥಾ ಭಯಂಕರ ರೋಗವು ಇದ್ದರೂ ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರಟಿಫಿಕೀಟುಗಳು ನಮ್ಮ ಹತ್ತರ ಹಾಜರ ಇರುತ್ತವೆ. ಇವನ್ನು ಬರೆಯಲಿಕ್ಕೆ ಕಾಗದವು ಸಾಲದು. ಕಾರಣ ಒಂದುಸಾರೆ ತಕ್ಕೊಂಡು ಅನುಭವ ನೋಡಿರಿ. ರೋಗಗಳ ನಾಮಗಳು:— ಕ್ಷಯರೋಗ, ಬಾಣಂತಿರೋಗ, ಹಡೆದನಂಜು ದಮ್ಮು, ಕೆಮ್ಮು, ಅಡಗ್ಯ, ಕಾಲರಾ (ಮಾರಿಕಾ), ಪ್ಲೇಗ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮಲರೋಗ, ಗಂಡಮಾಲೆ. ನಾರಹುಣ್ಣು, ಶಸ್ತ್ರಗಾಯ, ಕಿವಿಶೂಲಿ ಮೂಗಿನೊಳಗಿನ ಪಿನಸಿ, ಮೊದಲಾದವುಗಳು. ಕಂಣ್ಣುನೋವು ಕಣ್ಣಿನೊಳಗೆ ಹೂವು ಬೀಳೋಣ. ಅಜೀರ್ಣ ಹೊಟ್ಟೆಶೂಲಿ, ಸಣ್ಣ ಕೂಸುಗಳಿಗೆ ಆದ ರೋಗಗಳು ಬಾಲಗ್ರಹ, ಆರಿವಿ ಮುಟ್ಟಿದೋಷ ಹೊಟ್ಟೆ ದೊಡ್ಡದಾಗೋಣ. ಕೋಡಿಗೆಮ್ಮು. ನಮ್ಮ ಹೊರಬೀಳೋಣ, ಮತ್ತು ಡಾಕ್ಟರಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನಿಂದ ಖಾತ್ರಿಯಿಂದ ಗುಣಬರವದು. ಚೇಳು ವ ಸರ್ಪದಂಶಕ್ಕೆ ತತ್‌ಕ್ಷಣ ಗುಣಬರುವದು. ೧ ಕಾಲುತೊಲಿ ಬಾಟ್ಲಿ ಒಂದಕ್ಕೆ ೨ ರೂಪಾಯಿ ನಮೂನೆ ಬುದಿ ೫ ಆಣೆ ತೂಕದ ಬಾಟ್ಲಿ ಒಂದಕ್ಕೆ ೮ ಆ ಖರ್ಚು ಬೇರೆ ೮ ಆಣೆಯ ಒಂದೇ ಬಾಟ್ಲಿ ಕಳಿಸಲಾಗದು. ೨ ರೂಪಾಯಿ ಆರ್ಡರ ಬಂದರೆ ಕಳಿಸಲಾದೀತು ಅದರ ಖರ್ಚು ೭ ಆಣೆ ಚಿಕ್ಕ ಬಾಟ್ಲಿ ಒಂದು ಡಜನ ತಕ್ಕೊಳ್ಳುವವರಿಗೆ ನಾಲ್ಕುಬಾಟ್ಲಿಗಳು ಕಮಿಶನ್ ಸಿಗುತ್ತವೆ. ಖರ್ಚು ೯ ಆಣೆ ಡಜನದ ಒಳಗಾಗಿ ಹನ್ನೊಂದು ಬಾಟ್ಲಿ ತಕ್ಕೊಂಡರೆ -ಕಮಿಶನ್ ಇಲ್ಲ. ಪೆಟ್ಟಿ ೭ ಆಣೆ. ೧ ಕಾಲುತೊಲಿ ಬಾಟ್ಲಿ ಒಂದೇಸಾರೆ ನೂರು ತಕ್ಕೊಳ್ಳುವವರಿಗೆ ನೂರು ಬಾಟ್ಲಿ ಕಮಿಶನ್ ಸಿಗುತ್ತದೆ. ಖರ್ಚು ೯ ಆಣೆ,ನೂರು ಎರಡುತಕ್ಕೊಂಡರೆ ಕಮಿಶನಿಲ್ಲವಿ. ೭ ಆ. ಪ್ರಮಾಣ ಅನುಪಾನ ಪತ್ರಿಕೆ ಕನ್ನಡಮತ್ತು ಮರಾಠಿ ಭಾಷೆಯಲ್ಲಿಛಾಪಿಸಿರುತ್ತವೆ. ಪಸಂದಿಪ್ರಕಾರ ಬಾಟ್ಲಿ ಗುಣಸಿಗುವದು ಈ ಔಷಧವು ಖೊಟ್ಟಿ ತೋರಬಂದರೆ ಬಿಲ್ಲು ಕಮೀಶನದಲ್ಲಿ ಪರತ ತಕ್ಕೊಂಡು ಅದರ ಬೆಲೆ ವಾಪಸ ಕೊಡುವೆವು ಈ ಅರ್ಕ ಶಫಾ ಇಡೀ ಕರ್ನಾಟಕದಲ್ಲೆಲ್ಲಾ ಹೋಗುತ್ತದೆ. ಇದರ ಬಗ್ಗೆ ನಮಗೆ ಬಹಳ ಇಸ್ತಿಹಾರ ಮಾಡಬೇಕಾಗಿಲ್ಲಾ ತಮ್ಮ ವಿಳಾಸವು ಪೂರ್ತಿ ಅಥವಾ ಇಂಗ್ಲೀಷದಲ್ಲಿ ಪೋಸ್ಟ ಆಫೀಸ ವಗೈರೆ ಸ್ಪಷ್ಟವಾಗಿ ಬರೆಯಿರಿ ನಮ್ಮ ವಿಳಾಸ:— **ಎಚ್. ಎಮ್. ಮುಲ್ಲಾ.**

ಸಂಪಾದಕ ಅರ್ಕ ಶಫಾ ಹೆಡ್ ಆಫೀಸ ಪೋಸ್ಟ ಶಹಾಪೂರ (ಬೆಳಗಾವಿ

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ,
ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಪ್ರತಿ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವದು ಮತ್ತು ಜೋಡಿಸುವದು, ಅವುಗಳೊಳಗಿನ ಕೆಟ್ಟುಹೋದ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು. ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಪಾಸಾಗುತ್ತಾರೆ. ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಬೇರೆಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆಯುಕೊಳ್ಳಿರಿ !

ವಿಳಾಸಃ—ಕುಲಕರ್ಣಿ ಮೋಟಾರ ಸ್ಕೂಲ.

೪೯೫ ಬಿಸಿವಾರ ಪೇಠ ಜಮುಖಂಡಿಕರ ಮ ... ಪುಣೆ ಶಹರ.

ನಪುಂಸಕತ್ವ

ಧಾತು ವಿಕಾರ, ಸ್ವಪ್ನಾವಸ್ಥೆ, ಅಶಕ್ತತೆ ಇತ್ಯಾದಿಗಳಮೇಲೆ ಖಂಡಿತವಾಗಿ ಗುಣಕೊಡುವ ಮತ್ತು ಕಾಮೋತ್ತೇಜಕ ಮಾಡುವ ದಿವ್ಯ ಔಷಧ! ಒಂದೇ ಗುಳಿಗೆ!!

ವಿಶೇಷ ಮಾಹಿತಿ ಪತ್ರದ್ವಾರ ತಿಳಿಯಿರಿ

ವಾದಿರಾಜ ಜಹಾಗೀರದಾರ.

ಮು. ಪೋ. ಇಲಕಲ್ಲ. (ವಿಜಾಪೂರ)

ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವು ಹಲ್ಲುಗಳ ರೋಗಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ಬಕ್ಕರ್ರವನ್ನು ತೀವ್ರವಿಳಿಸುವೆವು, ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು. ಅಗಳಾಡುವ ಹಲ್ಲುಗಳನ್ನು ಮೊದಲಿನಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸ ಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು ಹಲ್ಲುಗಳ ಪೂರ್ಣ ಸೆಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

S. C. Narayanacharya & Co.

Chukkamba Benares City.

ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ, ಜರಿಕಣ, ಜರಿಸೀರೆ, ಕಾಶ್ಮೀರಿ ಶಾಲು, ತರದಾರಿ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ... ಮಾಲೆಗಳ ಕ್ಯಾಟಲಾಗ ಕೋರಿದವರಿಗೆ ಬಿನಾಮೂಲ್ಯ ಕಳಿಸಲಾಗುವದು

... ಶಿರೋಮಣಿ ನಾರಾಯಣಾಚಾರ್ಯ ಕಂಪನಿ ಚೌಕಾಂಬಾ ಕಾ

ಈ ಪತ್ರಿಕೆಯು ಮಂಗಳವೇಢೆ ರಾಘವೇಂದ್ರರಾವರ ಮುಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿತು

ಕಲಿಯುವದಾದರೂ ಏನು?

(ಹಳ್ಳಿಯ ಒಕ್ಕಲಿಗನಿಂದ)

ಮೊದಲಿನ ವಿದ್ಯಾಭ್ಯಾಸದ ಕ್ರಮವೆಂದರೆ ಅಯ್ಯನವರ ಮಠದಲ್ಲಿ, ವಿದ್ಯಾರ್ಥಿಗಳೆಲ್ಲರೂ ಬೆಳಗಿನ ಪ್ರಹರದಲ್ಲಿ ಸೇರಿ ಪ್ರಾರ್ಥನಾ, ಭಜನೆಗಳನ್ನು ಮುಗಿಸಿ ತಮ್ಮ ಪಾಠಗಳನ್ನು ಕಲಿಯುತ್ತಿದ್ದರು. ನಸುಕಿನಲ್ಲಿ ಏಳುವದು ಆರೋಗ್ಯಕರವಾದುದು. ಓದಲೂ ಪ್ರಶಾಂತ ಸಮಯ. ಅದೆಲ್ಲ ಈಗ ಹೋಯಿತು. ಮಾಯವಾಯಿತು. ಈಗಿನ ಶಿಕ್ಷಣಪದ್ಧತಿಯೇ ಬೇರೆ, ಶಿಕ್ಷಣವೇ ಬೇರೆ ಉದ್ದೇಶವೂ ಬೇರೆ. ಅದಕ್ಕೆ ತಕ್ಕಂತೆ ಹುಡುಗರೂ, ಪಾಲಕರೂ, ಶಿಕ್ಷಕರೂ ಬೇರೆಯಾದದ್ದು ಆಶ್ಚರ್ಯವಿಲ್ಲ. ಈಗಿನ ಹುಡುಗರು ಏಳುವದೆಂದರೆ ೨ ತಾಸು ಹೊತ್ತು ಏರಿದ ಮೇಲೆ ಅಂದರೆ ಸುಮಾರು ೮ ಘಂಟೆಗೆ. ಎದ್ದ ಮೇಲೆ ದೇವರ ನಾಮವಂತೂ ಇಲ್ಲವೇ ಇಲ್ಲ. ಚಹಾ ಆಗಿದೆಯೋ? ಎಂಬ ಧ್ವನಿಯೊಡನೆ ಮಲಗಿದಲ್ಲಿಯೇ ಬಿಡಿಯನ್ನು ಹೊತ್ತಿಸಿ ಹೊಗೆಯೊಡನೆ ಏಳುವದು. ಚಹಾ ಮುಗಿದ ಹೊತ್ತಿನ ನಿಯಮವು ತೊಳೆಯಲು ಅವಕಾಶ ದೊರೆಯದು. ಆಮೇಲೆ ಎಲ್ಲವೂ ಸರಿ. ೧೧ ಘಂಟೆಗೆ ಊಟ ಮಾಡಿದ ಕೂಡಲೇ ಸಾಲೆಗೆ ತಡ ಆದವೆಂದು ಗಡಬಡಿಸುತ್ತ ಭಾರವಾದ ಹೊಟ್ಟೆಯಿಂದ ಬಿಸಿಲಿನಲ್ಲಿ ತೇಕುತ್ತ ಹೋಗುವದು. ಈ ಪದ್ಧತಿಯು ನಮ್ಮ ನಾಡಿನವರಿಗೆ ಅನಾರೋಗ್ಯಕರವಾದುದು. ನಮ್ಮ ವೈದ್ಯರುಗಳೆಲ್ಲ ಹೇಳುವದೆಂದರೆ ಊಟಮಾಡಿ ಬಿಸಿಲಿನಲ್ಲಿ ಎಷ್ಟಕ್ಕೂ ಹೋಗಬಾರದೆಂದು. ಈ ಕೃತಿಯೋ ವಿಪರೀತ. ಇದರಿಂದ ಹುಡುಗರ ಆರೋಗ್ಯವು ಎಷ್ಟರ ಮಟ್ಟಿಗೆ ಇರುತ್ತದೆಂಬದು ಸ್ಪಷ್ಟ. ಬೇಕಾದರೆ ಅಲ್ಲಿನ ವೈದ್ಯರೂ, ಡಾಕ್ಟರುಗಳೂ ಕೇಳಿದವರಿಗೆ ತಮಗೆ ಯಾರಿಂದ ಹಣ ಸಿಗುತ್ತದೆಂಬದನ್ನು ಹೇಳೇ ಹೇಳುವರು. ಹೋಗಲಿ ಇದು. ಇನ್ನು ಹುಡುಗರು ಬಿಸಿಲಿನಲ್ಲಿ ಜೋರ್‌ನೇ ಬೆವತು ಹೋಗಿ ಅಲ್ಲಿ ಉಸ್ಸೆಂದು ವಿಶ್ರಮಿಸುವದರಲ್ಲಿಯೇ ಘಂಟಾನಾದವು ಕೇಳಬರುವದು. ಕೂಡಲೇ ಪ್ರೊಫೆಸರುಗಳ ಪ್ರವೇಶ. ಇತ್ತ ಹುಡುಗರಿಗೂ ಶಿಕ್ಷಕರಿಗೂ ಕೂಡೇ ತೂಕಡಿಕೆ, ಕಣ್ಣುಜಂಪು. ನಿರ್ವಾಹವಿಲ್ಲ ಹಾಗೆಯೇ ಪಾಠಕ್ಕೆ ಪ್ರಾರಂಭ. ಪ್ರೊಫೆಸರುಗಳು ಏನಾದರೂ ಹೇಳಿ ಮುಗಿಸುವ ಕಡೆಗೆ ಲಕ್ಷ್ಯದಲ್ಲಿ. ಹುಡುಗರು ಯಾವಾಗ ಮುಗಿಸಿ ಹೋಗುವರೋ ಎಂಬ ಚಿಂತೆಯಲ್ಲಿ. ಅವರು ಹೇಳುವದೇನೋ ಇವರು ಕೇಳುವದೇನೋ ಯಾರ ಲಕ್ಷ್ಯವೂ ಇರುವದಿಲ್ಲ. ಹೀಗೆ ಘಂಟೆಯು ನಾಲ್ಕು ಗಂಟೆ ಮೂರು ತಾಸಿನ ವರೆಗೆ ಕಳೆದರಾಯಿತು. ವಿಶ್ರಾಂತಿಗೆ ಅನುವು. ಹುಡುಗರಿಗೆ ಚಹಾ ಬುಟ್ಟಿಗಳಿಗೂ ಅಪ್ಪಣೆ. ಆಯಿತು ಇದು. ಮುಗಿದ ಮೇಲೆ ಆಟದ ಚಿಂತೆ ಇದ್ದೇ ಇರುವದು. ಹಾಗೂ ಹೀಗೂ ಮುಂದೆರಡು ತಾಸುಗಳನ್ನು ಕಳೆದರೆ ಧನ್ಯರಾದೆವೆಂದು ಎಲ್ಲರಿಗೂ ಅನಿಸಿಕೆ. ಆಮೇಲೆ ಹೊರಟರೆಂದರೆ ಕೊರಳುಕಟ್ಟಿಗಳಿಂದಲಂಕೃತರಾಗಿ ಆಟದ ಸ್ಟೈಲನ್ನು ನೋಡುವರು. ಇದೇ ಇವರ ಕಲಿಯುವ ವಿದ್ಯೆ. ಇದುವೆ ಇವರ ಬುದ್ಧಿಮತ್ತಿಕೆ. ಇದಕ್ಕೂ ಹೆಚ್ಚಿಗೆ ಇನ್ನೇನು? ರಾತ್ರಿಯಲ್ಲಿ ಚಲಚ್ಚಿತ್ರಪಟಗಳನ್ನು ನೋಡುವದು. ಇದೀಗಿನ ಹುಡುಗರ ಅಭ್ಯಾಸದ ಕ್ರಮವು. ಪಾಲಕರೋ ಪಾಪ ಅವರೇನು ಮಾಡಿಯಾರು? ಇವರು ಇಲ್ಲಿಂದ ಒಂದು ಅರ್ಜಂಟ ತಂತೀ ಬಿಟ್ಟರೇ ನಾಳೆ ಬೇಡಿದಷ್ಟು ಹಣವನ್ನು ಕಳಿಸುವರು. ಇದೆಲ್ಲ ಅವರಿಗೆ ಹೇಗೆ ತಿಳಿದೀತು? ಅವರೆಲ್ಲ ತಮ್ಮ ಮಕ್ಕಳು ಬೂಟು ಕೋಟು ಹ್ಯಾಟು ನೆಕ್‌ಟಾಯಿಗಳನ್ನು ಹಾಕುವದನ್ನು ನೋಡಿ ದೊಡ್ಡ ಸಾಹೇಬರೆಂದೇ ತಿಳಿದುಕೊಳ್ಳುವರು ಆನಂದಪಡುವರು. ಆದರೆ ಇವರಿಲ್ಲಿ ಹವಾ ತಿನ್ನಲಿಕ್ಕೆ ಕಲಿಯುವದು. ಮುಂದೆ ಮಣ್ಣು ತಿನ್ನುವದು. ಸಾಲಿ ಮನೆಗಳೆಲ್ಲ ವಿದ್ಯಾಭ್ಯಾಸಕ್ಕೆ ತರ್ಪಣ ಕೊಡಲೇ ಆಗಿರುವವು ಇದೀಗಿನ ಸ್ಥಿತಿ. ಹುಡುಗರ ತಪ್ಪೋ? ಶಿಕ್ಷಕರ ತಪ್ಪೋ? ಪಾಲಕರ ತಪ್ಪೋ? ಯಾವದೂ ಅಲ್ಲ ಕಾಲದ ಮಹಿಮೆಯಿಂದೇ ಅನ್ನಬಹುದು.

ಬರಹಗಾರನು ತನ್ನ ತಿರುಗಾಟದಲ್ಲಿ ಕಂಡು ಅನುಭವಿಸಿದ್ದನ್ನೇ ಇದರಲ್ಲಿ ಕಾಣಿಸಿರುವನು. ಇದಕ್ಕಪವಾದವಾಗಿ ಹತ್ತೆಂಟು ಜನರು ಸಿಗಬಹುದು ಎಲ್ಲರೂ ಒಂದೇ ಎಂದು ಅಲ್ಲ. ಬಹುವಾಗಿ ಮೇಲಿನಂತೆ ಹೆಚ್ಚು. ವಿದ್ಯಾವಂತರೆಂದೂ, ಮುಂದಾಳುಗಳೆಂದೂ ಕರೆಯಿಸಿಕೊಳ್ಳುವವರು ಶಿಕ್ಷಣ ಪದ್ಧತಿಯ ಕಡೆಗೆ ಹೊರಳಿ ನೋಡುವರೋ? ಭಾವೀ ರಾಷ್ಟ್ರೀಯರ ಶಿಕ್ಷಣಕ್ಕಾಗಿ ಹೆಚ್ಚು ಸುಧಾರಣೆಯ ಕಡೆಗೆ ಲಕ್ಷ್ಯ ಕೊಡುವರೋ?

ಮೊದಲಿನವರಲ್ಲಿ ಭಕ್ತಿ ಪ್ರೇಮಗಳಿದ್ದವು ಅದರಿಂದಲೇ ಅವರು ಶಕ್ತಿ ಯುಕ್ತಿ ನೀತಿ ರೀತಿ ಧರ್ಮಗಳನ್ನರಿತು ಕೀರ್ತಿವಂತರಾಗಿ ಮುಕ್ತಿಯನ್ನು ಸಂಪಾದಿಸಿದರು. ಈಗಿನವರಿಗೆ ಭಕ್ತಿಯಿಲ್ಲ ಶಕ್ತಿಯಿಲ್ಲ ನ್ಯಾಯವಿಲ್ಲ ನೀತಿಯಿಲ್ಲ ಧರ್ಮವಿಲ್ಲ ಮುಕ್ತಿ ಹೇಗಾದೀತು? ಪಾರತಂತ್ರ್ಯದ ಕೊಡಕಗಳೇ ನಮ್ಮಲ್ಲಿ ಏನೂ ಇಲ್ಲೆಂಬುವದೇ ಸಾಕ್ಷಿ. ಇದಕ್ಕೆಲ್ಲ ಸತ್ಯಶಿಕ್ಷಣದ ಅಭಾವವೇ ಕಾರಣವೆಂದು ದೃಢವಾಗಿ ಹೇಳಬಹುದು.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದ ಪದಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಜೀವನದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯೆ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ. ಬಾಗಲಕೋಟೆಯಲ್ಲಿ ನಮ್ಮ ಆಯುರ್ವೇದ ಔಷಧಿಗಳನ್ನು ಮಾರುವಿಕೆ ಏಜಂಟರು ಬೇಕಾಗಿದೆ. ಪುಸ್ತಕಕ್ಕಾಗಿ ಕಾರ್ಡು ಬರೆಯಿರಿ.

ರಾಜವೈದ್ಯ ನಾರಾಯಣಜೀ ಕೇಶವಜಿ

೫೭. ಚೀನಾಬಜಾರ್, ಮದ್ರಾಸು

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆ ಮಾಡಿರಿ! ತ್ವರೆ ಮಾಡಿರಿ

ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯ್ವಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇದೀ ಪ್ರತಿಷ್ಠ ಹಿಂದುಸ್ಥಾನದ ಸರಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ ವಿಶೇಷ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರ.

ಪತ್ತಾ:— ದಿ ಪಾಪ್ಯುಲರ ಮೋಟಾರ ಡ್ರಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೨ ಬುಧವಾರ ಪೇಠ ಜುನಿ ತಪಕೀರಗಲ್ಲಿ, ಪುಣೆ ಸಿಟಿ.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ'ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಣೀ, ಜೀರ್ಣಜ್ವರ, ಅಗ್ನಿಮಾಂದ್ಯ ಕೃಶತ್ವ, ದಮ್ಮು ಮತ್ತು ಕೆಮ್ಮು ಮೊದಲಾದ ವಿಕಾರಗಳೂ, ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಒಳ್ಳೇ ದಿವಸ ತಿಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು.) ಇದರಿಂದ ಮೈಯಲ್ಲಿಯ ಗರ್ಮಿಯ ಎಲ್ಲಾತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೇ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೨-೧೨-೦, ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೨-೧೪-೨, ೩ ಡಬ್ಬಿಗಳಿಗೆ ೭-೪-೨, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯು ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸ:—

ಎಸ್. ಬಿ. ಕದಮ್ ಮತ್ತು ಸನ್ಸ್.

ಮು. ಪೋಷ್ಟ ನಿಪ್ಪಾಣಿ (ಜಿ ಬೆಳಗಾಂವ.)

೧,೪೨,೦೦,೦೦೦

ರೂಪಾಯಿಗಳು!

ಪರದೇಶಗಳಿಂದ ತರಿಸಲ್ಪಟ್ಟ ಸಾಬೂನುಗಳಿಗೋಸ್ಕರ ಪ್ರತಿವರುಷವೂ ಒಂದುಕೋಟಿ ನಾಲ್ವತ್ತೆರಡು ಲಕ್ಷರೂಪಾಯಿಗಳನ್ನು ನಮ್ಮ ದೇಶವು ಪರದೇಶಕ್ಕೆ ತೆರುತ್ತಿದೆ. ಮಹಾಜನರೆಲ್ಲರೂ ಒಕ್ಕಟ್ಟಾಗಿ ಸಂಕಲ್ಪಮಾಡಿದರೆ ತಾನೇ ಈ ಹಣವನ್ನು ನಮ್ಮ ದೇಶದಲ್ಲಿ ಉಳಿಸಿಕೊಳ್ಳಬಹುದು. ಸ್ವದೇಶದ ಸಾಬೂನನ್ನು ಬಿಟ್ಟು ಪರದೇಶದ ಸಾಬೂನನ್ನು ಕೊಳ್ಳುವ ಪ್ರತಿಯೊಬ್ಬ ವಿದ್ಯಾವಂತನೂ ಅನ್ಯ ದೇಶದ ಕೈಗಾರಿಕೆಗಳಿಗೆ ಉಪಕಾರಮಾಡಿ, ಸ್ವದೇಶದ ಕೈಗಾರಿಕೆಗಳಿಗೆ ಅಪಕಾರಮಾಡುತ್ತಾನೆ. ಪ್ರತಿಯೊಬ್ಬ ದೇಶಬಾಂಧವನೂ ಸ್ವದೇಶೀ ಮಾಲುಗಳನ್ನೇ ಕೊಳ್ಳುವನು. ಮೈಸೂರು ಗೌರ್ನಮೆಂಟ ಸೋಪ್ ಫ್ಯಾಕ್ಟರಿಯಲ್ಲಿ ಸರ್ವಗ್ರಾಹ್ಯವಾದ ಉತ್ತಮವಾದ ಸಾಬೂನುಗಳನ್ನು ತಯಾರುಮಾಡುತ್ತಾರೆ. ನಾವು ತಯಾರುಮಾಡುವ ಶ್ರೀಗಂಧ ಪರಿಮಳವುಳ್ಳ ಸಾಬೂನೊಂದನ್ನು ಕೊಂಡು ತಾವೇ ಪರೀಕ್ಷೆಮಾಡಿನೋಡಿರಿ. ತಮಗೆ ನಮ್ಮ ಸಾಬೂನುಗಳು ಸಿಗಲಸಾಧ್ಯವಾದಲ್ಲಿ ದಯವಿಟ್ಟು ನಮಗೆ ಪತ್ರವೊಂದನ್ನು ಬರೆದರೆ, ತಾವು ಇಚ್ಛಿಸತಕ್ಕ ಅಂಗಡಿಯಲ್ಲಿಯೇ ನಮ್ಮ ಮಾಲುಗಳು ತಮಗೆ ದೊರೆಯುವಂತೆ ಏರ್ಪಡಿಸಿಕೊಡುತ್ತೇವೆ

ಗೌರ್ನಮೆಂಟ ಸೋಪ್ ಫ್ಯಾಕ್ಟರಿ

ಬೆಂಗಳೂರು.

ರ ನಂ. ಬಿ. ೧೯೪೭ ವಾ॥ ಚಂದಾ ೧-೧೨-೦ ಮಾತ್ರ

ಸ್ವಧರ್ಮ.

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ.)

ಯದ್ಯತ್ ಪರವಶಂ ದುಃಖಂ । ಯದ್ಯದಾತ್ಮವಶಂ ಸುಖಮ್ ॥ — ಮನು

ಸಂಪಾದಕರು — ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ಮಾಘ ಬಹುಳ ೨ ಶಕ ೧೮೫೮ ತಾ॥ ೧೮-೨-೧೯೩೭. | ಸಂಚಿಕೆ ೪೫

ಸಂಪಾದಕರ ಭೂಮಿ

(ಓಂ)

ನನ್ನ ಮನಸಿನ ಘೋಣಮಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮುಕ್ಕಳ ಜೊನ್ನು ।
ನಿನ್ನ ಪಾದವು ಚೆನ್ನ ಸೋಣಬಟ್ಟೆಯು ನೊಂದು ಚೆನ್ನಯಾಕಾಶವಲ್ಲ ॥
ನನ್ನ ದೇಹವು ನಿನ್ನ ವೀಣಶಾಸನಕಾಗಿ ।
ಕನ್ನನನ್ನ ಕಳ್ಳಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೊ ॥

— ಅಂಬಿಕಾತನಯ ದತ್ತ

ಮುಂಬೈ ಕರ್ನಾಟಕದ ಅಂಚೆ ಮನೆಗಳಲ್ಲಿ ಕನ್ನಡ ನಮೂನೆಗಳಿಲ್ಲದ್ದಕ್ಕಾಗಿ "ಕನ್ನಡಿಗ"ನು ಪ್ರಯತ್ನಿಸುತ್ತಿದ್ದುದನ್ನು ಎಲ್ಲರೂ ಬಲ್ಲರು. ಈಗ್ಗೆ ಈ ಕಾರ್ಯದಲ್ಲಿ 'ಕನ್ನಡಿಗ'ನಿಗೆ ಜಯ ದೊರೆತುದನ್ನು ವಾಚಕರಿಗೆ ತಿಳಿಸಲು ಸಂತೋಷವಾಗುತ್ತದೆ. ಧಾರವಾಡ ವಿಜಾಪೂರ ಜಿಲ್ಹೆಗಳಲ್ಲಿ ಕನ್ನಡ ನಮೂನೆಗಳು ಪ್ರಚಾರದಲ್ಲಿ ಬಂದುದು ನಮಗೆ ತಿಳಿದಿದೆ. ಅದೇ ಪ್ರಕಾರವಾಗಿ ಕಾರವಾರ, ಬೆಳಗಾವಿ, ಹಾಗೂ ಉತ್ತರ ಕರ್ನಾಟಕ ಸಂಸ್ಥಾನಗಳಲ್ಲಿಯೂ ಬೇಗನೇ ಒದಗಬಹುದು. ಕದಾಚಿತ್ ಇನ್ನೂ ಬಾರದಿದ್ದಲ್ಲಿ ಆ ಆ ಸ್ಥಾನಗಳ ಜನರು ಕೂಡಲೇ 'ಪೋಸ್ಟ ಮಾಸ್ತರ'ರಿಗೂ, 'ಪೋಸ್ಟ ಮಾಸ್ತರ ಜನರಲ್ ಮುಂಬೈ' ಇವರಿಗೂ ಅರ್ಜಿಗಳನ್ನು ಕಳಿಸಬೇಕು. ಅಂದರೆ ಆ ಬಗ್ಗೆ ವ್ಯವಸ್ಥೆಯಾಗುವದು. ಇನ್ನು ಸರಕಾರದವರು ಅಲ್ಲಲ್ಲಿ ಇರುವ "ನೋಟೀಸು"ಗಳನ್ನೂ ಹಲಿಗೆಗಳನ್ನೂ, ಕನ್ನಡದಲ್ಲಿಯೇ ಬೇಗನೇ ಬರೆಸುವ ವ್ಯವಸ್ಥೆ ಮಾಡಬೇಕಾಗಿ ಸೂಚಿಸುತ್ತೇವೆ

ಭಾಷಾನ್ವಯ ಪ್ರಾಂತಿಕ ಏಕೀಕರಣದ ವಿಷಯವು ಕಾಣಲಿಕ್ಕೆ ಹಗುರಾಗಿ ತೋರಿದರೂ, ಕೃತಿಯಲ್ಲಿ ಬರಬೇಕಾದರೆ ಬಹು ಕಠಿಣವಾದುದಾಗಿದೆಂಬುದು ಮೊನ್ನೆ ದಿಲ್ಲಿಯ ವರಿಷ್ಠ ಕಾಯದೇ ಮಂಡಲದಲ್ಲಿ ನಡೆದ ವಾದವಿವಾದದಿಂದ ಸಿದ್ಧವಾಗುತ್ತದೆ. ಉತ್ಕಲದವರಿಗೆ ಭಾಷಾನ್ವಯ ಪ್ರತ್ಯೇಕ ಪ್ರಾಂತವನ್ನು ಬೇಗನೇ ಕೊಡಬೇಕಾಗಿ ಶ್ರೀ ನೀಲಕಂಠ ದಾಸರವರು ಒಂದು ಸೂಚನೆಯನ್ನು ತಂದರು. ಬಿಹಾರದ ಮುಸಲ್ಮಾನರು ಇದಕ್ಕೆ ಸಮ್ಮತಿಸುವದಿಲ್ಲವೆಂದ ಓರ್ವ ಮುಸಲ್ಮಾನೀಯ ಸಭಾಸದರು ವಾಕ್ತಾಡಿದರು. "ಆಗಲೆ ಉತ್ಕಲ ಪ್ರಾಂತ ನಿರ್ಮಿತಿಗೆ ಉತ್ಕಲದ ಮುಸಲ್ಮಾನರು ವಿರೋಧಿಸಿದರೆ ಅದು ಮಹತ್ವದ್ದಾಗುತ್ತಿತ್ತು. ಅವರೇನೂ ಹಾಗೆ ವಿರೋಧಿಸಿಲ್ಲ. ಬಿಹಾರದ ಮುಸಲ್ಮಾನೀಯರು ವಿರೋಧಿಸಿದ್ದರೆ ನಾವು ಅದನ್ನು ಲಕ್ಷಿಸುವ ಕಾರಣವಿಲ್ಲ"ವೆಂದು ಅವರಿಗೆ ಉತ್ತರ ದೊರೆತನಂತರ ಅವರು ಸುಮ್ಮನಾದರು. ಮುಸಲ್ಮಾನರ ಮತವು ಈ ಭಾಷಾನ್ವಯ ಪ್ರಾಂತರಚನೆಯ ಬಗ್ಗೆ ಅನ್ಯೋನ್ಯದು ಕಳವಳವಾಗದೆಯೋ ಇಲ್ಲವೋ ತಿಳಿಯದು. ವಾದವಿವಾದದಲ್ಲಿ ಸರಕಾರಪಕ್ಷವೂ ತಮ್ಮ ಮತವನ್ನು ಮಂಡಿಸಿದರು. ಅವರು ಹೇಳಿದ್ದೆಂದರೆ "ಹಾಸಿದ್ದು ಹಾಸಿಕೊ ಕಿಸಬಾಯಿ ದಾಸ" ಎಂಬುದು. ರಾಜ್ಯಕಾರಭಾರದ ಸೌಕರ್ಯ ಹಾಗೂ ಅಚ್ಚುಕಟ್ಟುತನಕ್ಕೆ ಭಂಗಬಾರದಂತೆಯಾದರೆ ಈ ಕಾರ್ಯವನ್ನು ಮಾಡಬಹುದೆಂದು ಹೇಳಿದರು. ಪ್ರಜೆಗಳ ಬೇಡಿಕೆಯ ಯಾವದೇ ಪ್ರಶ್ನೆ ಮುಂದೆ ಬಂದರೂ ಇದೇ ಉತ್ತರವನ್ನು ನಮ್ಮ ಆಳರಸರು ಕೊಡುತ್ತಿರುವರು. ಪ್ರಜೆಗಳ ಸೌಕರ್ಯ, ರಾಷ್ಟ್ರದ ಏಳಿಗೆ, ದೇಶದ ಅಚ್ಚುಕಟ್ಟುತನ ಇವೆಲ್ಲ ಸರಕಾರದ ಲಕ್ಷ್ಯದಲ್ಲಿ ಬರುವದೇಯಿಲ್ಲ. ಕೇವಲ ರಾಜ್ಯದಾಡಳಿತ ದೃಷ್ಟಿಯಿಂದ ವಿಚಾರಿಸಿದರೆ ತೀರಿತೆಂದು ಅವರ ನಂಬಿಗೆ. ಈ ಹುಚ್ಚನ್ನು ಬಿಡಿಸಲಿಕ್ಕೆ ಜನರ ಚಳವಳಿಯೊಂದೇ ಮಾರ್ಗ. ಇದನ್ನು ಕಂಡುಹಿಡಿದು ಈ ಪ್ರಶ್ನೆಯನ್ನು ಬಿಡಿಸತಕ್ಕದ್ದು. ನಮ್ಮ ಕರ್ನಾಟಕ ಪ್ರಾಂತದ ಮಟ್ಟಿಗೆ ಹೇಳಬೇಕಾದರೆ, ಎಲ್ಲವೂ ಕುಂಭಕರ್ಣನ ನಿದ್ರೆಯಂತೆ ಸಾಗಿದೆ. ಏಕೀಕರಣ ಸಭೆಗೆ ಎಲ್ಲರ ಕಿಂಕಲೂ ಹಚ್ಚು ಸಿದ್ದ ಬಂದಂತೆ ತೋರುತ್ತದೆ. ಈ ಸಭೆಯು ಹೋಗಿ ಎರಡು ವರ್ಷಗಳ ಮೇಲೆ ಆಯಿತು. ಆದರೂ ಕೂಡ ಕಾರ್ಯವು ಅಚ್ಚುಕಟ್ಟಾಗಿ ನಡೆಯಲೊಲ್ಲದು. ಕಾಯದೇ ಮಂಡಳಗಳ ಸಭಾಸದರು ಚುನಾವಣೆಯಲ್ಲಿ ಮಾತ್ರ ತಮ್ಮ ಹುರುಪು ಹಣಗಳನ್ನು ತೋರಿಸುವರು. ಈಗ್ಗೆ "ಕೌನ್ಸಿಲ್ ಚಂಬರ"ದ ನೆರಳಲ್ಲಿ ಕುಳಿತಿರಲು ಎಲ್ಲಿಯ ಕರ್ನಾಟಕ! ಎಲ್ಲಿಯ ಏಕೀಕರಣ !!

ಇತ್ತೀಚಿಗೆ ಶಿಕ್ಷಿತ ಜನರ ಪರಿಶ್ರಮದಿಂದ 'ಸಹಕಾರ ಸಂಘಗಳು ಅಲ್ಲಲ್ಲಿ ಸ್ಥಾಪಿಸಲ್ಪಡುತ್ತಲಿವೆ. ಇದು ಸಂತೋಷದ ಮಾತಾಗಿದ್ದರೂ ಸಂಸ್ಥಾಪನದಲ್ಲಿಯೇ ವಿಷಾದವನ್ನುಂಟುಮಾಡುವಂಥದಾಗಿದೆ. ಸಂಘದ ಕಾರ್ಯದರ್ಶಿಗಳು ನಿಸ್ಪೃಹಬುದ್ಧಿಯುಳ್ಳವರೂ ಸಾರಾಸಾರ ವಿಚಾರವುಳ್ಳವರೂ ಆರಿಸಲ್ಪಡದೆ ಎಷ್ಟೋ ಕಡೆಗೆ ಸ್ವಾರ್ಥಪರರೂ ಬರೇ ದಾಂಭಿಕತನದಿಂದ ದೊಡ್ಡಸ್ತಿಕೆಯನ್ನು ಮೆರೆಸುವವರೂ ಆಗುವದರಿಂದ ಕೆಲವು ದಿವಸಗಳಲ್ಲಿಯೇ ಸಂಘಗಳು ನಾಶವಾಗುತ್ತವೆಂಬ ಮಾತು ಸ್ಪಷ್ಟ. ಇದೇ ಕಾರಣದಿಂದಲೋ ಏನೋ ಎಷ್ಟೋ ಸಹಕಾರ ಸಂಘಗಳಲ್ಲಿ ಅಂತಃಕಲಹಗಳೂ ಅವ್ಯವಸ್ಥೆಯೂ ನಡೆದ ಬಗ್ಗೆ

ಆಗಾಗ ವೃತ್ತಪತ್ರಿಕೆಗಳಲ್ಲಿ ಬರುವ ಬರಹಗಳಿಂದ ಕಂಡುಬರುವದು. ಹೀಗಾಗುವದರಿಂದ ಯಾರಿಗೆ ತಾನೇ ಲಾಭವಾದಂತಾಗುವದು? ಶ್ರಮವೂ ವೇಳೆಯೂ ವ್ಯರ್ಥ ಕಳೆಯುದಲ್ಲದೆ ಯಾವ ಪುರುಷಾರ್ಥವನ್ನೂ ಸಾಧಿಸಿದಂತಾಗುವದಿಲ್ಲ. ಸಹಕಾರ ಸಂಘಗಳ ಉದ್ದೇಶವು ಜನರಿಗೆ ಸ್ವಲ್ಪಮಟ್ಟಿಗಾದರೂ ಹಿತದೊರೆಯಬೇಕೆಂಬದಿದೆ. ಆದರೆ ಸಂಘದಲ್ಲಿ ಮುಖಂಡಿ ಮಣೆ ಇಡುವವರ ಪ್ರಾಬಲ್ಯವಿರಕೂಡದು ಇದುವೇ ಸಂಘ ನಾಶಕದ ಮೂಲವು! ಇದನ್ನು ಸಂಪೂರ್ಣವಾಗಿ ಲಕ್ಷಿಸಿ ಯೋಗ್ಯರಾದವರನ್ನೇ ಸಂಘದ ಕಾರ್ಯಕಾರೀ ಮಂಡಲದಲ್ಲಿ ಸೇರಿಸುತ್ತಾ ಹೋಗಬೇಕೆಂದು ಸಂಘಗಳ ಸ್ಥಾಪಕರಿಗೆ ನಾವು ಒತ್ತಿ ಹೇಳುತ್ತೇವೆ.

ನಿಝಾಮರು ಸಾಹೇಬರು ಮೊದಲು ಎಷ್ಟೋ ಅಭಟ ಸಿದರೂ ಈಗ್ಗೆ ವೆತ್ತಗಾಗಿ, ಹಿಂದುಸ್ಥಾನ ಸರಕಾರದ ಕರಾರುಗಳಿಗೆಲ್ಲ ಒಪ್ಪಿದ್ದಾರೆ ಕಂದಾಯ, ಪೋಲೀಸ, ಜಕಾತಿ ಭಾಗಗಳ ಮುಖ್ಯಾಧಿಕಾರಿಗಳೆಲ್ಲ ಹಿಂದುಸ್ಥಾನ ಸರಕಾರದಿಂದ ನೇಮಿಸಲ್ಪಟ್ಟ ಅಧಿಕಾರಿಗಳ ಕೈಸೇರಿವೆ ಇನ್ನೂ ಅನೇಕ ಬದಲಾವಣೆಗಳು ಆಗತಕ್ಕವಿವೆ. ನಿಝಾಮರು ಮೊದಲಿನಿಂದಲೇ ಜಾಣರಾಗಿ, ತಮ್ಮ ಸಂಸ್ಥಾನದ ರಾಜ್ಯಸೂತ್ರಗಳನ್ನು ಪ್ರಜಾ ಜನರ ಕೈಯಲ್ಲಿ ಕೊಟ್ಟಿದ್ದರೆ ಈಗಾದ ಅಪಮಾನವು ಅವರಿಗೆ ಎಂದೂ ಆಗುತ್ತಿರಲಿಲ್ಲ. ಈಗಲಾದರು ಅವರಿಗೆ ಬುದ್ಧಿ ಬರಲಿ. ಹಿಂದುಸ್ಥಾನದ ಉಳಿದ ಸಂಸ್ಥಾನಿಕರೆಲ್ಲ ನಿಝಾಮಸಾಹೇಬರ ಈ ಅಪಮಾನಕಾರಕ ಪ್ರಸಂಗವನ್ನು ಚನ್ನಾಗಿ ತಿಳಿದುನೋಡಿ, ತಮ್ಮ ತಮ್ಮ ಪ್ರಜೆಗಳಿಗೆ ಸ್ವಾತಂತ್ರ್ಯದ ಹಕ್ಕುಗಳನ್ನು ಕೊಡಬೇಕೆಂಬ ಪಾಠವನ್ನು ಕೂಡಲೇ ಕಲಿಯಬೇಕು. ಇನ್ನು ಕೇವಲ ಕರ್ನಾಟಕದಲ್ಲಿಯ ಸಂಸ್ಥಾನಗಳ ಬಗ್ಗೆ ಹೇಳುವದಾದರೆ ಮೈಸೂರ ಹಾಗೂ ಸಾಂಗಲಿ ಸಂಸ್ಥಾನಗಳೆರಡೇ ಸಮಾಧಾನಕರವಾಗಿವೆ. ಜಮಖಂಡಿಯು ಒಳ್ಳೇ ದಾರಿಯನ್ನು ಹಿಡಿದಿದೆ. ಉಳಿದವರೆಲ್ಲ ನಿಝಾಮರ ತಮ್ಮಂದಿರು. ಮುಧೋಳ, ಸೊಂಡೂರ, ಸವಣೂರುಗಳಲ್ಲಿ ಪ್ರಜೆಗಳಿಗೆ ಸುಖವೆಂದರೆ ಗೊತ್ತಿಲ್ಲ. ಪ್ರಜೆರ ಸಂಘಗಳ ಮಾತನ್ನು ಎತ್ತಲಿಕ್ಕಾಗದು ಕಾಯದೆ ಮಿತಿಮೀರಿ ಬೆಳೆದಿದೆ. ಖಾದಿಯನ್ನು ಯಾರೂ ಧರಿಸಕೂಡದು ರಾಟೆಗಳನ್ನು ಚಿತ್ರದಲ್ಲಿ ಮಾತ್ರ——ಅದನ್ನೂ ಅಂಜುತ್ತ—— ಪ್ರಜೆಗಳು ನೋಡಬೇಕು. ಹೀಗೆ ಪರಿಸ್ಥಿತಿಯಿದೆ ಈ ರಾಜರು ಧೂರ್ತರಾಗಿ, ವಿಚಾರವಾಡದೇ ಹೋದರೆ ತಮ್ಮ ಅಣ್ಣ ನಿಝಾಮರ ಅಪಮಾನವನ್ನು ಅಥವಾ ಅದಕ್ಕೂ ಹೆಚ್ಚಾದ ಕಷ್ಟಗಳನ್ನು ಅನುಭವಿಸಬೇಕಾಗುವದೆಂಬದನ್ನು ಮರೆಯಕೂಡದು.

ಬ್ರಿಟಿಶರು ವಿಜಾಪೂರ ಜಿಲ್ಹೆಯನ್ನು ವಶಮಾಡಿಕೊಂಡಂದಿನಿಂದ ಈ ಜಿಲ್ಹೆಯಲ್ಲಿ ಬರಗಾಲವು ಬೀಳುತ್ತಲೇಯಿದೆ ಸರಕಾರವೂ ಅದನ್ನು ನೋಡುತ್ತಲೇಯಿದೆ ಆದರೆ ಪ್ರಜೆಗಳ ಕಷ್ಟ ನಿವಾರಣೆಯ ವಿಚಾರವು ಅವರಿಗೆ ತಾನಾಗಿಯೇ ತೋಚಲೊಲ್ಲದು ಅನ್ಯರು ಹೇಳಿದರೆ ರುಚಿಸಲೊಲ್ಲದು ಕೆರೆ ಕಾಲುವೆಗಳನ್ನು ಕಟ್ಟಿಸಿರೆಂದರೆ 'ಬೊಕ್ಕಸದಲ್ಲಿ ಹಣವಿಲ್ಲ'ವೆಂಬ ಪದವು ಪ್ರಾರಂಭವಾಗುತ್ತದೆ ಆದರೆ ಲಂಡನ್ನಿನಲ್ಲಿ "ಹಾಯಕಮೀಶನರ" ರೆಂಬ ನವಕರನ ದರಬಾರು ಹೊಸ್ತಿದ್ದಾರೆ. ಆವರ ಕಚೇರಿ ಕಟ್ಟಿಸಲಿಕ್ಕೆ ೫೦ ಲಕ್ಷ ರೂಪಾಯಿ ವೆಚ್ಚಮಾಡಬೇಕೆಂದು ಸರಕಾರದ ವಿಚಾರವಿದೆ ಹೀಗೆ ಮುಗ್ಧ ಜನಗಳಲ್ಲಿ ಪರರ ಘನಕ್ಕೆ ಸರಕಾರವ ವತ್ತಿರ ಬೆಳೆವನು ಹಣವಿ ಅದರ ಸರಿ ಗೆಲ್ಲ ಕುಡಿಯಲು ನೀರುಯಿಲ್ಲವೆಂಬದಾಗಿ ಕನಿಕರಬಟ್ಟು ಬಡವರು ಇಲ್ಲಿ ಸಾಯುತ್ತಿರುವಾಗ ಸರಕಾರಕ್ಕೆ ಹಣ ದೊರೆಯುವದಿಲ್ಲ ವಿಜಾಪೂರ ಜಿಲ್ಹೆಯಲ್ಲಿ ಇದ್ದಷ್ಟು ನದಿಗಳು ಯಾವ ಜಿಲ್ಲೆಯಲ್ಲಿಯೂ ಇಲ್ಲ. ಕೆರೆ, ಕಾಲುವೆ, ಚಿಮ್ಮುವ ನೀರು (Pumping station) ಗಳನ್ನು ಏರ್ಪಡಿಸಲು ನೈಸರ್ಗಿಕ ಸೌಕರ್ಯಗಳು ವಿಪುಲವಾಗಿದ್ದರೂ ಸರಕಾರವು ಈ ವರೆಗೆ ಈ ಜಿಲ್ಹೆಯ ಬರಗಾಲ ನಿವಾರಣೆಗಾಗಿ ಕಾಯಂ ಏರ್ಪಾಟನ್ನು ಏನನ್ನೂ ಮಾಡಿಲ್ಲ. ಈ ವರ್ಷವಂತೂ ಈ ಜಿಲ್ಹೆಯ ತುಂಬೆಲ್ಲ ಕಪ್ಪು ದನಗಳು ಕಟುಕರ ವಶವಾಗುತ್ತಲಿವೆ. ನೀರಿಗಾಗಿ ಜನರು ಪತ್ತು ಮೈಲುಗಳ ವರೆಗೆ ಹೋಗುತ್ತಿರುವರು. ಹೊಟ್ಟೆಗಾಗಿ ಗುಡಿ ಕಟ್ಟಿಕೊಂಡು ಜನರು ಊರು ಬಿಟ್ಟಿದ್ದಾರೆ; ಬಿಡುತ್ತಲಿದ್ದಾರೆ ಕೂಸುಗಳನ್ನೂ, ಬಸುರು ಹೆಂಗಸರನ್ನು, ದನ ತಾಂಬಿದವರನ್ನೂ ಕಟ್ಟಿಕೊಂಡು ಮಲೆನಾಡಿಗೆ ಕಷ್ಟಪಡುತ್ತ ಮಾರ್ಗಕ್ರಮಣಮಾಡುತ್ತಲಿರುವದನ್ನು ಕಂಡರೆ ಯಾವ ಕಟುಕನಿಗಾದರೂ ಕರುಣೆ ಬರುವದು ಅಂತೆಯೇ ಬಾಗಲಕೋಟೆಯ ನಾಗರಿಕರು ಮೊನ್ನಿನ ಶನಿವಾರ ದಿನ ತಾಜ ನಾಟಕ ಶಾಲೆಯಲ್ಲಿ ಶ್ರೀ ಕಣಬೂರ ವಕೀಲರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಈ ವರ್ಷ ತೇರಗೆಯನ್ನು ಸೂಟ ಬಿಡುವ ಬಗ್ಗೆಯೂ ಕೆರೆ ಕಾಲುವೆಗಳು ಏರ್ಪಾಟಾಗುವಬಗ್ಗೆಯೂ ಗವರ್ನರರ ಕಡೆಗೆ ಶಿಷ್ಟಮಂಡಲವನ್ನು ಕಳಿಸಬೇಕೆಂದು ನಿರ್ಧರಿಸಿದ್ದಾರೆ. ಆದರೆ ಸರಕಾರದವರು ತಮ್ಮ ಪ್ರಿಯವಾದ "ಹಣದ ಕೊರತೆ" ಯೆಂಬ ಹಾಡನ್ನು ನಿಲ್ಲಿಸಿ, ಬಡ ರೈತರ ಗೋಳುಗಳ ಕಡೆಗೆ ಸ್ವಲ್ಪಾದರೂ ದಯ ದೃಷ್ಟಿಯಿಂದ ನೋಡುವಷ್ಟು ಉಚ್ಚ ಭಾವನೆಯನ್ನು ತೋರಿಸುವರೋ?

ಕಾಯದೇ ಮಂಡಲಗಳ ಕೆಲಸ ಎಲ್ಲ ಕಡೆಯಲ್ಲಿಯೂ ಪ್ರಾರಂಭವಾಗಿದೆ. "ಇದರೆ ಇಲ್ಲಿ ಕೆಲಸಮಾಡುವದೆಂದರೆ 'ಕೋಣನ ಮುಂದೆ ಕಿನ್ನರಿ' ಯನ್ನು ಬಾರಿಸದಂತೆ. ನಮ್ಮ ಕಾರ್ಯವನ್ನು ನೆನಸಿಕೊಂಡರೆ ನಮ್ಮ ಶಕ್ತಿಯು ಬಂಜೆತನವು ಬಯಲಾಗುತ್ತದೆ." ಎಂಬದಾಗಿ ಶ್ರೀ ಲಾಲಾ ಲಜಪತರಾಯರು ಬರೆಯುತ್ತಾರೆ ಇವರಂತಹ ಅನುಭವಿಕರ ಬಾಯಿಂದ ಬಂದ ಈ ಬರವಣಿಗೆಯ ಬೆಲೆಯನ್ನು ಬೇರೆ ಕಟ್ಟುವ ಕಾರಣವೇಯಿಲ್ಲ ಆದರೂ ನೀರಿನಂತೆ ಸಾವಿರಗಟ್ಲೆ ಹಣವನ್ನು ವೆಚ್ಚಮಾಡಿ ಮಂಡಲಗಳಲ್ಲಿ ಹೋಗಲು ಹಾತೊರೆಯುವ ಅಸಂಖ್ಯ ಮಹನೀಯರನ್ನು ನಾವು ದಿನಾಲು ಕಾಣುತ್ತೇವೆ ಯಾವದಾದರೊಂದು ಸಾರ್ವಜನಿಕ ಕಾರ್ಯಕ್ಕೆ ಹಣ ಬೇಕೆಂದರೆ ಇವರ ಕೈ ಸಡಿಲಾಗದು. ಇರಲಿ, ದಿಲ್ಲಿಯ "ಅಸೆಂಬ್ಲಿ" ಯಲ್ಲಿ ಕಳೆದ ವರ್ಷ ೧೧ ಠೀವರ್ಾನಗಳಾಗಿವೆ. ಅವುಗಳಲ್ಲಿ ೫ ಸರಕಾರದವು, ೧ ಸರಕಾರಕ್ಕೆ ವಿರೋಧವಿಲ್ಲದವು. ಉಳಿದ ೪ ರಲ್ಲಿ ಒಂದನ್ನು ಮಾತ್ರ ಸರಕಾರವು ಕೃತಿಯಲ್ಲಿ ತರಲು ವಿಚಾರಿಸುತ್ತಲಿದೆ ಕಡೆಯ ೩ ಠರಾವುಗಳಿಗೆ ಸರಕಾರವು ವಿರೋಧಿಸಿವೆ ಆದ್ದರಿಂದ ಅವುಗಳನ್ನು ಸರಕಾರವು ಕೃತಿಯಲ್ಲಿ ತರಲಾರದೆಂಬದಾಗಿ ಈಗ್ಗೆ ಉತ್ತರವು ದೊರೆತಿದೆ ಇದು ಕಳೆದ ವರ್ಷ ೧೪೩ ಜನರು ಲಕ್ಷಗಟ್ಲೆ ಹಣ ವೆಚ್ಚಮಾಡಿ ಭರತಖಂಡಕ್ಕೆ ಮಾಡಿದ ಸುಖದ ಪಕಾರದ ಫಲ!!

ಬೆಳಗಾವಿಯ ರೇಲ್ವೆ ಮಂಡಳದ ಪ್ರಯತ್ನದಿಂದ ಹುಬ್ಬಳ್ಳಿಯಲ್ಲಿ "ರೇಲ್ವೇ ಹಿತಚಿಂತಕ" ಮಂಡಳವನ್ನು ಸ್ಥಾಪಿಸುವದು ಸ್ಥಾಪಿಸಬೇಕೆಂದು ನಿರ್ಧಾರವಾಗಿದೆ ಸದರ್ನ ಮರಾಠಾ, ಕರ್ನಾಟಕ, ಮೈಸೂರು, ... ರೇಲ್ವೆಗಳಲ್ಲಿಯ ಪ್ರತಿನಿಧಿಗಳು ಈ ಮಂಡಲಕ್ಕೆ ಆರಿಸಲ್ಪಡುವರು

ಶ್ರೀ ಕಡಪಾ ರಾಘವೇಂದ್ರರಾಯರು ಸ್ವರ್ಗಸ್ಥರಾದರು!

ಕನ್ನಡ ನಾಡಿಗೆ ದೊಡ್ಡ ಹಾನಿ!!

ಕೊನೆಗೆ ಶ್ರೀ. ಕಡಪಾ ರಾಘವೇಂದ್ರರಾಯರು ೧೫ನೇ ತಾರೀಖಿನ ದಿವಸ ಬೆಳಗಿನ ಜಾವದಲ್ಲಿ ಬೆಳಗಾವಿಯಲ್ಲಿ ತಮ್ಮ ಜೀವನ ಯಾತ್ರೆಯನ್ನು ಮುಗಿಸಿ ಮರಳಿ ತಮ್ಮ ಗೊತ್ತಿನ ಮನೆಗೆ ತೆರಳಿದರೆಂದು ತಿಳಿಸಲು ನಮಗೆ ವಿಷಾದವಾಗುತ್ತಿದೆ. ಕನಸು ಮನಸುಗಳಲ್ಲಿ ಕನ್ನಡ ನಾಡಿನ ಹೆಚ್ಚುಗೆ ಸೌಭಾಗ್ಯಗಳನ್ನು ನೆನಸುವವರೊಳಗೆ ಅವರೊಬ್ಬರು ಮೇಲಾದವರು. ಕನ್ನಡ ಜೀವನದ ಜೀವಾಳವನ್ನೂ ಅದರ ಸಂಸ್ಕೃತಿಯ ತಿರುಳನ್ನೂ ಅದರ ಮೇಲ್ಮೆಯ ತರವನ್ನೂ ಸರಿಯಾಗುವಂತೆ ತುಂಬಿದುಂಬಿರುವ ನುಡಿಯಲ್ಲಿ ಹೇಳುವ ಅರಿವೂ ಜಾಣ್ಮೆಯೂ ಅವರಲ್ಲಿಯೇ ಉತ್ತಮವಿತ್ತು ಎಂದರೆ ಒಪ್ಪುವದು. ಕನ್ನಡಿಗರೇಕೆ ಉಳಿದವರೂ ಕೂಡ ಅವರ ಮಾತಿನ ಮಾಧುರ್ಯಕ್ಕೆ ಮನಸೋತು ಮುಗ್ಧರಾಗುತ್ತಿದ್ದರು. ಹಂಚಿಹೋಗಿರುವ ಕರ್ನಾಟಕವನ್ನು ಒಂದು ಮಾಡಬೇಕೆಂದು ಅವರು ಹೆಚ್ಚಿನ ಚಟುವಟಿಕೆಯನ್ನು ಮಾಡಿದರು. ಕರ್ನಾಟಕದಲ್ಲೆಲ್ಲ ತಿರುಗಿ ಒಬ್ಬರೊಬ್ಬರಲ್ಲಿ ಒಳಿಕೆಯನ್ನೂ ಹೊಂದಿಕೆಯನ್ನೂ ಉಂಟುಮಾಡಿದರು. ತಿಳಿಗೇಡಿ ಕನ್ನಡಿಗರಲ್ಲಿ ತಿಳುವಳಿಕೆಯನ್ನು ತಂದರು. ಕನ್ನಡ ನಾಡು- ಕನ್ನಡ ನುಡಿಯೆಂದೊಡನೆ ಅವರ ಮೈಯು ನಾಗರ ಹಾವಿನಂತೆ ಉಬ್ಬುತ್ತಿತ್ತು. ಕನ್ನಡತಿಯರಲ್ಲಿ ಕಂಡುಬರುವ ಒಳ್ಳೆ ನಡತೆ, ಚೆಲುವು ದೊಡ್ಡ ಮನಸು ದೇವರಲ್ಲಿಯ ನಂಬುಗೆ, ಪತಿಯಲ್ಲಿ ನಿಷ್ಠೆ ಇವೇ ಮೊದಲಾದ ಗುಣಗಳು ಉಳಿದೆಡೆಯಲ್ಲಿ ವಿರಳವಾಗಿ ಕಾಣುವವೆಂದು ಅವರು ಹೇಳುತ್ತಿದ್ದರು. ಇದರಲ್ಲಿ ಅಭಿಮಾನದ ಸೆಳಕು ಇರುವದೇನೋ ನಿಜ ಆದರೆ ಅದು ನನ್ನಿಯ ನಿಲುವಿನ ಮೇಲೆ ನಿಂತಿದೆಯೆಂಬುದನ್ನು ಯಾರೂ ಮರೆಯಬಾರದು. ತಮ್ಮ ತಾಯಿಯವರು "ಹರಿಕಥಾಮೃತಸಾರ"ದ ಸೊಬಗನ್ನು ತಮಗೆ ತಿಳಿಹೇಳಿ ಅಸದೃಶವಾದ ಚಟುವಟಿಕೆಯಲ್ಲಿ ತಮಗೆ ಹುರುಪನ್ನೂ ಹುರುಡನ್ನೂ ಉಂಟುಮಾಡಿದರೆಂದು ಎಷ್ಟೋ ಸಲ ಅವರು ಹೇಳಿದ್ದು ನಮಗೆ ನೆನಪಿದೆ. ತ್ಯಾಗ ಭೋಗಗಳೆರಡೂ ಪರಸ್ಪರ ಮಿಳಿತವಾಗಿ ಬೇಕೆಂಬುದೇ ಅವರ ಜೀವನದ ಸಂದೇಶವೆಂದು ನಮಗೆ ತೋರುತ್ತಿದೆ. ಅವರು ಇಹಲೋಕದ ಭೋಗವನ್ನು ತಿರಸ್ಕರಿಸುತ್ತಿರಲಿಲ್ಲ; ಮತ್ತು ತ್ಯಾಗ ಮಾಡುವುದು - ಅರ್ಪಣ ಬುದ್ಧಿಯಿಂದ ಕೆಲಸ ಮಾಡುವುದು — ಪ್ರತಿಯೊಬ್ಬನ ಕರ್ತವ್ಯವೆಂದು ಅವರು ನುಡಿಯುತ್ತಿದ್ದರು. ಇಂತಹ ತಳಮಳದ ಜೀವವು ಜಡದೇಹವನ್ನುಳಿದು ಹೋದದ್ದು ಕನ್ನಡಿಗರ ದುರ್ದೈವವೇ ಸರಿ. ಏಕೀಕರಣವು ಇನ್ನೂ ಅವರ ಕರ್ತ ಸ್ವರೂಪದಲ್ಲಿಯೇ ಇದೆ; ಕರ್ನಾಟಕ ವಿಶ್ವವಿದ್ಯಾಲಯವು ಅವ್ಯಕ್ತಾವಸ್ಥೆಯಲ್ಲಿದೆ. ಬಿಕ್ಕಟ್ಟಿನಲ್ಲಿ ಬಲಗೈಯು ಬಿಟ್ಟು ಹೋದಂತಾಯಿತಲ್ಲವೇ? ದೈವದ ಗತಿಯನ್ನು ಮೀರುವರಾರು? ದೇವರಾಟದ ಬಗೆಯನ್ನು ಅರಿತವರಾರು? ಅವರು ಕೈಕೊಂಡ ಕೆಲಸವನ್ನು ಕೊನೆಗಾಣಿಸುವದು ನಮ್ಮೆಲ್ಲ ಕನ್ನಡಿಗರ ಕರ್ತವ್ಯ. ಅವರ ಆತ್ಮಕ್ಕೆ ಶಾಂತಿಯು ಆಮೇಲೆಯೇ ದೊರೆಯುವುದು. ಅವರ ವ್ಯಕ್ತಿಯಿಂದುಂಟಾದ ಹಾನಿಯು ಬಹಳವಾಗಿದೆ. ಅವರ ಕುಟುಂಬದವರ ಮೇಲೆ ಆಕಾಶವೇ ಕಳಚಿ ಬಿದ್ದಂತಾಗಿದೆ. ಅವರ ಶೋಕದಲ್ಲಿ ಕನ್ನಡಿಗರೆಲ್ಲರೂ ಪಾಲುಗಾರರಿರುವರೆಂದು ನಾವು ಹೇಳದಿರಲಾರೆವು.

ಬೆಳಗಾಂವದಲ್ಲಿ ಏಕೀಕರಣ ಸಭೆ.

ತಾ|| ೧೪—೩—೨೭ ದಿವಸ ಬೆಳಗಾಂವಿಯ ಕನ್ನಡ ೧ನೇ ನಂಬರ ಶಾಲೆಯಲ್ಲಿ ಸಭೆಗೂಡಿ ಕರ್ನಾಟಕ ಏಕೀಕರಣದ ಬೆಳಗಾವಿಯ ಶಾಖಾ ಸಂಘವು ಸ್ಥಾಪಿಸಲ್ಪಟ್ಟಿತು. ದೇ. ಭ ಗಂಗಾಧರರಾವ ದೇಶಪಾಂಡೆ, ಶ್ರೀ. ದಿವಾಕರ ಗಜ್ಜಿ ಮೊದಲಾದವರ ವ್ಯಾಖ್ಯಾನಗಳಾದವು. ಶ್ರೀ. ಗಜ್ಜಿ ವಕೀಲರು ಅಧ್ಯಕ್ಷರನ್ನಾಗಿಯೂ, ಆರ್ ಬಿ ಕುಲಕರ್ಣಿ, ವ್ಹಿ. ವ್ಹಿ. ಪಾಟೀಲ, ವಾಯ್. ಎಚ್. ಅಂಕಲೆ ಈ ಮೂವರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಇವರಲ್ಲದೆ ಶ್ರೀ ಸವಣೂರ, ನಾಯಿರೆ, ದತ್ತೋಪಂತ ಮಿಜಲಿ, ಕೇ. ಎಸ್. ಪಾಟೀಲ ತಳ್ಳೂರ ವಕೀಲ ಮೊದಲಾದವರು ವ್ಯಾನೇಜಿಂಗ ಕಮೀಟಿಯಲ್ಲಿದ್ದಾರೆ. ಈ ಶಾಖಾ ಮಂಡಲದವರು ಜಿಲ್ಹೆಯಲ್ಲಿ ಏಕೀಕರಣದ ಪ್ರಸಾರವನ್ನು ಮಾಡತಕ್ಕವರಿದ್ದಾರೆ

ಕಾಯದೆಮಂಡಲದ ಸುದ್ದಿಗಳು.

ಮುಂಬೈ ಇಲಾಖೆಯ ಅಂದಾಜ ಪತ್ರಿಕೆಯಲ್ಲಿ ೬೮ ಲಕ್ಷ ರೂಪಾಯಿಗಳ ಕೊರತೆಯಿದೆಂದು ಸುದ್ದಿಯಿದೆ.

ಯಾ ಉತ್ತಮ ಸನ್ಯಾಸಿಗಳು ಯಾವಾಗ್ಗೆ ಬಂಧುಮುಕ್ತರಾಗುವರೆಂಬದಾಗಿ ಬರ್ಮಾ ಕಾಯದೇಮಂಡಲದಲ್ಲಿ ಪ್ರಶ್ನೆ ಕೊಟ್ಟಾಗ್ಗೆ ಸರಕಾರವು ಅದಕ್ಕೆ ಉತ್ತರಕೊಡಲಿಲ್ಲ ತುರಂಗದಲ್ಲಿರುವ ಸಾವಿರಾರು ಜನ ಕೈದಿಗಳಲ್ಲಿ ಆ ಸನ್ಯಾಸಿಯೊಬ್ಬನು ಆವನೇನು ಚಂದಪ್ಪನಲ್ಲ. ಆವನಬಗ್ಗೆ ನಮಗೇನೂ ಗೊತ್ತಿಲ್ಲವೆಂದು ಸರಕಾರದ ಅಧಿಕಾರಿಗಳು ಜನರ ಪ್ರೀತಿ ವಿಶ್ವಾಸಗಳಿದ್ದ ಸನ್ಯಾಸಿಯಬಗ್ಗೆ ಅನುಚಿತವಾಗಿ ಹೀಗೆ ನಿಷ್ಠುರವಾಗಿ ಹೇಳಿದರು. ಮಾತನಾಡಿದ್ದನ್ನು ಮರಳಿ ತೆಗೆದುಕೊಳ್ಳಲು ಸರಕಾರವು ನಿರಾಕರಿಸಿದ್ದರಿಂದ ಲೋಕನಿಯುಕ್ತ ಸಭಾಸದರು ಸಭೆ ಬಿಟ್ಟು ಹೊರಗೆ ಹೋದರು!

೩ ನೇ ವರ್ಗದ ರೇಲ್ವೇ ದರಗಳನ್ನು ಕಡಿಮೆಮಾಡಬೇಕೆಂದು ಸೇಠ ಗೋವಿಂದದಾಸರು 'ಕೌನ್ಸಿಲ್ ಆಫ ಸ್ಟೇಟ' ದಲ್ಲಿ ತಂದ ಸೂಚನೆಯನ್ನು ಸರಕಾರದವರು ವಿರೋಧಿಸಲು, ಅದು ಸ್ವೀಕೃತವಾಗಲಿಲ್ಲ. ಇದೇ ಸಭೆಯಲ್ಲಿ ಕರ್ನಾಟಕದ ಡಾ ಯೂ ರಾಮರಾಯರು, ಪೋಷ್ಟ ಹಾಗೂ ತಂತಿ ಭಾಗಗಳನ್ನು ಪ್ರತ್ಯೇಕಿಸಬೇಕೆಂದೂ, ಹಾಗೆ ಮಾಡಿದರೆ ಕಾರ್ಡು, ಪಾಕೀಟಗಳ ಬೆಲೆ ಕಡಿಮೆಮಾಡಲು ಅವಕಾಶವಿದೆಂದೂ ಕೇಳಿಕೊಂಡರು ಇದೂ ಸರಕಾರದಿಂದ ವಿರೋಧಿಲ್ಪಟ್ಟು, ನಾಮಂಜೂರಾಯಿತು!

ನಾಭಾದ ಮಹಾರಾಜರಿಗೆ ಸಲ್ಲುವ ಪೆನ್ಶನ್ ಹಣವನ್ನು ಇನ್ನೂ ಯಾಕೆ ಕೊಟ್ಟಿಲ್ಲವೆಂದು ದಿಲ್ಲಿಯ ದೊಡ್ಡ ಮಂಡಲದಲ್ಲಿ ಶ್ರೀ ಸಿಂಹರವರು ಪ್ರಶ್ನೆಮಾಡಿದ್ದಾರೆ. ಇತ್ತ ಮಹಾರಾಜರಿಗೆ ಬಾಕೀಯಿದ್ದ ಹಣವೆಲ್ಲ ಈಗೀಗ ಕಳಿಸಿದೆ.

ಮದ್ರಾಸ ಕರ್ನಾಟಕ

ಉಡುಪಿಯ ಶ್ರೀ ಶ್ರೀ ಅಧಮಾರು ಮಠಾಧೀಶರು ತಮ್ಮ ಪ್ರಿಯ ಶಿಷ್ಯರಾದ ಮುತ್ತಿಗೆ, ಶೀಜಾಸ್ಥರ ಹಾಗೂ ಭಂಡಾರಕೆರೆ, ಮಠಗಳ ಸ್ವಾಮಿಗಳವರೊಡನೆ ಅಕ್ಕಾರದು ಮೊದಲಾದ ಜಿಲ್ಹೆಗಳನ್ನು ಸಂಚರಿಸಿ ಈಗ್ಗ ಮದರಾಸಿಗೆ ದಯಮಾಡಿಸಿದ್ದಾರೆ.

ಮದ್ರಾಸ ಪ್ರಾಂತದ ಮಂತ್ರಿಗಳಾಗಿದ್ದ ಬಳ್ಳಾರಿಯ ಶ್ರೀ ರಂಗನಾಥ ಮುದಲಿಯಾರರು ಇದೇ ೧೮ ನೇ ತಾರೀಖಿನಿಂದ ೨೨ ರ ವರೆಗೆ ಮಂಗಳೂರ ಜಿಲ್ಹೆಯಲ್ಲಿ ಸಂಚರಿಸುವರು

ಮೂಲ್ಕಿಯಲ್ಲಿ ಒಂದು ಧರ್ಮಾರ್ಥ ರಾತ್ರಿಶಾಲೆಯು ಸ್ಥಾಪಿಸಲ್ಪಟ್ಟಿದೆ. ಈಗಲೇ ೨೫ ವಿದ್ಯಾರ್ಥಿಗಳು ಸೇರಿದ್ದಾರೆ.

ಶ್ರೀಯುತರುಗಳಾದ ಪೂಜಾರ ಸಿದ್ಧರಾಯರೂ, ಉಳ್ಳಾಲ ಸಂಜೀವರಾಯರೂ ಮಂಗಳೂರಿನಲ್ಲಿ ಖಾದಿಯನ್ನು ಬಹಳ ಮುಖಾಂತರ ಮಾರಿದರು. ಒಂದೇ ವಾರದಲ್ಲಿ ಸಾವಿರಾರು ರೂಪಾಯಿಗಳ ವ್ಯಾಪಾರವಾಯಿತು.

ಕರ್ನಾಟಕದ ಶಿಲಾಲಿಪಿಗಳು

(ಲೇಖಾಂಕ ೩)

ಕಳೆದ ಲೇಖನದಲ್ಲಿ ಕರ್ನಾಟಕದ ಶಿಲಾಲಿಪಿಗಳ ಸಂಗ್ರಹದ ಬಗ್ಗೆ ವಿಸ್ತಾರವಾಗಿ ಬರೆದಿರುವೆವು ಮತ್ತು ಆಯಾ ಭಾಗಗಳಿಂದ ಆಯಾ ಕಾಲದಲ್ಲಿ ದೊರೆತ ಲಿಪಿಗಳ ಸಂಖ್ಯೆಯನ್ನೂ ಒಂದು ಪಟ್ಟಿಯಲ್ಲಿ ತೋರಿಸಿರುವೆವು. ಪ್ರಸ್ತುತ, ಅವುಗಳ ಪ್ರಸಿದ್ಧಿಯನ್ನು ಕುರಿತು ಈ ಲೇಖನದಲ್ಲಿ ಸಂಪೂರ್ಣವಾಗಿ ವಿವೇಚಿಸುವೆವು

ಶಾಸನ ಖಾತೆಯು ಹುಟ್ಟುವ ಪೂರ್ವದಲ್ಲಿಯೇ ಅಂದರೆ ೧೮೮೬ ರ ಮುಂಚೆಯೇ ಫ್ಲೀಟರು ಕೆಲ ಲಿಪಿಗಳನ್ನು ಸಂಗ್ರಹಿಸಿ ಸ್ವಂತವಾಗಿ ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಸಿದ್ಧಗೊಳಿಸಿದರು. ಇಂಡಿಯನ್ ಅಂಟಿಕ್ವೆರಿ, ಜರ್ನಲ್ ಆಫ್ ದಿ ಬಾಂಬೆ ಬ್ರ್ಯಾಂಚ (ರಾಯಲ್ ಏ, ಸೊಸಾಯಿಟಿ) ಆರ್ಕ್ಯಾಲಾಜಿಕಲ್ ಸರ್ವೇ ಆಫ್ ವೆಸ್ಟರ್ನ ಇಂಡಿಯಾ ಇವೇ ಮೊದಲಾದ ಪತ್ರಿಕೆಗಳಲ್ಲಿ ಅವರು ಪ್ರಕಾಶಗೊಳಿಸಿದ ಲಿಪಿಗಳು ಅಡಕವಾಗಿವೆ ‘ ಸಂಸ್ಕೃತ ಅಂಡ ಓಲ್ಡ ಕ್ಯಾನರೀಜ ಇನ್‌ಸ್ಕ್ರಿಪ್ಸನ್ಸ್ ’ ಎಂಬ ಲೇಖಮಾಲಿಕೆಯನ್ನು ಇಂಡಿಯನ್ ಅಂಟಿಕ್ವೆರಿಯಲ್ಲಿಯೂ, ಕರ್ನಾಟಕದ ಕೆಲ ಮಹಾಸಾಮಂತರ ಬಗ್ಗೆ ಲೇಖನಗಳನ್ನು ಜರ್ನಲ್ ಆಫ್ ದಿ ಬಾಂಬೆ ಬ್ರ್ಯಾಂಚ (ರಾ. ಏ. ಸೋ.)ದಲ್ಲಿಯೂ ಪ್ರಕಟಿಸಿದರು. ‘ ಆರ್ಕ್ಯಾಲಾಜಿಕಲ್ ಸರ್ವೆ ಆಫ್ ವೆಸ್ಟರ್ನ ಇಂಡಿಯಾ ’ ದ ೪ ಸಂಪುಟಗಳಲ್ಲಿ (೧೮೭೪-೧೮೮೬ ರ ಮಧ್ಯದಲ್ಲಿ) ಡಾ. ಬರ್ಜೆಸ್‌ರವರು ಹಂಪಿ, ಬಾದಾಮಿ ಮೊದಲಾದ ಐತಿಹಾಸಿಕ ಪ್ರಸಿದ್ಧ ಸ್ಥಳಗಳಿಂದ ಕೆಲವು ಲಿಪಿಗಳನ್ನು ಮಾತ್ರ ಪ್ರಸಿದ್ಧಿಸಿರುವರು ಇವೆಲ್ಲ ಲೇಖನಗಳ ಆಧಾರದಿಂದ ಫ್ಲೀಟ ಸಾಹೇಬರು ‘ Dynasties of the Kanarese distiects ’ ಎಂಬ ಅಮೂಲ್ಯವಾದ ಪುಸ್ತಕವನ್ನು ಮೊದಲಿಗೆ ೧೮೮೨ರಲ್ಲಿ ಬೆಳಕಿಗೆ ತಂದರು. ಅಗ್ಗೆ ಇನ್ನೂ ಶಾಸನ ಖಾತೆಯು ಸ್ಥಾಪಿತವಾಗಿದ್ದಿಲ್ಲವೆಂಬುದು ವಾಚಕರ ಲಕ್ಷ್ಯದಲ್ಲಿರಬಹುದು ಮುಂದೆ ೧೮೯೬ರಲ್ಲಿ ಫ್ಲೀಟರು, ಹೊಸದಾಗಿ ದೊರೆತ ಲಿಪಿಗಳಿಂದ ಅವಶ್ಯವಿದ್ದ ಹೆಚ್ಚು ಕಡಿಮೆಗಳನ್ನು ಮಾಡಿ, ತಮ್ಮ ಪುಸ್ತಕದ ಎರಡನೆಯ ಆವೃತ್ತಿಯನ್ನು ತೆಗೆದರು. ಅದು ಎಲ್ಲ ವಿಮರ್ಶಕರಿಗೂ ಈಗ ಆಧಾರಭೂತವಾಗಿದೆ.

ಅಂತು ಮೇಲೆ ಕಾಣಿಸಿದ ಪತ್ರಿಕೆಗಳಲ್ಲಿ ಕೆಲ ಕನ್ನಡ ಲಿಪಿಗಳು ಪ್ರಸಿದ್ಧವಾಗಿದ್ದರೂ ಅವೆಲ್ಲ ವೈಯಕ್ತಿಕ ಅಥವಾ ವಿಶಿಷ್ಟ ಸಂಘದವಾದದ್ದರಿಂದ ಅವುಗಳಲ್ಲಿ ಶಾಸನಗಳ ಪ್ರಮಾಣಭೂತವಾದ ಅಷ್ಟುಗಳನ್ನು ಪ್ರಸಿದ್ಧಿಸುವದಾಗಿಲ್ಲ. ಆದ್ದರಿಂದ ಸರಕಾರದವರು ಕೆಲ ಪಾಶ್ಚಾತ್ಯ ವೈಜ್ಞಾನಿಕರ ಆಗ್ರಹದ ಮೇರೆಗೆ ಸ್ವಂತವಾದ ಪತ್ರಿಕೆಗಳನ್ನು ಹೊರಡಿಸಬೇಕೆಂದು ನಿಶ್ಚಯಿಸಿ, Epigrphica India ’ ಮತ್ತು ‘ South Indian, Insiption ’ ಎಂಬ ಗ್ರಂಥಗಳ ಪರಿಷ್ಕಾರಕ್ಕೆ ಡಾ. ಹುಲ್ಜರವರನ್ನು ೧೮೮೬ ರಲ್ಲಿ ನೇಮಿಸಿದರು. ಇವೆರಡೂ ಗ್ರಂಥಗಳ ಸಂಪಾದನೆಯ ಕೆಲಸಕ್ಕೆ ನೆರವಾಗಬೇಕೆಂದು ಒಡನೆಯೇ ಕೈ ರಾವಬಹದ್ದೂರ ವೆಂಕಯ್ಯ ಮತ್ತು ರಾವಬಹದ್ದೂರ ಕೃಷ್ಣಶಾಸ್ತ್ರಿಗಳನ್ನು ಸೇರಿಸಿಕೊಂಡರು. ಲಿಪಿಗಳ ವಾರ್ಷಿಕ ಸಂಗ್ರಹವೂ, ಪ್ರಸಿದ್ಧಿಯ ಕಾರ್ಯವೂ ಚನ್ನಾಗಿ ನಡೆಯುತ್ತಿದವು

ಆದರೆ ಬರಬರುತ್ತ ಸಂಗ್ರಹದ ಕೆಲಸವು ತಡೆಯಿಲ್ಲದೆ ನಡೆದರೂ ಅದರ ಜೊತೆಗೆ ಪ್ರಸಿದ್ಧಿಯ ಕಾರ್ಯವು ಅಷ್ಟೊಂದು ಒತ್ತರದಿಂದ ಸಾಗಲಿಲ್ಲವೆಂದು ತೋರುತ್ತದೆ ಯಾಕಂದರೆ ೧೮೯೦ ರಲ್ಲಿಯೇ ‘ S. I. I. ’ ಪ್ರಾರಂಭವಾದರೂ ಅಲ್ಲಿಂದ ಇಲ್ಲಿಯವರೆಗೆ ಅಂದರೆ ೪೦ ವರ್ಷಗಳಲ್ಲಿ ಐದೇ ಐದು (೫) ಸಂಪುಟಗಳು ಹೊರಟಿವೆ ಮತ್ತು ಅವುಗಳಲ್ಲಿ ಲಿಪಿಗಳನ್ನು ಯಾವದೊಂದು ವಿಶಿಷ್ಟ ತತ್ವವನ್ನನುಸರಿಸಿ ಪ್ರಸಿದ್ಧಮಾಡಿದಂತೆ ತೋರುವದಿಲ್ಲ ಮೊದಲಿನ ಮೂರು ಸಂಪುಟಗಳಲ್ಲಿ ಸಂಗ್ರಹದ ಕಾಲಕ್ರಮ (homological order of collection) ಇಲ್ಲದೆ, ಲಿಪಿಗಳ ಪ್ರಸಿದ್ಧಿಯ ಕಾಲದ ಪೂರ್ವದಲ್ಲಿ ಸಿಕ್ಕ ಮಹತ್ವವಾದ ಶಾಸನಗಳನ್ನು ಮಾತ್ರ ಆರಿಸಿ ಮುದ್ರಿಸಿರುತ್ತದೆ ಇದಲ್ಲದೆ ಒಂದು ಸಂಪುಟವು ಹೊರಬೀಳಲಿಕ್ಕೆ ಅವಶ್ಯವಿದ್ದದಕಿಂತಲೂ ಹೆಚ್ಚು ಕಾಲವು ಹತ್ತಿದೆ ಈ ನಿರ್ಧಾರವು ಕೆಳಗಿನ ಪಟ್ಟಿಯಲ್ಲಿ ಸ್ಪಷ್ಟವಾಗುವದು.

ಸಂಪುಟ	ಪ್ರಸಿದ್ಧವಾದ ಕಾಲ	ಯಾವವರ್ಷಗಳ ಸಂಗ್ರಹವು ಅಡಕವಾಗಿದೆ	ಶರಾ
೧	೧೮೯೦	ಸಂಪುಟ ೧ರಿಂದ ೩	೧-೩ ಸಂಪುಟಗೆ
೨, ಭಾಗ ೧	೧೮೯೧	(ಪೂರ್ತಿ) ಯ ವರೆಗೆ	ಪೀಠಿಕೆ ಭಾಷಾಂ
,, ೨	೧೮೯೨	ಸಂಗ್ರಹದ ಕಾಲಕ್ರ	ತರ, ಟಿಪ್ಪಣಿಗ
,, ೩	೧೮೯೫	ಮವಿಲ್ಲವೆ ಮಹತ್ವದ	ಳು ಇರುತ್ತವೆ ೪
,, ೪	೧೯೧೩	ತಮಿಳು ಲಿಪಿಗಳು	ನೆಯ ಸಂಪುಟ
,, ೫	೧೯೧೬	ಮಾತ್ರ ಪ್ರಸಿದ್ಧಿಸಲ್ಪ	ದಿಂದ ಲಿಪಿಗಳ
		ಟ್ಟಿವೆ ೧ ನೆಯ ಸಂಪು	ಮೂಲಗಳನ್ನು
೩, ಭಾಗ ೧	೧೮೯೯	ಟದಲ್ಲಿ ಹಂಪಿಯ ೧೨	ಮಾತ್ರ ಪ್ರಸಿದ್ಧಿ
,, ೨	೧೯೦೩	ಲಿಪಿಗಳು ಬಂದಿವೆ	ಸಿರುತ್ತದೆ
,, ೩	೧೯೨೦		
		೧೮೮೭ ೧೮೯೩ ರಲ್ಲಿ	
೪ .	೧೯೨೪	ಆದ ಸಂಗ್ರಹ.	
೫	೧೯೨೬	೧೮೯೩ ೧೮೯೯ ರಲ್ಲಿ ಆದ ಸಂಗ್ರಹ	

(ಮುಂದೆ ಸಾಗುವದು)

ಹಾವಿನ ವಿಷಕ್ಕೆ ಔಷಧ.

ಈ ಕೆಳಗಿನ ಎರಡು ಉಪಾಯಗಳು ಪರಿಣಾಮಕಾರಕವಿರುವವೆಂದು ಮಾಡರ್ನ ರಿವ್ಯೂದಲ್ಲಿ ಪ್ರಸಿದ್ಧವಾಗಿದೆ. ಪ್ರಸಂಗ ಬಂದಾಗ ಪರೀಕ್ಷಿಸಬೇಕು

(೧) ಹಾವು ಕಚ್ಚಿದ ಕೂಡಲೇ ಆದಷ್ಟು ಬೇಗ ಸುಮಾರು ೨೦ ತೊಲೆಯಷ್ಟು ಬಾಳೆ-ದಿಂಡಿನ ನೀರು ತೆಗೆದು ಕುಡಿಸಬೇಕು. ಆಳು ದೊಡ್ಡದಿದ್ದರೆ ೪೦ ತೊಲೆಯ ವರೆಗೆ ಕುಡಿಸಿದರೂ ಅಪಾಯವಿಲ್ಲ ಇದರಿಂದ ೧೦೦ ರಲ್ಲಿ ೯೪ ಧನಕ್ಕೆ ಗುಣವಾಗಿದೆಯೆಂದು ಸಿಂಹಲದಲ್ಲಿಯ ಅನುಭವಿಕರು ಬರೆದಿದ್ದಾರೆ.

(೨) ಗಾಂಜಾ ಸೇದುವವರ ಚಿಲುಮಿಯಲ್ಲಿ ತಳಕ್ಕೆ ಕೂತ ಕರೇ ಕಿಟ್ಟವನ್ನು ತೆಗೆದು ನೀರಿನಲ್ಲಿ ತೇಯ್ದು ಹಾವು ಕಚ್ಚಿದ ಸ್ಥಳದಿಂದ ಮೇಲಕ್ಕೆ ೪ ಬೊಟ್ಟು ಬಿಟ್ಟು ಬೊಟ್ಟುಬಿಟ್ಟು ಎರಡು ಮೂರು ಘಾಯ ಮಾಡಿ ರಕ್ತದಲ್ಲಿ ಬೆರೆಯುವಂತೆ ಮಾಡಬೇಕು. ಹಾವು ಕಚ್ಚಿ ಹೆಚ್ಚು ಕಡವಾಗಿದ್ದರೆ ಘಾಯದಿಂದ ಹೆಚ್ಚು ಮೇಲಕ್ಕೆ ಆ ಕಿಟ್ಟವನ್ನು ರಕ್ತದಲ್ಲಿ ಸೇರಿಸಬೇಕು

ಪುಸ್ತಕ ಪರಿಚಯ

ತಾರಾನಾಥ ತರ್ಕವಾಚಸ್ಪತಿ.

(ಬರಹಗಾರರು - **ಹೊಸಕೆರೆ ಚಿದಂಬರಯ್ಯನವರು**)

ಕನ್ನಡದ ಚಿನ್ನವು ದಿನದಿನಕ್ಕೆ ಕಾಂತಿಗೊಳ್ಳುತ್ತಿದೆ. ನುಡಿಯ ಬೆಳಸವು ಸರ್ವಾಂಗೀಣವಾಗಿ ಸಾಗಿದೆ. ಗದ್ಯ ಪದ್ಯದ ಹೆಜ್ಜೆಯ ಭರದಿಂದ ಮುಂದರಿದಿವೆ. ಕಥೆಗಳೂ, ಕಾದಂಬರಿಗಳೂ, ಇತಿಹಾಸಗಳೂ, ವಿಮರ್ಶಾತ್ಮಕ ಲೇಖನಗಳೂ ಎಲ್ಲ ಮೊಲ್ಲಿನ ಸಾಹಿತ್ಯಶ್ರೇಣಿಯಲ್ಲಿ ಅತಿ ಸೊಗಸಾಗಿದೆ. ಜೀವನ ಚರಿತಗಳ ದರ್ಜೆ ಇದೀಗ ... 'ತರ್ಕವಾಚಸ್ಪತಿ' ಎಂಬುದೊಂದು ವಿಭೂತಿಯ ಜೀವನಚರಿತೆ. ತಾರಾನಾಥರು ಸಂಸ್ಕೃತ ಪಂಡಿತರೂ, ವ್ಯವಹಾರದಕ್ಷರೂ, ವಿದ್ಯಾಭಿಮಾನಿಗಳೂ, ತತ್ವಜ್ಞಶಾಲಿಯೂ, ತರ್ಕಕುಶಲರೂ, ಪರವಾದಪ್ರವೀಣರೂ ಆಗಿದ್ದರು. ಇವರು ವಂಗದ ಕಡೆಯವರು. ಆದರೆ ವಿಭೂತಿಯು ದೇಶಕಾಲಾದ್ಯನವಚ್ಛಿನ್ನನು. ವಂಗದೇಶದವನಾದರೂ, ಹಿಂದವಾಸಿಯೇ ಆಗಿದ್ದು ಈ ದೃಷ್ಟಿಯಿಂದ ಜಗತ್ತಿಗೆ ಆದರ್ಶಭೂತನಾಗಿರುವಂತೆ, ಕನ್ನಡಿಗರಿಗೆ ಕನ್ನಡಿಗನಾಗಿರುವನು. ಇವನು ಮಾಡಿದ ಪರಿಶ್ರಮವನ್ನು ನೋಡಿದರೆ, ಎಲ್ಲ ತರದ ಜನರಿಗೂ ಸ್ಫೂರ್ತಿಯುಂಟಾಗುವದು. ಇವರ ಜೀವನದಿಂದ 'A Hero is a hero at all points' ಎಂಬ ತತ್ವವು ಮನದಟ್ಟಾಗುವದು. ವಿದ್ಯಕಲಿತರೆ, ಇವರಂತೆ ಕಲಿಯಬೇಕು. ಇವರಲ್ಲಿಯ ಲೌಕಿಕಜ್ಞತೆಯು ಅನ್ಯಾದೃಶವಾದುದು. ನಮ್ಮಲ್ಲಿ ಓದಿ ಮುಗಿಸಿದ ಕೂಸುಬಟ್ಟರೇ ಬಹಳ. ತಾರಾನಾಥರು ಸೇವೆಯ ಕೆಲಸವನ್ನು ಮಾಡಿ ತೋರಿಸಿದರು; ವ್ಯಾಪಾರವನ್ನು ನಡೆಸಿ ಬೆಳಗಿಸಿದರು. ಸಂಸ್ಕೃತ ಪುಸ್ತಕಗಳನ್ನು ಅಚ್ಚುಹಾಕಿಸಿ, ಜ್ಞಾನಭಾಂಡಾರವನ್ನು ಕಾಯ್ದರು. ವಿದ್ಯಾರ್ಥಿಗಳಿಗೆ ಊಟಹಾಕಿ ವಿದ್ಯೆಕಲಿಸಿ, ಕುಲಸಂಪದವನ್ನು ಸಂಪಾದಿಸಿದರು. ಸ್ವತಃ ನೂರು ನೂರು ಜನರಿಗೆ ಅಡಿಗೆ ಮಾಡಿ ಊಟಕ್ಕೆ ಹಾಕಿ, ಪಾಕದ ಮಹಾತ್ಮ್ಯವನ್ನು ಹೆಚ್ಚಿಸಿದರು. ಒಟ್ಟಿನಮೇಲೆ ಹೇಳುವದೆಂದರೆ, ಇವರು ದಿವ್ಯ ಪುರುಷರು. ವಿಭೂತಿಗಳ ಚರಿತ್ರಗಳು ದೀಪಟಿಗೆಗಳಂತೆ. ಇಂಥದ ದೀಪಟಿಗೆಯನ್ನು ಕನ್ನಡಿಗರ ಕೈಯಲ್ಲಿ ಕೊಟ್ಟದ್ದಕ್ಕಾಗಿ ನಾವು ಬರಹಗಾರರಿಗೆ ಋಣಿಯಾಗಿದ್ದೇವೆ. ಭಾಷೆಯು ಕೆಲವೆಡೆಯಲ್ಲಿ ಸಂಸ್ಕೃತದ ಎಳೆತಕ್ಕೆ ಸಿಕ್ಕು ತೊಂದರೆಗೀಡಾಗಿದೆ.

ಶ್ರೀ ಪುರಂದರದಾಸ ವಿರಚಿತ
— ದ್ರೌಪದಿ ಉಪಯೋಗ. —

ಇದು ಗವಾನಂದ ಕೆರೋಡಿ ಸುಬ್ಬರಾವ ಬಿ ಎ ಇವರಿಂದ ಸಂಗ್ರಹಿಸಲ್ಪಟ್ಟು ರಚಿಸಿದ ಚಿಕ್ಕ ಹೊತ್ತಿಗೆ.

ದುರ್ಯೋಧನನ ಸಭೆಯಲ್ಲಿ ದುಶ್ಶಾಸನನ ಕೈಗೆ ಸಿಕ್ಕ ದ್ರೌಪದಿಯು ವಸ್ತ್ರಾಪಹರಣ ಕಾಲದಲ್ಲಿ ಶ್ರೀಕೃಷ್ಣನನ್ನು ಪ್ರಾರ್ಥಿಸಿ ಅಕ್ಷಯ ವಸ್ತ್ರವನ್ನು ಪಡೆದ ಚಿಕ್ಕ ಕತೆಯು ಭಾವರಸಪೂರ್ಣವಾದ ೧೫ ಪದ್ಯಗಳಲ್ಲಿ ವರ್ಣಿಸಲ್ಪಟ್ಟಿದೆ. ಹೊತ್ತಿಗೆಯು ಚಿಕ್ಕದಿದ್ದರೂ ... ಸಂಗ್ರಾಹಕರು ಪ್ರಸ್ತಾವನೆಯಲ್ಲಿ 'ವಸಂತ' ಕುಸುಮ ... ಗಳನ್ನು ಉಪಯೋಗಿಸಿದ್ದರೆ ಒಳಿತಾಗುತ್ತಿತ್ತು.

'ಕನ್ನಡಿಗ'ನ ಬಿನ್ನಹ.

"ಕನ್ನಡಿಗ"ನ ಕಾರ್ಯಾಲಯದಿಂದ ಉತ್ತರವನ್ನಪೇಕ್ಷಿಸುವವರು ತಮ್ಮ ಪತ್ರದೊಡನೆ ಅಂಚೇಚೀಟು ಕಳಿಸದಿದ್ದರೆ ಉತ್ತರವು ದೊರೆಯಲಾರದು.

† † †

ಇನ್ನುಮುಂದೆ 'ಕನ್ನಡಿಗ'ನಲ್ಲಿ ಕನ್ನಡ ನಾಟಕ ಮಂಡಳಿಗಳ ಏರಿಳಿತಗಳ ವಿಷಯಕ್ಕೆ ಪ್ರತಿ ಸಲಕ್ಕೂ ಬರೆಯುವದನ್ನು ಗೊತ್ತುಮಾಡಿರುವೆವು. ಆದುದರಿಂದ ಕರ್ನಾಟಕ ಎಲ್ಲ ನಾಟಕ ಸಂಘದವರು ಹೋದ ಹೋದ ತಮ್ಮ ಮೊಕ್ಕಾಂ ಗಳನ್ನೂ ಆ ಆ ಊರಲ್ಲಿ ಕಂಪನಿಗೆ ಸಿಗುವ ಉತ್ತೇಜನವನ್ನೂ ಕಷ್ಟ ನಷ್ಟ ಸುಖಗಳನ್ನೂ ಬರೆದು ತಿಳಿಸುತ್ತಿರಬೇಕು. ಮೊಕ್ಕಾಂ ಬದಲಾಯಿಸುವಾಗ್ಗೆ 'ಕನ್ನಡಿಗ'ನಿಗೆ ಮುಂದಿನ ಸೂಚನೆಯನ್ನು **ಕೊಡಬೇಕೆಂದು** ಕೋರಿಕೆ.

* * *

ಸಿವಪ್ಪಣಿ ಇಲಕಲ್ಲ ರೇಲ್ವೆ ಮಾರ್ಗದ ಸ್ಟೇಶನ್ನುಗಳ ವಿಷಯವಾಗಲೀ ಬೇರೆ ಯಾವ ವಿಷಯವೇ ಆಗಲಿ **ಜನರಲ್ ಟ್ರ್ಯಾಫಿಕ್ ಮ್ಯಾನೇಜರ ಮದ್ರಾಸರವರ** ಕಡೆಗೆ ಬರದು **ತಿಳಕೊಳ**ಬೇಕು.

× × ×

ವರ್ಗೀಕೃತ ಪ್ರಕಟನೆಗಳು

ಇದೊಂದು ಹೊಸಮಾದರಿಯನ್ನು ಕನ್ನಡಿಗರಿಗಾಗಿ 'ಕನ್ನಡಿಗ'ನು ಪ್ರಾರಂಭಿಸುವನು. ಈ ಪ್ರಕಟನೆಗಳಲ್ಲಿ ಜನರು ತಮಗೆ ಬೇಕಾದ ಯಾವ ವಸ್ತುಗಳ ಬಗ್ಗೆಯೂ ಜಾಹೀರಾತನ್ನು ಕೊಡಬಹುದು. ಉದಾಹರಣಾರ್ಥವಾಗಿ ವಿದ್ಯಾರ್ಥಿಗಳು ಹಳೇ ಗ್ರಂಥಗಳಿಗಾಗಿ; ಸಾಮಾನುಗಳನ್ನು ಕಳೆದುಕೊಂಡವರು ದೊರಕಿಸಿಕೊಳ್ಳುವದಕ್ಕಾಗಿ, ಹಳೇ ಹೊಸ ಸಾಮಾನು ಮಾರತಕ್ಕವರು ಗಿರಾಕಿಗಳನ್ನು ದೊರಕಿಸಲಿಕ್ಕಾಗಿ, ಗಿರಾಕಿಗಳು ಸಾಮಾನುಗಳ ಒಡೆಯರನ್ನು ಶೋಧಿಸುವದಕ್ಕಾಗಿ; - ಭಂಡವಾಲು ಬೇಕಾದವರೂ ಮನೆ ಬಾಡಿಗೆಕೊಡತಕ್ಕವರೂ, ಅಥವಾ ಬಾಡಿಗೆಯಿಂದ ತೆಗೆದು ಕೊಳ್ಳುವವರೂ ತಮ್ಮ ಇಷ್ಟಪೂರ್ತಿಗಾಗಿ, ಇತ್ಯಾದಿ ಇತ್ಯಾದಿ. ಈ ಪದ್ಧತಿಯು ಇಂಗ್ಲೀಷ ಪತ್ರಿಕೆಗಳಲ್ಲೆಲ್ಲ ಲೋಕಪ್ರಿಯವಾಗಿದೆ. ಕನ್ನಡದಲ್ಲಿಯಾದರೂ, ಲೋಕಪ್ರಿಯವಾಗುವದೆಂದು ನಾವು ನಂಬುತ್ತೇವೆ. ಇದರ ಬಗ್ಗೆ ಕೆಳಗಿನಂತೆ ನಿಯಮಗಳಿರುತ್ತವೆ.

೨೦ ಶಬ್ದಗಳಿಗೆ ೧ ರೂ.

ಮುಂದಿನ ಪ್ರತಿಯೊಂದು ಶಬ್ದಕ್ಕೆ ೧ ಆಣೆ
ಪ್ರಕಟನೆ ಯೊಂದಿಗೆ ಹಣವು ಮುಂಗಡವಾಗಿ ಬರಬೇಕು.

ಜಾಹೀರಾತ ದಾರರು ಸಂಪೂರ್ಣ ಹೆಸರು ಮತ್ತು ವಿಳಾಸ ಕಳುಹಿಸಿ ಕೊಡಬೇಕು. ಅವಶ್ಯವಿದ್ದರೆ ಮಾತ್ರ ಇವು ಪ್ರಕಟಿಸಲ್ಪಡುವವು.

ಹೆಸರು ವಿಳಾಸಗಳನ್ನು ಪ್ರಕಟಿಸಲು ಇಚ್ಛೆ ಇಲ್ಲದವರಿಗೆ ಒಂದು ಸಂಖ್ಯೆಯು ಕೊಡಲ್ಪಡುವದು. "ವಿಳಾಸ, ಸಂಖ್ಯೆ..... ಕನ್ನಡಿಗ" ಇದಕ್ಕೆ ಸಹ ಬೆಲೆ ಕೊಡಬೇಕಾಗುವದು.

ಸ್ಥಳಿಕರು ನಮ್ಮ ಕಾರ್ಯಾಲಯಕ್ಕೆ ಬಂದು ಉತ್ತರವನ್ನು ನೋಡಿಕೊಳ್ಳಬೇಕು. ಪರಸ್ಥಳದವರಿಗೆ ಪೋಷ್ಟಿನಿಂದ ಅಂಚೇವೆಚ್ಚ ಪ್ರತ್ಯೇ

ವಿಲ್ಲದ ಉತ್ತರಗಳು ಕಳಿಸಲ್ಪಡವವು. ಆದರೆ ಪತ್ರವ್ಯವಹಾರ ನಡೆಸಿದೆ, ಅಂಟೀಪೆಟ್ಟ ಕಳಿಸಬೇಕು ಉತ್ತರಗಳು ಪರಸ್ಥಳದವರಿಗೆ ದೊರೆಯದೇ ಇದ್ದ ಪಕ್ಷದಲ್ಲಿ ನಾವು ಜವಾಬದಾರರಲ್ಲ ನಾಲ್ಕಾಣೆ 'ಪೋಸ್ಟೇಜ' ಕೊಟ್ಟಲ್ಲಿ ರಜಿಸ್ಟರ ಮೂಲಕ ಕಳಿಸುವೆವು ಜಾಹೀರಾತಗಳಿಗೆ ಉತ್ತರ ಬರೆಯುವವರು ಸ್ಪಷ್ಟವಾಗಿಯೂ ಶುದ್ಧವಾಗಿಯೂ ಕೆಳಗೆ ಕಾಣಿಸಿದಂತೆ ಬರೆಯಬೇಕು — "ವಿಲಾಸ ಸಂಖ್ಯೆ .. ಪ್ರಕಟನೆ ಶಾಖಾ, ಕನ್ನಡಿಗನ ಕಾರ್ಯಾಲಯ ಬಾಗಲಕೋಟೆ" ವಿಳಾಸಸಂಖ್ಯೆಗಳನ್ನು ಸ್ಪಷ್ಟವಾಗಿ ಬರೆಯುವದರ ಕಡೆಗೆ ಎಲ್ಲರೂ ಲಕ್ಷ್ಯಪೂರೈಸತಕ್ಕದ್ದು

ಬೇಕಾಗಿದ್ದಾರೆ.

ರಂಗಭೂಮಿಯ ಉದ್ಧಾರಕ್ಕಾಗಿ ಸುಶಿಕ್ಷಿತರ ನಟಕ ಸಂಘವನ್ನು ಸ್ಥಾಪಿಸಲು ಛಂದವುಳ್ಳ ಬೇಕಾಗಿದೆ ಕಲಾಪ್ರೇಮಿಗಳು ಪತ್ರವ್ಯವಹಾರವನ್ನು ಮಾಡಬೇಕು ವಿಳಾಸ ಸಂಖ್ಯೆ ೧ "ಕನ್ನಡಿಗ"

ಚಲುವೆಯಾದ ಬ್ರಾಹ್ಮಣ ಕನ್ಯೆ ಬೇಕಾಗಿದೆ; ಸುಶಿಕ್ಷಿತಳಿರಬೇಕು ವರನ ವಯಸ್ಸು ೩೦ ಉತ್ಪನ್ನವು ಚನ್ನಾಗಿದೆ.

ವಿಳಾಸ ಸಂಖ್ಯೆ ೨ "ಕನ್ನಡಿಗ"

ಕರ್ನಾಟಕದಲ್ಲಿ ಸ್ಥಾಪಿತವಾದ ಹೊಸ ಜಾಯಿಂಟ ಸ್ಟಾಕ ಕಂಪನಿಗೆ ಹಾಲುಗಾರರನ್ನು ಕೂಡಿಸುವವರು ಬೇಕಾಗಿದ್ದಾರೆ ೩೦ ೧೦೦ರೂಪಾಯಿಗಳ ಅಥವಾ ಕಮಿಶನ್ ವಿಳಾಸ ಸಂಖ್ಯೆ ೩ "ಕನ್ನಡಿಗ

ಸ್ತ್ರೀಯರನ್ನು ಶಹರ, ಹಳ್ಳಿಗಳಲ್ಲಿ ಗ್ರಂಥಗಳನ್ನು ಮಾರಾಟಮಾಡಲು ಉತ್ಸಾಹಿ ಸ್ತ್ರೀಯರು (ಏಜಂಟರು) ಬೇಕಾಗಿದ್ದಾರೆ ಪಗಾರ ದೊರೆಯುವದು ವಿಳಾಸ— "ಸ್ತ್ರೀಧರ್ಮ" ಧಾರವಾಡ

'ಕನ್ನಡಿಗ' ನ ಚಂದಾದಾರರನ್ನು ಹೆಚ್ಚಿಸಲು ಮತ್ತು ಜಾಹೀರಾತುಗಳನ್ನು ದೊರಕಿಸಲು ಪ್ರಾಮಾಣಿಕ ಹಾಗೂ ಉತ್ಸಾಹಿ ವ್ಯವಹಾರಜ್ಞರು ಬೇಕು. ಕಮಿಶನ್ ದೊರೆಯುವದು

"ಕನ್ನಡಿಗ" ಕಾರ್ಯಾಲಯ ಬಾಗಲಕೋಟೆ.

ಮಾರಾಟ.

ನಾಲ್ಕು ತಿಂಗಳಿಂದ ಕೊಂಡ ಹೊಸ "ಗ್ರಾಮೊಫೋನ" ಮಾರಲ್ಪಡುವದು. ಪ್ಲೇಟುಗಳೂ ಇವೆ ವಿಳಾಸ ಸಂಖ್ಯೆ ೪ "ಕನ್ನಡಿಗ"

ರಿಷ್ಟವಾಚದ ಹಳೇ ಬಂಗಾರ ಸೀರಿನ ಸರಪಳಿ ಮಾರಲ್ಪಡುವದು ಬೆಲೆ ೩-೮-೦ ವಿಳಾಸ ಸಂಖ್ಯೆ ೫ "ಕನ್ನಡಿಗ"

ಪುಸ್ತಕಗಳು.

ಕೀರ್ತನವಿಜಯ ಮಾಸಿಕದಲ್ಲಿ ಪ್ರಕಟವಾದ 'ವೃದ್ಧ ವಿವಾಹ' ಕೀರ್ತನ ಅಂಕ ಬೇಕಾಗಿದೆ. ಬೆಲೆ ತಿಳಿಸಬೇಕು

ವಿಳಾಸ ಸಂಖ್ಯೆ ೬ "ಕನ್ನಡಿಗ"

ಮಾರಾಟ

ಡೇರೇ (Tents) ಗಳಿಗೆ ಉಪಯೋಗಿಸುವ ಬಾಜು ಗೋಡೆ (Side walls) ಗಳು ಹಳೇವು ಮಾರಲ್ಪಡುವ.

ವಿಳಾಸ ಸಂಖ್ಯೆ ೭ "ಕನ್ನಡಿಗ"

ಮನೆಬಾಡಿಗಿ

ತಿಂಗಳಿಗೆ ೧ ೧೫ ರೂ, ಗಳಷ್ಟು ಕೋಣೆ ಬಾಡಿಗೆ ಬೇಕಾಗಿದೆ ಬಾಗಲಕೋಟೆಯ ಯಾವ ಭಾಗದಲ್ಲಿದ್ದರೂ ಸರಿ

ವಿಳಾಸ ಸಂಖ್ಯೆ ೮ "ಕನ್ನಡಿಗ"

ಭೈಂಡಿಂಗದ
ಹೊಸ ಉತ್ತಮ ವ್ಯವಸ್ಥೆ!

ನಾವು ಮುಂಗಳೂರಿನಿಂದ ಸುಶಿಕ್ಷಿತನಾದ ಓರ್ವ ಬಾಯಿಂಡರನನ್ನು ತರಿಸಿದ್ದೇವೆ ಮುಂಬೈ, ಮದ್ರಾಸ, ಮಂಗಳೂರ, ಬೆಂಗಳೂರುಗಳಲ್ಲಾಗುವ ಎಲ್ಲ ನಮೂನೆಯ ಬಾಯಿಂಡಿಂಗ ಕೆಲಸವು ನಮ್ಮಲ್ಲಿ ಒಳ್ಳೇ ಅಚ್ಚುಕಟ್ಟಾಗಿ ಮಾಡಲ್ಪಡುತ್ತದೆ ಎಲ್ಲ ಬಗೆಯ ಗೋಲ್ಡ ಗಿಲ್ಟ ಕೆಲಸವೂ ಆಗುತ್ತದೆ ಇನ್ನು ಮೇಲೆ ಇತ್ತಕಡೆಯ ಜನರು ಮುಂಬೈ, ಬೆಂಗಳೂರ, ಅಥವಾ ಮಂಗಳೂರಿಗೆ ಹೋಗುವ ಕಾರಣವಿಲ್ಲ! ಒಮ್ಮೆ ಅನುಭವ ತೆಗೆದುಕೊಂಡು ನೋಡಬೇಕು.

ವ್ಯವಸ್ಥಾಪಕ

ವಿದ್ಯಾರಣ್ಯ ಮುದ್ರಾಲಯ ಬಾಗಲಕೋಟೆ

ನೋಟೀಸು

ರ॥ ರಾ॥ ರಾಜೆ ಸಾಹೇಬ ಘತ್ತೇಸಾಹೇಬ ಬೆಲಿಫ ಮುಕ್ಕಾಮ ಬಾಗಲಕೋಟೆ ಇವರಿಗೆ

ತಮಗೆ ಮಿಸಿಮಾಕವವರ ಕಡೆಯಿಂದ ಕೊಡುವ ನೋಟೀಸು ಏನಂದರೆ-೧೯೨೭ನೇ ಮಾರ್ಚ ತಿಂಗಳ ಕೊನೆಗೆ ನಿರ್ಣಯವಾಗಿಯುತ್ತಿದೆ ನಮ್ಮ ನಿಮ್ಮ ಕರಾರುಪ್ರಕಾರ ನಿಮ್ಮಿಂದ ಬರತಕ್ಕ ಮೊದಲಿನ ಬಾಕಿ ರೂಪಾಯಿ ೨೫, ಮತ್ತು ಆಗಸ್ಟ ತಿಂಗಳಿಂದ ಫೆಬ್ರುವರಿ ಪೂರ್ಣದ ವರೆಗೆ ದರ ತಿಂಗಳಿಗೆ ೧೨ ರೂಪಾಯಿಯಂತೆ ಈ ವರೆಗಿನ ರೂಪಾಯಿ ಹೀಗೆ ಒಟ್ಟಿಗೆ (೮೯) ಎಂಭತ್ತೊಂಬತ್ತು ರೂಪಾಯಿ ಬಾಡಿಗಿ ಕೊಡಲು ಬಾಕಿ ಇಲ್ಲ ಮಾರ್ಚ ತಿಂಗಳ ನಂತರ ನೀವು ಅಲ್ಲಿ ಇರುವದಾದರೆ ದರ ತಿಂಗಳಿಗೆ ೧೫ ರೂಪಾಯಿಗಳ ಪ್ರಕಾರ ಮುಂಗಡ ಕೊಡಬೇಕಾಗುವದು ನೀವು ಬಾಡಿಗೆ ಹಣ ಕೊಡಲಾರದ್ದರಿಂದ ಕೋರ್ಟಿನಲ್ಲಿ ಫಿರ್ಯಾದು ಮಾಡಿರುತ್ತೇನೆ. ಅಲ್ಲಿ ನಮ್ಮ ನಿಮ್ಮ ತಕರಾರುಗಳ ನಿಕಾಲಿ ಆಗುವವು ಆದರೆ ನೀವು ಮಾರ್ಚ ತಿಂಗಳ ನಂತರ ಅಲ್ಲಿ ಇದ್ದರೆ ದರ ತಿಂಗಳಿಗೆ ೧೫ ರೂಪಾಯಿಗಳನ್ನು ಕೊಡಬೇಕಾಗುವದು ಆದುದರಿಂದ ಈ ನೋಟೀಸು ಕೊಟ್ಟಿರುತ್ತದೆ ಈ ನೋಟೀಸಿನ ಖರ್ಚ ನಿಮ್ಮ ಮೇಲಿರುವದು. ತಿಳಿಯುವದು ತಾರೀಖು ೯-೨-೧೯೨೭ ಇಸ್ವಿ

ಟಿ ಆರ್ ಪದಕಿ

ನಟವರ್ಗದವರು ಬೇಕು.

ಹೊಂಬಳ ಸಂಗೀತ ನಾಟಕ ಮಂಡಳಿ ಸಲುವಾಗಿ ಜೋಡು ಪೆಟ್ಟಿಗೆ ಬಾಲ, ಸ್ತ್ರೀ ಪುರುಷ ಪಾರ್ಟೀ ಸಲುವಾಗಿ ಕಾಯಂ ಕಾರ್ಯ ಮಾಡುವ ಜನರು ಬೇಕು ಬರಲಿಕ್ಕೆ ಇಚ್ಛಿಸುವರು ಕೆಳಗಿನ ವಿಳಾಸಕ್ಕೆ ಒಂದು ಭೆಟ್ಟಿ ಆಗಬೇಕು. ಕಾಯಂ ಆದ ಜನಕ ಗಾಡಿ ಚಾರ್ಜ ಕೊಡಲ್ಪಡುವದು

ಕ್ಯಾಂಪ- ಗದಗಬೆಟಗೇರಿ ಮ್ಯಾನೆಜರ

ಹೊಂಬಳ ಸಂಗೀತನಾಟಕ ಮಂಡಳಿ

(ಭಗವಾನದಾಸ ಕವಾಡಿಯವರ ಬಂಗ್ಲೆದಲ್ಲಿ) ಪೋ ಗದಗ ಬೆಟಗೇರಿ

ದಿ ಕರ್ನಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟಣೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜುಲೈ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇರಮನಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ ಸಿ ನಂ. ೬೪೪. ಮಿ. ಮಹಮ್ಮದ ಯುಸುಫ ಡಿಸ್ಟಿಲರಿಗಾರ್ಡ, ನಾರಾಯಣ ಗುಡ ಡಿಸ್ಟಿಲರಿ, ಹೈದರಾಬಾದ ಡೆಕ್ಕನ್ನ ರೂ. ೧೦೦೦

(೨) ಎಲ್. ಬಿ. ಸಿ. ನಂ ೫೧೮ ಮಿ ಸೈಯದ್ ಜಹೂರಅಲಿ ಬಿ. ಎ. ಬಿ. ಟಿ ಶಾಲಾಗಳ ಡಿವಿಜನಲ್ ಇನ್‌ಸ್ಪೆಕ್ಟರ್ ಔರಂಗಬಾದ ಸಿಟಿ, ನೈಜಾಮ ಇಲಾಖಾ ರೂ. ೧೦೦೦

(೩) ಎಲ್ ಬಿ. ಸಿ. ನಂ ೨೦೭೯ ಮಿ. ದೇವನ ವಾಸುದೇವನ ನಂಬೂದ್ರಿಪಾದ ಜಮೀನದಾರ ಏಡಪಲ್ಲಿ ಆಲ್ವಾಯಿ ರೂ ೭೦೦

(೪) ಬಾಂಡ ನಂಬರು ೯೭೭೦ ಮಿ. ಶಂಕರಪ್ಪಾ ಬಸಪ್ಪಾ ದೆ. ವನಕೊಂಪ, ಅಕ್ಕಸಾಲೆ ಪೆಂಡಾರಗಲ್ಲಿ ಹುಬ್ಬಳ್ಳಿ ರೂ. ೧೦೦೦

(೫) ಬಾಂಡ ನಂಬರು ೧೪೨೦೭ ಮಿ. ಷೇಕ ಬಾಪುಮಿಯಾ ಷೇಕ ಮಹಮ್ಮದ ನಳ ತಯಾರ ಮಾಡುವವರು ೭೧೪ ಭವಾನಿಪೇಟ ಪುಣೆ ೧೦೦೦

ಬಿ. ಎನ್. ಆರಾಧ್ಯ

ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ.)

ಕಿರ್ಲೋಸ್ಕರ

ಕಬ್ಬಿಣ ನೇಗಿಲುಗಳು.

ಮುಂಗಾರು (ಸುಗ್ಗಿ) ಸಮಾಪಿಸಿತು. ಈ ವರ್ಷ ಮಳೆ ಬೆಳೆ ಚನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವುದು. ಕಿರ್ಲೋಸ್ಕರ ನೇಗಿಲು ನಂ ೧೧, ೯, ೮ ಇವು ಒಕ್ಕಲಿಗರಿಗೆ ಬಹಳೇ ಉಪಯೋಗ ಬೀಳುತ್ತವೆ ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುತ್ತವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್. } ಕಿರ್ಲೋಸ್ಕರವಾಡಿ ಜಿಲ್ಲೆ ಸಾತಾರೆ

ಗವ್ಹರ್ನಮೆಂಟಿನಲ್ಲಿ ರಜಿಷ್ಟರ ಮಾಡಲ್ಪಟ್ಟ ಜಗತ್ಪ್ರಸಿದ್ಧವಾದ

ಎಲ್ಲ ರೋಗಗಳಿಗೆ ಒಂದೇ ಔಷಧ.

ಅರ್ಕಶಫಾ ಅಥವಾ ಆರೋಗ್ಯ ಬಿಂದು

ಪ್ರವಾಶಿಮಿತ್ರ. ಮೂರ್ತಿಮಂತ ವೈದ್ಯ

ಇದು ಅರ್ಕವಿದ್ದು ಇದರಲ್ಲಿ ನೀರು ರಸಾಯನ ಕೂಡಿರುವದಿಲ್ಲ. ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ಇದು ಪ್ರಸಿದ್ಧವಾಗಿ ೧೭ ವರ್ಷಗಳು ಆಗುತ್ತ ಬಂದವು. ಈವತ್ತಿನವರೆಗೆ ಎರಡು ಲಕ್ಷಗಳ ವರೆಗೆ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತಿರ ಬೇಡುವ ಪತ್ರಗಳು ವ್ಹಿ. ಪಿ. ಮಾಡಿದ ದಾಖಲೆಗಳು ಪೋಸ್ಟ ಪಾವತಿಗಳು ಬಾರನಿಸಿ ಬುಕ್ಕುಗಳು ಇರುತ್ತವೆ. ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಸಟೆಯೆಂದು ಸಿದ್ಧ ಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳು ಇನಾಮು ಕೊಡಲ್ಪಡುವವು. ಈ ಔಷಧವು ಅಮೃತಸರಿಯುಳ್ಳದ್ದು ಇರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು ಎಂಥಾ ಭಯಂಕರ ರೋಗವು ಇದ್ದರೂ ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರಟಿಫಿಕೀಟುಗಳು ನಮ್ಮ ಹತ್ತಿರ ಹಾಜರ ಇರುತ್ತವೆ. ಇವನ್ನು ಬರೆಯಲಿಕ್ಕೆ ಕಾಗದವು ಸಾಲದು. ಕಾರಣ ಒಂದುಸಾರೆ ತಕ್ಕೊಂಡು ಅನುಭವ ನೋಡಿರಿ. ರೋಗದ ನಾಮಗಳು:— ಕ್ಷಯರೋಗ, ಪ್ರಾಣಾಂತಿರೋಗ, ಹಡೆದನಂಜು ದಮ್ಮು, ಕೆಮ್ಮು, ಅಡಗ್ಗಿ, ಕಾಲರಾ (ಮಾರಿಕಾ), ಪ್ಲೇಗ, ಇನ್‌ಪ್ಲುಯೆಂಜಾಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮಲರೋಗ, ಗಂಡಮಾಲೆ, ನಾರಹುಣ್ಣು, ಶಸ್ತ್ರಗಾಯ, ಕಿವಿಶೂಲಿ ಮೂಗಿನೊಳಗಿನ ಪಿನಸಿ, ಮೊದಲಾದವುಗಳು. ಕಣ್ಣುನೋವು ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ ಹೊಟ್ಟೆಶೂಲಿ, ಸಣ್ಣ ಕೂಸುಗಳಿಗೆ ಆದ ರೋಗಗಳು ಬಾಲಗ್ರಹ, ಆರಿವಿ ಮುಟ್ಟದೋಷ ಹೊಟ್ಟೆ ದೊಡ್ಡದಾಗೋಣ, ಕೋಡಿಗೆಮ್ಮು, ವೈ ಹೊರಬೀಳೋಣ, ಮತ್ತು ಡಾಕ್ಟರಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನಿಂದ ಖಾತ್ರಿಯಿಂದ ಗುಣಬರವದು. ಚೇಳು ವ ಸರ್ಪದಂಶಕ್ಕೆ ತತಕ್ಷಣ ಗುಣಬರುವದು. ೧ ಕಾಲುತೊಲಿ ಬಾಟ್ಲಿ ಒಂದಕ್ಕೆ ೨ ರೂಪಾಯಿ ನಮೂನೆ ಉದ್ದಿ ೫ ಆಣೆ ಹೊರದ ಬಾಟ್ಲಿ ಒಂದಕ್ಕೆ ೮ ಆ. ಖರ್ಚು ಬೇರೆ. ೮ ಆಣೆಯ ಒಂದೇ ಬಾಟ್ಲಿ ಕಳಿಸಲಾಗದು. ೨ ರೂಪಾಯಿ ಆರ್ಡರ ಬಂದರೆ ಕಳಿಸಲಾದೀತು ಅದರ ಖರ್ಚು ೭ ಆಣೆ ಚಿಕ್ಕ ಬಾಟ್ಲಿ ಒಂದು ಡಜನ ತಕ್ಕೊಳ್ಳುವವರಿಗೆ ನಾಲ್ಕುಬಾಟ್ಲಿಗಳು ಕಮಿಶನ್ ಸಿಗುತ್ತವೆ. ಖರ್ಚು ೯ ಆಣೆ ಡಜನದ ಒಳಗಾಗಿ ಹನ್ನೊಂದು ಬಾಟ್ಲಿ ತಕ್ಕೊಂಡರೆ ಕಮಿಶನ್ ಇಲ್ಲ. ವೆಚ್ಚ ೭ ಆಣೆ. ೧ ಕಾಲುತೊಲಿ ಬಾಟ್ಲಿ ಒಂದೇಸಾರೆ ಮೂರು ತಕ್ಕೊಳ್ಳುವವರಿಗೆ ವಂದು ಬಾಟ್ಲಿ ಕಮಿಶನ್ ಸಿಗುತ್ತದೆ. ಖರ್ಚು ೯ ಆಣೆ.ವಂದು ಎರಡುತಕ್ಕೊಂಡರೆ ಕಮಿಶನಿಲ್ಲ ಖ. ೭ ಆ. ಪ್ರಮಾಣ ಅನುಪಾನ ಪತ್ರಿಕೆ ಕನ್ನಡಮತ್ತು ಮರಾಠಿ ಭಾಷೆಯಲ್ಲಿಛಾಪಿಸಿರುತ್ತವೆ. ಪಸಂದಿಪ್ರಕಾರ ಬಾಟ್ಲಿಗೂ ಸಿಗುವದು ಈ ಔಷಧವು ಖೊಟೆ ಹೊರಟರೆ ಶಿಲ್ಲಕ ಉಳಿದ ಮಾಲು ಪರತ ತಕ್ಕೊಂಡು ಅದರ ಬೆಲೆ ವಾಪಸ ಕೊಡುವೆವು. ಈ ಅರ್ಕಶಫಾ ಇಡೀ ಕರ್ನಾಟಕದಲ್ಲೆಲ್ಲಾ ಹೋಗುತ್ತದೆ. ಇದರ ಬಗ್ಗೆ ನಮಗೆ ಬಹಳ ಶಿಫಾರಸ್ ಮಾಡಬೇಕಾಗಿಲ್ಲಾ ತಮ್ಮ ವಿಳಾಸ ಕನ್ನಡದಲ್ಲಿ ಅಥವಾ ಇಂಗ್ಲೀಷದಲ್ಲಿ ಪೋಸ್ಟ ಜಿಲ್ಲಾ ವಗೈರೆಸ್ಪಷ್ಟವಾಗಿ ಬರೆಯಿರಿ ನಮ್ಮ ವಿಳಾಸ:— ಎಲ್. ಎಮ್. ಮುಲ್ಲಾ- ಕಾರಖಾನೆ ಅರ್ಕ ಶಫಾ ಹೆಡ್ ಆಫಿಸಪೋಸ್ಟ ರಬಕವಿ (ಬೆಳಗಾವಿ

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆ ಮಾಡಿರಿ ! ತ್ವರೆ ಮಾಡಿರಿ



ಮೋಟಾರ ಡ್ರ್ಯಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ಜ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡತಕ್ಕ ವ್ಯವಸ್ಥೆ ಮಾಡಲ್ಪಟ್ಟಿದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ನೋಡಿ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರ್ಯಾಯ್ವಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೀಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಪ್ರಾಂತ ಸಿಂಧುಸ್ಥಾನದ ಸರಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀಝ ರೂಪಾಯಿ ೭೦ ಇರುತ್ತದೆ. ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪತ್ತಾ.—ದಿ ಪಾಪ್ಯುಲರ ಮೋಟಾರ ಡ್ರ್ಯಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೧ ಬುಧವಾರ ಪೇಠ, ಜುನಿ ತಪಕೀರಗಲ್ಲಿ, ಪುಣೆ ಸಿಟಿ.

ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶೀ ಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಿಣೀ, ಜೀರ್ಣಜ್ವರ, ಅಗ್ನಿಮಾಂಧ್ಯ ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶ ನಾಶವಾಗುವವು. ಹಾಗೂ ಮೂತ್ರ ಜರುಗಿದ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಎಂತಹದೇ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು.) ಇದರಿಂದ ಮೈಯಲ್ಲಿಯ ಗರ್ಮಿಯ ಎಲ್ಲಾತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೇ ಯೋಗ್ಯತೆಯು ಸೇವಿಸಿ ನೋಡಿದರೆ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೨-೦, ಟಪಾಲು ಖರ್ಚ ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯು ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸಃ—

ಎಸ್. ಬಿ. ಕದಮ್ ಮತ್ತು ಸನ್ಸ್.

ಮು. ಪೋಸ್ಟ ನಿಪ್ಪಾಣಿ (ಜಿ. ಬೆಳಗಾಂವ)

೧,೪೨,೦೦,೦೦೦

ರೂಪಾಯಿಗಳು!

ಪರದೇಶಗಳಿಂದ ತರಿಸಲ್ಪಟ್ಟ ಸಾಬೂನುಗಳಿಗೋಸ್ಕರ ಪ್ರತಿವರುಷವೂ ಒಂದುಕೋಟಿ ನಾಲ್ವತ್ತೆರಡು ಲಕ್ಷ ರೂಪಾಯಿಗಳನ್ನು ನಮ್ಮ ದೇಶದಿಂದ ಪರದೇಶಕ್ಕೆ ಕಳಿಸುತ್ತಿದ್ದೇವೆ. ಮಹಾಜನಗಳೆಲ್ಲರೂ ಒಕ್ಕಟ್ಟಾಗಿ ಸಂಕಲ್ಪಮಾಡಿದರೆ ತಾನೇ ಈ ಹಣವನ್ನು ನಮ್ಮ ದೇಶದಲ್ಲಿ ಉಳಿಸಿಕೊಳ್ಳಬಹುದು. ಸ್ವದೇಶದ ಸಾಬೂನನ್ನು ಬಿಟ್ಟು ಪರದೇಶದ ಸಾಬೂನನ್ನು ಕೊಳ್ಳುವ ಪ್ರತಿಯೊಬ್ಬ ವಿದ್ಯಾವಂತನೂ ಅನ್ಯ ದೇಶದ ಕೈಗಾರಿಕೆಗಳಿಗೆ ಉಪಕಾರಮಾಡಿ, ಸ್ವದೇಶದ ಕೈಗಾರಿಕೆಗಳಿಗೆ ಅಪಕಾರಮಾಡುತ್ತಾನೆ. ಪ್ರತಿಯೊಬ್ಬ ದೇಶಬಾಂಧವನೂ ಸ್ವದೇಶೀ ಮಾಲುಗಳನ್ನೇ ಕೊಳ್ಳುವನು. ಮೈಸೂರು ಗವರ್ನಮೆಂಟ ಸೋಪ್ ಫ್ಯಾಕ್ಟರಿಯಲ್ಲಿ ಸರ್ವಗ್ರಾಹ್ಯವಾದ ಉತ್ತಮವಾದ ಸಾಬೂನುಗಳನ್ನು ತಯಾರಿಸುತ್ತಾರೆ. ನಾವು ತಯಾರಿಸುವ ಶ್ರೀಗಂಧ ವಾಸನೆಯುಳ್ಳ ಸಾಬೂನೊಂದನ್ನು ಕೊಂಡು ತಾವೇ ಪರೀಕ್ಷೆಮಾಡಿನೋಡಿರಿ. ತಮಗೆ ನಮ್ಮ ಸಾಬೂನುಗಳು ಸಿಗಲಸಾಧ್ಯವಾದಲ್ಲಿ ದಯವಿಟ್ಟು ನಮಗೆ ಪತ್ರವೊಂದನ್ನು ಬರೆದರೆ, ತಾವು ಇಷ್ಟಪಡುವ ಅಂಗಡಿಯಲ್ಲಿಯೇ ನಮ್ಮ ಮಾಲುಗಳು ತಮಗೆ ದೊರೆಯುವಂತೆ ಏರ್ಪಡಿಸಿಕೊಡುತ್ತೇವೆ

ಗವರ್ನಮೆಂಟ ಸೋಪ್ ಫ್ಯಾಕ್ಟರಿ

ಬೆಂಗಳೂರು.

ವರ್ತಮಾನಸಾರ.

ಸೋಜಿಗದ ಸುದ್ದಿಗಳು.

ನಿಜಾಮ ರಾಜ್ಯದ ಕರೀಮನಗರದಲ್ಲಿ ಪೊಲೀಸ ಪ್ಯೆಜು ಗಂಗೇಶಪ್ಪನವರು ತಾವಿದ್ದ ಬಾಡಿಗೆ ಮನೆಯ ಅಂಗಳದಲ್ಲಿದ್ದ ಒಂದು ಗಿಡವನ್ನು ಕಡಿಸಿದರು. ೨೦ ದಿನಗಳಲ್ಲಿಯೇ ಮನುಷ್ಯರಿಗೆ ಎತ್ತಲಸಾಧ್ಯವಾದಂತಹ ಕಲ್ಲುಗಳು ಮನೆಯಲ್ಲಿ ಬೀಳಹತ್ತಿದವು. ಮೂಲಿಗೆಗೆ ಆಧಾರವೇನೂ ಇಲ್ಲ. ಒಂದು ದಿನ ಕಾಯಿಪಲ್ಲೆ, ಹಣ್ಣುಗಳೂ, ಒಂದು ಕಾಗದದಲ್ಲಿ ಸುತ್ತಿದ ಒಂದು ರೂಪಾಯಿಯೂ, ಉಳಿದ ನಾಣ್ಯಗಳೂ ಸುರಿಮಳೆಯಾದವು. ಪೊಲೀಸಿಯವರು ಗಾಬರಿಯಾಗಿ ಎರಡನೇ ಮನೆಗೆ ಹೋದರು. ಈ ಮನೆಯಿಂದ ಅವರ ಸಾಮಾನುಗಳು ದಿನಾಲು ಹೊರಗೆ ಒಗೆಯಲ್ಪಡುತ್ತವೆ. ಒಂದು ದಿನ ಒಂದು ಕೋಣೆಯಲ್ಲಿ ಯಾರೋ ಚೀರುವಂತೆ ಕೇಳಿಸಿತು. ಬಾಗಿಲು ತೆರೆಯಲು, ಒಂದು ಕೋಳಿಯನ್ನು ಕೊಯ್ದು ಹೋಮಮಾಡಿದ್ದು ಕಂಡುಬಂದಿತು. ಪೊಲೀಸಿಯವರು ಗಾಬರಿಯಾಗಿದ್ದಾರೆ. ಭೂತನಿವಾರಣೆಯ ಉಪಾಯಗಳೂ ನಡೆದಿವೆ!

ಪರದೇಶ.

ಹಿಂದುಸ್ಥಾನಕ್ಕೆ ಸ್ವಾತಂತ್ರ್ಯದ ಹಕ್ಕು ಹೆಚ್ಚಾಗಿ ಕೊಡಬೇಕೆಂಬರ್ಥದ "ಕಾಮನ್ ವೆಲ್ತ ಆಫ್ ಇಂಡಿಯಾ ಬಿಲ್ಲ" ಎಂಬ ಠರಾವಿನ ಪ್ರಥಮ ವಾಚನವು ಲಂಡನ್ನಿನ 'ಹೌಸ ಆಫ್ ಕಾಮನ್ಸ' ಸಭೆಯಲ್ಲಿ ಮುಗಿದಿದೆ.

ಅಮೇರಿಕೆಯಿಂದ ೨೫೦ ನೌಕಾ ಸೈನಿಕರು ಶಾಂಘಾಯಿಗೆ ಯುದ್ಧದ ಸಲುವಾಗಿ ಬಂದಿದ್ದಾರೆ.

ಪೋರ್ತುಗಾಲದಲ್ಲಿ ಉಂಟಾಗಿದ್ದ ರಾಜಕ್ರಾಂತಿಯ ಗೊಂದಲವು ಬಡಿದುಹಾಕಲ್ಪಟ್ಟಿದೆ. ವ್ಯವಹಾರ ಉದ್ದಿಮೆಗಳು ಪುನಃ ಸಾಗಿವೆ.

ಪ್ಯಾರಿಸ ನಗರದಲ್ಲಿ ದೇವಂತ ವರ್ಮನೆಂಬ ಹಿಂದೂ ಯೋಗಿಯಿದ್ದು, ಆತನು ಅನೇಕರ ರೋಗಗಳನ್ನು ನಿವಾರಣಮಾಡಿದ್ದಾನೆ. ಇವನ ಉಪಚಾರಕ್ರಮವು ಬೇರೆ ತರದ್ದಿದೆ. ಇದರಿಂದ ತಮಗೆ ಲಕ್ಷಾವಧಿ ರೂಪಾಯಿಯ ಹಾನಿಯಾಗಿದೆಯೆಂದೂ, ಈ ಯೋಗಿಗೆ ಉಪಚಾರ ಮಾಡಗೊಡಬಾರದೆಂದೂ, ತಮ್ಮ ಹಾನಿಯನ್ನು ತುಂಬಿಕೊಡಲಿಕ್ಕೆ ಯೋಗಿಯಿಂದ ಕೆಲ ಹಣ ಕೊಡಿಸಬೇಕೆಂದೂ ಅಲ್ಲಿಯ ಡಾಕ್ಟರರ ಸಂಘದವರು ಅವನ ವಿರುದ್ಧ ಕೋರ್ಟಿನಲ್ಲಿ ದಾವೆ ಹೂಡಿದ್ದಾರೆ. ಯೋಗಿಯ ಪರಿಯಿಂದ ಅಸಂಖ್ಯರಾದ ಬಡವರೂ ಶ್ರೀಮಂತರೂ ಸಾಕ್ಷಿ ಹೇಳಿ, ತಮಗೆ ಅವರಿಂದ ಕಲ್ಯಾಣವಿದೆಯೆಂದು ಸಿದ್ಧಮಾಡಿದರು. ನ್ಯಾಯಾಧೀಶರ ತೀರ್ಪು ಹೊರಗೆ ಇನ್ನೂ ಬಿದ್ದಿಲ್ಲ!

ಹಿಂದುಸ್ಥಾನ.

ರಾಷ್ಟ್ರೀಯ ರಂಗಭೂಮಿಯನ್ನು ಸ್ಥಾಪಿಸಿ, ನಾಟ್ಯಕಲೆಯನ್ನು ಉದ್ಧಾರಿಸಬೇಕೆಂದು ಶ್ರೀ ಹಾರ್ನಿಮಾನ್ನರ "ಡೇಲೀ ಹೆರಾಲ್ಡ" ಪತ್ರಿಕೆಯು ಪ್ರಯತ್ನಿಸುತ್ತಲಿದೆ.

ಶ್ರದ್ಧಾನಂದ ಸ್ಮಾರಕ ನಿಧಿಗಾಗಿ ೧೦ ಲಕ್ಷ ರೂ. ಕೂಡಿಸಿ, ೫ ಲಕ್ಷ ರೂಪಾಯಿಗಳನ್ನು ಬಡ್ಡಿಗಿಟ್ಟು, ಈ ಬಡ್ಡಿಯನ್ನೂ ಉಳಿದ ೫ ಲಕ್ಷ ಹಣವನ್ನೂ ಕೂಡಲೇ ವೆಚ್ಚಮಾಡಬೇಕಾಗಿ ನಿರ್ಧಾರವಾಗಿದೆ. ಇದರಲ್ಲಿ ಅರ್ಧ ಹಣ ಅಂತ್ಯಜೋದ್ಧಾರಕ್ಕಾಗಿ, ¼ ಶುದ್ಧಿಗಾಗಿ, ¼ ಹಿಂದೂ ಸಂಘಟಣಕ್ಕಾಗಿ ತೆಗೆದಿಡಲ್ಪಟ್ಟಿವೆ. ಆ ಆ ಪ್ರಾಂತದ ಹಣವು ಆ ಆ ಪ್ರಾಂತದಲ್ಲಿಯೇ ಉಳಿಯುವದು. ಕರ್ನಾಟಕ ಪ್ರಾಂತದ ಗತಿಯೇನು?

೧೭ ವರ್ಷದ ಕೇಶರಬಾಯಿಯ ಮದುವೆಯು ಕಾಶ್ಮೀರದ ರಾಸಿಲನ ಕೂಡ ಆಯಿತು. ಮದುವೆಯ ಸಾಲವನ್ನು ತನ್ನ ಅಣ್ಣನಿಗೆ ಕೊಡುವದಾಗದ್ದರಿಂದ ರಾಸಿಲನು ತನ್ನ 'ಅಣ್ಣನಿಗೆ ಅವಳನ್ನು ಒಪ್ಪಿಸಿ ತಾನು ಬೇರೆ ಮನೆ ಹಿಡಿದನು. ಆ ಲೋಭಿಯಾದ ಅಣ್ಣನು ಅವಳನ್ನು ತನ್ನ ಉಪಭೋಗಕ್ಕಾಗಿ ಕೆಲವು ದಿನಯಿಟ್ಟು, ಮುಂಬಯಿಯ ಒಂದು ವೇಶ್ಯಾನಿವಾಸದವರಿಗೆ ಮಾರಿ ತನ್ನ ಹಣ ಪಡೆದನು. ಆ ದೀನಳಾದ ಕೇಶರಬಾಯಿಯು ಆ ನಿವಾಸದಿಂದ ಓರ್ವ ಪುರುಷನ ಸಹಾಯದಿಂದ ಪಾರಾಗಿ ತನ್ನ ಕತೆಯನ್ನು ಪೋಲೀಸರಿಗೆ ತಿಳಿಸಿದಳು. ಈಗ್ಗೆ ಈ ನಿವಾಸದ ಇಬ್ಬರಿಗೆ ೩ ವರ್ಷ ಕಠಿಣ ಶಿಕ್ಷೆಯಾಗಿದೆ. ಹಾಗೂ ಅವರಿಂದ ಕೇಶರಬಾಯಿಗೆ ೪೦೦ ರೂ. ಕೊಡಿಸಲ್ಪಟ್ಟಿವೆ. ಹಿಂದೂ ಸಮಾಜದ ಹೀನಸ್ಥಿತಿಯ ಒಂದು ಮಾದರಿಯಿದು!

ಮುಂಬಯಿ ದಿಲ್ಲಿ ಕಲಕತ್ತೆಗಳಲ್ಲಿ ವಿಮಾನ 'ಕ್ಲಬ್ಬ'ಗಳನ್ನು ಸ್ಥಾಪಿಸಬೇಕೆಂಬ ಪ್ರಯತ್ನ ನಡೆದಿದೆ.

ಬಾರೀಸಾಲದಲ್ಲಿ ಹಿಂದೂ ಜನರ ಕೀರ್ತನೆ ನಡೆದಾಗ ಮುಸಲ್ಮಾನರು ಒಳನುಗ್ಗಿ ದಂಗೆಮಾಡಿದರು. ೮ ಜನ ಮುಸಲ್ಮಾನರು ಕೈದುಮಾಡಲ್ಪಟ್ಟಿದ್ದಾರೆ.

ಮಿದ್ನಾಪೂರದಲ್ಲಿ ಮುಸಲ್ಮಾನರು ಸಭೆಸೇರಿ ಹಿಂದೂ ವಕೀಲರನ್ನೂ ಡಾಕ್ಟರರನ್ನೂ ಬಹಿಷ್ಕರಿಸಬೇಕೆಂದು ನಿರ್ಣಯಿಸಿದರು. ಅದೇ ದಿನ ರಾತ್ರಿ ಒಂದು ಹಿಂದೂ ದೇವಾಲಯವನ್ನು ಒಳನುಗ್ಗಿ ಮೂರ್ತಿಯನ್ನು ಛಿನ್ನವಿಚ್ಛಿನ್ನವಾಗಿಮಾಡಿ ಆಭರಣಗಳನ್ನು ಅಪಹರಿಸಿದರು. ಇನ್ನೊಂದು ಗುಡಿಯನ್ನು ಧ್ವಂಸಮಾಡಿದರು! ಅದೇ ತಾಲೂಕಿನ ಪಾಲೀಗ ಎಂಬ ಹಳ್ಳಿಯಲ್ಲಿ ವಾದ್ಯದ ಬಗ್ಗೆ ಹಿಂದೂ ಮುಸಲ್ಮಾನರಲ್ಲಿ ಭಯಂಕರ ಕಲಹವಾಗಿದೆ.

ತಮ್ಮ ಮೊಮ್ಮಗನ ಮದುವೆಯ ಕಾಲದಲ್ಲಿ ಅಜಮೀರದ ರಾಜಾ ಬಲದೇವದಾಸರು ರೂ. ೧,೦೩,೦೦೦ ಗಳನ್ನು ದಾನಮಾಡಿದ್ದಾರೆ. ರಜಪೂತ ವಿದ್ಯಾರ್ಥಿಗಳ ಕಟ್ಟಡಕ್ಕಾಗಿ ಕಾಶೀ ಹಿಂದೂ ವಿಶ್ವವಿದ್ಯಾಲಯಕ್ಕೆ ೫೦ ಸಾವಿರ, ಹಿಂದೂ ಮಹಾಸಭಾಕ್ಕೆ ೧೪ ಸಾವಿರ ಕೊಟ್ಟು ಉಳಿದದ್ದನ್ನು ಅಲ್ಲಲ್ಲಿಯ ವಿದ್ಯಾಲಯ ವಾಚನಾಲಯಗಳಿಗೆ ಕೊಟ್ಟಿದ್ದಾರೆ. ಕರ್ನಾಟಕದ ರಾಜ್ಯರಲ್ಲಿ ಈ ಬಗೆಯ ಬಂಟನು ಓರ್ವನಾದರೂ ಹುಟ್ಟುವನೋ?

ಮದ್ರಾಸ ಕರ್ನಾಟಕ

ಶ್ರೀಮತಿ ತಂಗಮ್ಮ ಜೇಕಬ್ಬ ಇವರು ಕೋಯಿಮುತ್ತೂರ ಮುನಸಿಪಾಲಿಟಿಗೆ ಸಭಾಸದರಾಗಿ ಸರಕಾರದಿಂದ ನೇಮಿಸಲ್ಪಟ್ಟಿದ್ದಾರೆ.

ಮೈಸೂರ ಕರ್ನಾಟಕ

೩೭೩೦ ರೂ. ವೆಚ್ಚಮಾಡಿ, ಮಂಗಳೂರ ಹಂಚಿನ ೨೪ ಮನೆಗಳನ್ನು, ಭಂಗೀ ಜನರ ಸಲುವಾಗಿ, ಕಟ್ಟಿಸಬೇಕೆಂದು ಬೆಂಗಳೂರು ಮುನಸೀಪಾಲ್ಟಿಯಲ್ಲಿ ನಿರ್ಣಯವಾಗಿದೆ.

ಮುಂಬೈ ಕರ್ನಾಟಕ.

ಅಥಣಿಯಲ್ಲಿ ನೀರಿನ ಕಷ್ಟ ವಿಪರೀತವಾಗಿದೆ. ಕೆರೆಯೊಣಗಿ ಆರು ತಿಂಗಳುಗಳಾದವು. ಊರೊಳಗಿನ ಬಾವಿಗಳೆಲ್ಲ ಬತ್ತಿಹೋಗಿರುವವು. ಊರ ಹೊರಗಿರುವ ತೋಟಗಳಲ್ಲಿನ ಯಾತದ ಬಾವಿಗಳಲ್ಲೇನೋ ತುಸುಮಟ್ಟಿಗೆ ನೀರುಂಟು. ಜನರು ನೀರಿಗಾಗಿ ಮೈಲೆರಡು ಮೈಲು ತೊಳಲಾಡಬೇಕು! ತೋಟಿಗರು ಕಬ್ಬಿಣ ಯಾತದಿಂದ ನೀರು ಮೇಲೆ ತೆಗೆದು ತಗಡಿನ ಹೌದುಗಳಲ್ಲಿ ತುಂಬಿಕೊಂಡು ಬಂಡಿಯ ಮೇಲೆ ಹೇರಿ ಊರಲ್ಲಿ ಕೇರಿಕೇರಿ ನೀರು ಮಾರುತ್ತ ತಿರುಗುತ್ತಿದ್ದಾರೆ! ಇಂಥ ನೀರು ಮಾರುವ ಬಂಡಿಗಳು ಒಂಬತ್ತು ಇವೆ. ಇಂಥ ಹರಣಹಾರುವ ಹೊತ್ತಿಗೆ ಇಲ್ಲಿಯ ಸುಪ್ರಸಿದ್ಧ ಶ್ರೀಮಂತ ಸೇಟಜಿಗಳೊಬ್ಬರು ಜನಗಳ ಸಲುವಾಗಿ ನೀರಿನ ವ್ಯವಸ್ಥೆಯನ್ನಿಡಿಸಿದ್ದಾರೆ. ಈ ಸಂಚಯಕ್ಕಾಗಿ ಹತ್ತು ಬಂಡಿಗಳು ಎಡೆಬಿಡದೆ ಓಡಾಡುತ್ತಿವೆ. ಶ್ರೀ ಸೇಟಜಿಯವರ ಈ ಪುಣ್ಯಕಾರ್ಯವು ಅತ್ಯಂತ ಪ್ರಶಂಸನೀಯವಾಗಿದೆ! ಬೇರೆ ಶ್ರೀಮಂತ ಸೆಟ್ಟರು ಊರಲ್ಲಿ ಅಲ್ಲಲ್ಲಿಗೆ ಜನರಿಗಾಗಿ ಅರವಟ್ಟಿಗೆಗಳನ್ನಿಟ್ಟಿರುವರು ಸತ್ಯ. ಇನ್ನೂ ಬೇಸಗೆಯ ಬೇಗೆ ಮುಂದೆಯೇ ಇದೆ. ಈಗಾಗಲೇ ಇಷ್ಟು ನೀರಿನ ಕಷ್ಟವು ಇಷ್ಟೊಂದು ವಿಪರೀತವಾಗಿದೆ. ಮುಂ

ದೆ ಬಟ್ಟೆ ಬೇಸಗೆಯಲ್ಲಿ ನಮಗೆ ತಣ್ಣಗೆ ಬೇಕಲ್ಲ' ಕಾಲಾಯ ತಸ್ಮೈ ನಮಃ!!!

ಆಫಘನಿಯ ಪೀರಶಿಪದ್ಯೆ ಮಂಡಳಪವರು ಮೋಟೇಲಿನಲ್ಲಿ ಚಹಾ ಕುಡಿಯಬಾರದೆಂದು ಲಿಂಗಾಂಗ್‌ತರಲ್ಲ ಕಟ್ಟು ಮಾಡಿದ್ದಾರೆ ದೇಶದ ವೀರ್ಯವನ್ನು ಸುಟ್ಟು ಸೂರೆಮಾಡುವ ಈ ಹೆಮ್ಮಾರಿಯನ್ನು ಎದುರಿಸಿದ್ದು ಆಫಘನಿಯ ಪೀರಶ್ಯೆವರಿಗೆ ಅತ್ಯಂತ ಭೂಷಣವೇ ಸರಿ!

ಕಾರವಾರದಲ್ಲಿ ಕ್ರೈಸ್ಟ ಸನ್ಯಾಸಿನಿ ನೇತೃತ್ವದಲ್ಲಿ ಒಂದು ಇಂಗ್ಲೀಷ ಕನ್ಯಾ ಶಾಲೆಯು ಪ್ರಾರಂಭವಾಗಿದೆ ಗೋವೆಯಿಂದ ಸನ್ಯಾಸಿನಿಯರು ಅಲ್ಲಿಗೆ ಬರುವ ಸಂಭವವಿದ್ದೆಯಂತೆ ಸರಿಯಾಯಿತು ಅದರ ಇಷ್ಟ ಕನ್ನಡಕ್ಕೆ ಸ್ಥಾನ ದೊರೆಯುವದೋ?

ವಿಜಾಪುರ ಜಿಲ್ಲೆಯ ಕಲೆಕ್ಟರ ಪ್ರವಾಸ — ಫೆ ೧೭ ರಿಂದ ೧೯ ಹೊರ್ತಿ, ೨೦ ೨೩ ಚಡಚಣ, ೨೪-ಮಾರ್ಚ ೩ ಇಂಡಿ, ೪ ೫ ಸಿಂದಗಿ, ೯ ೧೦ ವಿಜಾಪೂರ, ೧೩ ೧೬ ಬಬ್ಲೇಶ್ವರ, ೧೭ ೨೧ ಬೀಳಗಿ, ೨೨ ೨೭ ಕಲಾದಗಿ, ೨೮-೩೧ ಕಟಗೇರಿ

ಮೈಸೂರ ಕರ್ಣಾಟಕ

ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕೋತ್ಸವವು ರಥಸಪ್ತಮಿ ದಿವಸ ನಡೆದುದರ ಜ್ಞಾಪಕಾರ್ಥವಾಗಿ ಕಳೆದ ತಾ|| ೮ ರ ಬೆಳಿಗ್ಗೆ ೨೭ ಗುಂಡಗಳು ಹಾರಲ್ಪಟ್ಟವು. ದೇವಸ್ಥಾನಗಳಲ್ಲಿ ಅರ್ಚನೆಯೂ ರಾಜಾಶೀರ್ವಾದವೂ ನಡೆದವು. ಅದೇ ದಿವಸ ಸಾಯಂಕಾಲ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಪಾರಿತೋಷಿಕೋತ್ಸವವು ಶ್ರೀ ವರಕಾಲಸ್ವಾಮಿಗಳ ಅಧ್ಯಕ್ಷತೆಯಲ್ಲಿ ನಡಿಸಲ್ಪಟ್ಟು ರಾಜಕವಿ ಶ್ರೀಯುತ ಎಚ್. ಲಿಂಗರಾಜ ಅರಸಿನವರಿಂದ ಕನ್ನಡದಲ್ಲಿ ಬಹು ಉತ್ಕೃಷ್ಟವಾಗಿ ರಚಿಸಲ್ಪಟ್ಟಿರುವ ಮಂಗಳಾರ್ತ ೭೦ ಸಪದ್ಯಗಳು ಓದಲ್ಪಟ್ಟವು.

ಕೊಡಗು ಕರ್ನಾಟಕ

ದಿಲ್ಲಿಯ ಎರಡೂ ವರಿಷ್ಟ ಕಾಯದೆ ಮಂಡಲಗಳಲ್ಲೂ, ಕೊಡಗಿಗೆ ಪ್ರತಿನಿಧ್ಯದ ಹಕ್ಕಿರಬೇಕೆಂದು "ಕೌನ್ಸಿಲ್ ಆಫ್ ಸ್ಟೇಟ್"ನಲ್ಲಿ ಡಾ. ಯೂ ರಾಮರಾಯರು ಕೇಳಲು, ಅದು ಸರಿಯಾಗಿಲ್ಲವೆಂದು ಸರಕಾರದ ಉತ್ತರ ಬಂದಿತು!!

ಇಹವೃತ್ತ.

ಹಿಂದುಸ್ಥಾನೀ ಸೇವಾದಲದ ಕರ್ನಾಟಕ ಶಾಖೆಯ ಪತಿಯಿಂದ ಶ್ರೀ ಶ್ರೀನಿವಾಸರಾವ ನೀರಲಕೇರಿ ಇವರು ಈ ಊರಲ್ಲಿ ಲಾಠೀಡ್ರಿಲ್ ಪ್ರಾರಂಭಿಸಿದ್ದಾರೆ. ಒಳ್ಳೇ ಭರಭರಾಟಿಯಿಂದ ಸಾಗಿದೆ ಎಂದು ತಿಳಿಸಲಿಕ್ಕೆ ತುಂಬಾ ಸಂತೋಷವಾಗುತ್ತದೆ. ಎಂದಿನಂತೆ ಇಲ್ಲಿಯ, ವಿದ್ಯಾರ್ಥಿಗಳು ಈ ಬಗ್ಗೆ ಬಹಳೇ ಉತ್ಸಾಹ ತೋರಿಸಹತ್ತಿದ್ದಾರೆ. ಈ ಬಗ್ಗೆ ಹೆಚ್ಚಿನ ಡ್ರಿಲ್ಲನ್ನು ಕಲಿಸಲಿಕ್ಕೆ ಕೊಡಗಿನ ಶ್ರೀ ಎಮ್. ಸಿ. ಮಾರ್ತಾಂಡರನ್ನು ಕರಿಸಿಕೊಂಡಿರುವರು ಇನ್ನೂ ಹೆಚ್ಚು ವಿದ್ಯಾರ್ಥಿಗಳು ಈ ಸುಸಂಧಿಯ ಲಾಭ ತೆಗೆದುಕೊಳ್ಳಬೇಕೆಂದು ತರುಣರಿಗೆ ಸೂಚಿಸುತ್ತೇವೆ ಈಗ್ಗೆ ೩೦ ವಿದ್ಯಾರ್ಥಿಗಳಿದ್ದಾರೆ.

ಸೊಳ್ಳೆಗಳ ಕಾಟವು ವಿಪರೀತವಾಗಿ ಬೆಳೆದಿದೆ. ವೆಂಕಟಪೇಟೆಯ ಜನರ ಗೋಳನ್ನು (ಮುನಸೀಪಾಲ್ಟಿಯು ಅರಿಯದಿದ್ದರೂ) ಕೇಳುವರೇ ಇಲ್ಲ! ಹೀಗೇ ಇದು ಸಾಗಿದರೆ ಮಲೇರಿಯಾ ಬೇನೆಯು ಇಲ್ಲಿ ಮನೆಮಾಡದೇ ಬಿಡದು ಮಂದ್ರಾಸದಲ್ಲಿಯೂ ಹೀಗೇ ಆಗಿತ್ತು. ಮೊನ್ನೆ ಮೊನ್ನೆ ಅಲ್ಲಿಯ ಮುನಸೀಪಾಲ್ಟಿಯವರು ಊರಲ್ಲಿಯ ಸಂದಿಗೊಂದಿ, ಕಸ ಸ್ಥಳ, ಕಾಲುವೆಗಳನ್ನೆಲ್ಲ ಸ್ವಚ್ಛ ಮಾಡಿಸಿದರು ವಾರಕ್ಕೊಮ್ಮೆಯಾದರೂ ಹೀಗೆ ಸ್ವಚ್ಛಮಾಡಿಸಬೇಕೆಂದು ನಿರ್ಧರಿಸಿದ್ದಾರೆ. ಸರಕಾರಿ ಇಂಜನೀಯರರಿಗೂ ಶ್ರೀಮಂತರಿಗೂ, ಬಡ ಕೂಲಿಕಾರರಿಗೂ ಹಿತಕರವಾಗಿಯೂ ಸ್ವಚ್ಛತೆಯೂ ತಮ್ಮ ಪ್ರಾಂತದಲ್ಲಿಯ ಹೊಲಸನ್ನು ತೆತ್ತಿ ಒಗೆಯಲಿಕ್ಕೆ ನೋಟೀಸ ಕೊಟ್ಟಿದ್ದಾರೆ ನಮ್ಮ ಬಾಗಲಕೋಟೆಯ ಮುನಸೀಪಾಲ್ಟಿಯು ಏನು ಮಾಡುವದು ?

ಕಳೆದ ಶನಿವಾರ ದಿನ ತಾಜ ನಾಟಕಶಾಲೆಯಲ್ಲಿ ಶ್ರೀ. ಕಣಬೂರ ವಕೀಲರ ಅಧ್ಯಕ್ಷತೆಯಲ್ಲಿ, ವೀರಶೈವ ತರುಣಸಂಘದ ಪ್ರಯತ್ನದಿಂದ ಬಾಗಲಕೋಟೆಯ ನಾಗರಿಕರ ಸಭೆಯಾಯಿತು ಬರಗಾಲವು ಬಹು ಭೀಕರವಾದುದರಿಂದ ಈ ವರ್ಷ ತೆರಿಗೆಯನ್ನು ಸೂಟಮಾಡಬೇಕೆಂದೂ ಬಡಬಗ್ಗರಿಗೆ ಸಹಾಯಮಾಡಬೇಕೆಂದೂ ಬರಗಾಲ ನಿವಾರಣೆಗಾಗಿ ಕಾಲುವೆಗಳನ್ನು ಕಟ್ಟಿಸಬೇಕೆಂದೂ ಈ ಬಗ್ಗೆ ವಿಚಾರಿಸು ಮಾಡಲು, ಗವರ್ನರರ ಕಡಿಗೆ ಶಿಷ್ಟಮಂಡಲವನ್ನು ಕಳಿಸಬೇಕೆಂದೂ, ಈ ಶಿಷ್ಟ ಮಂಡಲದ ವಿಚಾರದನ್ನು, ಶ್ರೀ ಜಂಗಿನ ಹಾಗೂ ಮಂಗಳವೇಢೇಯವರು ಮಾಡಬೇಕೆಂದೂ ನಿರ್ಣಯಗಳಾದವು

ಶ್ರೀ ಕೃಷ್ಣ ಪ್ರಸಾದಿತ

ಕನ್ನಡಿಗರ ಸಂಗೀತ ನಾಟಕ ಮಂಡಳಿ

ತಾಜ ನಾಟಕಶಾಲೆ ವೆಂಕಟಪೇಟೆ, ಬಾಗಲಕೋಟೆ.

ಗುಳೇದಗುಡ್ಡ ಶ್ರೀಮತಿ ಗಂಗೂಬಾಯಿಯವರ ಈ ಹೊಸ ನಾಟಕ ಕಂಪನಿಯಲ್ಲಿ ಅಭಿನಯಿಸಲು ಸುಸ್ವರೂಪ, ಸುಶೀಲ, ಸುಶಿಕ್ಷಿತ ಹಾಗೂ ಹಾಡು ಬಲ್ಲ ನಾಟ್ಯಕಲಾಭಿಜ್ಞರಾದ ಬಾಲ ಬಾಲಿಕೆಯರೂ, ಸ್ತ್ರೀ-ಪುರುಷರೂ

ಬೇಕಾಗಿದ್ದಾರೆ.

ಅದೇ ಪ್ರಕಾರ ಪೆಟ್ಟಿಗೆ ಹಾಗೂ ತಬಲಾ ಬಾರಿಸುವದರಲ್ಲಿ ನಿಪುಣರಾದವರೂ ಬೇಕಾಗಿದ್ದಾರೆ. ಇಚ್ಛೆಯಿದ್ದವರು ಸಾಕ್ಷಾತ್ತು ಇಲ್ಲವೆ ಪತ್ರದ್ವಾರದಿಂದ ವಿಚಾರಿಸಿಕೊಳ್ಳಬೇಕು

—ವ್ಯವಸ್ಥಾಪಕ.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವರಿಗೂ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ ಬಾಗಲಕೋಟೆಯಲ್ಲಿ ನಮ್ಮ ಆಯುರ್ವೇದ ಔಷಧಿಗಳನ್ನು ಮಾರುವದಕ್ಕೆ ಏಜೆಂಟರು ಬೇಕಾಗಿದೆ. ಪುಷ್ಕಳ ಕಮಿಶನ್ ದೊರೆಯುವದು.

ರಾಜವೈದ್ಯ ನಾರಾಯಣಜಿ ಕೇಶವಜಿ.

೫೬. ಚೀನಾಬಜಾರ್, ಮದ್ರಾಸು

ಸೋಜಿಗದ ಸುದ್ದಿಯು.

ಫ್ರಾನ್ಸ್‌ದೇಶದ ಕೆಲವು ಭಾಗಗಳಲ್ಲಿ ಒಣಗಿಸಿದ ಹಾವುಗಳೂ, ಹಲ್ಲಿಗಳೂ ಇಂದಿಗೂ ಸರ್ವಸಮ್ಮತವಾದ ಔಷಧಿಗಳಾಗಿವೆ ೧೮೫೯ ನೇ ಇಸ್ವಿಯವರೆಗೂ "ವೈಪರ್" ಎಂಬ ಸರ್ಪದ ಒಣಗಿಸಿದ ಮಾಂಸವು ಅಂಗೀಕಾರವಾಡಲ್ಪಟ್ಟ ಒಂದು ಮೂಲಿಕಾ ದ್ರವ್ಯವಾಗಿ ವೈದ್ಯನಿಘಂಟುಗಳಲ್ಲಿ ವಿವರಿಸಲ್ಪಡುತ್ತಿತ್ತು.

ಲಿವರಿನ ಗಡಿಯಾರಗಳು.

ಲಿವರಿನ ಕೈ ಗಡಿಯಾರ ರೂ. ೯.

ಲಿವರಿನ ಕಿಸೆಯೊಳಗಿಡುವ ಗಡಿಯಾರ ರೂ. ೭.



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಮೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವುದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ತಾಳುವವು. ಬೆಲೆ ಕಡಿಮೆಯಿದೆಂದು ಅಂಜುವ ಕಾರಣವಿಲ್ಲ ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚ ಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ. ಅದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ.

ಲಿಚೋ ವಾಚ ಕಂ. (ಇಂಡಿಯಾ.) ಬಾಂಬೆ. ಕೆ. ೪.

ಬಿ, ಎಂ. ಹೂಗಾರ ಕರ್ತ

ತಾಳಪ್ರಸ್ತಾರಸಾಗರ.

೧ ನೇ ಭಾಗ

(ಮೃದಂಗ ವಿದ್ಯಾವಿನೋದ.)

ಈ ಗ್ರಂಥದಲ್ಲಿ ತಾಳಗಳ ಉತ್ಪತ್ತಿ, ಜಾತಿಭೇದದಿಂದ ಹುಟ್ಟಿದ ೩೫ ತಾಳಗಳನ್ನು ಹಿಡಿಯುವ ಕ್ರಮ, ತಬಲಾದಲ್ಲಿ ಅಕ್ಷರಗಳನ್ನು ನುಡಿಸುವ ಕ್ರಮ, (ಸಚಿತ್ರ) ವರಿ, ಕಾಲು, ಮುಕ್ಕಾಲು ತಾಳಗಳನ್ನೂ ಮುಗುತಾಯಿಗಳನ್ನೂ ಮಾಡುವ ರೀತಿ, ಮಾರ್ಗ ತಾಳ ಲಕ್ಷಣ ಗುಣಿಸಾಧ್ಯಶಬ್ದಗಳ ವಿಚಾರ, ಎರಡೂ ತಾಳಗಳನ್ನು ಗತಿಭೇದದಿಂದ ಎರಡೂ ಕೈಗಳಿಂದ ಒಮ್ಮೆಲೆ ನಡಿಸುವ ಕ್ರಮ, ಇತ್ಯಾದ್ಯನೇಕ ರಹಸ್ಯವಾದ ವಿಷಯಗಳು ಸ್ಪಷ್ಟವಾಗಿರುವವು ಗ್ರಂಥದ ಬಗ್ಗೆ ಅನೇಕ ವಿದ್ವಾಂಸರು ತಮ್ಮ ಸದಭಿಪ್ರಾಯವನ್ನು ವ್ಯಕ್ತಪಡಿಸಿರುವರು, ಈ ಗ್ರಂಥವು ಹತ್ತರಿದ್ದರೆ ಒಬ್ಬ ಸಂಗೀತ ವಿದ್ವಾಂಸನೇ ಹತ್ತರಿದ್ದಂತಾಗಿ ಬೋಧಕರ ಸಹಾಯವೇ ಬೇಕಾಗಲಾರದು.

ಈ ಪುಸ್ತಕದ ಬೆಲೆ ೨—೦—೦ ರೂಪಾಯಿ. ಕಾಲ ವಿಲಂಬವಾದರೆ ಪುಸ್ತಕಗಳು ದೊರೆಯಲಾರವು. ಕೆಳಗಿನ ವಿಳಾಸಕ್ಕೆ ಬೇಕಾದವರು ತಂಸಿಬರೆದ ಕೊಳ್ಳಬೇಕು.

ವಿಳಾಸ: ಬಸಪ್ಪ ಮಲ್ಲಪ್ಪ ಹೂಗಾರ.

ಸಾ, ಚಿಂಚಲಿ ತಾ ಗದಗ.

ಜಿ॥ ಧಾರವಾಡ [illegible]

ಯಾವದೇ { ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ. ೧೪, ಅರ್ಧ ಬೆಲೆ ರೂ. ೭



ಬರೇ ಒಂದು ತಿಂಗಳ ಬಗ್ಗೆ ನಾವು ಈ ದಂವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. **ಬೆಲೆ ರೂ. ೭**

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— **ಸ್ವಾನ ಹೌಸ. ಪಿ. ಬಿ. ೫೦೮. ಪಿ. ಟಿ. ಮದ್ರಾಸ**

ಅತ್ಯಲ್ಪವಿವೆ! ಉಚಿತ!

ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ ರಜಿಸ್ಟರ್ಡ್ ಪೋಕೆಟ್ ವಾಚ್ ೧೪ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಪಟ್ಟಿಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚುಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "[illegible]" ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಂದು [illegible] ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ ರಜಿಸ್ಟರ್ಡ್ ೧೪ ಕೆರೆಟ್ ರೋಲ್ಡ್ ಗೋಲ್ಡಿನ [illegible] ಗಡಿಯಾರಗಳಿಗೆ ಕೂಡಿ ಒಟ್ಟೇ ರೂಪಾಯಿ ೫

[illegible] ವಾಚ್ ಕಂ, ಪಿ ಬಿ ೭೬೫ ಮದ್ರಾಸ

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ.

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರು ದಕ್ಷಿಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬಗೆ ಬಗೆ ಪ್ರಕಾರದ ಮೋಟಾರಗಳನ್ನು ನಡಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು, ಅವುಗಳೊಳಗಿನ ಕೆಟ್ಟುಹೋಗಿದ್ದ ಮುರಿದ-ಒಡೆದ ಭಾಗಗಳ ದುರಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯಾಗದೆ ಬಲ್ಲ ಸುಶಿಕ್ಷಿತರಾಗುತ್ತಾರೆ. ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಬಹಳ ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕನ ಪದ್ಧತಿಗನುಸಾರವಾಗಿ ಸರಾಸ್ತ ಮೋಟಾರ ನಡೆಸಲು ಕಲಿಸುವ ರೀತಿಯು ಬಹಳ ಸುಲಭವಾಗಿದ್ದು, ಮನಸಿಗೆ ನಾಟುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಬೇರೆಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹು ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ಶೀಘ್ರವೆ ಬರೆದು ಕೇಳಿರಿ!

ವಿಳಾಸಃ—ಕುಲಕರ್ಣಿ ಮೋಟಾರ ಸ್ಕೂಲ.

೪೫೫ ಶನಿವಾರ ಪೇಠ ಜಮಖಂಡಿಕರ ವಾಡೆ ಪುಣೆ ಸಿಟಿ.

ನಪುಂಸಕತ್ವ

ಧಾತು ವಿಕಾರ, ಸ್ವಪ್ನಾವಸ್ಥೆ, ಅಶಕ್ತತೆ ಇತ್ಯಾದಿಗಳಮೇಲೆ ಖಂಡಿತವಾಗಿ ಗುಣಕೊಡುವ ಮತ್ತು ಕಡೆತನಕ ಬಾಳುವ ದಿವ್ಯ ಔಷಧಿ! ಒಂದೇ ಗುಳಿಗೆ!!

ವಿಶೇಷ ಮಾಹಿತಿ ಪತ್ರದ್ವಾರ ತಿಳಿಯಿರಿ.

ವಾದಿರಾಜ ಜಹಾಗೀರದಾರ.

ಮು. ಪೋ. ಇಲಕಲ್ಲ. (ವಿಜಾಪುರ)

ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಳೆಯನ್ನು ಹೆಚ್ಚಿಗೆ ಅರಿತಿರುವೆವು. ಹಲ್ಲುಗಳ ರೋಗಗಳನ್ನು ಕಳೆಯುವ ಶಸ್ತ್ರಕ್ರಿಯೆಯ [illegible] ಶಸ್ತ್ರಾವನ್ನು [illegible]. ಹಲ್ಲುಗಳನ್ನು [illegible]ದಿಂದ ಸ್ವಚ್ಛ ಮಾಡುವೆವು ಅಲುಗಾಡುವ ಹಲ್ಲುಗಳನ್ನು ಬಿಗಿಯಾಗುವಂತೆ ದಂತ ಚಿಕಿತ್ಸೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ಕೃತ್ರಿಮ ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು ಹಲ್ಲುಗಳ ಪೂರ್ಣ ಸೆಟ್ಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

S. U. Narayanachariya & Co.

Chaukhamba Benares City.

ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪೀತಾಂಬರ, ಜರಿಕಣ, ಬನಾರಸ, ಕಾಶ್ಮೀರೀ ಶಾಲು, ತಂಬಾಕು ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮುಂತಾದ ಮಾಲೆಗಳ ಕ್ಯಾಟಲಾಗ ಕೇಳಿದವರಿಗೆ ಇನಾಮವಾಗಿ ಕಳಿಸಲಾದೀತು.

ವಿಳಾಸ-[illegible]

[illegible]

ಈ ಪತ್ರಿಕೆಯು [illegible] ಶ್ರೀನಿವಾಸರಾಯರಿಂದ ಬಾಗಲಕೋಟೆ [illegible] ವಿದ್ಯಾರಣ್ಯ [illegible] ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧವಾಯಿತು.

ರ ನಂ. ೭೨. ೧೯೪೭   ವಾ ಚಂದಾ ೧—೧೨—೦ ಮಾತ್ರ

ಸ್ವಧರ್ಮ.

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ.

सर्वं परवशं दुःखं सर्वमात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇಶ್ವರಾಚಾರ್ಯ ಮುಖ್ಯಕಾರಿ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟ ಶುಕ್ರವಾರ ತಿಥಿ ... ಮಾಘ ಬಹುಳ ... ತಾ|| ... ೧೯೨೭ | ಸಂಖ್ಯೆ ೪೬

ಸಂಪಾದಕನ ಭೂಮಿ

(೬೦)

ನನ್ನ ಮನಸಿನ ಮೋಹವಮಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮೆ!
ಚಿನ್ನದಾದರು ಚಿನ್ನ ಮೋಹದಿಸ್ತರು ನೊಂದು ಬಿನ್ನಯಾಸಪದಕ್ಕೆ॥
ನನ್ನ ಬೀಯದ ನಿನ್ನ ವೀರಶಾಸನಕಾಗಿ ।
ಕಣ್ಣನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನೆನ್ನೆದ್ದೆ ನಿನ್ನ ಗಂಧವನು ಬೇರಬಹ ಗಂಧವಹನೆಂದು ತಿಳಿಯೆ॥

—ಆಂಬಿಕಾ ತನಯ ದತ್ತ

ಕರ್ನಾಟಕದಲ್ಲಿಯ ಮರಾಠಿ ಶಾಲೆಗಳ ಬಗ್ಗೆ ಹುಬ್ಬಳ್ಳಿ ಸ್ಕೂಲ ಬೋರ್ಡಿನವರು ಗೊತ್ತುಮಾಡಿದ ನಿರ್ಣಯವು ಒಂದು ಬಗೆಯಿಂದ ಈ ಪ್ರಶ್ನೆಯನ್ನು ಬಿಡಿಸಿದಂತಾಗಿದೆ:—

" ಹುಬ್ಬಳ್ಳಿಯು ಕರ್ನಾಟಕದ ಕೇಂದ್ರಸ್ಥಾನವಾಗಿರುವದರಿಂದ ಈ ಊರಲ್ಲಿ ಕಲಿಯುವ ಮರಾಟಿಗರ ಮಕ್ಕಳಿಗೆ ಕನ್ನಡ ಭಾಷಾಜ್ಞಾನವು ಅವಶ್ಯವೆಂದೂ, ವ್ಯವಹಾರಕ್ಕೆ ಅತ್ಯವಶ್ಯವೆಂದೂ ಬಗೆದು ಲೋಕಲ್ ಬೋರ್ಡ ಶಾಲೆಗಳಲ್ಲಿ ಕನ್ನಡವನ್ನು ಕಲಿಸುತ್ತಿರುವಂತೆ ಮರಾಠಿ ಶಾಲೆಗಳಲ್ಲಿಯೂ ಕನ್ನಡ ಭಾಷೆಯನ್ನು ಕಲಿಸಲು ಉಪಕ್ರಮಿಸುವ ವ್ಯವಸ್ಥೆಯಾಗಿದೆ "

ಮರಾಟಿಗರಿಗೆ ತಪ್ಪುತಿಳುವಳಿಕೆಯಾಗಬಾರದೆಂದು, ಆ ಬು[ಡಿ]... ಈ ತೀರ್ಮಾನವು ಇಕ್ಕಟ್ಟಿನ ವಾಕ್ಯದಿಂದ ರಚಿಸಲ್ಪಟ್ಟಿದ್ದು ಸ್ಪಷ್ಟವು. ಕಾರಣವನ್ನು ಹೇಳಿದ್ದರಿಂದ ನಿಜಸ್ಥಿತಿಯು ... ತಿಳಿಯುವದ ... . ಆದರೆ ಕನ್ನಡ ನಾಡಿನವರು ಕನ್ನಡದ ಬಗ್ಗೆಯೂ, ಕನ್ನಡ ನಾಡಿನಲ್ಲಿ ವಾಸಮಾಡುವ ಜನರ ... ಗಳ ಬಗ್ಗೆಯೂ ಮಾತನಾಡುವಾಗ ಅಂಜಿಕೆಯಿಲ್ಲದೆ ನಿಜವಾಗಿ ಹೇಳ್ಳಬೇಕು. ಬೇರೆ 'ಹಾವೇರಿನ್ಯಾಯ'ದ ತೀರ್ಮಾನದ ಬದಲು " ಹುಬ್ಬಳ್ಳಿಯು ಕರ್ನಾಟಕದ ಕೇಂದ್ರಸ್ಥಾನವಾಗಿರುವದರಿಂದ ಮರಾಠಿ ಶಾಲೆಗಳನ್ನು ಬಂದುಮಾಡಿದೆ; ಮತ್ತು ಮರಾಟಿ ಮಾತೃಭಾಷೆಯುಳ್ಳ ಮಕ್ಕಳಿಗೆ ಮರಾಟಿಯನ್ನು ಕಲಿಸಲು ಕನ್ನಡ ಶಾಲೆಗಳಲ್ಲಿ ಬೇರೆ ಮರಾಟಿ ಶಿಕ್ಷಕನ ವ್ಯವಸ್ಥೆ ಮಾಡಿದೆ " ಎಂದು ನಿರ್ಣಯಿಸಿದ್ದರೆ ಯೋಗ್ಯವಾಗುತ್ತಿತ್ತು. ಇದರಿಂದ ಮರಾಟಿಗರಿಗೆ ಮರಾಟಿ ಭಾಷೆಯ ಶಿಕ್ಷಣದ ವ್ಯವಸ್ಥೆಯಾಗಿ, ಮಿಕ್ಕು ಉಳಿಯುವದು ಕನ್ನಡ ಶಾಲೆಗಳಲ್ಲಿ ಮರಾಟಿಗರು ಗಣಿತ ಇತಿಹಾಸ ಮೊದಲಾದ ವಿಷಯಗಳನ್ನು ಎಲ್ಲರಂತೆ ಕನ್ನಡದಲ್ಲಿ ಕಲಿಯುವರು. ಇದರಿಂದ ಅವರಿಗೆ 'ಅತ್ಯಾವಶ್ಯವಿದ್ದ ಕನ್ನಡ ಜ್ಞಾನವು ... ... ಜ್ಞಾನದ ಲಾಭವೂ ಸಂಭವಿಸುವದು. ಕೇವಲ ಮರಾಟಿಗರ ಸಲುವಾಗಿ ಪ್ರತ್ಯೇಕವಾದ ಶಾಲೆಗಳಿಲ್ಲದುದರಿಂದ, ಕಟ್ಟಡ, ಶಿಕ್ಷಕ, ವಿಷಯ ಮೊದಲಾದ ಎಲ್ಲ ವೆಚ್ಚವು ನಿವಾರಣವಾಗಿ ಮಿಗುತಾಗಿ ಉಳಿಯುವದು. ಈ ಹೆಚ್ಚು ವೆಚ್ಚದಿಂದಾಗುವ ಲಾಭವಾದರೂ ಏನೂ ಇಲ್ಲ. ಮರಾಟಿ ದೇಶದಲ್ಲಿದ್ದ ಕನ್ನಡಿಗರ ಸಲುವಾಗಿ ಪ್ರತ್ಯೇಕ ಕನ್ನಡ ಶಾಲೆಗಳನ್ನಾಗಲಿ, ಕನ್ನಡ ಭಾಷೆಯ ಶಿಕ್ಷಣದ ವ್ಯವಸ್ಥೆಯಾಗಲಿ, ಮಾಡುವಷ್ಟು ಔದಾರ್ಯವನ್ನು ಯಾವ ಮರಾಟೀ ನಗರವೂ ಈ ವರೆಗೆ ತೋರಿಸಿಲ್ಲ. ಆದರೂ ಮರಾಟಿಗರ ಹಾಗೆ ತೋರಿಸಿಲ್ಲವಾದುದರಿಂದ ಕನ್ನಡಿಗರು ಅವರಿಗೆ ಅವಕಾಶ ಕೊಡಬೇಕೆಂದು ನಾವು ಅಭಿಪ್ರಾಯಪಡುವದಿಲ್ಲ. ಕರ್ನಾಟಕದ ಬುದ್ಧಿಯು ಮರಾಟಿಗರಂತೆ ಸಂಕುಚಿತವಲ್ಲ. ನಮ್ಮ ದೃಷ್ಟಿಯು ವಿಶಾಲವಾಗಿದೆ. ಇತ್ತ ನಮ್ಮ ಔದಾರ್ಯವನ್ನೂ, ಅತ್ತ ಮರಾಟಿಗರ ಸಂಕುಚಿತತನವನ್ನೂ ಜಗತ್ತೇ ನೋಡುತ್ತಲಿದೆ!

ಪೋರ್ತುಗಾಲ ದೇಶವು ರಾಜ್ಯಕ್ರಾಂತಿಯ ಹಳ್ಳಾಟಕ್ಕಾಗಿ ಒಳ್ಳೇ ಫಲವತ್ತರವಾದ ಭೂಮಿಯಿದ್ದಂತೆ ತೋರುತ್ತದೆ. ಕಳೆದ ೩೦ ವರ್ಷಗಳಿಂದ ಒಂದೆ ಸಮನೆ ಗೊಂದಲವು ಇದ್ದೇಯಿದೆ. ೧೯೧೦ ನೆ ಇಸ್ವಿಯಲ್ಲಿ ಪ್ರಜಾಸತ್ತಾತ್ಮಕವಾದ ಕ್ರಾಂತಿಕಾರಕರ ತಂಡವು ರಣಭೂಮಿಯಮೇಲೆ ಅಧಿಷ್ಠಿಸಿ ಬಂದಾಗಿನಿಂದ, ಪ್ರತಿವರ್ಷವೂ ಸಣ್ಣಪುಟ್ಟ ದಾಳಿಗಳು ನಡೆಯುತ್ತಲೇಯಿವೆ. ಒಂದು ವರ್ಷ ಸಹ ಶಾಂತಿಯಿಲ್ಲ. ಕೆಲವು ವರ್ಷಗಳಿಂದ ಪ್ರಜಾಸತ್ತಾತ್ಮಕ ರಾಜ್ಯವು ಕ್ರಾಂತಿಕಾರರಿಂದ ಸ್ಥಾಪಿಸಲ್ಪಟ್ಟಿತಷ್ಟೇ? ಈ ಅವಧಿಯಲ್ಲಿ ಐದು ಚಿಕ್ಕ ದಾಳಿಗಳನ್ನು ಬಿಟ್ಟರೂ, ನಾಲ್ಕು ಸಲ ಭಯಂಕರವಾದ ಉತ್ಕ್ರಾಂತಿಗಳು ಉಂಟಾಗಿವೆ. ಸರಕಾರಕ್ಕೆ ಪ್ರಜಾಸತ್ತಾತ್ಮಕ ನೆಲೆ ದೊರೆತಿದೆ. ಆದರೆ ಪ್ರಜೆಗಳಿಗೆ ಏನೂ ಸುಖವಿಲ್ಲವೆಂಬುದು ಆಗಿಂದಾಗ್ಗೆ ಏಳುವ ದಂಗೆಗಳಿಂದ ಸಿದ್ಧವಾಗುತ್ತದೆ. ಉತ್ತರಭಾಗದ ಪದಚ್ಯುತನಾದ ರಾಜನ ಪಕ್ಷವೂ, ದಕ್ಷಿಣಭಾಗದ ರಾಜ್ಯಕ್ರಾಂತಿಕಾರ ಪಕ್ಷವೂ, ಕಾರಕೂನರ ಪಕ್ಷವೂ ಸ್ವತಂತ್ರ ಪಕ್ಷವೂ, ಹೀಗೆ ನಾನಾ ಪಕ್ಷಗಳಾಗಿದ್ದರೂ, ದೇಶದಲ್ಲಿ ಇಷ್ಟು ಚಿಂತೆಯಾಗಿರುವಂತೆ ತೋರುತ್ತದೆ. ಮಮ್ಮೆಲ್ಲಾಗಿ ಪಕ್ಷಗಳಿಗಿಂತ ಬಲಿಕೆಲವಿರುವ ವ್ಯಕ್ತಿಗಳ ಪ್ರಸ್ಥವೇ ಹೆಚ್ಚಾಗಿದೆ. ಇದರಿಂದ ದೇಶದಲ್ಲಿ ಶಾಂತಿಯಿಲ್ಲ, ಸುಖವಿಲ್ಲ. ಹೊಸ್ಸಿನ ರಾಜ್ಯಕ್ರಾಂತಿಯ ಗೊಂದಲವು ಬಗ್ಗಲ್ಪಟ್ಟರೂ, ಕುಹೇಸ್ತೆಯ ಬೇರುಗಳು ಇನ್ನೂ ಸಧೃಢವಾದಂತೆ ತೋರುತ್ತದೆ. ಅಲ್ಲಿಯ ವಾತಾವರಣವು ಇನ್ನೂ ಸ್ಪಷ್ಟವಾಗಿ ತಿಳಿಯದು. ಏನಾಗುವದೋ ಮುಂದೆ ನೋಡಬೇಕು.

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ.
ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು, ಅವುಗಳೊಳಗಿನ ಕೆಟ್ಟುಹೋದ ಮುರಿದ-ಒಡೆದ ಭಾಗಗಳ ದುರುಸ್ತಿಯನ್ನು ಮಾಡುವದು. ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುತ್ತೇವೆ. ಅದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ. ನುರಿತವರಾಗುತ್ತಾರೆ. ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ತಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕಾ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸ್ಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಬೇರೆಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದುಕೊಳ್ಳಿರಿ!

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.
೪೫೫ ಶನಿವಾರ ಪೇಠ ಜಮಖಂಡಿಕರ ವಾಡ ಪುಣೆ ಶಹರ

ನಪುಂಸಕತ್ವ

ಧಾತು ವಿಕಾರ, ಸ್ವಪ್ನಾವಸ್ಥೆ, ಅಶಕ್ತತೆ ಇತ್ಯಾದಿಗಳಮೇಲೆ ಖಂಡಿತವಾಗಿ ಗುಣಕೊಡುವ ಮತ್ತು ಕಡೇತನಕ ಬಾಳುವ ದಿವ್ಯ ಔಷಧಿ! ಒಂದೇ ಗುಳಿಗೆ!!

ವಿಶೇಷ ಮಾಹಿತಿ ಪತ್ರದ್ವಾರ ತಿಳಿಯಿರಿ.

ವಾದಿರಾಜ ಜಹಾಗೀರದಾರ.

ಮು. ಪೋ. ಇಲಕಲ್ಲ. (ವಿಜಾಪುರ)

ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಷ್ಟವನ್ನು ಚನ್ನಾಗಿ ಅರಿಯುವೆವು, ಹಲ್ಲುಗಳ ರೋಗಗಳನ್ನು ಕಳೆಯುವೆವು. ಕಷ್ಟಸಾಧ್ಯವಾಗಿದ್ದ ರಕ್ತಸ್ರಾವವನ್ನು ನಿಲ್ಲಿಸುವೆವು. ಹುಳಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು. ಅಲುಗಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು. ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಂತೆ ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು. ಹಲ್ಲುಗಳ ಪೂರ್ಣ ಸೆಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

S. U. Nara imacharya & Co.
Chaukhamba Benares City



S. U. N. & CO.
BENARES CITY.

ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪೀತಾಂಬರ, ಜರಿಕಣ, ಜರಿಸೀರೆ, ಕಾಶ್ಮೀರೀ ಶಾಲು, ತಂಬಾರಿ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮುಂತಾದ ಸಾಮಾನುಗಳ ಕ್ಯಾಟಲಾಗ ಕೋರಿದವರಿಗೆ ಇನಾಮವಾಗಿ ಕಳಿಸಲಾಗುತ್ತದೆ.

ವಿಳಾಸ-ಶಿ. ಉ. ನಾರಾಯಣಾಚಾರ್ಯ &
ಕಂಪನಿ ಚೌಖಾಂಬಾ ಕಾಶಿ

ಈ ಪತ್ರಿಕೆಯು ಮಾಲಕರಾದ ರಾಘವೇಂದ್ರರಾವ ಸುಬ್ಬರಾವ ಶ್ರೀನಿವಾಸ ರಾಯರಿಂದ ಬಾಗಲಕೋಟೆಯ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿತು.

ರ ನಂ. ಬಿ. ೧೯೪೭   ವಾ ಚಂದಾ ೧—೧೩—೦ ಮಾತ್ರ

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು ನವಾಭಿವ್ಯಕ್ತವಾಗಲಿ.

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟ ಶುಕ್ರವಾರ ತಿಥಿ ಮಾಘ ಬಹುಳ ೮ ಶಕೆ ೧೮೪೮ ತಾ|| ೨೫ ೨-೧೯೨೭ | ಸಂಖ್ಯೆ ೪೭

ಸಂಪಾದಕರ ಧ್ವನಿ

(೬೦)

ನನ್ನ ಮನಸಿನ ಮೋಹವಾದಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮೆ।
ಚಿನ್ನದಾದರು ಚಿನ್ನ ಮೋಹಬತ್ತಿಯು ನೊಂದು ಚಿನ್ಮಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ಕಣ್ಣನ್ನು ಕಲ್ಲಾಗಿ ನಿಕ್ಷಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ಹೀರಬಹ ಗಂಧವಹವೆಂದು ತಿಳಿಯೆ।

—ಆಂಜಿಕಾ ಕನಯ ಪತ್ರ

ಕರ್ನಾಟಕದಲ್ಲಿಯ ಮರಾಠಿ ಶಾಲೆಗಳ ಬಗ್ಗೆ ಮುಬ್ಬಳ್ಳಿ ಸ್ಕೂಲ ಬೋರ್ಡಿನವರು ಗೊತ್ತುಮಾಡಿದ ನಿರ್ಣಯವು ಒಂದು ಒಗೆಯಿಂದ ಈ ಪ್ರಶ್ನೆಯನ್ನು ಬಿಡಿಸಿದಂತಾಗಿದೆ:—

“ ಹುಬ್ಬಳ್ಳಿಯು ಕರ್ನಾಟಕದ ಕೇಂದ್ರ ಸ್ಥಾನವಾಗಿರುವದರಿಂದ ಈ ಊರಲ್ಲಿ ಕಲಿಯುವ ಮರಾಠಿಗರ ಮಕ್ಕಳಿಗೆ ಕನ್ನಡ ಭಾಷಾಜ್ಞಾನವು ಅತ್ಯವಶ್ಯವೆಂದೂ, ವ್ಯವಹಾರಕ್ಕೆ ಅತ್ಯುಪಯುಕ್ತವಾದದ್ದೆಂದೂ ಬಗೆದು ಆ ದರ್ಜೆ ಶಾಲೆಗಳಲ್ಲಿ ಕನ್ನಡವನ್ನು ಕಲಿಸುತ್ತಿರುವಂತೆ ಮರಾಠಿ ಶಾಲೆಗಳಲ್ಲಿಯೂ ಕನ್ನಡ ಭಾಷೆಯನ್ನು ಕಲಿಸಲು ಉಪಕ್ರಮಿಸುವ ವ್ಯವಸ್ಥೆಯಾಗಿದೆ ”

ಮರಾಠಿಗರಿಗೆ ತಪ್ಪುತಿಳುವಳಿಕೆಯಾಗಬಾರದೆಂದು, ಆಯಾ ಶ್ರಾಂಬುಕ್ಕೆ ಈ ತೀರ್ಮಾನವು ಇಷ್ಟೊಂದು ದೊಡ್ಡದಾದ ವಾಕ್ಯದಿಂದ ರಚಿಸಲ್ಪಟ್ಟಿದ್ದು ಸ್ಪಷ್ಟವಿದೆ. ಕಾರಣವನ್ನು ಹೇಳಿದ್ದರಿಂದ ನಿಜ ಸ್ಥಿತಿಯು ಎಲ್ಲರಿಗೂ ತಿಳಿಯುವದ ಸರಿಯೆ. ಆದರೆ ಕನ್ನಡ ನಾಡಿನವರು ಕನ್ನಡದ ಬಗ್ಗೆಯೂ, ಕನ್ನಡ ನಾಡಿನಲ್ಲಿ ವಾಸಮಾಡುವ ಜನರ ಹಿತಕಾರ್ಯಗಳ ಬಗ್ಗೆಯೂ ಮಾತನಾಡುವಾಗ ಅಂಜಿಕೆಯೇಕೆ? ನಿಜವಾಗಿ ಹುಬ್ಬಳ್ಳಿಯವರು ಹೀಗೆ ‘ಬಾವೇರಿನ್ಯಾಯ’ದ ತೀರ್ಮಾನದ ಬದಲು “ಹುಬ್ಬಳ್ಳಿಯು ಕರ್ನಾಟಕದ ಕೇಂದ್ರಸ್ಥಾನವಾಗಿರುವದರಿಂದ ಮರಾಠಿ ಶಾಲೆಗಳನ್ನು ಬಂದುಮಾಡಿದೆ; ಮತ್ತು ಮರಾಠಿ ಮಾತೃಭಾಷೆಯುಳ್ಳ ಬಾಲಕರಿಗೆ ಮರಾಠಿಯನ್ನು ಕಲಿಸಲು ಕನ್ನಡ ಶಾಲೆಗಳಲ್ಲಿ ಓರ್ವ ಮರಾಠಿ ಶಿಕ್ಷಕನ ಏರ್ಪಾಡಾಗಿರುವದು” ಎಂದಾಗಿ ನಿರ್ಣಯಿಸಿದ್ದರೆ ಯೋಗ್ಯವಾಗುತ್ತಿತ್ತು. ಇದರಿಂದ ಮರಾಠಿಗರಿಗೆ ಮರಾಠಿ ಭಾಷೆಯ ಶಿಕ್ಷಣದ ವ್ಯವಸ್ಥೆಯಾಗಿ, ಎಲ್ಲವೂ ಉಳಿಯುವದು. ಕನ್ನಡ ಶಾಲೆಗಳಲ್ಲಿ ಮರಾಠಿಗರು ಗಣಿತ ಇತಿಹಾಸ ಮೊದಲಾದ ವಿಷಯಗಳನ್ನು ಎಲ್ಲರಂತೆ ಕನ್ನಡದಲ್ಲಿ ಕಲಿಯುವರು. ಇದರಿಂದ ಅವರಿಗೆ ‘ಅತ್ಯಾವಶ್ಯವಿದ್ದ ಕನ್ನಡ ಜ್ಞಾನವು ದೊರೆಯುವದಲ್ಲದೆ, ಉಳಿದ ಜ್ಞಾನದ ಲಾಭವೂ ಸಂಭವಿಸುವದು. ಕೇವಲ ಮರಾಠಿಗರ ಸಲುವಾಗಿ ಪ್ರತ್ಯೇಕವಾದ ಶಾಲೆಗಳನ್ನು ಇಡುವದರಿಂದ, ಕಟ್ಟಡ, ಶಿಕ್ಷಕ, ಶಿಸ್ತು ಮೊದಲಾದ ಎಲ್ಲ ವೆಚ್ಚವು ವಿನಾಕಾರಣವಾಗಿ ಹೆಚ್ಚಾಗಿ ಇರುವದು. ಈ ವೆಚ್ಚ ಹೆಚ್ಚಿದರಿಂದಾಗುವ ಲಾಭವಾದರೂ ಏನೂ ಇಲ್ಲ. ಮರಾಠಿ ದೇಶದಲ್ಲಿದ್ದ ಕನ್ನಡಿಗರ ಸಲುವಾಗಿ ಪ್ರತ್ಯೇಕ ಕನ್ನಡ ಶಾಲೆಗಳನ್ನಾಗಲಿ, ಕನ್ನಡ ಭಾಷೆಯ ಶಿಕ್ಷಣದ ವ್ಯವಸ್ಥೆಯನ್ನಾಗಲಿ, ಮಾಡುವಷ್ಟು ಔದಾರ್ಯವನ್ನು ಯಾವ ಮರಾಠೀ ನಗರವೂ ಈ ವರೆಗೆ ತೋರಿಸಿಲ್ಲ. ಆದರೂ ಮರಾಠಿಗರ ಹಾಗೆ ತೋರಿಸಿಲ್ಲವಾದುದರಿಂದ ಕನ್ನಡಿಗರು ಅವರಿಗೆ ಸಹಕ್ಕೆ ಸಹ ಕೊಡಬೇಕೆಂದು ನಾವು ಅಭಿಪ್ರಾಯಪಡುವದಿಲ್ಲ. ಕರ್ನಾಟಕದ ಬುದ್ಧಿಯು ಮರಾಠಿಗರಂತೆ ಸಂಕುಚಿತವಲ್ಲ. ನಮ್ಮ ದೃಷ್ಟಿಯು ವಿಶಾಲವಾಗಿದೆ. ಇತ್ತ ನಮ್ಮ ಔದಾರ್ಯವನ್ನೂ, ಅತ್ತ ಮರಾಠಿಗರ ಸಂಕುಚಿತತನವನ್ನೂ ಜಗತ್ತೇ ನೋಡುತ್ತಲಿದೆ!

ಪೋರ್ತುಗಾಲ ದೇಶವು ರಾಜ್ಯಕ್ರಾಂತಿಯ ಚಳವಳಿಕ್ಕಾಗಿ ಒಳ್ಳೇ ಫಲವತ್ತರವಾದ ಭೂಮಿಯಿದ್ದಂತೆ ತೋರುತ್ತದೆ. ಕಳೆದ ೩೦ ವರ್ಷಗಳಿಂದ ಒಂದೆ, ಹೊಸ ಗೊಂದಲವು ಇದ್ದೇ ಇದೆ. ೧೯೧೦ ನೇ ಇಸ್ವಿಯಲ್ಲಿ ಆ ಮಹತ್ವದವಾದ ಕ್ರಾಂತಿಕಾರಕರ ತಂಡವು ರಣಭೂಮಿಯ ಮೇಲೆ ಆರ್ಭಟಿಸಿ ಬಂದಾಗಿನಿಂದ, ಪ್ರತಿವರ್ಷವೂ ಸಣ್ಣ ಸಣ್ಣ ದಂಗೆಗಳು ಏಳುತ್ತಲೇ ಇವೆ. ಒಂದು ವರ್ಷ ಸಹ ಶಾಂತಿಯಿಲ್ಲ. ಕೇವಲ ವರ್ಷಗಳಿಂದ ಪ್ರಜಾಸತ್ತಾತ್ಮಕ ರಾಜ್ಯವು ಕ್ರಾಂತಿಕಾರರಿಂದ ಸ್ಥಾಪಿಸಲ್ಪಟ್ಟಿತಷ್ಟೇ? ಈ ಅವಧಿಯಲ್ಲಿ ಎಂಟು ಪಕ್ಷ ದಾಳಿಗಳನ್ನು ಬಿಟ್ಟರೂ, ನಾಲ್ಕು ಸಲ ಭಯಂಕರವಾದ ಉತ್ಕ್ರಾಂತಿಗಳು ಉಂಟಾಗಿವೆ. ಸರಕಾರಕ್ಕೆ ಪ್ರಜಾಸತ್ತಾತ್ಮಕ ಹೆಸರಿದೆ. ಆದರೆ ಪ್ರಜೆಗಳಿಗೆ ಏನೂ ಸುಖವಿಲ್ಲವೆಂಬುದು ರಾಗಿಂದಗ್ಗೆ ಏಳುವ ದಂಗೆಗಳಿಂದ ಸಿದ್ಧವಾಗುತ್ತದೆ. ಉತ್ತರಭಾಗದ ಪದಚ್ಯುತನಾದ ರಾಜನ ಪಕ್ಷವೂ, ದಕ್ಷಿಣಭಾಗದ ರಾಜ್ಯಕ್ರಾಂತಿಕರ ಪಕ್ಷವೂ, ಆರಕೂನರ ಪಕ್ಷವೂ, ಸ್ವತಂತ್ರ ಪಕ್ಷವೂ, ಹೆಸರಿಗೆ ಮಾತ್ರವಾಗಿದ್ದರೂ, ದೇಶದಲ್ಲಿ ಇನ್ನೂ ಜೀವಂತವಾಗಿರುವಂತೆ ತೋರುತ್ತದೆ. ಮುಖ್ಯವಾಗಿ ಪಕ್ಷಗಳಿಗಿಂತ ಹಲಕೆಲವು ವಿಶಿಷ್ಟ ವ್ಯಕ್ತಿಗಳ ಪ್ರಸ್ಥವೇ ಹೆಚ್ಚಾಗಿದೆ. ಇದರಿಂದ ದೇಶದಲ್ಲಿ ಶಾಂತಿಯಿಲ್ಲ. ಸುಖವಿಲ್ಲ. ಹೊಸ್ಸಿನ ರಾಜ್ಯಕ್ರಾಂತಿಯ ಗೊಂದಲವು ಹಬ್ಬಿಸಲ್ಪಟ್ಟರೂ, ಕುಚೇಷ್ಟೆಯ ಬೇರುಗಳು ಇನ್ನೂ ಸಡ್ಡದವಾದಂತೆ ತೋರುತ್ತದೆ. ಅಲ್ಲಿಯ ವಾತಾವರಣವು ಇನ್ನೂ ಸ್ಪಷ್ಟವಾಗಿ ತಿಳಿಯದು. ಏನಾಗುವದೋ ಮುಂದೆ ನೋಡಬೇಕು.

ಕರ್ನಾಟಕದ ಶಿಲಾಲಿಪಿಗಳು

ಲೇಖಾಂಕ ೩

[ಕಳೆದ ವಾರದಿಂದ ಮುಂದರಿಸಿದ್ದು]

ಕಳೆದ ವಾರದಲ್ಲಿ ಕೊಟ್ಟ ಕೋಷ್ಟಕದಿಂದ ಇದುವರೆಗೆ ನಡೆದ ಪ್ರಸಿದ್ಧಿಯು ವ್ಯವಸ್ಥಿತವಲ್ಲವೆಂದೂ, ಅದಕ್ಕೆ ಹೆಚ್ಚು ಕಾಲ ಹತ್ತಿದ್ದೆಂದೂ ಗೊತ್ತಾಗುತ್ತದೆ. ಇದಕ್ಕೆ ಮುಖ್ಯಕಾರಣವೇನೆಂದರೆ ೧ ನೇ ಸಂಪುಟದಲ್ಲಿ ಲಿಪಿಗಳು ಭಾಷಾಂತರ, ಟಿಪ್ಪಣಿಗಳೊಂದಿಗೆ ವಿಶದವಾಗಿ ಪ್ರಕಟಿಸಲ್ಪಟ್ಟಿವೆ ಮತ್ತು ಅದಕ್ಕೆ ಸಾಕಷ್ಟು ಅಸಿಸ್ಟಂಟರೂ ಇದ್ದಿಲ್ಲ, ಆದ್ದರಿಂದ ನಿಯುಕ್ತ ಪದ್ಧತಿಯಲ್ಲಿ ಕೆಲಸಕ್ಕೆ ಹೆಚ್ಚು ಕಾಲ ಹತ್ತಿರಬಹುದು. ಆದರೆ ಸಂಗ್ರಹದ ಕೆಲಸವು ಬೇಗನಾಗಿ ಪ್ರಸಿದ್ಧಿಯಲ್ಲಿ ತಡವಾದರೆ ಇತಿಹಾಸ ಸಂಶೋಧನೆಗೆ ಪ್ರಯೋಜನವಿಲ್ಲೆಂಬುದನ್ನು ಮನಗಂಡು ಸರಕಾರದವರು ... ಆದ್ದರಿಂದ ಈ ಮೋಹವೇ ಕೂಡಿಸಲ್ಪಟ್ಟ ೧೨,೦೦೦ ಲಿಪಿಗಳ ವಿಷಯದಲ್ಲಿ ಪಾಶ್ಚಾತ್ಯ ಮತ್ತು ಭಾರತ ... ವಿಶೇಷವಾಗಿ ಸರಕಾರದವರಿಗೆ ಒತ್ತಾಯ ಮಾಡಿದಂತೆ ತೋರುತ್ತದೆ (S I I Vol IV ಉಪೋದ್ಘಾತ ನೋಡಿರಿ) ಆದ್ದರಿಂದ ಸರಕಾರದವರು ಲಿಪಿಗಳ ವಾರ್ಷಿಕ ವರದಿ (Ep. Reports)ಗಳ ಮೇಲೆ ಕೆಳಗಿನ ಅಭಿಪ್ರಾಯವನ್ನು ಕೊಟ್ಟು ಎಪಿಗ್ರಾಫಿಸ್ಟರಿಗೆ ಸಂಗ್ರಹ ಮತ್ತು ಪ್ರಕಾಶನಗಳನ್ನು ವೇಗದಿಂದ ನಡೆಸುವಂತೆ ಒತ್ತಾಯ ಪಡಿಸುತ್ತಾರೆ

" The number of inscriptions copied and examined fell from 614 in the year 1913-13 to 438 in 1913 14 The importance of proceeding with this work with all reasonable speed has more than once been emphasized by the Government and they hope that the Assistant Superintendent will ensure that nothing is allowed to interfere with its progress. (೧೯೧೩ ೧೪ ರಲ್ಲಿ ಸಂಗ್ರಹಿಸಿದ ಲಿಪಿಗಳ ಸಂಖ್ಯೆ ೬೧೪)ರಿಂದ ೧೯೧೩-೧೪ ರಲ್ಲಿಯು ಸಂಗ್ರಹ(೪೩೮)ಕ್ಕೆ ಕಡಿಮೆಯಾಗಿರುತ್ತದೆ ಸಂಗ್ರಹವು ಒತ್ತಾಯದಿಂದ ನಡೆಯಬೇಕೆಂದು ಸರಕಾರದವರು ಅನೇಕ ಸಲ ಅಭಿಪ್ರಾಯಪಟ್ಟಿರುತ್ತಾರೆ. ಅದ್ದರಿಂದ ಅಸಿಸ್ಟಂಟ ಸುಪರಿಂಟೆಂಡರು ಅವಿಚ್ಛಿನ್ನವಾಗಿ ಈ ಕೆಲಸವು ಸಾಗುವಂತೆ ಜಾಗರೂಕರಾಗಿರಬೇಕು)

(4th; August 1914 Madras Report Page 107)

" They (ie the Govt) trust that the Assistant Archaeological Superintendent will devote special attantion to the systematic publication of the inscriptions collected "

(25th, Augest 1915 Madras Report P 118)

(ಅಸಿಸ್ಟಂಟ ಆ ಸುಪರಿಂಟೆಂಡೆಂಟರು ಸಂಗ್ರಹಿಸಿದ ಲಿಪಿಗಳ ವ್ಯವಸ್ಥಿತ ಪ್ರಸಿದ್ಧಿಯ ವಿಷಯದಲ್ಲಿ ಮುಖ್ಯವಾಗಿ ಲಕ್ಷ್ಯ ಪುರವೈಸುವರೆಂದು ಸರಕಾರದವರು ಆಶಿಸುತ್ತಾರೆ)

" The Govt trust that under the arrangements sanctend in G o· No 890, Home [Education] dated the 5th, July 1918, the Asst. Arch. Suptt for Epigraphy will make a substanteal advance in the work of publication of insciptions "

(6th, September 1918 Madras Report P 176)

" ಈ ಮೊದಲೇ ಮಾಡಿದ ವ್ಯವಸ್ಥೆಯಿಂದ, ಲಿಪಿಗಳ ಪ್ರಸಿದ್ಧಿಯಲ್ಲಿ ಅಸಿಸ್ಟಂಟ ಸುಪರಿಂಟೆಂಡೆಂಟರು ಹೆಚ್ಚು ಜೋರಿನಿಂದ ಕೆಲಸವನ್ನು ಸಾಗಿಸುವರೆಂದು ಸರಕಾರದವರು ನಂಬಿರುತ್ತಾರೆ. "

ಅಂತು ಈ ಮೇಲಿನ ಅವತರಣಿಕೆಗಳಿಂದ ಸರಕಾರದವರು ಲಿಪಿಗಳ ಕೇವಲ ಸಂಗ್ರಹದಿಂದ ಪ್ರಯೋಜನವಿಲ್ಲವೆ ಅವುಗಳ ಪ್ರಸಿದ್ಧಿಯು ಒತ್ತರದಿಂದ ಸಾಗುವದು ಇತಿಹಾಸ ಸಂಶೋಧನೆಯ ದೃಷ್ಟಿಯಿಂದ ಅತ್ಯವಶ್ಯವೆಂದು ಅಭಿಪ್ರಾಯಪಟ್ಟಿರುತ್ತಾರೆಂದು ಗೊತ್ತಾಗುತ್ತದೆ. ಮತ್ತು ಪ್ರಸಿದ್ಧಿಯ ಕೆಲಸವು ಒತ್ತರದಿಂದ ಸಾಗಬೇಕೆಂಬ ಉದ್ದೇಶದಿಂದ, S I. I. ದ (ದಕ್ಷಿಣ ದೇಶದ ಶಿಲಾಲಿಪಿಗಳು) ಮೂಲಗಳನ್ನು ಮಾತ್ರ ಸಂಗ್ರಹಕಾಲಕ್ಕನುಸರಿಸಿ ವ್ಯವಸ್ಥಿತವಾಗಿ ಪ್ರಸಿದ್ಧಪಡಿಸಬೇಕೆಂದು ಗೊತ್ತುಮಾಡಿದರು. (S I I· Vol IV ಉಪೋದ್ಘಾತ ನೋಡಿರಿ.) ಆನೆಯ ಸಂಪುಟದಿಂದ ಮುಂದೆ ಭಾಷಾಂತರವಿಲ್ಲದ ಪ್ರತಿಯೊಂದು ಸಂಪುಟದಲ್ಲಿ ೧೦೦೦ ಲಿಪಿಗಳನ್ನಾದರೂ ಪ್ರಸಿದ್ಧಿಸಬೇಕೆಂದೂ ಅದಕ್ಕೆ ಸುಮಾರು ೨ ವರ್ಷ ಅವಧಿಯನ್ನು ತೆಗೆದುಕೊಳ್ಳಬಹುದೆಂದೂ ಸ್ಪಷ್ಟವಾಗಿ ಅದೇ ಉಪೋದ್ಘಾತದಲ್ಲಿ ನಮೂದವಾಗಿದೆ. ಇದಕ್ಕಾಗಿ, ಎಪಿಗ್ರಾಫಿಸ್ಟರ ಕಚೇರಿಯ ಮೂಲಕ S I.I ಪ್ರಸಿದ್ಧಿಯ ಸಹಾಯಕ್ಕಾಗಿ ೧೯೧೮-೧೯ರಲ್ಲಿ ೧ ಟೆಕ್ನಿಕಲ್ ಅಸಿಸ್ಟಂಟ, ೨ ರೀಡರ್ಸ, ೧ ಪಂಡಿತ ಹೀಗೆ ೪ ಜನ ಹೆಚ್ಚಿನ ಸಹಾಯಕರನ್ನು ಕೊಟ್ಟರು. ಇದರಿಂದ ಕೆಲಸವು ಒಳ್ಳೇ ಜೋರಿನಿಂದ ಸಾಗಿ ಸ್ವಲ್ಪೇ ಅವಧಿಯಲ್ಲಿ ೬-೭ ಸಂಪುಟಗಳು ಹೊರಬಿದ್ದವು ಈ ಸಂಪುಟಗಳಲ್ಲಿ ೧೮೮೭ ರಿಂದ ೧೯೦೭ರ ವರೆಗೆ ಕೂಡಿಸಲ್ಪಟ್ಟ ಲಿಪಿಗಳು ಅಡಕವಾಗಿವೆ. ಆದರೆ ದುರ್ದೈವದಿಂದ ಸರಕಾರದವರು ೧೯೨೨ರಲ್ಲಿ ಈ ಹಂಗಾಮಿ ಸಹಾಯಕರನ್ನು ನಿಲ್ಲಿಸಿದ್ದರಿಂದ ಇರಳೆಯು ಆಗಿತದಂತೆ ಹೆಚ್ಚುತ್ತಿರುವ ಸಂಗ್ರಹದ ಜೊತೆಗೆ ಪ್ರಸಿದ್ಧಿಯ ಕಾರ್ಯವು ಸಾಗುವದು ಅಶಕ್ಯವೆಂದು ತೋರುತ್ತದೆ ಈ ವಿಷಯವನ್ನು ಕುರಿತು ಮುಂದಿನ ಲೇಖನದಲ್ಲಿ ಬರೆದ್ದಾಗಿ ವಿವೇಚಿಸುವೆವು.

ಇನ್ನು ಕರ್ನಾಟಕದ ಲಿಪಿಗಳ ಪ್ರಸಿದ್ಧಿಯ ಬಗ್ಗೆ ಒಂದೆರಡು ಮಾತುಗಳನ್ನು ಬರೆಯುತ್ತೇವೆ ನಾವು ಹಿಂದಿನ ಲೇಖನದಲ್ಲಿ ಮದ್ರಾಸ ಕರ್ನಾಟಕದಲ್ಲಿ ಕೂಡ ಸಾಕಷ್ಟು ಸಂಗ್ರಹವಾಗಿಲ್ಲೆಂದೂ, ಮುಂಬೈ ಕರ್ನಾಟಕದಲ್ಲಂತೂ ಕಳೆದ ವರ್ಷವೇ ಸಂಗ್ರಹಕ್ಕೆ ಪ್ರಾರಂಭವಾಯಿತೆಂದೂ ಹೇಳಿದ್ದೇವೆ ಮತ್ತು ಅಖಿಲ ಕರ್ನಾಟಕದಲ್ಲಿಯ ಲಿಪಿಗಳ ಸಂಗ್ರಹವು ಸದ್ಯಕ್ಕೆ ಸುಮಾರು ೧೨೦೦೦-೧೪೦೦೦ ಇರುತ್ತದೆಂದೂ ತಿಳಿಸಿದ್ದೇವೆ. ಮೇಲೆ ಹೇಳಿದಂತೆ ೧೮೮೭ ರ ಪೂರ್ವದಲ್ಲಿಯೇ ಫ್ಲೀಟ ಸಾಹೇಬರ ಪ್ರಯತ್ನದಿಂದ ಕೆಲ ಕರ್ನಾಟಕ ಲಿಪಿಗಳು ಪ್ರಸಿದ್ಧವಾಗಿದ್ದವು. ಶಾಸನ ಖಾತೆಯು ಹುಟ್ಟಿದ ಮೇಲೆ ಸ್ವಲ್ಪೇ ಸ್ವಲ್ಪ ಲಿಪಿಗಳು S I. I ದ ಸಂಪುಟಗಳಲ್ಲಿ ಪ್ರಸಿದ್ಧವಾಗಿವೆ ೧ ನೇಯ ಸಂಪುಟದಲ್ಲಿ ೧-೨ ಶಾಸನಗಳೂ, ೪ ೫ ಸಂಪುಟಗಳಲ್ಲಿ ೪೫೫-೫೬೦ ಶಾಸನಗಳೂ ಪ್ರಕಟವಾಗಿವೆ. ಇಂಡಿಯನ್ ಎಂಟಿಕ್ವೇರಿ, ಜರ್ನಲ್ ಆಫ್ ದಿ ಬಾಂಬೆ ಬ್ರ್ಯಾಂಚ್‌ಗಳಲ್ಲಿ ಪ್ರಸಿದ್ಧವಾದ ಲಿಪಿಗಳಲ್ಲಿ (ಸುಮಾರು ೧೫೦) ಕೆಲವು ಪ್ರಮಾಣ

ಭೂಷಿತವಾದ ಅಚ್ಚುಗಳೊಂದಿಗೆ ಪುನಃ ಎಪಿಗ್ರಾಫಿಯಾ ಇಂಡಿಕಾದಲ್ಲಿ ಪ್ರಕಟವಾಗಿವೆ. ಅದರಲ್ಲಿ ಹೊಸ ಲಿಪಿಗಳೆಂದರೆ ೧೫೦೦ ರಗಿಂತ ಹೆಚ್ಚು ಇರಲಾರವು. ಈಗಿನ ಬಾರ್ನೆಟರವು ಲಂಡನದಲ್ಲಿದ್ದ ಫ್ಲೀಟರ ಸಂಗ್ರಹದಿಂದ ಒಂದೊಂದೇ ಶಾಸನವನ್ನು ಪ್ರಸಿದ್ಧಿಸುತ್ತಿರುವರು ಅಂತು ಇಲ್ಲಿಯವರೆಗೆ ಪ್ರಸಿದ್ಧವಾದ ಕರ್ನಾಟಕದ ಲಿಪಿಗಳ ಲೆಕ್ಕಮಾಡಲು ಒಟ್ಟಿಗೆ ೨೫೦೦ಕ್ಕಿಂತ ಹೆಚ್ಚಾಗಿಲ್ಲವೆಂದು ಧಾರಾಳವಾಗಿ ಹೇಳಬಹುದು. ಈ ಅರ್ಧಶತಮಾನದಲ್ಲಿ ಇಷ್ಟು ಅಲ್ಪ ಲಿಪಿಗಳು ಪ್ರಸಿದ್ಧವಾಗುವದೆಂದರೆ ಕರ್ನಾಟಕರ ದುರ್ದೈವವೇಸರಿ. ಸರಕಾರದವರು ಮನಸ್ಸುಗೊಟ್ಟರೆ ಇದರ ದೈನ್ಯಾವಸ್ಥೆಯು ಬೇಗನೇ ದೂರವಾಗಬಹುದು. ಕರ್ನಾಟಕವು ದಕ್ಷಿಣ ಹಿಂದುಸ್ಥಾನದಲ್ಲಿ ಮೊದಲಿನಿಂದ ಪ್ರಬಲ ರಾಜಮನೆತನಗಳಿಗೆ ಆಗರವಾಗಿದ್ದರಿಂದ, ಅದರ ಇತಿಹಾಸವನ್ನು ಗೊತ್ತುಮಾಡಿಕೊಳ್ಳುವದು ಕರ್ನಾಟಕಕ್ಕೂ, ದಕ್ಷಿಣ ಹಿಂದುಸ್ಥಾನಕ್ಕೂ, ಅನೇಕ ಅಖಿಲಭಾರತ ವರ್ಷಕ್ಕೂ ಅತ್ಯವಶ್ಯವಾದ ವಿಷಯವಾಗಿದೆ. ಆದ್ದರಿಂದ ಕರ್ನಾಟಕದ ಇತಿಹಾಸ ಸಂಶೋಧನೆಗಾಗಿ ಯೋಗ್ಯ ಪ್ರತ್ಯೇಕ ವ್ಯವಸ್ಥೆಮಾಡುವದು ಸದ್ಯಕ್ಕೆ ಸರಕಾರದ ಮುಖ್ಯ ಕರ್ತವ್ಯವಾಗಿದೆ. ಪ್ರಸಿದ್ಧಿಯಿಲ್ಲದೇ ಕೇವಲ ಲಿಪಿಸಂಗ್ರಹವು ವಿಮರ್ಶಕರಿಗೆ ನಿಷ್ಪ್ರಯೋಜನವೆಂದು ಸರಕಾರದವರು ಮೊದಲೇ ಅಭಿಪ್ರಾಯಪಟ್ಟಿರುತ್ತಾರೆ. (ಮೊದಲಿನ ಅವತರಣಿಕೆಗಳನ್ನು ನೋಡಿರಿ) ಆದ್ದರಿಂದ ನಮ್ಮ ಕರ್ನಾಟಕದ ಮುಂದಾಳುಗಳು ಈ ವಿಷಯದ ಮಹತ್ವವನ್ನರಿತು ಕಾಯದೇಮಂಡಳಗಳಲ್ಲಿ ಪ್ರತ್ಯೇಕ ವ್ಯವಸ್ಥೆಗಾಗಿ ಹೆಣಗಾಡಿದರೆ ಬೇಗನೇ ಅದು ಕೈಗೂಡುವದೆಂದು ನಮ್ಮ ಅಭಿಪ್ರಾಯವು.

ಮುಂದಿನ ಲೇಖನದಲ್ಲಿ ಈ ವಿಷಯದ (ಅಂದರೆ ಪ್ರತ್ಯೇಕ ವ್ಯವಸ್ಥೆಯ) ಬಗ್ಗೆ ಕೆಲವು ಉಪಯುಕ್ತವಾದ ಸೂಚನೆಗಳನ್ನು ಮಾಡುವೆವು, ಅವುಗಳಲ್ಲಿ ಇಷ್ಟವಾದದ್ದನ್ನು ಆರಿಸಿ ಮುಂದಾಳುಗಳು ಅದು ಕೃತಿಯಲ್ಲಿ ಒದುವಂತೆ ಪ್ರಯತ್ನಮಾಡುವರೆಂದು ನಮ್ಮ ನಂಬಿಗೆಯದೆ

—ಶ್ರೀನಿವಾಸ ರಾಜೇರಾವ ಮಂಗಳವೇಢೆ

'ಕನ್ನಡಿಗ'ನ ಬಿನ್ನಹ.

"ಕನ್ನಡಿಗ"ನ ಕಾರ್ಯಾಲಯದಿಂದ ಉತ್ತರವನ್ನಪೇಕ್ಷಿಸುವವರು ತಮ್ಮ ಪತ್ರದೊಡನೆ ಅಂಚೇಚೀಟು ಕಳಿಸದಿದ್ದರೆ ಉತ್ತರವು ದೊರೆಯಲಾರದು.

ವರ್ಗೀಕೃತ ಪ್ರಕಟನೆಗಳು

ಇದೊಂದು ಹೊಸಮಾದರಿಯನ್ನು ಕನ್ನಡಿಗರಿಗಾಗಿ 'ಕನ್ನಡಿಗ'ನು ಪ್ರಾರಂಭಿಸುವನು ಈ ಪ್ರಕಟನೆಗಳಲ್ಲಿ ಜನರು ತಮಗೆ ಬೇಕಾದ ಯಾವ ವಸ್ತುಗಳ ಬಗ್ಗೆಯೂ ಜಾಹೀರಾತವನ್ನು ಕೊಡಬಹುದು. ಉದಾಹರಣಾರ್ಥವಾಗಿ ವಿದ್ಯಾರ್ಥಿಗಳು ಹಳೇ ಗ್ರಂಥಗಳಿಗಾಗಿ; ಸಾಮಾನುಗಳನ್ನು ಕಳೆದುಕೊಂಡವರು ದೊರಕಿಸಿಕೊಳ್ಳುವದಕ್ಕಾಗಿ; ಹಳೇ ಹೊಸ ಸಾಮಾನು ಮಾರತಕ್ಕವರು ಗಿರಾಕಿಗಳನ್ನು ದೊರಕಿಸಲಿಕ್ಕಾಗಿ, ಗಿರಾಕಿಗಳು ಸಾಮಾನುಗಳ ಒಡೆಯರನ್ನು ಶೋಧಿಸುವದಕ್ಕಾಗಿ, ಭಂಡವಾಲು ಬೇಕಾದವರೂ ಮನೆ ಬಾಡಿಗೆಕೊಡತಕ್ಕವರೂ, ಅಥವಾ ಬಾಡಿಗೆಯಿಂದ ತೆಗೆದುಕೊಳ್ಳುವವರೂ ತಮ್ಮ ಇಷ್ಟಪೂರ್ತಿಗಾಗಿ, ಇತ್ಯಾದಿ ಇತ್ಯಾದಿ ಈ ಪದ್ಧತಿಯು ಇಂಗ್ಲೀಷ ಪತ್ರಿಕೆಗಳಲ್ಲೆಲ್ಲ ಲೋಕಪ್ರಿಯವಾಗಿದೆ ಕನ್ನಡದಲ್ಲಿಯಾದರೂ, ಲೋಕಪ್ರಿಯವಾಗುವದೆಂದು ನಾವು ನಂಬುತ್ತೇವೆ ಈ ಬಗ್ಗೆ ಕೆಳಗೆ ಕಾಣಿಸುವಂತೆ ನಿಯಮಗಳಿರುತ್ತವೆ

೨೦ ಶಬ್ದಗಳಿಗೆ ೧ ರೂ.

ಮುಂದಿನ ಪ್ರತಿಯೊಂದು ಶಬ್ದಕ್ಕೆ ೧ ಆಣೆ

ಪ್ರಕಟನೆಯೊಂದಿಗೆ ಹಣವು ಮುಂಗಡವಾಗಿ ಬರಬೇಕು.

ಜಾಹೀರಾತ ದಾರರು ಸಂಪೂರ್ಣ ಹೆಸರು ವಿಳಾಸ ಕಳುಹಿಸಿ ಕೊಡಬೇಕು ಅವಶ್ಯವಿದ್ದರೆ ಮಾತ್ರ ಇವು ಪ್ರಕಟಿಸಲ್ಪಡುವವು

ಹೆಸರು ವಿಳಾಸಗಳನ್ನು ಪ್ರಕಟಿಸಲು ಇಚ್ಛೆಯಿಲ್ಲದವರಿಗೆ ಒಂದು ಸಂಖ್ಯೆಯು ಕೊಡಲ್ಪಡುವದು "ವಿಳಾಸ, ಸಂಖ್ಯೆ . . ಕನ್ನಡಿಗ" ಇದಕ್ಕೆ ಸಹ ಬೆಲೆ ಕೊಡಬೇಕಾಗುವದು

ಸ್ಥಳೀಕರು ನಮ್ಮ ಕಾರ್ಯಾಲಯಕ್ಕೆ ಬಂದು ಉತ್ತರವನ್ನು ನೋಡಿಕೊಳ್ಳಬೇಕು. ಪರಸ್ಥಳದವರಿಗೆ ಪೋಸ್ಟಿನಿಂದ ಅಂಚೇ ವೆಚ್ಚ ಪ್ರತ್ಯೇಕವಿಲ್ಲಿಗೆ ಉತ್ತರಗಳು ಕಳಿಸಲ್ಪಡುವವು. ಆದರೆ ಪತ್ರವ್ಯವಹಾರ ನಡೆಸದೆ, ಅಂಚೇವೆಚ್ಚ ಕಳಿಸಬೇಕು ಉತ್ತರಗಳು ಪರಸ್ಥಳದವರಿಗೆ ದೊರೆಯದೇ ಇದ್ದ ಪಕ್ಷದಲ್ಲಿ ನಾವು ಜವಾಬದಾರರಲ್ಲ ಸಾಲ್ಯಾಕೆ. 'ಪೋಸ್ಟೇಜ' ಕೊಟ್ಟಲ್ಲಿ ರಜಿಸ್ಟರ ಮೂಲಕ ತಿಳಿಸುವೆವು ಜಾಹೀರಾತಗಳಿಗೆ ಉತ್ತರ ಬರೆಯುವವರು ಸ್ಪಷ್ಟವಾಗಿಯೂ ಶುದ್ಧವಾಗಿಯೂ ಕೆಳಗೆ ಕಾಣಿಸಿದಂತೆ ಬರೆಯಬೇಕು.— "ವಿಳಾಸ ಸಂಖ್ಯೆ ..... ಪ್ರಕಟನೆ ವಾ. ಕನ್ನಡಿಗನ ಕಾರ್ಯಾಲಯ ಬಾಗಲಕೋಟೆ" ವಿಳಾಸಸಂಖ್ಯೆಗಳನ್ನು ಸ್ಪಷ್ಟವಾಗಿ ಬರೆಯುವದರ ಕಡೆಗೆ ಎಲ್ಲರೂ ಲಕ್ಷ್ಯಕೊಡತಕ್ಕದ್ದು.

ಬೇಕಾಗಿದ್ದಾರೆ.

ರಂಗಭೂಮಿಯ ಉದ್ಧಾರಕ್ಕಾಗಿ ಸುಶಿಕ್ಷಿತರ ನಾಟಕ ಸಂಘವನ್ನು ಸ್ಥಾಪಿಸಲು ಭಂಡವಲು ಬೇಕಾಗಿದೆ ಕಲಾಪ್ರೇಮಿಗಳು ಪತ್ರವ್ಯವಹಾರವನ್ನು ಮಾಡಬೇಕು ವಿಳಾಸ ಸಂಖ್ಯೆ ೧ "ಕನ್ನಡಿಗ"

ಚಲುವೆಯಾದ ಬ್ರಾಹ್ಮಣ ಕನ್ಯೆ ಬೇಕಾಗಿದೆ; ಸುಶಿಕ್ಷಿತಳಿರಬೇಕು ವರನ ವಯಸ್ಸು ೩೦ ಉತ್ಪನ್ನವು ಚನ್ನಾಗಿದೆ.

ವಿಳಾಸ ಸಂಖ್ಯೆ ೨ "ಕನ್ನಡಿಗ"

ಕರ್ನಾಟಕದಲ್ಲಿ ಸ್ಥಾಪಿತವಾದ ಹೊಸ ಜಾಯಿಂಟ ಸ್ಟಾಕ ಕಂಪನಿಗೆ ಪಾಲುಗಾರರನ್ನು ಕೂಡಿಸುವವರು ಬೇಕಾಗಿದ್ದಾರೆ ೩೦ ಗೆ ೧೦೦ರೂ ಸಂಬಳ ಅಥವಾ ಕಮಿಶನ್ ವಿಳಾಸ ಸಂಖ್ಯೆ ೩ "ಕನ್ನಡಿಗ"

ಸ್ಟೇಶನ್ನ ಶಹರ, ಹಳ್ಳಿಗಳಲ್ಲಿ ಗ್ರಂಥಗಳನ್ನು ಮಾರಾಟಮಾಡಲು ಉತ್ಸಾಹಿ ಪ್ರಾಮಾಣಿಕ ತರುಣರು ಬೇಕಾಗಿದ್ದಾರೆ ದಳ್ಳಾಳಿ ದೊರೆಯುವದು. ವಿಳಾಸ— "ಸ್ವಧರ್ಮ" ಧಾರವಾಡ.

'ಕನ್ನಡಿಗ' ನ ಚಂದಾದಾರರನ್ನು ಹೆಚ್ಚಿಸಲು ಮತ್ತು ಜಾಹೀರಾತುಗಳನ್ನು ದೊರಕಿಸಲು ಪ್ರಾಮಾಣಿಕ ಹಾಗೂ ಉತ್ಸಾಹಿ ವ್ಯವಹಾರಜ್ಞರು ಬೇಕು. ಕಮಿಶನ್ ದೊರೆಯುವದು.

"ಕನ್ನಡಿಗ" ಕಾರ್ಯಾಲಯ ಬಾಗಲಕೋಟೆ.

ಮಾರಾಟ

ನಾಲ್ಕು ತಿಂಗಳಹಿಂದೆ ಕೊಂಡ ಹೊಸ "ಗ್ರಾಮೋಫೋನ" ಮಾರತಕ್ಕದ್ದಿದೆ. ಪ್ಲೇಟುಗಳೂ ಇವೆ ವಿಳಾಸ, ಸಂಖ್ಯೆ ೪ "ಕನ್ನಡಿಗ"

ಡೇರೇ (Tents) ಗಳಿಗೆ ಉಪಯೋಗಿಸುವ ಬಾಜು ಗೋಡೆ (Side walls) ಗಳು ಹಳೇವು ಮಾರತಕ್ಕವಿವೆ.

ವಿಳಾಸ ಸಂಖ್ಯೆ ೫ "ಕನ್ನಡಿಗ"

ರಿಷ್ಟವಾಚವ ಹಳೇ ಬಂಗಾರ ನೀರಿನ ಸರಪಳಿ ಮಾರತಕ್ಕದ್ದಿದೆ. ಬೆಲೆ ೩-೮-೦ ವಿಳಾಸ ಸಂಖ್ಯೆ ೬ "ಕನ್ನಡಿಗ"

ಪುಸ್ತಕಗಳು.

ಶ್ರೀ ಜನವಿಜಯ ಮಾಸಿಕದಲ್ಲಿ ಪ್ರಕಟವಾದ 'ವೃದ್ಧ ವಿವಾಹ' ಕೇಳುವ ಅಂಕು ಬೇಕಾಗಿವೆ ಬೆಲೆತಿಳಿಸಬೇಕು

ವಿಳಾಸ ಸಂಖ್ಯೆ ೬ "ಕನ್ನಡಿಗ"

ಮನೆಬಾಡಗಿ.

ತಿಂಗಳಿಗೆ ೧ ೧॥ ರೂ, ಗಳಷ್ಟು ಸಣ್ಣ ಬಾಡಿಗೆ ಬೇಕಾಗಿದೆ ಬಾಗಲಕೋಟೆಯ ಯಾವ ಭಾಗದಕ್ಕಷ್ಟರೂ ಸರಿ

ವಿಳಾಸ ಸಂಖ್ಯೆ ೮ "ಕನ್ನಡಿಗ"

ಬೈಂಡಿಂಗದ

ಹೊಸ ಉತ್ತಮ ವ್ಯವಸ್ಥೆ!

ನಾವು ಮಂಗಳೂರಿನಿಂದ ನುರಿತಂತಹ ಓರ್ವ ಬಾಯಿಂಡರ ನನ್ನ ಕರೆಸಿದ್ದೇವೆ ಮುಂಬೈ, ಮದ್ರಾಸ, ಮಂಗಳೂರ, ಬೆಂಗಳೂರಗಳಲ್ಲಾಗುವ ಎಲ್ಲ ನಮೂನೆಯ ಬಾಯಿಂಡಿಂಗ ಕೆಲಸವು ನಮ್ಮಲ್ಲಿ ಒಳ್ಳೇ ಅಚ್ಚುಕಟ್ಟಾಗಿ ಮಾಡಲ್ಪಡುತ್ತದೆ ಎಲ್ಲ ಬಗೆಯ ಗೋಲ್ಡ ಗಿಲ್ಟ ಕೆಲಸವೂ ಆಗುತ್ತದೆ ಇನ್ನು ಮೇಲೆ ಇತ್ತಕಡೆಯ ಜನರು ಮುಂಬೈ, ಬೆಂಗಳೂರ, ಅಥವಾ ಮಂಗಳೂರಿಗೆ ಹೋಗುವ ಕಾರಣವಿಲ್ಲ! ಒಮ್ಮೆ ಅನುಭವ ತೆಗೆದುಕೊಂಡು ನೋಡಬೇಕು.

ವ್ಯವಸ್ಥಾಪಕ

ವಿದ್ಯಾರಣ್ಯ ಮುದ್ರಣಾಲಯ ಬಾಗಲಕೋಟೆ

ನಟವರ್ಗದವರು ಬೇಕು

ಕೊಂಬಳಿ ಸಂಗೀತ ನಾಟಕ ಮಂಡಳಿ ಸಲುವಾಗಿ ಪೇಟಿ ನುಡಿಸುವ ಬಾಲ, ಸ್ತ್ರೀ ಪುರುಷ ಪಾರ್ಟಿ ಸಲುವಾಗಿ ಕಾಯಂ ನೌಕರಿ ಮಾಡುವ ಜನರು ಬೇಕು ಬರೆದಿಟ್ಟ ಇಚ್ಛಿಸುವರು ಕೆಳಗಿನ ವಿಳಾಸಕ್ಕೆ ಒಂದು ಭೆಟ್ಟಿ ಆಗಬೇಕು.-ಕಾಯಂ ಆದ ಜನರ ಗಾಡಿ ಚಾರ್ಜ್ ಕೊಡಲ್ಪಡುವದು

ಕ್ಯಾಂಪ:— ಗದಗಬೆಟಗೇರಿ ಮ್ಯಾನೆಜರ

ಕೊಂಬಳಿ ಸಂಗೀತನಾಟಕ ಮಂಡಳಿ

(ಭವಾನಸಾ| ಕಲಾದಿಮುರ ಬಂಗ್ಲೆದಲ್ಲಿ) ಪೋ ಗದಗ ಬೆಟಗೇರಿ

ನೋಟೀಸು.

"ಮೊಹರ ಮಾಡಿದ ಟೆಂಡರಗಳನ್ನು ೧೯೨೭-೨೮ ಇಸ್ವಿಯಲ್ಲಿ ಕಿರಕೋಳ ಸಾಮಾನುಗಳಬಗ್ಗೆ, ಮಂಗಳವಾರ ತಾರೀಖು ೧೫ ಮಾರ್ಚ ತಿಂಗಳ ೧೯೨೭ ನೆ, ದಿವಸ ಕೆಳಗೆ ಸಹಿ ಮಾಡುವವರ ಕಚೇರಿಯಲ್ಲಿ ತಕ್ಕೊಳ್ಳುವವರಲ್ಲಿ ಬರುವವು. ಇವರ ಹೊರ್ತಾಗಿ ಮಜಕೂರು ಕಚೇರಿಗೆ ಸಮಕ್ಷಮಾ ಬಂದವಲ್ಲಿ ಗೊತ್ತಾಗುವದು."

Bijapur, 22nd February 1927	(Sd) **S. B. REGE.** Executive Engineer, Bijapur District

ಶ್ರೀಕೃಷ್ಣ ಸಂಗೀತ ಕನ್ನಡ ನಾಟಕ ಮಂಡಲವು

ತಾಜ ನಾಟಕಶಾಲೆ ವೆಂಕಟಪೇಟೆ, ಬಾಗಲಕೋಟೆ.

ಗುಳೇದಗುಡ್ಡ ಶ್ರೀಮತಿ ಗಂಗೂಬಾಯಿಯವರ ಈ ಹೊಸ ನಾಟಕ ಕಂಪನಿಯಲ್ಲಿ ಅಭಿನಯಿಸಲು ಸುಸ್ವರೂಪ, ಸುಶೀಲ, ಸುಶಿಕ್ಷಿತ ಹಾಗೂ ಹಾಡು ಬಲ್ಲ ನಾಟ್ಯಕಲಾಭಿಜ್ಞರಾದ ಬಾಲಬಾಲಿಕೆಯರೂ, ಸ್ತ್ರೀ-ಪುರುಷರೂ

ಬೇಕಾಗಿದ್ದಾರೆ.

ಅದೇ ಪ್ರಕಾರ ಪೆಟ್ಟಿಗೆ ಹಾಗೂ ತಬಲಾ ಬಾರಿಸುವದರಲ್ಲಿ ನಿಪುಣರಾದವರೂ ಬೇಕಾಗಿದ್ದಾರೆ ಇಚ್ಛೆಯಿದ್ದವರು ಸಮಕ್ಷಮ ಇಲ್ಲವೆ ಪತ್ರದ್ವಾರದಿಂದ ವಿಚಾರಿಸಿಕೊಳ್ಳಬೇಕು

—ವ್ಯವಸ್ಥಾಪಕ.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶೀ ಪದ್ಧತಿಯಿಂದ ತಯಾರಿಸಲ್ಪಟ್ಟಿದೆ ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದ ಅಶಕ್ತತೆ, ಸಂಗ್ರಹಣಿ, ಜೀರ್ಣಜ್ವರ, ಅಗ್ನಿಮಾಂದ್ಯ ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಚಾರಗಳೂ, ನಾಶ ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ (ಏಳೇ ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು) ಇದರಿಂದ ವೈಯ್ಯಾರಿ ವ ಗರಮಿಯ ಎಲ್ಲಾತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ ಇದರ ಖರೇ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೨-೦, ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯು ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸ:—

ಎಸ್ ಬಿ ಕದಮ್ ಮತ್ತು ಸನ್ಸ್

ಮು ಪೋಷ್ಟ ನಿಪ್ಪಾಣಿ (ಜಿ ಬೆಳಗಾಂವ)

ಗವ್ಹರ್ನಮೆಂಟಿನಲ್ಲಿ ರಜಿಸ್ಟರ ಮಾಡಲ್ಪಟ್ಟ ಜಗಪ್ರಸಿದ್ಧವಾದ

ಎಲ್ಲ ರೋಗಗಳಿಗೆ ಒಂದೇ ಔಷಧ.

ಅರ್ಕಶಫಾಅಥವಾ ಆರೋಗ್ಯಬಿಂದು

ಪ್ರವಾಶಿಮಿತ್ರ. ಮೂರ್ತಿಮಂತವೈದ್ಯ

ಇದು ಅರ್ಕವಿದ್ದು ಇದರಲ್ಲಿ ಸೀರು ರಸಾಯನ ಕೂಡಿರುವದಿಲ್ಲ ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ಇದು ಪ್ರಸಿದ್ಧವಾಗಿ ೧೬ ವರ್ಷಗಳು ಆಗುತ್ತ ಬಂದವು ಈವತ್ತಿನವರಿಗೆ ಎರಡು ಲಕ್ಷಗಳವರಿಗೆ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತಿ ಬೇಡುವ ಪತ್ರಗಳು ವ್ಹಿ ಪಿ ಮಾಡಿದ ದಾಖಲೆಗಳು ಪೋಸ್ಟ ಪಾವತಿಗಳು ಬಾರನಿಸಿ ಬುಕ್ಕುಗಳು ಇರುತ್ತವೆ ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಸಟಿಯೆಂದು ಸಿದ್ಧ ಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳು ಇನಾಮು ಕೊಡಲ್ಪಡುವವು ಈ ಔಷಧವು ಅಮೃತಸರಿಯುಳ್ಳದ್ದು ಇರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು ಎಂಥಾ ಭಯಂಕರ ರೋಗವು ಇದ್ದರೂ ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರಟಿಫಿಕೀಟುಗಳು ನಮ್ಮ ಹತ್ತಿರ ಹಾಜರ ಇರುತ್ತವೆ. ಇವನ್ನು ಬರೆಯಲಿಕ್ಕೆ ಕಾಗದವು ಸಾಲದು. ಕಾರಣ ಒಂದುಸಾರೆ ತಕ್ಕೊಂಡು ಅನುಭವ ನೋಡಿರಿ. ರೋಗದ ನಾಮಗಳು:— ಕ್ಷಯ ರೋಗ, ಬಾಣಂತಿರೋಗ, ಹಡೆದನಂಜು ದಮ್ಮು, ಕೆಮ್ಮು, ಅಡಗೈ, ಕಾಲರಾ (ಮಾರಿಕಾ), ಪ್ಲೇಗ, ಇನ್‌ಪ್ಲುಯಂಜಾಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮಲರೋಗ, ಗಂಡಮಾಲೆ, ನಾರಹುಣ್ಣು, ಶಸ್ತ್ರಗಾಯ, ಕಿವಿಶೂಲಿ ಮೂಗಿನೊಳಗಿನ ಪಿನಸಿ, ಮೊದಲಾದವುಗಳು. ಕಂಣ್ಣಿನೊವು ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ ಹೊಟ್ಟೆಶೂಲಿ, ಸಣ್ಣ ಕೂಸುಗಳಿಗೆ ಆದ ರೋಗಗಳು ಬಾಲಗ್ರಹ, ಆಣಿ ಮುಟ್ಟದೋಷ ಹೊಟ್ಟೆ ದೊಡ್ಡದಾಗೋಣ, ಕೋಡಿಗೆಮ್ಮು. ಮೈ ಹೊರಬೀಳೋಣ, ಮತ್ತು ಡಾಕ್ಟರಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನಿಂದ ಖಾತ್ರಿಯಿಂದ ಗುಣಬರವದು. ಚೇಳು ವ ಸರ್ಪದಂಶಕ್ಕೆ ತತಕ್ಷಣ ಗುಣಬರುವದು. ಕಾಲುತೊಲಿ ಬಾಟ್ಲಿ ಒಂದಕ್ಕೆ ೨ ರೂಪಾಯಿ ನಮೂನೆ ಉದ್ದಿಶಿ ೫ ಆಣೆ ತೂಕದ ಬಾಟ್ಲಿ ಒಂದಕ್ಕೆ ೮ ಆ ಖರ್ಚ ಬೇರೆ. ೮ ಆಣೆಯ ಒಂದೇ ಬಾಟ್ಲಿ ಕಳಿಸಲಾಗದು. ೨ ರೂಪಾಯಿ ಆರ್ಡರ ಬಂದರೆ ಕಳಿಸಲಾದೀತು ಅದರ ಖರ್ಚು ೭ ಆಣೆ ಚಿಕ್ಕ ಬಾಟ್ಲಿ ಒಂದು ಡಜನ ತಕ್ಕೊಳ್ಳುವವರಿಗೆ ನಾಲ್ಕು ಬಾಟ್ಲಿಗಳು ಕಮಿಶನ್ ಸಿಗುತ್ತವೆ ಖರ್ಚ ೯ ಆಣೆ ಡಜನದ ಒಳಗಾಗಿ ಹನ್ನೊಂದು ಬಾಟ್ಲಿ ತಕ್ಕೊಂಡರೆ ಕಮಿಶನ್ ಇಲ್ಲ ವೆಚ್ಚ ೭ ಆಣೆ. ೧ ಕಾಲುತೊಲಿ ಬಾಟ್ಲಿ ಒಂದೇಸಾರೆ ಮೂರು ತಕ್ಕೊಳ್ಳುವವರಿಗೆ ಮೂದು ಬಾಟ್ಲಿ ಕಮಿಶನ್ ಸಿಗುತ್ತದೆ. ಖರ್ಚ ೯ ಆಣೆ.ಮೂದು ಎರಡುತಕ್ಕೊಂಡರೆ ಕಮಿಶನಿಲ್ಲಖ ೭ ಆ. ಪ್ರಮಾಣ ಅನುಪಾನ ಪತ್ರಿಕೆ ಕನ್ನಡಮತ್ತು ಮರಾಠಿ ಭಾಷೆಯ ಲ್ಲಿಛಾಪಿಸಿರುತ್ತವೆ. ಪಸಂದಿಪ್ರಕಾರ ಬಾಟ್ಲಿ ಗಳಿಡಶಿಗುವದು. ಈ ಔಷಧವು ಖೋಟಿ ಹೊರಬ ರೆಶ್ಲಿಕ ಉಪಯೋಗವಾಲ್ಲ ಪರತ ತಕ್ಕೊಂಡು ಅದರ ಬೆಲೆ ವಾಪಸ ಕೊಡುವೆವು. ಈ ಅರ್ಕ ಫಾ ಇಡೀ ಕರ್ನಾಟಕದಲ್ಲೆಲ್ಲಾ ಹೋಗುತ್ತದೆ. ಇದರ-ಗು ನಮಗೆ ಬಹಳ ಶಿಫಾರಸ ಮಾಡಬೇಕಾಗಿಲ್ಲ. ತತ್ಕಾಲೀನ ಕನ್ನಡದಲ್ಲಿ ಅಥವಾ ಇಂಗ್ಲೀಷದಲ್ಲಿ ಪೂರ್ತಿ ಜಿಲ್ಲಾ ವಗೈರೆ ಸ್ಪಷ್ಟವಾಗಿ ಬರೆಯಿರಿ ನಮ್ಮ ವಿಳಾಸ:— ಎಚ್. ಎಸ್. ಮುಲ್ಲಾ.

ಸಂಶಾರಕ ಅರ್ಕ ಶಫಾ ಹೆಡ್ ಆಫೀಸಪೋಸ್ಟ ದಾವಣಗೆರೆ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವಜಾ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ ಸಿ. ನಂ ೨೭೬೭ ಸಯ್ಯದ ಅಲಿ ಅಸಗರ ಬಿಲ್‌ಗ್ರಾಮಿ ಸುಪರೆಂಟೆಂಡಂಟ್ ಸೆಕ್ರೆಟರಿಯಟ್ ಹೈದರಾಬಾದ ಡೆಕ್ಕನ್ನ ರೂ.೧೦೦೦

(೨) ಎಲ್. ಬಿ. ಸಿ. ನಂ. ೧೯೬೨ ನಾರಾಯಣ ವಿಠ್ಠಲ ಲೋಣಕರ. ಕೇರ್ ಆಫ್ ಡಿ. ಈ. ಪುರಾಣಿಕ ೧೦೭ ನಿಪಾಲಪುರ ಇಂದೂರ. ೧೦೦೦

(೩) ಎಲ್ ಬಿ. ಸಿ. ನಂ ೩೪೧ ರಾಮಚಂದ್ರ ಅನಂತ ಶಿರೋಳಿ. ಡಿವಿಜನಲ್ ಫಾರೆಸ್ಟ ಆಫೀಸರ ಧಕ್ಕೂರಾ. ಪಶ್ಚಿಮಖಾನದೇಶ ರೂ. ೮೦೦

(೪) ಬಾಂಡ ನಂಬರು ೭೫೦೬ ಕೇ. ಜೆ. ಫರ್ನಾಂಡೋ ವ್ಯಾಪಾರಸ್ಥ. ಬ್ರಿಕ್‌ಸಾಯಿಡ ಸಿಲೋನ, ಕೋಲಂಬೋ. ರೂ. ೧೦೦೦

(೫) ಬಾಂಡ ನಂಬರು ೧೩೬೩೪ ಎಸ್. ಜಿ. ಚವರೆ. ಅಶಿಸ್ಟಂಟ ಸ್ಟೇಶನ್‌ಮಾಸ್ತರ ತೆಲಗಿ. ಜಿಲ್ಲಾ ವಿಜಾಪುರ. ರೂ ೧೦೦೦

ಬಿ. ಎನ್. ಆರಾಧ್ಯ
ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ.)

ಕಿರ್ಲೋಸ್ಕರ

ಕಬ್ಬಿಣ ನೇಗಿಲುಗಳು

ಹಂಗಾಮು (ಸುಗ್ಗಿ) ಸಮಾಪಿಸಿತು. ಈ ವರ್ಷ ಮಳೆ ಬೆಳೆ ಚನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವುದು. ಕಿರ್ಲೋಸ್ಕರ ನೇಗಿಲು ನಂ. ೧೦, ೯, ೮ ಇವು ಒಕ್ಕಲಿಗರಿಗೆ ಬಹಳೇ ಉಪಯೋಗ ಬೀಳುತ್ತವೆ ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುತ್ತವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್	ಕಿರ್ಲೋಸ್ಕರವಾಡಿ ಜಿಲ್ಲೆ ಸಾತಾರೆ

ವಿಜಾಪೂರ ಜಿಲ್ಲೆಯೊಳಗಿನ ಟೋಲ ನಾಕೆಗಳ ಹೆಸರು ವ ಯಾವ ಸರಕಾರಿ ರಸ್ತೆಗಳ ಮೇಲೆ ಅವು ಇರುವವು ಅವುಗಳ ಹೆಸರು.

ಕ್ರಮ ನಂಬರ	ರಸ್ತೆದ ಹೆಸರು	ನಾಕೇಗಳ ಜಗಾ
೧	ವಿಜಾಪೂರ ಹುಬ್ಬಳ್ಳಿ ರಸ್ತೆ	ತಿಡಗುಂದಿ ಹತ್ತರ
೨	ಸದರ	ರೇಲ್ವೆ ಲೈನ ಹತ್ತರಾ ೬೪ ನೇ ಮೈಲಿಗೆ
೩	,,	ಕೊಲ್ಹಾರ ಕ ಬಳೀದ ಹತ್ತರಾ
೪	,,	ಕೆರೂರ ಸಮೀಪದಲ್ಲಿ ಉತ್ತರ ಬಾಜುಕ್ಕೆ ½ ಮೈಲದಲ್ಲಿ
೫	ವಿಜಾಪೂರ ಕಾಗವಾಡ ರಸ್ತೆ	ತೊರವಿ ಹತ್ತರಾ ೫೬ ನೇ ಮೈಲಿಗೆ
೬	,,	ಹೊನವಾಡ
೭	ವಿಜಾಪೂರ ಸಿಂದಗಿ ರಸ್ತೆ	ರೇಲ್ವೆ ಕ್ರಾಸಿಂಗ ದಾಟಿ ಮತ್ತು ಮುನಿಸಿಪಾಲಿಟಿ ಹದ್ದಿ ದಾಟಿ ಪೋಸ್ಟ ಆಫೀಸದಿಂದ ೩ ಮೈಲು ದಾಟಿ
೮	,,	ಹಿಪ್ಪರಗಿ ಕನ್ನೊಳ್ಳಿ ನಡುವೆ
೯	ವಿಜಾಪೂರ ಬಾಗೇವಾಡಿ ರಸ್ತೆ	ಮನಗೂಳಿ ಅಗಸಿ ದಾಟಿ
೧೦	,,	ಬಾಗೇವಾಡಿ
೧೧	ಕೊಲ್ಹಾರ ತಾಳಿಕೋಟೆ ರಸ್ತೆ	ತೆಲಗಿ
೧೨	,,	ಬಳಗಾನೂರ
೧೩	ಮುದ್ದೇಬಿಹಾಳ ಚಿಮ್ಮಲಗಿ ರಸ್ತೆ	ಜಾಲಾಪೂರ ಹಳ್ಳದ ಹತ್ತರಾ
೧೪	ಬೆಳಗಾಂವ ಹುನಗುಂದ ರಸ್ತೆ	ಗದ್ದನಕೇರಿ ಕಡೆಗೆ ಮೈಲು ೮೧ ೧ ಹತ್ತರಾ
೧೫	,,	ಶಿರೂರ ಹತ್ತರಾ
೧೬	,,	ರಕ್ಕಸಗಿ ಹತ್ತರಾ ಮೈಲು ೧೦೯ ನೇ ಕ್ಕೆ
೧೭	ಪಾಳೆ ಬದಾಮಿ ರಸ್ತೆ	ಬನಶಂಕರಿ ಹತ್ತರಾ (ರಾಮದುರ್ಗ ಟರ್ನಿಂಗ ವ ಚೊಳಚಗುಡ್ಡದ ನಡುವೆ)

ಟೀಪು— ಲಿಲಾವಿನ ವೇಳೆಕ್ಕೆ ಶರ್ತಿನ ಯಾದಿ ಓದಿ ಹೇಳುವದರಲ್ಲಿ ಬರುವದು. ನಾಕಿ ಇಡುವ ಸ್ಥಳಗಳಲ್ಲಿ ಹೆಚ್ಚು ಕಡಿಮೆ ಮಾಡುವದಾದರೆ ಲಿಲಾವಿನ ವೇಳ್ಯೆಯಲ್ಲಿ ಕ|| ಸಾ|| ಬಾ|| ರವರು ಹೇಳುವರು ಆ ಹೇಳಿದ ಸ್ಥಳದಲ್ಲಿ ನಾಕೆ ಇಡಬೇಕಾಗುವದು. ಪೋಟ ನಾಕೆ ಇಡುವ ಸ್ಥಳಗಳನ್ನು ಸಹ ಆಗಯೇ ಹೇಳುವದರಲ್ಲಿ ಬರುವದು.

ವಿಜಾಪೂರ
ತಾ|| ೧೬-೨-೧೯೨೭

ವ್ಹಿ. ಎಚ್. ನಾಯಿಕ.
ಕಲೇಕ್ಟರ ಆಫ ವಿಜಾಪೂರ.

ಜಾಹೀರ ನೋಟೀಸ.

ಮೆ|| ಕಲೇಕ್ಟರ ಸಾ|| ಬಾ|| ಜಿಲ್ಹಾ ವಿಜಾಪೂರ ಇವರ ಕಡೆಯಿಂದ—
ಯಾವತ್ತು ಜನರಿಗೆ ತಿಳಿಯ ಪಡಿಸುವದರಲ್ಲಿ ಬರುತ್ತದಲ್ಲಾ.

ತಾ|| ೧-೪-೧೯೨೭ ರಿಂದ ೩೧-೩-೧೯೨೮ ಮಾರ್ಚಕ್ಕೆ ಮುಗಿಯುವ ಒಂದು ವರ್ಷದ ಮುದತೀ ಮಟ್ಟಿಗೆ ವಿಜಾಪೂರ ಜಿಲ್ಲೆಯೊಳಗಿನ ಲಗತಿನ ಯಾದಿಯಲ್ಲಿ ನಮೂದ ಪಡಿಸಿದ ಯಾವತ್ತೂ ಸರಕಾರಿ (ಪ್ರೊವ್ಹಿನಸಿಯಲ್) ರಸ್ತೆಗಳ ಮೇಲಿನ ಟೋಲ ನಾಕೆಗಳಲ್ಲಿ ಟೋಲ ವಸೂಲಮಾಡುವ ಹಕ್ಕನ್ನು ತಾ|| ೧೧-೩-೧೯೨೭ ಶುಕ್ರವಾರ ದಿವಸ ಮೆ|| ಕಲೇಕ್ಟರ ಸಾ|| ಬಾ|| ರವರ ಸಮಕ್ಷ ಮಧ್ಯಾನ್ಹ ೧೨ ಘಂಟೆಕ್ಕೆ ದರ್ಬಾರ ಹಾಲಿನಲ್ಲಿ ಉಘಡ ಲಿಲಾವ ಮಾಡುವದರಲ್ಲಿ ಬರುವದು. ಟೋಲಿನ ದರಗಳು ಲಿಲಾವಿನ ವೇಳ್ಯೆಯಲ್ಲಿ ಹೇಳುವದರಲ್ಲಿ ಬರುವವು. ದರಗಳು ಹೋದವರ್ಷದಂತೆಯೇ ಇರುತ್ತವೆ.

೨ ಸವಾಲಿನಲ್ಲಿ ಬೇಡುವವರು ಬೇಡತಕ್ಕ ರಕಮಿಗೆ ಲಾಯಖ ಇದ್ದಬಗ್ಗೆ ಮಾಮಲೇದಾರ ಸಾ|| ಅಗರ ಮಹಾಲಕರಿ ಸಾ|| ರವರ ಸರ್ಟಿಫಿಕೇಟು ಛಾಪಿ ನಮೂನೆಯಲ್ಲಿ ತರತಕ್ಕದ್ದು.

೩ ಸವಾಲ ಬಂದಾದ ಕೂಡಲೇ ಸವಾಲಿನ ಒಂದು ನಾಲ್ಕಾಂಶ ರಕಮು ತಾತ್ಕಾಲ ಜಮಾ ಮಾಡಿ ಪಾವತಿ ತಕ್ಕೊಳ್ಳುವದು ಉಳಿದ ಮೂರು ನಾಲ್ಕಾಂಶ ಸವಾಲಿನ ರಕಮನ್ನು ಕರಾರದ ಪ್ರಕಾರಾ ೩ ಸಮನಾದ ಹಪ್ತೆ ಒಂದಿಗಳಿಂದ ಕೊಡಬೇಕು. ಬಾಬು ಸುಪರ್ದಿ ಪಡಕೊಳ್ಳುವ ಪೂರ್ವದಲ್ಲಿ ತಾಲೂಕಿನ ಮಾಮಲೇದಾರ ಸಾ|| ರ ಮುಂದೆ ಅಗರ ಮಹಾಲಕರಿ ಸಾ|| ರ ಮುಂದೆ ಪಟ್ಟೆ ಬರಕೊಡತಕ್ಕದ್ದು.

೪ ಸವಾಲ ಮಂಜೂರ ಮಾಡುವದು ಅಗರ ಬಿಡುವದು ಮೆ|| ಕಲೇಕ್ಟರ ಸಾ|| ಬಾ|| ರವರ ಆಧೀನದಲ್ಲಿರುವದು.

೫ ಹೆಚ್ಚಿನ ಕರಾರ ವಗೈರೆ ಲಿಲಾವಿನ ವೇಳ್ಯೆಕ್ಕೆ ಓದಿ ಹೇಳುವ ಶರ್ತಯಾದಿಯಲ್ಲಿ ಕೊಡುವದರಲ್ಲಿ ಬರುವದು.

೬ ಮತ್ತೇನಾದರೂ ಮಾಹಿತಿ ಬೇಕಾದಲ್ಲಿ ಮೆ|| ಕಲೇಕ್ಟರ ಸಾ|| ಬಾ|| ರವರ ಆಫೀಸದಿಂದ ಪಡಕೊಳ್ಳಬಹುದು.

ವಿಜಾಪೂರ
ತಾ|| ೧೬-೨-೧೯೨೭

ವ್ಹಿ. ಎಚ್. ನಾಯಿಕ.
ಕಲೇಕ್ಟರ ಆಫ ವಿಜಾಪೂರ.

ವರ್ತಮಾನ ಸಾರ

ಸೋಜಿಗದ ಸುದ್ದಿಗಳು

ಆನೆಗಳಿಗೆ ಸಹ ಗಾಯನದಲ್ಲಿ ಅಭಿರುಚಿ ಇರುತ್ತದೆಂದೂ ಗಾಯನವನ್ನು ಕೇಳುವಾಗ ತನ್ನ ಸೊಂಡಿಲನ್ನು ಆನಂದದಿಂದ ಅಲ್ಲಾಡಿಸುತ್ತಿರುವದೆಂದೂ ಮೊಣಗಟ್ಟಿ ಜಡವಾದ ತನ್ನ ಕಾಲುಗಳನ್ನೂ ಎತ್ತಿ ಹಾಕುತ್ತಿರುವದೆಂದೂ ಮಾಡ್ರಿಡ್ ಪ್ರಾಣಿ ಪ್ರದರ್ಶನ ಶಾಲೆಯಲ್ಲಿ ಕಂಡುಹಿಡಿಯಲ್ಪಟ್ಟಿದೆ.

ಆತ್ಮಹತ್ಯೆಯ ಬಗ್ಗೆ ಅಪವಾದಬಂದು ಚೀನದ ಓರ್ವ ಕೆಲಸಗಾರನಿಗೆ ಕೋರ್ಟಿನವರು ಪ್ರಶ್ನೆಮಾಡಿದಾಗ್ಗೆ ಆ ಹಜಾಮನು ಕೊಟ್ಟ ಉತ್ತರ:- ಆತ್ಮಹತ್ಯೆಗಾಗಿ ನಾನು ಪ್ರಯತ್ನಿಸಿದ್ದು ನಿಜ 'ನೀನು ಪರಮ ಮೂರ್ಖನಿರುವಿಯೆಂದೂ, ಬೇಗನೇ ನೀನು ಸಾಯುವದು ಲೇಸೆಂದೂ' ನನ್ನ ಮಿತ್ರರು ಹೇಳಿದರು. ಆದ್ದರಿಂದ ಈ ರೇಝರದಿಂದ ನನ್ನ ಕುತ್ತಿಗೆಯನ್ನು ಕೊಯ್ದುಕೊಳ್ಳಲು ಪ್ರಾರಂಭಿಸಿದೆ. ಇವನ ಪ್ರವೃತ್ತವನ್ನು ಮಿತ್ರರು ಚನ್ನಾಗಿ ಅರಿತವರಿರಬೇಕಲ್ಲವೆ?

'ನೇತ್ರ ನಿರೀಕ್ಷಣ' ವೆಂಬ ಯಂತ್ರವು ಶೋಧಿಸಲ್ಪಟ್ಟಿದೆ. ಇದನ್ನು ಕಣ್ಣಿಗೆ ಧರಿಸಿದರೆ ಕತ್ತಲೆಯಲ್ಲಿ ಎಲ್ಲವು ಕಾಣುತ್ತದೆ. ಆದರೆ ಅವನೊರ್ವನಿಗೇ ಅದು ಗೊತ್ತಾಗುವದು. ಅವನಿಗೆ ಕತ್ತಲೆಯಲ್ಲಿ ಹಾಗೆ ಕಾಣುತ್ತದೆಂಬುದು ಇತರರಿಗೆ ಏನೂ ತಿಳಿಯದು. ಆದಕಾರಣ ಎಲ್ಲಿಯಾದರೂ ಕೂತವನನ್ನು, ಅವನಿಗೆ ತಿಳಿಯದಂತೆ ನಿರೀಕ್ಷಿಸಲು ಇನ್ನು ಅನುಕೂಲವಾಗುವದು! ನಮ್ಮ ಹೃದಯದಲ್ಲಿದ್ದುದನ್ನು ನಮಗೆ ಗೊತ್ತಿಲ್ಲದಹಾಗೆ ತಿಳಿದುಕೊಳ್ಳುವ ಯಂತ್ರವೊಂದೂ ಶೋಧಿಸಲ್ಪಟ್ಟರೆ ಹೇಗಾದೀತು? ಅದರಿಂದ ಸಮಾಜದಲ್ಲಿ ಏನೇನು ಗೊಂದಲವಾಗುವದೋ ದೇವರೇ ಬಲ್ಲ!

ತಂತಿಯಿಂದ ಸುದ್ದಿ ಕಳಿಸುವಾಗ ಫೋಟೋಗಳನ್ನು ಸಹ ಕಳಿಸುವ ಯಂತ್ರವು ಶೋಧವಾಗಿ ಬಹು ದಿವಸಗಳು ದಾಟಿದವು. ಈಗ್ಗೆ ತಾರ ಆಫೀಸಿನವರು ಹಲವೆಡೆಯಲ್ಲಿ ಆ ಪ್ರಯೋಗವನ್ನು ಆಚರಣೆಯಲ್ಲಿ ತಂದಿದ್ದಾರೆ. ಇದರಿಂದ ನಮ್ಮ ಹಸ್ತಾಕ್ಷರಗಳೇ ನಮ್ಮ ಇಷ್ಟಮಿತ್ರರ ಕೈಸೇರುವವು. ಹೀಗಾಗಿ ತಂತಿಯ ಕಾರಕೂನನಿಗೆ ಬರೆಯುವ ತೊಂದರೆ ಉಳಿಯಿತು! ತಪ್ಪು ಶಬ್ದಗಳನ್ನು ಓದುವ ತೊಂದರೆಯೂ ಜನರಿಗೆ ತಪ್ಪಿತು! ಆದರೆ ಇದೆಲ್ಲ ಹಿಂದುಸ್ಥಾನಕ್ಕೆ ಬರಬೇಕಾದರೆ ನಮ್ಮ ಮೊಮ್ಮಗನಿಗೆ ಮುದಿತನ ಬರಬೇಕಲ್ಲವೆ?!!

ಪರದೇಶ

ಅಮೇರಿಕೆಯ ಸಮುದ್ರ ಶೋಧಕರು ಫಿಲಿಪೈನ್ ದ್ವೀಪಗಳ ಮಿಂಡಾನೋ ಗುಡ್ಡಗಳಲ್ಲಿ ಒಂದು ದೊಡ್ಡದಾದ ಪ್ರದೇಶವನ್ನು ಕಂಡುಹಿಡಿದಿದ್ದಾರೆ. ಅದು ಕೊಳ್ಳದ್ದು, ೧೦ ಲಕ್ಷ ಜನರ ವಸತಿಗೆ ಯೋಗ್ಯವಿದೆ, ಭೂಮಿಯು ಫಲವತ್ತಾಗಿದೆ. ಈಗ್ಗೆ ಅಲ್ಲಿ ಮಲಯ ವಾಸಿಗಳು ಅಸಂಸ್ಕೃತ ಸ್ಥಿತಿಯಲ್ಲಿದ್ದಾರೆ. ಇನ್ನು ನಮ್ಮ ಬಿಳಿ ಜನರು ಆ ಕರಿ ಜನರಲ್ಲಿ ಸಂಸ್ಕೃತಿಯ ಬೆಳಕನ್ನು ಕೂಡಿಸುವರು.

ಬೇಡರ್ಡ್ ಫಾರ್ಮಿನಲ್ಲಿ ಒಂದು ಹಂದಿಯು ೯ ವಾರಗಳಲ್ಲಿ ೬೦ ದಕ್ಕೆ ಎದೆಯ ಸ್ಥಾನದಲ್ಲಿದ್ದರೂ ಹೊರಭಾಗದಲ್ಲಿದೆ ಇನ್ನೂ ಜೀವಂತಿದೆ. ಬಹು ದಿನ ಬಾಳಲಾರದೆಂದು ತಜ್ಞರ ಮತ.

ಬ್ರುಸೆಲ್ಸದಲ್ಲಿ ಅನ್ಯಾಯವಾಗಿ ಪೀಡಿಸಲ್ಪಟ್ಟ ರಾಷ್ಟ್ರಗಳ ಪರಿಷತ್ತು ನಡೆದಿದೆ. ಅದಕ್ಕೆ ಹಿಂದುಸ್ಥಾನದಿಂದ ಜವಾಹಿರಲಾಲರು ಪ್ರತಿನಿಧಿಗಳಾಗಿ ಹೋಗಿದ್ದಾರೆ. ಹಿಂದುಸ್ಥಾನ ಹಾಗೂ ಚೀನ ದೇಶಗಳು ಸಂಪೂರ್ಣ ಸ್ವಾತಂತ್ರ್ಯದ ಬಗ್ಗೆ ಹೋರಾಡಬೇಕೆಂದು ನಿರ್ಣಯವಾಗಿದೆ. ಆ ಪರಿಷತ್ತಿನವರೂ ಈ ಬಗ್ಗೆ ಸಹಾಯ ಮಾಡುವರು.

ಹಿಂದುಸ್ಥಾನ.

ಬಿ. ಎನ್. ಆರ್. ರೇಲ್ವೆಯ ಸಂಪು ದಿನಾಲು ಹೆಚ್ಚಾಗಿ ಹರಡುತ್ತಲಿದೆ.

ಹಿಂದೂ ಮುಸಲ್ಮಾನರ ತಂಟೆಯು ಇಂದೂರಿನಲ್ಲಿ ವಾದ್ಯದ ಬಗ್ಗೆ ಬಹು ಭೀಕರಸ್ವರೂಪವನ್ನು ಹೊಂದಿತ್ತು. ಈಗ್ಗೆ ದಂಗೆಯು ಶಾಂತವಾಗಿದೆ.

ಇಲಿಗಳನ್ನು ಕೊಲ್ಲುವದರಿಂದ ಪ್ಲೇಗು ಕಡಿಮೆಯಾಗುವದೆಂಬ ಕಲ್ಪನೆಯು ಅಷ್ಟೊಂದು ಸಮಂಜಸವಲ್ಲ. ಮುಂಬೈಯಲ್ಲಿ ೩೦೦ ಜನರು ಕೇವಲ ಈ ಕಾರ್ಯದಲ್ಲಿಯೇ ನಿಯೋಜಿಸಲ್ಪಟ್ಟಿದ್ದು ಅವರು ವರ್ಷದಲ್ಲಿ ೭೫ ಲಕ್ಷ ಇಲಿಗಳನ್ನು ಕೊಲ್ಲುತ್ತಿದ್ದರೂ ಪ್ಲೇಗು ಕಡಿಮೆಯಿಲ್ಲ. ಮತ್ತು ಒಂದು ಇಲಿಗೆ ಒಂದೇ ವರ್ಷದಲ್ಲಿ ೮೮೦ ಮರಿಗಳಾಗುವದರಿಂದ ಇಲಿಗಳ ವಿರುದ್ಧ ಹೋರಾಡುವದು ಎಷ್ಟರ ಮಟ್ಟಿಗೆ ಪ್ರಯೋಜಕವೋ ಹೇಳಲಿಕ್ಕಾಗದು.

ಡಾ. ಪರಾಂಜಪೇಯವರು ಲಂಡನ್ನಿನ ಇಂಡಿಯಾ ಕೌನ್ಸಿಲ್‌ದ ಸಭಾಸದರಾಗಿ ನೇಮಿಸಲ್ಪಟ್ಟಿದ್ದಾರೆ. ಆದ್ದರಿಂದ ತಮ್ಮ ಮಂತ್ರಿಸ್ಥಾನಕ್ಕೆ ರಾಜೀನಾಮೆ ಕೊಟ್ಟರು. ಹಿಂದಕ್ಕೆ ಮಂತ್ರಿಪದವನ್ನು ದೊರಕಿಸುವದರಲ್ಲಿ ಅಪಜಯ ಹೊಂದಿದ ಮಂತ್ರಿಪದ ಉಮೇದವಾರರಿಗೆ ಹೊಸ ಹುರುಪು ಬಂದಂತಾಗಿರಬಹುದು. ಆದರೆ ಶ್ರೀ ಪ್ರಧಾನರವರು ಈಗಾಗಲೇ ಅವರ ಸ್ಥಾನದಲ್ಲಿ ನಿಯೋಜಿತರಾಗಿದ್ದಾರೆ. ಇನ್ನು ವಿದ್ಯಾಲಯದ ಆರಿಸುವಿಕೆಯು ಮಾತ್ರ ನಡೆಯಬೇಕಾಯಿತು. ಈ ಆರಿಸುವಿಕೆಯಲ್ಲಿ ಮೋಟಾರ, ಬಂಡಿಗಳ ಗೊಂದಲವು ಅಷ್ಟೊಂದಿರುವದಿಲ್ಲ. ಇದು ಅನೇಕರಿಗೆ ಸಪ್ಪಗಾಗಿ ತೋರಬಹುದು. ಪುಣೆಯ ಬೋಪಟಕರರೂ, ಮುಂಬೈಯ ಡಾ. ದೇಶಮುಖರೂ ಉಮೇದವಾರರಾಗಿದ್ದಾರೆಂಬ ಸುದ್ದಿ.

ಹಿಂದುಸ್ಥಾನದಲ್ಲಿಯ ಮೋಟಾರುಗಳ ಆಯಾತ ವರ್ತಕರೂ, ಪರದೇಶದಲ್ಲಿಯ ಮೋಟಾರುಗಳ ಕಾರ್ಖಾನೆದಾರರೂ, ಹಿಂದುಸ್ಥಾನದಲ್ಲಿ ವ್ಯಾಪಾರಮಾಡುವ ಕಲ್ಲೆಣ್ಣೆಯ ವರ್ತಕರೂ, ಕೂಡಿ, ಪ್ರತಿವರ್ಷ ಒಂದು ಲಕ್ಷ ರೂಪಾಯಿ ಫಂಡು ಕೊಟ್ಟು, ಹಿಂದುಸ್ಥಾನದಲ್ಲಿಯ ಮೋಟಾರ ಮಾರ್ಗಗಳನ್ನು ಒಳ್ಳೆ ವ್ಯವಸ್ಥೆಯಲ್ಲಿಡಬೇಕೆಂದು ಯೋಚಿಸುತ್ತಲಿದ್ದಾರೆ. ಮಹಾತ್ಮರಿಗೆ ಪುಣ್ಯ ಬರಲಿ. ಧೂಳು ಕುಡಿದು ಕುಡಿದು ಹಿಂದುಸ್ಥಾನವು ಬೇಸತ್ತಿದೆ.

ಕಾಯದೇ ಮಂಡಲದ ಸುದ್ದಿಗಳು.

ಚೀನದ ಯುದ್ಧಕ್ಕೆ ಬ್ರಿಟಿಶ್ ವಸಾಹತಿಯವರಾರೂ ತಮ್ಮ ಸೈನ್ಯವನ್ನು ಕಳಿಸಿಲ್ಲ. ಹಿಂದುಸ್ಥಾನದಿಂದ ಹೋದ ಸೈನ್ಯದ ವೆಚ್ಚವನ್ನು ಹಿಂದುಸ್ಥಾನದ ಬೊಕ್ಕಸದಮೇಲೆ ಹೇರುವದಿಲ್ಲ, ಎಂಬದಾಗಿ ಅಸೆಂಬ್ಲಿಯ ಉತ್ತರ ಬಂದಿದೆ.

ಹಿಂದುಸ್ಥಾನದಲ್ಲಿ ವಿಮಾನಗಳನ್ನು ರೇಲ್ವೆಯಂತೆ ಪ್ರಾರಂಭಿಸು[illegible]. ಈ ಬಗ್ಗೆ 'ಟೆಂಡರ' ಬೇಗನೆ ಕೊಡುವೆವು; ಹಿಂದೀಯ ವರ್ತಕರಿಗೆ ಈ ಬಗ್ಗೆ ಶಿಕ್ಷಣಕೊಡಬೇಕು ಹಾಗೂ, ಅವರನ್ನು ನೌಕರಿಯಲ್ಲಿ ತೆಗೆದುಕೊಳ್ಳಬೇಕೆಂಬದಾಗಿ ಕರಾರು ಕಂಪನಿಗೆ ಹಾಕುವೆವೆಂದು ಸರಕಾರದ ಉತ್ತರ ಬಂದಿದೆ.

ರಾಜಕೀಯ ಸಂಸ್ಥೆಗಳನ್ನು ಸಹ ರಜಿಸ್ಟರಮಾಡಲಿಕ್ಕೆ ಅವಕಾಶ ದೊರೆಯುವಹಾಗೆ ಈಗಿನ ಕಾಯದೇದಲ್ಲಿ ಬದಲಾವಣೆಯಾಗಬೇಕೆಂದು ಶ್ರೀ ಕೇಳಕರವರು ತಂದ ಕಾನೂನ ಸೂಚನೆಯು 'ಅಸೆಂಬ್ಲಿ'ಯಲ್ಲಿ ಮಂಜೂರಾಗಿದೆ. ಸರಕಾರದಿಂದ ವಿರೋಧವಿಲ್ಲದೇ ಲೋಕನಿಯುಕ್ತ ಸಭಾಸದರ ಕಾನೂನು ಸೂಚನೆಯಂದರೆ ಸಾಧಾರಣಾ ಸಭೆಯ ೭ ವರ್ಷಗಳ ಅವಧಿಯಲ್ಲಿ ಇದೇ ಮೊದಲನೆಯದು.

ಸಾರ್ವಜನಿಕ ಕೆಲಸಗಳಿಗಾಗಿ ಭೂಮಿಯನ್ನು ತೆಗೆದುಕೊಳ್ಳುವ ಅಧಿಕಾರವು ಸರಕಾರಕ್ಕಿದೆ. ಆದರೆ ಈ ಅಧಿಕಾರವು ಸರಕಾರಕ್ಕಿರದೇ ಪ್ರಾಂತಿಕ ಕಾಯದೇ ಮಂಡಳಗಳಲ್ಲಿರುವಂತೆ 'ಲ್ಯಾಂಡ ಅಕ್ವಿಜಿಶನ್ ಆ್ಯಕ್ಟ'ದ ಸುಧಾರಣೆಯಾಗುವಂತೆ, ಜನರ ಅಭಿಪ್ರಾಯ ತೆಗೆದುಕೊಳ್ಳುವದಕ್ಕೆ ಎಲ್ಲ ಕಡೆಗೂ ಕಳಿಸಬೇಕಾಗಿ ಶ್ರೀ ಕೇಳಕರರು ಕಾನೂನ ಸೂಚನೆ ಅಸೆಂಬ್ಲಿಯಲ್ಲಿ ತಂದದ್ದು ಅದು ಮಂಜೂರಾಗಿದೆ.

ಕೊಡಗು ಕರ್ನಾಟಕ

ಕಳೆದ ಸಲ ಬಳ್ಳಾರಿ ಪರಿಷತ್ತಿನ ಕೆಲಸಗಾರರಾದ ಶ್ರೀನಿವಾಸ್ ಕೆ. ಪಿ. ಚಿನ್ನಪ್ಪನವರೂ, [illegible] ಈ ಸಲ ಕಾರ್ಯನಿರ್ವಾಹಕ ಮಂಡಳಿಗೆ ಆರಿಸಿ ಬರದಿದ್ದಿಲ್ಲವೆಂಬುದು ವಿಷಾದದ ಮಾತು. ಆದರೆ ಡಿ. ಎನ್. [illegible] ಕೊಡಗಿನ ಹೊಸ [illegible] ಸಿ. ಎಸ್. ಉತ್ತಯ್ಯನವರು ಆರಿಸಿ ಬಂದುದು ಸಂತೋಷದ ವಿಷಯ. ಇವರು ಕೊಡವರ ಸಭೆಯ [illegible] ಕೆಳಗಿನ ಜನರು ಆರಿಸಿ ಬಂದಿದ್ದಾರೆ:— ೧ [illegible] ಬಿ ಎ ಬಿ ಎಲ್ ೨ ಕೆ. ಎ. [illegible] ಬಿ ಎ ೩ [illegible] ಆರ್. [illegible] ಬಿ ಎ ಬಿ ಎಲ್. ೪ [illegible] ೫ ಎಸ್. [illegible] ೬ ಎಸ್. ಎಲ್. ಚಿನ್ನಪ್ಪ ೭ ಪಿ ಕುಶಲಪ್ಪ ೮ ಕೆ. [illegible] ೯ ಸಿ. ಎಂ. [illegible] ಬಿ. ಎ. ಬಿ ಎಲ್. ೧೦ ಸಯ್ಯದ [illegible]

ಮುಂಬೈ ಕರ್ನಾಟಕ.

ಹಾವೇರಿಯಲ್ಲಿ ತಾರೀಖು ೨೦ನೇ ರವಿವಾರ ದಿನ [illegible] ಮನೆಗಳನ್ನು [illegible] ಇದ್ದ ವಿಜಾಪುರ ಜಿಲ್ಲೆಯಿಂದ [illegible] ತರಾಗಿ ಬಂದ ಒಡ್ಡರ ೮ ಮನೆಗಳು ಬೆಳಗಿನ ೧೦ ಘಂಟೆಗೆ ಸುಟ್ಟುಹೋದವು. ಮನೆಯವರು ಕೂಲಿಮಾಡಲಿಕ್ಕೆ ಹೋದದ್ದರಿಂದ ಯಾರೂ ಇರಲಿಲ್ಲ. ಇದರಲ್ಲಿ ೨-೩ ವರ್ಷದ ಒಂದು ಹೆಣ್ಣುಮಗುವಿನ [illegible] ಕಾಣದ [illegible] ಸುಟ್ಟು ಬೆಂದುಹೋಗಿದ್ದವು. ಜನರು ನೋಡಿ ಬಹಳೇ ಮರುಗಿದರು. ವಿಜಾಪೂರ ಜಿಲ್ಲೆಯ ಬಡವರ ಕಷ್ಟಗಳನ್ನು ಸರಕಾರವು ಕಣ್ತೆರೆದು ನೋಡುತ್ತಿದೆಯಲ್ಲವೇ?

ವಿಜಾಪೂರ ಜಿಲ್ಲಾ ದಕ್ಷಿಣಭಾಗದ ಡಿ ಡಿ ಕಲೆಕ್ಟರರ ಪ್ರವಾಸ ಕ್ರಮ:— ಫೆಬ್ರುವರಿ ೨೦ ರಿಂದ ಮಾರ್ಚ ೧ ಮುದ್ದೇಬಿಹಾಳ; ೨-೫ ತಾಳಿಕೋಟಿ, ೬-೧೧ ಬಾಗಲಕೋಟೆ, ೧೨ ೧೬ ಹುನಗುಂದ, ೧೭ ಪ್ರವಾಸ, ೧೮-೨೪ ಬೀಳಗಿ, ೨೫-೩೦ ಕಲಾದಗಿ, ೩೧ ರಿಂದ ಏಪ್ರಿಲ ೭ ಬಾಗಲಕೋಟೆ, ೮ ವಿಜಾಪೂರ.

ಬೆಳಗಾವಿಯ ಶ್ರೀ. ರಾವಬಹದ್ದೂರ ದೇಸಾಯಿಯವರ ಮೊಮ್ಮಗಳಾದ ಕುಮಾರಿ ಅಜಗಾವಕರ ಇವರಿಗೆ ಅಕ್ಸಫರ್ಡ ವಿಶ್ವವಿದ್ಯಾಲಯದವರು (ತತ್ವಜ್ಞಾನದ) 'ಡಾಕ್ಟರ' ಪದವಿಯನ್ನು ಕೊಟ್ಟು ಗೌರವಿಸಿದ್ದಾರೆ. ಶ್ರೀಮಂತಿಯವರು ಬ್ಯಾರಿಸ್ಟರ ಪರೀಕ್ಷೆಗೆ ಕುಳಿತದ್ದು, ಮೇಲಿಂಗಳಲ್ಲಿ ಹಿಂದುಸ್ಥಾನಕ್ಕೆ ಬರುವರು ಹಿಂದೀ ಸ್ತ್ರೀಯರಲ್ಲಿ ಈ ಪದವಿಯನ್ನು ಪಡೆದವರೆಂದರೆ ಇವರೇ ಮೊದಲು

ಹುಬ್ಬಳ್ಳಿಯ ಕಾಟನ್ ಮಾರ್ಕೇಟದ ಸ್ಥಾನವನ್ನು ಬದಲಾಯಿಸಿ, ದೂರ ಒಯ್ದರೆ, ತಮಗೆ ಬಹಳೇ ತೊಂದರೆಯಾಗುವದರಿಂದ ಹಾಗೆ ಮಾಡಕೂಡದೆಂದು ಸರಕಾರಕ್ಕೆ ತಿಳಿಸಲು, ಹುಬ್ಬಳ್ಳಿಯ ವರ್ತಕರ ಒಂದು ಶಿಷ್ಟಮಂಡಲವು ಮುಂಬೈಗೆ ಹೋಗಿದೆ ಮಂತ್ರಿಗಳಾದ ಹಿದಾಯತುಲ್ಲಾರವರಿಗೆ ಭೆಟ್ಟಿಯಾಗಿದ್ದಾರೆ.

ಇಹವೃತ್ತ.

ಶ್ರೀ ಕೃಷ್ಣಮೂರ್ತಿಗಳೆಂಬ ಓರ್ವ ಇತಿಹಾಸದ ಪದವೀಧರರು ಬಸವೇಶ್ವರ ಶಾಲೆಯ ಶಿಕ್ಷಕರಿದ್ದಾರೆ ವಿಜಯನಗರವು ಕನ್ನಡಿಗರದಲ್ಲ, ಆಂಧ್ರರದೆಂಬುದು ಇವರ ಪ್ರೀತಿಯ ವಿಷಯ. ಇವರ ಈ ಮತವನ್ನು 'ಕನ್ನಡಿಗ'ನಲ್ಲಿ ಶ್ರೀ ಗುಳಕರ್ಣಿಯವರು ಖಂಡಿಸಿದ್ದರೂ ಶಿಕ್ಷಕರಿಂದ ಚಕಾರ ಶಬ್ದವಿಲ್ಲ. ಈ ಇತಿಹಾಸದ ಪದವೀಧರರಿಗೆ ವರ್ಗಬಿಟ್ಟು ಹೊರಗೆ ಬಂದು ತಮ್ಮ ಮತವನ್ನು ಹೇಳುವ ಧೈರ್ಯವಿದ್ದಂತೆ ತೋರಲಿಲ್ಲ. ಈಗ್ಗೆ ಇದೇ ೨೦ನೇ ತಾ। ಕ್ರಾನಿಕಲ್ ಪತ್ರದಲ್ಲಿ ಈ ಬಗ್ಗೆ ಒಂದು ಲೇಖ ಬಂದಿದೆ. ಆದಕಾರಣ ಇವರು ಉತ್ತರ ಬರೆಯುವರೋ? ಅಥವಾ ಕೇವಲ ವರ್ಗದಲ್ಲಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಸಮೀಪಿಸಿತೆಂದು ಬೆದರಿಸುತ್ತ ಅಲ್ಲಿಯೇ ತಮ್ಮ ಪ್ರೀಯ ವಿಷಯವನ್ನು ಹೇಳುವರೋ?

ವಿಜಾಪೂರ ಜಿಲ್ಲೆ ಲೋಕಲ್ ಬೋರ್ಡಿನ ವಾರ್ಷಿಕ ಸಭೆಯು ೨೭ ನೇ ತಾ॥ ದಿನ ಸೇರುವದು. ಆಗ್ಗೆ ಇಲ್ಲಿಯ ದನದ ದವಾಖಾನೆಯ ಮೆಲ್ಲಿಕಾರ್ಜುನಪ್ಪ ಶಿಲೋತ್ರಿ ಇವರ "ಕೇಸ" ನ್ನು ಬೋರ್ಡಿನವರು ವಿಚಾರಿಸುವರೋ? ಬಡತಿ ಏಕೆ ದೊರೆತಕ್ಕದ್ದಿತ್ತು! ಯಾಕೆ ದೊರೆತಿಲ್ಲ! ಇವು ವಿಚಾರಿಸತಕ್ಕ ವಿಷಯಗಳು

೧,೪೨,೦೦,೦೦೦

ರೂಪಾಯಿಗಳು!

ಪರದೇಶಗಳಿಂದ ತರಿಸಲ್ಪಟ್ಟ ಸಾಬೂನುಗಳಿಗೋಸ್ಕರ ಪ್ರತಿವರುಷವೂ ಒಂದುಕೋಟಿ ನಾಲ್ವತ್ತೆರಡು ಲಕ್ಷ ರೂಪಾಯಿಗಳನ್ನು ನಮ್ಮ ದೇಶದಿಂದ ಪರದೇಶಕ್ಕೆ ತೆರುತ್ತಿದ್ದೇವೆ. ಮಹಾಜನಗಳೆಲ್ಲರೂ ಒಕ್ಕಟ್ಟಾಗಿ ಸಂಕಲ್ಪಮಾಡಿದರೆ ತಾನೇ ಈ ಹಣವನ್ನೂ ನಮ್ಮ ದೇಶದಲ್ಲಿ ಉಳಿಸಿಕೊಳ್ಳಬಹುದು. ಸ್ವದೇಶದ ಸಾಬೂನನ್ನು ಬಿಟ್ಟು ಪರದೇಶದ ಸಾಬೂನನ್ನು ಕೊಳ್ಳುವ ಪ್ರತಿಯೊಬ್ಬ ವಿದ್ಯಾವಂತನೂ ಅನ್ಯ ದೇಶದ ಕೈಗಾರಿಕೆಗಳಿಗೆ ಉಪಕಾರಮಾಡಿ, ಸ್ವದೇಶದ ಕೈಗಾರಿಕೆಗಳಿಗೆ ಅಪಕಾರಮಾಡುತ್ತಾನೆ. ಪ್ರತಿಯೊಬ್ಬ ದೇಶಬಾಂಧವನೂ ಸ್ವದೇಶೀ ಮಾಲುಗಳನ್ನೇ ಕೊಳ್ಳುವನು. ಮೈಸೂರು ಗೌರ್ನಮೆಂಟ ಸೋಪ್ ಫ್ಯಾಕ್ಟರಿಯಲ್ಲಿ ಸರ್ವಗ್ರಾಹ್ಯವಾದ ಉತ್ತಮವಾದ ಸಾಬೂನುಗಳನ್ನು ತಯಾರುಮಾಡುತ್ತಾರೆ ನಾವು ತಯಾರುಮಾಡುವ ಶ್ರೀಗಂಧ ಸುವಾಸವುಳ್ಳ ಸಾಬೂನೊಂದನ್ನು ಕೊಂಡು ತಾವೇ ಪರೀಕ್ಷೆಮಾಡಿ ನೋಡಿರಿ. ತಮಗೆ ನಮ್ಮ ಸಾಬೂನುಗಳು ಸಿಗಲಸಾಧ್ಯವಾದಲ್ಲಿ ದಯವಿಟ್ಟು ನಮಗೆ ಪತ್ರವೊಂದನ್ನು ಬರೆದರೆ, ತಾವು ಇಚ್ಛೆಪಡುವ ಅಂಗಡಿಯಲ್ಲಿಯೇ ನಮ್ಮ ಮಾಲುಗಳು ತಮಗೆ ದೊರೆಯುವಂತೆ ಏರ್ಪಡಿಸಿಕೊಡುತ್ತೇವೆ.

ಗೌರ್ನಮೆಂಟ ಸೋಪ್ ಫ್ಯಾಕ್ಟರಿ

ಬೆಂಗಳೂರು.

ಮುಂಬೈ ಕಾಯದೆಮಂಡಲ

ಶ್ರೀ ದೆಹಲ್ವಿಯವರು ಅಧ್ಯಕ್ಷರಾಗಿಯೂ ಕಂಬಾಟಿಯವರು ಉಪಾಧ್ಯಕ್ಷರಾಗಿಯೂ ನೇಮಿಸಲ್ಪಟ್ಟಿದ್ದಾರೆ. ಬರಗಾಲವು ಭೀಕರವಾಗಿದ್ದರೂ, ಆ ಬಗ್ಗೆ ವಿಚಾರಿಸಲು ಅವಕಾಶ ಬೇಡುವ ಸೂಚನೆಗೆ ಅಧ್ಯಕ್ಷರು ಅಪ್ಪಣೆಕೊಡಲಿಲ್ಲ. ಸರಕಾರದ ಸಹಾಯದಿಂದ ಆರಿಸಲ್ಪಟ್ಟ ಅಧ್ಯಕ್ಷರ ಮೊದಲನೇ ಕೃತಿಯಿದು

ಲಿವರಿನ ಗಡಿಯಾರಗಳು.

ಲಿವರಿನ ಕೈ ಗಡಿಯಾರ ರೂ. ೯.

ಲಿವರಿನ ಕಿಸೆಯೊಳಗಿಡುವ ಗಡಿಯಾರ ರೂ. ೭



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಮೂಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ತಾಳುವವು. ಬೆಲೆ ಕಡಿಮೆಯಿದೆಂದು ಅಂಜುವ ಕಾರಣವಿಲ್ಲ. ಪರದೇಶೀ ಕಾರಖಾನೆಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚ ತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚ ಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ. ಆದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ.

ಲಿಚೋ ವಾಚ ಕಂ. (ಇಂಡಿಯಾ.) ಬಾಂಬೆ ಕೆ. ೪

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಮವು ಇದಾಂ!!! ಅಂ ಹಾಸಲು

ಇಲ್ಲದೆ ಸರ್ವರಿಗೂ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ. ಬಾಗಲಕೋಟೆಯಲ್ಲಿ ನಮ್ಮ ಆಯುರ್ವೇದ ಔಷಧಿಗಳನ್ನು ಮಾರುವದಕ್ಕೆ ಏಜೆಂಟರು ಬೇಕಾಗಿದೆ. ಪುಸ್ತಕ [illegible].

ರಾಜವೈದ್ಯ ನಾರಾಯಣಜಿ ಕೇಶವಜಿ.

೫೭. ಚೀನಾಬಜಾರ್ ಮದ್ರಾಸು

ಯಾವದೇ { ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ. ೧೪, ಅರ್ಧ ಬೆಲೆ ರೂ ೭



ಬರೇ ಒಂದು ತಿಂಗಳ ಬಗ್ಗೆ ನಾವು ಈ ದಾನವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ಯುರೋಪ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂ. ೭

ಅಲ್ಪವೇ ಇದೆ; ಈಗಲೇ ಬರೆಯಿರಿ.

ಪತ್ತೆ:— ಸ್ವಾನ ಹೌಸ ಪಿ. ಬಿ. ೫೦೪ ಪಿ. ಟಿ ಮದ್ರಾಸ

ಅತ್ಯಲ್ಪವಿದೆ! ಉಚಿತ!

ಕೇವಲ ಉಚಿತ ಕೇವಲ ಉಚಿತ



“ತಾರಾ” ಲಿವರ್ ರಜಿಸ್ಟರ್ಡ್ ಪೋಕೆಟ್ ವಾಚ್ ೧೫ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚುಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ “ಕಿ” [illegible] ಉಚಿತವಾಗಿ ಕೊಡುತ್ತೇವೆ. [illegible] ಗಡಿಯಾರಗ[illegible] ಉಚಿತವಾಗಿ [illegible] “ತಾರಾ” [illegible] ರೋಲ್ಡ್ ಗೋಲ್ಡಿನ [illegible]

[illegible] ಮದ್ರಾಸ

ಕನ್ನಡ ಬಂಧುಗಳೇ! ಈ ಸಂಧಿಯನ್ನು ಕಳೆದುಕೊಳ್ಳಬೇಡಿರಿ.
ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವದು ಮತ್ತು ಜೋಡಿಸುವದು, ಅವುಗಳೊಳಗಿನ ಕಟ್ಟುಬಿಟ್ಟ ಮುರಿದ-ಹರಿದ ಭಾಗಗಳ ದುರಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ ನಿರಿಕ್ಷಣರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡಿಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಊಳಿದಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆಯು ಕೊಳ್ಳಿರಿ!

ವಿಳಾಸಃ—ಕುಲಕರ್ಣಿ ಮೋಟಾರ ಸ್ಕೂಲ.
೪೫೫ ಸಿವಾರ ಪೇಠ ಜಮಖಂಡಿಕರ ವಾಡೆ ಪುಣೆ ಶಹರ.

ನಪುಂಸಕತ್ವ

ಧಾತು ವಿಕಾರ, ಸ್ವಪ್ನಾವಸ್ಥೆ, ಅಶಕ್ತತೆ ಇತ್ಯಾದಿಗಳಮೇಲೆ ಖಂಡಿತವಾಗಿ ಗುಣಕೊಡುವ ಮತ್ತು ಕಡೆತನಕ ಬಾಳುವ ದಿವ್ಯ ಔಷಧಿ! ಒಂದೇ ಗುಳಿಗೆ!!

ವಿಶೇಷ ಮಾಹಿತಿ ಪತ್ರದ್ವಾರ ತಿಳಿಯಿರಿ.

ವಾದಿರಾಜ ಜಹಾಗೀರದಾರ.

ಮು. ಪೋ. ಇಲಕಲ್ಲ. (ವಿಜಾಪೂರ)

ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಬಲ್ಲವರಿದ್ದೆವು ಹಲ್ಲುಗಳ ನೋವುಗಳನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಗಳಾಡುವ ಹಲ್ಲುಗಳನ್ನು ಮೊದಲಿನಂತೆ ಗಟ್ಟಿ ಮಾಡುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು. ಹಲ್ಲುಗಳ ಬಣ್ಣ ಬದಲಿಸಿ ಮುಖಕ್ಕೆ ಸೌಂದರ್ಯ ತರುವೆವು.

S. U. Narayan[a]charya & Co
Chaukhamba B[en]ares City



ನಮ್ಮಲ್ಲಿ ಎಲ್ಲಾ ತರದ ರೇಷ್ಮೆ ಪಿತಾಂಬರ, ಜರಿಕಣ, ಜರಿಸೀರೆ, ಕಾಶ್ಮೀರಿ ಶಾಲು, ತಂಬಾಕು ವಿಲಾಯತಿ, ಕಸ್ತೂರಿ ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲುಗಳ ವ್ಯಾಪಾರ ಮಾಡುವವರಿಗೆ ಇನಾಮವಾಗಿ ಕಳಿಸಲಾಗುವದು

ವಿಳಾಸ-ಶಿರೋಮಣಿ ಶಾರದಾ ಪ್ರೆಸ್, ಪ ಜಾಮಿ.
ಕಂಪನಿ ಬನಾರಸ ಸಿಟಿ

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮನ್ಸಳಾನ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾ ಯಂತ್ರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ ನಂ. ೬೨ ೧೯೪೭ ವಾ ಚಂದಾ ೧-೧೪-೦ ಮಾತ್ರ.

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ.)

ಯತ್ಕರ್ಮ ಕುರ್ವತೋಸ್ಯ ಸ್ಯಾತ್ ಪರಿತೋಷೋಂತರಾತ್ಮನಃ । — ಮನು

ಸಂಪಾದಕರು— ಮಂಗಳವೇಢೇ [illegible] ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ [illegible] ಮಿತಿ [illegible] ಶಕೆ ೧೮೬೯ [illegible] ೧೯೪೭. | ಸಂಚಿಕೆ ೪೭

Date 1— · -1947

ಸಂಪಾದಕರ ಭೂಮಿ

(೬೦)

ನನ್ನ ಮನಸಿನ ಮೋಜವಾದಿ ಕಟ್ಟುವೆನಾನು
ನಿನ್ನ ಬೆಸನವ ಮಾಡಿದಂಥ ಮುತ್ತಳ ದೊಮ್ಮು।
[illegible] ಚೆನ್ನ [illegible] ನೊಂದು [illegible] ॥
ನನ್ನ ದೇಹವು ನಿನ್ನ ಕ್ಷೀರಶಾಸನಕಾಗಿ।
ಕಣ್ಣನಲ್ಲಿ ಕಲ್ಲಾಗಿ [illegible]
ಕಣ್ಣೀರು [illegible] ನಿನ್ನ ಗಂಧವನು [illegible] ಗಂಧವನೆಂದು [illegible]

— ಅಂಜಿಕಾತನಯ ಪತ್ರ

ಮಹಾತ್ಮಾ ಗಾಂಧಿಯವರು ಕರ್ನಾಟಕವನ್ನು ಸಂದರ್ಶಿಸುವ ಕಾಲವು ಸಮಿಪಿಸುತ್ತಲಿದೆ. ಇದೇ ತಿಂಗಳ [illegible] ರಿಂದ ಎಪ್ರಿಲ ೪ ರ ವರೆಗೆ ಧಾರವಾಡ ಬೆಳಗಾವಿ ವಿಜಾಪುರಗಳಲ್ಲಿ ಅವರು ಸಂಚರಿಸುವರು. ವಿಜಾಪುರ ಜಿಲ್ಲೆಗೆ ಎಪ್ರಿಲ ೩-೪ ತಾರೀಖುಗಳಲ್ಲಿ ಬರುವರು. ಮೈಸೂರ ಪ್ರಾಂತವನ್ನು ಎಪ್ರಿಲ [illegible] ರ ವರೆಗೆ ಆದರೆ ಸಂಪೂರ್ಣ [illegible] ಸತ್ಯವಾದ. ಮಹಾತ್ಮರು ತಮ್ಮಲ್ಲಿಗೂ [illegible] ಕನ್ನಡಿಗರು ಪ್ರಯತ್ನಿಸುತ್ತಲಿದ್ದಾರೆ. ಅದರಂತೆ ಕಾನಡಾದ ಜಿಲ್ಲೆಯೂ ಪ್ರಯತ್ನಿಸುತ್ತಲಿದೆ [illegible] ತಿಂಗಳ [illegible] ಹೋಗುವದು [illegible] ಆದರೆ [illegible] ಅಲ್ಲವಲ್ಲ! [illegible] ಮಹಾತ್ಮರ ದರ್ಶನವು [illegible] ಸುಲಭವಾಗಿ ಬರುವದೇಕೆ? ಈಗಲಾದರೂ ಈ ಜಿಲ್ಲೆಯು [illegible] ನಾವು [illegible] ಮಹಾತ್ಮರಿಗೆ ಅದನ್ನು ಎಲ್ಲಿ ಕನ್ನಡಿಗರೆಂತಲೂ ಮೈಸೂರ [illegible] ತಿಂಗಳು [illegible] ಮಹಾತ್ಮರಿಗೆ [illegible] ಕನ್ನಡಿಗರಿಗೆ [illegible]? ಮಹಾತ್ಮರು [illegible] ಮಹಾರಾಜರು [illegible] ಕನ್ನಡಿಗರ [illegible] ಕನ್ನಡ [illegible] ಕನ್ನಡಿಗ [illegible] ಮಹಾತ್ಮರ [illegible]

[illegible]? ಅಥವಾ [illegible] ದೋ? [illegible] ಒಡೆಯರಾದ ಒಕ್ಕಲಿಗರಿಗೆಲ್ಲ ಉದ್ಯೋಗವನ್ನು [illegible] ಒಕ್ಕಲಿಗರಿಗೆ ಸರಿಯಾದ ಉದ್ಯೋಗವೆಂದರೆ [illegible] ಎಂಬುದು ಈಗ್ಗೆ [illegible] ನಡೆದ [illegible] ಸಿದ್ಧವಾಗಿದೆ. [illegible] ಈಗ್ಗೆ [illegible] ಪ್ರಯೋಜನಕ್ಕಾಗಿಯೇ. ಆದುದರಿಂದ ಪ್ರತಿಯೊಬ್ಬ ಕನ್ನಡಿಗರು [illegible] ತಮ್ಮ ಯೋಗ್ಯತೆಗೆ ತಕ್ಕಂತೆ ದಕ್ಷಿಣೆಯನ್ನು ಕೈಯಲ್ಲಿ ತೆಗೆದುಕೊಂಡು ಮಹಾತ್ಮರ [illegible] ಅರ್ಪಿಸುವ [illegible] ಕಾಲಕ್ಕೆ ಯೋಗ್ಯವೂ ಆವಶ್ಯಕವೂ ಇದೆ.

ಸೊಲ್ಲಾಪುರ [illegible] ಕಾರ್ಯಗಳು ಸರ್ವತ್ರ [illegible] ಇದರಿಂದ ಅಪಾಯವೂ ಅನಾರೋಗ್ಯವೂ, [illegible] ಜನರಲ್ಲಿ [illegible] ಮುಂಬೈ, ಮದ್ರಾಸ, ಕಲಕತ್ತಾ ಪಟ್ಟಣಗಳಲ್ಲಿ, ಅವುಗಳ [illegible] ಸರಕಾರವು [illegible] ಕಾಯಿದೆಗಳನ್ನು ಮಾಡಿದೆ. ಇಂತಹ ಪ್ರಸಂಗವು [illegible] ಕೇಳುತ್ತೇವೆ. "[illegible] ಈ [illegible] ಮುಂದೆ [illegible] ನಗರಗಳಂತೆ [illegible] ಸರಕಾರವು [illegible] ಅವಶ್ಯಕತೆಯು ಇದೆ" ಎಂಬ [illegible] 'ವಿಶ್ವಕರ್ನಾಟಕ'ವು [illegible]. ಪ್ರಜಾಪ್ರಭುತ್ವದ ಮುಂಬಯಿ ಸರಕಾರವು ಇತ್ತ ಕಡೆಗೆ ಲಕ್ಷ್ಯ ಕೊಡಬೇಕೆಂದು ಪ್ರಾರ್ಥಿಸುತ್ತೇವೆ

ಕರ್ನಾಟಕ ಸಾಹಿತ್ಯ ಪರಿಷತ್ತು ಈ ಸಲ ಮಂಗಳೂರಿನಲ್ಲಿ [illegible] ಪ್ರಸಿದ್ಧವಾಯಿತು. "[illegible]" ಎಂಬಂತೆ, ಸಾಹಿತ್ಯ [illegible] ಮಂಗಳೂರು [illegible] ಆದರೆ ಶ್ರೀ [illegible] ಶ್ರೀನಿವಾಸ [illegible] ಮಂಗಳೂರಿನ [illegible]

ಒಳ್ಳೇ ಯಶಸ್ವಿಯಾಗಬೇಕೆಂದು ಅಲ್ಲಿನ ಸಾಹಿತ್ಯ ಸೇವಕರ ಲವಲವಿಕೆಯಿದ್ದಂತೆ ತೋರುತ್ತದೆ. ಸಂವತ್ಸರಗಳ ನವೀನ ಚಕ್ರದ ಮೊದಲನೇ ವಸಂತ ಮಾಸದ ವೈಶಾಖ ಮಾಸದೊಳಗಾಗುವ, ಈ ಪರಿಷತ್ತಿನ ಸ್ಮಾರಕಕ್ಕಾಗಿ, ದಕ್ಷಿಣ ಕನ್ನಡ ಜಿಲ್ಲೆಯ ನಿವಾಸಿಗಳಾದ ಕನ್ನಡ ಲೇಖನಕಾರರ ಒಂದು ಗ್ರಂಥವನ್ನು ಪ್ರಕಟಿಸಬೇಕೆಂದು ಈಗಾಗಲೇ ಸ್ವಾಗತ ಮಂಡಲವು ನಿಶ್ಚಯಿಸಿದೆ. ಇನ್ನೂ ಏನೇನು ಹೊಸ ಹೊಸ ಕಾರ್ಯಕ್ರಮಗಳನ್ನೇರ್ಪಡಿಸುವರೋ ನೋಡುವಾ. ಇನ್ನು ಸ್ವಾಗತ ಮಂಡಲದವರಿಗೊಂದು ಸೂಚನೆಯಿದೆ. ಮೇ ತಿಂಗಳ ಸುಮಾರಕ್ಕೆ ಮಹಾತ್ಮರು ಮಂಗಳೂರಿಗೆ ಬರತಕ್ಕವರಿದ್ದಾರೆ. ಈ ಸಮ್ಮೇಲನದ ಕಾಲವನ್ನೂ ಅದೇ ಸಮಯಕ್ಕೆ ಗೊತ್ತು ಮಾಡಿ, ಅಥವಾ ಸಮ್ಮೇಲನದ ಸಮಯಕ್ಕೇ ಮಹಾತ್ಮರ ಆಗಮನವು ಮಂಗಳೂರಿಗೆ ಆಗುವ ಹಾಗೆ ಏರ್ಪಡಿಸಿ, ಮಹಾತ್ಮರಿಗೆ ಸಮ್ಮೇಲನದ ಆಮಂತ್ರಣ ಕಳಿಸುವ ಹಾಗೆ ಪೂರ್ವ ಸಿದ್ಧತೆ ಮಾಡಿದರೆ ಹೊರಗಿನಿಂದ ಜನರು ಇನ್ನೂ ಹೆಚ್ಚಾಗಿ ಬರಲು ಅನುಕೂಲವಾಗುವದು.

ಬಾಗಲಕೋಟೆಯ ಕಳೆದ ವರ್ಷದ ಕಾಮದಹನದ ಕತೆಯನ್ನು ಕೇಳದವರಿಲ್ಲ ಹಿಂದೂ ಮುಸಲ್ಮಾನರ ನಡುವೆ ಕಲಹ ಬರುವದೆಂದು 'ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ'ರು ಪುರಾತನ ಪದ್ಧತಿಯ ದಾರಿಯನ್ನು ಬಿಟ್ಟು ಬೇರೊಂದು ದಾರಿಯಿಂದ ಮೆರವಣಿಗೆಯು ಹೋಗಬೇಕೆಂದು ಅಪ್ಪಣೆ ಕೊಟ್ಟರು. ಇವರ ಈ ಕೃತಿಯು ಜನರಿಂದ ನಿಷೇಧಿಸಲ್ಪಟ್ಟಿತು. ಕಡೆಗೆ ಕಾಮದಹನವು ಆಗಲೇಯಿಲ್ಲ. ಈ ವರ್ಷ ಅದೇ ಪ್ರಸಂಗ ಬರಬಾರದೆಂಬದಾಗಿ ಬಾಗಲಕೋಟೆಯ ಹಿಂದೂ ಜನರ ಇಚ್ಛೆಯಿದ್ದರೆ, ಈಗಿನಿಂದಲೇ ಆ ಬಗ್ಗೆ ಪ್ರಯತ್ನಿಸುವದೊಳಿತು. ಕಳೆದ ವರ್ಷ ಕಲೇಕ್ಟರ ಸಾಹೇಬರ ಕಡೆಗೆ ಹೋಗಲು ಹಿಂದೂ ಜನರಿಗೆ ಸಾಕಷ್ಟು ಅವಕಾಶ ದೊರಲಿಲ್ಲ ಆದ್ದರಿಂದ ಈ ವರ್ಷವು ಮುಖಂಡರಿವನ್ನು ಮರೆತು ಹಿಂದುಗಡಿಗೆ ಗಡಿಬಿಡಿ ಮಾಡಿದರೆ ಕಾರ್ಯವೇನೂ ಆಗದು. ಈಗಿನಿಂದಲೇ ಒಂದು ಮಂಡಲವು ಏರ್ಪಡಾಗಲಿ. ತಮ್ಮ ಹಕ್ಕುಬಾಧ್ಯತೆಗಳನ್ನು ಕೊಡಲಿಕ್ಕೆ ಕಲೇಕ್ಟರರು ಒಪ್ಪದಿದ್ದರೆ ದಿವಾಣಿ ಮೊಕದ್ದಮ್ಮೆಯನ್ನಾದರೂ ಮಾಡಬೇಕಾಗುವದು.

ಶ್ರೀಮದುತ್ತರಾದಿ ಮಠಾಧೀಶರು ಬಾಗಲಕೋಟೆಯ ವಾಣೀವಿಲಾಸ ಸಂಸ್ಕೃತ ಪಾಠಶಾಲೆಯ ವರ್ಷಾಶನವನ್ನು ನಿಲ್ಲಿಸಿದ್ದಕ್ಕೆ ನಾವು ವಿಷಾದಪಟ್ಟು ನಮ್ಮ ೩೦ ನೇ ಸಂಚಿಕೆಯಲ್ಲಿ ವಿನಾ ಕಾರಣವಾಗಿ ಹೀಗೆ ಬಂದು ಮಾಡಿದ್ದು ಸರಿಯಲ್ಲವೆಂದು ಬರೆದಿದ್ದೆವಷ್ಟೇ? ಆದರೆ ಈ ಪಾಠಶಾಲೆಯ ಮುಖ್ಯಾಧ್ಯಾಪಕರಾದ ಶ್ರೀ ಮಳಗೀ ವೇದವ್ಯಾಸಾಚಾರ್ಯರು ಅಧ್ಯಯನ ದಿನಗಳಲ್ಲಿ ಸಂಚಾರಕ್ಕೆ ಹೋಗಕೂಡದೆಂಬ ಶ್ರೀ ಶ್ರೀ ಸ್ವಾಮಿಗಳವರ ಆಜ್ಞೆಯಿದ್ದರೂ, ಅದನ್ನುಲ್ಲಂಘಿಸಿದ್ದರಿಂದಲೇ, ಶ್ರೀಗಳವರಿಂದ ವರ್ಷಾಶನವು ನಿಲ್ಲಿಸಲ್ಪಟ್ಟಿತೆಂದು ಶ್ರೀಯುತ ವೇದವ್ಯಾಸಾಚಾರ್ಯರೇ ಕಳೆದ ವಾರದ 'ಕನ್ನಡಿಗ' ದಲ್ಲಿ ಸ್ಪಷ್ಟೀಕರಿಸಿದ್ದಾರೆ. ಈ ಕಾರಣವು ನಮಗೆ ಮೊದಲು ಗೊತ್ತಿರಲಿಲ್ಲವಾದ್ದರಿಂದ ಹಾಗೆ ಹಿಂದಕ್ಕೆ ಬರೆಯುವ ಪ್ರಸಂಗ ಬಿದ್ದಿತು. ಈಗ್ಗೆ ಶ್ರೀಗಳವರು ವರ್ಷಾಶನವನ್ನು ನಿಲ್ಲಿಸಿದ ಕಾರಣವು ತಿಳಿಯಿತು. ಆದುದರಿಂದ ಮೊದಲಿನ ನಮ್ಮ ಬರಹವನ್ನು ನಾವು ಮರಳಿ ತೆಗೆದುಕೊಳ್ಳುತ್ತೇವೆ. ನಾವು ಆ ಲೇಖವನ್ನು ಶ್ರೀ. ವೇದವ್ಯಾಸಾಚಾರ್ಯರು ಹೇಳಿದ್ದರಿಂದ ಬರೆದೆವೆಂದು ಕೆಲವರು ಸುದ್ದಿಯನ್ನು ಹುಟ್ಟಿಸಿದ ಹಾಗಿದೆ. ಆದರೆ ಅಗ್ಗೆ ನಾವು ನಮಗೆ ಯೋಗ್ಯ ಕಂಡದ್ದನ್ನೇ ಬರೆದೆವೇ ಹೊರತಾಗಿ ಅನ್ಯರಾರೂ ನಮಗೆ ಆ ಬಗ್ಗೆ ಏನೂ ಹೇಳಿರಲಿಲ್ಲ.

ಬೃಹನ್ ಮಹಾರಾಷ್ಟ್ರ ವೆಂಬದೊಂದು ಹೊಸ ಶಬ್ದವು ಈಗಿನ ಎಲ್ಲಕಡೆಯಲ್ಲಿಯಲ್ಲೂ ಕೇಳಬರುತ್ತದೆ. ಮರಾಟಿ ದೇಶದ "ಬೃಹದ್" ವ್ಯಾಪಕವನ್ನು ತೋರಿಸುವ ತಮ್ಮ ಭರದಲ್ಲಿ ಹಲಕೆಲವು "ಕಟ್ಟರ್" ಮರಾಟಿಗರು ಕರ್ನಾಟಕದ ಅನೇಕ ಭಾಗಗಳನ್ನು ಮಹಾರಾಷ್ಟ್ರದಲ್ಲಿ ಸೇರಿಸಿಕೊಳ್ಳುತ್ತಾರೆ. ಹೀಗೆ ಭಾಷಣ ಲೇಖಗಳಲ್ಲಿ ಇಲ್ಲದ್ದೊಂದು ಬರೆದರೆ ಕರ್ನಾಟಕವೇನು ಮರಾಟಿಗರ ಕೈವಶವಾಗದೆನ್ನುವದು ಈ ಮಹನೀಯರಿಗೆ ತಿಳಿಯದು. ಈ 'ಕಟ್ಟರ್' ಮರಾಟಿಗರ ತಾಂಡವ ನೃತ್ಯದಲ್ಲಿ ನಮ್ಮ ಕರ್ನಾಟಕದವರೂ ಹಲವರು ಸೇರಿದ್ದುದಾತ್ರ ಆಶ್ಚರ್ಯ ಡಾ. ಕುರ್ತಕೋಟಿ ಗಳೊಬ್ಬರು ಅವರಲ್ಲಿ ಇರಲಿ. ಮೊನ್ನಿನ 'ಮನೋರಂಜನ' ಮಾಸಪತ್ರಿಕೆಯಲ್ಲಿ ಈ ಬಗ್ಗೆ ಒಂದು ಲೇಖವು ಪ್ರಕಟವಾಗಿದೆ. ಇಲ್ಲಿ ನೋಡಿ! ಬೆಳಗಾವಿ, ವಿಜಾಪೂರ, ಕಾರವಾರ, ಮಂಗಳೂರ ಜಿಲ್ಹೆಗಳೂ ನಿಝಾಮ ಕರ್ನಾಟಕವೂ ಸಂಪೂರ್ಣವಾಗಿ ಮರಾಟಿಗರವಂತೆ! ಧಾರವಾಡದ ಅರ್ಧಭಾಗವೂ ಮರಾಟಿಗರ ವಶದಲ್ಲಿದೆಯಂತೆ!! ಅದೇಕೋ! "ಧಾರವಾಡ ಪೂರ್ಣಭಾಗವೂ ನಮ್ಮ ದೇಶದಲ್ಲಿದೆ" ನ್ನಲು ಅಂಜಿಕೆಯೇಕೆ! ಶಿವಾಜಿಯ ಕಾಲದಲ್ಲಿ ತಂಜಾವರದ ವರೆಗೂ ಮರಾಟಿಗರು ಹೋಗಿದ್ದಿಲ್ಲವೇ! ಪೇಶ್ವೇಯ ಕಾಲದಲ್ಲಿ ಬಂಗಾಲದವರೆಗೂ ಹೋಗಿದ್ದರು ಅಂದ ಮೇಲೆ ಮೈಸೂರಪ್ರಾಂತ, ತಮಿಳನಾಡು, ಬಂಗಾಲ, ಪಂಜಾಬಗಳು ಸಹ ಮರಾಟಿಗರ ವಶದಲ್ಲಿವೆ, ಎಂಬದಾಗಿಯೂ ಈ ಮಹನೀಯರು ತಮ್ಮ ತನ್ನೊಳಗೆ ಕುಣಿದಾಡಲು ಆತಂಕವೇನಿದೆ? ಒಳ್ಳೇ ತರ್ಕಶಾಸ್ತ್ರವಿದು!!

ಇಲ್ಲಿಯ ಟಿಂಗಿನ ಮಠದ ಶ್ರೀ ನಿರಂಜನ ರೇವಣಸಿದ್ಧಸ್ವಾಮಿಗಳವರು ಮೊನ್ನಿನ ದಶಮಿಯ ದಿನ ಶಿವೈಕ್ಯರಾದರೆಂದು ತಿಳಿಸಲು ನಾವು ವಿಷಾದ ಪಡುತ್ತೇವೆ. ಇವರು ತಾವು ಇಂತಹ ದಿನ ಶಿವೈಕ್ಯರಾಗುವೆನೆಂದು ಮೊದಲೇ ಹೇಳಿ, ಆ ಕಾಲಕ್ಕೆ ದೇಹ ಬಿಟ್ಟದು ಅವರ ಯೋಗ್ಯತೆಯನ್ನು ಸೂಚಿಸುತ್ತದೆ. ಇವರು ಯೋಗಾಭ್ಯಾಸದಲ್ಲಿ ಪ್ರವೀಣರಿದ್ದರು. ಈ ಮಠಕ್ಕೆ ಕುಳಿತು ೨೩ ವರ್ಷಗಳಾದವು. ಈ ಅವಧಿಯಲ್ಲಿ, ವೀರಶೈವ ಸಂಸ್ಕೃತ ಪಾಠಶಾಲೆ, ವಿದ್ಯಾ ವರ್ಧಕ ಫಂಡು ವಸತಿಗ್ರಹ, ಹೈಸ್ಕೂಲ ಮೊದಲಾದ ಸಂಸ್ಥೆಗಳನ್ನು ಸ್ಥಾಪಿಸಿದರು. ಸಂಸ್ಕೃತ ಕಾಲೇಜನ್ನೊಂದು ಸ್ಥಾಪಿಸಬೇಕೆಂಬ ತಮ್ಮ ಲವಲವಿಕೆಯನ್ನು ಇವರು ಸಾಯುವಾಗ ತಮ್ಮ ಶಿಷ್ಯರಿಗೆ ಹೇಳಿದ್ದಾರೆ. ಸ್ವಾಮಿಗಳವರ ಈ ಸ್ಮಾರಕವನ್ನು ಬಾಗಲಕೋಟೆಯ ವೀರಶೈವರು ಮಾಡೇ ಮಾಡುವರೆಂದು ನಮ್ಮ ನಂಬಿಗೆಯಿದೆ. ಇವರು ದಾನಶೂರರಿದ್ದರು. ಐಹೊಳಿ ರಾಮಲಿಂಗದೇವರ ರಥದ ಬಗ್ಗೆ ೧೦ ಸಾವಿರ ರೂಪಾಯಿಗಳನ್ನು ಕೂಡಿಸಿ, ರಥೋತ್ಸವನನ್ನು ಪ್ರಾರಂಭಿಸಿದರು. ಐಹೊಳಿಯ ಹಾಗೂ ತಿಗ್ಗಲಿತೋಣಿಯ ಮಹಾಜನರು ಭೂಮಿ, ಮತ್ತು ಮಠಗಳನ್ನು ಇವರಿಗೆ ಹಾಕಿಕೊಟ್ಟಿದ್ದಾರೆ. ಇಂತಹ ಲೋಕಪ್ರಿಯ ಹಾಗೂ ವೈರಾಗ್ಯಶೀಲ ಸ್ವಾಮಿಗಳವರ ನಿಧನದಿಂದ ವೀರಶೈವರಿಗೆ ದೊಡ್ಡ ಹಾನಿಯಾದದ್ದರಲ್ಲಿ ಸಂದೇಹವಿಲ್ಲ. ಈಶ್ವರನು ಇವರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇವೆ.

ವಾಙ್ಮಯ ವಿಚಾರ.

ಪುರಾಣ.

ಇದೊಂದು ಮೈಸೂರಿನ ಧಾರ್ಮಿಕ ಮಾಸಪತ್ರಿಕೆಯು. ಇದನ್ನು ತರ್ಕವೇದಾಂತ ವಿದ್ವಾನ್ ಕೆ. ಸ್ವಾಮಿಶಾಸ್ತ್ರಿಗಳು ಜನ್ಮದಿಂದ ಹೊರಡಿಸುತ್ತಲಿರುವರು. ಕನ್ನಡದಲ್ಲಿ ಭಾಗವತ, ಭಾರತಗಳು ಓದಲಿಕ್ಕೆ ಸಿಕ್ಕುತ್ತಿವೆ. ಸ್ಕಂದಪುರಾಣ, ವಿಷ್ಣುಪುರಾಣ ಮೊದಲಾದವುಗಳು ಇಲ್ಲವೇ ಇಲ್ಲ. ಆದದರಿಂದ ಕನ್ನಡಿಗರಿಗೆ ಎಲ್ಲ ಪುರಾಣಗಳ ಸ್ವಾದವು ಸಿಕ್ಕುವದು ದುರ್ಲಭವಾಗಿತ್ತು. ಸಂಪಾದಕರು ಬಹಳ ಪರಿಶ್ರಮಪಟ್ಟು ಪುರಾಣಗಳನ್ನೆಲ್ಲ ಕನ್ನಡಿಗರಿಗೆ ಒದಗಿಸಿ ಕೊಡಲುದ್ಯುಕ್ತರಾಗಿದ್ದಾರೆ. ಒಂದನೆಯ ಸಂಚಿಕೆಯು ಈಗಾಗಲೇ ಹೊರಬಿದ್ದಿದೆ. ಇದರಲ್ಲಿ ಸ್ಕಂದಪುರಾಣದಲ್ಲಿಯ ಮೊದಲನೆಯ ಮೂರು ಅಧ್ಯಾಯಗಳು ಪೂರ್ಣವಾಗಿಯೂ ನಾಲ್ಕನೆಯ ಅಧ್ಯಾಯದ ಸ್ವಲ್ಪ ಭಾಗವೂ ಪ್ರಕಟಿತವಾಗಿವೆ. ಮೇಲೆ ಸಂಸ್ಕೃತ ಮೂಲವನ್ನು ಕೆಳಗೆ ಶಬ್ದಶಃ ಅನುವಾದವನ್ನೂ ಸಂಪಾದಕರು ಕೊಟ್ಟಿರುವರು. ಎಲ್ಲ ಪುರಾಣಗಳಲ್ಲಿ ಸ್ಕಂದಪುರಾಣವೇ ದೊಡ್ಡದೆಂದು ಹೇಳಬಹುದು. ಇದರಲ್ಲಿ 'ಶಿವನಿರ್ಮಾಲ್ಯ'ವು ಪ್ರತಿಪಾದಿತವಾಗಿದೆ. ಈ ಸಂಚಿಕೆಯಲ್ಲಿ ದಕ್ಷಪ್ರಜಾಪತಿಯ ಯಜ್ಞವೂ, ಸತಿಯು ಸಾವೂ, ಶಿವನ ಕೋಪವೂ ವಿಷ್ಣುವಿನ ಶಾಂತ ಸ್ವರೂಪವೂ ವೀರಭದ್ರನ ಅವತಾರವೂ ವರ್ಣಿತವಾಗಿವೆ. ನಡನಡುವೆ 'ಕರ್ಮ' ಜ್ಞಾನ ಮೊದಲಾದವುಗಳ ವಿವೇಚನೆಯಿದೆ. ಭಾಷೆಯು ಸುಂದರವಾಗಿಯೂ ಸರಳವಾಗಿಯೂ ಇದೆ. ಇಂತಹ ಅತ್ಯುತ್ತಮವಾದ ಕೆಲಸವನ್ನು ಕೈಕೊಂಡದ್ದು ಸಂಸ್ಕೃತಿ, ಧರ್ಮ ಮತ್ತು ಭಾಷೆಗಳ ದೃಷ್ಟಿಯಿಂದ ಒಳ್ಳೇ ಶ್ರೇಯಸ್ಕರವಾದುದು. ಎಲ್ಲರಿಂದಲೂ ಈ ಕಾರ್ಯಕ್ಕೆ ಪ್ರೋತ್ಸಾಹನೆಯು ದೊರೆಯುವದೆಂದು ನಮ್ಮ ನಂಬಿಗೆ. ವಾರ್ಷಿಕ ಚಂದಾ ಅಂಚೆವೆಚ್ಚ ಸಹಿತ ೩—೮—೦ ಮಾತ್ರ.

ಉತ್ತರಕನ್ನಡ ಜಿಲ್ಲೆಯ ಪತ್ರ.

[ನಮ್ಮ ಸುದ್ದಿಗಾರರಿಂದ]

ಆರೋಗ್ಯ—ಉತ್ತರ ಕನ್ನಡದಲ್ಲಿ ಸಾಮಾನ್ಯವಾಗಿ ಮಹಾ ರೋಗಗಳೇನು ಇಲ್ಲದಿದ್ದರೂ ಸಿರ್ಸಿಯಲ್ಲಿ ಮಾತ್ರ ಪ್ಲೇಗು ಆರಂಭವಾಗಿ ಅರ್ಧಕ್ಕಿಂತ ಹೆಚ್ಚು ಜನರು ಊರು ಬಿಟ್ಟಿರುವರು. ಈವರೆಗೆ ಮರಣಗಳು ವಿಶೇಷವಾಗಿ ಆಗಲಿಲ್ಲ. ೧೫-೨೦ ರೊಳಗೆ ಜನರ ಮೇಲೆ ಒಂದುಬಾರಿಯು ಇಲಿಗಳ ಮೇಲೆ ಎಂಬಂತೆ ಇಲಿಗಳೇ ವಿಪರೀತವಾಗಿ ಸಾಯುತ್ತವೆ. ಈ ಸಿದ್ದಾಪುರಕ್ಕೆ ಪ್ಲೇಗಿನ ಪ್ರಸಾರವಾಗಿದೆ. ಅಲ್ಲಿಯೂ ಊರು ಬಿಡುತ್ತಿರುವರು.

ಬೆಳೆ—ಈ ಸಾರೆ ಉತ್ತರ ಕನ್ನಡದ ಭತ್ತದ ಬೆಳೆ ಚನ್ನಾಗಿ ಬಂತು. ಘಟ್ಟದ ಕೆಳಗೆ ಅಡಿಕೆ ಬೆಳೆ ಕಡಿಮೆ. ದರವು ಇಳಿಯಿತು. ಇದರಿಂದ ಘಟ್ಟದ ಕೆಳಗಿನ ತೋಟಿಗರಿಗೆ ಕಷ್ಟವೊದಗಿದೆ. ಘಟ್ಟದ ಮೇಲೆ ಅಡಿಕೆ ಬೆಳೆ ಚನ್ನಾಗಿದ್ದರೂ ಸಿರ್ಸಿಯ ಪ್ಲೇಗಿನ ಮೂಲಕ ದರವು ಅತಿಶಯವಾಗಿ ಇಳಿದಿದೆ. ಮೆಣಸಿಗು ಅದೇ ಗತಿ ಆದ್ದರಿಂದ ಈಸಾರೆ ಈ ಜಿಲ್ಲೆಯ ಪ್ರಾಣದಂತಿರುವ ತೋಟಿಗರಿಗೆ ಕಷ್ಟದ ದಿನಗಳು ಬರುವದು ನಿಶ್ಚಯ. ಮೊದಲೇ ೧೦೦ಕ್ಕೆ ೮೦ ಜನರ ತೋಟಿಗರು ಸಾಲದಲ್ಲಿ ಮುಳುಗುತ್ತಿರಲು ಈಸಾರಿಯ ಸ್ಥಿತಿಯಿಂದ ಸ ವ್ಯಾಪಾರದ ಬೆಳೆಮಾತ್ರ ಚನ್ನಾಗಿ ಬರುವದೆಂದು ಹಾರೈಸಬೇಕಾಗಿದೆ.

ಗಾಂಧಿಯವರ ಸ್ವಾಗತ—ಈ ಜಿಲ್ಲೆಯ ಜನರೆಲ್ಲರೂ ಕೂಡಿ ಉತ್ಸಾಹ ಮಹಾತ್ಮಾಜಿಯವರ ಸ್ವಾಗತದ ಬಗ್ಗೆ ಈಗಾಗಲೇ ಅವರಿಗೆ ನಿಧಿಯನ್ನರ್ಪಿಸುವ ಕುರಿತಾಗಲೀ ಏನೂ ಉತ್ಸಾಹ ಬರುವಂತೆ ತೋರುವುದಿಲ್ಲ. ಬೆಳೆಯ ದರವು ಇಳಿದು ಜನರ ಕೈಯಲ್ಲಿ ದುಡ್ಡು ಆಡದೆ ಇರುವುದರಿಂದಲೇ ನಿರುತ್ಸಾಹ ವಾಗಿದೆಯೆಂದು ಕಾಣುತ್ತದೆ. ಶ್ರೀ. ಬಸ್ರೂರ ಇವರಿಗೆ ಕರೆತರಬೇಕೆಂದು ಉತ್ಕಟ ಇಚ್ಛೆ. 'ಧುರೀಣ' ಪತ್ರಿಕೆಯು ಲೋಕಮತವನ್ನು ತಯಾರಿಸುತ್ತದೆ. ಉತ್ತರ ಕನ್ನಡವು ಇಂತಹ ಸಂದರ್ಭವನ್ನು ಕಳಕೊಳ್ಳುವುದು ಜಾಣತನವಲ್ಲ.

ವಿಜಾಪೂರ ಜಿಲ್ಲೆಯ ಸುದ್ದಿಗಳು.

(ನಮ್ಮ ಸ್ವಂತ ಸುದ್ದಿಗಾರರಿಂದ).

ವಿಜಾಪೂರ—ಶಂಕರಲಾಲ ಬ್ಯಾಂಕರ, ಹಾಗೂ ಗಂಗಾಧರರಾಯರು ಬೇಗನೇ ಬರತಕ್ಕವರಿದ್ದಾರೆ. ಮಹಾತ್ಮರ ಆಗಮನದ ಪೂರ್ವ ಸಿದ್ಧತೆಯು ಸಾಗಿದೆ. ಬಿಸಲು ಹೆಚ್ಚುತ್ತಲಿದೆ.

ಊರಲ್ಲಿ ಪ್ಲೇಗ ಸಂಪೂರ್ಣ ನಿಂತಿದೆ.

ಕಲೆಕ್ಟರ, ಡಿ. ಡಿ॥ ಸಿ। ಗಳೆಲ್ಲ ಸಂಚಾರಕ್ಕೆ ಹೋಗಿದ್ದಾರೆ.

ಶ್ರೀ. ಪಟೂಕರ ಡಿ ಡಿ॥ ಸಿ॥ ಯವರ ಪ್ರವಾಸ ಕ್ರಮಃ- ಉಕ್ಕಲಿ ೨—೫; ಕಾಮಟಗಿ ೬—೮; ಅಥಗಾ ೯—೧೩; ನಿಂಬಾಳ ೧೪—೧೬, ಅಂಜುಟಗಿ ೧೭—೨೦; ಇಂಡಿ ೨೧—೨೭; ತಾಂಬೆ ೨೮—೩೧.

ಹುನಗುಂದ—ಈ ಊರನ್ನು ಖಾದಿಯ ಹುಟ್ಟುವಳಿಯ ಕೇಂದ್ರವನ್ನು ಮಾಡುವ ಉದ್ಯೋಗವು ನಡೆದಿದೆ. ಬರಗಾಲದಲ್ಲಿ ಹೊಟ್ಟೆಗಿಲ್ಲದ ಬಡವರಿಗೆ ಒಂದು ತುತ್ತಾದರೂ ಆಹಾರವು ದೊರೆಯುವಂತಾಗಲಿ. ರಾಯಲ್ ಬೋಟಾನಿಸವರು ಈ ಕೇಂದ್ರದ ವಿಚಾರಣೆಗೆ ಬರುವ ಶ್ರೀ. ಕಟ್ಟಿಯವರಿಗೆ 'ಫ್ರೀವಾಸು' ಕೊಟ್ಟಿರುವರು.

ಬೀಳಗಿ—ಕೆಲವು ಹಳ್ಳಿಗಳಲ್ಲಿಯ ನೀರಿನ ಬೋಗಳಿ ದೇವರೇ ಬಲ್ಲ. ೧೨-೧೩ ಮೈಲುಗಳ ವರೆಗೆ ನೀರಿಗಾಗಿ ದಿನಾಲು ಹೋಗಬೇಕಾಗುತ್ತದೆ. ಮೊದಲನೇ ಬಾಡಿನ ಹತ್ತಿ ಬಿಡಿಸುವ ಮುಗಿದಿದೆ.

ಬಾದಾಮಿ-ಶಿವಯೋಗ ಮಂದಿರದ ಶಿವರಾತ್ರಿಯ ಜಾತ್ರೆಯು ಯಥಾಸಾಂಗವಾಗಿ ಸಾಗಿತು.

ಬಾಗೇವಾಡಿ—ಶ್ರೀ ಎಲಗುರೇಶನ ಕಾರ್ತಿಕೋತ್ಸವವು ಪ್ರತಿವರ್ಷದಂತೆ ವಿಜೃಂಭಣೆಯಿಂದ ನೆರವೇರಿತು.

ಕಲಾದಗಿ -ಇಲ್ಲಿಯ ಶ್ರೀ. ದೇಶಪಾಂಡೆ ವಿಠ್ಠಪ್ಪನವರು ಕಳೆದವಾರದಲ್ಲಿ ವೈಕುಂಠವಾಸಿಗಳಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ವರ್ಚಸ್ಸು ಕಲಾದಗಿ ಸುತ್ತಲಿನ ೨೦ ಹಳ್ಳಿಗಳಲ್ಲಿ ಬಹಳೇ ಇದ್ದಿತು. ಸಾರ್ವಜನಿಕ ಕಾರ್ಯಗಳಲ್ಲಿ ಇವರಿಗೆ ಪ್ರೀತಿ ಬಹಳ. ಅಸಹಕಾರ ಚಳವಳದಲ್ಲಿ ಯಾರೂ ಕಾಯದೇ ಮಂಡಲಕ್ಕೆ ಮತಕೊಡಬಾರದೆಂಬದು ಗೊತ್ತಾದಾಗ್ಗೆ ಇವರ ಹಳ್ಳಿಗಳಲ್ಲಿ ಯಾರೂ ಮತಕೊಡದಂತೆ ಇವರು ಏರ್ಪಡಿಸಿದ್ದರು. ದೇವರು ಅವರ ಆತ್ಮಕ್ಕೆ ಶಾಂತಿಯನ್ನೀಯಲಿ !

ಇಂಡಿ. ಚಡಚಣದಿಂದ ವಿಜಾಪುರಕ್ಕೆ (೪೫ ಮೈ) 1¼ ರೂ ಇದ್ದರೂ ಮೋಟಾರ ಬಾಡಿಗೆಯವರು ಒಯ್ಯುತ್ತಿದ್ದರು. ಈಗ್ಗೆ ಅಲ್ಲೇ ಪರಊರಿನವರಾರೋ ಮೋಟಾರು ತಂದಿದ್ದರಿಂದ ಒಬ್ಬರಿಗೊಬ್ಬರ ಈರ್ಷೆಯಿಂದ ಒಂದೇ ಆಣೆಗೆ ಕರಕೊಂಡು ಹೋಗಹತ್ತಿದರು. ಈ ಗಂತೂ, ಒಂದು ಹರಿವಾಣವಲ್ಲ. ಕಪ್ಪ ಚಹಾಕೊಟ್ಟು ಕರಕೊಂಡು ಹೋಗಹತ್ತಿರುವರು.

ಸಿಂದಗಿ ಮೊನ್ನಿನ ಸೋಮವಾರ ದಿವಸ ವಿಜಾಪುರ ಜಿಲ್ಲೆಯ ಕಲೆಕ್ಟರರಾದ ಮಿ. ನಾಯಕರವರು ಹಲಸಂಗಿಗೆ ಬಂದು ಊರನ್ನು ನೋಡಿಹೋದರು.

ಸ್ಕೂಲಬೋರ್ಡಿನ ಅನುಭವಗಳು.

(ಲೇ: — ಆರ್ ಬಿ ಕುಲಕರ್ಣಿ ಕಾವ್ಯರತ್ನ ಸ್ಕೂಲಬೋರ್ಡ ಮೆಂಬರ ಬೆಳಗಾಂವಿ)

೧೯೨೬ ನೇ ಇಸವಿಯ ಫೆಬ್ರುವರಿ ತಿಂಗಳಲ್ಲಿ ಬೆಳಗಾಂವಿಯ ಜಿಲ್ಲಾ ಸ್ಕೂಲ ಬೋರ್ಡಿನಲ್ಲಿ ಶಿಕ್ಷಣಾನುಭವಿಕನೆಂದು ಆರಿಸಲ್ಪಟ್ಟ ಬಳಿಕ ಇದುವರೆಗಿನ ಒಂದು ವರ್ಷದ ಅವಧಿಯಲ್ಲಿ ನನ್ನ ಅನುಭವಕ್ಕೆ ಬಂದ ಕೆಲವು ಮಹತ್ವದ ಸಂಗತಿಗಳನ್ನು ಇದರಲ್ಲಿ ಪ್ರಸಿದ್ಧಿಸುವೆನು. ಉಳಿದ ಜಿಲ್ಲಾ ಬೋರ್ಡಿನವರೂ ಸ್ಕೂಲಬೋರ್ಡಿನವರೂ ವಿಚಾರಿಸಲೆಂದು ನನ್ನ ವಿಜ್ಞಾಪನೆಯು —

(೧) ಸರಕಾರಿ ಅಧಿಕಾರಿಗಳ ಕೈಯಿಂದ ಈ ಸ್ವತಂತ್ರವಾದ ಶಿಕ್ಷಣಖಾತೆಯನ್ನು ಜನರಿಂದ ಆರಿಸಲ್ಪಟ್ಟ ಮೆಂಬರರು ಹೇಗೆ ಸಾಗಿಸುವರೇ ಎಂಬದೊಂದು ಗೂಢ ಪ್ರಶ್ನವು ಮೇಲೆ ಮೇಲೆ ಕೇಳಬರುತ್ತಲಿತ್ತು. ಸ್ಕೂಲ ಬೋರ್ಡುಗಳು ಸುವ್ಯವಸ್ಥಿತವಾಗಿವೆಯೆಂಬದು ಇತ್ತಿತ್ತಲಾಗಿ ಜನಸಾಧಾರಣಕ್ಕೆ ಒಂದು ಬಗೆಯ ಗೂಢ ಪ್ರಶ್ನವನ್ನು ಈಗ ಯಾರೂ ಎತ್ತಲಾರರು. ಒಂದೇ ವರ್ಷದ ಅವಧಿಯಲ್ಲಿ ಬೆಳಗಾಂವಿಯ ಜಿಲ್ಲೆಯಲ್ಲಿ ೭೦ ಹೊಸ ಶಾಲೆಗಳು ಪ್ರಾರಂಭಿಸಲ್ಪಟ್ಟಿವೆ. ಇದಲ್ಲದೆ ೧೦೦ ಜನ ಹರಿಜನರನ್ನು ಹುಡುಗರ ಸಂಖ್ಯೆಯು ಬೆಳೆದಕಡೆಗೆ ಪೂರೈಸಲಾಗಿದೆ. ೭ ಸಾವಿರ ಹುಡುಗರ ಸಂಖ್ಯೆಯು ಬೆಳೆದದ್ದು, ಲೋಕಲ್ ಬೋರ್ಡಿನ ಸಾಹಾಯ್ಯವು ದೊರೆಯದಿದ್ದರೆ ಕಷ್ಟದಲ್ಲಿ ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ನಮ್ಮ ಜಿಲ್ಲೆಯಲ್ಲಿ ಕಾಣಬಹುದಾಗಿತ್ತು. ದುರ್ದೈವ!

(೨) ಅಭ್ಯಾಸ ಪತ್ರಿಕೆಯಲ್ಲಿ ಬದಲಾವಣೆಯಾಗುವದು ಅವಶ್ಯವಾಗಿದೆ. ಅದರಲ್ಲಿಯೂ ಕ್ರಮಿಕ ಪುಸ್ತಕಗಳ ಬದಲಾವಣೆಯು ಅತ್ಯವಶ್ಯವು. ೬ ನೇಯ ಇಯತ್ತೆಯಲ್ಲಿ ಕಲಿಯುವ ಒಬ್ಬ ಹುಡುಗನಿಗೆ ಮ್ಯುನಿಸಿಪಾಲ್ಟಿಯೆಂದರೆ ಏನು ಎಂದು ಕೇಳಿದಾಗ ಲೋಕಲ್ ಬೋರ್ಡ ಎಂದು ಉತ್ತರ ಕೊಟ್ಟನು. ಇದರಿಂದ ಸ್ಥಾನಿಕ ಸ್ವರಾಜ್ಯದ ಜ್ಞಾನದ ಪುಸ್ತಕಗಳು ಅವಶ್ಯವಾಗಿ ಬೇಕಾಗಿವೆ. ಮುಲ್ಕೀ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅನೇಕರಲ್ಲಿ ತಕ್ಕ ಯೋಗ್ಯತೆಯು ಕಂಡುಬರುವದಿಲ್ಲ. ಒಂದು ಅರ್ಜಿಯನ್ನು ಬರೆಯುವದು ಕಷ್ಟವೆನಿಸುತ್ತದೆ. ಕಲಿಯುವ ಒಟ್ಟು ಹುಡುಗರ ಸಂಖ್ಯೆಯನ್ನು ಹೋಲಿಸಿ ನೋಡಿದರೆ ೪ನೇ ಇಯತ್ತೆ ಪಾಸಾದಕೂಡಲೇ ಬಿಟ್ಟು ಬಿಡುವವರೇ ಬಹಳ! ಈ ನಾಲ್ಕನೇ ಇಯತ್ತೆಯಿಂದ ಬಿಟ್ಟವರೇ ಹಳ್ಳಿಗಳಲ್ಲಿ ಭಾವೀ ಪುಢಾರರಾಗುವರು. ಇವೆಲ್ಲ ಸಂಗತಿಗಳನ್ನು ವಿಚಾರಿಸಿ ಅಭ್ಯಾಸ ಪತ್ರಿಕೆಯನ್ನು ಬದಲಾಯಿಸಲಿಕ್ಕೆ ಎಲ್ಲ ಸ್ಕೂಲ ಬೋರ್ಡಿನವರು ಕೂಡಿ ಒಂದು ಕಮೀಟಿಯನ್ನು ನಿಯಮಿಸಬೇಕು. ಹೆಣ್ಣುಮಕ್ಕಳಬಗ್ಗೆ ಇವೇ ಕ್ರಮಿಕ ಪುಸ್ತಕಗಳು ಇರಬೇಕೋ ಅಥವಾ ಬೇರೆಯಾಗಬೇಕೋ ಎಂಬುದರ ವಿಚಾರವಾಗಬೇಕು.

(೩) **ಮುಲ್ಕಿಪರೀಕ್ಷೆ ಟ್ರೇನಿಂಗ ಸ್ಕೂಲು**— ಪ್ರತಿಯೊಂದು ಜಿಲ್ಲೆಯ ಸ್ಕೂಲ ಬೋರ್ಡು ಆಯಾಜಿಲ್ಲೆಯ ಮುಲ್ಕಿ ಪರೀಕ್ಷೆಯನ್ನು ತನ್ನ ವಶಕ್ಕೆ ತಕ್ಕೊಳ್ಳಬೇಕು. ಶಕ್ಯವಿದ್ದರೆ ಜಿಲ್ಲೆಗೊಂದು ಟ್ರೇನಿಂಗ ಸ್ಕೂಲ ಇಡಬೇಕು. ಇಲ್ಲವಾದರೆ ಧಾರವಾಡದ ಈಗಿನ ಟ್ರೇನಿಂಗ ಸ್ಕೂಲಿಗೆ ಎಲ್ಲ ಜಿಲ್ಲೆಯ ಹುಡುಗರನ್ನು ಆರಿಸಿ ಕಳಿಸಬಹುದು. ಆದರೆ ಶಿಕ್ಷಣದಬಗ್ಗೆ ಒಂದೇ ಸರಟಿಫಿಕೇಟನ್ನು ಇಡಬೇಕು. ಆಗಿನಂತೆ ೧ ನೇ ೨ ನೇ ೩ ನೇ ವರ್ಷಗಳು ಬೇಡ. ಇದರಿಂದ ಸಂಬಳದ ಆಕಾರಕ್ಕೂ ಬಡತಿಯನ್ನು ಕೊಡಲಿಕ್ಕೂ ಬಹಳ ತೊಂದರೆಯಾಗುತ್ತದೆ.

(೪) **ಒಕ್ಕಲತನ ಹಾಗೂ ಕೈಗಾರಿಕೆ**— ೨ ನೇ ವರ್ಷದ ಟ್ರೇಂಡರನ್ನು ದೇವಿಹೊಸೂರಿಗೆ ಕಳಿಸಿತ್ತು. ಅವರಿಂದ ನಮ್ಮ ಜಿಲ್ಲೆಯಲ್ಲಿ ಒಕ್ಕಲತನದ ವರ್ಗಗಳು ಪ್ರಾರಂಭವಾಗಿವೆ. ತಕ್ಕಪಟ್ಟಿಗೆ ಓದುಬರಹಗಳನ್ನು ಕಲಿತು ಮುಂದೆ ಹಳ್ಳಿಯ ಸುಧಾರಣೆಗಳನ್ನು ಮಾಡಬಯಸುವವರಿಗೆ ಈ ವರ್ಗಗಳಿಂದ ಉಪಯೋಗವಾಗುವಂತಿದೆ. ಇದಲ್ಲದೆ ಕೈಗಾರಿಕೆಯ ಶಿಕ್ಷಣಕ್ಕಾಗಿ ನಮ್ಮ ಜಿಲ್ಲೆಯಲ್ಲಿ ಬಡಿಗತನ (ಮ್ಯಾನ್ಯುಅಲ್ ಟ್ರೇನಿಂಗ) ಹಾಗು ರಾಟಿಯಿಂದ ನೂಲು ತೆಗೆಯುವದು ರೂಢಿಯಲ್ಲಿವೆ. ಬೆಳಗಾಂವಿ ಜಿಲ್ಲೆಯ ಸ್ಕೂಲಬೋರ್ಡವು ಪ್ರಾಥಮಿಕ ಶಿಕ್ಷಣವನ್ನು ಮುಕ್ತವಾಗಿ ಕೊಡುತ್ತಿರುವದು ಸರ್ವಶ್ರುತವಾಗಿದೆ. ರಾಟಿಯಿಂದ ನೂಲು ತೆಗೆಯಲಿಕ್ಕೆ ಕಲಿಸುವ ಮಾಸ್ತರರಿಗೆ ತಿಂಗಳೊಂದು ರೂಪಾಯಿ ಹೆಚ್ಚು ದೊರೆಯುವದು. ರಾಟಿಯು ಹಳ್ಳಿಯ ಒಂದು ಮುಖ್ಯ ಧಂದೆಯೆಂದು ತಿಳಿದು ಕೇವಲ ಔದ್ಯೋಗಿಕ ದೃಷ್ಟಿಯಿಂದ ಇದಕ್ಕೆ ಉತ್ತೇಜನ ಕೊಡಲಾಗಿದೆ.

(೫) ಬೇರೆ ಬೇರೆ ಜಿಲ್ಲೆಗಳ ಪ್ರೌಢ ವಿದ್ಯಾರ್ಥಿಗಳಲ್ಲಿಯೂ ಶಿಕ್ಷಕರಲ್ಲಿಯೂ ಯಾವುದೊಂದು ಬಗೆಯ ಸ್ಪರ್ಧೆಯು ಬೆಳೆಸುವಿಕೆಗೆ ಅಸ್ಪದವಾಗ ಮತ್ತೆ ಮಾಡುವದು ಅವಶ್ಯವಾಗಿದೆ. ಸದ್ಯಕ್ಕೆ ಬೆಳಗಾಂವಿಜಿಲ್ಲೆಯ ವಿದ್ಯಾರ್ಥಿಗಳಿಗೂ, ಶಿಕ್ಷಕರಿಗೂ ಉಳಿದಜಿಲ್ಲೆಯವರ ಸುದ್ದಿಯೇ ಇಲ್ಲ. ಇದರಂತೆ ಉಳಿದ ಜಿಲ್ಲೆಯವರ ಸ್ಥಿತಿಯು ಇರಬಹುದು. ಪ್ರತಿಯೊಂದು ಬೋರ್ಡು (ನಮ್ಮ ಮುಂಬೈ ಕರ್ನಾಟಕದ ನಾಲ್ಕು ಜಿಲ್ಲೆಗಳಮಟ್ಟಿಗಾದರೂ) ಕನಿಷ್ಟ ಪಕ್ಷಕ್ಕೆ ವರ್ಷಕ್ಕೆ ೧೦೦ ರೂಪಾಯಿಗಳನ್ನು ಪಾರಿತೋಷಕಗಳಿಗೆ ತೆಗೆದಿಟ್ಟರೆ, ಕೂಡಿರುವ ೪೦೦ ರೂಪಾಯಿಗಳಿಂದ ಮೇಲಾದ ಶಿಕ್ಷಕರಿಗೂ, ವಿದ್ಯಾರ್ಥಿಗಳಿಗೂ, ಗ್ರಂಥಕರ್ತರಿಗೂ ಉತ್ತೇಜನವು ದೊರೆಯುವಂತಿದೆ.

(೬) **ಶಾರೀರಿಕ ಶಿಕ್ಷಣವೂ, ಸ್ವಚ್ಛತೆಯೂ:**— ಪ್ರಾಥಮಿಕ ಶಾಲೆಗಳಲ್ಲಿ ಹುಡುಗರು ಶಿಕ್ಷಕರ ಕಣ್ಣು ತಪ್ಪಿಸಿ ವಿಶೇಷವಾಗಿ ಆಡುತ್ತಾರೆಂದು ಕೆಲವರು ತಿಳಿದಿರುತ್ತಾರೆ. ಶಿಕ್ಷಕರ ಅಪ್ಪಣೆಯಿಂದ ಅಥವಾ ಇಲ್ಲದೆ, ಹುಡುಗರು ಹೊರಗೆ ಹೋಗುವದು ನಿಜವಾದರೂ ಪದ್ಧತಿಯಿಂದ ಆಟಗಳನ್ನು ಆಡುವವರು ಕಡಿಮೆ. ಬಡಿದಾಟಗಳೇ ಬಹಳ. ಎಷ್ಟೋ ಶಾಲೆಗಳಲ್ಲಿ ವಿಶೇಷವಾಗಿ ಹಳ್ಳಿಯ ಮುಸಲ್ಮಾನೀ ಹಾಗೂ ಅಸ್ಪೃಶ್ಯ ವರ್ಗದವರ ಶಾಲೆಗಳಲ್ಲಿ ಸ್ವಚ್ಛತೆಯು ಕಂಡು ಬರುವದಿಲ್ಲ. ಹುಡುಗರ ಮುಖದ ಮೇಲೆ ಕ್ಷೀಣತೆಯು ಹಾಗು ಉದಾಸೀನತೆಯು ಕಳೆಯೇ ಸುರಿಯುತ್ತದೆ. ಆದುದರಿಂದ ಹುಡುಗರ ಆಟಪಾಟಗಳ ಕಡೆಗೂ ಶಿಕ್ಷಣವನ್ನು ಸಾಗಿಸಬೇಕಾಗಿದೆ.

"ಕನ್ನಡಿಗ"ನ ಆಕಾರವನ್ನು ನೋಡಿ ಈ ಚಿಕ್ಕ ಲೇಖನವನ್ನು ಹೆಚ್ಚಿಗೆ ಬೆಳೆಸದೆ ಮುಖ್ಯ ಸಂಗತಿಗಳನ್ನಷ್ಟೇ ಕಾಣಿಸಿ ಸದ್ಯಕ್ಕೆ ವಿಶ್ರಮಿಸುವದೇ ಉಚಿತವಾಗಿ ತೋರುತ್ತದೆ.

"ಕನ್ನಡಿಗ"ನಿಗೆ ರಜೆ.

ಹೋಳಿ ಹುಣ್ಣಿವೆಯ ನಿಮಿತ್ತ ಮುಂದಿನವಾರದಲ್ಲಿ "ಕನ್ನಡಿಗ"ನಿಗೆ ರಜೆಯಿದೆ. ೪೮ ನೇ ಅಂಕವೇ ಈ ವರ್ಷದ ಕಡೆಯ ಸಂಚಿಕೆಯು ಇದೇ ತಾ| ೧೮ ನೇ ದಿನ ಹೊರಡುವದು. ಕೆಲವೊಂದು ಅಂತರ್ವ್ಯವಸ್ಥೆಗಾಗಿ ರಜೆಯನ್ನು ಒಂದು ವಾರ ಮುಂಚಿತವಾಗಿ ತೆಗೆದುಕೊಂಡಿದೆ.

ವ್ಯವಸ್ಥಾಪಕ.

ಸಾಂಗಲಿ ಸಂಸ್ಥಾನದಲ್ಲಿಯ

ಶಿಕ್ಷಣದ ದುರವಸ್ಥೆ !

ಸಂಪಾದಕ ಮಹಾಶಯರೇ,

ತಾವು ಮಾಘ ಬ. ೨೮ರ 'ಕನ್ನಡಿಗ'ನಲ್ಲಿ ಸಿದ್ಧರಾಮಸಾಹೇಬರ ವಿಷಯಕ್ಕೆ ಬರೆಯುವಾಗ್ಗೆ, ಸಾಂಗಲಿ ಸಂಸ್ಥಾನದ ಸ್ಥಿತಿಯು ಸಮಾಧಾನಕರವಿದೆಯೆಂದು ವ್ಯಕ್ತಪಡಿಸಿರುವಿರಿ. ಆದರೆ, 'ದೂರ ದ ಗುಡ್ಡ ಕಣ್ಣಿಗೆ ನುಣ್ಣಗೆ' ಎಂಬಂತೆ ಇಲ್ಲಿಯ ಸ್ಥಿತಿಯು ಅಷ್ಟು ಸಮಾಧಾನಕರವಿಲ್ಲೆಂದು ಶಿಕ್ಷಣಖಾತೆಯಲ್ಲಿಯ ಅನುಭವದ ಮೇಲಿಂದ ಒತ್ತಿ ಹೇಳಬಹುದು.

ಕರ್ನಾಟಕದಲ್ಲಿಯ ಸಾಂಗಲಿ ಸಂಸ್ಥಾನದಲ್ಲಿ ಕನ್ನಡ ಭಾಷೆಗೆ ಮರಾಠಿಯಷ್ಟು ಗೌರವವಿಲ್ಲೆಂದು ತಿಳಿಸಲು ಅತ್ಯಂತ ವಿಷಾದವೆನಿಸುತ್ತದೆ. ಬೆಳಗಾಂವಿಯ ಹತ್ತರಿರುವ ಶಹಾಪೂರಲ್ಲಿ ೨/೩ಕ್ಕಿಂತ ಹೆಚ್ಚು ಜನರು ಶುದ್ಧ ಕನ್ನಡ ಮಾತನಾಡುತ್ತಿದ್ದರೂ, ಅಲ್ಲಿ ಒಂದೂ ಕನ್ನಡ ಶಾಲೆಯಿಲ್ಲ! ಅಲ್ಲಿಯ ಕನ್ನಡ ಕಲಿಯಲಪೇಕ್ಷಿಸುವ ವಿದ್ಯಾರ್ಥಿಗಳು, ವಡಗಾಂವಿ—ಬೆಳಗಾಂವಿ ಹೊಸಪೇಟೆಗಳಿಗೆ— ಎಡತಾಕಬೇಕಾಗುತ್ತದೆ! ಧಾರವಾಡ ಜಿಲ್ಲೆಯಲ್ಲಿಯ ಸಿರಟ್ಟಿಯಂತಹ ಅಚ್ಚ ಕನ್ನಡ ದೇಶದಲ್ಲಿ ಸಹ ಎಲ್ಲ ಖಾತೆಗಳಲ್ಲಿಯ ಎಲ್ಲ ಕಾಗದ ಪತ್ರಗಳನ್ನು ಮರಾಠಿಯಲ್ಲಿಡಬೇಕಾಗುತ್ತದೆ! ಇಷ್ಟೇ ಅಲ್ಲ, ಕನ್ನಡ ಪ್ರಾ- ಶಾಲೆಗಳಲ್ಲಿ ಮರಾಠಿಯನ್ನು ಕೆಲಮಟ್ಟಿಗೆ ಕಲಿಸಲೇಬೇಕೆಂಬ ಒತ್ತಾಯವಿರುತ್ತದೆ. ಆದರೆ, ಅರ್ಧಕರ್ಧ ಕನ್ನಡ ಭಾಷೆಯಾಡುತ್ತಿದ್ದ ಊರಲ್ಲಿರುವ ಮರಾಠಿ ಶಾಲೆಗಳಲ್ಲಿ ಸಹ, ಕನ್ನಡ ಕಲಿಸುವ ನಿರ್ಬಂಧವಿಲ್ಲ! ಇದೆಲ್ಲಿಯ ನ್ಯಾಯವು?

ಪ್ರಾ. ಶಿಕ್ಷಕರ ದೈನ್ಯಾವಸ್ಥೆ !

ಈ ಬಗೆಯಾಗಿ ಪ್ರಾ. ಶಿಕ್ಷಕರಿಗೆ ಇಬ್ಬಗೆಯಾದ ದುಡಿತವು ಬೀಳುತ್ತಿದ್ದರೂ, ಸಂಬಳವು ಮಾತ್ರ ಅರೆಹೊಟ್ಟೆಗೆ ಸಹ ಸಾಲದಂತಹದು. ಸಧ್ಯದ ದುರ್ಭಿಕ್ಷದಲ್ಲಿ ಈಗಿರುವ ರೂ ೧೭, ೧೩ ವೇತನದಲ್ಲಿ ಹೊಟ್ಟೆ ತುಂಬುವದಿಲ್ಲೆಂದು ಬಡ ಶಿಕ್ಷಕರು ಹೊಟ್ಟೆ ಹೊಡೆದುಕೊಂಡರೂ, ಅಧಿಕಾರಿಗಳಿಗೂ, ಶ್ರೀಮಂತರಿಗೂ ಕರುಣೆಯು ಬರಲೊಲ್ಲದು. ಗವ್ಹರ್ನರರನ್ನು ಮೇಲಿಂದಮೇಲೆ ಕರೆಸಿ ಲಕ್ಷಗಟ್ಟಲೆ ಹಣವನ್ನು ನೀರಿನಂತೆ ವೆಚ್ಚಮಾಡುತ್ತಿದ್ದರೂ, ಶಿಕ್ಷಕರ ಹೊಟ್ಟೆತುಂಬ ಸಂಬಳಕೊಡಲು ಹಣದ ಕೊರತೆಯಂತೆ! ಖಾಸಗಿ ಖರ್ಚಿಗೆಂದು ವಿಪರೀತ ವೆಚ್ಚವಾಗುತ್ತಿದ್ದರೂ, ಶಿಕ್ಷಕರಿಗೆ ಮಾತ್ರ ದುಡ್ಡಿನ ಅಭಾವ! ಇದೆಂತಹ ಶಿಕ್ಷಣದ ಕಳಕಳಿಯು! ಅಪರಾಧವೆಸಗಿ ಶಿಕ್ಷೆಯನ್ನು ಭೋಗಿಸುತ್ತಿರುವ ಪ್ರತಿಯೊಬ್ಬ ಕೈದಿಯ ಸಲುವಾಗಿ ಪ್ರತಿ ತಿಂಗಳಿಗೆ ೧೫, ೧೬ ರೂಪಾಯಿ ವೆಚ್ಚಬರುತ್ತಿರುವ ಕಾಲದಲ್ಲಿ, ಶಿಕ್ಷಣದಂತಹ ಉಚ್ಚ ಕಾರ್ಯವನ್ನು ಸಾಗಿಸುತ್ತಿರುವ ಶಿಕ್ಷಕರಿಗೆ ಹನ್ನೆರಡು ರೂಪಾಯಿ ಮಾತ್ರ ಸಂಬಳವೆ? ಸಂಸ್ಥಾನದಲ್ಲಿಯ ಶಿಕ್ಷಕರಿಗೆ ಕೈದಿಗಳಷ್ಟು ಬೆಲೆಯೂ ಇಲ್ಲವೋ ಏನು?

ಹಿಂದಕ್ಕೆ ಕಾ. ಬರ್ಸಾಸಾಹೇಬರು ಸಾಂಗಲೀ ಸಂಸ್ಥಾನದ ವ್ಯವಸ್ಥೆಯನ್ನು ನೋಡುತ್ತಿರುವ ಸಮಯದಲ್ಲಿ, ಸಂಸ್ಥಾನವು ಎಲ್ಲ ರೀತಿಯಿಂದ ಸುಧಾರಿಸಿತ್ತು. ಅಗ್ಗೆ ಲೋಕೋಪಕಾರದ ಕೆಲಸಗಳು ಬಹುಮಟ್ಟಿಗೆ ಆಗುತ್ತಿದ್ದವು. ಪ್ರಾ. ಶಿಕ್ಷಕರಿಗೆ ಬ್ರಿಟಿಶ ಹದ್ದಿಯವರಿಗಿಂತ ಹೆಚ್ಚು ಸಂಬಳ ದೊರೆಯುತ್ತಿತ್ತು. ಈಗ ಮಾತ್ರ ಎಲ್ಲವೂ ವಿಪರೀತವಾಗಿದೆ! ಟ್ರೇಂಡ ಶಿಕ್ಷಕರಿಗೆ ಇದ್ದದ್ದರಲ್ಲಿಯೇ ೨ ೪ ರೂ|| ಹೆಚ್ಚು ಸಂಬಳ ಸಲ್ಲಿಸಬೇಕಾಗುತ್ತದೆಂದು, ಅನ್‌ಟ್ರೇಂಡರ ಭರತಿಯೇ ಹೆಚ್ಚು! ಅಂದಮೇಲೆ ಶಿಕ್ಷಣವು ಸರ್ವಾಂಗಸುಂದರವಾಗುವ ಬಗೆಯೆಂತು? ಇಲ್ಲಿಯ ಶಾಖಾಧಿಕಾರಿಗಳು ಬಾಲಕನು ಶಾಲೆಗೆ ಬಂದುದಿನಿಂದ ೧೦೦ ದಿವಸ ಹಜರಿದ್ದರೆ, ೧ನೆಯ ಇಯತ್ತೆಯನ್ನು ತೇರ್ಗಡೆಯಾಗಬೇಕೆಂದು (!!) ನಿಯಮ ಮಾಡಿರುವರು! ಅಬ್ಬಬ್ಬಾ! ೫ ವರ್ಷದ ಚಿಕ್ಕ ಬಾಲಕನಿಗೆ ಶಾಲೆಗೆ ಬರಹೋಗುವ ರೂಢಿಯಾಗಬೇಕಾದರೆ, ೨|೩ ತಿಂಗಳು ಕಳೆಯುವವು; ಅಂದಮೇಲೆ ೫ ವರ್ಷದ ಬಾಲನು (೧೦೦) ದಿವಸಗಳಲ್ಲಿ ತೇರ್ಗಡೆಯಾಗಬೇಕಾದರೆ, ಶಿಕ್ಷಕನಾಗಲಿ, ವಿದ್ಯಾರ್ಥಿಯಾಗಲಿ ಶಾರದೆಯನ್ನು ಪ್ರಸನ್ನಮಾಡಿಕೊಂಡಿರಲಿಕ್ಕೆಬೇಕು. ಬ್ರಿಟಿಶ ಹದ್ದಿಯಲ್ಲಿ ಬಾಲಕನು ೩ ವರ್ಷಗಳಲ್ಲಿ ೧ನೆಯ ಇಯತ್ತೆಯನ್ನು ಪಾಸಾಗಬೇಕೆಂಬ ನಿಯಮವಿದ್ದು, ಮೇಲಿನಂತೆ ನಿಯಮ ಮಾಡುವದೆಂದರೆ ಅಸಂಬದ್ಧತನವೇ ಸೈ. ಅಧಿಕಾರಿಗಳು ಯೋಗ್ಯ ವಿಚಾರಮಾಡುವರೇ?

ಇನ್ನಾದರೂ ಅಧಿಕಾರಿಗಳೂ, ಶ್ರೀಮಂತರೂ ಶಿಕ್ಷಣಾಭಿಮಾನವನ್ನು ತಾಳಿ, ಬಡ ಶಿಕ್ಷಕರ ಸಂಬಳದ ಬಗ್ಗೆ ಯೋಗ್ಯ ಸದಭಿಮಾನವನ್ನು ತೋರಿಸುವದು ಅವಶ್ಯವು. ಅನವಶ್ಯಕವಾದ ಸ್ಥಳಗಳಲ್ಲಿ ಮರಾಠಿಯ ಒತ್ತಾಯವನ್ನು ಕಡಿಮೆಮಾಡಿ, ಕನ್ನಡ ಭಾಷೆಗೆ ಆಸ್ಪದಕೊಡುವದು ವಿಹಿತವು. ಪ್ರಜಾಹಿತ ತತ್ಪರರೂ, ಶಿಕ್ಷಣ ಹಿತೇಚ್ಛುಗಳೂ ಆದ ಸಂಸ್ಥಾನಾಧಿಪತಿಗಳು ಸದ್ಬುದ್ಧಿಯಿಂದ ಶಿಕ್ಷಣವನ್ನು ಸರ್ವಾಂಗಸುಂದರವಾಗಮಾಡಹತ್ತಿಸುವರೆಂದು ಆಶಿಸುವ

—ಓರ್ವ ಬಡ ಶಿಕ್ಷಕ

ಕನ್ನಡಿಗನೇ ಭಾಪು

ನಮ್ಮ ದೇಶವು ಕನ್ನಡ ರೈತರೆಲ್ಲರೂ ಕನ್ನಡಿಗರು. ಎಲ್ಲಿಯೋ ಒಬ್ಬಿಬ್ಬ ಬಿಳಿ ಭಾಷೆಯವರನ್ನು ಬಿಟ್ಟರೆ, ಮಿಕ್ಕ ಯಾರಿಗೂ ಮರಾಠೀ ಹಾಗೂ ಇಂಗ್ಲೀಷ ಅಕ್ಷರಗಳೆಂದರೆ ಬಂಡಿಗಾಲಿ. ಹೀಗಿದ್ದು ಇಲ್ಲಿಯ ವರೆಗೆ ಪೋಸ್ಟಿನಲ್ಲಿಯ ಮನಿಆರ್ಡರ ಫಾರ್ಮುಗಳೂ, ನಮೂನೆಗಳೂ ಮರಾಠಿ ಹಾಗೂ ಇಂಗ್ಲೀಷದಲ್ಲಿಯೇ ಇದ್ದವು. ಈ ಬಗ್ಗೆ ನಮ್ಮ ವ್ಯವಸಾಯ ಬಂಧುವಾದ ಬಾಗಲಕೋಟೆಯ "ಕನ್ನಡಿಗ"ನು ಕಷ್ಟಪಟ್ಟು, ಕನ್ನಡ ಜನರಿಗಾಗಿ ಕನ್ನಡ ನಮೂನೆಗಳನ್ನೇ ಮಾಡಿಸಬೇಕೆಂದು ಪ್ರಯತ್ನಿಸಿದ ಫಲವೆಂದು ಈಗ ಧಾರವಾಡ ವಿಜಾಪೂರ ಜಿಲ್ಲೆಗಳಲ್ಲಿ ಕನ್ನಡ ನಮೂನೆಗಳು ಪ್ರಚಾರವಾಗಿವೆಂದು "ಕನ್ನಡಿಗ"ನಿಂದಲೇ ಓದಿ ನಾವು ಸಂತೋಷಪಟ್ಟೆವು. ಮಿಕ್ಕ ಕರ್ನಾಟಕದವರೂ ಈ ಬಗ್ಗೆ ಪ್ರಯತ್ನಿಸಿ, ತಮ್ಮ ಹಕ್ಕನ್ನು ಪಡೆದುಕೊಳ್ಳಬೇಕು. ಕನ್ನಡ ನಾಡಿನವರ ಅನುಕೂಲತೆಗಾಗಿ ಪ್ರತಿಯೊಂದು ಜನರಿಗೆ ತಿಳಿಯದ ಸಂಗತಿಯು ಜನರಿಗಾಗಿ ಕನ್ನಡದಲ್ಲಿಯೇ ಬೇಕೆಂದು ಹಟಹಿಡಿಯುವಂಥ ಸಂಗತಿಗಳು ನಮ್ಮಲ್ಲಿನ್ನೂ ಹಲವು ಆವೆ. ಕನ್ನಡಿಗರೂ, ಕನ್ನಡ ಪತ್ರಕರ್ತರೂ ಕೇಳಿ ಕೇಳಿ ಅವುಗಳನ್ನೆಲ್ಲ ಒದಗಿಸಿಕೊಳ್ಳಬೇಕು. ಸದ್ಯಕ್ಕೆ "ಕನ್ನಡಿಗ"ನು ಈ ಗೊಂದಲವನ್ನೆಬ್ಬಿಸಿ ಜನರಿಗೆ ಅನುಕೂಲ ಮಾಡಿಕೊಟ್ಟದ್ದಕ್ಕಾಗಿ ನಾವು ಚಿಕ್ಕ "ಕನ್ನಡಿಗ"ನನ್ನು ಅಭಿನಂದಿಸುತ್ತೇವೆ.

—ಕರ್ನಾಟಕ ಟಾಯಿಮ್ಸ

ಜೀವ ವಿಮೆಯ ಕಾರ್ಯದಲ್ಲಿ

ಅದ್ಭುತವಾದ ಜಯವು!

ಯಾಕೆಂದರೆ ತನ್ನ ೧೯ನೇ ವರ್ಷದಲ್ಲಿಯೇ ಸಾವಿರಕ್ಕೆ ೩೦ ರೂಪಾಯಿ ಲಾಭ ಹಂಚಿದೆ

ದಿ ಜನರಲ್ ಅಶ್ಯೂರನ್ಸ

ಸೊಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮೆ ಕಂಪನಿಗಳನ್ನು ಹಿಂದೆ ಒಗೆದು ಮುಂದೆ ಬಂದಿದೆ. ಇದರಂತೆ ಇದರಲ್ಲಿಯ ಕರ್ತೃತ್ವ ಶಕ್ತಿಯ ವ್ಯಕ್ತಿ ಹಾಗೇ ಇದರಲ್ಲಿದೆ, ಇದಕ್ಕಿಂತಲೂ ಹೆಚ್ಚಿನ ಪ್ರಗತಿಪರವಾದ ಕಂಪನಿಯೇ ಇಲ್ಲವೆಂದು ಸಿದ್ಧವಾಗುತ್ತದೆ

ಏಜಂಟರು ಬೇಕು! ಧಾರಾಳವಾದ

ಕಮಿಶನ್!

ಮುದ್ರಾಸ ಇಲಾಖೆ, ನೈಜಾಮ, ತ್ರಾವಣಕೋರ ಮತ್ತು ಕೋಚೀನ ಸಂಸ್ಥಾನಗಳ ಪ್ರತಿ ಜಿಲ್ಲೆಗೂ ಬೇಕು

ಸುಲಭ ಕಂತು! ಸಾಕಷ್ಟು ಸೌಕರ್ಯ! ಹೆಚ್ಚಾಗಿ ಲಾಭ!!!

ವಿಳಾಸ:— ಬ್ರ್ಯಾಂಚ ಸೆಕ್ರೆಟರಿ. ಮಿಂಟೋ ಹಾಸ್ಪಿಟೇಲದ ಎದುರು ಬೆಂಗಳೂರು; ಅಥವಾ ಜನರಲ್ ಅಶ್ಯೂರನ್ಸ ಸೊಸಾಯಿಟಿ ಲಿ ಅಜಮೀರ.

HEAD OFFICE GENERAL ASSURANCE SOCIETY AJMER

ಬೈಂಡಿಂಗದ

ಹೊಸ ಉತ್ತಮ ವ್ಯವಸ್ಥೆ!

ನಾವು ಮಂಗಳೂರಿನಿಂದ ಸುಶಿಕ್ಷಿತರಾದ ಓರ್ವ ಬಾಯಿಂಡರನ್ನು ಕರೆಸಿದ್ದೇವೆ. ಮುಂಬೈ, ಮುದ್ರಾಸ, ಮಂಗಳೂರ, ಬೆಂಗಳೂರುಗಳಲ್ಲಾಗುವ ಎಲ್ಲ ನಮೂನೆಯ ಬಾಯಿಂಡಿಂಗ ಕೆಲಸವು ನಮ್ಮಲ್ಲಿ ಒಳ್ಳೇ ಅಚ್ಚುಕಟ್ಟಾಗಿ ಮಾಡಲ್ಪಡುತ್ತದೆ. ಎಲ್ಲ ಬಗೆಯ ಗೋಲ್ಡ ಗಿಲ್ಟ ಕೆಲಸವೂ ಆಗುತ್ತದೆ. ಇನ್ನು ಮೇಲೆ ಇತ್ತಕಡೆಯ ಜನರು ಮುಂಬೈ, ಬೆಂಗಳೂರ, ಅಥವಾ ಮಂಗಳೂರಿಗೆ ಹೋಗುವ ಕಾರಣವಿಲ್ಲ! ಒಮ್ಮೆ ಅನುಭವ ತೆಗೆದುಕೊಂಡು ನೋಡಬೇಕು.

ವ್ಯವಸ್ಥಾಪಕ

ವಿದ್ಯಾರಣ್ಯ ಮುದ್ರಾಮಂದಿರ ಬಾಗಲಕೋಟೆ

ಶ್ರೀಕೃಷ್ಣ ಸಂಗೀತ ಕನ್ನಡ ನಾಟಕ ಮಂಡಲವು.

ತಾಜ ನಾಟಕಶಾಲೆಯ ಮನೆ ವೆಂಕಟಪೇಟೆ,
ಬಾಗಲಕೋಟ.

ಗುಳೆದಗುಡ್ಡ ಶ್ರೀಮತಿ ಗಂಗೂಬಾಯಿಯವರ ಈ ಹೊಸ ನಾಟಕ ಕಂಪನಿಯಲ್ಲಿ ಅಭಿನಯಿಸಲು ಸುಸ್ವರೂಪ, ಸುಶೀಲ, ಸುಶಿಕ್ಷಿತ ಹಾಗೂ ಹಾಡು ಬಲ್ಲ ನಾಟ್ಯಕಲಾಭಿಜ್ಞರಾದ ಬಾಲ ಬಾಲಿಕೆಯರೂ, ಸ್ತ್ರೀ-ಪುರುಷರೂ

ಬೇಕಾಗಿದ್ದಾರೆ.

ಅದೇ ಪ್ರಕಾರ ಪೆಟ್ಟಿಗೆ ಹಾಗೂ ತಬಲಾ ಬಾರಿಸುವದರಲ್ಲಿ ನಿಪುಣರಾದವರೂ ಬೇಕಾಗಿದ್ದಾರೆ. ಇಚ್ಛೆಯಿದ್ದವರು ಸಮಕ್ಷಮ ಇಲ್ಲವೆ ಪತ್ರದ್ವಾರದಿಂದ ವಿಚಾರಿಸಿಕೊಳ್ಳಬೇಕು

—ವ್ಯವಸ್ಥಾಪಕ.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶೀ ಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಿಣೀ, ಜೀರ್ಣಜ್ವರ, ಅಗ್ನಿಮಾಂದ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶ ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕ್ಕೊಂಡು ಖಾತ್ರಿ ಮಾಡಿಕೊಳ್ಳಬಹುದು.) ಇದರಿಂದ ಪ್ರಮೇಹ ವ ಗರಮಿಯ ಎಲ್ಲಾ ತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೇ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೨-೦, ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯ ಕಮಿಶನು ಸಿಗುವದು ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸ:—

ಎಸ್. ಬಿ ಕದಮ್ ಮತ್ತು ಸನ್ಸ್.
ಮು ಪೋಷ್ಟ ನಿಪ್ಪಾಣಿ (ಜಿ ಬೆಳಗಾಂವ.)

ಇವರು

ಶಿವಯೋಗ

ಮಂದಿರದ ಅಭಿಮಾನಿಗಳಂತೆ!

[illegible]

ಶಿವಯೋಗಮಂದಿರದ ಒಗ್ಗ ಪತ್ರಗಳಲ್ಲಿ ಒಂದು ಸುರುಳಿ ಬಿದ್ದಿರುವುದು ಕಂಡಿದೆ. ತಿಳಿಗೆಟ್ಟ ತಿಳುವಳಿಕೆಯು ಕನ್ನಡಿಯನ್ನು ಎಲ್ಲರೂ ಅದರಲ್ಲಿ ಕಾಣಬಹುದು. ವೀರಶೈವ ಧರ್ಮಜಾಗ್ರತೆಯನ್ನು ಮಾಡುವವರೆನಿಸಿಕೊಂಡ (ಅಪರಿಮಿತ ಜ್ಞಾನಗಂಭೀರಮಂಡಿತರ, ಕ್ರಿಯಾಶೂನ್ಯರ) ಈ ಶಿವಯೋಗ ಮಂದಿರ ಪ್ರಾರಂಭಕರ್ತೃ ಪರಾಜಯವಾಸಿಗಳ ಸನ್ನಿಧಿಯಲ್ಲಿ ಅವರೊಂದು ವಿನಯದ ಬಿನ್ನಹದ ಒಕ್ಕಣಿಸಿದ ಕಾಗದ ಸಹಿಮಾಡಿದವರು ತಾವು ಪಂಡಿತಪ್ರಕಾಂಡರೂ, ಷಡ್ವಾಕ್ಯ ಪ್ರಮಾಣಜ್ಞರೂ, ಪರೋಪಕಾರ ಪ್ರವಣರೂ, ಸ್ವಧರ್ಮರಕ್ಷಣ ದೀಕ್ಷಿತರೂ, ಸತ್ಪಕ್ಷಪಾತಿಗಳೂ, ಅಸತ್ಪಕ್ಷವ್ಯಾವೃತ್ತರೂ, ಸಂಸಾರ ತ್ಯಾಗಿಗಳೂ, ಆಮುಷ್ಮಿಕ ಧ್ಯೇಯವಾದಿಗಳೂ ಎಂಬಂತೆ ತೋರಿಕೆಯನ್ನು ತೂರಿ ಬರಹವನ್ನು ಬರೆಯಿಸಿದ್ದಾರೆ. ಅಕಾಂಡದಲ್ಲಿ ಪ್ರಕಾಂಡ ಪಾಂಡಿತ್ಯದ ಪದವಿಯನ್ನು ಪಡೆಯಲು ಅತೀವ ಲಾಲಸೆಯುಳ್ಳವರಾಗಿ ಶಿವಯೋಗ ಮಂದಿರದ ಪ್ರತಿವರ್ಷದ ವರದಿಯಲ್ಲಿ ಮೊದಲಿನಿಂದ ತಪ್ಪದೆ ಮುದ್ರಿತವಾಗುತ್ತಿರುವ "ಈ ಕಲಿಕಾಲ ಪ್ರಪಂಚದಲ್ಲಿ ಶಕೆ ೧೮೩೦ ಮಾಘ ಶುದ್ಧ ೭ ರಲ್ಲಿ ಶಿವಯೋಗಮಂದಿರವು ನೆಲೆಗೊಂಡಿತು" ಎಂಬ ವಾಕ್ಯವನ್ನು ಸಿದ್ಧಪಡಿಸಿದ ಕಡ್ಡು ಹಾಕಿ ಮುದ್ದು ಮಾಡುವ ಮರುಳತನದಿಂದ ಒದ್ದಾಡುವ ಈ "ಬಡವರ ಬನ್ನಿಗರ" ಹುಮ್ಮಸ್ಸಿನ ಹದನದ ಬಗೆಯನ್ನಾದರೂ ನೋಡಿರಿ. ಕರಾಳ ಕಲಿಕಾಲದ ಮರ್ದಮನೀಯವಾದ ದರ್ವಿಲಸಿತಿಗಳ ದುರ್ವಿಪಾಕದಿಂದಲೇ ದಿಟವು ಸಟೆಯಾಗುವದು. ನನ್ನಿಯು ಬನ್ನವಾಗುವದು. ನ್ಯಾಯಕ್ಕೆ ನೆಲೆ ಇಲ್ಲದಂತಾಗುವದು. ಧರ್ಮವು ದಿಕ್ಕುಗೆಟ್ಟು ದುಗುಡಕ್ಕೀಡಾಗುವದು. ಉಚ್ಚ ನೀಚಗಳ ಹದವು ಕೆಟ್ಟುಹೋಗಿದೆ. ಮೇಲು ಕೆಳಗಾಗಿದೆ. ಕೆಳಗು ಮೇಲಾಗಿದೆ ಅಂತಯೇ ಕಾಕ ಘೂಕರ ಕೋಲಾಹಲದ ಕರ್ಕಶಕ್ಕೆ ಬೇಸತ್ತು ಬೇಜಾರಾಗಿ ಶ್ರೀಮದೂರ್ಜಿತರಾದ ವಿಭೂತಿಗಳು ಜನಸಂಕುಲದ ಸಂಕಟಮಯವಾದ ಎಡೆಗಳನ್ನು ಬಿಟ್ಟು ಆತ್ಮರತಿಗಾಗಿ ಪ್ರಶಾಂತ ವಿವಿಕ್ತಸ್ಥಾನಗಳಲ್ಲಿ ಅಡಿಯಿಡಹತ್ತಿದ್ದಾರೆ. ಅಲ್ಲಿಯೂ ದುಷ್ಕರ ಹಾವಳಿಯು ಬೆನ್ನು ಬಿಡದಾಗಿದೆ. ಹೀಗೆ ಕಾಲವಶದ ಕರ್ಮಾಸುರ ದಿಶಾಚಕ್ರ ವಾಲವನ್ನು ನಿರಂತರವಾಗಿಯೂ ನಿಷ್ಕರುಣವಾಗಿಯೂ ಅವರಿಸುತ್ತಿರಲು ದುಷ್ಟ ದಂದಸೂಕಗಳ ವಿಷನಿರ್ಭರವಾದ ನಿಶ್ವಾಸವೂ ಘೂಕ ಘೂತ್ಕಾರವೂ ಎಲ್ಲೆಲ್ಲಿಯೂ ಕೊಬ್ಬಿ ಹಬ್ಬಿದಲ್ಲಿ ಸೋಜಿಗವೇನು? ಚಿತ್ರವಿಚಿತ್ರ ಪರರೂಪದ ಅಂಧ ತಮಸ್ಸಿಗಿಂತಲೂ ಗಾಢವಾದ ಕತ್ತಲೆಯಲ್ಲಿ ಕೈಯಾಡಿಸುತ್ತಿರುವ ಇಂಥವರಿಂದ ಶಿವಾಗಮವೇಕೆ! ದೇಹದ ದೇಗುಲದೊಳಗಿರುವ ಭಾವದ ಬೆಳಗಿನಲ್ಲಿ ನಲಿಸಿರುವ ಎದೆಯ ಗದ್ದುಗೆಯಲ್ಲಿ ಘಟ್ಟಿಯಾಗಿ ಕುಳಿತಿರುವ ಚಿದಂಶವು ಪ್ರಚ್ಛನ್ನವಾಗಿ ಹೋಗುವದು. ಬರಹವನ್ನು ಕೂಲಂಕುಶವಾಗಿ ನೋಡಿದರೆ ಅದರಲ್ಲಿ ಹೂಸೆದ ತಂತುಗಳ ಬಲವನ್ನು ಬಿಚ್ಚಿ ಬಿಚ್ಚಿ ನಿರೀಕ್ಷಿಸಿದರೆ ಶಿವಯೋಗ ಮಂದಿರದ ಶ್ರೇಯಸ್ಸು ಸರ್ವಥಾ ತಮಗೇ ಸಲ್ಲತಕ್ಕದೆಂದೂ ನಿಶ್ಚಯಿಸಿ ಈ ಮೂರು ಕಣ್ಣು ತೆಗೆದ ತನ್ನಿಗಳ ಕರ್ತೃತ್ವ ಸಾಮರ್ಥ್ಯದಿಂದಲೇ ಅದು ಹುಟ್ಟಿ ಬೆಳೆದು ಬೆಳಕಿಗೆ ಬಂದಿತೆಂದೂ ಒತ್ತಿಯಿಸಿದವರ ಆಶೆಯು ಒಡೆಯುವದು. ಅಲೌಕಿಕ ಸಾಧನಾಸಕ್ತರಾದ ಸಾಧುವರೇಣ್ಯರಲ್ಲಿ ಲೌಕಿಕದ ಬಗೆಯು ಭಾವಗೊಂಡು ಮೂರ್ತರೂಪವನ್ನು ತಳೆದುದು ಹೇಗೆಯೋ ಎಂಬುವದು ಲೌಕಿಕರಾದ ನಮ್ಮ ಬುದ್ಧಿಯ ಅಳವಿಗೆ ಸಿಲುಕದ ಮಾತಾಗಿದೆ.

ಹೋದ ವರ್ಷದವರೆಗೂ ಮುದ್ರಿತವಾದ ವರದಿಗಳಲ್ಲಿ ನೋಡಿದರೆ ಶಿವಯೋಗಮಂದಿರದ ವ್ಯವಸ್ಥೆಯಲ್ಲಿ ಏನೂ ನ್ಯೂನ್ಯತೆಯು ಕಂಡುಬರುವದಿಲ್ಲ. ಅದರ ಕೀರ್ತಿಯು ಸ್ವರ್ಗಗಂಗೆಯಂತೆ ಶುಭ್ರವಾಗಿ ದಿಗಂತ ವಿಶ್ರಾಂತವಾಗಿದೆ. ಅದರ ಚಿದ್ಬೆಳಗು ಮೃದುವಾಗಿ ಭಾವಿಕರ ಮನ್ನೆದೆಗಳೆಂಬ ತಾವರೆಗಳನ್ನು ಬಗೆಬಗೆಯಾಗಿ ಅರಳಿಸಿದೆ. ಅದರ ವಿಜಯವೈಜಯಂತಿಕೆಯು ವೀರಶೈವ ಜಗತ್ತಿನಲ್ಲೆಲ್ಲ ರಮಣೀಯವಾಗಿ ಸ್ಫುರಿಸುತ್ತಿದೆ. ಹೋದ ವರ್ಷದವರೆಗೆ ಅದರಿಂದ ಜರುಗಿದ ಕಾರ್ಯಕಲಾಪವು ಎಷ್ಟು ಭವ್ಯವಾಗಿಯೂ ದಿವ್ಯವಾಗಿಯೂ ಇರುತ್ತದೆಂಬುದು ವೀರಶೈವ ಪ್ರಪಂಚಕ್ಕೆಲ್ಲ ಕಂಡುಬಂದ ಮಾತಾಗಿದೆ. ಅದರ ಹಿಂದಿನಿಂದ ಇಂದಿನ ವರೆಗೆ ಹೆಜ್ಜೆ ಹೆಜ್ಜೆಯಾಗಿ ಘಟ್ಟಿಯಾದ ತಳಹದಿಯ ಮೇಲೆ ಕಟ್ಟಿದ ಬಗೆಯಾದ ಮಂದಿರವು ಒಂದೇ ವರ್ಷದಲ್ಲಿ ಜರ್ಜರಿತವಾಗಿ ಕುಸಿದು ಕುಗ್ಗಲು ಕಾರಣವೇನ? ಇದೇನು ಸಹಿ ಮಾಡಿದ ಅಲೌಕಿಕ ಸಾಧುಗಳೆಂದು ಮೆರೆಯುತಿರುವವರ ದಿವ್ಯ ಚೇಷ್ಟೆಯೇ. ನೂತನ ಸುಧಾರಣಾ ಧುರೀಣರ ಲೌಕಿಕ ಮದಾಂಧತೆಯು ಉದ್ಯೋಗಗಳ ವಿಪರೀತರವಾದ ಮಾತರಿಷ್ವನ ಸಂಸ್ಪರ್ಶವು ಇದಕ್ಕೆ ತಗಲಿರುವದಿಲ್ಲವಷ್ಟೇ. ಇತ್ತಿತ್ತ ಹಲಕಲವು ನೂತನ ಸುಧಾರಕರ ಲೌಕಿಕ ಉದ್ಯೋಗಗಳಿಂದ ಹುಟ್ಟಿದ ದ್ರವ್ಯದ ಮೂಲಕವಾಗಿ ಈ ಶಿವಯೋಗ ಮಂದಿರವು ಅಪಯಶದ ಕೊಳಚೆಯಲ್ಲಿ ಕುಸಿಯ ಹತ್ತಿದ್ದರೆ ತೀರ ಸಮೀಪವಾಗಿರುವ ನಿಂಡಗುಂದಿಯಲ್ಲಿ ಸ್ಥಾಪಿತವಾಗಿದ್ದ ಶಿವಯೋಗ ಮಂದಿರವನ್ನಾದರೂ ಅಲೌಕಿಕ ಸಾಧನಗಳಿಂದ ಮುಗಿಲು ಮುಟ್ಟುವಂತೆ ಮೇಲಕ್ಕೆಬ್ಬಿಸಲಿಲ್ಲವೇಕೆ?

ಶಿವಯೋಗ ಮಂದಿರವು ಲೌಕಿಕ ಧನಸಂಪ್ರದಾಯದಿಂದ ಕುಸಿದಿದ್ದು ಕನವಿಸಿಯಾದದ್ದು ಅದರ ಬಾಗಲಕೋಟೆ ವ್ಯವಸ್ಥಾಪಕ ಮಂಡಳದ ಕೈಯೊಳಗಿರುವ ಕಾಂಚನವು ಹೇಯವೆಂದು ಧಿಕ್ಕರಿಸಿ ಸತ್ಪುರುಷರಾಗಿ ಸ್ವತಃ ಟೊಂಕಕಟ್ಟಿ ಮುಂದೆ ಬಂದು ಕನವಿಸಿದ ಗಳಿಸಿದ ಬುದ್ಧಿಯಿಂದ ಮಂದಿರವನ್ನು ಛಿದ್ರವಾಗದಂತೆ ಭದ್ರವಾಗಿ ರಕ್ಷಿಸಿ ಅದರ ಪಾವಿತ್ರ್ಯದ ಜ್ವಾಜ್ವಲ್ಯವು ಅಜ್ಞಳಿಯದೆ ನಿಶ್ಚಲವಾಗಿ ಉಳಿಯುವಂತೆ ಮಾಡಲು ಯಾವುದೇನು ಅಡ್ಡಿ ಇತ್ತು. ಏಕೆ ಹೀಗೆ ಮಾಡಲಿಲ್ಲ. ಇನ್ನಾದರೂ ಬಾಗಲಕೋಟೆ ವ್ಯವಸ್ಥಾಪಕ ಮಂಡಳದ ಕೈಯೊಳಗಿನ ಲೌಕಿಕ ಮಾರ್ಗದಿಂದ ಅರ್ಜಿತವಾದ ದ್ರವ್ಯದ ಉಪಯೋಗವನ್ನು ಮಾಡಿಕೊಡದೆ ಸ್ವಸಾಮರ್ಥ್ಯದಿಂದಲೂ ಆತ್ಮಗೌರವದಿಂದಲೂ ಕಾರ್ಯ ಮಾಡಿ ಶಿವಯೋಗ ಮಂದಿರವನ್ನು ಸಾಗಿಸಲಿಕ್ಕೆ ನಿಮಗ ಯಾರೂ ಆತಂಕ ಮಾಡಲಾರರು. ಹಾಗೆ ಮಾಡದೆ ಸುಮ್ಮನೆ ಕುಳಿತು ಬಾಗಲಕೋಟೆಯ ಹಣವನ್ನೇ ತಕ್ಕೊಂಡು ಅವರನ್ನೇ ಹಳಿಯುವ ಉಂಡ ಮನೆಗೆ ಎಣಿಸುವ ವೃತ್ತಿಯು ಬರಹಗಾರರಲ್ಲಿ ಅಂಕುರಿಸಿರುವದೆಂದು ಜನರು ಕಲ್ಪಿಸಲಿಕ್ಕಿಲ್ಲವೇ?

ಮೊಟ್ಟ ಮೊದಲು ಈ ಮಂದಿರವನ್ನು ಸ್ಥಾಪಿಸುವ ಆಲೋಚನೆಯನ್ನು ಮಾಡಿದ ಸುಗ್ರಹೀತ ನಾಮಧೇಯರಾದ ವೈರಾಗ್ಯ ಮಲ್ಲಣಾರ್ಯರಾದರೂ ಬಾಗಲಕೋಟೆಯವರೇ. ಮತ್ತು ಮಂದಿರವು ಸ್ಥಾಪಿತವಾಗಬೇಕೆಂದು ನಿಶ್ಚಯಿಸಿದ ವೀರಶೈವ ಮಹಾಸಭೆಯಾದರೂ ಬಾಗಲಕೋಟೆಯದಲ್ಲಿಯದೇ. ಈಗ ಮಂದಿರಕ್ಕೆ ಬೇಕಾಗುವ ಸಾಮರ್ಥ್ಯವನ್ನು ಒದಗಿಸಿ ಕೊಡುವ

ಪೊಷಕ ದ್ರವ್ಯಗಳಾದರೂ ಬಾಗಲಕೋಟೆಯೇ ಇರುತ್ತವೆ. ಇತ್ತೀಚೆಗೆ ಸಂಭವಿಸಿದ ಪ್ರತಿವರ್ಷದ ವರದಿಯಲ್ಲಿ ಪ್ರಕಟಿತ ವಾಗುತ್ತಿದ್ದರೂ ದೇಶಾಭಿಮಾನಿಗಳಿಗೆ ಒಳಪಟ್ಟ ಉದ್ವಿಗ್ನ ದೃಷ್ಟಿ ಜನರಿಗಳಿಗೆ ಕಂಡೀತು. ಒಮ್ಮೆ ಆಲ ಸಮಾಜ ಹಿತಕ್ಕಾಗಿ ಹಗಲಿರುಳು ವೈರಾಗ್ಯದ ದುಡಿದು ಹಣವು ನೀರನ್ನು ಗಿರಿಜಲ್ಲಿ ಟ್ರಸ್ಟತನವನ್ನು ದೊರಕಿಸಿದ್ದರೆ ಎಲ್ಲವೂ ಇದ್ದಕಿದ್ದಂತೆ ಕಾಣುತ್ತಿತ್ತು. ಅಧಿಕಾರದ ಧರ್ಮದ ಕೆಳಗೆ ಟ್ರಸ್ಟಿಗಳಾಗಿ ನಿನ್ನೆ ಹುಟ್ಟಿ ಇಂದು ಕಣ್ಣು ತೆರೆದು ನುತ್ತರ ಒಬ್ಬರಿಂದ ಮಂದಿರದ ಬಾಲಕರಿಗೆ ಉಪದ್ರವ ಕೊಡಲು ಆರಂಭಿಸಿದವರಿಗೆ ಟ್ರಸ್ಟಗಳೆನ್ನಬೇಕೊ ಅಥವಾ ಶತ್ರುಗಳೆನ್ನಬೇಕೊ, ಇದನ್ನು ಮುಂದಿನ ಅಭಿಮಾನಿಗಳೇ ವಿಚಾರಿಸಲಿ.

ಬಾಗಲಕೋಟೆಯಲ್ಲಿ ಉತ್ಪನ್ನವಾಗುವ ದ್ರವ್ಯಗಳು ಬರವುಗಾರರಿಗೆ ಬಾಕಣನಿಸಿಸುತ್ತಿದ್ದರೆ ಲೌಕಿಕರೀತಿಯಿಂದ ದೊರಕಿಸಿದ ದ್ರವ್ಯದ ಸಂಬಂಧ ಇವರಿಗೆ ತಗಲಬಾರದೆಂದು ವಿಚಾರ ಧರ್ಮವೇ ಇದ್ದರೆ ಇವರು ತಮ್ಮ ನವನವೋನ್ಮೇಷ ಶಾಲಿನಿಯಾದ ಪ್ರಜ್ಞೆಯ ಪ್ರಭಾವದಿಂದ ದ್ರವ್ಯಗಳಿಸುವ ಅಲೌಕಿಕ ಮಾರ್ಗಗಳನ್ನು ಶೋಧಿಸಿ ತೆಗೆದು ಎಲ್ಲರ ಮನಸ್ಸು ಇದಕ್ಕೂ ಮೇಲಾಗಿ ನಿಚ್ಚಂತೆ ಮುಟ್ಟುವಂತೆ ಒಪ್ಪುವಂತೆ ಅರ್ಜನಮಾಡಿ ಮಂದಿರದ ಬಾಳ್ವೆಯನ್ನು ಅವ್ಯಾಹತವಾಗಿ ಸಾಗಿಸುವದಿಲ್ಲವೇಕೆ? ಹೀಗೆ ಮಾಡಲಿಕ್ಕೆ ಇವರ ಕೈಯಲ್ಲಿ ಕಟ್ಟಿಕೊಟ್ಟು ಕಾಡಿ ಬೇಡವೆಂದು ಹಿಂದೆ ಕಲ್ಲು ಹಾಕಿದವರಾರು? ಮುಂದಾದರೂ ಹಾಕುವರಾರು? 'ತಾನೂ ಮಾಡಲಾರ, ಅನ್ಯರು ಮಾಡಿದ್ದನ್ನೂ ನೋಡಿ ಸಹಿಸಲಾರ' ಎಂಬಂತೆ ಇವರ ಕಂಗೆಟ್ಟ ಸ್ಥಿತಿಯಾಗಿದೆ. ಇಂಥವರ ವೃತ್ತಿಯು ಒಂದು ಬಗೆಯಿಂದ ಅನರ್ಥಕಾರಿಯೇ ಸರಿ ಇದನ್ನು ನೋಡಿಯೇ ಒಬ್ಬ ಸಂಸ್ಕೃತ ಕವಿಯು ಇಂಥವರನ್ನು "ತೇಕೇನ ಜಾನೀಮಹೇ" ಕೋಟಿಯಲ್ಲಿ ಸೇರಿಸಿರುವನು.

ಇನ್ನು ಮಹಾಸ್ವಾಮಿಗಳ ಸಂದರ್ಶನಕ್ಕೆ ತಡೆಯಾಗಲು ಧರ್ಮಾಭಿಮಾನಿಗಳ ಅಗ್ರೇಸರರೆನಿಸಿಕೊಳ್ಳುವ ಇಚ್ಛೆಯುಳ್ಳ ಇಂಥವರೇ ಕಾರಣೀಭೂತರು. ಇಷ್ಟವರನ್ನು ಕೊಂದು, ಸತ್ತವರನ್ನು ಜೀವಿಸಿ, ನ್ಯಾಯವನ್ನು ಹೂಡದ ಭಕ್ತಶಿಖಾಮಣಿಗಳ ಮೆಚ್ಚಿನ ಮಿತ್ರರೇ ಇವರು. ಇಂಥ ಇವರು ಶ್ರೀ ಮಹಾಸ್ವಾಮಿಗಳ ಸದಯ ಸನ್ನಿಧಿಯಲ್ಲಿದ್ದು ಅವರ "ಅಡಿದಾವರೆಗಳ ಒಂಡುಣಿಗ"ಳೆಂಬ ಬಿರುದನ್ನು ತಳೆದು ಕವನಹಳ್ಳಿಯ ದೊಡ್ಡ ಉತ್ಪನ್ನದ ಮೃಗಜಲವನ್ನು ಸನ್ನಿಧಿಯ ಮುಂದಿಟ್ಟು ಸನ್ನಿಧಿಗೆ ಇಲ್ಲದೊಂದು ವ್ಯಥೆಮಾಡಿ ಮಂದಿರಕ್ಕೆ ಬರಲಿಕ್ಕೂ ಜನರ ಸಂದರ್ಶನಕ್ಕೂ ಅಡ್ಡಿಯನ್ನುಂಟು ಮಾಡಿದರಲ್ಲದೆ ಮಹಾಸ್ವಾಮಿಗಳ ಪಾವನದರ್ಶನವು ಇದೇ ಕಡೆಯದೆಂದು ಎರಡು ತಿಂಗಳಗಳ ಹಿಂದೆ ಅಕ್ಕೀಲ ಊರುಗಳಿಗೆ ನೋಟೀಸುಗಳನ್ನು ಭಯೋದ್ವೇಗದಿಂದ ಒಡಾಡಿಸುವ ಪ್ರಸಂಗಗಳನ್ನು ತಂದ ಈ ಮಹಾನುಭಾವರಾದರೂ ಇವರೇ. ಇವರ ಅಘಟಿತ ಘಟನಾ ಚಾತುರ್ಯವನ್ನು ಎಷ್ಟು ಬಣ್ಣಿಸಿದರೂ ಕಡಿಮೆಯೇ. ಇಂತಹ ಪೋಲ್ಪಂಗಿಯ ಭಕ್ತರ ಆಟಕೂಟಗಳ ಉಪಟಳವು ಹೇಳ ಹೆಸರಿಲ್ಲದಂತೆ ಅಳಿಯಿತೆಂದರೆ ಹಂಬಲಿಸಿ ಹರಿದಾಡುವ ಹಸಿಯು ಸ್ವಾರ್ಥ ಪರಾಯಣತೆಗೆ ಬಿಸಿಯು ಬೆಂಬಲವಿಲ್ಲದಂತಾಗುವದು ಅಂದೆಯೇ ಒಳ್ಮೆಯು ಒಲ್ಲುಲಿಯು ಬಯಲಾಗಿ ಪೂಜ್ಯರ ಮೈತ್ರಿಯ ಮೆಲ್ಲುಲಿಯು ಶಾಂತವಾಗಿಯೂ ಕಾಂತವಾಗಿಯೂ ಮೊಳಗುವದು

ಬಾಗಲಕೋಟೆಯ ಅಂತಃಕಲಹಗಳಲ್ಲಿ ಈ ಭಕ್ತಶಿಖಾಮಣಿಗಳು ಅಂಗವಿಸ್ಟಲ್ಲವೋ? ಇವರ ಮತ್ತು ಇವರ ಮಿತ್ರವರ್ಯರ ಮನಸ್ಸಿನ ವಿರುದ್ಧ ನ್ಯಾಯದ ನಿರ್ಣಯವಾಯಿತೆಂದು ಇವರ ಹೊಟ್ಟೆಯಲ್ಲಿ ಕಿಚ್ಚು ಬಿದ್ದು ದಳ್ಳುರಿಯಾಗಿ ದಹಿಸುತ್ತಿದೆಯೋ? ಅಥವಾ ಹಾಳೆಜಾಲದಿಂದ ಹುನಗುಂದಕ್ಕೆ ಓಡಾಡಿದ ಉಗೆಂಡೆಯ ಮತ್ತು ನೋಟಾಸಿನ ವೆಚ್ಚವು ತೀರದೆ ವ್ಯರ್ಥವಾಗಿ ವೈಮನಸ್ಯ ಬಂತೆಂದು ಚಿಂತೆಯ ಬೇಗೆಯಿಂದಾ ಬಳಲುತ್ತಿರುವರೋ? ಈಗ ಆ ನ್ಯಾಯವು ಇವರನ್ನು ಗೆದ್ದು ನಿರ್ಣಯವಾಯಿತೆಂದು ದ್ವೇಷಾಸೂಯೆಗಳ ನೆವವನ್ನು ಮುಂದಕ್ಕೆ ಇವರು ಚಾಚುತ್ತಿರುವರಲ್ಲವೇ? ೧೯೨೬ ನೇ ಇಸವಿಯ ಮಾರ್ಚ ತಿಂಗಳಿನಲ್ಲಿ ಜರುಗಿದ ಶಿವಯೋಗ ಮಂದಿರದ ಜಾತ್ರೆಯ ಕಾಲದಲ್ಲಿ ಇವರು ನ್ಯಾಯವನ್ನು ಯಾವ ರೀತಿಯಿಂದ ಬಗೆಹರಿಯಿಸಿಕೊಳ್ಳಬೇಕೆಂದು ಮಧ್ಯಸ್ಥರಾಗಿ ಓಡಾಡಿದರು? ಅದೆಂತಹ ಮರುಳನೆನವದು? ಅದರಲ್ಲಿ ಮಾಡಿದ ಪರಿಶ್ರಮಕ್ಕಾಗಿ ಪ್ರತಿಫಲವು ತಿಲಮಾತ್ರವಾದರೂ ದೊರೆಯದೆ ಎಲ್ಲವೂ ತಾವು ಕೆಟ್ಟದಂತಾಯಿತೆಂದು ನೊಂದ ಅಸೂಯೆಯು ಬೊಬ್ಬೆ ಕಿತ್ತಿದ್ದಿರುವದೋ? ಇಂತಹ ಭಕ್ತಶಿಖಾಮಣಿಗಳು ಮುಖಂಡರಾದ ಮೇಲೆ ಮಂದಿರವು ಪಕ್ಷಿಯ ಎಲೆಯನ್ನು ಮುಟ್ಟಿ, ಸತ್ಯದ ಸಿರಿ ಮನೆಯಾಗುವದೆಂಬುದರಲ್ಲಿ ಸಂದೇಹವೇನು?

ಮತ್ತೊಂದು ಕಿವಿಮಾತು, ಸವಿಮಾತು ಗಿಣಿ, ಅಂಗಡಿ ಮುಂತಾದವುಗಳ ಲೌಕಿಕದ ವರದಿಯನ್ನು ಅಲೌಕಿಕರು ಕಟ್ಟಿಕೊಂಡು ಮಾಡುವದೇನು? ಊರೇ ಆಗಬಾರದಿದ್ದರೆ ಊರಿನ ದಾರಿ ಏಕೆ? "ತನ್ನತಾನರಿದರೆ ತನ್ನರಿವೇ ತನಗೆ ಗುರುವಾಗುವದು" ಎಂಬ ನನ್ನಿಯ ನುಡಿಯನ್ನು ನಂಬಿನೋಡಲಿ ಆಗ್ಗೆ ಶಿವಮಂದಿರವೇಕೆ, ಜಗತ್ತೇ ಶಾಂತನಿಕೇತನವಾಗಿ ಪರಿಣಮಿಸುವದು. ಇಲ್ಲಿರುವದು ಹಿರಿಗಣ್ಣು ಜಡದ ಬೀಡಿಯಲ್ಲಿ ಕಳೆದ ಜೀವದಲ್ಲೆಲ್ಲ ಅಡಗಿರುವ ಪೋಡಶಯೊಡೆಯನ ಅನಾದ ಸ್ವರೂಪವು ದೃಗ್ಗೋಚರವಾಗುವದು. "ಅಡಿದಾವರೆಯು ಬಂಡುಣಿ ಎಂದು" ಗಳಿಸಿದ್ದು ಓದಿಕಲಿತ ಮಾತನ್ನು ಒತ್ತಿ ಹೇಳಿದರೆ ಅದು ಬಾಯಿಬ್ರಹ್ಮವೇ ಸರಿ. ಡಾಂಭಿಕತನದ ಆತ್ಮಾಪಹಾರವೇ ಸೈ ಇಂಥವರಿಗೆ ಮಂದಿರದ ಅಭಿಮಾನಿಗಳೆನ್ನಬೇಕೋ? ನಿರಾಭಿಮಾನಿಗಳೆನ್ನಬೇಕೋ? ಅಥವಾ ದುರಭಿಮಾನಿಗಳೆನ್ನಬೇಕೋ? ವಾಚಕರೇ ಊಹಿಸಲಿ.

ಸತ್ಯವಾದಿ.

ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ.

ಗವ್ಹರ್ನಮೆಂಟಿನಲ್ಲಿ ರಜಿಷ್ಟರ ಮಾಡಲ್ಪಟ್ಟ ಜಗಪ್ರಸಿದ್ಧವಾದ



ಎಲ್ಲ ರೋಗಗಳಿಗೆ ಒಂದೇ ಔಷಧ.

ಅರ್ಕಶಫಾ ಅಥವಾ ಆರೋಗ್ಯಬಿಂದು

ಪ್ರನಾಶಿಮಿತ್ರ. ಮಹರ್ತಿನಂತವೈದ್ಯ

ಇದು ಅರ್ಕವಿದ್ದು ಇದರಲ್ಲಿ ನೀರು ರಸಾಯನ ಕೂಡಿರುವದಿಲ್ಲ. ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ ಇದು ಪ್ರಸಿದ್ಧವಾಗಿ ೧೭ ವರ್ಷಗಳು ಆಗುತ್ತ ಬಂದವು ಈವತ್ತಿನವರಿಗೆ ಎರಡು ಲಕ್ಷಗಳವರಿಗೆ ಬಾಟ್ಲಿಗಳು ಖರ್ಚಾಗಿರುತ್ತವೆ. ಇವರ ಬಗ್ಗೆ ನಮ್ಮ ಹತ್ತಿರ ಬೇಡುವ ಪತ್ರಗಳು ವ್ಹಿ. ಪಿ ಮಾಡಿದ ದಾಖಲೆಗಳು ಪೋಸ್ಟ ಪಾವತಿಗಳು ಬಾರನಿಸಿ ಬುಕ್ಕುಗಳು ಇರುತ್ತವೆ ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಸಟಿಯೆಂದು ಸಿದ್ಧ ಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳು ಇನಾಮು ಕೊಡಲ್ಪಡುವವು. ಈ ಔಷಧವು ಅಮೃತಸರಿಯುಳ್ಳದ್ದು ಇರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು, ಎಂಥಾ ಭಯಂಕರ ರೋಗವು ಇದ್ದರೂ ಈ ಆರೋಗ್ಯ ಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರಟಿಫಿಕೇಟುಗಳು ನಮ್ಮ ಹತ್ತರ ಹಾಜರ ಇರುತ್ತವೆ. ಇವನ್ನು ಬರೆಯಲಿಕ್ಕೆ ಕಾಗದವು ಸಾಲದು. ಕಾರಣ ಒಂದುಸಾರೆ ತಕ್ಕೊಂಡು ಅನುಭವ ನೋಡಿರಿ. ರೋಗದ ನಾಮುಗಳು:— ಕ್ಷಯ ರೋಗ, ಬಾಣಂತಿರೋಗ, ಹದೆದನಂಜು ದಮ್ಮು, ಕೆಮ್ಮು, ಅಡಗ್ಯೆ, ಕಾಲರಾ (ಮಾರಿಕಾ), ಪ್ಲೇಗ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮಲರೋಗ, ಗಂಡಮಾಲೆ, ಸಾರಹುಣ್ಣು, ಶಸ್ತ್ರಗಾಯ, ಕಿವಿಶೂಲಿ ಮೂಗಿನೊಳಗಿನ ಪಿನಸಿ, ಮೊದಲಾದವುಗಳು. ಕಣ್ಣು ನೋವು ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ ಹೊಟ್ಟೆಶೂಲಿ, ಸಣ್ಣ ಕೂಸುಗಳಿಗೆ ಆದ ರೋಗಗಳು ಬಾಲಗ್ರಹ, ಆರಿವಿ ಮುಟ್ಟದೋಷ ಹೊಟ್ಟೆ ದೊಡ್ಡದಾಗೋಣ, ಕೋಡಿಗೆಮ್ಮು. ಮೈ ಹೊಡಬೀಳೋಣ, ಮತ್ತು ಡಾಕ್ಟರಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನಿಂದ ಖಾತ್ರಿಯಿಂದ ಗುಣಬರವದು. ಚೇಳು ವ ಸರ್ಪದಂಶಕ್ಕೆ ತತಕ್ಷಣ ಗುಣಬರುವದು. ೧ ಕಾಲುತೊಲಿ ಬಾಟ್ಲಿ ಒಂದಕ್ಕೆ ೨ ರೂಪಾಯಿ ನಮೂನೆ ಉದ್ದಿಶ ೫ ಆಣೆ ತೂಕದ ಬಾಟ್ಲಿ ಒಂದಕ್ಕೆ ೮ ೫ ಖರ್ಚು ಬೇರೆ. ೮ ಆಣೆಯ ಒಂದೇ ಬಾಟ್ಲಿ ಕಳಿಸಲಾಗದು. ೨ ರೂಪಾಯಿ ಆರ್ಡರ ಬಂದರೆ ಕಳಿಸಲಾದೀತು ಅದರ ಖರ್ಚು ೭ ಆಣೆ ಚಿಕ್ಕ ಬಾಟ್ಲಿ ಒಂದು ಡಜನ ತಕ್ಕೊಳ್ಳುವವರಿಗೆ ನಾಲ್ಕುಬಾಟ್ಲಿಗಳು ಕಮಿಶನ್ ಸಿಗುತ್ತವೆ ಖರ್ಚು ೯ ಆಣೆ ಡಜನದ ಒಳಗಾಗಿ ಹನ್ನೊಂದು ಬಾಟ್ಲಿ ತಕ್ಕೊಂಡರೆ ಕಮಿಶನ್ ಇಲ್ಲ ಖರ್ಚು ೭ ಆಣೆ. ೧ ಕಾಲುತೊಲಿ ಬಾಟ್ಲಿ ಒಂದೇಸಾರೆ ಮೂರು ತಕ್ಕೊಳ್ಳುವವರಿಗೆ ಮೂರು ಬಾಟ್ಲಿ ಕಮಿಶನ್ ಸಿಗುತ್ತದೆ. ಖರ್ಚು ೯ ಆಣೆ. ಮೂರು ಎರಡು ತಕ್ಕೊಂಡರೆ ಕಮಿಶನಿಲ್ಲ ಖ ೭ ಆ. ಪ್ರಮಾಣ ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ಛಾಪಿಸಿರುತ್ತವೆ. ಪಸಂದಿಪ್ರಕಾರ ಬಾಟ್ಲಿ ಗೂಡ ಸಿಗುವದು. ಈ ಔಷಧವು ಪೊಟಿ ಹೊರಟ ರೆಜಿಸ್ಟರ ಉಪಯೋಗವಾಗದೆ ಪರತ ತಕ್ಕೊಂಡು ಅದರ ಬೆಲೆ ವಾಪಸ ಕೊಡುವೆವು. ಈ ಅರ್ಕಶಫಾ ಇಡೀ ಕರ್ನಾಟಕದಲ್ಲೆಲ್ಲಾ ಮಾರುತ್ತವೆ. ಇದರಬಗ್ಗೆ ನಮಗೆ ಬಹಳ ಶಿಫಾರಸ ಮಾಡಬೇಕಾಗಿಲ್ಲ. ತಪ್ಪದೆ ಕಾಗದ ಕನ್ನಡದಲ್ಲಿ ಅಥವಾ ಇಂಗ್ಲೀಷದಲ್ಲಿ ಪೂರ್ಣ ಪತ್ತಾ ಸ್ಪಷ್ಟವಾಗಿ ಬರೆಯಿರಿ ನಮ್ಮ ವಿಳಾಸ:— ಎಚ್. ಎಸ್. ವಿಲ್ಲಾ.
ಶಾಪ ಅರ್ಕಶಫಾ ಹೆಡ ಆಫಿಸ ಪೋಸ್ಟ ಪಂಢರಪುರ ದಿನಾಂಕ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ॥ ದಿವಸ ೧೨-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಹೆಸರಿಗೆ ಬಡ್ಡಿ, ಮತ್ತು ವತಿ, ಇಲ್ಲದೆ ೧೦೦೦ ರೂ. ಪಾಲಿಸಿ ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್ ಬಿ ಸಿ ನಂ ೨೭೨೬ ಸಯ್ಯದ ಅಲಿ ಅಸಗರ ಜಿಲ್‌ಗಾ ಮಿ ಸುಪರೆಂಟೆಂಡಂಟ್ ಸೆಕ್ರೆಟರಿಏಟ್ ಹೈದರಾಬಾದ ಡೆಕ್ಕನ್ನ ರೂ ೧೦೦೦

(೨) ಎಲ್. ಬಿ. ಸಿ ನಂ ೧೯೬೨ ನಾರಾಯಣ ವಿಠ್ಠಲ ಲೋಣಾಕರ ಕೇರ್ ಆಫ್ ಡಿ ಈ. ಪುರಾಣಿಕ ೧೦೭ ನಿಹಾಲಪುರ ಇಂದೂರ ೧೦೦೦

(೩) ಎಲ್ ಬಿ. ಸಿ. ನಂ ೩೪೧ ರಾಮಚಂದ್ರ, ಅನಂತ ಶಿರೋಳೆ. ಡಿವಿಜನಲ್ ಫಾರೆಸ್ಟ, ಆಫೀಸರ ಧತ್ತೂರಾ, ಪಶ್ಚಿಮಖಾನದೇಶ ರೂ. ೮೦೦

(೪) ಬಾಂಡ ನಂಬರು ೭೫೦೬ ಕೇ ಜಿ ಫರ್ನಾಂಡೋ ವ್ಯಾಪಾರಸ್ಥ ಬ್ರಿಕ್‌ಸಾಯಿಡ ಸಿಲೋನ, ಕೊಲಂಬೋ. ರೂ ೧೦೦೦

(೫) ಬಾಂಡ ನಂಬರು ೧೩೬೩೪ ಎಸ್. ಜಿ. ಚವರೆ ಅಸಿಸ್ಟಂಟ ಸ್ಟೇಶನ್‌ಮಾಸ್ತರ ತೆಲಗಿ. ಜಿಲ್ಲಾ ವಿಜಾಪುರ. ರೂ ೧೦೦೦

ಬಿ. ಎಸ್. ಆರಾಧ್ಯ
ಚೀಫ ಏಜಂಟ ಹುಬ್ಬಳ್ಳಿ, (ಮುಂಬಯಿ ಇಲಾಖಾ.)

ಕಿರ್ಲೋಸ್ಕರ

ಕಬ್ಬಿಣ ನೇಗಿಲುಗಳು

ಹಂಗಾಮು (ಸುಗ್ಗಿ) ಸಮೀಪಿಸಿತು. ಈ ವರ್ಷ ಮಳೆ ಬೆಳೆ ಚನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವುದು. ಕಿರ್ಲೋಸ್ಕರ ನೇಗಿಲು ನಂ ೧೧, ೯, ೮ ಇವು ಒಕ್ಕಲಿಗರಿಗೆ ಬಹಳೇ ಉಪಯೋಗ ಬೀಳುತ್ತವೆ ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುತ್ತವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.	ಕಿರ್ಲೋಸ್ಕರವಾಡಿ ಜಿಲ್ಲಾ ಸಾತಾರಾ

ವಿಜಾಪೂರ ಜಿಲ್ಲೆಯೊಳಗಿನ ಟೋಲ ನಾಕೆಗಳ ಹೆಸರು ವ ಯಾವ ಸರಕಾರಿ ರಸ್ತೆಗಳ ಮೇಲೆ ಅವು ಇರುವವು ಅವುಗಳ ಹೆಸರು.

ಕೇಜ ನಂಬರ	ರಸ್ತೆದ ಹೆಸರು	ನಾಕೇಗಳ ಜಾಗಾ
೧	ಸೊಲ್ಲಾಪೂರ ಹುಬ್ಬಳ್ಳಿ ರಸ್ತೆ	ತಿಡಗುಂದಿ ಹತ್ತರ
೨	ಸದರ	ರೇಲ್ವೆ ಲೈನ ಹತ್ತರಾ ೬೪ ನೇ ಮೈಲಿಗೆ
೩	,,	ಕೊಲ್ಹಾರ ಕಂಜಮೋದ ಹತ್ತರಾ
೪	,,	ಕೊಲ್ಹಾರ ಸಮೀಪದಲ್ಲಿ ಉತ್ತರ ಬಾಜೂಕ್ಕೆ ½ ಮೈಲದಲ್ಲಿ
೫	ವಿಜಾಪೂರ ಕಾಗವಾಡ ರಸ್ತೆ	ತೊರವಿ ಹತ್ತರಾ ೫೬ ನೇ ಮೈಲಿಗೆ
೬	,,	ಹೊನವಾಡ
೭	ವಿಜಾಪೂರ ಸಿಂದಗಿ ರಸ್ತೆ	ರೇಲ್ವೆ ಕ್ರಾಸಿಂಗ ದಾಟಿ ಮತ್ತು ಮುನಸಿಪಾಲಿಟಿ ಹದ್ದಿ ದಾಟಿ ಪೋಸ್ಟ ಆಫೀಸದಿಂದ ೩ ಮೈಲು ದಾಟಿ
೮	,,	ಹಿಪ್ಪರಗಿ ಕನ್ನೊಳ್ಳಿ ನಡುವೆ
೯	ವಿಜಾಪೂರ ಬಾಗೇವಾಡಿ ರಸ್ತೆ	ಮನಗೂಳಿ ಅಗಸಿ ದಾಟಿ
೧೦	,,	ಬಾಗೇವಾಡಿ
೧೧	ಕೊಲ್ಹಾರ ತಾಳಿಕೋಟ ರಸ್ತೆ	ತೆಲಗಿ
೧೨	,,	ಬಳಗಾನೂರ
೧೩	ಮುದ್ದೇಬಿಹಾಳ ಚಿಮ್ಮಲಗಿ ರಸ್ತೆ	ಜಾಲಾಪೂರ ಹಳ್ಳದ ಹತ್ತರಾ
೧೪	ಬೆಳಗಾಂವ ಹುನಗುಂದ ರಸ್ತೆ	ಗದ್ದನಕೇರಿ ಕಡೆಗೆ ಮೈಲು ೮೧೧ ಹತ್ತರಾ
೧೫	,,	ಶಿರೂರ ಹತ್ತರಾ
೧೬	,,	ರಕ್ಕಸಗಿ ಹತ್ತರಾ ಮೈಲು ೧೦೯ ನೇ ಕ್ಕೆ
೧೭	ಪಾಳಾ ಬದಾಮಿ ರಸ್ತೆ	ಬನಶಂಕರಿ ಹತ್ತರಾ (ರಾಮದುರ್ಗ ಟರ್ನಿಂಗ ವ ಜೊಳಚಗುಡ್ಡದ ನಡುವೆ)

ಟೀಪ್ಪ—ಲಿಲಾವಿನ ವೇಳೆಕ್ಕೆ ಶರ್ತಿನ ಯಾದಿ ಓದಿ ಹೇಳುವದರಲ್ಲಿ ಬರುವದು. ನಾಕೆ ಇಡುವ ಸ್ಥಳಗಳಲ್ಲಿ ಹೆಚ್ಚು ಕಡಿಮೆ ಮಾಡುವದಾದರೆ ಲಿಲಾವಿನ ವೇಳ್ಯೆಯಲ್ಲಿ ಕ॥ ಸಾ॥ ಬಾ॥ ರವರು ಹೇಳುವರು ಆ ಹೇಳಿದ ಸ್ಥಳದಲ್ಲಿ ನಾಕೆ ಇಡಬೇಕಾಗುವದು. ಪ್ರೋಟ ನಾಕೆ ಇಡುವ ಸ್ಥಳಗಳನ್ನು ಸಹ ಆಗಯೇ ಹೇಳುವದರಲ್ಲಿ ಬರುವದು.

ವಿಜಾಪೂರ
ತಾ॥ ೧೬—೨—೧೯೨೭

ವ್ಹಿ. ಎಚ್. ನಾಯಿಕ
ಕಲೇಕ್ಟರ ಆಫ ವಿಜಾಪೂರ.

ಜಾಹೀರ ನೋಟೀಸ.

ಮೆ॥ ಕಲೇಕ್ಟರ ಸಾ॥ ಬಾ॥ ಜಿಲ್ಹಾ ವಿಜಾಪೂರ ಇವರ ಕಡೆಯಿಂದ—

ಯಾವತ್ತು ಜನರಿಗೆ ತಿಳಿಯ ಪಡಿಸುವದರಲ್ಲಿ ಬರುತ್ತದಲ್ಲಾ.

ತಾ॥ ೧-೪ ೧೯೨೭ ರಿಂದ ೩೧ ೩-೧೯೨೮ ವರೆಗೆಕ್ಕೆ ಮುಗಿಯುವ ಒಂದು ವರ್ಷದ ಮುದತೀ ಪಟ್ಟಿಗೆ ವಿಜಾಪೂರ ಜಿಲ್ಹೆಯೊಳಗಿನ ಲಗತ್ತಿನ ಯಾದಿಯಲ್ಲಿ ನಮೂದ ಪಡಿಸಿದ ಯಾವತ್ತೂ ಸರಕಾರಿ (ಪ್ರೊವ್ಹಿನಸಿಯಲ್) ರಸ್ತೆಗಳ ಮೇಲಿನ ಟೋಲ ನಾಕೆಗಳಲ್ಲಿ ಟೋಲ ವಸೂಲಮಾಡುವ ಹಕ್ಕನ್ನು ತಾ॥ ೧೧-೩-೧೯೨೭ ಶುಕ್ರವಾರ ದಿವಸ ಮೆ॥ ಕಲೇಕ್ಟರ ಸಾ ಬಾ ರವರ ಸಮಕ್ಷ ಮಧ್ಯಾಹ್ನ ೧೨ ಘಂಟೆಕ್ಕೆ ದಬಾರದ ಹಾಲಿನಲ್ಲಿ ಉಘಡ ಲಿಲಾವ ಮಾಡುವದರಲ್ಲಿ ಬರುವದು ಟೋಲಿನ ದರಗಳು ಲಿಲಾವಿನ ವೇಳ್ಯೆಯಲ್ಲಿ ಹೇಳುವದರಲ್ಲಿ ಬರುವವು ದರಗಳು ಕೋಡವಸ್ಥದಂತೆಯೇ ಇರುತ್ತವೆ.

೨ ಸವಾಲಿನಲ್ಲಿ ಕೂಡುವವರು ಬೇಡತಕ್ಕ ರಕಮಿಗೆ ಲಾಯಕು ಇದ್ದಬಗ್ಗೆ ಮಾಮಲೇದಾರ ಸಾ ಇವರ ಮಹಾಲಕರಿ ಸಾ॥ ರವರ ಸರ್ಟಿಫಿಕೇಟ ಛಾಪಿ ನಮೂನೆಯಲ್ಲಿ ತರತಕ್ಕದ್ದು.

೩ ಸವಾಲ ಬಂದಾದ ಕೂಡಲೇ ಸವಾಲಿನ ಒಂದು ನಾಲ್ಕಾಂಶ ರಕಮು ತಾತ್ಕಾಲ ಜಮಾ ಮಾಡಿ ಪಾವತಿ ತಕ್ಕೊಂಡು ಉಳಿದ ಮೂರು ನಾಲ್ಕಾಂಶ ಸವಾಲಿನ ರಕಮನ್ನು ಕರಾರದ ಪ್ರಕಾರಾ ೦ ಸವನಾದ ಹಪ್ತೆ ಒಂದಿಗಳಿಂದ ಕೊಡಬೇಕು. ಬಾಬು ಸುಪರ್ದಿ ಪಡಕೊಳ್ಳುವ ಪೂರ್ವದಲ್ಲಿ ತಾಲೂಕಿನ ಮಾಮಲೇದಾರ ಸಾ ರ ಮುಂದೆ ಅಗರ ಮಹಾಲಕರಿ ಸಾ॥ ರ ಮುಂದೆ ಪಟ್ಟೆ ಬರಕೊಡತಕ್ಕದ್ದು.

೪ ಸವಾಲ ಮಂಜೂರ ಮಾಡುವದು ಅಗರ ಬಿಡುವದು ಮೆ॥ ಕಲೇಕ್ಟರ ಸಾ ಬಾ ರವರ ಅಧಿಕಾರದೊಳಗಿರುವದು.

೫ ಹೆಚ್ಚಿನ ಶರ್ತಿನ ಪ್ರಕಾರ ಲಿಲಾವಿನ ವೇಳ್ಯಕ್ಕೆ ಓದಿ ಹೇಳುವ ಶರ್ತ ಮಾಡಿದ ಲ್ಲಿ ಕೊಡುವದರಲ್ಲಿ ಬರುವದು

೬ ಮತ್ತೇನಾದರೂ ಮಾಹಿತಿ ಬೇಕಾದಲ್ಲಿ ಮೆ॥ ಕಲೇಕ್ಟರ ಸಾ॥ ಬಾ ರವರ ಆಫೀಸದಿಂದ ಪಡಕೊಳ್ಳಬಹುದು.

ವಿಜಾಪೂರ
ತಾ॥ ೧೬ ೨-೧೯೨೭

ವ್ಹಿ. ಎಚ್. ನಾಯಿಕ.
ಕಲೇಕ್ಟರ ಆಫ ವಿಜಾಪೂರ

ವರ್ತಮಾನಸಾರ.

ಸೋಜಿಗದ ಸುದ್ದಿಗಳು

ಜಗತ್ತಿನಲ್ಲಿಯ ತೀರ ಗಿಡ್ಡರನ್ನು ೬-೫ ವರುಷಗಳ ವರೆಗೆ ಹುಡುಕಿ ಕಟ್ಟಕಡೆಗೆ ಯಶಸ್ಸನ್ನು ಹೊಂದಿದ "ಆರ್ಮ್‌ರಿಂಗ್"ರು ನಿಲುವಿಕೆಯಲ್ಲಿ ೨೩ರಿಂದ ೩೬ ಇಂಚುಗಳ ವರೆಗೆ ಎತ್ತರವಿದ್ದ 'ಮಿಜೆಟ್ಸ' ಆಟಗಾರರನ್ನು ಕರೆದುಕೊಂಡು ನಾಳಿನ ದಿನ ಮುಂಬಯಿಗೆ ಬರುವರು. ಇವರ ಪಾಟ್ಯ ಚಾತುರ್ಯವನ್ನೂ, ವಾದನ ಕೌಶಲ್ಯವನ್ನು ಕಂಡು ಅಮೇರಿಕೆಯವರು ಬಹು ಸೋಜಿಗಪಟ್ಟರಂತೆ. ಅಮೇರಿಕೆಯ ಪ್ರೆಸಿಡೆಂಟ ಕೂಲಿಜ್ಜರು ಇವರಿಗೆ "ಆಟದ ಸಜೀವ ಗೊಂಬೆಗಳೆ"ಂಬ ಹೆಸರಿಟ್ಟಿದ್ದಾರೆ.

ಕಾನಡಾದ 'ಯಂಗ'ನೆಂಬ ತರುಣನು, ಬ್ರಿಟಿಶ್ ಚ್ಯಾನೆಲನ್ನು ೧೫ ತಾಸುಗಳಲ್ಲಿ ಈಸಿ, ಅಮೇರಿಕೆಯವರಿಂದ ೫೦೦೦ ಪೌಂಡುಗಳನ್ನು ಬಹುಮಾನ ಪಡೆದಿದ್ದಾನೆ. ನಮ್ಮ ಭಾರತೀಯ ತರುಣರು ಇವನನ್ನು ನೋಡಿ ನಾಚಬೇಕು!

ಇಟಲಿಯ ಅನಾಥಾಶ್ರಮದವರು ಸರಕಾರಕ್ಕೆ ೬೦೦೦೦ ಅನಾಥರನ್ನು ಸಂರಕ್ಷಿಸಲು ಸಾಕಾಗುವಷ್ಟು ಹಣವನ್ನು ಕೊಡಿರೆಂದು ಕೇಳಿಕೊಂಡಿದ್ದರಿಂದ, ಸರಕಾರದವರು ಬ್ರಹ್ಮಚಾರಿಗಳಮೇಲೆ ಕರವನ್ನು ಹೇರಿ, ಇವರ ಬೇಡಿಕೆಯನ್ನು ಪೂರ್ತಿಗೊಳಿಸುವ ವಿಚಾರದಲ್ಲಿದ್ದಾರೆ ಸೋಜಿಗವೇ ಸೈ.

ಶಿರಹಟ್ಟಿ ಕಂಪನಿಯು ಸವದತ್ತಿಯಲ್ಲಿದೆ; ಮುಬ್ಬಳ್ಳಿಗೆ ಬೇಗನೇ ಹೋಗುವದು. ಲೋಕಸೇವಕರು ಗೋಕರ್ಣದಲ್ಲಿದ್ದಾರೆ; ಗರುಡರ ಕಂಪನಿ [ಜಿಲ್ಲಾ ಬಳ್ಳಾರಿ] ಯಲ್ಲಿದ್ದಾರೆ; ವಾಮನರಾಯರು ಶರೀಕರಿಬ ಲ್ಲಿಯೂ ಗುಬ್ಬೀಯವರು ಮಂಗಳೂರಲ್ಲಿಯೂ ಇದ್ದಾರೆ. ಅಂಬಾಪ್ರಸಾದಿಕರ ಸುದ್ದಿಯಿಲ್ಲ. ಮೊಂಬಳದವರು ಹೊಸ ಹುರುಪಿನಿಂದ ಗದುಗಿನಲ್ಲಿ ತಾಲೀಮು ಪ್ರಾರಂಭಿಸಿದ್ದಾರೆ. ಗಂಗೂಬಾಯಿಯವರ ಹೊಸ ಕಂಪನಿಯೂ ಬಾಗಲಕೋಟೆಯಲ್ಲಿ ಪ್ರಾರಂಭವಾಗುವದಿದೆ.

ಕರ್ನಾಟಕದಲ್ಲಿ ಕಲಾಭಿವೃದ್ಧಿಯನ್ನೇ ಮುಂದಿಟ್ಟುಕೊಂಡು, ಕೆಲಸ ಮಾಡಬಲ್ಲವೆಂದು ಎದೆತಟ್ಟಿಕೊಳ್ಳಬಹುದಾದ ನಾಟಕ ಸಂಘವೊಂದೂ ಇಲ್ಲ ಪ್ರಥಮತಃ ಅವು ಪ್ರೇಕ್ಷಕ ಮಂಡಲಿಯ ಅಭಿರುಚಿಯನ್ನೇ ಹೆಚ್ಚಾಗಿ ಲಕ್ಷ್ಯದಲ್ಲಿರಿಸಿಕೊಂಡು ದ್ರವ್ಯವನ್ನು ಸಂಪಾದಿಸಬೇಕಾಗಿದೆ. ಹಾಗೆ ಸಂಪನ್ನನಾದ ಬಳಿಕ ಮಾತ್ರ 'ಹೋದರೆ ಹೋಗಲಿ'ಂದು 'ಕಲಾಭಿವೃದ್ಧಿಗಾಗಿ' ಹೆಣಗಾಡಬೇಕಾಗಿದೆ. —ಕಂಠೀರವ

"ಸತೀ ಸಂಯುಕ್ತಾ" ಎಂಬ ನಾಟಕವು ಶಂಗಳೂರಿನಲ್ಲಿ ಕೆಲವು ಉಪಾಧ್ಯಾಯರಿಂದ ಅಭಿನಯಿಸಲ್ಪಟ್ಟಿತು. ಉತ್ತಮ ನಾಟಕ ಬರೆದುದರಿಂದ ನಾಟಕ ಕರ್ತೃಗಳಾದ ಶ್ರೀ ಕೋಟಿ ಶಿವರಾಮ ಕಾರಂತರಿಗೆ ಸುವರ್ಣಪದಕ ಕೊಟ್ಟು ಗೌರವಿಸಿದರು.

ಮುಂಬೈ ಇಲಾಖೆಯ ಪ್ರಮುಖ ನಗರಗಳಲ್ಲಿರುವ ನಾಟಕ ಸಿನೇಮಾಗಳ ಮೇಲಿನ ತೆರಿಗೆಯನ್ನು ತೆಗೆದುಹಾಕಬೇಕಾಗಿ ಮುಂಬೈಯಲ್ಲಿ ಹಾರ್ನಿಮನ್ ಸಾಹೇಬರ ಅಧ್ಯಕ್ಷತೆಯಲ್ಲಿ ಸಭೆಸೇರಿ ಆ ಬಗ್ಗೆ ತೀರ್ಮಾನಗಳಾದವು. ರಂಗಭೂಮಿಯೆಂದರೆ ಅದೊಂದು ಶಿಕ್ಷಣ ಭವನ. ಅದ್ದರಿಂದ ವಿದ್ಯಾಪ್ರಸಾರದ ಸಂಸ್ಥೆಗಳಿಗೆ ತೆರಿಗೆಯು ಭಾರವಾದಂತೆ ಸಭೆಯು ನಿರ್ಧರಿಸಿತು. ಅದರೆ ಎಲ್ಲಿಯ ವರೆಗೆ "ಶ್ರೀಕೃಷ್ಣಲೀಲೆ"ಯಂತಹ ನಾಟಕಗಳಿವೆಯೋ ಅಲ್ಲಿಯ ವರೆಗೆ ವಿದ್ಯಾಪ್ರಸಾರವಾಗದು. ಆದ್ದರಿಂದ ಇಂತಹ ನಾಟಕಗಳನ್ನು ಕಂಪನಿಯವರು ಬಂದುಮಾಡುವ ವರೆಗೆ ತೆರಿಗೆ ಇನ್ನೂ ಹೆಚ್ಚಾಗಿ ಯಾಕೆ ಇಡಬಾರದು?

ಚಂದಾದಾರರಲ್ಲಿ ಬಿನ್ನಹ.

ಇನ್ನೊಂದು ಸಂಚಿಕೆಯು ಹೊರಬಿದ್ದರೆ 'ಕನ್ನಡಿಗ' ನ ೨ ನೇ ವರ್ಷವು ಮುಗಿದಂತಾಯಿತು. ಹೊಸ ವರ್ಷದಲ್ಲಿ ಕೆಲವು ಸುಧಾರಣೆಗಳೊಂದಿಗೆ 'ಕನ್ನಡಿಗ' ನು ಹೊರಡುವನು. ಒಂದೇ ರೂಪಾಯಿ ವಾರ್ಷಿಕ ಚಂದಾ ಇದ್ದರೂ ಕೂಡ, ೧೨ ಪುಟಗಳೊಂದಿಗೆ 'ಕನ್ನಡಿಗ' ನು ನಿಮ್ಮ ಕೈಸೇರುವದನ್ನು ನೀವು ಈಗಾಗಲೇ ನೋಡಿರುವಿರಿ. ಇನ್ನೂ ಹಲವು ಸುಧಾರಣೆಗಳು ೩ ನೇ ವರ್ಷದ ೧ನೇ ಸಂಚಿಕೆಯಿಂದ ಕಾಣಬರುವವು. ವ್ಹಿ. ಪಿ. ಮಾಡಿದರೆ ಅರಾಣೆ ವೆಚ್ಚ ಹೆಚ್ಚಾಗಿ ಬರುವದಾದ್ದರಿಂದ ಚಂದಾದಾರರೆಲ್ಲ ಕೇವಲ ಎರಡಾಣೆ ವೆಚ್ಚಮಾಡಿ ಮನಿಯಾರ್ಡರದಿಂದ ೧-೧೩-೦ ಕಳುಹಿಸುವದು ಹಿತ. ಇನ್ನು ಹೀಗೆ ಮನಿಯಾರ್ಡರ ಇನ್ನೆರಡುವಾರಗಳಲ್ಲಿ ಬಾರದಿದ್ದಲ್ಲಿ ಚಂದಾ ಅವಧಿಯು ಮುಗಿದವರಿಗೆಲ್ಲ ಹೊಸವರ್ಷದ ೨ನೇ ಸಂಚಿಕೆಯೇ ವ್ಹಿ. ಪಿ. ಯಿಂದ ಕಳಿಸಲ್ಪಡುವದು. ಎಲ್ಲರೂ ಸ್ವೀಕರಿಸಬೇಕಾಗಿ ವಿನಂತಿ.

—ವ್ಯವಸ್ಥಾಪಕ "ಕನ್ನಡಿಗ"

ಮಂದ್ರಾಸದ ಕಡೆಯ ಎಸ್, ಪಿ, ಸುರಧಿಂಬೆಂಬ ಗೃಹಸ್ಥರು, ನರಸಾಪುರದಲ್ಲಿ ಸ್ಮರಣಶಕ್ತಿಯ ಕೆಲವು ಪ್ರಯೋಗಗಳನ್ನು ಮಾಡಿತೋರಿಸಿದರು. ಇವರು, ೧೨ ವರುಷಗಳಿಗೆ ಸೇಕಂಡುಗಳನ್ನೂ, ೮ ಅಂಕಿಗಳ ಸಂಖ್ಯೆಯ ವರ್ಗಮೂಲವನ್ನೂ, ೧೦ ಅಂಕಿಗಳ ನಾಲ್ಕು ಸಂಖ್ಯೆಗಳ ಬೇರೀಜನ್ನೂ, ಕಾಗದ ಲೆಕ್ಕಣಿಕೆಗಳ ಸಹಾಯವಿಲ್ಲದೆ, ಮಾಡಿ ಕೊಡಲಿ ಹೇಳಿದರಂತೆ!

ರಂಗಭೂಮಿಯ ಸುದ್ದಿಗಳು.

(ಅಮೇರಿಕೆಯ) ನ್ಯೂಯಾರ್ಕದಲ್ಲಿ ಇತ್ತಿತ್ತ ರಂಗಭೂಮಿಯಲ್ಲಿ ಅಶ್ಲೀಲವಾದ ಮಾತುಗಳೂ ಕೃತಿಗಳೂ ಹೆಚ್ಚಾಗಿ ನಡೆದಿವೆ. ಇದನ್ನು ನಿಷೇಧಿಸುವದಕ್ಕಾಗಿ ಪೋಲೀಸರು ೪೦ ಜನ ಅಭಿನಯಕಾರರನ್ನು ಸೆರೆಹಿಡಿದರು. ಮೂರು ನಾಟಕ ಕಂಪನಿಗಳಿಗೆ ಅವರು "ಲಿಂಗನಳು" "ಮಂಗನ" "ಪವಿತ್ರ ಪುರುಷ" ಈ ನಾಟಕಗಳನ್ನು ಪ್ರಯೋಗಿಸಕೂಡದೆಂದು ನೋಟೀಸುಕೊಟ್ಟರು. ೪೦ ನಟರೂ ಜೇಲಿನಿಂದ ಬಿಡಲ್ಪಟ್ಟಿದ್ದಾರೆ. ಕೋರ್ಟಿನಿಂದ ಅಶ್ಲೀಲ ನಾಟಕಗಳೆಂದು ಸಿದ್ಧವಾಗುವ ವರೆಗೆ ಕಂಪನಿಗಳಿಗೆ ಅವನ್ನು ಪ್ರಯೋಗಿಸುವ ಅಪ್ಪಣೆಯೂ ದೊರೆತಿದೆ. ಕರ್ನಾಟಕದಲ್ಲಿಯೂ "ಕೃಷ್ಣಲೀಲಾ" "ಮಾಯಾವಿಷಲೀಲಾ" ಗಳನ್ನು ಒಂದು ಸಾರೆಯಾದರೂ ನೋಡಬೇಕು ನೀವು! ಕೂಡಬಾರದು? ಯಾಕೆಂದರೆ ಅಶಕ್ತವಾದ ಶೃಂಗಾರ ಸ್ವಭಾವಿಕವಾದ ಅಭಿನಯಿಸುವ ನಟರಿಗೂ ಸೆರೆಯೊಳಕೆ ಹಿಡಿಯಬಾರದು?

ಪರದೇಶ

ಇಟಲಿ ಸರಕಾರದವರು 'ಶಾಶ್ವತ ಶಸ್ತ್ರಸಂನ್ಯಾಸ ಸಭೆಯಲ್ಲಿ ಭಾಗ ತೆಗೆದುಕೊಳ್ಳುವದಿಲ್ಲವೆಂದು ಅಮೇರಿಕೆಗೆ ತಿಳುಹಿದ್ದಾರೆ.'

"ಬ್ರಿಟಿಶ ಸಾಮ್ರಾಜ್ಯದೊಳಗೆ ಅಸಂತೋಷವನ್ನು, ಅಶಾಂತತೆಯನ್ನು ಹುಟ್ಟಿಸುವ ಯಾವ ಚಳವಳಿಗೂ ನೀವು ಉತ್ತೇಜನವನ್ನು ಕೊಡತಕ್ಕದ್ದಲ್ಲವೆಂದೂ, ಸೋವ್ಹಿಯೆಟ್ ಸರಕಾರಕ್ಕೆ ಬ್ರಿಟಿಶರು ತಿಳಿಸಿದ್ದಾರೆ

ಚೀನ ಹಿಂದೂಸ್ಥಾನಿಯವರ ನಡುವೆ ಒಪ್ಪಂದವಾಗಿರುತ್ತದೆ ಒಪ್ಪಂದದ ಕರಾರುಗಳು:—

(೧) ಹಾಂಕೋ ಮತ್ತು ಕ್ಯಾಂಟಿಂಗ ಇವುಗಳಲ್ಲಿದ್ದ ಬ್ರಿಟಿಶ ಮುನಸಿಪಾಲಿಟಿಗಳನ್ನು ಮುರಿದು, ಅಲ್ಲಿ ಚೀನ ಮುನಸಿಪಾಲಿಟಿಗಳನ್ನು ಸ್ಥಾಪಿಸತಕ್ಕದ್ದು.

(೨) ಅಲ್ಲಿ ಶಾಂತತೆಯನ್ನಿಡುವ ಭಾರವನ್ನು ಚೀನರೇ ಹೊರಬೇಕು
(೩) ಹ್ಯಾಂಕೋ ಮತ್ತು ಶಾಂಘಾಯಿಗಳಲ್ಲಿಯ ಬ್ರಿಟಿಶರಿಗಾದ ಹಾನಿಯನ್ನು ತುಂಬಿಕೊಡಬೇಕು

ಅಂತೂ ಇಂತೂ ಯುದ್ಧವು ನಿಂತಂತಾಯಿತು

ಚೀನದಲ್ಲಿ ನಡೆದ ಗಲಭೆಗೂ, ಅಲ್ಲಿಯ ರಾಷ್ಟ್ರೀಯ ಪಕ್ಷಕ್ಕೂ, ತಮಗೂ ಏನೂ ಸಂಬಂಧವಿಲ್ಲೆಂದು ಸೋವ್ಹಿಯಟ ಸರಕಾರದವರು ಸಾರಿದ್ದಾರೆ.

ಹಿಂದುಸ್ತಾನದಿಂದ ಚೀನಕ್ಕೆ ಹೋದ ಸೈನ್ಯದ ವೆಚ್ಚವನ್ನು ಪಾರ್ಲಿಮೆಂಟಿನ ಸಮ್ಮತಿಯಿಲ್ಲದೆ ಹಿಂದುಸ್ತಾನದ ಮೇಲೆ ಹೇರುವದಿಲ್ಲವೆಂದು 'ಅರ್ಲ ವಿಂಟರಟನ್ನ'ರು 'ಹೌಸ ಅಫ್ ಕಾಮನ್ಸ' ಸಭೆಯಲ್ಲಿ ಹೇಳಿದರು. ಪಾರ್ಲಿಮೆಂಟಿನಲ್ಲಿ ಹಿಂದುಸ್ತಾನವನ್ನು ಕೇಳುವವರಾರು?'

ಹಿಂದುಸ್ಥಾನ.

ಹಿಂದುಸ್ತಾನದಲ್ಲಿ ಈಗ ಆಡಿದ ಕಡೆಯಲ್ಲೆಲ್ಲ ಜಯಶಾಲಿಗಳಾದ ಇಂಗ್ಲಂಡದ ಎಮ್. ಸಿ. ಸಿ. ಕ್ರಿಕೆಟ ಟೀಮಿನವರನ್ನು, ದಿಲ್ಲಿಯ ಹೆಂಗಳೆಯರು, ೨೫ ಓಟಗಳಿಂದ ಸೋಲಿಸಿದ್ದಾರೆ. ಹೆಂಗಳೆಯರೇ ಹಿಂದುಸ್ತಾನದ ಮಾನವನ್ನು ಕಾಯ್ದಂತಾಯಿತು

ಅಖಿಲ ಭಾರತ ರಾಷ್ಟ್ರೀಯ ಮಂಡಳದ ಅಧಿವೇಶನವು ಮಾರ್ಚ ೨೭ಕ್ಕೆ ಕೂಡುವದು. ಮುಖ್ಯವಾಗಿ ಹಿಂದೂ-ಮುಸಲ್ಮಾನರ ಐಕ್ಯದ ವಿಷಯವಾಗಿ ವಿವೇಚಿಸುವರಿದ್ದಾರೆ

ವಿದ್ಯಾಲಯದ ಪರಿಸುವಿಕೆಯು ಮಾರ್ಚ ೨೨ಕ್ಕೆ ಆಗುವದು. ಪುಣೆಯ ಭೋಪಟಕರರೂ, ಫರ್ಗ್ಯೂಸನ ಕಾಲೇಜ ಪ್ರೊಫೆಸರ ಕಾಳೆ ಹಾಗೂ ಮುನಶೀ ಪಾಡಿಯಾಯರು ಉಮೇದವಾರರಾಗಿ ನಿಂತಿದ್ದಾರೆ. ರಾಷ್ಟ್ರೀಯ ಪಕ್ಷದವರು ಯಾರನ್ನು ನಿಲ್ಲಿಸುವರೆಂಬುದು ತಿಳಿದಿಲ್ಲವಾದರೂ, ದೇಶಬಂಧುರವರನ್ನೇ ಶಿಫಾರಸುಮಾಡಬಹುದು. ಮುನಶಿಯವರು, ತಾವು ಆರಿಸಿಬಂದಲ್ಲಿ, ಮಹಾರಾಷ್ಟ್ರ, ಗುಜರಾಥ, ಕರ್ನಾಟಕಗಳಿಗೆ ಪ್ರತ್ಯೇಕ ವಿಶ್ವವಿದ್ಯಾಲಯಗಳನ್ನು ಕೂಡಿಸಲು ಪ್ರಯತ್ನಿಸುವೆನೆಂಬದಾಗಿ ಬಿನ್ನಹ ಪತ್ರಿಕೆಯಲ್ಲಿ ಹೇಳಿದ್ದಾರೆ ಮೊದಲು ಮೊದಲು ಎಲ್ಲರೂ ಹೀಗೆಯೇ ನುಡಿಯುವದುಂಟು ಹಿಂದುಗಡೆಯಲ್ಲಿ ಮಾತ್ರ ನುಡಿದಂತೆ ನಡೆಯುವದಿಲ್ಲ

ಶಾಂತಿದೇವಿಯು ದಿಲ್ಲಿಯ ಕೋರ್ಟಿನ ಹೇಳಿಕೆಯ ಪ್ರಕಾರ ತನ್ನ ಮಕ್ಕಳನ್ನು ಮುಸಲ್ಮಾನ ಧರ್ಮದ ಗಂಡನ ಕೈಯಲ್ಲಿ ಒಪ್ಪಿಸುವಾಗ ಕೋರ್ಟಿನಲ್ಲಿ ಹೀಗೆ ಹೇಳಿರುವಳು "ಮಕ್ಕಳ ಸಂರಕ್ಷಣೆಯ ಭಾರವನ್ನು ಪರಮಾತ್ಮನು ತಾಯಿಗಳಮೇಲೆ ಹೇರಿದ್ದಾನೆ ಆದರೆ ಮಾನವ ಪ್ರಣೀತ ಕಾನೂನಗಳು ತಂದೆಯೇ ಸಂರಕ್ಷಣ ಕರ್ತನೆಂದು ಸಾರುತ್ತವೆ ಮಕ್ಕಳನ್ನು ಒಪ್ಪಿಸಲು ನಾನೇನೂ ಹಿಂದುಮುಂದೆ ನೋಡುವದಿಲ್ಲ ಮಕ್ಕಳ ಶಿಕ್ಷಣವನ್ನು ಸುವ್ಯವಸ್ಥಿತ ರೀತಿಯಿಂದ ಸಾಗಿಸುವೆವೆಂದು ಕೋರ್ಟಿನವರು ಆಶ್ವಾಸನವಿತ್ತರೆ ಸ್ವಲ್ಪ ಸಮಾಧಾನವೆನಿಸುವದು!

ಇಹವೃತ್ತ.

ಬಿಸಿಲು ಹೆಚ್ಚುತ್ತಲಿದೆ ಮುಂಜಾನೆ ಇನ್ನೂ ತಂಡಿಬೀಳುತ್ತದೆ. ರಾತ್ರಿ ಮಳೆಯೊಂದಾದರೆ ಬಾಗಲಕೋಟೆಯವರಿಗೆ ಒಂದೇ ದಿನದಲ್ಲಿ ಮೂರೂ ಋತುಗಳ ಪ್ರತ್ಯಕ್ಷ ದರ್ಶನವಾಗುವದಲ್ಲವೇ?

ಶ್ರೀಕೃಷ್ಣ ಸಂಗೀತ ಕನ್ನಡ ನಾಟಕ ಮಂಡಳಿಕ್ಕೆ ಧಾರವಾಡದ ಸುಪ್ರಸಿದ್ಧ ಗಾಯನ ಪಟುಗಳಾದ ಶ್ರೀಯುತ ದೇಶಪಾಂಡೆ ಗುರುರಾಯರು ಬಂದಿದ್ದಾರೆ. ಕರ್ನಾಟಕ ರಂಗಭೂಮಿಯನ್ನು ಉದ್ಧರಿಸಲು ಶ್ರೀ ಗುರುರಾಯರಂಥ ಸುಶಿಕ್ಷಿತರು ಬದ್ಧಕಂಕಣರಾಗಿದ್ದುದು ಕರ್ನಾಟಕ ರಂಗಭೂಮಿಯ ಏಳ್ಗೆಯ ಲಕ್ಷಣವೇ ಸರಿ ಮಹಾರಾಷ್ಟ್ರದ ಗಂಧರ್ವ ಹಾಗೂ ಲಲಿತಕಲಾ ನಾಟಕ ಮಂಡಲದವರು ಎಷ್ಟೋ ಸಂಬಳ ಕೊಡಲು ಒಪ್ಪಿದ್ದರೂ, 'ನಾನು ಕನ್ನಡಿಗನು; ಕನ್ನಡ ರಂಗಭೂಮಿಯಲ್ಲಿ ಕಾರ್ಯಮಾಡತಕ್ಕವನೆ'ಂದು ಹೇಳಿದ್ದು ಇವರ ಕರ್ನಾಟಕದ ಅಭಿಮಾನವನ್ನು ಸಿದ್ಧಗೊಳಿಸುತ್ತದೆ ಈ ಕಂಪನಿಯ ನಾಯಿಕೆಯ ಕೆಲಸವನ್ನು ಗಾಯನ ರತ್ನ ಶ್ರೀಮತಿ ಗಂಗೂಬಾಯಿಯವರು ವಹಿಸುವರು ಅವರ ಗುರುಗಳಾದ ಶ್ರೀ ಗುರುರಾಯರು ನಾಯಕನ ಪಾತ್ರಮಾಡುವರು. ಇನ್ನೇನು ಕರ್ನಾಟಕದ ಗಾಯನ ಲೋಲುಪರಿಗೆ ಸುಸಂಧಿಯು ಒಂದಿತೆನ್ನಬೇಕಲ್ಲವೇ?

೧,೪೨,೦೦,೦೦೦

ರೂಪಾಯಿಗಳು!

ಪರದೇಶಗಳಿಂದ ತರಿಸಲ್ಪಟ್ಟ ಸಾಬೂನುಗಳಿಗೋಸ್ಕರ ಪ್ರತಿವರುಷವೂ ಒಂದುಕೋಟಿ ನಾಲ್ವತ್ತೆರಡು ಲಕ್ಷ ರೂಪಾಯಿಗಳನ್ನು ನಮ್ಮ ದೇಶದಿಂದ ಪರದೇಶಕ್ಕೆ ತೆತ್ತಿದ್ದೇವೆ ಮಹಾಜನಗಳೆಲ್ಲರೂ ಒಕ್ಕಟ್ಟಾಗಿ ಸಂಕಲ್ಪಮಾಡಿದರೆ ತಾನೇ ಈ ಹಣವನ್ನು ನಮ್ಮ ದೇಶದಲ್ಲಿ ಉಳಿಸಿಕೊಳ್ಳಬಹುದು ಸ್ವದೇಶದ ಸಾಬೂನನ್ನು ಬಿಟ್ಟು ಪರದೇಶದ ಸಾಬೂನನ್ನು ಕೊಳ್ಳುವ ಪ್ರತಿಯೊಬ್ಬ ವಿದ್ಯಾವಂತನೂ ಅನ್ಯ ದೇಶದ ಕೈಗಾರಿಕೆಗಳಿಗೆ ಉಪಕಾರಮಾಡಿ, ಸ್ವದೇಶದ ಕೈಗಾರಿಕೆಗಳಿಗೆ ಅಪಕಾರಮಾಡುತ್ತಾನೆ. ಪ್ರತಿಯೊಬ್ಬ ದೇಶಬಾಂಧವನೂ ಸ್ವದೇಶೀ ಮಾಲುಗಳನ್ನೇ ಕೊಳ್ಳುವನು ಮೈಸೂರು ಗೌರ್ನಮೆಂಟ ಸೋಪ್ ಫ್ಯಾಕ್ಟರಿಯಲ್ಲಿ ಶಾಸ್ತ್ರೋಕ್ತವಾದ ಉತ್ತಮವಾದ ಸಾಬೂನುಗಳನ್ನು ತಯಾರುಮಾಡುತ್ತಾರೆ. ನಾವು ತಯಾರುಮಾಡುವ ಶ್ರೀಗಂಧ ಪರಿಮಳವುಳ್ಳ ಸಾಬೂನಿನ ಒಂದನ್ನು ಕೊಂಡು ತಾವೇ ಪರೀಕ್ಷೆ ಮಾಡಿನೋಡಿರಿ. ತಮಗೆ ನಮ್ಮ ಸಾಬೂನುಗಳು ಸಿಗಲಸಾಧ್ಯವಾದಲ್ಲಿ ದಯವಿಟ್ಟು ನಮಗೆ ಪತ್ರವೊಂದನ್ನು ಬರೆದರೆ, ತಾವು ಇಚ್ಛಿಸುವ ಊರಿನಲ್ಲಿಯೇ ನಮ್ಮ ಮಾಲುಗಳು ತಮಗೆ ದೊರೆಯುವಂತೆ ಏರ್ಪಡಿಸಿಕೊಡುತ್ತೇವೆ.

ಗೌರ್ನಮೆಂಟು ಸೋಪ್ ಫ್ಯಾಕ್ಟರಿ

ಬೆಂಗಳೂರು.

ನಟವರ್ಗದವರು ಬೇಕು.

ಹೊಂಬಳ ಸಂಗೀತ ನಾಟಕ ಮಂಡಳಿ ಸಲುವಾಗಿ ಜೋಡು ಪೆಟ್ಟಿಗೆ ಬಾಲ, ಸ್ತ್ರೀ ಪುರುಷ ಪಾರ್ಟೀ ಸಲುವಾಗಿ ಕಾಯಂ ಪ್ರ ಯೋಗ ಮಾಡುವ ಜನರು ಬೇಕು. ಬರಲಿಕ್ಕೆ ಇಚ್ಛಿಸುವರು ಕೆಳಗಿನ ವಿಳಾಸಕ್ಕೆ ಬಂದು ಭೆಟ್ಟಿ ಆಗಬೇಕು. ಕಾಯಂ ಆದ ಜನರ ಗಾಡಿ ಚಾರ್ಜು ಕೊಡಲ್ಪಡುವದು

ಕ್ಯಾಂಪ:— ಗದಗಬೆಟಗೇರಿ

ಮ್ಯಾನೇಜರ

ಹೊಂಬಳ ಸಂಗೀತನಾಟಕ ಮಂಡಳಿ

ಭವಾನಸಾ|| ಕಟಾಡಿಯವರ ಬಂಗ್ಲೆದಲ್ಲಿ) ಪೋ ಗದಗ ಬೆಟಗೇರಿ

ಲಿವರಿನ ಗಡಿಯಾರಗಳು.

ಲಿವರಿನ ಕೈ ಗಡಿಯಾರ ರೂ. ೯.

ಲಿವರಿನ ಕಿಸೆಯೊಳಗಿಡುವ ಗಡಿಯಾರ ರೂ ೭.



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಮೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವುದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು ಮತ್ತು ತಾಳುವವು. ಬೆಲೆ ಕಡಿಮೆಯಿದೆಂದು ಅಂಜುವ ಕಾರಣವಿಲ್ಲ. ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ. ಅದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ.

ಲಿಬೋ ವಾಚ ಕಂ. (ಇಂಡಿಯಾ.) ಬಾಂಬೆ. ಕೆ ೪.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ. ಬಾಗಲಕೋಟೆಯಲ್ಲಿ ನಮ್ಮ ಆಯುರ್ವೇದ ಔಷಧಿಗಳನ್ನು ಮಾರುವದಕ್ಕೆ ಏಜೆಂಟರು ಬೇಕಾಗಿದೆ. ಪುಷ್ಕಳ ಕಮಿಷನ್ ದೊರೆಯುವದು.

ರಾಜವೈದ್ಯ ನಾರಾಯಣಜಿ ಕೇಶವಜಿ.

೫೭. ಚೀನಾಬಜಾರ್, ಮದ್ರಾಸು

ಯಾವದೇ { ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ. ೧೪, ಅರ್ಧ ಬೆಲೆ ರೂ. ೭



ಬರೇ ಒಂದು ತಿಂಗಳ ಬಗ್ಗೆ ನಾವು ಈ ದಂವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. **ಬೆಲೆ ರೂ. ೭**

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ರ:— **ಸ್ವಾನ ಹೌಸ ಪಿ. ಬಿ. ೫೦೮. ಪಿ. ಟಿ. ಮದ್ರಾಸ**

ಅತ್ಯಲ್ಪವಿವೆ ! ಉಚಿತ !

ಕೇವಲ ಉಚಿತ **ಕೇವಲ ಉಚಿತ**



" ತಾರಾ " ಲೀವರ್ ರಜಿಸ್ಟರ್ಡ್ ಪೋಕೆಟ್ ವಾಚ್ ೧೪ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚು ಹೊಡೆದಿರುವರು ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ " ಸಿ " ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು " ತಾರಾ " ಲೀವರ್ ರಿಜಿಸ್ಟರ್ಡ್ ೧೪ ಕೆರೆಟ್ ರೋಲ್ಡ್ ಗೋಲ್ಡಿನ ಪೋಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪ್ಟನ್ ವಾಚ್ ಕಂ . ಪಿ ಬಿ. ೨೬೫ ಮದ್ರಾಸ

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ.

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡ ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು, ಅವುಗಳೊಳಗಿನ ಕಟ್ಟುಪಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದು ಮತ್ತಿದ ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಉಳಿದಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದುಕೊಳ್ಳಿರಿ!

ವಿಳಾಸಃ—ಕುಲಕರ್ಣಿ ಮೋಟಾರ ಸ್ಕೂಲ.

೪೯೫ ಶನಿವಾರ ಪೇಠ ಜಮಖಂಡಿಕರ ವಾಡೆ ಪೂಣೆ ಶಹರ

ನಪುಂಸಕತ್ವ

ಧಾತು ವಿಕಾರ, ಸ್ವಪ್ನಾವಸ್ಥೆ, ಅಶಕ್ತತೆ ಇತ್ಯಾದಿಗಳಮೇಲೆ ಖಂಡಿತವಾಗಿ ಗುಣಕೊಡುವ ಮತ್ತು ಕರ್ಜನಕ ಬಾಳುವ ದಿವ್ಯ ಔಷಧಿ! ಒಂದೇ ಗುಳಿಗೆ!!

ವಿಶೇಷ ಮಾಹಿತಿ ಪತ್ರದ್ವಾರ ತಿಳಿಯಿರಿ.

ವಾದಿರಾಜ ಜಹಾಗೀರದಾರ.

ಮು. ಪೋ. ಇಲಕಲ್ಲ. (ವಿಜಾಪೂರ)

ಡಾಕ್ಟರ ಬಸಪ್ಪ ನಂಗಪ್ಪ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ವ ಡೆಂಟಿಸ್ಟ ಬಾಗಲಕೋಟೆ

ನಾವು ಇಲ್ಲಿ [illegible] ಕಲ್ಲು [illegible] ಹಾಗಿ ಅರಿತಿರುವೆವ ಕಲ್ಲುಗಳ [illegible] ಗಳನ್ನು [illegible] ರಕ್ತ, [illegible] ತೀವ್ರ [illegible] ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು ಹಲ್ಲುಗಳ ಪೂರ್ಣ ಸೆಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

S. C. Narayanachar & Co

Chaukhamba Benares City

SUN BRAND

ನಮ್ಮಲ್ಲಿ [illegible] ಜವಿಕಣ, ಜರಿಸೀರೆ, [illegible], ಕರವಾರಿ ದ್ರಾಕ್ಷಿ, ಕಸ್ತೂರಿ [illegible] [illegible] ಮಾಲುಗಳ ಕ್ಯಾಟಲಾಗ ಕೋರ [illegible] ಕಳಿಸಲಾಗುವದು

ವಿಳಾಸ [illegible] ನಾರಾಯಣಾಚಾರ್ಯ [illegible]

ಈ ಪತ್ರಿಕೆಯು ಮುಂಗೇಪ ಫ ರಾಜೇಂದ್ರಾಚಾರ ಮಕ್ಕಳಾದ ಶ್ರೀನಿವಾಸಾಚಾರ್ಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ ನಂ. ಬಿ ೧೯೪೭ ವಾ ಚಂದಾ ೧—೧೩—೦ ಮಾತ್ರ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ.)

सर्वं परवशं दुःखं । सर्वमात्मवशं सुखम् । — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ಫಾಲ್ಗುಣ ಶುದ್ಧ ೧೫ ಶಕೆ ೧೮೪೮ ತಾ|| ೧೮-೩-೧೯೨೭. Date 18—3 1927. | ಸಂಚಿಕೆ ೪೮

ಸಂಪಾದಕರ ಭೂಮಿ

(ಓಂ)

ನನ್ನ ಮನಸಿನ ಮೋಹವಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮೆ।
ಚಿನ್ನದಾದರು ಚಿನ್ನ ಮೋಹಬಸ್ತಿಯ ನೊಂಚು ಚಿನ್ನಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ಕನ್ನಸನ್ನ ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ತನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೊ॥

—ಆಂಜಿಕಾತನಯ ದತ್ತ

ಕರ್ನಾಟಕದ ಕಾಯದೇ ಮಂಡಲಗಳ ಪ್ರತಿನಿಧಿಗಳಲ್ಲಿ ಒಳ್ಳೇ ಮನಸ್ಸಿನಿಂದ ಕೆಲಸ ಮಾಡತಕ್ಕವರೆಂದರೆ ಮದ್ರಾಸದ ಡಾ. ಯೂ ರಾಮರಾಯರೇ ಎಂದೆನ್ನಬಹುದು ಇವರು ಕೌನ್ಸಿಲ್ ಆಫ್ ಸ್ಟೇಟಕ್ಕೆ ಆರಿಸಲ್ಪಟ್ಟಾಗಿನಿಂದ ಕರ್ನಾಟಕದ ಪ್ರಶ್ನೆಗಳನ್ನೂ ಮದ್ರಾಸದ ಆಸಾನ ಕೂಲತೆಗಳನ್ನೂ ಭರತ ಖಂಡದ ವಿಷಯಗಳನ್ನೂ ಕುರಿತು ಒಂದೇ ಸಮನೆ ಆ ವರಿಷ್ಠ ಮಂಡಲದಲ್ಲಿ ಗೊಂದಲವನ್ನೆಬ್ಬಿಸುತ್ತಲಿದ್ದಾರೆ. ಮೊದಲಿಗೇ ಕರ್ನಾಟಕ ಏಕೀಕರಣದ ಪ್ರಶ್ನೆಯನ್ನು ತಂದರು ಈ ಸಲ ಮಂಗಳೂರ ಜಿಲ್ಹೆಯ ಕೆಲವು ಅನಾನುಕೂಲತೆಗಳ ಕಡೆಗೆ ಸರಕಾರದ ಲಕ್ಷ್ಯ ಎಳೆದರು. ಅಂಚೇತಿಕಿಟುಗಳ ಬೆಲೆ ಕಡಿಮೆಯಾಗಬೇಕಾಗಿ ಸೂಚನೆ ತಂದರು ಅಂದಾಜ ಪತ್ರಿಕೆಯವಾದದಲ್ಲಿ ಹುರುಪಿನಿಂದ ಭಾಗ ತೆಗೆದುಕೊಳ್ಳುತ್ತಲಿದ್ದಾರೆ. ಕೌನ್ಸಿಲ್ಲಿಗೆ ಹೋಗುವದನ್ನು ತಪ್ಪಿಸುವದಿಲ್ಲ ಇವೆಲ್ಲ ಕಾರಣಗಳಿಗಾಗಿ ನಾವು ಡಾಕ್ಟರರನ್ನು ಅಭಿನಂದಿಸುತ್ತೇವೆ. ಆದರೆ ಕರ್ನಾಟಕದ ಉಳಿದ ಯಾವ ಪ್ರತಿನಿಧಿಗಳೂ ಇಷ್ಟೊಂದು ಬಿಗಟುತನದಿಂದ ಕೆಲಸಮಾಡದಿರುವದನ್ನು ಕಂಡು ನಮಗೆ ವಿಷಾದವಾಗುತ್ತದೆ. ಮುಂಬೈ ಮದ್ರಾಸ ಕೌನ್ಸಿಲ್ಲುಗಳ ಕರ್ನಾಟಕ ಪ್ರತಿನಿಧಿಗಳಲ್ಲಿ ಯಾರೂ ಕರ್ನಾಟಕದ ವಿಶಿಷ್ಟ ಪ್ರಶ್ನೆಗಳನ್ನು ಅಭ್ಯಾಸಿಸುವದಿಲ್ಲ; ಮತ್ತು ಕೌನ್ಸಿಲ್ಲುಗಳಲ್ಲಿ ಅವನ್ನು ಎತ್ತುವದಿಲ್ಲ. ಕರ್ನಾಟಕ ಏಕೀಕರಣವೆಂಬ ಕೂಗು ಎಲ್ಲಕಡೆಯಿಂದಲೂ ಒಂದೇ ಸಮನೆ ೪-೫ ವರ್ಷಗಳಿಂದ ಕೇಳಬರುತ್ತದೆ; ಆದರೂ ಕೂಡ ಈಗ್ಗೆ ನಡೆದ ಕಾಯದೇ ಮಂಡಲಗಳಲ್ಲಿ ಈ ಬಗ್ಗೆ ಚಕಾರ ಶಬ್ದವಿಲ್ಲ. ಅಸೆಂಬ್ಲಿಯಲ್ಲಿ ಶ್ರೀ ಬೆಳವಿಯವರ ಹೆಸರೇ ಕೇಳಬರುವದಿಲ್ಲ. ಕರ್ನಾಟಕದ ಒಂದು ಪ್ರಶ್ನೆಯನ್ನಾದರೂ ಅವರು ಅಲ್ಲಿ ಎತ್ತಿರುವದಿಲ್ಲ ಆದರೂ ಈ ಎಲ್ಲ ಮಹನೀಯರು ಕನ್ನಡಿಗರು! ಕರ್ನಾಟಕದ ಉಪ್ಪು ಉಣ್ಣುವಂತವರು !! ಆರಿಸುವಿಕೆಯ ಬಿನ್ನಹ ಪತ್ರಿಕೆಗಳಲ್ಲಿ ಮಾತ್ರ ಇವರ ಕರ್ನಾಟಕಾಭಿಮಾನದ ಆ ಅಭಿಮಾನದ ಈ ಅಭಿಮಾನದ ಅತಿರೇಕವನ್ನು ನೋಡಬೇಕು! ಇದೊಳ್ಳೇ ಆಶ್ಚರ್ಯ ಮಾಡತಕ್ಕ ದಕ್ಷತೆಯು!

ಬೆಳಗಾವಿ ರೇಲ್ವೆ ಮಂಡಲವನ್ನು ತಿಳಿಯದವರು ಈಗ್ಗೆ ಕರ್ನಾಟಕದಲ್ಲಿ ಯಾರೂ ಇಲ್ಲ. ಅವರು ಮಾಡುತ್ತಿರುವ ಕಾರ್ಯವು ಜನರ ಎದುರಿನಲ್ಲಿದೆ ಈಗ್ಗೆ "ರೇಲ್ವೆ ಪ್ರವಾಸ ಹಾಗೂ ಪ್ರವಾಸಿಕರ ಕರ್ತವ್ಯ" ಗಳೆಂಬ ಹಸ್ತಪತ್ರಿಕೆಯನ್ನು ಹೊರಡಿಸಿದ್ದು ಅದರಲ್ಲಿ ಪ್ರವಾಸಿಕರು ತಮ್ಮ ಕಷ್ಟಗಳನ್ನು ದೂರ ಮಾಡಲು ಏನು ಮಾಡತಕ್ಕದ್ದೆಂಬದನ್ನು ತಿಳಿಸಿದ್ದಾರೆ ರೇಲ್ವೆ ಮಂಡಲಕ್ಕೆ ತಮ್ಮ ದೂರುಗಳನ್ನು ಕೂಡಲೇ ಪ್ರವಾಸಿಕರು ಅರುಹಬೇಕು ಅಗ್ಗೆ ಕೆಳಗಿನ ಸಂಗತಿಗಳನ್ನು ಅವಶ್ಯವಾಗಿ ತಿಳಿಸತಕ್ಕದ್ದೆಂದು ಅವರ ಪ್ರಾರ್ಥನೆ

(೧) ಸ್ಟೇಶನು (೨) ಯಾವ ಗಾಡಿ (ನಂಬರು ಮುಂತಾದದ್ದು) (೩) ಡಬ್ಬಿಯ ವರ್ಗ ಹಾಗೂ ನಂಬರು (೪) ನಿಯಮದಂತೆ ಎಷ್ಟು ಜನರು ಕೂಡ್ರಬೇಕು (೫) ಎಷ್ಟು ಜನರು ಕೂತಿದ್ದರು. (೬) ಗಾಡಿಯಲ್ಲಿ ಮತ್ತೊಂದೆಡೆಗೆ ಸ್ಥಳವಿತ್ತೋ ಇಲ್ಲವೋ. (೭) ಇದನ್ನೆಲ್ಲ ರೇಲ ಅಧಿಕಾರಿಗೆ ತಿಳಿಸಿದ್ದರೆ ಯಾವ ಅಧಿಕಾರಿಗೆ ತಿಳಿಸಿರುವಿರೋ ಅವನ ಹೆಸರು ಮತ್ತು ವಿಳಾಸಗಳು. (೯) ಎರಡನೇ ಯಾವದೇ ಮಹತ್ವದ ಸಂಗತಿ. (೧೦) ತಕರಾರುಗಳನ್ನು ಮೊದಲು ಒಮ್ಮೆಲೇ ಗಾರ್ಡ ಹಾಗೂ ಸ್ಟೇಶನ್ನ ಮಾಸ್ತರ ಕಡೆಗೆ ಕಳಿಸತಕ್ಕದ್ದು.

ವಿಜಾಪೂರದ ಬರಗಾಲದ ಬಗ್ಗೆ ಬರೆದು ಬರೆದು ಸರಕಾರಕ್ಕೆ ಬೇಸರವನ್ನುಂಟು ಮಾಡಿದ್ದಾಯಿತು ಜನರಲ್ಲಿ ಸಾಕಷ್ಟು ಚಳವಳಿ ಮಾಡಿದ್ದಾಯಿತು. ಮುಂಬೈವರೆಗೆ—— ಸರಕಾರದ ಕೇಂದ್ರಸ್ಥಾನದ ವರೆಗೆ——— ಬೊಬ್ಬಾಟವನ್ನು ಮಾಡಿದ್ದಾಯಿತು! ಏನಾದರೇನು? ಸರಕಾರದ ಧೋರಣವು ಬದಲಾಗುವದಿಲ್ಲ! ಈ ಜಿಲ್ಹೆಯಲ್ಲಿ ೪ ಲಕ್ಷ ರೂಪಾಯಿ ಸೂಟಾಗಿರುವದೆಂದೂ ೩ ಲಕ್ಷ ರೂ. ತಹಕೂಬಿಯಾಗಿದೆಯೆಂದೂ ವದಂತಿಯಿದೆ ಈ ಬಗ್ಗೆ ಸ್ಪಷ್ಟವಾದ ಪ್ರಕಟನೆಯನ್ನು ಕಲೆಕ್ಟರರು ಪ್ರಕಟಿಸುವದೊಳ್ಳೇದು ಇನ್ನು ಈ ಸೂಟ ಬಿಟ್ಟದ್ದಕ್ಕಾಗಿಯೂ ತಹಕೂಬಿ ಕೊಟ್ಟದ್ದಕ್ಕಾಗಿಯೂ ನಾವು ಸರಕಾರವನ್ನು ಅಭಿನಂದಿಸಲಾರೆವು ಯಾಕೆಂದರೆ ಮೂರು ವರ್ಷಗಳ ಹಿಂದೆ ಬೆಳೆಬಾರದ ಭಾಗದಲ್ಲಿ ತೆರಿಗೆಯು ಸೂಟಾಗಲೇಬೇಕೆಂಬ ನಿಯಮವಿದೆ; ಆಪ್ರಕಾರ ಬಿಟ್ಟದ್ದಾಯಿತು ತಹಕೂಬಿಯು ಮಾತಾದರೂ ಹಾಗೇ. ಬೆಳೆಗಳು

ಸಂಪೂರ್ಣವಾಗಿ ಕೈ ಬಿಟ್ಟದ್ದರಿಂದ ಜನರು ಊರು ಬಿಟ್ಟಿದ್ದಾರೆ ಆಜನರಿಂದ ಸರಕಾರದವರು ಏನು ಮಾಡಿದರೂ ವಸೂಲಾಗುವದು ಶಕ್ಯವಿಲ್ಲ ಇಂತಹ ತಹಕೂಬಿಯಿಂದ ಫಲವೇನು ನಿಜವಾಗಿ ಈ ದರಿದ್ರರ ಹೀನವಾದ ಬಹು ಕನಿಕರವುಳ್ಳ ಸ್ಥಿತಿಯನ್ನು ಕಂಡು ಸರಕಾರದವರು ಈ ಜನರಿಗೆ ಸಹ ಸಂಪೂರ್ಣವಾದ ಸೂಟ ಕೊಟ್ಟಿದ್ದರೆ ಸರಕಾರವನ್ನು ಅಭಿನಂದಿಸಲು ಮಾರ್ಗವಿರುತ್ತಿತ್ತು ಮತ್ತು ಆಣೇವಾರಿಯಂತೂ ಎಲ್ಲ ಕಡೆಗೂ ಅಸಮಾಧಾನವಾಗಿದೆ ೨ ಆಣೆ ಬೆಳೆಯಿದ್ದಲ್ಲಿ ೬ ಆಣೆ, ೬ ಆಣೆಯಿದ್ದಲ್ಲಿ ೧೦ ಆಣೆ. ಹೀಗೆ ಲೆಕ್ಕವು ಹಾಕಲ್ಪಟ್ಟಿದೆ. ಹಿಂದುಸ್ಥಾನದ ಒಡ ರೈತರು ಯಾವಾಗಲೂ ಸರಕಾರವೆಂದರೆ "ಮಾಬಾಪ" ವೆಂಬ ಭಾವನೆಯಿಂದ ನೋಡುವರು. ಆದ್ದರಿಂದ ಈ ರಾಷ್ಟ್ರದ ಮೂಲಾಧಾರವಾದ ಈ ಒಕ್ಕಲಿಗರನ್ನು ಅಸಂತೋಷಗೊಳಿಸುವದೆಂದರೆ ತಮ್ಮ ಕಾಲಮೇಲೆ ತಾವೇ ಕಲ್ಲನ್ನು ಹಾಕಿಕೊಂಡಂತೆಂಬುದನ್ನು ಸರಕಾರವು ಮರೆಯಕೂಡದು

ವರೆಗೆ (೧೨ ಮೈಲು) ಮತ್ತು ಅಥಣಿಯಿಂದ ಶೇಡಬಾಳದ ವರೆಗೆ (೨೦ ಮೈಲು) ರೇಲ್ವೆಯನ್ನು ಮಾಡುವದು ಅಂದಾಜ ಪತ್ರಿಕೆಯಲ್ಲಿ ಬರೆದಿದೆ. ಹುಟಗಿಯಿಂದ ಕೊಲ್ಹಾಪುರ ಮತ್ತು ಬೆಳಗಾಂವಿಯಿಂದ ಸವದತ್ತಿ ಹುಬ್ಬಳ್ಳಿ ಮತ್ತು ರಾಯಬಾಗದಿಂದ ಜಮಖಂಡಿ ಬಾಗಲಕೋಟೆ ಈ ಮೂರು ಶಾಖೆಗಳು ಸನ್ ೧೯೨೭-೨೮ನೇ ಇಸವಿಯಲ್ಲಿ ಆರಂಭವಾಗುವವು ಮತ್ತು ಅವುಗಳ ಮೇಲೆ ಅನುಕ್ರಮವಾಗಿ ೧ ಲಕ್ಷ, ೮ ಲಕ್ಷ ಮತ್ತು ೫ ಲಕ್ಷ ರೂಪಾಯಿಗಳು ವೆಚ್ಚವಾಗುವದು ಗೊತ್ತಾಗಿದೆ ಬೆಳಗಾಂವಿಯಿಂದ ಸವದತ್ತಿ ಹುಬ್ಬಳ್ಳಿಗೆ ಹೋಗುವ ರೇಲ್ವೆಯ ಮೇಲೆ ಸನ್ ೧೯೨೮—೧೯೨೯ ರಲ್ಲಿ ರೂಪಾಯಿ ೩೦ ಲಕ್ಷ, ಸನ್ ೧೯೨೯—೧೯೩೦ರಲ್ಲಿ ರೂಪಾಯಿ ೩೦ ಲಕ್ಷ, ಮತ್ತು ೧೯೩೦—೧೯೩೧ರಲ್ಲಿ ರೂಪಾಯಿ ೮ ಲಕ್ಷ ಒಟ್ಟಿಗೆ (೬೮ ಲಕ್ಷ) ಖರ್ಚಾಗುವವು. ನಿಪ್ಪಾಣಿಯಿಂದ ರಾಯಬಾಗಕ್ಕೆ ರೈಲಿನ ಕೆಲಸವು ಸನ್ ೧೯೨೮-೧೯೨೯ ರಲ್ಲಿ ಆರಂಭವಾಗಿ ಅದು ಸನ್ ೧೯೩೦-೧೯೩೧ ರಲ್ಲಿ ಪೂರ್ಣವಾಗುವದು ಅದಕ್ಕೆ ಮೊದಲನೇ ವರ್ಷ ೮ ಲಕ್ಷ, ಎರಡನೇ ವರ್ಷ ೧೫ ಲಕ್ಷ ಮತ್ತು ಮೂರನೇ ವರ್ಷ ಮೂರು ಲಕ್ಷ ರೂಪಾಯಿಗಳು (ಒಟ್ಟಿಗೆ ೨೬ ಲಕ್ಷ) ವೆಚ್ಚವಾಗುವವು. ರಾಯಬಾಗದಿಂದ ಬಾಗಲಕೋಟೆಗೆ ಹೋಗುವ

ವೈ. ಕಡಪಾ ಇವರ ಸ್ಮಾರಕ ಸಂಚಿಕೆ.

ಈ ಸಂಚಿಕೆಯೊಂದಿಗೆ "ಕನ್ನಡಿಗ"ನ ೨ ನೇ ವರ್ಷವು ಮುಗಿಯಿತು. ಮುಂದಿನವಾರದಲ್ಲಿ ಕರ್ನಾಟಕದ ನಿಸ್ಸೀಮ ದೇಶಭಕ್ತರಾದ ವೈ. ಕಡಪಾ ರಾಘವೇಂದ್ರರಾಯರ ಸ್ಮಾರಕ ಸಂಚಿಕೆಯನ್ನು (೨ ನೇ ವರ್ಷದ ವಿಶೇಷ ಸಂಚಿಕೆಯನ್ನು) ಚಂದಾದಾರರಿಗೆ ಅರ್ಪಿಸುವೆವು.

ವ್ಯವಸ್ಥಾಪಕ

ಕೊಡಗಿನ ಅಂದಾಜು ಪತ್ರಿಕೆಯಲ್ಲಿ ೬೩ ಸಾವಿರ ರೂಪಾಯಿ ಕೊರತೆಬಂದಿದೆ ೧೨೬೭,೦೦೦ ರೂ. ಉತ್ಪನ್ನವಿದೆ. ಕೊಡಗಿನಂತಹ ಚಿಕ್ಕ ಪ್ರಾಂತಕ್ಕೆ ನಾಲ್ಕು ಜನ 'ಇಂಪೀರಿಯಲ್' ಅಧಿಕಾರಿಗಳಿದ್ದದರಿಂದ ಅವರ ಹೊಟ್ಟೆಗಾಗಿ ಕೊಡಗಿನ ಜನರು ೬೦ ಸಾವಿರ ರೂಪಾಯಿಗಳನ್ನು ತೆಗೆದಿಡಬೇಕಾಗುತ್ತದೆ "ಇಂಗ್ಲೆಂಡಿನಲ್ಲಿಯ ಖರ್ಚ" ಗಾಗಿ ೫೪೧೨೦ ರೂ. "ವಂತಿ"ಯಾಗಿ ಬೇರೆ ಕೊಡಬೇಕಾಗುತ್ತದೆ ಈ ಹಣವನ್ನು ಇಂಗ್ಲೀಷ ನಾಣ್ಯಕ್ಕೆ ಬದಲಾಯಿಸಲು ೧೨,೭೧೦ ರೂ. ಭಾರವನ್ನು ಸಹ ಕೊಡಗು ಕರ್ನಾಟಕವೇ ಹೊರಬೇಕು. ಅಲ್ಲದೆ, ಅರಣ್ಯ ಇಲಾಖೆಯು ಮುಂದುಗಡೆಯೂ ಬಡಕನ್ನಡಿಗನ ಹಣವನ್ನು ಸೆಳೆಯುತ್ತಲಿದೆ ಮಧ್ಯವರ್ತಿ ಸರಕಾರಕ್ಕೆ ಕೊಡಬೇಕಾದ ವಂತಿಗೆಯು ಈ ಸಲ ಎಲ್ಲ ಪ್ರಾಂತಗಳಿಗೂ ಸೂಟಾಗುವಂತೆ ಕೊಡಗಿಗೂ ಸೂಟಾಗುವದಿರುವದರಿಂದ ಲೆಕ್ಕದ ಬಾಯಿಗೂಡಬಹುದು. ದೊಡ್ಡ ಪ್ರಾಂತಗಳಂತೆಯೇ ಕೊಡಗಿನ ಸಣ್ಣ ಪ್ರಾಂತಕ್ಕೂ ಅದೇ ತತ್ವವನ್ನು ಹಚ್ಚಿ ವಂತಿಗೆಯನ್ನು ಸೂಟಿಡುವ ಪದ್ಧತಿಯು ಆನಂದದಾಯಕವಾದುದೆಂದು ಕಮೀಶನರ ಸಾ|| ಹೇಳಿದರು. ಕೊಡಗಿಗೆ ರೇಲ್ವೇ ಆಗುವ ಸುದಿನವು ಬಂದಿರುವದೆಂದೂ, ರೇಲ್ವೇ ಬೋರ್ಡಿನವರು ಈ ಬಗ್ಗೆ ಒಳ್ಳೇ ಸಹಾನುಭೂತಿಯನ್ನು ತೋರುತ್ತಲಿರುವರೆಂದೂ, ಕಮೀಶನರರು ಹೇಳಿದರು. "ಕನ್ನಡಿಗ" ನ ಪ್ರಯತ್ನದ ಫಲವು ಕೊಡಗಿಗೂ ದೊರೆಯುವದೆಂಬಲ್ಲಿ ಸಂದೇಹವಿಲ್ಲ ಕರ್ನಾಟಕ ಏಕೀಕರಣದ ಸೂಚನೆಯನ್ನು ಅಲ್ಲಿಯ ಸಭಾಸದರು ಕೌನ್ಸಿಲ್ಲಿನಲ್ಲಿ ಚರ್ಚಿಸುವದಕ್ಕೆ ಎತ್ತಬೇಕಾಗಿ ನಮ್ಮ ವಿನಂತಿಯಿದೆ.

ಮುಂಬಯಿ ಇಲಾಖೆಯಲ್ಲಿ ಹುಟಗಿಯಿಂದ ಕೊಲ್ಹಾಪುರದ ವರೆಗೆ (೧೯ ಮೈಲು) ಬೆಳಗಾಂವಿಯಿಂದ ಸವದತ್ತಿಯ ಮೂಲಕ ಹುಬ್ಬಳ್ಳಿಯ ವರೆಗೆ (೯೧ ಮೈಲು) ನಿಪ್ಪಾಣಿಯಿಂದ ರಾಯಬಾಗದ ವರೆಗೆ (೩೦ ಮೈಲು) ರಾಯಬಾಗದಿಂದ ಜಮಖಂಡಿಯ ಮೇಲಿಂದ ಬಾಗಲಕೋಟೆಗೆ (೭೭ ಮೈಲು) ಕೋರೆಗಾಂವದಿಂದ ಸಾತಾರೆಯ ರೇಲ್ವೆಯ ಮೇಲೆ ಸನ್ ೧೯೨೭-೧೯೨೮ ರಿಂದ ಸನ್ ೧೯೩೦-೧೯೩೧ನೇ ಇಸವಿಯ ವರೆಗೆ ಅನುಕ್ರಮವಾಗಿ ೫, ೩೦, ೩೦ ಮತ್ತು ೪ ಲಕ್ಷ (ಒಟ್ಟಿಗೆ ೬೯ ಲಕ್ಷ) ರೂಪಾಯಿಗಳು ಖರ್ಚು ಮಾಡಲ್ಪಡುವವು. ಅಥಣಿ, ಶೇಡಬಾಳ ಮಾರ್ಗವು ಸನ್ ೧೯೨೮-೧೯೨೯ ನೇ ದರಲ್ಲಿ ಆರಂಭವಾಗಿ ಸನ್ ೧೯೨೯—೧೯೩೦ ರಲ್ಲಿ ಮುಗಿಯುವದು. ಅದರ ಮೇಲೆ ಮೊದಲನೇ ವರ್ಷ ೪ ಲಕ್ಷ ಮತ್ತು ಎರಡನೇ ವರ್ಷ ೫॥ ಲಕ್ಷ, (ಒಟ್ಟಿಗೆ ೯॥ ಲಕ್ಷ) ರೂಪಾಯಿಗಳು ಖರ್ಚಾಗುವವು.

ತರುಣರಿಗೆ ವಿನಂತಿ.

ಮಹಾತ್ಮಾಗಾಂಧಿಯವರು ನಾಳಿನ ಏಪ್ರಿಲ ತಿಂಗಳಲ್ಲಿ ಬಾಗಲಕೋಟೆಗೆ ಬರುವರೆಂಬುದು ಸ್ವಯಂ ಸೇವಕರು ಅತ್ಯವಶ್ಯವಾಗಿ ಬೇಕಾಗುವರು ಮಹಾತ್ಮರಂತಹ ಯೋಗಿಗಳ ಪಾದಸೇವೆಯಲ್ಲಿ ನಿರತರಾಗಿ ಪುಣ್ಯ ಪಡೆಯಲಿಚ್ಛಿಸುವ ಬಾಗಲಕೋಟೆಯ ತರುಣರು ಬೇಗನೇ ಬಂದು ನನಗೆ ಭೆಟ್ಟಿಯಾಗಿ ಸ್ವಯಂ ಸೇವಕ ಪಥಕದಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕು

ಬಾಗಲಕೋಟೆ.
ತಾ|| ೧೬-೩ ೨೭

ಶ್ರೀನಿವಾಸರಾವ ಕುಲಕರ್ಣಿ.
ಕಾರ್ಯದರ್ಶಿ
ಹಿಂದುಸ್ಥಾನಿ ಸೇವಾದಲ.

ಉತ್ತರ ಕನ್ನಡ ಜಿಲ್ಲೆಯ ಪತ್ರ.

(ನಮ್ಮ ಸ್ವಂತ ಸುದ್ದಿಗಾರರಿಂದ).

ಗೋಕರ್ಣ ಶಿವರಾತ್ರಿ ಜಾತ್ರೆಯು ಯಥಾಂಗವಾಗಿ ನೆರವೇರಿತು ಜನಸಂಖ್ಯೆಯು ಕಳೆದ ವರ್ಷಕ್ಕಿಂತ ಹೆಚ್ಚೆಂದು ಅನುಭವಿಕರು ಅನ್ನುತ್ತಾರೆ. ಲೆಕ್ಕದಿಂದಲೂ ಅದು ಸಿದ್ಧವಾಗುತ್ತದೆ. ಹಲಗೇರಿ ಮತ್ತು ಅವರಗುಂಚಿ ಇವೆರಡು ನಾಟಕ ಕಂಪನಿಗಳು ಬಂದಿವೆ. ಹಲಗೇರಿ ಕಂಪನಿಗೆ ಚನ್ನಾಗಿ ಪ್ರೋತ್ಸಾಹ ದೊರೆಯುತ್ತದೆ. ಹಲಗೇರಿ ಕಂಪನಿಯಲ್ಲಿರುವ ಸದಾಶಿವ ಎಂಬ ನಟನು ರಂಗಸಾಧನೆಯಲ್ಲಿ ಕುಶಲನಾಗಿದ್ದು ಪ್ರೇಕ್ಷಣೀಯವಾದ ಸಾಧನೆಗಳನ್ನು ಮಾಡುತ್ತಿರುವನು. ಇದು ಕರ್ನಾಟಕಕ್ಕೆ ಭೂಷಣವು. ಇದನ್ನು ಲಕ್ಷಿಸಿ ಕನ್ನಡಿಗರು ಗುಣಗ್ರಾಹಕರು ಆತನಿಗೆ ಒಂದು ಪದಕವನ್ನಿತ್ತು ಗೌರವಿಸಿದರೆ ಇದು ಯುಕ್ತವಾಗಿದೆ.

ವಿಜಾಪೂರ ಜಿಲ್ಲೆಯ ಸುದ್ದಿಗಳು.

(ನಮ್ಮ ತಾಲೂಕ ಸುದ್ದಿಗಾರರಿಂದ)

ವಿಜಾಪೂರ — ಧಾರವಾಡದ ಕರ್ನಾಟಕ ಇತಿಹಾಸ ಮಂಡಳದ ಪ್ರಚಾರಕರಾದ ಶ್ರೀ. ರಾಜಪುರೋಹಿತ ಇವರು ಇಲ್ಲಿಗೆ ಬಂದಿರುತ್ತಾರೆ. ಸಾರ್ವಜನಿಕ ವಾಚನಾಲಯ, ಸರಕಾರಿ ಹೈಸ್ಕೂಲ, ಸಿ. ಓ. ಜೆ. ಹಾಯಸ್ಕೂಲ ಮತ್ತು ಸಿದ್ಧೇಶ್ವರ ಹಾಯಸ್ಕೂಲ ಮೊದಲಾದ ಸ್ಥಳಗಳಲ್ಲಿ ಕರ್ನಾಟಕ ಇತಿಹಾಸ ಸಂಶೋಧನದ ಮೇಲೆ ಉಪನ್ಯಾಸಗಳಾದವು. ಅವರ ಉಪನ್ಯಾಸಗಳು ಕನ್ನಡಿಗರಲ್ಲಿ ಒಳ್ಳೇ ಅಭಿಮಾನವನ್ನು ಹುಟ್ಟಿಸಿರುತ್ತವೆಂಬವದರಲ್ಲಿ ಸಂದೇಹವಿಲ್ಲ. ಕರ್ನಾಟಕಕ್ಕೆ ಇಂಥ ಉಜ್ವಲವಾದ ಇತಿಹಾಸ ವಿದ್ದದ್ದನ್ನು ಕಂಡು ಕೆಲವರು ಆಶ್ಚರ್ಯಚಕಿತರಾದರು. ಅವರು ಇಲ್ಲಿಂದ ಪಂಢರಪೂರಕ್ಕೆ ಹೋಗತಕ್ಕವರಿದ್ದಾರೆ.

ಇಲ್ಲಿಯ ಮ್ಯುನಿಸಿಪಾಲಿಟಿಯವರು ಮಹಾತ್ಮಾ ಗಾಂಧಿಯವರಿಗೆ ಮಾನಪತ್ರವನ್ನು ಕೊಡಬೇಕೆಂದು ನಿಶ್ಚಯಿಸಿದ್ದಾರೆ.

ಇಲ್ಲಿಯ ಸಬ್‌ಜಜ್ಜರಾದ ವಿ., ಉಪೋಣಿ ಇವರಿಗೆ ಬಾಗಲಕೋಟೆಗೆ ವರ್ಗವಾಗಿದ್ದು ಅವರಿಗೆ ಆವಾದ್ಯಪಚಾರಗಳನ್ನು ಮಾಡುತ್ತಿದ್ದಾರೆ. ಅವರು ಇಲ್ಲಿ ಜನರಿಗೆ ಪ್ರಿಯರಾಗಿದ್ದರೆಂಬುದು ತೋರುತ್ತದೆ.

ಜಿಲ್ಲಾ ಲೋಕಲ್‌ಬೋರ್ಡ ಸಭೆಯು ೧೯ ನೇ ತಾರೀಖಿಗೆ ಲೋಕಲ್‌ಫಂಡನ್ನು ಬೇಸುವ ಪ್ರಶ್ನವನ್ನು ವಿಚಾರಮಾಡುವ ಕುರಿತು ಕೂಡತಕ್ಕದ್ದಿದೆ.

ದಕ್ಷಿಣಭಾಗ ಡಿ. ಡಿ. ಕಲೆಕ್ಟರರ ಪ್ರವಾಸ ಕ್ರಮ:— ೧೮ ನೇ ಮಾರ್ಚದಿಂದ ೨೭ ರ ವರೆಗೆ ಬಾಗಲಕೋಟ ೨೮ ರಿಂದ ಎಪ್ರಿಲ ೫ ರ ವರೆಗೆ ಕಲಾದಗಿ; ೬, ವಿಜಾಪೂರ.

ಇಂಡಿ—ಶ್ರೀ. ಬ್ರಹ್ಮಚಾರಿ ಶಾಂತಪ್ಪನವರು ಭತ್ತಗುಣಕಿಯಲ್ಲಿ ಬ್ರಹ್ಮಚರ್ಯದ ಕುರಿತು, ಚಡಚಣದಲ್ಲಿ ಖಾದಿಯ ಕುರಿತು, ಅಗರಖೇಡದಲ್ಲಿ ರಂಗಭೂಮಿ ಮತ್ತು ಧರ್ಮ ಇವುಗಳ ಕುರಿತು ಉಪನ್ಯಾಸಗಳನ್ನು ಮಾಡಿದರು. ಚಡಚಣದ ಜೇರಂಕಲಗಿ ಗುರುಪಾದಪ್ಪನವರು ಶ್ರೀ. ರಂಗನಾಥರ ಪ್ರಯಾಣದಲ್ಲಿ ಮೋಟಾರ ಸೌಕರ್ಯವನ್ನು ಮಾಡಿದರು. ಸ್ವಾಮೀ ಶ್ರೀ. ಶಾಂತಪ್ಪನವರ ಉಪನ್ಯಾಸಗಳಿಗೆ ಗವರ್ನಮೆಂಟ ಹಾಯಸ್ಕೂಲಗಳಲ್ಲಿಯೂ ಅವಕಾಶ ಸಿಗುತ್ತಿರಲಿಲ್ಲ. ಚಡಚಣದ ಸ್ಕೂಲ ಮಾಸ್ತರರು ಶಾಲೆಯಲ್ಲಿ ಜೋಂಡಿನವರ ಬೆರಿಕೆಗಾಗಿ ಸ್ಥಳ ಕೊಡಲಿಲ್ಲ. ಸ್ಥಾನಿಕ ಸಂಸ್ಥೆಗಳಿಗೆ ಬ್ರಹ್ಮಚರ್ಯವು ವಿರೋಧವಿದೆಯೋ? ಅಗರಖೇಡದ ಜೈನ ಬಸ್ತಿಯಲ್ಲಿಯ ಮೂರ್ತಿಯನ್ನು ಕಿತ್ತಿಗೆದು ಕೆಳಗಿನ ದ್ರವ್ಯವನ್ನು ತೆಗೆದುಕೊಂಡು ಹೋಗಿರುವರು. ಪೋಲಿಸರು ಕಳ್ಳರ ಶೋಧದಲ್ಲಿರುವರು.

ಸಿಂದಗಿ—ವಿಜಾಪೂರ, ಹಿಪ್ಪರಗಿ ಸಿಂದಗಿಗಳ ಮಧ್ಯದಲ್ಲಿ ಓಡಾಡುವ ಮೋಟಾರುಗಳು ವೇಳೆಯ ಗೊತ್ತುಗುರಿಗಳಿಲ್ಲದೆ ಓಡುತ್ತಿರುವದರಿಂದ ಪ್ರವಾಸಿಕರಿಗೆ ವಿಶೇಷ ತೊಂದರೆ ಯಾಗುತ್ತಿರುವದು.

ಹಂದಿಗನೂರ—ಜಯವಂತ ಸಂಗೀತ ನಾಟಕ ಮಂಡಳಿಯವರು ಕ್ಷೈಪ್ರದಕ್ಷಿಯು ಹೊಡಲಿಕ್ಕಿರುವರು.

ಹುನಗುಂದ—ಹಿಂದುಸ್ಥಾನ ಸರಕಾರದ ಶಿಲಾಲೇಖ ಖಾತೆಯ ಅಸಿಸ್ಟಂಟರಾದ ಶ್ರೀ ಲಕ್ಷ್ಮೀನಾರಾಯಣರಾಯರಂಗನವರು ಹಂಪಿ ಮತ್ತು ಅದರ ಸುತ್ತಲಿನ ಹಳ್ಳಿಗಳ ಸರ್ವೆ ಮಾಡಲು ಬಂದಿರುವರು.

ಬದಾಮಿ—ತಾಲೂಕಿನಲ್ಲಿ ಒಸರು ಹೊಟ್ಟೆಯುಬ್ಬು ಕೂಳಿ ಒದಗಿದ ಕಾಡಿನ ಲಿಕ್ಕೆ ಹೋಗದಿರಾ ಜನರು ತಮ್ಮ ಮನೆಮಾರುಗಳನ್ನು ಬಿಟ್ಟು ಎರಡನೇ ಕಡೆಗೆ ಹೊಟ್ಟೆ ಪಾಡಿನ ಲಿಕ್ಕೆ ಹೋಗಿದ್ದಾರೆ. ಈಗ ಸುಗ್ಗಿಯ ದಿವಸಗಳಿಂದ ಸಂಧ್ಯಾಕಾಲವು ಪ್ರಾಪ್ತವಾಗುತ್ತಲೇ ಮೋಡಗಟ್ಟಿದುದರಿಂದಲೂ ಮಧ್ಯಾಹ್ನದಲ್ಲಿ ಬಿಸಿಲು ಹೆಚ್ಚಾಗುತ್ತ ಹೋಗುವದರಿಂದಲೂ ಬದಾಮಿಯಲ್ಲಿ ಗುಂಡಗಳ ನೀರು ದಿನೇದಿನೇ ಕಡಿಮೆಯಾಗುತ್ತಿ. ಪಂಟಿಗಳಿಂದ ತರುವ ಸುದಿನವು ನಮಗೆ ಪ್ರಾಪ್ತವಾಗಿಸಿ ನೋಡಿರಿ ನಾವೇ ಧನ್ಯ ಭಾಗ್ಯರು! ಈ ಸ್ಥಿತಿಯನ್ನು ನೋಡಿ ಈಗ ಇನ್ನೊಂದು ಬಾವಿಯನ್ನು ಕಡಿಯಲಿಕ್ಕೆ ಸರಕಾರವರು ಪ್ರಾರಂಭಿಸಿದಾರೆ.

ಬದಾಮಿ ಹೊಂಡವು ಸಾಮಾನ್ಯವಲ್ಲ. ಅದು ಅಗಸ್ತ್ಯ ಋಷಿಗಳಿಂದ ನಿರ್ಮಿತವಾದುದರಿಂದ ಅದಕ್ಕೆ ಅಗಸ್ತ್ಯತೀರ್ಥವೆಂದು ಹೆಸರು ಬಿದ್ದಿದೆ. ಆ ಹೊಂಡದ ಪೂರ್ವಭಾಗದಲ್ಲಿ ಅಗಸ್ತ್ಯರ ಗುಹೆಯು ಇರುವದು. ಆ ಗುಹೆಯು ಯಾವಾಗಲೂ ಝಳಝಳ ವಿದ್ದು ಒಳಭಾಗದಲ್ಲಿ ಯಾರೋ ಕೂತಂತೆ ಕಾಣುವದು. ಅದನ್ನು ನೋಡಿ ಜನರು ಪರಮಾಶ್ಚರ್ಯ ಹೊಂದುವರು. ಅಲ್ಲಿ ಕೂತಂತೆ ಕಾಣುವರು ಅಗಸ್ತ್ಯ ಋಷಿಗಳೇ ಎಂದು ಅನುಭವಿಕರಾದ ಹಿರಿಯರು ಹೇಳುವರು. ಇದು ಸಟಿಯಲ್ಲಿ ದಿಟವಿರುವದು.

ಈ ಹೊಂಡದ ಪೂರ್ವಭಾಗದಲ್ಲಿ ಎಷ್ಟೋ ಪುರಾತನ ಗುಡಿಗಳಿರುವವು. ಅವುಗಳಲ್ಲಿ ಒಂದು ಗುಡಿಯು ಮುಳ್ಳುಗಳ್ಳಿಯಲ್ಲಿ ಹುಗಿದದ್ದರಿಂದ ಅದನ್ನು ಸ್ವಚ್ಛಮಾಡಿಸುವಬಗ್ಗೆ ಇಂಜನಿಯರ ಖಾತೆಯಿಂದ ಮುಳ್ಳುಗಳ್ಳಿ ತೆಗೆಯುವ ಸಲುವಾಗಿ ಎಷ್ಟೋ ಆಳಗಳನ್ನು ಹಚ್ಚಿ ಸ್ವಚ್ಛಮಾಡಿಸ ವಷ್ಟರಲ್ಲಿ ಆ ಗುಡಿಯೊಳಗಿನ ದೇವರ ಮೂರ್ತಿಯ ಮುಂದೆ ಒಂದು ತಗಡಿನ ಪೆಟ್ಟಿಗೆಯು ಇತ್ತು. ಅದನ್ನು ಆ ಜನರು ತೆಗೆದು ನೋಡಲು ಅದರಲ್ಲಿ ಹಿತ್ತಾಳಿಯ ಮತ್ತು ಕಲ್ಲಿನ ಪ್ರತಿಮೆಗಳು ಇದ್ದವೆಂದೂ ಅವೆಲ್ಲವುಗಳನ್ನು ವಿಜಾಪುರಕ್ಕೆ ಕಳಿಸಿದರೆಂದೂ ವಾರ್ತೆಯಿದೆ.

ಹೊಸ ಅನುಭವವು—ನೀರು ಇಲ್ಲದ ಸ್ಥಳದಲ್ಲಿ (ಬದಾಮಿ) ೩-೪ ದಿವಸ ಮೋಡ ಹಾಕಿದ್ದಕ್ಕಾಗಿ ನೀರು ಎಲ್ಲವೂ ಆಟ್ಟಿಸಿಕೊಂಡು ಎಷ್ಟೋ ಜನರ ಮತವಿದೆ.

ಬಾಗಲಕೋಟೆ—ಬನ್ನಿದಿನ್ನಿಯಲ್ಲಿ ನಳಗಳಿಂದ ಘಟಪ್ರಭಾ ನದಿಯ ನೀರು ಕಟ್ಟಿ (ಪಂಪಿಂಗ ಸ್ಟೇಶನ) ೧೦೦ ಎಕರೇ ಭೂಮಿಗೆ ನೀರನ್ನು ಯಾವಾಗಲೂ ಪೂರೈಸುವಹಾಗೆ ಸರಕಾರವು ಯೋಜಿಸಿದೆ. ಇದು ಯಶಸ್ವಿಯಾದರೆ, ಇದು ನದಿಯ ದಂಡೆಯ ಬೇರೆಸ್ಥಳಗಳಲ್ಲಿ ಈ ಏರ್ಪಾಡಾಗುವಂತೆ.

ಬೀಳಗಿ—ಗಲಗಲಿಯಲ್ಲಿ (ಪಂಪಿಂಗ ಸ್ಟೇಶನ) ಬೆಗಿಯುವ ನೀರಿನ ಯಂತ್ರಹಚ್ಚಿ ರೈತರಿಗೆ ಭೂಮಿಯ ಸಾಗುವಳಿಗೆ ನೀರನ್ನು ಪೂರೈಸುವ ವಿಚಾರ ನಡೆದಿದೆ. ಈ ಪೇಠೆಯ ೩ ಸಾವಿರ ಎಕರೆ ಭೂಮಿಗೆ ನೀರನ್ನು ಕೊಡುವ ವಿಚಾರ ನಡೆದಿದೆ ಯಂತೆ. ಗಲಗಲಿ, ಬೀಳಗಿ ಭಾಗದಲ್ಲಿ ಹಪ್ತೆ ಕೆಲವರಿಗೆ ತಹಕೂಬಿ ಸಿಕ್ಕಿದೆ ವಸೂಲಿಯೂ ಸಾಗಿದೆ.

ಮುದ್ದೇಬಿಹಾಳ ಬಾಗೇವಾಡಿ—ಈ ತಾಲೂಕಿನ ಸುದ್ದಿಗಾರರ ಪತ್ರಗಳು ಈವರೆಗೆ ನಮ್ಮ ಕೈಸೇರಿಲ್ಲ. ಮುಂದಿನ ವಾರದಿಂದ **ಬಾತ್ಮಿದಾರರು ಹೀಗೆ ಮಾಡರೆಂದು ನಮ್ಮ ವಿಶ್ವಾಸವಿದೆ.**

ಮೈಸೂರು ಸಂಸ್ಥಾನದ ವಕೀಲ ರಾಮಯ್ಯನವರ ಚರಿತ್ರೆ.

ನಾಯಕ ವೆಂಕಟಸುಬ್ಬಯ್ಯ ಎಂಬುವವರು, ಹೈದರಅಲ್ಲೀಖಾನ್ ಮತ್ತು ಟೀಪು ಸುಲ್ತಾನ್ ಇವರುಗಳು ಕರ್ನಾಟಕ ಸಿಂಹಾಸನಾರೂಢರಾಗಿ ರಾಜ್ಯಭಾರ ಮಾಡುತ್ತಿದ್ದಾಗ, ಅಮಾತ್ಯವರ್ಯ ಪೂರ್ಣಯ್ಯನವರ ವಿಶ್ವಾಸ ಪಾತ್ರರಾಗಿದ್ದುಕೊಂಡು ಪುಣೆ ಸಾತಾರೆ ಮುಂತಾದ ಸಂಸ್ಥಾನಗಳ ವಕಾಲತ್ತು ನಡೆಸಿ ಪ್ರಸಿದ್ಧ ಹೊಂದಿದರು. ೧೭೯೯ ನೇಯ ಇಸ್ವಿಯಲ್ಲಿ ಶ್ರೀರಂಗಪಟ್ಟಣವು ಬ್ರಿಟಿಷರ ಕೈವಶವಾದದ್ದು ಇತಿಹಾಸ ಪ್ರಸಿದ್ಧವಾದ ಸಂಗತಿಯಾಗಿದೆ. ಶ್ರೀರಂಗಪಟ್ಟಣವು ಬ್ರಿಟಿಷರಿಗೆ ಸೇರಿದಮೇಲೆ ಬ್ರಿಟಿಷ್ ಅಧಿಕಾರಿಗಳು ನಾಯಕ ವೆಂಕಟಸುಬ್ಬಯ್ಯನವರನ್ನೇ ತಮ್ಮ ಆಪ್ತರನ್ನಾಗಿಟ್ಟುಕೊಂಡು ಅವರಿಂದ ರಾಜಕೀಯ ಕೆಲಸಗಳಲ್ಲಿ ಬಹು ಪ್ರಯೋಜನ ಹೊಂದಿದರು. ೧೮೦೭ ನೇ ಫೇಬ್ರುವರಿ ೧೭ ನೇ ತಾ ನಲ್ಲಿ, ಆಗ ರೆಸಿಡೆಂಟರ ಗಿದ್ದ ಘನವನ್ನು ಹೊಂದಿದ ಕೋಲ್ ಸಾಹೇಬ ಬಹಾದ್ದೂರರವರು, ಮದ್ರಾಸು ಗವ್ನರ್‌ರವರ ಇಷ್ಟದಂತೆ, ನಾಯಕ ವೆಂಕಟಸುಬ್ಬಯ್ಯನವರಿಗೆ ಆಗಿನ ಕಾಲಕ್ಕೆ ತಕ್ಕಂತೆ ಮರ್ಯಾದೆ ಮಾಡುವ ಸಂದರ್ಭದಲ್ಲಿ ಒಂದು ಜೊತೆ ಜರತಾರೀ ಶಾಲು, ಒಂದು ಕಿನ್‌ಕಾಪು, ಒಂದು ಬಿಲ್ಲತ್ತು, ಒಂದು ಭಂಗಾರದ ಕೈಗಡಿಯಾರ, ಒಂದು ಜೊತೆ ಕುದುರೆ, ಒಂದು ಪದಕ ಈ ಬಹುಮಾನಗಳನ್ನು ದಯಪಾಲಿಸಿರುತ್ತಾರೆ.

ನಾಯಕ ವೆಂಕಟಸುಬ್ಬಯ್ಯನವರ ಮಗ ರಾಮಯ್ಯ (ವಕೀಲ ರಾಮಯ್ಯ) ಎಂಬುವನು, ಕೇವಲ ಚಿಕ್ಕ ವಯಸ್ಸಿನಿಂದಲೂ ತಂದೆಯೊಡನೆ ಕೆಲಸವಾಡುತ್ತ ಅಮಾತ್ಯ ಪೂರ್ಣಯ್ಯನವರ ಕಾಲದಲ್ಲೇ 'ನಾಯಕ' ಕೆಲಸವನ್ನು ಸಂಪಾದಿಸಿಕೊಂಡರು. ಈ ನಾಯಕ ರಾಮಯ್ಯನವರೇ ಮುಂದೆ ಹೆಸರುವಾಸಿ ಹೊಂದಿ ಮೈಸೂರು ದೊರೆಗಳಿಗೂ, ಬ್ರಿಟಿಷ್ ಸರಕಾರಕ್ಕೂ ಸ್ನೇಹ ಬೆಳೆಯಲು ಸಹಾಯಕರಾದರು. ಟಿಪೂ ಸುಲ್ತಾನರ ತರುವಾಯ ಮೈಸೂರು ಸಂಸ್ಥಾನದ ಆಡಳಿತವನ್ನು ವಹಿಸಿದ ಮಹಾ ಸ್ವಾಮಿಗಳವರಾದ ಮುಮ್ಮಡಿ ಶ್ರೀಕೃಷ್ಣರಾಜ ಸಾರ್ವಭೌಮರವರು ವಹಿಸಿಕೊಂಡಾಗ ಬ್ರಿಟಿಷ್ ಸರಕಾರದವರೊಡನೆ ಆದ ಹದಿನಾರು ಕಲಮುಗಳುಳ್ಳ ಕರಾರುನಾಮೆಯು ನಾಯಕ ರಾಮಯ್ಯನವರು ಬರೆದಿಟ್ಟಿರುವ ಡೈರೀಯಲ್ಲಿ ನಮೂದಾಗಿದೆ. ದಿವಾನ್ ಪೂರ್ಣಯ್ಯನವರಿಗೂ, ನಾಯಕ ರಾಮಯ್ಯನವರಿಗೂ ಬಹುಮಟ್ಟಿಗೆ ದಿನಂಪ್ರತಿ ನಡೆಯುತ್ತಿದ್ದ ಕಾಗದಪತ್ರಗಳಿಂದಲೂ—ಮುಖ್ಯವಾಗಿ ದಿವಾನ್ ಪೂರ್ಣಯ್ಯನವರ ನಿರೂಪಗಳಿಂದ-ರಾಮಯ್ಯನವರು 'ನಾಯಕ' ಎಂಬ ಹೆಸರಿಗೆ ತಕ್ಕಂತೆ ಮಹಾ ಸಾಹಸಿಯಾಗಿದ್ದರೆಂದೂ ತಿಳಿದು ಬರುತ್ತದೆ. ಅಹಮದ್ ನಗರವು ಬ್ರಿಟಿಷರ ವಶವಾದಾಗ ರಾಮಯ್ಯನವರು ಸ್ವತಃ ಮೈಸೂರು ಸೈನ್ಯವನ್ನು ತೆಗೆದುಕೊಂಡುಹೋಗಿ ಸಹಾಯ ಮಾಡಿರುತ್ತಾರೆ.

೧೮೦೪ ನೇಯ ಇಸವಿಯಿಂದ ಈಚೆಗೆ ಮೈಸೂರು ಸಂಸ್ಥಾನದ ಆಡಳಿತಗಳಲ್ಲಿ ಬ್ರಿಟಿಷ ಅಧಿಕಾರಿಗಳು ಹೆಚ್ಚು ಹೆಚ್ಚಾಗಿ ಬರಲು ಪ್ರಾರಂಭವಾಯಿತು. ಆಗ ದಿವಾನ್ ಪೂರ್ಣಯ್ಯನವರು ಬ್ರಿಟಿಷ್ ಸರದಾರರೊಡನೆ ಮೈಸೂರು ರಾಜ್ಯದ ಪರವಾಗಿ ಕೆಲಸಗಳನ್ನು ನಡೆಸಲು ರಾಮಯ್ಯನವರನ್ನೇ ಆರಿಸಿದರು. ಸರದಾರರೊಂದಿಗೆ ರಾಮಯ್ಯನವರು ಸಂಸ್ಥಾನವಾತ್ರವಲ್ಲದೆ ಪುಣೆ, ಸಾತಾರೆ, ಅಹಮದ್‌ನಗರ ಮುಂತಾದ ಸ್ಥಳಗಳಿಗೆ ಸಂಚಾರ ಹೋಗಿ, ಅವರಿಂದ ಬಹು ಮಾನ ಸನ್ಮಾನಗಳನ್ನು ಪಡೆದು, ಸಂದರ್ಭೋಚಿತವಾಗಿ ಮೈಸೂರು ರಾಜ್ಯಕ್ಕೆ ಅನುಕೂಲಿಸುವಂತೆಯೂ, ತೊಂದರೆ ಯುಂಟಾಗದಂತೆಯೂ ನಡೆದುಕೊಂಡು, ಸಲಹೆಗಳನ್ನು ಕೊಡುತ್ತ, ದಿವಾನ್ ಪೂರ್ಣಯ್ಯನವರಿಗೆ ಪ್ರತಿನಿತ್ಯವೂ ವರ್ತಮಾನ ತಿಳಿಸುತ್ತಿದ್ದರು. ಈ ವಿವರವೆಲ್ಲಾ ದಿವಾನ್ ಪೂರ್ಣಯ್ಯನವರು ಇವರಿಗೆ ಬರೆದಿರುವ ಅನೇಕ ನಿರೂಪಗಳಿಂದ ವ್ಯಕ್ತಪಡುತ್ತದೆ.

ಬ್ರಿಟಿಷ್ ಮತ್ತು ಮೈಸೂರು ಸೈನ್ಯಗಳ ಸಂಚಾರಕಾಲದಲ್ಲಿ ದಾರಿಯಲ್ಲಿ ಬೀಡು ಬಿಡತಕ್ಕ ಸ್ಥಳಗಳಲ್ಲಿ ಬೇಕಾಗುವ ಸೌಕರ್ಯಗಳನ್ನು ಒದಗಿಸುವುದೂ, ಮತ್ತು ಸೈನ್ಯದವರಿಂದ ಜನರಿಗೆ ಯಾವ ವಿಧವಾದ ತೊಂದರೆಯೂ ಉಂಟಾಗದಂತೆ ಏರ್ಪಡಿಸುವುದೂ ರಾಮಯ್ಯನವರ ಕೆಲಸವಾಗಿತ್ತು.

ದಿವಾನ್ ಪೂರ್ಣಯ್ಯನವರ ಮುಮ್ಮಡಿ ಶ್ರೀಕೃಷ್ಣರಾಜ ಸಾರ್ವಭೌಮರವರು ಸ್ವತಃ ರಾಜ್ಯಭಾರಮಾಡಲು ಉಪಕ್ರಮಿಸಿದಾಗ, ದಿವಾನ್ ಪೂರ್ಣಯ್ಯನವರು ರಾಮಯ್ಯನವರನ್ನು ಮಹಾಸ್ವಾಮಿಯವರ ಬಳಿ ಕರೆದುಕೊಂಡು ಹೋಗಿ, ಅವರ ರಾಜಭಕ್ತಿ ವಿಶ್ವಾಸಗಳನ್ನು ಅರಿಕೆಮಾಡಿ, ಸಮೀಪವರ್ತಿಯಾಗಿ ಮಾಡಿಕೊಳ್ಳಲು ಬೇಕಾದ ಎಲ್ಲ ಸುಗುಣಗಳೂ ರಾಮಯ್ಯನವರಲ್ಲಿ ಇವೆಯೆಂದು, ಬಹು ಮುಖ್ಯವಾದ ಕೆಲಸಗಳಲ್ಲಿ ಅವರನ್ನು ನೇಮಕ ಮಾಡಬೇಕೆಂದೂ ವಿಜ್ಞಾಪಿಸಿಕೊಂಡರು. ದೊರೆಗಳವರು ರಾಮಯ್ಯನವರ ಗುಣಾತಿಶಯಗಳನ್ನು ಕೇಳಿ ಸಂತೋಷಿಸಿ ಸಂಸ್ಥಾನಕ್ಕೆ ಕದೀಮನೆಂದೂ, ಸಂಸ್ಥಾನದ ವಕೀಲನೆಂದೂ ಬಿರುದುಕೊಟ್ಟು, ಬ್ರಿಟಿಷ್ ಸರದಾರರಲ್ಲಿ ಸಮಯೋಚಿತವಾಗಿ 'ಜವಾಬು ಸವಾಲು' ಮಾಡಲು ನೇಮಿಸಿದರು. ಆಗಿನಿಂದ ರಾಮಯ್ಯನವರು ದೊರೆಗಳವರಿಗೂ, ಬ್ರಿಟಿಷ್ ಅಧಿಕಾರಿಗಳಿಗೂ ಪರಸ್ಪರ ಸ್ನೇಹವು ದೃಢಮೂಲವಾಗುವಂತೆ ಪ್ರಯತ್ನಿಸಿ, ದೊರೆಗಳವರ ಮತ್ತು ಅಧಿಕಾರಿಗಳ ಮೆಚ್ಚುಗೆಯನ್ನು ಪಡೆದರು.

ರಾಜ್ಯದಲ್ಲಿ ಆಗಾಗ ಉಂಟಾಗುತ್ತಿದ್ದ ಜಾತಿಸಂಬಂಧವೇ ಮುಂತಾದ ಕಲಹಗಳಲ್ಲಿ ನ್ಯಾಯಕ್ಕೆ ತಕ್ಕಂತೆ ತೀರ್ಮಾನಮಾಡುವುದು, ತಾಲೂಕು ಅಮಲ್ದಾರರಮೇಲೆ ತನಿಖೆ ಮಾಡುವುದು, ಅತ್ರಮಗಳನ್ನು ಸರಿಪಡಿಸುವುದು ಇವೇ ಮೊದಲಾದ ಮುಖ್ಯ ಕೆಲಸಗಳಲ್ಲಿ ರಾಮಯ್ಯನವರನ್ನು ನೇಮಿಸಿ ದೊರೆಗಳವರು ರಾಮಯ್ಯನವರ ಗುಣಗಳನ್ನು ವಿಶದವಾಗಿ ತಿಳಿದುಕೊಂಡರು.

ಬ್ರಿಟಿಷ್ ಆಫೀಸರುಗಳಲ್ಲಿ ರೆಸಿಡೆಂಟರೇ ಮೊದಲಾದ ಮುಖ್ಯ ಅಧಿಕಾರಿಗಳು ಇವರ ಶಕ್ತಿ, ಸಾಹಸ ಮತ್ತು ಗುಣಗಳನ್ನು ಮೆಚ್ಚಿ, ಜೋಡುಕುದುರೆ, ಕೆಂಪುಬಾವುಟ, ಶಾಲುಜೋಡಿ ಮೊದಲಾದ ಅನೇಕ ಬಹುಮಾನಗಳನ್ನು ಕೊಟ್ಟಿರುತ್ತಾರೆ ಅಲ್ಲದೆ ಇವರ ವಿಷಯವಾಗಿ ಉತ್ತಮವಾದ ಸರ್ಟಿಫಿಕೇಟುಗಳು ಕೊಟ್ಟಿರುತ್ತಾರೆ. ಇವರು ಮಾಡಿದತಕ್ಕ ಎಲ್ಲಾ ಸಾಹಸ ಕಾರ್ಯಗಳನ್ನೂ ಸಮರ್ಥಿಸಿ, ತಮ್ಮ ಪವಿತ್ರವಾದ ಮೆಚ್ಚುಗೆಯನ್ನು ವ್ಯಕ್ತಪಡಿಸಿ, **ಆಳಿದ ಮಹಾಸ್ವಾಮಿಯವರಾದ ಮುಮ್ಮಡಿ ಶ್ರೀಕೃಷ್ಣರಾಜ ಸಾರ್ವಭೌಮರವರು ತಾ॥ ೨೭-೪-೧೮೧೩ ರಲ್ಲಿ "ನಿನ್ನ ಪುತ್ರಪೌತ್ರ ಪಾರಂಪರ್ಯವಾಗಿ ನಮ್ಮ ದವಲತ್ತಿನಲ್ಲಿ ಶಾಶ್ವತವಾಗಿ ಕಾಪಾಡಿಕೊಂಡು ಬರುತ್ತೇವೆ"** ಎಂಬ ಆಶ್ವಾಸನವನ್ನು **ತಮ್ಮ ಸ್ವಹಸ್ತಾಕ್ಷರದಿಂದ** ಬರೆದು ದಯಪಾಲಿಸಿರುತ್ತಾರೆ.

ಕೆಲವು ರಾಜ್ಯಾಡಳಿತಗಳಲ್ಲಿ ಮುಮ್ಮಡಿ ಶ್ರೀಕೃಷ್ಣರಾಜ ಸಾರ್ವಭೌಮರಿಗೂ, ಬ್ರಿಟಿಷ್ ಸರ್ಕಾರಕ್ಕೂ ಭಿನ್ನಾಭಿಪ್ರಾಯ

ಗಳು ಕಂಡುಬಂದಾಗ, ವಕೀಲ ರಾಮಯ್ಯನವರು ಮೈಸೂರು ದೊರೆಗಳವರ ಪರವಾಗಿ ನಡೆಸಿರುವ ಕಾರ್ಯಕ್ರಮಗಳು, ಬ್ರಿಟಿಷ್ ಸರದಾರರಿಗೂ ನಡೆಸಿರುವ ಕಾಗದಪತ್ರಗಳ ವಿಷಯದಲ್ಲಿ ವಕೀಲ ರಾಮಯ್ಯನವರು ಬರೆದಿಟ್ಟಿರುವ ೧೮೧೩ ನೇಯ ಇಸವಿಯ ಜವಾಬು ಸವಾಲಿನ ಡೈರಿಯನ್ನೂ, ೧೮೦೩ ನೇಯ ಇಸವಿಯಿಂದ ೧೮೩೩ ನೇಯ ಇಸವಿಯವರೆಗೆ ದೊರೆಗಳವರು ವಕೀಲ ರಾಮಯ್ಯನವರಿಗೆ ಬರೆದಿರುವ ಅನೇಕ ಸ್ವಹಸ್ತಾಕ್ಷರಗಳ ನಿರೂಪಗಳನ್ನೂ ನೋಡುವುದರಿಂದ ವ್ಯಕ್ತವಾಗುತ್ತದೆ

ಬ್ರಿಟಿಷ್ ಸರಕಾರದವರು ೧೮೩೧ ನೇಯ ಇಸವಿಯಲ್ಲಿ ತಾವೇ ಮೈಸೂರು ರಾಜ್ಯಭಾರವನ್ನು ವಹಿಸಿಕೊಂಡ ಸಂದರ್ಭದಲ್ಲಿ ತಾ ೧೦ ೧೦ ೧೮೩೧ ರಲ್ಲಿ ಮಹಾಸ್ವಾಮಿಯವರು ವಕೀಲರ ಸಲಹೆಗಳನ್ನೂ ಆಪ್ತವಾಕ್ಯಗಳನ್ನೂ ತಳ್ಳಿದು, ಆದಿಯಿಂದಲೂ ರಾಜನಿಷ್ಠನಾಗಿಯೂ, ವಿಶ್ವಾಸಿಯಾಗಿಯೂ ಇರತಕ್ಕವನು ಕ್ಲೋಸ್ ಎಂಬ ದುಸ್ವಾಭಿಪ್ರಾಯವನ್ನು ತಿಳಿಯಪಡಿಸಿರುತ್ತಾರೆ.

ಬ್ರಿಟಿಷ್ ಸರಕಾರದವರು ರಾಜ್ಯಭಾರವನ್ನು ವಹಿಸಿಕೊಂಡ ನಂತರ ಕಮೀಟಿಯನ್ನು ಏರ್ಪಡಿಸಿ. ತಾ|| ೨೨-೬ ೧೮೩೨ ರಲ್ಲಿ ವಕೀಲ ರಾಮಯ್ಯನವರ ಕೈಫೀತು ತೆಗೆದುಕೊಂಡ ಸಂದರ್ಭದಲ್ಲಿಯೂ, ಮೈಸೂರು ರಾಜಮನೆತನಕ್ಕೆ ಉಪಯುಕ್ತವಾಗುವಂತೆ ಎಲ್ಲ ಸಂಗತಿಗಳನ್ನೂ ತಿಳಿಯಪಡಿಸಿರುತ್ತಾರೆ. ಅಲ್ಲದೆ ವಕೀಲ ರಾಮಯ್ಯನವರು ಬ್ರಿಟಿಷ್ ಸರಕಾರದವರಿಗೆ ತಾ। ೯ ೫ ೧೮೩೩ ರಲ್ಲಿ ಬರೆದಿರುವ ವಿಜ್ಞಾಪನೆ ಪತ್ರಿಕೆಯಲ್ಲಿ, ಆದಿಯಿಂದ ನಡೆದ ರಾಜಕಳಿತಗಳ ವಿಷಯಗಳನ್ನೆಲ್ಲಾ ನಮೂದಿಸಿ, ತಮ್ಮ ಮೂವತ್ತೈದು ವರ್ಷಗಳ ರಾಜಕಾರ್ಯಾನುಭವದಿಂದ ತಮಗೆ ತೋಚುವಂತಹ ಸಲಹೆಗಳನ್ನೆಲ್ಲ ತಿಳಿಸಿ, ಯಜಮಾನರನ್ನು ಕೀರ್ತಿಯನ್ನು ಸ್ಥಿರಪಡಿಸಬೇಕೆಂದು ಅರಿಕೆ ಮಾಡಿಕೊಂಡಿರುತ್ತಾರೆ.

ಮೇಲೆ ತಿಳಿಸಿರುವಂತೆ ೧೭೯೯ ರಿಂದ ೧೮೩೩ ರವರೆಗೆ ೩೪ ವರ್ಷಗಳು ರಾಜಕಾರ್ಯದಲ್ಲಿ ನಿರತರಾಗಿದ್ದುಕೊಂಡು ಯಶಸ್ವಿಗಳಾದ ಸಂಸ್ಥಾನದ ವಕೀಲ ರಾಮಯ್ಯನವರ ಚರಿತ್ರೆಯನ್ನು ವಿಶದವಾಗಿ ಬರೆಯಲು ಬೇಕಾದಷ್ಟು ಅನುಕೂಲಗಳು ಇವೆ. ವಕೀಲ ರಾಮಯ್ಯನವರ ಖಾಸಾ ವಂಶಸ್ಥರಾದ, ಅವರ ಮುಮ್ಮಗ ತುಮಕೂರು ಜಿಲ್ಲಾ ತುಮಕೂರು ತಾಲ್ಲೂಕು ಹೆಬ್ಬೂರಿಗೆ ಸೇರಿದ ಗರುಗದ ಕುಪ್ಪೆಗ್ರಾಮದಲ್ಲಿರುವ ಮ|| ರಾ|| ಹೆಚ್. ಹನುಮಂತರಾಯರಲ್ಲಿ ಇರುವ ಅಸಲು ಕಾಗದಗಳನ್ನೂ ಡೈರಿಗಳನ್ನೂ ನೋಡುವುದರಿಂದ ಎಲ್ಲ ವಿಚಾರವೂ ವ್ಯಕ್ತವಾಗುವುದು. ಈ ಕಾಗದಗಳನ್ನೂ ಆಳಿದ ಮಹಾಸ್ವಾಮಿಯವರಾದ ಮುಮ್ಮಡಿ ಶ್ರೀಕೃಷ್ಣರಾಜ ಸಾರ್ವಭೌಮರವರು ದಯಪಾಲಿಸಿರುವ ವಾಗ್ದಾನಪತ್ರವನ್ನೂ ದಯಾಳುಗಳಾದ, ಸತ್ಯಸಂಕಲ್ಪರಾದ ಶ್ರೀಮನ್ಮಹಾರಾಜರವರು ಪರಾಂಬರಿಸಿ, ತಮ್ಮ ದಿವ್ಯವಾದ ಚಿತ್ತಕ್ಕೆ ತಂದುಕೊಂಡು, ಈಗ ಕೇವಲ ದೌರ್ಭಾಗ್ಯದೆಸೆಯಲ್ಲಿರುವ ಪ್ರಸಿದ್ಧರಾದ ವಕೀಲ ರಾಮಯ್ಯನವರ ವಂಶವನ್ನು ಕಾಪಾಡಿ, ತನ್ಮೂಲಕ ಆಳಿದ ಮಹಾಸ್ವಾಮಿಯವರ ವಾಗ್ದಾನವನ್ನು ನಡೆಸಿಕೊಟ್ಟು ಕೀರ್ತಿಹೊಂದಬೇಕು

ಅ. ನರಸಿಂಹಮೂರ್ತಿ.

ಜಾಹೀರ ನೋಟೀಸ.

ಈ ಮೂಲಕ ಕೆಳಗೆ ಸಹಿ ಮಾಡುವವಳು ಯಾವತ್ತು ಜನರಿಗೆ ತಿಳಿಸುವದೇನಂದರೆ --

ನನ್ನ ಗಂಡಾ ರಾಚಪ್ಪಾ ತಂದೆ ಗುರುಬಸಪ್ಪಾ ಮುರನಾಳ ಸಾ। ಜಾನಮಟ್ಟಿ ಪೇರಾ ಬೀಳಗಿ ತಾಲ್ಲೂಕ ಬಾಗಲಕೋಟ ಈತನು ಈಗ ೧-೧½ ವರ್ಷಗಳಾಗಾಯಿತು ದುರ್ವ್ಯಸನಕ್ಕೆ ಬಿದ್ದು ನನ್ನನ್ನು ಹೊಡಿಯುವದು ಬೈಯುವದು ಮಾಡುತಿದ್ದಾ. ಮತ್ತು ಈಗ ಆರು ಏಳು ತಿಂಗಳಹಿಂದೆ ವಿನಾಕಾರಣಾ ದುಷ್ಟಜನರ ಉಪದೇಶದಿಂದ ನನ್ನನ್ನು ಬಡಿದು ಹೊಡೆದು ನನ್ನ ನಾಲ್ಕು ಜನ ಅಲ್ಪವಯದ ಮಕ್ಕಳು (೨ ಗಂಡು ೨ ಹೆಣ್ಣು) ಸಹಿತ ಹೊರಗೆ ಹಾಕಿದಾಗಿನಿಂದಾ ನನ್ನ ಹುಡುಗರ ಸಹಿತವಾಗಿ ನಮ್ಮ ತಂದೆಯಹತ್ತರಾ ಇರುತೇವೆ. ಈಗ ಸದರಿ ನನ್ನ ಗಂಡನು ನನಗೆ ವ ನನ್ನ ಮಕ್ಕಳಿಗೆ ನುಕ್ಸಾನ ಮಾಡುವ ಯಿರಾದೆಯಿಂದಾ ಮತ್ತು ಏನೂ ಕಾಯದೇಶಿರ ಕಾರಣವಿಲ್ಲದೆ ತನ್ನ ವಹಿವಾಟಿಯಲ್ಲಿರುವ ಯಾವತ್ತು ಪಿತ್ರಾರ್ಜಿತ ಸ್ಥಾವರ ಆಸ್ತಿಯನ್ನು ವಿಲೆವಾಟ ಮಾಡತಕ್ಕವನಿದ್ದಾನೆಂದು ತಿಳಿದದೆ. ಆದರೆ ಈರೀತಿ ವಿಲೆವಾಟ ಮಾಡಲಿಕ್ಕೆ ಅವನಿಗೆ ಅಧಿಕಾರವಿಲ್ಲ, ಮತ್ತು ಯಾರೂ ಸದರಿಯವನ ಆಸ್ತಿಯನ್ನು ಖರೀದಿ ವತ್ತಿ ವಗೈರೆ ತಗೊಬಾರದು. ಒಂದು ವೇಳೆ ತಗೊಂಡರೆ ನಾನು ವ ನನ್ನ ಅಲ್ಪವಯ ಮಕ್ಕಳು ಅದಕ್ಕೆ ಬದ್ಧರಿಲ್ಲಾ. ಅಂತಾ ಕೊಟ್ಟ ಜಾಹೀರ ನೋಟಿಸು ತಾ|| ೧೦-೩-೩೭

() ಈ ಯಡಗೈ ಹೆಬ್ಬೆಟ್ಟಿನ ಗುರ್ತು ಪರವ್ವಾ ಗಂಡಾ ರಾಚಪ್ಪಾ ಯೇದನವರ ಇವಳದು ಅದೆ.

ಜಾಹೀರ ನೋಟೀಸು.

ಈ ನೋಟಿಸಿನಿಂದಾ ಯಾವತ್ತು ಜನರಿಗೆ ತಿಳಿಸುವದೇನಂದ್ರೆ-

ಡಿ|| ವಿಜಾಪೂರ ಸ|| ಡಿ|| ಹುನಗುಂದ ತಾಲೂಕ ಪೈಕಿ ಹಿರೇ ಮಳಗಾಂವಿ ಗ್ರಾಮದಲ್ಲಿ ಇರುವ ನಮ್ಮ ಮನಿ ಹೊಲಾ ಇಸ್ಟೇಟನ್ನು ನನ್ನ ತಂದೆಯಾದ ದೊಡ ಬಂಡೆಪ್ಪಾ ತಂದಿ ಸಂಗಪ್ಪಾ ಭದ್ರಶೆಟ್ಟಿ ಈತನು, ತನ್ನ ಎರಡನೇ ಹೆಂಡತಿಯ ಕೂಡ ಮಿಲಾಫೆಯಾಗಿ, ನನ್ನನ್ನು ಮುಳುಗಿಸುವ ಇರಾದೆಯಿಂದಾ, ಏನೂ ಕಾರಣ ವಿಲ್ಲದೇ ವಿಲೆವಾಟಮಾಡುವವನಿದ್ದಾನೆ. ಸದರ ಇಸ್ಟೇಟು ಪೂರ್ವಾರ್ಜಿತ ಮಿಳಕತ ಇದ್ದು ನನ್ನ ತಂದಿಗೆ ಅದನ್ನು ಈ ರಿತಿ ವಿಲೆವಾಟ ಮಾಡಲಿಕ್ಕೆ ಕಾಯದೇಶೀರ ಅಧಿಕಾರವಿಲ್ಲಾ. ಯಾರಾದರೂ ಸದರಿಯವನಿಗೆ ಸಾಲಾಕೊಟ್ಟರೆ, ಅಥವಾ ಸದರ ಮಿಳಕತು ಖರೀದಿ, ವತ್ತೀ, ಬಕ್ಷೀಸ, ಅಗರ ಮತ್ಯಾವ ರೀತಿಯಿಂದಾದರೂ ತೆಗೆದುಕೊಂಡರೆ ಅದು ನನ್ನ ಮೇಲೆ ಬದ್ಧ ಇರುವದಿಲ್ಲಾ. ನನ್ನ ಮಲತಾಯಿಯು ನನ್ನ ಜೀವಕ್ಕೆ ಅಪಾಯಮಾಡುವ ಪ್ರಸಂಗವಿದ್ದದ್ದರಿಂದಾ ನಾನು ನನ್ನ ತಂದಿಯ ಮನಿಯನ್ನು ಬಿಟ್ಟು ನನ್ನ ತಕ್ಕನಾದ ಬಸಪ್ಪಾ ತಂದಿ ಮಲ್ಲಪ್ಪಾ ಭದ್ರಶೆಟ್ಟಿ ಸಾ|| ಹಿರೇಮಳಗಾಂವಿ ಈತನ ಮನಿಯಲ್ಲಿ ಇರುತ್ತೇನೆ. ಆತನೇ ನನ್ನನ್ನು ಪಾಲನ ಮಾಡುತ್ತಾನೆ. ಅಂತಾ ಬರೆದ ಜಾಹೀರ ನೋಟೀಸ ಸಹಿ

ತಾರೀಖು ೫-೩ ೧೯೩೭

ಸಂಗಪ್ಪಾ ತಂದಿ ದೊಡ ಬಂಡೆಪ್ಪಾ ಭದ್ರಶೆಟ್ಟಿ ಸಾ|| ಹಿರೇ ಮಳಗಾಂವಿ, ತಾ|| ಹುನಗುಂದ ಆ. ಸಾ. ಬಸಪ್ಪಾ ಮಲ್ಲಪ್ಪಾ ಭದ್ರಶೆಟ್ಟಿ ಸಾ। ಹಿರೇಮಳಗಾಂವಿ.

ಜೀವ ವಿಮೆಯ ಕಾರ್ಯದಲ್ಲಿ

ಅದ್ಭುತವಾದ ಜಯವು !

ಯಾಕಂದರೆ ತನ್ನ ೧೯ ನೇ ವರ್ಷದಲ್ಲಿಯೇ ಸಾವಿರಕ್ಕೆ ೨೦ ರೂಪಾಯಿ ಲಾಭ ಹಂಚಿದೆ

ದಿ ಜನರಲ್ ಅಶ್ಯೂರನ್ಸ

ಸೊಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮೆ ಕಂಪನಿಗಳನ್ನು ಹಿಂದೆ ಒಗೆದು ಮುಂದೆ ಬಂದಿದೆ. ಇದರಿಂದ ಇದರಲ್ಲಿಯ ಕರ್ತೃತ್ವ ಶಕ್ತಿಯು ವ್ಯಕ್ತವಾಗುವದಲ್ಲದೇ, ಇದಕ್ಕಿಂತಲೂ ಹೆಚ್ಚಿನ ಪ್ರಗತಿಪರವಾದ ಕಂಪನಿಯೇ ಇಲ್ಲವೆಂಬುದು ಸಿದ್ಧವಾಗುತ್ತದೆ.

ಸುಲಭ ಕಂತು! ಸಾಕಷ್ಟು ಸೌಕರ್ಯ! ಹೆಚ್ಚಾಗಿ ಲಾಭ!!!

ವಿಮೆಯ ಹಣ ಒಂದು ಕೋಟಿ! ೨೧ ತಿಂಗಳಲ್ಲಿ ಹೆಚ್ಚಾಗಿ ಉಳಿತಾಯವಾದದ್ದು ರೂ ೧,೦೯,೦೦೦

ಏಜಂಟರು ಬೇಕು! ಧಾರಾಳವಾದ ಕಮಿಶನ್!

ವಿಳಾಸ:— ಎಸ್. ಕಬ್ಬೂರ ಜಿ ಎ ಎಫ್. ಎಸ್ ಎಸ್. (ಲಂಡನ್) ಆಸಿಸ್ಟೆಂಟ ಮ್ಯಾನೇಜರ (ಡೆಪ್ಯುಟೇಶನ್‌ದ ಮೇಲೆ) ಜನರಲ್ ಆಶ್ಯೂರನ್ಸ ಸೊಸಾಯಿಟಿ ಲಿ ಅಜಮೀರ ಅಥವಾ ಬ್ರ್ಯಾಂಚ ಸೆಕ್ರೆಟರಿ. ಮಿಂಟೋ ಹಾಸ್ಪಿಟಲ್‌ದ ಎದುರು ಬೆಂಗಳೂರು;

HEAD OFFICE GENERAL ASSURANCE SOCIETY AJMER

|| ಮಹಾಲಕ್ಷ್ಮೀ ಪ್ರಸಾದಿಕ ||

ಹೊಂಬಳ ಸಂಗೀತ ನಾಟಕ ಮಂಡಳಿ.

ಇವರು, ಇದೇ ಫಾಲ್ಗುಣ ಬಹುಳ ೫ ಕ್ಕೆ

ಯಮನೂರ ಜಾತ್ರೆಗೆ

ಬರುವರು!

ಮತ್ತು, ತಮ್ಮ ಸ್ವಂತ ಭವ್ಯ ಥಿಯೇಟರಿನಲ್ಲಿ ಹೊಸದಾಗಿ ಸಿದ್ಧಪಡಿಸಿದ ತಮ್ಮ ಲೋಕಪ್ರಿಯವಾದ ಆಖ್ಯಾನಗಳನ್ನು, ಹೊಸ ಹುರುಪಿನ ನಜರ ಒಳ್ಳೇ ಮನೋಹರವಾದ ಅಭಿನಯ ಹಾಗೂ ಗಾಯನಗಳೊಂದಿಗೆ, ಪ್ರಾರಂಭಿಸುವರು. ಯಮನೂರಲ್ಲಿ ಕೂಡುವ ಪ್ರೇಕ್ಷಕರು ಈ ಸುಸಂಧಿಯನ್ನು ಕಳೆದುಕೊಳ್ಳಬಾರದು.

ಮ್ಯಾನೇಜರ.

ಶ್ರೀಕೃಷ್ಣ ಸಂಗೀತ ಕನ್ನಡ ನಾಟಕ ಮಂಡಲವು.

ತಾಜ ನಾಟಕಶಾಲೆಯ ಮನೆ ವೆಂಕಟಪೇಟೆ,

ಬಾಗಲಕೋಟ

ಗುಳೇದಗುಡ್ಡ ಶ್ರೀಮತಿ ಗಂಗೂಬಾಯಿಯವರ ಈ ಹೊಸ ನಾಟಕ ಕಂಪನಿಯಲ್ಲಿ ಅಭಿನಯಿಸಲು ಸುಸ್ವರೂಪ, ಸುಶೀಲ, ಸುಶಿಕ್ಷಿತ ಹಾಗೂ ಹಾಡು ಬಲ್ಲ ನಾಟ್ಯಕಲಾಭಿಜ್ಞರಾದ ಬಾಲ ಬಾಲಿಕೆಯರೂ, ಸ್ತ್ರೀ-ಪುರುಷರೂ

ಬೇಕಾಗಿದ್ದಾರೆ.

ಅದೇ ಪ್ರಕಾರ ಪಟ್ಟಿಗೆ ಹಾಗೂ ತಬಲಾ ಬಾರಿಸುವದರಲ್ಲಿ ನಿಪುಣರಾದವರೂ ಬೇಕಾಗಿದ್ದಾರೆ. ಇಚ್ಛೆಯಿದ್ದವರು ಖಾಸಾ ಸ್ವತಃ ಇಲ್ಲವೆ ಪತ್ರದ್ವಾರದಿಂದ ವಿಚಾರಿಸಿಕೊಳ್ಳಬೇಕು

—ವ್ಯವಸ್ಥಾಪಕ.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶೀ ಪದ್ಧತಿಯಿಂದ ತಯಾರಿಸಲ್ಪಟ್ಟಿವೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಣೀ, ಜೀರ್ಣಜ್ವರ, ಅಗ್ನಿಮಾಂದ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶ ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ಶಕ್ತ್ಯಂತು ಖಾತ್ರಿಮಾಡಿಕೊಳ್ಳಬಹುದು) ಇದರಿಂದ ವೈಯ್ಯರಿಂದ ಗರ್ಮಿಯ ಎಲ್ಲಾ ತರದ ವಿಕಾರಗಳು ನಾಶವಾಗಿ ಇವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೇ ಯೋಗ್ಯತೆಯು ಸೇವಿಸಿ ನೋಡಿದರೆ ಗೊತ್ತಾಗುವದು.

೧ ಡಬ್ಬಿಗೆ ಕಿಮ್ಮತ್ತು ೦-೧೨-೦, ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯು ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸ:—

ಎಸ್. ಬಿ ಕದಮ್ ಮತ್ತು ಸನ್ಸ್

ಮು. ಪೋಸ್ಟ ನಿಪ್ಪಾಣಿ (ಜಿ ಬೆಳಗಾಂವ)

ಕಿರ್ಲೋಸ್ಕರ

ಕಬ್ಬಿಣ ನೇಗಿಲುಗಳು.

ಹುಗ್ಗಾಮು (ಸುಗ್ಗಿ) ಸಮಾಪ್ತಿಸಿತು. ಈ ವರ್ಷ ಮಳೆ ಬೆಳೆ ಚನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವುದು. ಕಿರ್ಲೋಸ್ಕರ ನೇಗಿಲು ನಂ ೧೧, ೯, ೮ ಇವು ಒಕ್ಕಲಿಗರಿಗೆ ಬಹಳ ಉಪಯೋಗ ಬೀಳುತ್ತವೆ ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುತ್ತವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್	ಕಿರ್ಲೋಸ್ಕರವಾಡಿ ಜಿಲ್ಲೆ ಸಾತಾರೆ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗ್ರಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯ ಬೇಕೆಂದು ನಿರ್ಣಯವಾಯಿತು:—

(೧) ಎಲ್ ಬಿ ಸಿ. ನಂ ೨೭೬೮ ಸಯ್ಯದ ಅಲ್ಲಿ ಅಸಗರ ಬಿಲ್‌ಗ್ರಾಮಿ ಸುಪರಿಟೆಂಡೆಂಟ್ ಸೆಕ್ರೆಟರಿಯೆಟ್ ಹೈದರಾಬಾದ ಡೆಕ್ಕನ್ನ ರೂ ೧೦೦೦

(೨) ಎಲ್. ಬಿ. ಸಿ ನಂ ೧೯೬೨ ನಾರಾಯಣ ವಿಶ್ವನಾಥ ಲೋಣಕರ ಕೇರ್ ಆಫ್ ಡಿ ಈ. ಪುರಾಣಿಕ ೧೦೭ ನಿಹಾಲಪುರ ಇಂದೂರ ೧೦೦೦

(೩) ಎಲ್ ಬಿ ಸಿ. ನಂ ೩೪೧ ರಾಮಚಂದ್ರ ಅನಂತ ಶಿರೋಳಿ. ಡಿವಿಜನಲ್ ಫಾರೆಸ್ಟ ಆಫೀಸರ ಧಕ್ಕೂರಾ. ಪಶ್ಚಿಮಖಾನದೇಶ ರೂ. ೮೦೦

(೪) ಬಾಂಡ ನಂಬರು ೭೫೦೭ ಕೇ ಜಿ ಫರ್ನಾಂಡೋ ವ್ಯಾಪಾರಸ್ಥ ಬ್ರಿಕ್‌ಸಾಯಿಡ ಸಿಲೋನ, ಕೋಲಂಬೋ. ರೂ ೧೦೦೦

(೫) ಬಾಂಡ ನಂಬರು ೧೯೭೩೪ ಎಸ್. ಜಿ ಚವರೆ ಅಸಿಸ್ಟಂಟ ಸ್ಟೇಶನ್ ಮಾಸ್ತರ ತೆಲಗಿ ಜಿಲ್ಲಾ ವಿಜಾಪುರ ರೂ ೧೦೦೦ — — — **ಬಿ. ಎಸ್. ಆರಾಧ್ಯ**

ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ)

ನೋಟೀಸು.

ರಾ ರಾ ಲಚ್ಚಿರಾಮ ಪ ಪಾಂಡೆ ಮು|| ಹೊಳೆಆಲೂರ ಇವರಿಗೆ—

ಚಂದ್ರಭಾನ ಎಸ್ ಪಾಂಡೆ ಇವರು ಈ ನೋಟೀಸಿನಿಂದಾ ತಿಳಿಸುವದೇನಂದರೆ ಡಿ|| ಧಾರವಾಡ ಸ|| ಡಿ|| ರೋಣ ತಾಲ್ಲೂಕ ಪೈಕಿ ಇನಾಂ ಗ್ರಾಮ ಹೊಳೆಆಲೂರಲ್ಲಿರೋ ಮನಿ ಚಕಬಂದಿ ಪಶ್ಚಿಮಕ್ಕೆ ಹೊಳೆಯಪ್ಪಾ ಶಿರಬಡಗಿ ಈತನ ಖುಲ್ಲಾ ಜಾಗಾ ದಕ್ಷಿಣಕ್ಕೆ ಪರಸಪ್ಪಾ ಹುಡೆದ ಈತನ ಮನಿ ಉತ್ತರಕ್ಕೆ ರಾಜಯ್ಯನವರ ಮಠ ಪೂರ್ವಕ್ಕೆ ಸರಕಾರಿ ರಸ್ತೆ ಈ ಮಧ್ಯೇ ಇರುವ ಮನಿ ಹಾಗೂ ಖುಲ್ಲಾ ಜಾಗಾ ಸಹಿತಾ ನನ್ನ ಮಾಲ್ಕಿದು ಇದ್ದು ಸದರೀ ಮನೆಯಬಗ್ಗೆ ನೀವು ನನ್ನನ್ನು ಪಕ್ಷಗಾರನನ್ನಾಗಿ ಮಾಡದೇ ಏನೋ ಒಂದು ದಾವಾ ತಂದು ಕಬ್ಜಾ ತಗೊಂಡಿರುತ್ತೀರಿ ಆದ್ರೆ ನಾನು ಆಬಗ್ಗೆ ಯೋಗ್ಯ ದಾವಾ ನಡೆಸುವವನು ಇದ್ದೇನೆ. ಮತ್ತು ನೀವು ಸದರೀ ಮನೆಯನ್ನು ಗಹಾಣ ಬಕ್ಷೀಸ ಅಗರ ಖರೀದಿ ಅಥವಾ ಯಾವದೇ ರೀತಿಯಿಂದಾ ವಿಲ್ಹೇವಾಟ ಮಾಡಿದಲ್ಲಿ ನನಗೆ ಆಗೋ ಲುಕ್ಸಾನಿಗೆ ನೀವೇ ಜವಾಬದಾರರು ಇರುತ್ತೀರಿ. ಮತ್ತು ಈಬಗ್ಗೆ ನಾನು ಫೌಜದಾರಿಯಲ್ಲಿ ಅಗರ ದಿವಾಣಿಯಲ್ಲಿ ಕೇಸು ನಡೆಸುವವನಿದ್ದೇನೆ. ವ ಈಬಗ್ಗೆ ಆಗೋ ಖರ್ಚಿಗೆ ನೀವೇ ಜವಾಬದಾರರು ಆಗುವಿರಿ ತಿಳಿಯುವದು ಅಂತಾ ಬರಕೊಟ್ಟ ನೋಟೀಸ ಸಹಿ ತಾ|| ೫-೩-೧೯೨೭ ಇಸ್ವಿ.

Bagalkot 5-3-27	Sd/. C. S, Pande.

ಜಾಹೀರ ನೋಟೀಸು.

ನಾನು ಚಂದ್ರಭಾನ ಎಸ್. ಪಾಂಡೆ ಮು|| ಬಾಗಲಕೋಟೆ ಈ ನೋಟೀಸಿನಿಂದಾ ತಿಳಿಸುವದೇನಂದರೆ ಡಿ|| ಧಾರವಾಡ ಸ|| ಡಿ|| ರೋಣ ತಾಲ್ಲೂಕ ಪೈಕಿ ಇನಾಂ ಗ್ರಾಮ ಹೊಳೆಆಲೂರಲ್ಲಿ ಮನಿಯ ವ ಖುಲ್ಲಾ ಜಾಗಾ ಇದರ ಚಕಬಂದಿ ಪಶ್ಚಿಮಕ್ಕೆ ಹೊಳಿಯಪ್ಪಾ ಶಿರಬಡಗಿ ಈತನ ಖುಲ್ಲಾ ಜಾಗಾ ದಕ್ಷಿಣಕ್ಕೆ ಪರಸಪ್ಪಾ ಹುಡೇದ ಈತನ ಮನಿ ಉತ್ತರಕ್ಕೆ ರಾಜಯ್ಯನವರ ಮಠ ಪೂರ್ವಕ್ಕೆ ಸರಕಾರಿ ರಸ್ತೆ ಈ ಚಕಬಂದಿಯಲ್ಲಿರೋ ಮನಿ ಹಾಗೂ ಖುಲ್ಲಾ ಜಾಗಾ ನನ್ನ ಮಾಲ್ಕಿದು ಇದ್ದು ಸದರೀ ಮನಿಯನ್ನು ಲಚ್ಚಿರಾಮ ಪ. ಪಾಂಡೆ ಈತನು ನನ್ನನ್ನು ಪಕ್ಷಗಾರನನ್ನಾಗಿ ಮಾಡದೇ ಏನೋ ಒಂದು ದಾವಾ ಮಾಡಿ ಕಬ್ಜಾ ತಗೊಂಡಿರುತ್ತಾನೆ. ಆದರೆ ನಾನು ಈಬಗ್ಗೆ ಯೋಗ್ಯ ದಾವಾ ನಡೆಸುವವನು ಇದ್ದೇನೆ. ಮತ್ತು ನೀವು ಯಾರಾದರೂ ಸದರೀ ಮನಿಯನ್ನು ಗಹಾಣ ಬಕ್ಷೀಸ ಅಗರ ಖರೀದಿ ಅಥವಾ ಯಾವದೇ ರೀತಿಯಿಂದಾ ಬರಿಸಿಕೊಂಡಲ್ಲಿ ನಿಮಗೆ ಯಾವದೇತರದ ಹಕ್ಕು ಪ್ರಾಪ್ತವಾಗಲಿಕ್ಕಿಲ್ಲ. ನನಗೆ ಆಗೋ ಲುಕ್ಸಾನಿಗೆ ನೀವೇ ಜವಾಬದಾರರು ಇರುತ್ತೀರಿ ಮತ್ತು ನಾನು ಈಬಗ್ಗೆ ಫೌಜದಾರಿಯಲ್ಲಿ ಹಾಗೂ ದಿವಾಣಿಯಲ್ಲಿ ಕೇಸ ನಡಿಸುವವನಿದ್ದೇನೆ. ಅದಕ್ಕೆ ಆಗೋ ಖರ್ಚಿಗೆ ಜವಾಬದಾರರು ನೀವೇ ಆಗುವಿರಿ ಅಂತಾ ಬರಕೊಂಡ ಜಾಹೀರ ನೋಟೀಸ ಸಹಿ ತಾ|| ೫-೩-೧೯೨೭ ಇಸ್ವಿ.

Bagalkot 5-3-27	S/. C. S Pande.

೧,೪೨,೦೦,೦೦೦

ರೂಪಾಯಿಗಳು!

ಪರದೇಶಗಳಿಂದ ತರಿಸಲ್ಪಟ್ಟ ಸಾಬೂನುಗಳಿಗೋಸ್ಕರ ಪ್ರತಿವರುಷವೂ ಒಂದುಕೋಟಿ ನಾಲ್ವತ್ತೆರಡು ಲಕ್ಷ ರೂಪಾಯಿಗಳನ್ನು ನಮ್ಮ ದೇಶದಿಂದ ಪರದೇಶಕ್ಕೆ ತೆರುತ್ತಿದೇವೆ. ಮಹಾಜನಗಳೆಲ್ಲರೂ ಒಕ್ಕಟ್ಟಾಗಿ ಸಂಕಲ್ಪಮಾಡಿದರೆ ತಾನೇ ಈ ಹಣವನ್ನು ನಮ್ಮ ದೇಶದಲ್ಲಿ ಉಳಿಸಿಕೊಳ್ಳಬಹುದು. ಸ್ವದೇಶದ ಸಾಬೂನನ್ನು ಬಿಟ್ಟು ಪರದೇಶದ ಸಾಬೂನನ್ನು ಕೊಳ್ಳುವ ಪ್ರತಿಯೊಬ್ಬ ವಿದ್ಯಾವಂತನೂ ಅನ್ಯ ದೇಶದ ಕೈಗಾರಿಕೆಗಳಿಗೆ ಉಪಕಾರಮಾಡಿ, ಸ್ವದೇಶದ ಕೈಗಾರಿಕೆಗಳಿಗೆ ಅಪಚಾರಮಾಡುತ್ತಾನೆ. ಪ್ರತಿಯೊಬ್ಬ ದೇಶಾಭಿಮಾನಿಯೂ ಸ್ವದೇಶೀ ಸಾಮಾನುಗಳನ್ನೇ ಕೊಳ್ಳುವನು. ಮೈಸೂರು ಗೌರ್ನಮೆಂಟು ಸೋಪ್ ಫ್ಯಾಕ್ಟರಿಯಲ್ಲಿ [illegible]ವಾದ ಉತ್ತಮವಾದ ಸಾಬೂನುಗಳನ್ನು ತಯಾರುಮಾಡುತ್ತಾರೆ. ನಾವು ತಯಾರುಮಾಡುವ ಶ್ರೀಗಂಧ ಪರಿಮಳವುಳ್ಳ ಸಾಬೂನೊಂದನ್ನು ಕೊಂಡು ತಾವೇ ಪರೀಕ್ಷೆಮಾಡಿನೋಡಿರಿ. ತಮಗೆ ನಮ್ಮ ಸಾಬೂನುಗಳು ಸಿಗದಸ್ಥಳದಲ್ಲಿ ದಯವಿಟ್ಟು ನಮಗೆ ಪತ್ರವೊಂದನ್ನು ಬರೆದರೆ, ತಾವು ಇಚ್ಛೆಪಡುವ ಅಂಗಡಿಯಲ್ಲಿಯೇ ನಮ್ಮ ಸಾಬೂನುಗಳು ತಮಗೆ ದೊರೆಯುವಂತೆ ಏರ್ಪಡಿಸಿಕೊಡುತ್ತೇವೆ.

ಗೌರ್ನಮೆಂಟು ಸೋಪ್ ಫ್ಯಾಕ್ಟರಿ

ಬೆಂಗಳೂರು.

ಜಾಹೀರ ನೋಟೀಸ.

ಯಾವತ್ತು ಜನರಿಗೆ ತಿಳಿಸುವದೇನಂದರೆ:— ಈ ಜಿಲ್ಹೆಯಲ್ಲಿಯ ಮುಚಖಂಡಿ ಕೆರಿಯ ಅಂಗಳವು ೩ ವರ್ಷಗಳ ಪೂರ್ತೇ ಅಂದರೆ ತಾರೀಖ ೧ ನೇ ಎಪ್ರಿಲ ೧೯೨೭ ಇಸ್ವಿಯಿಂದಾ ೩೧ ನೇ ಮಾರ್ಚ ೧೯೩೦ ದ ವರೆಗೆ ಬಿತ್ತಿಗೆಯ ಪೆಲೆಯಿಂದಾ ಮಾರ್ಚ ೨೨ ನೇ ತಾರೀಖಿನ ದಿವಸ ಮಧ್ಯಾನ್ಹ ೪ ಘಂಟೆಗೆ ಬಾಗಲಕೋಟ ಪಬ್ಲಿಕ ವರ್ಕ್ಸ ಇನಸ್ಪೆಕ್ಟರ ಬಂಗಲೇದಲ್ಲಿ ಲಿಲಾವ ಮಾಡಲಾದೀತು.

೨ ಲಿಲಾವಿನಲ್ಲಿ ಬೇಡಲಿಚ್ಛಿಸುವವರು. ಲಿಲಾವಿನ ದಿವಸ ಲಿಲಾವಿನಲ್ಲಿ ಬೇಡಿದ ಎಲ್ಲ ರಕಮನ್ನು ಕೊಡತಕ್ಕದ್ದು. ಅಥವಾ ೧/೪ ಹಣವನ್ನು ಲಿಲಾವ ಆದ ಕೂಡಲೆ ಅದೇಸ್ಥಳದಲ್ಲಿ ಕೊಟ್ಟು, ಉಳಿದ ೩/೪ ಹಣವನ್ನು ಲಿಲಾವಾದ ೮ ದಿವಸಗಳಲ್ಲಿ ಕೊಡತಕ್ಕದ್ದು. ಈ ೮ ದಿವಸಗಳ ಅವಧಿಯಲ್ಲಿ ಉಳಿದ ೩/೪ ಹಣವನ್ನು ಕೊಡದೇಇದ್ದರೆ ಕೂಡಲೆ ಕೊಟ್ಟ ೧/೪ ಹಣವು ಸರಕಾರಕ್ಕೆ ಜಮಾ ಮಾಡಲಾದೀತು. ಮತ್ತು ಪುನಃ ಲಿಲಾವಮಾಡುವದರಲ್ಲಿ ಬರುವದು.

೩ ಲಿಲಾವಿನ ಶರ್ತುಗಳು ಮತ್ತು ಲಿಲಾವಮಾಡತಕ್ಕ ಭಾಗಗಳ ಅಂಗಳದ ಕ್ಷೇತ್ರ ಮುಂತಾದವು ಬಾಗಲಕೋಟ ಸಬ್ ಡಿವ್ಹಿಜನಲ್ ಆಫೀಸರ ಕಚೇರಿಯ ವೇಳೆಯಲ್ಲಿ ರವಿವಾರ ಹಾಗೂ ಸರಕಾರಿ ರಜೆಯ ದಿವಸಗಳ ಹೊರ್ತಾಗಿ ನೋಡಲಿಕ್ಕೆ ಸಿಗುವವು. ಮತ್ತು ಲಿಲಾವ ಆಗುವ ಪೂರ್ವದಲ್ಲಿ ಓದಿ ತಿಳಿಸುವದರಲ್ಲಿ ಬರುವವು.

S. B. REGE
Executive Engineer Bijapur
Division.

ಜಾಹೀರ ನೋಟೀಸು.

ಯಾವತ್ತು ಜನರಿಗೆ ತಿಳಿಯಪಡಿಸುವದೇನಂದರೆ- ಈ ಜಿಲ್ಹೆಯಲ್ಲಿಯ ಕೆಳಗೆ ಬರೆದ ಊರುಗಳ ಹತ್ತರ ನದಿಯಮೇಲೆ ನಾವು ನಡಿಸುವ ಹಕ್ಕನ್ನು ೧ನೇ ಎಪ್ರಿಲ್ ೧೯೨೭ ದಿಂದ ಎರಡು ವರ್ಷದ ಪೂರ್ತೆ ತಾರೀಖು ೧ ನೇ ಎಪ್ರಿಲ್ ಮಧ್ಯಾನ್ಹ ೨ ಗಂಟೆಗೆ ಬಾಗಲಕೋಟೆಯಲ್ಲಿ ಸಬ್ ಡಿವ್ಹಿಜನಲ್ ಆಫೀಸದಲ್ಲಿ ಲಿಲಾವ ಮಾಡಲಾದೀತು

ನಾವಿನ ಹೆಸರು	ಸ್ಥಳ	
ಕಲಾದಗಿ	ಘಟಪ್ರಭಾ ನದಿಯಮೇಲೆ,	
ಅನಗವಾಡಿ	ಸದರ	
ಗೋವನಕೊಪ್ಪ	ಮಲಪ್ರಭಾ ನದಿಯಮೇಲೆ,	
ಚೊಳಚಗುಡ್ಡ	ಸದರ	

೨ ಲಿಲಾವಿನಲ್ಲಿ ಬೇಡಲಿಚ್ಛಿಸುವವರು ತಮ್ಮ ಲಾಯಕಿ ಸರ್ಟಿಫಿಕೇಟುಗಳನ್ನು ಸ್ವತಃ ಹಜರಮಾಡತಕ್ಕದ್ದು ಮತ್ತು ೨೮-೩-೨೭ ರ ಒಳಗಾಗಿ ಲಿಲಾವಿನಲ್ಲಿ ಬೇಡುವ ಫೀ ಅಂತ (೧೦) ಹತ್ತು ರೂಪಾಯಿ ಸಬ್ ಡಿವ್ಹಿಜನಲ್ ಆಫೀಸರ ಬಾಗಲಕೋಟೆ ಇವರ ಕಡೆಗೆ ಡಿಪೋಜಿಟ್ ಅಂದು ಹಜರುಮಾಡತಕ್ಕದ್ದು. ಡಿಪೋಜಿಟ್ ಇಟ್ಟ ರಕಮಿನ ರಸೀತಿಯಿಂದಾ ಸಬ್ ಡಿವ್ಹಿಜನ್ ಆಫೀಸರ ಬಾಗಲಕೋಟೆ ಇವರು ಪಾವತಿಮಾಡುವರು.

೩ ಲಿಲಾವಿನ ಶರ್ತುಗಳು ಮುಂತಾದವುಗಳು ಬಾಗಲಕೋಟ ಸಬ್ ಡಿವ್ಹಿಜನಲ್ ಆಫೀಸದಲ್ಲಿ ಕಚೇರಿ ವೇಳೆಯಲ್ಲಿ ರವಿವಾರ ಹಾಗೂ ರಜೆ ದಿವಸಗಳ ಹೊರ್ತಾಗಿ ನೋಡಲಿಕ್ಕೆ ಸಿಗುವವು. ಮತ್ತು ಲಿಲಾವ ಆಗುವ ಪೂರ್ವದಲ್ಲಿ ಓದಿ ತಿಳಿಸುವದರಲ್ಲಿ ಬರುವದು.

Sd/- **S. B. REGE**
Executive Engineer Bijapur
Division.

ನನಗೆ ಹೊಳೆದಂತೆ.

ಕರ್ನಾಟಕದ ಏಕೀಕರಣದ ಕಲ್ಪನೆಯು ಕೃತಿಯೊಂದರಲ್ಲಿಯೂ ಎದ್ದು ಕಾಣಬೇಕಲ್ಲವೇ? ಆದ್ದರಿಂದಲೇ 'ಸಾಧ್ವಿ' 'ವಿಶ್ವಕರ್ನಾಟಕ' ಪತ್ರಿಕೆಗಳು ತಮ್ಮ ಪ್ರಾಂತದಲ್ಲಿಯ ಮುದ್ದಾದ ಮುದ್ರಣದ ಸ್ಪರ್ಧೆ ಯಾಗದಿಂದ, ಉತ್ತರ ಕರ್ನಾಟಕದ ಹೆಸರಾದ ಅಸಹ್ಯವಾದ ಮುದ್ರಣ ಪದ್ಧತಿಯನ್ನು ಇತ್ತೀಚೆ ತಮ್ಮಲ್ಲಿಯೂ ಪ್ರಾರಂಭಿಸಿದ್ದಾರೆ! ಜಯ ಕರ್ನಾಟಕ! ಜಯ ಏಕೀಕರಣ !

× × ×

ವಿಜಾಪೂರ ಜಿಲ್ಲೆಯಲ್ಲಿ ವೀರ ಕ್ಷಾಮವಂತೆ! ಹಳ್ಳಿಗಾಡರು ಗುಳೆಕಟ್ಟಿಕೊಂಡು ನಡೆದಿರುವರಂತೆ! ವಿಜಾಪೂರ ಬಾಗಲಕೋಟೆ ಶಹರಗಳಲ್ಲಿ, ಸುಕಾಲದಂತೆ, ಚುಟ್ಟಾ, ಸಿಗರೇಟ್, ಸೆರೆ, ಸಿಂದಿ, ಚಹಾ, ಕಾಫಿ, ಗಾಯನ, ತಮಾಷೆ, ನರ್ತನ ಯಥಾಪ್ರಕಾರವಾಗಿ ಸಾಗಿವೆ ಯಲ್ಲ! ಇವೆಲ್ಲ "ಫ್ಯಾಮಿನ್-ಪ್ರೂಫ" ಆಗಿರಬಹುದು !

× × ×

" ವಿಲಾಯತಿಯಲ್ಲಿ 'ಇಂಡಿಯಾ' ದೇಶಕ್ಕೆ ಜವಾಬ್ದಾರಿ 'ಗೌರ್ನಮೆಂಟ'ನ್ನು ಕೊಡಬೇಕೆಂದು ಲಾರ್ಡ ರೋನಲ್ಡ್ಷೇರವರು ಒಂದು ಉಪನ್ಯಾಸವನ್ನು ಮಾಡಿದರು !!" ಇದು ಮೈಸೂರಿನ ಸುಪ್ರಸಿದ್ಧ 'ಸಾಧ್ವೀ' ಪತ್ರಿಕೆಯಲ್ಲಿಯ (ತಾ|| ೨೫-೨ ೨೬) ಸಂಪಾದಕೀಯ ಲೇಖವು! ಒಂದೇ ವಾಕ್ಯದಲ್ಲಿ ಎರಡು ಪಾರಿಭಾಷಿಕ ಶಬ್ದಗಳು! 'ಉಪನ್ಯಾಸ' ದ ಬದಲು 'ಲೆಕ್ಚರ್' ಬರೆಯಲಿಲ್ಲ. ಅದಕ್ಕಾಗಿ ಪುಣ್ಯ! ಕನ್ನಡ ಶಬ್ದಗಳಿದ್ದರೂ ಈ 'ಸಾಧ್ವಿ' ಶಿರೋಮಣಿಗೆ ಗೊತ್ತಿಲ್ಲ! ಆದರೂ ಮೈಸೂರ ಭಾಷೆಯೇ ಹೆಚ್ಚಿನದು! ಹೆಚ್ಚು ಶುದ್ಧವಾದುದು! ಎಂದು ಇವರ ಹೆಮ್ಮೆ.

" ಹೊಸಪೇಟೆಯಲ್ಲಿ ಅಯಿದು ಆರು ತಿಂಗಳಿಂದ ಪ್ಲೇಗಿನ ಗಡಿಬಿಡಿಯು ಎಡಬಿಡದೆ ಗಡಬಡಿಸುತ್ತಿರುವದರಿಂದ, ಇಲ್ಲಿಯ ಕೆಲಸಗಾರರ ಬೂಟಾಟಿಕೆಗಳೂ, ಸಹ ನೋಟಕ್ಕಾದರೂ, ದಿಟವಾಗುವಂತಿಲ್ಲ. ಈ ದಡಬಡಾವೇಶವು ನಮ್ಮ ಮುದ್ರಣದ ಮುದ್ದು ಮುಖವನ್ನಾದರೂ ಲೆಕ್ಕಿಸದೆ ಮುದ್ರಾಲಯದಲ್ಲಿ ಹೊಕ್ಕು ಮುದ್ರಣದ ಕಾರ್ಯವನ್ನು ಮುಂದೆ ನಡೆಯದಂತೆ ಕೆಲವು ಕಾಲ ಬಂದು ಮಾಡಿತು" 'ಸುಬೋಧ' ಸಂಪಾದಕರ ಭಾಷಲಾಲಿತ್ಯವು ಹೇಗಿದೆ?

— ಓರ್ವ ಓದುಗ

ವರ್ತಮಾನಸಾರ.

ಸೋಜಿಗದ ಸುದ್ದಿ.

ರೇವದ ಮಹಾರಾಜರ ತಿಜೋರಿಯ ಬೀಗದ ಕೈ ಕಳೆಯಿತು. ಎಲ್ಲಿಯೂ ಸಿಕ್ಕಲಿಲ್ಲ. ತಮ್ಮ ರಾಜ್ಯದಲ್ಲಿಯ ಒಳ್ಳೇ ಪ್ರಖ್ಯಾತನಾದ ತಿಜೋರಿ ಒಡೆಕನನ್ನು ಜೇಲಿನಿಂದ ಕರೆತರಲು ರಾಜರ ಮೋಟಾರ ಹೋಯಿತು! ಬೇಡಿಗಳನ್ನು ಹಾಕಿಕೊಂಡು ಅದೇ ಮೋಟಾರಿನಲ್ಲಿ ಕುಳಿತು ಕೈದಿಯು ಅರಮನೆಗೆ ಬಂದನು ಅವನನ್ನೇ ಕಾಯ್ದಿದ್ದ ಮಹಾರಾಜರು ಅಂಜಬೇಡೆಂದು ಅವನಿಗೆ ಹೇಳಿ ಅವನನ್ನು ತಮ್ಮ ಅಂತಃಪುರದ ತಿಜೋರಿಯ ಎದುರಿನಲ್ಲಿ ನಿಲ್ಲಿಸಿ, ಅದನ್ನು ಒಡೆಯಲು ಹೇಳಿದರು. ತನಗೆ ಬೇಕಾದ ಉಪಕರಣಗಳನ್ನು ಅರಿಸಿಕೊಂಡು ಹತ್ತೇ ನಿಮಿಷಗಳಲ್ಲಿ ಅವನು ಅದರ ಬಾಯಿ ತೆರೆದನು! ರಾಜನು ಅವನ ಹತ್ತಿರದಲ್ಲಿಯೇ ನಿಂತು ಕೈದಿಯ ಚಾತುರ್ಯವನ್ನು ಕಣ್ಣಾರೆ ಕಂಡು ಬೆರಗಾದನು! ಅವನಿಗೆ ಶಹಬ್ಬಾಸಕೊಟ್ಟು, ಹಸ್ತಾಂದೋಲನ ಮಾಡಿ, ತಿಂಡಿಗಳನ್ನು ಕೊಟ್ಟು, ಪುನಃ ತನ್ನ ಸ್ವಂತ ಮೋಟಾರಿನಲ್ಲಿ ಅವನನ್ನು ಕಳಿಸಿದನು. ಇಷ್ಟೆಲ್ಲ ಆದಮೇಲೆ ತನಗೆ ಬಿಡುಗಡೆಯಾಗುವದೆಂದೂ, ಚಿಕ್ಕದಾದ ಜಾಹಗೀರ ದೊರೆಯುವದೆಂದೂ ಆ ಬಡ ಕೈದಿಯು ಆಶಿಸಿದ್ದು ಸ್ವಾಭಾವಿಕವು! ಆದರೆ ಜೇಲ ಸಾಹೇಬರು ಅದಕ್ಕೆ ಸಮ್ಮತಿಸಲಿಲ್ಲ.

ಕ್ಯಾಟಲೋನಿಯಾದಲ್ಲಿ ಒಂದು ವಾಚ ಹೊಸದಾಗಿ ತಯಾರಾಗಿದೆ ಅದಕ್ಕೆ ಕೀಲಿ ಕೊಡುವ ಕಾರಣವೇ ಇಲ್ಲ. ಸೇಕಂಡ, ಮಿನೀಟು, ಗಂಟೆ, ದಿನ, ವಾರ, ತಿಂಗಳು ವರ್ಷಗಳಲ್ಲಿ ಉಳಿದ ವಾರಗಳ ಲೆಕ್ಕ, ಸೂರ್ಯೋದಯ-ಅಸ್ತ, ಚಂದ್ರೋದಯ-ಅಸ್ತ ಇವೇ ಮೊದಲಾದ ಇನ್ನೂ ಅನೇಕ ಸಂಗತಿಗಳನ್ನು ತೋರಿಸುತ್ತದೆ!! ಅದರಲ್ಲಿ ೮೦೦ ಕಿಂತ ಹೆಚ್ಚು ಭಾಗಗಳಿವೆ, ಅದನ್ನು ಸಿದ್ಧ ಪಡಿಸಲಿಕ್ಕೆ ಒಟ್ಟು ೧೧೬೦ ತಾಸುಗಳು ಬೇಕಾದವು!

ಸಮುದ್ರದಲ್ಲಿ ಮುಳುಗಿ ಆಳವಾದ ನೀರಿನಲ್ಲಿ ಫೋಟೋ ತೆಗೆಯುವದು ಈಗ್ಗೆ ಯಶಸ್ವಿಯಾಗಿದೆ. ಇದರಿಂದ ನೈಸರ್ಗಿಕ ಬಣ್ಣಗಳೆಲ್ಲ ಬಹು ಸೊಗಸಾಗಿ ಎದ್ದು ಕಾಣುವವು.

ಪರದೇಶ.

ಏಡನ್ ಬಂದರವು ಬಹು ಮಹತ್ವದ ಮಧ್ಯವರ್ತಿ ಬಂದರವಾಗಿದ್ದರಿಂದ, ಅದರ ಲಷ್ಕರೀ ವ್ಯವಸ್ಥೆಯ ಸೂತ್ರಗಳೆಲ್ಲ ಹಿಂದುಸ್ಥಾನಸರಕಾರಕ್ಕಿರದೇ ಇನ್ನು ಮುಂದೆ ಲಂಡನ್ನಿನ ಬ್ರಿಟಿಶ ಅಧಿಕಾರಕ್ಕೆ ಒಳಪಟ್ಟಿರಬೇಕಂತೆ! ಆದರೆ ರಾಜ್ಯಕಾರಭಾರದ ವೆಚ್ಚವನ್ನು ಮುಂಬೈ ಸರಕಾರವೇ ಹೊರಬೇಕಂತೆ! ಈ ಬಗ್ಗೆ ಮುಂಬೈ ಅಥವಾ ಹಿಂದುಸ್ಥಾನ ಸರಕಾರಗಳನ್ನು ಮೊದಲು ಕೇಳುವ ಔದಾರ್ಯವನ್ನು ಸಹ ಬ್ರಿಟಿಶ್ ಸರಕಾರವು ತೋರಿಸಿಲ್ಲ!

೭ ಸಾವಿರ ಪೌಂಡುಗಳ ವೆಚ್ಚದಿಂದ 'ಮೆಕ್ಯಾನಿಕಲ್ ಇಂಜನೀಯರ' ಕಣಗಳ ರಸಾಯನಶಾಸ್ತ್ರ, ಮತ್ತು 'ಟೆಕ್ನಿಕಲ್' ಶಿಕ್ಷಣವನ್ನು ಕೊಡುವದನ್ನು ಮ್ಯಾನ್‌ಸ್ಟರ ವಿಶ್ವವಿದ್ಯಾಲಯವು ನಿಶ್ಚಯಿಸಿದೆ. ೫೦ ಸಾವಿರ ಪೌಂಡುಗಳು ಸರಕಾರದಿಂದಲೂ, ೨೫ ಸಾವಿರ ಪೌಂಡುಗಳು ಉದ್ಯೋಗಿಕ ಸಂಘಗಳಿಂದಲೂ ಕೊಡಲ್ಪಟ್ಟಿವೆ.

ರೂಪಾಯಿಗೆ ೧೮ ಪೇನ್ಸ ಬೆಲೆ ಕಟ್ಟಿದ್ದರಿಂದ ೬ ಕೋಟಿ ರೂಪಾಯಿಗಳ ಹಾನಿಯು ಹಿಂದುಸ್ಥಾನಕ್ಕೆ ಆಗಿದೆಯೆಂದು ಭಾರತೀಯರು ಕಷ್ಟಪಡುತ್ತಲಿರುವಾಗ್ಗೆ ಹಿಂದುಸ್ಥಾನಕ್ಕೆ ಇದರಿಂದ ಕಲ್ಯಾಣವಾಗಿದೆ ಎಂದು ಲಂಡನ್ನಿನ ಮ್ಯಾಂಚೆಸ್ಟರ ಗಾರ್ಡಿಯನ್ ಪತ್ರಿಕೆಯು ಹಿಂದುಸ್ಥಾನ ಸರಕಾರವನ್ನು ಅಭಿನಂದಿಸುತ್ತದೆ. ಹಿಂದೀಯರಿಗೆ ವಿಷಾದವಾದುದು ಇಂಗ್ಲೀಷರಿಗೆ ಪ್ರಸನ್ನವಾಗುತ್ತದೆ ಹೇಗಿದೆ ಮೌಜು !

ಭಾರತೀಯರ ಭಾವೀ ರಾಜಕೀಯ ಸ್ಥಿತಿಯಬಗ್ಗೆ 'ಹೌಸ ಆಫ್ ಲಾರ್ಡ್ಸ' ಸಭೆಯಲ್ಲಿ ಇದೇ ತಾ|| ೨೩ ರಲ್ಲಿ ವಿಚಾರ ನಡೆಯುವದು.

ಜಪಾನಿನಲ್ಲಿ ಭಯಂಕರವಾದ ಭೂಕಂಪವಾಗಿ ಜನರ ಕಷ್ಟಗಳಿಗೆ ಅಂತವಿಲ್ಲ ಈ ಸಮಯದಲ್ಲಿ ಬಹು ಭೀಕರವಾದ ಸುಂಟರಗಾಳಿಯೂ ಘೋರವಾದ ಮಳೆಯೂ ಆಗಿ ಜನರು ಹೌಹಾರಿಹೋಗಿದ್ದಾರೆ. ಭೂಕಂಪದಿಂದ ೩ ಸಾವಿರ ಜನರು ಮಡಿದರು. ೭ ಸಾವಿರ ಜನರು ಗಾಯ ಹೊಂದಿದರು. ೧೦ ಸಾವಿರ ಮನೆಗಳು ಹಾಳಾದವು!

ರಂಗಭೂಮಿಯ ಸುದ್ದಿಗಳು.

ಗುಬ್ಬಿಯವರು ಈಗ ಮಂಗಳೂರಿಗೆ ಬಂದಿದ್ದಾರೆ. 'ಸದಾರಮೆ' ಎಂಬ ನಾಟಕದ ೫೦೦ ರೂ. ಉತ್ಪನ್ನವನ್ನು ಮಂಗಳೂರಿನ ಹೆಂಗಸರ ಆಸ್ಪತ್ರಿಗಾಗಿ ದಾನಮಾಡಿದರು. ಶ್ರೀ ವೀರಣ್ಣನವರಿಗೆ ಒಂದು ಬಂಗಾರದ ಪದಕವು ಅರ್ಪಿಸಲ್ಪಟ್ಟಿತು. ದಾನ ಕೊಟ್ಟ ಹಣದಲ್ಲಿ ಹೀಗೆ ಪದಕಗಳನ್ನರ್ಪಿಸುವ ಪದ್ಧತಿಯು ಈಗ್ಗೆ ಒಳ್ಳೇ ಜೋರಿನಿಂದ ನಡೆದಿದೆ.

'ರಂಗಭೂಮಿ' ಮಾಸಪತ್ರಿಕೆಯ ಒಡೆತನವನ್ನು ಬೆಂಗಳೂರಿನ ಅಮೇಚ್ಯೂರ ನಾಟಕ ಸಂಘದವರು ತೆಗೆದುಕೊಂಡಿದ್ದಾರೆ. ಈ ಸಲದ ಸಂಚಿಕೆಯಲ್ಲಿ ಸುರಾಟೀ ಆನಂದ ನಾಟಕ ಮಂಡಳಿಯ ನಟರ ಚಿತ್ರಗಳಿವೆ ಈ ಕಂಪನಿಯಲ್ಲಿಯ ಹೆಚ್ಚು ಹುಡುಗರು ಸಾತಾರೆ ಜಿಲ್ಹೆಯಲ್ಲಿಯ ಕನ್ನಡಿಗರೆಂಬುದು 'ರಂಗಭೂಮಿ'ಗೆ ಗೊತ್ತಿದ್ದಂತೆ ಕಾಣುವದಿಲ್ಲ.

ಮುಂಬೈ ಕರ್ನಾಟಕ

ಶ್ರೀ ದೇವಾಂಗ ಧರ್ಮ ಪ್ರಸಾರಕ ಸಭೆಯ ೧೪ ನೇ ವಾರ್ಷಿಕ ಸಾಧಾರಣ ಸಭೆಯು ಗುಳೇದಗುಡ್ಡದಲ್ಲಿ ಸೇರಿತ್ತು. ೩ ೪ ಸಾವಿರ ಜನರು ಮಹಾರಾಷ್ಟ್ರ, ನಿಜಾಮ, ಮದ್ರಾಸ, ಮೈಸೂರ, ಉತ್ತರ ಕರ್ನಾಟಕಗಳಿಂದ ಬಂದಿದ್ದರು. ವಿಶಾಲವಾದ ಮಂಟಪದಲ್ಲಿ ಒಳ್ಳೇ ವೈಭವದಿಂದ ರಾ ಸಾ. ಎಮ್, ಹಂಪಯ್ಯನವರು ಎಮ್ ಎಲ್ ಸಿ (ಅನಂತಪುರ) ಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಕಾರ್ಯಕ್ರಮದ ವಿಷಯಗಳೆಲ್ಲ ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟವು. ಶ್ರೀ ಹಂಪಿ ಹೇಮಕೂಟ ಗಾಯತ್ರೀ ಪೀಠಕ್ಕೆ ಜಗದ್ಗುರುಗಳ ಪಟ್ಟಾಭಿಷೇಕದ ಕಾರ್ಯವು ನಾಳಿನ ವೈಶಾಖ ಮಾಸದಲ್ಲಿ ಜರಗತಕ್ಕದ್ದೆಂದು ಸರ್ವಾನುಮತದಿಂದ ನಿರ್ಣಯವಾಗಿ, ಆ ಬಗ್ಗೆ ಸ್ವಾಗತ ಮಂಡಲ, ಉಪಮಂಡಲಗಳು ನಿಯಮಿಸಲ್ಪಟ್ಟವು.

“ಗದಗೇರಿಯಲ್ಲಿ ನೀರಿನ ದುರ್ಭಿಕ್ಷ ವಿಪರೀತವಾಗಿದೆ. ಈ ಬಗ್ಗೆ ಮಾತನಾಡುವಂತಿಲ್ಲ! ಊರು ಹಡಲೇ ಬೇಕಾಗಿದೆ. ಆದ್ದರಿಂದ ‘ಕನ್ನಡಿಗ ನನ್ನ ನನಗೆ ಕಳಿಸಬೇಡಿ” ಎಂಬದಾಗಿ ಓರ್ವ ಚಂದಾದಾರರು ಬಾತ್ಮಿದಾರರಿಗೆ ತಿಳಿಸುತ್ತಾರೆ.

ಗೋಕಾವಿಯಲ್ಲಿ ಪ್ಲೇಗಿನ ಬೇನೆಯು ಹೆಚ್ಚುತ್ತಲಿದೆ. ಈ ಬಗ್ಗೆ ೫೦ ವರ್ಷದ ಮುದುಕರು ಸಹ ಸತ್ತಾಗಿದ್ದಾರೆ. ಘಟಪ್ರಭೆಯ ಜಲಸಲವನ್ನು ನೋಡಲು, ಮೈಸೂರ ಮಹಾರಾಜರು ಬೇಗನೇ ಬರುವರಾಗಿ ವದಂತಿ. ಮುನಸಿಪಲ್ ಹೈಸ್ಕೂಲಿನ ವಿದ್ಯಾರ್ಥಿಗಳಿಗೆ ಶ್ರೀ ಸೂರ್ಯವಂಶೀ ಮುನಸೂಫರು ಉಪದೇಶಪರವಾದ ವ್ಯಾಖ್ಯಾನ ಕೊಟ್ಟರು.

ಮದ್ರಾಸ ಕರ್ನಾಟಕ

ಈ ವರುಷದ ರೈಲುವೇ ಬಜೆಟನಿಂದ ೧೯೨೭-೨೮ ನೇ ಇಸವಿಯಲ್ಲಿ ಮಂಗಳೂರು ಉಡುಪಿ ಲ್ಯಾನ ಮಾಡುವದಕ್ಕೆ ೬೪ ಲಕ್ಷ ರೂಪಾಯಿ ಮಂಜೂರಾಗಿದೆ. ಇದರ ವಿಷಯ ಮಾತನಾಡುವಾಗ ಲೆಜಿಸ್ಲೆಟಿವ್ಹ ಎಸೆಂಬ್ಲಿಯ ಮೆಂಬರರಾದ ಉಡುಪಿ ಹಾಜಿ ಕಾಸಿಂ ಸಾಹೇಬರು ಈ ಲ್ಯಾನನ್ನು ಇದೇ ವರುಷ ಮಾಡಿಸಬೇಕೆಂದೂ, ಈ ಲ್ಯಾನನ್ನು ಸರ್ವೆ ಮಾಡುವಾಗ ಬಹಳ ಜಾಗರೂಕತೆಯಿಂದ ಸರ್ವೆ ಮಾಡಬೇಕೆಂದೂ, ಮಂಗಳೂರು ಹಾಸನ ರೈಲುವೆಯನ್ನು ಬೇಗನೇ ಕೂಡಿಸಬೇಕೆಂದೂ; ಈ ಲ್ಯಾನು ಮಾಡಿಸಿದರೆ ಮೈಸೂರು ರಾಜ್ಯದ ಗನಿಗಳ ವ್ಯಾಪಾರ ವಹಿವಾಟಿಕ್ಕೂ, ತೋಟಗಳ ವ್ಯಾಪಾರ ವಹಿವಾಟಿಕ್ಕೂ, ಬಹಳ ಅನುಕೂಲವಾಗುವದೆಂದೂ ವಿವರಿಸಿ ಹೇಳಿದರು. ಅದಲ್ಲದೆ ಹಾಸನ ಮಂಗಳೂರು ಲ್ಯಾನ ಮಾಡಿಸಿದರೆ ಮೈಸೂರು ದೇಶವನ್ನು ಫಲಭರಿತವಾದ ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆ ಕೂಡಿಸಿದಂತಾಗುತ್ತದೆಂದೂ ಮಾತನಾಡಿದರು

ಕೊಡಗ ಕರ್ನಾಟಕ

ನಮ್ಮ ದೇಶದ ಹೆಚ್ಚಿನ ಭಾಗದಲ್ಲಿ ಹತ್ತಿ ಬೆಳೆಯುವದಿಲ್ಲ, ತುಂಬಾ ಮಳೆಯಾದ್ದರಿಂದ ಮಗ್ಗದ ಕೆಲಸವನ್ನು ವರ್ಷ ಇಡೀ ನಡಿಸಲು ಸಾಧ್ಯವಿಲ್ಲವೆಂಬ ಮುಂತಾದ ಅಕ್ಷೇಪಣೆಗಳಿಗೆ ಎಡೆಯಿಂದ ನಮ್ಮ ದೇಶದಲ್ಲಿ ೪೦ ೫೦ ವರುಷಗಳ ಹಿಂದ ಕೊಡಗು ದೇಶದಲ್ಲೇ ನೂತು ನೇಯ್ದ ಬಟ್ಟೆಗಳನ್ನು ಉಪಯೋಗಿಸುತ್ತಿದ್ದರೆಂದು ಪ್ರಾಯಸ್ಥರೆಲ್ಲರೂ ಹೇಳುತ್ತಾರೆ. ಈ ಕಸಬು ಈಗಲೂ ಕಣವೆ ಯೋಬಳಿಯ ಒಂದೆರಡು ಗ್ರಾಮಗಳಲ್ಲೂ, ಶನಿವಾರಸಂತೆಯಲ್ಲಿಯೂ ಜೀವದಿಂದುಳಿದದೆ. ದೇಶದವರು ಖದ್ದರ್ ಬಟ್ಟೆಗೆ ಉತ್ತೇಜನ ಕೊಟ್ಟರೆ ಈ ಗ್ರಾಮಗಳ ರೈತರಿಗೆ ೨ ನೇ ಕಸಬನ್ನು ಒದಗಿಸಿ ಕೊಟ್ಟಂತಾಗುತ್ತದೆ.

ಕೊಡಗು

ಮೈಸೂರ ಕರ್ನಾಟಕ

ಮುಖ್ಯ ವ್ಯವಸಾಯದ ಕೆಲಸವಿಲ್ಲದಾಗ್ಗೆ ಕೆಲಸ ಹಚ್ಚಲಿಕ್ಕೂ ಬಡವರಿಗೆ ಹೆಚ್ಚಾಗಿ ಸಂಪಾದಿಸಲಿಕ್ಕೂ ರಾಟಿಯು ಒಳ್ಳೇ ಉಪಯುಕ್ತವಾದುದರಿಂದ ಅತ್ತ ಕಡೆಗೆ ತಮ್ಮ ಉದ್ಯೋಗಿಕ ಶಾಖೆಯವರು ಸಂಪೂರ್ಣ ಲಕ್ಷ್ಯಕೊಡಬೇಕೆಂದು ಮಹ ರಾಜ ಸರಕಾರದವರು ತಮ್ಮ ಠರಾವಿನಲ್ಲಿ ಬರೆದಿದ್ದಾರೆ.

ಮೈಸೂರ ಸರಕಾರದ ಗ್ಯಾಜೆಟ್

ಮೈಸೂರ ಪುರಾಣ ವಸ್ತು ಸಂಶೋಧಕ ಇಲಾಖೆಯವರಿಗೆ ೨ ನೇ ಶತಮಾನದ ಒಂದು ಗ್ರೀಕ ಭಾಷೆಯ ಪ್ರಹಸನವು ದೊರೆತಿದೆ. ಅದರಲ್ಲಿ ಕನ್ನಡವಾಕ್ಯಗಳು ವಿಪುಲವಾಗಿವೆ. ಧರ್ಮ, ಮಲಬಾರ ಸ್ತ್ರೀಯರ ಪಾವಿತ್ರ್ಯತೆ, ಪಾಶ್ಚಿಮಾತ್ಯರು ಹಿಂದಿನ ಪಶ್ಚಿಮ ಸಮುದ್ರದ ದಂಡೆಗೆ ವ್ಯಾಪಾರಕ್ಕೆ ಬಂದ ಸಂಗತಿ, ಚೀನ ಪ್ರವಾಸಿಗನಾದ ಫಾಯಿನನ ವೃತ್ತಾಂತ, ಕಾತಂತ್ರ ವ್ಯಾಕರಣದ ರೀತಿ, ಅಂಗುವರ್ಮನ ಶಕ ಇವೇ ಮೊದಲಾದ ಮಹತ್ವದ ಸಂಗತಿಗಳು ಇದರಲ್ಲಿ ಪ್ರತಿಪಾದಿತವಾಗಿದೆ

ಇಹವೃತ್ತ.

೧೬ ನೇ ತಾರೀಖಿನ ದಿನ ಶ್ರೀ ಗಂಗಾಧರರಾಯರೂ, ಕೌಜಲಗಿ ಶ್ರೀನಿವಾಸರಾಯರೂ ಇಲ್ಲಿಗೆ ಬಂದು, ಮಹಾತ್ಮರ ಸ್ವಾಗತದ ಬಗ್ಗೆ ವ್ಯಾಖ್ಯಾನಗಳನ್ನು ಕೊಟ್ಟರು ಸ್ವಾಗತ ಮಂಡಲವು ಸ್ಥಾಪಿಸಲ್ಪಟ್ಟಿತು. ಪುರಶ್ಮೈನ ಬಂಧುಗಳ ಪರಿಯಿಂದ ಶ್ರೀ ದಂಡಾಪತಿಬಸಯ್ಯನವರು ಮಾತನಾಡಿದರು. “ತಾವು ಇಷ್ಟು ದಿನ ಈ ಖಾದೀ ಕಾರ್ಯವನ್ನು ಕೈಯಲ್ಲಿ ತೆಗೆದುಕೊಂಡಿದ್ದಿಲ್ಲ; ಒಂದಾವರ್ತಿ ತೆಗೆದುಕೊಂಡ ಮೇಲೆ, ಅದನ್ನು ಯಶಸ್ವಿಯಾಗಿ ಮಾಡದೇಯಿರುವದು ನನ್ನಿಂದಾಗದು; ಮಹಾತ್ಮರ, ಗಂಗಾಧರರಾಯರ, ಶ್ರೀನಿವಾಸರಾಯರ ಮಾತುಗಳಿಗೆ ಜನರು ಮಹತ್ವವನ್ನು ಕೊಡುತ್ತಿರದಿದ್ದರೂ ಖಾದಿಯು ಬಡವರ ಅನ್ನ; ಅಗ್ಗ ಈ ಸಂಗತಿಗಳನ್ನಾದರೂ ವಿಚಾರಿಸಿ, ಈ ಚಳವಳಿಕ್ಕೆ ಸಹಾಯ ಮಾಡಬೇಕಾಗಿ” ಹೇಳಿದರು.

ಶ್ರೀ ಹತ್ತಂಗಡಿ ಮುನಸೂಫರಿಗೆ ವರ್ಗವಾದ್ದರಿಂದ ಊರಲ್ಲಿ ತಾಂಬೂಲ ಸಮಾರಂಭಗಳು ಜರಗಿದವು ಸಾರ್ವಜನಿಕ ರೀತಿಯಿಂದ ಬಸವೇಶ್ವರ ಹೈಸ್ಕೂಲಿನಲ್ಲಿಯೂ ಆಯಿತು.

ಧಾರವಾಡದ ಶ್ರೀ ಮುಳೇಬಿನ್ನೂರ ಸತ್ಯವಂತರಾಯರು ‘ಹಾರ್ಡಿಂಜ ಲೈಬರಿ’ಯಲ್ಲಿ “ಸ್ತ್ರೀ-ಹಿತವಾದು” ದ ಬಗ್ಗೆ ವ್ಯಾಖ್ಯಾನ ಕೊಟ್ಟರು

‘ವಸಂತದ ಸಂಪಾದಕರಾದ ಶ್ರೀ ಶಾಂತಪ್ಪ ಮ್ಯುನಸೀಪಾಲ್ಟಿಯ ಶಾಲೆಯಲ್ಲಿ ಬ್ರಹ್ಮಚರ್ಯದ ಮೇಲೆ ಉಪನ್ಯಾಸ ಕೊಟ್ಟರು

ಹಿಂದುಸ್ಥಾನೀ ಸೇವಾದಲದಿಂದ ಬಂದ ಕೊಡಗಿನ ಲಾಠೀ ತಜ್ಞರಾದ ಶ್ರೀ ಮಾತಾರ್ಂಡರು ಬಾಗಲಕೋಟೆಯ ತರುಣರಿಗೆ ಲಾಠೀ ಡ್ರಿಲ್ಲಿನ ಶಿಕ್ಷಣವನ್ನು ಒಳ್ಳೇ ರೀತಿಯಿಂದ ಕೊಟ್ಟು, ಅವರಲ್ಲಿ ಒಳ್ಳೇ ಉತ್ಸಾಹವನ್ನುಂಟು ಮಾಡಿದ್ದರಿಂದ, ಶ್ರೀ ಮಾತಾರ್ಂಡರ ಸನ್ಮಾನಾರ್ಥವಾಗಿ ರವಿವಾರ ದಿನ ಸಾರ್ವಜನಿಕ ಸಭೆಯಾಯಿತು. ಪಂಜಾನ ಅವರಿಂದ ಶಿಕ್ಷಣ ಹೊಂದಿದ ವಿದ್ಯಾರ್ಥಿಗಳೆಲ್ಲ ಮೆರವಣಿಗೆಯಿಂದ ಹೊರಟು, ಶ್ರೀ ಮಾತಾರ್ಂಡರ ಬಿಡಾರ ಸ್ಥಾನಕ್ಕೆ ಹೋಗಿ, ಅಲ್ಲಿ ಅವರೊಡನೆ ಉಪಹಾರ ಮಾಡಿದರು. ಸಾಯಂಕಾಲದಲ್ಲಿ ‘ಲಾಠೀ ಡ್ರಿಲ್’ ಆಯಿತು. ಅನೇಕರ ವ್ಯಾಖ್ಯಾನಗಳಾದವು. ವಿದ್ಯಾರ್ಥಿಗಳಾದ ಶ್ರೀ ಹಾವರಗಿ ಬಿಜ್ಜರಗಿ ಯವರ ಭಾಷಣವನ್ನು ಎಲ್ಲರೂ ಅನುಮೋದಿಸಿದರು. ಇಂತಹ ಶಕ್ತಿ ತರುಣರಿಗೆ ಸಹ ಈ ಶಿಕ್ಷಣದಿಂದ ಉತ್ಸಾಹ ಒಂದಿದ್ದು ಬಾಗಲಕೋಟೆಯ ತರುಣರ ಭಾಗ್ಯವೇ ಸರಿ. ಟೊಪ್ಪಿ ಸೇವಾದಳದವರು ವಿದ್ಯಾರ್ಥಿಗಳು ಬಿಟ್ಟದ್ದು ಶಕ್ತಿಯೂ, ಶಿಸ್ತು ಅವರಲ್ಲಿ ಹೆಚ್ಚುದುದೂ ಸಭೆಯಲ್ಲಿ ಹೇಳಿದರು

ಮಹಾತ್ಮರಿಗೆ ಮಾನಪತ್ರಕೊಡಬೇಕೆಂದು ಮುನಸೀಪಾಲ್ಟಿಯವರು ನಿಶ್ಚಯಿಸಿದ್ದಾರೆ

ಹಿಂದುಸ್ಥಾನ ಸರಕಾರದ ಶಿಲಾಲೇಖ ಶಾಖೆಯವರಾದ ಶ್ರೀ ಲಕ್ಷ್ಮೀನಾರಾಯಣರಾಯರೆಂಬುವರು ಇಲ್ಲಿಗೆ ಬಂದಿದ್ದಾರೆ. ಗದಗ ತಾಲೂಕಿನ ಸರ್ವೆದಲ್ಲಿ ಸೂಡಿ ಹೊರಲ್ಲಿ ದೊರೆತ ಮೂರು ಶಿಲಾಲೇಖಗಳು ಮಹತ್ವದವೆಂದು ತಿಳಿಯುತ್ತದೆ. ನೃಪತುಂಗನ ಕಾಲದ್ದೆಂದು ಬೆಳವಲ ನಾಡಿಗೆ ಧವಳ ವಿಷಯ ಎಂಬದಾಗಿ ಈ ಕನ್ನಡ ಶಿಲಾಲೇಖದಲ್ಲಿ ಹೆಸರಿದೆ. ೨ ನೇದ್ದು ರಾಷ್ಟ್ರಕೂಟ ೩ ನೇದ್ದು ಕೃಷ್ಣದ್ದು. ಸೊರಟೂರ ಆ ಕಾಲಕ್ಕೆ ವಿದ್ಯಾಪೀಠವಾದ ಈ ಲೇಖದ ಉದಾಹರಣೆ. ಕರ್ನಾಟಕದ ಒಳ್ಳೇ ಪ್ರಖ್ಯಾತ ರಾಜನಾದ ೬ ನೇ ವಿಕ್ರಮಾದಿತ್ಯನದು ಮೂರನೇದ್ದು ಈ ಶಿಲಾಲೇಖದ ಕತೆಯು ಮೋಹಕದ ಶೈಲಿಯದಿದೆ. ಅಂತಃ ಪುರದಲ್ಲಿಯೂ ವಿಕ್ರಮಾದಿತ್ಯನ ಶೀಲವಿದೆ ಒಳ್ಳೇ ಪ್ರೌಢ ಕವಿಯಿಂದ ಅದು ಬರೆಯಲ್ಪಟ್ಟದೆಯಂತೆ. ಈ ಕವಿಯ ಹೆಸರು ‘ಕವಿಚರಿತೆ’ ಯಲ್ಲಿ ದೇಯೋ ಇಲ್ಲವೋ ಸಂಶಯ.

ಆಂಧ್ರರಿಗೆ ಭಾಷಾನ್ವಯ ಪ್ರತ್ಯೇಕ ಪ್ರಾಂತ ವಿರಬೇಕೆನ್ನುವ ಸೂಚನೆಯು (೩೯ ವಿರುದ್ಧ ೩೨) ಮದ್ರಾಸ ಶಾಸನ ಸಭೆಯಲ್ಲಿ ಸ್ವೀಕರಿಸಲ್ಪಟ್ಟಿತು! ಕರ್ನಾಟಕವೇ, ಮಲಗು ! ನೀನು ಚನ್ನಾಗಿ ಮಲಗು !!

ಲಿವರಿನ ಗಡಿಯಾರಗಳು.

ಲಿವರಿನ ಕೈ ಗಡಿಯಾರ ರೂ. ೯.

ಲಿವರಿನ ಕಿಸೆಯೊಳಗಿಡುವ ಗಡಿಯಾರ ರೂ. ೭.

ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಮೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವುದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ಶಾಶ್ವತವು. ಬೆಲೆ ಕಡಿಮೆಯಿದೆಂದು ಅಂಜುವ ಕಾರಣವಿಲ್ಲ. ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ. ಅದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ.

ಲಿಚೋ ವಾಚ ಕಂ. (ಇಂಡಿಯಾ.) ಬಾಂಬೆ. ಕೆ ೪.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಶ್ರಮವು ಇನಾಂ!!! ಅಂ. ಹಾಸಲು ಇಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯೆ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ

ಏಜಂಟರು:—ಜಂಬುಲಿಂಗಪ್ಪಾ ಚಾಲವಾದಿ. ಸ್ಟೇಶನರ್ಸ ಬಾಗಲಕೋಟೆ.

ರಾಜವೈದ್ಯ ನಾರಾಯಣಜಿ ಕೇಶವಜಿ, ೫೭. ಚೀನಾಬಜಾರ್. ಮದ್ರಾಸು

ಯಾವದೇ { ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ. ೧೪, ಅರ್ಧ ಬೆಲೆ ರೂ. ೭



ಬರೇ ಒಂದು ತಿಂಗಳ ಬಗ್ಗೆ ನಾವು ಈ ದಂವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. **ಬೆಲೆ ರೂ. ೭**

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— ಸ್ವಾನ ಹೌಸ. ಪಿ. ಬಿ. ೫೦೮. ಪಿ. ಟಿ. ಮದ್ರಾಸ

ಅತ್ಯಲ್ಪವಿವೆ! ಉಚಿತ!

ಕೇವಲ ಉಚಿತ ಕೇವಲ ಉಚಿತ



" ತಾರಾ " ಲೀವರ್ ರಜಿಸ್ಟರ್ಡ್ ಪೋಕೆಟ್ ವಾಚ್ ೧೮ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚುಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ " ಸಿ " ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು " ತಾರಾ " ಲೀವರ ರಜಿಸ್ಟರ್ಡ್ ೧೮ ಕೆರೆಟ್ ರೋಲ್ಡ್ ಗೋಲ್ಡಿನ ಪೋಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪ್ಟೆನ್ ವಾಚ್ ಕಂ. ಪಿ ಬಿ. ೨೩೫ ಮದ್ರಾಸ

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ.

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವದು ಮತ್ತು ಜೋಡಿಸುವದು, ಅವುಗಳೊಳಗಿನ ಕೆಟ್ಟ-ಬಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಉಳಿದಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹು ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದುಕೊಳ್ಳಿರಿ!

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.

೪೫೫ ಶನಿವಾರ ಪೇರ ಜಮಖಂಡಿಕರ ವಾಡ ಪುಣೆ ಶಹರ.

ನಪುಂಸಕತ್ವ

ಧಾತು ವಿಕಾರ, ಸ್ವಪ್ನಾವಸ್ಥೆ, ಅಶಕ್ತತೆ ಇತ್ಯಾದಿಗಳಮೇಲೆ ಖಂಡಿತವಾಗಿ ಗುಣಕೊಡುವ ಮತ್ತು ಕಡೆತನಕ ಬಾಳುವ ದಿವ್ಯ ಔಷಧಿ! ಒಂದೇ ಗುಳಿಗೆ!!

ವಿಶೇಷ ಮಾಹಿತಿ ಪತ್ರದ್ವಾರ ತಿಳಿಯಿರಿ.

ವಾದಿರಾಜ ಜಹಾಗೀರದಾರ.

ಮು. ಪೋ. ಇಲಕಲ್ಲ. (ವಿಜಾಪೂರ)

ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವು ಹಲ್ಲುಗಳ ನೋವುಗಳನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವನನ್ನು ತೀವ್ರನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು ಹಲ್ಲುಗಳ ಪೂರ್ಣ ಸೆಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು

S. U. Narayanacharya & Co.

Chaukkamba Benares City.

ನಮ್ಮಲ್ಲಿ ಎಲ್ಲ ತರದ ರೇಶ್ಮಿ ಪೀತಾಂಬರ ಜರಿಕಣ, ಜರಿಸೀರೆ, ಕಾಶ್ಮೀರ್ ಶಾಲು, ತಂವಾರಿ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಪಟಿಕಮಣಿ ಸುಂದರವಾದ ಮಾಲೆಗಳ ಕ್ಯಾಟಲಾಗ ಕೋರುವವರಿಗೆ ಇನಾಮಾಗಿ ಕಳಿಸಲಾದೀತು.

ವಿಳಾಸ-ಶಿರೋಮಣಿ ನಾರಾಯಣಾಚಾರ್ಯ ಕಂಪನಿ ಚೌಕಾಂಬಾ ಕಾಶಿ

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿತು.

ರ ನಂ. ಬಿ. ೧೯೪೭ ವಾ ಚಂದಾ ೧—೧೩—೦ ಮಾತ್ರ

ಕನ್ನಡಿಗ.

ಜಯಕರ್ನಾಟಕ

(ಇದರಲ್ಲಿ ಕನ್ನಡದ ನವಜೀವನವು ಸಮಾವಿಷ್ಟವಾಗಿದೆ.)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ರವಿವಾರ ಮಿತಿ ಫಾಲ್ಗುಣ ಬಹುಳ ೯ ಶಕೆ ೧೮೪೮ ತಾ|| ೨೭-೩-೧೯೨೭. Date 27—3—1927. | ವಿಶೇಷ ಸಂಚಿಕೆ

ವೈ. ಕಡಪಾ ರಾಘವೇಂದ್ರರಾಯರ

ಸ್ಮಾರಕ ಸಂಚಿಕೆ.

ಕಡಪಾ ರಾಘವೇಂದ್ರರಾಯರಿಗೆ—

ಹೂವ ನೀಡಿದೆ | ನಿನಗೆ | ಹೂವ ನೀಡಿದೆ || ಪ ||
ಎದೆಯ ಒಳಗೆ ಹುದುಗಿ ಇರುವ |
ಸುಧೆಯ ರಸದ ಮಧುವ ಸುರಿವ || ಅ. ಪ. ||

ಸದ್ದು ಇಲ್ಲದಂತೆ ಬಿದ್ದು |
ಇದ್ದ ನಾಡನೆತ್ತಿ ಹಿಡಿದಿ ||
ಮುದ್ದು ನುಡಿಯ ಜನರು ಮುದ್ದು |
ಎದ್ದು ನಲಿಯುವಂತೆ ನುಡಿದಿ || ೧ ||

ಎದ್ದು ಬಾದು ನಮ್ಮ ಒಳಗೆ |
ಇದ್ದು ನಾಡ ಸಿರಿಯ ನೆಲ್ಲ ||
ಕದ್ದು ಕೊರೆವ ಕುದ್ರ ಹಗೆಗೆ |
ಮುದ್ದು ಮಾಡಿ ಗೆಲವು ಗದ್ದಿ || ೨ ||

ನಿನ್ನ ಕನಸು ನಾಡಿಗಿಗಲಿ |
ನಿನ್ನ ನೆನಪು ಮನಕೆ ಇರಲಿ |
ನಿನ್ನ ಕುದಿಯು ಎದೆಗೆ ಇರಲಿ |
ನಿನ್ನ ದಾರಿ ಕಣ್ಣಗಿರಲಿ || ೩ ||

ಯೋಗ ಭೂಮಿ ಭೋಗ ಭೂಮಿ |
ಯಾಗಿ ನಮ್ಮ ಕರಿಯ ನಾಡು ||
ಸಾಗಲೆಂಬ ನಿನ್ನ ಬಯಕೆ |
ಬೇಗ ಕೈಗೆ ಕೂಡಿ ಬರಲಿ || ೪ ||

ನುಡಿಯ ಹಡಿಯ ಗುಡಿಯ ಒಳಗೆ |
ಕಡಪ ರಾಘವೇಂದ್ರ ನಿನಗೆ ||
"ಪಡೆವು ಬಾರೊ" ಎಂದು ಹರಿಸಿ |
ಕಡೆಯ ಕಣ್ಣು-ಹನಿಯ ನಿರಿಸಿ || ೫ ||

—ಗೆಳೆಯ

ಸಂಪಾದಕರ ಭೂಮಿ

(೬೦)

ನನ್ನ ಮನಸಿನ ಮೋಣವಾದಿ ಕಟ್ಟುವೆನಾನು।
ನಿನ್ನ ಬೆಸನವ ಮಾಡಿದಂಥ ಮಕ್ಕಳ ಜೊನ್ನು।
ಚಿನ್ನದಾವರು ಚಿನ್ನ ಮೋಣಬಸ್ತ್ರಿಯ ನೊಂದು ಚಿನ್ನಯಾಕಾಶವಕ್ಷಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ।
ಕನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೆ॥

—ಅಂಬಿಕಾತನಯದತ್ತ

ಯಾವ ಪಾಪಿಯ ದೃಷ್ಟಿಯು ತಗಲಿತೋ ಏನೋ! ತಾಯಿಯ ಹೊಟ್ಟೆಯ ಪುಣ್ಯವು ತೀರಿತು. ಮುಗಿಲಿನಲ್ಲಿ ಮೋಲಿದ್ದು ಮುಸುಗಲಿರುವ ಚೊಕ್ಕನ್ನ ಜಕ್ಕೆಯು ತಟ್ಟನೆ ಉದುರಿ ಹೋಯಿತು. ನಾಡಿನ ಒಡಲೊಳಗೆಲ್ಲ ಕಿಚ್ಚಿದ್ದು ಪೈಸಿರಿಯ ಮುಚ್ಚು ಮಾಯವಾಯಿತು. ನುಡಿಯ ಗುಡಿಗೆ ಕಾವಲಿನ ಕಿರಿಗಡ ಯಿಲ್ಲದಂತಾಯಿತು. ಕನ್ನಡದ ಹಿಗ್ಗಿನ ಹಿರಿಯ ಮೊಗ್ಗೆಯು ಮಂಜಿನ ಮಳೆಯಿಂದ ಅಕಾಲದಲ್ಲಿಯೇ ಕರಿಬಿದ್ದು ಕಳಚಿತು. ಕರುಳಿನ ಕಕ್ಕುಲತೆಯು ಕುಗ್ಗಿತು. ಕಾಳರಕ್ಕಸನೆಂಬ ಕಲಿಗೆ ಕಡಪಾ ರಾಘವೇಂದ್ರರಾಯರು ಕೂಳಾದರು. ಅವರಿಲ್ಲದುದರಿಂದ ಕನ್ನಡದ ಜೀವನದ ಜ್ವಾಲಜ್ಯೋತಿಗೆ ಸ್ನೇಹವಿಲ್ಲದಂತಾಗಿದೆ. ಹಿಗ್ಗಿಗಾಗಿ ಹೋರಾಡುವ ಹುದ್ದರಿಯೇ ಹೋಟು ಹೊದುದರಿಂದ ನಾಡು ಗ್ರಹಗ್ರಸ್ತವಾದಂತೆ ತೋರುತ್ತಿದೆ. “ಇರುಳು ಕಳೆಯುವದು; ಹಗಲಾಗುವದು; ಕಮಲವು ಅರಳುವುದು; ಸಿರಿಯು ನಲಿಯುವಳು;” ಎಂಬ ಕಂಪಾದ ಕನಸು ಮೂಡಿ ಮನಸಿನ ಮಲ್ಲಿಗೆಯನ್ನು ನಗಿಸುತ್ತಿರುವಾಗ ಸಿಡಿಲು ಅಕಲ್ಪಿತವಾಗಿ ಎರಗಿಬಿಟ್ಟಿತು. **ಅವನ ಮಾಟದ ಮುಂದೆ ಯಾರ ಆಟವೂ ಸಾಗುವಂತಿಲ್ಲ.** ಅವನ ಎಣಿಕೆಯೇ ಬೇರೆ. **ಅವನು** ಮೆಚ್ಚುವಂತೆ **ಅವನಿಚ್ಛೆಯಂತೆ** ನಡೆಯುವುದು ನಮ್ಮೆಲ್ಲರ ಕರ್ತವ್ಯವಲ್ಲವೆ? ವೃಥಾ ಶೋಕದಿಂದ ಆಗುವದೇನು? ಹೆಜ್ಜೆಯ ಗುರುತುಗಳು ನಿಚ್ಚಳವಾಗಿವೆ. ಅದರಲ್ಲಿ ಅಡಿಯಿಟ್ಟು ನಡೆಯಲು ಎಡೆಯಿದೆ. ಮೊದಲಿನಂತೆ ಕಡೆಗಾಣದೆ ಕುಳಿತುಕೊಳ್ಳುವ ಸ್ಥಿತಿಯು ಈಗವದಿಲ್ಲ. ಒಳಗೂ ಹೊರಗೂ ಬೆಳಕಿನ ಕಿಡಿಗಳು ಎಷ್ಟೋ ಇವೆ. ನೋಡುವವರು ಬೇಕು. ಮಾಡುವವರು ಬೇಕು. ಮುಸುಕಿನ ಮುಗ್ಗಲಿಗೆ ಸಸುಕಿನ ಎಸಕು ಇದ್ದೇ ಇರುವುದು. ಎದೆಗುಂದತಕ್ಕದ್ದಲ್ಲ. ತಡೆದು ಮೂಢರಾಗಿ ಕುಳಿತುಕೊಳ್ಳತಕ್ಕದ್ದಲ್ಲ; ದೇವರಲ್ಲಿ ನಂಬುಗೆಯನ್ನು ತಾಳಿ ಮನವು ಮೆಚ್ಚುವಂತೆ ದುಡಿದರೆ ಆತ್ಯಂತಿಕ ಹಿತವು ಸಾಧ್ಯವಾಗುವುದು. ದೊಡ್ಡವರೆಲ್ಲ ಇದನ್ನೇ ಮಾಡಿದ್ದಾರೆ. ಇದನ್ನೇ ಸಾರಿದ್ದಾರೆ. ಇದೇ ಅವರ ಜೀವನದ ತಿರುಳು. ಇದೇ ಅವರ ಬಾಳ್ವೆಯ ಹುರುಳು. ನುಡಿಯ ನವಿಗೆ ಮರುಳಾಗಿ ಕ್ರಿಯಾಶೂನ್ಯರಾಗಿ ಉಳಿಯುವ ನಡೆಯ ಮಡಿಯಾದ ಬಸಗೆಯನ್ನು ಎಸೆದರೆ, ವಿಶ್ವದ ದೃಶ್ಯವೇ ಬೇರೆಯಾಗುವುದು. ನಡೆಯಲ್ಲಿದ್ದ ಶಕ್ತಿಯು ನುಡಿಯಲ್ಲಿಲ್ಲವೆಂಬುದು ಕಂಡವಾತು. ನಮಗೆ ಬೇಕಾದುದು ಶಕ್ತಿಯು. ಜಗತ್ತಿಗೆ ನಾವು ಅದನ್ನೇ ತೋರಿಸಬೇಕಾಗಿದೆ. ಅದರಿಂದಲೇ ನಮ್ಮ ಭಕ್ತಿಯರಳುವುದು. ಅದರಲ್ಲಿಯೇ ನಮ್ಮ ಜೀವನದ ಸೌಂದರ್ಯವಿರುವುದು. ಅದರಲ್ಲಿಯೇ ಆತ್ಮನ ಅಮೃತವಿರುವುದು. ಮೃತ್ಯುವನ್ನು ಗೆಲ್ಲಲು ಇದೊಂದೇ ಮಾರ್ಗವು. ಇದನ್ನರಿಯದವರು ಮೃತ್ಯುವಿನಿಂದ ಮೃತ್ಯುವಿಗೆ ಹೋಗಬೇಕಾಗುತ್ತದೆ. ಇದನ್ನು ತಿಳಿದು ಆನಂದಶಕ್ತಿಯ ಉಪಾಸಕರಾಗಿ, ರಾಯರ ಶಾಶ್ವತವಾದ ಸ್ಮಾರಕವನ್ನು ನಿಲ್ಲಿಸಬೇಕು.

ರಾಘವೇಂದ್ರರಾಯರ ಕೊನೆಯ ನನೆಯನ್ನಷ್ಟು ನೋಡಿರಿ.

ಉಷೆಯ ಮಡಿಲಲಿ ಮಲಗಿ।
ಹೊಸೆದು ಸೊಗಸಿನ ಕನಸ॥
ಬೆಳಕಿನ ಹೊಸನು ತೆರೆದು।
ಇಳಿದು ಒಲವಿನ ಇಳೆಗೆ॥
ಮುಗಿಲ ಹೂವಿನ ಒಳಗೆ।
ಸೊಗದ ತನಿರಸ ಸವಿದು॥
ಮುಗಿಯ ದೊಲ್ಮೆಯ ತಂದು।
ಅಗಲಾಗಿ ಹರಿಯಿಸುವೆ॥
ಕಂಬನಿನೊಡಲನು ಬಗೆದು।
ಇರುವ ಜ್ಯೋತಿಯ ತಂದು॥
ಕನ್ನಡ ಮುಗಿಲಿನಲಿ।
ಚಿರವಾಗಿ ನೆಲಿಸುವೆನು॥

ಶ್ರೀ ಕಡಪಾ ರಾಘವೇಂದ್ರರಾಯರು.

ಬೀಳಗಿ—ಗಲಗಲಿಗೆ ಅರ್ಧ ವಸೂಲ ಹಾಂದಿಯ ಜನರಿಗೆ ಮಾತ್ರ ಪೂರಾ ವಸೂಲಿನಷ್ಟೇ ದುಡ್ಡು ತೆರಬೇಕಾಗುವದು. ಆ ಪಟ್ಟಿ, ಈ ಪಟ್ಟಿ, ಮುಡಗಾಡ ಪಟ್ಟಿ, ಸರಬರಾಯಿಪಟ್ಟಿ ಎಂದು ನಾನಾ ಪರಿಯಿಂದ ರೈತರನ್ನು ಗೋಳಾಡಿಸಲು ಗೌಡಕುಲಕರ್ಣಿಗೆ ರುದ್ರಪ್ಪನಲ್ಲಿ ಅಧಿಕಸಮಾಧಾನವೆಂಬಂತೆ ಈಸಾರೆ ಗುಡಾಂಪಟ್ಟಿಯೆಂಬ ಹೊಸದೊಂದು ಪಟ್ಟಿ ಎದ್ದಿದೆ. ಅಮಲದಾರರಿಗೆ ಹಾಸಲಿಕ್ಕೊಂದೇ ಗುದಾಮ ಮಾಡಿಸುವರಂತೆ! ಈ ಪರಿ ರೈತರನ್ನು ಹಿಂಸಿಸಿ ದುಡ್ಡು ಕೂಡಿಸಿ ಅವರಿಂದ ಮಾಡಿಸಿದ ಗುದಾಮದಮೇಲೆ ಕೆಡದ್ರುವದೆಂದರೆ ಬಡರೈತರ ಚರ್ಮಸುಲಿಸಿ ಅವರಮೇಲೆ ಕುಳಿತಂತೆಯೇ ಸರಿ!

ಬದಾಮಿ—ಬದಾಮಿ ತಾಲೂಕ ಪೈಕಿ ಗುಳೇದಗುಡ್ಡದಿಂದ ಒಂದು ಮೋಟರವು ಹುನಗುಂದಕ್ಕೆ ಹೋಗಲಿಕ್ಕೆ ಹೊರಟಿತು. ಅದು ಹಾದಿಯಲ್ಲಿ ಅಮೀನಗಡ ರಕ್ಕಸಗಿ ನಡುವೆ ಒಬ್ಬ ಮುದುಕನು ಹೋಗುತ್ತಿರಲು ಅವನಮೇಲೆ ಆ ಮೋಟಾರವು ಹಾಯಿತು. ಆ ಮುದುಕನು ಯಮಲೋಕಕ್ಕೆ ಹೋದನೆಂದು ಆ ಮೋಟಾರನ್ನು ಮತ್ತು ಅದನ್ನು ನಡಿಸುವವನನ್ನು ಪೋಲೀಸರು ಹಿಡಿದು ಕೊಂಡು ಹುನಗುಂದ ಕಚೇರಿಗೆ ಒಪ್ಪಿಸಿ ಜಪ್ತಿ ಮಾಡಿರುವರೆಂದು ಸಾಕ್ಷಿಯಿದೆ.

ಎರಡು ಮಾತುಗಳು.

ಕಡಪಾ ರಾಘವೇಂದ್ರರಾಯರ ಅಕಾಲ ನಿಧನದಿಂದ ಕರ್ನಾಟಕಕ್ಕೆ ಬಹಳೇ ಹಾನಿಯು ಆಗಿರುತ್ತದೆ. ನಿಸ್ಸೀಮ ಕನ್ನಡದ ಅಭಿಮಾನಿಗಳಾದ ಇವರ ಪ್ರಯತ್ನದಿಂದಲೇ ಕರ್ನಾಟಕಕ್ಕೆ ಭಾರತವರ್ಷದ ರಾಜಕಾರಣದಲ್ಲಿ ಸ್ವತಂತ್ರ ಅಸ್ತಿತ್ವ ದೊರೆಯಿತೆಂಬುವದರಲ್ಲಿ ಏನೂ ಸಂದೇಹವಿಲ್ಲ. ಇವರು ದೃಢಕಾಯರಾಗಿದ್ದುದರಿಂದ ಇವರಿಗೆ ಅಕಸ್ಮಾತ್ ರೋಗೋತ್ಪತ್ತಿಯಾಗದೆ ಹೋಗಿದ್ದರೆ ಬಹುಕಾಲ ಕನ್ನಡಮಾತೆಯ ಸೇವೆಯನ್ನು ಮಾಡಬಹುದಾಗಿತ್ತು. ಇವರ ವಾಣಿಯ ತೇಜವು ಹೊಳೆಯುತ್ತಿದ್ದಿತು. ಉಪನ್ಯಾಸ ನೈಪುಣ್ಯವು ಶ್ಲಾಘನೀಯವಾಗಿತ್ತು. ವಿರೋಧಾಸಹವಾಗಿದ್ದ ಇವರ ಬುದ್ಧಿಯ ಪ್ರಭಾವವೂ ವಾಕ್‌ಪ್ರಹಾರಗಳೂ ಪ್ರತಿಭಟರನ್ನು ದಂಗುಬಡಿಯುವಂತೆ ಮಾಡುತ್ತಿದ್ದವು. ಇವರು ಮೂಲತಃ ಬಡವರು. ತಂಮ ಅನಂತಪುರ ಪ್ರಾಂತದಿಂದ ಕರ್ನಾಟಕತ್ವದ ಸ್ಫೂರ್ತಿಯ ಕೇಂದ್ರಸ್ಥಾನವಾದ ಧಾರವಾಡಕ್ಕೆ ಬಂದು ಅಲ್ಪಕಾಲದಲ್ಲಿಯೇ ಇವರು ನಿಜತೇಜದಿಂದಲೂ ಕೆಲಸುಗಾರಿಕೆಯಿಂದಲೂ ಲೋಕಾದರಕ್ಕೆ ಪಾತ್ರರಾದರು. ಕೌಟುಂಬಿಕ ಸ್ಥಿತಿಯು ಸಮಾಧಾನಕರವಾಗಿರದಿದ್ದರೂ ಅಸಹಕಾರದ ಚಳವಳಿಯ ಪ್ರಾರಂಭಕ್ಕೆ ಇವರು ತಂಮ ವಕೀಲಿಯನ್ನು ನಿಲ್ಲಿಸಿ ಲೋಕಜಾಗ್ರತಿಯ ಕಾರ್ಯವನ್ನು ಕೈಕೊಂಡರು. ರಾಣೇಬೆನ್ನೂರು, ಹಾವೇರಿ, ಬಂಕಾಪೂರ, ತಾಲೂಕಗಳಲ್ಲಿ ಇವರು ಮಾಡಿದ ಕೆಲಸವನ್ನು ಯಾರೂ ಮರೆಯಲಿಕ್ಕಿಲ್ಲ. ಇತ್ತಿತ್ತ ಕರ್ನಾಟಕಕ್ಕೆ ಸ್ವತಂತ್ರ ಅಧಿಕಾರವೂ ವಿಶ್ವವಿದ್ಯಾಲಯವೂ ದೊರೆಯಬೇಕೆಂದು ಇವರು ಅವಿಶ್ರಾಂತವಾಗಿ ಹೋರಾಡುತ್ತಿದ್ದರು. ಅವರ ಮನೀಷೆಯು ಪೂರ್ಣವಾಗುವ ಪೂರ್ವದಲ್ಲಿಯೇ ಕಾಲನು ಅವರನ್ನು ಎತ್ತಿಕೊಂಡು ಹೋಗಿ ಕರ್ನಾಟಕದಲ್ಲಿರುವ ಅಲ್ಪಸ್ವಲ್ಪ ಕೆಲಸುಗಾರರ ಕೈಮುರಿದನೆಂದು ಬಹು ದುಃಖದಿಂದ ಹೇಳಬೇಕಾಗಿದೆ. ಇವರ ಆದರ್ಶವನ್ನು ಮುಂದಿಟ್ಟುಕೊಂಡು ಕನ್ನಡ ತರುಣರು ಕರ್ನಾಟಕದ ಸರ್ವಾಂಗೀಣ ಪ್ರಗತಿಯ ಸಲುವಾಗಿ ಕಂಕಣಬದ್ಧರಾದದ್ದಾದರೆ ಕಡಪಾ ರಾಘವೇಂದ್ರರಾಯರು ಆರಂಭಿಸಿದ ಕಾರ್ಯವು ಕೊನೆಗಂಡು ಇವರ ಆತ್ಮಕ್ಕೆ ಶಾಂತಿಯು ದೊರೆಯುವದು. ಕರ್ನಾಟಕದ ತರುಣರೇ ಪಂಗಡದ ಅಭಿಮಾನಕ್ಕೆ ಬಲಿಬೀಳದೇ ಕರ್ನಾಟಕ ಮಾತೆಯ ಮುಖವು ಪ್ರಾಚೀನ ತೇಜವನ್ನು ಹೊಂದುವಹಾಗೆ ಮಾಡಿ ದಿವಂಗತ ರಾಘವೇಂದ್ರರಾಯರ ಋಣದಿಂದ ಮುಕ್ತರಾಗುವಿರೆಂದು ಕೋರುತ್ತೇನೆ. ಈ ಪರಮ ದೇಶಭಕ್ತನ ಆತ್ಮಕ್ಕೆ ನಂನ ವಂದನೆಗಳನ್ನು ಸಮರ್ಪಿಸುವೆನು

ಕೌಜಲಗಿ ಶ್ರೀನಿವಾಸನು

ಗುಣ ಗೌರವ.

ಶ್ರೀ. ಕಡಪಾ ರಾಘವೇಂದ್ರರಾಯರ ಮರಣದಿಂದ ಕರ್ನಾಟಕದ ಬಲಬಾಹುವೇ ಕತ್ತರಿಸಿ ಹೋದಂತಾಗಿದೆ. ಅವರ ಸ್ಥಳವು ತೀವ್ರ ತುಂಬಲಾರದು. ಅವರಷ್ಟು ಕರ್ನಾಟಕದೊಡನೆ ತನ್ಮಯರಾದವರು ತೀರ ವಿರಳ. ಅವರಂಥ ಧೈರ್ಯವಂತರು ದೊರೆವುದು ದುರ್ಲಭ. ಅವರಿಗೆ ಕುಳಿತಲ್ಲಿ, ನಿಂತಲ್ಲಿ, ಕರ್ನಾಟಕದ ಹೊರತು ಮತ್ತಾರೂ ಕಾಣುತ್ತಿರಲಿಲ್ಲ. ಹಿಂದುಸ್ಥಾನದ ಸ್ವರಾಜ್ಯಯುದ್ಧದಲ್ಲಿ ಕರ್ನಾಟಕವು ತನ್ನ ಯೋಗ್ಯ ಭಾಗವನ್ನು ಹೇಗೆ ತೆಗೆದುಕೊಂಡೀತೆಂಬುದೊಂದೇ ಅವರ ಮುಖ್ಯ ಹಂಬಲ. ಚೆದರಿದ ಕರ್ನಾಟಕರು ಒಂದೇ ಆಡಳಿತಕ್ಕೆ ಒಳಗಾದರೆ ಮಾತ್ರವೇ ಇದು ಸಾಧ್ಯ, ಇಲ್ಲದ್ದರೆ ಇಲ್ಲವೆಂದು ಅವರ ದೃಢವಾದ ನಂಬಿಗೆ. ಹಾಗೆ ಆಗುವದಕ್ಕೆ ಕನ್ನಡಿಗರ ಮನಸ್ಸಿನೊಳಗಿನ ಅನೇಕ ಮೋಹಗಳು ದೂರಾಗಬೇಕೆಂದು ಅವರ ಪ್ರಯತ್ನ. ಶ್ರೀ ರಾಘವೇಂದ್ರರಾಯರ ಕರ್ತೃತ್ವ ಶಕ್ತಿಯು ವಿಲಕ್ಷಣವಾಗಿತ್ತು. ಅವರು ಬಹಳ ಬುದ್ಧಿವಂತರು. ಅದರಿಂದ ಅವರ ತಲೆಯಲ್ಲಿ ಯಾವದೊಂದು ವಿಚಾರವು ತುಂಬಿದೊಂದೇ ತಡ ಅದು ಶೀಘ್ರವಾಗಿ ಪ್ರತ್ಯಕ್ಷ ಕೃತಿಯೊಳಗೆ ಇಳಿಯುತ್ತಿತ್ತು. ಅವರು ಇಂಗ್ಲೀಷಿನ ಉತ್ಕೃಷ್ಟ ವಕ್ತೃಗಳು. ಆದರೆ ಈಗಿನ ಪರಿಸ್ಥಿತಿಯಲ್ಲಿ ಕನ್ನಡದಲ್ಲಿ ಭಾಷಣ ಮಾಡುವುದರಿಂದಲೇ ಕರ್ನಾಟಕದ ಅಭಿಮಾನವು ಹೆಚ್ಚುವುದೆಂದು ಅವರಿಗೆ ತಿಳಿದೊಡನೆಯೇ ಅವರು ಕರ್ನಾಟಕ ದೇವಿಯ ಚರಣದಲ್ಲಿ ತಮ್ಮ ವಕ್ತೃತ್ವ ನೈಪುಣ್ಯವನ್ನೆಲ್ಲ ಬಲಿಕೊಟ್ಟು ತಮಗೆ ಕನ್ನಡವು ಚೆನ್ನಾಗಿ ಬಾರದಿದ್ದರೂ ಆ ಕನ್ನಡದಲ್ಲಿಯೇ ಮಾತಾಡತೊಡಗಿದರು. ಹಾಗೆಯೇ ಸ್ವಾದಿ ಉಡುಪು ದೇಶಕ್ಕೆ ಅವಶ್ಯವೆಂಬ ಮಹಾತ್ಮಾ ಗಾಂಧಿಯವರ ಉಪದೇಶವು ಅವರ ಮನದಟ್ಟಾದ ಮಾರುದಿವಸವೇ ಅವರು ಹಳ್ಳಿಗರಂತೆ ಕಂಬಳಿ ಹೊದ್ದುಕೊಂಡು ಅನೇಕವರ್ಷ ತಿರುಗಾಡಿದರು. ದೇಶಹಿತಕ್ಕೆ ಇಂಥದೊಂದು ಮಾತನ್ನು ಮಾಡುವದು ಅವಶ್ಯವೆಂದು ನಂಬಿಕೆಯಾದರೂ ಅದರಂತೆ ಆಚರಿಸಲಿಕ್ಕೆ ಹಿಂದುಮುಂದು ನೋಡುವವರು ಎಷ್ಟು ಜನರಿಲ್ಲ? ಇರಲಿ, ಕರ್ನಾಟಕವು ಕಡಪಾ ರಾಘವೇಂದ್ರರಾಯರಂಥ ಅದ್ಭುತ ಕ್ರಿಯಾ ಶಕ್ತಿಯುಳ್ಳವರಿಗೆ ಮೇಲಿಂದ ಮೇಲೆ ಜನ್ಮಕೊಡಲಿ

ಧಾರವಾಡ, ೨೦-೩-೨೭ } ವೆಂಕಟೇಶ ಭೀಮರಾವ ಆಲೂರ

ನನಗೆ ಹೊಳೆದಂತೆ.

ಕಡಪಾರವರು ಧಾರವಾಡದಲ್ಲಿ ಶ್ರೀ ಗಂಗಾಧರರಾಯರ ಮರಾಟಿ ಭಾಷಣಕ್ಕೆ ಆತಂಕವನ್ನುಂಟು ಮಾಡಿದಾಗ್ಗೆ "ಕಡಪಾರವರು ರಾಷ್ಟ್ರದ ದ್ವೇಷಿಗಳು" ಎಂಬದಾಗಿ ಶ್ರೀ. ಗಂಗಾಧರರಾಯರ ಶಿಷ್ಯಂದಿರು ಅವರಿಗೆ ಹೆಸರಿಟ್ಟರು! ಈಗ್ಗೆ "ಶ್ರೀ ಕಡಪಾರವರ ಚಳವಳಿಯಿಂದಲೇ ನನ್ನ ಕಣ್ಣುಗಳು ತೆರೆದಿವೆ" ಎಂಬದಾಗಿ ಗಂಗಾಧರರಾಯರು ಸಾರ್ವಜನಿಕವಾಗಿ ಹೇಳುತ್ತಿರುವದು ಅವರ ಶಿಷ್ಯರಿಗೆ ಕಹಿಯಾಗಿರಬಹುದಲ್ಲವೇ? ಕಡಪಾ ಇವರಿಗೆ ಹೊಡೆಯಬೇಕೆಂದು ಗಂಭೀರವಾಗಿ ಹೇಳಿದ ಮರಾಟರಿಗೆ ಈಗಲಾದರೂ ಪಶ್ಚಾತ್ತಾಪವಾಗಿರಬೇಕು!

ಮುಂಬೈ ದೈನಿಕಗಳ ಪ್ರತಿನಿಧಿಗಳು ಧಾರವಾಡದಲ್ಲಿರುವರು. ಆದರೆ ಶ್ರೀ. ಕಡಪಾ ಇವರ ನಿಧನದ ಸುದ್ದಿಯನ್ನು ಮುಂಬೈಗೆ ತಿಳಿಸುವಷ್ಟು ಬುದ್ಧಿಯು ಸಹ ಈ ಪ್ರತಿನಿಧಿಗಳಿಗೆ ಬರಲಿಲ್ಲ! ಈ ಪ್ರತಿನಿಧಿಗಳು ಮರಾಟಿಗರೋ ಕನ್ನಡಿಗರೋ? ಮರಾಟಿಗರಿದ್ದರೆ ಸತ್ತಮೇಲೆ ಸಹ ದ್ವೇಷಿಸುವ ಮಹತ್ತರವಾದ ಗುಣವಿವರದ್ದೆನ್ನಬಹುದು! ಕನ್ನಡಿಗರಿದ್ದರೆ ಇವರನ್ನು ಪರಾಙ್ಮುಖತೆಯ ಮೂರ್ತಿಗಳೆನ್ನಬಹುದೋ ಅಥವಾ ಮೂರ್ಖರೆನ್ನಬಹುದೋ ಅಥವಾ ಮತ್ತೇನಾದರೂ ಹೊಸ ಶಬ್ದವನ್ನು ಹುಡುಕಿ ತೆಗೆಯಬೇಕಾಗುವದೋ ತಿಳಿಯದು.

ಕಡಪಾ ಇವರ ಸ್ಮಾರಕ ಸಂಚಿಕೆಗೆ ಲೇಖವನ್ನೊಂದು ಬರೆದು ಕಳುಹಿಸಬೇಕಾಗಿ 'ಕನ್ನಡಿಗ'ನ ಸಂಪಾದಕರು ಶ್ರೀ ಗಂಗಾಧರರಾಯರಿಗೆ ಪ್ರಾರ್ಥಿಸಿದ್ದರಂತೆ! ಅವರು ಯಾಕಾಗಲೊಲ್ಲದೆಂದು ಹೇಳಿದರಂತೆ! ಆದರೆ ಲೇಖವು ಕಡೆಗೂ ಬರಲೇ ಇಲ್ಲ! ಕಾರಣವೇನು?

ಅಖಂಡ ಕರ್ನಾಟಕದಲ್ಲಿ ಪ್ರಚಂಡವಾದ ಕರ್ನಾಟಕತ್ವದ ಚಳವಳಿಯನ್ನು ಮಾಡಿದ ಕಡಪಾ ರಾಘವೇಂದ್ರರಾಯರು, ಕರ್ನಾಟಕದ ಗಡಿನಾಡಾದ ಅನಂತಪುರದಲ್ಲಿ ಹುಟ್ಟಿ, ಕರ್ನಾಟಕದ ಕೇಂದ್ರವಾದ ಧಾರವಾಡದಲ್ಲಿ ನಿವಾಸಮಾಡಿ, ಕರ್ನಾಟಕದ ಮತ್ತೊಂದು ಗಡಿನಾಡಾದ ಬೆಳಗಾವಿಯಲ್ಲಿ ದೇಹವಿಟ್ಟುದರಲ್ಲಿ ಈಶಸಂಕೇತವೇನಿರಬಹುದು?

ಬೆಳಗಾವಿಯಲ್ಲಿ ಕಡಪಾರವರು ವೈಕುಂಠವಾಸಿಗಳಾದರು. ಕಡಪಾರವರು ತಮ್ಮ ಕಣ್ತೆರೆದರೆಂದು ಹೇಳುವ ಶ್ರೀ. ಗಂಗಾಧರರಾಯರು ಕಡಪಾರವರ ಕಡೆಯ ನಿವಾಸಸ್ಥಾನವಾದ ಬೆಳಗಾವಿಯಲ್ಲಿ ಶ್ರೀ. ರಾಜಗೋಪಾಲಾಚಾರ್ಯರು ಬಂದಾಗ್ಗೆ ಮರಾಟಿಯಲ್ಲಿಯೇ ಮಾತಾಡಿದರಂತೆ! ಶ್ರೋತೃಗಳು ಕನ್ನಡ ಕನ್ನಡವೆಂದು ಆಗ್ರಹದಿಂದ ಹೇಳಿದರೂ "ಕರ್ನಾಟಕ ಸಿಂಹವು" (?) ತನ್ನ ನಾಡಿನವರನ್ನು ಧಿಕ್ಕರಿಸಿತಂತೆ! ಮೇಲಾಗಿ ಬೆಳಗಾವಿಯಲ್ಲಿ ೩೦ ಸಾವಿರದೊಳಗೆ ೧೫ ಸಾವಿರ ಜನರಿಗೆ ಕನ್ನಡವು ತಿಳಿಯುವದಿಲ್ಲವೆಂದು ಕೂಗಿತಂತೆ! ಇಂತಹ ದೇಶದ್ರೋಹದ ಸಂಗತಿಯು ಶ್ರೀ ಗಂಗಾಧರರಾಯರಂತಹ "ಕರ್ನಾಟಕ ಸಿಂಹ" (!) ನ ಬಾಯಿಂದ ಬರುವದೆಂದರೆ ಅದೊಂದು ಸೋಜಿಗವೇ ಸರಿ! ಶ್ರೀ ಗಂಗಾಧರರಾಯರು ಹೀಗೆಂದುದು ನಿಜವಿದ್ದರೆ, ಅದನ್ನು ಅವರು ಸಿದ್ಧಮಾಡಿ ಕೊಡಬಲ್ಲರೋ?

ಕಡಪಾರಾಯರು "ಸಪ್ತ ಋಷಿಗಳಲ್ಲೊಬ್ಬರು" ಈ ಋಷಿಗಳಲ್ಲಿಯ ಪ್ರಮುಖ ಋಷಿಯಂತೂ ಈ ಮಾಲೆಯಿಂದ [illegible] ನು! ಇನ್ನು ಉಳಿದ ೬ ಜನ ಋಷಿಗಳು ಏನು ಮಾಡುವರು? ಇದೇ ಸಂಚಿಕೆಯಲ್ಲಿ ಶ್ರೀ ಕೇ. ಗುರುರಾಜರಾಯರ ಲೇಖದಲ್ಲಿ [illegible] ಧಾರವಾಡಿಗರು ಕಡಪಾರವರ ಸ್ಮಾರಕಕ್ಕಾಗಿ [illegible] ಸಫಲರಾಗುವರೋ? ಇಷ್ಟನ್ನಾದರೂ [illegible] ಮಾಡುವರೋ?

ಕಡಪಾ ರಾಘವೇಂದ್ರರಾಯರ ಜೀವನ ಕಾರ್ಯವು

ರಾಘವೇಂದ್ರರಾಯರು ಮದ್ರಾಸ ಇಲಾಖೆಯ ಕರ್ನಾಟಕ ಪ್ರಾಂತದವರು. ಅವರು ತಮ್ಮ ಬಾಲ್ಯವನ್ನು ಆನಂದಪೂರದಲ್ಲಿ ಕಳೆದರು. ಅವರ ಹಿರಿಯರಾದ ಗೋಪಾಲರಾಯರು ಒಳ್ಳೇ ಭಾವಿಕ ಸದ್‌ವೈಷ್ಣವರು. ಗೋಪಾಲರಾಯರು ಅಮಲದಾರರಿದ್ದರು. ಆದರೆ ಸರಕಾರಿ ನೌಕರಿಗೆ ಅವಶ್ಯವಿದ್ದ ಕಾಲದವಿನಃ ಬಾಕಿ ಉಳಿದ ಕಾಲವನ್ನು ಅವರು ಭಗವತ್‌ಸೇವೆಯಲ್ಲಿಯೇ ಕಳೆಯುತ್ತಿದ್ದರು. ಗೋಪಾಲರಾಯರು ಭಾಗವತ ಪಾರಾಯಣದಲ್ಲಿಯೂ ದಾಸರಪದಗಳನ್ನು ಅನ್ನುವದರಲ್ಲಿಯೂ ಒಳ್ಳೇ ನಿಷ್ಣಾತರು. ಅವರ ಜೀವನಕ್ರಮದ ಪರಿಣಾಮವು ರಾಘವೇಂದ್ರರಾಯರ ಮೇಲೆ ಚಿಕ್ಕಂದಿನಲ್ಲಿಯೇ ಆಗಿತ್ತು. ಧಾರವಾಡ ಮುಂತಾದ ಸ್ಥಳಗಳಲ್ಲಿ ದಾಸರ ಪದಗಳನ್ನು ಒಳ್ಳೇ ಕರ್ನಾಟಕದ ಅಭಿಮಾನದಿಂದ ಹಾಡುವಾಗ್ಯೆ ತಮ್ಮ ಹಿರಿಯರ ಜೀವನ ಚರಿತ್ರದಿಂದಲೇ, ತಮಗೆ ದಾಸರ ಪದಗಳ ರುಚಿಯು ಆಗಿರತಕ್ಕದೆಂದು ಅವರು ಹೇಳುತ್ತಿದ್ದರು. ಉತ್ತರ ಕರ್ನಾಟಕದಲ್ಲಿ ಭೋಜನಾದಿ ಪ್ರಸಂಗಗಳಲ್ಲಿ ಗಾಯನವಾಡುವದಾದರೆ, ಮರಾಠಿಯಲ್ಲಿಯ ಸಂಗೀತ ಪದ್ಯಗಳನ್ನು ಅನ್ನುವ ವಿಚಿತ್ರ ಪಟವನ್ನು ಕಂಡು ಅವರು ಕನ್ನಡಿಗರ ಸ್ವಾಭಿಮಾನ ಶೂನ್ಯತೆಯ ಬಗ್ಗೆ ಹಳಹಳಿಸುತ್ತಿದ್ದರು. ಮಹಾನ್ ಭಗವದ್ಭಕ್ತರಾದ ಅನೇಕದಾಸರ ಅನುಗ್ರಹವಾದಂಥ ಕನ್ನಡ ದಾಸಕೂಟದ ಪದ್ಯಗಳ ಮಾಧುರ್ಯವನ್ನು ಕೇಳುವದು ಉತ್ತರ ಕನ್ನಡಿಗರ ಹಣೇಬರಹದಲ್ಲಿಲ್ಲವೆಂದು ಅವರನ್ನು ಹಿಯಾಳಿಸಿ, ಅವರು ಸ್ವತಃ ಇಂಥ ಎಲ್ಲ ಪ್ರಸಂಗಗಳಲ್ಲಿ ದಾಸರಪದಗಳನ್ನು ಅನ್ನುವ ಪರಿಪಾಠವನ್ನು ಹಾಕಿದರು.

ಗೋಪಾಲರಾಯರು ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ತೀರಿದ್ದರಿಂದ ರಾಘವೇಂದ್ರರಾಯರಮೇಲೆ ಸಂಸಾರದಭಾರವು ಅವರ ಚಿಕ್ಕ ವಯಸ್ಸಿನಲ್ಲಿಯೇ ಬಿದ್ದಿತು. ಬಿ. ಎ. ಪರೀಕ್ಷೆಯಾದನಂತರ ಧಾರವಾಡ ಮಿಶನ್ ಹಾಯಸ್ಕೂಲಿನಲ್ಲಿ ಸನ್ ೧೮೯೭ನೇ ಇಸ್ವಿಯಲ್ಲಿ ಕೆಲಸವನ್ನು ಹಿಡಿದರು. ಅಲ್ಲಿ ಶಿಕ್ಷಕರಾಗಿ ವಿದ್ಯಾರ್ಥಿವರ್ಗದಲ್ಲಿ ಅವರು ಒಳ್ಳೇ ಹೆಸರನ್ನು ಪಡೆದರು. ಇಂಗ್ಲೀಷ ವಿದ್ಯೆಯಲ್ಲಿ ಅವರು ಬಹು ನಿಷ್ಣಾತರು. ಧಾರವಾಡದಲ್ಲಿ ಶಿಕ್ಷಕರಿದ್ದಾಗ್ಯೆ ಮತ್ತು ಆ ಮುಂದೆ ಬೆಂಗಳೂರ, ಮೈಸೂರ, ಬೆಳಗಾವ, ಪುಣೆ, ಮಂಗಳೂರ, ಮಡಿಕೇರಿ ಮುಂತಾದ ಅನೇಕಸ್ಥಳಗಳಲ್ಲಿ ಅವರಿಗೆ ವ್ಯಾಖ್ಯಾನ ಕೊಡುವ ಪ್ರಸಂಗಗಳು ಬಂದವು ಅವರ ವ್ಯಾಖ್ಯಾನಗಳನ್ನು ಕೇಳಿದವರು, ಅವರ ವಾಕ್‌ಪಟುತ್ವವನ್ನು ಮತ್ತು ಅವರ ಘನಪಾಂಡಿತ್ಯವನ್ನು ಬಲು ಪ್ರಶಂಸಿಸುತ್ತಾರೆ. ಧಾರವಾಡದಲ್ಲಿ ಅವರ ಕಕ್ಕಂದಿರಾದಮೈ. ಒಳ್ಳಾರಿ ರಾಮರಾಯರ ಪ್ರೇರಣೆಯಿಂದ ರಾಘವೇಂದ್ರರಾಯರು ಸನ್ ೧೯೦೧ರಲ್ಲಿ ವಕೀಲ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಧಾರವಾಡದಲ್ಲಿಯೇ ವಕೀಲಿಯನ್ನು ಪ್ರಾರಂಭಿಸಿದರು. ಅನಂತರವೇ ಅವರ ಸಾರ್ವಜನಿಕ ಆಯುಷ್ಯ ಕ್ರಮವು ಮೊದಲು ಗೊಂಡಿತು.

ಅವರು ವಕೀಲರಾದನಂತರ ಧಾರವಾಡದಲ್ಲಿಯ ಅನೇಕ ಕನ್ನಡ ಅಭಿಮಾನಿಗಳಸಂಗಡ ಅವರಸ್ನೇಹವು ಬೆಳೆಯಿತು. ರಾಘವೇಂದ್ರರಾಯರ ಬಾಲ್ಯದ ವಿದ್ಯಾಭ್ಯಾಸವು ತೆಲುಗಿನಲ್ಲಿ ಆಗಿತ್ತು. ಅವರಿಗೆ ಆರಂಭದಲ್ಲಿ ಕನ್ನಡದಲ್ಲಿ ಭಾಷಣಮಾಡಲಿಕ್ಕೆ ಯಾತನಾಗುತ್ತಿತ್ತು. ಅವರಿಗೆ ಆಕಾಲಕ್ಕೆ ಮರಾಠಿಯಂತೂ ತಿಳಿಯುತ್ತಿದ್ದಿಲ್ಲ. ತಾವು ಅಚ್ಚಗನ್ನಡಿಗರಾಗಿ, ಕರ್ನಾಟಕದಲ್ಲಿದ್ದರೂ ಕೂಡ ಬಾಲ್ಯದಲ್ಲಿಯೇ ತಮಗೆ ತೆಲುಗಿನಿಂದ ಅಭ್ಯಾಸಮಾಡಬೇಕಾದ್ದು ತಮ್ಮ ದುರ್ದೈವವೆಂದೇ ಅವರು ತಿಳಿಯುತ್ತಿದ್ದರು. ಉತ್ತರ ಕರ್ನಾಟಕದಲ್ಲಿಯ ಸಾರ್ವಜನಿಕ ಪ್ರಸಂಗದಲ್ಲಿ ಬಹುಶಃ ಮರಾಠಿಗೇ ಅಗ್ರಮನ್ನಣೆಯಿದ್ದುದರಿಂದ ಅವರು ಕನ್ನಡಿಗರ ಚೈತನ್ಯ ಹೀನತೆಯನ್ನು ನೋಡಿ ವ್ಯಸನಪಡುತ್ತಿದ್ದರು. ಕನ್ನಡಿಗರಲ್ಲಿ ಪರಸ್ಪರ ಒಳಿಕೆಯು ಬೆಳದು ಚೈತನ್ಯವು ಹುಟ್ಟಬೇಕಾದರೆ, ಕನ್ನಡನುಡಿಯನ್ನೇ ಸರ್ವಪ್ರಸಂಗಗಳಲ್ಲಿ ಬಳಸುವದೇ ಅತ್ಯುತ್ತಮವಾದ ಸಾಧನವೆಂದು ಅವರು ತಮ್ಮ ಅನುಭವದಿಂದ ಕಂಡುಹಿಡಿದರು.

ಅದೇ ಕಾಲಕ್ಕೆ ಆಂಧ್ರ ದೇಶದಲ್ಲಿ ಆಂಧ್ರರ ಗಲಾಟೆಯು ಹೆಚ್ಚಾಗಿ ಆಂಧ್ರಭಾಷೆ, ಆಂಧ್ರಸಂಸ್ಕೃತಿ, ಆಂಧ್ರ ಪ್ರಾಂತ, ಮುಂತಾದವುಗಳಬಗ್ಗೆ ಅಲ್ಲಿಯ ಮುಂದಾಳುಗಳು ಮಾಡುವ ಪ್ರಯತ್ನಗಳನ್ನು ಅವರು ಕಂಡರು. ಮತ್ತು ಇಲ್ಲಿಯ ಅವರ ಸ್ನೇಹಿತರಾದ ಶ್ರೀ. ಕೃಷ್ಣರಾವ ಮುದವೇಡಕರ, ಶ್ರೀ. ವೆಂಕಟರಾವ ಆಲೂರ, ವೈ. ವಾಸುದೇವಾಚಾರ್ಯ ಸಕ್ಕರಿ (ಶಾಂತಕವಿ) ಶ್ರೀ. ವೆಂಕಟರಾವ ಮುದವೇಡಕರ ಶ್ರೀ ನಾರಾಯಣರಾವ ದೇಶಪಾಂಡೆ, ಮುಂತಾದವರಕೂಡ, ಕರ್ನಾಟಕದ ವಿಚಿತ್ರಸ್ಥಿತಿಯಬಗ್ಗೆ ಅವರು ವಿಚಾರಮಾಡುತ್ತಿದ್ದರು. ಮದ್ರಾಸ ಇಲಾಖೆಯ ಕನ್ನಡಿಗರಕ್ಕಿಂತಲೂ ಉತ್ತರ ಕರ್ನಾಟಕದ ಕನ್ನಡಿಗರು ಭಾಷಾದೃಷ್ಟಿಯಿಂದ ಹೆಚ್ಚು ಭ್ರಷ್ಟರಾಗಿರುವರೆಂದು ಅವರು ಯಾವಾಗಲೂ ಹೇಳುತ್ತಿದ್ದರು. ಕರ್ನಾಟಕದಲ್ಲಿಯ ಜಾತಿ ವೈಷಮ್ಯವು ಕಡಿಮೆಯಾಗಲಿಕ್ಕೂ ಕರ್ನಾಟಕದ ಯುವಕರಲ್ಲಿ ತೇಜವು ಬೆಳೆದು ಅವರಿಂದ ದೇಶಸೇವೆಯ ಕೆಲಸವಾಗಲಿಕ್ಕೂ ಜನರಲ್ಲಿ ಮಾತೃಭಾಷಾಪ್ರೇಮವು ಹುಚ್ಚು ಬೆಳೆಯಬೇಕು, ನಾಡಿನ ಅಭಿಮಾನವು ಬೆಳೆಯಬೇಕು ಎಂಬದನ್ನು ತಿಳಿದು, ಅವರು ತಮ್ಮ ಸ್ನೇಹಿತರೊಡನೆ ಕನ್ನಡದ ಪ್ರಸಾರಾರ್ಥವಾಗಿ ಮತ್ತು ಎಲ್ಲ ಪ್ರಸಂಗಗಳಲ್ಲಿ ಕನ್ನಡಕ್ಕೇ ಅಗ್ರಸ್ಥಾನವು ದೊರೆಯಬೇಕೆಂದು ಪ್ರಯತ್ನ ಮಾಡುತ್ತಿದ್ದರು. ಯಾವದೇ ಕೆಲಸವನ್ನು ಕೈಕೊಂಡರೆ ಅದನ್ನು ಒಮ್ಮನಸ್ಸಿನಿಂದ ಕಡೆಗಾಣಿಸುವದರಲ್ಲಿ ಅವರು ಬಲು ನಿಪುಣರಿದ್ದರು. ಹಗಲೂ, ಇರುಳೂ ತಾವು ಕೆಲಸವನ್ನು ಮಾಡಿ ಮತ್ತೊಬ್ಬರಿಗೆ ಅದೇ ಕೆಲಸವನ್ನು ಮಾಡಲಿಕ್ಕೆ ಅವರಿಗೆ ಹಚ್ಚುತ್ತಿದ್ದರು. ಕನ್ನಡ ಭಾಷಾಪ್ರೇಮವನ್ನು ಬೆಳಸಬೇಕಾದರೆ, ತುಂಡು ತುಂಡು ಆದ ಕನ್ನಡ ಪ್ರಾಂತದ ಅನೇಕ ಭಾಗಗಳಲ್ಲಿಯ ಆತ್ಮೀಯತ್ವವನ್ನೂ ಆತ್ಮವಿಶ್ವಾಸವನ್ನೂ ಹುಟ್ಟಿಸುವದು ಅವಶ್ಯವಿರುತ್ತದೆಂದು ಅವರು ನಿರ್ಧಾರಮಾಡಿದರು. ಮತ್ತು ಕರ್ನಾಟಕದಲ್ಲಿ ಜಾಗ್ರತಿಯು ಹುಟ್ಟಬೇಕಾದರೆ ಅನ್ಯಭಾಷೆಗಳ ನೈಸರ್ಗಿಕ ಪ್ರಾಬಲ್ಯವನ್ನು ಕಡೆದುಹಾಕಬೇಕೆಂದು ಸಹ ಅವರು ನಿರ್ಧಾರಮಾಡಿದರು. ಮತ್ತು ಈ ಕಾರ್ಯಕ್ಕೆ ಒಂದು ಮಧ್ಯವರ್ತಿ ಸಭೆಯ ಅವಶ್ಯಕತೆಯು ತೋರಿದ್ದರಿಂದ ಸನ್ ೧೮೯೦ನೇ ಇಸ್ವಿಯಲ್ಲಿ ಧಾರವಾಡದಲ್ಲಿ ಅವರು ಕರ್ನಾಟಕ ಸಭೆಯೆಂಬ ಸಂಸ್ಥೆಯನ್ನು ಸ್ಥಾಪಿಸಿದರು. ಆ ಸಭೆಯ ಸೂತ್ರಧಾರತ್ವವು ಅವರ ಕಡೆಗಿದ್ದಿತು. ಆ ಸಭೆಯ ಕಾರ್ಯಕ್ಕಾಗಿ ಅವರು ಮದ್ರಾಸದಿಂದ ಮುಂಬಯಿವರೆಗೆ ಒಹುತರ ಎಲ್ಲ ಮುಖ್ಯ ಮುಖ್ಯ ಪಟ್ಟಣಗಳಿಗೆ ಹೋಗಿ ಸಭೆಯ ಉದ್ದೇಶ್ಯವನ್ನು ಅಲ್ಲಿಯ ಕನ್ನಡಿಗರಿಗೆ ತಿಳಿಸಿಹೇಳಿದರು. ಅದೇಕಾಲಕ್ಕೆ ಪುಣೆಯಲ್ಲಿಯ ಫರ್ಗ್ಯೂಸನ್, ಡೆಕ್ಕನ್, ಮುಂತಾದ ಕಾಲೇಜಗಳಲ್ಲಿ ಅವರ ವ್ಯಾಖ್ಯಾನಗಳಾದವು. ಅವರ ಸ್ನೇಹದಿಂದ ಆ ಆ ಕಾಲೇಜಗಳಲ್ಲಿಯ ಕನ್ನಡ ಯುವಕರಲ್ಲಿ ಭಾಷೆಯ ಪ್ರೇಮವು ದೃಢವಾಗಿ

ಹತ್ತಿತು. ಅವರು ಅನೇಕ ಸ್ಥಳಗಳಲ್ಲಿ ಕರ್ನಾಟಕಸಭೆಗಳನ್ನು ಆ ಕಾಲಕ್ಕೆ ಸ್ಥಾಪಿಸಿದ್ದರು. ಮಾಂಟೆಗೂ ಸಾಹೇಬರು ಹಿಂದುಸ್ಥಾನಕ್ಕೆ ಬಂದಾಗ್ಯೆ, ಕೂಡು ಕುಂಡಾದ ಕರ್ನಾಟಕಪ್ರಾಂತವು ಏಕವಾಗಬೇಕೆಂಬ ಉದ್ದಿಶ್ಯಾರ್ಥ ಅನೇಕ ಪಟ್ಟಣಗಳಿಂದ ಸಾಹೇಬರವರ ಕಡೆಗೆ ವಿನಂತಿ ಪತ್ರಿಕೆಗಳು ಹೋಗುವಂತೆ ಅವರೇ ಏರ್ಪಡಿಸಿದರು. ಕರ್ನಾಟಕದ ವೈಶಿಷ್ಟ್ಯವು ಬೇರೆ ಇರುತ್ತದೆ. ಇತರ ನೆರೆಹೊರೆಯವರ ನೆರಳಿನಲ್ಲಿ ಕರ್ನಾಟಕದ ವೈಶಿಷ್ಟ್ಯವು ಬೆಳೆಯದು. ಅದು ತನ್ನ ಬಲದಿಂದಲೇ ಬೆಳೆಯುವದು ಎಂಬದಾಗಿ ಅವರು ಸಾರಿ ಸಾರಿ ಹೇಳುತ್ತಿದ್ದರು. ಗಣೇಶ ಉತ್ಸವಾದಿ ಪ್ರಸಂಗಗಳಲ್ಲಿ ಧಾರವಾಡ ಮುಂತಾದ ಸ್ಥಳಗಳಲ್ಲಿ ಮಹಾರಾಷ್ಟ್ರದಿಂದ ವ್ಯಾಖ್ಯಾತೃಗಳನ್ನು ಕರೆಸಿ ಅವರ ವ್ಯಾಖ್ಯಾನಗಳನ್ನು ಮರಾಠಿಯಲ್ಲಿ ಮಾಡಿಸುವ ರೂಢಿಯು ಆ ಕಾಲಕ್ಕೆ ವಿಶೇಷ ಪ್ರಚಾರದಲ್ಲಿತ್ತು. ಮರಾಠಿಯಿಂದ ವ್ಯಾಖ್ಯಾನಗಳನ್ನು ಮಾಡಿಸುವದರಿಂದ ಲಿಂಗಾಯತಾದಿ ಮುಖ್ಯ ಕನ್ನಡ ಸಮಾಜಗಳಿಗೆ ಏನೂ ಫಲ ದೊರೆಯದು. ವ್ಯಾಖ್ಯಾನಗಳು ಮರಾಠಿ ಮಾತನಾಡುವ ಮತ್ತು ತಿಳಿಯುವ ಅಲ್ಪ ಸಂಖ್ಯಾಕರ ಆಟಗಳಲ್ಲ! ಅವು ನಿಜವಾಗಿ ಜ್ಞಾನ ಸತ್ರಗಳಿರುತ್ತವೆ. ಆದ್ದರಿಂದ ಮರಾಠಿ ವ್ಯಾಖ್ಯಾನಗಳಿಗೆ ಸಾರ್ವಜನಿಕ ಪ್ರಸಂಗಗಳಲ್ಲಿ ಅವಕಾಶವಿರಕೂಡದೆಂದು ಅವರು ಪ್ರಯತ್ನಿಸಹತ್ತಿದರು. ಇದಕ್ಕೆ ಅನೇಕ ಅದೂರ ದೃಷ್ಟಿಯ ಮತ್ತು ತಿಳುವಳಿಕೆಯಿಲ್ಲದ ಜನರು ಅವರಿಗೆ ಮರಾಠಿಯ ದ್ವೇಷಕನೆಂದು ಹೆಸರಿಟ್ಟರು! ಆದರೂ ಅವರು ತಮ್ಮ ಕಾರ್ಯವನ್ನು ಬಿಡಲಿಲ್ಲ. ಅವರಿಗೆ ಬ್ರಾಹ್ಮಣ ಬ್ರಾಹ್ಮಣೇತರಲ್ಲಿಯ ಒಡಕನ್ನು ಕಂಡು ಬಲುವ್ಯಸನವಾಗುತ್ತಿತ್ತು. ಕರ್ನಾಟಕದ ಏಳ್ಗೆಯು ಆಗಬೇಕಾದರೆ ಬ್ರಾಹ್ಮಣ ಲಿಂಗಾಯತರಲ್ಲಿ ಮುಖ್ಯವಾಗಿ ಐಕ್ಯವಾಗಲೇಬೇಕು, ಮತ್ತು ಅದರಸಲುವಾಗಿ ಬ್ರಾಹ್ಮಣರು ತಮ್ಮ ಸ್ವಾರ್ಥವನ್ನು ಬಿಡಲೇ ಬೇಕು. ಕನ್ನಡವೇ ಎಲ್ಲ ಪ್ರಸಂಗಗಳಲ್ಲಿ ಪ್ರಚಾರದಲ್ಲಿ ಬರಬೇಕು; ಎಂದು ಅವರು ಭಗೀರಥ ಪ್ರಯತ್ನಗಳನ್ನು ಮಾಡಿದರು. ಅನೇಕ ಬ್ರಾಹ್ಮಣೇತರ ಮುಖಂಡರ ಊರೂರು ಮನೆ ಮನೆಗಳಿಗೆ ಹೋಗಿ ತಮ್ಮ ಕರ್ನಾಟಕ ಸಭೆಯ ಉದ್ದಿಷ್ಟವನ್ನು ಅವರ ಮುಂದಿಟ್ಟು ತಮ್ಮ ಚಳವಳಿಯ ಅಂತರಂಗವನ್ನು ಅವರಿಗೆ ತಿಳಿಸಿದರು. ಬ್ರಾಹ್ಮಣೇತರ ಪ್ರಮುಖರಾದ ಮುಂದಾಳುಗಳಲ್ಲಿ ರಾಘವೇಂದ್ರರಾಯರ ಬಗ್ಗೆ ಒಳ್ಳೇ ಪೂಜ್ಯಭಾವವು ಇದ್ದಿತು. ರಾಘವೇಂದ್ರರಾಯರಂಥ ಜನರು ಬ್ರಾಹ್ಮಣ ಮುಖಂಡರಲ್ಲಿದ್ದರೆ, ಬ್ರಾಹ್ಮಣ ಬ್ರಾಹ್ಮಣೇತರ ವಾದವು ಹುಟ್ಟಲಿಕ್ಕೆ ಅವಕಾಶವುಹಿಡಿಯಲಿಕ್ಕಿಲ್ಲವೆಂದು ಅವರಲ್ಲಿ ಅನೇಕರು ಸಾರಿರುತ್ತಾರೆ!

ಆಂಧ್ರಪ್ರಾಂತಕ್ಕೆ ಸನ್ ೧೯೧೯ ನೇ ಇಸ್ವಿಯಲ್ಲಿ ಕಾಂಗ್ರೆಸ್ಸಿನಿಂದ ಬೇರೆ ಪ್ರಾಂತವು ದೊರೆಯಿತು. ಅದೇ ಪ್ರಕಾರ ಕರ್ನಾಟಕಕ್ಕಾದರೂ ಸ್ವತಂತ್ರ ಪ್ರಾಂತವು ದೊರೆಯಬೇಕೆಂದು ಅವರು ದೀರ್ಘಪ್ರಯತ್ನ ಮಾಡಹತ್ತಿದರು. ೧೯೨೦ ನೇ ಇಸ್ವಿಯ ಕಾಂಗ್ರೆಸ್ಸದ ಪೂರ್ವದಲ್ಲಿ ಕೆಲವು ತಿಂಗಳವರೆಗೆ ಅವರು ತಮ್ಮ ವ್ಯವಸಾಯವನ್ನು ಬಿಟ್ಟು, ಕರ್ನಾಟಕದ ಎಲ್ಲ ಮುಖ್ಯಪಟ್ಟಣಗಳಿಗೆ ಹೋಗಿ, ಅಲ್ಲಿ ಸಭೆಗಳನ್ನು ಕೂಡಿಸಿ ಜನರಲ್ಲಿ ಜಾಗ್ರತೆಯನ್ನುಂಟುಮಾಡಿ, ಪ್ರತಿಯೊಂದುಸ್ಥಳದಿಂದ ಕರ್ನಾಟಕಕ್ಕೆ ಸ್ವತಂತ್ರಪ್ರಾಂತವನ್ನು ಕೊಡಬೇಕೆಂಬ ಅರ್ಜಿಗಳನ್ನು ಕಾಂಗ್ರೆಸದ ಕಾರ್ಯಕಾರಿ ಮಂಡಳದಕಡೆಗೆ ಕಳಿಸಿದರು. ಮತ್ತು ಕರ್ನಾಟಕದಲ್ಲಿ ಒಂದೇಸವನೇ ಕರ್ನಾಟಕ, ಕರ್ನಾಟಕವೆಂಬ ಕೋಲಾಹಲವನ್ನೆಬ್ಬಿಸಿದರು. ಕನ್ನಡಿಗರ ಉತ್ಕಂಠೆಯ ನಿಜಸ್ವರೂಪವನ್ನು ಆ ವರ್ಷದ ಕಾಂಗ್ರೆಸದ ಅಧ್ಯಕ್ಷರಾದ ವಿಜಯರಾಘವಾಚಾರ್ಯರ ಲಕ್ಷ್ಯಕ್ಕೆ ತಂದುಕೊಡುವ ಉದ್ದೇಶ್ಯದಿಂದ, ಅಧ್ಯಕ್ಷರು ಮದ್ರಾಸದಿಂದ ನಾಗಪೂರಕ್ಕೆ ಹೊರಟಾಗ್ಯೆ, ಗುಂತಕಲ್ಲದಿಂದ ಸೊಲ್ಲಾಪೂರದವರೆಗಿನ ರೇಲುದಾರಿಯಲ್ಲಿಯ, ಕರ್ನಾಟಕದ ಮುಖ್ಯ ಮುಖ್ಯ ಪಟ್ಟಣಗಳಿಂದ, ಅವರಿಗೆ ಆ ಆ ಸ್ಥಳದ ಮಹಾಜನರ ಕಡೆಯಿಂದ, ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತವನ್ನು ಕೊಡಬೇಕೆಂಬ ಬಿನ್ನಹಪೂರ್ವಕ ಮಾನಪತ್ರಗಳೂ ಕಾಂಚುಬಿಲ ಪೂಮಾಲೆಗಳೂ ಅರ್ಪಿಸಲ್ಪಡುವಹಾಗೆ ಶ್ರೀ ರಾಘವೇಂದ್ರರಾಯರು ಏರ್ಪಾಡುಮಾಡಿದ್ದರು. ವಿಜಯರಾಘವಾಚಾರ್ಯರು ತಮಿಳರು. ಅವರಿಗೆ ಆಂಧ್ರರ ಚಳವಳಿಯು ಸೇರಿದ್ದಿಲ್ಲ. ಅವರು ಭಾಷಾವಾರ ಪ್ರಾಂತರಚನೆಗೆ ಅನುಕೂಲವಿದ್ದಿಲ್ಲ. ಆದರೆ ಕರ್ನಾಟಕದ ಕೋಲಾಹಲವನ್ನು ಕಂಡು ಅವರು ಬೆರಗಾದರು. ರಾಘವೇಂದ್ರರಾಯರ ದೀರ್ಘ ಪ್ರಯತ್ನದಿಂದ ಆ ಸಾರೆಯ ನಾಗಪೂರ ಕಾಂಗ್ರೆಸ್ಸಿಕ್ಕೆ ಕರ್ನಾಟಕದಿಂದ ೬೦೦ ನೂರರವರೆಗೆ ಪ್ರತಿನಿಧಿಗಳು ಹೋಗಿದ್ದರು. ಮತ್ತು ನಾಗಪೂರದಲ್ಲಿ ದೇ. ಗಂಗಾಧರರಾಯರಂಥವ ಕರ್ನಾಟಕದ ಪ್ರಮುಖ ಮುಂದಾಳುಗಳು ಸಹ ಅನುಕೂಲವಿಲ್ಲದಾಗ್ಯೂ ಒಂದೇಸವನೆ ಪ್ರಯತ್ನಮಾಡಿ ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತವನ್ನು ದೊರಕಿಸಿದರು. ಆಂಧ್ರ ಪ್ರಾಂತದ ಪ್ರಸಿದ್ಧ ಮುಂದಾಳುಗಳಲ್ಲಿ ಕಂಡುಬರುವ ನಿಸ್ಸೀಮ ಭಾಷಾಪ್ರೇಮವು ಕರ್ನಾಟಕದ ದುರ್ದೈವದಿಂದ ಕರ್ನಾಟಕದ ಮುಂದಾಳುಗಳಲ್ಲಿಲ್ಲದಿರುವದು ಕರ್ನಾಟಕದ ಹತಭಾಗ್ಯತನವೇ ಸರಿ; ಎಂದು ಅವರು ಮರುಗುತ್ತಲಿದ್ದರು.

ಮುಂದೆ ಮಹಾತ್ಮಾ ಗಾಂಧಿಯವರ ಅಸಹಕಾರದ ಕೋಲಾಹಲವು ದೇಶದತುಂಬೆಲ್ಲ ಎದ್ದಿತು. ರಾಘವೇಂದ್ರರಾಯರಂತೂ ತೀರ ಬಡವರು. ತಲೆಯಮೇಲೆ ಸಂಸಾರದ ಭಾರವು ದೊಡ್ಡದಿದ್ದಿತು. ಅನೇಕ ಮುಖಂಡರು ವಕೀಲಿಯನ್ನು ಬಿಡಹತ್ತಿದರು. ರಾಘವೇಂದ್ರರಾಯರ ನಿಂದಕರು ವಿಶೇಷವಾಗಿ ಮರಾಠಿಗೆ ಮರುಳಾದವರು "ಕಡವಾ ಇವರು ಕನ್ನಡ ಮರಾಠಿ ಎಂದು ದ್ವೇಷವನ್ನು ಬೆಳೆಸುವವರೇ ಹೊರತು ರಾಷ್ಟ್ರಪ್ರೇಮಿಗಳಲ್ಲ ಅವರು ವಕೀಲಿಯನ್ನು ಬಿಡಲಾರರು" ಎಂದು ಸಾರುತ್ತಿದ್ದರು. ಅಲ್ಲಿಯವರೆಗೆ ವಕೀಲಿಯನ್ನು ಬಿಟ್ಟಂಥ ಮುಖಂಡರು ಸ್ವಾಸ್ಥ್ಯೆಯನ್ನು ಸಂಪಾದಿಸಿದ್ದವರು; ಅವರಿಗೆ ಮಧ್ಯಾಹ್ನದ ಚಿಂತೆಯಿದ್ದಿಲ್ಲ. ರಾಘವೇಂದ್ರರಾಯರ ಸ್ಥಿತಿಬೇರೆ; ಉಳಿದವರ ಸ್ಥಿತಿಬೇರೆ; ಆದರೆ ಕರ್ನಾಟಕದ ಚಳವಳಿಯು ದೇಶಪೋಷಕವು; ಅದು ದೇಶಘಾತಕವಲ್ಲ; ತಾವು ಹಿಂದೆ ಉಳಿದರೆ ಕರ್ನಾಟಕದ ಚಳವಳಿಯ ನಿಂದಕರಿಗೆ ಅವಕಾಶಕೊಟ್ಟಂತೆ ಆಗುವದೆಂದು ವಿಚಾರಿಸಿ ಅವರು ಅಸಹಕಾರ ಚಳವಳಿಯಲ್ಲಿ ಧುಮ್ಮಿಕ್ಕಿದರು! ಅದರಲ್ಲಿ ಸಹ ಅವರು ಮಾಡಿದ ಕಾರ್ಯವು ಮಿಗಿಲಾದದ್ದು! ಧಾರವಾಡ, ಬಳ್ಳಾರಿ ಎರಡು ಜಿಲ್ಲೆಗಳಲ್ಲಿ ಅವರು ಒಂದೇಸವನೇ ತಿರುಗಾಡಿ ಅನೇಕ ಜನರನ್ನು ಅಸಹಕಾರ ಕಾರ್ಯದಲ್ಲಿ ಸೇರಿಸಿದರು. ಮತ್ತು ಆ ಎರಡೂ ಜಿಲ್ಲೆಗಳಲ್ಲಿಯ ಅಸಹಕಾರ ಮಾಡಿದ ಜನರ ಜೀವನಸ್ವಾಸ್ಥ್ಯೆಯ ಬಗ್ಗೆ ಫಂಡು ಕೂಡಿಸಿ, ಅಲ್ಲಿಯ ಕಾಂಗ್ರೆಸ ಮುಂದಾಳುಗಳ ಸ್ವಾಧೀನಕ್ಕೆ ಅದನ್ನು ಕೊಟ್ಟರು. ಅಸಹಕಾರ ಚಳವಳಿಯು ಧುಂದಕ್ಕಿರುವವರೆಗೆ ಅವರು ಒಂದೇ ಸವನೇ ಹೋರಾಡಿದರು. ಆ ಕಾಲಕ್ಕೆ ಧಾರವಾಡದ ಗೋಳಿಬಾರಿನ ಖಟ್ಲೆ, ರಾಣೇಬೆನ್ನೂರಿನ ಜಿಲ್ಲಾ ಪರಿಷತ್ತು

ಮತ್ತು ಬಳ್ಳಾರಿ ಜಿಲ್ಹೆಯ "ಕಾಂಗ್ರೆಸ ಕಮಿಟೀಸ" ಮುಂತಾದ ಪ್ರಸಂಗಗಳಲ್ಲಿ ಅವರು ಹಗಲಿರುಳೂ ಮಾಡಿದ ಕಾರ್ಯವು ಇವತ್ತಿಗೂ ಜನರ ಕಣ್ಣೆದುರಿಗೆ ಇರುತ್ತದೆ. ಅಸಹಕಾರ ಚಳವಳಿಯಲ್ಲಿ ಅವರು ತಮ್ಮಲ್ಲಿಯ ಸರ್ವಸ್ವವನ್ನು ಕಳೆದ ಕೊಂಡರು. ಸಾರ್ವಜನಿಕ ದ್ರವ್ಯದ ವ್ಯಯವನ್ನು ಮಾಡುವದರಲ್ಲಿ ಅವರು ಬಲು ನಿಷ್ಠುರರು. ಅವರ ಈ ಸ್ವಭಾವಕ್ಕೆ ಜನರು ಅವರ ಮೇಲೆ ಸಿಟ್ಟಾಗುತ್ತಿದ್ದರು. ಅಸಹಕಾರ ಚಳವಳಿಯು ಹುಟ್ಟಿದ ಕೂಡಲೇ ಜನತೆಯ ದ್ರವ್ಯದ ಮೇಲೆ ತನ್ನ ಕುಟುಂಬದ ಭಾರವನ್ನು ಹಾಕುವದು ಅಯೋಗ್ಯವೆಂದು ತಿಳಿದು ಅವರು ಪುನರಪಿ ವಕೀಲಿಯನ್ನೇ ಕೈಕೊಂಡರು. ಆದರೂ ಅವರು ಕಡೆಯ ವರೆಗೆ ಖಾದೀ ಧರಿಸುವದನ್ನು ಬಿಡಲಿಲ್ಲ. ಸಾಂಪತ್ತಿಕ ಸ್ಥಿತಿಯ ಅನನುಕೂಲತೆಯ ಮೂಲಕ ಅವರಿಗೆ ಕೆಲವು ಕಾಲದ ವರೆಗೆ ಹಿಂದಕ್ಕೆ ಎಳೆಯುವದೇ ಅವಶ್ಯವಾಗಿತ್ತು. ಆದರೂ ಆ ಕಾಲದ ಅಜ್ಞಾತಸ್ಥಿತಿಯಲ್ಲಿ ಸುಮ್ಮನೇ ಕೂಡಲಿಲ್ಲ. ಅನೇಕ ಶಾಸ್ತ್ರಗಳನ್ನು ಅಂದರೆ ಭೂಗರ್ಭಶಾಸ್ತ್ರ, ಅಂತರಿಕ್ಷ ನಿರ್ಣಯ, ವನಸ್ಪತಿಶಾಸ್ತ್ರ, ಪ್ರಾಣಿಶಾಸ್ತ್ರ, ಶಿಲ್ಪಶಾಸ್ತ್ರ, ಇತಿಹಾಸ ಭೂಗೋಲ ಇವುಗಳನ್ನೊಳಗೊಂಡ ಅನೇಕ ಗ್ರಂಥಗಳನ್ನು ಅಭ್ಯಾಸ ಮಾಡುತ್ತಿದರು. ಮತ್ತೂ ಅವರು ತಮ್ಮ ಅಭ್ಯಾಸದ ಸಲುವಾಗಿ "ಎನ್‌ಸಾಯಕ್ಲೋಪೀಡಿಯಾ ಬ್ರಿಟಾನಿಕಾ" ಈ ಗ್ರಂಥದ ಪುಸ್ತಕಗಳನ್ನು ಓದುವದನ್ನು ನೋಡಿ ಅವರ ಅನೇಕ ಸ್ನೇಹಿತರು ಪ್ರೇಮಪೂರ್ವಕವಾಗಿ ಅವರ ಚೇಷ್ಟೆಯನ್ನು ಮಾಡುತ್ತಿದ್ದರು.

ಸನ್ ೧೯೨೬ನೇ ಇಸ್ವಿಯಲ್ಲಿ ಆಂಧ್ರ ವಿಶ್ವ ವಿದ್ಯಾಲಯದ ಸ್ಥಾಪನೆಯಾಯಿತು. ಆ ಕಾಲಕ್ಕೆ ಬಳ್ಳಾರಿ ಜಿಲ್ಹೆಯನ್ನು ಆಂಧ್ರ ವಿಶ್ವ ವಿದ್ಯಾಲಯದ ಅಧೀನದಲ್ಲಿ ಸರಕಾರದವರು ಸೇರಿಸಿದರು. ಕರ್ನಾಟಕದ ಶಿಖರವಾದಂಥ ಭಾಗವು ಆಂಧ್ರ ಸಂಸ್ಕೃತಿಯ ನೆರಳಿನಲ್ಲಿ ಕಾಯಂ ವಾಗಿ ಹೋದರೆ ಕರ್ನಾಟಕದ ಚಳವಳಿಗೆ ಹಾನಿಯಾಗಿ ಕರ್ನಾಟಕಕ್ಕೆ ಕಾಯಂವಾದ ಹಾನಿಯಾಗುವದೆಂದು ಪುನರಪಿ ಅವರು ಮುಂದಕ್ಕೆ ಬಂದು ಬಳ್ಳಾರಿ ಜಿಲ್ಹೆಯನ್ನು ಕಾಯಂವಾಗಿ ಆಂಧ್ರ ವಿಶ್ವವಿದ್ಯಾಲಯಕ್ಕೆ ಸೇರಿಸಬಾರದೆಂದು ಬಲವತ್ತಾದ ಚಳವಳಿಯನ್ನೇ ಆರಂಭಿಸಿದರು. ಬಳ್ಳಾರಿ ಬೆಂಗಳೂರು ಧಾರವಾಡ ಬೆಳಗಾವ ವಿಜಾಪೂರ ಮುಂತಾದ ಸ್ಥಳಗಳಲ್ಲಿಯ ಮುಖಂಡರನ್ನೇ ಕೂಡಿಕೊಂಡು ಅವರು ಮದ್ರಾಸಕ್ಕೆ ಹೋಗಿ ನಾಮದಾರ ಗವರ್ನರ ಹೋಂ ಮೆಂಬರ ಮುಂತಾದ ವರಿಷ್ಠ ಅಧಿಕಾರಸ್ಥರಿಗೆ ಭೆಟ್ಟಿಯಾಗಿ ಕರ್ನಾಟಕದ ಸಲುವಾಗಿ ಅವರ ಮನಸ್ಸನ್ನು ಒಲಿಸಿದರು. ಅದೇ ಪ್ರಕಾರ ಕೌನ್ಸಿಲ್ ಮೆಂಬರ ಜನರಾದ ಅನೇಕ ಆಂಧ್ರ ತಮಿಳ ಮಲಿಯಾಳ ಕನ್ನಡ ಜನರಿಗೆ ಭೆಟ್ಟಿಯಾಗಿ ಬಲು ಶ್ರಮಪಟ್ಟರು. ಆದರೂ ಅವರ ಮನಸ್ಸಿನಂತೆ ಅವರಿಗೆ ಜಯದೊರೆಯಲಿಲ್ಲ.

ಅವರು ಕರ್ನಾಟಕದ ಸಿಥಿಲ್ಯವನ್ನೆಂದಿಗೂ ಬಿಟ್ಟಿರಲಿಲ್ಲ. ಕರ್ನಾಟಕದ ಜನರಲ್ಲಿಯ ವಿಶೇಷವಾಗಿ ಸುಶಿಕ್ಷಿತರಲ್ಲಿನ ಔದಾಸೀನ್ಯವನ್ನು ಕಂಡು ಅವರು ಕ್ವಚಿತ್ ಕಾಲಕ್ಕೆ ಹತಾಶರಾಗುತ್ತಿದ್ದರು. ಇತ್ತೀಚಿಗೆ ರೂಢಿಬದ್ಧ ಧರ್ಮದಿಂದ ಮತ್ತೂ ಅನೇಕ ಜಾತಿಗಳ ತೊಡಕಿನಿಂದ ಹಿಂದುಸ್ಥಾನದ ಏಳ್ಗೆಗೆ ಬಲು ಆತಂಕವು ಒದಗಿದೆ. ಜನರು ರೂಢಿಯನ್ನು ಬಿಟ್ಟು ದೇಶಸೇವೆ ಮಾಡಲು ಪ್ರಾರಂಭಿಸಿ ಪ್ರಚಾರದಲ್ಲಿದ್ದ ಧರ್ಮಕಲ್ಪನೆಗಳನ್ನು ಸಹ ದೂರಮಾಡದ ಹೊರತು ನಮ್ಮ ದೇಶದ ಏಳ್ಗೆಯ ಮಾರ್ಗವೇ ಇಲ್ಲವೆಂದು ಅವರು ನಂಬಿದ್ದರು. ಆ ಪ್ರಕಾರ ತಮ್ಮ ವಿಚಾರಗಳನ್ನು ತಮ್ಮ ಸ್ನೇಹಿತರಲ್ಲಿ ಹರಡಿ ತಾವು ಸ್ವತಃ ಆಚರಿಸುತ್ತಿದ್ದರು.

ಇತ್ತೀಚಿಗೆ ಅಮೇರಿಕಾ ದೇಶಕ್ಕೆ ಹೋಗಬೇಕೆಂಬ ಲವಲವಿಕೆಯು ಅವರಲ್ಲಿ ಹುಟ್ಟಿತ್ತು! ಮತ್ತು ಆ ಉದ್ದೇಶದ ಸಫಲತೆಯ ಸಲುವಾಗಿ ಅವರು ಯತ್ನಿಸುತ್ತಿದ್ದರು. ದೇವರು ಅವರಿಗೆ ಇಷ್ಟು ತೀವ್ರವೇ ಕರೆದೊಯ್ಯದಿದ್ದರೆ ಅವರು ತಮ್ಮ ವಾಂಛಿತವನ್ನು ಸಿದ್ಧಮಾಡಿಕೊಳ್ಳದೇಯಿರುತ್ತಿರಲಿಲ್ಲ. ಶ್ರೀ ರಾಘವೇಂದ್ರರಾಯರಿಗೆ ಕರುಳಿನಲ್ಲಿ ವಾಳವಾಗಿ ಹಾಸಿಗೆಯನ್ನು ಹಿಡಿಯಬೇಕಾಯಿತು. ವಾಳದ ವಿಷಯವನ ರಿತು ಇದು ಕಠಿಣ ಪ್ರಸಂಗವೆಂದು ಅವರು ಅನ್ನುತ್ತಿದ್ದರು. ಶಸ್ತ್ರಕ್ರಿಯದ ಹೊರತು ರೋಗದ ನಾಶವು ಅಶಕ್ಯವೆಂದು ಕಂಡುಬಂದಕೂಡಲೇ ಡಾ. ಕೊಕಟನೂರರಂಥ ಶಸ್ತ್ರಕ್ರಿಯಾ ನಿಷ್ಣಾತರಿಗೆ ಅವರು ತಮ್ಮ ರೋಗವನ್ನು ತೋರಿಸಬೇಕೆಂದು ತಮ್ಮ ಸ್ನೇಹಿತರಾದ ಮಿ|| ವೆಂಕಟರಾವ ಮುದವೇಡಕರ ಇವರನ್ನು ಕರೆದುಕೊಂಡು ಬೆಳಗಾವಿಗೆ ಹೋದರು. ಡಾಕ್ಟರ ಕೊಕಟನೂರರಂಥ ಕನ್ನಡ ರತ್ನವು ನಮ್ಮ ನೆರೆಹೊರೆಯಲ್ಲಿದೆ. ನಾವು ಅವನ್ನು ತಿಳಿಸಲಿ ಅಥವಾ ಮುಳುಗಿಸಲಿ; ಎಂದನ್ನುತ್ತ ಅವರ ವಶಕ್ಕೇನೆ ತಮ್ಮನ್ನು ಒಪ್ಪಿಸಿಕೊಂಡರು. ನಾವು ನಮ್ಮ ಜನರ ಗುಣಗಳನ್ನು ಲೆಕ್ಕಿಸುವದಿಲ್ಲ. ನಮ್ಮ ಜನರಬಗ್ಗೆ ನಮಗೆ ಅಭಿಮಾನವಿಲ್ಲ. ಕೊಕಟನೂರರಂಥ ರತ್ನದ ಬೆಲೆ ನಮಗಿಲ್ಲವೆಂದು ಅವರು ಯಾವಾಗಲೂ ಅನ್ನುತ್ತಿದರು. ಡಾಕ್ಟರವರು ಬಲು ಜಾಣತನದಿಂದಲೂ ರೋಗಿಗೆ ಏನೂ ಆಯಾಸವಾಗದಂತೆಯೂ ರೋಗದ ಚಿಕಿತ್ಸೆಯನ್ನು ಮಾಡಿದರು. ಕರುಳಿನ ಶಸ್ತ್ರಕ್ರಿಯೆಯು ಬಲು ಕಠಿಣವಾದುದೆಂದು ರೋಗಿಯ ಆಪ್ತಹಿತನಜರಿಗೆ ಹೇಳಿ ಅವರೆಲ್ಲರ ಸಮ್ಮತಿಯಿಂದ ಶಸ್ತ್ರ ಪ್ರಯೋಗ ಮಾಡಿದರು. ಡಾಕ್ಟರವರಿಗೆ ರಾಘವೇಂದ್ರರಾಯರ ಬೆಲೆಯು ಗೊತ್ತಾಗಿತ್ತು. ಅವರು ಹಗಲಿರುಳೂ ರಾಘವೇಂದ್ರರಾಯರ ಆರೈಕೆಯನ್ನು ಮಾಡುತ್ತಲಿದ್ದರು. ಆದರೆ ದೇವರ ಮನಸ್ಸಿನಲ್ಲಿ ರಾಘವೇಂದ್ರರಾಯರಂಥ ರತ್ನವನ್ನು ಕರ್ನಾಟಕದಂಥ ಈ ಹತಬಲ ರಾಷ್ಟ್ರದಲ್ಲಿ ಬಹಳ ದಿವಸ ಇಡುವದಿದ್ದಿಲ್ಲವಾದ್ದರಿಂದ ಪರಮಾತ್ಮನು ತನ್ನೆಡೆಗೆ ರಾಘವೇಂದ್ರರಾಯರನ್ನು ಇಷ್ಟು ಬೇಗನೆ ಕರೆದೊಯ್ದನು.

ರಾಘವೇಂದ್ರರಾಯರ ಚರಿತ್ರೆಯಲ್ಲಿ ಕೆಲವು ನೆನಪಿಡತಕ್ಕಂಥ ಸಂಗತಿಗಳು—

೧ ಧಾರವಾಡದಲ್ಲಿ ಅವರು ವಕೀಲರಿದ್ದಾಗ್ಗೆ ಜಜ್ಜಸಾಹೇಬರವರು ವರ್ಗವಾಗಿ ಹೋಗತಕ್ಕವರಿದ್ದರು. ಆ ಕಾಲಕ್ಕೆ ವಾಡಿಕೆಯಂತೆ ವಕೀಲ ಮಂಡಲದಲ್ಲಿ ಅವರಿಗೆ ತಾಂಬೂಲ ಸಮಾರಂಭ ಮಾಡಬೇಕೆಂಬ ಚರ್ಚೆ ಪ್ರಾರಂಭವಾಯಿತು. ವಕೀಲರಲ್ಲಿ ಎರಡು ಪಂಗಡಗಳಾದವು. ತಾಂಬೂಲಸಮಾರಂಭವನ್ನು ವಕೀಲ ಮಂಡಲದ ವತಿಯಿಂದ ಕೊಡಬಾರದೆಂಬುವವರ ಬಹುಮತವಾಯಿತು. ಆದರೆ ಕೆಲವು ಜನರು ಸಾಹೇಬರವರಿಗೆ ವಕೀಲ ಮಂಡಲದ ತಾಂಬೂಲ ಸಮಾರಂಭವೆಂದು ತೋರಿಕೆಯಾಗುವಂತೆ ಆ ಮಂತ್ರಣವನ್ನು ಯಾರನ್ನೂ ಲೆಕ್ಕಿಸದೆ, ಕೊಟ್ಟರು! ಈ ಪ್ರಕಾರ ಬಹುಸಂಖ್ಯಾಕರ ಮತವನ್ನು ಕಾಲಕಸ ಮಾಡಿದ್ದು, ರಾಘವೇಂದ್ರರಾಯರಿಗೆ ಸೇರಲಿಲ್ಲ; ಕೂಡಲೆ, ರಾಘವೇಂದ್ರರಾಯರು ಸಮಾರಂಭದ ಪೂರ್ವದಲ್ಲಿ, ಸ್ವಲ್ಪಾವಕಾಶವಿದ್ದರೂ, ಸಾಹೇಬರ ಬಂಗ್ಲೆಕ್ಕೆ ಹೋಗಿ, ತಮ್ಮ ಸ್ವತಃದ ಸಹಿಯಾಕಿ, ನಡೆದ ಸಂಗತಿಯನ್ನು ಪತ್ರದ್ವಾರದಿಂದ ಅವರಿಗೆ ತಿಳಿಸಿದರು ! ಸಾಹೇಬರವರು

ಆ ಪತ್ರವನ್ನು ನೋಡಿ, ರಾಘವೇಂದ್ರರಾಯರ ಆಭಾರವನ್ನೇ ಮನ್ನಿಸಿದರು! ಮತ್ತು ಬಹುಜನರ ಮತದ ವಿರುದ್ಧ ತಮ್ಮ ಪೂಜೆಯಲ್ಲಿ ಉಳಿದವರು ಆಸಕ್ತರಾದುದು ಅನುಚಿತವೆಂದು, ಅವರು ತಮ್ಮ ಸ್ನೇಹಿತರರಿಗೆ ತಿಳಿಸಿದರು.

೨ ಸನ್ ೧೯೧೭ ನೇ ಇಸ್ವಿಯ ನಾತಾಳ ರಜೆಯಲ್ಲಿ ದಾವಣಗೇರಿಯಲ್ಲಿ ವೀರಶೈವರ ಮಹಾ ಸಭೆಯು ಕೂಡಿತ್ತು. ಅದಕ್ಕೂ ಕೆಲವು ದಿವಸ ಪೂರ್ವದಲ್ಲಿ ಧಾರವಾಡದ ಕರ್ನಾಟಕ ಸಭೆಯ ಸ್ಥಾಪನೆಯಾಗಿತ್ತು. ಕರ್ನಾಟಕ ಸಭೆಯು ಕಾರ್ಯವು ರಭಸದಿಂದ ನಡೆಯ ಬೇಕಾದರೆ ವೀರಶೈವರು ಅದನ್ನು ಕೈಕೊಳ್ಳುವದು ಅವಶ್ಯವೆಂದು, ರಾಘವೇಂದ್ರರಾಯರ ಮನವರಿಕೆಯಾದ್ದರಿಂದ ಅವರು ವೈ ವಾಸಿ ಶಾಂತಕವಿ ಮುಂತಾದವರ ಸಂಗಡ ದಾವಣಗೇರಿಗೆ ಹೋದರು. ಆ ಕಾಲಕ್ಕೆ ಬ್ರಾಹ್ಮಣ ಬ್ರಾಹ್ಮಣೇತರ ವಾದವು ಬಹು ಘನತೆಗೇರಿತ್ತು. ಬ್ರಾಹ್ಮಣರಾದ ರಾಘವೇಂದ್ರರಾಯರು ಮುಂತಾದವರ ಮಂಡಲವು ತಮ್ಮಲ್ಲಿ ಬಂದದ್ದು ಕಾರ್ಯಕಾರಿ ಮಂಡಲಕ್ಕೆ ಆರಂಭಕ್ಕೆ ಸೇರಲಿಲ್ಲ. ರಾಘವೇಂದ್ರರಾಯರು ಮಹಾಸಭೆಯು ತಮ್ಮನ್ನು ಒರಮಾಡಿಕೊಳ್ಳಬೇಕೆಂದು ಚಾಲಕರಿಗೆ ಕೇಳಿಕೊಂಡರು. ಅವರು ಆಶ್ವಾಸನವನ್ನು ಕೊಡಲಿಲ್ಲ. ಆದರೆ ಧಾರವಾಡದ ಹಲಕೆಲವು ವೀರಶೈವ ಸ್ನೇಹಿತರು ಮತ್ತು ರಾಘವೇಂದ್ರರಾಯರು ಸಹ ಅಧ್ಯಕ್ಷರವರೆಗೆ ಹೋಗಿ ಮಂಡಲದ ಉದ್ದಿಷ್ಟ ಕಾರ್ಯವನ್ನು ಅವರಿಗೆ ತಿಳಿಸಿದ್ದರಿಂದ, ಅಧ್ಯಕ್ಷರು ರಾಘವೇಂದ್ರರಾಯರ ಮಂಡಲಕ್ಕೆ ಸಭೆಗೆ ಅಗತ್ಯವಾಗಿ ಬರಲಿಕ್ಕೆ ಆಮಂತ್ರಣವನ್ನು ಕೊಡಬೇಕೆಂದು ಚಾಲಕರಿಗೆ ತಿಳಿಸಿದರು! ದಾವಣಗೇರಿಯಲ್ಲಿ ರಾಘವೇಂದ್ರರಾಯರ ಮಂಡಲವು ೭-೮ ದಿವಸಗಳವರೆಗೆ ಇತ್ತು. ಥೇಟರಗಳಲ್ಲಿ ನಾಟಕ ಪ್ರಸಂಗದಲ್ಲಿ ಮತ್ತು ಕೀರ್ತನಗಳನ್ನು ಮಾಡಿಸಿ ಜನರ ಮುಖ್ಯಸ್ಥರಿಗೆ ಭೆಟ್ಟಿಯಾಗಿ ಕರ್ನಾಟಕದ ಭಾವನೆಯನ್ನು ಚನ್ನಾಗಿ ಹುಟ್ಟಿಸಿದರು.

೩ ಸನ್ ೧೯೧೮ ನೇ ಇಸ್ವಿ ಇರಬಹುದು ಆ ಕಾಲಕ್ಕೆ ಕನ್ನಡ ಚಳವಳಿಯು ಏರಿಕೆಯಲ್ಲಿದ್ದಿತ್ತು. ದೇ ಭ. ಗಂಗಾಧರರಾಯರು ಅದಕ್ಕೆ ಅನುಕೂಲರಾಗಿದ್ದಿಲ್ಲ. ಕನ್ನಡ ಚಳವಳಿಯು ಬ್ರಾಹ್ಮಣೇತರ ಚಳವಳಿಯಂತೆ, ದೇಶ ಘಾತಕವು; ಮತ್ತು ವಿರಾಧಿಯು ದ್ವೇಷಜನ್ಯವಾದದ್ದೆಂದು, ಅವರ ನಂಬಿಗೆ ಇತ್ತು. ಆ ಸಾರೆಯ ಗಣೇಶ ಉತ್ಸವಕ್ಕೆ ಅವರು ಧಾರವಾಡದಲ್ಲಿ ವ್ಯಾಖ್ಯಾನ ಕೊಡಲಿಕ್ಕೆ ಬಂದಿದ್ದರು. ಅವರ ಭಾಷಣದ ಬಗ್ಗೆ ಯಡ್ವರ್ಡ ಸಾಲೆಯಲ್ಲಿ ಸಾರ್ವಜನಿಕ ಸಭೆಯು ಕೂಡಿತ್ತು, ಸಭೆಯಲ್ಲಿ ಬಹಳೇ ದಟ್ಟಣೆಯಾಗಿತ್ತು. ದೆ|| ಗಂಗಾಧರರಾಯರಂಥ ಪ್ರಸಿದ್ಧ ಕರ್ನಾಟಕ ಮುಂದಾಳುಗಳವರ ಭಾಷಣವು! ಅವರ ವಾಕ್ ಚಾತುರ್ಯವು ಮಿಗಿಲಾದದ್ದು! ಇಂದ ಪ್ರಸಂಗದಲ್ಲಿ ಜನರ ಉತ್ಸುಕತೆಯು ಮಿತಿಮೀರಿತ್ತು! ಆಗೋ! ಕೂಡಲೆ ರಾಘವೇಂದ್ರರಾಯರು ಎದ್ದು ಕನ್ನಡದಲ್ಲಿಯೇ ಭಾಷಣವಾಗಬೇಕೆಂದು ಕೈಮುಗಿದು ಹೇಳಿಕೊಂಡರು! ಗಂಗಾಧರರಾಯರು ಅದನ್ನು ಮನ್ನಿಸಲಿಲ್ಲ! ರಾಘವೇಂದ್ರರಾಯರು ತಮ್ಮ ಮಾತನ್ನು ಬಿಡಲಿಲ್ಲ! ಸಭೆಯಲ್ಲಿ ಗದ್ದಲವೇಳಹತ್ತಿತು. ಕಲಿತ ಜನರು ಗಂಗಾಧರರಾಯರ ಭಾಷಣವನ್ನು ಕೇಳಲಿಕ್ಕೆ ಅತಿ ಉತ್ಸುಕರಾಗಿದ್ದರು. ಅವರು ರಾಘವೇಂದ್ರರಾಯರಿಗೆ ಕೂಡಲಿಕ್ಕೆ ಹೇಳಹತ್ತಿದರು. ಅವರು ಕೇಳಲೊಲ್ಲರು! ಗಂಗಾಧರರಾಯರು "ನಾನು ಕನ್ನಡಿಗನು ಹೌದು, ಆದರೆ ನನಗೆ ಕನ್ನಡದಲ್ಲಿ ವಳಿತಾಗಿ ವ್ಯಾಖ್ಯಾನಕೊಡಲಿಕ್ಕೆ ಬರುವದಿಲ್ಲ" ಎಂದು ಮರಾಠಿಯಲ್ಲಿಯೇ ಭಾಷಣವನ್ನು ಪುನಃ ಪ್ರಾರಂಭ ಮಾಡಿದರು! ತನಗೆ ಒಂದಂಶ ಸಾರ್ವಜನಿಕ ಕನ್ನಡದಲ್ಲಿಯೇ ಭಾಷಣವಾಗಬೇಕು ಅಂದು ಭಾಷೆಯಲ್ಲಿ ಭಾಷಣ ಮಾಡಕೂಡದೆಂದು ರಾಘವೇಂದ್ರರಾಯರು ಪುನಃ ಪುನಃ ಕೇಳಿಕೊಂಡರು. ಇತ್ತ ಗಂಗಾಧರರಾಯರು ಭಾಷಣ ಮಾಡುವದನ್ನು ನಿಲ್ಲಿಸಲಿಲ್ಲ! ಕಡೆಗೆ ಭಾಷಣವನ್ನು ಮುಂದೆ ನಡೆಸಲು ರಾಘವೇಂದ್ರರಾಯರು ಸ್ಪಷ್ಟವಾಗಿ ಹೇಳಿ, ತಮ್ಮ ಕೆಲವು ಜನರೊಡನೆ ಸಭೆ ಬಿಟ್ಟು ಹೊರಬಿದ್ದರು! ಗಂಗಾಧರರಾಯರು ರಾಘವೇಂದ್ರರಾಯರ ಮೇಲೆ ಸಿಟ್ಟಾದರು! ರಾಘವೇಂದ್ರರಾಯರು ಎದ್ದು ನಿಂತರು, ಕೆಲಕ್ಕೆ ಹೊರಬಿದ್ದರು! ಈ ಪ್ರಸಂಗದಲ್ಲಿ ಸಭೆಯು ಮುರಿಯಿತು!!! ರಾಘವೇಂದ್ರರಾಯರಿಗೆ ಜನರು ದೇಶಘಾತಕರು, ವಿರೋಧಿಗಳು ಎಂದು ಬೈದಾಡಹತ್ತಿದರು! ಮತ್ತು ಅದೇ ದಿನದ ರಾತ್ರಿ ರಾಘವೇಂದ್ರರಾಯರ ಮನೆಯ ಸೊಕ್ಕನ್ನು ಮುರಿಯಬೇಕೆಂದು, ಆಜ ಗನ ದಿನಗಳಲ್ಲಿ ಧಾರವಾಡದ ದೇಶಭಾಂಡೆ ಮಂಡಲದವರು ತಮ್ಮ ಬೀದಿಯಲ್ಲಿ ಸ್ವತಂತ್ರ ಸಭೆಯನ್ನು ಕೂಡಿಸಿ, ಗಂಗಾಧರರಾಯರು ಮರಾಠಿಯಲ್ಲಿಯೇ ಭಾಷಣ ಮಾಡತಕ್ಕವರಿದ್ದಾರೆಂದು ಸಾರಿ, ಕಾವಲಿಟ್ಟು, ವ್ಯಾಖ್ಯಾನವನ್ನು ಯಾವದೇ ಒಂದು ಗೊಂದಲವಿಲ್ಲದೆ ಸಟದಿಂದ ಮಾಡಿಸಿದರು. ಆ ಮುಂದೆ ಕೆಲವು ದಿವಸಗಳವರೆಗೆ ರಾಘವೇಂದ್ರರಾಯರ ಮನೆಯ ಮುಂದೆ ರಾತ್ರಿ, ಅಪರಾತ್ರಿಯಲ್ಲಿ ಹುಡುಗರು ಕ್ವಚಿತ್ ಪ್ರಸಂಗದಲ್ಲಿ ಹಿರಿಯರು ಸಹ "ದೇಶಘಾತಕ ಕನ್ನಡ" ಎಂದು ಒದರುತ್ತಿದ್ದರು!! ಈ ಪರಿ ಎರಡು ಬಣಗಳಾಗಿ, ಅನೇಕ ಸಾರೆ ಬಡಿದಾಟದ ಪ್ರಸಂಗಗಳು ಬಂದವು. ಮುಂದೆ ಜನರಿಗೆ ತಮ್ಮ ತಪ್ಪು ತಿಳಿದು ಬಂದಿತು. ರಾಘವೇಂದ್ರರಾಯರ ಪಕ್ಷವೇ ಸತ್ಯವೆಂಬುದು ಅವರಿಗೆ ಕಂಡಿತು! ಆ ಮೇಲೆದೆ ಧಾರವಾಡದಲ್ಲಿ ಕನ್ನಡವೇ ಸಾರ್ವಜನಿಕ ಸಭೆಗಳ ಮುಖ್ಯಭಾಷೆಯಾಯಿತು!! **ಆ ಮುಂದೆ ಗಂಗಾಧರರಾಯರು ಸಹ ಧಾರವಾಡದಲ್ಲಿ ಬಂದಾಗ್ಗೆ ಕನ್ನಡದಲ್ಲಿಯೇ ವ್ಯಾಖ್ಯಾನಕೊಡಹತ್ತಿದರು**

೪ ಸನ್ ೧೯೧೮ ನೇ ಇಸವಿಯ ಆಗಸ್ಟ ತಿಂಗಳಲ್ಲಿ ಮುಂಬಯಿಯಲ್ಲಿ ಸ್ಪೆಶಲ್ ಕಾಂಗ್ರೇಸವು ಕೂಡಿತ್ತು, ಆ ಕಾಲದವರೆಗೆ ಕಾಂಗ್ರೆಸ್ಸಿನ ವಿಷಯನಿಯಾಮಕ ಮಂಡಲದಲ್ಲಿ ಬಹುತರವಾಗಿ ಪುಣೆ, ಮುಂಬಯಿ, ಜನರೇ ಹೊಂಗುತ್ತಿದ್ದರು. ಕರ್ನಾಟಕದವರ ಹೆಸರು ಸಹ ಕೇಳಬರುತ್ತಿದ್ದಿಲ್ಲ! ಆದರೆ ಆ ಸಾರೆ ಕರ್ನಾಟಕದ ಜನರನು ಈ ಮಂಡಲದಲ್ಲಿ ಸೇರಿಸಬೇಕೆಂದು ಯೋಚಿಸಿ ಆ ಬಗ್ಗೆ ರಾಘವೇಂದ್ರರಾಯರು ಪ್ರಯತ್ನಿಸಿದರು! ಸ್ವಾಗತ ಕಮೀಟಿಯ ಚಾಲಕರ ಕಡೆಗೆ ಹೋಗಿ ಅವರು ತಮ್ಮ ತಕರಾರುಗಳನ್ನು ಹೇಳಿದರು. ಕಮೀಟಿಯವರು ಅವರ ಮೋರೆಯ ಮೇಲೆ ಕೈ ಎತ್ತಿದರು ಮಾತ್ರ! ನಿಜವಾಗಿ ಅವರು ಏನೂ ಮಾಡುವ ಲಕ್ಷಣಗಳು ತೋರಲಿಲ್ಲ! ಕಾಂಗ್ರೆಸ ಸಭೆಯು ತುಂಬಾ ನೆರೆದಿತ್ತು! ಅಧ್ಯಕ್ಷರ ಭಾಷಣವಾದಕೂಡಲೆ ವಿಷಯ ನಿಯಾಮಕ ಕಮಿಟಿಯು ವಾಡಿಕೆಯಂತೆ ಕೂಡತಕ್ಕದಿತ್ತು. ಅಷ್ಟರಲ್ಲಿಯೇ ನಮ್ಮ ಗಂಡುಗಲಿಯಾದ ಈ ಕರ್ನಾಟಕದ ಹುಲಿಯು ಎದ್ದಿತು! ಕನ್ನಡಿಗರ ತಕರಾರುಗಳನ್ನು ಒರೆದು ಲೊಕಮಾನ್ಯ ಟಿಳಕರ ಕಡೆಗೆ ಪತ್ರವನ್ನು ಕಳಿಸಿದರು. ಅವರ ಕಡೆಯಿಂದ ತೃಪ್ತಿಕರ ಉತ್ತರವು ಬರಲಿಲ್ಲ! ಅದರಿಂದ ಒಂದೇ ಸವನೆ ಪತ್ರಗಳ ಮೇಲೆ ಪತ್ರಗಳನ್ನು ರಾಘವೇಂದ್ರರಾಯರು ಕಳಿಸಿದರು! ಆತಂಕವು ಸ್ವಲ್ಪ ನಿಲ್ಲಿಸಿತು! ತಮ್ಮ ಇಚ್ಛೆ

ಸಫಲವಾಗುವ ಲಕ್ಷಣಗಳು ತೋರಲೊಲ್ಲವು! ಆವಾಗ್ಗೆ ರಾಘವೇಂದ್ರರಾಯರು ತಮ್ಮ ಮಿತ್ರರೊಡನೆ ಕಾರ್ಯಕಾರಿ ಮಂಡಲದ ಅಧ್ಯಕ್ಷರಾದ ಮಿ॥ ಹಾರ್ನಿಮನ್ ಇವರ ಭೆಟ್ಟಿ ತೆಗೆದು ಕೊಂಡು, ಅವರ ಮುಂದೆ ತಮ್ಮ ಪ್ರಾಂತಕ್ಕೆ ಆಗುವ ಅನ್ಯಾಯದ ಕಥೆಯನ್ನು ನುಡಿದರು. ಮಿ। ಹಾರ್ನಿಮನ್ ರವರು ಅವರ ಮಾತಿಗೆ ಒಪ್ಪಿ ಅಧ್ಯಕ್ಷರ ಭಾಷಣವಾಗಿದಕೂಡಲೇ ವಿಷಯನಿಯಾಮಕ ಕಮೀಟಿಯ ಸಂಘಟನೆ ಬಗ್ಗೆ ಮುಂಬಯಿ ಇಲಾಖೆಯ ಪಟ್ಟಿಗೆ, ಐದು ಸಮಭಾಗಗಳನ್ನು ಮಾಡಿ ದಕ್ಷಿಣಭಾಗದವರ ಸ್ವತಂತ್ರ ಮೆಂಬರ ಜನರು ವಿಷಯನಿಯಾಮಕ ಕಮೀಟಿಯಲ್ಲಿ ಸೇರಲಿಕ್ಕೆ ಅನಕೂಲ ಮಾಡಿಕೊಟ್ಟರು! ಹೀಗಾಗಿ ರಾಘವೇಂದ್ರರಾಯರು ಕಡೆಗೆ ಜಯಹೊಂದಿದರು! ಸಣ್ಣ ವಿಷಯವೇನು? ಮರಾಟಿಗರ ಹಟಮಾರಿತನವೇನು? ಕನ್ನಡಿಗರು ತಿಳಿದುಕೊಳ್ಳಬೇಕು.

ಲೋಕಮಾನ್ಯರಂತಹ ಕೂಡ ಮಾತೃಭಾಷೆಯ ಪವಿತ್ರಕಾರ್ಯಕ್ಕಾಗಿ ವಿರೋಧಿಸಿದ ಇವರ ಧೈರ್ಯವು ಸಾಮಾನ್ಯವೇ?

ಇಂತಹ ರಾಘವೇಂದ್ರರಾಯರ ನಿಜವಾದ ಬೆಲೆಯು ಚೈತನ್ಯನಷ್ಟವಾದ ಕರ್ನಾಟಕಕ್ಕೆ ಸಾಕಷ್ಟು ಕಂಡು ಬಂದಿಲ್ಲ. ಮುಂಬೈ ಮದ್ರಾಸ ಮುಂತಾದ ಪಟ್ಟಣಗಳಲ್ಲಿ ವಾಸಮಾಡಿದ್ದರೆ ಶ್ರೀರಾಘವೇಂದ್ರ ರಾಯರು ಒಳ್ಳೇ ಶ್ರೀಮಂತ ವಕೀಲರೂ ಸಾರ್ವಜನಿಕ ಕಾರ್ಯದಲ್ಲಿಯೂ ಸುಪ್ರಸಿದ್ಧ ಮುಂದಾಳುಗಳೂ ಆಗುತ್ತಿದ್ದರು. ಮಹಾರಾಷ್ಟ್ರ ಬಂಗಾಲ ಆಂಧ್ರ ಮುಂತಾದ ಸ್ವಾಭಿಮಾನವನ್ನು ಕಾದಿಟ್ಟುಕೊಂಡ ಒಳರಾಷ್ಟ್ರಗಳಲ್ಲಿ ಅವರು ಜನಿಸಿ ಅವುಗಳನ್ನೇ ಅವರು ತಮ್ಮ ಕಾರ್ಯಕ್ಷೇತ್ರಗಳನ್ನಾಗಿ ಮಾಡಿದ್ದರೆ, ಆ ಆ ನಾಡಿನವರು ಅವರು ಮಾಡಿದ ಉಪಕೃತಿ ಬಗ್ಗೆ ಅನೇಕ ಸ್ಮಾರಕಾದಿಗಳನ್ನು ಮಾಡುತ್ತಿದ್ದರು! ಯಾವದೇ ಸ್ವತಂತ್ರ ರಾಷ್ಟ್ರದಲ್ಲಿ ಅವರು ಜನಿಸಿದ್ದರೆ ಆ ರಾಷ್ಟ್ರದ ಚಾಲಕತ್ವವನ್ನು ಕೈಕೊಳ್ಳುವಷ್ಟು ಗುಣಗಳು ಅವರಲ್ಲಿ ಇದ್ದವು. ಆದರೆ ದುರ್ದೈವಿಯಾದ ಕರ್ನಾಟಕದಲ್ಲಿ ಅವರು ಜನಿಸಿ ಇಲ್ಲಿಯೇ ಅವರು ತಮ್ಮ ಕಾರ್ಯವನ್ನು ಮಾಡಿದ್ದರಿಂದ ಅವರ ಹೆಸರು ಸಹ ಉಳಿಯದ ಸ್ಥಿತಿಯು ಒದಗಿರುತ್ತದೆ. ರಾಘವೇಂದ್ರ ರಾಯರ ಮರಣದಿಂದ ಕರ್ನಾಟಕಕ್ಕೆ ತಟ್ಟಿದ ಹಾನಿಯ ನಿಜಸ್ವರೂಪವು ಜನರಿಗೆ ಗೊತ್ತಾಗಿಲ್ಲ, ಕರ್ನಾಟಕದ ದುರ್ದೈವವು!!

ರಾಮರಾವ ನರಗುಂದಕರ.
ಬಿ. ಎ. ಎಲ್. ಬಿ. ವಕೀಲ.
ಧಾರವಾಡ.

ಕರ್ನಾಟಕವೂ ಕಡಪಾ ರಾಯರೂ

(ಲೇ:— ಕೇ. ಗುರುರಾಜರಾಯರು.
ಬಿ. ಎ. ಎಲ್. ಎಲ್. ಬಿ. ವಕೀಲರು ಬಳ್ಳಾರಿ)

ನನಗೆ ಕಡಪಾ ಇವರ ಪರಿಚಯ ಸುಮಾರು ೧೯೦೬ನೇ ಸಂವತ್ಸರದಿಂದ ಸುರುವಾಯಿತು. ನಾನು ಮದ್ರಾಸಿಗೆ ಕಾಲೇಜಿನಲ್ಲಿ ಅದೇ ವರ್ಷ ಕಲಿಯಲಿಕ್ಕೆ ಹೋಗಿದ್ದೆ. ಅವರು ಅದಕ್ಕೆ ಮುಂಚಿತವಾಗಿಯೇ ಮದ್ರಾಸು ಕ್ರಿಶ್ಚಿಯನ್ ಕಾಲೇಜಿನಲ್ಲಿ ಅಭ್ಯಾಸ ಮಾಡಿ ಬಿ ಎ ಪರೀಕ್ಷೆಗೆ ಕೂತಿದ್ದರು. ಬಿ. ಎ. ದಲ್ಲಿ ಅವರು ವಿಜ್ಞಾನಶಾಸ್ತ್ರವನ್ನು (Physics) ಆರಿಸಿಕೊಂಡಿದ್ದರು. ಅವರು ಮೊದಲನ ವರ್ಷ ವಿಜ್ಞಾನಶಾಸ್ತ್ರದಲ್ಲಿ ಪಾಸಾಗದೇ ಇದ್ದದ್ದರಿಂದ ಸ್ವಂತವಾಗಿ ಮನಿಯಲ್ಲೇ ಪ್ರಯೋಗಶಾಲೆಯನ್ನು (Laboratary) ಕಲ್ಪಿಸಿಕೊಂಡು ಉತ್ತಮ ಕೃಷಿ ಮಾಡಿ ತೇರ್ಗಡೆ ಹೊಂದಿದರು. ಮೊದಲನೇ ವರ್ಷ ತಾವು ಪಾಸಾಗದೇ ಇರುವದನ್ನು ಬಹಳ ಮನಸ್ಸಿಗೆ ಹಚ್ಚಿಕೊಂಡು ಒಂದೇ ಹಟದಿಂದ ಒಮ್ಮನಸಿನಿಂದ ಅಭ್ಯಾಸ ಮಾಡುತ್ತ ಇದೇ ವರ್ಷದಲ್ಲಿ ಬೇರೆ ಯಾವ ಪಾಠ ಸಕ್ಕೆ ಹೋಗಲೇ ಇಲ್ಲ" ಬೇಜಕ್ಕೆ ಬಿದ್ದೇ ಕಾಯಿ ಪೀಚಿನಲ್ಲೇ ನೋಡೆಂಬೆ ,, ನಾಣ್ನುಡಿಗೆ ಅನುಸರಿಸುವಂತೆ ಇವರ ಪ್ರವರ್ತನವಿದ್ದಿತು.

ತರುವಾಯ ಬಿ. ಏ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದನಂತರ ತಮ್ಮ ಬಂಧುಗಳಾದ ಬಳ್ಳಾರಿ ರಾಮರಾಯರು ಇದ್ದದ್ದರಿಂದಲೋ ಅಥವಾ ಬೇರೇ ಯಾವ ಕಾರಣದಿಂದಲೋ ಕಡಪಾ ರಾಯರು ಧಾರವಾಡಕ್ಕೆ ಬಂದದ್ದು ಎಲ್ಲರಿಗೂ ತಿಳಿದ ವಿಷಯ. ಮದ್ರಾಸು ಇಲಾಖೆಯಲ್ಲಿ ಹುಟ್ಟಿ ಬೆಳೆದು ಮದ್ರಾಸ ವಿಶ್ವವಿದ್ಯಾಲಯದಲ್ಲಿ ಬಿ. ಏ. ಮುಗಿಸಿದವರು ಸಹಜವಾಗಿ ತಮ್ಮ ಜೀವಮಾನವನ್ನೆಲ್ಲ ಅಲ್ಲೇ ಕಳೆಯುವದನ್ನು ಬಿಟ್ಟು ಮುಂಬಾಯಿ ಇಲಾಖೆಗೆ ಬಂದು ಸೇರಿದ್ದು ಅಸಾಧಾರಣ ವಿಷಯವು. ಅವರು ತಮ್ಮ ಜೀವನೋಪಾಯಕ್ಕಾಗಿ ಧಾರವಾಡಕ್ಕೆ ಬಂದದ್ದು ಅನೇಕರಂತೆ ಹೊಟ್ಟೆ ಹೊರೆಯಲಿಕ್ಕೆ ಮಾತ್ರ ಅಲ್ಲವೆಂದು ನನ್ನ ತಿಳುವಳಿಕೆ ಅದೊಂದು ಅಮುಖ್ಯ ವಿಷಯವೆಂದಾಗಲಿ ಆಕಸ್ಮಿಕ ವಿಷಯವೆಂದಾಗಲಿ ನಾನು ಸರ್ವಥಾ ಗಣಿಸಲಾರೆ ತಮ್ಮ ಜೀವನದ ಸಂದೇಶವನ್ನು ಬಿತ್ತುವದಕ್ಕೆ ಆ ಕಾರ್ಯಕ್ಷೇತ್ರಕ್ಕೆ ವಿಧಿಯೇ ಕರದೊಯ್ದಂತೆ ನಾನು ಭಾವಿಸುತ್ತೇನೆ.

ಕಡಪಾ ಇವರ ಜೀವನದ ಸಂಕಲ್ಪವು ದೃಢವಾಗಿ ಬೇರೂರಲಿಕ್ಕೂ ಅವರ ಮನಸ್ಸಿನ ಉದಾತ್ತ ಧ್ಯೇಯಗಳಿಗೆ ಸರಿಯಾದ ಮನ್ನಣೆ ದೊರೆತು, ಅವುಗಳು ಬಲ ಪಡಲಿಕ್ಕೂ ಧಾರವಾಡದಂತಹ ಕನ್ನಡ ಸಂಸ್ಕೃತಿಯ ಕೇಂದ್ರವು ಅವರಿಗೆ ಬೇಕಿತ್ತಲ್ಲವೇ! ಶಾಂತ ಕವಿಯೆಂಬ ಕನ್ನಡ ನಾಡಿನ ಮುಂಜಾವದ ಕೋಗಿಲೆಯು ತನ್ನ ಸವಿಯಾದ ಹಾಡುಗಳಿಂದ ಜನಗಳನ್ನು ಅಲ್ಲಿ ಆಗ ಎಚ್ಚರಿಸುತಲಿದ್ದಿತು. ಕನ್ನಡ ನಾಡಿಗೆ ಕನ್ನಡ ಭಾಷೆಗೆ ನೆರೆಹೊರೆಯವರಿಂದ ಉಂಟಾದ ಅಪಮಾನವನ್ನು ಸಹಿಸಲಾರದೇ, ಅವುಗಳ ಉನ್ನತಿಗಾಗಿ ವ್ರತವನ್ನು ಕೈಕೊಂಡ ವೀರರಾದ ಆಲೂರ ವೆಂಕಟರಾಯರಿಗೂ ಮುದವೀಡಕರ ಕೃಷ್ಣರಾಯರಿಗೂ ಜೊತೆಯೆಂದು ಕರ್ನಾಟಕ ದೇವಿಯೇ ಅವರನ್ನು ಕರೆದುಕೊಂಡು ಬಂದಳೆಂದು ಹೇಳಿದರೆ ಅತಿಶಯೋಕ್ತಿಯೇನು?

ನಾನು ಧಾರವಾಡದಲ್ಲಿಯೂ ಕೆಲವು ಕಡೆಯಲ್ಲಿಯೂ ಉಪನ್ಯಾಸ ಮಾಡಿದಾಗೆಲ್ಲ "ಧಾರವಾಡವು ಕರ್ನಾಟಕದ ಕೇಂದ್ರಸ್ಥಾನವೇನೋ ಸರಿ. ಆದರೆ ಇದಕ್ಕೆ ಬಳ್ಳಾರಿಯವರಾದ ನಮ್ಮ ಕಡಪಾರಾಯರೇ ಕಾರಣರೆಂದು" ನಾನು ಹೆಮ್ಮೆಯಿಂದ ಹೇಳಿಕೊಂಡಿರುತ್ತೇನೆ. ನಾವು ಕರ್ನಾಟಕಸ್ಥರು; ನಮ್ಮದು ಕನ್ನಡನಾಡೆಂದು ಈಗ ಗರ್ವದಿಂದ ಹೇಳುವ ಅನೇಕ ಸದ್‌ಗೃಹಸ್ಥರು ೬-೭ ವರ್ಷದ ಕೆಳಗೆ ತೋರಿಸಿದ ಉದಾಸೀನತೆಯನ್ನೂ ನಾಡಿನ ಏಳ್ಗೆಗೆ ಕಂಕಣ ಬದ್ಧರಾಗಿ ನಿಂತ ಕಡಪಾರಾಯರಿಗೆ ಮಾಡಿದ ಅವಹೇಳನವನ್ನೂ ನಾವು ಮರತಿಲ್ಲ. ನಿರ್ಭೀತಿಯಿಂದ ತಾವು ಹಿಡಿದ ಪಟ್ಟನ್ನು ಬಿಡದೇ, ತಮ್ಮ ಮಿತ್ರರೇ ಶತ್ರುಗಳಾದದ್ದನ್ನು ಲಕ್ಷಿಸದೇ ಕಾರ್ಯವನ್ನು ನೆರವೇರಿಸುವದಕ್ಕಾಗಿ ಹಗಲಿರುಳು ಹೋರಾಡಿದ ಕಡಪಾರಾಯರಗುಣವು ಕೇವಲ ಅನುಕರಣೀಯವಾದುದು

ಆಂಧ್ರ ವಿಶ್ವ ವಿದ್ಯಾಲಯದ ಯೋಜನೆಯು ಮದ್ರಾಸು ಶಾಸನ ಸಭೆಯಲ್ಲಿ ೧೯೧೫ನೆಯ ಸಂವತ್ಸರದ ಅಂತ್ಯ ಭಾಗ

ಕಲ್ಲಿ ಚರ್ಚಿಸುವ ಸಂದರ್ಭದಲ್ಲಿ ಬಳ್ಳಾರಿಯ ಪರವಾಗಿ ಕಡಪಾರಾಯರು ಮಾಡಿದ ಕೆಲಸವು ಅದ್ಭುತವು ಒಬ್ಬ ಮನುಷ್ಯನ ಮರಣಾನಂತರ ಆವನು ಮಾಡಿದ ಅಲ್ಪ ಕೆಲಸವನ್ನೇ ಬೆಟ್ಟದಂತೆ ಬೆಳೆಸುವ ಸಂಪ್ರದಾಯಕ್ಕನುಸರಿಸಿ ನಾನು ಈ ಮಾತುಗಳನ್ನು ಹೇಳುವದಿಲ್ಲ. ನಾನು ಕೂಡ ಅವರೊಡನೆ ಆ ಕೆಲಸ ಮಾಡಲಿಕ್ಕೆ ಹೋದವನಾದ್ದರಿಂದ ನನಗೆ ಪೂರ್ಣ ಪರಿಚಯವಿದೆ. ಬಳ್ಳಾರಿಯು ಕನ್ನಡ ನಾಡೆಂದು ಸ್ಥಾಪಿಸುವ ಅನೇಕ ಕಾಗದ ಪತ್ರಗಳೂ ಖಾನೇಸುಮಾರಿಯ ಸಂಖ್ಯೆಗಳೂ ಅವರಿಗೆ ಬಾಯಿಪಾಠವಾಗಿದ್ದವು. ಬ್ರಾಹ್ಮಣೇತರ ಮಂತ್ರಿವರ್ಗದ ಸದಸ್ಯರನ್ನೆಲ್ಲಾ ಅವರು ಕಂಡು ಕೊಂಡು ಎಲ್ಲರಿಗೂ ಸಂಗತಿಗಳನ್ನು ತಿಳಿಸಿದರು. ಮುಖ್ಯ ವರ್ತಮಾನಪತ್ರಾಧಿಕಾರಿಗಳಿಗೆ ಬಳ್ಳಾರಿಯ ವಿಷಯವಾಗಿ ತಮಗೆ ಇರುವ ಮತವು ಎಷ್ಟು ಸಮಂಜಸವಾದುದೆಂದು ತಿಳಿಸುತ್ತಿದ್ದರು. ಗವರ್ನರ ಸಾಹೇಬರಿಗೆ ಭೆಟ್ಟಿಯಾಗಿ ಬ್ರಾಹ್ಮಣೇತರರಾದ ಆಂಧ್ರ ಮಂತ್ರಿಗಳು ಬಳ್ಳಾರಿ ವಿಷಯವಾಗಿ ನಡೆಸಿದ ಜುಲುಮೆಯ ಪ್ರಸಂಗವನ್ನು ನಿರ್ಭಯದಿಂದ ಒತ್ತಿಹೇಳಿದರು. ೪—೫ದಿವಸಗಳಲ್ಲಿ ಪ್ರತಿಯೊಬ್ಬ ಶಾಸನಸಭೆಯ ಮೆಂಬರರಿಗೂ ಬಳ್ಳಾರಿಯ ವಿಷಯವಾಗಿ ಪೂರ್ಣ ಮಾಹಿತಿ ಮಾಡಿಕೊಟ್ಟರು. ಈ ಪ್ರಚಂಡ ಚಳವಳಿಯ ದೆಸೆಯಿಂದಲೇ ಹಿಂದೂ ಪತ್ರದ ಸಂಪಾದಕರು ಬಳ್ಳಾರಿಯನ್ನು ಈ ಯೋಜನೆಯಿಂದ ತೊಲಗಿಸಬೇಕೆಂದು ಅಗ್ರಲೇಖನವನ್ನು ಬರೆದರು. ಮತ್ತು ಆ ಚಳವಳಿಯ ಫಲದಿಂದಲೇ ನಿನ್ನಿನ ಹಿಂದೂ ಪತ್ರಿಕೆಯಲ್ಲಿ (೧೫-೩-೨೭) ಸಂಪಾದಕರ ಉಪಲೇಖನದಲ್ಲಿ ಆಂಧ್ರ ದೇಶಕ್ಕೆ ಬೇರೆ ಪ್ರಾಂತ್ಯವು ದೊರೆಯಬೇಕೆಂಬ ಠರಾವಿನ ಮೇಲೆ ಟೀಕಿಸುವಾಗ ಬಳ್ಳಾರಿ ಕನ್ನಡ ನಾಡೆಂದು ಮಾಡಿದ ಚಳವಳಿ ವಿಷಯವಾಗಿ ಪುನಃ ಬರೆದಿರುತ್ತಾರೆ.

ಪ್ರತಿಯೊಂದು ನಾಡಿನ ಚರಿತ್ರವು ಅಲ್ಲಿಯ ವಿಶಿಷ್ಟರ ಜೀವನ ಚರಿತ್ರೆಗಳಲ್ಲಿ ಅಡಕವಾಗಿರುವದು. ನಿಜವಾಗಿಯೂ ಕನ್ನಡ ನಾಡಿನ ಇತಿಹಾಸವು ಸುಮಾರು ೧೦ ವರ್ಷದಿಂದ ಕಡಪಾರಾಯರ ಜೀವನ ಚರಿತ್ರದಲ್ಲಿಯೇ ಅಡಕವಾಗಿದೆಯೆಂದು ಹೇಳಬಹುದು. ನಾಡಿನ ಪುನರುಜ್ಜೀವನದ ಗುರಿಯುಳ್ಳ ಎಲ್ಲ ಚಳವಳಿಗಳಲ್ಲಿಯೂ ಇವರ ಅಂಗವು ಇದ್ದೇ ಇರುತ್ತಿದ್ದಿತು. ಇವರು ನಾಗಪುರದ ಕಾಂಗ್ರೆಸ್ಸಿನಲ್ಲಿ ಕರ್ನಾಟಕಕ್ಕೆ ಬೇರೆ ಕಾಂಗ್ರೆಸ್ಸ ಪ್ರಾಂತ್ಯವನ್ನು ದೊರಕಿಸುವಬಗ್ಗೆ ಪಟ್ಟ ಶ್ರಮವೂ ತೋರಿಸಿದ ಧೈರ್ಯವೂ, ಉತ್ಸಾಹವೂ, ಚಿರಸ್ಮರಣೀಯವಾದವುಗಳು. ಆ ದಿವಸವೇ ಕರ್ನಾಟಕೇತಿಹಾಸದಲ್ಲಿ **ಸುವರ್ಣಾಕ್ಷರ**ಗಳಿಂದ ಬರೆದಿಡತಕ್ಕ ದಿವಸವು. ಕನ್ನಡನಾಡಿನ ಪುತ್ರರಾದಾಗ್ಯೂ ಕನ್ನಡ ಭಾಷೆಯಲ್ಲಿ ಮಾತನಾಡಲು ನಾಚಿಕೆ ಬಡುತ್ತಿದ್ದ ಕೆಲವು ಗೃಹಸ್ಥರಿಗೆ ಧಾರವಾಡದಲ್ಲಿಯೂ ಇನ್ನೂ ಕೆಲವು ಸ್ಥಳಗಳಲ್ಲಿಯೂ ಚನ್ನಾಗಿ ಎಚ್ಚರವು ಕೊಡಲ್ಪಟ್ಟಿತು. ಇವೆಲ್ಲ ಕಡಪಾರಾಯರ ಧೂರ್ತತನವೇ ಸರಿ. ಮರಾಠಿ- ಆಂಧ್ರ ಮುಂತಾದ ಭಾಷೆಗಳಿಗೆ ಮರುಳಾದ ಕನ್ನಡಿಗರನ್ನು ಅವರು "ಸುಲಿದ ಬಾಳೆಯಹಣ್ಣಿನಂದದಿ" ಎಂಬ ಕನ್ನಡ ನುಡಿಯನುಚ್ಚರಿಸುವಂತೆ ಮಾಡಿದ ಶ್ರೇಯಃ ವಾವರೂ ಕೆಲಮಟ್ಟಿಗೆ ಅವರದೇ. ಈ ಧೂರ್ತತನದಿಂದಲೇ ಈಗ 'ನಮಗೂ ಆತ್ಮಗೌರವವಿದೆ. ನಮಗೂ ಒಂದು ನಾಡಿದೆ' ಎಂಬ ಭಾವನೆಯು ಉಂಟಾಗಿ ನಾವು ಸರಿಸಮಾನರಲ್ಲಿ ತಲೆಯೆತ್ತಿ ತಿರುಗುವ ದೈವವುಳ್ಳವರಾಗಿದ್ದೇವೆ.

ಅಸಹಕಾರದ ಚಳವಳಿಯ ಪ್ರವಾಹದಲ್ಲಿ ಧುಮುಕಿ ಕರ್ನಾಟಕದ ಹೆಸರು ಮುಂದೆ ಬರುವಂತೆ ಅಹೋರಾತ್ರಿ ಹೋರಾಡಿದ ನಮ್ಮ ಮುಖಂಡರೆಂದರೆ ಕಡಪಾರಾಯರೇ. ಸುಮಾರು ೩ ವರ್ಷದವರೆಗೂ ತಮ್ಮ ವಕೀಲೀ ಕೆಲಸವನ್ನು ಬಿಟ್ಟು ಕನ್ನಡ ನಾಡಿನಲ್ಲೆಲ್ಲ ತಿರುಗಿ ಸ್ಫೂರ್ತಿದಾಯಕವಾದ ಭಾಷಣಗಳಿಂದ ಜನಸಾಮಾನ್ಯಕ್ಕೆ ಜಾಗೃತಿಯನ್ನು ಮಾಡಿದ ಮುಂದಾಳೇ ಇವರು.

ಬಳ್ಳಾರಿಗೂ ಬೊಂಬಯಿ ಕರ್ನಾಟಕಕ್ಕೂ ಸಾಮರಸ್ಯವೂ ಸಂಬಂಧವೂ ಇವರಿಂದಲೇ ಹೆಚ್ಚಿಸಲ್ಪಟ್ಟವೆಂದು ಹೇಳಲೇಬೇಕು. ಬಳ್ಳಾರಿಯ ವಿಷಯವಾಗಿ ಆಂಧ್ರ ಕಾಂಗ್ರೆಸ್ಸು ಕಮಿಟಿಗೂ, ಕರ್ನಾಟಕ ಕಾಂಗ್ರೆಸು ಕಮಿಟಿಗೂ, ತಕರಾರು ನಡೆದ ಸಂದರ್ಭದಲ್ಲಿ ಇವರು ಬಳ್ಳಾರಿ ಕರ್ನಾಟಕಸ್ಥರಿಗೆ ಮಾಡಿದ ಮಹದುಪಕಾರವು ಚಿರಸ್ಮರಣೀಯವಾದುದು.

ನಮ್ಮ ಕೆಲವು ಅನಿಷ್ಟವಾದ ಸಾಂಘಿಕ ಸಂಪ್ರದಾಯಗಳಿಂದಲೂ, ಬಾಲ್ಯ ವಿವಾಹದಿಂದಲೂ, ಬಾಲವಿಧವೆಯರ ಕನಿಷ್ಠಸ್ಥಿತಿಯಿಂದಲೂ, ಹಬ್ಬ ಮುಂತಾದವುಗಳಲ್ಲಿ ಆಗುವ ಅನಾವಶ್ಯಕವಾದ ದುಂದುಗಾರಿಕೆಯಿಂದಲೂ, ಸ್ತ್ರೀಯರ ಅಸ್ವತಂತ್ರದಿಂದಲೂ ಹಿಂದೂ ಸಮಾಜಕ್ಕೆ ಬಹಳೇ ಹಾನಿಯು ತಟ್ಟಿದೆ; ಈ ಅನಿಷ್ಟಗಳನ್ನು ನಾವು ದೂಡದ ಹೊರತು ಬಹಿರಂಗ ವಾಕ್ ಚಾತುರ್ಯದಿಂದಾಗಲಿ ಸರ್ಕಾರದ ದೂಷಣೆಯಿಂದಾಗಲಿ ಸ್ವರಾಜ್ಯ ಸಾಧನೆಯಾಗಲಾರದೆಂದು ಅವರ ಅಭಿಮತವು. ಅದನ್ನು ಅವರು ತಮ್ಮ ಆಚರಣೆಯಲ್ಲೇ ತರುತ್ತಲಿದ್ದರು. ಅವರ ಮನೆಯಲ್ಲಿ ಅನೇಕ ಬ್ರಾಹ್ಮಣೇತರ ಸ್ನೇಹಿತರು ಕುಲಭೇದಗಳ ಕುಂದಿಗೆ ಗುರಿಯಾಗದೆ ಪಂಕ್ತಿಭೋಜನಮಾಡುತ್ತಲಿದ್ದದ್ದು ಧಾರವಾಡದಲ್ಲಿ ಅನೇಕ ಮಿತ್ರರಿಗೆ ಗೊತ್ತಿದೆ. ಕಡಪಾರಾಯರ ಧರ್ಮಪತ್ನಿಯು ಸಹ ಈ ಮತವನ್ನೇ ಅನುಸರಿಸಿ ಅವರಿಗೆ ಅನುಯಾಯಿಯಾದದ್ದು ಆ ಮನೆಗೆ ಎಷ್ಟೋ ಶೋಭೆಯನ್ನುಂಟುಮಾಡುತ್ತದೆ.

ಎಂತಹ ಕಠಿಣ ಪ್ರಸಂಗವಿದ್ದಾಗ್ಯೂ ಕೈಕೊಂಡ ಕೆಲಸವು ಅಸಾಧ್ಯವೆಂದು ಹೇಳಿದಾಗ್ಯೂ ಒಮ್ಮನಸ್ಸಿನ ಉಲ್ಲಾಸದಿಂದಲೇ ಅದನ್ನು ಕೊನೆಗಾಣಿಸಲು ಯತ್ನಿಸುವಂತಹ ಕೆಚ್ಚೆದೆಯು ಇವರಲ್ಲಿದ್ದಿತು. ಸ್ನೇಹಿತರಬಗ್ಗೆ ಪರಮಸ್ನೇಹಭಾವವೂ ಭಿನ್ನಭಾವ ಉಳ್ಳವರಬಗ್ಗೆ ಉದಾರಬುದ್ಧಿಯೂ ಇವರಲ್ಲಿ ಸಂಪೂರ್ಣವಾಗಿ ನೆಲೆಗೊಂಡಿದ್ದವು.

ಅವರ ಆತ್ಮಕ್ಕೆ ಶಾಂತಿ ದೊರೆಯಬೇಕಾದರೆ ಅವರು ಕೈಕೊಂಡ ಕೆಲಸವನ್ನು ಮುಂದರಿಸಲೇ ಬೇಕು. ಇದು ಪ್ರತಿಯೊಬ್ಬ ಕರ್ನಾಟಕಸ್ಥನ ಕರ್ತವ್ಯವು. ಇದೇ ಇವರ ಯೋಗ್ಯವಾದ ಸ್ಮಾರಕವು-ಇದರ ಬಗ್ಗೆ ವಿಚಾರಿಸಲು ಧಾರವಾಡದಲ್ಲಿ ಸಭೆಯಾಗಬೇಕೆಂದು ನನ್ನ ಸೂಚನೆಯಿದೆ.

ದಿ ಸ್ಟ್ಯಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲಕ್ಟ್ರಿಕ್ ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು ಒಂದು ಸಲ ಪರೀಕ್ಷಿಸಿ.

೧ ನೇ ದರ್ಜೆ ಪುಡಿ (ಪ್ಯಾಕಿಂಗ್ ಸೇರಿ) ೧ ಪೌಂಡಿಗೆ ರೂ. ೧-೬-೦
೨ ನೇ ,, ,, ,, ರೂ. ೧-೩-೦

ದಿ ಸ್ಟ್ಯಾಂಡರ್ಡ್ ಕಾಫಿ ಕಂಪನಿ
ಚಿಕ್ಕಪೇಟೆ ಬೆಂಗಳೂರು ಸಿಟಿ.

ಮಹತ್ವದ ಸೂಚನೆಗಳು

(೧) ಶುಕ್ರವಾರದ ಬದಲು "ಕನ್ನಡಿಗ"ನು ಇನ್ನು ಮೇಲೆ ಪ್ರತಿ ರವಿವಾರ ದಿನ ಪ್ರಕಟಿಸಲ್ಪಡುವನು

(೨) ಕಳೆದ ಎರಡು ವರ್ಷಗಳಲ್ಲಿ 'ಕನ್ನಡಿಗ'ನ ಚಂದಾದಾರರು ಮನಿಯಾರ್ಡರದಿಂದ ತಮ್ಮ ಚಂದಾ ಹಣವನ್ನು ಕಳುಹಿಸುವರೇನೋ ನೋಡಬೇಕೆಂದು ನಾವು ವಿ. ಪಿ. ಬೇಗನೇ ಮಾಡಲಿಲ್ಲ. ಆದರೆ ಕೆಲವು ಮಹನೀಯರು ಮಾತ್ರ ಪ್ರಾರಂಭದಲ್ಲಿಯೇ ಮನಿಯಾರ್ಡರು ಮಾಡುವರು ಉಳಿದವರೆಲ್ಲರೂ ಆಣೆ ಹೆಚ್ಚಾಗಿಬಿದ್ದರೂ ವಿ. ಪಿ. ಮಾರ್ಗವನ್ನೇ ನಿರೀಕ್ಷಿಸುವರೆಂದು ಕಂಡು ಬಂದಿದೆ. ಹೀಗೆ ನಾವು ಮನಿಯಾರ್ಡರದ ಮಾರ್ಗ ನೋಡಿ ವಿ. ಪಿ. ಕಳಿಸಹತ್ತಿದ್ದರಿಂದ ಕಳೆದ ಎರಡು ವರ್ಷಗಳಲ್ಲಿ ವಿ. ಪಿ. ಗಳು ತಡವಾಗಿ ಅಂದರೆ ಜೂನದಿಂದ ಅಕ್ಟೋಬರ ವರೆಗೆ ಕಳಿಸಲ್ಪಟ್ಟವು ಹೀಗೆ ಕಳಿಸುವದು ನಮಗೆ ಬಹು ಹಾನಿಕರವಾಗಿರುವದರಿಂದ, ಈಗ್ಗೆ ಕಳೆದ ಎರಡು ವಾರಗಳಿಂದ ನಾವು ಕಳಿಸಿದ ಸೂಚನೆಯ ಪ್ರಕಾರ ಯಾರಿಂದ ಮನಿಯಾರ್ಡರ ಬಂದಿಲ್ಲವೋ ಅವರಿಗೆಲ್ಲ ಹೊಸ ವರ್ಷದ ೨ ನೇ ಸಂಚಿಕೆಗಳೇ ವಿ. ಪಿ. ಯಿಂದ ಕಳಿಸಲ್ಪಡುವವು. ಆದುದರಿಂದ ಕಳೆದವರ್ಷ ಜೂನದಿಂದ ಅಕ್ಟೋಬರದ ವರೆಗಿನ ಅವಧಿಯಲ್ಲಿ ವಿ. ಪಿ. ಸ್ವೀಕರಿಸಿದ ಚಂದಾದಾರರು ತಮ್ಮ ವಾರ್ಷಿಕ ಅವಧಿಯು ಮುಗಿಯದೇ ವಿ. ಪಿ. ಬಂದವೆಂದು ತಪ್ಪಾಗಿ ತಿಳಿಯಕೂಡದು. ಎಪ್ರಿಲ ತಿಂಗಳಲ್ಲಿ ಕೊಡತಕ್ಕ ಹಣವನ್ನು ಅವರು ಹಿಂದಕ್ಕೆ ತಡವಾಗಿ ಕೊಡುತ್ತಿದ್ದರು. ಇಷ್ಟೇ. ಈಗ್ಗೆ ಈ ಪದ್ಧತಿಯು ನಿಲ್ಲಿಸಲ್ಪಟ್ಟಿದೆ.

(೩) ಹೊಸ ಚಂದಾದಾರರು ಯಾವ ತಿಂಗಳಲ್ಲಿ ಕಳೆದ ವರ್ಷ ಚಂದಾಹಣ ಸಲ್ಲಿಸಿದರೂ ಆ ಆ ತಿಂಗಳಲ್ಲಿಯೇ ಅವರಿಗೆ ವಿ. ಪಿ. ಗಳು ಕಳಿಸಲ್ಪಡುವವು.

(೪) ಹೊಸ ವರ್ಷದಲ್ಲಿ "ಕನ್ನಡಿಗ"ನು ಕೆಲವು ಸಾಧಾರಣೆಗಳೊಂದಿಗೆ ಹೊರಡುವನು! ಈ ಸುಧಾರಣೆಯ ರೂಪರೇಷೆಯನ್ನು ಕಳೆದ ೨-೩ ಸಂಚಿಕೆಗಳಲ್ಲಿ ಚಂದಾದಾರರು ನಿರೀಕ್ಷಿಸಿರಲಿಕ್ಕೆ ಸಾಕು.

(೫) ವಿ. ಪಿ. ಯಿಂದ ಆರಾಣೆ ವೆಚ್ಚಬರುತ್ತದೆಯಾದ್ದರಿಂದ ಎರಡಾಣೆ ವೆಚ್ಚಮಾಡಿ ೧-೧೩-೦ ಚಂದಾಹಣ ಮನಿಯಾರ್ಡರದಿಂದ ಕಳುಹಿಸುವದು ಚಂದಾದಾರರಿಗೆ ನಿಜವಾಗಿ ಲಾಭಕರ.

(೬) ಮುಂದಿನ ವರ್ಷದಲ್ಲಿ ಚಂದಾದಾರರಾಗಲಿಚ್ಛೆ ಇಲ್ಲದವರು ಹಾಗೆ ನಮಗೆ ತಿಳಿಸಬೇಕಾಗಿ ಬಿನ್ನಹವಿದೆ. ತಮ್ಮ ಹೆಸರಿನಿಂದ ಬಂದ ಸಂಚಿಕೆಯನ್ನು ಒಡೆಯದೇ "ನಿರಾಕರಿಸಲ್ಪಟ್ಟದೆ" ಎಂಬುದಾಗಿ ಅದರ ಮೇಲೆ ಬರೆದು ಪೋಸ್ಟಿನಲ್ಲಿ ಒಗೆದರೆ ಸಾಕಿದೆ. ಪ್ರತ್ಯೇಕವಾಗಿ ಕಾರ್ಡನ್ನು ಹಾಕುವ ಕಾರಣವಿಲ್ಲ. ಯಾವುದನ್ನು ತಿಳುಹಿಸದೇ ಸಂಚಿಕೆಯು ವಿ. ಪಿ. ಯಾಗಿ ಬಂದಾಗ್ಗೆ ಅವನ್ನು ನಿರಾಕರಿಸಿ ನಮ್ಮನ್ನು ವಿನಾಕಾರಣವಾಗಿ ಹಾನಿಗೆ ಮಾತ್ರ ಗುರಿಮಾಡಬಾರದಾಗಿ ಚಂದಾದಾರರಲ್ಲಿ ಸವಿನಯ ಪ್ರಾರ್ಥನೆಯಿದೆ-

ವ್ಯವಸ್ಥಾಪಕ.

ಜಾಹೀರ ನೋಟೀಸ.

—o✻o—

ಯಾವತ್ತು ಜನರಿಗೆ ತಿಳಿಸುವದೇನಂದರೆ:— ಈ ಜಿಲ್ಹೆಯಲ್ಲಿಯ ಮುಚಕಂಡಿ ಕೆರಿಯ ಅಂಗಳವು ೩ ವರ್ಷಗಳವೂರ್ತೆ ಅಂದ್ರೆ ತಾರೀಖ ೧ ನೇ ಎಪ್ರಿಲ್ ೧೯೨೭ ಇಸ್ವಿಯಿಂದಾ ೩೧ ನೇ ಮಾರ್ಚ ೧೯೩೦ ದ ವರೆಗೆ ಬಿತ್ತಿಗೆಯ ದೆಶೆಯಿಂದಾ ಮಾರ್ಚ ೨೭ ನೇ ತಾರೀಖಿನ ದಿವಸ ಮಧ್ಯಾಹ್ನ ೪ ಘಂಟೆಗೆ ಬಾಗಲಕೋಟ ಪಬ್ಲಿಕ ವರ್ಕ್ಸ ಇನಸ್ಪೆಕ್ಶನ್ ಬಂಗಲೇದಲ್ಲಿ ಲಿಲಾವ ಮಾಡಲಾದೀತು.

೨ ಲಿಲಾವಿನಲ್ಲಿ ಬೇಡಲಿಚ್ಛಿಸುವವರು. ಲಿಲಾವಿನ ದಿವಸ ಲಿಲಾವಿನಲ್ಲಿ ಬೇಡಿದ ಎಲ್ಲ ರಕಮನ್ನು ಕೊಡತಕ್ಕದ್ದು. ಅಥವಾ ೧/೪ ಹಣವನ್ನು ಲಿಲಾವ ಆದ ಕೂಡಲೆ ಅದೇಸ್ಥಳದಲ್ಲಿ ಕೊಟ್ಟು, ಉಳಿದ ೩/೪ ಹಣವನ್ನು ಲಿಲಾವಾದ ೮ ದಿವಸಗಳಲ್ಲಿ ಕೊಡತಕ್ಕದ್ದು ಈ ೮ ದಿವಸಗಳ ಅವಧಿಯಲ್ಲಿ ಉಳಿದ ೩/೪ ಹಣವನ್ನು ಕೊಡದೇಇದ್ದರೆ ಮೊದಲು ಕೊಟ್ಟ ೧/೪ ಹಣವು ಸರಕಾರಕ್ಕೆ ಜಮಾ ಮಾಡಲಾದೀತು. ಮತ್ತು ಪುನಃ ಲಿಲಾವು ಮಾಡುವದರಲ್ಲಿ ಬರುವದು.

೩ ಲಿಲಾವಿನ ಶರ್ತುಗಳು ಮತ್ತು ಲಿಲಾವಮಾಡತಕ್ಕ ಭಾಗಗಳ ಅಂಗಳದ ಕ್ಷೇತ್ರ ಮುಂತಾದವು ಬಾಗಲಕೋಟ ಸಬ್ ಡಿವ್ಹಿಜನಲ್ ಆಫೀಸದಲ್ಲಿ ಕಚೇರಿಯ ವೇಳೆಯಲ್ಲಿ ರವಿವಾರ ಹಾಗೂ ಸೂಟೀದಿವಸಗಳ ಹೊರ್ತಾಗಿ ನೋಡಲಿಕ್ಕೆ ಸಿಗುವವು. ಮತ್ತು ಲಿಲಾವ ಆಗುವ ಪೂರ್ವದಲ್ಲಿ ಓದಿ ತಿಳಿಸುವದರಲ್ಲಿ ಬರುವದು.

S. B. REGE
Exuceative Engineer Bijapur
Division

ಜಾಹೀರ ನೋಟೀಸು.

ಯಾವತ್ತು ಜನರಿಗೆ ತಿಳಿಯಪಡಿಸುವದೇನಂದರೆ- ಈ ಜಿಲ್ಹೆಯಲ್ಲಿಯ ಕೆಳಗೆ ಬರೆದ ಊರುಗಳ ಹತ್ತರ ನದಿಯಮೇಲೆ ನಾವು ಆಡಿಸುವ ಹಕ್ಕನ್ನು ೧ನೇ ಎಪ್ರಿಲ್ ೧೯೨೭ ದಿಂದ ಎರಡು ವರ್ಷದ ಪೂರ್ತೆ ತಾರೀಖು ೧ ನೇ ಎಪ್ರಿಲ್ ಮಧ್ಯಾಹ್ನ ೨ ಗಂಟೆಗೆ ಬಾಗಲಕೋಟೆಯಲ್ಲಿ ಸಬ್ ಡಿವ್ಹಿಜನಲ್ ಆಫೀಸದಲ್ಲಿ ಲಿಲಾವ ಮಾಡಲಾದೀತು

ನಾವಿನ ಹೆಸರು	ಸ್ಥಳ	
ಕಲಾದಗಿ	ಘಟಪ್ರಭಾ ನದಿಯಮೇಲೆ,	
ಅನಗವಾಡಿ	ಸದರ	
ಗೋವನಕೊಪ್ಪ	ಮಲಪ್ರಭಾ ನದಿಯಮೇಲೆ,	
ಜೊಳಚ ಗೋಡ	ಸದರ	

೨. ಲಿಲಾವಿನಲ್ಲಿ ಬೇಡಲಿಚ್ಛಿಸುವವರು ೨ ಲಾಯಖಿ ಸರ್ಟಿಫಿಕೇಟುಗಳನ್ನು ಸ್ವತಃ ಹಜರಮಾಡತಕ್ಕದ್ದು ಮತ್ತು ೨೬-೩-೨೭ ವಳಗಾಗಿ ಲಿಲಾವಿನಲ್ಲಿ ಬೇಡುವ ಫೀ ಅಂತಾ (೧೦) ಹತ್ತು ರೂಪಾಯಿ ಸಬ್ ಡಿವ್ಹಿಜನಲ್ ಆಫೀಸರ ಬಾಗಲಕೋಟ ಇವರಕಡೆಗೆ ಡಿಪೋಜಿಟ್ ವೆಂದು ಹಜರಮಾಡತಕ್ಕದ್ದು. ಡಿಪೋಜಿಟ್ ಇಟ್ಟ ರಕಮಿನ ದೆಶೆಯಿಂದಾ ಸಬ್ ಡಿವ್ಹಿಜನ್ ಆಫೀಸರ ಬಾಗಲಕೋಟೆ ಇವರು ಪಾವತಿಮಾಡುವರು.

೩. ಲಿಲಾವಿನ ಶರ್ತುಗಳು ಮುಂತಾದವುಗಳು ಬಾಗಲಕೋಟ ಸಬ್ ಡಿವ್ಹಿಜನಲ್ ಆಫೀಸದಲ್ಲಿ ಕಚೇರಿ ವೇಳೆಯಲ್ಲಿ ರವಿವಾರ ಹಾಗೂ ಸೂಟೀ ದಿವಸಗಳ ಹೊರ್ತಾಗಿ ನೋಡಲಿಕ್ಕೆ ಸಿಗುವವು, ಮತ್ತು ಲಿಲಾವು ಆಗುವ ಪೂರ್ವದಲ್ಲಿ ಓದಿತಿಳಿಸುವದರಲ್ಲಿ ಬರುವದು.

S. B. REGE
Exuceative Engineer Bijapur.
Division.

ಶ್ರೀ. ಕಡಪಾರಾಯರ ಸ್ಮರಣ.

ತನ್ನ ನಿರ್ಮಲವಾದ ಜಲದಿಂದ ದಂಡೆಯ ಮೇಲಿನ ಭೂಭಾಗವನ್ನು ಸುಫಲಿತವಾಗಿ ಮಾಡುತ್ತಲೂ, ಸಕಲ ಜೀವಜಂತುಗಳಿಗೆ ಆನಂದ ಸುಖಗಳ ಸಮೃದ್ಧಿಯನ್ನೀಯುತ್ತಲೂ, ಒಮ್ಮೆ ಎತ್ತರವಾದ ಪರ್ವತದ ಮೇಲಿಂದ 'ಧಡಧಡ' ನಿನಾದದೊಡನೆ ಧುಮುಕುತ್ತಲೂ, ಮತ್ತೊಮ್ಮೆ ಸಣ್ಣ ಸಣ್ಣ ಕಲ್ಲುಗಳೊಳಗಿಂದ ಖಳಖಳ ಶಬ್ದಗೈಯುತ್ತ ಪ್ರವಹಿಸುತ್ತಲೂ, ಇನ್ನೊಂದೆ ಕೆಲವೆಡೆಗಳಲ್ಲಿ ಮಡುವುಗಳನ್ನು ನಿರ್ಮಿಸಿ ಗಂಭೀರವಾಗಿ ಹರಿಯುತ್ತಲೂ, ಬೇಸಿಗೆಯಲ್ಲಿ ಆನಂದವನ್ನುಂಟು ಮಾಡುತ್ತಲೂ, ಮಳೆಗಾಲದಲ್ಲಿ ತನ್ನ ಪ್ರಚಂಡವಾದ ಜಲಪ್ರವಾಹದಿಂದ ಭೀತಿಯನ್ನು ಹುಟ್ಟಿಸುತ್ತಲೂ ಇರುವಂತಹ ನದಿಯನ್ನು ಕಂಡು, ಅದರ ಉಗಮದ ವಿಷಯವಾಗಿ ಕಲ್ಪನೆಯನ್ನು ಮಾಡುವದು ಅಶಕ್ಯವೆನಿಸುವದು. ಅಥವಾ ಚಿಕ್ಕ ಚಿಕ್ಕ ಮುಳ್ಳು ಕಂಟೆಗಳ ಗುಂಪುಗಳಿಂದ ತುಂಬಿದ ಗಿರಿಯ ಮೇಲಿಂದ ನೀರಿನ ಹನಿಗಳು ಬಿದ್ದು, ಚಿಕ್ಕದಾದ ಝರಿಯಾಗಿ ಮಂದಗತಿಯಿಂದ ಪ್ರವಹಿಸುತ್ತಲೂ, ಒಂದು ಕಡೆಯ ನೆಲದ ಪ್ರದೇಶದಲ್ಲಿ ಅದೃಶ್ಯವಾಗುತ್ತಲೂ, ಮತ್ತೊಂದು ಕಡೆಯಲ್ಲಿ ಪಲ್ವಲಗಳಾಗಿ ತೋರುತ್ತಲೂ, ಇರುವ ಮತ್ತು ಚಳಿಗಾಲದಲ್ಲಿ ಉದುರಿದ ತರಗೆಲೆಗಳ ರಾಶಿಯಲ್ಲಿ ಮುಚ್ಚಿ ಹೋದಂಥ ಉಗಮಸ್ಥಾನದಲ್ಲಿಯ ನದಿಯನ್ನು ನಿರೀಕ್ಷಿಸಿದರೆ ಮುಂದದಕ್ಕೆ ಅಮರ್ಯಾದಿತವಾದ ಸ್ವರೂಪವು ಪ್ರಾಪ್ತವಾಗುವದೆಂಬ ಕಲ್ಪನೆಯು ಸಹ ಹೊಳೆಯುವದಿಲ್ಲ.

ಭಾಷಾ, ಕಾವ್ಯ, ಸಂಗೀತ, ಇತಿಹಾಸಾದಿ ವಿಷಯಗಳ ಪೂರ್ಣತೆಯಿಂದ ಶೋಭಿತವಾದ, ಸರ್ವಾಂಗಸುಂದರವಾದ ಕರ್ನಾಟಕದ ಪ್ರಾಚೀನ ಸಂಸ್ಕೃತಿಯು ಹಿಂದುಸ್ಥಾನದ ಪ್ರಾಚೀನ ಇತಿಹಾಸವನ್ನು ಹೆಚ್ಚು ಶೋಭಾಯಮಾನವಾಗಿ ಮಾಡಿರುವದು. ಪೂರ್ವ ಸಂಸ್ಕೃತಿಯ ಅಭಿಮಾನವೂ ಅಭಿಲಾಷೆಯೂ ಜಾಗೃತವಾಗಿ ಅದೇ ಸಂಸ್ಕೃತಿಯು ವರ್ತಮಾನಕಾಲದಲ್ಲಿ ಪ್ರಕಟೀಕರಿಸುವದಕ್ಕಾಗಿಯೂ, ಭವಿಷತ್ಕಾಲದಲ್ಲಿ ನಲಿಯುವದಕ್ಕಾಗಿಯೂ, ಕನ್ನಡಿಗರು ಪ್ರಯತ್ನಿಸುತ್ತಲಿರುವರು. ಈ ಚಳವಳಿಗೆ ಪ್ರಸ್ತುತದಲ್ಲಿ ವಿರಾಟಸ್ವರೂಪವು ಪ್ರಾಪ್ತವಾಗಿದೆಯೆಂದು ಹೇಳಲಿಕ್ಕೆ ಬರದಿದ್ದರು ಸಹ, ಚಳವಳಿಯ ಪ್ರವಾಹವು ಬೇಸಿಗೆಯಲ್ಲಿ ಬತ್ತಿಹೋಗದೆ ಅವ್ಯಾಹತವಾಗಿ ಹರಿಯುವ ಶಕ್ತಿಯು ಮಾತ್ರ ಅದಕ್ಕೆ ಪ್ರಾಪ್ತವಾಗಿಯೆಂದು ನಿಶ್ಚಯವಾಗಿ ಹೇಳಬಹುದು. ಈ ಚಳವಳಿಯು ಜನತೆಯ ದೃಷ್ಟಿಗೆ ಗೋಚರವಾದಾಗ ಇಂತು ಪ್ರಬಲವಾಗಿ ಸಾಗುವವೆಂಬ ಕಲ್ಪನೆಯು ಸಹ ಜನತೆಯಲ್ಲಿ ಒಡಮೂಡಿರಲಿಕ್ಕಿಲ್ಲ.

ಜೀರ್ಣವಾದ ದೇವಾಲಯಗಳಲ್ಲಿಯ ಶಿಲಾ ಲೇಖಗಳನ್ನು ಕೋರ್ಟಿನ ಸೂಟಿಯ ವೇಳೆಯಲ್ಲಿ ಓದುತ್ತಿದ್ದ ಒಬ್ಬಿಬ್ಬ ತರುಣ ವಕೀಲರು ಅಖಿಲ ಕರ್ನಾಟಕದಲ್ಲಿ ಜಾಗೃತಿಯನ್ನು ಹುಟ್ಟಿಸಲಿಕ್ಕೆ ಕಾರಣೀಭೂತರಾಗುವರೆಂಬ ಕಲ್ಪನೆಯು ಆಗಲೂ ಇಲ್ಲ. ಕಲ್ಪನಾತೀತವಾದ ಆ ಕಲ್ಪನೆಯು ಮೂರ್ತಸ್ವರೂಪವನ್ನು ಪಡೆದಿರುವದು. ಪ್ರಸ್ತುತ ಚಳವಳಿಯ ಉಗಮಸ್ಥಾನದಲ್ಲಿ ಪ್ರಯತ್ನಿಸುವ ತರುಣ ವಕೀಲರಲ್ಲೊಂದು ಮುಖ್ಯರು ಶ್ರೀ. ಕಡಪಾರಾಯರು.

ಯಾವದೇ ಚಳವಳಿಯು ಊರ್ಜಿತಾವಸ್ಥೆಯನ್ನು ಹೊಂದಬೇಕಾದರೆ ಹಲಕೆಲ ಜನರಿಗೆ ಅದರ ಹುಚ್ಚೇ ಹಿಡಿಯಬೇಕಾಗುವದು. ಕರ್ನಾಟಕ ಸಂಬಂಧವಾಗಿ ಹುಚ್ಚರಾದವರಲ್ಲಿ ಶ್ರೀ. ಕಡಪಾರಾಯರೊಬ್ಬರಾಗಿದ್ದರು. ಆ ಭ್ರಮೆಯ ಭ್ರಮಣದಲ್ಲಿ ಶ್ರೀ. ಕಡಪಾರಾಯರು ಎಷ್ಟೋ ಜನರನ್ನು ಹಲಕೆಲ ಪ್ರಸಂಗಗಳಲ್ಲಿ ಅವಮಾನಗೊಳಿಸಿದರು; ಆದರೆ ಕರ್ನಾಟಕದ ಅಭಿಮಾನವನ್ನು ತಾಳಿದ ಆ ಪ್ರತಿಯೊಬ್ಬ ಕನ್ನಡಿಗನು ಶ್ರೀ. ಕಡಪಾರಾಯರನ್ನು ತತ್ಸಂಬಂಧವಾಗಿ ಕ್ಷಮಿಸದಿರಲಿಲ್ಲ. ತಮ್ಮ ಎಲ್ಲ ಆಯುಷ್ಯವನ್ನೂ ಸರ್ವ ವೇಳೆಯನ್ನೂ ಕರ್ನಾಟಕಕ್ಕೆ ಅರ್ಪಿಸುವದು ಕರ್ನಾಟಕದ ದುರ್ದೈವದಿಂದ ಅವರಿಗೆ ಆಗಲಿಲ್ಲ; ಆದರೆ ಅವರು ಉಗಮಸ್ಥಾನದಲ್ಲಿಯ ಝರಿಯಂತೆ ತಮ್ಮ ಕೆಲಸವನ್ನು ಪೂರೈಸಿದರು.

ಇನ್ನು ಮುಂದೆ ಅವರ ಚಳವಳಿಯನ್ನು ಹೆಚ್ಚು ಪ್ರಬಲವಾಗಿ ಸಾಗಿಸುವದು ಈಗ ಜೀವಿಸುತ್ತಿರುವಂಥ ಹಾಗು ಮುಂದೆ ಜನ್ಮವನ್ನೆತ್ತುವಂಥ ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಾಗಿರುವದು. ಸಂಕಟಮಯದಲ್ಲಿ ಸೋಲು ಹಾಕದೇ ಹಸನ್ಮುಖನಾಗಿ ಸಹಜವಾದ ರೀತಿಯಿಂದ ಕರ್ತವ್ಯವನ್ನು ಜರಗಿಸುವದು ಶ್ರೀ. ಕಡಪಾರಾಯರಿಗೆ ಸ್ವಭಾವಸಿದ್ಧವಾಗಿತ್ತು. ಭೂಮಿಯ ಮೇಲೆ ಜೋರಿನಿಂದ ಅಪ್ಪಳಿಸಲ್ಪಟ್ಟಾಗ, ಅಷ್ಟೇ ಬಲದಿಂದ ಮೇಲಕ್ಕೆ ಜಿಗಿಯುವ ಆ ರಬ್ಬರ ಚೆಂಡಿನ ಗುಣವೇ ಶ್ರೀ. ಕಡಪಾರಾಯರ ಸ್ವಭಾವದಲ್ಲಿ ಅಡಕವಾಗಿತ್ತು. ಪ್ರತಿಪಕ್ಷಿಗಳ ವಿಜಯವಾಗಿ ತಮ್ಮ ಪರಾಭವವಾದಾಗ್ಯೂ ಅದನ್ನು ನಗುನಗುತ್ತ ಪಚನಮಾಡಿಕೊಳ್ಳುವ ಶಕ್ತಿಯು ಶ್ರೀ. ಕಡಪಾರವರಲ್ಲಿತ್ತು. ಚಿಕ್ಕವರೊಡನೆ ಚಿಕ್ಕವರಾಗಿಯೂ ಹಿರಿಯರೊಳಗೆ ಹಿರಿಯರಾಗಿಯೂ ಆಚರಿಸುವ ಕೃತಿಯು ಶ್ರೀ. ಕಡಪಾರಾಯರಿಗೆ ಚನ್ನಾಗಿ ಅವಗತವಾಗಿತ್ತು.

ಶ್ರೀ. ಕಡಪಾರಾಯರು ಗತಿಸಿಹೋದರು. ಅವರ ಆತ್ಮವು ಕರ್ನಾಟಕದ ಆತ್ಮದಲ್ಲಿ ಸಮರಸವಾಯಿತು. ಕರ್ನಾಟಕವನ್ನು ಸರ್ವಾಂಗ ಸೌಂದರ್ಯವುಳ್ಳದ್ದಾಗಿ ಮಾಡುವದೇ ಶ್ರೀ. ಕಡಪಾರಾಯರ ಸ್ಮಾರಕ ಅಥವಾ ಸ್ಮರಣೆಯ ದ್ಯೋತಕವಾಗಿರುತ್ತದೆ.

ಇದನ್ನು ಪ್ರತಿಯೊಬ್ಬ ಕನ್ನಡಿಗನು ತನ್ನ ಸ್ಮರಣ ಪಟಲದ ಮೇಲೆ ಕೊರೆದುಕೊಂಡಿರಲಿ.

ಕೌಜಲಗಿ ಹನುಮಂತರಾಯರು.

ಸೂಚನೆ.

ಇದೇ ತಿಂಗಳ ೨೮ನೇ ತಾರೀಖಿನ ದಿವಸ ಸಂಜೆಯ ೬ ಘಂಟೆಗೆ ಕಾಂಗ್ರೆಸ್ ಕಮಿಟಿಯ ಕಾರ್ಯಾಲಯದಲ್ಲಿ ಬಾಗಲಕೋಟೆ ತಾಲೂಕ ಕಾಂಗ್ರೆಸ್ ಕಮಿಟಿಯ ಸಾಧಾರಣ ಸಭೆಯು ಕೆಳಗಿನ ವಿಷಯಗಳನ್ನು ಚರ್ಚಿಸುವದಕ್ಕಾಗಿ ಕೂಡುವದು.

(೧) ಹೊಸ ಕಾರ್ಯಕಾರಿ ಮಂಡಳ, ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿಗಳ ಚುನಾವಣೆ.

(೨) ಖಾದೀ ಅಂಗಡಿಯನ್ನು ಅಖಿಲ ಭಾರತ ಚರಖಾ ಸಂಘಕ್ಕೆ ಒಪ್ಪಿಸುವ ವಿಚಾರ.

(೩) ಅಧ್ಯಕ್ಷರ ಅಪ್ಪಣೆಯಿಂದ ಬೇರೆ ವಿಷಯಗಳ ಚರ್ಚೆ.

ಬಾಗಲಕೋಟೆ
[illegible]

ಕಾರ್ಯದರ್ಶಿ.
ತಾಲೂಕ ಕಾಂಗ್ರೆಸ್ ಕಮಿಟಿ

ಮಹತ್ವದ ಸೂಚನೆಗಳು

(೧) ಶುಕ್ರವಾರದ ಬದಲು "ಕನ್ನಡಿಗ"ನು ಇನ್ನು ಮೇಲೆ ಪ್ರತಿ ರವಿವಾರ ದಿನ ಪ್ರಕಟಿಸಲ್ಪಡುವನು

'ಶಕ್ತಿ'ಯ ೬ ನೇ ಸಂಚಿಕೆಯು ಕೈಸೇರಿತು. ಅಚ್ಚುಕಟ್ಟಿನಲ್ಲಿ ಎಂದಿನಂತೆ ಶಕ್ತಿಯಿದೆ. ವೈವಿಧ್ಯದಲ್ಲಿಯೂ ಅದೇ. ಯಾವ ಲೇಖನದಲ್ಲಿಯೂ ಕಸುವು ಕಡಿಮೆಯಾಗಿಲ್ಲ. 'ನೀನದಾರೆ?' ಎಂಬ ಆದ್ಯಕವಿತೆಯಲ್ಲಿ ನೀನೆದಾರೆ, ಎಂಬುದೊಂದೇ ನೆನೆಸಲಿಕ್ಕೆ ಸಾಕು. ಆದರಲ್ಲಿಯೇ ಹೊಸತನ ಹಾಗೂ ಸಂಗೀತ. ಶಕ್ತಿಯ ಮೇಲಿನ ಲೇಖನಗಳು ಅತ್ಯವಶ್ಯ. 'ವಂಗ ವಾಙ್ಮಯ'ದ ಮೇಲೆ 'ಶಕ್ತಿ'ಗೆ ಅನುರೂಪವಾಗಿ ಬರೆಹಗಳು ಬರಹತ್ತಿವೆ. ಶಕ್ತಿಯ ಮೂಲಸ್ಥಾನವಾದ ವಂಗದೇಶದ ವಾಙ್ಮಯದರಿಕೆಯು ಯೋಗ್ಯವಾದದ್ದೇ. ಅದರಲ್ಲಿ ಶಾಂತಿನಿಕೇತನದ ಕನ್ನಡಿಗರು ಬರೆದುದೆಂದರೆ ಹೆಚ್ಚಿನ ಅಭಿಮಾನ. ಆದರೆ ಬರೆದವರಲ್ಲಿ ಕತೆಯಲ್ಲಿಯಂತೆ 'ಪಡೆದ, ಹಾಡುತ್ತಿದ' ಈ ಧಾತು ಪ್ರಯೋಗಗಳು ಸರಿಯಲ್ಲ. 'ಪರರಿಗಿಟ್ಟ ಶೂಲ'ದ ಕತೆಯು ಪರಿಶಿಷ್ಟ ಕುತೂಹಲವಾಗಿಲ್ಲ ರೂಪಾಯಿಯ ಫಜೀತಿಯು ಒಳ್ಳೇ ಹೊತ್ತಿಗೆ, ಹದಿನೆಂಟು ಪೆನ್ನಿಯ ತಿಕ್ಕಾಟದಲ್ಲಿ ಬೋಧಕವಾಗಿವೆ. ಮುಂದಿರುವ 'ಆದಿತ್ಯರಾಣಿ'ಯ ಬಗ್ಗೆ ಮುಂದೆ ಮಗುವಿನ ಜಗಕ್ಕೆ ಒಂದೆರಡು ಚಿತ್ರಗಳು ಬೇಕು. ಗೋವಳನ ವಿನೋದಗಳು ಎರಡು ಪಾಲು ಹಾಲು ಒಂದು ಪಾಲು ನೀರು ಹೀಗಿವೆ. ಉಳಿದೆಲ್ಲರೀತಿಯಿಂದಲೂ ಗೋವರ್ಧನರಾಯರ ಶಕ್ತಿಯು ಇದೇ ವೈವಿಧ್ಯದಿಂದ ಕಂಗೊಳಿಸಿದರೂ ಶಕ್ತಿಯ ವಿಚಾರವಾಗಿ ಹೆಚ್ಚು ಕೈಯಾರಿ ವರ್ಧಮಾನವಾಗಲೆಂದು ನಾವು ಕೋರುತ್ತೇವೆ.

—ರಸಿಕರಂಗ.

ಶಿವಾನುಭವ.

'ಶಿವಾನುಭವ'ದ ೪ ನೇ ಸಂಚಿಕೆಯು ತಲ್ಪಿತು. 'ಶಿವಾನುಭವ'ವು ತಾನೇನು ತಾನು ಓದಿ ಚೆಲ್ಲುವ ಪತ್ರಿಕೆಯಲ್ಲ ವೀರಶೈವ ಧರ್ಮಕ್ಕೆ ಅದೊಂದು ಭದ್ರವಾದ ಪೆಟ್ಟಿಗೆಯಿದ್ದಂತೆ ಪೆಟ್ಟಿಗೆಯೆಂದರೆ ಕತ್ತಲೆಗವಿಯಲ್ಲ. ನೋಡಬಂದವರಿಗೆ ಧರ್ಮ ಗ್ರಂಥಗಳ ಪರಿಚಯವನ್ನು ಮಾಡಿಕೊಟ್ಟು ಪ್ರಕಾಶಿಸುವುದು. ಅಂತೇ ಶ್ರೀ. ಹಳಕಟ್ಟಿಯವರ ಅಪೂರ್ವ ಯತ್ನದಿಂದ ಬೇರೆ ಬೇರೆ ಶರಣರ ವಚನಗಳು ಇಲ್ಲಿ ಬರಲಿವೆ ಅವೆಲ್ಲ ಚಿರಕಾಲವಿರತಕ್ಕ ಹೊತ್ತಿಗೆಗಳಲ್ಲವೆ? ಈ ಸಲ ಸಂಗನಬಸವೇಶ್ವರ ವಚನಗಳು ಬಂದಿವೆ. 'ನೋಡಾ' ಎಂಬೊಂದು ಪುನರುಕ್ತ ವಚನದಿಂದ ಶರಣನ ಭಕ್ತಿ ದೃಷ್ಟಿಯು ತಿಳಿಯುವಂತಿದೆ. 'ಆಂಧ್ರ ವಾಙ್ಮಯವೂ ವೀರಶೈವ ಧರ್ಮವೂ' ಈ ಲೇಖವು ಹೊಸಬೆಳಕನ್ನು ಕೆದಕುವ ಹಾಗಿದೆ. ಉಳಿದ ಲೇಖಗಳಲ್ಲಿ ಲಿಂಗವಂತ ಧರ್ಮದ ರಕ್ತವು ಶುದ್ಧವಾಗಿ ಹರಿಯುತ್ತದೆ. ಆದರೆ ಪ್ರತಿಪುಟವನ್ನು ತಿರುವಿ ಎಷ್ಟು ಲಿಂಗವಂತರು ಈ ರಕ್ತಿಮೆಯ ಶೋಭೆಯನ್ನು ಕಾಣುತ್ತಿರುವರೋ ನಾವು ತಿಳಿಯೆವು. ಅನ್ಯ ಮತಸ್ಥರ ಮಾತಂತೂ ದೂರವೇ ಆದರೆ ನಿಜವಾಗಿ 'ಶಿವಾನುಭವ'ವು ಸಿದ್ಧ ಸಾಧ್ಯವಾಗಬೇಕಾದರೆ ಬ್ರಾಹ್ಮಣರು ಅವರಲ್ಲಿ ಪಂಡಿತಂಮನ್ಯರೂ, ಅವರಲ್ಲಿ ತಟ್ಟಿಯವರೂ ಜ್ಞಾನಲಾಲಸೆಯಿಂದ ಓದಲಿಕ್ಕೆ ಮೊದಲು ಮಾಡಬೇಕು ಅಂದರೆ ಪರಸ್ಪರ ಮತಿಯ ಗುರುತು ಚೆನ್ನಾಗಿ ಆಗಿ, ಆ ಮೇಲೆ ತಿಳುವಳಿಕೆಗೆ ನಿಲುಕದಷ್ಟು ಮತಯುದ್ಧವು ನಡೆಯಬಹುದು.

—ರಸಿಕರಂಗ.

ಕನ್ನಡಿಗ.

ಬಾಗಲಕೋಟೆ ಚೈತ್ರ ಶುದ್ಧ ೯ ಶಕೆ ೧೮೪೯.

ಸಂಪಾದಕರ ಭೂಮಿ

(ಓಂ)

ನನ್ನ ಮನಸಿನ ಮೇಣಮಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮೆ॥
ನಿನ್ನದಾದರು ಚಿನ್ನ ಮೇಣಬಸ್ತ್ರಿಯು ನೊಂದು ಚಿನ್ನಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ಸ್ವಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೊ॥
—ಅಂಬಿಕಾ ತನಯ ದತ್ತ

ಕನ್ನಡ ನಮೂನೆಗಳು ವಿಜಾಪೂರ, ಧಾರವಾಡ ಜಿಲ್ಲೆಗಳ ಅಂಚೆಮನೆಗಳಲ್ಲಿ ಬಂದಿವೆನ್ನುವದನ್ನು 'ಕನ್ನಡಿಗ'ನಿಂದ ತಿಳಿದುಕೊಂಡು ರಬಕವಿಯ ತರುಣ ಕನ್ನಡ ಅಭಿಮಾನಿಗಳಾದ ಶ್ರೀ. ಹುಲಕುಂದರು ಕೂಡಲೇ ಮುಂಬೈ 'ಪೋಸ್ಟಮಾಸ್ತರ ಜನರಲ್' ಇವರಿಗೆ ಅರ್ಜಿ ಕಳಿಸಿ, ರಬಕವಿಯು ಕನ್ನಡ ನಾಡಾಗಿದ್ದರಿಂದ ಅಲ್ಲಿಗೂ ಕನ್ನಡ ನಮೂನೆಗಳನ್ನೇ ಪೂರೈಸಬೇಕಾಗಿ ಕೇಳಿದ್ದಾರೆ. ಈ ಒಗ್ಗೆ ವಿಚಾರ ನಡೆದಿದ್ದು, ರಬಕವಿಗೆ ಸಹ ಕನ್ನಡ ನಮೂನೆಗಳೇ ದೊರೆಯುವವಾಗಿ ನಮ್ಮ ವಿಶ್ವಾಸವಿದೆ. ಕರ್ನಾಟಕದ ಯಾವ ಯಾವ ಭಾಗಗಳ ಅಂಚೆಮನೆಗಳಲ್ಲಿ ಕನ್ನಡ ನಮೂನೆಗಳ ಪ್ರಚಾರವಿಲ್ಲವೋ ಆ ಆ ಭಾಗದ ಕನ್ನಡಿಗರು ಕೂಡಲೇ ರಬಕವಿಯ ಕನ್ನಡಿಗರ ಮೇಲ್ಪಂಕ್ತಿಯನ್ನು ತೀಡಬೇಕಾಗಿ ಸೂಚನೆಯಿದೆ.

ಕಂದಾಯ ಕಚೇರಿಯಲ್ಲಿ ಸಹ ಕನ್ನಡ ನಮೂನೆಗಳು ಇಲ್ಲದಾಗಿಯೂ ಆಬಗ್ಗೆ ಸರಕಾರವು ಕೂಡಲೇ ಎಚ್ಚತ್ತು, ಕರ್ನಾಟಕದ ಭಾಗಗಳಲ್ಲಿ ಕನ್ನಡ ನಮೂನೆಗಳನ್ನೇ ಪೂರೈಸಬೇಕಾಗಿಯು 'ಕನ್ನಡಿಗ'ನು ಹಿಂದಕ್ಕೆ ಬರೆದಿದ್ದಾನೆ. ಅದಕ್ಕೆ ನಮ್ಮ ಜಿಲ್ಹೆಯ ಕಲೇಕ್ಟರರಾದ ಶ್ರೀ. ನಾಯಕರವರು ಆಬಗ್ಗೆ ಪ್ರಯತ್ನ ನಡೆದಿದೆಯೆಂದೂ ನಮಗೆ ಉತ್ತರ ಕೊಟ್ಟಿದ್ದರು. ಆದರೆ ಆ ಮಾತಿಗೆ ಒಂದು ವರ್ಷದ ಮೇಲೆ ಆಗಿ ಹೋದರೂ, ಈ ಜಿಲ್ಹೆಯಲ್ಲಿ ಸಹ ಮರಾಠಿ ನಮೂನೆಗಳೇ ಈವರೆಗೂ ತಾಲುಕ ಕಚೇರಿಗಳಲ್ಲಿ ಅಲೆದಾಡುತ್ತವೆ. ಕರ್ನಾಟಕದ ನಿಸ್ಸೀಮ ಭಕುತರಾದ ಶ್ರೀ. ನಾಯಕರು ಈಕಡೆಗೆ ಹೆಚ್ಚಾಗಿ ಲಕ್ಷಕೊಡುವರೋ ?

ಶ್ರೀ ಬೇಳವೀಯುವರು ಕರ್ನಾಟಕದ ಏಕೀಕರಣದಬಗ್ಗೆ ಕಾಪಿದ್ದ ದೊಡ್ಡ ಕಾಯದೇ ಮಂಡಲದಲ್ಲಿ ಏನೂ ಪ್ರಯತ್ನಿಸಿಲ್ಲವೆಂಬದಾಗಿ ವೃತ್ತಪತ್ರಿಕೆಗಳಲ್ಲಿ ಬಂದ ಟೀಕೆಗಳಿಗೆ ಮುಂದಾದರೂ ಅವಕಾಶ ಕೂಡಬಾರದೆಂಬ ವಿಚಾರದಿಂದ ಈಸಲ ಏಕೀಕರಣದ ಒಗ್ಗೆ ಕೆಲವು ಪ್ರಶ್ನೆಗಳನ್ನು ಅಲ್ಲಿ ಕೇಳಿರುವದಾಗಿ ತಿಳಿದಿದೆ. ಈ ಎಲ್ಲ ಪ್ರಶ್ನೋತ್ತರಗಳು ಹಿಂದುಸ್ಥಾನ ಸರಕಾರದಿಂದ ನಮ್ಮಕಡೆ ಬಂದಿಲ್ಲ. ಮತ್ತು ಕನ್ನಡ ಪತ್ರಿಕೆಗಳಿಗೆ ಹಾಗೆ ಬರುವ ಸಂಭವವೂ ಇಲ್ಲ. ಇತ್ತ ಶ್ರೀ. ಬೆಳವಿಯುವರಂತೂ ಈಬಗ್ಗೆ ಕನ್ನಡ ಪತ್ರಿಕೆಗಳಿಗೆ ಏನೂ ಬರೆದಿಲ್ಲ. ಆದ್ದರಿಂದ ಅವರು ಕರ್ನಾಟಕದ ಬಗ್ಗೆ 'ಅಸೆಂಬ್ಲಿಯು'ಲ್ಲಿ ಕೇಳಿದ ವಿಷಯವು ನಮಗೆ ನಿಶ್ಚಯವಾಗಿ ತಿಳಿಯದು. ಆದರೂ ಕರ್ನಾಟಕದ ಏಕೀಕರಣದ ವಿಷಯದಲ್ಲಿ ಡಾ. ಯೂ. ರಾಮರಾಯರು "ಕೌನ್ಸಿಲ್ ಆಫ ಸ್ಟೇಟ"ನಲ್ಲಿ ತಂದ ಸೂಚನೆಯ ನಂತರ ಸರಕಾರವು ಈ ಒಗ್ಗೆ ಯಾವ ವಿಧದಿಂದ ವಿಚಾರಮಾಡಿದೆಂದು ಶ್ರೀ. ಬೆಳವಿಯವರು ಪ್ರಶ್ನೆಮಾಡಿದ್ದರೆಂದೂ, ಅದಕ್ಕೆ ಸರಕಾರವು 'ನಾವು ಏನೂ ವಿಚಾರ ಮಾಡಿಲ್ಲ'ವೆಂದು ಉತ್ತರಕೊಟ್ಟರೆಂಗೂ ಪ್ರಕಟವಾಗಿದೆ. ಕರ್ನಾಟಕದ ಬಗ್ಗೆ ಏನಾದರೂ ಪ್ರಶ್ನೆ ಕೇಳಬೇಕು; ಕನ್ನಡ ವೃತ್ತಪತ್ರಿಕೆಗಳು ಸುಮ್ಮನೆ ಕೊಂದರೆ ಕೊಡುತ್ತಲಿವೆ; ಎಂಬ ವಿಚಾರದಿಂದ ಈ ಹಸಿಬಿಸಿ ಪ್ರಶ್ನೆಯನ್ನು ಶ್ರೀ. ಬೆಳವಿಯವರು ಕೇಳಿರಬಹುದಾಗಿ ತೋರುತ್ತದೆ. ಏಕೀಕರಣದ ಪ್ರಶ್ನೆಯನ್ನು ಚನ್ನಾಗಿ ಇವರು ಅಭ್ಯಾಸಿಸಿದ್ದಾಗಿದ್ದರೆ, 'ಪ್ರಾಂತಿಕ ಶಾಸನ ಸಭೆಗಳಲ್ಲಿ ಈ ಪ್ರಶ್ನೆಯು ವಿಚಾರವಾಗದಿದ್ದರೆ ನಾವು ಏನೂ ಮಾಡುವದು ಶಕ್ಯವಿಲ್ಲೆಂ'ದು ಹಿಂದುಸ್ಥಾನ ಸರಕಾರದವರು ಅನೇಕ ಸಲ ಹೇಳಿದ್ದೂ, ಹೊಸ ಸುಧಾರಣೆಯ ಕಾನೂನಿನ ಪ್ರಕಾರ ಹಿಂದುಸ್ಥಾನ ಸರಕಾರದ ಈ ಉತ್ತರವು ಸಮಂಜಸವಾಗಿರುವದೆಂಬದೂ ಶ್ರೀ. ಬೆಳವಿಯವರಿಗೆ ತಿಳಿಯದೇ ಇರುತ್ತಿರಲಿಲ್ಲ. ಆದರೆ ಕರ್ನಾಟಕದ ಇಂತಹ ವಿಷಯಗಳನ್ನು ಅಷ್ಟೊಂದು ಶಾಂತಮನಸ್ಸಿನಿಂದ ಅಭ್ಯಾಸಮಾಡುವರಾರು ? 'ಅಸೆಂಬ್ಲಿ'ಯಲ್ಲಿ ಕರ್ನಾಟಕದ ವಿಷಯವನ್ನು ತೆಗೆಯಬೇಕೆಂದಿದ್ದರೆ, ಶ್ರೀ. ಬೆಳವಿಯವರು ಕರ್ನಾಟಕತ್ವದ ಭಾವವನ್ನು ತಿಳಿದುಕೊಳ್ಳಬೇಕು, ಕನ್ನಡ ಪತ್ರಿಕೆಗಳನ್ನು ಓದಬೇಕು; ಕರ್ನಾಟಕ ಪ್ರಾಂತವನ್ನು ಸುತ್ತಿ ಬರಬೇಕು; ಅಂದರೆ ಅವರ ಇಚ್ಛೆಯು ಸಫಲವಾಗುವದು. ಕರ್ನಾಟಕದ ಶಿಲಾಲಿಪಿಗಳ ಬಗ್ಗೆ ವೃತ್ತಪತ್ರಿಕೆಗಳಲ್ಲ ನಡೆದ ವಿಚಾರವು ಶ್ರೀ. ಬೆಳವಿಯವರಿಗೆ ಗೊತ್ತಿದ್ದರೆ ಅವರು ಆ ಬಗ್ಗೆ ಪ್ರಶ್ನೆಗಳನ್ನು ಮಾಡಬಹುದಾಗಿತ್ತು. ಈ ಶಿಲಾಲೇಖಗಳ ಪ್ರಶ್ನೆಯು ಹಿಂದುಸ್ಥಾನ ಸರಕಾರದ್ದು. ತಮಿಳ ಶಿಲಾಲೇಖಗಳ ಬಗ್ಗೆ ತಮಿಳರು ಪ್ರಶ್ನೆ ಕೇಳಿದ್ದರಿಂದ ೧೬ ಸಾವಿರ ಶಿಲಾಲೇಖಗಳು ತಮಿಳದಲ್ಲಿ ಮೂಲೆಗೆ ಬಿದ್ದವೆಂಬದು ಗೊತ್ತಾಗಿ, ಶಿಲಾಲೇಖ ಖಾತೆಯ ಮುಖ್ಯಾಧಿಕಾರಿಗಳಿಗೆ ಆಶ್ಚರ್ಯವಾಯಿತಂತೆ ! ಮತ್ತು ಅವರು ಈಬಗ್ಗೆ ಈಗ್ಗೆ ಸಮಾಧಾನಕರವಾದ ಏರ್ಪಾಡ ಮಾಡಲು ಹೊರಟಿರುವರೆಂದು ತಿಳಿದಿದೆ. ಆದರೆ ನಮ್ಮ ಶ್ರೀ. ಬೆಳವಿಯವರಿಗೆ ನಮ್ಮ ಕರ್ನಾಟಕದ ಶಿಲಾಲಿಪಿಗಳ ಪ್ರಶ್ನೆಗಳನ್ನು ಕೇಳಲು ತಿಳಿಯದೇ ಹೋಯಿತಲ್ಲ! ಕರ್ನಾಟಕದ ದುರ್ದೈವವು! ಪಾಪ! ಬೆಳವಿಯವರು ಏನು ಮಾಡಿಯಾರು ?

ಕರ್ನಾಟಕ ಸ್ಥಾನಿಕ ಸ್ವರಾಜ್ಯಗಳ ಪರಿಷತ್ತು ಇದೇ ತಿಂಗಳ ಕೊನೆಯಲ್ಲಿ ಧಾರವಾಡದಲ್ಲಿ ನೆರೆಯುವದು. "ಕರ್ನಾಟಕ" ವೆಂಬ ಹೆಸರೇನೋ ಇದೆ. ಆದರೆ ಈ ಹೆಸರಿನಲ್ಲಿ ಕೇವಲ ಉತ್ತರ ಕರ್ನಾಟಕವನ್ನು ಸೇರಿಸಿರುವರೋ ಅಥವಾ, ಕರ್ನಾಟಕದ ಎಲ್ಲ ಭಾಗಗಳ ಸ್ಥಾನಿಕ ಸಂಸ್ಥೆಗಳಿಗೆ ಸಹ ಆಮಂತ್ರಣ ಕಳಿಸಿರುವರೋ ತಿಳಿಯದು. ಪರಿಷತ್ತಿನ ಅಧಿಕಾರಿಗಳು ಈಬಗ್ಗೆ ಸ್ಪಷ್ಟವಾದ ಪ್ರಕಟನೆ ತೆಗೆಯಬೇಕಾಗಿ ಸೂಚನೆಯಿದೆ. ಕೇವಲ ಉತ್ತರ ಕರ್ನಾಟಕದ ಪರಿಷತ್ತನ್ನೇ ನೆರವೇರಿಸಬೇಕಾಗಿ ಚಾಲಕರ ವಿಚಾರವು ಈಗಿದ್ದರೆ, ಕರ್ನಾಟಕದ ಎಲ್ಲ ಸಂಸ್ಥೆಗಳನ್ನು ಈ ಪರಿಷತ್ತಿನಲ್ಲಿ ಸೇರಿಸಲು ಈ ಸಲದ ಅಧಿವೇಶನದಲ್ಲಿ ನಿಶ್ಚಯಿಸಿ, ಮುಂದಿನ ವರ್ಷದಿಂದಲಾದರೂ ಕನ್ನಡನಾಡಿನ ಎಲ್ಲ ಮುನಸಿಪಾಲ್ಟಿ ಲೋಕ

ಲ್ ಬೋರ್ಡುಗಳ, ಈ ಚಳವಳದಲ್ಲಿ ಭಾಗ ತೆಗೆದುಕೊಳ್ಳುವಂತೆ ಏರ್ಪಾಡು ಮಾಡಬೇಕು ಅಂದರೆ ಅಖಂಡ ಕರ್ನಾಟಕದ ಭಾವನೆಗೆ ಮೂರ್ತ ಸ್ವರೂಪವು ಹೆಚ್ಚಾಗಿ ಬರುವದು. ಇನ್ನು, ಸಭೆಯಲ್ಲಿ ಚರ್ಚಿಸಲು ಇಟ್ಟ ವಿಷಯಗಳೆಲ್ಲ ಸ್ಥಾನಿಕ ಸಂಸ್ಥೆಗಳಿಗೆ ಅತ್ಯಾವಶ್ಯವಾದ ಸಂಗತಿಗಳೆಂಬದರಲ್ಲಿ ಸಂದೇಹವಿಲ್ಲ. ಆದರೆ ಕರ್ನಾಟಕದಲ್ಲಿ ರೇಲ್ವೆಗಳ ಅನಾನುಕೂಲತೆಯು ಹೆಚ್ಚಾಗಿದ್ದರಿಂದ ಇಲ್ಲಿಯ ವ್ಯಾಪಾರ ಉನ್ನತಿಗೆ ವಿಕಾಸಹೊಂದಲು ಮಾರ್ಗವಿಲ್ಲ. ಆದ್ದರಿಂದ ಮದ್ರಾಸದಲ್ಲಿ ಲೋಕಲ್ ಬೋರ್ಡಿನವರು ಪ್ರಾರಂಭಿಸಿದಂತೆ ಕರ್ನಾಟಕದಲ್ಲಿಯೂ, ಜಿಲ್ಲಾ ಬೋರ್ಡಿನವರು, ತಮ್ಮ ತಮ್ಮ ಜಿಲ್ಲೆಗಳನ್ನು ಸಮೀಪದ ಜಿಲ್ಲೆಗಳಿಗೆ ಕೂಡಿಸಲಿಕ್ಕೂ, ತಮ್ಮ ತಮ್ಮ ಜಿಲ್ಲೆಗಳಲ್ಲಿಯ ವ್ಯಾಪಾರದ ಕೇಂದ್ರಸ್ಥಾನಗಳಿಗೆ ಸಣ್ಣ ರೇಲ್ವೆಗಳನ್ನು ಹಾಕುವದಕ್ಕೂ ಪ್ರಾರಂಭಿಸಿದರೆ, ಬಹು ಅನುಕೂಲವಾಗುವದು. ಉದಾಹರಣಾರ್ಥವಾಗಿ ವಿಜಾಪೂರದಿಂದ ತಾಳೀಕೋಟಿಗೆ ರೇಲ್ವೆಯಾದರೆ, ನಿಜಾಮ ಕರ್ನಾಟಕದ ಬಹುದೊಡ್ಡ ವ್ಯಾಪಾರವು ತಾಳಿಕೋಟಿಗೆ ಬಂದು ನಿಜಾಮ ಕರ್ನಾಟಕದ ಸಂಬಂಧವು ಬೆಳೆದು, ಈ ಜಿಲ್ಲೆಯ ಸಾಂಪತ್ತಿಕ ಸ್ಥಿತಿಯೂ ಸುಧಾರಿಸುವದು. ಹಿಂದಕ್ಕೆ ತಾಳೀಕೋಟಿ-ವಿಜಾಪೂರದ ರೇಲ್ವೆಯ ಸರ್ವೆ ಸಹ ಆಗಿದೆ. ಆದರೆ ಇದಕ್ಕೆ ಮೂರ್ತಸ್ವರೂಪ ಕೊಡಲು ಪ್ರಯತ್ನಿಸುವವರು ಬೇಕು. ಜಿಲ್ಲಾ ಬೋರ್ಡಿನ ತರುಣ ಹಾಗೂ ಉತ್ಸಾಹೀ ಅಧ್ಯಕ್ಷರಾದ ಶ್ರೀ. ಪಾಟೀಲ ಶಂಕರಗೌಡರು ಈ ಬಗ್ಗೆ ಪ್ರಯತ್ನಿಸುವರೋ?

ಬಳ್ಳಾರಿ ಜಿಲ್ಲಾ ಅಧಿಕಾರಿಗಳು ಜನರನ್ನು ಪೀಡಿಸುವದರಲ್ಲಿ ತಮ್ಮ ವ್ಯವಸಾಯ ಬಂಧುಗಳನ್ನು ಹಿಂದಕ್ಕಟ್ಟಿರುವರು. ಪ್ಲೇಗಿಗಾಗಿ ಚುಚ್ಚಿ ಔಷಧವನ್ನು ಡಿಸೆಂಬರ ತಿಂಗಳೊಳಗಾಗಿ ಹಾಕಿಸಿಕೊಳ್ಳಲೇ ಬೇಕು, ಇಲ್ಲವಾದರೆ ಊರು ಬಿಡಬೇಕೆಂಬದಾಗಿ ಕಲೆಕ್ಟರರು ಅಪ್ಪಣೆ ಕೊಟ್ಟರು! ಆ ಆಜ್ಞೆಯನ್ನು ಉಲ್ಲಂಘಿಸಿದವರಿಗೆ ಈಗ್ಗೆ ದಂಡಿಸುವ ಅಪ್ಪಣೆ ಹೊರಟಿದೆ! ಕಲೆಕ್ಟರರ ಅಪ್ಪಣೆಯೆಂದರೆ, ತಾಲೂಕು ಅಮಲ್ದಾರರಿಗೆ ಅದನ್ನು ಕೃತಿಯಲ್ಲಿ ತರಲು ಬಲು ಹುರುಪು! ಸದ್ಯಕ್ಕೆ ಹರಪನಹಳ್ಳಿಯಲ್ಲಿ ನೀರಿನ ಬರ. ಒಂದು ತಂಬಿಗೆ ನೀರು ದೊರೆಯಬೇಕಾದರೆ ವಿಶ್ವಾಮಿತ್ರನ ತಪಸ್ಸು ಮಾಡಬೇಕಾಗುತ್ತದೆ. ಇಂತಹ ಆಪತ್ಕಾಲದಲ್ಲಿ ಪ್ರಜೆಗಳಿಗೆ ಸಹಾಯಮಾಡಿ, ಮಾನವೀ ದಯೆಯನ್ನು ತೋರಿಸುವದರ ಬದಲು, ತಹಸೀಲದಾರರು ಪ್ರಜೆಗಳನ್ನು ಪ್ಲೇಗಿನ ದ ಡಕ್ಕೆ ಗುರಿಮಾಡುತ್ತಲಿದ್ದಾರೆ. 'ಬೆಕ್ಕಿಗೆ ಆಟ; ಇಲಿಗೆ ಪ್ರಾಣಸಂಕಟ' ವೆನ್ನುವದನ್ನು ಪ್ರತ್ಯಕ್ಷವಾಗಿಲ್ಲಿ ಕಾಣಬಹುದು! ಮೊದಲು ಪ್ಲೇಗಿನಿಂದ ಜನರು ಹಣ್ಣಾದರು. ನೀರಿನ ಕೊರತೆಯಿಂದ ದೇಹವೆಲ್ಲ ಈಗ್ಗೆ ಕೊರೆಯುತ್ತಲಿದೆ! ತಹಶೀಲದಾರರು ಮಾತ್ರ ತಮ್ಮ ಅಧಿಕಾರದ ದರ್ಪವನ್ನು ಯಾವ ಕೊರತೆಯೂ ಇಲ್ಲದೇ, ಬಡ ರೈತರ ಮೇಲೆ ತೋರಿಸುತ್ತಲಿದ್ದಾರೆ! ಬಡ ರೈತರೆಂದರೆ ಅವರ ಚಲ್ಲಾಟಕ್ಕೆ ಬಲು ಉತ್ಸಾಹ ಬರುತ್ತಿರಬಹುದು! ಅಂತೆಯೇ, ಅಲ್ಲಿಯ "ಸಬ್ ಮ್ಯಾಜಿಸ್ಟ್ರೇಟ" ಹಾಗೂ ತಾಲೂಕು "ಅಕೌಂಟೆಂಟ" ಇವರು ಆ ನಿಯಮವನ್ನುಲ್ಲಂಘಿಸಿದ್ದರೂ, ಅವರನ್ನು ತಹಶೀಲದಾರರು ದಂಡಿಸಿಲ್ಲವಂತೆ! ಇದು ನಿಜವಿದ್ದಲ್ಲಿ ಸರಕಾರದ ಉತ್ತರವೇನು?

ಚೀನವೂ ಪರರಾಷ್ಟ್ರಗಳೂ

ಚೀನಕ್ಕೆ ಸಂಬಂಧಪಟ್ಟ ಪರರಾಷ್ಟ್ರಗಳೆಂದರೆ ವಿಶೇಷವಾಗಿ ಪಾಶ್ಚಾತ್ಯ ರಾಷ್ಟ್ರಗಳು ಮತ್ತು ಜಪಾನವು. ಪಾಶ್ಚಾತ್ಯ ರಾಷ್ಟ್ರಗಳು (ಅವುಗಳಲ್ಲಿ ವಿಶೇಷವಾಗಿ ಇಂಗ್ಲಂಡವು) ತಮ್ಮ ಕಾಲನ್ನು ಪರದೇಶದಲ್ಲಿ ಚಾಚಬೇಕಾದರೆ ಮೊದಲು ಪಾದ್ರಿ ಜನರನ್ನು ಕೊಟ್ಟು ಕಳುಹಿಸುವವು. ಅವರು ೧೦—೨೦ ವರ್ಷಗಳವರೆಗೆ ತಮ್ಮ ದೇವಾಲಯಗಳನ್ನು ಸ್ಥಾಪಿಸಿ, ಧರ್ಮೋಪದೇಶವನ್ನು ಮಾಡುವಂತೆ ನಟಿಸಿ, ಆ ದೇಶವನ್ನು ಸೂಕ್ಷ್ಮ ದೃಷ್ಟಿಯಿಂದ ಅವಲೋಕಿಸಿ, ವ್ಯಾಪಾರವು ತಮ್ಮ ದೇಶದವರ ಕೈಯಲ್ಲಿ ದೊರೆಯುವಂತೆ ವ್ಯವಸ್ಥೆ ಮಾಡುವರು. ವ್ಯಾಪಾರ ವಿಷಯಕ ಜ್ಞಾನ ದೊರೆತಕೂಡಲೇ ವ್ಯಾಪಾರಕ್ಕಾಗಿ ಜನರನ್ನು ಕಳುಹಿಸುವದೂ, ಪರದೇಶವನ್ನು ಆಕ್ರಮಣ ಮಾಡುವದೂ ಎರಡನೇ ಪಾವಟಿಗೆಯು. ಇನ್ನು ಈ ವ್ಯಾಪಾರದ ಸಂರಕ್ಷಣೆಗಾಗಿ ಸಮುದ್ರಗಳಲ್ಲಿ ಹಡಗು ಪಡೆಯೂ ಭೂಮಿಯಮೇಲೆ ಸೈನಿಕರೂ ಬರಲೇ ಬೇಕಾಗುತ್ತದೆ. ಇದು ಮೂರನೇ ಪಾವಟಿಗೆಯು. ಈ ಸೈನ್ಯವು ಬಹಳ ದೂರದಿಂದ ಬರಬೇಕಾಗುವದರಿಂದ ಜಯವು ನಿಶ್ಚಿತವಿರುವದಿಲ್ಲವಾದ್ದರಿಂದ, ತಾವು ಆಕ್ರಮಣ ಮಾಡುವ ರಾಷ್ಟ್ರದಲ್ಲಿ ಒಡಕು ಹುಟ್ಟಿಸಿ, ಒಂದು ಬಣಕ್ಕೆ ಗುಪ್ತ ಸಹಾಯಮಾಡಿ, ತಮ್ಮ ಸ್ಥಳವನ್ನು ಭದ್ರವಾಗಿ ಇಟ್ಟುಕೊಳ್ಳುವದು; ಆಮೇಲೆ ಆ ಸಣ್ಣ ಸ್ಥಳದಲ್ಲಿರುವ ಸ್ವಜನರನ್ನೂ ಸಂಪತ್ತನ್ನೂ ಕಾಯಲಿಕ್ಕೆಂದು, ಹೆಚ್ಚಾಗಿ ಸೈನ್ಯವನ್ನೂ ಹಡಗುಗಳನ್ನೂ ಕಳಿಸುವದು ಇದು ನಾಲ್ಕನೇ ಪಾವಟಿಗೆಯು. ಇನ್ನು ತಮ್ಮ ವರ್ಚಸ್ಸು, ಆಕ್ರಮಿಸಲ್ಪಡುವ ರಾಷ್ಟ್ರದಮೇಲೆ ಉಳಿಯಬೇಕಾದರೆ ತಮ್ಮ ಶಾಸ್ತ್ರೀಯ ಜ್ಞಾನದ ಸಹಾಯದಿಂದ ಅಸಹಾಯರಾದ ಕೆಲವು ಊರುಗಳಮೇಲೆ ಏನಾದರೂ ನೆವತೆಗೆದು ಅಂಜಿಸುವದು. ಈ ಪ್ರಕಾರವಾಗಿ ಮಾಡಿದರೆ ತಮ್ಮ ನಡತೆಯ ಬಗ್ಗೆ ಜನರು ಸಂಶಂಕರಾಗಬಾರದೆಂದ ವರ್ತಮಾನ ಪತ್ರಗಳಲ್ಲಿ ತಾವು ದೇವದೂತರೆಂದೂ ಪಾದಾಕ್ರಾಂತರಾಗುವ ಜನರು ರಾಕ್ಷಸ ಪಿಶಾಚ ಸಮರೆಂದೂ ವರ್ಣಿಸಿ, ಪವಿತ್ರವಾದ ಸುಧಾರಣೆಯನ್ನು ಬೀರುವ ತಮ್ಮ ಕಾರ್ಯವು ಯಥಾಪ್ರಕಾರ ನಡೆಯಲೇ ಬೇಕೆಂದು ಪ್ರಸಿದ್ಧಪಡಿಸಿ, ಅನ್ಯರ ಕಣ್ಣಲ್ಲಿ ಮಣ್ಣು ತೂರುವದು; ಐದನೆ ಪಾವಟಿಗೆಯು. ಪಾಶ್ಚಾತ್ಯ ರಾಷ್ಟ್ರಗಳು ಎಲ್ಲೆಲ್ಲಿ ನೋಡಿದರೂ ಈ ಕ್ರಮದಿಂದಲೇ ರಾಜ್ಯ ಗಳಿಸಿರುತ್ತಾರೆ. ಚೀನವು ಈ ಎಲ್ಲ ಪ್ರಕಾರಗಳಿಗೆ ತುತ್ತಾಯಿತು ಆದರೆ ಚೀನದೇಶವು ಇಷ್ಟು ದಿವಸಗಳವರೆಗೆ ಹೆಸರಿಗೆ ಆಗಲೊಲ್ಲದೇಕೆ ಸ್ವತಂತ್ರ ಉಳಿಯಲಿಕ್ಕೆ, ಇಂಗ್ಲಂಡ ಅಮೇರಿಕಾ, ಜಪಾನ, ಫ್ರಾನ್ಸ ಜರ್ಮನಿ ರಸಿಯಾ ಮುಂತಾದ ರಾಷ್ಟ್ರಗಳಲ್ಲಿಯ ಅಸೂಯೆಯೇ ಮೂಲ ಕಾರಣವು. ಮೊನ್ನಿನ ಮಹಾಯುದ್ಧ ಮುಗಿದ ಕೂಡಲೆ ರಶಿಯಾ ದೇಶದಲ್ಲಿ ರಾಜಕ್ರಾಂತಿಯಾಗಿ ಕೂಲಿಕಾರರ ಸಾಮ್ರಾಜ್ಯ ಸ್ಥಾಪನೆಯಾಗಲು ಅವರು ಚೀನದೇಶದಲ್ಲಿಯ ತಮ್ಮ ಎಲ್ಲ ಹಕ್ಕುಗಳನ್ನು ತಾವಾಗಿಯೇ ಬಿಟ್ಟುಕೊಟ್ಟರು. ಆದ್ದರಿಂದ ಚೀನದ ಜನರಿಗೆ ರಶಿಯಾ ಮಿತ್ರರಾಷ್ಟ್ರವಾಗಿ ತೋರಿದ್ದು ಆಶ್ಚರ್ಯವಲ್ಲ! ಸಾಮ್ರಾಜ್ಯ ಸ್ಥಾಪಿಸಲು ಹವ್ಯಾಸವುಳ್ಳ ಬ್ರಿಟಿಶ ಸರಕಾರವನ್ನು ವಿರೋಧಿಸಲು ರಶಿಯಾದವರು ಟೊಂಕಕಟ್ಟಿದ್ದಾರೆ, ಇತ್ತ ಇಂಗ್ಲಿಷರವರೂ ರಶಿಯಾದವರನ್ನು ಹಣ್ಣುಮಾಡಬೇಕೆನ್ನುವರು! ರಶಿಯಾದವರು ಚೀನದ ರಾಷ್ಟ್ರೀಯ ಪಕ್ಷಕ್ಕೆ ಒಂದು ತರದ ಬೆಂಬಲವನ್ನು ಕೊಟ್ಟಿರುತ್ತಾರೆ. ಹೀಗಾಗಿ ಚೀನದ ರಾಷ್ಟ್ರೀಯ ಪಕ್ಷದವರಿಗೆ ಇಂಗ್ಲಿಷರು ಶತ್ರುಗಳಾಗಿ ತೋರಿದ್ದರಲ್ಲಿ ಆಶ್ಚರ್ಯವಿಲ್ಲ!

ಇಂಗ್ಲಿಷರು ಮಹಾ ಬಲಾಢ್ಯರು; ರಾಜಕಾರಣ ಪಟುಗಳು. ಅಮೇರಿಕೆಯಂಥ ಬಲಾಢ್ಯ ರಾಷ್ಟ್ರವನ್ನು ಸಹ ಬಗಲಿಗೆ ಹಾಕಿರುವರು! ಆದ್ದರಿಂದ ಅವರಿಗೆ ಜಪಾನದ ಅಂಜಿಕೆಯು ಅಷ್ಟು ಇಲ್ಲ. ಇತ್ತ ಯುರೋಪದಲಿ ಜರ್ಮನಿಗೆ ಇನ್ನೂ ತಲೆ ಎತ್ತಗೊಟ್ಟಿಲ್ಲ! ಫ್ರಾನ್ಸ ಮತ್ತು ಇಟಾಲಿ ಇವುಗಳೊಳಗಿನ ಈರ್ಷೆಯಿಂದ ಆವೆರಡು ರಾಷ್ಟ್ರಗಳಂದೆ ಅಂಜಿಕೆಯೇ ಇಲ್ಲ ಇನ್ನುಳಿದ ಯುರೋಪದ ರಾಷ್ಟ್ರಗಳು ಒಂದಿಲ್ಲ ಒಂದು ರೀತಿಯಿಂದ ಅವರ ಹಸ್ತಕವಾಗಿವೆ. ಈ ಪ್ರಕಾರವಾಗಿ ಇಂಗ್ಲಿಷರಿಗೆ ಯಾವತರದ ಅಂಜಿಕೆಯು ಸದ್ಯಕ್ಕೆ ಇಲ್ಲ ಹಾಗೂ ಹಿಂದುಸ್ಥಾನದಂಥ ಗುಲಾಮ ರಾಷ್ಟ್ರವು ಚೀನದ ನೆರವಿನಲ್ಲಿದ್ದಬಳಿಕ ತಮ್ಮ ದಂಡಿಗೆ ಅಂಜಿಕೆಯೇ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಇಂಗ್ಲಿಷರೊಬ್ಬರೇ ಏಕಾಂಗಿಯಾಗಿ ನೆರೆಹೊತ್ತು ತಮ್ಮ ೧೦-೨೦ ಸಾವಿರ ದಂಡನ್ನು ಈಗಾಗಲೇ ಕಳಿಸಿರುವರು. ಇದರಿಂದ ಬ್ರಿಟಿಶರಿಗೆ ಲಾಭವೊಂದಬೇಕೆಂದರೆ ಸಾಧ್ಯವಾಗಿಲ್ಲ! ಇದು ಯಾಕೆ ಸಾಧ್ಯವಾಗಿಲ್ಲವೆಂಬುದನ್ನೂ ಚೀನದ ಆಂತರ್ವ್ಯವಸ್ಥೆಯನ್ನೂ ಮುಂದಿನಸಲ ಕೊಡುವೆವು

ಶ್ರೀ ವಿವೇಕಾನಂದ ನಾಟಕ ಸಮಾಜದ ಕಾರ್ಯ ನಿರ್ವಾಹಕರಿಗೆ.

ಪೋ- ತೀರ್ಥಹಳ್ಳಿ- (ಮೈಸೂರ)

ನಾನು ನಿಮ್ಮ ನಾಟಕ ಸಮಾಜದಲ್ಲಿ ಅಭಿನಯಾದಿ ನೌಕರನಾಗಲು ಅಪೇಕ್ಷಿಸುವೆನು. ಅದರ ನಿಯಮಗಳಿಗೆ ಒಪ್ಪಿನಡೆದುಕೊಳ್ಳಲು ಸಿದ್ಧನಿರುವೆನು.

(೧) ವಯಸ್ಸು. ವರ್ಷ (೨) ಜಾತಿ (೩) ವಿದ್ಯಾಭ್ಯಾಸವು ಎಷ್ಟಾಗಿದೆ?
(೪) ಸಂಗೀತ ಪರಿಚಯ ವಿದೇಯೇ?
(೫) ನಾಟ್ಯ ಈ ಕಲೆಯಲ್ಲಿ ಪೂರ್ವ ಪರಿಶ್ರಮವಿದ್ದರೆ ಹೇಗೆ?
(೬) ಮಂಡಳಿಯಲ್ಲಿ ಯಾವ ಕೆಲಸವನ್ನು ಮಾಡಲು ಬಯಸುವೆ?
(೭) ಇತರ ವಿಶೇಷ ವಿಷಯಗಳು.
(೮) ರಕ್ಷಕರ ಒಪ್ಪಿಗೆ ಮತ್ತು ಸಹಿ.

ತಾರೀಖು-

ಸಂಪೂರ್ಣ ವಿಳಾಸ— ಸಹಿ

ಸೂಚನೆ.

ಅಭಿನಯಾದಿ ಕೆಲಸಗಾರರು ದುರ್ವ್ಯಸನ ವಿಲ್ಲದವರಾಗಿರಬೇಕು ಸಮಾಜಕ್ಕೆ ಬಂದಬಳಿಕ ಕೊಂಡು ಉಪಯೋಗಿಸುವ ಒಟ್ಟಿಯು ಖಾದಿಯೇ ಆಗಿರಬೇಕು. ೬ ತಿಂಗಳು ಕಾಲ ಸಂಬಳವಿಲ್ಲದೆ. ಕಲಾಶಿಕ್ಷಣವನ್ನು ಪಡೆಯಲು ಸಿದ್ಧರಿರಬೇಕು. ಮುಂದೆ ಯೋಗ್ಯತಾನು ಸಂಬಳಕ್ಕೆ ಒಪ್ಪಬೇಕು. ಮತ್ತು ಉಳಿದ ಸಮಾಜದ ಎಲ್ಲ ಕಟ್ಟಳೆಗೆ ಒಪ್ಪಬೇಕು. ೧೮ ವರ್ಷದ ಒಳಗಿನ ಹುಡುಗರು ರಕ್ಷಕರ ಅನುಮತಿ ಪತ್ರತರಲು ಸಿದ್ಧರಿರಬೇಕು.

ಹಿಂದುಸ್ಥಾನ.

೧೪ ನೇ ತಾ॥ ದಿನ ಹರಿದ್ವಾರದಲ್ಲಿ ಕೂಡುವ ಕುಂಭಮೇಳಕ್ಕಾಗಿ ಈಗಾಗಲೇ ಸಾವಿರಾರು ಜನರು ಬರುತ್ತಲಿದ್ದಾರೆ ರಾಜರುಗಳ ಆನೆಗಳೊಂದಿಗೆ ಸಾಧುಗಳ ಮೆರವಣಿಗೆಗಳು ನಡಿಯಲು ಸಾಗಿವೆ

ಪಂಜಾಬ ಸ್ವತಂತ್ರಪತ್ರಿಕಾ ಸಂಘವು ಸ್ಥಾಪಿಸಲ್ಪಟ್ಟಿದೆ. ಕನ್ನಡಿಗರ ಸಂಘವೆಂದಾಗುವದು?

ಆಸಾಮದಲ್ಲಿ ಭಯಂಕರವಾದ ಸುಂಟರಗಾಳಿಬಿಟ್ಟು, ರೇಲ್ವೇ ಡಬ್ಬಿಗಳು ನೆಲಕ್ಕೆ ಉರುಳಿದವು. ಪ್ರವಾಸಿಕರಿಗೆ ಮಾತ್ರ ಅಪಾಯವೇನೂ ಆಗಿಲ್ಲ.

ಸಿಂಧದಲ್ಲಿ (ಲಾರ್ಕಾನಾ) ಹಿಂದೂ ಮುಸಲ್ಮಾನರ ದಂಗೆ ಎದ್ದಿದೆ.

ಜೇಡಾಕ್ಕೆ ಹೊರಟ ಯಾತ್ರಿಕರ ಹಡಗದಲ್ಲಿ ೧೮ ವರ್ಷದ ಓರ್ವ ಹುಡುಗನನ್ನು ಬಲಿಕೊಡುವದಕ್ಕಾಗಿ ಒಂದು ಪೆಟ್ಟಿಗೆಯಲ್ಲಿ ಹಾಕಿ ಬಾಗಿಲು ಬಂದುಮಾಡಿದ್ದನ್ನು ಪೋಲೀಸರು ಕಂಡುಹಿಡಿದರು. ಆ ಮಹಮ್ಮದೀಯ ಹುಡುಗನು ಬಂದೀಖಾನೆ ಬಿಡಿಯುತ್ತಲಿದ್ದನು. ಇನ್ನೂ ಸ್ವಲ್ಪಕಾಲ ಹೋಗಿದ್ದರೆ ಅವನು ಸತ್ತೇಹೋಗುತ್ತಲಿದ್ದನು

ದಿ ಸ್ಟ್ಯಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲೆಕ್ಟ್ರಿಕ, ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು ಒಂದು ಸಲ ಪರೀಕ್ಷಿಸಿ.

೧ ನೇ ದರ್ಜೆ ಪುಡಿ (ಪ್ಯಾಕಿಂಗ್ ಸೇರಿ) ೧ ಪೌಂಡಿಗೆ ರೂ. ೧-೬-೦
೨ ನೇ ,, ,, ,, ರೂ. ೧-೩-೦

ದಿ ಸ್ಟ್ಯಾಂಡರ್ಡ್ ಕಾಫಿ ಕಂಪನಿ
ಚಿಕ್ಕಪೇಟೆ ಬೆಂಗಳೂರು ಸಿಟಿ.

ಕಿರ್ಲೋಸ್ಕರ

ಕಬ್ಬಿಣ ನೇಗಿಲುಗಳು

ಹಂಗಾಮು (ಸುಗ್ಗಿ) ಸಮೀಪಿಸಿತು. ಈ ವರ್ಷ ಮಳೆ ಬೆಳೆ ಚನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವುದು. ಕಿರ್ಲೋಸ್ಕರ ನೇಗಿಲು ನಂ. ೧೧, ೯, ೮ ಇವು ಒಕ್ಕಲಿಗರಿಗೆ ಬಹಳ ಉಪಯೋಗ ಬೀಳುತ್ತವೆ ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುತ್ತವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್. } ಕಿರ್ಲೋಸ್ಕರವಾಡಿ ಜಿಲ್ಲೆ ಸಾತಾರೆ

ಶಾಲೆಯ ವಿದ್ಯಾರ್ಥಿಗಳೇ

೨-೩-೪-೫ನೇ ಇಯತ್ತೆ ಕಾಪಿ ಪುಸ್ತಕಗಳು ತಯಾರಿಸಿದ್ದೇವೆ. ಅವುಗಳ ಬೆಲೆ ಡಜನ್ ೧ಕ್ಕೆ ೯ ಆಣೆಗಳು ಬೀಳುವವು. ಬೇಕಾದವರು ತರಿಸಿಕೊಳ್ಳಿರಿ. ಟಪಾಲ ಖರ್ಚು ಬೇರೆ.

ಪಾಂಡುರಂಗ ಎಂಡ ವಾಸುದೇವ ಬ್ರದರ್ಸ ಬದಾಮಿ

ಗಡಿನಾಡಿನವರ ದೌಡು.

ವಿಜಯನಗರವು ಆಂಧ್ರರಿಗೊಳಪಟ್ಟಿರುತ್ತದೆಂದು ಬಡಬಡಿಸುವ ಪದವೀಧರರ ಬಾಯಿಯನ್ನು ಬಂದುಮಾಡುವಷ್ಟರಲ್ಲಿ ಮಹಾರಾಷ್ಟ್ರದ ಪದವೀಧರರೊಬ್ಬರು ಮನೋರಂಜನದ ಫೆಬ್ರುವರಿ ಸಂಚಿಕೆಯಲ್ಲಿ "ಮಹಾರಾಷ್ಟ್ರ ಹಾಗೂ ಬೃಹನ್ಮಹಾರಾಷ್ಟ್ರ" ವೆಂಬ ಲೇಖವನ್ನು ಬರೆದಿರುವರು ಆ ಲೇಖದಲ್ಲಿ ಅವರು ಕರ್ನಾಟಕದ ಅಸ್ತಿತ್ವವನ್ನೇ ಅಲ್ಲಗಳೆದಿರುವರು. ಧಾರವಾಡ ಜಿಲ್ಹೆಯ ಅರ್ಧಭಾಗವು, ಬೆಳಗಾಂವಿ ಮಂಗಳೂರ ವಿಜಾಪೂರ ಜಿಲ್ಹೆಗಳೂ, ಜಮಖಂಡಿ ಸಾಂಗಲಿ ಮುಂತಾದ ಸಂಸ್ಥಾನಗಳೂ ಮಹಾರಾಷ್ಟ್ರದ ಭಾಗಗಳೆಂದೂ, ಮಹಾರಾಷ್ಟ್ರೀಯರು ಕೂಡಲೆ ಏಕೀಕರಣದ ಕಾರ್ಯವನ್ನು ಕೈಕೊಳ್ಳತಕ್ಕದ್ದೆಂದೂ ಆ ಲೇಖದಲ್ಲಿ ಅವರು ಧ್ವನಿತಮಾಡಿರುವರು. ಮರಾಠೀ ಭಾಷೆಯು ಯಾವಯಾವ ಕಡೆಯಲ್ಲಿ ಬಳಕೆಯಲ್ಲಿರುವದೋ ಆ ಆ ಭಾಗಗಳೆಲ್ಲ ಮಹಾರಾಷ್ಟ್ರದವಂತೆ! ಮಹಾರಾಷ್ಟ್ರವೆಂದರೆ ಮರಾಠಿಯನ್ನು ಮಾತಾಡುವ ರಾಷ್ಟ್ರವಂತೆ! ಕರ್ನಾಟಕದಲ್ಲಿ ಮಹಾರಾಷ್ಟ್ರ ಮನೆತನದ ಕುಲದೇವತೆಗಳಿರುವದರಿಂದ ಕರ್ನಾಟಕವು ಮಹಾರಾಷ್ಟ್ರವಂತೆ! ಇವರ ಈ ವಿಧಾನಗಳನ್ನು ಓದಿದರೆ ಪ್ರತಿಯೊಬ್ಬ ಕನ್ನಡಿಗನಿಗೆ ನಗೆ ಬಾರದೇ ಇರದು. ಹಿಂದಕ್ಕೊಮ್ಮೆ 'ಕೇಸರಿ'ಯಲ್ಲಿ ಬಾಹುಲೀಕರರು ಕನ್ನಡಿಗರನ್ನು ಕೆಣಕಿ, ಕನ್ನಡಿಗರ ದೇಶಾಭಿಮಾನವನ್ನು ಕಂಡು ಹಿಡಿದರು. ಬಿಹರೆಯವರ ಬರಹಕ್ಕೆ ಕನ್ನಡಿಗರು ಉತ್ತರ ಕೊಡುವರೆಂದು ತಿಳಿದಿದ್ದೆನು. ಆದರೆ "ಕನ್ನಡಿಗ"ನ ಹೊರತಾಗಿ ಈ ವಿಷಯವನ್ನೆತ್ತಿ ಯಾರೂ ಬರೆದಂತೆ ತೋರಲಿಲ್ಲ 'ಕನ್ನಡಿಗ'ನಾದರೂ "ಎಲ್ಲವೂ ನಿಮ್ಮದೇ ಎಂದು" ಅಪ್ರತ್ಯಕ್ಷರೀತಿಯಿಂದ ಟೀಕಿಸಿರುವನು ಬಿಹರೆಯವರು ಮಂಡಿಸಿದ ವಿಧಾನಗಳನ್ನು ಖಂಡಿಸುವದೇ ನನ್ನ ಬರಹದ ಗುರಿಯು.

ಮಹಾರಾಷ್ಟ್ರವೆಂದರೆ ಮರಾಠಿಯನ್ನು ಮಾತಾಡುವ ರಾಷ್ಟ್ರವಲ್ಲ. ಮಹಾರಾಷ್ಟ್ರ ಮತ್ತು ಮರಾಠಿ ಇವೆರಡು ಶಬ್ದಗಳು ಸಮಾನಾರ್ಥಕ ಶಬ್ದಗಳಲ್ಲ. ಮಹಾರಾಷ್ಟ್ರವೆಂದರೆ ದೊಡ್ಡ ರಾಷ್ಟ್ರವು, ಈಗಿನ ಕರ್ನಾಟಕವೂ ಮಹಾರಾಷ್ಟ್ರವೂ ಕೂಡಿಯೆ ಮಹಾರಾಷ್ಟ್ರವೆಂದು ಕರೆಯಿಸಿಕೊಳ್ಳಲ್ಪಡುತಿತ್ತೆಂದು ಚೀನ ದೇಶದ ಪ್ರವಾಸಿಯಾದ "ಹುವೆನ್ ತ್ಸಾಂಗ" ನು ಬರೆದಿದ್ದಾನೆ. ಭೋಜರು ಮಹಾಭೋಜರೆಂದೆನಿಸಿಕೊಂಡಂತೆ ರಟ್ಟರ, ಮಹಾರಟ್ಟರೆಂದೆನಿಸಿಕೊಂಡರೆಂದೂ, ಮಹಾರಟ್ಟ ಈ ಶಬ್ದದ ಸಂಸ್ಕೃತ ರೂಪಾಂತರವು ಮಹಾರಾಷ್ಟ್ರವೆಂದೂ ಡಾಕ್ಟರ ಭಾಂಡಾರಕರರವರು ಉಲ್ಲೇಖಿಸಿರುವರು. ಭಾಷೆಯನ್ನನುಸರಿಸಿ ಪ್ರಾಂತಗಳ ಹೆಸರುಗಳಿಲ್ಲ. ಈಗಿನ ಆರ್ಕಾಟಕ್ಕೆ ಕರ್ನಾಟಕವೆಂದು ಇಂಗ್ಲೀಷರು ಇನ್ನೂ ಕರೆಯುವದುಂಟು. ಆದರೆ ಅಲ್ಲಿ ಕನ್ನಡಭಾಷೆಯು ಬಳಕೆಯೇ ಇಲ್ಲ.

ಬಿಹರೆಯವರಂತೆ ಕರ್ನಾಟಕದ ಮೇರೆಗಳನ್ನು ಕನ್ನಡಿಗರು ಕಂಡು ಹಿಡಿಯಹೋದರೆ, ಈಗಿನ ಮಹಾರಾಷ್ಟ್ರವೆಲ್ಲವೂ ಕರ್ನಾಟಕವಾಗುವದು. ಈಗಿನ ಮಹಾರಾಷ್ಟ್ರದಲ್ಲಿ ಎಷ್ಟೋ ಕಡೆಗೆ ಕನ್ನಡ ಭಾಷೆಯು ನಡೆಯುವದು. ಮಹಾರಾಷ್ಟ್ರದಲ್ಲಿಯ ಅರ್ಧಕ್ಕಿಂತ ಹೆಚ್ಚು ಊರುಗಳ ಹೆಸರುಗಳು ಕನ್ನಡವಿರುತ್ತವೆಂದು, ಮಹಾರಾಷ್ಟ್ರದ ಸುಪ್ರಸಿದ್ಧ ಇತಿಹಾಸಕಾರರಾದ ಕೈ. ರಾಜವಾಡೆಯವರು ಒಪ್ಪಿಕೊಂಡಿದ್ದಾರೆ. ಕರ್ನಾಟಕದಲ್ಲಿಯ ಹಲವು ಮನೆತನಗಳ ಕುಲದೇವತೆಗಳು ಮಹಾರಾಷ್ಟ್ರದಲ್ಲಿವೆ ಕನ್ನಡಿಗರ ಕುರುಹುಗಳಾದ ಕನ್ನಡ ಶಿಲಾಲೇಖಗಳನ್ನೂ ವೀರಗಲ್ಲುಗಳನ್ನೂ ಮಹಾರಾಷ್ಟ್ರದಲ್ಲಿ ನಾವು ಕಾಣಬಹುದು. ಕರ್ನಾಟಕ ಇತಿಹಾಸ ಸಂಶೋಧಕರಾದ ರಾಜಪುರೋಹಿತರವರು ಗೋವೆಯಲ್ಲಿಯ ಲೆಕ್ಕಪತ್ರಗಳು ಮೊನ್ನೆ ಮೊನ್ನಿನ ವರೆಗೆ ಕನ್ನಡದಲ್ಲಿಯೇ ಇದ್ದುವೆಂದೂ, ಪಂಢರಪುರದ ವಿಠ್ಠಲನು ಕೇವಲ ಕನ್ನಡಿಗರ ದೇವತೆಯೆಂದೂ, ಪಂಢರಪುರದ ಸುತ್ತಲಿನ ದೇಶವು ಕನ್ನಡವೇ ಎಂದೂ ಹಿಂದಕ್ಕೆ 'ಕೇಸರಿ'ಯಲ್ಲಿ ಸಪ್ರಮಾಣವಾಗಿ ಸಿದ್ಧಮಾಡಿರುವರು. ಕರ್ನಾಟಕದಭಿಮಾನದಿಂದ ಅವರು ಹೀಗೆ ಬರೆದಿರಬಹುದೆಂಬ ಸಂದೇಹವುಂಟಾದರೆ, ಕೈ. ವಾ. ಲೋಕಮಾನ್ಯರವರ ಉದ್ಗಾರಗಳನ್ನಾದರೂ ಕಣ್ತೆರೆದು ನೋಡಿರಿ. "ಮಹಾರಾಷ್ಟ್ರ ಬೇರೆ ಕರ್ನಾಟಕ ಬೇರೆ ಅಲ್ಲ. ಎರಡರಲ್ಲಿಯೂ ಒಂದೇರಕ್ತ ಆಡುತ್ತದೆ. ಎರಡೂ ದೇಶಗಳ ಭಾಷೆಯು ಒಂದೇ ಅಂದರೆ ಕನ್ನಡವಿತ್ತು! ಭಾಷೆಯ ವಿಷಯದಲ್ಲಿ ಮಹಾರಾಷ್ಟ್ರವು ಕುಲಗೆಟ್ಟು ಮರಾಠಿಯಾಗಿರುತ್ತದೆ" ಈಗಿನ ಮಹಾರಾಷ್ಟ್ರವು "ಕರ್ನಾಟಕವೋ ಮಹಾರಾಷ್ಟ್ರವೋ" ಎಂಬದನ್ನು ವಾಚಕರೇ ವಿಚಾರಿಸಬೇಕು. ಗೋದಾವರಿಯಿಂದ ಕಾವೇರಿವರೆಗೆ ಕರ್ನಾಟಕವು ಹಬ್ಬಿತ್ತೆಂದು ೯ ನೇ ಶತಮಾನದಲ್ಲಿ ಆಗಿಹೋದ ನೃಪತುಂಗನು ಬರೆದಿದ್ದಾನೆ. ೧೬ ನೇ ಶತಮಾನದಲ್ಲಿಯ ನಂಜುಂಡನಾದರೂ ಇದನ್ನೇ ಎತ್ತಿಹಿಡಿದಿದ್ದಾನೆ. ೧೭ ನೇ ಶತಮಾನದೀಚೆಗೆ ೧೯ ನೇ ಶತಮಾನದ ಅರ್ಧದ ವರೆಗೆ ಕರ್ನಾಟಕವು ಪೇಶವೆಯರ ಸತ್ತೆಗೊಳಗಾಗಿದ್ದದರಿಂದ, ರಾಜಭಾಷೆಯಾದ ಮರಾಟೀ ಭಾಷೆಯು ಅಲ್ಲಲ್ಲಿ ಬಳಕೆಯಲ್ಲಿ ಬಂದಿರಬಹುದು ಸಂಸ್ಥಾನಗಳಲ್ಲಿಯ ಅಧಿಪತಿಗಳು ಮಹಾರಾಷ್ಟ್ರೀಯ ವಂಶಜರಿದ್ದುದರಿಂದ ಅಲ್ಲಿಯ ಕಾರಭಾರವು ಮರಾಠಿಯಲ್ಲಿ ನಡೆಯುತ್ತಿರಬಹುದು. ಕೆಲಕೆಲವು ವ್ಯಾಪಾರಸ್ಥರಾದರೂ ತಮ್ಮ ತಮ್ಮ ಸೌಕರ್ಯಗಳಿಗೆ ಆಗ ಮರಾಠೀ ಭಾಷೆಯನ್ನು ಉಪಯೋಗಿಸುತ್ತಿರಬಹುದು. ಭಾಷಾ ಪ್ರಚುರತೆಯ ದೃಷ್ಟಿಯಿಂದ ಕರ್ನಾಟಕವೆಲ್ಲವೂ ಮಹಾರಾಷ್ಟ್ರಕ್ಕೊಳಪಟ್ಟಿದ್ದೆಂದು ಬರೆಯಲಿಕ್ಕೆ ಬಿಹರೆಯವರಂತಹ ಪದವೀಧರರಿಗೆ ಹೇಗೆ ಬುದ್ಧಿಯಾಯಿತೋ ಏನೋ?

ಇವರು ತಮ್ಮ ಲೇಖದಲ್ಲಿ "ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಿಕೊಳ್ಳಿರೆಂ"ದು ಕೆಲವರು ಹಿಂದಕ್ಕೆ ಬೇಡಿಕೊಂಡಿದ್ದರೆಂದೂ, ಆಗ ಸೇರಿಸಿಕೊಳ್ಳದಿದ್ದುದಕ್ಕೆ ಈಗ ಪಶ್ಚಾತ್ತಾಪಪಡುವೆವೆಂದೂ, ಧ್ವನಿತಮಾಡಿದ್ದಾರೆ. ಮಹಾರಾಷ್ಟ್ರೀಯರ ಮೋಹಳಿಕ್ಕಾಳಗಾದ ಗಂಗಾಧರರಾಯರಂತಹರು ಹೇಳಿರಬಹುದು. ಇಂತಹವರ ವಚನಗಳಿಗೆ ಕನ್ನಡಿಗರು ಎಳ್ಳಷ್ಟು ಬೆಲೆಯನ್ನು ಕೊಡುವದಿಲ್ಲ. ಆಗ್ಗೆ ನಿಮಗೆ ಸಮಂಜಸವೆಂದು ತೋರಿದ್ದರೆ ಸೇರಿಸಿಕೊಳ್ಳಲಿಲ್ಲವೇಕೆ? ಮತ್ತು ಕರ್ನಾಟಕವನ್ನು ಮಹಾರಾಷ್ಟ್ರಕ್ಕೆ ಕೂಡಿಸದಿದ್ದುದಕ್ಕೆ ಕಾಂಗ್ರೆಸ್ಸಿನ ಮೇಲೆ ದೋಷಾರೋಪಣೆ ಮಾಡುವರು. ವೈ. ವಾ. ಕಡಪಾ ರಾಘವೇಂದ್ರರಾಯರ ಕನ್ನಡಿಗರ ಬೇಡಿಕೆಗಳನ್ನು ರಾಷ್ಟ್ರೀಯ ಸಭೆಯ ಮುಂದಿಟ್ಟು, ಕರ್ನಾಟಕದ ಭಾಗಗಳನ್ನು ಬೇರೆ ಮಾಡಬೇಕೆಂದು ಎಲ್ಲ ಸಭಾಸದರಿಗೂ ತಿಳಿಸಿ ಹೇಳಿ, ನ್ಯಾಯವನ್ನು ಪಡೆದುಕೊಂಡರು. ಬಿಹರೆಯವರಂತಹರು ಆಗಲೇಕೆ ವಿರೋಧಿಸಲಿಲ್ಲವೋ ತಿಳಿಯದು. ಅಖಿಲ ಹಿಂದುಸ್ಥಾನದ ಮುಖಂಡರು ಬೆಳಗಾಂವಿ, ವಿಜಾಪೂರ, ಧಾರವಾಡ, ಕಾರವಾರ,

ಬಳ್ಳಾರಿ, ಮಂಗಳೂರ, ಕೊಡಗು, ಮೈಸೂರ ರಾಜ್ಯದೊಳಗಿನ ಗುಲ್ಬರ್ಗಾದಿಗಳೂ, ಸಾಂಗಲಿ, ಜಮಖಂಡಿ, ಕೊಲ್ಹಾಪೂರ ಮೊದಲಾದ ಸಂಸ್ಥಾನಗಳೂ ನಿಜವಾಗಿಯೂ ಕರ್ನಾಟಕದವುಗಳೆಂದು ಮನಸ್ಸಿನಿಂದ ನಾಗಪೂರ ರಾಷ್ಟ್ರೀಯ ಸಭೆಯಲ್ಲಿ ಹೇಳಿದ್ದಾ

ನಿರ್ಣಯವಾಗಿ ಹೋದುದ್ದನ್ನು ಪುನಃ ಪುನಃ ಕಾಲುಕೆದರಿ ಜಗಳತೆಗೆಯುವದು ಸಮಂಜಸವಾಗದು. ನಿಂದಿಹೋದ ನ್ಯಾಯವನ್ನು ಪುನಃ ಪ್ರಾರಂಭಿಸಲು ಮುಂದುವರಿಯುತ್ತಿರುವ ಮಹಾರಾಷ್ಟ್ರೀಯರಿಗೂ, ಮಹಾರಾಷ್ಟ್ರದ ಅಭಿಮಾನದಿಂದ ಪ್ರೇರಿತರಾಗಿ ಕರ್ನಾಟಕವನ್ನೂ, ಕನ್ನಡ ನುಡಿಯನ್ನೂ ಅಲ್ಲಗಳೆಯುತ್ತಿರುವ ಮಹನೀಯರಿಗೂ (ಕನ್ನಡಿಗರೇ ಇರಲೊಲ್ಲರೇಕೆ) 'ಕೇಸರಿ' ಕೈತೋರಿಸಿದಂತೆ ಕೈತೋರಿಸಿ, ಕನ್ನಡಿಗರು ಕಣ್ತೆರೆದಿರುವರೆಂಬುದನ್ನು ಸಿದ್ಧ ಮಾಡಿಕೊಡಬೇಕು. ಕರ್ನಾಟಕ ಏಕೀಕರಣ ಸಂಘದವರೂ, ಕರ್ನಾಟಕದ ಮುಖಂಡರೂ, ಕೈಲಾಗದವರಂತೆ ಕುಳ್ಳಿರದೆ, ಕಟ್ಟುತ್ತರಗಳನ್ನು ಕೊಟ್ಟು 'ಕೇಸರಿ'ಯಿಂದ ಕ್ಷಮೆಯನ್ನು ಬೇಡಿಸಿಕೊಂಡಂತೆ ಬೆಹರೆ ಇವರಿಂದಾದರೂ ಬೇಡಿಸಿಕೊಳ್ಳಬೇಕೆಂದು ಕೋರುವ. ರೀತಿವಂತ.

ಕಣಿಯರ ಪತ್ರಿಕೆ.

ಮೈಸೂರು ದೇಶದ ಸುಪ್ರಸಿದ್ಧ ಸ್ವದೇಶೀ ಪ್ರಚಾರಕರಾದ ಶ್ರೀ. ನಗದೂರು ರಾಮಚಂದ್ರರಾಯರವರು ಕಣಿಯರ ಜನಾಂಗದ ಪುರೋಭಿವೃದ್ಧಿಗಾಗಿ ಒಂದು ಮಾಸಪತ್ರಿಕೆಯನ್ನು ಹೊರಡಿಸಲು ಸರಕಾರದವರ ಅನುಮತಿಯನ್ನು ಬೇಡಿದ್ದರು. ಅದಕ್ಕೆ ಅಧಿಕಾರಿಗಳು ಶ್ರೀಯುತ ರಾಮಚಂದ್ರರಾಯರನ್ನು ನಾನಾವಿಧವಾಗಿ ಪರೀಕ್ಷೆಮಾಡಿ, ಗಾಬರಿಗೊಂಡು ಪತ್ರಿಕೆಯನ್ನು ಪ್ರಕಟಿಸಲು ಅಪ್ಪಣೆ ಕೊಡಲಾಗುವದಿಲ್ಲವೆಂದು ತಿಳಿಸಿರುತ್ತಾರೆ. ಇದರ ಕಾರಣವು ಏನೆಂಬುದು ನಮಗೆ ತಿಳಿಯುವದಿಲ್ಲ. ಸರಕಾರದವರೂ ತಿಳಿಸಿಲ್ಲ. ಆದರೂ ಶ್ರೀಯುತ ರಾಮಚಂದ್ರರಾಯರವರು ಅಧಿಕಾರಿಗಳನ್ನು ನಿರ್ಭಯವಾಗಿ ಖಂಡಿಸುತ್ತ ದೇಶಸೇವೆಯನ್ನು ಧೈರ್ಯದಿಂದ ಮಾಡುತ್ತಿರುವುದೇ ಇದಕ್ಕೆ ಕಾರಣವೆಂದು ಊಹಿಸಬೇಕಾಗಿದೆ. ಆದರೆ ಈ ರೀತಿ ಪ್ರಜಾಸೇವಕರ ಉತ್ಸಾಹಕ್ಕೆ ಭಂಗವನ್ನುಂಟುಮಾಡುವುದು ಮಾದರೀ ಸಂಸ್ಥಾನವಾದ ಮೈಸೂರು ಸರಕಾರಕ್ಕೆ ತರವಲ್ಲ. ಬ್ರಿಟಿಷ್ ಅಧಿಪತ್ಯಗಳಲ್ಲಿ ಪತ್ರಿಕೆಗಳನ್ನು ಹೊರಡಿಸುವುದಕ್ಕೆ ಸರಕಾರದ ಅನುಮತಿಯೇ ಬೇಕಾಗಿಲ್ಲ. ಆದರೆ ಮುಂದರಿಯುತ್ತಿರುವ ಮೈಸೂರಿನಲ್ಲಿ ಮಾತ್ರ ಈ ಪುರಾತನಕಾಲದ ನಿರ್ಬಂಧವು ಇನ್ನೂ ಇದ್ದೇ ಇರುತ್ತದೆ. ಪ್ರೆಸ್ ಆಕ್ಟನ್ನು ಬದಲಾಯಿಸಿ ಈ ವಿಧವಾದ ಅಡಚಣೆಗಳನ್ನು ಕಡಿಮೆಮಾಡುತ್ತೇವೆಂದು ಹೇಳುತ್ತಿರುವಾಗಲೂ ಇಂಥಹ ಪ್ರಯತ್ನಗಳಿಗೆ ಮುರುಗಡ್ಡಿ ಹಾಕುತ್ತಿರುವದು ಸರ್ಕಾರದವರಿಗೆ ಯುಕ್ತವಲ್ಲ. ಈ ಸಂಸ್ಥಾನವು ಹಿಂದುಳಿದ ವರ್ಗದವರನ್ನು ಮುಂದಕ್ಕೆ ತರಲು ಮಾಡುತ್ತಿರುವ ಹಲವುಬಗೆಯ ಪ್ರಯತ್ನಗಳು ದಿಗಂತ ಪ್ರಖ್ಯಾತವಾಗಿವೆ. ಆದಿಕರ್ನಾಟಕರು, ಕುರುಬರು, ಒಕ್ಕಲಿಗರು, ಪರಿವಾರದವರೇ ಮುಂತಾದ ಜನಾಂಗದವರ ಅಭಿವೃದ್ಧಿಗಾಗಿ ಒಂದೊಂದು ಪತ್ರಿಕೆಯನ್ನು ಹೊರಡಿಸಲು ಸರ್ಕಾರದವರು ಅವಕಾಶವನ್ನೂ, ಉತ್ತೇಜನವನ್ನೂ ಕೊಡುತ್ತಿರುವರು. ಹೀಗಿರುವಲ್ಲಿ, ಕಣಿಯ ಜನಾಂಗದವರ ಹಿತಚಿಂತನೆಗಾಗಿ ಶ್ರೀಯುತ ರಾಮಚಂದ್ರ ರಾಯರಂಥಹ ಪ್ರಖ್ಯಾತರುಗಳು ಮುಂದೆಬಂದು ಒಂದು ಪತ್ರಿಕೆಯನ್ನು ಹೊರಡಿಸುತ್ತೇವೆಂದರೆ ಅದಕ್ಕೆ ಅವಕಾಶ ಕೊಡದಿರುವುದು ಕೇವಲ ಅಸಮಂಜಸವಾಗಿ ತೋರುತ್ತದೆ. ಆದುದರಿಂದ ಈ ವಿಷಯದಲ್ಲಿ ಅಧಿಕಾರಿಗಳು ಇಟ್ಟಿರುವ ಸಂಕುಚಿತಭಾವನೆಯನ್ನು ಬಿಟ್ಟು ಈ ಪತ್ರಿಕೆಯನ್ನು ಹೊರಡಿಸಲು ಬೇಗನೆ ಅವಕಾಶಕೊಡುತ್ತಾರೆಂದು ನಂಬಿದ್ದೇವೆ. ಓರ್ವ ಮೈಸೂರಿನವ.

ರಂಗಭೂಮಿಯ ಸಮಾಚಾರ.

ಮಂಗಳೂರಿನ ಶ್ರೀಮತಿ ಕಮಲಾದೇವಿ ಹಾಗೂ ಅವರ ಪತಿಗಳಾದ ಶ್ರೀ ಹರೀಂದ್ರನಾಥರು ಸುಧಾರಿಸಿದ ಪದ್ಧತಿಯ ಮೇಲೆ ನಾಟಕಗಳನ್ನು ಆಡುವ ಬಗ್ಗೆ ಮುಂಬೈಯಲ್ಲಿ ಅವಿಶ್ರಾಂತವಾಗಿ ಪ್ರಯತ್ನಿಸುತ್ತಿದ್ದಾರೆ. ಮುಂಬೈಯಲ್ಲಿಯ ದೈನಿಕ ಪತ್ರಿಕೆಗಳು ಇವರಿಗೆ ಬೆಂಬಲ ಕೊಟ್ಟಿವೆ. ಈಗ್ಗೆ ಅವರು ಇಂಗ್ಲೀಷಿನಲ್ಲಿ ನಾಟಕಗಳನ್ನು ಮಾಡುತ್ತಿದ್ದಾರೆ. ಇನ್ನುಮೇಲೆ ಹಿಂದೀಯಲ್ಲಿ ಮಾಡುವರು. ಅವರ ಖ್ಯಾತಿಯನ್ನು ಕೇಳಿ, ಬಡೋದೆಯ ಮಹಾರಾಜರೂ, ರಾಣಿಯವರೂ ಈ ದಂಪತಿಗಳಿಗೆ ಆಮಂತ್ರಣವನ್ನಿತ್ತಿರುವರು. ಈ ವಾರದಲ್ಲಿ ಇವರ ಪ್ರಯೋಗಗಳು ಅರಮನೆಯಲ್ಲಿ ನಡೆಯುತ್ತವೆ.

ತುಮಕೂರಿನಲ್ಲಿ "ಮೀರಾಬಾಯಿ" ನಾಟಕವು 'ಎಂಪ್ರೆಸ್' ಬಾಲಿಕಾ ಪಾಠಶಾಲೆಯ ಸ್ತ್ರೀಯರಿಂದ ಅಭಿನಯಿಸಲ್ಪಟ್ಟಿತು. ಕುಮಾರಿ ವೆಂಕಮ್ಮನವರ ಅಭಿನಯವು ಪ್ರೇಕ್ಷಕರಿಗೆ ಬಹು ರುಚಿಸಿತು!

ಶ್ರೀ ಅಂಬಾಪ್ರಸಾದಿಕ ನಾಟಕ ಮಂಡಳಿ ಮಂಗಳೂರು.

ಈ ಮಂಡಳಿಯವರು ಶಿವಮೊಗ್ಗೆಯಲ್ಲಿ ೧॥ ತಿಂಗಳು ತಮ್ಮ ನಾಟಕಗಳನ್ನು ಅಭಿನಯಿಸಿ ಈಗ ತಾನೆ ಸಾಗರಕ್ಕೆ ಪ್ರಯಾಣ ಬೆಳೆಸಿದರು. ಈ ಮಂಡಳಿಯವರು ಪ್ರಯೋಗಿಸಿದ ನಾಟಕಗಳಲ್ಲಿ ಹಲವು ಕಲಾದೃಷ್ಟಿಯಿಂದಲೂ ನೀತಿಯದೃಷ್ಟಿಯಿಂದಲೂ ಉತ್ಕೃಷ್ಟಗಳಾಗಿದ್ದವು. ಕನ್ನಡ ಸಾಹಿತ್ಯಕೋಶದ ಸೇವೆಯು ಪ್ರಶಂಸನೀಯವಾಗಿದೆ. ಸಂಗೀತವು ಅದೊಂದು ಅಂಗವಾಗಿ ಸೇರಿತ್ತು. ವಿಷಯಗಳು ಆಯಾಯ ಸನ್ನಿವೇಶಕ್ಕೆ ತಕ್ಕಂತೆ ಮಾನ್ಯವಾಗಿದ್ದವು. ನಟವರ್ಗದವರು ತಮ್ಮ ತಮ್ಮ ಪಾತ್ರಯೋಗ್ಯತೆಯನ್ನರಿತು ರಂಗಭೂಮಿಯ ಮೇಲೆ ಅಭಿನಯವನ್ನು ಮಾಡುತ್ತಲಿದ್ದರು. ದೋಷವು ಇಲ್ಲವೆಂತ ಹೇಳುವುದು ನನ್ನ ಉದ್ದೇಶವಲ್ಲ. ಗುಣಗಳೇ ವಿಶೇಷವಾಗಿದ್ದು, ರಂಗಭೂಮಿಯ ಉದ್ಧಾರದ ಕಾರ್ಯವು ನಡೆದದ್ದರಿಂದ ಇಷ್ಟನ್ನೇ ಹೇಳಬೇಕಾಯಿತು. ಶಿವಮೊಗ್ಗೆಯ ಪಟ್ಟಣದ ಕಲಾಭಿಮಾನಿಗಳಾದ ಶ್ರೀಯುತ [illegible] ಕೃಷ್ಣಮಾಚಾರ್ಯರೂ ಶ್ರೀಯುತ ವಕೀಲ ಸಿ. ಸುಬ್ಬರಾಯರು. ಶ್ರೀಯುತ ಸುಂದರಂ ಐಯ್ಯನವರು ಮುಂತಾಗಿ ಇನ್ನೂ ಕೆಲವರಿಂದ ಈ ಕೆಳಗೆ ಕಂಡ ನಟವರ್ಗದವರು ತಮ್ಮ ಭೂಮಿಕೆಯಲ್ಲಿ ನೈಪುಣ್ಯತೋರಿಸಿದ್ದರಿಂದ ಅವರಿಗೆ ಸುವರ್ಣ ಪದಕವೂ, [illegible] (೨೦೧) ರೂಪಾಯಿ ಬೆಲೆಬಾಳುವ ಪೀತಾಂಬರವೂ ಬಹುಮಾನವಾಗಿ ಅರ್ಪಿಸಲ್ಪಟ್ಟವು. (೧) ಶ್ರೀಯುತ ಯಂ ರಂಗನಾಥಭಟ್ಟರು, ೪ ಸುವರ್ಣಪದಕ ೧ ಉಂಗುರ. (೨) ಕೆ. ಸುಬ್ಬರಾವ್. (ನಳ) ೩ ಸುವರ್ಣ ಪದಕ. (೩) ಕೆ ವಾಮನಭಟ್ಟರು. (ಮುಖ್ಯ ಸ್ತ್ರೀ ಭೂಮಿಕೆ) ೧ ಸುವರ್ಣಪದಕ. (೪) ಡಿ. ರಾಮಕೃಷ್ಣಪ್ಪ (ಸ್ತ್ರೀ ಭೂಮಿಕೆ) ೧ ಸುವರ್ಣ ಪದಕ. (೫) ಪಿ. ಕಾಳಿಂಗ (ಬಾಲಕನಪಾತ್ರವನ್ನು ಮಾಡಿದ್ದಕ್ಕಾಗಿ) ೧ ಸುವರ್ಣ ಪದಕ ಮತ್ತು ಒಂದು ಬೆಳ್ಳಿಯ ಬಟ್ಟಲು. (೬) ಕೆ. ಶಂಕರ (೭ ವರ್ಷದ ಬಾಲಕ) ೧ ಸುವರ್ಣದ ಪದಕ.

ಈ ರೀತಿ ಕನ್ನಡ ರಂಗಭೂಮಿಗೆ ಈ ಪ್ರಕಾರವಾದ ಪ್ರೋತ್ಸಾಹನವು ದೊರೆತಿರುವುದು ಈ ಶಿವಮೊಗ್ಗೆಯಲ್ಲಿ ಇದೇ ಪ್ರಥಮವೆಂದು ಹೇಳಬೇಕು. —ಪ್ರೇಕ್ಷಕ

ನನಗೆ ಹೊಳೆದಂತೆ.

"ವಿಶ್ವಕರ್ನಾಟಕ" ದ ೨೬ ನೇ ಸಂಚಿಕೆಯ ಅಗ್ರಲೇಖದಲ್ಲಿ "ಪ್ರೋಸಿಕ್ಯೂಶನ್" ಶಬ್ದವು ಉಪಯೋಗಿಸಲ್ಪಟ್ಟಿದೆ. ಇಂಗ್ಲೀಷ ಶಬ್ದಗಳ ಬದಲು ಕನ್ನಡ ಶಬ್ದಗಳನ್ನು ಹುಡುಕಿ ಹುಡುಕಿ ಪ್ರಚಾರದಲ್ಲಿ ತಂದು ಕನ್ನಡಿಗರ ಮೇಲೆ ಉಪಕಾರಮಾಡುತ್ತಲಿರುವ ವಿಶ್ವಕರ್ನಾಟಕಕ್ಕೆ 'ಪ್ರೋಸಿಕ್ಯೂಶನ್' ಕ್ಕೆ ಕನ್ನಡ ಶಬ್ದವು ದೊರೆಯಲಿಲ್ಲವೇ?

ಕನ್ನಡ ಸಂಪಾದಕೀಯ ಲೇಖಗಳ ಅಶುದ್ಧತೆಯ ವಿನೋದ(?)ವನ್ನು ಓದಬೇಕಿದ್ದರೆ, ಮುಂದಾಳು, ಬಸವರಾಜ, ಕರ್ನಾಟಕ, ರಾಜಹಂಸಗಳನ್ನು ಓದಬೇಕೆಂದು ಓರ್ವ ವಿನೋದೀ [illegible]ನು ಹಂಗು[illegible]ದಿದ್ದಾನೆ! —ಓದುಗ

ಶ್ರೀ ವಿವೇಕಾನಂದ ನಾಟಕ ಸಮಾಜ.

(ಪ್ರಕೃತ ಕಾರ್ಯಾಲಯ- (ಪೋ) ತೀರ್ಥಹಳ್ಳಿ (ಮೈಸೂರ)

"**ರಂಗಭೂಮಿ**" ಯ ಪವಿತ್ರೋದ್ದೇಶವೆಂದರೆ, ಉತ್ತಮ ಭಾಷಾಶೈಲಿಯ ನಾಟಕಗಳಿಂದ ಸಾಹಿತ್ಯಸೇವೆಯನ್ನೂ ಸಮಾಜದಲ್ಲಿ ನೀತಿಪ್ರದ ನಾಟಕಗಳನ್ನು ಪ್ರದರ್ಶಿಸುವದರಿಂದ ಸಮಾಜ ಸೇವೆಯನ್ನೂ ಮಾಡುವದೇ ಸರಿ. ಆದರೆ ಈ ಕಾಲದಲ್ಲಿ ಕೆಲವು ಧ್ಯೇಯರಹಿತ ವ್ಯವಸಾಯಿಗಳ ಕೈಯಲ್ಲಿ ಸಿಕ್ಕ ಅದು ನಟಜನರ ಮತ್ತು ಸಮಾಜದ ಅವನತಿಗೆ ಕಾರಣವಾಗಿರುತ್ತದೆಂಬುದು ಎಲ್ಲರಿಗೂ ತಿಳಿದಮಾತಾಗಿದೆ. ಆದ್ದರಿಂದ ಈ ದೋಷವನ್ನು ನಿವಾರಿಸಲು ಮೇಲಿನ ಹೆಸರಿನಿಂದ ಒಂದು **ಆದರ್ಶ ನಾಟಕ ಸಮಿತಿ**ಯನ್ನು ಕನ್ನಡ ನಾಡು- ನುಡಿಗಳ ಸೇವೆಗಾಗಿ ಸ್ಥಾಪಿಸಬೇಕೆಂದು ನಿಶ್ಚಯಿಸಿರುವೆವು.

ಈ ಶ್ರೀ ವಿವೇಕಾನಂದ ನಾಟಕ ಸಮಿತಿಯ ಮುಖ್ಯೋದ್ದೇಶವು ಹೀಗಿರುತ್ತದೆ. ಅದು ಒಂದು ಚರ ಆಶ್ರಮ (ವಿದ್ಯಾಲಯ) ವಿರಬೇಕು. ಅಲ್ಲಿನ ವಿದ್ಯಾರ್ಥಿಗಳಿಗೆ ಕನ್ನಡ ಸಾಹಿತ್ಯ, ನಾಟಕ ಕಲೆ, ನೂಲುವ ಮತ್ತು ನೇಯುವ ಕೈಗಾರಿಕೆ, ಮತ್ತು ಬ್ರಹ್ಮಚರ್ಯಗಳ ಉತ್ತಮ ಶಿಕ್ಷಣವನ್ನು ಕೊಡುವದಲ್ಲದೆ, ಅವರ ಮೂಲಕ ಉತ್ತಮ ನಾಟಕಗಳನ್ನು ಅಭಿನಯಿಸಿ ತೋರಿಸಿ, ಸಮಾಜಸೇವೆಯನ್ನು ಮಾಡುವದು. ಉಳಿತಾಯವನ್ನು ಸಾರ್ವಜನಿಕ ಕೆಲಸಗಳ ಒಗೆಗೆ ವಿನಿಯೋಗಿಸುವದು.

ಈ ಸಮಿತಿಯ ಸ್ಥಾಪನೆಗಾಗಿ- ಉಡಿಗೆ ತೊಡಿಗೆಗಳ ವಿಷಯಕ್ಕೆ ರೂಪಾಯಿ ೧೫೦೦; ದೃಶ್ಯವ್ಯವಸ್ಥೆಗಾಗಿ ರೂ. ೧೫೦೦; ವಾದ್ಯ ಮೊದಲಾದವುಗಳಿಗೆ ರೂ. ೧೦೦೦; ಪ್ರಾಸಂಗಿಕ ಕಾಲದ ವೆಚ್ಚಕ್ಕಾಗಿ ರೂ. ೧೫೦೦; ಇತರ ವಿಷಯಗಳಬಗೆಗೆ ರೂ. ೫೦೦ ಹೀಗೆ ಒಟ್ಟು ೬೦೦೦ ರೂಪಾಯಿಗಳು ಹಿಡಿಯಬಹುದೆಂದು ನಿಶ್ಚಯಿಸಿದೆ.

ಈ ಹಣವನ್ನು ೧೦೦ ರೂಪಾಯಿಗಳ ೬೦ ವಿಭಾಗಗಳನ್ನು ಮಾಡಿ- (೧) ದಾನಕೊಡುವ **ಆಜೀವ ಸದಸ್ಯರಿಂದಲೂ** (೨) ೫ ವರ್ಷಗಳಲ್ಲಿ ಸಂಘದ ಅನುಕೂಲತೆಯಂತೆ, ಒಡ್ಡಿಯಿಲ್ಲದೇ, ಸಮಿತಿಯು ಅಸ್ತಿತ್ವದಲ್ಲಿದ್ದರೆ, ಮರಳಿ ಪಡೆಯಲು ಒಪ್ಪುವ ಸಾಮಾನ್ಯ ಸದಸ್ಯರಿಂದಲೂ ಕೂಡಿಸಬೇಕು.

ಸದಸ್ಯರು ಪ್ರತಿಪಾಲಿನ ೧೦೦ ರೂಪಾಯಿಗಳಲ್ಲಿ ೫೦ ರೂಪಾಯಿಗಳನ್ನು ತಾರೀಖು ೩೦-೪-೨೭ ರೊಳಗೂ, ೨೫ ರೂಪಾಯಿಗಳನ್ನು ತಾ|| ೩೦-೫-೨೭ ರೊಳಗೂ ಉಳಿದ ೨೫ ರೂಪಾಯಿಗಳನ್ನು ೩೦-೬-೨೭ ರೊಳಗೂ. ಸಲ್ಲಿಸತಕ್ಕದ್ದು. ಸಮಿತಿಯ ಪ್ರಕೃತ ಕಾರ್ಯಾಲಯವು ತೀರ್ಥಹಳ್ಳಿಯಲ್ಲಿರುವದು.

ಸದಸ್ಯರು ಸಮಿತಿಯ ಯಾವತ್ತು ವಿಷಯಗಳಲ್ಲಿ ಉಪದೇಶಕ ಮಂಡಲದ ಮತವನ್ನು ಅಂಗೀಕರಿಸುವದು.

ಉಪದೇಶಕ ಮಂಡಲ

(೧) ಶ್ರೀ ಹೊಸಕೊಪ್ಪ ಕೃಷ್ಣರಾಯರು **ಮೈಸೂರು.**
(೨) ಶ್ರೀ ಭಾವಿಕಟ್ಟೆ ನಾಗಾಭಟ್ಟರು **ತೀರ್ಥಹಳ್ಳಿ** (ಮೈಸೂರ)
(೩) ಶ್ರೀ ಶ್ರೀನಿವಾಸ ರಾಜೇರಾವ ಮಂಗಳವೇಢೆಯವರು. **ಬಾಗಲಕೋಟೆ** (ವಿಜಾಪೂರ)
(೪) ಶ್ರೀ ಸುಬ್ಬಣ್ಣ ಕೋಳ್ಪಾಡಿತ್ತಾಯರು **ಪುತ್ತೂರು** (ಮಂಗಳೂರ)
(೫) ಶ್ರೀ ಕಂಠೀ ಸಿದ್ಧಲಿಂಗಪ್ಪನವರು. **ಇಲಕಲ್ಲ.** (ವಿಜಾಪೂರ)
(೬) ಶ್ರೀ ಶಿವರಾಮ ಕಾರಂತರು. **ಕೋಟೆ.** (ಮಂಗಳೂರ)

ಸಂಸ್ಥೆಯ ಕಾರ್ಯ ನಿರ್ವಾಹಕರು:—

(೧) ಶಿವರಾಮ ಕಾರಂತರು ಕೋಟೆ (ಮಂಗಳೂರ)
(೨) " ಆನಂದಕಂದ " ರು ಹಲಸಂಗಿ (ವಿಜಾಪೂರ)

ಶ್ರೀ ವಿವೇಕಾನಂದ ನಾಟಕ ಸಮಾಜದ ಕಾರ್ಯ ನಿರ್ವಾಹಕರಿಗೆ.

ಪೋ- ತೀರ್ಥಹಳ್ಳಿ- (ಮೈಸೂರ)

ನಾನು ನಿಮ್ಮ ಸಮಾಜದ ನಿಯಮಗಳಿಗೊಪ್ಪಿ ಆಜೀವ ಸದಸ್ಯ / ಸಾಮಾನ್ಯ ಸದಸ್ಯನಾಗಲು ರೂ. ನೂರರ ಪಾಲು ಗಳನ್ನು ಕೊಳ್ಳಲೊಪ್ಪಿರುವೆನು. ಮತ್ತು ಆ ಬಾಬತ್ತು ಈ ದಿವಸ ರೂ. ಗಳನ್ನು ಮೂಲಕ ಸಲ್ಲಿಸಿರುವೆನು. ಅದನ್ನು ಪ್ರೀತಿಯಿಂದ ಸ್ವೀಕರಿಸಬೇಕಾಗಿ ನನ್ನ ವಿನಂತಿ. ತಾರೀಖು

ಸಹಿ.

ವಿಳಾಸ- (ಸಂಪೂರ್ಣ) ______________________

____

ವರ್ತಮಾನಸಾರ.

ಇಹವೃತ್ತ.

ಮಾರಿಕಾದ ಉಪದ್ರವವು ಕಡಿಮೆಯಾಗುತ್ತಲಿದೆ.

ನಿರ್ಮಲಸ್ವಭಾವದವರೂ ಆನಂದವೃತ್ತಿಯವರೂ ಆದ ರಬಕವಿಯ ಶ್ರೀ. ಬಾಪೂರಿ ಸಿದ್ದಪ್ಪನವರು ಇಲ್ಲಿಗೆ ವಕೀಲಿ ಕೆಲಸಮಾಡಲಿಕ್ಕೆ ಬಂದು ೬ ವರ್ಷಗಳಾದವು. ಆದರೆ ಮೊನ್ನೆಯ ಮಂಗಳವಾರ ದಿನ ವಿಷಮ ಜ್ವರದಿಂದ ಒಮ್ಮಿಂದೊಮ್ಮೆ ಮಡಿದರೆಂಬ ತಿಳಿಸಲು ನಮಗೆ ವಿಷಾದವಾಗುತ್ತದೆ "ಕನ್ನಡಿಗ"ನಿಗೂ ಇವನಿಗೂ ಮಿತ್ರತ್ವವಿದ್ದಿತು.

ಇಲ್ಲಿಯ ಮಾಮಲೇದಾರರಾದ ಶ್ರೀ. ದೇಶಪಾಂಡೆಯವರಿಗೆ ಧಾರವಾಡಕ್ಕೆ ವರ್ಗವಾಗಿದೆ ಇವರು ತಮ್ಮ ಉದಾರ ಬುದ್ಧಿ, ಸರಳ ಸ್ವಭಾವ ಹಾಗೂ ಚೊಕ್ಕಟವಾಗಿ ಕೆಲಸಮಾಡುವ ಹಿತಗಳಿಂದ ಇಲ್ಲಿಯ ಜನರಿಗೆ ಪ್ರಿಯರಾಗಿದ್ದರು, ಆದ್ದರಿಂದ ಈ ಊರಲ್ಲಿ ಅವರ ಸನ್ಮಾನಾರ್ಥ ತಾಂಬೂಲ ಸಮಾರಂಭಗಳು ಜರಗುತ್ತಲಿವೆ. 'ಟೆನಿಸ್ ಕ್ಲಬ್'ನವರೂ ತಾಲೂಕ ಲೋಕಲ್ ಬೋರ್ಡಿನವರೂ ಹಾರ್ಡಿಂಜ ವಾಚನಾಲಯದವರೂ ಸಹ ಇವರನ್ನು ಗೌರವಿಸಿದರು.

ಬದಾಮಿಯ ಮಾಮಲೇದಾರರಾಗಿದ್ದ ಶ್ರೀ. ದೇಶಪಾಂಡೆ ಆರ್. ಬಿ. ಇವರು ನಿನ್ನಿನ ದಿನ ಇಲ್ಲಿಗೆ ಬಂದು ತಮ್ಮ ಹೊಸ ಕೆಲಸವಾದ ಈ ತಾಲೂಕಿನ ಮಾಮಲೇದಾರಿಕೆಯ "ಚಾರ್ಜ" ತೆಗೆದುಕೊಂಡರು.

ಮುಂಬೈ ಕರ್ನಾಟಕ

ಮಹಾತ್ಮರಿಗೆ ವಿಶ್ರಾಂತಿಯು ಅವಶ್ಯವಾಗಿ ಬೇಕಾಗಿದ್ದರಿಂದ ಮೈಸೂರ ಮದ್ರಾಸಗಳ ಪ್ರವಾಸವು ಸದ್ಯಕ್ಕೆ ನಿಲ್ಲಿಸಲ್ಪಟ್ಟಿದೆ. ಮಹಾತ್ಮರ ಪ್ರಕೃತಿಯು ಸುಧಾರಿಸುತ್ತಲಿದೆ. ಮೈಸೂರ ಪ್ರಾಂತದ ನಂದೀ ಬೆಟ್ಟದ ತಂಪು ಹವೆಯಲ್ಲಿ ಇರುವದಕ್ಕೆ ಹೋಗುವರಾಗ ತಿಳಿಯುತ್ತದೆ.

ಶ್ರೀ ಶ್ರೀಧರ ಬಾಲಕೃಷ್ಣ ವೈದ್ಯರು ಧಾರವಾಡದ (ಶ್ರೀ ಹಿರೇಮಠರ ಬದಲು) ಡಿ. ಡಿ. ಸಿ. ನೇಮಿಸಲ್ಪಟ್ಟಿದ್ದಾರೆ.

ಹಿಂದುಸ್ಥಾನ.

ರಾಷ್ಟ್ರೀಯ ವಾರವು ಮುಂಬೈಯಲ್ಲಿ ಆಚರಿಸಲ್ಪಟ್ಟಿತು. ವ್ಯಾಖ್ಯಾನದ ಸಮಯದಲ್ಲಿ ಶ್ರೀ ಶಕ್ಲತವಾಲಾರವರು ಲಾರ್ಡ ಬರ್ಕನ್ ಹೆಡ್ಡರ ಬಣ್ಣವನ್ನು ಹೊರಗೆಡವಿದರು ಈ ಲಾರ್ಡರು ಅಪರಾಧಿಗಳೆಂದೂ, ಕೈಸರನ ಸಂಗಡ ಪತ್ರವ್ಯವಹಾರ ನಡಿಸಿ, ಜಾರ್ಜ ಬಾದಶಹನನ್ನು ಪಟ್ಟದಿಂದ ಇಳಿಸಲು ಪ್ರಯತ್ನಿಸಿದವರೆಂದೂ ಹೇಳಿದರು !

ವಿಜಾಪೂರ ಜಿಲ್ಹೆಯ ಸುದ್ದಿಗಳು.

(ನಮ್ಮ ಸ್ವಂತ ಸುದ್ದಿಗಾರನಿಂದ)

ವಿಜಾಪೂರ. ವಿಜಾಪೂರದಲ್ಲಿ ಮಾರಿಕಾದ ಕಾಟವು ಕಡಿಮೆಯಾಗುತ್ತಲಿದೆ.

ಶ್ರೀ. ಬನಹಟ್ಟಿ ಸಾಹೇಬರ ಬದಲು, ಹಿಂದಕ್ಕೆ ಡಿ. ಡಿ. ಸಿ. ಆಗಿದ್ದ ಶ್ರೀ ಹಿರೇಮಠ ರುದ್ರಪ್ಪನವರು ಬರುವರು. ರಶಿತಲರು ಬರುವದಿಲ್ಲ.

ಬದಾಮಿ ಈ ವಾರದಲ್ಲಿ ಬದಾಮಿ ತಾಲೂಕಿನಲ್ಲಿ ನದಿಗಳ ದಂಡೆಯ ಮೇಲಿದ್ದ ಎಷ್ಟೋ ಊರುಗಳಲ್ಲಿ ಕಾಲರಾ ಬೇನೆಯು ಬಹಳ ಜೋರಿ ನಡದಿದೆ. ಮರಣಗಳ ಸಂಖ್ಯೆಯೂ ಹೆಚ್ಚಾಗಿದೆ.

ಇಂಡಿ ಕಳೆದಾಟಿಯ ಶುಕ್ರವಾರದಲ್ಲಿ ಚಡಚಣಕ್ಕೆ ಶ್ರೀ ಹರ್ಡೇಕರ ಮಂಜಪ್ಪನವರು ಬಂದು, ಕಿನ್ನರಿಯನ್ನು ಬಾರಿಸಿದರು; ಅರ್ಥಾತ್ ವ್ಯಾಖ್ಯಾನ ಕೊಟ್ಟರು, ಹಿಂದಿನ ಸಾರೆ ಮಾಡಿಕೊಂಡಂತೆ ಈ ಸಾರೆಯೂ, ಇ. ಮಹಿನಿಂದ ಜನರು "ಖಾದಿಯ ಸಂಘ"ಕ್ಕಾಗಿ ಸಾವಿರ ರೂಪಾಯಿಗಳನ್ನು ಕೂಡಿಸಲಿಕ್ಕೆ ಸೊಂಟ ಕಟ್ಟಿದರಂತೆ! ಊರವರ ಸಾವಿರ ರೂಪಾಯಿಗಳಾದರೆ, ಗಾಂಧಿಯವರಿಂದ ೧೦೦೦ ರೂ, ಗಳನ್ನು ಇದಕ್ಕೆ ಕೊಡುತ್ತೇವೆಂದು ಹರ್ಡೇಕರರು ಹೇಳಿದರಂತೆ.

ಬೀಳಗಿ ಮಹಲದಲ್ಲಿ ಓರ್ವ ಪಂಚಾಳನು ಕೃತ್ರಿಮ ರೂಪಾಯಿಗಳನ್ನು ನಿರ್ಮಿಸಿರುವನೆಂತಲೂ, ಪೋಲಿಸರು ಅವನನ್ನು ಬಂಧಿಸಿರುವರೆಂತಲೂ ವಿಶ್ವಸನೀಯವಾದ ಸುದ್ದಿ ಬಂದಿದೆ.

ದಕ್ಷಿಣ ಕನ್ನಡ ಜಿಲ್ಹೆಯ ಪತ್ರ.

[ನಮ್ಮ ಬಾತ್ಮಿದಾರರಿಂದ]

ನಮ್ಮ ಡಿಸ್ಟ್ರಿಕ್ಟ ಬೋರ್ಡಿನವರು ಮಹಾತ್ಮಾಜೀಯವರಿಗೆ ಮಾನಪತ್ರವನ್ನು ಸಮರ್ಪಿಸಬೇಕೆಂದು ನಿರ್ಣಯಿಸಿದ್ದಾರೆ. ಸ್ತುತ್ಯ. ಆದರೆ ತಾವು ಮಾನಪತ್ರವನ್ನು ಸಮರ್ಪಿಸಬೇಕಾದರೆ, ತಮ್ಮ ಕರ್ತವ್ಯವನ್ನರಿತರೆ, ಉತ್ತಮವಿತ್ತು. ಜಿಲ್ಲಾ ಬೋರ್ಡಿನ ಸದಸ್ಯರೂ, ಗಾಂಧೀಸ್ವಾಗತ ಮಂಡಲದವರೂ ಮೊಟ್ಟ ಮೊದಲು ಖಾದಿ ಉಡುಪನ್ನು ಧರಿಸಲಿಕ್ಕೆ ಹತ್ತಿದರೆ ಜಾತಿಗೊಂಡು ಮೇಲ್ಪಂಕ್ತಿಯಾಗುವದು. ಅಂತು ಆಡುವದೊಂದು ಮಾಡುವದೊಂದು, ಇದೇ ಸುಧಾರಕರ ಲಕ್ಷಣವೋ ಏನೋ ?

ಉಡುಪಿಯ ತಾಲೂಕ ಬೋರ್ಡ ಸಭೆಯಲ್ಲಿ ದುಗ್ಗಪ್ಪ ಶೆಟ್ಟರನ್ನು ಡಿ. ಎಜುಕೇಶನಲ್ ಕೌನ್ಸಿಲ್ಲಿಗೆ ಸದಸ್ಯರನ್ನಾಗಿ ಕಳುಹಿಸಿತಂತೆ! ಇವರಿಗಿಂತಲೂ ವಿದ್ಯಾವಂತರು, ಬೋರ್ಡಿನಲ್ಲಿರುವಾಗ ಇವರನ್ನು ಅಂಥ ಜವಾಬ್ದಾರಿ ಕೌನ್ಸಿಲಿಗೆ ಕಳುಹಿಸಿದ್ದೇತಕ್ಕೋ? ತಿಳಿದವರೇ ಹೀಗೆ ಮಾಡಿದರೆ ಬಾಕಿದವರ ಪಾಡೇನು? ಸ್ವರಾಜ್ಯಪಕ್ಷ ಅಧ್ಯಕ್ಷರೇ ಸ್ವರಾಜ್ಯಸ ಉಮೇದವಾರರಿಗೆ ಗೀಟು ಕೊಟ್ಟು ಓಟನ್ನು ಇನ್ನೊಬ್ಬರಿಗೆ ಕೊಟ್ಟರು. ತನ್ನ ಚುನಾವಣೆಯ ಸಮಯದಲ್ಲಿ ಮಾತ್ರ ಜಾತಿಜಾತಿಗಳ ವೈಷಮ್ಯವನ್ನು ಮುಂದೆ ಒಡ್ಡಿ ಹಾವಳಿಯನ್ನು ಮಾಡಿದ ಇನ್ನೊಬ್ಬ ಸದಸ್ಯರು ಈ ಸಲ ಮಾತ್ರ ತನ್ನ ಜಾತಿಯ ಉಮೇದುವಾರರಿಗೆ ಸಹಾಯಕರಾದರು. ಅಂತು ಎಲ್ಲಿ ಹೋಗಿ ನೋಡಿದರೂ "ಸ್ವಾರ್ಥ"ವೇ ಕಾಣುತ್ತದೆ.

ಬಹಳ ವರ್ಷಗಳ ನಿರೀಕ್ಷಣೆಯಿಂದ ಈ ವರ್ಷ ನಮ್ಮ ಜಿಲ್ಹೆಯಲ್ಲಿ ಕರ್ನಾಟಕ ಸಾಹಿತ್ಯಪರಿಷತ್ತು ಸೇರುವದೆಂದು ಗೊತ್ತುವಳಿಯಾಗಿದೆ. ಯಾವವಿಧದಿಂದ ಸಾಹಿತ್ಯಸೇವೆಯನ್ನು ಮಾಡದೆ, ಸಾಹಿತ್ಯದ ಗಂಧ ಘಾಳಿಯೂ ಇಲ್ಲದಿರುವ ನಲವು ಮಹನೀಯರು ಉಪಾಧ್ಯಕ್ಷ ಮುಂತಾದ ಪದವಿಗಳನ್ನು ಏರಿದ್ದು ನೋಡುವಾಗ ಬಡವರಾದ ಸಾಹಿತ್ಯ ಸೇವಕರಿಗೆ ಎಲ್ಲಿ ಹೋದರೂ ಅವಕಾಶವಿಲ್ಲವೆಂಬುದು ಸ್ಪಷ್ಟವಾಗುತ್ತಿದೆ ಅಂತು ಈ ವೈಶ್ಯಯುಗದಲ್ಲಿ ಹಣವಿಲ್ಲದಿರುವವರು ಏನಾದರೂ ಪ್ರಯೋಜನವಿಲ್ಲ. ಆದುದರಿಂದಲೇ ಸಾಹಿತ್ಯ ಪರಿಷತ್ತು ಮುಂತಾದ ಪರಿಷತ್ತುಗಳು ನಿಜವಾದ ಕೆಲಸಗಾರರಿಗೆ ಪ್ರಯೋಜನಕಾರಿಯಾಗದೆ ಕೆಲವರಿಗೆ ಮಾತ್ರ ಡಂಭಾಚಾರಿಗಳಿಗಾಗುತ್ತವೆ. ಅತ ಏವ ನಮ್ಮ ಪರಿಸ್ಥಿತಿಗಳೂ ದಿವಸ ಹೋಗುತ್ತ ಮಂದವಾಗುತ್ತವೆ.

ಮಾರಿಕಾದ ಬಗ್ಗೆ ಮುಂಬೈ ಸರಕಾರದವರ ಪ್ರಕಟನೆಯು.

ಕರ್ನಾಟಕದಲ್ಲಿ ಒಟ್ಟಿಗೆ ೧೬೩೧ ಜನರು ಮಡಿದರು, ೩೨೮೪ ಜನರಿಗೆ ರೋಗವು ತಗಲಿತು, ೨೮೩ ಹಳ್ಳಿಗಳಲ್ಲಿ ಅದು ಹಬ್ಬಿದೆ.

ಇದೇ ೧೩ ನೇ ತಾರೀಖಿನ ದಿನ ಸಂಪೆಯಲ್ಲಿ ಜಾತ್ರೆ, ನೆರೆಯುವದಷ್ಟೇ ? ಆದರೆ ಅಲ್ಲಿ ಮಾರೀ ಉಪದ್ರವಿಯಾಗುವದರಿಂದ ಯಾತ್ರಿಕರು ಹೋಗಕೂಡದೆಂದು ಸರಕಾರದವರು ಪ್ರಕಟಿಸಿದ್ದಾರೆ.

ಬೆಳಗಾವ ತಾಲುಕದಲ್ಲಿ ಬೆಂಡಿಗೇರಿ ಗ್ರಾಮದಲ್ಲಿ ಇದೇ ತಿಂಗಳ ೧ ನೇ ತಾರೀಖಿನಿಂದ 'ಬ್ರಾಂಚ ಪೋಸ್ಟಆಫೀಸ' ಆಗಿರುತ್ತದೆ. ಇದನ್ನು ಚಿರಸ್ಥಾಯಿ ಮಾಡುವ ಮತ್ತು ಊರಜನರ ವಾಚನಾಭಿರುಚಿ ಹೆಚ್ಚಿಸುವ ಉದ್ದೇಶದಿಂದ ಇದೇ ಯುಗಾದಿ ಪ್ರತಿಪದೆಯಿಂದ ಬೆಂಡಿಗೇರಿ ವಾಚನಾಲಯವು ತೆರೆಯಲ್ಪಟ್ಟಿತು. ಇದರಂತೆ ಇತರ ಹಳ್ಳಿಗಳು ಅನುಕರಿಸಿ ತಮ್ಮ ತಮ್ಮ ಗ್ರಾಮಗಳಲ್ಲಿ ವಾಚನ ಅಭಿವೃದ್ಧಿಗೊಳಿಸಬೇಕೆಂದು ನಮ್ಮ ಸೂಚನೆಯಿದೆ.

ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟಿ.

ನಾವು ಹಲ್ಲುಗಳ ಕಳೆಯನ್ನು ಚನ್ನಾಗಿ ಅರಿತಿರುವೆವು ಹಲ್ಲುಗಳ ನೋವುಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತ ಸ್ರಾವವನ್ನು ತೀವ್ರನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು. ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ನೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು ಹಲ್ಲುಗಳ ಪೂರ್ಣ ಸೆಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು

ಲೆವರಿನ ಗಡಿಯಾರಗಳು.

ಲೆವರಿನ ಕೈ ಗಡಿಯಾರ ರೂ. ೯.

ಲೆವರಿನ ಕಿಸೆಯೊಳಗಿಡುವ ಗಡಿಯಾರ ರೂ. ೭.



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಮೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವುದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ತಾಳುವವು. ಬೆಲೆ ಕಡಿಮೆಯಿದೆಂದು ಅಂಜುವ ಕಾರಣವಿಲ್ಲ. ಪರದೇಶೀ ಕಂಪನಿಯುವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚ ಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ. ಆದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ.

ಲಿಬೋ ವಾಚ ಕಂ. (ಇಂಡಿಯಾ.) ಬಾಂಬೆ. ನಂ ೪.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವಕ್ಕೆ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಏಜಂಟರ :—ಜಂಬುಲಿಂಗಪ್ಪಾ ಚಾಲವಾದಿ.
ಸ್ಟೇಶನರ್ ಬಾಗಲಕೋಟೆ

ರಾಜವೈದ್ಯ ನಾರಾಯಣಜಿ ಕೇಶವಜಿ.
ನಂ. ಚೇನಾಬಜಾರ್. ಮದ್ರಾಸು

ಯಾವದೇ {ಆಕಾರದ / ನಕ್ಷೆಯ / ನಂಬರಿನ} ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ. ೧೪, ಅರ್ಧ ಬೆಲೆ ರೂ. ೭



ಬರೇ ಒಂದು ತಿಂಗಳ ಬಗ್ಗೆ ನಾವು ಈ ದಂವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೀತಿಯ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ **ಬೆಲೆ ರೂ. ೭**

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— **ಸ್ವಾನ ಹೌಸ ಪಿ. ಬಿ. ನಂ೦೮. ಪಿ. ಟಿ ಮದ್ರಾಸ**

ಅತ್ಯಲ್ಪವಿವೆ! ಉಚಿತ!

ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ ರಜಿಸ್ಟರ್ಡ್ ಪೊಕೆಟ ವೋಚ್ ೧೪ ಕೆರೆಟ್ ರೋಲ್ಡ್ ಗೋಲ್ಡಿನದು. ಮುಚ್ಚಳಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚು ಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಜಿಸ್ಟರ್ಡ್ ೧೪ ಕೆರೆಟ್ ರೋಲ್ಡ್ ಗೋಲ್ಡಿನ ಪೊಕೆಟ್ ವೋಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪಸ್ ವಾಚ್ ಕಂ, ಪಿ. ಬಿ. ೨೬೩ ಮದ್ರಾಸ

ಮುಂಬಯಿ ಡಿಸ್ಟ್ರಿಕ್ಟ ಪೋಲೀಸ ಆಕ್ಟ ಕಲಮ ೪೫ (೧) ಪ್ರಕಾರಾ ನೋಟೀಸು.

ಈಗ ವಿಜಾಪೂರ ಜಿಲ್ಹೆಯಲ್ಲಿ ಮಾರಿಕಾ ರೋಗವು ಬಹಳ ಜೋರಿನಿಂದಾ ನಡೆದಿರುತ್ತದೆ. ಹುನಗುಂದ ತಾಲೂಕ ಪೈಕಿ ಸಂಗಮ ಗ್ರಾಮದಲ್ಲಿ ತಾರೀಖು ೨೬-೪-೧೯೨೭ ದಿವಸ ಆಗರ ಆ ಸುಮಾರಕ್ಕೆ ಆಗುವ ಜಾತ್ರೆಯಿಂದಾ ಸದರೀ ಮಾರಿಕಾ ರೋಗವು ಇನ್ನೂ ಹೆಚ್ಚು ಹಬ್ಬುವ ಸಂಭವವದೆ. ಕಾರಣ ಸಾರ್ವಜನಿಕ ಆರೋಗ್ಯತೆ ಮತ್ತು ಸುರಕ್ಷಿತ ತನದ ಕಡಿಗೆ ಲಕ್ಷ ಕೊಟ್ಟು ಮೆ|| ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ ಸಾ|| ಬಾ|| ರವರು ಈವರ್ಷ ಸದರೀ ಸಂಗಮ ಜಾತ್ರೆಯು ಆಗಬಾರದು ಮತ್ತು ಜನರು ಅಲ್ಲಿಗೆ ಹೋಗಬಾರದು ಅಂತಾ ಫರ್ಮಾಯಿಸುತ್ತಾರೆ.

೨ ಈ ನೋಟೀಸು ಉಘಡರೀತಿಯಿಂದಾ ಎಲ್ಲಕಡಿಗೂ ಪ್ರಸಿದ್ಧ ಮಾಡಬೇಕು.

ವಿಜಾಪೂರ, ೪-೪-೧೯೨೭. } **V. H. NAIK.** ಡಿ|| ಮ್ಯಾಜಿಸ್ಟ್ರೇಟ ವಿಜಾಪೂರ.

ಕರ್ನಾಟಕ ವೈಭವ.

ರಾಷ್ಟ್ರೀಯ ಪಕ್ಷದ ಉಜ್ವಲವಾದ ವಾರ ಪತ್ರಿಕೆಯು

(ಸಂಪಾದಕ ಹನುಮಂತರಾವ ಮೋಹರೆ.)

ಕಳೆದ ೩೭ ವರುಷಗಳಿಂದ ಈ ವಾರ ಪತ್ರಿಕೆಯು ಸ್ವಾತಂತ್ರ್ಯ ಸೇನೆಯ ಮುಂಭಾಗದಲ್ಲಿ ನಿಂತು ಬ್ಯೂರಾಕ್ರಸಿಯ ಕೂಡ ಹೋರಾಡಹತ್ತಿರುತ್ತದೆ. ಬ್ಯೂರಾಕ್ರಸಿಯ ಅನ್ಯಾಯಗಳನ್ನು ನಿರ್ಭಯದಿಂದ ಬೈಲಿಗೆಳೆಯುವದರಲ್ಲಿಯೂ ಪ್ರಚಲಿತ ರಾಜಕೀಯ ವಿಷಯಗಳನ್ನು ನಿರ್ದಾಕ್ಷಿಣ್ಯದಿಂದ ಚರ್ಚಿಸುವದರಲ್ಲಿಯೂ ಇದು ಕಂಕಣಬದ್ಧವಾಗಿರುತ್ತದೆ. ಕರ್ನಾಟಕ ಸಂಸ್ಕೃತಿಯನ್ನೊಳಗೊಂಡಿರುವ ಆರ್ಯ ಸಂಸ್ಕೃತಿಯು ಪುನರುಜ್ಜೀವನವಾಗಬೇಕೆಂದು ಹಂಬಲಿಸುತ್ತದೆ. ನಾಣ್ಯಗಳ ಚಲನಪದ್ಧತಿ ಮೊದಲಾದ ಅರ್ಥಶಾಸ್ತ್ರದ ಮೇಲೆ ಸಾಮಾನ್ಯ ಜನರಿಗೆ ಸುಲಭವಾಗಿ ತಿಳಿಯುವಂಥ ಲೇಖಗಳು ಇದರಲ್ಲಿ ಬರುತ್ತವೆ ರಾಷ್ಟ್ರೀಯ ಚಳವಳಿಯ ನಿಜವಾದ ರಹಸ್ಯ ತಿಳಿದುಕೊಳ್ಳಬೇಕಾದರೆ ಈ ಪತ್ರವನ್ನು ಅವಶ್ಯವಾಗಿ ಓದಬೇಕು.

ಇದರ ವ್ಯಾಪ್ತಿಯು ಮುಂಬಯಿ ಮದ್ರಾಸ ಕರ್ನಾಟಕಗಳಲ್ಲಿರುವದಲ್ಲದೆ ನಿಜಾಂ ಇಲಾಖೆ ಮೈಸೂರು ಮೊದಲಾದ ಸಂಸ್ಥಾನಗಳಲ್ಲಿ ಸಹ ಇರುತ್ತದೆ. ಜಾಹಿರಾತ ಕೊಡುವವರಿಗೆ ಒಳ್ಳೇ ಲಾಭದಾಯಕವಿರುತ್ತದೆ. ಸ್ವದೇಶಿ ಕಾರಖಾನದಾರರಿಗೆ ಸವಲತ್ತು ತೋರಿಸಲ್ಪಡುವದು.

ವಿಳಾಸಃ— ಮ್ಯಾನೇಜರ, ಕರ್ನಾಟಕ ವೈಭವ
ಪೋಸ್ಟ— ವಿಜಾಪೂರ

ಮಾರಾಟ

ನಾಲ್ಕು ತಿಂಗಳಹಿಂದೆ ಕೊಂಡ ಹೊಸ "ಗ್ರಾಮೊಫೋನ" ಮಾರತಕ್ಕದ್ದಿದೆ. ಪ್ಲೇಟಗಳೂ ಇವೆ ವಿಳಾಸ. ಸಂಪ್ಪಾದಕ "ಕನ್ನಡಿಗ"

ಶ್ರೀಕೃಷ್ಣ ಸಂಗೀತ ಕನ್ನಡ ನಾಟಕ ಮಂಡಲವು.

ತಾಜ ನಾಟಕಶಾಲೆಯ ಮನೆ ವೆಂಕಟಪೇಟೆ, ಬಾಗಲಕೋಟೆ.

ಗುಳೇದಗುಡ್ಡ ಶ್ರೀಮತಿ ಗಂಗೂಬಾಯಿಯವರ ಈ ಹೊಸ ನಾಟಕ ಕಂಪನಿಯಲ್ಲಿ ಅಭಿನಯಿಸಲು ಸುಸ್ವರೂಪ, ಸುಶೀಲ, ಸುಶಿಕ್ಷಿತ ಹಾಗೂ ಹಾಡು ಬಲ್ಲ ನಾಟ್ಯಕಲಾಭಿಜ್ಞರಾದ ಬಾಲಬಾಲಿಕೆಯರೂ, ಸ್ತ್ರೀ-ಪುರುಷರೂ

ಬೇಕಾಗಿದ್ದಾರೆ.

ಅದೇ ಪ್ರಕಾರ ಪೆಟ್ಟಿಗೆ ಹಾಗೂ ತಬಲಾ ಬಾರಿಸುವದರಲ್ಲಿ ನಿಪುಣರಾದವರೂ ಬೇಕಾಗಿದ್ದಾರೆ. ಇಚ್ಛೆಯಿದ್ದವರು ಸಮಕ್ಷಮ ಇಲ್ಲವೆ ಪತ್ರದ್ವಾರದಿಂದ ವಿಚಾರಿಸಿಕೊಳ್ಳಬೇಕು.

—ವ್ಯವಸ್ಥಾಪಕ.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಣೀ, ಜೀರ್ಣಜ್ವರ, ಅಗ್ನಿಮಾಂಧ್ಯ ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶ ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವದಾ ನಪುಂಸಕತ್ವವು ಎಂದೂ ಇರುವದಿಲ್ಲ. (ಏಕೇ ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು.) ಇದರಿಂದ ಮೈಯ್ಯುರಿ ವ ಗರಮಿಯು ಎಲ್ಲಾತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೇ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೨-೦, ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯು ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸಃ—

ಎಸ್. ಬಿ. ಕದಮ್ ಮತ್ತು ಸನ್ಸ್.
ಮು. ಪೋಸ್ಟ ನಿಪ್ಪಾಣಿ (ಜಿ. ಬೆಳಗಾಂವ.)

೧,೪೨,೦೦,೦೦೦

ರೂಪಾಯಿಗಳು.

ಪರದೇಶಗಳಿಂದ ತರಿಸಲ್ಪಟ್ಟ ಸಾಬೂನುಗಳಿಗೋಸ್ಕರ ಪ್ರತಿವರುಷವೂ ಒಂದುಕೋಟಿ ನಾಲ್ವತ್ತೆರಡು ಲಕ್ಷರೂಪಾಯಿಗಳನ್ನು ನಮ್ಮ ದೇಶದಿಂದ ಪರದೇಶಕ್ಕೆ ತೆರುತ್ತಿದೇವೆ. ಮಹಾಜನಗಳೆಲ್ಲರೂ ಒಕ್ಕಟ್ಟಾಗಿ ಸಂಕಲ್ಪಮಾಡಿದರೆ ತಾನೇ ಈ ಹಣವನ್ನೂ ನಮ್ಮ ದೇಶದಲ್ಲಿ ಉಳಿಸಿಕೊಳ್ಳಬಹುದು. ಸ್ವದೇಶದ ಸಾಬೂನನ್ನು ಬಿಟ್ಟು ಪರದೇಶದ ಸಾಬೂನನ್ನು ಕೊಳ್ಳುವ ಪ್ರತಿಯೊಬ್ಬ ವಿದ್ಯಾವಂತನೂ ಅನ್ಯ ದೇಶದ ಕೈಗಾರಿಕೆಗಳಿಗೆ ಉಪಕಾರಮಾಡಿ, ಸ್ವದೇಶದ ಕೈಗಾರಿಕೆಗಳಿಗೆ ಅಪಕಾರಮಾಡುತ್ತಾನೆ. ಪ್ರತಿಯೊಬ್ಬ ದೇಶಬಾಂಧವನೂ ಸ್ವದೇಶೀ ಮಾಲುಗಳನ್ನೇ ಕೊಳ್ಳುವನು. ಮೈಸೂರು ಗೌರ್ನಮೆಂಟ ಸೋಪ್ ಫ್ಯಾಕ್ಟರಿಯಲ್ಲಿ ಸರ್ವಗ್ರಾಹ್ಯವಾದ ಉತ್ತಮವಾದ ಸಾಬೂನುಗಳನ್ನು ತಯಾರುಮಾಡುತ್ತಾರೆ. ನಾವು ತಯಾರುಮಾಡುವ ಶ್ರೀಗಂಧ ಪರಿಮಳವುಳ್ಳ ಸಾಬೂನೊಂದನ್ನು ಕೊಂಡು ತಾವೇ ಪರೀಕ್ಷೆಮಾಡಿನೋಡಿರಿ. ತಮಗೆ ನಮ್ಮ ಸಾಬೂನುಗಳು ಸಿಗಲಸಾಧ್ಯವಾದಲ್ಲಿ ದಯವಿಟ್ಟು ನಮಗೆ ಪತ್ರವೊಂದನ್ನು ಬರೆದರೆ, ತಾವು ಇಚ್ಛೈಪಡುವ ಅಂಗಡಿಯಲ್ಲಿಯೇ ನಮ್ಮ ಮಾಲುಗಳ ತಮಗೆ ದೊರೆಯುವಂತೆ ಏಪಡಿಸಿಕೊಡುತ್ತೇವೆ.

ಗೌರ್ನಮೆಂಟು ಸೋಪ್ ಫ್ಯಾಕ್ಟರಿ

ಬೆಂಗಳೂರು.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೨ ನೇ ಇಸ್ವಿಯ ಜನೇವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ಪತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ. ೨೨೭೬ ಸಯ್ಯದ ಅಲ್ಲಿ ಅಸಗರ ಬಿಲ್‌ಗ್ರಾಮಿ ಸುಪರಿಂಟೆಂಡಂಟ್ ಸೆಕ್ರೆಟೆರಿಯಟ್ ಹೈದರಾಬಾದ ಡೆಕ್ಕನ್ನ ರೂ ೧೦೦೦

(೨) ಎಲ್. ಬಿ ಸಿ ನಂ ೧೯೬೨ ನಾರಾಯಣ ವಿಠ್ಠಲ ಜೋಶಿ, ಕೇರ್ ಆಫ್ ಡಿ. ಈ. ಪುರಾಣಿಕ ೧೭೭ ನಿಜಾಮಪುರ ಇಂದೂರ ೧೦೦೦

(೩) ಎಲ್. ಬಿ. ಸಿ. ನಂ. ೩೪೧ ರಾಮಚಂದ್ರ ಅನಂತ ಶಿರೋಳೆ. ಡಿವಿಜನಲ್ ಫಾರೆಸ್ಟ ಆಫೀಸರ ಧತ್ತೂರಾ. ಪಶ್ಚಿಮ ಖಾನದೇಶ ರೂ. ೮೦೦

(೪) ಬಾಂಡ ನಂಬರು ೨೫೦೬ ಕೇ. ಜೆ. ಫರ್ನಾಂಡೋ ವ್ಯಾಪಾರಸ್ಥ. ಬ್ರಿಕ್‌ಸಾಯಿಡ ಸಿಲೋನ, ಕೊಲಂಬೋ. ರೂ ೧೦೦೦

(೫) ಬಾಂಡ ನಂಬರು ೧೩೬೪೪ ಎಸ್. ಜಿ ಚವರೆ. ಅಸಿಸ್ಟಂಟ ಸ್ಟೇಶನ್ ಮಾಸ್ತರ ಆರಗ. ಜಿಲ್ಹಾ ವಿಜಾಪುರ ರೂ ೧೦೦೦

ಬಿ. ಎಸ್. ಆರಾಧ್ಯ

ಚೀಫ ಏಜಂಟ ಹುಬಳ್ಳಿ (ಮುಂಬಯಿ ಇಲಾಖಾ)

ಜೀವ ವಿಮೆಯ ಕಾರ್ಯದಲ್ಲಿ

ಅದ್ಭುತವಾದ ಜಯವು!

ಯಾಕಂದರೆ ತನ್ನ ೧೯ ನೇ ವರ್ಷದಲ್ಲಿಯೇ ನೂರಕ್ಕೆ ೭೦ ರೂಪಾಯಿ ಲಾಭ ಹಂಚಿದೆ

ದಿ ಜನರಲ್ ಅಶ್ಯೂರನ್ಸ

ಸೋಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮೆ ಕಂಪನಿಗಳನ್ನು ಹಿಂದೆ ಒಗೆದು ಮುಂದೆ ಬಂದಿದೆ. ಇದರಿಂದ ಇದರಲ್ಲಿಯ ಕತೃತ್ವ ಶಕ್ತಿಯು ವ್ಯಕ್ತವಾಗುವದಲ್ಲದೆ, ಇದಕ್ಕಿಂತಲೂ ಹೆಚ್ಚಿನ ಪ್ರಗತಿಪರವಾದ ಕಂಪನಿಯು ಇಲ್ಲವೆಂಬುದು ಸಿದ್ಧವಾಗುತ್ತದೆ

ಸುಲಭ ಕಂತು! ಸಾಕಷ್ಟು ಸೌಕರ್ಯ! ಹೆಚ್ಚಾಗಿ ಲಾಭ!!!

ವಿಮೆಯ ಹಣ ಒಂದು ಕೋಟಿ! ೨೧ ತಿಂಗಳಲ್ಲಿ ಹೆಚ್ಚಾಗಿ ಬಂದ ಆದಾಯವದ್ದು ರೂ ೧,೭೯,೦೦೦

ಏಜಂಟರು ಬೇಕು! ಧಾರಾಳವಾದ

ಕಮಿಶನ್!

ವಿಳಾಸ:- ಎಸ್. ಕಬ್ಬೂರ ಬಿ. ಎ ಎಫ್. ಎಸ್. ಎಸ್. (ಲಂಡನ್) ಡಿಸ್ಟ್ರಿಕ್ಟ ಮ್ಯಾನೇಜರ (ಡೆಪ್ಯುಟೇಶನ್‌ದ ಮೇಲೆ) ಜನರಲ್ ಅಶ್ಯೂರನ್ಸ ಸೋಸಾಯಿಟಿ ಲಿಮಿಟೆಡ್ ಅಥವಾ ಬ್ರ್ಯಾಂಚ ... ಮಿಂಟೋ ಹಾಸ್ಪಿಟಲದ ಎದರು. ಬೆಂಗಳೂರು.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ವಾ ಚಂದಾ ೧-೧೩-೦ ಮಾತ್ರ

ಕನ್ನಡಿಗ.

ಜಯಕರ್ನಾಟಕ

(ಇದರಲ್ಲಿ ಕನ್ನಡ ಜನಜೀವನವು ಸಮಾವಿಷ್ಟವಾಗಿದೆ.)

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಮ್ । — ಮನು

ಸಂಪಾದಕರು— ಮಂಗಳವೇಢೇ ರಾಜೇಶ್ವರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟೆ ರವಿವಾರ ಮಿತಿ ಚೈತ್ರ ಶುದ್ಧ ೧೫ ಶಕೆ ೧೮೪೯ ತಾ|| ೧೭-೪-೧೯೨೭. Date 17—4-1927. | ಸಂಖ್ಯೆ ೩

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವದು ಮತ್ತು ಜೋಡಿಸುವದು, ಅವುಗಳೊಳಗಿನ ಕೆಟ್ಟ ಒಡೆದ-ಹೋದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುತ್ತೇವೆ. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ತಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಬೇರೆಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ಶೀಘ್ರವೇ ಬರೆದುಕೊಳ್ಳಿರಿ!

ವಿಳಾಸ:— ಕುಲಕರ್ಣಿ ಮೋಟಾರ ಸ್ಕೂಲ.
೪೯೫ ಶನಿವಾರ ಪೇಠ ಜಮಖಂಡಿಕರ ವಾಡಾ ಪುಣೆ ಶಹರ.

S.U, Narayanacharya & Co.
Chowkhamba Benares City.

S.U.N.&CO.

ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ ಜರಿಕಣ, ಜರಿಸೀರೆ, ಕಾಶ್ಮೀರಿ ಶಾಲು, ತಂಬೂರಿ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲೆಗಳ ಕ್ಯಾಟಲಾಗ ಕೋರುವವರಿಗೆ ಇನಾಮಾಗಿ ಕಳಿಸಲಾದೀತು
ವಿಳಾಸ- ಶ್ರೋಮಣಿ ನಾರಾಯಣಾಚಾರ್ಯ ಕಂಪನಿ ಚೌಖಾಂಬಾ ಕಾಶಿ

ನಪುಂಸಕತ್ವ

ಧಾತು ವಿಕಾರ, ಸ್ವಪ್ನಾವಸ್ಥೆ, ಅಶಕ್ತತೆ ಇತ್ಯಾದಿಗಳಮೇಲೆ ಖಂಡಿತವಾಗಿ ಗುಣಕೊಡುವ ಮತ್ತು ಶಕ್ತಿಕರ ಬಾಳುವ ದಿವ್ಯ ಔಷಧಿ! ಒಂದೇ ಗುಳಿಗೆ!!

ವಿಶೇಷ ಮಾಹಿತಿ ಪತ್ರದ್ವಾರ ತಿಳಿಯಿರಿ.

ವಾದಿರಾಜ ಜಹಾಗೀರದಾರ.
ಮು. ಪೋ. ಇಂಡಿ. (ವಿಜಾಪುರ)

ವಾಙ್ಮಯ ಪರಿಚಯ.

ಕರ್ನಾಟಕದ ಇತಿಹಾಸವೂ, ವಿಜಾಪೂರವೂ.

ಸಂಕೇಶ್ವರದಿಂದ ವಿಜಾಪುರಕ್ಕೆ ಬಂದೆನು. ವಿಜಾಪೂರಜಿಲ್ಲೆಯು ಐತಿಹಾಸಿಕ ದೃಷ್ಟಿಯಿಂದ ಅತಿಶಯ ಮಹತ್ವವುಳ್ಳದ್ದಾಗಿದೆ. ಈ ಜಿಲ್ಲೆಯಲ್ಲಿ ಬದಾಮಿ, ಐಹೊಳೆ, ಪಟ್ಟದಕಲ್ಲು ಮುಂತಾದಸ್ಥಳಗಳು ಬಾದಾಮಿ ಚಾಲುಕ್ಯ ಸಾಮ್ರಾಜ್ಯದ ವೈಭವವನ್ನು ತಿಳಿಸುವ ಕ್ಷೇತ್ರಗಳಾಗಿವೆ. ಇವುಗಳನ್ನು ಸಂಶೋಧಕ ದೃಷ್ಟಿಯಿಂದ ನಿರೀಕ್ಷಿಸುವದೂ, ತಾಳೀಕೋಟೆಯ ರಣಭೂಮಿಯನ್ನು ಗೊತ್ತುಹಚ್ಚಿ ಅದರ ನಕಾಶವನ್ನು ತೆಗೆಯುವದೂ, ಶ್ರೀ ಬಸವೇಶ್ವರರ ಜನ್ಮಸ್ಥಳವನ್ನೂ ಸಮಾಧಿ ಸ್ಥಳವನ್ನೂ ನಿಶ್ಚಯಿಸುವದೂ, ಅತ್ಯವಶ್ಯವಾಗಿದೆ.

ವಿಜಯನಗರದ ಸಾಮ್ರಾಜ್ಯದ ರಾಜಭೂಷಣರಾದ ರಾಮರಾಜರಆಸ್ಥಾನದಲ್ಲಿ ಬಖರಕಾರನಾಗಿದ್ದ ರಾಮಾಜಿ ತಿರುಮಲ ಹರಿಕಾರೆಎಂಬವನು "ತಾಳಿಕೋಟೆಯ ಯುದ್ಧ" ವೆಂಬ ಹೆಸರಿನಿಂದ ಪ್ರಸಿದ್ಧವಾಗಿದ್ದ ಈ ಘನಘೋರ ರಣ ಸಂಗ್ರಾಮವನ್ನು ಸವಿಸ್ತಾರವಾಗಿ ಬಖರರೂಪದಿಂದ ವರ್ಣಿಸಿ ಬರೆದಿಟ್ಟಿದ್ದಾನೆ. ಇದರಲ್ಲಿ ಈತನು ಹೀಗೆ ಹೇಳಿದ್ದಾನೆ:- "ವಿಜಯನಗರದ ಅರಸರು ತಮ್ಮ ಸೈನ್ಯದೊಂದಿಗೆ ರಾಕ್ಷಸ ತಂಗಡಿಯ ಹತ್ತರ ಬೀಡು ಬಿಟ್ಟರು. ಈ ರಾಕ್ಷಸ ತಂಗಡಿಗೆ ನಾಲ್ಕು ಹರಿದಾರಿ ದೂರದಲ್ಲಿ ನಾಲ್ಕು ಮಂದಿ ಮಹಮ್ಮದೀಯ ಬಾದಶಹರೂ ತಮ್ಮ ತಮ್ಮ ಸೈನ್ಯದೊಡನೆ ತಾಳೀಕೋಟೆ ನಾಲ್ವತ್ವಾಡಗಳ ಮಧ್ಯದಲ್ಲಿ ಇಳಿದರು. ಈ ಎರಡೂ ಸೈನ್ಯಗಳ ನಡುವೆ ಅಂದರೆ, ನಾಲ್ವತ್ವಾಡ ಹಾಗೂ ರಾಕ್ಷಸ ತಂಗಡಿಗಳ ನಡುವೆ 'ರಾಯಬಾಗ' ವೆಂಬ ಸ್ಥಳದ ಹತ್ತರ ದಿನಾಲೂ ಯುದ್ಧವು ಪ್ರಾರಂಭವಾಯಿತು.' ಈ ಪ್ರಕಾರ ಬಖರಕಾರನು ಹೇಳಿದ್ದನ್ನು ಓದಿದ ಕೂಡಲೆ, ವಿಜಾಪೂರ ಜಿಲ್ಲೆಯವರಿಗೆ, (ಅವರಲ್ಲಿಯೂ ವಿಶೇಷತಃ ಮುದ್ದೇಬಿಹಾಳ ಮತ್ತು ಹುನಗುಂದ ತಾಲೂಕಿನವರಿಗೆ) ಈ ಘನಘೋರ ಸಂಗ್ರಾಮವು ಯಾವ ಸ್ಥಳದಲ್ಲಿ ನಡೆಯಿತೆಂಬುವದು ಸ್ಪಷ್ಟವಾಗಿ ತಿಳಿಯುವಂತಿದೆ. ಈ ಸ್ಥಳವನ್ನು ಪ್ರತ್ಯಕ್ಷ ನೋಡಿ ಈ ರಣಭೂಮಿಯ ನಕಾಶೆಯನ್ನು ನಿರ್ಮಾಣ ಮಾಡಬೇಕೆಂದು ನಿಶ್ಚಯಿಸಿದ್ದೇನೆ. ಇನ್ನು ಶ್ರೀ ಬಸವೇಶ್ವರರ ಜನ್ಮಸ್ಥಳವು, ಮುದ್ದೇಬಿಹಾಳ ತಾಲೂಕಿನಲ್ಲಿರುವ ಹೊಕ್ಕರಾಣಿ ಗ್ರಾಮವೆಂದು ಕೆಲವರು, ಬಾಗೇವಾಡಿ ಗ್ರಾಮವೆಂದು ಕೆಲವರು ಹೇಳುತ್ತಿದ್ದಾರೆ. ಇವುಗಳಲ್ಲಿ ಯಾವದು ನಿಜವೆಂಬುದನ್ನು ನಿರ್ಣಯಿಸಬೇಕಾಗಿದೆ. ಹಾಗೆಯೇ ಶ್ರೀ ಬಸವೇಶ್ವರರು ಕೃಷ್ಣಾ ಮಲಾಪಹಾರಿ ನದಿಗಳ ಸಂಗಮದಲ್ಲಿದ್ದ ಸಂಗಮೇಶ್ವರನಲ್ಲಿ ಐಕ್ಯರಾದರೆಂಬ ಸಂಗತಿಯು ಶ್ರೀ ಬಸವ ಪುರಾಣದಲ್ಲಿ ಪ್ರಸಿದ್ಧವಾಗಿಯೇ ಇದೆ. ಎಂದರೆ 'ಶಕ್ತಿ ವಿಶಿಷ್ಟಾದ್ವೈತ' ವೆಂಬ ವೀರಶೈವ ತತ್ವಜ್ಞಾನದ ಪ್ರಕಾರ ಶ್ರೀ ಬಸವೇಶ್ವರರ ಜೀವಾತ್ಮನು ಪರಮಾತ್ಮನಲ್ಲಿ ಅರ್ಥಾತ್ ಸಂಗಮೇಶ್ವರನಲ್ಲಿ ಐಕ್ಯನಾದದ್ದು ನಿಜ. ಆದರೆ ಶ್ರೀ ಬಸವೇಶ್ವರರ ಜಡದೇಹದ ಸಮಾಧಿಯು ಯಾವ ಸ್ಥಳದಲ್ಲಿ ಆಯಿತು? ಎಂಬದೊಂದು ವಿಚಾರಾರ್ಹವಾದ ಪ್ರಶ್ನೆಯು ಹಾಗೆಯೇ ಉಳಿದಿದೆ. ಪ್ರಾಯಶಃ ಈ ಸಂಗಮೇಶ್ವರ ದೇವಸ್ಥಾನದ ಒಳಿಯಲ್ಲಿಯೇ ಶ್ರೀ ಬಸವೇಶ್ವರರ ಸಮಾಧಿಯು ಇದ್ದಿರಲಿಕ್ಕೇಬೇಕು. ಇದನ್ನು ಸಂಶೋಧಿಸುವದೂ ಅಗತ್ಯವಾಗಿದೆ.

ಮೇಲೆ ಉಲ್ಲೇಖಿಸಿದ "ರಾಮರಾಜನ ಬಖರ" ದಲ್ಲಿ, ವಿಜಾಪೂರದ ಅಲೀ ಅದಿಲ್ ಶಹಾನಿಗೆ "ಕನ್ನಡ ಜಾಣ" ನೆಂಬ ಬಿರುದು ಇರುತ್ತದೆ. ಅರ್ಥಾತ್ ಈ ಅಲೀ ಅದಿಲ ಶಹಾನು ಕನ್ನಡದಲ್ಲಿ ಪಂಡಿತನಿದ್ದನೆಂದು ತೋರುತ್ತದೆ. ಈ ಕನ್ನಡ ಜಾಣನ ರಾಜಧಾನಿಗೆ (ವಿಜಾಪೂರಕ್ಕೆ) ಹೋಗಿ ನೋಡುತ್ತೇನೆ ಎಲ್ಲ ಅಜ್ಞಗನ್ನಡಿಗರೂ ತಮ್ಮ ವ್ಯಾಪಾರದ ಲೆಖ್ಖಪತ್ರಗಳನ್ನೂ ಲಗ್ನಪತ್ರಿಕೆಗಳನ್ನೂ ಮರಾಠಿಯಲ್ಲಿ ಬರೆಯುತ್ತಿದ್ದಾರೆ!! ಆದರೆ ಒಂದು ಸಂತೋಷದ ಸಂಗತಿಯೇನೆಂದರೆ, ಕನ್ನಡಜಾಣನ ರಾಜಧಾನಿಗೆ, ಕನ್ನಡದಲ್ಲಿ ಪಂಡಿತರೂ ಅಭಿಮಾನವುಳ್ಳವರೂ ಕನ್ನಡನಾಡಿನ ಏಕೀಕರಣದ ಬಗ್ಗೆ ಅತ್ಯಂತ ಕಳಕಳಿಯುಳ್ಳವರೂ ಕನ್ನಡನಾಡಿನ ಇತಿಹಾಸವನ್ನು ಸಾಂಗೋಪಾಂಗವಾಗಿ ಅಭ್ಯಾಸಮಾಡಿದವರೂ ಆದ ಶ್ರೀಮಾನ್ ಮೆಹಬೂಬ್ ವ್ಹಿ. ಎಚ್. ನಾಯಕ ಸಾಹೇಬರು ಕಲೆಕ್ಟರರಾಗಿದ್ದಾರೆ. ಈ ವಿಜಾಪೂರದಲ್ಲಿ ಕರ್ನಾಟಕ ಇತಿಹಾಸ ಸಂಶೋಧನದ ಬಗ್ಗೆ ಲಾಯಬ್ರರಿ, ಗವರ್ನಮೆಂಟ ಹಾಯಸ್ಕೂಲ ಸಿದ್ಧೇಶ್ವರ ಹಾಯಸ್ಕೂಲ ಮುಂತಾದ ಬೇರೆ ಬೇರೆ ಸ್ಥಳಗಳಲ್ಲಿ ೫ ಉಪನ್ಯಾಸಗಳನ್ನು ಹೇಳಿದೆನು. ಕರ್ನಾಟಕ ವೈಭವ ಪತ್ರಿಕೆಯ ಸಂಪಾದಕರಾದ ಶ್ರೀ ಹಣಮಂತರಾವ ಮೋಹರಿಯವರೂ ಶಿವಾನುಭವ ಪತ್ರಿಕೆಯ ಸಂಪಾದಕರಾದ ರಾವಸಾಹೇಬ ಪಿ. ಜಿ. ಹಳಕಟ್ಟಿಯವರೂ ರಾವಬಹಾದ್ದೂರ ಕೆಂಭಾವಿ ರಾಘವೇಂದ್ರರಾಯರೂ ಇತಿಹಾಸ ಮಂಡಳದ ಕಾರ್ಯಕ್ಕೋಸ್ಕರ ನನಗೆ ಬಹಳ ಸಹಾಯ ಮಾಡಿದರು.

ಸದಸ್ಯ ಮಹನೀಯರು.

ಮೆಹಬೂಬ ಕಲೆಕ್ಟರ ಸಾಹೇಬ ಶ್ರೀಮಾನ್ ವ್ಹಿ. ಎಚ್. ನಾಯಕ ಎಮ್ ಎ ಬ್ಯಾರಿಸ್ಟರ ಅ್ಯಟ ಲಾ. ಈ ಮಹಾಶಯರು ಕರ್ನಾಟಕ ಇತಿಹಾಸ ಮಂಡಳಕ್ಕೆ ೧ನೆಯ ವರ್ಗದ ಆಜೀವ ಸದಸ್ಯರಾದರು. ಇದಕ್ಕೋಸ್ಕರ ಈ ಮಹಾನುಭಾವರಿಗೆ ಇತಿಹಾಸ ಮಂಡಳದವರು ಅತ್ಯಂತ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸುತಾರೆ.

ರಾವಬಹಾದ್ದೂರ ಶ್ರೀಮಾನ್ ಕೆಂಭಾವಿ ರಾಘವೇಂದ್ರರಾಯರು ಇತಿಹಾಸ ಮಂಡಳಕ್ಕೆ ೨ ನೇಯ ವರ್ಗದ ಆಜೀವ ಸದಸ್ಯರಾದರು. ಈ ಮಹಾಶಯರಿಗೆ ಈ ಸಂಸ್ಥೆಯವರು ಅತಿಶಯ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತಾರೆ.

ಪ್ರತಿವಾರ್ಷಿಕ ೫ ರೂಪಾಯಿಗಳನ್ನು ಕೊಟ್ಟು ಆದಂಥ ಸಹಾಯಕ ಸದಸ್ಯರು.

ಶ್ರೀಮಾನ್ ಸಬ್ಬಜಜ್ಜ ವ್ಹಿ. ಬಿ. ಹಾಲಭಾವಿ ಬಿ. ಎ. ಎಲ್. ಎಲ್. ಬಿ. ಶ್ರೀ. ಆರ್. ಜಿ. ತೆರಗೊಂಡಿ ಎಮ್ ಎ ಹೆಡ್ಡ ಮಾಸ್ತರ ಗವ್ಹರ್ನಮೆಂಟ ಹಾಯಸ್ಕೂಲ, ಶ್ರೀ. ರಾವಸಾಹೇಬ ಪಿ. ಜಿ. ಹಳಕಟ್ಟಿ ಬಿ. ಎ. ಎಲ್. ಎಲ್. ಬಿ, ಶ್ರೀ ನಾನಾಸಾಹೇಬ ದೇಸಾಯಿ ಬಿ ಎ ಎಲ್ ಎಲ್ ಬಿ, ಡಾಕ್ಟರ ಗೋವಿಂದರಾವ ಮಂಗಳವೇಢೇಕರ, ಶ್ರೀ ನಾರಾಯಣ ಬಳವಂತ ಜೋಶಿ, ಶ್ರೀ ವ್ಹಿ. ಜಿ. ಘೋಲಪ ಬಿ. ಎ. ಎಲ್. ಎಲ್. ಬಿ, ವಕೀಲ,

ಪ್ರತಿವಾರ್ಷಿಕ ೧ ರೂಪಾಯಿ ಕೊಟ್ಟು ಆದಂಥ ಹಿತಚಿಂತಕ ಸದಸ್ಯರು.

ಶ್ರೀಯುತರಾದ ಶ್ರೀನಿವಾಸ ಗೋವಿಂದ ಅನೆಖಿಂಡಿ, ಆರ್. ಎಸ್. ಅಂಬೇಕರ ವಕೀಲ ಆರ್. ಎಚ್. ಜವಳಿ ಬಿ. ಎ. ಹರಿಹರರಾವ ಕುಲಕರ್ಣಿ ವಕೀಲ, ಎನ್ ವ್ಹಿ. ಜೋರಾಪೂರ ವಕೀಲ, ಹಣಮಂತರಾವ ಮೋಹರಿ ಸಂಪಾದಕ ಕರ್ನಾಟಕ ವೈಭವ,

ಈ ಪ್ರಕಾರ ೧೫ ಜನ ಸದ್ಗೃಹಸ್ಥರು ಕರ್ನಾಟಕ ಇತಿಹಾಸ ಮಂಡಳಕ್ಕೆ ಸದಸ್ಯರಾದರು. ಇದಕ್ಕೋಸ್ಕರ ಈ ಸದಸ್ಯ ಮಹನೀಯರಿಗೆ ಈ ಸಂಸ್ಥೆಯು ಸದೈವ ಋಣಿಯಾಗಿದೆ. ಇನ್ನೂ ಕೆಲವರು ಸದಸ್ಯರಾಗತಕ್ಕವರಿದ್ದಾರೆ.

ಇಲ್ಲಿ ಶ್ರೀ, ಚಿಕ್ಕೋಡಿ ವಕೀಲರವರು ವೀರಶೈವ ಮತದ ಇತಿಹಾಸವನ್ನು ನೂತನವಾದ ದೃಷ್ಟಿಯಿಂದ ಅಭ್ಯಾಸ ಮಾಡುತ್ತಲಿದ್ದಾರೆ. ರಾವಸಾಹೇಬ ಶ್ರೀ ಪಿ. ಜಿ. ಹಳಕಟ್ಟಿ ವಕೀಲರವರು ವೀರಶೈವ ಮತದ ಸಂಶೋಧಕ ಸಂಘವೊಂದನ್ನು ಏರ್ಪಡಿಸಿದ್ದಾರೆ. ಶ್ರೀ. ಎಸ್. ಬಿ. ಜೋಶಿಯವರು ವಿಜಯನಗರದ ಇತಿಹಾಸವನ್ನು ಸೂಕ್ಷ್ಮರೀತಿಯಿಂದ ಅಭ್ಯಾಸ ಮಾಡುವದಕ್ಕೆ ಉಪಕ್ರಮ ಮಾಡಿದ್ದಾರೆ. ಶ್ರೀ ಹಣಮಂತರಾವ ಕೌಜಲಗಿಯವರು ಐತಿಹಾಸಿಕ ನಾಟಕವನ್ನು ಬರೆಯಲಾರಂಭಿಸಿದ್ದಾರೆ. ಇಲ್ಲಿ ದೇಶಪಾಂಡೆ ಹರಿಹರರಾವ ಕುಲಕರ್ಣಿ ಇವರ ಕೃಪೆಯಿಂದ ೧೧ ತಾಮ್ರದ ಪ್ರಾಚೀನ ನಾಣ್ಯಗಳೂ ೧ ಬೆಳ್ಳಿಯ ನಾಣ್ಯವು ಸಿಕ್ಕವು.

ತಮ್ಮ ಪ್ರೇಮಾಂಕಿತ

ನಾ. ಶ್ರೀ. ರಾಜಪುರೋಹಿತ.
ಪ್ರಚಾರಕ, ಕರ್ನಾಟಕ ಇತಿಹಾಸ ಮಂಡಳ ಧಾರವಾಡ.

ಕನ್ನಡಿಗ.

ಬಾಗಲಕೋಟೆ ಚೈತ್ರ ಶುದ್ಧ ೧೫ ಶಕೆ ೧೮೪೯

ಸಂಪಾದಕರ ಭೂಮಿ

(೬೦)

ನನ್ನ ಮನಸಿನ ಮೇಣಮಾಡಿ ಕಟ್ಟುವೆನಾನು ।
ನಿನ್ನ ಬೆಸನವ ನಾಡಿದಂಥ ಮಕ್ಕಳ ದೊನ್ನೆ।
ಚಿನ್ನದಾದರು ಚಿನ್ನ ಮೇಣಬತ್ತಿಯು ನೊಂದು ಚಿನ್ಮಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನಪ್ರಾಣವು ನಿನ್ನ ಗಂಧವನು ಹೀರಬಹ ಗಂಧವಹನೆಂದು ತಿಳಿಯೆ॥

—ಅಂಜಿಕಾ ತನಯ ದತ್ತ

ಬ್ಯಾಹಟ್ಟಿ ಸುಬ್ಬರಾಯರು ಉತ್ತರ ಕರ್ನಾಟಕದಲ್ಲಿ ಹೆಸರಾದ ವಕೀಲರು. ಇವರು ಹುಬ್ಬಳ್ಳಿಯ ವೃದ್ಧಪಿತಾಮಹರೆನ್ನಬಹುದು. ಸಾರ್ವಜನಿಕ ಕಾರ್ಯಗಳಲ್ಲಿ ಇವರು ಉತ್ಸಾಹದಿಂದ ಭಾಗತೆಗೆದುಕೊಳ್ಳುತ್ತಲಿದ್ದರು. ಮೊದಲನೇ ಕರ್ನಾಟಕ ಪ್ರಾಂತಿಕ ಪರಿಷತ್ತಿನ ಸ್ವಾಗತ ಮಂಡಳದ ಅಧ್ಯಕ್ಷರಿದ್ದರು. ಒಮ್ಮೆ, ಮೈಸೂರ ಮಹಾರಾಜರ ಸಂಗಡ ಸ್ನೇಹವನ್ನು ಬೆಳೆಸಿ ಅವರನ್ನು ತಮ್ಮಲ್ಲಿ ಅತಿಥಿಗಳನ್ನಾಗಿ ಬರಮಾಡಿಕೊಂಡ ಸಂಗತಿಯೇ ಇವರ ವರ್ಚಸ್ಸನ್ನೂ ಯೋಗ್ಯತೆಯನ್ನೂ ಸಿದ್ಧಪಡಿಸುತ್ತದೆ! ಮುಪ್ಪಿನ ಮುದುಕರಿದ್ದಾಗ್ಯೂ ಬೆಳಗಾವಿಯ ಕಾಂಗ್ರೆಸ್ಸಿಗೆ ಬಂದಿದ್ದರು. ತಮ್ಮ ಕುದುರೆ ರಥಗಳನ್ನು ಸಹ ಕಾಂಗ್ರೆಸ್ಸಿನ ಸೇವೆಗಾಗಿಟ್ಟಿದ್ದರು! "ಚಂಡಿಯ ದಿನ! ಮುದುಕರು! ಇಷ್ಟೊಂದು ತೊಂದರೆಯೊಂದಿಗೆ ಕಾಂಗ್ರೆಸ್ಸಕ್ಕೆ ಬಂದಿರಲ್ಲ" ಎಂಬದಾಗಿ ನಾವು ಕೇಳಿದಾಗ್ಯೆ "ಅದೆಲ್ಲ ಸರಿ: ನನ್ನ ಕರ್ನಾಟಕದ ನಾಡಿನಲ್ಲಾದ ಮೊದಲನೇ ಕಾಂಗ್ರೆಸ್ಸಿಗೆ ನಾನು ಬರದಿದ್ದರೆ ಹೇಗೆ? ಚಂಡಿಯಿಂದ ಮಡಿದರೆ ಇಂತಹ ಪುಣ್ಯಕ್ಷೇತ್ರದ ಮರಣದಿಂದ ವೈಕುಂಠವೇ ದೊರೆಯುವದೆಂ'ದು ಉತ್ತರ ಕೊಟ್ಟ ಸುಬ್ಬರಾಯರು ತಮ್ಮ ೮೦ ನೇ ವಯಸ್ಸಿನಲ್ಲಿ ಹುಬ್ಬಳ್ಳಿಯಲ್ಲಿ ತೀರಿಕೊಂಡರು. ಕರ್ನಾಟಕ ಮಾತೆಯು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ!

ಕನ್ನಡ ನಾಡಿನಲ್ಲಿ ವೃತ್ತಪತ್ರಿಕಾ ವ್ಯವಸಾಯವು ಎಷ್ಟೊಂದು ಹಾನಿಯಲ್ಲಿದೆ ಹಾಗೂ ನಿರುತ್ಸಾಹಜನಕವಾಗಿದೆಂಬದನ್ನು ಎಲ್ಲರೂ ಬಲ್ಲರು. ಯಾವ ವಿಷಯಕ್ಕೂ ಅಪವಾದವಿರುವಂತೆ ಮೈಸೂರಿನ ವೃದ್ಧಪಿತಾಮಹ ಶ್ರೀಮಾನ್ ವೆಂಕಟಕೃಷ್ಣಯ್ಯನವರ ಅಮೃತ ಹಸ್ತದಿಂದ ಪ್ರಾರಂಭವಾದ 'ಸಾಧ್ವಿ' 'ಸಂಪಾದಭ್ಯುದಯ' ಮೊದಲಾದ ಪತ್ರಿಕೆಗಳ ಕಾರ್ಯವು ಯಶಸ್ವಿಯಾಗಿದೆನ್ನಬಹುದು. ಈಗ್ಗೆ ವೃದ್ಧಪಿತಾಮಹರು ಇಂತಹ ಊರ್ಜಿತಾವಸ್ಥೆಯಲ್ಲಿರುವ ತಮ್ಮ ಸ್ವಂತ ವ್ಯವಹಾರವನ್ನು ನಮ್ಮ ತರುಣ ಮಿತ್ರರೂ, ಉಜ್ವಲ ಕರ್ನಾಟಕಾಭಿಮಾನಿಗಳೂ ಆದ ಶ್ರೀಮಂತ ರಾಮಯ್ಯನವರ ವಶಕ್ಕೆ ಒಪ್ಪಿಸಿದ್ದಾರೆ. ಶ್ರೀಮಾನ್ ವೆಂಕಟಕೃಷ್ಣಯ್ಯನವರಂತಹ ಮಹನೀಯರ ಆಶೀರ್ವಾದ, ಕೃಪಾಪ್ರಸಾದಗಳಿಂದ ಸಜ್ಜಿತರಾಗಿ ಈ ಪವಿತ್ರಕಾರ್ಯದಲ್ಲಿ ನಿಯೋಜಿತರಾದ ಶ್ರೀ. ರಾಮಯ್ಯನವರನ್ನು ನಾವು ಮನಃಪೂರ್ವಕವಾಗಿ ಅಭಿನಂದಿಸುತ್ತೇವೆ. 'ಸಾಧ್ವಿ' 'ಮೈಸೂರ ಪೆಟ್ರಿಯಟ್' ಪತ್ರಿಕೆಗಳು ಈಗ್ಗೆ ಕೇವಲ ಮೈಸೂರಿನ ಪತ್ರಿಕೆಗಳಾಗಿವೆ; ಇನ್ನು ಮೇಲೆ ಅವೆಂದು ಕರ್ನಾಟಕದಲ್ಲಿ ಎಲ್ಲಕಡೆಗೂ ಹರಿಯುವ ಹಾಗೆ, ಕರ್ನಾಟಕದ ಎಲ್ಲ ಭಾಗದ ವಿಷಯಗಳಿಗೆ ಗಮನ ಕೊಡಬೇಕಾಗಿ ಸೂಚಿಸುತ್ತೇವೆ.

ಮಂಗಳೂರ ಮಲ್ಪೆಯ ರೇಲ್ವೆ ೧೯೨೮-೨೯ ನೇ ಇಸ್ವಿಯಲ್ಲಿ ೭೪ ಲಕ್ಷ ವೆಚ್ಚದಿಂದ ಪ್ರಾರಂಭವಾಗಿ ೧೯೩೦ ನೇ ಇಸ್ವಿಯಲ್ಲಿ ವ್ಯವಹಾರಕ್ಕೆ ತೆರೆಯಲ್ಪಡುವದಾಗಿ ಪ್ರಕಟವಾಗಿದೆ. ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ರೇಲ್ವೆಗಳು ಪ್ರಾರಂಭವಾಗಬೇಕಾಗಿ 'ಕನ್ನಡಿಗನು' ಜನ್ಮವೆತ್ತಿದ ಕೂಡಲೇ ಪ್ರಯತ್ನಪಟ್ಟು ಕರ್ನಾಟಕದ ಎಲ್ಲ ಭಾಗಗಳ ೫೫ ಸಾವಿರ ಕನ್ನಡಿಗರ ಸಹಿಗಳನ್ನು ದೊರಕಿಸಿ ರೇಲ್ವೆ ಬೋರ್ಡಿಗೆ ಕಳಿಸಿದನು. ಈ ಬಗ್ಗೆ 'ಲೋಕರಹಸ್ಯ'ಕಾರರು 'ಕನ್ನಡಿಗ'ನು ಹುಚ್ಚನೆಂದು ಹೆಸರಿಟ್ಟರು! ಆದರೆ 'ಕನ್ನಡಿಗ'ನು ನಮೂದಿಸಿದ ಇಳಕಲ್ಲ-ಸಿಂಧನೂರು, ಬೆಳಗಾವಿ-ಹುಬ್ಬಳ್ಳಿ (ಸವದತ್ತಿಮಾರ್ಗ), ಮಂಗಳೂರ-ಮಾರ್ಮಗೋವೆ, ಕೊಡಗು ಮೊದಲಾದ ಎಲ್ಲ ಕರ್ನಾಟಕದ ಭಾಗಗಳಲ್ಲಿಯೂ ರೇಲ್ವೇ ಪ್ರಾರಂಭಿಸುವ ವಿಚಾರವನ್ನು ರೇಲ್ವೇ ಬೋರ್ಡಿನವರು ಮಾಡಿದ್ದಾರೆ. ಇವಕ್ಕೆಲ್ಲ ಪೂರ್ತಿ ಸ್ವರೂಪ ಬರಲು ಇನ್ನೂ ಅವಕಾಶವಿದೆನ್ನುವದು ನಿಜವಾಗಿದ್ದರೂ, 'ಕನ್ನಡಿಗ'ನು ಪ್ರಾರಂಭಿಸಿದ ಚಳವಳವು ಯಶಸ್ವಿಯಾಗುವ ಮಾರ್ಗದಲ್ಲಿರುವದು ಸ್ಪಷ್ಟವಿದೆ. 'ಲೋಕರಹಸ್ಯ'ಕಾರರು ಏನೆನ್ನುವರು?

ಕನ್ನಡ ಪಂಡಿತರನ್ನು ಕರ್ನಾಟಕ ಕಾಲೇಜಿಗೆ ನೇಮಿಸುವ ಬಗ್ಗೆ ಧಾರವಾಡದ ಪತ್ರಿಕೆಗಳಲ್ಲಿ ಚರ್ಚೆ ನಡೆದಿದೆ. ಮೈಸೂರಿನ ಪಂಡಿತರನ್ನು ನಿಯಮಿಸಬಾರದಾಗಿ ಧಾರವಾಡದ ಪತ್ರಿಕೆಗಳು ಬರೆಯುತ್ತಿರುವದು ನಮಗೆ ಆಶ್ಚರ್ಯವನ್ನುಂಟುಮಾಡಿದೆ. ಮೈಸೂರು ಪ್ರಾಂತ-ಉತ್ತರ ಕರ್ನಾಟಕದ ಸಂಬಂಧವು ಬೆಳೆಯಬೇಕು; ಒಳಿಕೆಯು ಹೆಚ್ಚಬೇಕು; ಸ್ನೇಹವು ವೃದ್ಧಿಯಾಗಬೇಕು; ಎಂಬದಾಗಿ ಪ್ರಯತ್ನ ನಡೆದ ಸಮಯದಲ್ಲಿ, ಮೈಸೂರಿನ ಪಂಡಿತರು ಕರ್ನಾಟಕ ಕಾಲೇಜಿಗೆ ಬರಬಾರದೆಂದು ಬರೆಯುತ್ತಿರುವದು ನಮಗೆ ಸರಿದೋರದು. ಉತ್ತರ ಕರ್ನಾಟಕದಲ್ಲಿ ಯೋಗ್ಯತಾಸಂಪನ್ನರಾದ ಪಂಡಿತರು ಇರುವದು ನಿಜ; ಆದರೂ ಕೂಡ ನಮ್ಮ ಏಕೀಕರಣದ ಭಾವನೆಯು ಸಲುವಾಗಿ ಮೈಸೂರಿನ ಪಂಡಿತರನ್ನೇ ನಿಯಮಿಸಬೇಕಾಗಿ ನಮ್ಮ ಒತ್ತಾಯದ ಸೂಚನೆಯಿದೆ. ಇದರಿಂದ ತಮಗೆ ಅಪಮಾನವಾಗುವದೆಂದು ಉತ್ತರ ಕರ್ನಾಟಕದ ಹಲವು ಪಂಡಿತರು ತಿಳಿದಿರುವದು ನಗೆಗೀಡಾಗಿದೆ. ಮೈಸೂರಿನಿಂದ ವ್ಯಾಖ್ಯಾನಗಳಿಗಾಗಿ ಪಂಡಿತರನ್ನು ಕರೆಸಿದರೆ ನಮ್ಮಲ್ಲಿಯ ವ್ಯಾಖ್ಯಾತರಿಗೆ ಅವಮಾನ ಮಾಡಿದಂತಾಯಿತೇ? ಮೈಸೂರಿನವರ ಸಂಗಡ ಶರೀರ ಸಂಬಂಧವನ್ನು ಸಹ ಬೆಳೆಸಬೇಕೆಂದರೆ, ನಮ್ಮಲ್ಲಿ ಕನ್ಯೆಯರೂ ವರಗಳೂ ಇಲ್ಲನೇದಂತಾಯಿತೆ? ಪುಣೆಯಲ್ಲಿ ಬೇಕಾದಂತಹ ಪಂಡಿತರಿದ್ದಾರೆ. ಆದರೂ ಪರಸ್ಥಳದ ವ್ಯಾಖ್ಯಾತರನ್ನು ಕರಿಸುವರು. ಆದರಿಂದ ಅವರ ಅಪಮಾನವಾಗುವದೋ? ಈ ಬಗೆಯ ಮಾನಾಪಮಾನದ ಕಲ್ಪನೆಯು ಹಾಸ್ಯಾಸ್ಪದವಾದುದು.

ಧಾರವಾಡದ 'ಚೀಫ ಆಫೀಸರ'ರ ಸ್ಥಾನಕ್ಕೆ ಕೊಡಗಿನ ಒರ್ವ ಗ್ರೃಹಸ್ಥರು ನಿಯೋಜಿತರಾದದ್ದು ನಮಗೆ ಆನಂದವನ್ನುಂಟು ಮಾಡಿದೆ. ಆದರೆ ಧಾರವಾಡದ ಜನರಿಗೆ ಇದರಿಂದ ಅವಮಾನವಾಗಿದೆಯೇ? ಅದೇ ಪ್ರಕಾರವಾಗಿ, ಮೈಸೂರಿನ ಕನ್ನಡಿಗರು ಉತ್ತರ ಕರ್ನಾಟಕದಲ್ಲಿ ನೌಕರಿಗಾಗಿ ಬರಬೇಕು. ಉತ್ತರ ಕರ್ನಾಟಕದವರು ಮೈಸೂರಿಗೆ ಹೋಗಬೇಕು. ಇದೇ ಉತ್ತಮ ಮಾರ್ಗ. "ಮೈಸೂರು ಮೈಸೂರಿನವರಿಗೆ" ಎಂಬ ವಿಚಾರವನ್ನು ಬದಲಿಸಿರೆಂದು ಅವರಿಗೆ ಹೇಳುತ್ತಿರುವ ನಾವು "ಉತ್ತರ ಕರ್ನಾಟಕವು ಉತ್ತರ ಕರ್ನಾಟಕದವರಿಗೆ" ಎಂದು ಇಲ್ಲದ ಹೊಸ ಕೂಗನ್ನೆಬ್ಬಿಸುವದು ಸರಿಯಾದೀತೇ? ಕರ್ನಾಟಕತ್ವದ ಕಲ್ಪನೆಯನ್ನು ಅಖಂಡ ಕರ್ನಾಟಕದಲ್ಲಿ ಹರಡಿ, ಎಲ್ಲ ಕನ್ನಡಿಗರ ಗೌರವಕ್ಕೆ ಪಾತ್ರರಾದ ಉತ್ತರ ಕರ್ನಾಟಕದವರಿಗೆ, ಮೈಸೂರಿನವರು ಉತ್ತರ ಕರ್ನಾಟಕಕ್ಕೆ ಬರುವದಕ್ಕೂ, ನಾವು ಮೈಸೂರ ಪ್ರಾಂತಕ್ಕೆ ಹೋಗುವದಕ್ಕೂ ಅಸ್ಪದವನ್ನುಂಟು ಮಾಡಿಕೊಡುವದೇ ಶ್ರೇಷ್ಠವಾದ ಉಪಾಯವು

" ನನ್ನ ತುಣುಕು ವಹಿಯಿಂದ "

ಇಲ್ಲಿ ಬಿಡಿಕಾಸಿನ ದೈನಂದಿನ ವೊಂದು ನಡೆಯುಹತ್ತಿದೆ, ಕೆಲವು ಕಾಲದಹಿಂದೆ ತಾನೇ, ಮೂರು ಕಾಸಿನ " ಪ್ರಜಾಮಿತ್ರ" ವೊಂದು ಹೊರಟ ವಿಚಾರ ಕೆಲವು ಕನ್ನಡಿಗರಿಗೆ ಗೊತ್ತಿರಬಹುದು. ಇದರ ಉದ್ದೇಶವು ಪಾಮರ ಸೇವೆ ಮತ್ತು ಶಿಕ್ಷಣ ಇತರ ಪತ್ರಿಕೆಗಳಮೇಲೆ ಸ್ಪರ್ಧೆ ಮಾಡುವುದಕ್ಕೆ ಹೊರಟಿಲ್ಲವೆಂದು ಘಂಟಾಘೋಷವಾಗಿ ಹೇಳುತ್ತದೆ. ಬಾಯಲ್ಲಿ ಏನು ಹೇಳಿದರೇನು ? " ಗಾರ್ಡಿಯನ್ " ಪತ್ರಿಕೆಯು ಪರಮಪದವನ್ನೈದಿದುದು "ಪ್ರಜಾಮಿತ್ರ"ನಿಗೂ ಇತರ ಪತ್ರಿಕೆಗಳಿಗೂ ಸಾರ್ವಜನಿಕರಲ್ಲಿ ಬಹು ತಿರಸ್ಕಾರವನ್ನುಂಟುಮಾಡಿತು. "ಪ್ರಜಾಮಿತ್ರ"ನಿಗೆ ಸಾವು ಬರದಂತೆ " ನವಜೀವನ "ವು ನೋಡಿಕೊಳ್ಳಲಿ. ಇದು ಕನ್ನಡ ಪ್ರೇಮಿಗಳಿಗೆ ವಿನಂತಿ. ಇತರರಿಗೆ ವರದಿ.

ಕೆಲವು ದಿವಸಗಳಹಿಂದೆ ಇಲ್ಲಿಗೆ ಪೋಲಂಡಿನಿಂದ ವಿ. ಪ್ರೊಲಿನ್ಸ್ಕಿ ಎಂಬೊಬ್ಬರು ಮಹನೀಯರು ಹಸಿದು ಬಂದರು. ಬಂದೊಂದೆರಡು ದಿನ ಹಸಿವಿನಿಂದ ಬೆಂದರು. ಇವರ ಈ ಪರಿಸ್ಥಿತಿಗೆ ಪರಿತಾಪ ಪಟ್ಟು ಇಲ್ಲಿಯ ಕೆಲವು ಮಹನೀಯರು ಅಶನ ವಿಕ್ಕಿದರು. ಹಿಂದುಗಳ ಅತಿಥಿ ಸತ್ಕಾರಬುದ್ಧಿಯನ್ನು ಕಂಡು ಅವರಲ್ಲಿಯೇ ಭದ್ರಾಸನವನ್ನು ಹೂಡಿದರು. ಇವರು ಕಲಾಕೋವಿದರಂತೆ ವಾಚಕರು ಈ ವರ್ಷದ " ಹಿಂದೂ ವಾರ್ಷಿಕ ಸಂಚಿಕೆ"ಯನ್ನು ನೋಡಿ ಈಬಗ್ಗೆ ಪರಿಚಯ ಮಾಡಿಕೊಳ್ಳಲಿ! ನಯಕಸಬುಗಳ ವಿಶಾರದರಂತೆ ಹೊಸದಾಗಿ ಇವರು ರಾಜ್ಯವರ್ಣನವರ ಔದಾರ್ಯದಾಶ್ರಯದಲ್ಲಿ ಸ್ಥಾಪಿಸಿರುವ " ಕಲಾ-ಕಸಬುಗಳ ಶಾಲೆಯ ತಯಾರಿಗಳನ್ನು ನೋಡಿದರೆ ನಮಗೇಕೋ ಸಂದೇಹವಾಗುತ್ತದೆ. ಇಂತಹ ಪಂಡಿತವರೇಣ್ಯರ ಕುಶಲತೆಯನ್ನು ಪ್ರಯೋಗ ಪಡಿಸಿಕೊಳ್ಳುವ ಸದುದ್ದೇಶದಿಂದ ಸರಕಾರದವರು ೫೫೦ ರೂ. ಗಳ ಹುದ್ದೆಯೊಂದನ್ನು ಸರಕಾರದ ಕೈಗಾರಿಕಾ ಖಾತೆಯಲ್ಲಿ ಇವರಿಗೆ ಕೊಟ್ಟಿರುತ್ತಾರೆ. ಪ್ರಧಾನ ಕಾರ್ಯದರ್ಶಿಗಳು ೨೦೦ ರೂ ಗಳನ್ನು ಮಾತ್ರ ಮಂಜೂರ ಮಾಡಿದರಂತೆ, ದಿವಾನ ಸಾಹೇಬರು ಇನ್ನೈವತ್ತು ಹೆಚ್ಚಿಸಿದರಂತೆ !!! ಎಂತಹ ಔದಾರ್ಯ " ಮೈಸೂರು ಮೈಸೂರಿನವರಿಗೆ " ಎಂದು ಸವಿಸವಿಯಾಗಿ ಹಾಡುವ ನಮ್ಮ ಕೋಗಿಲೆಯ ಕಾರ್ಯಕ್ರಮದ ವಿಚಕ್ಷಣೆಯು ಇದಂತಿ. ಈ ಕೃಪಾದೃಷ್ಟಿಯು ನಮ್ಮ ಕಲಾರತ್ನಗಳಾದ ವೆಂಕಟಪ್ಪ, ವ್ಯಾಸರಾವ್, ಪಾವಂಜೆ, ಲಕ್ಷ್ಮಣ ಇವರುಗಳಮೇಲೆ ಬೀಳಬಾರದಾಗಿತ್ತೋ ? ಈ ವರ್ಣವಿದ್ವೇಷವೂ, ರಜನಮತ್ತು ರಕ್ತವರ್ಣವ್ಯಾಮೋಹವೂ ಮೈಸೂರು ದೇಶದಲ್ಲಿಯೂ ಇರಬೇಕೇ ? ಹಾಯ್ ! ಹಾಯ್ ! ಎಂದು ಜನರು ತಲ್ಲಣಿಸುತ್ತಿರುವರು. ಬೋರೇಗೌಡನಿಗೆ ಉಳಿಗಾಲ ವಿಲ್ಲ !!!

" ವಿಶ್ವಭಾರತಿ " ಬೆಂಗಳೂರು.

ಇಂಗ್ಲಂಡ ಸರಕಾರಕ್ಕೆ ೩೭½ ಕೋಟಿ ಪೌಂಡಿನ ಕೊರತೆಯು ಅಂದಾಜ ಪತ್ರಿಕೆಯಲ್ಲುಂಟಾಗಿದೆ. ಆದ್ದರಿಂದ, ಬ್ರ್ಯಾಂಡಿ ಬೆಂಕಿ ಪೆಟ್ಟಿಗೆ, ತಂಬಾಕು ಹಾಗೂ, ಪರದೇಶದಿಂದ ಬರುವ ಮೋಟಾರ ಸಾಯಕಲ್ಲುಗಳಮೇಲೆ ಹೊಸ ಕರ ಹೇರುವರು. ಪ್ರಜಾಸತ್ತಾತ್ಮಕವಾದ ಇಂಗ್ಲಂಡದಲ್ಲಿ ಹೀಗೆ ಮಾಡುವದು ಶಕ್ಯವಿದೆ. ಅದೇ ಹಿಂದುಸ್ಥಾನದಲ್ಲಿ ಉಪ್ಪಿನ ತೆರಿಗೆ ಹೆಚ್ಚಿಸುವರು! ಪರದೇಶದಿಂದ ಬರುವ ಸರಕುಗಳಮೇಲೆ ಹಿಂದುಸ್ಥಾನದಲ್ಲಿ ತೆರಿಗೆ ಹೆಚ್ಚಾದರೆ! ಪರದೇಶದ ವ್ಯಾಪಾರಸ್ಥರಿಗೆ ಹಾನಿಯಾಗುವದಿಲ್ಲವೇ ? ಇಂಗ್ಲಂಡದ ಪ್ರಜರು ಈ ಹೊಸಕರಗಳಿಗೆ ಆನಂದದಿಂದ ಒಪ್ಪಿದ್ದಾರೆ ! ಭಾರತೀಯರಿಗೆ ಹೀಗೆ ತೆರಿಗೆ ಒಪ್ಪುವ ಪ್ರಸಂಗವು ಬರುವದೇ ಇಲ್ಲ. ಯಾಕಂದರೆ ಯಾವ ಸರಕಿನಮೇಲೆ ನಾವು ಹೊಸ ಕರವನ್ನು ಏರಿಸಲಿಚ್ಛಿಸುವೆವೋ ಅವು ಸರಕಾರಕ್ಕೆ ರುಚಿಸವು ! ಅರ್ಥಾತ್ ಸರಕಾರಕ್ಕೆ ಇಷ್ಟವಿದ್ದರು ಪ್ರಜೆಗಳಿಗೆ ಸರಿದೋರದು ! ಈ ಎರಡೂ ಚಿತ್ರಗಳನ್ನು ಭಾರತೀಯರು ಚನ್ನಾಗಿ ಪರೀಕ್ಷಿಸಿ ನೋಡಬೇಕು !

ಕೌನ್ಸಿಲುಗಳಲ್ಲಿ ಹುರುಳಿಲ್ಲೆಂಬುದು, ಅಲ್ಲಿ ಕೆಲಸಮಾಡುವ ಮಹನೀಯರಿಗೂ ಕಂಡು ಬರಹತ್ತಿದೆ. ಕಾಂಗ್ರೆಸದ ಅಧ್ಯಕ್ಷರಾದ ಶ್ರೀ. ಶ್ರೀನಿವಾಸ ಅಯ್ಯಂಗಾರರವರು ಅಸೆಂಬ್ಲಿಯ ಕೆಲಸ ಮುಗಿಸಿಕೊಂಡು ತಿರುಗಿ ಬರುವಾಗ್ಗೆ ಕಲಕತ್ತೆಯಲ್ಲಿ ಇದೇ ಆಶಯದ ಭಾಷಣವನ್ನು ಮಾಡಿರುವರು. ಹಾಗೂ ಮುಂದಿನ ಕಾರ್ಯಕ್ರಮದ ರೂಪರೇಷೆಯನ್ನು ಹಾಕಿರುವರು. ಹಳ್ಳಿಗಳ ಶಿಕ್ಷಣ, ಜಾತಿತತ್ವದಮೇಲೆ ನಡೆಯುವ ಚುನಾವಣೆಯ ಸದೋಷತೆ, ಹಿಂದು ತರುಣರ ಸಂಘಟನೆ, ರಾಷ್ಟ್ರೀಯ ತಿಥಿ ಹಾಗೂ ವಾರವನ್ನು ಪಾಲಿಸುವಿಕೆ ಎಂದು ಮುಂತಾದ ತಮ್ಮ ಕಾರ್ಯಕ್ರಮವನ್ನು ವಿಚಾರಿಸುವಬಗ್ಗೆ ಅವರು ಕೆಲವು ದಿನಗಳಲ್ಲಿ ರಾಷ್ಟ್ರ ಮುಖಂಡರ ಸಭೆ ಕರೆಯುವವರಿದ್ದಾರೆ. ಈ ಕಾರ್ಯವು ಯಶಸ್ವೀಯಾಗಲೆಂದು ಹಾರೈಸುತ್ತೇವೆ.

ವಾಙ್ಮಯ ಪರಿಚಯ
ಆಯುರ್ವೇದ.

ಈ ಮಾಸಪತ್ರಿಕೆಯ ೧ ನೇ ವರ್ಷವು ಮುಗಿದು, ೨ನೇ ವರ್ಷದ ೧ ನೇ ಸಂಚಿಕೆಯು ಕೈಸೇರಿದೆ. ಕನ್ನಡದಲ್ಲಿ ಈ ಬಗೆಯ ವ್ಯಾಪಾರವು ಉದ್ದಿಮೆಗಳ ಪತ್ರಗಳು ವಿಶೇಷವಾಗಿಲ್ಲ. ಇಂತಹ ಕಾಲದಲ್ಲಿ ' ಆಯುರ್ವೇದ' ವು ಕನ್ನಡಿಗರ ಸೇವೆಗಾಗಿ ೨ ನೇ ವರ್ಷದಲ್ಲಿಯೂ ಜೀವಂತವಾಗಿದ್ದುದು ಸಂತೋಷದ ಸುದ್ದಿಯಲ್ಲವೇ? ಆಯುರ್ವೇದಾಭಿಮಾನಿಗಳಾದ ಕನ್ನಡಿಗರು ಈ ಪತ್ರಿಕೆಗೆ ಅವಶ್ಯವಾಗಿ ಆಶ್ರಯನನ್ನೀಯಬೇಕು

ಸಾಂಗಲಿಯ ಪ್ರಜಾ ಪರಿಷತ್ತು.

[ನಮ್ಮ ಸುದ್ದಿಗಾರರಿಂದ]

ಈ ಇಪ್ಪತ್ತನೆಯ ಶತಮಾನದ ಪ್ರಜಾ ಸ್ವಾತಂತ್ರ್ಯದ ನವಯುಗದಲ್ಲಿ, ಆಳರಸರ ಬಾದಶಾಹಿ ಅಧಿಕಾರ ಎದ್ದಲ್ಲೆಲ್ಲ ಪ್ರಜರು ತಮ್ಮ ಸ್ವಾತಂತ್ರ್ಯದ ಹಕ್ಕಿಗೊಸ್ಕರ ಹೆಣಗುತ್ತಿರುವರಷ್ಟೇ? ಅಂತೆ ನಮ್ಮ ಈ ಬ್ರಿಟಿಶ್ ಹಿಂದುಸ್ಥಾನದಲ್ಲಿ ಈ ಪ್ರಯತ್ನವು ಎಷ್ಟೋ ವರುಷಗಳಿಂದ ನಡೆದಿದ್ದರೂ, ದೇಶಿಯ ಸಂಸ್ಥಾನಗಳಲ್ಲಿ ಇತ್ತೀಚಿನ ನಾಲ್ಕಾರು ವರುಷಗಳಿಂದ ಈ ಸ್ವಾತಂತ್ರ್ಯ ಗಾಳಿಯು ಬೀಸತೊಡಗಿದೆ. ಈ ಗಾಳಿಯ-ಚಳವಳಿಯ-ದ್ಯೋತಕವೇ ಸಾಂಗಲೀ ಸಂಸ್ಥಾನದ ಪ್ರಜಾ ಪರಿಷತ್ತೆಂದು ಹೇಳಬಹುದು

ಸಾಂಗಲಿ ಸಂಸ್ಥಾನದಲ್ಲಿ ಸನ್ ೧೯೩೪ ರಿಂದ ಪ್ರಜಾ ಪರಿಷತ್ತುಗಳು ನೆರೆಯುತ್ತಿದ್ದು, ಈ ವರುಷದ ಐದನೆಯ ಸಭೆಯು ಕಳೆದ ಮಾರ್ಚ ೩೬-೨೭ ನೆಯ ತಾರೀಖಿನ ದಿವಸ ಕೂಡಿತ್ತು. ಈ ಸಭೆಗೆ ಬ್ರಿಟಿಶ್ ರಾಜಕಾರಣದಲ್ಲಿ ನುರಿತ ಪುಣೆಯ ಶ್ರೀ. ಭೋಪಟಕರರು ಅಧ್ಯಕ್ಷರಾಗಿದ್ದರಿಂದ ಕಾರ್ಯವು ಒಳ್ಳೇ ಯಶಸ್ವಿಯಾಗಿ ಕೊನೆಗಾಣಿತು. ಅಧ್ಯಕ್ಷೋಪಾಧ್ಯಕ್ಷರ ಭಾಷಣಗಳು ಗಂಭೀರವೂ, ಮನನೀಯವೂ ಇವೆ. ಉಪಾಧ್ಯಕ್ಷರಾದ ಶ್ರೀ. ಆರವಳಿಯವರು ಹಿಂದಿನ ಪರಿಷತ್ತುಗಳ ಸಿಂಹಾವಲೋಕನವನ್ನು ಮಾಡಿದರು. ಕಳೆದ ಐದುವರ್ಷಗಳಿಂದ ಪ್ರಾಥಮಿಕ ಶಿಕ್ಷಣದಂಥ ಮಹತ್ವದ ಠರಾವು ಪ್ರತಿವರುಷ ಪಾಸಾಗುತ್ತಿದ್ದರೂ, ಪ್ರಜಾವತ್ಸಲವೆಂಬ ಹೆಸರು ಪಡೆಯಲಪೇಕ್ಷಿಸುವ ಶ್ರೀಮಂತರಿಂದ ಕಿಂಚಿತ್ಮಾತ್ರವೂ ಸುಧಾರಣೆಯಾಗಿರುವದು, ಲಾಂಛನಾಸ್ಪದವೇ ಸರಿ. ಇದರಂತೆ, ಎಷ್ಟೋ ಉಪಯುಕ್ತ ಠರಾವುಗಳಿದ್ದರೂ ಮೂಲೆಗುಂಪಾಗಿದ್ದದರಿಂದ ಸತತ ಪ್ರಯತ್ನ ಮಾಡುವದು ಅಗತ್ಯವೆಂದು ಸ್ಪಷ್ಟವಾಗಿ ಹೇಳಿದರು

ಅಧ್ಯಕ್ಷರ ಭಾಷಣವು ರಾಜಪ್ರಜರೀರ್ವರಿಗೂ ಬೋಧಪ್ರದವೂ, ಸುವಿಚಾರಯುಕ್ತವೂ, ಪರಿಣಾಮಕರವೂ ಆಯಿತೆಂದು ಹೇಳಬಹುದು. ಪ್ರಜರ ಸುಖದುಃಖಗಳೇ ಅರಸರ ಸುಖದುಃಖಗಳೆಂಬ ತತ್ವವು ಅವರ ಭಾಷಣದಲ್ಲಿ ತುಂಬ ತುಳುಕತ್ತಿತ್ತು. ಯಾರ ಕಲ್ಯಾಣಕ್ಕೋಸ್ಕರ ಅರಸನು ನರರಲ್ಲಿ ಹುಟ್ಟಿ ನರೇಂದ್ರನಾಗಿರುತ್ತಾನೋ, ಯಾರಿಂದ ಆತನಿಗೆ ಧನಮಾನಗಳು ದೊರೆಯುತ್ತವೆಯೋ ಅಂತಹ ಪ್ರಜರ ಅನುಮತಿಯಿಂದ ರಾಜ್ಯಭಾರವನ್ನು ಸಾಗಿಸುವದು ಹಿತವು. ಆದರೆ, ಎಷ್ಟೋ ಅರಸರು ಇದು ತಮ್ಮ ಪೂರ್ವಾರ್ಜಿತ ಆಸ್ತಿಯೆಂದು ತಿಳಿದು, ಅಹಮ್ಮನ್ಯತೆಯಿಂದ ವರ್ತಿಸಿ, ಪ್ರಜಾದ್ರೋಹಕ್ಕೆ ಒಳಗಾಗುವರಲ್ಲದೆ, ಕಾಲಾಂತರದಿಂದ ಸಾಮ್ರಾಜ್ಯ ಸರಕಾರದ ಅನಾದರಕ್ಕೂ ಈಡಾಗುವರೆಂದು ಹೇಳಬಹುದು? ಕಾರಣ ಸಂಸ್ಥಾನಿಕರು ಮುಂಜಾಗ್ರತೆಯಿಂದ ನಡೆದು ಭವಿಷ್ಯಕಾಲದ ಕಡೆಗೆ ಚಿತ್ತಕೊಟ್ಟು ಪ್ರಜಾ ಸ್ವಾತಂತ್ರ್ಯವನ್ನು ಕ್ರಮಕ್ರಮೇಣ ಕೊಡುತ್ತಾ ಪ್ರಜಾಬೆಂಬಲವನ್ನು ಕಾಯ್ದುಕೊಳ್ಳುವ ಸಮಯ ಬಂದಿರುತ್ತದೆಂಬುದನ್ನು ಅಧ್ಯಕ್ಷರು ವಿವರವಾಗಿ ಹೇಳಿದರು. ಹೀಗೆ ಪ್ರಜರಿಗೆ ಹಲಕೆಲವು ಅಧಿಕಾರಗಳನ್ನಿತ್ತು, ಅವರ ಸಹಾನುಭೂತಿಯನ್ನು ಪಡೆಯುವದೇ, ಜಾಣರ ಲಕ್ಷಣವೆಂದು ಹೇಳಬಹುದು. ಯಾಕೆಂದರೆ, ಈ ಪ್ರಜರು ತಮ್ಮ ಜನ್ಮಸಿದ್ಧ ಹಕ್ಕಿಗೋಸ್ಕರ ವಿನಂತಿಯನ್ನು ಮಾಡಿಕೊಳ್ಳುವ ಸಮಯವು ಮುಗಿದು ಸ್ವಪ್ರಯತ್ನದಿಂದಲ್ಲಿ ಸ್ವಾತಂತ್ರ್ಯವನ್ನು ಒತ್ತಾಯದಿಂದ ಕಸಿದುಕೊಳ್ಳುವ ಕಾಲಬರುವದೆಂದು ಊಹಿಸಿದರೆ, ತಪ್ಪಾಗಲಿಕ್ಕಿಲ್ಲ!

ಈ ಪರಿಷತ್ತಿನಲ್ಲಿ ಮೊದಲು ಸಾರ್ವಭೌಮ ಸರಕಾರದ ಮತ್ತು ಶ್ರೀಮಂತರ ಕಲ್ಯಾಣವನ್ನು ಚಿಂತಿಸಿ ಅನಂತರ ಪ್ರಾಥಮಿಕ ಶಿಕ್ಷಣ. ಪ್ರತಿಯೊಂದು ಬಾವಿಯಲ್ಲಿ ಜಾತಿಭೇದ ನೋಡದಿರುವದು, ಆಯುರ್ವೇದಿಯ ಔಷಧಾಲಯ ಸ್ಥಾಪನೆ. ಮದ್ಯಪಾನ ಪ್ರತಿಬಂಧ, ಮುದ್ರಣ ಸ್ವಾತಂತ್ರ್ಯ ಮತ್ತು ವೋಂಟಮಾರ್ಡ ಸುಧಾರಣೆಯಂತೆ ಜವಾಬದಾರಿಯ ಆಡಳಿತೆಯನ್ನು ಆರಂಭಿಸುವದು. ಇತ್ಯಾದಿ ಅತ್ಯುಪಯುಕ್ತ ೧೭-೧೮ ಠರಾವುಗಳು ಒಂದೇ ಮತದಿಂದ ಪಾಸಾಗಿ ಒಂದು ಕಾರ್ಯಕಾರಿ ಮಂಡಳವಾದರೂ ಏರ್ಪಟ್ಟಿತು.

ಇರಲಿ ಇಂತು ಜನತಾಜನಾರ್ದನನ ಸೇವೆ ಮಾಡುವದೇ ನಿಜವಾದ ಧ್ಯೇಯವೆಂದು ನಂಬಿ, ಪ್ರಜಾಪ್ರೇಮವನ್ನು ಸಂಪಾದಿಸಲು ಈಗಿನ ಪ್ರಗಮನಶೀಲ ಶ್ರೀ. ಅಪ್ಪಾಸಾಹೇಬರು ಪ್ರಜಾಪರಿಷತ್ತಿಗೆ ಮನ್ನಣೆಗೊಡುವದು ಅವಶ್ಯವು. ಮತ್ತು ಪ್ರಜೆಗಳಾದರೂ ತಮ್ಮ ಜನ್ಮಸಿದ್ಧ ಸ್ವಾತಂತ್ರ್ಯ ಹಕ್ಕನ್ನು ಶ್ರೀಮಂತರಿಂದ ದೊರಕಿಸಿಕೊಳ್ಳಲಿಕ್ಕೆ ಎಡೆಬಿಡದೆ ಹೆಣಗಾಡುವದು ಅತ್ಯವಶ್ಯವು.

ಬೆಳಗಾಂವಿ ಜಿಲ್ಹೆಯ ಪತ್ರ.

[ನಮ್ಮ ಸ್ವಂತ ಸುದ್ದಿಗಾರರಿಂದ]

ಮಹಾತ್ಮಾ ಗಾಂಧಿಯವರು ವಿಶ್ರಾಂತಿಗಾಗಿ ಒಂದು ವಾರದವರೆಗೆ ಇಲ್ಲಿ ಹಿಂಡಲಗಿಯಲ್ಲಿಯೇ ಇರುವರೆಂಬ ವಾರ್ತೆಯಿದೆ.

ಮಹಾತ್ಮರ ಖಾದಿಯ ಕಾರ್ಯಕ್ಕಾಗಿ ಬೆಳಗಾಂವಿ ಜಿಲ್ಹೆಯವರು ಸುಮಾರು ೩೦ ಸಾವಿರ ರೂಪಾಯಿ ಕೂಡಿಸತಕ್ಕವರೆಂದೂ ಇದರಲ್ಲಿ ಅರ್ಧ ಹಣವನ್ನು ಕೇವಲ ನಿಪ್ಪಾಣಿಯವರೇ ಕೊಡುವರೆಂದೂ ಕೇಳಿಕೆಯಲ್ಲಿದೆ. ದ್ರವ್ಯನಿಧಿಯನ್ನು ಕೂಡಿಸುವ ಕಾರ್ಯವು ಉತ್ಸಾಹದಿಂದ ಸಾಗಿದೆ.

ಬೆಳಗಾಂವಿಯಲ್ಲಿ ಅಸ್ಪೃಶ್ಯ ವರ್ಗದ ವಿದ್ಯಾರ್ಥಿಗಳಸಲುವಾಗಿ ಒಂದು ವಸತಿಗೃಹ (ಬೋರ್ಡಿಂಗ) ವನ್ನು ಸ್ಥಾಪಿಸುವದು ಅವಶ್ಯವಾಗಿದೆ ಯೆಂಬುದನ್ನು ಮಹಾತ್ಮರಿಗೆ ತಿಳಿಸುವದಕ್ಕಾಗಿ ಅಸ್ಪೃಶ್ಯ ವರ್ಗದ ಮುಂದಾಳುಗಳ ಶಿಷ್ಟಮಂಡಳವು ಸಿದ್ಧವಾಗಿದೆ.

ಇಲ್ಲಿಯ ಲೋ. ಬೋ. ವ್ಯಾಜ್ಯವು ಹೈಕೋರ್ಟಿಗೆ ಹೋಗಿದ್ದು ಎಪ್ರಿಲ್ ೧೨ನೇ ತಾರೀಖಿಗೆ ವಿಚಾರ ವಾಗತಕ್ಕದ್ದಿದೆ. ಮಧ್ಯದಲ್ಲಿ ತಹಕೂಬಿಯ ಹುಕುಂ ದೊರೆಯದ್ದರಿಂದ ರಾ. ಬಾ. ಅಂಗಡಿ ಪಕ್ಷದವರು ಕಳೆದ ೩೧ ನೇ ತಾರೀಖಿಗೆ ಹೊಸ ಸ್ಕೂಲ ಬೋರ್ಡ ಚುನಾವಣೆಯನ್ನು ಮಾಡಿದರು. ಹೈಕೋರ್ಟಿನ ನಿರ್ಣಯವನ್ನು ನೋಡಿ ಮಾಡಿದ್ದರೆ ನೆಟ್ಟಗಾಗುತ್ತಿತ್ತು.

ಮಾರ್ಚ ೩೧ನೇ ತಾ॥ ದಿವಸ ಲೋ. ಬೋ. ಕಮೀಟಿಯಲ್ಲಿ ರಾ. ಬಾ ಅಂಗಡಿ ಪಕ್ಷದವರು ಬಹುಮತಾಧಿಕ್ಯವನ್ನು ದೊರಕಿಸಿ ಹೊಸದಾಗಿ ಪ್ರಾರಂಭಿಸಿದ ಶಾಲೆಗಳಲ್ಲಿ ೭೫ ಶಾಲೆಗಳಿಗೂ ೧೦೦ ಆಸೋರಿಗೂ ಖರ್ಚಿನ ಹಣದ ಮಂಜೂರಿಯನ್ನು ಮಾಡಲಿಲ್ಲ ಒಬ್ಬರು ರಂಗವಲ್ಲಿಯನ್ನು ಹಾಕುತ್ತ ಸಾಗುವರು ಇನ್ನೊಬ್ಬರು ಅಳಿಸುತ್ತ ಸಾಗುವರು ಒಟ್ಟಿನ ಮೇಲೆ ಸಾರ್ವಜನಿಕ ಪ್ರಗತಿಗೆ ಸೊನ್ನೆ!

ಇಂಗ್ಲಿಷ ಶಾಲೆಯಲ್ಲಿ ಹುಡುಗರನ್ನು ಮೇಲೆ ಹಾಕುವ ಬಗ್ಗೆ ಈಸಾರೆ ಕಠಿಣ ತರದ ನಿಬಂಧನೆಯನ್ನು ಹೊರಡಿಸಿದ್ದ ಸರ್ವಶ್ರುತವಷ್ಟೆ? ಅದರಲ್ಲಿ ಬದಲಾವಣೆ ಯಾಗಬೇಕೆಂಬ ಇಲ್ಲಿಯ ಇಂಗ್ಲಿಷ ಶಾಳಾ ಮಾಸ್ತರರೆಲ್ಲರು ಮೆ॥ ನವರಂಗಾಣಿ ಸಾ॥ ಎ ಇ. ದ. ಭಾಗ ಇವರನ್ನು ಇಲ್ಲಿಗೆ ಬಂದಾಗ ಕೇಳಿದರು ಅದಕ್ಕೆ ಸಾಹೇಬರವರು ಒಪ್ಪಿರುವರೆಂಬ ಸುದ್ದಿ!

ವಿಜಾಪೂರ ಜಿಲ್ಹೆಯ ನೆರೆಗು ನಮ್ಮ ಜಿಲ್ಹೆಯ ಪೂರ್ವದ ಅಥಣಿ, ಗೋಕಾಕ, ರಾಯಬಾಗ ... ಹತ್ತಿರದ ಈ ತಾಲೂಕುಗಳಲ್ಲಿ ... ಬರ್ದಕ್ಷವು ... ಅಥಣಿಯ ... ಸೀಯನ ಅಲ್ಲನ್ನು ... ದಾನಪ್ಪರೆ.

ಭಾರತೀಯ ಸ್ತ್ರೀಯರ ಪಾತಿವ್ರತ್ಯಕ್ಕಾಗಿ ಹೋರಾಡಿದ- ಕೆಚ್ಚೆದೆಯ ಗೂರ್ಖಾ ತರುಣ

ಖಿರಗ್ ಬಹದ್ದೂರಸಿಂಗ್.

(ಬರೆದವರು:- ಆ. ನ. ಮೂರ್ತಿ, ಬಿ. ಎ)

ಖಿರಗ್ ಬಹದ್ದೂರ್‌ಸಿಂಗರ ವಿಚಾರವು ಈ ಕೆಳಗೆ ಕಾಣ ಬರುವ ಅವರ ಸ್ವಂತ ಹೇಳಿಕೆಯಿಂದ ತಿಳಿಯಬರುತ್ತದೆ. ತಮ್ಮ ಸಹೋದರಿಯ ಮಾನಭಂಗಮಾಡಿದವರಿಗೆ ಪ್ರತೀಕಾರ ಮಾಡ ಲೆಣಿಸಿ ಖಿರಗ್ ಬಹದ್ದೂರರು ಕಲ್ಕತ್ತೆಯಲ್ಲಿದ್ದ ಮಾರ್ವಾಡಿ ವರ್ತಕ ಹೀರಾಲಾಲ ಅಗರವಾಲನನ್ನು ತಾ|| ೨೬-೨-೧೯೩೨ ರಲ್ಲಿ ಕತ್ತಿಯಿಂದ ಹೊಡೆದು ಕೊಂದರು. ಈ ಬಗ್ಗೆ ವಿಚಾರಣೆ ನಡೆದು ಮಾರ್ಚ ೨೨ ನೇ ತಾ|| ನ ದಿನ ಕಲಕತ್ತಾ ಹೈಕೋರ್ಟ ಸಬ್ ಜಡ್ಜಿಯವರಾದ ಜಸ್ಟಿಸ್ ಗ್ರಿಗರಿ ಸಾಹೇಬರು ಇವರಿಗೆ ಎಂಟು ವರ್ಷ ಕಠಿಣ ಸಜ ವಿಧಿಸಿರುವರು. ಶಿಕ್ಷೆಯ ಔಚಿತ್ಯವನ್ನೂ, ಕಾಠಿಣ್ಯವನ್ನೂ ಓದುಗರೇ ಗಣಿಸಿಕೊಳ್ಳಬಹುದು.

ಇವರಿಗೆ ಕೊಟ್ಟಿರುವ ಶಿಕ್ಷೆಯು ಬಹು ಕ್ರೂರವಾಗಿದೆ ಎಂದೂ, ಇವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದೂ ಬಂಗಾಲ ಗವರ್ನರ್ ಸಾಹೇಬರಿಗೆ ಅನೇಕರು ಅರ್ಜಿ ಕಳುಹಿಸಿದ್ದಾರೆ. ಕಲ್ಕತ್ತೆಯ ಎಲ್ಲ ಮತಗಳ ಪ್ರಮುಖ ಸ್ತ್ರೀಯರು ಒಂದಾಗಿ ಹೋಗಿ, ಬಂಗಾಲ ಸರಕಾರದ 'ಹೋಂ ಮೆಂಬರ' ರನ್ನು ಕಂಡು, ಖಿರಗ್ ಬಹದ್ದೂರರ ಶಿಕ್ಷೆಯನ್ನು ಕಡಿಮೆ ಮಾಡಲು ಕೇಳಿಕೊಂಡಿರುತ್ತಾರೆ. ಕಲಕತ್ತಾ ನಗರದ ಅಲ್ಬರ್ಟ ಹಾಲಿನಲ್ಲಿ ಪಟ್ಟಣಿಗರು ಪ್ರಚಂಡ ಸಭೆ ಸೇರಿ ಅನೇಕ ರೀತಿಯ ಕಷ್ಟಗಳಿಗೆ ಒಳಪಡುತ್ತಿರುವ ಸ್ತ್ರೀ ಜನರ ಮಾನವನ್ನು ಕಾಪಾಡಲು ತಕ್ಕ ಸಂಘಗಳನ್ನೂ, ತರುಣರ ಕರ್ತವ್ಯವನ್ನೂ ಗೊತ್ತು ಮಾಡಿದರು. ಕಾಂಗ್ರೆಸ್ಸಿನ ಮುಂದಾಳುಗಳಾಗಿ ಖಿರಗ್ ಬಹದ್ದೂರರನ್ನು ಬಿಡುಗಡೆ ಹೊಂದಿಸಲು ಯತ್ನಿಸುತ್ತಿದ್ದಾರೆ. 'ಅಮೃತಬಜಾರ್ ಪತ್ರಿಕೆ' ಮುಂತಾದ ಪ್ರಸಿದ್ಧ ದಿನಚರಿ ಪತ್ರಿಕೆಯವರು ಅತ್ಯುತ್ತಮ ಅಗ್ರಲೇಖನಗಳನ್ನು ಬರೆದು ಖಿರಗ್ ಬಹದ್ದೂರರನ್ನು ಅವತಾರ ಪುರುಷರಿಗೆ ಹೋಲಿಸಿ, ಅಧಿಕಾರಿಗಾರರು ಅವರನ್ನು ಬಿಡಲೇಬೇಕೆಂದು ವಿನ್ನವಿಸಿಕೊಂಡಿರುತ್ತಾರೆ. ದೇವರು ಇವರೆಲ್ಲರ ಪ್ರಯತ್ನಗಳನ್ನೂ ಸಫಲಗೊಳಿಸಲೆಂದು ನಮ್ಮ ಪ್ರಾರ್ಥನೆ.

ಖಿರಗ್ ಬಹದ್ದೂರರು ಜಡ್ಜಿಯವರ ಮುಂದೆ ಕೊಟ್ಟ ಹೇಳಿಕೆ:-

ಕಲಕತ್ತೆಯ ಹೀರಾಲಾಲ್ ಅಗರ್‌ವಾಲ್ ಎಂಬಾತನನ್ನು ಖೂನಿಮಾಡಿದೆನೆಂಬ ಆಪಾದನೆಯ ಮೇಲೆ ಈ ದಿನ ಇಲ್ಲಿ ನಿಲ್ಲಿಸಲ್ಪಟ್ಟಿರುತ್ತೇನೆ. ೧೯೩೧ ನೇಯ ಇಸ್ವಿಯಷ್ಟು ಮುಂಚೆಯೇ, ಇನ್ನೂ ನನ್ನ ಹದಿಮೂರು ವರ್ಷ ವಯಸ್ಸಿನಲ್ಲಿಯೇ ನಾನು ನಮ್ಮಲ್ಲಿ ರೂಢಿಯಾಗಿರುವ ಮಾಂಸಾಹಾರವನ್ನು ಬಿಟ್ಟು ಶಾಕಾಹಾರವನ್ನೇ ತೆಗೆದುಕೊಳ್ಳಲು ಆರಂಭಿಸಿದೆನು. ಕೇವಲ ಬಾಲ್ಯದಿಂದಲೂ ನಾನು ಅಹಿಂಸೆಯನ್ನು ಆಚರಿಸಲು ಪ್ರಯತ್ನಿಸುತ್ತಿದ್ದು, ಮಹಾತ್ಮಾ ಗಾಂಧೀಜಿಯವರು ಬೋಧಿಸಿದ ಅಹಿಂಸಾತತ್ವಕ್ಕೆ ಸ್ವಾಭಾವಿಕವಾಗಿಯೇ ಮನಸೋತೆನು. ಇಂತಹ ನಾನು ಖೂನಿಮಾಡಿದನೆಂಬ ಆಪಾದನೆಯಿಂದ ಕಾಪಾಡಿಕೊಳ್ಳಬೇಕಾಗಿ ಒಂದುವೃದು ಆಶ್ಚರ್ಯವನ್ನೂ, ಅಪನಂಬಿಕೆಯನ್ನೂ ಉಂಟುಮಾಡಬಹುದು. ಆದರೆ, ಬಹುಸ್ವಲ್ಪ ಅವಕಾಶದಲ್ಲಿಯೇ ನಾನು ಅಹಿಂಸಾವ್ರತವನ್ನು ಬಿಟ್ಟು ಗೊತ್ತಿ, ಮೇಲೆಮಾತ್ರ ನೋಡುವವರಿಗೆ ಹಿಂಸೆಯಂತೆ ಕಂಡು ಬರುವ ಈ ದಿನ ನನ್ನ ನಡೆವಳಿಗೆ ಎಡೆಗೊಟ್ಟುದಕ್ಕೆ, ಕೂಡಿ ಬಂದ ಕಾರಣಗಳನ್ನು ತಿಳಿದರೆ ನನ್ನ ನಡವಳಿಕೆಯು ವಿಚಿತ್ರವೆನಿಸಲಾರದು. ಈ ಕಾರಣಗಳನ್ನು ವಿಶದಪಡಿಸುವ ಮುಂಚೆ ನನ್ನ ಈ ವರೆಗಿನ ವಿಚಾರಗಳನ್ನೂ, ಈಗ ನಾನು ಮಾಡುತ್ತಿರುವ ಕೆಲಸ ಕಾರ್ಯವನ್ನೂ ಸ್ವಲ್ಪಮಟ್ಟಿಗೆ ತಿಳಿಸುವೆನು.

ಸಂಯುಕ್ತ ಸಂಸ್ಥಾನಕ್ಕೆ ಸೇರುವ ಡೆಹರಾಡೂನ್ ಎಂಬಲ್ಲಿ, ಒಂದು ಆಣೆಕಾರ ಗೂರ್ಖಾಮನೆತನದಲ್ಲಿ ಹುಟ್ಟಿ, ಡೆಹರಾಡೂನಿನಲ್ಲಿಯೇ ನಾನು ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಉತ್ತೀರ್ಣನಾದೆನು. ಢಾಕಾದಲ್ಲಿ 'ಇಂಟರ್ ಮೀಡಿಯೆಟ್ ಎಗ್ಜಾಮಿನೇಶನ್ ಇನ್ ಕಾಮರ್ಸ' ಪರೀಕ್ಷೆಯಲ್ಲಿ ಮೊದಲನೆಯವನಾಗಿ ತೇರ್ಗಡೆ ಹೊಂದಿ, ಕಳೆದವರ್ಷ ಕಲಕತ್ತಾ ವಿಶ್ವವಿದ್ಯಾಲಯದ ಬಿ. ಎ. (ಕಾಮರ್ಸ) ಪರೀಕ್ಷೆಯಲ್ಲಿಯೂ ಮೊದಲನೇಯವನಾಗಿಯೇ ಜಯ ಹೊಂದಿದೆನು.

ಖೂನಿ ಮಾಡಿದಾಗ ನಾನು ಕಲಕತ್ತೆಯ ಗೂರ್ಖಾಸಂಘದ ಕಾರ್ಯದರ್ಶಿಯ ಕೆಲಸ ನೋಡುತ್ತಿದ್ದೆನು. ಆತ್ಮಗೌರವವುಳ್ಳ ಪ್ರತಿವ್ಯಕ್ತಿಯೂ ತನ್ನ ತಾಯಿಯರಲ್ಲಿ ತೋರಿಸಬೇಕಾದ ಕರ್ತವ್ಯವು ಯಾವುದಾಗಿರಬೇಕೆಂಬುದರ ವಿಚಾರವಾಗಿ ನನ್ನ ಸ್ವಂತ ಅಭಿಪ್ರಾಯವನ್ನು ತಿಳಿಸಲು ಈಗ ನನಗೆ ಅವಕಾಶ ಒದಗಿದೆ.

ರಾಜ ಕುಮಾರಿಯ ವಿಚಾರವು ವರ್ತಮಾನ ಪತ್ರಿಕೆಗಳಲ್ಲಿ ಬಂದಾಗ ನಮ್ಮ ಸಂಘದವರು ಅದಕ್ಕೆ ನಿಗಾಕೊಟ್ಟರು. ವಿಷಯಗಳನ್ನು ಸಂಗ್ರಹಿಸಲು ಕಾರ್ಯದರ್ಶಿಯಾದ ನಾನು ಪ್ರಾರಂಭಿಸಿದೆನು ಹುಡುಗಿಯನ್ನು ಪತ್ತೆಮಾಡಿದೆನು. ರಾಜ ಕುಮಾರಿಯ ಬಾಯಿಂದಲೇ- ಕ್ರಮೇಣವಾಗಿ- ಅವಳಿಗೆ ಉಂಟಾದ ಅಸಹ್ಯವಾದ, ಕ್ರೂರವಾದ, ವಿವರಗಳಲ್ಲಿ ಅತಿಹೀನವಾದ ಮಾನಭಂಗ, ಅತ್ಯಾಚಾರಗಳ ಕತೆಯನ್ನು ಕೇಳಿದೆನು. ಅದನ್ನು ನೆನೆಸಿಕೊಂಡರೆ ನಾನು ಈಗಲೂ ನಿದ್ದೆಯಲ್ಲಿದ್ದರೂ ಬೆಚ್ಚಿ ಬೀಳುತ್ತೇನೆ; ನನ್ನ ಬುದ್ಧಿಯು ಭ್ರಮಿಸಿಹೋಗುತ್ತದೆ.

ಆ ಪಾಶವೀ ಕೃತ್ಯದ ಬಹುಸ್ವಲ್ಪಭಾಗವು ನ್ಯಾಯಸ್ಥಾನದ ಎದುರಿಗೆ ತಿಳಿಸಲ್ಪಟ್ಟಿದೆ. ಉಳಿದುದನ್ನು ನಾನು ಸೇರಿಸಿರುವದಿಲ್ಲ. ಮಾನಮರ್ಯಾದೆಗಳ ದೃಷ್ಟಿಯಿಂದ ಎಲ್ಲವನ್ನೂ ಹೇಳಲಾಗುವಂತಿಲ್ಲ ಮುಂದಿನ ತಿಳಿವಳಿಕೆಯಾಗಲು ಇಷ್ಟು ಹೇಳುತ್ತೇನೆ. ಏನಂದರೆ, ಕಲಕತ್ತೆ ಮತ್ತು ಇತರ ಕಡೆಗಳಲ್ಲಿ, ಉಪಪನ್ನರಾಗಿಯೂ, ಗೌರವಾರ್ಹರಂತೆಯೂ ಇರುವ ಹಲವರು ಸಮಾಜದಲ್ಲಿ ತಮಗಿರುವ ಗೂಢಸ್ಥಿತಿಕೆಯಿಂದ ತಮ್ಮ ವಿಚಾರವಾಗಿ ಒಂದು ಶಬ್ದವು ಹುಟ್ಟಲು ಅನುವಿಲ್ಲವಾಗಿ, ಹೀರಾಲಾಲನಿಗೆ ಈ ನೀಚ ಕೃತ್ಯದಲ್ಲಿ ಮುಖ್ಯ ಸಹಾಯಕರಾಗಿರುತ್ತಾರೆ. ಅವರುಗಳ ಸಮಾಚಾರವೂ ನಮಗೆ ಚನ್ನಾಗಿ ಗೊತ್ತಾಗಿದೆ. ಪೂರ್ತಿಯಾಗಿ ತಿಳಿದಿದೆ. ಸದ್ಯಕ್ಕೆ, ತಮ್ಮ ಮೇಲೆ ಏನೂ ಪ್ರಸಂಗ ಬರಲಿಲ್ಲವೆಂದು ಅವರು ಹಿಗ್ಗದಿರಲಿ. ಧರ್ಮೋರ್ಬದ್ಧವಾದ ನಮ್ಮ ಜನರ ರೋಷಾವೇಶವು ನುಗ್ಗಿ ಹೋಗಿ, ಸರಿಯಾದ ವಿಚಾರಣೆಯಾಗಿ, ಅವರ ಹೆಸರುಗಳು ಬಯಲಿಗೆ ಬರುವ ಕಾಲವು ಸಮೀಪಿಸಿದೆ ಎಂದು ಅವರು ನೆನಸಿನಲ್ಲಿಡಲಿ.

(ಮುಂದೆ ಸಾಗುವದು.)

ಪಾರ್ವತೀಪುರದಲ್ಲಿ ನಡೆದ ಕುಂಭ ಮೇಳದ ಪ್ರಚಂಡ ಜಾತ್ರೆಯ ಕಾಲದಲ್ಲಿ ಬೆಂಕಿ ತಗಲಿ ಕೆಲವು ಅಂಗಡಿಗಳು ಸುಟ್ಟವು! ಭಯಂಕರವಾದ ದೆವ್ವದ ಗಾಳಿಯು ಬೀಸಿ, ಅನೇಕ ಗುಡಿಸಲುಗಳು ಹಾರಿಹೋದವು! ಗಂಗಾನದಿಯ ಸ್ನಾನಮಾಡುವ ಘಟ್ಟದ ಮೇಲೆ ಹಿಂದೂ ಜನರ ಮೇಲೆ ಆಗಿ ಅನ್ಯಜಾತೀಯರು ಆರಡಿಗೆ ಎರಗಿದರು ಅದಕ್ಕಾಗಿ ಪಂಡಿತ ಮಾಲವೀಯರು ಗವರ್ನರರಿಗೆ ತಂತಿಯಿಂದ ತಿಳಿಸಿದ್ದಾರೆ.

ನನಗೆ ಹೊಳೆದಂತೆ.

ಹುಟ್ಟಿದಾಗ್ಗೆ, ಬಡವರ ಮಗು ಎಷ್ಟುದಿನ ಬಾಳೀತೆಂದೂ, ಕನ್ನಡ ಪತ್ರಿಕೆ, ಹೊಟ್ಟೆಗಿಲ್ಲದೆ ಸಾಯುವದೆಂದೂ ಕೆಲವರಿಂದ ಅಪಹಾಸ್ಯಕ್ಕೆ ಗುರಿಯಾದ 'ಕಂಠೀರವ' ನಿಗೆ ೮ ವರ್ಷಗಳು ಪೂರ್ಣತುಂಬಿದವು! ಆನಂದ! ಕ್ಷಯ ಸಂವತ್ಸರದ ಘಟನಾವಳಿಗಳನ್ನು ಹೇಳುವಾಗ್ಗೆ, ಕಡಪಾ ರಾಘವೇಂದ್ರರಾಯರ ಮರಣದ ಸುದ್ದಿಯನ್ನೆತ್ತಲು 'ಕಂಠೀರವ' ನು ಮರೆತುದು ಹೇಗೆ?

'ಪ್ರೆಸ್ ಕಮ್ಯುನಿಕ್,' 'ಸಿಲ್ವರ ಜುಬಿಲಿ,' 'ರಿಲೀಫ ವರ್ಕ್ಸ,' 'ಇಂಡಿಯಾ,' 'ರೆವಿನ್ಯೂ' 'ಜ್ಯುಡಿಶಿಯಲ್' 'ಮಿಲಿಟರಿ' 'ಸಿವಿಲ್' ಮೊದಲಾದ ಅನಾವಶ್ಯಕ ಪಾರಿಭಾಷಿಕ ಶಬ್ದಗಳು 'ಸಾಧ್ವಿ' ಪತ್ರಿಕೆಯಲ್ಲಿ ಸಂಪಾದಕರ ಲೇಖನಗಳಲ್ಲಿ ಸಹ ವಿಚಾರವಿಲ್ಲದೇ ಉಪಯೋಗಿಸಲ್ಪಡುತ್ತವೆ! ಇದೇನು ಕನ್ನಡ ವಾಙ್ಮಯದ ಪಾವಿತ್ರ್ಯತೆಯನ್ನು ತೋರಿಸುವ ಪದ್ಧತಿಯೋ? ಅಥವಾ ಕನ್ನಡನುಡಿಯು ಶಬ್ದ ಭಾಂಡಾರವು ಬಂಜೆಯಾಗಿದೆಂದು ಜಗತ್ತಿಗೆ ಸಿದ್ಧಮಾಡಿತೋರಿಸುವ ಯುಕ್ತಿಯೋ ಇಲ್ಲವೇ ಮೈಸೂರಿನ ಕನ್ನಡದ ಶೈಲಿಯು ಬಹು ಶ್ರೇಷ್ಠವಾದುದೆಂದು ತೋರ್ಪಡಿಸುವ ಯೋಜನೆಯೋ? —ಓದುಗ.

"ಕನ್ನಡಿಗ"ನ ಬಗ್ಗೆ.

೩ ನೇ ವರ್ಷದ ೧ ನೇ ಸಂಚಿಕೆಯನ್ನೋದಿ, ಅನೇಕ ಮಹನೀಯರು ನಮಗೆ 'ಕನ್ನಡಿಗ' ನ ಉತ್ಕರ್ಷೆಯ ಬಗ್ಗೆ ಪತ್ರ ಬರೆದಿದ್ದಾರೆ. ಹಾಗೇ, ಅನೇಕ ಚಂದಾದಾರರು ನಾವು ಪ್ರಾರ್ಥಿಸಿದ ಪ್ರಕಾರ ಹೊಸ ವರ್ಗಣೀದಾರರನ್ನೂ ಕೂಡಿಸಿಕೊಟ್ಟಿದ್ದಾರೆ. ಈ ಪತ್ರಗಳನ್ನೂ, ನಮಗೆ ಅಭಿಮಾನದಿಂದ ಸಹಾಯಮಾಡಿದ ಚಂದಾದಾರರ ಹೆಸರುಗಳನ್ನೂ ಮುಂದಿನ ವಾರ ಪ್ರಕಟಿಸುವೆವು. ಸಂಪಾದಕ 'ಕನ್ನಡಿಗ'

ಸ್ವಲ್ಪೇ ವಿನೋದ!

"ಮಿತ್ರ, ನಿನ್ನ 'ಫೌಂಟನ್ ಪೆನ್ನ' ಕೊಂಚ ಕೊಡುವಿಯಾ?"

"ಓಹೋ; ತೆಗೆದುಕೊಳ್ಳಿ."

"ಎಲ! ಕಾಗದವೂ ಇಲ್ಲೇ ಇದೆಯಲ್ಲ!"

"ತೆಗೆದುಕೊಳ್ಳಿ! ಅದನ್ನೂ ತೆಗೆದುಕೊಳ್ಳಿ"

"ಪೋಸ್ಟ ಆಫೀಸಿನ ಮೇಲಿಂದಲೇ ನೀನು ತಿರುಗಾಡಲು ಹೋಗುವಿಯಷ್ಟೇ?"

"ಅಹುದು"

"ಈ ಪತ್ರವನ್ನು ಮುಗಿಸುವವರೆಗೆ ನಿಲ್ಲು; ನಿಲ್ಲುವಿಯಷ್ಟೇ?"

"ಆಗಲಿ ಸ್ವಾಮೀ."

"ಒಂದಾಣೆಯ ತಿಕೀಟು ಇದೆಯೋ?"

"ಇದೆ"

"ಬಹು ಉಪಕಾರವಾಯಿತು! ನೀನು ನೌಕರಿಯ ಬಗ್ಗೆ ಅಜೀ ಮಾಡಿರುವೆಯಲ್ಲ? ಆ ಸಾಹೇಬರ ವಿಳಾಸವೇನು?"

ಸೋಜಿಗದ ಸುದ್ದಿಗಳು.

ಮನುಷ್ಯನ ಅಂಗೈ ತೊಗಲು, ಕಣ್ಣಿನ ರೆಪ್ಪೆಯ ತೊಗಲಿನಕ್ಕಿಂತ ೭೬ ಪಟ್ಟು ದೊಡ್ಡದಿರುತ್ತದೆ.

ಕೋಡಂಗಿಯ ಗಂಟೆ ಹಾಗೂ ಟೊಪ್ಪಿಗೆ(ಕ್ಯಾಪ)ಗಳು ಮೊದಲು ಕೆಲವು ಕಾಗದಗಳ ಚಿನ್ಹವಾಗಿದ್ದರಿಂದ, ಅವಕ್ಕೆ 'ಫೂಲ್ಸ ಕ್ಯಾಪ'(ಮೂರ್ಖನ ಟೊಪ್ಪಿಗೆ) ಎಂಬ ಹೆಸರು ಬಿದ್ದಿತು!

ಬೆಂಕಿಯನ್ನು ನೊಂದಿಸಲು ನೀರಿನ ಬದಲು, ಹಿಮದ ಪೆಂಟೆಗಳನ್ನು ಜರ್ಮನಿಯಲ್ಲಿ ಉಪಯೋಗಿಸುವ ಯಂತ್ರವು ಸಿದ್ಧವಾಗಿದೆ. ಇದರಿಂದ ಅಗ್ನಿಯು ಕೂಡಲೇ ನೊಂದುವದಂತೆ!

ರಂಗಭೂಮಿಯ ಸುದ್ದಿಗಳು.

ಗಂಧರ್ವ ನಾಟಕ ಮಂಡಲಿಯು ಹುಬ್ಬಳ್ಳಿಯಲ್ಲಿ ನಡೆದ ನಾಟಕಗಳು ಕಳೆದ ಸಲದಷ್ಟು ಜನರಿಂದ ಮೆಚ್ಚಲ್ಪಟ್ಟಿಲ್ಲವಾಗಿ ತಿಳಿಯುತ್ತದೆ.

ಹಾಲಸಿದ್ಧೇಶ್ವರ ಲೋಕಸೇವಕ ನಾಟಕದವರು ಕಾರವಾರದಿಂದ ಅಂಕೋಲಿಗೆ ಬಂದಿದ್ದಾರೆ. ಕಾರವಾರದ ಮುಕ್ಕಾಂ ಯಶಸ್ವಿಯಾಯಿತು.

ಗಂಧರ್ವ ಕಂಪನಿಯು ಹುಬ್ಬಳ್ಳಿಯಲ್ಲಿದ್ದರೂ, ಗರುಡರು ಸಹ ಅಲ್ಲಿಯೇ ಮೂರುವಾರ ಕಳೆದರು! ಗಂಧರ್ವ ಕಂಪನಿಯು ಇದ್ದ ಊರಲ್ಲಿಯೇ ಇರಲು ಸಾಹಸಮಾಡಿದ ಕನ್ನಡ ಕಂಪನಿಯೆಂದರೆ ಇದೊಂದೇ. ಬಾಗಲಕೋಟೆಗೆ ಗರುಡರು ಬರುವರಾಗಿ ವದಂತಿಯಿದೆ.

ಗಂಧರ್ವ ನಾಟಕ ಮಂಡಳಿಯ ಮಾಸ್ತರ ಕೃಷ್ಣಾ ಇವರು ಈ ತಿಂಗಳ ಕೊನೆಗೆ ಮಂಗಳೂರಿಗೆ ಹೋಗಿ ಶ್ರೀ. ಅಮ್ಮೆಂಬಳ ರಾಮರಾಯರಲ್ಲಿ ೩–೪ ದಿನ ಅತಿಥಿಗಳಾಗುವರು

ಹೊಂಬಳ ಕಂಪನಿಯವರಿಗೆ ಪೂರ್ಣ ಚಂದ್ರೋದಯ ನಾಟಕ ಸಭಾ ಎಂಬ ಹೊಸ ನಾಮಕರಣವಾಗಿದೆ, ಮುಕ್ಕಾಂ ಅಣ್ಣೀಗೇರಿಯಲ್ಲಿದೆ, ಜನರಿಂದ ಪ್ರೋತ್ಸಾಹವು ಚೆನ್ನಾಗಿದೆ, ಮುಂದೆ ಕಂಪನಿಯು ಹೊಸಪೇಟೆಗೆ ಹೋಗುವ ವಿಚಾರವಿದೆ.

ಖಾದಿಯ ಸುದ್ದಿಗಳು.

ಸಮಾರಂಭಗಳಲ್ಲಿ ಮಧುರೆಯ ಮೀನಾಕ್ಷಿ ಗುಡಿಯಲ್ಲಿ ಮೂರ್ತಿಗಳಿಗೆಲ್ಲ ಖಾದೀ ಬಟ್ಟೆಯನ್ನೇ ಧರಿಸುತ್ತಾರೆ. ಕರ್ನಾಟಕದಲ್ಲಿಯ ದೇವಸ್ಥಾನಗಳ ಚಾಲಕರು ಈ ಬಗ್ಗೆ ಏನಾದರೂ ವಿಚಾರಮಾಡುವರೋ?

ಪಂಡಿತ ಮಾಲವೀಯಾಜೀಯವರು ದಿನಾಲು ನೂಲಲಿಕ್ಕೆ ಪ್ರಾರಂಭಿಸಿದ್ದಾರೆ. ಖಾದೀ ಚಳವಳಿಕ್ಕೆ ಹೊಸದೊಂದು 'ಮುದ್ರೆ'ಯು ದೊರೆತಂತಾಯಿತು!

೧೯೨೧ ರಲ್ಲಿ ಖದ್ದರದ ವ್ಯಾಪಾರವು ಒಂದು ಲಕ್ಷಕ್ಕೆ ಕೊಂಚ ಕಡಿಮೆಯಿದ್ದಿತು. ಈಗ್ಗೆ ವರ್ಷಕ್ಕೆ ೨೦ ಲಕ್ಷಕ್ಕೆ ಬಂದಿದೆ!! ಖಾದೀ ಚಳವಳವು ಮುಗ್ಗಿದೆ; ಎಂದು ಬಡಬಡಿಸುವ ಮಹನೀಯರು ಇದನ್ನು ವಿಚಾರಿಸಲಿ!

ಖಾದೀ ನಿಧಿಗೆ ಹಣ ಕೊಡಕೂಡದೆಂದು ಮದ್ರಾಸ ಸರಕಾರದ 'ಚೀಫ ಸೆಕ್ರೆಟರಿ' ಯವರು ಅಪ್ಪಣೆಕೊಟ್ಟಿದ್ದಾರೆ! ಈ ಚಳವಳಿಯು ಹಬ್ಬಿದರೆ ಮ್ಯಾಂಚೆಸ್ಟರದ ವ್ಯಾಪಾರವು ಕಡಿಮೆಯಾಗುವದೆಂದು ಇವರಿಗೆ ಭಯವೋ?

ಹಿಂದುಸ್ಥಾನ.

ಶ್ರೀ ಮದನರೆಂಬ ಪಾರಸೀ ವ್ಯಾಪಾರಸ್ಥರು ಹಿಂದುಸ್ಥಾನದಲ್ಲಿಯ ೩೦೦ ಸಿನೇಮಾಗಳಲ್ಲಿಯ ೮೪ ಸಿನೇಮಾಗಳ ಒಡೆಯರು. ಇವರಿಗೆ ೬ ಲಕ್ಷ ಪೌಂಡುಗಳನ್ನು ಕೊಟ್ಟು, ಅಮೇರಿಕೆಯ ಸಿನೇಮಾ ಚಿತ್ರಪಟಗಳ ಸಂಸ್ಥೆಯವರು ಈ ೮೪ ಸಿನೇಮಾಗಳನ್ನು ಕೊಳ್ಳಬೇಕಾಗಿ ವಿಚಾರಿಸಿದ್ದಾರೆ. ಇಂಗ್ಲೇಡದ ಸಂಸ್ಥೆಯವರು ಇದಕ್ಕೂ ಹೆಚ್ಚು ಹಣವನ್ನು ಕೊಡುವರಾಗಿ ತಿಳಿಸಿದ್ದಾರೆ, ಶ್ರೀ ಮದನರು ಈ ವಿಚಾರಗಳಿಗೆ ಒಪ್ಪಿಲ್ಲ. ಈಗವರು ಲಂಡನ್ನಿನಲ್ಲಿರುವರು. ಕಡೆಗೆ ಏನಾಗುವದೋ ನೋಡಬೇಕು.

"ಹಿಂದೂ ಮುಸಲ್ಮಾನರ ಕಲಹಕ್ಕೆ ನಿಮ್ಮಿಂದ ಪ್ರೋತ್ಸಾಹವು ದೊರೆಯುತ್ತಲಿದೆಯಾದ್ದರಿಂದ, ನೀವು ನಮ್ಮ ಸಂಸ್ಥಾನವನ್ನು ಈಗಲೇ ಬಿಡಿರಿ; ಮುಂತೂ ನಮ್ಮ ಅಪ್ಪಣೆಯಿಲ್ಲದೇ, ಇಲ್ಲಿಬರಬೇಡಿ" ಎಂದು ಇಂದೂರ ಸರ್ಕಾರವು ಡಾ. ಕಿಚಲೂ ಇವರಿಗೆ ಅಪ್ಪಣೆ ಕೊಟ್ಟಿದೆ. ಡಾಕ್ಟರರು ಅಗಿಂದಾಗ್ಗೆ ಅಮೃತಸರಕ್ಕೆ ಹೋದರು.

ಪರದೇಶ

೧೯ ಶತಮಾನಗಳ ಹಿಂದೆ ನೆಲದಲ್ಲಿ ಹುಗಿದುಹೋದ, ಹೆರ್ಕ್ಯುಲೇನಿಯಮ್ ಎಂಬ ಪಟ್ಟಣವನ್ನು ಅಗೆದು ಹೊರಗೆ ತೆಗೆಯುವ ಕಾರ್ಯವನ್ನು ಇಟಾಲಿ ಸರಕಾರದವರು ಇದೇ ೨೦ ಕ್ಕೆ ಪ್ರಾರಂಭಿಸುವರು. ಈ ಕಾರ್ಯವು ಸಿದ್ಧಿಯಾಯಿತೆಂದರೆ ಬಹು ಮಹತ್ತರವಾದ ಪ್ರಾಚೀನ ಸಂಗತಿಗಳು ಸಂಶೋಧಿಸಲ್ಪಡುವವು! ೨೦ ನೇ ಶತಮಾನದಲ್ಲಿ ಇಂತಹ ಅದ್ಭುತ ಕಾರ್ಯವನ್ನು ಯಾರೂ ಕೈಕೊಂಡಿಲ್ಲ

ಚೀನಕ್ಕೆ, ಇಂಗ್ಲಂಡಿನ ಸೈನ್ಯವನ್ನು ಇನ್ನೂ ಹೆಚ್ಚಾಗಿ ಕಳಿಸುವ ವಿಚಾರವಾಗಿದೆ.

ವರ್ತಮಾನಸಾರ.

ಇಹವೃತ್ತ.

ಶ್ರೀ. ದೇಶಪಾಂಡೆ ಪಾಠಶಾಲೆಯವರು ಹರ್ತಾಪ್ತರಿಂದ ಅವರ ಸನ್ಮಾನಾರ್ಥ ಅವರ ಕಾಲೇಜ ಲೈಬ್ರರಿಯ ವಿಲಾಸ ಕೊಟಡಿ ತಮ್ಮನ್ನು ಆಮಂತ್ರಿಸಲಿಲ್ಲವೆಂದು ಓರ್ವ ಇಲ್ಲಿಯ ಸಾಹುಕಾರರಿಗೆ ಕೋಪ ಬಂದಿದೆ! ಅದಕೆ ತಾವು ಆ ಪಾಠಶಾಲೆಯ ಸಭಾಸದತ್ವಕ್ಕೆ ತಿಲಾಂಜಲಿ ಕೊಟ್ಟು ಬಹಳ ದಿನಗಳಾದವೆನ್ನುವ ಕೋಪಾವೇಶದಲ್ಲಿ ಅವರು ಸಾರುತ್ತೇ ಇದ್ದಾರೆ! ನಮೋ ನಮಃ.!

ಸಾಹುಕಾರರನ್ನು ಗಾಯನಕ್ಕಾಗಿ ಅಂಥಹ ಸುಶಿಕ್ಷಿತರ ಸಾರ್ವಜನಿಕ ವಿಲಾಸ ಕೊಟಡಿಗಳಿಗಾಗಿ ಕರೆಯಬೇಕೋ ಕರೆಯಬಾರದೋ ಎಂಬುದಾಗಿ ಈಗ್ಗೆ ಜನರು ಆಡಿಕೊಳ್ಳುತ್ತಿರುವರು. ಕೆಲವರು ಅಹ! ಕೆಲವರು ಇಲ್ಲ! ಆ ಜಗ್ಗಾಟವು ಜಗತ್ತಿನಲ್ಲಿ ನಡೆಯ ಕಳ್ಳದ್ದೇ ಅದರ ನಿರ್ಣಯ ಮಾಡುವರಾರು?

'ಕನ್ನಡಿಗ'ನ ಕಾರ್ಯಾಲಯದ ನೌಕರರೆಲ್ಲ ಸೇರಿ ತಮ್ಮದೊಂದು ಖಾದೀ ಸಂಘವನ್ನು ಕಳೆದವಾರದಲ್ಲಿ ಸ್ಥಾಪಿಸಿಕೊಂಡಿದ್ದಾರೆ! ನೂಲನ್ನು ಚಂದಾ ಕೊಡಬೇಕಾಗಿಟ್ಟ 'ಕನ್ನಡಿಗ'ನಿಗೆ ಇದು ಭೂಷಣವೇ ಅಲ್ಲವೆ? ಕನ್ನಡನಾಡಿನ—ಅಥವಾ ಹಿಂದುಸ್ಥಾನದ ಎಷ್ಟು ಪತ್ರಿಕೆಗಳ ಕಾರ್ಯಾಲಯದಲ್ಲಿ ಈ ಬಗೆಯ ವ್ಯವಸ್ಥೆಯಿದೆ?

ವಿಜಾಪೂರ ಜಿಲ್ಲೆಯ ಸುದ್ದಿಗಳು.

(ನಮ್ಮ ಸ್ವಂತ ಸುದ್ದಿಗಾರನಿಂದ)

ವಿಜಾಪೂರ ತೃತೀಯ ಕರ್ನಾಟಕ ಆಯುರ್ವೇದ ಸಮ್ಮೇಲನವನ್ನು ವೈ॥ ಕೃ॥ ೧೫।೧೬।೧೭ (ಮೇ ತಿಂಗಳಕ್ಕೆ ತಾ॥ ೨೮।೨೯।೩೦) ದಿವಸ ಕೂಡಿಸುವದು ನಿಶ್ಚಿತವಾಗಿದೆ ನಮ್ಮ ವಿನಂತಿಗೆ ಮಾನಕೊಟ್ಟು ಬೆಂಗಳೂರಿನ ಆಯುರ್ವೇದಭೂಷಣ ಶಾಸ್ತ್ರಿಗಳವರು ಸಮ್ಮೇಲನದ ಅಧ್ಯಕ್ಷರಾಗಲು ಒಪ್ಪಿಕೊಂಡಿದ್ದಾರೆ. ಅಂತೂ ಸಿದ್ಧತೆಯು ಭರದಿಂದ ಸಾಗಿದೆ.

ಮಾರಿಕಾದ ಉಪದ್ರವು ಇನ್ನೂ ಇದೆ. ಮೊ॥ ಕಪಿಲೇಶ್ವರದ ಬಾವಿ ಕ್ಯಾಂಪು ಇಳಿಯುವದೆ.

ಬಬಲಾದ ಕಳೆದವಾರ ಈ ಊರ ಸೀಮೆಯ ಕುರುಬರ ೮ ಮನೆಗಳಿಗೆ ರಾತ್ರಿ ಬೆಂಕಿ ಹತ್ತಿದ್ದು, ೩೩ ಕುರಿಗಳೂ, ೨ ಎತ್ತುಗಳೂ ಕಾಳುಕಡಿಗಳೂ, ಅರಿವೆ-ಅಂಚಡಿಗಳೂ ಸುಟ್ಟು ಹೋದವು. ಒಟ್ಟು ರೂಪಾಯಿ ರೊಕ್ಕಗಳು ಕರಗಿದವಂತೆ! ಸುಮಾರು ೭-೮ ನೂರು ರೂಪಾಯಿಗಳ ಹಾನಿ ಇಷ್ಟೇ? ಇಷ್ಟಾದರೂ ಅಗ್ನಿದೇವನು ಹಗಲಲ್ಲೂ (ಉಷ್ಣದಿಂದ) ಉರಿಯುತ್ತಿದ್ದನಂತೆ

ಇಂಡಿ:- ಈ ತಾಲೂಕಿನಲ್ಲಿ ಈ ತಿಂಗಳಲ್ಲ (ಕೋ ಆಪರೇಟಿವ್) ಸಹಕಾರಿ ಸಂಘಗಳು ಹೊರ್ತಿ, ಝಳಕಿ, ರಡ್ಡೇವಾಡಿ, ಅಹಿರಸಂಗ, ನಿವರಗಿ, ಗೋಳಸಾರ, ಬರಡೋಲ, ಹಳಗುಣಕಿ ಇತ್ಯಾದಿ ಗ್ರಾಮಗಳಲ್ಲಿ ಸ್ಥಾಪಿಸಲ್ಪಟ್ಟಿರುತ್ತವೆ- ಇನ್ನೂ ಹೆಚ್ಚಾಗುವ ಸಂಭವವಿದೆ-

ಅಗರಖೇಡ:- ಯಾತಾಸಹರಣ್ಣನ ಕೈಯಿಂದ ಇಲ್ಲಿ ಮಾರಿಕಾ (ಪ್ಲೇಗು) ಪ್ರತಿದಿನಾಗಿ ದಿನಾಲು ೩-೪ ಜನರು ಆ ರೋಗದ ಬಾಯಿಗೆ ತುತ್ತಾಗುತ್ತಿರುವರು [illegible] ಬಂಧುಗಳೇ ಹೆಚ್ಚು ಕೈಬಿಟ್ಟಿದ್ದರು. ಈ ಕಳೆದ ೮೦ ಜನರು ರೋಗಪೀಡಿತರಾಗಿ ೧೫ ಜನರು ಮೃತರಾದರು (ರೋಗಗ್ರಸ್ತರ ಜನರು ಸತ್ತಿದ್ದೇ ಹೆಚ್ಚು) [illegible] ದಿಸುತ್ತೀರಿ ಎಂದು ಅನ್ನುತ್ತ) ಕುಳಿತವರೇ ಹೆಚ್ಚು. ಬೇರೆ ಬೇರೆ ಕಡೆಯಿಂದ ಔಷಧೋಪಚಾರ ಮಾಡಿರೆಂದು ಕೆಲವು ಸುಶಿಕ್ಷಿತ ಬಂಧುಗಳು ಎಲ್ಲ ಕಡೆಗೆ ತಿರುಗಾಡಿ ಔಷಧ ಕೊಡಿಸಲಿಕ್ಕೆ ಹಚ್ಚಿದರು. ಔಷಧ ತೆಗೆದುಕೊಂಡವರಲ್ಲಿ ಹೆಚ್ಚು ಜನರು ಗುಣವಾಗಿದ್ದಾರೆ. ಇಲ್ಲಿಯ ಶ್ರೀಯುತ ಪ್ರಲ್ಹಾದಾಚಾರ್ಯ ಅಧ್ಯ, ಶ್ರೀ ಗುಂಡಾಚಾರ್ಯ ಅಧ್ಯ, ಶ್ರೀ ಅಣ್ಣಾರಾವ ಪಾಟೀಲ ಇವರು ಒಳ್ಳೇ ದಕ್ಷತೆಯಿಂದ ತಮ್ಮ ತಮ್ಮ ಔಷಧಾಲಯಗಳಲ್ಲಿಯ ಔಷಧಗಳನ್ನು ಬಡಜನರಿಗೆ ಪುಕ್ಕಟೆಯಾಗಿಯೂ ಧನಿಕರಿಗೆ ಯೋಗ್ಯ ಕಿಮ್ಮತ್ತಿನಿಂದಲೂ ಕೊಡುತ್ತಲಿದ್ದಾರೆ.

ಬಲ್ಲೊಳ್ಳಿ— ಈ ಊರ ಜಾತ್ರೆಗೆ ಕುಸ್ತಿಹಿಡಿಯಲಿಕ್ಕೆ ಯಾವ ಪೂರ್ವವಳೋ ಒಬ್ಬ ಹೆಂಗಸು ಬರುವಳೆಂದು ವದಂತಿ!

ಸಿಂದಗಿ:- ಈ ವರ್ಷ ಹಾಕಲೆಯಿಲ್ಲದೆ ಕಾಳು ನೀರಿಗೆ ಸಹ ಎರವಾದ ಈ ತಾಲೂಕಿನಲ್ಲಿ ಕೆಲಕೆ ಘಟ ನೆಂಬದೊಂದು ಪಗಾರ ಕೂಡಿಸಲು ಆರಂಭಿಸಿರುವರು ಅಧಿಕಾರ ಬಲದಿಂದೆ ಯಾಕಿಂದ ಏನಾದೀತು?

ಮೋರಟಗಿ:- ಈ ಊರಲ್ಲಿ ಓರ್ವ ಧನಿಕರ ಮನೆಗೆ ಬೆಂಕಿ ಹಗಲಿ ವಿಶೇಷ ಹಾನಿಯಾಗಿದೆ- ಬೆಂಕಿಬಿದ್ದ ಕಾರಣವು ತಿಳಿದಿಲ್ಲ-

ಬೀಳಗಿ:- ಬಾಗಲಕೋಟೆಗೇನೇ ಹತ್ತಿಯನ್ನು ಹೇರಿಸಬೇಕೆಂತಲೂ, ಜಮಖಂಡಿ ಮುಧೋಳಗಳಿಗೆ ಮಾರಾಟಕ್ಕೆ ಹತ್ತಿಯನ್ನು ಒಯ್ಯಬಾರದೆಂತಲೂ, ಗಲಗಲಿ ಮುಂತಾದ ಹಳ್ಳಿಗಳಲ್ಲಿ ಡಂಗುರ ಹೊಡೆದಿರುವರು. ಪೇರಾದೊಳಗಿನ ಬಹಳ ಹಳ್ಳಿಗಳಿಗೆ ಜಮಖಂಡಿ, ಮುಧೋಳಗಳ ಸಂಗಡ ವ್ಯಾಪಾರ ಮಾಡುವದು, ಆರ್ಥಿಕ ದೃಷ್ಟಿಯಿಂದಲೂ, ದೈಹಿಕ ದೃಷ್ಟಿಯಿಂದಲೂ ಸೋಯಿಸ್ಕರವಾದ್ದರಿಂದ ಜುಲುಮೆಯ ಕಟ್ಟಳೆಯು ಜನರಿಗೆ ಬಾಧಕವಾಗಿದೆ

ಎಮನೂರಿನ ಪ್ರತಾಪದಿಂದ ಎಲ್ಲಕ್ಕಿಯೂ ಎಮನೂರೇ ನಿರ್ಮಾಣವಾಗಿರುವದು. ಈಗ ನಾಲ್ಕುದಿವಸಗಳ ಕೆಳಗೆ ಬಸನಾಳ ಗೇಟಿನ ಸಮೀಪದಲ್ಲಿ ಒಂದು ಹೆಣವು ಬಿದ್ದಿತ್ತು ಬೀಳಗಿಯಲ್ಲಿ ಎಮನೂರಿಯು (ಮಾರಿಕಾ) ಪ್ರವೇಶವಾಗಿದೆ ನಾಲ್ಕುರು 'ಕೇಸು' ಗಳೂ ಆಗಿವೆ

ಹುನಗುಂದ:- ಇಲ್ಲಿಯ ಇಂಗ್ಲೀಷಶಾಲೆಗೆ ಹಣದ ಕೊರತೆಯಿದೆ. ಆದ್ದರಿಂದ ಸಂಸ್ಥೆಯ ಅಧ್ಯಕ್ಷರಾದ ವಕೀಲ ದೇಸಾಯರು ಸಹಕಾರ ಸಂಘಗಳಿಗೆ ಸಹಾಯ ಕೊಡಬೇಕಾಗಿ ಪ್ರಾರ್ಥಿಸಿದ್ದಾರೆ.

ಬದಾಮಿಯ ತಾಲೂಕ ಕಚೇರಿಯಲ್ಲಿ ಕಳೆದವಾರ ಮಾರಿಕಾ ಬೇನೆಯ ನಿವಾರಣೆಯ ಬಗ್ಗೆ ಒಂದು ಪ್ರಚಂಡವಾದ ಸಭೆ ನೆರೆದಿತ್ತು. ಎಲ್ಲ ಹಳ್ಳಿಪಳ್ಳಿಗಳಿಂದ ಗೌಡ ಕುಲಕರ್ಣಿಯವರೂ ಲೋ. ಬೋ. ಮೆಂಬರರೂ ಊರೊಳಗಿನ ಸಭ್ಯಗ್ರಹಸ್ಥರೂ ಶಿಕ್ಷಕರೂ ಸಭೆಗೆ ಬಂದಿದ್ದರು.

ಡಿ। ಲೋ। ಬೋ। ಪ್ರೆಸಿಡೆಂಟರು ಅಧ್ಯಕ್ಷರಿದ್ದರು. ಮಾರಿಕಾ ಬೇನೆಯ ಬಗ್ಗೆ ಅವರು ಉತ್ತಮವಾಗಿ ಸಭಿಕರಲ್ಲಿ ಪ.ರ.ಪು.ಬರುವಂತೆ ಭಾಷಣವನ್ನು ಮಾಡಿದರು ಮತ್ತು ರೋಗದ ಉಪಚಾರದಬಗ್ಗೆ ಔಷಧೋಪಚಾರ ಕುರಿತು ಎಲ್ಲಜನರಿಗೆ ತಿಳಿಸಿಕೊಟ್ಟರು..

ಇಲ್ಲಿಯ ಮೆ॥ ಡಾಕ್ಟರ ಕಬ್ಬಿಣ ಸಾ। ರವರಾದ ಊ ತಮ್ಮ ಸುಶ್ರಾವ್ಯವಾದ ವಾಣಿಯಿಂದ ಭಾಷಣಮಾಡಿ ಔಷಧಗಳನ್ನು ಕೊಡುವ ರೀತಿಯನ್ನು ಹೇಳಿದರು. ಅಲ್ಲಿ ನೆರೆದ ಜನರಿಗೆ ಸ್ವಯಂ ಸೇವಕರಾಗಬೇಕೆಂದೂ ಹೇಳಿದರು ಆ ಪ್ರಕಾರ ಬದಾಮಿಯ [illegible] ಎಲ್ಲ ಮಾಸ್ತರರೂ ಈ ಕೆಲಸಕ್ಕೆ ದಕ್ಷರಾಗಿರುತ್ತಾರೆ

ಬದಾಮಿ ತಾಲೂಕ ಹೊರಗೆ ಎಲ್ಲ ಭಾಗದಲ್ಲಿಯೂ ಈ ಬೇನೆಯು ವ್ಯಾಪಿಸಿದೆ

ಮುದ್ದೇಬಿಹಾಳ [illegible] ಸುದ್ದಿ ಕೊಡಲು [illegible] ಈ ತಾಲೂಕಗಳು ಅಧೀನವಾದ [illegible]

|| ಮಹಾಲಕ್ಷ್ಮೀ ಪ್ರಾಸಾದಿಕ ||

ಹೊಂಬಳ ಪೂರ್ಣ ಚಂದ್ರೋದಯ ಸಂಗೀತ ನಾಟಕ ಮಂಡಳಿ-

ಇವರು ಅಣ್ಣೀಗೇರಿಗೆ

ಬಂದಿದ್ದಾರೆ.

ಮತ್ತು, ಹೊಸದಾಗಿ ಸಿದ್ಧಪಡಿಸಿದ ತಮ್ಮ ಲೋಕಪ್ರಿಯ ನಾಟಕ ಆಖ್ಯಾನಗಳನ್ನು, ಹೊಸ ಹುರುಪಿನ ನಟರ ಒಳ್ಳೇ ಮನೋಹರವಾದ ಅಭಿನಯ ಹಾಗೂ ಗಾಯನಗಳೊಂದಿಗೆ, ಪ್ರಾರಂಭಿಸಿದ್ದಾರೆ. ಸುತ್ತಲಿನ ಹಳ್ಳಿಯ ಪ್ರೇಕ್ಷಕರು ಈ ಸುಸಂಧಿಯನು ಕಳೆದುಕೊಳ್ಳಬಾರದು.

ಮ್ಯಾನೇಜರ

ಶಿವನಲ್ಲಿ ಭಕ್ತಿಮಾಡುವವರಿಗೆ ಒಳ್ಳೇ ಸಮಯ!

ಪುರಾಣವೆಂಬ ಕನ್ನಡ ಮಾಸಪತ್ರಿಕೆಯು.

ಈಗ ಸ್ಕಾಂದಪುರಾಣವು ನಡೆಯುತ್ತಿರುವುದು.

(ಮೂಲ ಮತ್ತು ಕನ್ನಡ ತಾತ್ಪರ್ಯ ಸಹ)

	ಸ್ಥಳದವರಿಗೆ	ಪರಸ್ಥಳದವರಿಗೆ
ಒಂದೆ ವರ್ಷಕ್ಕೆ	೩—೦—೦	೩—೮—೦
೬ ತಿಂಗಳಿಗೆ	೧—೧೨—೦	೨—೦—೦
ವಾಚನಾಲಯ ಮೊದಲಾದವರಿಗೆ	೫—೦—೦	

ಮೂರು ಸಂಚಿಕೆಗಳು ಸಿದ್ಧವಾಗಿವೆ.

ಮೇಲ್ಕಂಡ ಗ್ರಂಥದಲ್ಲಿ ದಕ್ಷಯಜ್ಞಧ್ವಂಸ, ಸಮುದ್ರಮಥನ, ಲಿಂಗಪೂಜೆಗೆ ಕಾರಣ, ಗಿರಿಜಾಕಲ್ಯಾಣ, ಶಿವರಾಜ್ಯಾಭಿಷೇಕ ಸ್ಕಂದೋತ್ಪತ್ತಿ ಇವೇ ಮೊದಲಾದ ಕಥೆಗಳಿರುವುವು. ಎಲ್ಲಾ ಜಂಗಮರ ಹೆಂಗಸರೂ, ಗಂಡಸರೂ ಮಕ್ಕಳೂ ಸಹ ಸುಲಭವಾಗಿ ಓದಿ ತಿಳಿದುಕೊಳ್ಳುವಂತೆ ಕನ್ನಡಿಸಿರುವುದು. ಅಷ್ಟಾದಶಪುರಾಣವು ಕನ್ನಡ ತಾತ್ಪರ್ಯದೊಂದಿಗೆ ಪ್ರಥಮ ಸಂವತ್ಸರದಿಂದ ಪ್ರಕಟಿಸಲ್ಪಡುವುದು ಮತ್ತಾವುದೇ ಅರ್ಥವು ಬರೆಯಲ್ಪಡುತ್ತ. ಅಪೇಕ್ಷೆಯುಳ್ಳವರು ಜಾಗ್ರತೆಯಾಗಿ ಆರ್ಡರು ಕೊಡತಕ್ಕದ್ದು —— ಇದಕ್ಕೆ ಚಂದಾದಾರರನ್ನು ಒದಗಿಸತಕ್ಕ ನಂಬಿಕೆಯಾದ ಏಜಂಟರುಗಳು ಬೇಕಾಗಿದೆ. ಅಪೇಕ್ಷೆಯುಳ್ಳವರು ಜಾಗ್ರತರಾಗಿ ಬರೆದುಕೊಳ್ಳಿರಿ. ಏಜಂಟರಿಗೆ ತಿಂಗಳಿಗೆ ೨೫ ರೂಪಾಯಿ ಕಮಿಷ ಇಲ್ಲದಂತೆ ಕಮಿಷನ್ ದೊರೆಯುತ್ತದೆ

ವಿಳಾಸ—

ಮ್ಯಾನೇಜರ, ಪುರಾಣಕಾರ್ಯಾಲಯ.

೨೨೨ ಉತ್ತರಾದಿಮಠದಬೀದಿ, ಮೈಸೂರ.

ಶಾಲೆಯ ವಿದ್ಯಾರ್ಥಿಗಳೇ

೨-೩-೪-೫ ನೇ ಇಯತ್ತೆ ಕಾಪಿ ಪುಸ್ತಕಗಳು ತಯಾರಿಸಿದ್ದೇವೆ ಅವುಗಳ ಬೆಲೆ ಡಜನ್ ೧ ಕ್ಕೆ ೯ ಆಣೆಗಳು ಮೇಳುವವು ಬೇಕಾದವರು ತರಿಸಿಕೊಳ್ಳಿರಿ ಟಪಾಲ ಖರ್ಚು ಬೇರೆ.

ಪಾಂಡುರಂಗ ಎಂಡ ವಾಸುದೇವ ಬ್ರದರ್ಸ ಬದಾಮಿ

ಮುಂಬೈ ಡಿಸ್ಟ್ರಿಕ್ಟ ಪೋಲೀಸ ಆಕ್ಟ ಕಲ್ಮ ೪೫(೧) ಪ್ರಕಾರ

ನೋಟಿಸು

ಈಗ ವಿಜಾಪೂರ ಜಿಲ್ಹೆಯಲ್ಲಿ ಮಾರಿಕಾ ರೋಗವು ಬಹಳ ಜೋರಿಯಿಂದಾ ನಡೆದಿರುತ್ತದೆ. ಶಿಂದಗಿ ತಾಲ್ಲುಕಪೈಕಿ ಗೋಲಗೇರಿ ಗ್ರಾಮದಲ್ಲಿ ತಾರಿಖು ೧೭-೪-೨೭ ಆಗರ ಅಸುಮಾರ ಆಗುವ ಜಾತ್ರೆಯಿಂದಾ ಸದರಿ ಮಾರಿಕಾ ರೋಗವು ಇನ್ನೂ ಹೆಚ್ಚು ಹಬ್ಬುವಸಂಭವವದೆ. ಕಾರಣ ಸಾರ್ವಜನಿಕ ಆರೋಗ್ಯಕೆ ಮತ್ತು ಸುರಕ್ಷಿತತನದ ಕಡೆಗೆ ಲಕ್ಷಕೊಟ್ಟು ಮೆ|| ಡಿ| ಮ್ಯಾಜಿಸ್ಟ್ರೇಟ ಸಾ|| ಬಾ|| ರವರು ಈ ವರುಷ ಸದರಿ ಗೋಲಗೇರಿ ಜಾತ್ರೆಯು ಆಗಬಾರದು ಮತ್ತು ಜನರು ಅಲ್ಲಿಗೆ ಹೋಗಬಾರದು ಅಂತಾ ಫರ್ಮಾಯಿಸುತ್ತಾರೆ

೨ ಈ ನೋಟಿಸು ಉಘಡ ರೀತಿಯಿಂದ ಎಲ್ಲಕಡಿಗೂ ಪ್ರಸಿದ್ಧ ಮಾಡಬೇಕು

ಮುಕ್ಕಾಮ ಬಬಲೇಶ್ವರ } ವ್ಹಿ ಎಚ್ ನಾಯಿಕ
ತಾರಿಖು ೧೧-೪-೧೯೨೭ } ಡಿ | ಮ್ಯಾಜಿಸ್ಟ್ರೇಟ ! ವಿಜಾಪೂರ

ಮುಂಬೈ ಡಿಸ್ಟ್ರಿಕ್ಟ ಪೋಲಿಸ ಆಕ್ಟ ಕಲ್ಮ ೪೫(೧) ಪ್ರಕಾರಾ

ನೋಟೀಸು

ಈಗ ವಿಜಾಪೂರ ಜಿಲ್ಹೆಯಲ್ಲಿ ಮಾರಿಕಾ ರೋಗವು ಬಹಳ ಜೋರಿಯಿಂದಾ ನಡೆದಿರುತ್ತದೆ. ವಿಜಾಪೂರ ತಾಲೂಕ ಪೈಕಿ ಕೊರವಿ ಗ್ರಾಮದಲ್ಲಿ ತಾರೀಖು ೧೬ ೪ ೨೭ ಆಗರ ಮತ್ತು ೧೫—೫—೨೭ ದಿವಸ ಅಸುಮಾರಕ್ಕೆ ಆಗುವ ಜಾತ್ರೆಯಿಂದಾ ಸದರಿ ಮಾರಿಕಾ ರೋಗವು ಇನ್ನೂ ಹೆಚ್ಚು ಹಬ್ಬುವಸಂಭವವದೆ. ಕಾರಣ ಸಾರ್ವಜನಿಕ ಆರೋಗ್ಯಕೆ ಮತ್ತು ಸುರಕ್ಷಿತತನದ ಕಡೆಗೆ ಲಕ್ಷಕೊಟ್ಟು ಮೆ|| ಡಿ ಮ್ಯಾಜಿಸ್ಟ್ರೇಟಸಾಬಾ|| ರವರು ಈ ವರುಷ ಸದರೀ ಕೊರವಿ ಜಾತ್ರೆಯು ಆಗಬಾರದು ಮತ್ತು ಜನರು ಅಲ್ಲಿಗೆ ಹೋಗಬಾರದು ಅಂತಾ ಫರ್ಮಾಯಿಸುತ್ತಾರೆ.

೨ ಈ ನೋಟೀಸು ಉಘಡರೀತಿಯಿಂದ ಎಲ್ಲಕಡಿಗೂ ಪ್ರಸಿದ್ಧ ಮಾಡಬೇಕು

ಮುಕ್ಕಾಮ ಬಬಲೇಶ್ವರ { ವ್ಹಿ ಎಚ್ ನಾಯಿಕ
ತಾರಿಖು ೧೧-೪-೧೯೨೭ { ಮ್ಯಾಜಿಸ್ಟ್ರೇ ವಿಜಾಪೂರ

ಮುಂ ಡಿಸ್ಟ್ರಿಕ್ಟ ಪೋಲಿಸ ಆಕ್ಟ ಕಲ್ಮ ೪೫(೧)ಪ್ರಕಾರಾ

ನೋಟೀಸು

ಈಗ ವಿಜಾಪೂರ ಜಿಲ್ಲೆಯಲ್ಲಿ ಮಾರಿಕಾ ರೋಗವು ಬಹಳ ಜೋರಿಯಿಂದ ನಡೆದಿರುತ್ತದೆ. ಇಂಡಿ ತಾಲೂಕಪೈಕಿ ಮಣೂರ ಗ್ರಾಮದಲ್ಲಿ ತಾರೀಖು ೧-೫-೨೭ ದಿವಸ ಆಗರ ಅಸುಮಾರಕ್ಕೆ ಆಗುವ ಜಾತ್ರೆಯಿಂದ ಸದರೀ ಮಾರಿಕಾ ರೋಗವು ಇನ್ನು ಹೆಚ್ಚು ಹಬ್ಬುವ ಸಂಭವವದೆ ಕಾರಣ ಸಾರ್ವಜನಿಕ ಆರೋಗ್ಯಕೆ ಮತ್ತು ಸುರಕ್ಷಿತತನದ ಕಡೆಗೆ ಲಕ್ಷಕೊಟ್ಟು ಮೆ|| ಡಿ| ಮ್ಯಾಜಿಸ್ಟ್ರೇಟ ಸಾ|| ಬಾ|| ರವರು ಈ ವರುಷ ಸದರೀ ಮಣೂರ ಜಾತ್ರೆಯು ಆಗಬಾರದು ಮತ್ತು ಜನರು ಅಲ್ಲಿಗೆ ಹೋಗಬಾರದು ಅಂತಾ ಫರ್ಮಾಯಿಸುತ್ತಾರೆ.

೨ ಈ ನೋಟೀಸು ಉಘಡ ರೀತಿಯಿಂದಾ ಎಲ್ಲಕಡಿಗೂ ಪ್ರಸಿದ್ಧ ಮಾಡಬೇಕು

ಮುಕ್ಕಾಮ ಬಬಲೇಶ್ವರ } ವ್ಹಿ ಎಚ್ ನಾಯಿಕ
ತಾರಿಖು ೧೧-೪-೧೯೨೭ } ಡಿ| ಮ್ಯಾಜಿಸ್ಟ್ರೇಟ ವಿಜಾಪೂರ

ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವು ಹಲ್ಲುಗಳ ನೋವುಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು. ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು ಹಲ್ಲುಗಳ ಪೂರ್ಣ ಸೆಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು

ಲೆವರಿನ ಗಡಿಯಾರಗಳು.

ಲೆವರಿನ ಕೈ ಗಡಿಯಾರ ರೂ. ೯.

ಲೆವರಿನ ಕಿಸೆಯೊಳಗಿಡುವ ಗಡಿಯಾರ ರೂ. ೭.



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಮೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವುದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ತಾಳುವವು. ಬೆಲೆ ಕಡಿಮೆಯಿದೆಂದು ಅಂಜುವ ಕಾರಣವಿಲ್ಲ. ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ. ಅದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ.

ಲಿಬೋ ವಾಚ ಕಂ. (ಇಂಡಿಯಾ.) ಬಾಂಬೆ. ೫ ೪.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಏಜಂಟರು—ಜಂಬುಲಿಂಗಪ್ಪಾ ಜಾಲವಾದಿ.

ಸ್ಟೇಶನರ್ಸ ಬಾಗಲಕೋಟೆ

ರಾಜವೈದ್ಯ ನಾರಾಯಣಜಿ ಕೇಶವಜಿ.

೫೬, ಚೀನಾಬಜಾರ್. ಮದ್ರಾಸು

ಯಾವದೇ {ಆಕಾರದ / ನಕ್ಷೆಯ / ನಂಬರಿನ} ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ. ೧೪, ಅರ್ಧ ಬೆಲೆ ರೂ. ೭



ಬರೇ ಒಂದು ತಿಂಗಳ ಬಗ್ಗೆ ನಾವು ಈ ದಂಧವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ಸಿರ್ರೋಪ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೀತಿನ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ **ಬೆಲೆ ರೂ. ೭**

ಅಲ್ಪಕಾಲ ಇದೆ; ಈಗಲೇ ಬರೆಯಿರಿ.

ಪತ್ತೆ — ಸ್ಟ್ಯಾನ ಹೌಸ ಪಿ. ಬಿ. ೫೦೫. ಪಿ. ಟಿ **ಮದ್ರಾಸ**

ಅತ್ಯಲ್ಪವಿದೆ! ಉಚಿತ!

ಕೇವಲ ಉಚಿತ ಕೇವಲ ಉಚಿತ



“ತಾರಾ” ಲೀವರ ರಜಿಸ್ಟರ್ಡ್ ಪೋಕೆಟ್ ವಾಚ್ ೧೪ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖದಲ್ಲಿಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚುಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ “ಸಿ” ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು “ತಾರಾ” ಲೀವರ್ ರಜಿಸ್ಟರ್ಡ್ ೧೪ ಕೆರೆಟ್ ರೋಲ್ಡ್ ಗೋಲ್ಡಿನ ಪೋಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪ್ಟನ್ ವಾಚ್ ಕಂ, ಪಿ. ಬಿ. ೨೬೫ ಮದ್ರಾಸ

ಪ್ರಾರಂಭದ ದಿನವನ್ನು

ನಿರೀಕ್ಷಿಸಿರಿ!
ನಿರೀಕ್ಷಿಸಿರಿ!

ಸಂಶಯ ಸಾಮ್ರಾಜ್ಯ

ಈ ಹೊಸ ಸಾಮಾಜಿಕ ನಾಟಕವು ಬೇಗನೇ ಪ್ರಯೋಗಿಸಲ್ಪಡುವದು.

ಬಾಗಲಕೋಟೆ } ವ್ಯವಸ್ಥಾಪಕ
ತಾ|| ೧೪|೪|೨೭ } ಶ್ರೀ ಕೃಷ್ಣ ಸಂಗೀತ ನಾಟಕ ಮಂಡಲ.

ಕಿರ್ಲೋಸ್ಕರ

ಕಬ್ಬಿಣ ನೇಗಿಲುಗಳು

ಹಂಗಾಮು (ಸುಗ್ಗಿ) ಸಮೀಪಿಸಿತು. ಈ ವರ್ಷ ಮಳೆ ಬೆಳೆ ಚೆನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವುದು. ಕಿರ್ಲೋಸ್ಕರ ನೇಗಿಲು ನಂ ೧೧, ೯, ೮ ಇವು ಒಕ್ಕಲಿಗರಿಗೆ ಬಹಳೇ ಉಪಯೋಗ ಬೀಳುತ್ತವೆ ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುತ್ತವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್. } ಕಿರ್ಲೋಸ್ಕರವಾಡಿ ಜಿಲ್ಲೆ ಸಾತಾರೆ

ದಿ ಸ್ಟಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲಕ್‍ಟ್ರಿಕ, ಮಿಷನ್‍ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು ಒಂದು ಸಲ ಪರೀಕ್ಷಿಸಿ.

೧ ನೇ ದರ್ಜೆ ಪುಡಿ (ಪ್ಯಾಕಿಂಗ ಸಹಿತ) ೧ ಪೌಂಡಿಗೆ ರೂ. ೧-೭-೦
೨ ನೇ ,, ,, ,, ರೂ. ೧-೩-೦

ದಿ ಸ್ಟಾಂಡರ್ಡ್ ಕಾಫಿ ಕಂಪನಿ
ಚಿಕ್ಕಪೇಟೆ ಬೆಂಗಳೂರು ಸಿಟಿ.

ಶ್ರೀಕೃಷ್ಣ ಸಂಗೀತ ಕನ್ನಡ ನಾಟಕ ಮಂಡಲವು

ತಾಜ ನಾಟಕಶಾಲೆಯ ಮನೆ ವೆಂಕಟಪೇಟೆ, ಬಾಗಲಕೋಟೆ.

ಗುಳೇದಗುಡ್ಡದ ಶ್ರೀಮತಿ ಗಂಗೂಬಾಯಿಯವರ ಈ ಹೊಸ ನಾಟಕ ಕಂಪನಿಯಲ್ಲಿ ಅಭಿನಯಿಸಲು ಸುಸ್ವರೂಪ, ಸುಶೀಲ, ಸುಶಿಕ್ಷಿತ ಹಾಗೂ ಹಾಡು ಬಲ್ಲ ನಾಟ್ಯಕಲಾಭಿಜ್ಞರಾದ ಬಾಲಬಾಲಿಕೆಯರೂ, ಸ್ತ್ರೀ-ಪುರುಷರೂ

ಬೇಕಾಗಿದ್ದಾರೆ.

ಅದೇ ಪ್ರಕಾರ ಪೆಟ್ಟಿಗೆ ಹಾಗೂ ತಬಲಾ ಬಾರಿಸುವದರಲ್ಲಿ ನಿಪುಣರಾದವರೂ ಬೇಕಾಗಿದ್ದಾರೆ. ಇಚ್ಛೆಯಿದ್ದವರು ಸಮಕ್ಷಮ ಇಲ್ಲವೆ ಪತ್ರದ್ವಾರದಿಂದ ವಿಚಾರಿಸಿಕೊಳ್ಳಬೇಕು.

—ವ್ಯವಸ್ಥಾಪಕ.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ಥ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಿಣೀ, ಜೀರ್ಣಜ್ವರ, ಅಗ್ನಿಮಾಂಧ ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವದೂ ನಪುಂಸಕತ್ವವು ಎಂದೂ ಇರುವದಿಲ್ಲ (ಏಳೇ ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು.) ಇದರಿಂದ ವೈಯ್ಯಾರಿ ವ ಗರಮಿಯ ಎಲ್ಲಾ ತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೇ ಯೋಗ್ಯತೆಯು ಸೇವಿಸಿ ನೋಡಿದರೆ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೨-೦, ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯು ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸ:—

ಎಸ್. ಬಿ. ಕದಮ್ ಮತ್ತು ಸನ್ಸ್.
ಮು. ಪೋಸ್ಟ ನಿಪ್ಪಾಣಿ (ಜಿ. ಬೆಳಗಾಂವ.)

೧,೪೨,೮೦,೦೦೦

ರೂಪಾಯಿಗಳು.

ಪರದೇಶಗಳಿಂದ ತರಿಸಲ್ಪಟ್ಟ ಸಾಬೂನುಗಳಿಗೋಸ್ಕರ ಪ್ರತಿವರುಷವೂ ಒಂದುಕೋಟಿ ನಾಲ್ವತ್ತೆರಡು ಲಕ್ಷರೂಪಾಯಿಗಳನ್ನು ನಮ್ಮ ದೇಶದಿಂದ ಪರದೇಶಕ್ಕೆ ತೆರುತ್ತಿದೇವೆ. ಮಹಾಜನಗಳೆಲ್ಲರೂ ಒಕ್ಕಟ್ಟಾಗಿ ಸಂಕಲ್ಪಮಾಡಿದರೆ ತಾನೇ ಈ ಹಣವನ್ನೂ ನಮ್ಮ ದೇಶದಲ್ಲಿ ಉಳಿಸಿಕೊಳ್ಳಬಹುದು. ಸ್ವದೇಶದ ಸಾಬೂನನ್ನು ಬಿಟ್ಟು ಪರದೇಶದ ಸಾಬೂನನ್ನು ಕೊಳ್ಳುವ ಪ್ರತಿಯೊಬ್ಬ ವಿದ್ಯಾವಂತನೂ ಅನ್ಯ ದೇಶದ ಕೈಗಾರಿಕೆಗಳಿಗೆ ಉಪಕಾರಮಾಡಿ, ಸ್ವದೇಶದ ಕೈಗಾರಿಕೆಗಳಿಗೆ ಅಪಕಾರಮಾಡುತ್ತಾನೆ. ಪ್ರತಿಯೊಬ್ಬ ದೇಶಬಾಂಧವನೂ ಸ್ವದೇಶೀ ಮಾಲುಗಳನ್ನೇ ಕೊಳ್ಳುವನು. ಮೈಸೂರು ಗೌರ್ನಮೆಂಟ ಸೋಪ ಫ್ಯಾಕ್ಟರಿಯಲ್ಲಿ ಸರ್ವಗ್ರಾಹ್ಯವಾದ ಉತ್ತಮವಾದ ಸಾಬೂನಗಳನ್ನು ತಯಾರುಮಾಡುತ್ತಾರೆ. ನಾವು ತಯಾರುಮಾಡುವ ಶ್ರೀಗಂಧ ಪರಿಮಳವುಳ್ಳ ಸಾಬೂನೊಂದನ್ನು ಕೊಂಡು ತಾವೇ ಪರೀಕ್ಷೆಮಾಡಿನೋಡಿರಿ. ತಮಗೆ ನಮ್ಮ ಸಾಬೂನುಗಳು ಸಿಗಲಸಾಧ್ಯವಾದಲ್ಲಿ ದಯವಿಟ್ಟು ನಮಗೆ ಪತ್ರವೊಂದನ್ನು ಬರೆದರೆ, ತಾವು ಇಚ್ಛೈಸುವ ಅಂಗಡಿಯಲ್ಲಿಯೇ ನಮ್ಮ ಮಾಲುಗಳ ತಮಗೆ ದೊರೆಯುವಂತೆ ಏರ್ಪಡಿಸಿಕೊಡುತ್ತೇವೆ.

ಗೌರ್ನಮೆಂಟ ಸೋಪ್ ಫ್ಯಾಕ್ಟರಿ

ಬೆಂಗಳೂರು.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮುತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ ೨೭೬೭ ಸಯ್ಯದ ಅಲ್ಲಿ ಅಸಗರ ಟಲಿಗ್ರಾಫ ಸುಪರೆಂಟೆಂಡಂಟ್ ಸೆಕ್ರೆಟೆರಿಯಟ್ ಹೈದರಾಬಾದ ಡೆಕ್ಕನ್ನ ರೂ ೧೦೦೦

(೨) ಎಲ್. ಬಿ ಸಿ ನಂ ೧೯೬೨ ನಾರಾಯಣ ವಿಠ್ಠಲ ಲೋಣಕರ. ಕೇರ ಆಫ್ ಡಿ. ಈ. ಪುರಾಣಿಕ ೧೦೭ ನಿಹಾಲಪುರ ಇಂದೂರ ೧೦೦೦

(೩) ಎಲ್. ಬಿ. ಸಿ. ನಂ ೩೪೧ ರಾಮಚಂದ್ರ ಅನಂತ ಶಿರೋಳೆ. ಡಿವಿಜನಲ್ ಫಾರೆಸ್ಟ ಆಫೀಸರ ಧಕ್ಕೂರಾ. ಪಶ್ಚಿಮ ಖಾನದೇಶ ರೂ. ೮೦೦

(೪) ಬಾಂಡ ನಂಬರು ೭೫೦೬ ಕೇ. ಪಿ. ಫನಾಂಡೋ ವ್ಯಾಪಾರಸ್ಥ ಬ್ರಿಕ್‌ಸಾಯಿಡ ಸಿಲೋನ, ಕೊಲಂಬೋ. ರೂ ೧೦೦೦

(೫) ಬಾಂಡ ನಂಬರು ೧೩೬೩೪ ಎಸ್. ಜಿ. ಚವರೆ. ಅಸಿಸ್ಟಂಟ ಸ್ಟೇಶನ್‌ಮಾಸ್ತರ ತೆಲಿಗಿ. ಜಿಲ್ಲಾ ವಿಜಾಪುರ ರೂ ೧೦೦೦

ಬಿ. ಎನ್. ಅರಾಧ್ಯ

ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ.)

ಜೀವ ವಿಮೆಯ ಕಾರ್ಯದಲ್ಲಿ

ಅದ್ಭುತವಾದ ಜಯವು !

ಯಾಕಂದರೆ ತನ್ನ ೧೯ ನೇ ವರ್ಷದಲ್ಲಿಯೇ ನಾಮಿಕ್ಕೆ ೨೦ ರೂಪಾಯಿ ಲಾಭ ಗಳಿಸಿದೆ

ದಿ ಜನರಲ್ ಅಶ್ಯೂರನ್ಸ

ಸೋಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮಾ ಕಂಪನಿಗಳನ್ನು ಹಿಂದೆ ಒಗೆದು ಮುಂದೆ ಬಂದಿದೆ. ಇದರಿಂದ ಇದರಲ್ಲಿಯ ಕರ್ತೃತ್ವ ಶಕ್ತಿಯು ವ್ಯಕ್ತವಾಗುವದಲ್ಲದೇ, ಇದಕ್ಕಿಂತಲೂ ಹೆಚ್ಚಿನ ಪ್ರಗತಿಪರವಾದ ಕಂಪನಿಯೇ ಇಲ್ಲವೆಂಬುದು ಸಿದ್ಧವಾಗುತ್ತದೆ.

ಸುಲಭ ಕಂತು ! ಸಾಕಷ್ಟು ಸೌಕರ್ಯ ! ಹೆಚ್ಚಾಗಿ ಲಾಭ ! ! !

ವಿಮೆಯ ಹಣ ಒಂದು ಕೋಟಿ! ೬೧ ತಿಂಗಳಲ್ಲಿ ಹೆಚ್ಚಾಗಿ ಉತ್ಪನ್ನವಾದದ್ದು ರೂ ೧,೭೯,೦೦೦

ಏಜಂಟರು ಬೇಕು! ಧಾರಾಳವಾದ ಕಮಿಶನ್ !

ವಿಳಾಸ:- ಎಸ್. ಕೆಬ್ಬೂರ ಬಿ. ಎ. ಎಫ್ ಎಸ್. ಎಸ್. (ಲಂಡನ್) ಅಸಿಸ್ಟಂಟ ಮ್ಯಾನೇಜರ (ಡೆಪ್ಯುಟೇಶನ್) ಜನರಲ್ ಅಶ್ಯೂರನ್ಸ ಸೊಸಾಯಿಟಿ ಲಿ ಬ್ರಾಂಚ ಆಫೀಸ ಬಿಲ್ಡಿಂಗ ಸ್ಟ್ರೀಟ. ಜಮರೂದ ಹಾಸ್ಪಿಟಲ್‌ದ ಎದುರು ಮುಂಬಯಿ;

GENERAL ASSURANCE SOCIETY AJMER

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾ ಯಂತ್ರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ ನಂ. ಬಿ. ೧೯೪೭ ವಾ. ಚಂದಾ ೧—೧೩—೦ ಮಾತ್ರ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ.)

ಯದ್ಯತ್ ಪರವಶಂ ಕರ್ಮ । ಯದ್ಯದಾತ್ಮವಶಂ ಸುಖಮ್ ॥ — ಮನು

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟೆ ರವಿವಾರ ಮಿತಿ ಚೈತ್ರ ಬಹುಳ ೭ ಶಕೆ ೧೮೪೯ ತಾ|| ೨೪ ೪-೧೯೨೭. | ಸಂಚಿಕೆ ೪
Date 24—4 1927.

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ.

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವದು ಮತ್ತು ಜೋಡಿಸುವದು. ಅವುಗಳೊಳಗಿನ ಕಟ್ಟುಬಟ್ಟು ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು. ಇವೆಲ್ಲವನ್ನು ನಮ್ಮ ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುತ್ತೇವೆ. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯಲ್ಲದೆ ಬೇಗದಲ್ಲಿ ಸುರಳಿತರಾಗುತ್ತಾರೆ. ಆದ್ದರಿಂದ ಕನ್ನಡ ಜನರಿಗ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಜ್ಞಾನವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಶಾಸ್ತ್ರ ಮೋಟಾರ ನಡೆಸುಸಲು ಕಲಿಸುವ ರೀತಿಯು ಬಹಳ ಸುಲಭವಾಗಿದ್ದು, ಮನಸಿಗೆ ಸೊಗಸುವಂತಿದ್ದು ಚಿತ್ರದೆ ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಉಳಿದಕಡೆ ಎಲ್ಲಿಯೂ ಇಷ್ಟು ಕಮ್ಮಿ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದು ಕೊಳ್ಳಿರಿ!

ವಿಳಾಸಃ—ಕುಲಕರ್ಣಿ ಮೋಟಾರ ಸ್ಕೂಲ.
೪೯೫ ಶನಿವಾರ ಪೇಠ ಜಮಖಂಡಿಕರ ವಾಡೆ ಪುಣೆ ಶಹರ.

S. U. Narayanacharya & Co.
Chamundamba Bazar, City.

ನಮ್ಮಲ್ಲಿ ಎಲ್ಲಾ ತರದ ಚಿತ್ರಪಟ, ತಾಂಬೂಲ ಜವಿಕಣ, ಜಾಸಿ ದ, ಕಾಶ್ಮೀರ ... ರುದ್ರಾಕ್ಷಿ, ಕಸ್ತೂರಿ ಲಿಂಗಗಳೂ ಸ್ಫಟಿಕದ ... ಮೊದಲಾದ ಮಾಲೆಗಳ ಕ್ಯಾಟಲಾಗ ಕೋ... ವಿಳಾಸ—ಶಿ... ಕಂಪನಿ ಚಾಮುಂಡಾಂಬಾ ಪೇಟಿ

ನಪುಂಸಕತ್ವ

ಧಾತು ವಿಕಾರ ಸ್ವಪ್ನಾವಸ್ಥೆ, ಅಶಕ್ತತೆ ಇತ್ಯಾದಿಗಳಮೇಲೆ ಮೊಡಿತವಾಗಿ ಗುಣಕೊಡುವ ಮತ್ತು ಕಡೇವರ ಬಾಳುವ ದಿವ್ಯ ಔಷಧಿ! ಒಂದೇ ಗುಳಿಗೆ!!

ಪರೀಕ್ಷಾರ್ಥ ...

... ಜವಾಗಿ ... ರ.
ಮು. ಪೋ: ಇಂಡಿ. (ವಿಜಾಪೂರ)

ವಾಣಿಜ್ಯದ ಪರಿಚಯ.

ಅಜಮೀರದ ಜನರಲ್ ಅಶ್ಯೂರನ್ಸ ಕಂಪನಿಯ ೮ನೇ ಲಾಭ ಹಂಚುವಿಕೆಯ ವರದಿಯು ಕೈಸೇರಿದೆ. ೧ ವರ್ಷ ೯ ತಿಂಗಳಲ್ಲಿ (೧೯೩೪ ಎಪ್ರಿಲ ೧ ರಿಂದ ೧೯೩೫ ಡಿಸೆಂಬರ ೩೧) ೧,೦೯,೫೧೨ ರೂ. ಲಾಭವಾಗಿದೆ. ಆಯುಷ್ಯದ ಕಂತಿನವರೆಗೆ (ಹೋಲ ಲಾಯಿಫ) ೨೦ ರೂ, ಲಾಭಯುಕ್ತ (ಎಂಡೌಮೆಂಟ) ವಿಮೇದಾರರಿಗೆ ೧೬ ರೂ. ಲಾಭವೆಂದು ಪ್ರತಿ ಸಾವಿರಕ್ಕೆ ಹಂಚಲ್ಪಟ್ಟಿವೆ ೧॥ ವರ್ಷದ ಅವಧಿಯಲ್ಲಿ ಇಷ್ಟೊಂದು ಲಾಭ ಹಂಚಿದ ೧೯ ವರ್ಷದ ಕಂಪನಿಯೆಂದರೆ ಇದೊಂದೇ, ಪಾಲುಗಾರರಿಗೆ ನೂರಕ್ಕೆ ೯ ರಂತೆ ಲಾಭ ಹಂಚಲ್ಪಟ್ಟಿದೆ. ೧೯೩೧ ರಿಂದ ೧೯೩೫ ರಲ್ಲಿ ೩೬೦ ವಿಮೆದಾರರು ಸಾಯಬಹುದೆಂದು ಇವರ ಲೆಕ್ಕವಿತ್ತು. ಆದರೆ ಕೇವಲ ೨೦೬ ಜನರು ಮಡಿದರು. ಇದರಿಂದ ವಿಮೇದಾರರನ್ನು ದಕ್ಷತೆಯಿಂದ ಆರಿಸುತ್ತಾರೆಂಬುದು ಸಿದ್ಧವಾಗುತ್ತದೆ. ಸಾಲಕೊಟ್ಟ ಹಣದ ಬಡ್ಡಿಯು ಸಮಾಧಾನಕರವಾಗಿ ಬಂದಿದೆಯಾದ ರಿಂದ, ಹಣವನ್ನು ಒಳ್ಳೇ ಧನಿಕರಿಗೆ ಕೊಡುತ್ತಿರುವವೂ ಗೊತ್ತಾಗುತ್ತದೆ. ೨೦ ಸಾವಿರ ರೂ. ಗಳನ್ನು ಅಡತ್ ಧನವೆಂದು ತೆಗೆದಿಟ್ಟಿದ್ದಾರೆ. ಭಾರತೀಯರಿಂದ ನಡೆದ ಈ ಕಂಪನಿಯು ದಿನೇ ದಿನೇ ಅಭಿವೃದ್ಧಿ ಹೊಂದಲೆಂದು ಹಾರೈಸುತ್ತೇವೆ.

ಮುಂಬೈ ಡಿಸ್ಟ್ರಿಕ್ಟ ಪೋಲೀಸ ಆಕ್ಟ ಕಲ್ಮ ೪೫ (೧) ಪ್ರಕಾರಾ

ನೋಟಿಸು

ಈಗ ವಿಜಾಪೂರ ಜಿಲ್ಲೆಯಲ್ಲಿ ಮಾರಿಕಾ ರೋಗವು ಬಹಳ ಜೋರಿಯಿಂದ ನಡೆದಿರುತ್ತದೆ. ಈ

ಗ್ರಾಮ	ತಾಲೂಕ	ಜಾತ್ರೆಯು ಆಗುವ ಅಂದಾಜು ತಾರೀಖು
ಬ್ಲೇಶ್ವರ	ವಿಜಾಪೂರ	೩೦-೬-೧೯೩೭
ಕನಮಡಿ	"	೧೭-೪-೧೯೩೭
ಸಾಲವಾಡಗಿ	ಬಾಗೇವಾಡಿ	ಮೇ ೧೯೩೭
ಕಣಕಾಲ	"	ಮೇ ೧೯೩೭
ಬೂದಿಹಾಳ	ಮುದ್ದೇಬಿಹಾಳ	ಮೇ ೧೯೩೭
ನಂದಿಕೇಶ್ವರ	ಬದಾಮಿ	೧೬-೬-೧೯೩೭
ಗುಡೂರ	ಹುನಗುಂದ	೧೬-೫-೧೯೩೭
ಬೂದಿಹಾಳ	ಬಿಳಗಿ (ಪೇಠಾ)	೨೭-೪-೧೯೩೭
ಸಾಗರಾಳ	"	೧೭-೪-೧೯೩೭
ಸಾಲೋಟಗಿ	ಇಂಡಿ	೨೮-೪-೧೯೩೭

ಜಿಲ್ಹೆಯೊಳಗಿನ ಬಾಜೂಕ್ಕೆ ತೋರಿಸಿದ ಗ್ರಾಮಗಳಲ್ಲಿ ಆವ್ರುಗಳೆದುರಿಗೆ ತೋರಿಸಿದ ತಾರೀಖು ಅಗರ ಆ ಸುಮಾರಕ್ಕೆ ಆಗುವ ಜಾತ್ರೆಗಳಿಂದಾ ಸದರಿ ಮಾರಿಕಾ ರೋಗವು ಹೆಚ್ಚು ಹಬ್ಬುವ ಸಂಭವವಿದೆ

ಕಾರಣ ಸಾರ್ವಜನಿಕ ಆರೋಗ್ಯತೆ ಮತ್ತು ಸುರಕ್ಷಿತತನದ ಕಡೆಗೆ ಲಕ್ಷಕೊಟ್ಟು ಮೆ॥ ಡಿ।ಮ್ಯಾಜಿಸ್ಟ್ರೇಟ ಸಾ॥ ಬಾ॥ ರವರು ಈ ವರ್ಷ ಸದರಿ ಜಾತ್ರೆಗಳು ಆಗಬಾರದು ಮತ್ತು ಜನರು ಅಲ್ಲಿಗೆ ಹೋಗಬಾರದು ಅಂತಾ ಫರ್ಮಾಯಿಸುತ್ತಾರೆ.

೨ ಈ ನೋಟಿಸು ಉಚಿತ ರೀತಿಯಿಂದ ಎಲ್ಲಕಡಿಗೂ ಪ್ರಸಿದ್ಧ ಮಾಡಬೇಕು ತಾ|| ೧೪ ಯಪ್ರಿಲ ೧೯೩೭ ಯಿಸ್ವಿ

ವ್ಹಿ. ಎಚ್. ನಾಯಕ
ಡಿ।ಮ್ಯಾಜಿಸ್ಟ್ರೇಟ ವಿಜಾಪೂರ

ನೋಟಿಸು

ಈ ನೋಟಿಸಿನ ಮೂಲಕ ಯಾವತ್ತು ಜನರಿಗೆ ತಿಳಿಗೆ ಸಹಿ ಮಾಡುವ ಶಿದ್ಧಲಿಂಗಪ್ಪ ನಾಗಪ್ಪ ಹುಚ ಬಾಳಪ್ಪನವರ ಸಾ॥ ಕಮತಗಿ ತಾಲೂಕ ಹುನಗುಂದ ಇವರ ಕಡಿಂದಾ ತಿಳಿಸುವದೇನಂದ್ರೆ

ನಮ್ಮ ಖಾಸ ಅಣ್ಣಾ ರೇವಣೆಪ್ಪ ನಾಗಪ್ಪ ಹುಚ್ಚಬಾಳಪ್ಪನವರ ಈತ ಅಜಮಾಸ ಒಂದು ತಿಂಗಳ ಕೆಳಗೆ ಮೃತವಾಗಿರುತ್ತಾನೆ ಮೃತನಿಗೆ ನಾಲ್ಕುವರಿ ತಿಂಗಳ ವಯಸ್ಸಿನ ನಾಗಪ್ಪ ಅಂಬುವ ಮಗನಿರುತ್ತಾನೆ ಮೃತನ ಹೆಂಡತಿ ಮಲ್ಲವ್ವ ಗಂಡ ರೇವಣೆಪ್ಪ ಇಕಿ ದುಷ್ಟ ಜನರ ಮಾತು ಕೇಳಿ ಸದ್ರಿ ನಾಗಪ್ಪ ಅಂಬುವ ಹುಡುಗನನ್ನು ಮುಳಿಗಿಸುವ ಇರಾದೆಯಿಂದ ಕಮತಗಿ ಗ್ರಾಮದ ಶಿವಲಿಂಗಪ್ಪ ಗೌಡ್ರ ಇವರ ಪೇಟೆಯೊಳಗೆ ಇರೋ ಇಮಲಾಉಳ್ಳ ಮನಿ ವ ಬೈಲ ಜಾಗಾ ಪೂರ್ವ ಪಶ್ಚಿಮ ಮಳಾ ೧೮ ಉತ್ತರ ದಕ್ಷಿಣ ಮಳಾ ೨೪ ಇವರ ಚಕಬಂದಿ ಪೂರ್ವಕ್ಕೆ ಬೈಲ ಜಾಗಾ ಪಶ್ಚಿಮಕ್ಕೆ ಶುಕ್ಕಪ್ಪ ಎರಗಲ್ಲ ಮನಿ ಉತ್ತರಕ್ಕೆ ಶಿದ್ದರಾಮಪ್ಪ ದೊಡಭಾಪ್ರಿಮನಿ ದಕ್ಷಿಣಕ್ಕೆ ಸರಕಾರಿ ರಸ್ತೆ ಈ ಚಕಬಂದಿ ಮಧ್ಯದಲ್ಲಿ ಇರೋ ಇಮಲಾಉಳ್ಳ ಮನಿ ವ ಬೈಲ ಜಾಗಾ ಸಹಿತ ಪೂರ್ವಕ್ಕೆ ಮುಖವಾಗಿ ಬಾಗಿಲ ಇರೋದು ಇದನ್ನು ಮತ್ತು ಜಂಗಮ ಆಸ್ತಿ ಅಂದ್ರೆ ಬೆಳ್ಳಿ ಬಂಗಾರ ಸಾಮಾನ ಮತ್ತು ಮಗ್ಗದ ಹಲಿಗಿ ಕುಂಟೆ ವಗೈರೆ ಯಾವತ್ತು ಮಾರಿಕೊಂಡು ತವರಮನಿಯವರಿಗೆಕೊಟ್ಟು ಉಡಕಿ ಆಗುವ ತಜವೀಜದಲ್ಲಿ ಇದ್ದಾಳೆ ಕಾರಣ ಇಕಿ ಕಡಿಂದಾ ಸದ್ರಿ ಮನಿ ಅಗರ ಇತರ ಯಾವ ತರದ ಇಷ್ಟೇಟ ಖರೀದಿ ಅಗರ ವತ್ತಿ ಬರೆಶಿಕೊಳ್ಳ ಬಾರದು. ಬರಶಿಕೊಂಡರೆ ಅವರ ಮೇಲೆ ಯೋಗ್ಯ ಕೋರ್ಟನಲ್ಲಿ ಫಿ॥ ಮಾಡುವದರಲ್ಲಿ ಬರುವದು ತಿಳಿಯುವದು ತಾರೀಖು ೧೮—೪—೧೯೩೭

ಇ. ಎ. ಹೆ. ಗು. ಶಿದ್ಧಲಿಂಗಪ್ಪಾ
ನಾಗಪ್ಪ ಹುಚ ಬಾಳಪ್ಪನವರ
ಈ ತನದು

ಉಚಿತ! ಸಮಯ!! ಉಚಿತ!!

ನನ್ನ ಶಾಸ್ತ್ರೀಯವಾದ ಶಾರೀರಕ ಶಿಕ್ಷಣ.

ಈ ಪುಸ್ತಕದಲ್ಲಿ ನನ್ನ ಮತ್ತು ನನ್ನ ಶಿಷ್ಯರ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವವಲ್ಲದೆ, ಅಂತಹ ಶರೀರ ದಾರ್ಢ್ಯವು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವುದು. ನನ್ನಲ್ಲಿ ಕಂಬಿಯುತ್ತಾರೆಂಬ ಅಭಿಪ್ರಾಯಗಳೂ ಅದರಲ್ಲಿರುವವು. ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ. ಟಪ್ಪಾಲು ಹಾಸಲು ೨ ಆಣೆಯ ಸ್ಟಾಂಪುಗಳನ್ನು ಕಳುಹಿಸಿಕೊಟ್ಟಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇವೆ ಈ ಸುಸಮಯವನ್ನು ಕಳೆದುಕೊಳ್ಳದೆ, ಕಾಲಾತೀತ ಮಾಡದೆ, ಇನ್ನು ಈ ಯೋಜನೆಯಲ್ಲಿ ನೀವಿರುವಾಗಲೇ ಈ ಪುಸ್ತಕಕ್ಕಾಗಿ ಬರೆಯಿರಿ.

ನಮ್ಮ ವಿಳಾಸ
ಪ್ರೊಫೆಸರ ಎಂ. ವಿ. ಕೃಷ್ಣರಾವ್.
ಬಸವನಗುಡಿ, ಬೆಂಗಳೂರು ಸಿಟಿ.

ಕನ್ನಡಿಗ.

ಬಾಗಲಕೋಟೆ ಚೈತ್ರ ಬಹುಳ ೭ ಶಕೆ ೧೮೫೯

ಸಂಪಾದಕರ ಭೂಮಿ

(ಓಂ)

ನನ್ನ ಮನಸಿನ ಮೇಣವಾಡಿ ಕಟ್ಟುವೆನಾನು।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಸ್ತು।
ಚನ್ನದಾದರು ಚಿನ್ನ ಮೇಣಬತ್ತಿಯು ನೊಂದು ಚಿನ್ಮಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ।
ಕನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೊ॥

—ಅಂಬಿಕಾತನಯ ದತ್ತ

ಕೊಡಗಿನ ಕನ್ನಡಿಗರಿಗೆ ಮೊನ್ನೆ ಶ್ರೀ. ಶ್ರೀನಿವಾಸ ಅಯ್ಯಂಗಾರರ ದರ್ಶನದ ಲಾಭವು ದೊರೆಯಿತು. ರಾಜಕರಣದಲ್ಲಿ ಪ್ರಸಿದ್ಧರಾದ ಮಹಾನುಭಾವರಿಗೆ ಹಿಂದಕ್ಕೆ ಕೊಡಗಿನಲ್ಲಿ ಪ್ರವೇಶಿಸಲಿಕ್ಕೂ, ಅಲ್ಲಿ ವ್ಯಾಖ್ಯಾನಗಳನ್ನು ಕೊಡಲಿಕ್ಕೂ, ಅಲ್ಲಿಯ ಸರಕಾರವು ನಿರ್ಬಂಧನೆಯನ್ನುಂಟು ಮಾಡಿತ್ತು. ಆದರೆ ಈಗ್ಗೆ ಕಾಂಗ್ರೆಸ್ಸದ ಅಧ್ಯಕ್ಷರಿಗೆ ಯಾವ ಬಗೆಯ ಆತಂಕವನ್ನುಂಟು ಮಾಡದಿರುವದನ್ನು ಕಂಡು ನಮಗೆ ಆನಂದವಾಗಿದೆ ಕೊಡಗಿನ ಕನ್ನಡಿಗರು ಶ್ರೀಮಾನ್ ಶ್ರೀನಿವಾಸ ಅಯ್ಯಂಗಾರರು ಹೇಳಿದಂತೆ ತಮ್ಮ ರಾಜಕೀಯ ಹಕ್ಕುಗಳನ್ನು ದೊರಕಿಸಲು ಒಂದೇಸವನೆ ಇನ್ನು ಸ್ವಲ್ಪಾದರೂ ಚಳವಳವನ್ನು ಹೂಡಬೇಕು. ಕರ್ನಾಟಕದ ಏಕೀಕರಣದ ಗಾಳಿಯು ಕೊಡಗಿನಲ್ಲಿ ಅಷ್ಟೊಂದು ಹಬ್ಬಿಲ್ಲ. ಇಷ್ಟೇ ಅಲ್ಲದೇ, ಅಲ್ಲಿಯ ಓರ್ವ ಮಹನೀಯರು ಕೊಡಗನ್ನು ಮದ್ರಾಸ ಶಾಸನ ಸಭೆಗೆ ಸೇರಿಸಬೇಕೆಂದು ಅಭಿಪ್ರಾಯಪಟ್ಟಿರುವರಾಗಿ ಕೇಳುತ್ತೇವೆ. ಇದು ನಿಜವಿದ್ದರೆ, ಕರ್ನಾಟಕದ ಏಕೀಕರಣದ ಕಲ್ಪನೆಯು ಸಹ ಕೊಡಗಿನಲ್ಲಿ ಬೇರೂರಿಲ್ಲವೆನ್ನಬೇಕು. ಏಕೀಕರಣ ಸಂಘದವರು ಇದನ್ನರಿತು ಏನು ಮಾಡುವರು?

ಧರ್ಮ ಪೀಠಗಳ ದುರವಸ್ಥೆಯು ನಿವಾರಣೆಯ ಬಗ್ಗೆ ಅನೇಕದಿನಗಳಿಂದ ವಿಚಾರವು ನಡೆಯುತ್ತಲಿದೆ. ವ್ಯಾಖ್ಯಾನ, ವೃತ್ತಪತ್ರಗಳಲ್ಲಿ ಸಹ ಈ ವಿಷಯವು ಚರ್ಚಿಸಲ್ಪಡುತ್ತಲಿದೆ ಆದರೆ ಈ ಪೀಠಗಳಲ್ಲಿ ಸುಧಾರಣೆಯು ವಿಶೇಷವಾಗಿ ಕಂಡುಬರುವದಿಲ್ಲ ಆದರಲ್ಲಿಯಂತೂ ಉತ್ತರಾದಿ ಮಠದಲ್ಲಿ ಸುಧಾರಣೆಯ ಮಾತನ್ನೇ ಎತ್ತುವಂತಿಲ್ಲ! ಈಗ್ಗೆ ಧಾರವಾಡದ ಪತ್ರಿಕೆಗಳಲ್ಲಿ ಈ ಬಗ್ಗೆ ಚರ್ಚೆ ನಡೆಯಾಗಿದ್ದು ಸರಿಯಾಯಿತು. ಧಾರವಾಡಿಗರು ಅದನ್ನು ಕೊನೆಗಾಣಿಸದೇ ಬಿಡಲಾರರೆಂದು ನಂಬಿದ್ದೇವೆ. ನಂದಗಡದ ಓರ್ವ ಸದ್ಗೃಹಸ್ಥರಿಗೆ ಮಠದ ದಿಂಡೇರಿಂದಾದ ಅನ್ಯಾಯವು ನಿವೇದಿಸಲ್ಪಟ್ಟಿದೆ. ಈ ವಿಷಯವಾಗಿಯೂ ಶ್ರೀ. ಕರ್ಪೂರ ಶ್ರೀನಿವಾಸರಾವ ಶ್ರೀ. ದೇಸಾಯಿ ಹಣಮಂತರಾಯರಂತಹ ಸಜ್ಜನರಿಗೆ ಒಪಿಸ್ಮಾರ, ಅಂಟಿನುಂಡಿಯ ಭೋಜನ ಸಮಾರಂಭ, ಮಹಾ ದಕ್ಷಿಣೆ ದೊರೆತ ಕೂಡಲೇ, ಬ ಹಿ ಷ್ಕ ರ ಕ್ಕೆ ಯೋಗ್ಯರಾದ ವ್ಯಭಿಚಾರಿಗಳಿಗೆ ಸಹ ಬದಿಯಿಂದ ಮಠಕ್ಕೆ ಬರಮಾಡಿಕೊಳ್ಳುವದು ಇವೇ ಮೊದಲಾದ ಸಂಗತಿಗಳು ಭಕ್ತರಿಗೆ ಬೇಸರವನ್ನುಂಟು ಮಾಡಿವೆ. ಈಗಿನ ಶ್ರೀಗಳವರು ಪಾಂಡಿತ್ಯದಲ್ಲಿ ಹೆಸರಾದವರು. ಆದುದರಿಂದ ಧಾರವಾಡಿಗರು ಅವರ ಮುಂದೆ ಈ ವಿಷಯಗಳನ್ನಿಟ್ಟು ಮಠದಲ್ಲಿ ಸದ್ಧರ್ಮದ ಗಾಳಿಯು ಬೀಸುವಂತೆ ಪ್ರಯತ್ನ ಪಟ್ಟರೆ, ಒಂದು ದೊಡ್ಡ ಕಲ್ಯಾಣವನ್ನು ಮಾಡಿದಂತಾಗುವದು.

ಕರ್ನಾಟಕದಲ್ಲಿ ಉದ್ಭವವಾಗಿದ್ದ ಕನ್ನಡತ್ವದ ಮಹತ್ವವು ತಿಳಿದು ಒಂದೊಡನೆ ಅದನ್ನು ಕೃತಿಯಲ್ಲಿ ತರಲು ಹಾತೊರೆಯುತ್ತಿರುವವರೆಂದರೆ, ತರುಣ ದೇಶ ದಾಸರಾದ ಶ್ರೀಮಾನ್ ಕೌಜಲಗಿ ಹನುಮಂತರಾಯರು. ಇವರು ಮುಧೋಳ ಸಂಸ್ಥಾನದವರಾದ್ದರಿಂದ ಪ್ರಾಥಮಿಕ ಶಿಕ್ಷಣವು ಮರಾಠಿಯಲ್ಲಿ ದೊರೆಯಿತು. ಮರಾಠಿಯ ಗಾಳಿಯೇ ಅವರಿಗೆ ತಗಲುತ್ತಿದ್ದದರಿಂದ ಆಚಾರ ವಿಚಾರಗಳೆಲ್ಲ ಮರಾಠಿಯವಾದವು. ಆದರೆ ಕರ್ನಾಟಕದಲ್ಲಿ ಪ್ರತ್ಯಕ್ಷವಾಗಿ ದೇಶ ಸೇವೆಯನ್ನು ಪ್ರಾರಂಭಿಸಿದ ಮೇಲೆ ಕರ್ನಾಟಕತ್ವದ ಕಲ್ಪನೆಯೂ ಮಹಾತ್ಮೆಯೂ ಅವರಿಗೆ ತಿಳಿಯಹತ್ತಿತು. ಶ್ರೀ. ಹನುಮಂತರಾಯರಂತಹ ಸ್ಥಿತಿಯಲ್ಲಿದ್ದ ಬೇರೆ ದೇಶಭಕ್ತರೂ ಕನ್ನಡ ತರುಣರೂ ಕರ್ನಾಟಕದಲ್ಲಿ ವಾಸವಾಗಿದ್ದ ಮರಾಠಿ ತರುಣರೂ ಶ್ರೀಮಾನ್ ಹನುಮಂತರಾಯರ ಪವಿತ್ರವೂ ನ್ಯಾಯಪ್ರದವೂ ಆದ ಸದ್ಬುದ್ಧಿಯ ಮೇಲ್ಪಂಕ್ತಿಯನ್ನು ತಿಳಿದರೆ ಕರ್ನಾಟಕದಲ್ಲಿದ್ದ ಕನ್ನಡ ಮರಾಠಿಯ ವಾದವು ತಾನಾಗಿಯೇ ಮಾಯವಾಗುವದು. ಈ ವಿಷಯದಲ್ಲಿ ಮೇಲೆ ಹೇಳಿದಂತಹ ಜನರಿಗೆಲ್ಲರಿಗೂ ಮಾರ್ಗದರ್ಶಿಯಾದ್ದರಿಂದ ಶ್ರೀಮಾನ್ ಕೌಜಲಗಿಯವರಿಗೆ ಆ ಜನರು ಋಣಿಯಾಗಿರಬೇಕು. ಈ ಮಾತನ್ನು ಈಗ್ಗೆ ಎತ್ತಿ ಬರೆಯಲು ಶ್ರೀಯುತ ಹನುಮಂತರಾಯರಿಂದ ನಮ್ಮ ಕಡೆಗೆ ಬಂದ ಕೆಳಗಿನ ಪತ್ರವೇ ಕಾರಣವಾಗಿದೆ:-

ಗಲಗಲಿ ಕ್ಷೇಮ
ತಾ|| ೧೮-೪-೩೭

ಕೃಪಾನೇಕ ಸಾ. ನ. ವಿ. ವಿ.

ಈಗ ತಮಗೆ ಪತ್ರ ಬರೆಯುವ ಕಾರಣವೇನಂದರೆ ನಾನು ಖಾದಿ ಕಾರ್ಯದ ನಿಮಿತ್ತದಿಂದ ಹಳ್ಳಿಗಳಲ್ಲಿ ತಿರುಗುವದು ತಮಗೆ ಗೊತ್ತಿದೆ. ಕೆಲವಳದಿಯಲ್ಲಿ ಪ್ರಾಚೀನ ಶಿಲಾಲೇಖಗಳು ಇನ್ನೂ ಯಾರ ಲಕ್ಷ್ಯಕ್ಕೆ ಬಾರದೇ ಹಾಗೇ ಬಿದ್ದ ಸಂಗತಿಯಾದರೂ ತಮಗೆ ಗೊತ್ತುಂಟು. ನನ್ನಿಂದಾದಷ್ಟು ಶಿಲಾಲೇಖಗಳ ಭಾಷಗಳನ್ನು ಬೇರೆ ಕಾಗದಗಳ ಮೇಲೆ ತಗೆದುಕೊಂಡು ಧಾರವಾಡದ ಇತಿಹಾಸ ಮಂಡಲಕ್ಕಾಗಲೀ ಅಥವಾ ವಿಜಾಪುರಕ್ಕೆ ರಾ. ಹಲಕಟ್ಟೀ ಯವರಲ್ಲಿಗಾಗಲೀ ಕಳಿಸಬೇಕೆಂದು ವಿಚಾರ ಮಾಡಿರುತ್ತೇನೆ. ಆದರೆ ಈ ಕೆಲಸಕ್ಕೇ ಹತ್ತುವ ಉಪಕರಣನ್ನು ಕಳಿಸಲಿಕ್ಕೆ ಧಾರವಾಡ ಮತ್ತು ವಿಜಾಪುರಕ್ಕೆ ಬರೆದಿರುತ್ತೇನೆ. ಸದ್ಯಕ್ಕೆ ತಮ್ಮ ಅಪ್ಪ ಮನಿಯಲ್ಲಿದ್ದ ದೊಡ್ಡ ಕಾಗದಗಳನ್ನು (೧೫) ಗಲಗಲಿಗೆ ಬರುವ ಜನರ ಸಂಗಡಾ ಕಳಿಸಿದರೆ ಉಪಕೃತನಾಗುವೆನು. ಮಿಕ್ಕ ಉಪಕರಣಗಳೆಂದರೆ (Bresh & pad) ಇಲ್ಲೆ ತಯಾರಿಸಿದ್ದೇನೆ. ಯಮನಿಯ ನಭ್ಯಾಂಕಿನಲ್ಲಿ ನಾಡಿದೇ ಶೋಧ ಮಾಡಿದರೆ ಗಲಗಲಿಗೆ ಬರುವ ಜನರು ಭೆಟ್ಟಿಯಾದಾರು. ನನ್ನ ಆಯುಷ್ಯದಲ್ಲಿ ಇದೇ ಮೊದಲನೆಯ ಕನ್ನಡ ಪತ್ರ ಇದ್ದದರಿಂದಾ ಪುಷ್ಕಳ ತಪ್ಪು ಇದಿದ್ದಾವು ಆದರೆ ಅವುಗಳಬಗ್ಗೆ ತಾವು ಕ್ಷಮಿಸೀರೆಂದು ಆಶಿಸುತ್ತೇನೆ- ಕಾಗದಗಳನ್ನು ತೀವ್ರ ಕಳಿಸಬೇಕಾಗಿ ವಿನ್ನಹ ಇಂತೀ ನಮಸ್ಕಾರಗಳು-

ತಮ್ಮ ವಿಧೇಯ
ಹಣಮಂತ ಶ್ರೀಪತ ಕೌಜಲಗಿ.

ಈ ಪತ್ರದಿಂದ ಹೊರಸೂಸುತ್ತಿರುವ ಸುಗಂಧದ ಬಗ್ಗೆ ಬೇರೆ ಬರೆಯುವದು ಅನಾವಶ್ಯಕವು.

ಕನ್ನಡಿಗನಿಗೆ ಜನರು ಏನನ್ನುತ್ತಾರೆ?

ಭಾಸ್ಕರವಿಲಾಸ ಪೇಟೆ

ಮಹನೀಯರೇ, ಮದ್ರಾಸ. ೬-೪-೨೭

(೧) "ಬದರೀನಾಥ ವರ್ಣನೆ"ಯನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿ ಮುಗಿಸಿದ ಬಳಿಕ, ವಿಸ್ತಾರಪಡಿಸಿ ಪುಸ್ತಕರೂಪವಾಗಿ ಅಚ್ಚು ಹಾಕಿದರೆ ಚೆನ್ನಾಗಿರುವುದೆಂದು ಸೂಚಿಸುತ್ತೇನೆ. 'ಕನ್ನಡಿಗ' ನ ಪುಟಗಳನ್ನು ೧೬ ಕ್ಕೆ ಏರಿಸಿ, ವಾರ್ತಾವಳಿಯನ್ನು ಬಹಳವಾಗಿ ಹೆಚ್ಚಿಸಿದರೆ ಚಂದಾದಾರರ ಸಂಖ್ಯೆಯೂ ಬಹಳವಾಗಿ ಹೆಚ್ಚದಿರದು ವಾರ್ಷಿಕ ವರ್ಗಣಿ ೩ ರೂ. ಇಡಬಹುದೆಂದು ನನ್ನ ಅಭಿಪ್ರಾಯ ಈಗ ಇದ್ದಂತೆಯೇ ಸಾಗಿಸಿದರೆ ಉದ್ದೇಶವು ತಕ್ಕಂತೆ ನೆರವೇರುವುದಿಲ್ಲವೆಂದು ನನ್ನ ಮನಸ್ಸಿಗೆ ತೋರುತ್ತದೆ

ಇಂತು ತಮ್ಮ ಹಿತೇಚ್ಛು-

ಬೆನಗಲ್ ರಾಮರಾಯ.

(೨)

ರಾ. ರಾ 'ಕನ್ನಡಿಗ' ನ ಸಂಪಾದಕರಿಗೆ

'ಕನ್ನಡಿಗ' ನು ಮಾಡಿದ ಕರ್ನಾಟಕ ಸೇವೆ-

ಯಾವುದೊಂದು ಧ್ಯೇಯವನ್ನಿಟ್ಟುಕೊಂಡು ಹೊರಟ ಪತ್ರಿಕೆಗಳು ಕನ್ನಡದಲ್ಲಿ ಕಡಿಮೆ. ಗಾಳೀಪಟಗಳಂತೆ; ಎತ್ತ ಬೇಕಾದತ್ತ ಹಾರಾಡುವ ಪತ್ರಿಕೆಗಳೇ ಬಹಳ. 'ಕನ್ನಡಿಗ' ನು ಹಾಗೆಮಾಡದೆ ಕರ್ನಾಟಕದ ಸೇವೆಯನ್ನು ಮಾಡುವ ಮುಖ್ಯ ಧ್ಯೇಯವನ್ನಿಟ್ಟುಕೊಂಡಿರುವುದರಿಂದ, ಈ ಪತ್ರಿಕೆಗೆ ಒಂದು ಹೊಸ ಸ್ವರೂಪವು ಪ್ರಾಪ್ತವಾಗಹತ್ತಿರುತ್ತದೆ. ಕರ್ನಾಟಕದಲ್ಲಿ ಸಾಮಾನ್ಯ ಜನರಿಗೂ ಕೊಳ್ಳಲಿಕ್ಕೆ ಅನುಕೂಲವಾಗಬೇಕೆಂದು, **ಇಂದಿನವರೆಗೆ ಯಾರೂ ಮಾಡದಿದ್ದ ಸಾಹಸವನ್ನು** ಮಾಡಿ, ವರ್ಷಕ್ಕೆ ಒಂದೇ ರೂಪಾಯಿ ಚಂದಾ ಇಟ್ಟು ಶ್ರೀ. ಶ್ರೀನಿವಾಸ ರಾಯರು ಈ ಪತ್ರಿಕೆಯನ್ನು ಹೊರಡಿಸಿದ್ದಾರೆ. ಆದರೆ, ನಮ್ಮ ಕರ್ನಾಟಕವು ಅವರ ಸಾಹಸಕ್ಕೆ ಮೆಚ್ಚಿ ಅವರಿಗೆ ಪ್ರೋತ್ಸಾಹನ ಕೊಡುವದಂತೂ ಒತ್ತಟ್ಟಿಗಿರಲಿ, ಅವರು ಈ ವಿಷಯದಲ್ಲಿ ಬಹಳೇ ಹಾನಿಯನ್ನು ಸಹಿಸಿದ್ದರೂ ಅವರಿಗೆ ಧೈರ್ಯಕೊಡುವವರೂಯಿಲ್ಲ. ಆದರೂ ಶ್ರೀ- ಶ್ರೀನಿವಾಸರಾಯರು ಪುನಃ ಮುಂದಿನ ವರ್ಷ ಅದನ್ನು ನಡೆಸುವ ಭಾರವನ್ನು ಹೊತ್ತಿರುವರು. ಅದರಲ್ಲಿ ಮತ್ತೆ ಅನೇಕ ಸುಧಾರಣೆಗಳನ್ನು ಮಾಡುವ ಸಂಕಲ್ಪಮಾಡಿರುವರು. ಇಷ್ಟು ಅಗ್ಗದ ವರ್ತಮಾನಪತ್ರವು ಬೇರೊಂದಿಲ್ಲ. ಕರ್ನಾಟಕದ ಅಭಿಮಾನಿಗಳು ಅದಕ್ಕೆ ಕೈಗೊಟ್ಟು ಅದರಿಂದ ಸೇವೆಯನ್ನು ಕೈಕೊಳ್ಳಬೇಕು. ಯಾರು ಎಷ್ಟು ಚೆಲೋ ಬರೆಯಲಿ, ಯಾರು ಎಷ್ಟು ಅಗ್ಗವಾಗಿ ಕೊಡಲಿ, ನಾವು ಅದರಕಡೆಗೆ ಕಣ್ಣೆತ್ತಿ ನೋಡುವವರಲ್ಲ! ಎಂದು ಹಟಹಿಡಿದಿದ್ದರೆ, ಮಾತ್ರ ಉಪಾಯವಿಲ್ಲ. ಕರ್ನಾಟಕವು ಅಷ್ಟು ಅಭಿಮಾನ ಶೂನ್ಯವಾಗಿಲ್ಲನೆಂದು ನಾವು ತಿಳಿಯುತ್ತೇವೆ.

೬-೪-೨೭

ಆಲೂರ ವೆಂಕಟರಾಯ.

(೩)

ಪೇಟಾ ಶ್ರೀ ತಾ|| ೧೫-೩-೨೭

ಕ. ಕ. ವಿ. ವಿ.

ನಾವು ವಾಡಿಕೆಯಂತೆ ನಮ್ಮ 'ಕನ್ನಡಿಗ' ಪತ್ರದ ಮುಂದಿನ ವರ್ಷದ ವರ್ಗಣಿ ೧-೧೦ ಇವತ್ತಿನ ದಿವಸಾ ತಮ್ಮ ವಿಳಾಸಕ್ಕೆ ಮನಿಯಾರ್ಡರ ಮಾಡಿದ್ದೇವೆ. ಮುಂಬೈ ಕರ್ನಾಟಕದಲ್ಲಿಯ ಕನ್ನಡ ಪತ್ರಿಕೆಗಳಲ್ಲಿ ನಿಮ್ಮ ಪತ್ರಿಕೆಯು ಮೇಲ್ತರದ್ದಾಗಿದೆಂದು, ಅದು ತನ್ನ ಕೃತಿಯಿಂದ ಸಿದ್ಧಪಡಿಸಿದೆಂದು ತಿಳಿಸಲು ನನಗೆ ಆನಂದವಾಗುತ್ತದೆ. ಕನ್ನಡಿಗನು ಚಿರಕಾಲ ಬಾಳಲೆಂದು ಹಾರೈಸುವ

ತಮ್ಮ,

ಬಿ. ಸಿ ಪಾಟೀಲ.

ಬಿ. ಏ. ಎಲ್. ಬಿ ಸಬ್ ಜಜ್ಜ ಪೇಟಾ.

(೪)

-ಶ್ರೀ- ಹಡಪಸರ, ಪೂನಾ ಜಿಲ್ಹಾ.

ಶುಕ್ರವಾರ ಚೈತ್ರ ಶು|| ೭ ೧೮೪೯.

ಮ|| ರಾ|| ಸಂಪಾದಕ ಮಹಾಶಯರ ಸ|| ಕೈ. ವಿಜ್ಞಾಪನೆಗಳು,

ಹೊಸವರ್ಷದ ಮೊದಲನೆಯ 'ಕನ್ನಡಿಗ' ನ ಸಂಚಿಕೆಯು ಈ ದಿನ ನನಗೆ ತಲುಪಿತು. ತಾವು 'ಕನ್ನಡಿಗ' ನನ್ನು ನಿಲ್ಲಿಸಬೇಕೆಂದು ಯೋಚಿಸಿದ್ದುದು ನನಗೆ ತಿಳಿಯಲಿಲ್ಲ. ಎಲ್ಲಾ ಸಂಗತಿಯೂ ಈದಿನ ಬಂದ ಸಂಚಿಕೆಯ ಅಗ್ರಲೇಖದಿಂದ ಗೊತ್ತಾಯಿತು. ಕನ್ನಡನಾಡಿನ, ಕನ್ನಡನುಡಿಯ, ಕನ್ನಡಿಗರ ಹಿತವನ್ನು ಬಯಸುತ್ತ ಆಬಗ್ಗೆ ಕೆಲಸಮಾಡುವುದೇ ಗುರಿಯಾಗಿ ಉಳ್ಳ 'ಕನ್ನಡಿಗ' ನು ಇನ್ನುಮುಂದೆ ಒಳವೆಯ, ಹೊಂವ್ಯೆಗಳಲ್ಲಿ ಮೆರುಗನ್ನು ಹೊಂದಿ ಅಭಿವೃದ್ಧಿಯಾಗಲೆಂಬುದೇ ನಮ್ಮ ಅನವರತ ಪ್ರಾರ್ಥನೆ.

ಅಗ್ರಲೇಖನದ ಮೂರನೆಯ ಪ್ಯಾರಾದಲ್ಲಿ ತಾವು ಎಚ್ಚರಿಸಿದಂತೆ ನಾಳೆನಾಡಿದ್ದರಲ್ಲಿ ಒಬ್ಬ ಚಂದಾದಾರರನ್ನು 'ಕನ್ನಡಿಗ' ನಿಗೆ ಸೇರಿಸಿ, ಹಣವನ್ನು 'ಮನಿಯಾರ್ಡರು' ಮಾಡುತ್ತೇನೆ. ನನ್ನ ಪರೀಕ್ಷೆ ಮುಗಿದಮೇಲೆ ಹೆಚ್ಚು ಜನರನ್ನು ಕೂಡಿಸುವ ಪ್ರಯತ್ನ ಮಾಡಲು ಸಿದ್ಧನಿರುತ್ತೇನೆ.

ಇಂತೀ ವಿಜ್ಞಾಪನೆಗಳು,

ಅ. ನ. ಮೂರ್ತಿ, ಬಿ. ಏ.

"ಕನ್ನಡಿಗ" ನಿಗೆ ಸಹಾಯವು.

ಕೆಳಗೆ ಕಾಣಿಸಿದ ಮಹನೀಯರು, 'ಕನ್ನಡಿಗ' ನ ೧ ನೇ ಸಂಚಿಕೆಯಲ್ಲಿ ಪ್ರಾರ್ಥಿಸಿದಂತೆ, ಚಂದಾದಾರರನ್ನು ಕೂಡಿಸಿಕೊಟ್ಟದ್ದಕ್ಕಾಗಿ ನಾವು ಅವರನ್ನು ಅಭಿನಂದಿಸುತ್ತೇವೆ—

(೧) ಶಂಕರೆಪ್ಪಾ ಅಣ್ಣಾ ಸಕ್ರಿ. ಬಾಗಲಕೋಟೆ ೧
(೨) ಕೊಣ್ಣೂರ ಹನುಮಂತರಾಯರು. ಬಾಗಲಕೋಟೆ ೧೫
(೩) ಸೀರಲಕೇರಿ ಶ್ರೀನಿವಾಸರಾಯರು. ಬಾಗಲಕೋಟೆ. ೨
(೪) ಕುಲಕರ್ಣಿ ವೆಂಕಟರಾಯರು. ಬಾಗಲಕೋಟೆ. ೨
(೫) ಹುಲ್ಲೀಕೇರಿ ದೊರೆಗಳ ಮಗ ಚಿಕ್ಕತಿಮ್ಮಪ್ಪ ಬಾಗಲಕೋಟೆ ೧
(೬) ಜೂಡಪ್ಪಾ ಇಜಾರಿ. ಹರಪನಹಳ್ಳಿ ೧
(೭) ಪಾಟೀಲ ಅಣ್ಣಾರಾಯರು, ಅಗರಖೇಡ. ೧
(೮) ವೈದ್ಯ ಒರ್ಲಿ ಮಧ್ವಾಚಾರ್ಯರು, ಬಾಗಲಕೋಟೆ ೧

ಇದೇಪ್ರಕಾರವಾಗಿ "ಕನ್ನಡಿಗ" ನಿಗೆ ಚಂದಾದಾರನ್ನು ಎಲ್ಲ ಅಭಿಮಾನಿಗಳಾದ ಕನ್ನಡಿಗರು ಕೂಡಿಸಿಕೊಡುವರಾಗಿ ವಿಶ್ವಸವಿದೆ.

—ಸಂಪಾದಕರು, ಕನ್ನಡಿಗ.

ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯ ಅಧಿವೇಶನವು ಮುಂಬೈಯಲ್ಲಿ ಮೇ ೫ ಕ್ಕೆ ಸೇರುವದು

ವರ್ತಮಾನಸಾರ.

ಇಹವೃತ್ತ.

ಕೋಟಿ ರಾಜಬಹಾದ್ದೂರರ ಕಾಯಿಲೆಯು ಹೆಚ್ಚಾಗಿದ್ದು ಚಿಂತಾಜನಕ ಸ್ಥಿತಿಯಲ್ಲಿದ್ದಾರೆ.

ಸಂಗಮ ಕಳಸವು ವೈಭವದೊಂದಿಗೆ ಈ ಊರಿಂದ ಹೋಗಿ ಬಂದಿತು. ಮಸೀದಿಯ ಮುಂದೆ ವಾದ್ಯ ಬಾರಿಸುತ್ತ ಹೋಗುವಾಗ್ಗೆ ದೊಂಬಿ ಏಳಬಾರದೆಂದು ಪೋಲೀಸರ ಕಾವಲಿದ್ದಿತು.

ಶ್ರೀ ಡಿ ಕಲೆಕ್ಟರ ಶಿರಿಕರ ಇವರ ಅಧ್ಯಕ್ಷತೆಯಲ್ಲಿ ಮಾರಿಕಾಬೇನೆಯ ನಿವಾರಣೆಗಾಗಿ ತಾಲೂಕ ಕಚೇರಿಯಲ್ಲಿ ಸಭೆಯಾಯಿತು. ವ್ಯಾಖ್ಯಾನಗಳಾದವು. ಚಿಕಿತ್ಸೆಯೂ ಹೇಳಲ್ಪಟ್ಟಿತು. ಬಾಗಲಕೋಟೆಯ ಮ್ಯುನಸಿಪಾಲ್ಟಿಯು ಕೆಲಸ ಇಲ್ಲಿಯೂ ಸಹ ಹೊರಬಿದ್ದಿತು.

ಶಸ್ತ್ರಕ್ರಿಯಾ ನಿಪುಣರಾದ ಬೆಳಗಾವಿಯ ಕೊಳಟಿಸ್ಕರ ಡಾಕ್ಟರರು ಇಲ್ಲಿ ಒಂದು ಶಾಖಾ ಶಸ್ತ್ರಕ್ರಿಯಾಲಯವನ್ನು ಸ್ಥಾಪಿಸಬೇಕೆಂದು ನಿರ್ಧರಿಸಿದ್ದಾರೆ. ಪ್ರಾರಂಭೋತ್ಸವವು ಬೇಗನೇ ಆಗತಕ್ಕದದೆ. ಬೆಳಗಾವಿಯಲ್ಲಿ ಈಗ್ಗೆ ೨ ವರ್ಷಗಳಲ್ಲಿ ಇವರು ೧೦೦ ಜನರಿಗೆ (Major) ದೊಡ್ಡ ಶಸ್ತ್ರಕ್ರಿಯೆಗಳನ್ನು ಮಾಡಿದ್ದು, ಅವರಲ್ಲಿ ಒಬ್ಬರು ಮಾತ್ರ ಮೃತರಾದದ್ದು, ಇವರ ನೈಪುಣ್ಯವನ್ನು ಸಿದ್ಧಪಡಿಸುತ್ತದೆ. ಇಂತಹ ಶಸ್ತ್ರವೈದ್ಯ ಪ್ರವೀಣರ ಲಾಭವು ಇನ್ನು ಮೇಲೆ ಬಾಗಲಕೋಟೆಯವರಿಗೆ ಸಹಜವಾಗಿ ದೊರೆಯುವದು !

ಡಾ. ಭೀಮನಗೌಡಾ ಕುಂದರಗಿಯವರು ತಾಲೂಕ ಲೋಕಲ್ ಬೋರ್ಡಿನ ಅಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟರು.

ವಿಜಾಪೂರ ಜಿಲ್ಹೆಯ ಸುದ್ದಿಗಳು.

(ನಮ್ಮ ಸ್ವಂತ ಸುದ್ದಿಗಾರರಿಂದ)

ವಿಜಾಪೂರ ಆಯುರ್ವೇದ ಪರಿಷತ್ತಿನ ಕಾರ್ಯವು ಹೆಚ್ಚು ಉತ್ಸಾಹದಿಂದ ಸಾಗಿದೆ. ಈಗ್ಗೆ ಕನ್ನಡ ಮರಾಠಿಯ ವಾದವು ಇಲ್ಲಿ ಮಾಯವಾಗಿದೆನ್ನಬಹುದು.

ಗವಂಡರ ಕಂಕನಾಳು ಪ್ರಯೋಗಗಳು ಶನಿವಾರದಿಂದ ಪ್ರಾರಂಭವಾದವು.

ಡಿ. ಡಿ. ಓ. ಶಿರಿಕರ ಪ್ರವಾಸ ಕ್ರಮವು- ೨೧ ರಿಂದ ೩೦ ಬದಾಮಿ; ಮೇ ೧-೩ ಗುಳೇದಗುಡ್ಡ; ೪-೫ ಕಮತಗಿ; ೬-೧೫ ಹುನಗುಂದ ೧೬-೧೮ ಸಂಗಮ ; ೧೯-೨೧ ತಂಗಡಗಿ; ೨೨-೩೧ ಮುದ್ದೇಬಿಹಾಳ.

ಡಿ. ಡಿ. ಸಿ. ಪರೋಳಕರ ಪ್ರವಾಸಕ್ರಮವು—

೨೨ ಸಿಂದಗಿ, ೨೪-೨೫ ಕೊಕಟನೂರ, ೨೬-೩೦ ಕಲಕೇರಿ, ೧ ನೇ ಮೇ ದಕೊಂಗಲಿ. ೩ ೫ ಹಿಪ್ಪರಗಿ; ೬-೮ ಶಿವಣಗಿ, ೯-೧೮ ವಿಜಾಪೂರ,

ಮುದ್ದೇಬಿಹಾಳ ಊರಲ್ಲಿ ಮಾರಿಕಮ್ಮನು ಮರೆ ಹಾಕಿ ಹಾಕಿ ಹಿಂದಿರುಗುತ್ತಾಳೆ. ಕೊಂದದ್ದು ಕಡಿಮೆ. ತಾಲೂಕಿನ ಸುತ್ತುಮುತ್ತು ಮಾತ್ರ ಪ್ರಸ್ಥವನ್ನು ಬೆಳಸಿದ್ದಾಳೆ. ಸಂಗಮ ಜಾತ್ರೆಯ ವ್ಯಾಪಾರಸ್ಥರ ಮೂಗು ಹಿಡಿದಿದ್ದಾಳೆ. ಜಾತ್ರೆಗೆ ಈ ಸಾರೆ ಹೆಚ್ಚು ಅಬ್ಬರವಿಲ್ಲ. ನಾಲತವಾಡಕ್ಕೆ ಮಾತ್ರ ಮಾರಿಕಮ್ಮನ ಬಂಧು ಭಗಿನಿಯರಾದ ಕಾರೆಮ್ಮ ಮುಂತಾದವರಿಗೆ ಸರಕಾರದವರು ಡಂಗುರ ಸಾರಿ ನೀರು ಹಾಕಿ ಅನ್ನ ಕೊಡಿಸಹತ್ತಿದ್ದಾರೆ. ಮೊನ್ನೆ ಮಳೆಯು ಸಂಜೆ ಕಪ್ಪರಿದದ್ದು ಯಾರಿಗೋ ಅಂಜಿ ಚದರಿ ಹೋಯಿತು. ಪ್ರತಿ ವರ್ಷದಂತೆ ಮುಗಳಿ ಶ್ರೀನಿವಾಸರಾಯರೂ, ಗುಡೀ ಮಾಸ್ತರರೂ ಪಾದಚಾರಿಗಳಾಗಿ ಮಂತ್ರಾಲಯಕ್ಕೆ ಹೋದರು. ಹನುಮಂತ ಜಯಂತಿಯು ಉತ್ಸವವು ಈ ಸಲ ಬಹು ವಿಜೃಂಭಣೆಯಿಂದಾಯಿತು. ಶ್ರೀ. ಹುನಗುಂದ ಹನುಮಂತರಾಯರು ಅಧ್ಯಕ್ಷರಿದ್ದರು. ವ್ಯಾಖ್ಯಾನಗಳೂ ಆದವು! ಪ್ರಾಣ ಭೋಜನವಂತೂ ಸರಿಯೆ. ರಾತ್ರಿ ದೀಪೋತ್ಸವವೂ ಆಯಿತು.

ಹುನಗುಂದ ಮೋಟಾರಿನ ಒಡೆಯರೆಲ್ಲ ಒಂದಾಗಿ ಒಂದೇ ದರ ಗೊತ್ತುಪಡಿಸಿದಂದಿನಿಂದ ಸಕಾಲಕ್ಕೆ ಮೋಟಾರುಗಳು ಹೊರಡುತ್ತಲಿವೆ. ಆದರೆ ಪ್ರವಾಸಿಕರು ಒಂದು ಮೋಟಾರಿನಲ್ಲಿಯೂ, ಅವರ ಸಾಮಾನುಗಳು ಬೇರೊಂದರಲ್ಲಿಯೂ, ಆಗುತ್ತಲಿವೆ. ಈ ಬಗ್ಗೆ ಸಂಘದವರು ಯೋಗ್ಯ ವಿಚಾರ ಮಾಡಬೇಕು. ರಸ್ತೆಗೆ ಮೋಟಾರಿನವರು 'ಪೋಸ್ಟ ಪಾರ್ಸಲ'ಗಳನ್ನು ಹಣದ ಆಸೆಯಿಂದ ಹಿಡಿದು ಪ್ರವಾಸಿಕರಿಗೆ ಅನಾನುಕೂಲತೆಯಾಗುವಂತೆ ಅವನ್ನು ಮೋಟಾರುಗಳಲ್ಲಿ ಹೇರುವರು. ಈ ಬಗ್ಗೆ ದಾದು ಮಾಡುವವರೋ?

ಇಂಡೀ ತಾಲೂಕ

ಅರ್ಜುನಾಳ ಅರ್ಜುನಾಳ ಅಡವಿಯಲ್ಲಿ ಹಾದು ಹೋಗುವ ಸೊಲ್ಲಾಪುರ-ವಿಜಾಪುರ ಲೈನ ಮಾರ್ಗದಲ್ಲಿ ಓರ್ವ ಹೆಂಗಸು ತನ್ನ ಎಂಟು ವರ್ಷದ ಮಗಳನ್ನು ಕರೆದುಕೊಂಡು ಹೊರಟಿರುವಾಗ ಹಗಲು (೧೧) ಹನ್ನೊಂದು ಘಂಟೆಗೆ ಕಳ್ಳರು ಬಡಿದು ಆಭರಣವನ್ನು ಎತ್ತಿಕೊಂಡು ಹೋದರಾಗಿ ತಿಳಿಯುತ್ತದೆ.

ದೇವರಹಿಂಬರಗಿ ರಾಮನವಮಿ ಉತ್ಸವವು ಒಳ್ಳೇ ರೀತಿಯಿಂದ ಜರುಗಿತು. ಜಾತ್ರೆಯಲ್ಲಿ ಅಲ್ಲಿಯ ಎರಡೂ ನಾಟಕ ಕಂಪನಿಗಳಿಗೆ ವಿರೋಧ ಹುಟ್ಟಿ ಪುಕ್ಕಟೆಯಾಗಿ ಆಡಿದರು!

ಅಗರಖೇಡದಲ್ಲಿ ಈಗ್ಗೆ ಮಾರಿಕಾ ಬೇನೆಯು ಬಲವು ಕಡಿಮೆಯಾಗಿದೆ. ಎರಡು ಮೂರು ದಿನಗಳಲ್ಲಿ ೧—೨ ಜನರು ಮಾತ್ರ ಸಾಯುತ್ತಿದ್ದಾರೆ. ಈ ಊರಿನಿಂದ ೧॥ ಮೈಲಿನ ಮೇಲೆ ನೆರೆಯುತ್ತಲಿದ್ದ ಗದ್ದೀಲಿಂಗನ ಜಾತ್ರೆ ನಾಳಿನ ಅಮಾವಾಸ್ಯೆಗೆ (ತಾ॥ ೧-೫-೧೯೨೭) ಇದ್ದು ಸ್ನಾನಕ್ಕೆಂದು ಬರುವ ಭಕ್ತರು ಮುಂದಿನ ಸಾರೆ ಎರಡು ಸ್ನಾನ ಮಾಡಬೇಕೆಂದೂ, ಈ ಸಾರೆ ದಯವಿಟ್ಟು ಬರಬಾರದೆಂದೂ, ಸವಿನಯ ವಿನಂತಿ, ಯಾಕಂದರೆ ಸುತ್ತಲ್ಲ ಮಾರಿಕಾ ಬೇನೆ ಹಬ್ಬುತ್ತಲಿದೆ.

ಬದಾಮಿ ಬದಾಮಿಯ ಪೂರ್ವಕ್ಕೆ ಹಳೇ ಮಹಾಕೂಟವೆಂಬ ದೇವಸ್ಥಾನವಿರುವದು. ಅದು ಸುತ್ತಲೂ ಮುಳ್ಳು ಕಂಟಿಗಳಿಂದ ಮುಚ್ಚಲ್ಪಟ್ಟಿತ್ತು. ಈಗ ಸರಕಾರದವರು ಎಲ್ಲಾ ಮುಳ್ಳುಗಳನ್ನು ತೆಗೆಸಿ ಸ್ವಚ್ಛ ಮಾಡಲಿಕ್ಕೆ ಹತ್ತಿದ್ದಾರೆ.

ನಾಗರಾಳದ ಹತ್ತರ ಗುಡ್ಡದಲ್ಲಿ ನಾಗನಾಥನೆಂಬ ಕೊಳ್ಳವಿದೆ. ಆ ಕೊಳ್ಳದಲ್ಲಿ ನಾಗನಾಥನೆಂಬ ಒಳ್ಳೇ ಸುಂದರವಾದ ಗುಡಿಯು ಇರುವದು. ಅಲ್ಲಿ ಆ ಭಯಂಕರವಾದ ಕೊಳ್ಳದಲ್ಲಿ ಜನರು ಹೋಗಲಿಕ್ಕೆ ಹೆದರುತ್ತಿದ್ದರು. ಅಲ್ಲಿ ಇರಲಿಕ್ಕೆ ನೀರಿನ ಅನುಕೂಲವಿದ್ದದರಿಂದ ಜನರು ನೋಡಲಿಕ್ಕೆ ಹೋಗುತ್ತಿದ್ದರು. ಅದ್ದರಿಂದ ಹೋಗಿ ಬರುವ ಜನರಿಗೆ ತೊಂದರೆಯಾಗಬಾರದೆಂದು ಸರಕಾರದವರು ಹಾದಿಯನು ಸ್ವಚ್ಛಮಾಡಹತ್ತಿದ್ದಾರೆ. ಈ ನಾಗನಾಥನ ಸುತ್ತು ಮುತ್ತು ಗುಡ್ಡಗಳಲ್ಲಿ ಈಶ್ವರನ ಮೂರ್ತಿಗಳಿವೆ. ಮಹಾಕೂಟದ ಸುತ್ತು ಮುತ್ತು ಐದು ಹರದಾರಿಗಳ ವರೆಗೆ ಒಂದು ಕೋಟಿ ಲಿಂಗಕ್ಕೆ ಒಂದು ಲಿಂಗವು ಮಾತ್ರ ಕಡಿಮೆ ಇರುವದರಿಂದ, ಇದಕ್ಕೆ ದಕ್ಷಿಣ ಕಾಶಿ ಎಂದನ್ನುವರು.

ಮಹಾತ್ಮಾ ಗಾಂಧಿಯವರು ನಂದಿ ಬೆಟ್ಟದಲ್ಲಿ, ಮೈಸೂರ ಮಹಾರಾಜರ ಅತಿಥಿಗಳಾಗಿ ಸುಖದಿಂದಿರುವರು. ಅರಮನೆಯ ನೌಕರರು ಡಾಕ್ಟರರು, ರಥಗಳು ಮೋಟಾರುಗಳು ಹಣ್ಣುಗಳು ಇತ್ಯಾದಿ ಮಹಾತ್ಮರಿಗೆ ಪೂರೈಸಲ್ಪಡುತ್ತಲಿವೆ. ಈ ಬೆಟ್ಟದ ಮಧ್ಯದಲ್ಲಿ ಅದ್ಭುತ ಸರೋವರವು ಬಹು ರಮಣೀಯವಾಗಿದೆ, ಸಮುದ್ರದಿಂದ ೪೨೦೦ ಫೂಟು ಎತ್ತರವಿದೆ. ಚಿಕ್ಕದಾದ ನಂದೀ ದೇವಾಲಯವೂ ಇದೆ. ಹೈದರ, ಟೀಪು ಇವರ ಕಾಲದಲ್ಲಿ ಅಪರಾಧಿಗಳನ್ನು ನೆಲಕ್ಕೆ ಉರುಳಿಸುವ ಎತ್ತರ ಪರ್ವತವೂ ಇಲ್ಲಿದೆ. ಹವೆಯು ೬೦ ಡಿಗ್ರಿ ಇರುತ್ತದೆ. ಬೆಂಗಳೂರ, ಚಿಕ್ಕಬಳ್ಳಾಪುರ ರೇಲ್ವೆದಲ್ಲಿ ನಂದೀ ಸ್ಟೇಶನ್ನಿದೆ.

ಭಾರತೀಯ ಸ್ತ್ರೀಯರ ಪಾತಿವ್ರತ್ಯಕ್ಕಾಗಿ ಹೋರಾಡಿದ- ಕೆಚ್ಚೆದೆಯ ಗೂರ್ಖ ತರುಣ

ಖರಗ್ ಬಹದ್ದೂರಸಿಂಗ್.

(ಬರೆದವರು- ಅ. ನ. ಮೂರ್ತಿ, ಬಿ. ಎ)

[ಕಳೆದವಾರದಿಂದ ಬಂದದ್ದು]

ಈ ಕೊಲೆಯನು ಮಾಡಲು ನನ್ನನ್ನು ಹುರಿದುಂಬಿಸಿದ ಕಾರಣಗಳನ್ನು ಕುರಿತು ಈಗ ಹೇಳುತ್ತೇನೆ. ಸ್ವಲ್ಪದರಲ್ಲಿ ಹೇಳುವುದಾದರೆ- (೧) ರಾಜಕುಮಾರಿಯನ್ನು ಬಲಾತ್ಕಾರದಿಂದ ಹೊತ್ತುಕೊಂಡು ಹೋಗಿ, ಆಕೆಯನ್ನು ನೀಚವಾದ ಅತ್ಯಾಚಾರಕ್ಕೆ ಗುರಿಪಡಿಸಿದುದು (೨) ನನಗೂ, ಆಕೆಗೂ ಇರುವ ದೂರದ ಸಹೋದರ ಸಹೋದರಿ ಭಾವದ ಸಂಬಂಧ; ಮತ್ತೂ ಆಕೆ ಹುಟ್ಟಿರುವ ನೇಪಾಳ ಸಂಸ್ಥಾನದ ರಾಜಮನೆತನದ ಪ್ರಸಿದ್ಧ ರಾಣಾ ಕುಟುಂಬಕ್ಕೆ ಆಕೆ ಸೇರಿರುವುದು ನನ್ನ ದೇಶಾಭಿಮಾನ ಮತ್ತು ರಾಜ ಭಕ್ತಿಗಳಿಗೆ ಬಡಿದ ಬಲವಾದಪೆಟ್ಟನ್ನು ಪಂಚಾಯಿತರಾಗಿ ಕುಳಿತಿರುವ ಆಂಗ್ಲ ದೊಡ್ಡಮನುಷ್ಯರು, ನನ್ನ ಸ್ಥಾನದಲ್ಲಿ ಅವರೇ ಇದ್ದುದಾಗಿ ಊಹಿಸಿದರೆ ಆಗ ನನ್ನ ಸ್ಥಿತಿಯನ್ನು ತಿಳಿಯಲಾದೀತು. (೩) ಮೂರನೆಯ ಕಾರಣವು:- ಈಗ ಮೃತನಾಗಿರುವ ಹೀರಾಲಾಲನು ನೇಪಾಳೀ ಹೆಂಗಸರನ್ನು ಬಹಿರಂಗವಾಗಿ ಕಡೆಗಣಿಸುತ್ತ, ಅವರ ಮಾನಮರ್ಯಾದೆಗಳನ್ನು ಕಸಕ್ಕೆ ಕಡೆಯಾಗಿ ಎಣಿಸಿ ಅಪಮಾನ ಮಾಡುತ್ತಿದ್ದುದು; ರಾಜಕುಮಾರಿಯನ್ನು ಅವನು ಬೀದಿಯ ಸೂಳೆ ಎಂದು ಕರೆದುದು; ಮತ್ತು ತಾನು ಸಿಂಹದಂತೆ ತನ್ನ ಕಾರ್ಯದಲ್ಲಿ ನಿರತನಾಗಿರುವದಾಗಿಯೂ, ನೇಪಾಳೀ ನಾಯಿಗಳು ಬೊಗಳಿದರೆ ತನ್ನ ದೇವಲೋಕವು ಹಾಳಾಗಲಾರದೆಂದು ಬಣ ಹೆಮ್ಮೆ ಕೊಚ್ಚಿಕೊಳ್ಳುತ್ತಿದ್ದುದು. ತಾನು ಹಣವಂತನಾಗಿದ್ದುದರಿಂದ ಕಾಯಿದೆಯು ನ್ಯಾಯವು ತನ್ನನ್ನು ಏನೂ ಮಾಡಲಾರದೆಂದು ಹೀರಾಲಾಲನು ಭ್ರಮೆಗೊಂಡಿದ್ದನು. ಈ ತಿಳವಳಿಕೆಯು ಶುದ್ಧ ತಪ್ಪೆಂದು ಈಗ ಅವನು ಬದುಕಿದ್ದರೆ ಅವನಿಗೇ ತಿಳಿಯುತ್ತಿತ್ತು. ನಾನು ಹೇಳಬೇಕಾದುದೇನೆಂದರೆ- ಪಾಪ ಸಮೂಹವನ್ನು ಮರೆಮಾಡಿಟ್ಟುಕೊಳ್ಳಲು ಹಣವು ನೆರವಾಗಬಹುದು. ಆದರೆ ಪ್ರಾಣವನ್ನು ರಕ್ಷಿಸಲು ಹಣವು ಸಹಾಯಮಾಡಲಾರದು ಎಂಬುದನ್ನು ಎಲ್ಲರೂ ತಿಳಿದಿರಬೇಕು. ಹಣವು ಹೀರಾಲಾಲನ ಜೀವವನ್ನು ಕಾಪಾಡಲಿಲ್ಲ. (೪) ನಾಲ್ಕನೆಯ ಕಾರಣವೇನೆಂದರೆ:- ಸಹಿಸಲಶಕ್ಯವಾದ ನೋವು, ಸಂಕಟಗಳಿಂದ ಹೆಣಗುತ್ತ, ನರಳುತ್ತ, ಕೊರಗುತ್ತ, ಹಾಸಿಗೆಯಲ್ಲಿ ಹೊರಳಾಡುತ್ತಿದ್ದ ರಾಜಕುಮಾರಿಯ ದುರ್ಧರವಾದ ಕಾಹಿಲೆಯ ಸ್ಥಿತಿಯನ್ನು, ಹಲವು ಸಲ ನಾನೊಬ್ಬನೇ, ಆಗಾಗ್ಯೆ ಶ್ರೀ. ಗಿರಿಯವರೊಂದಿಗೆ ಹೋಗಿ, ಆಕೆಗೆ ಔಷಧಿಕೊಟ್ಟು ಒಂದೆರಡು ಒಳ್ಳೆಯ ಮಾತನಾಡಿಬರಲು ಹೋಗುತ್ತಿದ್ದಾಗ- ನೋಡಿ ನೋಡಿ ಸಾಕಾಗಿದ್ದುದು

ಮೇಲೆ ಹೇಳಿರುವ ಕಾರಣಗಳು ನನ್ನ ಕಾರ್ಯಕ್ರಮವನ್ನು ಗೊತ್ತುಮಾಡಿದವು ಹೀರಾಲಾಲನು ಪ್ರಾಣಬಿಡುವಮುಂಚೆ ಕೊಟ್ಟಿರುವ ಹೇಳಿಕೆಯಲ್ಲಿ ನಾನು ಅವನನ್ನು ಒತ್ತಾಯಪಡಿಸಿ, ಒಂದು ಲಕ್ಷ ರೂಪಾಯಿಗಳನ್ನು ಕಸುಗೊಳ್ಳಲು ಅಪೇಕ್ಷಿಸಿದ್ದೆನೆಂದೂ, ಎರಡು ತಿಂಗಳ ಹಿಂದೆ ನಾನು ಅವನ ಮನೆಯ ಬಳಿ ಸುಳಿದಾಡುತ್ತಿದ್ದುದನ್ನು ಅವನು ನೋಡಿದ್ದನೆಂದೂ ಹೇಳಿ ಬರೆಸಿರುತ್ತಾನೆ. ಇದರಂತಹ ನೀಚತನವಾದ ಸುಳ್ಳು ಮತ್ತೊಂದಿಲ್ಲ. ಇದು ನನ್ನನ್ನು ಜನರು ತುಚ್ಛವಾಗಿ ಎಣಿಸಲೆಂದು ಹೂಡಿರುವ ಯುಕ್ತಿ.

ಈತನನ್ನು ನಾನು ಹಿಂದೆ ಎಲ್ಲೂ ನೋಡಿರಲಿಲ್ಲ. ಅವನ ಮನೆಯನ್ನೂ ನಾನು ಕಾಣೆ. ಅವನ ಹೆಸರು ಸಹ ನನಗೆ ಮೊದಲು ತಿಳಿಯದು. ಫೆಬ್ರವರಿ ೨೬ನೇ ತಾರೀಖಿನ ದಿನ ಅವನನ್ನು ಮೊದಲ ಸಲ ಮತ್ತು ಅದೇ ಕಡೆ ಸಲ ನೋಡಿದೆನು. ಆಗ ಅವನನ್ನು ನನ್ನ ಕೈಯಾರೆ ಕೊಂದೆನು.

ಆ ಬಡ ಹುಡುಗಿಯಮೇಲೆ ಹೇರಲ್ಪಟ್ಟ ದುಃಖವೂ, ಸಂಕಟ ಪ್ರಸಂಗಗಳೂ; ಅಷ್ಟೇಕೆ ನಮ್ಮ ಎಲ್ಲ ಹೆಂಗಸರನ್ನು ಒಟ್ಟುಗೂಡಿಸಿ ಉಪಯೋಗಿಸಲ್ಪಟ್ಟ ಮಾನಹೀನಮಾತುಗಳೂ ನಮ್ಮ ಸ್ತ್ರೀ ಸಮುದಾಯಕ್ಕೇ ಅಪಮಾನಕರಗಳಾಗಿಯೂ, ನಮ್ಮ ರಾಷ್ಟ್ರೀಯತ್ವದ ಬುಡಕ್ಕೇ ಬಿಸಿನೀರು ತಿದ್ದುವಹಾಗಿದ್ದು, ಸಂದರ್ಭವು ಎಷ್ಟೇ ಕಠಿಣವಾಗಿ ಕಂಡುಬಂದರೂ, ನಾನುಮಾತ್ರ ತಲೆಬಗ್ಗಿಸಿಕೊಂಡು ಕುಳಿತಿರುವದು ನನ್ನ ಕೈಯಿಂದ ಆಗಲಿಲ್ಲವೆಂಬ ಅಂಶವು ನಾನು ಹೇಳಿರುವ ಕಾರಣಗಳಿಂದ ವ್ಯಕ್ತಪಡುತ್ತದೆ. ನಾನು ಸುಮ್ಮನಿರಲಿಲ್ಲ;

ಚಂದಾದಾರರಲ್ಲಿ ಬಿನ್ನಹ.

೩ ನೇ ವರ್ಷದ ವಿ. ಪಿಗಳು ಎಲ್ಲ ಚಂದಾದಾರರಿಗೆ (ಮನಿಯಾರ್ಡರು ಯಾರಿಂದ ಬಂದಿಲ್ಲವೋ ಅವರಿಗೆ ಮಾತ್ರ) ಈ ವಾರದಲ್ಲಿ ಕಳಿಸಲ್ಪಟ್ಟಿವೆ. ಒಂದೇ ಒಂದು ರೂಪಾಯದಲ್ಲಿ 'ಕನ್ನಡಿಗ' ನು ಮಾಡುತ್ತಿರುವ ಸೇವೆಗೆ ಕನ್ನಡಿಗರಿಂದ ಆಶ್ರಯವು ದೊರೆಯುವದಾಗಿ ವಿಶ್ವಾಸವಿದೆ.

ವ್ಯವಸ್ಥಾಪಕ.

ಕೆಲಸವನ್ನು ಕೈಗೊಂಡೆನು ನಾನು ಎಷ್ಟರಮಟ್ಟಿಗೆ ಕೃತಕೃತ್ಯನಾಗಿರುವೆನೆಂಬ ವಿಚಾರವನ್ನು ನಿರ್ಧರಿಸುವುದು ಪಂಚಾಯಿತರುಗಳಾಗಿರುವ ತಮ್ಮದಾಗಿರುತ್ತೆ. ನನಗೆ ಮಾತ್ರ, ನನ್ನ ಕಾರ್ಯವು ಧರ್ಮಯುಕ್ತವಾಗಿ ಇವುದರಿಂದ ಕಾಯದೆಗೆ ವ್ಯತಿರಿಕ್ತವಾಗಿಲ್ಲವೆಂದೇ ದೃಢನಂಬಿಗೆ ಇದೆ. ಕಾನೂನುಗಳೂ, ಕಾಯಿದೆಗಳೂ, ಕೆಟ್ಟತನವನ್ನು ನಾಶಮಾಡುವುದಕ್ಕಾಗಿಯೂ, ಮಂದಿಯ ಮಾನ, ಪ್ರಾಣ, ಧನಗಳನ್ನು ಕಾಪಾಡುವದಕ್ಕಾಗಿಯೂ- ಮುಖ್ಯವಾಗಿ ಈ ಉದ್ದೇಶಗಳಿಂದಲೇ- ಏರ್ಪಾಡಾಗಿವೆ. ಮತ್ತು ಪ್ರತಿಯೊಬ್ಬನೂ ಲೋಕಹಿತಕ್ಕೆ ತಗುಲಿದಂತಿರುವ ತನ್ನ ಕರ್ತವ್ಯವನ್ನು ಮಾಡಲೇ ಬೇಕೆಂದೂ, ಮೇಲ್ಕಂಡ ಉದ್ದೇಶಗಳನ್ನು ಈಡೇರಿಸುವುದರಲ್ಲಿ ಅನುಕೂಲನಾಗಿರಬೇಕೆಂದೂ ಕಾಯಿದೆಯು ವಿಧಿಸಿ, ಅದರ ಆಚರಣೆಯನ್ನು ನಿರೀಕ್ಷಿಸುತ್ತದೆ. ಅದಕಾರಣ, ಈ ಸಂದರ್ಭದಲ್ಲಿ, ದುಷ್ಟಶಾಸನಮಾಡುವುದು, ಸ್ತ್ರೀಯರ ಪಾತಿವ್ರತ್ಯದ ಪವಿತ್ರತೆಯನ್ನು ಮನಗಂಡು ಮರ್ಯಾದೆಯಿಂದ ನಡೆಯುವಂತೆ ಆಗಿಸುವುದು, ಸಮಾಜದವರಿಗೆ ಮೂಳೆಯವರೆಗೂ ಏರಿ ಕೊಳೆಯುತ್ತಿರುವ ರೋಗ ಚಿಹ್ನೆಗಳನ್ನು ಎತ್ತಿತೋರಿಸುವುದು, ರಾಜಕೀಯ ಅಧಿಕಾರಿಗಳಿಗೆ ತಮ್ಮ ಕಣ್ಣೆದುರಿಗೇ ನೆಲೆಯಾಗಿ ಹಬ್ಬಿ ಹರಡಿರುವ ದುಷ್ಟ ತಂಡದವರು ಮಂಕು ಬೂದಿ ಚೆಲ್ಲಿ ನಡೆಸುತ್ತಿರುವ- ಅನಾಗರಿಕ ಯುಗದ ಕಡೆಯ ಕುರುಹಾದ- ಮುಂದುವರಿದ ಯಾವದೇ ಜನಾಂಗಕ್ಕೆ ಹೇಸಿಗೆ ಎನಿಸುವ- ಅದರಲ್ಲೂ ಕಾಲ ಅಕಾಲವೆನ್ನದೆ ತಾನೇ ಎರಕಹೊಯ್ದ ಧರ್ಮ ಮೂರ್ತಿ ಎಂದು ಹೊಗಳಿಕೊಳ್ಳುವ ಬ್ರಿಟಿಷ್ ಸರಕಾರಕ್ಕೆ ಹೆಚ್ಚು ಅಪಮಾನ

ರವಾಗಿರುವ. ಹೀನ ಕೃತ್ಯಗಳನ್ನು ಒತ್ತಿಹೇಳಿ ಅವುಗಳ ನಿವಾರಣೆಗೆ ಯತ್ನಿಸುವದು- ಈ ಪವಿತ್ರ ಕೇಸಗಳಿಗಿಂತ ಉತ್ತಮವಾದ, ಕೂಡಲೇ ನಡೆಸಬೇಕಾದ ಕಾರ್ಯವಿನ್ನೊಂದಿಲ್ಲವೆಂದು ನಾನು ಯೋಚಿಸಿದೆನು.

ನಾನು ನ್ಯಾಯವನ್ನೂ, ಧರ್ಮವನ್ನೂ ಮೀರಿನಡೆದಿಲ್ಲವೆಂದು ನನ್ನ ಪೂರ್ಣನಂಬಿಕೆ. ಆದುದರಿಂದ, ನೀನ್ನೆ ಹೇಳಿದಂತೆ ಈ ದಿನವೂ ನಾನು ಹೇಳುವುದೇನಂದರೆ ನಾನೇ ಹೀರಾಲಾಲನನ್ನು ಹೊಡೆದೆನು; ಆದರೆ ನಾನು ಎಂದಿಗೂ ತಪ್ಪುಮಾಡಿಲ್ಲ. ಒಂದು ವೇಳೆ, ನ್ಯಾಯಾಧಿಕಾರಿಗಳಾದ ತಾವೂ, ಪಂಚಾಯಿತರಾಗಿ ನೇಮಕರಾಗಿರುವ ಗೌರವಸ್ಥರೂ, ನನ್ನ ಸಹೋದರಿಯ ಮಾನವನ್ನು ಕಾಪಾಡಲು ನಾನು ಬಾಧ್ಯನಲ್ಲವೆಂದು, ಸುಮ್ಮನೆ ಸೊಣ ಹೊಡೆಯುತ್ತ ಕೂತುಕೊಂಡು ಆಕೆಯ ಮಾನಭಂಗವನ್ನು ನೋಡುತ್ತ ನೋಡುತ್ತ ಹಣ ಬರಹಕ್ಕಾಗಿ ಬೇಗುದಿ ಪಡಬಹುದಾಗಿದ್ದಿತೆಂದೂ, ಸಮಾಜದವರಿಗೆ ಹೀರಾಲಾಲ ಮತ್ತು ಅವನ ಒಡನಾಡಿಗರಿಂದ ಒದಗಿದ ಅಪಾಯಗಳನ್ನು ಎತ್ತಿಹಾಕಿದುದರಿಂದ ನಾನು ಸಮಾಜದ ಶಾಂತಿಕಂಟಕನಾಗಿ ಪರಿಣಮಿಸಿದೆನೆಂದೂ, ಹೀರಾಲಾಲನಂತಹ ನೀಚರಲ್ಲದ ಬೇರೆ ಸಜ್ಜನರ ಯೋಗಕ್ಷೇಮಕ್ಕೂ, ದೇಶಹಿತಕ್ಕೂ ನಾನು ಕುಂದೆಸಗಿದೆನೆಂದೂ ಅಭಿಪ್ರಾಯ ಪಡುವುದಾದರೆ, ಆಗ ನನ್ನ ಕೃತ್ಯದ ಪೂರಾಪರಿಣಾಮವನ್ನು ಅನುಭವಿಸಲು ನಾನು ಸಿದ್ಧನಾಗಿರುತ್ತೇನೆ. ಎಷ್ಟು ಹೆಚ್ಚು ಶಿಕ್ಷೆಕೊಡಬಹುದೋ ಅಷ್ಟನ್ನೂ ವಿಧಿಸಿ ಬಿಡಿ. **ಶೂಲಕ್ಕೆ ಏರಿಸಲ್ಪಟ್ಟು ಸ್ವರ್ಗಕ್ಕೆ ಹಾರಿಹೋಗಿ ಜಗನ್ನಿಯಾಮಕನ ಸನ್ಮುಖದಲ್ಲಿ ಅಂಜಲಿ ಬದ್ಧನಾಗಿ ನಿಂತುಕೊಂಡು, ಭೂಮಿಯಲ್ಲಿ ಜನರು ತಮ್ಮ ನಾರಿಯರ ಮಾನವನ್ನು ರಕ್ಷಿಸಲು ಅವಕಾಶವಿರುವ, ಹೆಂಗಸರು ಮರ್ಯಾದೆಯಿಂದ ಬಾಳುವ ಮತ್ತು ಗಂಡಸರು ನಿಜವಾದ ಗಂಡಸುತನವನ್ನು ಇಟ್ಟುಕೊಂಡಿರುವಂತಹ, ಹೆಂಗಸರೆಲ್ಲರೂ ಸಾಕ್ಷಾತ್ ಶಕ್ತಿ ದೇವತೆಯರಾಗಿ ಕಾಮಾಂಧರಾದ ದುಷ್ಟರು ಅವರೆದುರಿಗೆ ಗಡಗಡನೆ ನಡುಗುವಂತಾಗುವ ಸುದಿವಸಗಳನ್ನು ದಯಪಾಲಿಸ ಬೇಕೆಂದು ಆ ಸರ್ವಶಕ್ತನನ್ನು ಬೇಡಿಕೊಳ್ಳುತ್ತೇನೆ.**

ನನಗೆ ಹೊಳೆದಂತೆ.

೬ ಜನರನ್ನು 'ಹುಗಿಯುವಷ್ಟು ವಜ್ರಗಳು ತಮ್ಮಲ್ಲಿವೆಯೆಂದು ಮಹಾರಾಜರು ಹೆಮ್ಮೆಯಿಂದ ಹೇಳಿಕೊಳ್ಳುತ್ತಿರುವರು! ಆದರೆ ತಮ್ಮ ಬಳ್ಳಾರಿಯೊಳ ಸಾವಿರಾರು ಜನರನ್ನು ಹಸಿವೆಯು ಪ್ರತಿವರ್ಷ ಹೂಳುತ್ತಿರುವದನ್ನು ಈ ಮಹಾರಾಜರು ಲಕ್ಷಿಸರು!! ತಮ್ಮ ಸ್ವಂತ ಪ್ರಜೆಗಳ ಹೊಟ್ಟೆಗೆ ಹಿಡಿ ಹಿಟ್ಟನ್ನು ಹಾಕದ ಭೂಪತಿ(?)ಗೆ ಇಷ್ಟೊಂದು ವಜ್ರಗಳೇಕೆ ಬೇಕು?

"ವೆಂಕಟೇಶ ರಾಘವೇಂದ್ರ ಜೋರಾಪೂರ, ಮ್ಯಾನೇಜರ ಬಾಗಲಕೋಟ ಬ್ಯಾಂಕ" ಇವರ ಸಹಿಯಿಂದ ಹೊರಟ ಮನೆಮಾರಾಟದ 'ಜಾಹೀರ ನೋಟೀಸು" ಮರಾಟಿಯಲ್ಲಿ! ಅದೇಕೆಂದು ಕೇಳುವಿರಾ? ಮಹೋದಯನವರ ಶ್ರೀ ಬನೇಯರು ವಿಜಾಪೂರ ಜಿಲ್ಲೆಯು ಸಂಪೂರ್ಣವಾಗಿ ಮರಾಟಿಗರದೆಂದು ಹೇಳಿಲ್ಲವೇ? ಆ ಮಹಾ ವಾಕ್ಯ-ಭಾಷ್ಯವನ್ನು ಅಲ್ಲಗಳೆಯುವದೆಂತು?

ಇದೇ ಕಾರಣದಿಂದ ಬೆಳಗಾವಿಯ ಶ್ರೀ. ಸೋಮಣ್ಣನವರು ಮಹಾತ್ಮರ ಬೆಳಗಾವಿಯ ಆಗಮನದ ಪ್ರಕಟಣೆಗಳನ್ನು ಮರಾಟಿಯಲ್ಲಿ ಮುದ್ರಿಸಿದ್ದರಂತೆ! ಬೆಳಗಾವಿಯ ಜಿಲ್ಲೆಯು ವಿಜಾಪೂರದಕ್ಕಿಂತ ಮುಂದೆ ಇರತಕ್ಕದ್ದೇ!!!

— ಓ-ಂಗ.

ಭೀಮಾನದಿಯಾಚೆಯ

(ಸೊಲ್ಲಾಪುರ ಅಕ್ಕಲಕೋಟ ಸಂಸ್ಥಾನಗಳೊಳಗಿನ)

ಕನ್ನಡ ನಾಟಕ ಸಂಘಗಳು.

ಬರೆದವ:— ಓ-ಂಗ.

	ಊರು.	ಸಂಘ	ಜ. ಸಂ.		ಊರು	ಸಂಘ	ಜ. ಸಂ.
೧	ತೋಳನೂರು	೨	೨೫೦೦	೧೦	ಎಣ್ಣಿಂಬರಗಿ	೨	೮೦೦
೨	ಹೈದ್ರ	೨	೮೦೦	೧೧	ಮಂಗಳೂರ	೩	೩೦೦೦
೩	ನಾಗಣಸೂರ	೨	೩೦೦೦	೧೨	ಕರಜಗಿ	೨	೪೦೦೦
೪	ಮೈದರ್ಗಿ	೩	೬೦೦೦	೧೩	ಕರಜಗಿ	೨	೬೦೦
೫	ವಾಗಧರಿ	೩	೭೦೦೦	೧೪	ಮಾಸ್ಯಾಳ	೧	೧೦೦೦
೬	ವಳಸಂಗ	೨	೬೦೦೦	೧೫	ಕಣ್ಮಸ	೧	೨೦೦
೭	ಇಬ್ರೂರ	೧	೪೦೦	೧೬	ಬೋರಾಮಣಿ	೨	೭೦೦
೮	ಹತ್ತರಸಂಘ	೧	೧೮೦೦	೧೭	ಮಾಳಕೋಟೆ	೧	೬೦೦
೯	ಕೋರ್ಸಗಾವ	೧	೮೦೦	೧೮	ಜೇವೂರ	೧	೨೦೦೦

(ಜನಸಂಖ್ಯೆಯು ಸರಾಸರಿಯಾದರೂ, ಸಂಘಗಳು ಕಡಿಮೆಯಿಲ್ಲ)

ಈ ಎಲ್ಲ ಊರುಗಳು, ಈಗ ಆರೇನಾಡಿಗೆ ಸೇರಿದವುಗಳು. ಆದರೆ, ಇಲ್ಲಿನ ನಾಟಕಗಳೆಲ್ಲ ಕನ್ನಡ. ಹಳ್ಳಿಗಳಿಗೆ ಬೈಲಾಟಗಳೇ ಮುಖ್ಯವಷ್ಟೇ! ನಾಟಕಗಳೇ ಇಷ್ಟಿರಲು, ಬೈಲಾಟಗಳನ್ನು ನೀವೇ ಕಲ್ಪನೆಯಿಂದ ಎಣಿಸಿಕೊಳ್ಳಿ. ಇವುಗಳ ಲಾಭಹಾನಿಗಳ ವಿಚಾರ ನಮಗೆ ಬೇಡ.

ಕರ್ನಾಟಕ ನಾಟಕಗಳನ್ನು ತರಿಸಿಕೊಂಡು, ಕನ್ನಡ- ಮರಾಠಿ ಬಲ್ಲವರಿಂದ ಆರೇಬರಹದಲ್ಲಿ ಬರೆಸಿಕೊಂಡು ಕಲಿಯುವವರಿವರು ನಮ್ಮ ಸುಧಾರಿಸಿದ ಸಂಘಗಳೆಂದು ಹೇಳಿಕೊಳ್ಳುವ ದಕ್ಷಿಣ ಕರ್ನಾಟಕದ ನಾಟಕ ಸಂಘದವರಂತೆ, ಕರ್ನಾಟಕ ರಾಗ ನೃತ್ಯ- ರೀತಿಗಳನ್ನು ಇವರು ಸಾಯಹೊಡೆದಿಲ್ಲ. ನೋಡಬೇಕು ಇವರಲ್ಲಿ ಕನ್ನಡದ ಸಂಗೀತದ ರೀತಿಯನ್ನು! ಅಲ್ಲಿ ಕನ್ನಡನಾಡಿನ ವಿದ್ಯೆಯು ಪೂರ್ಣವಾಗಿರದಿದ್ದರೂ, ಹೊಳಹು ಮಾತ್ರ, ಚೆನ್ನಾಗಿ ಮೂಡಿರುತ್ತೆ. ಪಾಪ! ಆ ಕನ್ನಡಿಗರು, ಆರೇ ನಾಡಿಗರ ಕೈಗೆ ಸಿಕ್ಕು, ತಮ್ಮ ನುಡಿ, ಸಂಸ್ಕೃತಿಗಳನ್ನು ಮಣ್ಣು ಕೂಡಿಸಿಕೊಳುತ್ತಿರುವರಲ್ಲ!

ಭಾಷೆಯ ಜಿಗಿತ— ಬೆಡಗುಗಳು, ಈಗ ಅಳಿಸಿಹೋಗುವುದರಲ್ಲಿವೆ. ಏಕೆಂದರೆ, ಜನರಿಗೆ ಕನ್ನಡದ ಜ್ಞಾನವಿಲ್ಲ. ನುಡಿ ಕನ್ನಡ; ಆಟ ನೋಟ ಕನ್ನಡ! ಕಲಿಯುವುದು, ಮರಾಠಿ!!

ಭೀಮೆಯ ಉತ್ತರಕ್ಕೇ ಕನ್ನಡನಾಡಿನ ಬೆಡಗು ಇಷ್ಟು ಕಂಗೊಳಿಸುತ್ತಿರಲು, ವಿಜಾಪುರಾದಿ ಜಿಲ್ಲೆಗಳಿಗೆ ದಕ್ಷಿಣ ಮಹಾರಾಷ್ಟ್ರವೆಂದು ಅನ್ನಲಿಕ್ಕೆ ರೀತಿಯುಂಟೇ?

ಮರಾಟಿರ ದವಡೆಯಲ್ಲಿ ಸಿಕ್ಕುಬಿದ್ದಿದ್ದರೂ, ಕನ್ನಡತ್ವವು ಘೂತ್ಕಾರ ಮಾಡುತ್ತಿದೆ. ಬಿಡಿಸಬಾರದೇ ಯಾರಾದರೂ! ಏಕೀಕರಣ ಸಂಘದವರು ಕೇಳಬಾರದೇ ಈ ಮೊರೆಯನ್ನು!

ಅಲ್ಲಿಯ ಜನರಾದರೋ, ತಮಗೆ ಅಡಿಗಡಿಗೆ ಕನ್ನಡದ ಆವಶ್ಯಕತೆಯಿರುತಿರಲು,

"ಕನ್ನಡ ಸಾಲೆಗಳು ಬೇಕು"

ಎಂದು ತಮ್ಮ ತಮ್ಮ ಸರಕಾರದವರನ್ನು ಏಕೆ ಕೇಳಿಕೊಳ್ಳಬಾರದು?

ಸ್ತ್ರೀ ವಿನೋದ!

"ನಿನ್ನ ಹೆಂಡತಿಗೆ ಆ ಮಿತವ್ಯಯದ ಬಗ್ಗೆ ಚಿಕ್ಕ ಉಪನ್ಯಾಸವನ್ನು ಕೊಟ್ಟಿದ್ದಾಯಿತೇ?"

"ಅಹುದು"

"ಪರಿಣಾಮ"

"ಬೀಡ್! ಚಹಾ ಸೇದುವದನ್ನು ನಾನು ಬಿಡಲೇ ಬೇಕಾಯಿತು!

ಉತ್ತರ ಕನ್ನಡದ ಸಮಾಚಾರ

(ನಮ್ಮ ಸುದ್ದಿಗಾರನಿಂದ)

ತಾ|| ೧೯-೪-೨೭

ಉತ್ತರ ಕನ್ನಡ ಜಿಲ್ಹೆಯ ಕಲೆಕ್ಟರರಾದ ಮಿ| ಮಂಗೊಮೆರಿಯವರಿಗೆ ವರ್ಗವಾಗಿ ಅವರ ಸ್ಥಾನಕ್ಕೆ ಶ್ರೀ ಮರ್ಡೇಕರ ಇವರು ಒರುವವರಾಗಿ ಜಾಹೀರಾಗಿದೆ.

...ೞ ಮತ್ತು ಸಿದ್ದಾಪುರ ಪಟ್ಟಣಗಳಲ್ಲಿ ಪ್ಲೇಗಿನ ಹಾವಳಿಯು ಕಡಿಮೆಯಾಗುತ್ತ ನಡೆದಿರುವದು. ಸುದೈವದಿಂದ ಪ್ರಾಣಹಾನಿಯು ವಿಶೇಷವಾಗಿ ಆಗಿಲ್ಲ. ಈ ಜಿಲ್ಹೆಯ ಕೆಲವು ಭಾಗದಲ್ಲಿ ಕಾಲಿರಾ ಸುರುವಾಗಿರುವುದೆಂದು ಕೇಳಬರುತ್ತದೆ.

ಶ್ರೀಹಾಲ ಸಿದ್ಧೇಶ್ವರ ಲೋಕಸೇವಕ ನಾಟಕ ಮಂಡಲವು ಕಾರವಾರದಿಂದ ಅಂಕೋಲೆಗೆ ಹೋಗಿದೆ. ಕಾರವಾರದಂತಹ ಕನ್ನಡಕ್ಕೆ ವಿಶೇಷ ಆದರವಿಲ್ಲದ ಊರಲ್ಲಿಯೂ ಈ ಕಂಪನಿಗೆ ತಕ್ಕ ಪ್ರೋತ್ಸಾಹ ದೊರೆಯಿತಲ್ಲದೆ ಕರ್ನಾಟಕದ ರಂಗಭೂಮಿಯು ಸುಧಾರಿಸಹತ್ತಿರುವುದೆಂಬ ಸದಭಿಪ್ರಾಯವುಂಟಾಯಿತು. ಇದು ಕರ್ನಾಟಕಕ್ಕಾದ ಒಂದು ಲಾಭವು.

ಹಳಿಯಾಳ ಕೋಟೆಯಲ್ಲಿ ಶ್ರೀ ಮಾರುತಿ ದೇವಸ್ಥಾನದ ಹತ್ತರ ಒಂದು ಹಳೇ ಶಿಲಾಲೇಖವು ದೊರೆತಿದೆ. ಅದರ ಮೇಲಿನ ಲಿಪಿಯು ಹಳೆಗನ್ನಡದ್ದಿರಬೇಕೆಂದು ನೋಡಿದವರು ಅನ್ನುತ್ತಾರೆ. ಕರ್ನಾಟಕ ಇತಿಹಾಸ ಸಂಶೋಧಕ ಮಂಡಲದವರು ಇದನ್ನು ಪರೀಕ್ಷಿಸಬೇಕೆಂದು ಕೋರುತ್ತೇವೆ.

ಪ್ರಕೃತಕ್ಕೆ ಉತ್ತರ ಕನ್ನಡದಲ್ಲಿ ಯಾವ ಚಳವಳಿಯು ನಡೆದಿಲ್ಲ. ಉತ್ತರ ಕನ್ನಡದ ಮುಖಂಡರೆನಿಸಿಕೊಳ್ಳುವವರೆಲ್ಲರೂ ಮಡಿಯಾಗಿ ಕುಳಿತಂತೆ ಕಾಣುತ್ತದೆ. ನಾಲ್ಕಾರು ಸ್ವಯಂಸೇವಕರು ಮಾತ್ರ ಕುಮಟಾ, ಸಿರ್ಸಿ, ಸಿದ್ದಾಪುರಗಳಲ್ಲಿ ಖಾದೀ ಮಾರಾಟದ ಕಾರ್ಯವನ್ನು ಅವ್ಯಾಹತವಾಗಿ ನಡಿಸಿರುವರು. ಅವರಿಗಿದ್ದ ಉತ್ಸಾಹದ ದಶಾಂಶವಾದರೂ ನಮ್ಮ ಮುಖಂಡರಿಗಿದ್ದರೆ ಈಗಿನಂತಹ ನಿಶ್ಚೇಷ್ಟ ಸ್ಥಿತಿಯು ಬರುತ್ತಿರಲಿಲ್ಲ.

: ಉತ್ತರ ಕನ್ನಡಕ್ಕೆ ಅತ್ಯಂತ ಸಾರಭೂತವಾದ ಸಮಾಜವೆಂದರೆ ಕೋಟೆಗರದು. ಐದು ತಾಲೂಕುಗಳಲ್ಲಿ ಅವರ ಪ್ರಾಬಲ್ಯವಿದೆ. ಆದರೆ ಈ ಸಮಾಜವು ಹಿಂದುಳಿದಷ್ಟು ಇನ್ನಾವುದೂ ಇಲ್ಲ. ಆರ್ಥಿಕ ಸ್ಥಿತಿಯು ಕೆಟ್ಟು, ಶಿಕ್ಷಣವು ಕಡಿಮೆಯಾಗಿ ಸಮಾಜದೃಷ್ಟಿಯಿಂದಲೂ ಅವನತಿ ಹೊಂದುತ್ತಿರುವ ಈ ಸಮಾಜವನ್ನು ಅದೇ ಸಮಾಜದ ಮುಖಂಡರು ಸಂಪೂರ್ಣವಾಗಿ ದುರ್ಲಕ್ಷಿಸಿರುವರು. ಈ ಜಿಲ್ಹೆಯ ಎಂ. ಎಲ್. ಸಿ. ಗಳಾದ ಶ್ರೀ ಕರ್ಕಿಯವರು ಅದೇ ವರ್ಗಕ್ಕೆ ಸೇರಿದವರು. ಆದರೆ ಅವರು ತಮ್ಮ ಸಮಾಜದ ಸಂಘಟನೆಯ ಒಗ್ಗೆ ಯಾವ ಪ್ರಯತ್ನವನ್ನೂ ಮಾಡಿದ್ದು ತೋರುವುದಿಲ್ಲ. ಇದು ಶೋಚನೀಯವು.

ಕರಾವಳಿಯಲ್ಲಿ (ದಂಡೆ ಪ್ರದೇಶ) ಬಿಸಿಲು ಪ್ರಖರವಾಗಿ ಕಳೆಯುತ್ತ ಹೋಗಿದೆ. ಹಲವು ಕಡೆಗಳಲ್ಲಿ ನೀರಿನ ಕೊರತೆಯಾಗಿದೆ. ಮಳೆಯು ತಡವಾಗಿ ಬಿದ್ದರೆ ಎಷ್ಟೋ ಕಡೆಗೆ ನೀರಿನ ಒಗ್ಗೆ ಗೋಳಾಟವು ವಿಶೇಷವಾಗದೀತೆಂದು ತೋರುತ್ತದೆ.

ಮೈಸೂರು ಸುದ್ದಿಗಳು.

ಮೈಸೂರ ಸಂಸ್ಥಾನದ ವಿದ್ಯಾಖಾತೆಯ ಮುಖ್ಯಾಧಿಕಾರಿಗಳು ಮಹಾತ್ಮರನ್ನು ಸಂದರ್ಶಿಸಿ ... ಲ್ಲಿ ಕೆಲವು ಪ್ರಾಥಮಿಕ ಶಾಲೆಗಳಲ್ಲಿ ನೂಲುವ ಶಿಕ್ಷಣ ಕೊಡುವಬಗ್ಗೆ ಎಲ್ಲ ಸಂಗತಿಗಳನ್ನು ತಿಳಿದುಕೊಂಡರು. ಪ್ರತಿ ವಿದ್ಯಾರ್ಥಿಯಿಂದ ಪ್ರತಿ ತಿಂಗಳಿಗೆ ಸರಕಾರಕ್ಕೆ ೪ ಆಣೆ ಉತ್ಪನ್ನವಾಗುವದೆಂದು ಮಹಾತ್ಮರು ಸಿದ್ಧಪಡಿಸಿದರು. ಶಾಲೆಗಳಲ್ಲಿ ನೂಲುವ ಏರ್ಪಾಡು ಬೇಗನೇ ಆಗುವದು.

ಬೆಳಗಾಂವಿ ಜಿಲ್ಹೆಯ ಪತ್ರ.

(ನಮ್ಮ ಸ್ವಂತ ಸುದ್ದಿಗಾರನಿಂದ)

ತಾ| ೧೮-೪-೨೭ನೇ ದಿವಸ ಸಂಜೆಯ ೬ ಘಂಟೆಗೆ ಮಹಾತ್ಮಾ ಗಾಂಧಿಯವರು ಅಂಬೋಲಿಘಾಟದಿಂದ ಬೆಳಗಾಂವಿಗೆ ಬಂದರು. ಅದೇ ದಿವಸ ರಾತ್ರಿ ೯ಘಂಟೆಗೆ ನಾಗರಿಕರು ಬೈಲಲ್ಲಿ ಮಹಾಸಭೆಯು ಸೇರಿ ಮಹಾತ್ಮರಿಗೆ ೬೫೦೦ ರೂ ಗಳು ಅರ್ಪಿಸಲ್ಪಟ್ಟವು. ಪ್ರಕೃತಿಯ ಅಸ್ವಸ್ಥತೆಯಿಂದಲೋ ವಿಶೇಷವಾಗಿ ವೇಳೆಯನ್ನು ಕಳೆಯಬಾರದೆಂತಲೋ ಮಹಾತ್ಮರು ತಮ್ಮ ಭಾಷಣವನ್ನು ೫ ನಿಮಿಷಗಳಲ್ಲಿ ಮುಗಿಸಿದರು. ಮಹಾತ್ಮರಿಗೆ ಇಲ್ಲಿಯ ನಗರ ಸಭೆಯವರು ತಾ| ೧೮-೪-೨೭ ದಿವಸ ಸಂಜೆಯ ೮ ಘಂಟೆಗೆ ಮಾನಪತ್ರವನ್ನು ಅರ್ಪಿಸಿದರು. ರಾಷ್ಟ್ರೀಯ ಪಕ್ಷದ ಮುಂದಾಳುಗಳಲ್ಲಿಯೂ, ಸ್ವಯಂಸೇವಕರಲ್ಲಿಯೂ ವಿಶೇಷವಾಗಿ ಹುರುಪು ತೋರುಬರುತ್ತಿತ್ತು.

ಇಲ್ಲಿಯ ಲೋಕಲ್‌ಬೋರ್ಡ ಅಧ್ಯಕ್ಷಪದದ ವಿಚಾರವು ಜೂನ ತಿಂಗಳವರೆಗೆ ಮುಂದೆ ಹಾಕಲ್ಪಟ್ಟಿದೆ. ಈ ವ್ಯಾಜ್ಯವು ಬಹುಶಃ ಎಲ್ಲರ ಲಕ್ಷವನ್ನು ಸೆಳೆದುಕೊಂಡಿತು.

ಬೆಳಗಾಂವ ಜಿಲ್ಹೆಯಲ್ಲಿ ಇನ್ನೂ ಎಷ್ಟೋ ಕಡೆಗೆ ಮರಾಟಿ ಶಾಲೆಗಳು ಪ್ರಬಲವಾಗಿ ನಡೆದಿವೆ. ಈ ಜಿಲ್ಹೆಯ ಮುಖ್ಯ ಭಾಷೆಯು ಕನ್ನಡವಿದ್ದ ಮೂಲಕ ಮರಾಟಿ ಹುಡುಗರಿಗೆ ಮುಂದೆ ವ್ಯವಹಾರಕ್ಕೆ ತೊಂದರೆಯಾಗಬಾರದೆಂದು ಮರಾಟಿ ಶಾಲೆಗಳಲ್ಲಿ ಕನ್ನಡ ಕ್ರಮಿಕ ಪುಸ್ತಕಗಳನ್ನು ಐಚ್ಛಿಕ ಭಾಷೆಯಂತೆ ಕಲಿಸುವ ಏರ್ಪಾಡು ಮಾಡಬೇಕೆಂದು ಸ್ಕೂಲಬೋರ್ಡಿನವರಿಗೆ ಒಂದು ಬಿನ್ನಹವುಂಟು.

ಬೆಳಗಾಂವಿ ಜಿಲ್ಹೆಯಲ್ಲಿ ಪ್ರತಿಯೊಂದು ಸಾರ್ವಜನಿಕ ಕಾರ್ಯದಲ್ಲಿ ಯಾವ ಪಕ್ಷವೆಂಬ ಪ್ರಶ್ನವು ಸರ್ವಸಾಮಾನ್ಯವಾಗಿದೆ. ಇದರಿಂದ ಸಾರ್ವಜನಿಕ ಕಾರ್ಯಕ್ಕೆ ವಿಶೇಷ ಹಾನಿಯಿದೆ. ರಾ. ಬ. ಅಂಗಡಿ ಹಾಗು ಪಂಡಿತಪ್ಪಾ ಚಿಕ್ಕೋಡಿ ಇವರಲ್ಲಿ ಒಕ್ಕಟ್ಟಿನವಾಗದ ಹೊರತು ಜಿಲ್ಹೆಯಲ್ಲಿ ಯಾವ ಕಾರ್ಯವೂ ಸಾಗದಂತೆ ಆಗಿದೆ. ಇತ್ತ ಕಡೆಗೆ ನಿಷ್ಪಕ್ಷಪಾತಿಗಳು ಲಕ್ಷಗೊಟ್ಟು ಬೇಗನೆ ಈ ಬೇಗೆಯನ್ನು ನಂದಿಸಲು ಪ್ರಯತ್ನಿಸಬೇಕು.

ಉತ್ತರದಿವಾಕರ ಶ್ರೀಗಳವರು ಪ್ರದೇಶ ಗಮನಕ್ಕೆ ಸಮ್ಮತಿಯನ್ನು ಕೊಡಲೇಬೇಕೆಂಬರ್ಥದ ಒಂದು ಬಿನ್ನಹವು ಕೆಲವು ಪ್ರಸಿದ್ಧ ಗೃಹಸ್ಥರ ಸಹಿಯೊಡನೆ ಕ್ಷಿಪ್ರದಲ್ಲಿಯೇ ಹೊರಬೀಳತಕ್ಕದ್ದದೆ.

ಬೆಳಗಾಂವಿಗೆ ಅತ್ಯಂತ ಅಗತ್ಯದ ವಿಷಯವೆಂದರೆ ಒಂದು ಕನ್ನಡ ವಾರಪತ್ರವು. ಜಿಲ್ಹೆಯಲ್ಲುಂಟ ಪಕ್ಷ, ವಿಪಕ್ಷಗಳ ಕೋಲಾಹಲವೆದ್ದಾಗ ಬೆಳಗಾಂವಿಗೆ ತನ್ನ ಅಭಿಪ್ರಾಯವನ್ನು ಅರಿತೋರಿಸಲು ಬಾಯಿಯಿಲ್ಲದಂತಾಗಿದೆ. ಡಾ. ಸವಣೂರರವರು ಪ್ರಯತ್ನಿಸಿ ಹೊರಡಿಸಿದ ಪತ್ರಕ್ಕೆ ವಿಘ್ನವು ತಟ್ಟಿ ನಿಂತಿತೆಂಬದು ನಿಜವು! ಮತ್ತೊಮ್ಮೆ ಇಲ್ಲಿಯ ಮುಂದಾಳುಗಳು ಪ್ರಯತ್ನಿಸಿ ಪಾಲುಗಾರಿಕೆಯಿಂದಲಾದರೂ ಒಂದು ಕನ್ನಡ ವೃತ್ತಪತ್ರವು ನಡೆಯುವಂತೆ ಮಾಡುವರೋ ?

ಸೋಜಿಗದ ಸುದ್ದಿಗಳು.

ನೋರಫಾಕದಲ್ಲಿ ಟಲ್ಡಿನ್ ಎಂಬ ಸ್ತ್ರೀಯಳು ಮೊನ್ನೆ ತನ್ನ ೧೦೪ ನೇ ಹುಟ್ಟಿದ ದಿನವನ್ನು ಸಂತೋಷದಿಂದ ಕಳೆದಳು. ಈಕೆಯ ಪ್ರಕೃತಿಯು ಇನ್ನೂ ಚನ್ನಾಗಿದೆ. ತಿರುಗಾಡುತ್ತಾಳೆ. ಪಿಯಾನಿನವಂಗಳ ತಾನೇ ಬಾರಿಸುತ್ತ ಹಾಡುತ್ತಾಳೆ. ಪತ್ರಗಳನ್ನು ಸಹ ಬರೆಯುತ್ತಾಳೆ. ಅಲ್ಲಿಯ ಮಹಾರಾಜರು ತಮ್ಮ ರಾಣಿಯೊಂದಿಗೆ ನೋಲಿಂದ ಮೇಲೆ ಟಲ್ಡಿನ್‌ಳ ಭೆಟ್ಟಿಗೆ ಹೋಗುತ್ತಾರೆ. ಆಕೆಯ ೧೦೦ನೇ ಹುಟ್ಟ ದಿನ ೩ ಜನ ಬೇರೆ ಬೇರೆ ರಾಷ್ಟ್ರದ ರಾಣಿಯರು ಭೆಟ್ಟಿಯಾಗಲಿಕ್ಕೆ ಹೋಗಿದ್ದರು. ಅವಳ ಸ್ಮರಣಶಕ್ತಿಯೂ, ನೋಟವೂ ಚನ್ನಾಗಿವೆ.

ಪಶುಗಳಿಗೆ ಸಹ ವಿವೇಕ ಬುದ್ಧಿಯು ಇರುವದಾಗಿ ಫ್ರಾನ್ಸದ ಶಿಕ್ಷಕರು ಕಂಡುಹಿಡಿದಿದ್ದಾರೆ.

ವಿಮಾನಗಳಿಂದ ಫೋಟೋ ತೆಗೆಯಲು ಹೊಸ "ಕ್ಯಾಮರಾ" ಶೋಧಿಸಲ್ಪಟ್ಟಿದೆ. ೧೦೦ ರಿಂದ ೫೦೦ ಮೈಲಗಳ ವರೆಗಿನ ಪ್ರದೇಶವನ್ನೆಲ್ಲ ಆಕರ್ಷಿಸುವಷ್ಟು ಶಕ್ತಿಯದರಲ್ಲಿದೆ. ಒಂದೇ ಸಲಕ್ಕೆ ೧೦೦ ಚಿತ್ರಗಳಿಗೆ ಸಾಕಾಗುವಷ್ಟು ಉಪಕರಣಗಳನ್ನು ಅದರಲ್ಲಿಡಬಹುದು. ಫೋಟೋ ತೆಗೆದುಕೊಂಡ ತಾಸು, ಮಿನಿಟು, ಸೆಕಂಡು, ವಿಮಾನವು ಆಕಾಶದಲ್ಲಿ ಎತ್ತರ, ಭೂಮಿಗೂ ವಿಮಾನಕ್ಕೂ ಇದ್ದ ಕೋನಾಕೃತಿ, ಕಂಬರು. ಆಕೆ ವಿಮಾನಿನ ವರ್ಗ ಕಾರೀಖು ಇವೇ ಮೊದಲಾದ ಸರ್ವ ಕೆಲಸಕ್ಕೆ ಬೇಕಾಗುವ ಸಂಗತಿಗಳು ಪ್ರತಿಯೊಂದು ಫೋಟೊದಲ್ಲಿ ತಮ್ಮಷ್ಟಕ್ಕೆ ತಾವೇ ಆಗುವವು.

ನೀಲಗಿರಿಯ ಪತ್ರ.

(ನಮ್ಮ ಸುದ್ದಿಗಾರರಿಂದ)

ಮೈಸೂರ ಮಹಾರಾಜರು ಪರಿವಾರದೊಂದಿಗೆ ಬೇಸಿಗೆಗಾಗಿ ಫರ್ನಹಿಲ್ಲಿನಲ್ಲಿಯ ತಮ್ಮ ಅರಮನೆಗೆ ದಯಮಾಡಿಸಿದ್ದಾರೆ.

ಉದಕಮಂಡಲದಿಂದ ಮೈಸೂರವರೆಗೆ ಟಪಾಲುಗಳನ್ನೂ ಪ್ರಯಾಣಿಕರನ್ನೂ ಒಯ್ಯುವದಕ್ಕೆ ಮೈಸೂರ ರೇಲ್ವೆಯವರಿಂದ ಮೋಟಾರುಗಳು ಏರ್ಪಾಡಾಗಿವೆ. ಕರಗೆ ೬-೮-೦ ರೂಪಾಯಿ. ಮೈಸೂರು-ಅರಸೀಕೇರಿ- ಟ್ರೇನಿಯ ಜಂಡಿಗೆ ಅನುಕೂಲವಾಗುವಂತೆ ಕಾಲನಿರ್ಣಯವಾಗಿದೆ- ಇದರಿಂದ ಧಾರವಾಡದಿಂದ ಇಲ್ಲಿಗೆ ಒಂದೇ ದಿವಸದಲ್ಲಿ ಕಾಗದಗಳು ಬರುವುದಕ್ಕೆ ಅವಕಾಶವಾಯಿತು- ಇನ್ನು ಮೇಲೆ ನೀಲಗಿರಿಯಿಂದ ಕರ್ನಾಟಕದ ಉತ್ತರಭಾಗಗಳಿಗೆ ಬಹಳ ಅನುಕೂಲವಾಯಿತು-

ಮುದ್ರಾಸ ಗವರ್ನರರು ಬೇಸಿಗೆಗೆ ಇಲ್ಲಿಗೆ ಬಂದಿದ್ದಾರೆ

ಮಳೆ ಕಡಿಮೆ ಬಿಸಿಲು ಎಂದಿಗಿಂತಲೂ ಹೆಚ್ಚು ಆಗಾಗ್ಗ ಬೆಂಕಿಗಳುಮಾತ್ರ ಬೀಳುತ್ತವೆ.

ನೋಟೀಸು

ರಾ || ರಾ || ಬಸಪ್ಪಾ ಮಲ್ಲಪ್ಪಾ ಬಣಗಾರ ಬೇಕಿಗಿ ಸಾ || ಬಾಗಲಕೋಟ ಇವರಿಗೇ

ಕೆಳಗೆ ಸಹಿ ಮಾಡುವವರ ಕಡಿಂದ ನೋಟೀಸಿನಿಂದ ತಿಳಿಸುವದರಲ್ಲಿ ಬರುತ್ತದಲ್ಲಾ ಬಾಗಲಕೋಟ ಗ್ರಾಮದಲ್ಲಿ ನನ್ನ ಮಾಲ್ಕಿ ವಹಿವಾಟಿಯಲ್ಲಿ ಇರುವ ಸರಕಾರಿ ಜಮೀನು ವಿಂಚಿಯವರ ತೋಟ ಅಂಬುವದು — ೭ || ಸರ್ವೆ ನಂಬರ - ಯಕರೆ ಕ || ರೂ

೪೦೦	४'६	೭'೪
೩೦'	೧೬	೧೧'೧೨
೪೦೩	೫	'೨೭
೩		'೨

ಇವು ಈಗ ನಿಮ್ಮ ಕಡೆಗೆ ಗರ ಸಾ ವರೆಗೆ(೧೦೨) ರೂಪಾಯಿ ಲಾವಣಿ ವ ಯವಕ ಮಾವಿನ ವ ಹುನಸಿ ಕಾಯಿಗಳನ್ನು ಕೊಡುವ ಕರಾರು ಮಾಡಿ ಲಾವಣೀಪತ್ರ ಬರಕೊಟ್ಟು ನೋಂದಣೀ ಮಾಡಿಸಿಕೊಟ್ಟೇನಿ ಆ ಪ್ರಕಾರಾ ನೀವು ಇಗ ಉಪಭೋಗ ಮಾಡುತಾ ಬರತೀರಿ ಆದರೆ ನಾನು ಸದರಿ ನಂಬರ ಗಳನ್ನು ತೋರ ವತ್ತಿ ಬರಕೊಟ್ಟು ಶ್ರೀನಿವಾಸಾಚಾರ್ಯ ಮನಗೂಳಿ ಇವರ ಕಡಿಂದ ದೇಣಿ ತಗೊಂಡಿದ್ದು, ಈಗ ಅವರು ತಮ್ಮ ರಕಮಿನ ಬಗ್ಗೆ ದಾವೇ ಮಾಡತಕ್ಕವರು ಇದ್ದರು ಅದಕ್ಕೆ ನಾನು ಅವ್ವಾತಿನಲ್ಲಿ ಯನಕ ಸೂಟು ಬಿಡಿಸಿಕೊಂಡು ದೇಣಿ ಪೇಡ ಮಾಡಿಕೊಂಡ ಕಾರಣ ಸದರ ನಂಬರಗಳನ್ನು ರಾಮಾಚಾರ್ಯ ನಾಗಸಂಪಗಿ ಇವರ ಕಡಿಂದ ಅವರಿಗೇ (೮೮೫) ರೂಪಾಯಿ ಕೊಡಿಸಿ ನಾನು ಕೈಲೆ (೧೧೫) ಈ ಪ್ರಕಾರ (೧೦೦೦ ಕ್ಕೆ ದಿಕ್ಕ ಖರೀದಿ ಸದರ ರಾಮಾಚಾರ್ಯ ನಾಗಸಂಪಗಿ ಇವರಿಗೆ ಕೊಟ್ಟು ಅಲಾಹಿದ ಖರೀದಿ ಪತ್ರ ಬರಕೊಟ್ಟು ನೊಂದಣೀ ಮಾಡಿಸಿಕೊಟ್ಟೇನಿ. ಕಾರಣಾ ಇನ್ನು ಮುಂದೆ ನನಗೆ ಬರತಕ್ಕ ಲಾವಣಿ ರೂ || ವ ಇತರ ಯಾವತ್ತು ಸ್ವಾಮಿತ್ವ ನನಗೆ ಲಾವಣೀ ಪತ್ರದ ಪ್ರಕಾರ ಯೇನು ಬರತಕ್ಕದ್ದು ಅದು ಯಾವತ್ತು ಸದರ ರಾಮಾಚಾರ್ಯ ನಾಗಸಂಪಗಿ ಇವರಿಗೆ ಮುಟ್ಟಿಸಿ ಅವರ ಕಡಿಂದಾ ಪಾವತೀ ತಗೋತಾ ಹೋಗಬೇಕು ಸದರ ನಂಬರಗಳಿಗೆ ಅವರೇ ಸಂಪೂರ್ಣ ಮಾಲ್ಕರು. ಇರುವದರಿಂದಾ ನಿಮ್ಮ ಲಾವಣೀ ಮುದ್ದತ ಮುಟ್ಟೋತನಾ ನನ್ನ ಪೂಜೂರ ಇಲ್ಲದೇ ಬಿನ್ನ ತಕರಾರ ಅವರ ಕಬ್ಜಾಕ್ಕೆ ಕೊಡಬೇಕು. ಕಬ್ಜಾ ಅವರಿಗೆ ಕೊಡಲಿಕ್ಕೆ ಯಾರೂ ತಕರಾರ ಮಾಡಬಾರದು.

ಜಿವಾಜಿ ವೆಂಕಾಜಿ ಮಿರ್ಜೆ

ಶಿವನಲ್ಲಿ ಭಕ್ತಿಮಾಡುವವರಿಗೆ ಒಳ್ಳೇ ಸಮಯ!

ಪುರಾಣವೆಂಬ ಕನ್ನಡ ಮಾಸಪತ್ರಿಕೆಯ.

ಈಗ ಸ್ಕಾಂದಪುರಾಣವು ನಡೆಯುತ್ತಿರುವುದು.

(ಮೂಲ ಮತ್ತು ಕನ್ನಡ ತಾತ್ಪರ್ಯ ಸಹ)

	ಸ್ವದೇಶದವರಿಗೆ	ಪರದೇಶದವರಿಗೆ
ಒಂದೆ ವರ್ಷಕ್ಕೆ	೩ — ೦ — ೦	೩ — ೮ — ೦
೬ ತಿಂಗಳಿಗೆ	೧ — ೧೨ — ೦	೨ — ೦ — ೦
ವಾಚನಾಲಯ ಮೊದಲಾದವರಿಗೆ	೫ — ೦ — ೦	

ಮೂರು ಸಂಚಿಕೆಗಳು ಸಿದ್ಧವಾಗಿವೆ.

ಮೇಲ್ಕಂಡ ಗ್ರಂಥದಲ್ಲಿ ದಕ್ಷಯಜ್ಞಧ್ವಂಸ, ಸಮುದ್ರಮಥನ, ಲಿಂಗಪೂಜೆಗೆ ಕಾರಣ, ಗಿರಿಜಾಕಲ್ಯಾಣ, ಶಿವರಾಜ್ಯಾಭಿಷೇಕ ಸ್ಕಂದೋತ್ಪತ್ತಿ ಇವೇ ಮೊದಲಾದ ಕಥೆಗಳಿರುತ್ತವೆ. ಎಲ್ಲಾ ಜಂಗಮದ ಹೆಂಗಸರೂ, ಗಂಡಸರೂ ಮಕ್ಕಳೂ ಸಹ ಸುಲಭವಾಗಿ ಓದಿ ತಿಳಿದುಕೊಳ್ಳುವಂತೆ ಕನ್ನಡಿಸಿರುತ್ತದೆ. ಉದ್ದಿಷ್ಟಪುರಾಣವು ಕನ್ನಡ ತಾತ್ಪರ್ಯದೊಂದಿಗೆ ಪ್ರಥಮ ಸಂವತ್ಸರದಿಂದ ಪ್ರಕಟಿಸಲ್ಪಡುವುದು ಮುಕ್ತಾಯದ ಅರ್ಧವು ಬರೆಯಲ್ಪಡುತ್ತಿ. ಅಪೇಕ್ಷೆಯುಳ್ಳವರು ಜಾಗ್ರತೆಯಾಗಿ ಆರ್ಡರು ಕೊಡತಕ್ಕದ್ದು.—— ಇದಕ್ಕೆ ಚಂದಾದಾರರನ್ನು ಒದಗಿಸತಕ್ಕ ನಂಬಿಕೆಯಾದ ಏಜಂಟರುಗಳು ಬೇಕಾಗಿದೆ ಅಪೇಕ್ಷೆಯುಳ್ಳವರು ಜಾಗ್ರತರಾಗಿ ಬರೆದುಕೊಳ್ಳಿರಿ. ಏಜಂಟರಿಗೆ ತಿಂಗಳಿಗೆ ೨೫ ರೂಪಾಯಿ ಕಡಿಮೆ ಇಲ್ಲದಂತೆ ಕಮೀಷನ್ ದೊರೆಯುತ್ತದೆ.

ವಿಳಾಸ:—

ಮ್ಯಾನೇಜರ, ಪುರಾಣಕಾರ್ಯಾಲಯ.

೭೨೨ ಉತ್ತರಾದೀಮಠದಬೀದಿ, ಮೈಸೂರ.

ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವು ಹಲ್ಲುಗಳ ನೋವುಗಳನ್ನು ಕಳೆಯುವೆವು ಹಲ್ಲಿನಲ್ಲಿಯಾಗುವ ರಕ್ತ ಶ್ರಾವವನ್ನು ತೀವ್ರನಿಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಗಳಾಡುವ ಹಲ್ಲುಗಳನ್ನು ಏನೂ ನೋವಾಗ ದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು ಹಲ್ಲುಗಳ ಪೂರ್ಣ ಸೆಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು

ಲಿವರಿನ ಗಡಿಯಾರಗಳು.

ಲಿವರಿನ ಕೈ ಗಡಿಯಾರ ರೂ. ೯.

ಲಿವರಿನ ಕಿಸೆಯೊಳಗಿಡುವ ಗಡಿಯಾರ ರೂ. ೭



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಪೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವುದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ತಾಳುವವು. ಬೆಲೆ ಕಡಿಮೆಯಿದೆಂದು ಅಂಜುವ ಕಾರಣವಿಲ್ಲ ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ. ಅದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ.

ಲಿಬೋ ವಾಚ ಕಂ. (ಇಂಡಿಯಾ.) ಬಾಂಬೆ. ೭ ೪.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವರಿಗೂ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ

ಏಜಂಟರು—ಜಂಬುಲಿಂಗಪ್ಪಾ ಚಾಲವಾದಿ.

ಸ್ಟೇಶನರ್ ಬಾಗಲಕೋಟೆ.

ರಾಜವೈದ್ಯ ನಾರಾಯಣಜಿ ಕೇಶವಜಿ,

೨೭ ಬಿಸಾಜಬಾರ್ ಮದ್ರಾಸು

ಯಾವದೇ { ಆಕಾರದ ನಕ್ಷೆಯ ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ ೧೪, ಅರ್ಧ ಬೆಲೆ ರೂ. ೭



ಬರೇ ಒಂದು ತಿಂಗಳ ಬಗ್ಗೆ ನಾವು ಈ ದಂಫನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೇತಿಮ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ **ಬೆಲೆ ರೂ. ೭**

ಅಪ್ಪೇ ಇದೆ ಈಗಲೇ ಬರೆಯಿರಿ.

ಪತ್ತೆ—ಸ್ವಾನ ಹೌಸ ಪಿ. ಬಿ. ೫೦೮. ಪಿ ಟಿ ಮದ್ರಾಸ

ಅತ್ಯಲ್ಪವಿವೆ! ಉಚಿತ

ಕೇವಲ ಉಚಿತ **ಕೇವಲ ಉಚಿ**



"ತಾರಾ" ಲೀವರ ರಜಿಸ್ಟರ್ಡ ಪೋಕೆಟ್ ವೋಚ್ ೧೫ ಕೆರೆಟ್ ರೋಲ್ಡ ಗೋಲ್ಡಿನದು. ಮುಖಬಿಲ್ಲೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚು ಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ 'ಸಿ' ಹಾಗು "ತಾರಾ" ಲೀವರ ರಿಜಿಸ್ಟರ್ಡ ೧೫ ಕೆರೆಟ್ ರೋಲ್ಡ ಗೋಲ್ಡಿನ ಪೋಕೆಟ್ ವೋಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪ್ಟನ್ ವಾಚ್ ಕಂ, ಪಿ. ಬಿ. ೨೬೫ ಮದ್ರಾಸ

ಪ್ರಾರಂಭದ ಧಿನವನ್ನು

ನಿರೀಕ್ಷಿಸಿರಿ!

ನಿರೀಕ್ಷಿಸಿರಿ!

ಸಂಶಯ ಸಾಮ್ರಾಜ್ಯ

ಈ ಹೊಸ ಸಾಮಾಜಿಕ ನಾಟಕವು ಬೇಗನೇ ಪ್ರಯೋಗಿಸಲ್ಪಡುವದು.

ಬಾಗಲಕೋಟೆ } ವ್ಯವಸ್ಥಾಪಕ
ತಾ||೧೪|೪|೨೭ } ಶ್ರೀ ಕೃಷ್ಣ ಸಂಗೀತ ನಾಟಕ ಮಂಡಲ.

ಕಿರ್ಲೋಸ್ಕರ

ಕಬ್ಬಿಣ ನೇಗಿಲುಗಳ

ಹಂಗಾಮು (ಸುಗ್ಗಿ) ಸಮಾಪಿಸಿತು. ಈ ವರ್ಷ ಮಳೆ ಬೆಳೆ ಚನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವುದು. ಕಿರ್ಲೋಸ್ಕರ ನೇಗಿಲು ನಂ. ೧೧, ೯, ೮ ಇವು ಒಕ್ಕಲಿಗರಿಗೆ ಬಹಳೇ ಉಪಯೋಗಬೀಳುತ್ತವೆ ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುತ್ತವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್. } ಕಿರ್ಲೋಸ್ಕರವಾಡಿ ಜಿಲ್ಲೆ ಸಾತಾರೆ

ದಿ ಸ್ಟ್ಯಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲಕ್ಟ್ರಿಕ್, ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದ ಇದನ್ನು ಒಂದು ಸಲ ಪರೀಕ್ಷಿಸಿ.

೧ ನೇ ದರ್ಜಾ ಪುಡಿ (ಪ್ಯಾರಂಗ್ ಸೇರಿ) ೧ ಪೌಂಡಿಗೆ ರೂ. ೧-೬-೦
೨ ನೇ ,, ,, ,, ರೂ. ೧-೩-೦

ದಿ ಸ್ಟ್ಯಾಂಡರ್ಡ್ ಕಾಫಿ ಕಂಪನಿ
ಚಿಕ್ಕಪೇಟೆ ಬೆಂಗಳೂರು ಸಿಟಿ.

ಶ್ರೀಕೃಷ್ಣ ಸಂಗೀತ ಕನ್ನಡ ನಾಟಕ ಮಂಡಲವು.

ತಾಜ ನಾಟಕಶಾಲೆಯ ಮನೆ ವೆಂಕಟಪೇಟೆ,
ಬಾಗಲಕೋಟೆ.

ಗುಳೇದಗುಡ್ಡ ಶ್ರೀಮತಿ ಗಂಗೂಬಾಯಿಯವರ ಈ ಹೊಸ ನಾಟಕ ಕಂಪನಿಯಲ್ಲಿ ಅಭಿನಯಿಸಲು ಸುಸ್ವರೂಪ, ಸುಶೀಲ, ಸುಶಿಕ್ಷಿತ ಹಾಗೂ ಹಾಡು ಬಲ್ಲ ನಾಟ್ಯಕಲಾಭಿಜ್ಞರಾದ ಬಾಲಬಾಲಿಕೆಯರೂ, ಸ್ತ್ರೀ-ಪುರುಷರೂ

ಬೇಕಾಗಿದ್ದಾರೆ.

ಅದೇ ಪ್ರಕಾರ ಪೆಟ್ಟಿಗೆ ಹಾಗೂ ತಬಲಾ ಬಾರಿಸುವದರಲ್ಲಿ ನಿಪುಣರಾದವರೂ ಬೇಕಾಗಿದ್ದಾರೆ. ಇಚ್ಛೆಯಿದ್ದವರು ಸಮಕ್ಷಮ ಇಲ್ಲವೆ ಪತ್ರದ್ವಾರದಿಂದ ವಿಚಾರಿಸಿಕೊಳ್ಳಬೇಕು.

—ವ್ಯವಸ್ಥಾಪಕ.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಿಣೀ, ಜೀರ್ಣಜ್ವರ, ಅಗ್ನಿಮಾಂಧ್ಯ ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶ ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವದಾ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತೆಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು.) ಇದರಿಂದ ಮೈಯ್ಯುರಿವ ಗರಮಿಯ ಎಲ್ಲಾತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೇ ಯೋಗ್ಯತೆಯು ಸೇವಿಸಿ ನೋಡಿದರೆ ಕಾಣೇತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೨-೦, ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೬-೦-೦, ಇದಲ್ಲದೆ ೧ ಡಬ್ಬಿಯು ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸ—

ಎಸ್. ಬಿ. ಕದಮ್ ಮತ್ತು ಸನ್ಸ್.
ಮು. ಪೋಷ್ಟ ನಿಪ್ಪಾಣಿ (ಜಿ. ಬೆಳಗಾಂವ.)

ಕರ್ನಾಟಕ ವೈಭವ.

ರಾಷ್ಟ್ರೀಯ ಪಕ್ಷದ ಉಜ್ವಲವಾದ ವಾರ ಪತ್ರಿಕೆಯು

(ಸಂಪಾದಕ ಹನುಮಂತರಾವ ಮೋಹರೆ)

ಕಳೆದ ೩೦ ವರುಷಗಳಿಂದ ಈ ವಾರ ಪತ್ರಿಕೆಯು ಸ್ವಾತಂತ್ರ್ಯ ಸೇನೆಯ ಮುಂಭಾಗದಲ್ಲಿ ನಿಂತು ಒಡ್ಯರಾಕ್ರಶಿಯ ಕೂಡ ಹೋರಾಡುತ್ತಿರುತ್ತದೆ. ಒಡ್ಯರಾಕ್ರಸಿಯ ಅನ್ಯಾಯಗಳನ್ನು ನಿರ್ಭಯದಿಂದ ಬೈಲಿಗೆಳೆಯುವದರಲ್ಲಿಯೂ ಪ್ರಚಲಿತ ರಾಜಕೀಯ ವಿಷಯಗಳನ್ನು ನಿಷ್ಪಕ್ಷಪಾತದಿಂದ ಚರ್ಚಿಸುವದರಲ್ಲಿಯೂ ಇದು ಕಂಕಣಬದ್ಧವಾಗಿರುತ್ತದೆ. ಕರ್ನಾಟಕ ಸಂಸ್ಕೃತಿಯನ್ನೊಳಗೊಂಡಿರುವ ಆರ್ಯ ಸಂಸ್ಕೃತಿಯ ಪುನರುಜ್ಜೀವನವಾಗಬೇಕೆಂದು ಹಂಬಲಿಸುತ್ತದೆ. ನಾಣ್ಯಗಳ ಚಲನಪದ್ಧತಿ ಮೊದಲಾದ ಅರ್ಥಶಾಸ್ತ್ರದ ಮೇಲೆ ಸಾಮಾನ್ಯ ಜನರಿಗೆ ಸುಲಭವಾಗಿ ತಿಳಿಯುವಂಥ ಲೇಖಗಳು ಇದರಲ್ಲಿ ಬರುತ್ತವೆ. ರಾಷ್ಟ್ರೀಯ ಚಳವಳಿಯ ನಿಜವಾದ ರಹಸ್ಯ ತಿಳಿದುಕೊಳ್ಳಬೇಕಾದರೆ ಈ ಪತ್ರವನ್ನು ಅವಶ್ಯವಾಗಿ ಓದಬೇಕು.

ಇದರ ವ್ಯಾಪ್ತಿಯು ಮುಂಬಯಿ ಮದ್ರಾಸ ಕರ್ನಾಟಕಗಳಲ್ಲಿರುವದಲ್ಲದೆ ನಿಜಾಂ ಇಲಾಖೆ ಮೈಸೂರು ಮೊದಲಾದ ಸಂಸ್ಥಾನಗಳಲ್ಲಿ ಸಹ ಇರುತ್ತದೆ. ಜಾಹಿರಾತ ಕೊಡುವವರಿಗೆ ಒಳ್ಳೇ ಲಾಭದಾಯಕವಿರುತ್ತದೆ. ಸ್ವದೇಶಿ ಕಾರಖಾನದಾರರಿಗೆ ಸವಲತ್ತು ತೋರಿಸಲ್ಪಡುವದು.

ವಿಳಾಸ— ಮ್ಯಾನೇಜರ, **ಕರ್ನಾಟಕ ವೈಭವ**
ಪೋಸ್ಟ— ವಿಜಾಪೂರ

॥ ಮಹಾಲಕ್ಷ್ಮೀ ಪ್ರಾಸಾದಿಕ ॥

ಹೊಂಬಳ ಪೂರ್ಣ ಚಂದ್ರೋದಯ

ಸಂಗೀತ ನಾಟಕ ಮಂಡಳಿ-

ಇವರು ಅಣ್ಣೀಗೇರಿಗೆ

ಬಂದಿದ್ದಾರೆ.

ಮತ್ತು, ಹೊಸದಾಗಿ ಸಿದ್ಧಪಡಿಸಿದ ತಮ್ಮ ಲೋಕಪ್ರಿಯ ನಾಟಕ ಆಖ್ಯಾನಗಳನ್ನು, ಹೊಸ ಹುರುಪಿನ ನಟರು ಒಳ್ಳೇ ಮನೋಹರವಾದ ಅಭಿನಯ ಹಾಗೂ ಗಾಯನಗಳೊಂದಿಗೆ, ಪ್ರಯೋಗಿಸಿದ್ದಾರೆ. ಸುತ್ತಲಿನ ಹಳ್ಳಿಯ ಪ್ರೇಕ್ಷಕರು ಈ ಸುಸಂಧಿಯನ್ನು ಕಳೆದುಕೊಳ್ಳಬಾರದ.

ಮ್ಯಾನೇಜರ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೪೭ ನೇ ಇಸ್ವಿಯ ಜನೇವರಿ ೩೧ ನೇ ತಾ॥ ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ ೨೭೬೭ ಸಯ್ಯದ ಅಲ್ಲಿ ಅಸಗರ ಬಿಲ್‌ಗ್ರಾಮಿ ಸುಪರಿಂಟೆಂಡಂಟ್ ಸೆಕ್ರೆಟೇರಿಯೆಟ್ ಹೈದರಾಬಾದ ಡೆಕ್ಕನ್ನ ರೂ ೧೦೦೦

(೨) ಎಲ್. ಬಿ. ಸಿ. ನಂ ೧೯೬೨ ನಾರಾಯಣ ವಿಠ್ಠಲ ಲೋಣಾಕರ. ಕೇರ್ ಆಫ್ ಡಿ ಈ. ಪುರಾಣಿಕ ೧೬೭ ನಿಯಾಲಪುರ ಇಂದೂರ ೧೦೦೦

(೩) ಎಲ್. ಬಿ. ಸಿ. ನಂ ೩೪೮೧ ರಾಮಚಂದ್ರ ಅನಂತ ಶಿರೋಳೆ. ಡಿವಿಜನಲ್ ಫಾರೆಸ್ಟ ಆಫೀಸರ ಧಮ್ತರಾ. ಮಧ್ಯಪ್ರಾಂತ ರೂ. ೮೦೦

(೪) ಬಾಂಡ ನಂಬರು ೭೫೧೦೬ ಕೇ ಜಿ. ಘನಶ್ಯಾಂ ಡೋ ವ್ಯಾಪಾರಸ್ಥ ಬ್ರುಕ್‌ಸಾಯಿಡ ಸಿಲೋನ, ಕೊಲಂಬೋ. ರೂ ೧೦೦೦

(೫) ಬಾಂಡ ನಂಬರು ೧೩೬೩೪ ಎಸ್. ಜಿ. ಚವರೆ. ಅಸಿಸ್ಟಂಟ ಸ್ಟೇಶನ್‌ಮಾಸ್ತರ ತೆಲಗಿ ಜಿಲ್ಹಾ ವಿಜಾಪುರ ರೂ ೧೦೦೦

ಬಿ. ಎಸ್. ಅರಕೇರಿ
ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ)

ಜೀವ ವಿಮೆಯ ಕಾರ್ಯದಲ್ಲಿ

ಅದ್ಭುತವಾದ ಜಯವು!

ಯಾಕಂದರೆ ತನ್ನ ೧೯ ನೇ ವರ್ಷದಲ್ಲಿಯೇ ಸಾವಿರಕ್ಕೆ ೨೦ ರೂಪಾಯಿ ಲಾಭ ಹಂಚಿದೆ

ದಿ ಜನರಲ್ ಅಶ್ಯೂರನ್ಸ

ಸೋಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮೆ ಕಂಪನಿಗಳನ್ನು ಹಿಂದ ಒಗೆದು ಮುಂದೆ ಬಂದಿದೆ. ಇದರಿಂದ ಇದರಲ್ಲಿಯ ಕಾರ್ಯಶಕ್ತಿಯು ವ್ಯಕ್ತವಾಗುವದಲ್ಲದೇ, ಇದಕ್ಕಿಂತಲೂ ಹೆಚ್ಚಿನ ಪ್ರಗತಿಪರವಾದ ಕಂಪನಿಯೇ ಇಲ್ಲವೆಂಬುದು ಸಿದ್ಧವಾಗುತ್ತದೆ.

ಸುಲಭ ಕಂತು! ನಾಕಷ್ಟು ಸಾಕರ್ಯ! ಹೆಚ್ಚಾಗಿ ಲಾಭ!!!

ವಿಮೆಯ ಹಣ ಒಂದು ಕೋಟಿ! ೨೧ ತಿಂಗಳಲ್ಲಿ ಹೆಚ್ಚಾಗಿ ಉತ್ಪಾದಿಸಿದ್ದು ರೂ ೧,೮೯,೦೦೦

ಏಜಂಟರು ಬೇಕು! ಧಾರಾಳವಾದ ಕಮಿಶನ್!

ವಿಳಾಸ:- ಎಸ್. ಕಟ್ಟಿಮನಿ ಬಿ. ಎ. ಎಫ್. ಎಸ್. ಎಸ್. (ಲಂಡನ್) ಅಸಿಸ್ಟಂಟ ಮ್ಯಾನೇಜರ (ಡಿಪ್ರೆಟಿಶನ್ ದ ಮೇಲ) ಜನರಲ್ ಅಶ್ಯೂರನ್ಸ ಸೋಸಾಯಿಟಿ ಲಿ. ಅಜಮೀರ ಅಥವಾ ಬ್ರ್ಯಾಂಚ ಆಫೀಸ, ಮಾಲೂರ ಹಾಸ್ಪಿಟಲ್‌ದ ಎದರು, ಹುಬ್ಬಳ್ಳಿ;

ಈ ಪತ್ರಿಕೆಯು ಮಂಗಳವೇಢೆ ರಾಜೇಂದ್ರಾಚಾರ್ಯರ ಸ್ವಾಮ್ಯದ ಶ್ರೀನಿವಾಸ ಛಾಪಖಾನೆಯಲ್ಲಿ ಬಾಗಲಕೋಟೆ ಮುದ್ರಿಸಿ ಏಕೆಂಟ್ಸ್ ... ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ ನಂ. ಬಿ. ೧೯೪೭ ವಾ. ಚಂದಾ ೧-೧೪-೦ ಮಾತ್ರ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ.)

यद्यत् परवशं दुःखं । यद्यदात्मवशं सुखम् ।। — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨. | ಬಾಗಲಕೋಟೆ ರವಿವಾರ ಮಿತಿ ಚೈತ್ರ ಬಹುಳ ೩೦ ಶಕೆ ೧೮೪೯ ತಾ|| ೧-೫-೧೯೨೭. Date 1—5—1927. | ಸಂಚಿಕೆ ೫

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ
ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವದು ಮತ್ತು ಜೋಡಿಸುವದು, ಅವುಗಳೊಳಗಿನ ಕೆಟ್ಟುಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ಸಾಕ್ಷಾತ್ ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ ಸುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಉಳಿದಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದುಕೊಳ್ಳಿರಿ !

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.
೪೯೫ ಶನಿವಾರ ಪೇಠ ಜಮಖಂಡಿಕರ ವಾಡ ಪುಣೆ ಶಹರ.

S.U. Narayanacharya & Co.
Chaukkamba Benares City.

S.U.N. & CO.
BENARES CITY.

ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ ಜರಿಕಣ, ಜರಿಸೀರಿ, ಕಾಶ್ಮೀರ್ ಶಾಲು, ತರವಾರಿ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲೆಗಳ ಕ್ಯಾಟಲಾಗ ಕೋರುವವರಿಗೆ ಇನಾಮಾಗಿ ಕಳಿಸಲಾಗುವದು.
ವಿಳಾಸ:- ಶಿ. ಯೋ. ನಾರಾಯಣಾಚಾರ್ಯ ಕಂಪನಿ ಚೌಕಂಬಾ ಕಾಶಿ

ನಪುಂಸಕತ್ವ

ಧಾತು ವಿಕಾರ, ಸ್ವಪ್ನಾವಸ್ಥೆ, ಅಶಕ್ತತೆ ಇತ್ಯಾದಿಗಳಮೇಲೆ ಖಂಡಿತವಾಗಿ ಗುಣಕೊಡುವ ಮತ್ತು ಕಷ್ಟನಕ ಬಾಕುವ ದಿವ್ಯ ಔಷಧಿ! ಒಂದೇ ಗುಳಿಗೆ!!

ವಿಶೇಷ ಮಾಹಿತಿ ಪತ್ರದ್ವಾರ ತಿಳಿಯಿರಿ.

ವಾದಿರಾಜ ಜಹಾಗೀರದಾರ.
ಮು. ಪೋ. ಇಲಕಲ್ಲ. (ವಿಜಾಪೂರ)

ಕನ್ನಡಿಗನಿಗೆ ಜನರು ಏನನ್ನುವರು?

ಸಾಷ್ಟಾಂಗ ನಮಸ್ಕಾರಗಳು:-

ತದನಂತರದಲ್ಲಿ 'ವಿಶೇಷ' ಮತ್ತು 'ಪ್ರಥಮ' ಸಂಚಿಕೆಗಳನ್ನು ಕುರಿತು ಈಗ ಕೆಲವು ಮಾತುಗಳನ್ನು ಆಡುವದು ಉಚಿತವಾಗಿರುತ್ತದೆ. ಅದರಂತೆ ಇಲ್ಲಿ ಕೆಲವು ವಿಷಯಗಳ ಬಗೆಗೆ ಸ್ವಾಮಿಯವರಲ್ಲಿ ಅರಿಕೆ ಮಾಡಿಕೊಳ್ಳುತ್ತಿರುವೆನು

'ಕನ್ನಡಿಗ' 'ವಿಶ್ವಕರ್ಣಾಟಕ'ಗಳು ಅಭಿನವ ಕರ್ಣಾಟಕದ ಸದ್ಯದ ಅಭ್ಯುದಯವನ್ನು ಚೆಂದವಾಗಿ ಸೂಚಿಸುತ್ತಿರುವವು. ನನ್ನ ದೃಷ್ಟಿಯಲ್ಲಿ 'ಕನ್ನಡಿಗನೇ' ಶ್ರೇಷ್ಠನೆಂದು ತೋರಿದುದು ಅತಿಶಯುಕ್ತಿಯು ಅಥವಾ ಸ್ವಾರ್ಥದ ಮಾತೆಂದು ಸ್ಫುಟವಾಗಿ ಹೇಳಲಾಗದು.

ಮೈಸೂರಿನವರು ವಾಙ್ಮಯ ಕ್ಷೇತ್ರದಲ್ಲಿ ಪ್ರಬಲವಾದರೂ ಕನ್ನಡಕ್ಕೆ ಕಳೆಯೇರುವದು ಔತ್ತರೆಯಿಂದಲೇ ಎಂದು ನನ್ನ ಮತ.

ಪತ್ರಿಕೆ ನಿಲ್ಲಿಸಲು ವರ್ಷಾಂತ್ಯದ ಸಮಯವಿದು ಅನುಕೂಲವಿದ್ದಿತು. ಹಾಗೆ ಆಗಿದ್ದರೆ, ವ್ಯಕ್ತಿಶಃ ತಮ್ಮ ದೋಷವಲ್ಲ. ಕನ್ನಡದ ದುರ್ದೈವವೆನ್ನುತ್ತಿದ್ದೆನು. ಸ್ಫೂರ್ತಿಮಯವಾದ ತಮ್ಮ ಪತ್ರಿಕೆಯು ಮುಂದಾಗಿರುವದು ಉತ್ಸಾಹಪ್ರದ ಆದರೂ, ಸಾಲವನ್ನು ಹೊರುವ ಯೋಜನೆ ಮಾಡಬಾರದೆಂದು ಸೂಚಿಸುತ್ತೇನೆ. 'ಸಾಹಸೇ ಶ್ರೀ ಪ್ರತಿವಸತಿ' ಎಂಬಂತೆ ಹಾಗೆ ಸಹ ಹೇಳಲಾಗದು.

ನನ್ನ ದೃಷ್ಟಿಯಲ್ಲಿ 'ಕನ್ನಡಿಗನ' ವಿಶೇಷ ಕಾರ್ಯವು ಮರಾಠಿಯ ಹಾವಳಿಯನ್ನು ನಮ್ಮಲ್ಲಿಂದ ಮುರಿದಿರುವದೇ ಆಗಿರುವದು. ಇಷ್ಟು ಪರಿಣಾಮಕಾರಕವಾಗಿಯೂ ಆವೇಶದಿಂದಲೂ ಬರೆವ ಲೇಖನಗಳು ಆ ವಿಷಯದಲ್ಲಿ ಅನ್ಯತ್ರ ನನಗೆ ತೋರಲಿಲ್ಲ. ಆ ಭಾಗದಲ್ಲಿ ಶ್ರೀ. ಜಯರಾಯರು, ರಾಘವೇಂದ್ರರಾಯ ಸೇಡಮ್‌ಕರರು ತಾವೀಗ ವಿಶೇಷ ಸಂಚಿಕೆಯನ್ನು ಹಾಕಿಸಿದ್ದು ಅತ್ಯಂತ ಉಚಿತವೂ ಶ್ರೇಯಸ್ಕರವೂ ಆಗಿರುವದು. ತಮ್ಮ ಆ ಸಂಚಿಕೆಯ ಸನ್ನೋದುತ್ತ ನಿದ್ರೆಯ ವೇಗವು ಕಡಮೆಯಾಗಿ, 'ವಿವಿಧ ಜ್ಞಾನ ವಿಸ್ತಾರ'ದ ಹೊಸ ಸಂಚಿಕೆಯನ್ನು ಸಹ ಹಿಂದನಿಂದ ನೋಡಬೇಕೆಂದು ಒದಗಿಬಿಟ್ಟೆನು! ಅದರಲ್ಲಿಯ ಎಲ್ಲ ಲೇಖಗಳೂ ಉತ್ತಮವಾಗಿರುವವು. ಒಟ್ಟಿನಲ್ಲಿ ತಮ್ಮ ಪ್ರಯತ್ನವಿದು ವಿಶೇಷವೇ ಆಗಿದ್ದು ಆ ಬಗೆಗೆ ನಾವೆಲ್ಲ ಕೃತಜ್ಞರಾಗಿದ್ದೇವೆ. ಕರ್ತೃತ್ವಶಾಲಿಗಳು ನಮ್ಮಲ್ಲಿಂದ ತೆರಳಿರಲು ಅವರ ಪರಿಚಯವು ಈ ರೀತಿಯಲ್ಲಿ ಜನರಿಗಾಗುವದು ರಾಷ್ಟ್ರದಲ್ಲಿ ಸ್ಫೂರ್ತಿಯನ್ನು ಹುಟ್ಟಿಸುವದರಿಂದ, ಆ ಭಾಗದಲ್ಲಿ ಒಂದಿಷ್ಟು ಹಾನಿಯಾದರೂ ಯಥಾರ್ಥದಲ್ಲಿ ಜಾಗಿನ ಖಗ್ಗದಂತೆ ತಮ್ಮ ಲೇಖನಿಯು ಈಗ ಪೂಜ್ಯವೆಂದೇ ಹೇಳಬೇಕಾಗಿರುವದು.

'ಕನ್ನಡಿಗನು' ಪುನಃ ಹೊಸದಾಗಿ ಅವತರಿಸಿ ಮುಂದಾಗಿರುವಲ್ಲಿ ಮತ್ತೆ ಅನೇಕ ಆಲೋಚನೆಗಳು, ಜನ್ಮಕ್ಕೆ ಬಂದವನಿಗೆ ಆಲೋಚನೆಗಳು ತಪ್ಪುವದುಂಟೇ?

ಔತ್ತರೇಯರು ಅಲ್ಪ ಸಂಖ್ಯಾಕರಾದರೂ ಸಂಪನ್ನರ ದೇಶದವರೆಂದು ಅವರ ಮಾತಿನಲ್ಲಿ ತೆ ಜಸ್ವಿತೆಯಿರುವದು. ಕೆಲವರು ಮರಾಠಿಯ ಸಂಪರ್ಕದಿಂದ ಅದು ನಮ್ಮಲ್ಲಿರುವದೆಂದಾರು. ಕಡವಾಗಿ ತಂದುದು, ಬಹಳ ದಿನ ಕೆಲಸಕ್ಕೆ ಬಾರದು. ಮೂಲತಃ ಸಂಪನ್ನರ ಕಾಲದಿಂದ ಅಸ್ಮಿತ್ವಾಗ್ರದಲ್ಲಿ ನಿಂತು ರಾಷ್ಟ್ರವನ್ನು ಗದಗದಿಸುವ ನಮ್ಮ ಭಾಷೆಯ ತೇಜಸ್ಸೇ ಹೆಚ್ಚಿನದೂ ನಮ್ಮದೂ ಆಗಿರುವದು. ಭಾರತ ರಾಷ್ಟ್ರದೊಳಗಿನ ಒಂದು ಸುಪ್ರಸಿದ್ಧವೂ ಉಜ್ವಲವಾದ ಪೂರ್ವೇತಿಹಾಸವುಳ್ಳದ್ದೂ ಆದ ಕನ್ನಡವು ಒಂದು ರಾಷ್ಟ್ರಭಾಷೆಯೆಂದು ಮರಾಠಿಯವರು ಒಪ್ಪದೆ, ನಮ್ಮನ್ನು ತುಚ್ಛವಾಗಿ ಎಣಿಸುತ್ತಾರೆ. ಬಂದರೆ, ಬರುವದಾದರೆ, ಮೇಲೆ ಬಿದ್ದು ಹೋಗಿ ನಾವೇಕೆ ಸುಮ್ಮ ಸುಮ್ಮನೆ ಅವರನ್ನು ಪುರಸ್ಕರಿಸಲು ಹೋಗಬೇಕು?

ಅಂತು, ಇಂತಹ ಅದ್ಭುತ ಶಕ್ತಿ ಸಂಪನ್ನವಾದ ವಾಙ್ಮಯದ ಸೇವೆಯಲ್ಲಿ ಕನ್ನಡಿಗನು ಮತ್ತೆ ಮುಂದಾಗಿರುವನು. ಅಭಿಮಾನವುಳ್ಳ ಬಂಧು ಭಗಿನಿಯರು ಆತನನ್ನು ಪುರಸ್ಕರಿಸಲಿಕ್ಕಿಲ್ಲವೇ? ನನ್ನ ಅಪೇಕ್ಷೆಯು, ಕನ್ನಡಿಗರು

'ಕನ್ನಡಿಗ'ನು ಚಿರಂಜೀವನಾಗುವಂತೆ

ಔದಾರ್ಯದಿಂದಲೂ ಜ್ಞಾನ ದಾನದಿಂದಲೂ ಯೋಜಿಸುವರೆಂದು ಯೋಜಿಸಲೆಂದು ಇರುವದು.

ರೈಲು ಗಾಡಿಯ ರೂಲುಗಳಂತೆ ವಿಶ್ವಕರ್ಣಾಟಕ ಕನ್ನಡಿಗರು. ಅತ್ತಣಿಂದ ನೋಡಿದರೆ ಈತನು, ಇತ್ತಣಿಂದ ನೋಡಿದರೆ ಆತನು 'ಬಲವಾ'ಗಿ ಕಾಣುವರು. ಒಟ್ಟಿನಲ್ಲಿ ಇಬ್ಬರೂ ಸಮಾನರು. ಅವರಿಬ್ಬರು ಸ್ನೇಹದಿಂದ ರಾಷ್ಟ್ರಸೇವೆ ಮಾಡಲಿ.

ಬೆಂಗಳೂರ ತಾ|| ೬-೪-೨೨	ಇತಿ ತಮ್ಮ ವಾಙ್ಮಯ ಸೇವಕ.

ಹರಪನಹಳ್ಳಿ.
ತಾ|| ೧೪-೪-೨೨

ಸಂಪಾದಕ ಮಹಾಶಯರೇ,

ಪ್ರೇಮ ಪೂರ್ವಕವಾದ ನಮಸ್ಕಾರಗಳು. ತಾವು ಪವಿತ್ರವಾದ ಕನ್ನಡನುಡಿಯ ಸೇವೆಯನ್ನು ಮಾಡಬೇಕೆಂಬ ಉತ್ಕಟೇಚ್ಛೆಯಿಂದ, ಎಷ್ಟು ಆರ್ಥಿಕ ತೊಂದರೆಗಳು ಸಂಭವಿಸಿದರೂ ಅವುಗಳಿಗೆ ಮಾನ ಕೊಡದೆ, ಈ ವರ್ಷವೂ ಕನ್ನಡಿಗನನ್ನು ನಡೆಸಬೇಕೆಂಬ ದೃಢಪ್ರಯತ್ನವನ್ನು ಮಾಡಿರುವದನ್ನು ಪತ್ರಿಕಾ ಮುಖಾಂತರವಾಗಿ ತಿಳಿದು ಬಹು ಸಂತೋಷವಾಯಿತು. ತಮ್ಮ ದೃಢಪ್ರಯತ್ನವೂ ಪವಿತ್ರ ಸಂಕಲ್ಪವೂ ಸರ್ವ ವಿಧದಿಂದಲೂ ಪ್ರಶಂಸನೀಯವಾಗಿರುವವು. ತಾವು ನಿಷ್ಕಾಮ ಕರ್ಮ ಪ್ರೇರಕರಾಗಿ, ಸ್ವಲ್ಪವಾದರೂ ಸ್ವಾರ್ಥವಿಲ್ಲದೆ ಕನ್ನಡಿಗರ ಸೇವೆಯನ್ನು ಕೆಲವು ವರ್ಷಗಳಿಂದ ಸತತವಾಗಿ ಮಾಡುತ್ತಿರುವುದಕ್ಕಾಗಿ ನಮ್ಮ ಸಹೃದಯ ಪೂರ್ವಕವಾದ ಅಭಿನಂದನೆಗಳನ್ನು ದಯವಿಟ್ಟು ಸ್ವೀಕರಿಸಿರಿ. ಕರ್ಣಾಟಕರೆಲ್ಲರಿಗಾಗಿ ತಾವು ಪಡುತ್ತಿರುವ ಶ್ರಮಕ್ಕಾಗಿ ಕನ್ನಡ ಪ್ರಪಂಚವೇ ತಮಗೆ ಋಣಿಯಾಗಿರಬೇಕಾಗಿದೆ.

ತಮ್ಮ ಈ ಅಮೋಘ ಪ್ರಯತ್ನದಲ್ಲಿ ನಾವು ನಮ್ಮ ಕೆಲವು ನಮ್ರ ಸೂಚನೆಗಳನ್ನು ಕೊಟ್ಟಲ್ಲಿ ಅದು ನಮ್ಮ ಧಾರ್ಷ್ಟ್ಯವೆಂದು ತಿಳಿಯಲಾರಿರೆಂದು ಭಾವಿಸುವೆನು. ತಾವು ಇಲ್ಲಿಯವರೆಗೆ ತಮ್ಮ ಪತ್ರಿಕೆಯಲ್ಲಿ ಕೇವಲ ಕರ್ಣಾಟಕದ ವಿಷಯಗಳನ್ನು ಮುಖ್ಯವಾಗಿ ಪ್ರತಿಪಾದಿಸುತ್ತ ಕನ್ನಡಿಗರಿಗೆ ಬಹು ಪ್ರಯೋಜನವನ್ನುಂಟು ಮಾಡಿದಿರಿ. ಆದರೆ ಇನ್ನು ಮುಂದೆ ಅಖಂಡ ಭರತ ಖಂಡದ ವಿಷಯಗಳನ್ನು ಸಹ ಚರ್ಚಿಸುವೆವೆಂದು ತಮ್ಮ ಪತ್ರಿಕೆಯಲ್ಲಿ ಬರೆದಿರುವಿರಿ. ಈ ತಮ್ಮ ಹೊಸ ಮಾರ್ಗವು ನಮಗೆ ಸಮಂಜಸವಾಗಿ ಕಾಣುವದಿಲ್ಲ. ಏಕೆಂದರೆ ನಮ್ಮಲ್ಲಿ ಭರತ ವರ್ಷದ ವಿಷಯಗಳನ್ನು ಚರ್ಚಿಸುವ ಅನೇಕ ಕನ್ನಡ ಪತ್ರಿಕೆಗಳು ಇರುವವು. ಕೇವಲ

(ಹನ್ನೊಂದನೆಯ ಪುಟ ನೋಡಿರಿ.)

ಕನ್ನಡಿಗ.

ಬಾಗಲಕೋಟೆ ಚೈತ್ರ ಬಹುಳ ೩೦ ಶಕೆ ೧೮೪೯.

ಸಂಪಾದಕರ ಭೂಮಿ

(೬೦)

ನನ್ನ ಮನಸಿನ ಮೇಣವಮಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ಬೊಮ್ಮ!
ಚಿನ್ನದಾದರು ಚಿನ್ನ ಮೇಣಬತ್ತಿಯು ನೊಂದು ಚಿನ್ಮಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ಕನ್ನನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೊ॥

—ಅಂಬಿಕಾ ತನಯ ದತ್ತ

ಮೈಸೂರ ಸಂಸ್ಥಾನದ ಆಣೇಕಲ್ಲ ತಾಲೂಕಿನಲ್ಲಿ ಕ್ಷಾಮವಿದೆಂಬ ಚರ್ಚೆಯು ಮೈಸೂರಿನ ಶಾಸನ ಸಭೆಯಲ್ಲಿ ಹೊರಟಿದ್ದರಿಂದ, ದಿವಾನ ಮಿರ್ಝಾರವರು, ಸ್ವತಃ ತಾವೇ ಅಲ್ಲಿಗೆ ಹೋಗಿ, ಸ್ಥಾನಿಕ ಸ್ಥಿತಿಗತಿಗಳನ್ನು ಕಂಡು, ಅಲ್ಲಿ ನೀರಿನ ಬರವಿದೆಂಬದನ್ನು ತಿಳಿದುಕೊಂಡು, ಅದರ ನಿವಾರಣೆಯ ಬಗ್ಗೆ ಯೋಗ್ಯ ಉಪಾಯಗಳನ್ನು ಕೈಕೊಳ್ಳುವೆವೆಂದು ಪ್ರಜೆಗಳಿಗೆ ವಿಶ್ವಾಸಪೂರ್ವಕವಾಗಿ ಹೇಳಿದರು. ಅತ್ತ ಆ ಚಿತ್ರವನ್ನು ನೋಡಿ! ಇತ್ತ ನಮ್ಮ ಬ್ರಿಟಿಶ್ ರಾಜ್ಯದಾಡಳಿತೆಯ ಚಿತ್ರವನ್ನು ನೋಡಿ! ಬ್ರಿಟಿಶ್ ಶಾಸನ ಸಭೆಗಳಲ್ಲಿ ಈ ಬಗೆಯ ಕ್ಷಾಮಗಳ ವಿಚಾರಣೆ ಹೊರಟರೆ, ಕೇವಲ ಸ್ಥಾನಿಕ ಅಧಿಕಾರಿಗಳು ಬರೆದುದೇ ಪ್ರಮಾಣವೆಂದೂ, ವೃತ್ತಪತ್ರಗಳ ಲೇಖಗಳೂ ಶಾಸನ ಸಭೆಯ ಸಭಾಸದರ ಭಾಷಣಗಳೂ ಉಪ್ಪುಕಾರ ಹಚ್ಚಿ ವರ್ಣಿತವಾದ ವಿಧಾನಗಳೆಂದೂ, ಸರಕಾರದವರು ಉತ್ತರ ಕೊಡುವದು ದಟ್ಟುಬಿದ್ದು ಹೋಗಿದೆ. ವರಿಷ್ಟ ಅಮಲದಾರರಾಗಲಿ, ಸರಕಾರದ ಕಾರ್ಯದರ್ಶಿಗಳಾಗಲಿ, ಆ ಆಸ್ಥಾನಗಳಿಗೆ ಹೋಗುವ ವಿಚಾರವಂತೂ ಅವರಿಗೆ ಬರುವದೇಯಿಲ್ಲ. ಕದಾಚಿತ್ ಒಂದರೂ ಸಹ, ಕಲೇಕ್ಟರರ ವಿಶಾಲವಾದ ಮನೆಯಲ್ಲಿಳಿದು, ಅಲ್ಲಿಂದಲೇ ಎಲ್ಲ ಚೌಕಶೀ ಸಾಗಿಸಿದಂತೆ ನಟಿಸಿ ಎಲ್ಲವೂ ಸರಿಯಾಗಿದೆಂದು ವರದಿಯನ್ನು ಬರೆವರೆ ಮಾತ್ರ ಮುಗಿದಂತಾಯಿತು! ಹಳ್ಳಿಗಳಿಗೆ ಹೋಗಿ ರೈತರನ್ನು ಪ್ರತ್ಯಕ್ಷವಾಗಿ ಕಂಡು, ಅವರ ಸುಖದುಃಖಗಳನ್ನು ತಿಳಿದುಕೊಳ್ಳುವ ಮೈಸೂರ ಸರಕಾರದ ಪದ್ಧತಿಯನ್ನು ನೋಡಿ ಬ್ರಿಟಿಶರು ಅವರ ಅನುಕರಣ ಮಾಡುವಂತಿದೆ.

ಮೋಟಾರುಗಳಿಂದ ಪ್ರಯಾಣಿಕರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆಯೂ, ಕಲಿತಿರುಕ 'ಡ್ರಾಯವರ'ರಿಂದ ಆಗುತ್ತಿರುವ ಅಪಘಾತಗಳ ಬಗ್ಗೆಯೂ ಅನೇಕ ಸಲ ಅನೇಕ ಪತ್ರಿಕೆಗಳಲ್ಲಿ ಉಲ್ಲೇಖಗಳು ಬಂದಿವೆ, ಬರುತ್ತಲಿವೆ. ಆದರೆ ಸರಕಾರದವರಿಂದ ಈ ಬಗ್ಗೆ ಸರಿಯಾದ ಏರ್ಪಾಡಾಗಿರುವದಿಲ್ಲ. ಮೋಟಾರ ಪ್ರಮಾಣವು ಈಗ್ಗೆ ಮಿತಿಮೀರಿ ಬೆಳೆಯುತ್ತಿರುವದರಿಂದ ಸರಕಾರದವರು ಈ ವಿಷಯದಲ್ಲಿ ಮಾರ್ಗವನ್ನೊಂದು ಗೊತ್ತುಪಡಿಸುವದು ಅತ್ಯಗತ್ಯವಾಗಿದೆ. ಎಲ್ಲಕ್ಕೂ ಮೊದಲು 'ಡ್ರಾಯವರ' ಜನರಿಗೆ ವಿನಯದಿಂದ ಹೇಗೆ ನಡೆದುಕೊಳ್ಳಬೇಕೆನ್ನುವ ಬಗ್ಗೆ ಶಿಕ್ಷಣದ ಏರ್ಪಾಡಾಗಬೇಕು. ಇಲ್ಲವೆ 'ಲೈಸನ್ಸ'ನ್ನು ಕೊಡುವ ಪೂರ್ವದಲ್ಲಿ, ಅವರ ಗುಣಗಳ ಬಗ್ಗೆ ಪ್ರಶಸ್ತಿ ಪತ್ರಿಕೆಯನ್ನು ದೊರಕಿಸಬೇಕು. ಅಧಿಕ ಪ್ರಸಂಗ, ಉಡಾಳತ, ಇಲ್ಲದ ಕುಚೇಷ್ಟೆ, ಬೇಜವಾಬ್ದಾರ ವೃತ್ತಿ, ಸೊಕ್ಕು, ಇವೇ ಮೊದಲಾದ ಗುಣಗಳು 'ಡ್ರಾಯವರರ'ಲ್ಲಿ ತುಂಬಿತುಳುಕುತ್ತವೆ. ಹಳ್ಳಿಗಾಡರನ್ನು ಕಂಡರಂತೂ ಇವರ ಮೈ ತುಂಬುತ್ತದೆ! ದಾರಿಯಲ್ಲಿ ಚಕ್ಕಡಿಗಳು ಬಂದಾಗ್ಗೆ, ಬೆದರುವ ಸ್ವಭಾವದ ಎತ್ತುಗಳಿದ್ದರೆ, ಹಠಾತ್ತಾಗಿ, ಅವುಗಳ ಸಮೀಪದಲ್ಲಿರುವಾಗ್ಗೆ ತುತೂರಿಯ ಸಪ್ಪಳಮಾಡಿ, ಎತ್ತು ಅಡ್ಡ ಹೋದಾಗ್ಗೆ, ತಮ್ಮ ಕೃತಿಯನ್ನು ಕಂಡು ಆನಂದಪಡುವರು! ಇನ್ನು ಮೋಟಾರುಗಳ ಒಡೆಯರಂತೂ ಪ್ರವಾಸಿಕರ ಅನುಕೂಲತೆಗಳ ಕಡೆಗೆ ಲಕ್ಷ್ಯ ಕೊಡುವದೇಯಿಲ್ಲ. ಪ್ರವಾಸಿಕರೆಂದರೆ ಅವರ ಪಾಲಿಗೆ ಕೇವಲ ಕುರಿಗಳು. ಸಿಕ್ಕಂತೆ ಅವರನ್ನು ತುಂಬುವದೇ ತಮ್ಮ ಜನ್ಮಸಾಫಲ್ಯವೆಂದು ತಿಳಿಯುವರು! ಪ್ರವಾಸಿಕರ ಸಾಮಾನುಗಳನ್ನು ಬೇಜವಾಬ್ದಾರಿಯಿಂದ ಎಲ್ಲಿಯಾದರೂ ಇಡುವರು. ಅವು ದಾರಿಯಲ್ಲಿ ಬಿದ್ದರೆ, ಮುಂದೆ ಪ್ರವಾಸಿಕರ ಮೇಲೆಯೇ ಹರಿಹಾಯ್ದು "ನಮಗೇನು ಗೊತ್ತು?" ಎಂಬದಾಗಿ ಜವಾಬ್ದಾರಿಯನ್ನು ಹಾರಿಸಿಕೊಳ್ಳುವರು! ಹೊರಡಲು ನಿಯಮಿತ ಕಾಲವು ಇಲ್ಲವೇಯಿಲ್ಲ! ಹರಕು ಮುರಕು ಮೋಟಾರುಗಳನ್ನು ಕೊಂಡು, ಹಣದಾಸೆಯಿಂದ ಬಾಡಿಗೆ ಕಟ್ಟುವದರಿಂದ ದಾರಿಯಲ್ಲಿ ಮೋಟಾರುಗಳು ಕೆಟ್ಟು ನಿಲ್ಲುವ ಪ್ರಸಂಗಗಳಿಗೆ ಎಣೆಯೇಯಿಲ್ಲ! ನಿಜವಾಗಿ ಇವೆಲ್ಲ ಅಪವಾದಗಳಾಗಿರಬೇಕು. ಆದರೆ ಇವೇ ನಿತ್ಯದ ಸ್ವಾಭಾವಿಕ ಕ್ರಮವಾಗಿವೆ! ಈ ಬಗ್ಗೆ ವಿಚಾರಿಸಲು ಪೋಲೀಸರು ಇರುವದೇನೋ ನಿಜ. ಆದರೆ ಫುಕ್ಕಟೆಯಾಗಿ ಮೋಟಾರುಗಳಲ್ಲಿ ತಿರುಗಾಡಲು ಇಚ್ಛಿಸುವ ಪೋಲೀಸರ ದೃಷ್ಟಿಯು ಇವುಗಳ ಕಡೆ ಹೋಗದು! ಹೀಗಾಗಿ ಮೋಟಾರುಗಳಿಂದಾಗುವ ಪ್ರಯಾಣಿಕರ ಬೋಗಳಿಯನ್ನು ವರ್ಣಿಸುವದೇ ಕಷ್ಟವಾಗಿದೆ. ಕಳೆದ ವಾರದಲ್ಲಿ ಕೊಲ್ಹಾಪೂರ ಸಾತಾರೆಯ ಮಾರ್ಗದಲ್ಲಿ ಅಪಘಾತವಾಗಿ ಈರ್ವರು ಮಡಿದರು! ೧೧ ಜನರು ಗಾಯ ಹೊಂದಿದರು! ಮುಂಬೈಯಲ್ಲಿ ಅಪಘಾತವಾಗಿ ಓರ್ವನು ಮಡಿದನು! ಮದ್ರಾಸಿನಲ್ಲಿಯೂ ಅದೇ ಹಾಡು! ಕೆಲವು ಕಾಲದ ಹಿಂದೆ, ಬೆಳಗಾವಿ-ಧಾರವಾಡ, ಧಾರವಾಡ-ಹುಬ್ಬಳ್ಳಿ, ಹುಬ್ಬಳ್ಳಿ-ಗದಗ ಮಾರ್ಗಗಳಲ್ಲಿಯೂ ಇದೇ ಬಗೆಯ ಅಪಘಾತಗಳಾದುದನ್ನು ಸರಕಾರವು ಮರೆತಿರಲಿಕ್ಕಿಲ್ಲ! ಆದ್ದರಿಂದ ಈ ಭಯಂಕರವಾದ ಪ್ರಸಂಗಗಳು ಬಾರದಂತೆ, ಏರ್ಪಾಡಾಗಲು ನಾವು ಕೆಲವು ಸೂಚನೆಗಳನ್ನು ಇಲ್ಲಿ ಮಾಡಿರುವೆವು:- (೧) 'ಡ್ರಾಯವರ' ಜನರಿಗೆ ಶಿಕ್ಷಣ (೨) ಹಣದ ಬೆಂಬಲವಿದ್ದವರಿಗೆ ಮಾತ್ರ ಮೋಟಾರ ಬಾಡಿಗೆ ಯಿಂದಿಡಲು ಅಪ್ಪಣೆ ಕೊಡಬೇಕು. ಅಂದರೆ ಉತ್ತಮ ಮೋಟಾರುಗಳನ್ನು ಕೊಳ್ಳಲು ಅವರಿಗೆ ಅನುಕೂಲವಾಗುವದು. (೩) ಹೆಚ್ಚಿನ (Spare) ಮೋಟಾರನ್ನು ಬಾಡಿಗೆಯವರು ಇಡಲೇ ಬೇಕು (೪) ಪ್ರತಿಯೊಂದು ಮಾರ್ಗದ ಪ್ರಯಾಣಿಕರ ಸಂಖ್ಯೆಯ ಮಾನದಿಂದ ಎಷ್ಟು ಮೋಟಾರಗಳು ನಡೆಯುವದು ಶಕ್ಯವಿದೆಯೋ ಅಷ್ಟಕ್ಕೆ ಮಾತ್ರ "ಲೈಸನ್ಸ" ಕೊಡಬೇಕು. ಬೇಡಿದವರಿಗೆಲ್ಲ "ಲೈಸನ್ಸ" ಕೊಡುವದರಿಂದ ಮೋಟಾರಿನವರಿಗೆ ಹಾನಿ. ಅವರಿಗೆ ಹಾನಿಯಾದ ಕೂಡಲೇ ಮೋಟಾರುಗಳನ್ನು ಕೊಳ್ಳಲು, ಹೊಸ ಭಾಗಗಳನ್ನು ಹಾಕಲು, ಒಡೆಯರಿಗೆ ಮನಸ್ಸಾಗದು. ಇದರಿಂದ ಪ್ರಯಾಣಿಕರಿಗೆ ಅನೇಕ ಅನಾನುಕೂಲತೆಗಳಾಗುವವು. ಪ್ರಯಾಣಿಕರ ಸಂಖ್ಯೆಗೆ ಸರಿಯಾಗುವಷ್ಟೇ ಮೋಟಾರುಗಳಿದ್ದರೆ ಅವು ನಿಯಮಿತ ಕಾಲಕ್ಕೆ ಹೊರಡಲು ಅನುಕೂಲವಾಗುವದು. (೫) ಸರಕಾರೀ ಅಮಲದಾರರು ಫುಕ್ಕಟೆಯಾಗಿ ಹೋಗುವದನ್ನು ನಿಷೇಧಿಸಬೇಕು. ಈ ಬಗೆಯ ಕೆಲವು ನಿಯಮಗಳು ಮೈಸೂರ ಸಂಸ್ಥಾನದಲ್ಲಿವೆ. ಅವನ್ನು ಮುಂಬೈ ಸರಕಾರದವರು ತಿರುವಿ ನೋಡಬಹುದು.

ಶಿವಾಜಿ ಮಹಾರಾಜರ ೩೦೦ ನೇ ವರ್ಷದ ಜಯಂತ್ಯುತ್ಸವವು ವೈಶಾಖ ಶುದ್ಧ ತೃತೀಯಾದಲ್ಲಿ ನಡೆಯುವದು. ಭರತಖಂಡದ ಮಹಾ ಪ್ರತಾಪಶಾಲಿಯಾದ ವಿಭೂತಿಯ ಪುಣ್ಯ ಸ್ಮರಣೆಯ ಉತ್ಸವವು ಪ್ರತಿಯೊಂದು ನಗರದಲ್ಲಿ ನಡೆಯಬೇಕಾಗಿ ಮುಂದಾಳುಗಳೆಲ್ಲ ಅಪ್ಪಣೆ ಕೊಟ್ಟಿದ್ದಾರೆ. ಭಾರತೀಯರಿಗೆ ತಮ್ಮ ಪ್ರಾಚೀನ ವೈಭವ, ಪ್ರಾಚೀನ ವೀರರ ಕರ್ತೃತ್ವಶಕ್ತಿ, ಅವರ ಸ್ವದೇಶ-ಪ್ರೀತಿ, ಸ್ವಾರ್ಥತ್ಯಾಗಗಳೆಂದರೆ, ಈಗ್ಗೆ ಕೇವಲ ಕನಸಾಗಿ ತೋರುತ್ತಲಿವೆ. ಅದ್ದರಿಂದ ಇಂತಹ ಜಯಂತ್ಯುತ್ಸವಗಳನ್ನು ವಿಜೃಂಭಣೆಯಿಂದ ನೆರವೇರಿಸಿ ನಮ್ಮವರ ಆಗಿನ ಸ್ಥಿತಿಯನ್ನು ಜನರ ಕಣ್ಣೆದುರಿಗಿಡುವದು ಅತ್ಯವಶ್ಯವಾದ ವಿಷಯವು. ಈ ಮಹಾ ವಿಭೂತಿಯ ಪುಣ್ಯಸ್ಮರಣವು 'ಕನ್ನಡಿಗ'ನ ವಾಚಕರಿಗಾಗಬೇಕೆಂದು, ಇದೇ ಸಂಚಿಕೆಯಲ್ಲಿ ಶಿವಾಜಿಯ ಚರಿತ್ರವನ್ನು ಪ್ರಕಟ ಮಾಡಿದೆ. ಬಾಗಲಕೋಟೆಯ ಮರಾಠರು ಈ ಉತ್ಸವವನ್ನು ವೈಭವದಿಂದ ಕೊನೆಗಾಣಿಸಬೇಕಾಗಿ ಪ್ರಯತ್ನಿಸುತ್ತಲಿದ್ದಾರೆಂದು ತಿಳಿಸಲು ನಮಗೆ ಅಭಿಮಾನವೆನಿಸುತ್ತದೆ.

ಬಸವ ಜಯಂತ್ಯುತ್ಸವವು ವೈಶಾಖ ಶುದ್ಧ ೩ನೇ ದಿನವಿದೆ. ಇದೇನು? ವರ್ಷ ವರ್ಷವೂ ಮಾಡಿದ್ದೇ ಮಾಡುವದು ಹಾಡಿದ್ದೇ ಹಾಡುವದು! ಈ ಜಯಂತಿ ವರ್ಧಂತಿಗಳನ್ನು ಮತ್ತೆ ಮತ್ತೆ ಮಾಡುವದರಿಂದೇನು ಪ್ರಯೋಜನ? ಈ ಜಯಂತಿ—ವರ್ಧಂತಿಗಳಾದರೂ ಎಷ್ಟು! ಒಬ್ಬರವೇ? ಇಬ್ಬರವೇ? ಧರ್ಮವೀರರು, ಕರ್ಮವೀರರು, ರಾಷ್ಟ್ರವೀರರು, ಕವಿಗಳು, ಮಹಾ ಪುರುಷರು ಎಲ್ಲರೂ ಜಯಂತಿ ವರ್ಧಂತಿಗಳಿಗೆ ಅರ್ಹರೇ! ಎಂದಮೇಲೆ ಎಷ್ಟೆಂದು ಇವುಗಳನ್ನೆಲ್ಲ ಮಾಡುತ್ತ ಕೂಡಬೇಕು? ಎಂದು ಮುಂತಾಗಿ ಹುರುಪಿಲ್ಲದ ಸತ್ತ ವಿಚಾರಗಳು ಬಂದು ಇಂಥ ಉತ್ಸವಗಳಲ್ಲಿ ಉದಾಸೀನತೆಯನ್ನುಂಟು ಮಾಡುವ ಸಂಭವವು ಬಹಳ. ಇಂಥ ಉದಾಸೀನತೆಯು ಉಂಟಾಗುವದೆಂದೇ ಪ್ರತಿವರ್ಷವೂ ಪರಿಪಾಠವನ್ನು ಮುರಿಯಬಾರದೆಂದು ಹೇಗಾದರೂ ಕಾಲ ತಪ್ಪಿಸಿಕೊಳ್ಳುವದಕ್ಕೆ ಈ ಜಯಂತಿ ವರ್ಧಂತಿಗಳ ಉತ್ಸವಗಳನ್ನು ಮಾಡಿ ಮುಗಿಸುತ್ತೇವೆ. ಇಂಥ ಮಂಗಳೋತ್ಸವಗಳನ್ನು ಇಂಥ ಬುದ್ಧಿಯಿಂದೆಂದೂ ಮಾಡಬಾರದು. ಜಪತಪ ಅನುಷ್ಠಾನ ಪುನಶ್ಚರಣಾದಿಗಳ ಹೊಟ್ಟೆಯಲ್ಲಿ ಯಾವ ತತ್ವವು ಅಡಗಿಕೊಂಡಿದೆಯೋ ಅದೇ ತತ್ವವು, ಅದೇ ಮರ್ಮವು, ಅದೇ ಫಲವು ವರ್ಷ ವರ್ಷವೂ ಮಾಡಿದ್ದನ್ನೇ ಮಾಡುವ ಜಯಂತಿ ವರ್ಧಂತಿಗಳಂಥ ಮಂಗಳೋತ್ಸವಗಳಲ್ಲಿಯೂ ಅಡಗಿಕೊಂಡಿದೆ. ಹಾಡಿದ್ದೇ ಹಾಡುವದು ಮಾಡಿದ್ದೇ ಮಾಡುವದು ಎಂದು ಈ ಜಪ-ತಪ ಅನುಷ್ಠಾನ-ಪುನಶ್ಚರಣಗಳಿಗೆ ಯಾರಾದರೂ ಅನ್ನುವರೋ? ಕೆಲಸಕ್ಕೆ ಬಾರದ ಕೆಲಸವೆಂದು ಯಾರಾದರೂ ಹೇಳುವರೋ? ಇಲ್ಲಿಲ್ಲ. ಇಂಥವುಗಳಲ್ಲಿ ಅಚಲ ಶ್ರದ್ಧೆಯಿದ್ದ ಭಾರತೀಯರ ಹಾಗೆಂದೂ ಹೇಳಲಾರರು! ಸಾಮಾಜಿಕ ದೃಷ್ಟಿಯಿಂದಲೂ ರಾಷ್ಟ್ರೀಯ ದೃಷ್ಟಿಯಿಂದಲೂ ಮಹಾ ವಿಭೂತಿಗಳ ಸ್ಮರಣೋತ್ಸವಗಳಿಗೆ ಬೆಲೆ ಬಹಳುಂಟು. ಮಹಾ ಪುರುಷರ ಜೀವನ ರಹಸ್ಯವೆಲ್ಲ ಸಮಾಜ ಪುರುಷನ ಜೀವನ ರಹಸ್ಯದಲ್ಲಿ ಏಕವಾಗಬೇಕೆಂಬ ಉದ್ದೇಶದಿಂದ ಇಂಥ ಉತ್ಸವಗಳನ್ನು ಮಾಡಬೇಕು; ಇಲ್ಲಿಯ ವರೆಗೆ ಎಷ್ಟೋ ಇಂಥ ಉತ್ಸವಗಳು ಆಗಿ ಹೋಗಿವೆ. ಸೂಕ್ಷ್ಮವಾಗಿ ವಿಚಾರಿಸಿ ನೋಡಿದರೆ ಅವುಗಳಿಂದಾದ ಸ್ಪಷ್ಟ ಪ್ರಯೋಜನವೇನಾದರೂ ಕಂಡು ಬರುವದೆ? ನಿರ್ದಿಷ್ಟ ಉದ್ದೇಶವು ಸಫಲವಾಗಲಿಯೆಂದು ಮಾಡುವ ಉತ್ಸವಗಳೇ ಕಡಮೆ. ಏನೋ ಮಾಡಬೇಕೆಂದು ಮಾಡುವದು ಇಷ್ಟೇ. ಇಲ್ಲಿಯ ವರೆಗೆ ಬಸವ ಜಯಂತಿಗಳು ಎಷ್ಟೋ ಆಗಿ ಹೋದವು. ಆದರೆ ಸಮಾಜ ಪುರುಷನಲ್ಲಿ ನೆಲೆಗೊಂಡ ಬ್ರಾಹ್ಮಣ-ಲಿಂಗಾಯತ, ಲಿಂಗಾಯತ-ಲಿಂಗಾಯತೇತರ ಎಂಬ ಕಲುಷಿತ ಕಲ್ಪನೆಯು ರವಷ್ಟಾದರೂ ಕಡಮೆಯಾಗಿದೆಯೆ? ಬಸವೇಶ್ವರರು ಪರಧರ್ಮ ಸಹಿಷ್ಣುಗಳೂ ವಿಶಾಲವೃತ್ತಿಯವರೂ, ವಿಚಾರಿಗಳೂ ಇರಲಿಲ್ಲವೆ? ಬಸವೇಶ್ವರರು ರಾಷ್ಟ್ರವಿಘಾತಕ ವಿಚಾರಿಗಳಾಗಿದ್ದರೆ? ಎಂದೂ ಇಲ್ಲ. ಹಾಗಾದರೆ ಈ ಮಹಾ ವಿಭೂತಿಯ ಉದಾತ್ತ ಜೀವನವನ್ನು ನಮ್ಮ ಸಮಾಜ ಪುರುಷನು ಎಷ್ಟರ ಮಟ್ಟಿಗೆ ಅನುಕರಣ ಮಾಡಿದ್ದಾನೆ? ಯಾರಾದರೂ ಎದೆತಟ್ಟಿ ಹೇಳಬಲ್ಲರೆ? ಹೀಗೆ ಸಮಾಜ ಪುರುಷನ ಮೇಲೆ ಏನೂ ಪರಿಣಾಮವೇ ಆಗದಿರುವ ಕಾರಣವೇನು? ಮಹಾ ಪುರುಷರ ಗುಣಾನುಕರಣ ಬುದ್ಧಿಯಿಂದ ಈ ಉತ್ಸವಗಳನ್ನು ನಾವು ಮಾಡದಿರುವದೇ ಕಾರಣವಲ್ಲವೆ? ನಿರ್ದಿಷ್ಟ ಉದ್ದೇಶವು ಜಾಗ್ರತವಿದ್ದ ಪಕ್ಷದಲ್ಲಿ ಒಂದೊಂದು ಬಸವ ಜಯಂತಿಗೂ ಒಬ್ಬೊಬ್ಬರಾದರೂ ಲಿಂಗಾಯತ ಲಿಂಗಾಯತೇತರವೆಂಬ ಸಂಕುಚಿತ ವೃತ್ತಿಯಿಂದ ನಿವೃತ್ತರಾದವರು ದೊರೆಯಬಹುದಾಗಿತ್ತಲ್ಲ! ಆದರೆ ಹಾಗೆಲ್ಲಿದೆ? ಹೇಳಿರಿ ನೋಡುವಾ. ಅದ್ದರಿಂದ ಇನ್ನು ಮುಂದಿನ ವರ್ಧಂತಿ ಜಯಂತಿಗಳು ಈ ರೀತಿಯಲ್ಲಿ ಆಗಬೇಕು. ಆಯಾ ಮಹಾ ಪುರುಷರ ಜೀವನ ರಹಸ್ಯದಲ್ಲಿ ಹೇಗೆ ಮಾಡಿದರೆ ಬೆರೆತೇವೆಂಬ ಬುದ್ಧಿಯೇ ಇನ್ನು ಜಾಗ್ರತವಾಗಿರಲಿ. ಈ ಸಲದ ಬಸವ ಜಯಂತಿಯು ಈ ಬಗೆಯಾಗಿ ಆಗಲಿ ಎಂದು ಕೋರಿಕೆ.

ಮುಂಬೈಯಲ್ಲಿ ಮೈಸೂರ ಸಂಘವು ಹೊರಟು ಆರೇ ತಿಂಗಳುಗಳಾದರೂ ಅದು ಈಗ ಸ್ವಲ್ಪಾವಧಿಯಲ್ಲಿ ಮಾಡಿದ ಕಾರ್ಯವು ಪ್ರಶಂಸನೀಯವಿದೆ. ೧೦೪ ಜನ ಸಭಾಸದರಿದ್ದಾರೆ. ವಿಶಾಲವಾದ ಕಟ್ಟಡವನ್ನು ಕೊಳ್ಳುವಷ್ಟು ಧನ ಕೂಡಿದೆ. ಅನೇಕ ವೃತ್ತ ಪತ್ರಿಕೆಗಳು ಬರುತ್ತಲಿವೆ. ಆಟಗಳ ಏರ್ಪಾಟಾಗಿದೆ. ಎಲ್ಲಕ್ಕೂ ಮಹತ್ವದ್ದೆಂದರೆ, ಕನ್ನಡ ಶಾಲೆಯನ್ನೊಂದು ಮುಂಬೈಯಲ್ಲಿ ಸ್ಥಾಪಿಸಬೇಕೆಂದು ನಿರ್ಧಾರವಾಗಿ, ಆ ಬಗ್ಗೆ ವಿಚಾರಣೆ ಮಾಡಲು ಒಂದು ಉಪಮಂಡಲವು ಸಿದ್ಧವಾಗಿದೆ. ಸಹಕಾರ ಸಂಘವನ್ನೊಂದು ಸಭಾಸದರ ಅನುಕೂಲತೆಯ ಬಗ್ಗೆ ಸ್ಥಾಪಿಸಬೇಕೆಂಬ ಪ್ರಯತ್ನವೂ ಸಾಗಿದೆ. ಕರ್ನಾಟಕ ಸಂಘವೊಂದು ಮುಂಬೈಯಲ್ಲಿದೆ. ಆದರೆ ಅದು ಇತ್ತಿತ್ತ ಮಲಗಿದಂತೆ ಕಾಣುತ್ತದೆ. ಇಂತಹ ಸಮಯದಲ್ಲಿ ಮುಂಬೈಯಿಯ ಮೈಸೂರು ಕನ್ನಡಿಗರು ಎಚ್ಚತ್ತು, ಅಲ್ಲಿ ಕನ್ನಡಿಗರ ಸಲುವಾಗಿ ಕನ್ನಡ ಶಾಲೆಯನ್ನೊಂದು ಸ್ಥಾಪಿಸುವ ಬಗ್ಗೆ ನಿರ್ಧರಿಸಿದ್ದು ಅವರ ಕನ್ನಡದ ಕಳವಳವನ್ನು ಹೊರಸೂಸುತ್ತದೆ. ಈ ಶಾಲಾ ಸಂಘದವರು ಮುಂಬೈ 'ಕಾರ್ಪೋರೇಷನ್ನಿ'ನಿಂದ ಧನ ಸಹಾಯ ಪಡೆದುಕೊಳ್ಳದೇ ಇರಬಾರದೆಂದು ಸೂಚಿಸುತ್ತೇವೆ. ಯಾಕಂದರೆ ವಿದ್ಯಾವಿಷಯಕ ಕಾರ್ಯಗಳಲ್ಲಿ ಸಹಾಯ ಮಾಡುವದು ಸ್ಥಾನಿಕ ಸಂಸ್ಥೆಗಳ ಆದ್ಯ ಕರ್ತವ್ಯವಾಗಿದೆ. ಈ ಮಾತಿನಲ್ಲಿ ಉತ್ತರ ಕರ್ನಾಟಕದ ಎಲ್ಲ ಸ್ಥಾನಿಕ ಸಂಸ್ಥೆಗಳೂ, ಈ ಮೈಸೂರ ಸಂಘದ ಬೇಡಿಕೆಗೆ ಬೆಂಬಲವನ್ನೀಯಲು ಸಿದ್ಧರಿದ್ದಾರೆ. ಯಾಕಂದರೆ ಇಲ್ಲಿರುವ ಮರಾಠಿ, ಉರ್ದು ಹುಡುಗರ ಸಲುವಾಗಿ ನಾವು ತಕ್ಕ ಏರ್ಪಾಡು ಮಾಡಿರಲು ಮುಂಬೈಯಲ್ಲಿರುವ ನಮ್ಮ ವಿದ್ಯಾರ್ಥಿಗಳಿಗೆ ಅದೇ ಬಗೆಯ ಜ್ಞಾನದಾನವನ್ನು ಮಾಡಲು, ಅಲ್ಲಿಯ ಸ್ಥಾನಿಕ ಸ್ವರಾಜ್ಯ ಸಂಸ್ಥೆಯು ಅಲ್ಲಗಳೆಯಲು ಮಾರ್ಗವಿಲ್ಲ. ಸಂಘದವರು ಈ ಮಾತಿನ ಕಡೆಗೆ ಲಕ್ಷ್ಯ ಪೂರೈಸುವರಾಗಿ ವಿಶ್ವಾಸವಿದೆ.

ಪತ್ರವ್ಯವಹಾರ.

ರಾ| ರಾ| ಕನ್ನಡಿಗ ಪತ್ರದ ಸಂಪಾದಕರಿಗೆ—

ನ. ವಿ. ತಮ್ಮ ಪತ್ರದ ಇದೇ ತಿಂಗಳ ೩ನೇ ಯ ಸಂಚಿಕೆಯ ಲ್ಲಿ "ಓದುಗ" ಎಂಬ ಗುರುತಿನಿಂದ, ವೆಂಕಟೇಶ ರಾಘವೇಂದ್ರ ಜೋರಾಪೂರ ಇವರು ಮನೆಯ ಮರಾಠಿದ ಪ್ರಸಿದ್ಧಿ ಪತ್ರಿಕೆಗಳನ್ನು ಮರಾಠಿಯಲ್ಲಿ ಮುದ್ರಿಸಿದ ಬಗ್ಗೆ ಅಸಮಾಧಾನದರ್ಶಕವಾದ ಟೀಕೆಯು ಮಾಡಲ್ಪಟ್ಟಿದೆಯಷ್ಟೇ? ಆದರೆ ಈ ಸಂಬಂಧವಾಗಿ ನಿಜವಾದ ಸಂಗತಿ ಇರುವದೇನಂದರೆ, ಮೇಲ್ಕಂಡ ಪ್ರಸಿದ್ಧಿ ಪತ್ರಗಳನ್ನು ವಾಡಿಕೆಯಂತೆ ಕನ್ನಡದಲ್ಲಿ ಮುದ್ರಿಸಿದ್ದಲ್ಲದೆ, ಮರಾಠಿದ ಸುದ್ದಿಯು ವಿಶೇಷವಾಗಿ ಪ್ರಸಾರ ಹೊಂದಬೇಕೆಂಬ ಉದ್ದೇಶದಿಂದ ಅವುಗಳನ್ನು ಮರಾಠಿಯಲ್ಲಿಯೂ ಮುದ್ರಿಸಿ ಪ್ರಸಿದ್ಧಿಸಿತು. ನಿದರ್ಶನಕ್ಕಾಗಿ ಕನ್ನಡದ್ದೊಂದು ಪತ್ರಿಕೆಯು ಇದರಡಿ ಕಳುಹಿಸಲ್ಪಟ್ಟಿದೆ. ಆದರೆ ಕಾಕತಾಳೀಯ ನ್ಯಾಯದಿಂದ 'ಓದುಗ'ನ ಕೈಗೆ ಮರಾಠಿಯ ಪತ್ರಿಕೆಯೊಂದೇ ದೊರೆತು, ಅದರಿಂದ ತಪ್ಪು ತಿಳುವಳಿಕೆಯಾಗಿ ಈ ರೀತಿಯ ಟೀಕೆಗೆ ಆಸ್ಪದವಾಗಿರಬೇಕೆಂದು ತೋರುತ್ತದೆ. ಯಾವದೊಂದು ವಿಶೇಷವಾದ ಪ್ರಸಂಗದಲ್ಲಿ ಪರಭಾಷೆಯ ದ್ವಾರದಿಂದ ಹೆಚ್ಚಿನ ಸಹಾಯ ಪಡೆಯುವದರಲ್ಲಿ ತಪ್ಪುಂಟೇ? ಈ ಪತ್ರಕ್ಕೆ ತಮ್ಮ 'ಕನ್ನಡಿಗ'ನು ಯೋಗ್ಯವಾದ ಸ್ಥಳವನ್ನೂ ಪ್ರಸಿದ್ಧಿಯನ್ನೂ ಕೊಡುವನೆಂದು ನಂಬಿರುವ,

ವಿಜಾಪುರ ಚೈತ್ರ ಬಹುಳ ೧೦ ಶಕೆ ೧೮೫೯	ತಮ್ಮ ಅಪರಿಚಿತರಲ್ಲೊಬ್ಬನಾದ **ಬಾ. ಗೋ. ಆಂಕಲಗಿ.**

ಚೀನದ ವಾತಾವರಣವು.

ಹರಗೋಲು ದಂಡೆಯ ಹತ್ತರ ಬಂದಾಗ್ಗೆಯೇ ಮುಳುಗುವ ಅಂಜಿಕೆ ಬಹಳ. ಅಂಬಿಗನು ಕುಶಲನಾದರೆ ಸೆಳವಿನೊಳಗಿಂದ ಪಾರುಮಾಡಿಕೊಂಡು ಬಂಡೆಗಲ್ಲುಗಳಿಗೆ ಅಪ್ಪಳಿಸದಂತೆ ಮಾಡುವನು. ಚೀನದ ರಾಷ್ಟ್ರೀಯ ಪಕ್ಷದ ಸ್ಥಿತಿಯಾದರೂ ಹೀಗೇ ಆಗಿದೆ. ಕಳೆದ ಎಂಟು ತಿಂಗಳಿನಿಂದ ಈ ಪಕ್ಷದ ಆಕ್ರಮಣಕ್ರಮವನ್ನು ನೋಡಿದರೆ ಮದುಮಗನ ಮೆರವಣಿಗೆಯನ್ನು ನೋಡಿದಷ್ಟು ಸಂಭ್ರಮ ಉಂಟಾಗುತ್ತಿತ್ತು. ಇವತ್ತು ಕೆಂತಾನದಲ್ಲಿ ನಾಳೆ ಕುತ್ತಲಿನ ಪ್ರದೇಶದಲ್ಲಿ ಮೇಲಕ್ಕೆ ಸಾಗುತ್ತಸಾಗುತ್ತ ಯಯಂಗತ್ಸಿಕ್ಯಾಂಗ ಎಂಬ ನದಿಯ ಯಾವತ್ತೂ ದಕ್ಷಿಣ ಪ್ರದೇಶವನ್ನು ಹ್ಯಾಂಕೌ ಪಟ್ಟಣವನ್ನು ಮತ್ತೆ ಪೂರ್ವಕ್ಕೆ ಸಾಗಿ ನಾನಕಿಂಗ ಶಾಂಘಾಯ ಮುಂತಾದ ಪಟ್ಟಣಗಳನ್ನು ಯುಕ್ತಿಯಿಂದಲೂ ಸಾಹಸದಿಂದಲೂ ತಕ್ಕೊಳ್ಳುತ್ತ ಸಾಗಿದ. ಸನ್ ಚುಆನ್ ಫ್ಯಾಂಗ ನೆಂಬ ಶಾಂಘಾಯಿಯಲ್ಲಿಯ ವಿರೋಧಿಯು ಮನೆಯನ್ನು ಸೇರಿದನು. ಚಾಂಗ ಚುಂಗ ಚ್ಯಾಂಗನು ಮಾಯವಾದನು. ವೂ ಪೈ ಫೂನು ಮರೆಯಾದನು. ವಿರೋಧಿಗಳಲ್ಲಿ ಪ್ರಮುಖರಾದ ಇಂಗ್ಲೀಷರೇ ಮುಂತಾದ ಪರದೇಶದವರ ಮುಖ್ಯ ಹಸ್ತಕನಾದ ಚ್ಯಾಂಗ ಸೋಲಿನ್ನನು ಅಗಳಡಸಂತಾಗಿರುವನು. ಈ ಪ್ರಕಾರವಾಗಿ ರಾಷ್ಟ್ರೀಯ ಪಕ್ಷದ ನೌಕೆಯು ಸ್ವಜಾತೀಯರೆಂಬ ಕಲ್ಲು ಬಂಡೆಗಳೊಳಗಿಂದಲೂ ಪರರಾಷ್ಟ್ರದವರೆಂಬ ಸೆಳವಿನೊಳಗಿಂದಲೂ ಪಾರಾದರೆಂಬುವಷ್ಟರಲ್ಲಿ ರಾಷ್ಟ್ರೀಯ ಪಕ್ಷದಲ್ಲಿಯೇ ಇಬ್ಬಣವುಂಟಾಗಿದೆ.

ಈ ರಾಷ್ಟ್ರೀಯ ಪಕ್ಷದಲ್ಲಿ ಎಂದಿಗಾದರೂ ಎರಡು ಮತಗಳಿದ್ದವು. ಒಂದು ಸನ್ ಯತ್ ಸೇನ ಎಂಬ ರಾಷ್ಟ್ರವೀರರ ಅನುಯಾಯಿಗಳದ್ದು ಮತ್ತೊಂದು ಸಮಾಜಸತ್ತಾವಾದಿಗಳದು. ಸನ್ ಯತ್ ಸೇನನು ರಾಷ್ಟ್ರೀಯ ಪಕ್ಷವನ್ನು ಸ್ಥಾಪಿಸಿದಾಗ್ಗೆ ಸಮಾಜ ಸತ್ತಾವಾದಿಗಳ ಸಹಾಯವಿಲ್ಲದೇ ಸಾಗುವಂತಿದ್ದಿಲ್ಲ. ಸಮಾಜ ಸತ್ತಾವಾದಿಗಳೆಂದರೆ ರಶಿಯದ ಕೆಲವು ಬೋಲಶೆವಿಕರು ಮತ್ತು ಅವರ ಚೀನದ ಅನುಯಾಯಿಗಳು. ಇಲ್ಲಿಯ ವರೆಗೆ ರಶಿಯದ ನೆರವು ಸಿಗದಿದ್ದರೆ ರಾಷ್ಟ್ರೀಯ ಪಕ್ಷದ ಸ್ಥಿತಿಯು ಬೇರೆಯಾಗುತ್ತಿತ್ತು. ರಶಿಯಾದವರು ದುಡ್ಡಿನಿಂದಲೂ, ಮದ್ದು ಗುಂಡಿನಿಂದಲೂ, ರಾಷ್ಟ್ರೀಯ ಸೈನ್ಯದ ಪುನರ್ಘಟನೆಯಿಂದಲೂ, ರಾಷ್ಟ್ರೀಯ ಪಕ್ಷದ ಸೈನ್ಯವು ಯಾವ ಪಟ್ಟಣವನ್ನು ತಕ್ಕೊಳ್ಳಲಪೇಕ್ಷಿಸುತ್ತದೆಯೋ ಆ ಪಟ್ಟಣದಲ್ಲಿ ಕೂಲೀಕಾರರ ಕಟ್ಟು ಮುಂತಾದ್ದು ಮಾಡಿಸಿ ಆ ಪಟ್ಟಣವು ತೀವ್ರವೇ ಹಸ್ತಗತವಾಗುವಂತೆಯೂ ಸಹಾಯ ಮಾಡಿದ್ದರು. ಆದರೆ ಮೊದಲಿನ ಸ್ಥಿತಿಯು ಈಗ್ಗೆ ಉಳಿದಿರುವದಿಲ್ಲ. ಒಳಶತ್ರುಗಳ ವಿರೋಧವಿಲ್ಲದಿದ್ದರೂ ಪರರಾಷ್ಟ್ರದವರಗೂಡ ತಿಕ್ಕಾಟ ನಡೆದದೆ. ರಾಷ್ಟ್ರೀಯ ಪಕ್ಷದ ಸೇನಾನಾಯಕನು ಬಹು ಚಾಣಾಕ್ಷನು. ಅವನಿಗೆ ಜಪಾನ ಅಮೇರಿಕಾ ದೇಶದ ನೆರವಿಲ್ಲದೆ ಇಂಗ್ಲೀಷರನ್ನು ಹಣ್ಣು ಮಾಡುವದು ಶಕ್ಯವಿಲ್ಲೆಂದು ತಿಳಿದದೆ. ಇಂಗ್ಲೀಷರ ಹಡಗುಪಡೆಯು ಚೀನದ ಸಮುದ್ರಗಳಲ್ಲಿ ಎಷ್ಟು ದೊಡ್ಡದಾದರೇನು? ಇಂಗ್ಲೀಷರ ಸೈನ್ಯವು ಚೀನದ ಭೂಮಿಯ ಮೇಲೆ ಎಷ್ಟು ಸಿದ್ಧತೆಯಲ್ಲಿದ್ದರೇನು? ಚೀನದ ಬಹಿಷ್ಕಾರ ಶಸ್ತ್ರಕ್ಕೆ ಈಡಾಗುವಂತಿಲ್ಲ. ಇಂಗ್ಲೀಷರ ವ್ಯಾಪಾರವು ಮೊದಲೇ ಸಂಪುಷ್ಟಕ್ಕೆ ಬರಹತ್ತಿದ್ದು ಬಹಿಷ್ಕಾರ ಶಸ್ತ್ರವನ್ನು ಜೋರಿನಿಂದ ಉಪಯೋಗಿಸಲು ನಾಶವಾಗುವದೆಂಬುದರಲ್ಲಿ ಸಂದೇಹವಿಲ್ಲ. ಇನ್ನು ಇಂಗ್ಲೀಷರು ಯುದ್ಧ ಮಾಡಿ ತಮ್ಮ ವ್ಯಾಪಾರವನ್ನು ಜುಲುಮೆಯಿಂದ ಚೀನದ ಮೇಲೆ ಹೇರಬೇಕೆಂದು ಅಪೇಕ್ಷೆ ಮಾಡಿದರೂ ಮಾಡಬಹುದು ಅದಕ್ಕಾಗಿಯೇ ರಾಷ್ಟ್ರೀಯ ಪಕ್ಷಕ್ಕೆ ಜಪಾನ ಅಮೇರಿಕೆಗಳ ಬೆಂಬಲ ಬೇಕಾಗಿದೆ. ಜಪಾನವು ರಾಷ್ಟ್ರೀಯ ಪಕ್ಷಕ್ಕೆ ಗುಪ್ತವಾಗಿಯೂ ಅಪ್ರತ್ಯಕ್ಷವಾಗಿಯೂ ಸಹಾಯ ಮಾಡಲು ಮನಸ್ಸು ಮಾಡಹತ್ತಿದೆ. ಇನ್ನು ಅಂತಃಕಲಹದ ಸುದ್ದಿಗಳು ಇಂಗ್ಲೀಷರು ಹೇಳುವಷ್ಟು ಭೀಕರವಿರುವದಿಲ್ಲ. ಇಂಥ ಸುದ್ದಿಗಳನ್ನು ಸಣ್ಣವಿದ್ದರೂ ದೊಡ್ಡದು ಮಾಡಿ ಹೇಳುವರು. ಇಂಗ್ಲೀಷರ ತತ್ವವೇ ಅಂತಹದು.

ವಿಜಾಪುರ.

ಕಳೆದ ವಾರದಲ್ಲಿ ಒಂದು ಕಳವು ಆಯಿತೆನ್ನುವದರಲ್ಲಿ. ಗುರುವಾರ ದಿನ ಶ್ರೀ ಉಮಡೀ ಮಾಸ್ತರ ಮನೆಗೆ ಕಳ್ಳರು ಕನ್ನ ಹಾಕಿ, ರಾತ್ರಿ ೧೨ ಗಂಟೆಯ ಸುಮಾರಕ್ಕೆ ಒಳಹೊಕ್ಕು, ಮನೆಯವರನ್ನು ಹೊಡೆದು, ಗಾಯಪಡಿಸಿ, ಅಜಮಾಸ ೩ ಸಾವಿರ ರೂ. ಬೆಲೆಬಾಳುವ ಆಭರಣಾದಿಗಳನ್ನು ಎತ್ತಿಕೊಂಡು ಹೋದರು. ಇವರದೂ ಕನ್ನದ ದರವಡೆಯನ್ನಬಹುದು. ನಗರ ರಕ್ಷಕರ ದಕ್ಷತೆಯು ಎಲ್ಲಿ ಅಡಗಿದೆಯೋ ತಿಳಿಯದು.

ಕಲೆಕ್ಟರರು ಮಾರಿಕಾದ ನಿವಾರಣೆಯ ಬಗ್ಗೆ ಅಲ್ಲಲ್ಲಿಯ ಜಾತ್ರೆಗಳನ್ನು ಬಂದು ಇಟ್ಟದ್ದು, ಸರಿಯಾಯಿತು. ಇಲ್ಲದಿದ್ದರೆ ಪಿಡುಗು ಇನ್ನೂ ಹೆಚ್ಚಾಗಿ ಹಬ್ಬುತ್ತಲಿದ್ದಿತು.

ಬದಾಮಿ.

ಹುನಗುಂದ ಮಾಮಲೇದಾರರಾಗಿದ್ದ ಬಿ; ಎಮ್; ಕುಲಕರ್ಣಿಯವರು ತಾ|| ೨೩-೪-೨೭ ದಿನ ಬೆಳಗಾವಿಯಲ್ಲಿ ಮರಣ ಹೊಂದಿದರು. ಶಿವಮಂದಿರದಲ್ಲಿ ತಮ್ಮ ಗದ್ದಿಗೆಯನ್ನಾಗಬೇಕೆಂದು ಅವರು ಮೊದಲೇ ಹೇಳಿದಂತೆ, ಅಲ್ಲಿ ಆ ಪ್ರಕಾರ ಮಾಡಲ್ಪಟ್ಟಿತು.

ಹಿಂದೂ ಪಾದ ಪಾದಶಾಹಿ

(ಶ್ರೀ ಸಾವರ್ಕರ ಬ್ಯಾರಿಸ್ಟರರ ಆಂಗ್ಲಲೇಖನದ ಆಧಾರದ ಮೇಲೆ ಬರೆದುದು.)

(ಲೇಖಕ:— ಅ. ನ. ಪುರೋಹಿತ, ಬಿ. ಎ.)

ಶಿವಾಜಿಯು ಹುಟ್ಟಿದುದು ಕ್ರಿ. ಶ ೧೬೨೭ರಲ್ಲಿ ಅಂದಿನಿಂದ ಹೊಸ ಯುಗವು ಪ್ರಾರಂಭವಾಯಿತು. ಶಿವಾಜಿಯ ಜನ್ಮವಾಗುವದಕ್ಕೆ ಮುಂಚೆಯೇ ಎಷ್ಟೋ ಜನ ಕೆಚ್ಚೆದೆಯ ಹಿಂದೂ ತರುಣರು ತಮ್ಮ ರಾಷ್ಟ್ರದ ಮೇಲೆ ನುಗ್ಗಿ ಬರುತ್ತಿದ್ದ ಮುಸಲಮಾನರನ್ನು ಎದುರಿಸುವುದರಲ್ಲಿಯೂ, ಹಿಂದೂ ಜನರ ಮಾನ ಮರ್ಯಾದೆಗಳನ್ನು ಕಾಪಾಡುವದರಲ್ಲಿಯೂ ಜಯಶೀಲರಾಗದೆ ಹತಾಶರಾಗಿ ಅನೇಕರು ಪ್ರಾಣವನ್ನು ಸಹ ಕಳೆದುಕೊಂಡಿದ್ದರು. ತನ್ನ ಹಿಂದಿನವರಂತೆಯೇ ಎದೆಗೊಟ್ಟು ಕಾದಿ. ಗೆಲುವನ್ನು ಅಳವಡಿಸಿಕೊಂಡು ಮುಂದೆ ಹೋದಂತೆಲ್ಲ ಹೆಚ್ಚು ಗೆಲುವು, ಹೆಚ್ಚು ಉತ್ಸಾಹ, ಹೆಚ್ಚು ಪ್ರಸಿದ್ಧಿಗಳನ್ನು ಪಡೆದು, ಸುಮಾರು ಒಂದು ನೂರು ವರ್ಷಗಳ ತನಕ ಹಿಂದೂ ಜನಾಂಗದ ಶುಭ್ರ ಬಾವಟವನ್ನು ಎತ್ತಿ ಹಿಡಿದುದು ಶಿವಾಜಿಗೆ ಸಲ್ಲುವ ಪುಣ್ಯ. ಘಜನೀ ಮಹಮ್ಮದನ ತರುವಾಯ ಮೇಲಿಂದ ಮೇಲೆ ಬರಲು ಆರಂಭಿಸಿದ ಮುಸಲ್ಮಾನರ ಪಡೆಗಳೆಂಬ ಅಲೆಯು ಒಂದು ಕಾಲದಲ್ಲಿ ಅಖಿಳ ಹಿಂದೂಸ್ಥಾನವನ್ನೇ ಮುಳುಗಿಸಿ ಬಿಟ್ಟಂತೆ ಕಾಣುತ್ತಿತ್ತು. ಈ ಅಲೆಯನ್ನು ತಡೆದು ಸಡಿಲದಂತಹ ಅಡ್ಡಕಟ್ಟೆಯನ್ನು ಹಾಕಿ "ಇಲ್ಲಿಯವರೆಗೇ; ಇನ್ನು ಮುಂದಕ್ಕೆ ಕೂಡದು" ಎಂದು ತನ್ನ ಕಠಿಣವಾದ ಮರಾಠಿ ಮಾತಿನಲ್ಲಿ ಕಟ್ಟಪ್ಪಣೆ ಮಾಡುವುದು ಶಿವಾಜಿಗೊಬ್ಬನಿಗೆ ಕೈಗೂಡಿತು. ರಾಜಕೀಯ ಕಾರ್ಯಕಲಾಪಗಳಲ್ಲಿ ಶಿವಾಜಿಯು ಹೆಜ್ಜೆ ಇಡುವುದಕ್ಕೆ ಮೊದಲು, ಆ ಸೇತು ಹಿಮಾಚಲಪರ್ಯಂತ ಎಲ್ಲಿ ನೋಡಿದರೂ ಹಿಂದೂ ಮುಸಲ್ಮಾನರ ಯುದ್ಧ ನಡೆದಾಗಲೆಲ್ಲ—ಒಮ್ಮೆ ನಾಯಕನು ಎದೆಗೆಟ್ಟು ಓಡುವುದರಿಂದ ಅಥವಾ ಅವನ ಮರಣದಿಂದ, ಇನ್ನೊಮ್ಮೆ ಉಂಡಮನೆಯ ಜಂತೆ ಎಣಿಸಲು ಹಿಂಜರಿಯದ ಪರಿವಾರದವರ ಅಥವಾ ದಂಡನಾಯಕರ ಹೀನ ನಡತೆಯಿಂದ—ಯಾವುದಾದರೂ ಒಂದು ಬಗೆಯ ದುರದೃಷ್ಟದಿಂದ, ಹಿಂದೂ ಪಡೆಗಳೇ ಹಿಮ್ಮೆಟ್ಟುತ್ತಿದ್ದವು. ಧಿವಾಯಗಢ, ಜಯಪಾಲನ ಕೊನೆಗಾಳಗ, ಅನಂಗಪಾಲನ ಹಣೆಬರಹ, ಪ್ರಸಿದ್ಧ ಪ್ರಥ್ವಿರಾಜನ ಸೋಲು, ಕಳಿಂಗರ್ ಸಿಕ್ರಿಯ ದುರ್ದಿನ, ದೇವಗಿರಿ, ತಾಳಿಕೋಟೆಗಳ ಸಿಡಿಲು ಬಡಿತ ಇವುಗಳನ್ನು ನೆನಸಿಕೊಂಡರೆ ಹಿಂದುಗಳಿಗೆ ಎಂತಹ ದುರ್ದಶೆ ಪ್ರಾಪ್ತವಾಗಿತ್ತೆಂಬುದು ಮನಗಂಡೀತು. ಶಿವಾಜಿ ಮಹಾರಾಜನ ಅನುಪಮ ಧೈರ್ಯವು ಹಿಂದುಗಳ ದುರ್ಗತಿಯನ್ನು ಕಿತ್ತೊಗೆದು, ವಿಚಿತ್ರವಾದ ವಿಲಕ್ಷಣವಾದ ಸಾಹಸವನ್ನು ಉಜ್ವಲಗೊಳಿಸಿ, ಮುಸಲರ ಗೆಲುವಿನ ದಿನಗಳು ಇಳಿಮುಖವಾಗುವಂತೆ ಮಾಡಿತು. ಇನ್ನುಮುಂದೆ ಹಿಂದುಗಳು ಮುಸಲ್ಮಾನರ ಅರ್ಧಚಂದ್ರಕ್ಕೆ ಬಗ್ಗಿ 'ಸಲಾಮು' ಮಾಡುವ ಅಧ್ಯಾಯ ಮುಗಿಯಿತು.

ಒಳ್ಳೆಯ ದಿನಗಳು.

೧೬೬೦ರ ತರುವಾಯ ಸಂಭವಿಸಿದ ಯುದ್ಧಗಳಲ್ಲಿ—ಮುಸಲಮಾನರ ಸೈನ್ಯಗಳು ಹಿಂದುಗಳ ಸೈನ್ಯಕ್ಕಿಂತ ಎಷ್ಟೇ ದೊಡ್ಡದಾಗಿರಲಿ, ಇಲ್ಲವೇ ಅವರ "ಅಲ್ಲಾ-ಹೋ-ಅಕಬರ್" ಎಂಬ ಯುದ್ಧಧ್ವನಿಯು ಎಷ್ಟೇ ಗಗನಮುಟ್ಟಕ್ಕೆ ಕೇಳಿಸಲಿ—ಹಿಂದುಗಳಿಗೆ ಜಯವು ದೊರೆಯಲು ಪ್ರಾರಂಭವಾಯಿತು. ಹಿಂದೂ ಜನರ ಸುದೈವ ಯೋಗದಿಂದ ವಿಗ್ರಹ ಭೇದಕರ ಕೈ ಕಟ್ಟಿತು. ಹಿಂದೂ ಧರ್ಮವು ಹಿಂದುಸ್ಥಾನದಿಂದ ಅಳಿಸಿಹೋಗುವುದು ದೇವರ ಇಷ್ಟೆಯಾಗಿಲ್ಲವೆಂಬುದು ಒಡೆದು ಮೂಡಿದಂತೆ ಕಂಡುಬಂತು. ಸಿಂಹಗಡವು ಶಿವಾಜಿಯ ಕೈವಶವಾದುದು; ಪವನಖಿಂಡಿನ ರಕ್ಷಣೆ; ಗೋವಿಂದಸಿಂಗ, ಬಂಡೂ ಬಹದೂರ, ಛತ್ರಸಾಲ, ಬಾಜೀರಾವ್, ನಾನಾ, ಭಾವು, ಮಲ್ಹಾರೀರಾವ, ಪರಶುರಾಮಪಂತ, ರಣಜಿತಸಿಂಗ ಮುಂತಾದ ಅನೇಕ ಮರಾಠಾ, ರಜಪೂತ, ಸಿಕ್ ವೀರರ ಸಾಹಸ ಚರ್ಯೆಗಳು; ಇವುಗಳನ್ನೆಲ್ಲಾ ಜ್ಞಾಪಿಸಿಕೊಂಡರೆ ಮಹಮ್ಮದೀಯರ ಜಯಶ್ರೀಯು ಹೊರಹೊರಟು ಹಿಂದುಗಳನ್ನು ಆಶ್ರಯಿಸಲು ತವಕಿಸುತ್ತಿದ್ದಂತೆ ತೋರಿಬರುತ್ತದೆ. ಈ ರೀತಿಯ ಚಮತ್ಕಾರಿಕವಾದ ಬದಲಾವಣೆಗೆ ಶ್ರೀ ಸಮರ್ಥ ರಾಮದಾಸರು ಮತ್ತು ಅವರ ಆಜ್ಞಾ ಪರಿಪಾಲಕರಾದ ಶ್ರೀ ಶಿವಾಜಿ ಮಹಾರಾಜರು ಬಿತ್ತಿದ ರಾಷ್ಟ್ರಪ್ರೇಮ, ಧರ್ಮಪ್ರೀತಿ ಮುಂತಾದ ಉಜ್ವಲತತ್ವಗಳೂ, ಅವರ ಸ್ವತಂತ್ರ ಸಾಮ್ರಾಜ್ಯ ಗುರಿಯೂ ನೆಲೆಗಟ್ಟು. ಹೊಸಬಗೆಯ ರಾಜತಂತ್ರಗಳೂ, ರಾಜನೀತಿಯೂ, ಯುದ್ಧರೀತಿಯೂ ಆಚರಣೆಗೆ ಬಂದವು. ಮರಾಠಾ ಯುದ್ಧ ಪದ್ಧತಿಯು ಹಿಂದೂ ಯುದ್ಧಶಾಸ್ತ್ರಕ್ಕೆ ಕಳೆ ಏರಿಸಿತು. ಮಹಾರಾಷ್ಟ್ರದ 'ಸ್ವಧರ್ಮ'ದ ಕೂಗು ಹಿಂದೂ ಜನಾಂಗಕ್ಕೇ ಹೊಸ ಹುರುಪು ಕೊಟ್ಟಿತು.

ಚಕ್ರಾಧಿಪತ್ಯನೇ ಗುರಿ

ಹಿಂದೂ ಸ್ವಾತಂತ್ರ್ಯೋದ್ಯಮದ ಯುದ್ಧದಲ್ಲಿ ನಿರತರಾಗಿದ್ದವರ ಗುರಿಯು "ಹಿಂದೂಪಾದ್-ಪಾದಶಾಹಿ" ಅಂದರೆ ಸ್ವತಂತ್ರದ ಹಿಂದೂ ಚಕ್ರಾಧಿಪತ್ಯಸ್ಥಾಪನೆ. ಮರಾಠಾ ನಾಯಕರು ಅನುಸರಿಸುತ್ತಿದ್ದ 'ಗೊರಿಲ್ಲಾ' ಎಂಬ ಮುತ್ತಿಗೆಯ ಕ್ರಮದ ಗುಟ್ಟು ಮಹಮ್ಮದೀಯರಿಗೆ ಸಿಕ್ಕಿರಲಿಲ್ಲ. ಕೊನೆಗೆ ಹಿಂದುಗಳೇ ವಿಜಯಿಗಳಾದರು.

ಶಿವಾಜಿಯ ಬಾಲ್ಯ.

ಮೊಟ್ಟಮೊದಲಿನಿಂದಲೂ ಚಕ್ರಾಧಿಪತ್ಯಸ್ಥಾಪನೆಯನ್ನೇ ಲಕ್ಷ್ಯದಲ್ಲಿಟ್ಟುಕೊಂಡು, ತಾವುದೇಶದ ಯಾವಭಾಗದಲ್ಲೇ ನೆಲೆಸಿರಲಿ, ಯಾವಕೆಲಸದಲ್ಲೇ ನಿರತರಾಗಿರಲಿ "ನಮ್ಮ ಧರ್ಮ ನಮ್ಮ ದೇಶ" ಎಂಬುದನ್ನು ಮರಯದೆ, ಯೋಗಿಗಳೂ, ಸೈನಿಕರೂ ಈ ಒಂದೇ ಗುರಿಯನ್ನು ಕಣ್ಣುಮುಂದೆ ಕಾಣುತ್ತ, ತಮ್ಮ ಕೈಯಲ್ಲಾದ ರೀತಿಯಲ್ಲಿ ಸಹಾಯಮಾಡಿ ದಿಲ್ಲಿಯ ಹೆಬ್ಬಾಗಿಲುಗಳವರೆಗೆ, ಉತ್ತರದಲ್ಲಿ ಸಿಂಧೂನದಿಯ ತೀರಪ್ರದೇಶದ ತನಕ, ದಕ್ಷಿಣದಲ್ಲಿ ಸಮುದ್ರ ಪರ್ಯಂತ ಮರಾಠಾ ಸಾಮ್ರಾಜ್ಯವು ಪಸರಿಸುವಂತೆ ಮಾಡಿಬಿಟ್ಟರು. ಹಿಂದಿನ ಅಪಜಯದ ದಿವಸಗಳನ್ನೂ, ದುರದೃಷ್ಟವನ್ನೂ ಕುರಿತು ಮನೆಯ ಹೆಂಗಸರು ಕಟ್ಟಿ ಹಾಡುತ್ತಿದ್ದ ಶೋಕಪೂರಿತವಾದ ಹಾಡುಗಳೂ ಪದಪದ್ಯಗಳೂ ಇನ್ನುಮುಂದೆ ಹಿಂದೂ ನಾಯಕರ, ಹಿಂದೂ ಸೈನಿಕರ, ಹಿಂದೂ ಯುವಕರ ಸಾಹಸೋದ್ಯಮಗಳನ್ನು ಬಗೆಬಗೆಯಾಗಿ ಬಣ್ಣಿಸುವ ಲಾವಣಿಗಳಿಗೆ ಎಡೆಗೊಟ್ಟವು. ಕ್ರಿ. ಶ. ೧೬೨೭ರಲ್ಲಿ ಶಿವಾಜಿಯು ಜನನವಾಯಿತು. ಬೆಳಬೆಳೆದಂತೆಲ್ಲ, ಹಿಂದೂ ಜನರ 'ಗುಲಾಮಗಿರಿ'ಯ ಸ್ಥಿತಿಯನ್ನು ಕೇಳಿ—ಆ ಮೇಲೆ ತಾನೇ ಕಂಡು—ಶಿವಾಜಿಯು ಮನದಲ್ಲಿಯೇ ಕುದಿಯುತ್ತಿದ್ದನು. ಉಕ್ಕಿಬರುತ್ತಿದ್ದ ದುಃಖದಿಂದ ಶಿವಾಜಿಯು ತನ್ನ ಜನರ ಗುಡಿಗೋಪುರಗಳ ವಿನಾಶದ ಕತೆಗಳನ್ನೂ, ಪುರಾತನ ದೇವಾಲಯಗಳನ್ನು ನೆಲಸಮಮಾಡಿ ಪವಿತ್ರ ವಿಗ್ರಹಗಳನ್ನು ಚೂರು ಚೂರು ಮಾಡುತ್ತಿದ್ದವರ ಹಾವಳಿಯನ್ನೂ, ಸನಾತನ ಧರ್ಮ ಕಟ್ಟಳೆಗಳನ್ನು ಮೀರಿನಡೆಯುವುದೇ ತಮ್ಮ ಕರ್ತವ್ಯ

-ವೆಂದು ತಿಳಿದುಕೊಂಡಿದ್ದವರ ನಡತೆಗಳನ್ನೂ, ಕೇಳಿ ಕೇಳಿ ಮರುಗುತ್ತಿದ್ದನು. ಶಿವಾಜಿಯ ತಾಯಿ ಮಾತೋಶ್ರೀ ಜೀಜಾಬಾಯಿಯವರು ಹಿಂದೂ ಜನಾಂಗದ ಮತ್ತು ಹಿಂದೂ ಧರ್ಮದ ಹೆಚ್ಚಿಗೆಯನ್ನೂ, ಶ್ರೀಕೃಷ್ಣ, ಶ್ರೀರಾಮ, ಅರ್ಜುನ, ಭೀಮ, ಅಭಿಮನ್ಯು ಹರಿಶ್ಚಂದ್ರ ಮುಂತಾದ ಮಹಾ ವಿಭೂತಿಗಳ ಸಚ್ಚರಿತ್ರವನ್ನೂ, ಪದೇ ಪದೇ ಮಗನಿಗೆ ಉಪದೇಶಿಸಿ, ಏನೋ ಒಂದು ಮಹತ್ತಾದ ಅಂತಿಮ ಲಕ್ಷ್ಯವನ್ನಿಟ್ಟುಕೊಂಡು ಅವನನ್ನು ಹುರಿದುಂಬಿಸುತ್ತಿದ್ದರು. ಅಷ್ಟೇಕೆ, ಶಿವಾಜಿಯು ಜನ್ಮವೆತ್ತಿದ ಸನ್ನಿವೇಶವೇ ಅವನಲ್ಲಿ ಗುಪ್ತವಾಗಿ ಅಡಗಿದ್ದ ಪ್ರಚಂಡ ಶಕ್ತಿಯನ್ನು ಅರಳಿಸಲು ಅನುಕೂಲವಾಗಿತ್ತು. ಜನರೆಲ್ಲರೂ, ಯಾವನೋ ಮಹನೀಯನು ಅವತರಿಸಿ, ಹಿಂದೂ ಧರ್ಮವನ್ನು ರಕ್ಷಿಸಿ, ಗೋಬ್ರಾಹ್ಮಣರನ್ನು ಕಾಪಾಡಿ, ಲೋಕಕ್ಕೆ ಸುಖವನ್ನುಂಟು ಮಾಡುವ ಕಾಲವು ಬಂದಿದೆ ಎಂದೆಂದುಕೊಳ್ಳುತ್ತಿದ್ದರು. ಸಾಕ್ಷಾತ್ ಭಗವಂತನೇ ಹಿಂದುಗಳಲ್ಲಿ ಅನೇಕಾವೃತ್ತಿ ಅವತಾರ ಮಾಡಿ ಲೋಕೋದ್ಧಾರ ಮಾಡಿದ್ದೂ, ಬಹುಜನ ಸಾಧುಸತ್ಪುರುಷರು ತಮ್ಮ ಧರ್ಮೋದ್ಧಾರ ಕೆಲಸಗಳನ್ನು ಲೋಕಹಿತದ ದೃಷ್ಟಿಯಿಂದ ನಡೆಸುತ್ತಿದ್ದುದೂ, ಶ್ರೀಕೃಷ್ಣ ಪರಮಾತ್ಮನು ಗೀತೆಯಲ್ಲಿ, ಪ್ರಸಂಗ ಒದಗಿದರೆ ಧರ್ಮಕ್ಕೆ ಉಂಟಾದಗ್ಲಾನಿಯನ್ನು ಹೋಗಲಾಡಿಸಲು ತಾನೇ ಪುನಃ ಅವತಾರ ತಾಳುವುದಾಗಿ ಕೊಟ್ಟಿರುವ ಅಭಯವಚನವೂ, ಜನರ ಈ ನಂಬಿಕೆಗೆ ಮೂಲವಾಗಿತ್ತು. ಶಿವಾಜಿಯ ವಂಶಚರಿತ್ರೆಯನ್ನು ನೋಡಿದರೂ, ಆ ವಂಶದಲ್ಲಿಯೇ ಮಹಾಭಾಗ್ಯಶಾಲಿಯಾದ ಲೋಕೋಪಕಾರಿಯು ಹುಟ್ಟಲು ಸಾಕಷ್ಟು ನಿದರ್ಶನಗಳಿದ್ದವು. ಶಿವಾಜಿಯನ್ನು ನೋಡಿ ಹಲ ಕೆಲವರು ಈತನೇ ತಾವು ನಿರೀಕ್ಷಿಸುತ್ತಿದ್ದ ಅವತಾರ ಪುರುಷನಾಗಿರಬಹುದೆಂದು ತರ್ಕಿಸುತ್ತಿದ್ದರು. ಈತನಿಂದಲೇ ತಮ್ಮ ಉದ್ಧಾರ ಕಾರ್ಯವು ಆಗಬೇಕೆಂದು ಬಯಸುವವರೂ ಅನೇಕರಿದ್ದರು. ಶಿವಾಜಿಯು ತನ್ನ ಜೀವನ ಕರ್ತವ್ಯವನ್ನು ಚೆನ್ನಾಗಿ ಗೊತ್ತುಮಾಡಿಕೊಂಡಿದ್ದನು. ಸುಖವಸತಿಗೆ ಆಶೆಪಟ್ಟು ಸ್ವಕರ್ತವ್ಯವನ್ನು ನಡೆಸಲು ಹಿಂಜರಿಯುವವನಾಗಿ ಕಾಣಬರುತ್ತಿರಲಿಲ್ಲ. ತನ್ನ ಧರ್ಮಕ್ಕೆ ಕುಠಾರಪ್ರಾಯರಾಗಿದ್ದವರ ಎಂಜಲವನ್ನು ತಿಂದುಕೊಂಡು, ತನ್ನ ಜನರನ್ನೆಲ್ಲಾ ಗುಲಾಮರನ್ನಾಗಿ ಮಾಡಿದ್ದವರ ಕೈ ಕೆಳಗಿನ 'ತಾಬೇದಾರ'ನಾಗಿರಲು ಶಿವಾಜಿಯು ಒಡಂಬಡಲಿಲ್ಲ. ದೇವರಲ್ಲಿಯೂ, ಸತ್ಯದಲ್ಲಿಯೂ ನಿಶ್ಚಲವಾದ ನಂಬಿಕೆಯಿಟ್ಟು 'ಸ್ವಧರ್ಮ' 'ಸ್ವರಾಜ್ಯ'ಗಳಿಗಾಗಿ ಹೋರಾಡಲು ಸೊಂಟಕಟ್ಟಿದನು. ಕರ್ತವ್ಯ ನಡೆಸುವಾಗ ಮರಣವುಂಟಾದೀತೆಂದು ಶಿವಾಜಿಗೆ ಎಂದೂ ಭಯವಾಗಲಿಲ್ಲ. ದೈವಕೃಪೆಯಿಂದ ಉದ್ದೇಶವು ನೆರವೇರಿದರೆ ಹಿಂದೂ ಸಾಮ್ರಾಜ್ಯದ ಶಾಶ್ವತವಾದ ತಳಹದಿಯನ್ನು ಶಕಪುರುಷರಾದ ವಿಕ್ರಮಾದಿತ್ಯ, ಶಾಲಿವಾಹನರಂತೆ ತಾನೂ ಕಟ್ಟಿ ನಿಲ್ಲಿಸುವವನಾಗಿ ಯೋಚಿಸಿದನು. ತಲೆತಲಾಂತರದಿಂದ ಕನಸಿನ ರೂಪವಲಿದ್ದ ತನ್ನವರ ಮನೋಭಿಪ್ರಾಯವೂ, ಸಾಧು ಜನರ ತಪಃಫಲವೂ, ಸ್ವಧರ್ಮ ರಕ್ಷಣೆಯೂ ಕಾರ್ಯತಃ ನೆರವೇರಿ ಯಶಸ್ಸುಂಟಾಗುವುದೆಂದು ಶಿವಪ್ರಭುವು ಸದಾ ನೆನೆಸುತ್ತಿದ್ದನು.

ಶಿವಾಜಿಯ ಗುರಿಯಲ್ಲಡಗಿದ್ದ 'ತಿರುಳು'

ಶಿವಾಜಿಯು "ದಂಗೆಕೋರ"ನಾಗಿಬಿಟ್ಟನು. ಗೋಳಖಾನೇ ಇನಾಯತುಲ್ಲ ತನ್ನ ಗೆಳೆಯನೊಬ್ಬನು, ಶಿವಾಜಿಯು ಬಿಜಾಪುರದ ಶಹಾರವರಿಗೆ ಎರಡು ಬಗೆಯಲು ಯೋಚಿಸಲಿಲ್ಲವಲ್ಲವೆಂದು ಬರೆದ ಕಾಗದಕ್ಕೆ ಉತ್ತರವಾಗಿ ಶಿವಾಜಿಯು "ತಾನು ಕೃತಘ್ನನಲ್ಲವೆಂದೂ, ತನ್ನ ಧರ್ಮಾನುಸಾರ ನಡೆಯುವದೇ ಕರ್ತವ್ಯವೆಂದೂ, ತಾನು ಯಾವ 'ಶೀಟಜೆ'ಗೂ ಅಧೀನನಲ್ಲವೆಂದೂ, ಎಲ್ಲರಿಗೂ ದೇವರೊಬ್ಬನೇ ಒಡೆಯನೆಂದೂ" ಕಾಗದ ಬರೆದನು. ಸಹ್ಯಾದ್ರಿ ಬೆಟ್ಟದ ಮೇಲೆ, ಹಿರಿಯರ ಮತ್ತು ಹಿತಚಿಂತಕರ ನಡುವೆ, ಜೊತೆಯವನಾದ ದಾದೋಜಿಯೊಂದಿಗೆ ದೈವಸಾಕ್ಷಿಯಾಗಿ, "ಕೊನೆಯವರೆಗೂ ಕಾದಿ **ಹಿಂದವಿ ಸ್ವರಾಜ್ಯ** ಸ್ಥಾಪನೆಮಾಡುವುದಾಗಿ" ಪ್ರತಿಜ್ಞೆ ಮಾಡಲಿಲ್ಲವೇ? "ದೇವರು ನಮ್ಮವನಾಗಿದ್ದಾನೆ; ದೇವರಿಗೆ ಜಯವಾಗಲೇಬೇಕು."

ಸ್ವತಃ ಶಿವಾಜಿಯು ಉಪಯೋಗಿಸಿದ '**ಹಿಂದವಿ ಸ್ವರಾಜ್ಯ**' ಎಂಬ ಮಾತು ಸುಮಾರು ನೂರುವರ್ಷಕ್ಕಿಂತ ಹೆಚ್ಚಾಗಿ ಮಹಾರಾಷ್ಟ್ರ ಜನಜೀವನವನ್ನು ಕುಲುಕಿ, ಕಲಕುವಂತೆ ಮಾಡಿದ ಮಹಾ ಚಳವಳಿಯ ತತ್ವವನ್ನು ಎತ್ತಿಹಿಡಿಯುತ್ತದೆ. ಮಹಾರಾಷ್ಟ್ರರು ಎಚ್ಚತ್ತದ್ದು ತಮ್ಮ ಸ್ವಂತ ಅಥವಾ ತಮ್ಮಲ್ಲಿ ಯಾರೊಬ್ಬನ ಮಹತ್ವಾಕಾಂಕ್ಷೆಗಳಲ್ಲ. ಹಿಂದೂ ಧರ್ಮರಕ್ಷಣೆಗೆ. ಮಹಮ್ಮದೀಯರ ಅಧೀನದಿಂದ ಬಿಡುಗಡೆ ಹೊಂದುವುದು ಮೊದದನೆಯ ಕಾರಣ. ಸ್ವತಂತ್ರ ಸಾಮ್ರಾಜ್ಯ ಸ್ಥಾಪನೆಯು ಮೂಲ ಉದ್ದೇಶ.

ಶಿವಾಜಿಯಂತೆಯೇ ಅವನ ಸೈನ್ಯದಲ್ಲಿದ್ದ ಪ್ರತಿಯೊಬ್ಬನೂ, ಮುಖ್ಯವಾಗಿ ಆಗಿನ ಕಾಲದಲ್ಲಿ ಜೀವಿಸಿದ್ದ ಪ್ರತಿಯೊಬ್ಬ ಹಿಂದುವೂ ದೇಶಾಭಿಮಾನದಿಂದ ಉಕ್ಕುತ್ತಿದ್ದರು. ಹೋದಕಡೆಯಲ್ಲೆಲ್ಲ ಜನರು ಶಿವಾಜಿಗೆ ಹಿಂದೂ ಧರ್ಮರಕ್ಷಕನೆಂದು ಸ್ವಾಗತವಿತ್ತು ಅಭೂತಪೂರ್ವವಾಗಿ ಮರ್ಯಾದೆ ಮಾಡುತ್ತಿದ್ದರು. ಕೆಲವರು ಮಾತ್ರ, ಜನಸಹಾಯವೂ ಧನಸಹಾಯವೂ ಇಲ್ಲದ ಈ ಹುಡುಗ ಶಿವಾಜಿಯು ಬಹುದಿನಗಳಿಂದ ನೆಲಸಿ ಬೇರುಬಿಟ್ಟುಕೊಂಡಿದ್ದ ಮಹಮ್ಮದೀಯ ರಾಜರನ್ನು ಕೆಣಕಿ ಜಯಶಾಲಿಯಾಗುವುದು ಕೇವಲ ಸಂಶಯಾಸ್ಪದವೆಂದು ಅಂದುಕೊಳ್ಳುತ್ತಿದ್ದರು. ದುರಾಶಾಗ್ರಸ್ತರೂ, ಸ್ವಪ್ರಯೋಜನಾಪೇಕ್ಷಿಗಳೂ ಆದ ಕೆಲವರು ಹಿಂದುಗಳು ಮಹಮ್ಮದೀಯ ಪ್ರಭುತ್ವವೇ ಶಾಶ್ವತವಾಗಿದ್ದರೆ ಒಳ್ಳೆಯದೆಂದು ತಿಳಿದಿದ್ದರು. ಇಂತಹವರು ಕೆಲವರಿದ್ದರೂ, ಮಹಾರಾಷ್ಟ್ರದವರು ಮಾತ್ರವೇ ಅಲ್ಲದೇ ದಕ್ಷಿಣ ಹಿಂದುಸ್ಥಾನದ, ಮತ್ತು ಉತ್ತರ ಹಿಂದುಸ್ಥಾನದ ನಿವಾಸಿಗಳಾಗಿದ್ದ ಅನೇಕ ಜನ ಹಿಂದೂ ಧರ್ಮೀಯರು ಶಿವಾಜಿಯನ್ನು ಅವತಾರಪುರುಷನೆಂದು ಭಾವಿಸಿ, ಧರ್ಮಸಂಸ್ಥಾಪನೆಯು ಅವನಿಂದಲೇ ನಡೆಯುವದೆಂದು ಎಣಿಸಿದ್ದರು. ಈ ಪ್ರಯತ್ನದಲ್ಲಿ ಅನೇಕರು ಅವನಿಗೆ ನೆರವಾದರು. ಆಗಿನಕಾಲದ ಇತಿಹಾಸವೂ, ಪುರಾಣಗಳೂ, ಸಾಹಿತ್ಯ ಗ್ರಂಥಗಳೂ ಶ್ರೀ ಶಿವಾಜಿಯ ಉಚ್ಚಸ್ಥಾನವನ್ನು ನಿರ್ದೇಶಿಸುವ ಸ್ತೋತ್ರ ರೂಪವಾದ ಅನೇಕ ವಿವರಣೆಗಳಿಂದ ತುಂಬಿರುವ ಆ ಗ್ರಂಥಗಳನ್ನು ಓದುವವರಿಗೆಲ್ಲಾ ತಿಳಿಯತಕ್ಕ ಅಂಶವಾಗಿದೆ. ಜಿಲ್ಲೆಯ ಹಿಂದೆ ಜಿಲ್ಲೆಯೂ, ಪಟ್ಟಣವನ್ನನುಸರಿಸಿ ಪಟ್ಟಣವೂ ಮಹಾರಾಷ್ಟ್ರರ ಆಳಿಕೆಯನ್ನು ಅಪೇಕ್ಷಿಸುತ್ತ ಬಂದವು. ತಮ್ಮ ಪೂರ್ವಪುಣ್ಯ ಪರಿಪಾಕದಿಂದ ಮಹಮ್ಮದೀಯರ ಆಡಳಿತದಿಂದ ಪಾರಾದೆವೆಂದು ಜನರು ಸಂತೋಷಪಡುತ್ತಿದ್ದರು. ಇದಕ್ಕೆ ಉದಾಹರಣೆಯಾಗಿ, ನಮ್ಮ ಕರ್ನಾಟಕ ದೇಶಕ್ಕೆ ಸೇರಿದ ಸವಣೂರು ಜಿಲ್ಲೆಯ ಮಹಾಜನಗಳು ಮಹಮ್ಮದೀಯ ಅಧಿಕಾರಿಗಳ ದುರ್ವರ್ತನೆಯನ್ನು ಸಹಿಸಲಾರದೆ ಮುಂದೆ ಕಾಣುವಂತೆ ಬರೆದುಕೊಂಡ ಕಾಗದವನ್ನು ನೋಡಿದರೆ,

ಮೇಲಿನ ವಿಷಯವು ವ್ಯಕ್ತವಾಗುತ್ತದೆ " ನಾವುಗಳು ವಿಧರ್ಮಿಗಳ ನಿರ್ದಯವಾದ ಆಡಳಿತದಲ್ಲಿ ಬಹು ಕಷ್ಟವನ್ನು ಸಹಿಸಿಕೊಳ್ಳಬೇಕಾಗುತ್ತಿದ್ದೇವೆ. ನಮ್ಮ ಧರ್ಮವನ್ನು ತುಳಿದು ನಾಶಮಾಡಿದ್ದಾರೆ. ಹಿಂದೂ ಧರ್ಮೋದ್ಧಾರಕನೇ, ದಯವಿಟ್ಟು ಒಂದು ದುಷ್ಟ ವಿಧರ್ಮಿಯರಿಗೆ ತಕ್ಕ ಶಾಸನ ಮಾಡಿ ನಮ್ಮನ್ನು ಕಾಪಾಡು. ಇಲ್ಲಿ ನಾವು ಮಹಮ್ಮದೀಯ ಅಧಿಕಾರಿಯ ಕೈಗೊಂಬೆಗಳಾಗಿದ್ದೇವೆ. ಶತ್ರು ಸೈನ್ಯದ ನಾಯಕನಾದ ಯುಸೂಫನೂ, ಅವನ ಕಡೆಯವರೂ, ನಾವುಗಳು ಮುಸಲ್ಮಾನರ ವಿರುದ್ಧ ನಿನ್ನ ಸಹಾಯವನ್ನು ಕೋರಿ, ಪಿತೂರಿ ನಡೆಸುತ್ತೇವೆಂದು ನಮ್ಮನ್ನು ಮನೆಗಳಲ್ಲಿಯೇ ಸೆರೆಯಿಟ್ಟು, ಬಾಗಿಲಲ್ಲಿ ಕಾವಲುಗಾರರನ್ನು ನಿಲ್ಲಿಸಿ, ಅನ್ನ ನೀರು ದೊರೆಯದಂತೆ ಮಾಡಿ, ನಾವು ಹಸಿವಿನಿಂದ ಪ್ರಾಣ ಬಿಡುವಂತೆ ಮಾಡಿರುತ್ತಾರೆ. ಆದ್ದರಿಂದ, ಓ ಹಿಂದೂ ಜನ ಸಂರಕ್ಷಕನೇ, ರಾತ್ರಿಯ ಕಾಲವನ್ನೇ ಹಗಲೆಂದು ಭಾವಿಸಿ (ಅಂದರೆ ಸಾವಕಾಶ ಮಾಡದೆ) ಕೂಡಲೇ ಬಂದು ನಮ್ಮನ್ನು ಉಳಿಸಿ ಉದ್ಧಾರ ಮಾಡು."

ಶಿವಾಜಿಯು ಮಹಾರಾಷ್ಟ್ರ ಪ್ರಾಂತ್ಯದ ಗಡಿಯಾಚೆಯಿಂದ ಬಂದ ಸ್ವಧರ್ಮೀಯರ ಈ ದೈನ್ಯ ಬಿನ್ನಪವನ್ನು ಕೇಳಿ, ಪ್ರಸಿದ್ಧ ಮಹಾರಾಷ್ಟ್ರ ದಳಪತಿ ಹಂಬೀರರಾವ ಮೋಹಿತೆಯನ್ನು ಸವಣೂರ ಜಿಲ್ಲೆಗೆ ಕೂಡಲೇ ಕಳುಹಿಸಿ, ವಿಜಾಪುರದ ಶಹರದ ಸೈನ್ಯದವರನ್ನು ನಾಲ್ಕಾರು ಯುದ್ಧಗಳಲ್ಲಿ ಸಂಪೂರ್ಣ ಸೋಲಿಸಿ, ಸವಣೂರ ಜಿಲ್ಲೆಯನ್ನು ಮಹಮ್ಮದೀಯರ ಆಡಳಿತದಿಂದ ಬಿಡುಗಡೆ ಮಾಡಿ ಸತ್ಕೀರ್ತಿಯನ್ನು ಸಂಪಾದಿಸಿದನು.

ಸೋಜಿಗದ ಸುದ್ದಿಗಳು.

ಲಂಡನ್ನಿನಲ್ಲಿ ಒಂದು ಮದುವೆಗಾಗಿ ಜನರೆಲ್ಲ ನಿಯೋಜಿತ ಕಾಲಕ್ಕೆ ಚರ್ಚಿನಲ್ಲಿ ಕಲೆತರು. 'ಪ್ರಿನ್ಸ ಆಫ ವೇಲ್ಸ'ರೂ ಬಂದರು! ಆದರೆ ಮದಲಗಿತ್ತಿಯೇ ಬರಲಿಲ್ಲ! ಕಡೆಗೆ ಒಂದೇ ಗಂಟೆ ತಡಮಾಡಿ ಮದಲಗಿತ್ತಿಯು ಬಂದಳು! ತನ್ನ ಇಬ್ಬರೂ ಮಕ್ಕಳಿಗೆ ಉಡುಪು ತೊಡಿಸಿಯೇ ಕರೆದುಕೊಂಡು ಬರಲು ತನಗೆ ತಡವಾಯಿತೆಂದು ಮದಲಿಂಗಿಯು ಹೇಳಿದಳು!!

ಕೆಂಟಿನ ಜಾನ ಟೇಲರನ ವಯಸ್ಸು ೧೦೪. ಆತನ ಹೆಂಡತಿಯು [illegible]ಕ್ಕೆ ಮಾತ್ರ ಚಿಕ್ಕವಳು. ಇಂಗ್ಲಂಡದಲ್ಲಿ ಜೀವಂತರಾಗಿದ್ದ ದಂಪತಿಗಳೆಂದರೆ ಇವರೇ.

ಉತ್ತರ ಹಿಂದುಸ್ಥಾನದಲ್ಲಿ ಸಂಜಗಾನೂರ ಹತ್ತಿರದ ಸಾಹೋಟಾ ಪಿಂಡಿ ಗ್ರಾಮದಲ್ಲಿ ಒಂದು ಕೆರೆಯಿದೆ. ಅದರ ದಂಡೆಯಲ್ಲಿದ್ದ ಒಂದು ಉತ್ತತ್ತಿಯ ಗಿಡವು ಸೂರ್ಯೋದಯವಾದ ಕೂಡಲೇ ಕೆಳಗೆ ಮೆಲ್ಲಗೆ ಬಗ್ಗುತ್ತಲಿದೆ. ಆದರೆ ಸೂರ್ಯಾಸ್ತವಾದ ಕೂಡಲೇ ಮೇಲೆ ಎದ್ದು ನಿಲ್ಲುತ್ತದೆ. ಅಸಂಖ್ಯ ಸ್ತ್ರೀಯರು ದಿನಾಲು ಅದನ್ನು ಪೂಜಿಸುತ್ತಾರೆ. (ಮುಂಬೈ ಕ್ರಾನಿಕಲ್ ಆಫ ಇಂಡಿಯಾ. ಎಪ್ರಿಲ ೨೫)

ಖಾದಿಯ ಸುದ್ದಿಗಳು.

ಮುಂಬೈ ಯುಕ್ತ ಖಾದೀ ಭಾಂಡಾರದಲ್ಲಿ ೫ ವರ್ಷಗಳಲ್ಲಿ ೧೦ ಲಕ್ಷ ರೂ. ಬೆಲೆಯ ಖಾದಿಯು ಮಾರಾಟವಾಗಿದೆ. ೧೯೨೫-೨೬ರಲ್ಲಿ ೩ ಲಕ್ಷ ರೂ. ಮಾರಾಟವಾಗಿದೆ. ಈ ಭಾಂಡಾರದ ಬೆಲೆಪಟ್ಟಿಯು ಸಿದ್ಧವಾಗಿದ್ದು, ಅದನ್ನು ಪುಕ್ಕಟೆಯಾಗಿ ಭಾಂಡಾರಕ್ಕೆ (ಪ್ರಿನ್ಸೆಸ್ ಸ್ಟ್ರೀಟ ಮುಂಬೈ) ಬರೆದು ಇಷ್ಟವಿದ್ದವರು ಪಡೆಯಬಹುದು. ಕೈವಸ್ತ್ರ, ಟವೆಲ, ರುಮಾಲ, ೧೦೦ ನಂಬರಿನ ನೂಲಿನ ಧೋತರ, ಮಚ್ಛರದಾನಿಯು ಅಲ್ಲದೆ ಬೇರೆ ಬೇರೆ ಬಣ್ಣಗಳ ಕೋಟಿನ ನಮೂನೆ, ಶೀರೆ, ಖಣ, ಚಾದರ, ಶಾಲು, ಪೋಲಕ, ಜಂಪರು, ಚಂದ ಹಾಗು ಅಚ್ಚಿನ ಬಟ್ಟೆ ಉಳ್ಳಂಥ ಪಟ್ಟಿ ಮೊದಲಾದ ಯಾವತ್ತೂ ಮಾಹಿತಿಯನ್ನು ಪಡೆಯಬಹುದು. ಐದೇ ವರ್ಷಗಳಲ್ಲಿ ಖಾದಿಯು ಈ ಪ್ರಚಂಡ ಪ್ರಗತಿಯನ್ನು ಹೊಂದಿದ್ದು ಯಾವ ದೇಶ ಹಿತಚಿಂತಕನಿಗೆ ಸಂತೋಷವಾಗಲಿಕ್ಕಿಲ್ಲ? ಈಗ ಪ್ರಕಟವಾದ ಬೆಲೆಪಟ್ಟಿಯಲ್ಲಿ, ಆಂಧ್ರ, ಬಿಹಾರ, ಪಂಜಾಬ, ಕಾಠೇವಾಡ, ತಮಿಳನಾಡ, ಗುಜರಾಥಗಳ ಖಾದಿಯ ಉಲ್ಲೇಖವಿದೆ. ಆದರೆ ಕರ್ನಾಟಕದಿಂದ ಈ ಭಂಡಾರದವರು ಅನೇಕ ನಮೂನೆಯ ಖಾದಿಯನ್ನು ತರಿಸಿಕೊಳ್ಳುತ್ತಿದ್ದರೂ, ಆ ಬಗ್ಗೆ ಕಿಂಚಿತ್ತಾದರೂ ಬರೆದಿಲ್ಲ! ಕರ್ನಾಟಕವೆಂದರೆ ಎಲ್ಲರಿಗೂ ತುಚ್ಛ! ಕನ್ನಡಿಗರು ತಮ್ಮನ್ನು ತಿಳಿದುಕೊಳ್ಳಲಿ!

ನನಗೆ ಹೊಳೆದಂತೆ.

ಬರೋಡೆ ಸಂಸ್ಥಾನದಲ್ಲಿ ವ್ಯಕ್ತಿ ಪತ್ರಿಕೆ ಅಥವಾ ಮುದ್ರಾಲಯಗಳನ್ನು ಪ್ರಾರಂಭಿಸಲು ಸರಕಾರದ ಅಪ್ಪಣೆ ಅವಶ್ಯಕವಿಲ್ಲೆಂದು ಅಲ್ಲಿಯ ಕೌನ್ಸಿಲದಲ್ಲಿ ನಿರ್ಣಯವಾಗಿದೆ. ಮುಂದೆ ಹೋದ ಮೈಸೂರು ಮಾತ್ರ ಹಿಂದೆ ಬಿದ್ದಂತಾಯಿತು! ಬ್ರಿಟಿಶ್ ರಾಜ್ಯದಲ್ಲಿ ಮುದ್ರಾಲಯವನ್ನು ತೆರೆಯಲು ಅಪ್ಪಣೆ ಬೇಕಾಗುತ್ತದೆ! ಬರೋಡೆಯು ಅವರನ್ನು ಕುಸ್ತಿಯಲ್ಲಿ ಒಗೆದಂತಾಯಿತು!

'ಕನ್ನಡಿಗ' 'ಕಂಠೀರವ' "ಇವೆರಡು ಕನ್ನಡ ಭಕ್ತಿಯ ಜಾಣ ಪತ್ರಿಕೆಗಳಿಂದು 'ಸ್ವದೇಶಾಭಿಮಾನಿ'ಯ ನೋಟುಗಳು (Note s) ಹೇಳುತ್ತವೆ ಅಗಲಿ! ಸ್ನೇಹದೃಷ್ಟಿಯ ವಿಮರ್ಶೆಯ ಹೊರತು ಯಾವ ಭಾವನೆಯೂ ನಮ್ಮಲ್ಲಿಲ್ಲವೆಂದು "ನೋಟು" ಕಾರರಿಗೆ ಸಂಪೂರ್ಣ ಭರವಸೆ ಕೊಡುವೆನು.

ಸ್ತ್ರೀ ವಿನೋದ!

ಸೇವಕ– ಪತಿಕರೇ, ರಾಯರು ತಮ್ಮ ಬಿಲ್ಲನ್ನು ಕೊಡಬೇಕೆಂದಿದ್ದಾರೆ.

ಪತಿಕ– ಬಿಲ್ಲೇ ಆಯಿತೆ? ತಾ; ಇಲ್ಲಿದೆ ಹಣ.

ಸೇವಕ– ಆದರೆ......ಅವರಿಗೆ ಕೊಡುವುದು ಶಕ್ಯವಿಲ್ಲ!

ಹೆಂಡತಿ:-- ಕುಡುಗರು ಕನ್ನ ಹಾಕುತ್ತಿರುವಂತೆ ತೋರುತ್ತದೆ. ನಿಮಗೆ ಎಚ್ಚರದಿಯೋ?

ಗಂಡ:-- ಇಲ್ಲ!

ಕನ್ನಡ ಸಂಸ್ಕೃತಿಯೂ ಮೈಸೂರ ವಿಶ್ವವಿದ್ಯಾಲಯವೂ

(ನಮ್ಮ ಸ್ವಂತ ಸುದ್ದಿಗಾರರಿಂದ)

ಮೈಸೂರು ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ ಶ್ರೀ ಬ್ರಜೇಂದ್ರನಾಥ ಶೀಲರು ವಿದ್ಯಾಲಯದ ಅಂದಾಜ ಪತ್ರಿಕೆಯ ಬಗ್ಗೆ ಮಾತನಾಡುವಾಗ್ಗೆ ಕನ್ನಡ ಸಂಸ್ಕೃತಿಯ ಬಗ್ಗೆ ಹೀಗೆ ಹೇಳಿದರು:—

ಎಮ್. ಎ. ಹಾಗೂ ಎಮ್. ಎಸ್. ಸಿ. ಪರೀಕ್ಷೆಗಳಲ್ಲಿ ಕನ್ನಡದ ಪ್ರವೇಶವಾಗಿದೆ. ಕನ್ನಡ ನುಡಿ ಸಂಸ್ಕೃತಿಗಳ ಬಗ್ಗೆ ಪದವಿ ದೊರೆತ ಮೇಲೆ ಸಹ ಅಭ್ಯಾಸಿಸಲು (Post-graduate Studies) ಅನುಕೂಲ ಮಾಡಿದೆ.

ಚಾಲುಕ್ಯ ಹಾಗೂ ಹೊಯ್ಸಳರ ಶಿಲ್ಪ ಕಲೆಯ ಸಂಪೂರ್ಣ ಪರಿಚಯವನ್ನು ಮೈಸೂರಿನವರೇ ಅಖಂಡ ಜಗತ್ತಿಗೆ ಮಾಡಿಕೊಡಬೇಕೆಂದು ಭರತಖಂಡ ಹಾಗೂ ಯುರೋಪಖಂಡಗಳಲ್ಲಿಯ ಕಲಾತಜ್ಞರು ಮೈಸೂರಿನವರಿಂದ ಅಪೇಕ್ಷಿಸುತ್ತಲಿದ್ದಾರೆ. ಆದ್ದರಿಂದ ಈ ಬಗ್ಗೆ ತಕ್ಕ ಶಿಕ್ಷಣ, ನೆಲ ಅಗೆಯುವದು, ಸಂಶೋಧನ ಕಾರ್ಯಗಳಿಗಾಗಿಯೂ ವಿಚಾರವಾಗಿದೆ. ಕನ್ನಡ ನುಡಿ, ಸಂಸ್ಕೃತಿಗಳನ್ನು ವೃದ್ಧಿಗೊಳಿಸಲು ಚನ್ನಾಗಿ ಲಕ್ಷ್ಯ ಪೂರೈಸುತ್ತಲಿದ್ದೇವೆ. ಇದೆಲ್ಲ ಕರ್ನಾಟಕದ ಪ್ರಾಚೀನ ವೈಭವದ ಸಂಸ್ಕರಣೆಯ ಕೆಲಸ. ಇಷ್ಟಕ್ಕೇ ನಾವು ನಿಲ್ಲಕೂಡದು. ಆದ್ದರಿಂದ ಆಧುನಿಕ ಸಂಸ್ಕೃತಿ, ವಾಙ್ಮಯವೃದ್ಧಿಗಳ ಬೀಜಗಳನ್ನು ಬಿತ್ತಲು ನೆಲವನ್ನು ಹದ ಮಾಡಬೇಕಾಗುತ್ತದೆ. ಕನ್ನಡ ವಾಙ್ಮಯ ವಿಕಾಸಕ್ಕೆ ಪ್ರೋತ್ಸಾಹವನ್ನು ಕೈಕೊಳ್ಳುವೆವು. ಈ ಬಗ್ಗೆ ಪೂರ್ವ ಸಿದ್ಧತೆಯು ನಡೆದಿವೆ. ಅಲ್ಲದೆ ವಿಶ್ವವಿದ್ಯಾಲಯದ ಪತ್ರಿಕೆಯನ್ನೊಂದು ನಡೆಸುವ ವಿಚಾರವಾಗಿದೆ. ಇವೆಲ್ಲ ಕಾರ್ಯಸಾಧನಗಳಿಗಾಗಿ ವಿಶ್ವವಿದ್ಯಾಲಯದ [illegible] ಲಕ್ಷ [illegible]ಯಗಳಲ್ಲಿ [illegible] ಲಕ್ಷ ಹಣವು ಈ ವರ್ಷ ವೆಚ್ಚವಾಗಬಹುದು.

ರಂಗಭೂಮಿಯ ಸಮಾಚಾರ.

ಇಂಡೀ ತಾಲೂಕಿನ ನಾಟಕಸಂಘಗಳು

ಅನುಕ್ರಮಾಂಕ	ಊರ ಹೆಸರು	ಸಂಘಗಳ ಸಂಖ್ಯೆ	ಊರಜನ ಸಂಖ್ಯೆ ಸರಾಸರಿ	ಅನುಕ್ರಮಾಂಕ	ಊರ ಹೆಸರು	ಸಂಘಗಳ ಸಂಖ್ಯೆ	ಊರ ಜನ ಸಂಖ್ಯೆ
೧	ಇಂಡಿ	೨	೫೦೦೦	೮	ಚಡಚಣ	೨	೩೦೦೦
೨	ಸಾಲೋಟಗಿ	೫	೨೨೫೦	೯	ಬರಡೋಲ	೧	೯೦೦
೩	ತಾಂಬೆ	೩	೩೦೦೦	೧೦	ಹಲಸಂಗಿ	೨	೨೦೦೦
೪	ಹೊರ್ತಿ	೧	೨೦೦೦	೧೧	ಭತಗುಣಕಿ	೧	೨೩೦೦
೫	ಇಂಚಗೇರಿ	೧	೭೦೦	೧೨	ಬಳ್ಳೊಳ್ಳಿ	೧	೧೦೦೦
೬	ನಿಂಬರಗಿ	೨	೧೨೦೦	೧೩	ಭುಂಯಾರ	೧	೧೬೦೦
೭	ಗೋಡಿಹಾಳ	೧	೪೦೦	೧೪	ಅಗರಖೇಡ	೨	೨೨೫೦
				೧೫	ಅಥರ್ಗಾ	೨	೨೦೦೦

ನೋಡಿ, ಇಂಡೀ ತಾಲೂಕಿನೊಳಗೇ ನಾಟಕಸಂಘಗಳೆಷ್ಟಿವೆ! ಈ ೨೬ ಸಂಘಗಳಲ್ಲಿ ಯಾವಸಂಘದವರಿಗೂ ಕಲ್ಯಾಣವಿಲ್ಲ. ಲಾಭವಿಲ್ಲ. ಹಳ್ಳಿಯವರು, ಬೈಲಾಟವಾಡಿ ಎಷ್ಟು ಗಳಿಸುತ್ತಿದ್ದರೋ ಅದಕ್ಕಿಂತ ಕಡಮೆಯೋ? ಮುಂಬಯಿಯ “ಗೋಪಾಳ ಸಮಾರಾಮ ಕಂಪನಿ”ಯ ಪಿಯಾನುಗಳಾದರೂ ಮಾರಿದುವಲ್ಲ, ಯಥೇಚ್ಛವಾಗಿ

ಈ ಇಂಡಿಯಿಂದ ಗೋಡಿಹಾಳದವರೆಗಿನ ಯಾವ ಸಂಘವೂ, ಗಟ್ಟಿಜೀವಮಾಡಿ, ಮುಂದಕ್ಕೆ ಹೆಜ್ಜೆಹಾಕಿಲ್ಲ ಅವು ‘ನಾಟಕ ಸಂಘ’ಗಳಾಗಿವೇ ಇಲ್ಲ; ಚಹಾ, ಕ್ರಾಪ್, ಗ್ಯಾಸುಗಳನ್ನು ಪ್ರಸಾರಮಾಡುವ ಸಂಘಗಳೇ ಆಗಿವೆ. ನಾಟಕದ ನಿಜವಾದ ಲಾಭವಾಗದಿದ್ದರೆ, ಈ ಹಿಡಾದವೇ ಸರಿಯಲ್ಲವೇ?

ಹಲಗೇರಿ ಲಿಂಗೇಶ್ವರ ನಾಟಕ ಮಂಡಲದವರು ಕುಮಟೆಗೆ ಹೋದರು ಅಂಕೋಲೆಯಲ್ಲಿ ಇವರ ನಾಟಕಗಳಿಗೆ ಒಳ್ಳೇ ಮರ್ಯಾದೆ ದೊರೆಯಿತು.

ಅಥಣಿಯ ಕಂಪೇರಿದ ಗಂಗಾಧರರಾಯರ ಮ್ಯಾನೇಜರ್‌ಶಿಪ್ಪಿನ ಶ್ರೀ ಲಕ್ಷ್ಮೀಕಾಂತ ವಿಲಾಸ ಕರ್ನಾಟಕ ನಾಟಕ ಸಭೆಯವರು ಗುಬ್ಬಿಯಲ್ಲಿ ತಮ್ಮ ನಾಟಕಗಳನ್ನು ಅಭಿನಯಿಸುತ್ತಲಿರುವರು. “ಗರ್ವಪರಿಹಾರ” ಎಂಬ ಹೊಸ ನಾಟಕವು ಅಲ್ಲಿಯೇ ರಂಗಭೂಮಿಗೆ ಬರುವದು.

ಗರುಡರು ವಿಜಾಪೂರದಲ್ಲಿ ಆಡುತ್ತಿರುವ ನಾಟಕಗಳ ಬಗ್ಗೆ ಅಲ್ಲಿಂದ ಓರ್ವ ಸದ್ಗೃಹಸ್ಥರ ಒಂದು ಪತ್ರವು ನಮ್ಮ ಕಡೆಗೆ ಬಂದಿದೆ. ತಡವಾಗಿ ಅದು ನಮ್ಮ ಕೈಸೇರಿದ್ದರಿಂದ ಮುಂದಿನ ವಾರದಲ್ಲಿ ಪ್ರಕಟಿಸುವೆವು.

“ಕನ್ನಡಿಗ”ನಿಗೆ ಸಹಾಯ.

ಚಂದಾದಾರರನ್ನು ಕೂಡಿಸಿದವರು:—

(೧) ಉಪಶೀರಾವ ಜಹಗೀರದಾರ—

(೨) ಅಣ್ಣಾರಾವ ಪಾಟೀಲ ಅಗರಖೇಡ—

(“ಕನಿಷ್ಠ ೨೦ ಚಂದಾದಾರರನ್ನಾದರೂ ಕೂಡಿಸಿ ಕೊಡಬೇಕೆಂ”ಬ ನಮ್ಮ ಹಟವಿನಂತೆ ಶ್ರೀ ಪಾಟೀಲರು ಅಧಿಕಾರದಿಂದ ಬರೆದುತ್ತಾರೆ. ಸಂ. ಕ)

ಹುನಗುಂದ ವೀರಶೈವ ತರುಣ ಸಂಘದ ೬ನೇ ಸಮ್ಮೇಲನವು.

ಮಿತಿ ೧೮೪೯ ವೈಶಾಖ ಶುದ್ಧ ೩—೪ ತಾ|| ೪—೫—೨೭ ನೇ ದಿವಸಗಳಲ್ಲಿ ಸಮ್ಮೇಲನವು ಕೂಡುವದು ಗೊತ್ತಾಗಿರುತ್ತದೆ. ಸಭೆಯಲ್ಲಿ ವಿದ್ಯಾಪ್ರಸಾರ, ಉದ್ಯೋಗ ಶಿಕ್ಷಣ, ಗೋಸಂರಕ್ಷಣೆ, ಧಾರ್ಮಿಕ ಮತ್ತು ಆಲಮಟ್ಟಿ ವೀರಶೈವ ವಿದ್ಯಾಲಯದ ಅವಶ್ಯಕತೆ ಈ ವಿಷಯಗಳ ಮೇಲೆ ಮಹತ್ವದ ಭಾಷಣಗಳು ಜರುಗಿಸಲ್ಪಡುವವು. ಕಾರಣ ಯಾವತ್ತೂ ಸಮಾಜ ಬಾಂಧವರು ಈ ಸಮ್ಮೇಲನಕ್ಕೆ ಆಗಮಿಸಿ ಸಮಾಜಾಭಿವೃದ್ಧಿಯ ಈ ಪವಿತ್ರ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಆಶಿಸುತ್ತೇನೆ. ಹುನಗುಂದವು ಬಾಗಲಕೋಟೆ ಸ್ಟೇಶನ್ನದಿಂದ ೨೯ ಮೈಲು ದೂರದಲ್ಲಿರುತ್ತದೆ. ಬಾಗಲಕೋಟೆಯಲ್ಲಿ ಮೋಟಾರ ವಾಹನಗಳು ಇಲ್ಲಿಗೆ ಬರಲಿಕ್ಕೆ ಸಿಗುತ್ತವೆ. ತಾವು ಯಾವದಿವಸ ಇಲ್ಲಿಗೆ ಬರುವಿರೆಂಬದನ್ನು ಮುಂಚಿತವಾಗಿ ತಿಳಿಸಬೇಕೆಂಬವಾಗಿ ವಿನಂತಿ

ಚೈ|| ಬ|| ೯
ತಾ|| ೨೬-೪-೨೭

ಬಸವಶೆಟ್ಟೆಪ್ಪ ಬಳೂಟಗಿ
ಕಾರ್ಯದರ್ಶಿ.
ವೀ. ತ ಸಂ. ಹುನಗುಂದ

ಮನೆಯ ಮಾರಾಟ.

ಬಾಗಲಕೋಟೆ ಕಿಲ್ಲೇದಲ್ಲಿ ಹನ್ನೊಂದು ಓಣಿಯೊಳಗೆ ಶ್ರೀ ವೆಂಕಟೇಶ ದೇವರ ಗುಡಿಯ ಹತ್ತಿರ, ನಮ್ಮ ಉಭಯತರ ಸಮೂಹಕ ಮಾಲ್ಕೀ ವಹಿವಾಟಿಯ ಮನಿ (ಮು. ನಂ.) ಮಾರತಕ್ಕದ್ದದೆ. ವಾಹಣಿಮಾಲಿನಿಂದಾ ರೇಲವೇ ಸ್ಟೇಶನಕ್ಕೆ ಹೋಗುವ ೩೦ ಫೂಟ ಅಗಲವಾದ ಹೊಸ ರಸ್ತೆಯನ್ನು ಮುನಶೀಪಾಲಿಟಿಯವರು ಈ ಮನೆಯಮುಂದೆ ಮಾಡಲಿಕ್ಕೆ ಸುರುಮಾಡುವವರಿದ್ದಾರೆ. ಕಾರಣ ಈ ಮನೆಯು ದೊಡ್ಡ ರಸ್ತೇದಮೇಲೆ ಇರುವದರಿಂದಾ ಬಹಳ ಸೋಯಿಸ್ಕರವಾಗುವದು. ಮನೆಯು ವಿಶಾಲ ಇರತಿದ್ದು ನದಿಗೆ ಸಮೀಪವಾಗಿದೆ. ಇದರಲ್ಲಿ ೨ ಕುಟುಂಬ ಇರುವಷ್ಟು ದೊಡ್ಡದು ಅದೆ. ರಸ್ತೆ ಹೊರ್ತಾಗಿ ಮನೆಯಮುಂದೆ ಅಂಗಳ ಇರುವದು. ಹೆಚ್ಚಿನ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರಾ ತಿಳಿಸಲಾದೀತು. ತಾ|| ೨೯-೪-೧೯೨೭ ಇಸ್ವಿ

ಭೀಮರಾವ ಜೀವಣರಾವ ಮುತಾಲೀಕ
ದೇಶಪಾಂಡೆ.
ಮಾಧವರಾವ ವೆಂಕಟರಾವ ಮುತಾಲೀಕ
ದೇಶಪಾಂಡೆ.
ಬಾಗಲಕೋಟೆ.

ಇಡೀ ಕರ್ನಾಟಕದಲ್ಲಿ ಒಂದೇ ಒಂದು

ಎಲ್ಲಕ್ಕೂ ದೊಡ್ಡ! **ಎಲ್ಲಕ್ಕೂ**

ಸಚಿತ್ರ ಮಾಸಪತ್ರಿಕೆ.

ಜಯ ಕರ್ನಾಟಕ.

ವಾರ್ಷಿಕ ಚಂದಾ (೫-೮-೦) **ಬೇಕಾದ ತಿಂಗಳಿನಿಂದ**
[ಅಂಚೆ ವೆಚ್ಚ ಸೇರಿ] ಪ್ರಾರಂಭ ಮಾಡಬಹುದು.

ಸಂಪಾದಕರು ಆಲೂರ ವೆಂಕಟೇಶರಾಯರು. ಧಾರವಾಡ

ಲಕ್ಷದಲ್ಲಿರಲಿ!

ಪ್ರಾರಂಭದ ದಿನವು ಸಮೀಪಿಸಿತು.

ಸಂಶಯ ಸಾಮ್ರಾಜ್ಯ

ಈ ಹೊಸ ಸಾಮಾಜಿಕ ನಾಟಕವು ಬೇಗನೇ ಪ್ರಯೋಗಿಸಲ್ಪಡುವದು.

ಬಾಗಲಕೋಟೆ } ವ್ಯವಸ್ಥಾಪಕ
ತಾ|| ೧೪|೪|೨೭ } ಶ್ರೀ ಕೃಷ್ಣ ಸಂಗೀತ ನಾಟಕ ಮಂಡಳಿ.

ಲೆವರಿನ ಗಡಿಯಾರಗಳು.

ಲೆವರಿನ ಕೈ ಗಡಿಯಾರ ರೂ. ೯.

ಲೆವರಿನ ಕಿಸೆಯೊಳಗಿಡುವ ಗಡಿಯಾರ ರೂ. ೬.



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಮೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವುದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ತಾಳುವವು. ಬೆಲೆ ಕಡಿಮೆಯಿದೆಂದು ಅಂಜುವ ಕಾರಣವಿಲ್ಲ. ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚ ಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ. ಅದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ.

ಲಿಬೋ ವಾಚ ಕಂ. (ಇಂಡಿಯಾ.) ಬಾಂಬೆ. ಕೆ ೪.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದ ವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ :—

ಕ್ರಯವು ಇನಾಂ!!! ಅಂ. ಹಾಸಲು ಇಲ್ಲದೆ ಸರ್ವರಿಗೆ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಏಜಂಟರು:—ಜಂಬುಲಿಂಗಪ್ಪಾ ಜಾಲವಾದಿ.

ಸ್ಟೇಶನರ್ ಬಾಗಲಕೋಟೆ

ರಾಜವೈದ್ಯ ನಾರಾಯಣಜಿ ಕೇಶವಜಿ,

೫೬. ಬೇನಾಬಜಾರ್. ಮದ್ರಾಸು

ಯಾವದೇ { ಆಕಾರದ ನಕ್ಷೆಯ ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ. ೧೪, **ಅರ್ಧ ಬೆಲೆ ರೂ. ೭**



ಬರೇ ಒಂದು ತಿಂಗಳ ಬಗ್ಗೆ ನಾವು ಈ ದಂವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೀತಿಯ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. **ಬೆಲೆ ರೂ. ೭** ಅಷ್ಟೇ ಇವೆ; ಈಗಲೇ ಬರೆಯಿರಿ.

ಪತ್ತೆ:— ಸ್ವಾನ ಹೌಸ ಪಿ. ಬಿ. ೫೦೮. ಪಿ. ಟಿ. ಮದ್ರಾಸ

ಅತ್ಯಲ್ಪವಿದೆ! ಉಚಿತ!

ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ್ ರಜಿಸ್ಟರ್ಡ್ ಪೊಕೆಟ್ ವಾಚ್ ೧೮ ಕೆರೆಟ್ ರೋಲ್ಡ್ ಗೋಲ್ಡಿನದು. ಮುಖದಲ್ಲಿಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚುಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒನ್ನೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಜಿಸ್ಟರ್ಡ್ ೧೮ ಕೆರೆಟ್ ರೋಲ್ಡ್ ಗೋಲ್ಡಿನ ಪೊಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೬

ಕ್ಯಾಸ್ಪನ್ ವಾಚ್ ಕಂ, ಪಿ. ಬಿ. ೨೬೫ ಮದ್ರಾಸ

(ಎರಡನೆ ಪುಟದಿಂದ ಬಂದದ್ದು.)

ಕನ್ನಡೋದ್ಧಾರವನ್ನೇ ಮುಖ್ಯ ಧ್ಯೇಯವಾಗಿಟ್ಟು, ಕನ್ನಡಿಗರ ಹಿತಕ್ಕಾಗಿ ಕರ್ನಾಟಕ ವಿಷಯಗಳನ್ನೇ ಪ್ರತಿಪಾದಿಸುವ ಪತ್ರಿಕೆಗಳು ನಿಮ್ಮದೊಂದು ಹೊರತು ಬೇರೆ ಇರುವದಿಲ್ಲ. ಆದ್ದರಿಂದ ತಮ್ಮ ಧ್ಯೇಯವನ್ನು ವ್ಯತ್ಯಾಸ ಮಾಡದೆ ಪೂರ್ವದಂತೆಯೇ ಇಟ್ಟುಕೊಳ್ಳಿರಿ. ಸರ್ವತೋಮುಖವಾದ ಕನ್ನಡ ನುಡಿಯು ಕನ್ನಡ ಸಂಸ್ಕೃತಿಯು, ಕನ್ನಡ ರಂಗಭೂಮಿಯು, ಉದ್ಧಾರಕ್ಕಾಗಿ ಪ್ರಯತ್ನಿಸುವದೇ ತಮ್ಮ ಮುಖ್ಯ ಗುರಿಯಾಗಿರಲಿ. ಕರ್ನಾಟಕ ವಿಶ್ವವಿದ್ಯಾಲಯಕ್ಕಾಗಿ ಸ್ವತಂತ್ರ ಕರ್ನಾಟಕ ರಾಷ್ಟ್ರನಿರ್ಮಾಣಕ್ಕಾಗಿ ತಾವು ಹಿಂದೆ ಹೋರಾಡಿದಂತೆ, ಮುಂದೆಯೂ ಹೋರಾಡಿರಿ. ಪ್ರಾಚೀನ ಕರ್ನಾಟಕರ ಉಜ್ವಲ ಇತಿಹಾಸವನ್ನು ಕನ್ನಡಿಗರಿಗೆ ಪ್ರದರ್ಶಿಸಿ, ಅವರಲ್ಲಿ ನೂತನ ಜ್ಯೋತಿಯೂ, ನವೀನ ಚೈತನ್ಯವೂ ಹುಟ್ಟುವಂತೆ ಪ್ರಯತ್ನಿಸಿರಿ. ಶೋಭಾಯಮಾನವಾದ ಕರ್ನಾಟಕ ಗತವೈಭವದ ಸ್ಮರಣೆಯನ್ನು ಕನ್ನಡಿಗರಿಗೆ ಉಂಟು ಮಾಡಿ ಅವರಲ್ಲಿ ನೆಲೆಗೊಂಡಿರುವ ಹೇಡಿತನವನ್ನು ಹೋಗಲಾಡಿಸಿರಿ. ಅಖಂಡ ಕರ್ನಾಟಕದಲ್ಲಿ ತಿರುಗಾಡುವ ಒಂದು ಶ್ರೇಷ್ಠವಾದ ದಿನ ಪತ್ರಿಕೆಯನ್ನು ಹೊರಡಿಸಿ ಇಂಗ್ಲೀಷ, ಮರಾಠಿ, ತೆಲುಗು ಮುಂತಾದ ಭಾಷೆಗಳಲ್ಲಿ ಹೊರಡುವ ಪತ್ರಿಕೆಗಳಲ್ಲಿ ನಮ್ಮ ಕನ್ನಡಿಗರಿಗೆ ಇರುವ ವ್ಯಾಮೋಹವನ್ನು ತಪ್ಪಿಸಲಿಕ್ಕೆ ಪ್ರಯತ್ನಿಸಿರಿ. ಆಂಗ್ಲೇಯ ವಿದ್ಯಾಭೂಷಿತರಾದವರಿಗೆ ಸಹ ನಮ್ಮ ತಾಯ್ನುಡಿಯಲ್ಲಿ ಪ್ರೇಮವು ಹುಟ್ಟುವಂತೆ ಪ್ರಯತ್ನಿಸಿರಿ. ಮೇಲಿನವುಗಳೆಲ್ಲ ನಿಮ್ಮ ಧ್ಯೇಯಗಳಾಗಿರಲಿ. ಭಾರತ ವರ್ಷದ ವಿಷಯಗಳನ್ನು ಚರ್ಚಿಸುವ ಗೋಜಿಗೆ ಹೋಗಬೇಡಿರಿ. ಆದರೆ ಇದು ನಮ್ಮ ಸ್ವಾರ್ಥ ದೃಷ್ಟಿಯ ಮತ್ತು ಸಂಕುಚಿತ ಹೃದಯದ ಫಲವೆಂದು ತಾವು ಭಾವಿಸಕೂಡದು. ಭರತ ಖಂಡದ ವಿಷಯಗಳನ್ನು ಚರ್ಚಿಸುವ ಹಲವು ಪತ್ರಿಕೆಗಳು ನಮ್ಮಲ್ಲಿ ಉಂಟು. ಆದರೆ ನೀವು ಇಲ್ಲಿಯ ವರೆಗೆ ಮಾಡುತ್ತಿದ್ದ ಕೆಲಸವನ್ನು ಅಂದರೆ ಸರ್ವತೋಮುಖವಾದ ಕರ್ನಾಟಕರೇಳ್ಗೆಗಾಗಿ ಪ್ರಯತ್ನ ಮಾಡುವ ಕನ್ನಡ ಪತ್ರಿಕೆಗಳು ನಮ್ಮಲ್ಲಿ ನಿಮ್ಮದೊಂದೇ ಎಂದು ಹೇಳಬಹುದು. ನಾವು ಹಿಂದೆ ಬರೆದ ಎಲ್ಲ ವಿಷಯಗಳನ್ನು ನೀವು ಮಾಡುತ್ತ ಬಂದಿರುವಿರಿ. ಮುಂದಾದರೂ ಬಹು ಜೋರಿನಿಂದ ಮಾಡಿರಿ. ಇದೊಂದೇ ನಿಮ್ಮ ಧ್ಯೇಯವಾಗಿರಲಿ. ಕನ್ನಡ ನಾಡಿನ, ಕನ್ನಡ ನುಡಿಯ ಮತ್ತು ಕನ್ನಡ ಸಂಸ್ಕೃತಿಯ ಉದ್ಧಾರಕ್ಕಾಗಿ ಪ್ರಯತ್ನಿಸಿ, ಹತಾಶರಾದ ಕನ್ನಡಿಗರಲ್ಲಿ ಕಳೆದುಂಬಿಸಿ 'ಕನ್ನಡಿಗ'ನೆಂಬ ಹೆಸರನ್ನು ಸಾರ್ಥಕ ಮಾಡಿರಿ. ಕನ್ನಡಿಗ ಪತ್ರಿಕೆಯು ಈ ಮೇಲಿನ ಧ್ಯೇಯಗಳಿಗಾಗಿ ವಿಶ್ವಾಮಿತ್ರ ಪ್ರಯತ್ನವನ್ನು ಮಾಡಿ ಯಶೋಭಾಗಿಯಾಗಲೆಂದು ನಾವು ಭಗವಂತನಲ್ಲಿ ಪ್ರಾರ್ಥಿಸಿಕೊಳ್ಳುವೆವು.

ತಮ್ಮಲ್ಲಿ ತಿಳಿಸುವ ಇನ್ನೊಂದು ನಮ್ರ ಸೂಚನೆಯೇನಂದರೆ, ಕನ್ನಡಿಗ ಪತ್ರಿಕೆಯ ಮುದ್ರಣವು ಸಮರ್ಪಕವಾಗಿಲ್ಲ. ಅನೇಕ ಸಾರೆ ಅಕ್ಷರಗಳೇ ಕಾಣಿಸುವದಿಲ್ಲ. ಮುದ್ರಣ ದೋಷಗಳು ವಿಶೇಷವಾಗಿರುವವು. ಆದ್ದರಿಂದ ಮುದ್ರಣವನ್ನು ಸರಿಮಾಡಿರಿ. ಹೊಸ ಚಂದಾದಾರರನ್ನು ಮಾಡಿರುವೆವು. ಅವರಿಗೆ ಒಂದು ವರ್ಷಕ್ಕೆ ಪತ್ರಿಕೆಯನ್ನು ವ್ಹಿ. ಪಿ. ಯಾಗಿ ಕಳುಹಿಸಿರಿ. ಖಂಡಿತವಾಗಿಯೂ ಸ್ವೀಕರಿಸುವರು. ತಮ್ಮ ವಿಧೇಯ

ಜೋಡಪ್ಪ ಇಜಾರಿ ಬಿ. ಎ.

ಸೆಕ್ರೆಟರಿ ಜೈನ ವಾಚನಾಲಯ ಮಂಸನಹಳ್ಳಿ.

ಸ್ಟ್ಯಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲಕ್ಟ್ರಿಕ್ ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ವಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

೧ ನೇ ದರ್ಜೆ ಪುಡಿ (ಪ್ಯಾಕಿಂಗ್ ಸೇರಿ) ೧ ಪೌಂಡಿಗೆ ರೂ. ೧-೬-೦

೨ ನೇ ,, ,, ,, ರೂ. ೧-೩-೦

ದಿ ಸ್ಟ್ಯಾಂಡರ್ಡ್ ಕಾಫಿ ಕಂಪನಿ

ಚಿಕ್ಕಪೇಟೆ ಬೆಂಗಳೂರು ಸಿಟಿ.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ'ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ಥ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಿಣೀ, ಜೀರ್ಣಜ್ವರ, ಅಗ್ನಿಮಾಂಧ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶ ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು.) ಇದರಿಂದ ಮೈಯುರಿ ವ ಗರಮಿಯ ಎಲ್ಲಾ ತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೇ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೨-೦, ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯು ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸ:—

ಎಸ್. ಬಿ ಕದಮ್ ಮತ್ತು ಸನ್ಸ್.

ಮು. ಪೋಷ್ಟ ನಿಪ್ಪಾಣಿ (ಜಿ. ಬೆಳಗಾಂವ.)

ಕಿರ್ಲೋಸ್ಕರ

ಕಬ್ಬಿಣ ನೇಗಿಲುಗಳು

ಹಂಗಾಮು (ಸುಗ್ಗಿ) ಸಮೀಪಿಸಿತು. ಈ ವರ್ಷ ಮಳೆ ಬೆಳೆ ಚನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವುದು. ಕಿರ್ಲೋಸ್ಕರ ನೇಗಿಲು ನಂ ೧೧, ೯, ೮ ಇವು ಒಕ್ಕಲಿಗರಿಗೆ ಬಹಳೇ ಉಪಯೋಗ ಬೀಳುತ್ತವೆ ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುತ್ತವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲೆ ಸಾತಾರಿ

|| ಶ್ರೀಭವಾನೀ ಪ್ರಸನ್ನ ||

ಹೊಂಬಳ ಪೂರ್ಣ ಚಂದ್ರೋದಯ

ಸಂಗೀತ ನಾಟಕ ಮಂಡಳಿ

ಇವರು ಹೊಸಪೇಟೆಗೆ

ಬ ರು ವ ರು !

ಬ ರು ವ ರು.

ತಾ|| ೨-೫-೨೭ ದಿಂದ ಹೊಸಪೇಟೆಯ ಪತಿಕೊಂಡಾ ನಾಟಕಶಾಲೆಯಲ್ಲಿ ಹೊಸದಾಗಿ ಸಿದ್ಧಪಡಿಸಿದ ತಮ್ಮ ಲೋಕಪ್ರಿಯ ನಾಟ್ಯ ಅಖ್ಯಾನಗಳನ್ನು, ಹೊಸ ಹೊಸ ರುಚಿನ ನಟರ ಒಳ್ಳೇ ಮನೋಹರವಾದ ಅಭಿನಯ ಹಾಗೂ ಗಾಯನಗಳೊಂದಿಗೆ, ಪ್ರಾರಂಭಿಸುವರು. ಸ್ತ್ರೀ ಕಲಿನ ಹಳ್ಳಿಯ ಪ್ರೇಕ್ಷಕರು ಈ ಸುಸಂಧಿಯನ್ನು ಕಳೆದುಕೊಳ್ಳಬಾರದು

ಮ್ಯಾನೇಜರ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ|| ದಿವಸ ೪-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮುತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ. ೨೭೩೭ ಸಯ್ಯದ ಅಲ್ಲಿ ಅಸಗರ ಜಿಲ್‌ಗ್ರಾಮಿ ಸುಪರೆಂಟೆಂಡಂಟ್ ಸಕ್ರೆಟೆರಿಯಟ್ ಹೈದರಾಬಾದ ದೆಕ್ಕನ್ನ ರೂ.೧೦೦೦

(೨)ಎಲ್. ಬಿ. ಸಿ. ನಂ ೧೯೩೬ ನಾರಾಯಣ ವಿಠ್ಠಲ ಲೋಣಕರ. ಕೇರ್ ಆಫ್ ಡಿ. ಈ. ಪುರಾಣಿಕ ೧೧೭ ನಿಹಾಲಪುರ ಇಂದೂರ. ೧೦೦೦

(೩) ಎಲ್ ಬಿ. ಸಿ. ನಂ. ೩೪೧ ರಾಮಚಂದ್ರ ಅನಂತ ಶಿರೋಳೆ. ಡಿವಿಜನಲ್ ಫಾರೆಸ್ಟ ಆಫೀಸರ ಧೂಳ್ಯಾ. ಪಶ್ಚಿಮ ಖಾನದೇಶ ರೂ. ೮೦೦

(೪) ಬಾಂಡ ನಂಬರು ೭೫೦೬ ಕೇ. ಜಿ. ಫನಾಂ ಡೋ ವ್ಯಾಪಾರಸ್ಥ ಬ್ರಿಕ್‌ಸಾಯಿಡ ಸಿಲೋನ, ಕೊಲಂಬೋ. ರೂ ೧೦೦೦

(೫) ಬಾಂಡ ನಂಬರು ೧೩೬೩೪ ಎಸ್. ಜಿ. ಚವರೆ ಅಶಿಸ್ಟಂಟ ಸ್ಟೇಶನ್ ಮಾಸ್ತರ ತೆಲಗಿ. ಜಿಲ್ಲಾ ವಿಜಾಪುರ ರೂ ೧೦೦೦

ಬಿ. ಎನ್. ಆರಾಧ್ಯ

ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ.)

ಜೀವ ವಿಮೆಯ ಕಾರ್ಯದಲ್ಲಿ

ಅದ್ಭುತವಾದ ಜಯವು !

ಯಾಕೆಂದರೆ ತನ್ನ ೧೯ ನೇ ವರ್ಷದಲ್ಲಿಯೇ ಸಾವಿರಕ್ಕೆ ೨೦ ರೂಪಾಯಿ ಲಾಭ ಹಂಚಿದೆ

ದಿ ಜನರಲ್ ಅಶ್ಯೂರನ್ಸ ಸೊಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮೆ ಕಂಪನಿಗಳನ್ನು ಹಿಂದೆ ಒಗೆದು ಮುಂದೆ ಬಂದಿದೆ. ಇದರಿಂದ ಇದರಲ್ಲಿಯ ಕರ್ತೃತ್ವ ಶಕ್ತಿಯು ವ್ಯಕ್ತವಾಗುವದಲ್ಲದೇ, ಇದಕ್ಕಿಂತಲೂ ಹೆಚ್ಚಿನ ಪ್ರಗತಿಪರವಾದ ಕಂಪನಿಯೇ ಇಲ್ಲವೆಂಬುದು ಸಿದ್ಧವಾಗುತ್ತದೆ.

ಸುಲಭ ಕಂತು! ನಾನಾಪ್ರಕಾರ ಸೌಕರ್ಯ! ಹೆಚ್ಚಾಗಿ ಲಾಭ!!!

ವಿಮೆಯ ಹಣ ಒಂದು ಕೋಟಿ! ೨೧ ತಿಂಗಳಲ್ಲಿ ಹೆಚ್ಚಾಗಿ ಉಳಿತಾಯವಾದದ್ದು ರೂ ೧,೯೯,೦೦೦

ಏಜಂಟರು ಬೇಕು! ಧಾರಾಳವಾದ ಕಮಿಶನ್!

ವಿಳಾಸ:— ಎಸ್. ಕಬ್ಬೂರ ಬಿ. ಎ. ಎಫ್. ಎಸ್.

ಎಸ್. (ಲಂಡನ) ಅಸಿಸ್ಟೆಂಟ ಮ್ಯಾನೇಜರ (ಡೆಪ್ಯುಟೇಶನ್‌ದ ಮೇಲೆ) ಜನರಲ್ ಅಶ್ಯೂರನ್ಸ ಸೊಸಾಯಿಟಿಯ ಏಜನ್ಸಿ ಅಥವಾ ಬ್ರ್ಯಾಂಚ ಸೆಕ್ರೆಟರಿ. ಮಿಂಟೋ ಹಾಸ್ಪಿಟಲ್‌ದ ಎದುರು. ಬೆಂಗಳೂರು.

ಈ ಪತ್ರಿಕೆಯು ಮಂಗಳವೇಢೆ ರಾಜೋಪಾಧ್ಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧವಾಗಿರುತ್ತದೆ.

ರ ನಂ. ಬಿ. ೧೯೪೭ ವಾ. ಚಂದಾ ೧-೧೪-೦ ಮಾತ್ರ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ.)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು — ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟೆ ರವಿವಾರ ಮಿತಿ ವೈಶಾಖ ಶುದ್ಧ ೭ ಶಕೆ ೧೮೪೯ ತಾ|| ೮-೫-೧೯೨೭. Date 8—5—1927. | ಸಂಚಿಕೆ ೭.

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ
ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವದು ಮತ್ತು ಜೋಡಿಸುವದು, ಅವುಗಳೊಳಗಿನ ಕಿಟ್ಟುಜಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ. ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಊಳಿದ ಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದು ಕೊಳ್ಳಿರಿ!

ವಿಳಾಸ:— ಕುಲಕರ್ಣಿ ಮೋಟಾರ ಸ್ಕೂಲ.
೪೯೫ ಶನಿವಾರ ಪೇಠ ಜಮಖಂಡಿಕರ ವಾಡ ಪುಣೆ ಶಹರ.

S.U. Narayanacharya & Co.
Chaukhamba Benares City.

ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪಿತಾಂಬರ ಜರಿಕಣ, ಜರಿಸೀರೆ, ಕಾಶ್ಮೀರ್ ಶಾಲು, ಶಂಖ, ರುದ್ರಾಕ್ಷಿ, ಕರ್ಪೂರ ಲಿಂಗಗಳು, ಸ್ಫಟಿಕನು ಶಿ ವಿಧವಾದ ಮಾಲೆಗಳ ಕ್ಯಾಟಲಾಗ ಕೋರಿ ದವರಿಗೆ ಇನಾಮಾಗಿ ಕಳಿಸಲಾಗುವದು
ವಿಳಾಸ-ಶ್ರೀ ಸೋಮನಾಥ ನಾರಾಯಣಾಚಾರ್ಯ
ಕಂಪನಿ ಬನಾರಸ ಸಿಟಿ

ನಪುಂಸಕತ್ವ

ಧಾತು ವಿಕಾರ, ಸ್ವಪ್ನಾವಸ್ಥೆ, ಅಶಕ್ತತೆ ಇತ್ಯಾದಿಗಳಮೇಲೆ ಖಂಡಿತವಾಗಿ ಗುಣಕೊಡುವ ಮತ್ತು ಕಡೆತನಕ ಬಾಳುವ ದಿವ್ಯ ಔಷಧಿ! ಒಂದೇ ಗುಳಿಗೆ!!

ವಿಶೇಷ ಮಾಹಿತಿ ಪತ್ರದ್ವಾರ ತಿಳಿಯಿರಿ.

ವಾದಿರಾಜ ಜಹಾಗೀರದಾರ.
ಮು. ಪೋ. ಇಂಚಗೆಲ್ಲ. (ವಿಜಾಪೂರ)

ಕನ್ನಡಿಗನಿಗೆ ಜನರು ಏನನ್ನುವರು?

"ಕನ್ನಡಿಗ"ನು ಕನ್ನಡಿಯಂತಾಗಿದ್ದಾನೆ.

ಆದರೇನು? ಕನ್ನಡಿಯಂತಾದರೇನು? ಹೊನ್ನಿನಂತಾದರೇನು? ಉತ್ಕಟ ಕನ್ನಡಾಭಿಮಾನಿಗಳ ದುರ್ದೈವದಿಂದ—ಅದೇಕೆ ಕರ್ನಾಟಕ ಮಾತೆಯ ದುರ್ದೈವದಿಂದ ಯಾವತ್ತೂ ಕನ್ನಡ ಪತ್ರಿಕೆಗಳಿಗಿರಬಹುದಾದ ಕುಬೇರನ ಐಶ್ವರ್ಯದೃಷ್ಟಿಯು ಈ ನಮ್ಮ "ಕನ್ನಡಿಗ"ನಿಗಾದರೂ ಇದ್ದೇ ಇರುತ್ತದೆ. ಕನ್ನಡವು ಕಗ್ಗವೆನ್ನುವವರ ಮುಗ್ಗಲು ಮುರಿಯಲು ನಿಯಮಿಸಿದ ನಮ್ಮ ಚಿಕ್ಕ "ಕನ್ನಡಿಗ"ನು ಬೇಗನೇ ಘನತೆ ಹೊಂದಲೆಂದು ಆ ದಯಾಘನನನ್ನು ಪ್ರಾರ್ಥಿಸುವೆನು.

ಈ ನಮ್ಮ ಚಿಕ್ಕ "ಕನ್ನಡಿಗ"ನ ಚಿಕ್ಕ ಆದರೆ ಮಹತ್ವದ—ಸಹಾಯವನ್ನು ಹೇಳಲು ಕನ್ನಡಿಗನಾದ ನನಗೆ ಒಳ್ಳೇ ಅಭಿಮಾನವೆನಿಸುತ್ತದೆ. ನಾವು ಕರ್ನಾಟಕಸ್ಥರು. ಕನ್ನಡ ಮಾತೆಯಿಂದಲೇ ಪೋಷಿಸಲ್ಪಟ್ಟವರು. ಓದುವದೂ ಕನ್ನಡ, ಬರೆಯುವದೂ ಕನ್ನಡ, ಆಡುವದೂ ಕನ್ನಡ. ಹೀಗಿದ್ದರೂ ನಮಗೆ ಅಂಚೇಕಟ್ಟೆಯಲ್ಲಿ ಕನ್ನಡ ನಮೂನೆಗಳು ಇದ್ದಿಲ್ಲ. ಇದರಿಂದ ನಮ್ಮ ಕನ್ನಡ ಬಂಧುಗಳಿಗಾಗುತ್ತಿದ್ದ ತೊಂದರೆ ಎಷ್ಟೆಂಬುದನ್ನು ಹೇಳಬೇಕೇ? ಆ ತೊಂದರೆಯು ಈ 'ಕನ್ನಡಿಗ'ನಿಂದ ದೂರಾದದ್ದನ್ನು ನೋಡಿ ಯಾವ ಕನ್ನಡಿಗನಿಗೆ ತಾನೇ ಆನಂದವಾಗಲಿಕ್ಕಿಲ್ಲ?

ತೃತೀಯವರುಷದ 'ಕನ್ನಡಿಗ'ನು ನಿಜವಾಗಿಯೂ ಕನ್ನಡಿಯಂತಾಗಿದ್ದಾನೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಆದರೂ ಸಾಂಪತ್ತಿಕ ಸ್ಥಿತಿಯು ಸುಧಾರಿಸಿರದ್ದರಿಂದ ಆತನಿಗೆ ಮುನ್ನಡಿಯನ್ನಿಡುವದು ಅಸಾಧ್ಯವಾಗಿದೆ. ತನ್ನಿಮಿತ್ತವಾಗಿಯೇ "ಕನ್ನಡಿಗ"ನು ಮರೆಯಾಗತಕ್ಕವನಿದ್ದನು. ಆದರೆ, ಕರ್ನಾಟಕ ಮಾತೆಯು ತನ್ನ ಪ್ರೀತಿಯ ಮಕ್ಕಳಲ್ಲೊಬ್ಬನನ್ನು ಹೇಗೆ ತಾನೇ ಮರೆಮಾಡುವಳು? ಎಷ್ಟೋ ತರುಣ ಗೆಳೆಯರು "ಕನ್ನಡಿಗ"ನಿಗೆ ನೆರವಾಗಿ "ಕನ್ನಡಿಗನು" ಮುನ್ನಡಿಯನ್ನಿಡುವಂತೆ ಪ್ರಯತ್ನಿಸುತ್ತಿದ್ದಾರೆ. ಎಷ್ಟೋ ನಮ್ಮ ಸುಧಾರಿಸಿದ ಬಂಧುಗಳು. ದೊಡ್ಡ ದೊಡ್ಡ ಇಂಗ್ಲೀಷ ವರ್ತಮಾನ ಪತ್ರಗಳನ್ನು ತರಿಸುತ್ತಿದ್ದು, ಒಂದು ರೂಪಾಯಿಯ "ಕನ್ನಡಿಗ"ನನ್ನು ಅಲಕ್ಷಮಾಡುವದು ಅತ್ಯಂತ ದುಃಖದಾಯಕ ಮಾತಾಗಿದೆ; ಇದು ನೋಡಿರಿ! ಕನ್ನಡಿಗರ ಕನ್ನಡದ ಅಭಿಮಾನ! ಹಾಯ್ ಕರ್ನಾಟಕ ಮಾತೇ! ನಿನ್ನ ಮಕ್ಕಳೇ ನಿನ್ನನ್ನು ಈ ಪ್ರಕಾರ ತಿರಸ್ಕರಿಸುವಾಗ, ಪರಕೀಯರು ನಿನ್ನನ್ನು ಪೂಜಿಸುವದೆಂತು? ಇವರ ಈ ಕನ್ನಡದ ಅಭಿಮಾನದಂತೇ ಕರ್ನಾಟಕದ ಏಕೀಕರಣಕ್ಕಾಗಿ ಪ್ರಯತ್ನ. ಒಟ್ಟಿನ ಮೇಲೆ ಇದು ಉತ್ಕಟ ಕನ್ನಡಾಭಿಮಾನಿಗಳ ಕಾಲವಲ್ಲವೆಂದೇ ಹೇಳಬೇಕು. ಇಂಥವರಲ್ಲಿಯೂ "ಕನ್ನಡಿಗ"ನು ಮುನ್ನಡಿಯನ್ನಿಕ್ಕಿದ್ದಕ್ಕಾಗಿ ನಾವೆಲ್ಲರೂ ಆತನಿಗೆ ಋಣಿಯಾಗಿದ್ದೇವೆ. ಇರಲಿ. ಯಾವತ್ತೂ ಕರ್ನಾಟಕ ಬಾಂಧವರು ಚಿಕ್ಕ "ಕನ್ನಡಿಗ"ನು ದೊಡ್ಡವನಾಗುವಂತೆ ಪ್ರಯತ್ನಿಸಿ ಪೋಷಿಸಬೇಕೆಂದೂ, ಹಾಗೂ "ಕನ್ನಡಿಗ"ನೂ ಎಂಥ ಸಂಕಟಗಳಿಗಾದರೂ ಹೆದರದೆ, ಪ್ರಯತ್ನದಿಂದ ಅವುಗಳನ್ನುದುರಿಸಿ, ಕನ್ನಡ ಮಾತೆಯ ಸೇವೆಗೆ ಸಿದ್ಧನಾಗಿರಲೆಂದೂ, ಇಚ್ಛಿಸಿ ಈ ನನ್ನ ಲೇಖಣಿಕೆಯನ್ನು ಕೆಳಗಿರಿಸಿ, ವಾಚಕರ ರಜೆಯನ್ನು ತೆಗೆದುಕೊಳ್ಳುವೆನು.

ಒಬ್ಬ ವೀರಶೈವ ವಿದ್ಯಾರ್ಥಿ.

ರಾ|| ರಾ|| ಸಂಪಾದಕರು "ಕನ್ನಡಿಗ" ಇವರಿಗೆ.

ಶ್ರೀಮಾನ್ ಮಾನ್ಯಮಹಾಶಯರೇ,

ನಮಸ್ಕಾರಗಳು.

ನಿಮ್ಮಿಂದ ಕಳುಹಿಸಲ್ಪಟ್ಟ ಮೂರನೇ ವರ್ಷದ ಕರ್ನಾಟಕ ಚಿಕ್ಕ ಭೂಷಣ ಪ್ರಾಯವಾದ "ಕನ್ನಡಿಗ"ನನ್ನು ಸ್ವೀಕರಿಸಿ ಬಹಳ ಆನಂದವಾಯಿತು. 'ಕನ್ನಡಿಗ'ನು ಇಷ್ಟು ಅಲ್ಪಕಾಲದಲ್ಲೇ ತನ್ನ ನಿಜವಾದ ನಾಮವನ್ನು ಸಾರ್ಥಕ ಮಾಡಿರುವನು. ಮುಂದೆಯೂ ಅವನನ್ನು ದೇವರು ಒಳ್ಳೇ ರೀತಿಯಿಂದ ಹರಿಸಿ ಇನ್ನೂ ಹೆಚ್ಚು ಉತ್ಸಾಹದಿಂದ ಕೆಲಸ ಮಾಡಲಿಕ್ಕೆ ಶಕ್ತಿಯನ್ನೀಯಲಿ.

ಎಮ್. ವಿ. ಧರಣೇಂದ್ರ

ಜೈನ ವಿದ್ಯಾಲಯ ಮೋರೆವಾಡ, ಗ್ವಾಲ್ಹೇರ.

ವಾಙ್ಮಯ ಪರಿಚಯ.

ಕರ್ನಾಟಕ ಇತಿಹಾಸದ ಮಹತ್ವ—(ಕರ್ನಾಟಕ ಇತಿಹಾಸ ಮಂಡಳ. (ಧಾರವಾಡ) ದವರು ಹೊರಡಿಸಿದ ಮೊದಲನೇ ಪ್ರಬಂಧ ಪತ್ರಿಕೆಯು. ಈ ಪ್ರಬಂಧದಲ್ಲಿ ಕರ್ನಾಟಕ ಇತಿಹಾಸದ ರೂಪರೇಷೆಯನ್ನು ಕೊಟ್ಟು, ಆ ಇತಿಹಾಸವನ್ನು ಸಂಪೂರ್ಣವಾಗಿ ಬರೆಯುವದಕ್ಕೆ ಮಾಡಬೇಕಾಗಿರುವ ಕಾರ್ಯವಿಸ್ತಾರವು ಎಷ್ಟಿದೆಂಬುವನ್ನು ತಿಳಿಸಿ, ಹಾಗೆಯೇ ಕರ್ನಾಟಕ ಇತಿಹಾಸ ಮಂಡಳವು ಇಲ್ಲಿಯವರೆಗೆ ಮಾಡಿದ ಕಾರ್ಯವಾವುದೆಂಬುದನ್ನೂ ಮುಂದೆ ಅದು ಮಾಡಬಹುದಾದ ಕಾರ್ಯಗಳಾವುದೆಂಬುದನ್ನೂ, ಹೇಳಿರುವರು. ತಮ್ಮ ನಾಡು ನುಡಿಗಳ ಬಗ್ಗೆ ಮಾಡಬೇಕಾದ ಕರ್ತವ್ಯವು ಕೆಲ ಸುಶಿಕ್ಷಿತ (?) ಜನರಿಗೆ ದುರಭಿಮಾನದಿಂದಲೋ, ಅಜ್ಞಾನದಿಂದಲೋ ಕಣ್ಮರೆಯಾಗಿರುವವು. ಅಂಥವರಿಗೆ ಮಾರ್ಗ ತೋರಿಸಿ ಹುರಿಗೊಳಿಸಲು ಇಂಥ ಪ್ರಬಂಧಗಳು ಸಹಕಾರಿಗಳಾಗುವದರಲ್ಲಿ ಸಂದೇಹವಿಲ್ಲ. ಈ ಕಾರ್ಯಕ್ಕಾಗಿ ತಮ್ಮ ತನು-ಮನ-ಧನಗಳನ್ನರ್ಪಿಸಿರುವ ಶ್ರೀ ರಾಜಪುರೋಹಿತರಿಗೆ ಸಾಧುವರ್ಯರಾದ ಶ್ರೀ. ಚನ್ನಮಲ್ಲಪ್ಪನವರ ಹಾಗೂ ಶಾಂತವೀರಾರ್ಯರ ಜೋಡು ದೊರೆತದ್ದು ಜಯದ ಶುಭಲಕ್ಷಣವೇ ಸರಿ. ಇವರಿಗೆ ಸ್ವಪರ ಹಸ್ತಗಳಿಂದ ಸಹಾಯ ಮಾಡುವದು ಕನ್ನಡಿಗರ ಆದ್ಯ ಕರ್ತವ್ಯವೇ ಅಲ್ಲವೇ? ಪ್ರಾಚೀನ ಕಾಲದಿಂದಲೂ ಕರ್ನಾಟಕದ ಇತಿಹಾಸವು ಎಷ್ಟು ಮಹತ್ವದ್ದಾಗಿದೆಂಬುದನ್ನು ತಿಳಿಯಲು ಎಲ್ಲ ಕನ್ನಡಿಗರೂ ಲವಲವಿಕೆಯುಳ್ಳವರಾಗಿರಲೇಬೇಕು. ಇಂತಹರು ೨ ಆಣೆ ತಿಕೀಟ ಕಳಿಸಿ, ಕರ್ನಾಟಕ ಇತಿಹಾಸ ಮಂಡಲ ಧಾರವಾಡ ಇವರಿಂದ ಈ ಚಿಕ್ಕ ಪುಸ್ತಕವನ್ನು ಪಡೆಯಬೇಕು. ಶ್ಯಾಮ.

ಉಡುಪಿ ತಾಲೂಕು ಕಾಂಗ್ರೆಸ ಕಮಿಟಿಯ ವರದಿಯು ಕೈಸೇರಿದೆ. ಕೆಲಸ ಮಾಡುವವರು ಸಿಗುವದಿಲ್ಲೆಂಬ ಕೂಗು ಇಲ್ಲಿಯೂ ಕೇಳಬರುತ್ತದೆ. ಆದರೂ ಶ್ರೀಮಾನ್ ಹೊಸಕೊಪ್ಪ ಕೃಷ್ಣರಾಯರ ಪರಿಶ್ರಮದಿಂದ ಸದಸ್ಯರ ಸಂಖ್ಯೆಯೂ ಖಾದಿಯ ಉಪಯೋಗವೂ ಹೆಚ್ಚಿಸಲಾಗಿದೆ. ೪-೭ ಸ್ಥಳಗಳಲ್ಲಿ ರಾಷ್ಟ್ರೀಯ ಪ್ರಾಥಮಿಕ ಶಾಲೆಗಳು ಇನ್ನೂ ಜೀವ ಹಿಡಿದಿರುವದೊಂದು ವಿಶೇಷ ಸಂಗತಿಯು. ಸಾರ್ವಜನಿಕ ವಾಚನಾಲಯ ಮೊದಲಾದ ಅಗತ್ಯವಾದ ಸ್ಥಾನಿಕ ಕೊರತೆಗಳನ್ನು ಕಳೆಯಲು ಯತ್ನಿಸುವದು ಸ್ತುತ್ಯವಾದ ಸಂಗತಿಯು. ನಮ್ಮಲ್ಲಿಯ ಕಾಂಗ್ರೆಸ ಕಮೀಟಿಯವರು ಇದೇ ಮಾದರಿಯ ವರದಿಯನ್ನು ಹೊರಡಿಸಿ ತಮ್ಮ ಸ್ಥಿತಿಗತಿಗಳನ್ನು ತಿಳಿಸುವದು ಅವಶ್ಯವಲ್ಲವೇ? ಶ್ಯಾಮ.

ಕನ್ನಡಿಗ.

ಬಾಗಲಕೋಟೆ ವೈಶಾಖ ಶುದ್ಧ ೭ ಶಕೆ ೧೮೪೯

ಸಂಪಾದಕರ ಭೂಮಿ

(೬೦)

ತನೆ ಮಾನಸಿನ ಮೋಹವಾದಿ ಕಟ್ಟುವೆನಾನು।
ನಿನ್ನ ಜೀವನದ ಮಾಧಿದಂಥ ಮಕ್ಕಳ ದೊನ್ನು।
ಅನ್ನದಾದರು ಚಿನ್ನ ಸೋಣಬಸ್ತಿಯ ನೊಂದು ಚಿನ್ಮಯಾಕಾಶದಲ್ಲಿ॥
ತನ್ನ ದೇಹವು ನಿನ್ನ ವೀರಶಾಸನಕಾಗಿ।
ಕನ್ನಸ್ಸು ಕಲ್ಲಾಗಿ ನಿಲ್ಲಿಸಲು ಸಿದ ವಿದೆ।
ನನ್ನಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೋ

—ಅಂಬಿಕಾತನಯದತ್ತ

ಪ್ರಸಿದ್ಧ ವರ್ತಕರಾದ ರಾಮದಾಸ ಶೇಟಜಿಯವರು ಮೃತಪಟ್ಟರೆಂದು ತಿಳಿಸಲು ನಮಗೆ ವಿಷಾದವಾಗುತ್ತದೆ. ಶೇಟಜಿಯವರು ಮೊದಲಿನಿಂದಲೂ ಶ್ರೀಮಂತರು. ಹಿರಿಯ ಸಾರ್ವಜನಿಕ ಕಾರ್ಯಗಳಲ್ಲಿ ಒಳ್ಳೇ ದಕ್ಷರಾಗಿದ್ದರು. ಸರಕಾರದಲ್ಲಿಯೂ ಇವರು ಪ್ರಸಿದ್ಧರಾಗಿದ್ದರು. ಅಂತೆಯೇ ಸರಕಾರದಿಂದ ಇವರಿಗೆ ರಾವಸಾಹೇಬ ಎಂಬ ಪದವಿಯು ದೊರೆಕಿತ್ತಲ್ಲದೆ ಇವರು ಬೆಂಚ ಮ್ಯಾಜಿಸ್ಟ್ರೇಟರಾದೂ ಇದ್ದರು. ಆದರೆ ರಾಷ್ಟ್ರದಲ್ಲಿ ಅಸಹಕಾರ ಗಾಳಿಯು ಬೀಸಹತ್ತಿದ ಕೂಡಲೆ, ಇವರಾದರೂ ಆ ಗಾಳಿಯಿಂದ ಎಚ್ಚತ್ತು ಅಸಹಕಾರಿಗಳಾದರು! ತಮ್ಮ ರಾವಸಾಹೇಬ ಪದಕ್ಕೆ ಶರಣು ಹೊಡೆದು, ಕಾಂಗ್ರೆಸ ಕಮೀಟಿಯ ಸಭಾಸದರಾದರು. ಅಂದಿನಿಂದ ಅವರು ರಾಷ್ಟ್ರ ಕಾರ್ಯಕ್ಕೆ ವಿವಿಧ ರೀತಿಯಿಂದ ಸಹಾಯ ಮಾಡುತ್ತಿದ್ದರು. ರಾಷ್ಟ್ರೀಯ ಶಾಲೆಯ ಉಪಯೋಗಕ್ಕಾಗಿ ತಮ್ಮ ವಿಶಾಲವಾದ ಕಟ್ಟಡವನ್ನು ಪುಕ್ಕಟೆಯಾಗಿ ಕೊಟ್ಟಿದ್ದರು. ತಾಲೂಕ ಕಾಂಗ್ರೆಸ ಕಮೀಟಿಯ ಅಧ್ಯಕ್ಷರಾಗಿದ್ದರು. ಇವರು ಅಸಹಕಾರಿಗಳಾದಂದಿನಿಂದ ಸಾಯುವವರೆಗೆ ಖಾದೀ ಬಟ್ಟೆಯನ್ನೇ ಧರಿಸುತ್ತಿದ್ದರು. ಇದರಿಂದ ಇವರ ದೇಶಭಕ್ತಿಯು ವ್ಯಕ್ತವಾಗುತ್ತದೆ. ಈಗ ಕೆಲವು ವರ್ಷಗಳ ಹಿಂದೆ ತಮಗೆ ಅನೇಕ ವರ್ಷಗಳಾದ ನಿಮಿತ್ತ ಶಾಂತಿ ಮಾಡಿಕೊಂಡು, ಬಡಬಗ್ಗರಿಗೆ ಅನ್ನದಾನ ವಸ್ತ್ರದಾನ ಮಾಡಿ ಬಡವರಲ್ಲಿಯ ತಮ್ಮ ಮಮತೆಯನ್ನು ತೋರಿಸಿದರು. ಅಲ್ಲದೆ ಈ ಊರಲ್ಲಿ ನಡೆದ ಗಣೇಶ ಉತ್ಸವಕ್ಕೆ ಎಲ್ಲ ರೀತಿಯಿಂದ ಸಹಾಯ ಮಾಡಿ ತಾವು ಧಾರ್ಮಿಕರೆಂದು ಪ್ರಸಿದ್ಧರಾದರು. ಇವರ ಮರಣದಿಂದ ಬಾಗಲಕೋಟೆಯು ಒಬ್ಬ ಪ್ರಸಿದ್ಧ ದೇಶಭಕ್ತರನ್ನೂ, ಉಪಕಾರಿ ವರ್ತಕರನ್ನೂ ಕಳಕೊಂಡಿತು. ಪರಮಾತ್ಮನು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ!!

ಕರ್ನಾಟಕ ಕಾಲೇಜದ ಕನ್ನಡ ಪಂಡಿತರ ಬಗ್ಗೆ ವ್ಯಕ್ತಿ ಬರೆಯಬೇಕಾಗಿದೆ 'ಕರ್ಮವೀರ' 'ವಿಜಯ' ಪತ್ರಿಕೆಗಳ ಕಥಾನಗಳನ್ನೋದಿ ನಮಗೆ ನಿಜವಾಗಿಯೂ ನಗೆ ಬರುವದು. ಕನ್ನಡ ನುಡಿಯ ಜ್ಞಾನ, ಅಭಿಮಾನಗಳಿದ್ದ, ವಿದ್ಯಾವಂತರೂ, ರಸಭಿಜ್ಞರೂ, ಸಾರ್ವಜನಿಕ ಕಾರ್ಯಗಳಲ್ಲಿ ಆಸಕ್ತಿಯುಳ್ಳವರೂ ಆದ ಪಂಡಿತವರ್ಯರನ್ನೇ ಈ ಸ್ಥಳಕ್ಕೆ ನಿಯೋಜಿಸಬೇಕೆನ್ನುವದರಲ್ಲಿ ಯಾರಲ್ಲಿಯೂ ಮತಭೇದವಿರಲಾರದು. ಮೈಸೂರಿನವರಿಗೆ ಈ ಸ್ಥಾನವನ್ನು ಕೊಡಬೇಕೆಂದರೆ, ಯಾವನಾದರೊಂದು ಕಂಬಿಯನ್ನು ಹಿಡಿದು ತಂದು ಪಂಡಿತಸ್ಥಾನದಲ್ಲಿ ಕುಳ್ಳಿರಿಸಬೇಕೆಂದು ನಮ್ಮ ಮತವಲ್ಲ! ಇನ್ನು ಬ್ರಾಹ್ಮಣ—ಬ್ರಾಹ್ಮಣೇತರ ಪ್ರಶ್ನೆಯು ಕರ್ನಾಟಕದ ದುರ್ದೈವದಿಂದ ಎಲ್ಲ ಮಾತಿನಲ್ಲಿಯೂ ತಲೆಯೆತ್ತುತ್ತಲಿದೆ. ಇಲ್ಲಿಯೂ ಸಹ ಜೊಂಡು ಹಾಕಿ ಬರಬಹುದು. ಆದರೆ ಉತ್ತರ ಕರ್ನಾಟಕದ ಪಂಡಿತರನ್ನು ನೇಮಿಸಿದರೆ ಈ ಪ್ರಶ್ನೆಯು ಬಿಡುತ್ತದೆ; ಮೈಸೂರಿಂದ ಕರೆಯುವವರು ನಿಯೋಜಿಸಿದರೆ ಬಿಡುವದಿಲ್ಲವೆಂದೆನ್ನುವದು ಸರಿಯೇ? ಹ್ಯಾಮಿಲ್ಟನ್ ಸಾಹೇಬರೊಬ್ಬರಂತಹ ನೌಕರರಿಗೆ ಈ ಪ್ರಶ್ನೆಯನ್ನು ಎಂದೂ ಬಿಡಿಸುವದು ಶಕ್ಯವಿಲ್ಲ. ಅದು ರಾಷ್ಟ್ರದ ಪ್ರಶ್ನೆಯಾಗಿದೆ. ಆದುದರಿಂದ ಈ ಮಾತನ್ನು ಮುಂದಕ್ಕೆಳೆಯುವದು ಸಮಂಜಸವಾಗದು. ಕರ್ನಾಟಕ ಏಕೀಕರಣಕ್ಕೂ ಈ ಪಂಡಿತರ ನಿಯೋಜನೆಗೂ ಅರ್ಥಾತ್ ಸಂಬಂಧವಿಲ್ಲೆಂದು 'ವಿಜಯ'ದ ಮತ! ಕನ್ನಡ ನಾಡು ನುಡಿಗಳ, ಕರ್ನಾಟಕ ಏಕೀಕರಣದ, ಸಾರಾಂಶ, ಕರ್ನಾಟಕತ್ವದ ಸಂಪೂರ್ಣ ಭಾವನೆಯು ಯಾವ ಕನ್ನಡಿಗನ ರೋಮ ರೋಮಾಂಚಗಳಲ್ಲಿಯೂ ಸುಳಿದಾಡುತ್ತಿರುವದೋ, ಅವನಿಗೆ 'ವಿಜಯ'ದ ಮತವನ್ನು ಕಂಡು "ಪಾಪ ಹಳೆಯ ವಿಚಾರದ ಪತ್ರ; ಹೊಸ ಕಲ್ಪನೆಗಳೆಲ್ಲ 'ವಿಜಯ'ನಲ್ಲಿರದಿರುವದು ಆಶ್ಚರ್ಯವಲ್ಲ" ಎಂಬ ಕನಿಕರ ಹುಟ್ಟದೇ ಇರದು! ಒಂದು ಭಾಗದ ಕನ್ನಡಿಗರು ಇನ್ನೊಂದು ಭಾಗದ ಕನ್ನಡಿಗರ ಸಂಗಡ ಬಳಕೆಯನ್ನು ಬೆಳೆಸುವ ಪ್ರಸಂಗವನ್ನು ಹೊಸ ಕರ್ನಾಟಕವು ಯಾವಾಗಲೂ ಹುಡುಕುತ್ತಲಿದೆ. ಅಂತಹ ಸುಪ್ರಸಂಗವು ಈಗ್ಗೆ ಒಂದಿರಲು ಅದನ್ನು ಹತಾಶವಾಗಿ ನೂಕುವದೇಕೆ? ಪರಸ್ಪರ ಬಳಿಕೆಯು ಬೆಳೆಯದೇ, ಏಕೀಕರಣವಾಗುವದು ಸಂಭವನೀಯವೇ? ಹೇಳಲಿ 'ವಿಜಯ'ಕಾರರು! ಇಂದಿಲ್ಲ ನಾಳೆಯಾದರೂ ಬ್ರಿಟಿಶ್ ಕರ್ನಾಟಕದ ಏಕೀಕರಣವು ರಾಜಕೀಯ ಚಳವಳಿಯಿಂದ ಒದಗಿಬರುವದು. ಆದರೆ ಮೈಸೂರ ಸಂಸ್ಥಾನದ ಕನ್ನಡಿಗರ ಸಂಗಡ ಆ ಬಗೆಯ ಏಕೀಕರಣವು ಆಗುವಂತಿಲ್ಲ. ಆದುದರಿಂದ ಇಂತಹ ಪ್ರಸಂಗಗಳನ್ನು ನಾವು ಬಿಡಗೂಡದು. ಹಳೇ ವಿಚಾರದ 'ವಿಜಯ'ವು ಏನೋ ಒಂದು ಕಾರಣದಿಂದ ಏಕೀಕರಣಕ್ಕೂ ಈ ವಿಷಯಕ್ಕೂ ಸಂಬಂಧವಿಲ್ಲೆಂದು ಹೇಳಿದ್ದರೂ, ಹೊಸ ವಿಚಾರದ 'ಕರ್ಮವೀರ'ವು "ಮೈಸೂರವರ ಕೂಡ ಹೆಚ್ಚು ಬಳಿಕೆಯು ನಮ್ಮದಾಗಬೇಕೆಂದೇ ನಮ್ಮ ಅಭಿಪ್ರಾಯವು" ಎಂದು ಸಾರಿದೆ. 'ಆದರೆ ಈ ಪ್ರಶ್ನೆಯು ಅಷ್ಟೊಂದು ಸುಲಭವಲ್ಲ'ವೆಂಬ ವಿಷಾದಯೋಗವನ್ನು 'ಕರ್ಮವೀರ'ನು ಪ್ರಕಟಿಸುವದು ಅವನ ಧರ್ಮವಲ್ಲ. ತಮ್ಮ ಮಿತ್ರರಲ್ಲಿ ಆರಿಗಾದರೂ ಈ ಕನ್ನಡ ಪಂಡಿತರ ಸ್ಥಾನವು ದೊರೆಯಬೇಕೆಂಬ ಬಗೆಗೆ ಬೀಳದೇ ಶುದ್ಧವಾದ ಆಂತರಿಕ ದೃಷ್ಟಿಯಿಂದ ನೋಡಿದ್ದರೆ, 'ಕರ್ಮವೀರ'ನಿಗೂ ನಮಗೂ ಮತಭೇದವಿರುತ್ತಿರಲಿಲ್ಲ. ಇನ್ನು ಕಡೆಯ ಮಾತು.

ಕರ್ನಾಟಕತ್ವದ ಭಾವನೆಯನ್ನು ಕನ್ನಡಿಗರಲ್ಲಿ ಹರಡಲು, ಮೊದಲು ದೀವಟಿಗೆಯನ್ನು ಎತ್ತಿ ಹಿಡಿದವರು ಉತ್ತರ ಕರ್ನಾಟಕದವರು ಆಗಿನಿಂದಲೂ ಅಖಂಡ ಕರ್ನಾಟಕದ ದೃಷ್ಟಿಯಿಂದ ಸರಿಯಾದುದರ ಬಗ್ಗೆ, ಇತರ ಕನ್ನಡಿಗರಿಂದ ಅಷ್ಟೊಂದು ಸಹಾನುಭೂತಿಯಿರಲಿ ಇರದಿರಲಿ, ಔತ್ತರೇಯರು ಚಳವಳ ಮಾಡುತ್ತ ಬಂದಿರುವರು ಅದ್ದರಿಂದಲೇ ಕರ್ನಾಟಕತ್ವದ ಕಲ್ಪನೆಯು ಸ್ವಲ್ಪಾದರೂ ಎಲ್ಲ ಕಡೆಗೂ ಹಬ್ಬಿದೆ; ಹಬ್ಬುತ್ತಲಿದೆ. ಆದರೆ "ಏನು ಮಾಡಬೇಕು ! ಇತರ ಕನ್ನಡಿಗರು ನಮಗೆ ಸಹಾನುಭೂತಿ ತೋರಿಸಕೊಳ್ಳರು !" ಎಂದು ಅಳುತ್ತ ಕುಳಿತಿದ್ದರೆ ಯಾವ ಕಾರ್ಯವೂ ಆಗುತ್ತಿರಲಿಲ್ಲ ಈ ಆಕ್ರೋಶ ಬುದ್ಧಿ ಪ್ರೇರಿತರಾದವರಿಗೆ ಜಗತ್ತಿನಲ್ಲಿ ಯಾವ ಕಾರ್ಯವನ್ನೂ ಸಾಧಿಸುವದು ಶಕ್ಯವಿಲ್ಲ ಹೀಗಿರಲು, ಉದಾತ್ತ ವಿಚಾರದ 'ಕರ್ಮವೀರ'ನು "ಇದಲ್ಲದೇ, ಮೈಸೂರವರನ್ನು ನಾವು ಇತ್ತ ಕಡೆಗೆ ಬರಮಾಡಿಕೊಳ್ಳಲಿಕ್ಕೆ ಎಷ್ಟು ಆತುರರಿರುವೆವೋ ಅಷ್ಟೇ ಮೈಸೂರಿನವರಾದರೂ ಇರಬೇಕು" ಎಂಬ ಮಾರವಾಡಿಯ ವ್ಯವಹಾರದ ಲೆಕ್ಕದ ಎಣಿಕೆಯನ್ನು ಮಾಡಿದ್ದನ್ನು ಕಂಡು, ಇಂತಹ ಉದಾತ್ತ ವಿಚಾರರಹಿತವಾದ ಲೇಖವು 'ಕರ್ಮವೀರ'ನಲ್ಲಿ ಬಂದುದು ಹೇಗೆಂದು ಆಶ್ಚರ್ಯಗೊಂಡಿರುವೆವು ! 'ಕನ್ನಡಿಗ'ನಲ್ಲಿಯ ಪರಸ್ಪರ ಒಳಿಕೆಯ ವಿಚಾರಕ್ಕೆ ತಾನು ಮೊದಲು ನುಡಿದಂತೆ 'ಕರ್ಮವೀರ'ನು ನಿಜವಾಗಿಯೂ ಸಮ್ಮತಬಟ್ಟಿದ್ದರೆ, "ಮೊದಲು ಮೈಸೂರಿನವರು ನಮ್ಮನ್ನು ಸೇರಿಸಲಿ; ಆ ಮೇಲೆ ನಾವು ಅವರನ್ನು ಸೇರಿಸಿಕೊಳ್ಳುವೆ"ವೆಂಬ ವ್ಯಾಪಾರದ ಮಧ್ಯಮ ತರಗತಿಯ ವಿಚಾರಕ್ಕೆ ಎಡೆ ಕೊಡುವ ಕಾರಣವಿದ್ದಿಲ್ಲ! ನಾವು ವಿಶಾಲವಾದ ದೃಷ್ಟಿಯಿಂದ ಮೈಸೂರಿನ ಪಂಡಿತರನ್ನು ನಿಯೋಜಿಸಲಿಕ್ಕೆ ಅಸ್ಪದ ಕೊಟ್ಟು ಪರಸ್ಪರ ಬಳಿಕೆಗೆ ಫಲವತ್ತರವಾದ ಈ ಉತ್ತರ ಕರ್ನಾಟಕದಲ್ಲಿ ಬೀಜ ಬಿತ್ತಿದರೆ, ಅದು ನಾಟದೇ ಇದ್ದೀತೇ ?

ಕೊಡಗು ಕನ್ನಡಿಗರು ಭಾವೀ ಕರ್ನಾಟಕ ಪ್ರಾಂತದಲ್ಲಿ ಸೇರುವದಕ್ಕೆ ಸಿದ್ಧರಿದ್ದಾರೆ ಆದರೆ ಮುಖ್ಯವಾಗಿ ಎರಡು ಮಾತುಗಳ ಬಗ್ಗೆ ಅವರಿಗೆ ಉಳಿದ ಕರ್ನಾಟಕದ ಭರವಸೆ ಬೇಕಾಗಿದೆ. ಜಮ್ಮಹಕ್ಕು ಹಾಗೂ ಕೋವಿ ಕತ್ತಿಗಳನ್ನು ಹಿಡಿಯುವ ಕೊಡವರ ಸೌಕರ್ಯವು ನಷ್ಟವಾಗಬಾರದೆಂಬುದು ಮೊದಲನೇಯದು. ಈ ಸೌಕರ್ಯವನ್ನು ಕೊಡವರಿಂದ ಕಸಿದುಕೊಳ್ಳಲು ಇತರ ಕನ್ನಡಿಗರು ಎಳ್ಳಷ್ಟಾದರೂ ಬಚ್ಚಿಸುವದಿಲ್ಲ; ಇಷ್ಟೇ ಅಲ್ಲ; ಆದರೆ ನಮ್ಮ ಕೊಡಗು ಬಂಧುಗಳಿಗಿದ್ದ ಈ ಸೌಕರ್ಯವು ನಮಗಾದರೂ ದೊರೆಯುವದಕ್ಕೆ ಹೆಣಗಾಡುವೆವು. ಈ ಮಾತಿನಲ್ಲಿ ನಮ್ಮ ಕೊಡಗು ಕನ್ನಡಿಗರು ಎಳ್ಳಷ್ಟಾದರೂ ಅಂಜುವ ಕಾರಣವಿಲ್ಲ. ಕೊಡಗು ದೇಶದ ಸರಕಾರೀ ಉದ್ಯೋಗಗಳು ಕೊಡಗರ ಕೈತಪ್ಪಿ ಬೇರೆಯವರ ಕೈವಶವಾಗಿ, ದೇಶೀಯರ ಸಂಪಾದನೆಗೆ ಆತಂಕ ಒದಗದಿರುವದು ಕೊಡಗು ಕನ್ನಡಿಗರಿಗಿದ್ದ ಎರಡನೇ ಸಂಶಯ. ಈಗ್ಗೆ ಕೊಡಗು ನೌಕರಿ ಮಾಡುವದು ೧,೬೪,೧೨೦ ಜನಸಂಖ್ಯೆಯುಳ್ಳ ಚಿಕ್ಕ ಪ್ರದೇಶದಲ್ಲಿ. ಭಾವೀ ಏಕೀಕೃತ ಕರ್ನಾಟಕದ ಜನಸಂಖ್ಯೆಯು ೫೦ ಲಕ್ಷಕ್ಕೆ ಮಿಕ್ಕುವದು. ಇಂತಹ ದೊಡ್ಡ ಪ್ರದೇಶದಲ್ಲಿ ಹೆಚ್ಚು ಜನ ಕೊಡವರಿಗೆ ನೌಕರಿಗಳು ದೊರೆಯುವ ಸಂಭವವೇ ಹೆಚ್ಚಾಗಿ, ಕಡಿಮೆಯಾಗದು. ಮೊನ್ನಿನ ಕೊಡಗು ಜಮೀನದಾರರ ಸಭೆಯಲ್ಲಿ ಈ ವಿಷಯವು ಹೊರಬಿದ್ದಿನಿಂದ, ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಈ ಪ್ರಶ್ನೆಗಳು ವಿಚಾರಿಸಲ್ಪಟ್ಟವು. ಮುಖ್ಯವಾದ ಪತ್ರಿಕೆಗಳೆಲ್ಲ ಕೊಡವರಿಗೆ ಈ ಬಗ್ಗೆ ಆಶ್ವಾಸನವನ್ನು ಕೊಟ್ಟಿವೆ. ಆದ ಮೇಲೆ ಕೊಡವರಿಗೆ ಇನ್ನು ಭಯಪಡಲು ಕಾರಣವೇ ಇಲ್ಲವೆಂದು ನಾವು ಆನಂದದಿಂದ ಹೇಳಬಲ್ಲೆವು.

ಕನ್ನಡ ವಾಙ್ಮಯ ವಿಕಾಸಕ್ಕೆ ದಾಸಕೂಟವು ಬಹಳಂತದ ಕಾರಣವಾಗಿದೆಂಬದನ್ನೂ, ಈ ದಾಸಕೂಟದವರಿಂದ ಭಕ್ತಿಮಾರ್ಗವು ಕನ್ನಡ ನಾಡಿನಲ್ಲಿ ಶಾಶ್ವತವಾಗಿ ನೆಲೆಗೊಂಡದ್ದನ್ನೂ ಬಲ್ಲೆವು ಕನ್ನಡಿಗರು ಬಲ್ಲರು. ಆದರೆ ಜಗತ್ತಿಗೆ ಕನ್ನಡಿಗರ ಈ ಭಕ್ತಿಕೂಟದ ವಿಷಯವನ್ನು ತಿಳಿಯಲು ಅನುಕೂಲವಿರಲಿಲ್ಲ. ಮಹಾರಾಷ್ಟ್ರ, ಬಂಗಾಲ, ಹಿಂದೀ, ಮೊದಲಾದ ಭಕ್ತಿಮಾರ್ಗ ಪ್ರವರ್ತಕರ ಚರಿತ್ರೆಗಳು ಆಂಗ್ಲ ಭಾಷೆಯಲ್ಲಿ ಪ್ರಕಟವಾದಂತೆ, ಕನ್ನಡ ಭಕ್ತಶಿರೋಮಣಿ ದಾಸರ ಪರಿಚಯವು ಇಂಗ್ಲೀಷ ವಾಙ್ಮಯಕ್ಕೆ ದೊರೆತಿಲ್ಲ ಈ ಕೊರತೆಯನ್ನು ನಮ್ಮ ತರುಣ ಮಿತ್ರರೂ, ಹಾವೇರಿಯ ಇಂಗ್ಲೀಷ ಶಾಲೆಯ ಮುಖ್ಯಾಧ್ಯಾಪಕರೂ, ಬಹು ದಿನಗಳಿಂದ ದಾಸಕೂಟದ ಚರಿತ್ರೆಯನ್ನು ಸಂಶೋಧಿಸಿದವರೂ, ಆದ ಶ್ರೀಮಾನ್ ಬೆಂಗೇರಿ ಹನುಮಂತರಾಯರು ದೂರಮಾಡಿದ್ದಕ್ಕಾಗಿ ನಾವು ಅವರನ್ನು ಮನಃಪೂರ್ವಕವಾಗಿ ಅಭಿನಂದಿಸುತ್ತೇವೆ ಈ ಚರಿತ್ರೆಯ ಬಗ್ಗೆ ಲೇಖಗಳನ್ನು 'ಜಯಕರ್ನಾಟಕ'ದಲ್ಲಿ ಪ್ರಕಟಿಸಿ, ಶ್ರೀ. ಬೆಂಗೇರಿಯವರು ಕನ್ನಡಿಗರಿಗೆ ಪರಿಚಿತರಾಗಿದ್ದಾರೆ ಈಗ್ಗೆ ಅವರ ಪ್ರಯತ್ನದಿಂದ ಪುಣೆಯ ಸುಪ್ರಸಿದ್ಧ "ಭಾಂಡಾರಕರ ಓರಿಯಂಟಲ್ ಇನ್‌ಸ್ಟಿಟ್ಯೂಶನ್"ದವರು ಈ ಕನ್ನಡ ದಾಸಕೂಟದವರ ಚರಿತ್ರೆಗಳನ್ನು ಪ್ರಸಿದ್ಧಿಸಿದ್ದರಿಂದ ನಾವು ಈ ಸಂಸ್ಥೆಯವರನ್ನು ಕೊಂಡಾಡುತ್ತೇವೆ. ಮತ್ತೂ ಕನ್ನಡಿಗರ ಬಗ್ಗೆ ಇದೇ ಬಗೆಯ ಉದಾರ ಬುದ್ಧಿಯನ್ನು ಮುಂದೆ ಸಹ ತೋರಿಸುವರಾಗಿ ನಂಬುತ್ತೇವೆ ಈ ಸಂಸ್ಥೆಯೆಂದರೆ ಜಗತ್ತಿನಲ್ಲೆಲ್ಲ ಪ್ರಸಿದ್ಧವಾದುದು. ಇವರಿಂದ ಪ್ರಕಟವಾದುದರಿಂದ ಈ ಕನ್ನಡ ದಾಸಕೂಟದ ಚರಿತ್ರೆಗೆ ಹೆಚ್ಚಾಗಿ ಮಹತ್ವ ಬಂದು, ಜಗತ್ತಿನ ಭಕ್ತಿಮಾರ್ಗದ ಅನುಯಾಯಿಗಳಿಗೆಲ್ಲ ಕನ್ನಡ ದಾಸರ ಪರಿಚಯವಾಗಲು ಅವಕಾಶವಾದುದಕ್ಕಾಗಿ ನಮಗೆ ತುಂಬಾ ಆನಂದವಾಗಿದೆ. ಕನ್ನಡವನ್ನು ಓದಲು ಬೇಸರಿಯುವ ನಮ್ಮ ಸುಶಿಕ್ಷಿತ ಕನ್ನಡಿಗರು, ಇದೀಗ ಪ್ರಕಟವಾದ ಇಂಗ್ಲೀಷದ ಚರಿತ್ರೆಯನ್ನೋದಿ, ತಮ್ಮ ಪ್ರಾಚೀನ ಕನ್ನಡಿಗರ ಪರಿಚಯವನ್ನು ಮಾಡಿಕೊಳ್ಳಲಿ!

ಚೀನದ ರಾಷ್ಟ್ರೀಯ ಪಕ್ಷದಲ್ಲಿ ಒಡಕು ಹುಟ್ಟಿಸಿದ ಶ್ರೇಯಸ್ಸು ಯಾತನವು ಪರದೇಶದವರಲ್ಲಿದ್ದರೆ ಇಂಗ್ಲೆಂಡವೇ ಮುಖ್ಯವಾದ ರಾಷ್ಟ್ರಗಳಲ್ಲಿ ಸಹ ಒಡಕ ಹುಟ್ಟಿಸುವ ಜಾಣತನವು ಚೀನದ ರಾಷ್ಟ್ರೀಯ ಪಕ್ಷದಲ್ಲುಂಟು. ನಾನಕಿಂಗದ ಅತ್ಯಾಚಾರಗಳ ತಪ್ಪು ದಂಡವೆಂದು ಇಂಗ್ಲಂಡ, ಅಮೇರಿಕಾ ಜಪಾನ, ಇಟಲಿ, ಫ್ರಾನ್ಸ, ಎಂಬ ಐದು ರಾಷ್ಟ್ರದವರು ಕೂಡಿಕೊಂಡು ಕೆಲವು ಕರಾರು ಹಾಕಿ ಒಂದು ಪತ್ರವನ್ನು ರಾಷ್ಟ್ರೀಯ ಪಕ್ಷದತ್ತ ಕಳಿಸಿದ್ದರು. ಪರರಾಷ್ಟ್ರ ಮಂತ್ರಿಯಾದ ಯುಜೇನ ಚೆನ್ನನು ಐದೂ ರಾಷ್ಟ್ರದವರಿಗೆ ಬೇರೆ ಬೇರೆ ಪತ್ರಗಳನ್ನು ಬರೆದದರಿಂದಲೂ, ಅಮೇರಿಕಾ ದೇಶದಲ್ಲಿ ಹೋಗಿ ತಮ್ಮ ಮತವನ್ನು ಪ್ರಾಮಾಣಿಕರಾಗುವಂತೆ ಮಂಡಿಸಿದ್ದರಿಂದಲೂ ಅಮೇರಿಕಾದವರು ಚೀನದ ರಾಷ್ಟ್ರೀಯ ಸರಕಾರದವರ ಗೂಡ ಸ್ವತಂತ್ರವಾಗಿ ಒಪ್ಪಂದ ಮಾಡಿಕೊಳ್ಳಲು ಹಾತೊರೆಯುತ್ತಿದ್ದಾರೆ ಐದೂ ರಾಷ್ಟ್ರಗಳು ಒಗ್ಗಟ್ಟಿಗಾಗಿ ಅವಿರತವು ಒಪ್ಪಿದಂತೆ ಜಪಾನವು ಪ್ರಯತ್ನಿಸಿದಾಗಲೂ ಇಂಗ್ಲಂಡವು ಹಿಂಜರಿಯುತ್ತಿದೆ. ಹೀಗೆ ಐದೂ ರಾಷ್ಟ್ರಗಳಿಗೆ ಚೀನದವರು ಒಂದು ಗುಂಪ

ಹಾರಿಸಿದರೆ ಗುಂಡಿನ ಸುರಿಮಳೆಯಿಂದಲೇ ಉತ್ತರ ಕೊಡಬೇಕೆಂದ ಇಂಗ್ಲಂಡದ ಮಂತ್ರಿ ಮಂಡಲವು ಪಾರ್ಲಿಮೆಂಟಿನಲ್ಲಿ ಸಾರಿದೆ. ಮತ್ತೊಂದೆರಡು ಹಡಗಗಳು ಚೀನಕ್ಕೆ ಈಗಾಗಲೇ ಬಂದಿವೆ. ಇತ್ತ ಚಿಯಾಂಗ ಕೈಸೆಕನೆಂಬುವ ಮುಖ್ಯ ಸೇನಾಪತಿಯು ಒಕ್ಕಟ್ಟಿನ ಕಾರ್ಯಕ್ಕೆ ಬಹು ಒರಹತ್ತಿದೆ ಕೂಲಿಕಾರರ ಅತ್ಯಾಚಾರಗಳನ್ನು ಆತನು ನಿಲ್ಲಿಸತೊಡಗಿದ್ದಾನೆ. ರಾಷ್ಟ್ರೀಯ ಪಕ್ಷದ ಜನಗಳಲ್ಲಿ ಒಕ್ಕಟ್ಟು ಮುರಿಯುವಷ್ಟು ಮತಭೇದವಿದ್ದಂತೆ ಕಾಣುವದಿಲ್ಲ.

"ಕನ್ನಡಿಗ"ನಿಗೆ ಸಹಾಯ.

ಈ ವಾರದಲ್ಲಿ ಸವದತ್ತಿಯಲ್ಲಿರುವ ಶ್ರೀ ಕಂಠೀ ಸಿದ್ಲಿಂಗಪ್ಪನವರು ಕನ್ನಡಿಗನಿಗೆ ಈರ್ವ ಚಂದಾದಾರರನ್ನು ಕೂಡಿಸಿಕೊಟ್ಟಿದ್ದಾರೆ

ಹಿಂದುಸ್ಥಾನದ ಯುದ್ಧ ನೌಕೆಗಳ ಕಾಯಿದೆಯು.

ನಮಗೆ ಈ ಕಾಯಿದೆಯ ವಿಷಯಕ್ಕೆ ಬರೆಯುವಾಗ್ಗೆ "ಅರಬನೂ, ಒಂಟೆಯೂ" ಎಂಬ ಕಥೆಯು ನೆನಪಾಗುತ್ತದೆ. ಒಬ್ಬ ಅರಬನು ತನ್ನ ಗುಡಿಸಲಿನಲ್ಲಿ ರಾತ್ರಿ ಮಲಗಿರಲು ಹೊರಗೆ ಕಟ್ಟಿದ ಅವನ ಒಂಟೆಯು ಚಳಿಗೆ ನಡುಗಿ—'ಮಹಾರಾಜಾ, ಹೊರಗೆ ಬಹಳ ತಂಡಿ ಹೊಡೆಯುತ್ತಿದೆ. ಅದ್ದರಿಂದ ನನ್ನ ಮೂಗನ್ನಷ್ಟೇ ನಿಮ್ಮ ಗುಡಿಸಲಿನಲ್ಲಿ ತೂರಿಸಲಿಕ್ಕೆ ದಯಪಾಲಿಸಬೇಕು' ಎಂದೆನ್ನಲು ಆ ಅರಬನು ಯಾಕಾಗಲ್ಲೆಂದನು. ಮುಂದೆ ಸ್ವಲ್ಪ ಹೊತ್ತಿನಲ್ಲಿ ತನ್ನ ಮೋರೆಯನ್ನು ಒಳಗೆ ಇಡಲು ಕೇಳಿಕೊಂಡಿತು. ಆ 'ಭೋಳೆ' ಅರಬನು ಮೊದಲು ಅದರ ಮೂಗನ್ನು ಇಡಗೊಟ್ಟದ್ದೇ ತಪ್ಪು; ತುಸು ಹೊತ್ತಿನಲ್ಲಿ ಆ ಒಂಟೆಯು ಆ ಅರಬನನ್ನು ಬಲುಮೆಯಿಂದ ಹೊರಗೇ ಹಾಕಿತಂತೆ. ಇದೇ ಪ್ರಕಾರವು ಈ ಕಾಯಿದೆಗೆ ಅನ್ವಯಿಸುತ್ತದೆ. ಈ ಕಾಯಿದೆಯಿಂದ ಹಿಂದುಸ್ಥಾನವು ಪ್ರತಿ ವರ್ಷ ಯುದ್ಧ ನೌಕೆಗಳಿಗಾಗಿ ಹತ್ತು ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಬೇಕಾಗುತ್ತದೆ. ಹಿಂದುಸ್ಥಾನದ ಸೈನ್ಯದ ಸಲುವಾಗಿ ೫೫ ಕೋಟಿ ರೂಪಾಯಿಗಳನ್ನು ತೆತ್ತವಾಗ್ಗೆ ಈ ಹತ್ತು ಲಕ್ಷ ರೂಪಾಯಿಗಳ ಭಾರವೇ? "ಆನೆಯ ಬೆನ್ನಿಗೆ ಮರವು ಭಾರವೇ?" ಅದ್ದರಿಂದ ಹಿಂದುಸ್ಥಾನಕ್ಕೆ ೧೦ ಲಕ್ಷಗಳಿಂದ ಬಹಳ ಭಾರವಾಗಲಾರದೆಂದು ಯಾರಾದರೂ ಅನ್ನಬಹುದು. ಇದು ಶುದ್ಧ ತಪ್ಪು. ೧೦ ಲಕ್ಷ ರೂಪಾಯಿಗಳೆಂದರೆ ಬಡ ರೈತರಿಗೆ ಹೆಚ್ಚಿನ ಭಾರವಲ್ಲವೇ? ಈ ಹತ್ತು ಲಕ್ಷ ರೂಪಾಯಿಗಳನ್ನು ೧೦ ಕೋಟಿಯ ವರೆಗೆ ಸಮಯ ನೋಡಿ ಏರಿಸುತ್ತ ಹೋಗುವ ಸ್ವಾಭಾವಿಕವೂ ಬಲವೂ ಹಿಂದುಸ್ಥಾನದ ಅನುಭವಕ್ಕೆ ಬಂದಷ್ಟು, ಈ ಕಟ್ಟು ಅನುಭವವು ನಮಗೆ ಎಂದೋ ಬಂದಿದೆ. ಮಹಾ ಯುದ್ಧದ ಪೂರ್ವದಲ್ಲಿ ಹಿಂದುಸ್ಥಾನದ ಸೈನ್ಯದ ವೆಚ್ಚವು ೨೮—೩೦ ಕೋಟಿ ಮಾತ್ರ ಇತ್ತು! ಯುದ್ಧದ ಕಾಲಕ್ಕೆ ೬೦-೭೦ ಕೋಟಿ ಆಯಿತು! ಯುದ್ಧವು ಮುಗಿದು ೪ ವರ್ಷಗಳಾದರೂ ಸೈನ್ಯದ ಖರ್ಚು ಇಳಿಯಲಿಲ್ಲ! ಇದೇ ಅನುಭವವೇ ನೌಕಾ ಖಾತೆಯ ವಿಷಯದಲ್ಲಿ ಬರುವದರಲ್ಲಿ ಸಂದೇಹವಿಲ್ಲ. ಹಿಂದುಸ್ಥಾನದ 'ಅಸೆಂಬ್ಲಿ'ಯ ಪುರುಷೋತ್ತಮದಾಸರು ಈ ಬಿಲ್ಲಿನ ನಿಷೇಧವನ್ನು ವಿಶೇಷವಾಗಿ ಮಾಡಿದರು. ಹಿಂದೀ ಸಭಾಸದರು ಈ ಬಿಲ್ಲಿಗೆ ವಿರುದ್ಧ ಮತ ಕೊಟ್ಟರು. ಆದರೆ ಕೇಳುವವರಾರು? ಇಂಗ್ಲಂಡದ ಒಂಟೆಗೆ ಚಳಿ ಕಾಯಿಸಿಕೊಳ್ಳುವದಕ್ಕಾಗಿ ತನ್ನ ಮೂಗನ್ನು ಹಿಂದುಸ್ಥಾನದೊಳಗೆ ಇಡಬೇಕಾಗಿದೆ. ಪಾರ್ಲಿಮೆಂಟಿನಲ್ಲಿ ಲಾರ್ಡ ಬರ್ಕನ್ ಹೆಡ್ಡರು ಬಣ್ಣದ ಮಾತುಗಳನ್ನಾಡಿ ಎರಡು ಸಾರೆ ಬಹುಮತದಿಂದ ಈ ಕಾಯಿದೆಯನ್ನು ಪಾಸು ಮಾಡಿಕೊಂಡರು. ಇನ್ನು ಮೂರನೇ ವಾಚನವೊಂದು ಉಳಿಯಿತು. ಕರ್ನಲ್ ವೆಜ್‌ವುಡ್ ಮುಂತಾದ ಕೂಲಿಕಾರ ಪಕ್ಷದ ಜನರು ಈ ಸೂಚನೆಯನ್ನು ತೀವ್ರವಾಗಿ ನಿಷೇಧಿಸಿದರು. ಈ ಸಮಯದಲ್ಲಾದ ವಾದವಿವಾದಗಳು ಮನೋರಂಜಕವಾಗುವಷ್ಟೇ ಬೋಧಪ್ರದವಾಗಿರುವವು. ಮೊನ್ನೆ ಮೊನ್ನೆ ಒಬ್ಬ ಸಾಹೇಬರು 'ಹಿಂದುಸ್ಥಾನಕ್ಕೆ ನಾವು ಹಡಗುಪಡೆಯನ್ನು ಕೊಡದಿದ್ದರೆ ಅದಕ್ಕೆ ಅಪಮಾನವೇ ಸರಿ' ಎಂದು ಉದ್ಗಾರ ತೆಗೆದರು! ಲಾರ್ಡ ಬರ್ಕನ್ ಹೆಡ್ಡರು (ಭಾರತ ಮಂತ್ರಿಗಳು) ಅಂದದ್ದರ ಸಾರಾಂಶವು ಇಷ್ಟೇ:— "ಸಮುದ್ರಗಳ ಆಚೆಗಿರುವ ನಮ್ಮ ವಸಾಹತುಗಳಿಗೆಲ್ಲ ಒಂದೊಂದು ನೌಕಾಪಡೆಯುಂಟೇ ಉಂಟು. ಅದರಂತೆ ಹಿಂದುಸ್ಥಾನಕ್ಕಾದರೂ ಒಂದು ಹಡಗುಪಡೆಯು ಬೇಕು. ಅಂದರೆ ನಮ್ಮ ಪೂರ್ವಜರು ಹಿಂದೆ ಹಾಕಿಕೊಟ್ಟ ರೀತಿಯಿಂದಲೂ, ಒಂದೇ ತಂತ್ರದಿಂದಲೂ, ಪ್ರಸಂಗ ಬಂದಾಗ್ಗೆ ನಮ್ಮ ಸಮುದ್ರದಾಚೆಗಿರುವ ಎಲ್ಲ ನೌಕಾ ಪಡೆಗಳು ವೃದ್ಧಿ ಹೊಂದಿ, ನಮ್ಮ ಸಾಮ್ರಾಜ್ಯ ವಿಸ್ತಾರವು ಕುಂಠಿತವಾಗದೇ ನಡೆಯುವದು' ಗುಲಾಮ ಹಿಂದುಸ್ಥಾನವನ್ನು ಮತ್ತಿಷ್ಟು ಅಂಕಿತವಾಗಿ ಮಾಡಿ, ಅನ್ಯ ದೇಶಗಳನ್ನು ಆಕ್ರಮಿಸಲು ಸಾಧನವಾಗುವದೆಂಬುದೇ ಇದರ ತಾತ್ಪರ್ಯ. ಇಂಗ್ಲಂಡದ ವಸಾಹತುಗಳು ಸ್ವತಂತ್ರವಾಗಿವೆನ್ನಬಹುದು. ವಸಾಹತುಗಳ ಜನರೇ ನೌಕೆಗಳಲ್ಲಿ ಅಂಬಿಗರಾಗಿಯೂ ಅಧಿಕಾರಿಗಳಾಗಿಯೂ ಇರುವರು. ಅದ್ದರಿಂದ ಅವರ ದುಡ್ಡು ಅವರಲ್ಲೇ ಉಳಿದು ದೇಶವು ಸುರಕ್ಷಿತವಾಗುವದು. ಮುಖ್ಯ ಮಾತೆಂದರೆ ನೌಕಾಪಡೆಯು ವಸಾಹತುಗಳ ಸರಕಾರಕ್ಕೇ ಅಧೀನವಾಗಿರುವದು ಇಂಗ್ಲಂಡದ ತಂತ್ರಕ್ಕೆ ಒಳಗಾಗಿರುವದಿಲ್ಲ. ಮೊನ್ನೆ ಇಂಗ್ಲಂಡದವರು ತಮ್ಮ ವಸಾಹತುವಾದ ಆಸ್ಟ್ರೇಲಿಯಾಕ್ಕೆ ತಮ್ಮ ಹಡಗುಪಡೆಯನ್ನೂ ಚೀನಕ್ಕೆ ಕಳಿಸೆಂದು ಕೇಳಲು, ಅಲ್ಲಿ ತಮ್ಮದೇನೂ ಕೆಲಸವಿಲ್ಲೆಂದು ಆಸ್ಟ್ರೇಲಿಯಾದವರು ಸ್ಪಷ್ಟವಾಗಿ ಹೇಳಿದರು. ಆದರೆ ಹಿಂದುಸ್ಥಾನದ ಸ್ಥಿತಿಯೇ ಬೇರೆ. ನೌಕಾ ಪಡೆಯು ಇಂಗ್ಲಂಡದ್ದು; ರೊಕ್ಕ ಕೊಡುವದು ಮಾತ್ರ ಹಿಂದುಸ್ಥಾನದ ಕೆಲಸ! ಬಹಳಾದರೆ ಹಿಂದೀ ಸೈನಿಕರಂತೆ ಹಿಂದೀ ನಾವಿಗರಾಗಿ ಇಂಗ್ಲಂಡವು ಕರೆದಲ್ಲಿ ಹೋಗಬೇಕು. ಸರಕಾರದ ಪಕ್ಷದ ಬಣ್ಣದ ಮಾತುಗಳಿಗೆ ಆ ಕೂಲೀಕಾರರ ಪಕ್ಷದವರು ಮರುಳಾಗದೇ, ಅವನ್ನು ವಿರೋಧಿಸಿದರು. ಕಡೆಗೆ ಕರ್ನಲ್ ಜಾಯಿನ್ಸನ್ ಹಿಕ್ಸರೆಂಬರು ಬೇಸತ್ತು, ಈ ಬಿಲ್ಲಿನ ಉದ್ದೇಶವನ್ನು ಹೇಳುವಾಗ್ಗೆ 'ನಾನು ಮನಬಿಚ್ಚಿ ಮಾತಾಡುತ್ತೇನೆ. ಕೇಳಿ! ನಾವೇನು ಹಿಂದುಸ್ಥಾನದ ಪ್ರೇಮದ ಮೂಲಕವಾಗಿ ಅಲ್ಲಿಗೆ ಹೋಗಿರುವದಿಲ್ಲ! ಆದರೆ ಹಿಂದುಸ್ಥಾನದಿಂದ ಇಂಗ್ಲಂಡಕ್ಕೆ ಶಕ್ಯವಿದ್ದಷ್ಟು ಬಳಕೊಂಡು ಬರಲು ಹಿಂದುಸ್ಥಾನದಲ್ಲಿ ಇರುವೆವು' ಎಂದು ಸಾರಿ ಹೇಳಿದರು!!

ಇಂಗ್ಲಂಡವು ಹಿಂದುಸ್ಥಾನದಲ್ಲಿ ಇದ್ದದ್ದು ಇದೇ ನಿಜವಾದ ಕಾರಣ. ರಾಜಕಾರಣದಲ್ಲಿ ಪರೋಪಕಾರವಿಲ್ಲ. ಹಿಂದುಸ್ಥಾನದ ವ್ಯಾಪಾರ ನೌಕೆಗಳ ಸಂಘದವರು ಹಿಂದೀ ಜನರ ವ್ಯಾಪಾರ ಹಡಗಗಳ ಬೆಳವಣಿಗೆಗೆ ಸಹಾಯ ಮಾಡಿರೆಂದು ಕೇಳಿಕೊಳ್ಳಲು 'ಇಂಗ್ಲಂಡದ ಹಡಗಗಳು ಸಾಕಷ್ಟಿವೆ; ಹೆಚ್ಚಿಗೇನೂ ಬೇಡವೆಂದು' ಸರಕಾರದವರು ಹೇಳಿದರು. ಅಂದರೆ ಇಂಗ್ಲಂಡಕ್ಕೆ ದುಡ್ಡು ಕಡಿಮೆಯಾದೀತೆಂಬ ಸಂಕಟ.

ಇನ್ನು ನಮ್ಮ ಕರ್ತವ್ಯವೆಂದರೆ ನಾವು ಸ್ವಾವಲಂಬಿಗಳಾಗಬೇಕು. ಸರಕಾರವು ತಾವು ಹೀರುವಷ್ಟು ದುಡ್ಡನ್ನು ಹೀರಿಯೇ ತೀರುವರು. ಅಭಿಮಾನದಿಂದ ನಾವು ನಮ್ಮ ಹಿಂದೀ ಜನರು ಮಾಡಿದ ಪದಾರ್ಥಗಳನ್ನೇ ಉಪಯೋಗಿಸಬೇಕು; ಪರದೇಶದ ಮಾಲುಗಳಿಗೆ ಅಖಂಡವಾದ ಮತ್ತು ನಿಶ್ಚಿತವಾದ ಬಹಿಷ್ಕಾರ ಹಾಕಲೇಬೇಕು. ಈ ಸ್ವಾವಲಂಬನದ ಮಾರ್ಗದಲ್ಲಿಯೇ ಸ್ವರಾಜ್ಯವಿರುವದು

ಇಚ್ಛಾನುಸಾರ ಮಳೆ ಸುರಿಸುವುದು.

ಅಮೇರಿಕಾ ದೇಶದ ಒಹಿಯೊ ಸಂಸ್ಥಾನದ ಡೇಟನ್ ಎಂಬ ಪಟ್ಟಣದಲ್ಲಿ ಸ್ವಲ್ಪ ಕಾಲದ ಹಿಂದೆ ನಡೆಸಿದ ಮಳೆಯ ಪರಿಕ್ಷಾಕಾರ್ಯದಿಂದ ಅನತಿಕಾಲದಲ್ಲೆ ನಮ್ಮ ಇಚ್ಛೆ ಬಂದಾಗ ಮಳೆ ಸುರಿಸುವದು ಸಾಧ್ಯವೆಂದು ನಂಬಬಹುದಾಗಿದೆ. ಅಲ್ಲಿ ಆಕಾಶ ವಿಮಾನದಲ್ಲಿ ಮೋಡದ ಮೇಲಕ್ಕೆ ಹಾರಿ ಹೋಗಿ, ವಿದ್ಯುಚ್ಛಕ್ತಿಯ ಸಹಾಯದಿಂದ ಮಳೆಯನ್ನು ಸುರಿಸಿದರೆಂದು ಗೊತ್ತಾಗಿದೆ. ವಿಜ್ಞಾನ ಶಾಸ್ತ್ರದ ನಿಪುಣರಾದ ಪ್ರೊಫೆಸರ ಎ. ಎಂ ಲೊ ಎಂಬ ಯುವಕರು ಈ ವಿಚಾರದಲ್ಲಿ-"ಮೋಡಗಳಿಲ್ಲದ ಪ್ರದೇಶದಲ್ಲಿ ಮಳೆ ಸುರಿಸುವುದಕ್ಕಾಗುವುದಿಲ್ಲವಾದರೂ, ಮೋಡವಿರುವ ಕಡೆ ಇಷ್ಟ ಬಂದಾಗ ಮಳೆ ಸುರಿಸಬಹುದು. ಅಲ್ಲದೆ ಮೋಡಗಳನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಾಗಿಸಿ, ಈಗ ನಡೆಯುವ ಅತಿವೃಷ್ಟಿ ಅನಾವೃಷ್ಟಿಗಳನ್ನು ತಪ್ಪಿಸಬಹುದು" ಎಂದು ಹೇಳುತ್ತಾರೆ. ಇವರು ಹೇಳುವುದು ಮುಂದೆ ನಡೆಯಬಹುದಾದ ಮಾತು. ಆದರೆ ಅಮೇರಿಕಾ ದೇಶದ 'ಕ್ಯಾಲಿಫೋರ್ನಿಯಾಕ್ಕೆ ಸೇರಿದ ಹ್ಯಾಟಫೀಲ್ಡ್ ಎಂಬಾತನು ಮಳೆ ಸುರಿಸುವುದನ್ನು ಆಗಲೆ ಕಾರ್ಯತಃ ಸಾಧಿಸಿದ್ದಾನೆ. ಆರು ವರ್ಷಗಳ ಹಿಂದೆ ಒಂದು ಇಂಗ್ಲಿಷ ಮಾಸಪತ್ರಿಕೆಯಲ್ಲಿ ಮಳೆ ಸುರಿಸುವುದಕ್ಕಾಗಿ ಅವನು ಮಾಡಿರುವ ಸಾಹಸ ಕಾರ್ಯಗಳು ವಿವರಿಸಲ್ಪಟ್ಟಿವೆ. ಹ್ಯಾಟ್‌ಫೀಲ್ಡ್ ಎಂಬುವನು ಯಾವ ಪ್ರದೇಶದಲ್ಲಿ ಎಷ್ಟು ಬೇಕಾದರೂ ಮಳೆ ಸುರಿಸಿಕೊಡುತ್ತಾನಂತೆ. ಈ ರೀತಿ ಅವನು ಅನೇಕ ಸಂದರ್ಭಗಳಲ್ಲಿ ಮಾಡಿ ಜಯಶೀಲನಾಗಿರುವ ಸಂಗತಿಗಳು ಆ ಪತ್ರಿಕೆಯಲ್ಲಿ ವಿವರಿಸಲ್ಪಟ್ಟಿವೆ. ಓರಗನ್ ಎಂಬ ಸಂಸ್ಥಾನದಲ್ಲಿ ದನಕರುಗಳು ಕುಡಿಯುವುದಕ್ಕೆ ನೀರಿಲ್ಲದೆ ಸಾವಿರಗಟ್ಟಲೆ ಸಾಯುತ್ತಲೂ, ನೀರಿನ ಅಭಾವದಿಂದ ಅನೇಕ ಗಣಿಗಳನ್ನು ಮುಚ್ಚಿಯೂ ಇದ್ದಾಗ ಹ್ಯಾಟ ಫೀಲ್ಡ್ ಎಂಬುವನು ೫೦೦೦ ಡಾಲರು (ಸುಮಾರು ೬೦೦೦ ರೂ) ಗಳನ್ನು ಪಡೆದು ಮಳೆ ಸುರಿಸಿದನಂತೆ. ಅವನು ಕಾರ್ಯಕ್ಕೆ ಪ್ರಾರಂಭ ಮಾಡಿದ ಒಂದು ವಾರದಲ್ಲಿ ಈ ಹಣವು ವಸೂಲಾದ್ದಲ್ಲದೆ ಸ್ಟೇನಿಸ್ಲ ಸಂಸ್ಥಾನದ ರೈತರೂ ವರ್ತಕರೂ ಸೇರಿ ಅವನನ್ನು ಎಂಟು ವರ್ಷಗಳ ವರೆಗೆ ಮಳೆ ಸುರಿಸುವುದಕ್ಕಾಗಿ ನೇಮಿಸಿಕೊಂಡರು. ಅದಕ್ಕಿಂತ ಮೊದಲು ಆ ಸಂಸ್ಥಾನದಲ್ಲಿ ಮೂರು ವರ್ಷಕ್ಕೊಂದು ಸಾರಿ ಸರಿಯಾದ ಮಳೆಯಾಗುತ್ತಿತ್ತಂತೆ. ಮಳೆ ಸುರಿಯುವುದಕ್ಕೆ ಈತನು ಕೈಗೊಳ್ಳುವ ಕಾರ್ಯಗಳು ಆಶ್ಚರ್ಯಕರವಾಗಿವೆ. ಒಂದು ಪ್ರದೇಶದ ಅತ್ಯಂತ ಎತ್ತರ ಸ್ಥಳದಲ್ಲಿರುವ ಕೆರೆ ಕಟ್ಟೆ ಮೊದಲಾದ ಜಲಾಶಯದ ಪಕ್ಕದಲ್ಲಿ ಎತ್ತರವಾದ ಉಕ್ಕಿನ ಗೋಪುರಗಳನ್ನು ಕಟ್ಟುತ್ತಾನೆ. ಈ ಗೋಪುರಗಳ ಮೇಲೆ ಅನೇಕ ತಟ್ಟೆಗಳನ್ನಿಟ್ಟು ಅವುಗಳಲ್ಲಿ ಬಗೆಬಗೆಯ ರಸಾಯನಶಾಸ್ತ್ರ ವಸ್ತುಗಳನ್ನು ತುಂಬುತ್ತಾನೆ. ಈ ವಸ್ತುಗಳಿಂದ ಆ ಪ್ರದೇಶದಲ್ಲಿ ವಾತಾವರಣವು ಮಳೆ ಬರುವದಕ್ಕೆ ಅನುಕೂಲವಾಗಿ ಪರಿಣಮಿಸುತ್ತದೆ. ಕೆಲವರು ಇವನನ್ನು ನೋಡಿ ನಗುತ್ತಾರಲ್ಲದೆ, ಮತ್ತೆ ಕೆಲವರು ಮಳೆಯು ತನ್ನಷ್ಟಕ್ಕೆ ತಾನೇ ಬೀಳುತ್ತದೆನ್ನುವರು. ಆದರೂ ಎಷ್ಟೋ ಕಾಲ ಮಳೆ ಬೀಳದಿದ್ದ ಕಡೆಗಳಲ್ಲೆಲ್ಲಾ ಈತನು ಹೋಗಿ ಗೋಪುರಗಳನ್ನು ಕಟ್ಟಿ ಕೆಲಸಕ್ಕೆ ಪ್ರಾರಂಭಿಸಿದ ೪೮ ರಿಂದ ೬೦ ಗಂಟೆಗಳ ಕಾಲದೊಳಗಾಗಿ ಮಳೆ ಸುರಿದಿರುವುದು ಗೊತ್ತಾಗಿದೆ. ಈ ಸಂಗತಿಗಳು ನಿಜವಾಗಿದ್ದ ಪಕ್ಷದಲ್ಲಿ ಹ್ಯಾಟ್‌ಫೀಲ್ಡನು ವೃಷ್ಟಿಕರ್ತನೆಂದು ಕರೆಯಲು ಸಂದೇಹವಿಲ್ಲ. ಈ ವಿಷಯಗಳನ್ನು ಪ್ರಕಟಿಸಿರುವ ಪತ್ರಿಕೆಯಲ್ಲಿ ಸುಳ್ಳು ಸಮಾಚಾರಗಳು ಬರುವುದೇ ಇಲ್ಲವಾದುದರಿಂದ ಸಂಗತಿಯನ್ನು ನಾವು ನಿಜವೆಂದು ಹೇಳಬಹುದು. ಮಳೆ ಬರುವುದು ಹ್ಯಾಟ್‌ಫೀಲ್ಡನ ವಿಜ್ಞಾನ ಶಕ್ತಿಯಿಂದಲೋ ಅಥವಾ ಅವನ ಅದೃಷ್ಟದಿಂದಲೋ, ಹೇಗಾದರೂ ಅಂತಹವರು ನಮ್ಮ ದೇಶದಲ್ಲಿ ಒಬ್ಬರಿದ್ದರೆ ನಮ್ಮ ರೈತರಿಗೆ ಉಪಕಾರವಾಗಬಹುದು.

(ಒಕ್ಕಲಿಗರ ಪತ್ರಿಕೆ.)

'ಲೋಕರಹಸ್ಯ'ಕಾರರೂ, ಶ್ರೀ. ಗಂಗಾಧರರಾಯರೂ,

ಶ್ರೀ. ಕರವೀರ ರಾಘವೇಂದ್ರಾಚಾರ 'ಕನ್ನಡಿಗ'ನ ಟೀಕೆಯನ್ನು ವಿಮರ್ಶಿಸುವಾಗ, ಲೋಕರಹಸ್ಯಕಾರರು ಹೀಗೆ ಬರೆಯುತ್ತಾರೆ—

ದೇಶಭಕ್ತ ಗಂಗಾಧರರಾವ್ ದೇಶಪಾಂಡೆಯವರ ಮರ್ಜಿಯ ಶ್ರೀ. ವ. ಕೃ. ಕಡಪಾರವರ ಕನ್ನಡದ ಪ್ರೇಮಕ್ಕೂ ಜಗಳವಾಗಿ, ಆ ಜಗಳವು ಕಾರ್ಯತಃ ಮುಷ್ಟಿಯುದ್ಧಕ್ಕೆ ಪರಿವರ್ತಿತವಾಗತೊಡಗಿತ್ತು. ಅದು ನಡೆದು ಈಗ್ಗೆ ಎಂಟು ವರ್ಷಗಳಾದರೂ ದೇ. ಗಂಗಾಧರರಾಯರು ಅದನ್ನು ಮರೆಯಲಿಲ್ಲವೆಂದೂ ಆ ಮರೆಯದಿರೋಣವಿಂದಲೇ "ಕನ್ನಡಿಗ"ಕಾರರು ವೈಕುಂಠವಾಸಿಗಳ ವಿಷಯವಾಗಿ ಲೇಖನವನ್ನು ಬರೆಯಲು ಹೇಳಿ ಅವರು ಒಪ್ಪಿಕೊಂಡಿದ್ದರೂ ಬರೆಯಲಿಲ್ಲವೆಂದೂ ಅರ್ಥವಾಗುವಂತೆ ಆರೋಪಣೆಯಿದೆ. ಈ ಆರೋಪಣೆಯು ಯಥಾರ್ಥವಾಗಿ ನಿಜವಾಗಿದ್ದರೆ ಕರ್ಣಾಟಕದ ಅಧೋಗತಿಯ ಕಾರಣವನ್ನು ಇನ್ನೂ ಹೆಚ್ಚಾಗಿ ಹುಡುಕಬೇಕಾಗಿಲ್ಲ. ಅಂತಹ ವರ್ತನೆಗಳಲ್ಲಿ ವ್ಯಕ್ತಗೊಳ್ಳುವ ಹಗೆಗಾರತನದ ಆ ಕೀಳು ಬುದ್ಧಿಯು ನಮ್ಮಲ್ಲಿನ "ಆಲದ ಮರ"ಗಳಿಗೇ ಇದ್ದರೆ ಹರಳು ಗಿಡಗಳಾದ ಇನ್ನಿತರ ಸಾಮಾನ್ಯ ಕನ್ನಡಿಗರ ಬುದ್ಧಿಯು ಹೇಗಿದ್ದೀತು? ೨೨೫೦ ವರ್ಷಗಳ ಹಿಂದೆ, ಜಯಶಾಲಿಯಾದ ಅಲೆಕ್ಝಾಂಡರನು ಸೋತು ಹೋದ ಪೋರಸನ ಸತ್ಯತೆ ಮತ್ತು ಧೈರ್ಯಗಳನ್ನು ಕಂಡುಕೊಂಡು ಸನ್ಮಾನಿಸಿದನು. ಈ ವಿಂಸೆಯ ಶತಮಾನದಲ್ಲಿ ಆ ಬುದ್ಧಿಯು ನಮ್ಮ ಪ್ರಮುಖರಲ್ಲಾದರೂ ಇರದಿದ್ದರೆ ನಾವು ಎಷ್ಟು ಸಾವಿರ ವರ್ಷಗಳ ಹಿಂದೆ ಇದ್ದೇವೆಯೆಂದಾಯಿತು?

ಸ್ತ್ರೀ ವಿನೋದ.

"ನನ್ನ ತಾಯಿ." ಈ ವಿಷಯದ ಬಗ್ಗೆ ಮನೆಯಲ್ಲಿ ನಿಬಂಧವನ್ನು ಬರೆದು ಕೊಂಡು ಬರಬೇಕಾಗಿ ಗುರುಗಳು ವಿದ್ಯಾರ್ಥಿಗಳಿಗೆ ಆಜ್ಞಾಪಿಸಿದ್ದರು. ಮರುದಿನ ಅವನ್ನು ಪರೀಕ್ಷಿಸುವಾಗ್ಗೆ ಎರಡು ನಿಬಂಧಗಳು—ಅಣ್ಣತಮ್ಮಂದಿರವು ಒಂದೇ ಬಗೆಯಾಗಿದ್ದವು. 'ರಾಮಾ, ನಿನ್ನ ಅಣ್ಣನಂತೆಯೇ ನಿನ್ನ ನಿಬಂಧವಿದೆಯಲ್ಲ? ಎಂದು ಗುರುಗಳು ಕೇಳಲು, ಕೂಡಲೇ ಅಯ್ಯನವರೆ, ನಮ್ಮಿಬ್ಬರಿಗೂ ಒಬ್ಬಳೇ ತಾಯಿಯಲ್ಲವೆ.? " ಎಂದುತ್ತರ ಬಂದಿತು!

ತರುಣಿಃ—ನೋಡು, ಮಳೆಯಾಗುವ ಚಿಹ್ನವು ಹೆಚ್ಚುತ್ತದೆ. ಲಾಲಬಾಗಿಗೆ ನಾಳೆ ಹೋಗುವಾ.

ನಟೇಶಃ—ಹಾಗಾಗದಮ್ಮಾ! ನಾನೀಗಾಗಲೇ 'ಡೈರಿ'ಯಲ್ಲಿ ಬರೆದಿಟ್ಟಿರುವೆನು!

|| ಶ್ರೀ ಶಂಕರಾಯ ನಮಃ ||

ಶ್ರೀ|| ಬಸವಲಿಂಗಸ್ವಾಮಿ ಕುಲಕರ್ಣಿ ಮಾಮಲೇದಾರ ಹುನಗುಂದ ಇವರ

ವಿಯೋಗ.

ತಾ|| ೨೨ | ೪ | ೧೯೨೭.

|| ಭಾಮಿನೀ ಷಟ್ಪದಿ ||

ವೀರಶೈವ ಸಮಾಜವೇ ನೀ |
ಭೂರಿತರವಾದ ನಿನ್ನ ಯೋಗ್ಯಿಯ |
ಕೋರಿ ಹೆಣಗುವ ವೀರ ಜನವನ್ನಗಲುತಿಹಯೆಂತು ?
ನಾರದಮುನಿನ ಶಂಭುಲಿಂಗನೆ |
ಧೀರಜನರನ್ನೊಯಿದು ನಮ್ಮನು |
ಭೂರಿಶೋಕಾತುರನು ಮಾಳ್ಪದು ನೇರುವದೆ ನಿನಗೆ || ೧ ||

ಪಾವನಾತ್ಮನು ತಾನು ಪ್ರೇಮದಿ |
ಪಾವನಾತ್ಮನ ಮುಂಡಲಿಚ್ಛಿಸಿ |
ರೇವಣೇಶನನೊಯಿದ ತಾಪವು ಮರೆಯುವದರೊಳಗೆ
ಕೋವಿದನ ಶ್ರೀ ಬಸವಲಿಂಗನ |
ಜೀವವನ್ನೊಯ್ಯುತಲೆ ದುಃಖದ |
ನೋವಿಗೊಂದತಿ ಸಹಿಸಲಾರದ ಬರೆಯನಿತ್ತಕಟಾ || ೨ ||

[ರೇವಣೇಶನೆಂದರೆ- ರೇವಣಸಿದ್ಧಸ್ವಾಮಿ ಕಿತ್ತೂರ ಧಾರವಾಡ]

ವೀರಶೈವರ ಕುಲದೊಳಗೆ ಒಬ್ಬ |
ವೀರನೆನಿಸಿದ ಬಸವಲಿಂಗನು |
ವೀರಶೈವರನಗಲಿ ಪೋಗಲು ಖೇದವೆನಿಸುವದು .
ವೀರಶೈವೋನ್ನತಿಗೆ ತಾ ಬಲು |
ವೀರತನದಲಿ ಯತ್ನ ಮಾಡಿದ |
ವೀರವರ್ತಿಯ ವಿರಹದಿಂದತಿ ತಾಪವಾಗುವದು || ೩ ||

ಯೋಗಿವರ್ಯ ಕುಮಾರಸ್ವಾಮಿಯು ||
ಜಗದೊಳ್ ನಿರ್ಮಿಸಿದ ಪರ ಶಿವ— |
ಯೋಗಮಂದಿರ ಸೇವೆಗೋಸುವ ದೇಹ ಸವೆಸಿದನು ||
ಆ ಗಹನ ಭಕ್ತಿಯನು ಕಂಡನು |
ಜಗದೊಳ್ ಶ್ರೀ ಶಿವನು ಕರೆಯಲು |
ನೀಗಿ ಲೋಕದ ಮೋಹವನು ತೆರಳಿದನು ಹರನೆಡೆಗೆ || ೪

ಪರಮ ಪ್ರೇಮದ ವರಸುಪುತ್ರನು |
ಹರನ ಸನ್ನಿಧಿಯನ್ನು ಪೊಂದಲು |
ನರವಿಗಳಕಟಾ ಪುತ್ರಹೀನರಿಗಿಲ್ಲಗತಿಯೆಂದು ||
ತ್ವರೆಯೊಳಗೆ ನಿಜಮುಕ್ತಿ ದಾತನ |
ಪರಮಪಾವನ ಚರಣಗಳನತಿ |
ಸ್ಮರಣ ಮಾಡುತ ತೆರಳಿಪೋದನು ತಾನು ಶಿವನಡಿಗೆ || ೫ ||

ಬರಹ ಕಲಿತಿಹ ಸಾರ್ಥಕತೆಯನು |
ಸರಿಯು ಹದನದಿ ಮಾಡಲಿಚ್ಛಿಸಿ |
ಪರಮ ಪ್ರೇಮದಿ ಬರೆದು ಹರನಡಿಗಳನೆ ನುತಿಸಿದನು |
ಸಿರಿಯು ಮೆಚ್ಚುತ ಸಾರ್ಥಕಾಗದೆ |
ಸಿರಿಯು ಸೌಖ್ಯದ ಮೂಲವೆನ್ನದೆ |
ಸಿರಿಯು ಕನಸೆಂದರಿತು ಶಿವನಡಿಗಳನೆ ಭಜಿಸಿದನು || ೬ ||

ರಾಜಿಸಿರೆ ಹುನಗುಂದದೂರಿಗೆ |
ರಾಜಿಸುತ್ತಿರೆ ಗುಣಗಣದಿ ಸಲೆ |
ಮಾಜಿಸೋಗಲು ಮರೆಯುತೆಮ್ಮನು ದುಃಖಸಾಗರದೋಳ್ ||
ತೇಜದಿಂದತಿ ಹೊಳೆವ ದೇಹವ |
ಮಾಜಿಸಲು ಮಣ್ಣೊಳಗೆ ಜನರೊಳು |
ರಾಜಿಸಿತು ದುಃಖಾಗ್ನಿಯೆಂಬುದು ಕಾಡುಬೇಗೆಯೊಲು || ೭ ||

ಮರಣವಾರ್ತೆಯ ಕೇಳಿದೋ ನೀಯೆ |
ಹರಣಹಾರಿತು ಸಕಲ ಜನರದು |
ತರಣಿವಿರಹದಿ ತಮದ ತೆರದೊಳು ದುಃಖ ಪಸರಿಸಿತು ||
ಹರನೆ ಹತದೈವಿಗಳನೆಮ್ಮನು |
ಪರಮಕಷ್ಟಕೆ ಗುರಿಯ ಮಾಡಿದೆ |
ಮರೆಯಬೇಕೆಂತೆನುತ ಬಳಗವು ಶೋಕತಪ್ತವಾಯ್ತು || ೮ ||

ಇಂದುಧರನನು ತುಷ್ಟಮಾಡಲು |
ಮುಂದಿರೊನ್ನತೆಗಾಗಿ ಪ್ರೇಮದಿ |
ಚಂದಿರನು ಕೊಟ್ಟನು ರೂಪಾಯಿಗಳೈದು ಸಾವಿರವ ||
ಪಂದ್ಯನಲ್ಲನೆ ಯಿಂಥದಾನಿಯು |
ಮಂದಿರಕೆ ಹೆಣಗಲ್ಕೆ ಸಕಲರಿ- |
ಗೊಂದ ಪಾಠವ ಕಲಿಸಿದನು ಬಾಂಧವರೆ ನೆನಪಿಡಿರಿ || ೯ ||

ಅಂತ್ಯಕಾಲದಿ ಮನುಜರೆಲ್ಲರು |
ಚಿಂತೆಗೊಳಿಪರು ಸತಿಸುತರಿಗೆಯೆ |
ಕಂತುಹರನಾವಾಸವಾಗಿಹ ಮಂದಿರದಿ ಶವವ |
ಸಂತಸದೊಳಿರಿಸುವದೆ ಬಸವನ |
ಚಿಂತೆಯಾಯ್ತಿಹಪೆಂಥ ಬಯಕೆಯು |
ಇಂಥ ಭಕ್ತಿಯ ಜನಗಳನು ನಾನೆಂತುಬಣ್ಣಿಸಲಿ || ೧೦ ||

ನೀಲಕಂಠನೆ ಶೂಲಪಾಣಿಯೆ |
ಫಾಲನೇತ್ರನೆ ಪಾವನಾತ್ಮನೆ |
ಪಾಲಿಸೈ ನೀ ಬಸವಲಿಂಗಗೆ ಶಾಂತಿಸುಖಗಳನು ||
ಕಾಲಕಾಲಕೆ ನಿನ್ನ ನುತಿಸುತ |
ಲೀಲೆಯಿಂದಲಿ ನಿನ್ನ ಪೊಂದಿದ |
ಪಾಲಿಸೈ ನೀ ನಿನ್ನ ಚರಣದ ಸೇವೆಯನು ಮುದದಿ || ೧೧ ||

ಈ ಮಹಾ ಪುರುಷನ ಚರಿತೆಯನ್ನು ಕೇಳಿ ಈತನ ಸ್ಮಶಾನ ಯಾತ್ರೆಯನ್ನು ಕಣ್ಣಾರೆ ಕಂಡು ಸ್ಮಶಾನವೈರಾಗ್ಯದಿಂದ ಪ್ರೇರೇಪಿಸಲ್ಪಟ್ಟ ಕವಿಯ ಮನಸ್ಸಿನಲ್ಲಿ ಈ ಪ್ರಕಾರ ವೈರಾಗ್ಯದ ವಿಚಾರಗಳು ಹುಟ್ಟಿದವು:—

ಪೋಗಲಾತ್ಮವು ತ್ಯಜಿಸಿ ದೇಹವ- |
ನಾಗಲದು ಮೃತವೆಂದು ತಿಳಿಯುತ |
ನೀಗಿ ಕರುಣವ ಹೂಳಿಬಿಡುವರು ಕೂಡೆ ನೆಲದೊಳಗೆ ||
ಹಾ! ಗಹನ ಪ್ರೇಮದ ಶರೀರವ |
ನೀಗುವದು ನಿಜವಕಟ ಸಕಲರು |
ತ್ಯಾಗಮಾಳ್ಪುದು ವಿಹಿತವಲ್ಲನೆ ದೇಹಮಮತೆಯನು! || ೧೨ ||
ಜನನಿಜನಕರು, ತನುಜರನುಜರು, |
ವನಿತೆ, ಕುಮರಿಯು, ಸಕಲ ಬಳಗವು |
ವನಜ ಪತ್ರದ ಮೇಲೆ ಇರುತಿಹ ನೀರು ಗುರುಳೆಯೊಲು ||

ಧನ, ಕನಕ, ವಸ್ತ್ರಗಳು, ಯೌವನ, |
ಕನಸುಮೃಗಜಲದಂತೆಯುಕಟಾ |
ಇನಿತು ಇವುಗಳಿಗೇಕೆ ಮೋಹಿಸಿ ನಾವು ಸಾಯುವದು || ೧೩ ||
ಜಗದೊಳೆಮ್ಮಯ ಜೀವನಕ್ರಮ, |
ಸೊಗಸು, ಶಾಂತತೆ, ಸರ್ವಸುಖಗಳು |
ಬಗೆಯಲಕಟಾ ನಿಮಿಷಮಾತ್ರದಿ ನಾಶವಾಗುವವು ||
ಅಗಜೆಯಾಣ್ಮನ ಚರಣಸೇವೆಯು |
ಸಿಗಲು ಲಯವಾಗುವದು ದುಃಖವು |
ಹಗಲಿನಾಣ್ಮನು ಹಿಂಜಿಸಲು ಲಯವಪ್ಪ ತಮದಂತೆ || ೧೪ ||
ಜನನಮರಣಗಳನ್ನು ನೀಗುತ |
ಘನಮಹಿಮ ಶಿವ ನಿಮ್ಮ ಧ್ಯಾನವ |
ದಿನದದಿಂದಲಿ ಮಾಡುವಂತಹ ಜನ್ಮನೀಡೆನಗೆ ||
ಎನುತ ಹರನಿಗೆ ಬೇಡಿಕೊಂಬರೆ |
ಅನಘಹೃದಯನ ಕರುಣದಿಂದಲಿ |
ಜನನಮರಣದ ಬಾಧೆತಪ್ಪುತ ಸುಖವು ಲಭಿಸುವದು || ೧೫ ||

ಓಂ ಶಾಂತಿಃ ! ಶಾಂತಿಃ !! ಶಾಂತಿ !!!

ಜಗದೀಶ್ವರನು ಶ್ರೀ ಬಸವಲಿಂಗ ಸ್ವಾಮಿಗಳವರ ಆತ್ಮಕ್ಕೆ ಸುಖಶಾಂತಿಗಳನ್ನೀಯಲೆಂದು ಅನನ್ಯಭಾವದಿಂದ ಹಾರೈಸುವ,

"ಸಜ್ಜನ ವಿಧೇಯ"

ಸುಬುದ್ಧಿ ಚನ್ನಬಸವೇಶ್ವರ ಹಿರೇಮಠ,
ವಿದ್ಯಾರ್ಥಿ, ಬೆಳಗಾಂವ.

ವಿಜಾಪೂರ ಜಿಲ್ಹೆಯ ಸುದ್ದಿಗಳು.

(ನಮ್ಮ ಸ್ವಂತ ಸುದ್ದಿಗಾರನಿಂದ)

ವಿಜಾಪೂರ ಶ್ರೀ ಉಪಾಧ್ಯೆ ಮಾಸ್ತರರ ಮನೆಯಲ್ಲಾದ ಕಳವು 'ಸೆಟ್ಲಮೆಂಟಿನ' ಜನರಿಂದ ಮಾಡಲ್ಪಟ್ಟಿದೆಯಾಗಿ ಗೊತ್ತಾಗಿದೆ. ಹೆಚ್ಚಿನ ಚೌಕಶೀ ನಡೆದಿದೆ

ಶ್ರೀ ಗದೂಗದ ನಾಟಕ ಕಂಪನಿಯ ಕಾರ್ಯಕ್ರಮಗಳು ಸಾಗಿವೆ ದೊಡ್ಡ ಕಂಪನಿಗೆ ತಕ್ಕಂತೆ ಉತ್ಪನ್ನವಿದ್ದಂತೆ ಕಾಣುವದಿಲ್ಲ ಇವರು ಸೊಲ್ಲಾಪೂರಕ್ಕೆ ಹೋಗುವರೆಂದೂ, ಹಾನಿ ತಟ್ಟಿದರೂ ಸಹ ಅಲ್ಲಿಯ ಕನ್ನಡಿಗರಲ್ಲಿ ಜಾಗ್ರತೆಯನ್ನುಂಟು ಮಾಡುವದು ಒಂದು ತಿಂಗಳು ಇರುವರೆಂದೂ ಕೇಳುತ್ತೇವೆ. ನಿಜವಿದ್ದರೆ ನಾಟಕಾಲಂಕಾರರಿಗೆ ಇದು ಭೂಷಣವೇ ಸರಿ.

ಶ್ರೀಮದ್ ಬಸ ಜಯಂತಿಯು ಒಳ್ಳೆ ಸಡಗರದಿಂದಾಯಿತು.

'ಮುಂದಾಳು'ವಿನಲ್ಲಿ ಹೋದ ಸಾರೆ ಮ್ಯಾಟ್ರಿಕ್ ಪರಿಕ್ಷೆಯ ಪರಿಣಾಮವನ್ನು ಕೊಡಲಿದ್ದಂತೆ ಅವರಲ್ಲಿಯ ತಪ್ಪುಗಳಿಗೆ ಕೊನೆಯಿಲ್ಲ ಯಾರ ಕಣ್ತಪ್ಪೋ ಏನೋ ? ಮತ್ತೊಂದು ಮಾತು, 'ಪತ್ರವ್ಯವಹಾರ'ದಲ್ಲಿ 'ಗೀರ್ವಾಣ........ನಿರ್ವಾಣ' ಲೇಖ ಬಂದಿದೆ. ನಗಬೇಕೋ ಅಳಬೇಕೋ !?

ಹುನಗುಂದ ವೀರಶೈವ ತರುಣ ಸಂಘದ ಒಸೇ ಪರಸ್ಪತ್ತು ವೈಭವದಿಂದ ಕೊನೆಗಂಡಿತು ಕರ್ನಾಟಕ ಏಕೀಕರಣಕ್ಕಾಗಿ ಬೆಂಬಲವೂ, ಕಾಯದೆ ಮಂಡಳಗಳಲ್ಲಿಯ ಸಭಾಸದರಿಗೆ ಏಕೀಕರಣದ ಬಗ್ಗೆ ಎಚ್ಚರಿಕೆಯೂ ಕೊಡಲ್ಪಟ್ಟವು ಈ ಸಂಘದವರು, ಬಡ ವಿದ್ಯಾರ್ಥಿಗಳಿಗೆ ಊಟದ ಪಾಗಾರ ಸಹಾಯ ಕೊಡಬೇಕಾಗಿ ನಿರ್ಧರಿಸಿದ್ದರೆ

ಬಾಗಲಕೋಟೆ ಬೇಮೂರಲ್ಲಿ ಪ್ರಿಯರಾಗಿದ್ದ ಧತ್ತರಗಿಯ ಶಾಲೆಯ ಶಿಕ್ಷಕರನ್ನು ಒಮ್ಮಿಂದೊಮ್ಮೆ ಕಾರಣವಿಲ್ಲದೇ ವರ್ಗ ಮಾಡಿದ್ದಕ್ಕಾಗಿ ಜನರಲ್ಲಿ ಅಧಿಕಾರಿಗಳ ಬಗ್ಗೆ ತಿರಸ್ಕಾರ ಹುಟ್ಟಿದೆ.

ಸೀತೀಮನೆಯಿಂದ ಸಂಗಮದ ವರೆಗೆ ಮಧ್ಯದಲ್ಲಿ ಹೊಸೂರ, ಮಂಕಣಿ, ಹಿರೇಮ್ಯಾಗೇರಿ ಮೊದಲಾಗಿ ಇವು ದೊಡ್ಡ ಊರುಗಳಿದ್ದು ಈ ಊರುಗಳಲ್ಲಿ ಶಾಲೆಗಳಿಲ್ಲ ಇಲ್ಲಿ ಶಾಲೆಗಳಾದರೆ ಇವುಗಳ ಸುತ್ತಲಿನ ಹಳ್ಳಿಯ ಜನರಿಗೂ ಅನುಕೂಲವಾಗುವದು. ಹಿರೇಮ್ಯಾಗೇರಿಯಲ್ಲಿ ದೊಡ್ಡ ಗಾವಠೀ ಶಾಲೆ ಇರುತ್ತಿದೆ. ಇವುಗಳ ಕಡೆಗೆ ಸಕ್ಕಲ ಬೋರ್ಡು ಕಣ್ಣು ತೆರೆದು ನೋಡುವದೋ ?

ಮುದ್ದೇಬಿಹಾಳ ಆಲಮಟ್ಟಿಯಲ್ಲಿ "ವೀರಶೈವ ವಿದ್ಯಾಲಯ" ಸ್ಥಾಪನಾ ಕಾರ್ಯವು ಇದೇ ವೈಶಾಖ ಶು|| ೧೨ ಶುಕ್ರವಾರ (೧೩-೫-೧೯೨೭) ಪ್ರಾತಃಕಾಲ ೮|| ಗಂಟೆಗೆ ಮಮದಾಪುರ ವಿರಕ್ತ ಮಠದ ಬ್ರಹ್ಮ ಶ್ರೀ ಪಂಡಿತ ಮಹದೇವ ಶ್ರೀಗಳವರಿಂದ ಜರುಗಿಸಲ್ಪಡುವುದು.

ಬದಾಮಿ ಬಸವೇಶ್ವರ ಜಯಂತ್ಯುತ್ಸವವು ವಿಜೃಂಭಣೆಯಿಂದ ನೆರವೇರಿಸಿತು. ತಾಲೂಕ ಪ್ರಾಥಮಿಕ ಶಿಕ್ಷಕರ ಸಹಕಾರಿ ಸಂಘದ ವಾರ್ಷಿಕ ಸಭೆಯಾಯಿತು. ಈ ಬಗ್ಗೆ ಹೆಚ್ಚಿನ ಸುದ್ದಿ ಮುಂದಿನ ವಾರದಲ್ಲಿ.

ಬೆಳಗಾವಿ ಪೇಠಾ.

ಗಲಗಲಿಯಲ್ಲಿ ಹಣಮಜ್ಜಯಂತಿಯ ಉತ್ಸವವಾಯಿತು. ಸಾಯಂಕಾಲಕ್ಕೆ ನಾಗೇಶಭಟ್ಟ ಜೋಶಿ ಬಿ. ಎ ಇವರ ಅಧ್ಯಕ್ಷತೆಯಲ್ಲಿ ಹಣಮಂತರಾವ ಕೌಜಲಗಿ ಇವರು ಹಣಮಜ್ಜಯಂತಿಯ ವಿಷಯವಾಗಿ ವ್ಯಾಖ್ಯಾನ ಕೊಟ್ಟರು. ಅಲ್ಲಿಂದ ಅಧ್ಯಕ್ಷರು ಸ್ವಲ್ಪ ಮಾತಾಡಿ ಸಭೆ ವಿಸರ್ಜನೆ ಮಾಡಿದರು.

ಇಂಡೀ ತಾಲೂಕ ತಡ್ಲಗಿಯಿಂದ ಇಂಡಿಗೆ ಬರುವ ದಾರಿಯಲ್ಲಿ ಮಧ್ಯಾಹ್ನದ ಮೂರು ಘಂಟೆಯ ಸಮಯಕ್ಕೆ ಇಂಡಿಯ ವ್ಯಾಪಾರಿಯೋರ್ವನನ್ನು ಒಡೆದು ಸುಮಾರು ೧೨೦ ರೂಪಾಯಿ ಸುಲಿದುಕೊಂಡು ಹೋಗಿದ್ದಾರೆ!

ತಡ್ಲಗಿ ಈ ಊರಲ್ಲಿ ಒಬ್ಬನ ಕೊಲೆಯಾಗಿದೆ. ಸರಕಾರದವರ ಶೋಧ ನಡೆದಿದೆ.

ಹೊರಕೇರಿ ಹೊರತಿ, ಅಗಸನಾಳ ಗ್ರಾಮಗಳ ಮಧ್ಯದಲ್ಲಿ ಲೋಣಿ ಮತ್ತು ಗೋಟಿಹಾಳ ಗ್ರಾಮದ ದಾರಿಕಾರರನ್ನು ಬಡಿದು ಸುಲಿದು ಕೊಂಡಿದ್ದಾರೆ. ಗೋಟಿಹಾಳದವನೊಬ್ಬನಿಗೆ ವಿಶೇಷ ಪೆಟ್ಟು ತಗಲಿದೆ

ಜೀರಂಗಿ ಜೇವರಗಿ ಗ್ರಾಮಗಳಲ್ಲಿಯು ಸಹಕಾರಿ ಸಂಘಗಳು ಅವ್ಯವಸ್ಥೆಯ ಮೂಲಕ ನಿಲ್ಲಿಸಲ್ಪಟ್ಟ ಸುದ್ದಿಯಿದೆ.

ಸಿಂದಗಿ ತಾಲೂಕ ಚಾಂದಕವಠೆಯಲ್ಲಿ ಒಬ್ಬನ ಮೂಗು ಕೊಯ್ದಿರುವರು, ಇನ್ನೊಬ್ಬನ ಎರಡು ಕಣಕಿ ಬಣವೆಗಳನ್ನು ಸುಟ್ಟಿರುವರು! ಸರಕಾರದಲ್ಲಿ ಫಿರ್ಯಾದು ಆದ ಸುದ್ದಿಯಿದೆ.

ರಾಮದುರ್ಗ ಸಂಸ್ಥಾನ.

ರಾಮದುರ್ಗದಲ್ಲಿ ಒರ್ವ ಶಿಕ್ಷಕ ಹುಡುಗಿಗೆ ಮುಸಲ್ಮಾನನೋರ್ವನು ಅಪಮಾನ ಮಾಡಿದ್ದಕ್ಕಾಗಿ, ಹಿಂದು ಮುಸಲ್ಮಾನರಲ್ಲಿ ಭಯಂಕರವಾದ ಕಲಹವೆದ್ದಿದೆ. ರಾಮದುರ್ಗ ಪಟ್ಟಣವು ಲಷ್ಕರೀ ಜನರಿಂದ ರಕ್ಷಿಸಲ್ಪಟ್ಟಿದೆ ಆದರೂ ಜನರಲ್ಲಿ ಶೀಘ್ರ ತಿಳುವಳಿಕೆ ಕ್ಷಾವ ಲವಲವಿಕೆಯು ಇದೆ.

ಕಲರಾ ಎಂಬ ವಾಂತಿಬೇದಿ

ನಿಮ್ಮ ಊರಿನಲ್ಲಿ ಇದ್ದರೆ ಭಯಪಡಬೇಡಿ

ನೀವು ಅದನ್ನು ನಿಗ್ರಹಿಸಿಕೊಳ್ಳಬೇಕಾದರೆ

ಹೆನ್‌ಲೀಸ್ ಓಮಂ ಕರ್‌ಪೂರ

ಸುಲಭವಾಗಿ ತಿನ್ನಬಹುದು.

ಸ್ವಲ್ಪ ತಣ್ಣೀರಿನಲ್ಲಿ ಅರ್ಧ ಟೀಸ್ಪೂನ್ ಅಳತೆ ಮೇಲೆ ತಿಳಿಸಿರುವಂಥ ಔಷದವನ್ನು ಹಾಕಿ ಯಾವ ಕಾಲವಲ್ಲಾದರು ಎಲ್ಲಿಯಾದರು ಎಷ್ಟುಸಲ ಬೇಕಾದರು ತಿನ್ನಬಹುದು. ಕಳೆದ 50 ವರ್ಷಗಳಿಂದ ವಿಷಬೇದಿಯನ್ನು ಸಕಲ ಹೊಟ್ಟೆನೋವು ಮೊದಲಾದ ವುಪದ್ರಗಳನ್ನು ಎಷ್ಟೋ ಜನಗಳಿಗೆ ಗುಣವಾಗಿ ಹೆಸರುಹೋದದ್ದು.

ಉತ್ತಮವಾದ ಔಷದವೆಂದು ಪರಿಶೋಧಿಸಿ ಶ್ಲಾಘ್ಯವಾದದ್ದು. ಮೇಲೆ ತಿಳಿಸಿರುವಂಥ ವ್ಯಾಧಿಗಳನ್ನು ಗುಣವನ್ನು ಮಾಡುವಂಥಾದ್ದು. ಪುನಹ ಆ ವ್ಯಾಧಿಗಳು ಬಾರದೇ ಇರುವಹಾಗೆ ಮಾಡುವಂಥಾದ್ದು ಈ ಔಷಧವು.

ಈ ಔಷದವನ್ನು ವುಪಯೋಗಿಸಿದವರಲ್ಲಿ ಒಬ್ಬರು ಇದರಿಂದ ಏಳುಮಕ್ಕಳೂ ಮತ್ತು ಮೂರುಜನ ಹೆಂಗಸರೂ ಸೌಖ್ಯಪಟ್ಟಿರುತ್ತಾರೆ ಎಂದು ಹೇಳಿದರು. ಮತ್ತೊಬ್ಬರು ಕಲ್‌ರಾ ಬಂದಿರುವಂಥ ನಾಲ್ಕು ಜನಗಳು ಈ ಔಷಧವನ್ನು ತಿಂದು ಬದುಕಿರುತ್ತಾರೆ ಎಂದು ತಿಳಿಸಿದರು.

ನಿಮಗೆ ವಾಡಿಕೆಯಾಗಿರುವಂಥ ಔಷಧ ಅಂಗಡಿಯಲ್ಲಿ ಒಂದು ಸೀಸಾಯಿ ಔಷದವನ್ನು ತೆಗೆದುಕೊಳ್ಳಿ.

ಇಲ್ಲದಿದ್ದರೆ **ಬೆಂಗಳೂರು** ಕಂಟ್ಟೋನ ಮೆಂಟ್ ಹೊಸ ಮಾರ್ಕೆಟ್ ಸ್ಕ್ವಯರ್ 47–49 ನಂ

ಮೆಸ್‌ಸರ್‌ಸ್ ಡಿ. ಸೈಯದ್ ಹೂಸ್‌ಮಾನ್ ಅಂಡ್ ಕಂಪನಿಯವರಿಗೆ

ಬರೆದು ತರಿಸಿಕೊಳ್ಳುವುದು.

Sole Manufacturers

LITTLE'S ORIENTAL BALM AND PHARMACEUTICALS

LIMITED.

15 Armenian Street, *MADRAS*

ನೋಟೀಸು

ರಾ|| ರಾ|| ಶಿವಲಿಂಗಪ್ಪಾ ಬಿನ್ನ ನಾಗಪ್ಪಾ ಹುಚ್ಚಬಾಳಪ್ಪನವರ ಸಾ|| ಕಮತಗಿ ಇವರಿಗೆ:—

ನಿಮಗೆ ಸಹಿ ಮಾಡಿದವರ ಕಡೆಯಿಂದಾ ತಿಳಿಯಪಡಿಸುವದೇನಂದರೆ, ನೀನು ಬಾಗಲಕೋಟಿ ಕನ್ನಡಿಗ ವರ್ತಮಾನ ಪತ್ರದಲ್ಲಿ ತಾ|| ೧೫-೪-೨೭ ನೇ ದಿವಸ ಕೊಟ್ಟ ಜಾಹೀರ ನೋಟೀಸಿನ ಮಜಕೂರ ತಿಳಿಯಿತು. ಅದರಲ್ಲಿ ಮೃತ ನನ್ನ ಗಂಡನಾದ ರೇವಣಪ್ಪಾ ನಾಗಪ್ಪಾ ಹುಚ್ಚಬಾಳಪ್ಪನವರ ಈತನ ಸ್ವಾವರ ಆಸ್ತಿ ಅಂದರೆ ಕಮತಗಿ ಗ್ರಾಮದಲ್ಲಿ ಶಿವಲಿಂಗಪ್ಪಾ ಗೌಡರ ಓಣಿಯಲ್ಲಿ ಇರೋ ಇದುಲಾವಳ್ಳ ಮನಿ ಬೈಲಜಾಗಾ ಸಹಿತಾ ಮತ್ತು ಜಂಗಮ ಜೋಡಿಗಿ ಮಾಡಿಕೊಂಡು ಹೋಗತಕ್ಕೆ ಅಂತಾ ಜ್ಯಾಹಿರ ನೋಟೀಸಿನಲ್ಲಿ ನಮೂದ ಮಾಡಿರುತ್ತೀರಿ.

ಅಂದರೆ ಈಗ ಈ ನೋಟೀಸಿನಿಂದಾ ನಿಮಗೆ ತಿಳಿಸುವದೇನಂದರೆ, ಸದರ ಕಮತಗಿ ಗ್ರಾಮದಲ್ಲಿ ಶಿವಲಿಂಗಪ್ಪಾ ಗೌಡರ ಓಣಿಯಲ್ಲಿ ಇರೋ ಇದುಲಾದ ಮನಿ ನಾನು ತಾ|| ೭-೫-೨೪ ನೇ ದಿವಸ ಮಾಲ್ಕಿ ಪತ್ರ ನಂಬರದಿಂದ ನನ್ನ ಸದರ ಮನಿಯ ಪೂರ್ಣ ಮಾಲೀಕಳು ಹಕ್ಕದಾರಳು ವ ಕಬಜೆದಾರಳು ಇದ್ದೇನೆ ಇದರ ಮೇಲೆ ಯಾರದು ಯಾವತರದ ಹಕ್ಕ ವ ಸತ್ತಾ ಇರೋದಿಲ್ಲಾ. ಸದರ ಮನಿಯನ್ನು ನನ್ನ ಮರ್ಜಿ ಪ್ರಕಾರಾ ವಿಲ್ಹೆವಾಟ ವಗೈರೆ ಮಾಡಲಿಕ್ಕೆ ನಾನು ಮಾಲೀಕಳು ಇದ್ದೇನೆ. ಹೀಗಿದ್ದು ಈಗ ನೀವು ಕೊಟ್ಟ ಜಾಹೀರ ನೋಟೀಸ ಗೈರ ಕಾಯಿದೇಶೀರ ಅದೆ. ಕಾರಣ ನೀವು ಕೊಟ್ಟ ನೋಟೀಸ ನೋಟೀಸಿನ ಮೇಲಿಂದಾ ರದ್ದು ಮಾಡುತ್ತದೆ ತಿಳಿಯಿರಿ. ತಾ ೬ ಮಾಹೆ ಮೇ ಸನ್ ೧೯೨೭ ಇಸ್ವಿ

ಈ ಎಡಗೈ ಹೆಬ್ಬಟ್ಟಿನ ಗುರ್ತ ಮಲ್ಲವ್ವಾ ಗಂಡಾ ರೇವಣಪ್ಪಾ ಹುಚ್ಚಬಾಳಪ್ಪನವರ ಇವಳದು ಅದೆ.

ಪ್ರೆಸಿಡೆಂಟರಾದ ಮೈಸೂರು ಸಂಸ್ಥಾನಕ್ಕೆ ಜುಲೈ ತಿಂಗಳ ಕೊನೆಗೆ ಬರುವರೆಂದು ತಿಳಿಯಬರುತ್ತದೆ. ಅವರ ಸ್ವಾಗತದ ಕಾರ್ಯಗಳು ಅತಿ ತ್ವರೆಯಿಂದ ನಡೆಯುತ್ತಿರುವವು. ಬೆಂಗಳೂರು ಮುನಸಿಪಾಲಿಟಿಯವರು ವಿಶ್ವೇಶ್ವರ ೧,೦೦೦ ರೂಪಾಯಿಗಳನ್ನು ಮಂಜೂರು ಮಾಡಿರುವರು. ನಗರ ಶೃಂಗಾರವೂ ಈಗ ಬಹಳ ಜೋರಾಗಿ ನಡೆಯುತ್ತಿರುವದು.

ಲಿಟಲ್ ಕಂಪನಿಯ ವರದಿಯು.

“ಲಿಟಲ್ ಓರಿಯಂಟಲ್ ಬಾಕ್ಸ್ ಆ್ಯಂಡ ಫಾರ್ಮ್ಯಾಕ್ಯೂಟಿಕಲ್ಸ ಲಿಮಿಟೆಡ್” ಈ ಕಂಪನಿಯ ೮ನೇ ವಾರ್ಷಿಕ ಸಭೆಯು ಎಪ್ರೀಲ ೨೯ನೇ ತಾರೀಖಿನ ದಿನ ನೆರೆಯಿತು. ಕಳೆದ ವರ್ಷದ ಲೆಕ್ಕಪತ್ರಿಕೆಯು ಸ್ವೀಕೃತವಾಯಿತು. ಈ ವರ್ಷದಲ್ಲಿ ಹೆಚ್ಚಾಗಿ ವ್ಯಾಪಾರವಾದ ಸಂಗತಿಯನ್ನೂ ಮತ್ತು ಕಂಪನಿಯು ಊರ್ಜಿತ ಸ್ಥಿತಿಗೆ ಬಂದದ್ದನ್ನೂ ಇದಕ್ಕೆ ಡಾಯರೆಕ್ಟರ ಜನರು ತಮ್ಮ ಸಮ್ಮತಿಯನ್ನು ಕೊಟ್ಟ ಸಂಗತಿಯನ್ನೂ ಅಧ್ಯಕ್ಷರಾದ ಶ್ರೀ. ಹಾವರ್ಡ್ ಓಕ್ಲೆಯವರು ನಿವೇದನ ಮಾಡಿದರು.

ಬ್ರಿಟಿಶ ಆಲ್ ಅಲೈಲಾಯಡ್ ಕಂಪನಿಯು ಟಿ. ಸಿ. ಪಿ. ಎಂಬ ಔಷಧಕ್ಕೆ ತಮ್ಮ ಕಂಪನಿಯು ಸೋಲ ಎಜಂಟರಾಗಿ ನೇಮಿಸಲ್ಪಟ್ಟ ಸಂಗತಿಯನ್ನೂ ಅರುಹಿದರು. ಈ ಹೊಸ ಔಷಧವು ಒಂದು ದೃಷ್ಟಿಯಿಂದ ನೋಡಿದರೆ “ಪೇಟೆಂಟ ಮೆಡಿಸಿನ್” ಇದ್ದರೂ ಶಾಸ್ತ್ರೀಯ ದೃಷ್ಟಿಯಿಂದ ಅದು “ಆ್ಯಂಟಿಸೆಪ್ಟಿಕ್” ಔಷಧಗಳಲ್ಲಿ ಒಳ್ಳೇ ಶಾಸ್ತ್ರ ಸಮ್ಮತವಾದ ಹೊಸ ಶೋಧವೇ ಆಗಿದೆ. ಮತ್ತು ಡಾಕ್ಟರ ಜನರೆಲ್ಲ ಇದಕ್ಕೆ ಅತ್ಯಂತ ಮಹತ್ವವನ್ನು ಕೊಡುತ್ತಿರುವರು. ಇಂಗ್ಲಂಡದಲ್ಲಿಯ ಪ್ರತಿಯೊಂದು ಔಷಧಾಲಯದಲ್ಲಿಯೂ ಈ “ಟಿ. ಸಿ. ಪಿ.” ಔಷಧವು ಪ್ರಚಾರದಲ್ಲಿದೆ. ಇದರ ನಿಜವಾದ ಹೆಸರು “ಟ್ರೈ ಕ್ಲೋರೋಫಿನೈಲ್ಮಿಥಿಲಾಯಡೋಸೆಲಿಕಲ್” ಎಂಬುದಾಗಿದೆ. “ಎಚ್. ಟಿ. ಓ.” (H_2O) ಇದರಿಂದ “ಟಿ. ಸಿ. ಪಿ.” ಔಷಧದ ರಸಾಯನವು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದ್ದರಿಂದ ಅದಕ್ಕೆ “ಟಿ. ಸಿ. ಪಿ.” ಎಂಬ ಲೋಕಪ್ರಿಯವಾದ ಹೆಸರನ್ನು ಕೊಟ್ಟದ್ದು ಯಥಾರ್ಥವಾಗಿದೆ

ಈ ಕಂಪನಿಗೆ ೨೯,೯೩೦ ರೂ. ಲಾಭವಾಗಿದ್ದು ೧೦೦ ಕ್ಕೆ ೫ ರಂತೆ ಲಾಭವು ಹಂಚಲ್ಪಟ್ಟಿದೆ. ೨೦,೦೦೦ ರೂಪಾಯಿಗಳನ್ನು ಆಪದ್ಧನವೆಂದು ತೆಗೆದಿಟ್ಟದ್ದರಿಂದ ಈ ಆಪದ್ಧನವು ೩೦,೦೦೦ ರೂ. ಆದಂತಾಯಿತು ಮತ್ತು ೭,೧೦೭ ೧-೦ ಹೊಸ ವರ್ಷದ ಲೆಕ್ಕದಲ್ಲಿ ಶಿಲ್ಕು ಇದೆ.

ಡಾಯರೆಕ್ಟರರಾದ ಬಾವಡನ್ ಸಾಹೇಬರು ಮುದ್ದತು ತೀರಿದ್ದರಿಂದ ಕೆಲಸದಿಂದ ನಿವೃತ್ತರಾದರು. ಆದರೆ ಅವರು ಹಿಂದು ಸ್ಥಾನದಲ್ಲಿ ಇರದೆ ಇರುವದರಿಂದ ಆ ಸ್ಥಾನವನ್ನು ತುಂಬದೆ ಹಾಗೆ ಇಟ್ಟದೆ.

ಮೊದಲಿನ ಕಂಪೌಂಡರುಗಳ ಮೇಲೆಯೆ ಶ್ರೀ. ಫ್ರೈಜರ ಆ್ಯಂಡ ರಾಸ್ ಇವರು ಲೆಕ್ಕಪತ್ರ ಪರೀಕ್ಷಕರಾಗಿ ನೇಮಿಸಲ್ಪಟ್ಟಿದ್ದಾರೆ.

ಬೆಂಗಳೂರಿನ ಸುದ್ದಿ

(ನಮ್ಮ ಸ್ವಂತ ಸುದ್ದಿಗಾರರಿಂದ)

ತಾ|| ೫ ೫-೨೭

ಮಹಾತ್ಮಾ ಗಾಂಧಿಯವರು ದಿನೇ ದಿನೇ ಆರೋಗ್ಯ ಹೊಂದುತ್ತಲಿದ್ದಾರೆ. ಪ್ರತಿನಿತ್ಯವೂ ಪ್ರಾತಃಕಾಲ ಮತ್ತು ಸಾಯಂಕಾಲ ಸುಮಾರು ಅರ್ಧ ಮೈಲು ದೂರ ನಡೆಯುತ್ತಾರೆ. ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯ ಡಾಕ್ಟರರಾದ ಮ|| ಕೃಷ್ಣಸ್ವಾಮಿರಾಯರು ಪ್ರತಿ ವಾರವೂ ಮಹಾತ್ಮರ ದೇಹಪ್ರಕೃತಿಯನ್ನು ಪರೀಕ್ಷಿಸುತ್ತಿರುವರು. ಬೆಂಗಳೂರು ಮತ್ತು ಚಿಕ್ಕಬಳ್ಳಾಪುರದ ಸ್ವಾಗತ ಸಭೆಯವರು ಮಹಾತ್ಮರ ಯೋಗಕ್ಷೇಮವನ್ನು ಅತಿ ಶ್ರದ್ಧಾ ಭಕ್ತಿಯಿಂದ ನೋಡಿಕೊಳ್ಳುತ್ತಿದ್ದಾರೆ ನಂದಿ ಬೆಟ್ಟದ ಹವೆಯು ಮಹಾತ್ಮರ ಪ್ರಕೃತಿಗೆ ಸಮನಾಗಿರುವದು. ಸುತ್ತುಮುತ್ತಲಿನ ಜನರು ಮಹಾತ್ಮರ ದರ್ಶನಕ್ಕೆ ತಂಡ ತಂಡವಾಗಿ ಹೋಗಿ ಬರುತ್ತಿರುವರು. ಎಲ್ಲ ಕರ್ನಾಟಕಸ್ಥರ ಸುದೈವದಿಂದ ಮಹಾತ್ಮಾ ಗಾಂಧಿಯವರು ಗುಣಹೊಂದಿ ಖರಾಗುತ್ತಿರುವರು.

ಶ್ರೀಮನ್ ಮಹಾರಾಜರ ರಜತ ಮಹೋತ್ಸವವು ಮುಂದಿನ ತಿಂಗಳು ೨ನೇ ವಾರದಲ್ಲಿ ಆರಂಭವಾಗುವದು ಆಗ್ಗೆ ಮಹಾತ್ಮಾ ಗಾಂಧಿಯವರನ್ನು, ಶ್ರೀಮನ್ ಮಹಾರಾಜರು ಅತಿಥಿಗಳಾಗಿ ಕರೆಯುವರೆಂದು ಸಮಾಚಾರ ಹಬ್ಬಿದೆ.

ಶಿವಾಜಿ ಜಯಂತ್ಯುತ್ಸವವನ್ನು ಬೆಂಗಳೂರು ಹಿಂದೀ ಪ್ರೇಸು, ವಿದ್ಯಾರ್ಥಿ ಮಂಡಲದವರು ಮತ್ತು ಬೆಂಗಳೂರಿನಲ್ಲಿರುವ ಮರಾಟರೆಲ್ಲರೂ, ಈ ತಿಂಗಳು ೩ನೆಯ ತಾರೀಖಿನಲ್ಲಿ ಈ ಜಯಂತ್ಯುತ್ಸವವನ್ನು ಅತಿ ವಿಜೃಂಭಣೆಯಿಂದ ನಡೆಸಿದರು. ತುಂಗಭದ್ರಾ ವಾಸಿಗಳಾದ ಪಂಡಿತ ತಾರಾನಾಥರವರು ಶಿವಾಜಿಯ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರು.

ದಸರಾ ಪ್ರದರ್ಶನವು ಅನೇಕ ಕಾರಣಗಳಿಂದ ಈ ಸಾರೆ ನಡೆಯುವುದಿಲ್ಲವೆಂದು ಸಮಾಚಾರ ಬಂದಿದೆ. ನಿಜಾಂಶವು ಶೀಘ್ರದಲ್ಲಿಯೇ ಬಯಲಾಗುವದು.

ಡಾ|| ಬಜೇಂದ್ರನಾಥ ಶಿಲರವರ ಕೆಲಸದ ಅವಧಿಯು ನಾಳಿನ ಡಿಸೆಂಬರ ಆಖೈರಿಗೆ ಮುಗಿಯುವದು. ಮಹಾರಾಜರವರು ಅವರಿಗೆ ಮತ್ತೊಂದು ವರ್ಷ ಹೆಚ್ಚಿಗೆ ಅವಧಿಯನ್ನು ಕೊಟ್ಟಿರುವರು.

ಶ್ರೀಮನ್ ಮಹಾರಾಜರವರ ರಜತೋತ್ಸವದ ವಿಚಾರಕ್ಕೆ. ಈ ತಿಂಗಳು ೨ನೆಯ ತಾರೀಖು ಸಾಯಂಕಾಲ ೫-೩೦ ಘಂಟೆಯ ಬೆಂಗಳೂರು ಮುನಿಸಿಪಾಲಿಟಿಯ ಅಧ್ಯಕ್ಷರಾದ ಮಿ|| ಅಬ್ಬಾಸ್‌ಖಾನರ ಅಗ್ರಾಸನಾಧಿಪತ್ಯದಲ್ಲಿ ಒಂದು ಸಭೆ ನೆರೆದಿತ್ತು. ಬೆಂಗಳೂರಿನಲ್ಲಿ ಶ್ರೀಮನ್ ಮಹಾರಾಜರ ರಜತೋತ್ಸವವನ್ನು ಅತಿ ವಿಜೃಂಭಣೆಯಿಂದ ಆಚರಿಸಲಿಕ್ಕೆ ಸಾಕಷ್ಟು ಹಣ ಕೂಡಿಸಲಿಕ್ಕೋಸುಗ ಪ್ರತಿಯೊಂದು ಮೊಹಲ್ಲಾದಲ್ಲಿಯೂ ಒಂದೊಂದು ಮಂಡಲವನ್ನು ನೇಮಿಸಿದರು.

ಸಾಹೇಬರ ಮೋಟಾರು!

ಬಾಗಲಕೋಟೆಗೆ ಈ ಜಿಲ್ಲೆಯ ಪೋಲೀಸ ಸಾಹೇಬರು ಬಂದಿರುವರು. ತಾ|| ೭ನೇ ದಿನ ನಾನು ಸಾಯಂಕಾಲಕ್ಕೆ ಡಾ. ಕಾವೇರಿ ಹಾಗೂ ಬಸವೇಶ್ವರ ಶಾಲೆಯ ಶಿಕ್ಷಕ ಶ್ರೀ ದೇಶಪಾಂಡೆಯವರೊಂದಿಗೆ ತಿರುಗಾಡಲು ಹೊರಟಾಗ್ಗೆ, ಕಲಾದಗಿ ರಸ್ತೆಯ ಮುನಸಿಪಾಲಿಟಿ ಜಕಾತಕಟ್ಟೆಯ ಹತ್ತರಿ ಬಂದಾಗ್ಗೆ ಸಾಹೇಬರ ಮೋಟಾರು ಹಿಂದಿನಿಂದ ಬಂದಿತು ಆದರೆ ತುತೂರಿಯ ಸಪ್ಪಳ ಮಾಡುವ ಗೋಜಿಗೆ ಸಾಹೇಬರು ಹೋಗಲಿಲ್ಲ! ನನ್ನ ಹತ್ತಿರದಲ್ಲಿ ಮೋಟಾರ ಹಾಯಿತು! ಅಪಾಯವಾಗಲಿಲ್ಲ. ಸುದೈವ! ಮುಂದೆ ೮-೧೦ ಮಂದಿ ಶಾಲೆಯ ಹುಡುಗರಿದ್ದರು. ಆಗ್ಗೆಯೂ ಸಾಹೇಬರು ತುತೂರಿ ಬಾರಿಸಲಿಲ್ಲ! ಓರ್ವ ವಿದ್ಯಾರ್ಥಿಯ ಮೇಲೆ ರಭಸದಿಂದ ಸಾಗಿದ ಆ ಮೋಟಾರು ಹಾಯುತ್ತಿದ್ದಿತ್ತೇ! ಅಷ್ಟರಲ್ಲಿ ಹುಡುಗನು ಎಡಕ್ಕೆ ಜಿಗಿದನು!! ಆದರೂ ಸಾಹೇಬರಿಗೆ ದರಕಾರವಿರಲಿಲ್ಲ. ಹಾಗೇ ರಭಸದಿಂದ ಸಾಗಿದರು. ಪೋಲೀಸ ಸಾಹೇಬರೆಂದರೆ ಜನರ ರಕ್ಷಕರು! ಇವರೇ ಹೀಗೆ ತಮ್ಮ ಮೋಟಾರನ್ನು ವೈಮೇಲೆ ಎಚ್ಚರಿಲ್ಲದಂತೆ ಹೊಡೆದರೆ, “ಸರ್ವೀಸ ಮೋಟಾರು”ಗಳ ಅವ್ಯವಸ್ಥೆಗೆ ತಡೆಯುಂಟಾಗುವದು ಹೇಗೆ? ಸಾಹೇಬರು ಇನ್ನಾದರೂ ಎಚ್ಚರಾಗಬೇಕು!

ಶ್ರೀನಿವಾಸ ರಾಜೇರಾವ ಮಂಗಳವೇಢೆ
ಸಂಪಾದಕ “ಕನ್ನಡಿಗ”

ಕನ್ನಡ.

ಬರೆದವರು– ಹನುಮಂತ ಗೋವಿಂದ ಕಟ್ಟೀ ಶಾಸ್ತ್ರಿ ಮ. ಸವದಲಗಿ

ಕನ್ನಡವು ಎಂಬುದು ಏಕಿಲ್ಲೇ। ಕನ್ನಡ ನುಡಿಯಲಿ ಹುರುಳಿಲ್ಲೇ ॥ಪ॥
ಮಾನವ ಜಾತಿಯ ಜೀವಾಳ! ಭಾಷಾದೇವಿಯೊಳಿಲ್ಲೇನು?
ಏನದು! ಏಳ್ಗೆಯ ನಿಜದೀಪ! ತಾಯ್ನುಡಿಯೊಲವಿನೊಳಿಲ್ಲೇನು?
ಉನ್ನತ ಸಂಸ್ಕೃತಿಯೊಳಬೆಳಕು! ಕನ್ನಡ ತಾಯಿಗೆ ಇಲ್ಲೇನು!
ಜೀವಕೆ ಜೀವವ ಬೆರಸುತಿಹಾ।
ಭಾವದ ಬೆಳಗನು ಬೀರುತಿಹಾ,
ಸಾವಿಲ್ಲದೊಲವನುಣಿಸುತಿಹಾ।
ಕನ್ನಡ ಭಾಷೆಯು ತನಗಿಲ್ಲೇ! ಅಂತಹ ಭಾಷೆಯು ನಮಗಿಲ್ಲೆ? ॥೧॥

† † † †

ಸನ್ನಿಭ ಭಾಷೆಯ ನಂದನದಿ। ಸೊಗಸಿನ ಪುಷ್ಪಗಳು ಅರಳಿಲ್ಲೆ?
ಕನ್ನಡದಿನಿ ನುಡಿಗಡಲೊಳಗೆ। ವಿದ್ಯೆಯ ನದಿಗಳು ಕೂಡಿಲ್ಲೇ?
ಸನ್ನುತ ನಾಡಿನ ಗೂಡಿನಲಿ। ಧಾರ್ಮಿಕ ಬಳಗಳು ಜನಿಸಿಲ್ಲೇ?
ಕವಿಕೋಕಿಲಗಳು ಉಲಿದಿಲ್ಲೇ?
ಸವಿಯರ ಸಂಚಿಯು ಬರಿಸಿಲ್ಲೇ?
ನವಸಾಧುವೃಕ್ಷ ಮೊಳೆತಿಲ್ಲೇ?
ಕನ್ನಿಯ ಪೋಷವು ಕರೆದಿಲ್ಲೇ! ಬನ್ನದ ಬೀಜವು ಸುರಿದಿಲ್ಲೇ? ॥೨॥

† † † †

ಗರ್ವದ ರಾವಣನಳಲಿಸಿದಾ। ಹನುಮಂತನಾದ ನುಡಿಗುಡಿಯು।
ಹೊರ್ವಡೆ ಹರ್ಷನ ಸೋಲಿಸಿದಾ। ಪುಲಿಕೇಶಿಯಾತನ ನುಡಿಗಡಿಯು॥
ಕೀರ್ತಿಯ ಶಿವರಾಜನ ತಳೆದಾ। ಮಲ್ಲಸ್ವಾಮಿಯ ನುಡಿಗಡಿಯು॥
ಕನ್ನಡಿಗರ ಕರ ವೀರರವು।
ಕನ್ನಡಿಗರ ಶಿರ ಚಮರರವು।
ಕನ್ನಡಿಗರ ಉರ ಧೀರರವು!
ಕನ್ನಡ ಕಸ್ತೂರಿ ಕಂಪಿಲ್ಲೇ! ಕನ್ನಡಿಗನ ಸಿರಿ ಮೆರೆದಿಲ್ಲೇ ॥೩॥

ನವರೆ ಹೊಳೆದಂತೆ.

ಮಂಗಳ ಗ್ರಹದಲ್ಲಿ ಮನುಷ್ಯರು ವಿವಾಹಿಸುತ್ತಿರುವರೆಂದು, ಹಳ್ಳಿಗಳಲ್ಲಿ ಸುದ್ದಿ ಹರಡುತ್ತಲಿದೆ. ಮರಾಠಿ 'ಚಿತ್ರಮಯ ಜಗತ್' ಲೇಖವೇ ಇದಕ್ಕೆ ಕಾರಣ- ಆದರೆ ಅದು ಕೇವಲ ಕಟ್ಟು ಕಥೆಯೆಂಬುದು ಅರೆಮರೆ ಮರಾಟಿ ಬಲ್ಲ ಕನ್ನಡ ಕುರಿಗಳಿಗೇನು ಗೊತ್ತು? ಮಾತೃಭಾಷೆಯನ್ನೋದಲು ಒಲ್ಲರು! ನೆರೆನುಡಿಯನ್ನು ಚನ್ನಾಗಿ ಅಭ್ಯಾಸಿಸಲು ಮನವಿಲ್ಲ. ಆದರೂ ಇಲ್ಲದ ಮರಾಟಿಯ ಹೆಮ್ಮೆ! + :

ಧಾರವಾಡದ ಶ್ರೀ ಪಟವರ್ಧನ ವಕೀಲರು ನೀಲಗಿರಿಗೆ ಕರ್ನಾಟಕ ಏಕೀಕರಣದ ಪ್ರಚಾರ ಕಾರ್ಯಕ್ಕೆ ಹೋಗಿದ್ದಾರಂತೆ! ನೀಲಗಿರಿಯ ತಂಪು ಹವೆಯಲ್ಲಿಯಾದರೂ ಇವರಿಗೆ ಕನ್ನಡ ನಾಡಿನ ಸೇವೆಯ ಪವಿತ್ರ ಭಾವನೆಯು ಉದಯವಾಗಲಿ! ಕಡೆಗೆ ಅವರ ಜೊತೆಯಲ್ಲಿದ್ದ ಶ್ರೀ ದಿವಾಕರ ರಂಗರಾಯರಾದರೂ ಅವರಲ್ಲಿ ಆ ಭಾವನೆಯನ್ನು ಉದಯಗೊಳಿಸಲಿ! + ×

ಗೆರೆಂಟಿ, ಟ್ರಂಕ ರೋಡು, ಫೀಡರ ಲೈನ, ಫಿಡ್ರೇಗ್ರೇಶನು, ಸಂಕ್ಷನ, ಇವು ಯಾವ ಶಬ್ದಗಳೆಂಬುದನ್ನು 'ಸ್ವದೇಶಾಭಿಮಾನಿ'ಯು–ಜಗನ್ನಾಥನ ಸಾಯಿಯಾಟವನ್ನು ಬಿಸಿದ–ಸ್ವದೇಶಾಭಿಮಾನಿಯು ಹೇಳಲಿ.

ಬಳ್ಳಾರಿ ಜಿಲ್ಲೆಯ ಅಡವಾನಿಗೆ 'ವಿಶ್ವಕರ್ನಾಟಕ'ದ ಬಾತ್ಮೀದಾರನು 'ಆ ದೋಣಿ' ಯೆಂಬ ಹೊಸ ಸ್ವಕಪೋಲಕಲ್ಪಿತ ವ್ಯಾಕರಣಾನುಸಾರ ರೂಪ ಕೊಟ್ಟಿದ್ದಾನೆ! ಇದು ಹೀಗೇ ಸಾಗಿದರೆ ಕನ್ನಡದ ಶುದ್ಧ ಹೆಸರುಗಳೆಲ್ಲ ನಮ್ಮ ವಿಜಾಪುರ ಜಿಲ್ಲೆಯ ಈ ದೋಣಿ-(ಇದು ಇಲ್ಲಿಯ ದೊಡ್ಡ ಹಳ್ಳ)- ಯಲ್ಲಿ ತೇಲಿ ಹೋಗಬೇಕಾಗುವವು!

ಓದುಗ.

ವರ್ತಮಾನಸಾರ

ಸೋಜಿಗದ ಸುದ್ದಿಗಳು.

ಅಮೇರಿಕಾ, ಫ್ರಾನ್ಸ, ಇಂಗ್ಲಂಡಗಳಲ್ಲಿ ಅನೇಕರು ತಾವು ಸಾಕಿದ ಪಶುಪಕ್ಷಿಗಳ ಸುಖಕ್ಕಾಗಿ ತನ್ನ ಆಸ್ತಿಯ ಇಂತಿಷ್ಟು ಭಾಗವು ಹೋಗಬೇಕಾಗಿ ತನ್ನ ಮೃತ್ಯುಪತ್ರಗಳಲ್ಲಿ ಬರೆಯುತ್ತಲಿದ್ದಾರೆ. ಗ್ಲಾಸಗೋದ ಓರ್ವ ಸ್ತ್ರೀಯು ತಾನು ಸಾಕಿದ ಬೆಕ್ಕಿಗೆ ೨೦೦ ಪೌಂಡು ಅದನ್ನು ಸಾಕಲಿಕ್ಕೆ ತನ್ನ ಗೆಳತಿಗೆ ೩೦೦ ಪೌಂಡು ಕೊಟ್ಟಿದ್ದಾಳೆ. "ನನ್ನ ಆಸ್ತಿಗೆಲ್ಲ ನನ್ನ ಕುದುರೆಯೇ ಬಾಧ್ಯವಾಗಿದೆ. ಆ ಕುದುರೆಯನ್ನು ನನ್ನ ಕರ್ತನ ಮಗ ಜಾರ್ಜನು ಕಾಯಬೇಕೆಂಬದಾಗಿ ಓರ್ವ ಅಮೇರಿಕನು ಬರೆದಿದ್ದಾನೆ. ಬಿಡಾಡಿ ನಾಯಿಗಳ ಜೋಪಾನಕ್ಕಾಗಿ ಮೆಕ್ಲೋವರನು ೨೦೦ ಪೌಂಡು ಶತಮ್ಯೂರಿನ ಮುನಶಿಪಾಲಿಟಿಗೆ ಕೊಟ್ಟಿರುವನೆ. ಲಂಡನ್ನಿನ ವಾಚಮೇಕರನು ತಾನು ಸಾಕಿದ ಮೀನಗಳು ತನ್ನ ಮನೆಯಲ್ಲಿಯೇ ಹುಗಿಯಲ್ಪಡಬೇಕೆಂದೂ, ಅದರ ಗೋರಿಯ ರಕ್ಷಣೆ ಮಾಡಲಿಕ್ಕೆ ತನ್ನ ಮೊಮ್ಮಗನಿಗೆ ಪ್ರತಿ ವರ್ಷಕ್ಕೆ ೩೦೦ ಪೌಂಡು ಕೊಡಬೇಕೆಂದೂ ಕಾಣಿಸಿದ್ದಾನೆ. ೨೦ ವರ್ಷ ಸಾಕಿದ ತನ್ನ ಗಿಳಿಯ ರಕ್ಷಣೆಗಾಗಿ ಲಂಡನ್ನಿನ ಮುದುಕಿಯು ತನ್ನ ಸೇವಕನಿಗೆ ವರ್ಷಕ್ಕೆ ೧೦೮ ಗಿನಿ ಕೊಡಬೇಕಾಗಿ ನಮೂದಿಸಿರುವಳು. ಒಳ್ಳೇ ಆರಾಮಾದ ಉಪ್ಪು ಹಾಗೂ ಆಹಾರ ದೊರೆಯಬೇಕೆಂದು ತನ್ನ ಪ್ರೀತಿಯ ಕೋತಿಗೆ ಫ್ರಾನ್ಸದ ನರ್ತಕಿಯು ೮೦೦೦ ಫ್ರಾಂಕಗಳನ್ನು ಕೊಟ್ಟಳು. ಓರ್ವನು ತನ್ನ ಹಂದಿಗಳಿಗೆ ೧೦೦೦ ಪೌಂಡವನ್ನು ಇನ್ನೋರ್ವನು ತಾನು ಸಾಕಿದ ನಾಗರ ಹಾವುಗಳ ಜೋಪಾನಕ್ಕಾಗಿ ತನ್ನ ಮಿತ್ರನಿಗೆ ೧೦೦ ಪೌಂಡಿನ ವರ್ಷಾಶನವನ್ನೂ ಹಾಕಿಕೊಟ್ಟಿದ್ದಾರೆ! ಇವೆಲ್ಲ ಅವರವರ ಮೃತ್ಯುಪತ್ರಗಳಲ್ಲಿ ರಜಿಸ್ಟರ ಮಾಡಲ್ಪಟ್ಟಿವೆ!!

ಮನುಷ್ಯನು ಇಲ್ಲದಿದ್ದರೆ ಇರುವೆಯು ಪ್ರಪಂಚವನ್ನು ಆಳುತ್ತಿತ್ತೆಂದು ಶಾಸ್ತ್ರಜ್ಞರ ಮತವಿರುತ್ತದೆ.

ದಿನ ಒಂದಕ್ಕೆ ಮನುಷ್ಯನ ಎದೆಯು ೯೨೦೬೦ ಸಾರೆ ಹೊಡೆಯುತ್ತದಂತೆ.

ಮನುಷ್ಯರೆಲ್ಲರೂ ಇರುವೆಗಳಂತೆ ಜಾಗ್ರತೆ ಜಾಗ್ರತೆಯಾಗಿ ಕಾಲು ಹಾಕಿದರೆ ಗಂಟೆಗೆ ೮೦೧ ಮೈಲು ನಡೆಯಬಲ್ಲರು.

ಖಾದಿಯ ಸುದ್ದಿಗಳು.

ಮಹಾತ್ಮರು ಅಂಬೋಲಿಯಲ್ಲಿರುವಾಗ್ಗೆ ಅವರ ಸ್ನೇಹಿತರು ಸಾವಂತವಾಡಿ ಸಂಸ್ಥಾನಕ್ಕೆ ಹೋಗಿ ಅಲ್ಲಿ ಬೀದಿ ಬೀದಿಗಳಲ್ಲಿ ಖಾದಿಯನ್ನು ಮಾರಲು, ಇಷ್ಟು ಅರಿವೆಯಲ್ಲ ಸ್ವಲ್ಪೇ ಕಾಲದಲ್ಲಿ ಮಾರಾಟವಾದವು. ಅಲ್ಲಿಯ ರಾಜರೂ, ರಾಣಿಯವರೂ ಸಹ ಖಾದೀ ಬಟ್ಟೆಯನ್ನು ಕೊಂಡು ತಮ್ಮ ಪ್ರಜೆಗಳು ಖಾದಿಯನ್ನು ಕೊಳ್ಳಲು ಆತುರರಿರುವರೆಂಬುದನ್ನು ತಿಳಿದು ಆ ದಂಪತಿಗಳಿಗೆ ಬಹು ಆನಂದವಾಯಿತು!

ಶ್ರೀ. ಕ್ಯಾನಲರೆಂಬ ಸಿಂಧೀ ಗೃಹಸ್ಥರು ಕಾರವಾರ ಜಿಲ್ಲೆಯಲ್ಲಿ ಸಹಾಯಕ "ಇಂಜನೀಯರ"ರು; ದೊಡ್ಡ ಅಮಲದಾರರು, ಆದರೂ ಸ್ವತಃ ಖಾದಿಯನ್ನು ಧರಿಸುವದಲ್ಲದೇ, ತಾವೇ ಬೀದಿಗಳಲ್ಲಿ ಖಾದಿಯನ್ನು ಮಾರುತ್ತಾರೆ. ಅಂಜುಬುರಕ ಸರಕಾರೀ ನೌಕರರು ಕಲಿಯಲಿ!

ಹಿಂದುಸ್ಥಾನ

ಖಾಲ್ಸಣಿರಾಜನೂ, ಯುವರಾಜನೂ, ಇನ್ನಿತರ ಅಮಲದಾರರೂ ಪ್ರಜೆಗಳಿಗೆ ಮಿತಿಮೀರಿ ತೊಂದರೆ ಕೊಡುತ್ತಿದ್ದರು. ಈಗ್ಗೆ ಅವರ ಮೇಲೆ ಡೆಪ್ಯೂಟೀ ಮ್ಯಾಜಿಸ್ಟ್ರೇಟರ ಕಚೇರಿಯಲ್ಲಿ ಕಟ್ಲೆಯು ಮಾಡಲ್ಪಟ್ಟಿದೆ. ೨೦೦೦ ಜನರು ಸಾಕ್ಷಿ ಹೇಳಲು ಸಿದ್ಧರಿದ್ದಾರೆ. ಭಾರತೀಯ ರಾಜ್ಯರ ಸ್ಥಿತಿಯು ಎಂತಹ ಶೋಚನೀಯ ಸ್ಥಿತಿಗೆ ಬಂದಿತಲ್ಲ!

ಕೇವಲ ಇಸ್ಪೀಟುಗಳನ್ನಾಡುವದು ಜೂಜು ಅಲ್ಲವೆಂದು ಅಲಹಾಬಾದ ಹೈಕೋರ್ಟಿನವರು ನಿರ್ಧರಿಸಿದ್ದಾರೆ.

ಪಂಡಿತ ಬನಾರಿಲಾಲ ಚಂದೋಸಿಯವರು ಹಿಂದೂ ಮುಸಲ್ಮಾನರ ಕಲಹಗಳಲ್ಲಿ ಶ್ರಮಿಸುವ ಭಾಗ ತೆಗೆದುಕೊಳ್ಳುತ್ತಿದ್ದರೆಂದು ಮುರಾದಾಬಾದಿನಲ್ಲಿ ಮುಸಲ್ಮಾನ ದಂಗೆಗಾರರು, ಚೂರಿಯನ್ನು ಹೊಟ್ಟೆಯಲ್ಲಿ ತಿವಿದು ಅವರನ್ನು ಕೊಂದರು!

ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯ ಅಧಿವೇಶನವು ಮುಂಬೈಯಲ್ಲಿ ಮೇ ೧೫ ರಕ್ಕೆ ಸೇರುವದು.

ಭಾರತೀಯ ಸಂಸ್ಥಾನಗಳ ಪ್ರಜಾಪರಿಷತ್ತು ಮೇ ತಿಂಗಳ ಕೊನೆಯ ವಾರದಲ್ಲಿ ಮುಂಬೈಯಲ್ಲಿ ನೆರೆಯುವದು. ಬೆಂಗಳೂರ ಶ್ರೀ. ಡಿ. ವಿ. ಗುಂಡಪ್ಪನವರೂ ಉತ್ಪಾದಕರಲ್ಲೊಬ್ಬರು.

ಮೈಸೂರ ಸಂಸ್ಥಾನದಲ್ಲಿ ದರೋಡೆಖೋರರನ್ನು ಮೊನ್ನೆ ಹಿಡಿದರು. ೫ ಜನ ಸ್ತ್ರೀಯರೂ ೬೫ ಪುರುಷರೂ ಬಂಧಿಸಲ್ಪಟ್ಟಿದ್ದಾರೆ. ಅಂತೂ ಸ್ತ್ರೀಯರೂ ದರೋಡೆಯಲ್ಲಿ ಸೇರುತ್ತಲಿದ್ದಾರೆ!

ಹೆಚ್ಚಿನ ಅಭ್ಯಾಸಕ್ಕಾಗಿ ವಿಲಾಯತಿಗೆ ಹೋಗುವ ವಿದ್ಯಾರ್ಥಿಗಳಿಗೆ ಸಾಲವನ್ನು ಕೊಡಲು ನಿಜಾಮರವರು ಪ್ರಾರಂಭಿಸಿ, ಈ ವರ್ಷ ೬ ಜನರಿಗೆ ಈಗಾಗಲೇ ಕೊಟ್ಟಿದ್ದಾರೆ.

ಪತ್ರವ್ಯವಹಾರ.

ದತ್ತಾತ್ರೇಯ ನಾಟಕ ಮಂಡಲ.

ಹಸ್ತ ಪತ್ರಿಕೆಯ ಮೇಲಿಂದ ನೋಡಲಾಗಿ ಈ ಕಂಪನಿಯು ಕರಿನಾಡಿನಲ್ಲಿ ಹೆಸರಾದದ್ದೆಂದು ತೋರುವದು. ಇವರ ಹಸ್ತ ಪತ್ರಿಕೆಗಳು ಮಾತ್ರ ಅರ್ಧ ಕನ್ನಡ ಅರ್ಧ ಮರಾಠಿಯಲ್ಲಿರುವವು. ಕರ್ನಾಟಕ ರಂಗಭೂಮಿಯ ಉದ್ಧಾರಕ್ಕಾಗಿ ಹೆಣಗಾಡುವೆವೆಂದು ಹೇಳಿಕೊಳ್ಳುವ ಈ ಕಂಪನಿಯವರು ಮರಾಠಿಯಲ್ಲೇಕೆ ಹಸ್ತಪತ್ರಿಕೆಗಳನ್ನು ತೆಗೆಯಿಸಿರುವರು? ವಿಜಾಪುರವು ಉತ್ತರ ಕರ್ನಾಟಕದಲ್ಲಿರುತ್ತದೆಂಬುದು ಈ ಕಂಪನಿಯವರಿಗೆ ಗೊತ್ತಿದ್ದರೂ, ಮರಾಠಿಯಲ್ಲಿ ಹಸ್ತ ಪತ್ರಿಕೆಗಳನ್ನು ತೆಗೆಯಿಸಿ ತಮ್ಮ ಸ್ವಾಭಿಮಾನ ಶೂನ್ಯತೆಯನ್ನು ವಿಜಾಪುರಸ್ಥರ ನಿದರ್ಶನಕ್ಕೆ ತಂದುಕೊಟ್ಟರೆಂದು ದುಃಖದಿಂದ ಹೇಳಬೇಕಾಗುತ್ತದೆ. ಉಪಾಯವಿಲ್ಲ! ಆದದ್ದಾಗಿ ಹೋಯಿತು. ಇನ್ನು ಮುಂದಾದರೂ ಕನ್ನಡದಲ್ಲಿಯೇ ಹಸ್ತ ಪತ್ರಿಕೆಗಳನ್ನೂ, ಬೋರ್ಡುಗಳನ್ನೂ ಮಾಡುವರೆಂದು ನಮ್ಮ ಬಲವಾದ ಆಶೆ! ಈ ಕಂಪನಿಯು ಸಿಸ್ತಿನಲ್ಲಿಯೂ, ಅಚ್ಚುಕಟ್ಟುತನದಲ್ಲಿಯೂ ಒಳ್ಳೇ ಹೆಸರಾದದ್ದೆಂದು ಅದನ್ನು ನೋಡುವವರಿಗೆ ಮನವರಿಕೆಯಾಗದಿರದು, ಸತ್ಯವು! ಈ ಕಂಪನಿಯವರು ಮಾಡುವ ನಾಟಕಗಳೆಂದರೆ ಬಹುಶಃ ಪೌರಾಣಿಕ, "ಶ್ರೀರಾಮ ಪಾದುಕಾ ಪಟ್ಟಾಭಿಷೇಕ" ಎಂಬ ನಾಟಕವನ್ನು ಶನಿವಾರ ತಾರೀಖು ೨೯ನೇ ದಿವಸ ಪ್ರೊ. ಛತ್ರೆಯವರ ನಾಟಕ ಗೃಹದಲ್ಲಿ ಆಡಿ ತೋರಿಸಿದರು.

ಅದರಲ್ಲಿ ಮುಖ್ಯವಾಗಿ ಮೂರು ಪಾತ್ರಗಳು ಮಾತ್ರ ತಮ್ಮ ತಮ್ಮ ಅಭಿನಯಗಳನ್ನು ಉತ್ತಮವಾಗಿ ಮಾಡಿ ತೋರಿಸಿದವು. ಭರತನ ಭೂಮಿಕೆಯನ್ನು ತೆಗೆದುಕೊಂಡವನು ಇನ್ನೂ ಎಳೆಯ ವಯಸ್ಸಿನವನಿದ್ದರೂ ಚನ್ನಾಗಿ ಸಾಹಸ ಮಾಡಿದನು. ಇನ್ನಿಷ್ಟು ಪ್ರಯತ್ನ ಮಾಡಿದರೆ ಒಟ್ಟಿಗೆ. ಈ ನಾಟಕದಲ್ಲಿ ಕೇಡಗಿಯವರ ಪಾತ್ರವು ಹಾಸ್ಯವಿದ್ದರೂ ಬೀಭತ್ಸವು ಮಾತ್ರ ಅಧಿಕವಾಗಿದೆ! ಇದೇನು ಪಾರ್ಟಿಯವರ ದೋಷವೋ? ಇಲ್ಲವೆ ಲೇಖಕರ ದೋಷವೋ ನಾವರಿಯೆವು. ಅಂಬಿಗನ ಮಗನಾದ ನರಸಯ್ಯನೆಂಬವನು ಬಹಳೇ ಎಳೆ ವಯಸ್ಸಿನವನು. ಆ ಬಾಲಕನಿಗೆ ರಂಗಭೂಮಿಯ ಅಂಜಿಕೆಯು ಎಳ್ಳಷ್ಟೂ ಇರುವದಿಲ್ಲ. ತನ್ನ ಮುದ್ದು ಮುದ್ದು ಮಾತುಗಳಿಂದ ಪ್ರೇಕ್ಷಕರನ್ನು ಆಗಾಗ್ಗೆ ಆನಂದಗೊಳಿಸುತ್ತಿದ್ದನು. ಉಳಿದ ಪಾತ್ರಗಳು ಮಾತ್ರ ಅಷ್ಟಕಷ್ಟೇ. ಒಟ್ಟಿನ ಮೇಲೆ ಈ ನಾಟಕದಲ್ಲಿ ಪಾರ್ಟಿ ಮಾಡುವವರ ಗಾಯನ, ಅಭಿನಯ ಕೌಶಲ್ಯವು ಅಷ್ಟೇನು ಹೇಳಿಕೊಳ್ಳುವಷ್ಟು ತೋರುವದಿಲ್ಲ. ಈ ಕಂಪನಿಯು ಹೆಸರಾದದ್ದೆಂದು ಅಸ್ಟುವವರಿಗೆ ಇವರ ನಾಟಕಗಳನ್ನು ನೋಡುವದರಿಂದ ಈ ಮಾತಿನ ಸತ್ಯತೆಯು ಕಾಣಿಸದಿರಲಾರದು. ಉತ್ತರ ಕರ್ನಾಟಕದವರಿಗೆ ಹಿಂದೀ ಗಾಯನವು ಬಹು ಮಟ್ಟಿಗೆ ಸೇರುತ್ತಿದ್ದರೂ ಕರ್ನಾಟಕೀ ರಾಗಗಳು ತಿಳಿಯುವದಿಲ್ಲವೆಂಬುದು ಶುದ್ಧ ತಪ್ಪು. ಇರಲಿ. ಇನ್ನು ಮುಂದಾದರೂ ತಮ್ಮಲ್ಲಿರುವ ತಪ್ಪುಗಳನ್ನೆಲ್ಲ ಸುಧಾರಿಸಿ, ಕರ್ನಾಟಕದಲ್ಲಿ ಹೆಸರಾದ ಕಂಪನಿ ಇರುವದೆಂಬ ಹೆಸರನ್ನು ಸಾರ್ಥಕಗೊಳಿಸಿ, ರಂಗಭೂಮಿಯ ಉದ್ಧಾರ ಮಾಡುವರೆಂದು ನೆರೆನಂಬಿರುವ,

ರಂಗಭೂಮಿಯ ಸೇವಕ.

ಇಹವೃತ್ತ.

ಇಲ್ಲಿಯ ವಕೀಲರಾದ ಕೆರೂರ ಬಾಳಾಚಾರ್ಯರು ಕಳೆದ ವಾರದಲ್ಲಿ ವೈಕುಂಠವಾಸಿಗಳಾದರೆಂದು ತಿಳಿಸಲು ವಿಷಾದಪಡುತ್ತೇವೆ.

ಅಕ್ಷಯ್ಯ ತೃತೀಯಾದ ದಿನ ಶ್ರೀಮದ್ಬಸವ ಜಯಂತ್ಯುತ್ಸವವು ವಿಜೃಂಭಣೆಯಿಂದ ಜರಗಿತು.

ಶಿವಾಜಿ ಮಹಾರಾಜರ ತ್ರಿಶತ ಉತ್ಸವವು ಮೆರವಣಿಗೆ, ಪುರಾಣ ಕೀರ್ತನೆಗಳಿಂದ ಇಲ್ಲಿಯ ಮರಾಟರಿಂದ ಜರುಗಿಸಲ್ಪಟ್ಟಿತು.

'ದಿ ರಿನಾವ್ಹಂಡ್ ಬಾಂಬೇ ಸರ್ಕಸ್'ನವರು ಇಲ್ಲಿಗೆ ಬಂದಿದ್ದಾರೆ.

ರಂಗಭೂಮಿಯ ಸಮಾಚಾರ

ವಿಜಾಪೂರದ "ಕರ್ನಾಟಕ ಸಾಹಿತ್ಯ ಸೇವಾ ಮಂಡಲ"ದ (ಭಾರತ ನಾಟಕ ಮಂಡಲ) ೪ನೇ ವರ್ಷದುತ್ಸವವು ೧ನೇ ಮೇ ದಿನ ಭಜನ, ಗಾಯನ, ವಾದನ, ವ್ಯಾಖ್ಯಾನ, ಪೂಜಾ ಇತ್ಯಾದಿಗಳೊಡನೆ ಜರುಗಿತು. ಮುದ್ರಿಸಿದ ಆಮಂತ್ರಣ ಪತ್ರಿಕೆಗಳಲ್ಲಿ "ಪಾನಸುಪಾರಿ" ಬದಲು "ತಾಂಬೂಲ ಸಮಾರಂಭ"ವೆಂದಿದ್ದರೆ ಹೆಚ್ಚು ಶೋಭೆ ಬರುತ್ತಿದ್ದಿತು!

ಮುಂಬೈ ಕರ್ನಾಟಕ

ಧಾರವಾಡದಲ್ಲಿ ಕರ್ನಾಟಕ ಸ್ಥಾನಿಕ ಸ್ವರಾಜ್ಯಗಳ ಪರಿಷತ್ತಿನ ಅಧಿವೇಶನವು ಮುಗಿಯಿತು. ತಾಲೂಕ ಬೋರ್ಡುಗಳಿಗೆ ಹೆಚ್ಚಾಗಿ ಅಧಿಕಾರಗಳು ದೊರೆಯಬೇಕೆಂಬ ಠರಾವಿಗೆ, ಜಿಲ್ಲಾ ಬೋರ್ಡಿನ ಅಧ್ಯಕ್ಷರೆಲ್ಲ ವಿರೋಧಿಸಿದರೂ, ಅದು ಸ್ವೀಕೃತವಾಯಿತು. ನೀರಿನ ಕಾರ್ಯಕೆಯ ಬಗ್ಗೆ ಹೆಚ್ಚು ಲಕ್ಷ್ಯ ಪೂರೈಸಬೇಕೆಂದು ಅಧ್ಯಕ್ಷರು ಹೇಳಿದರು. ಮುಂದಿನ ವರ್ಷ ವಿಜಾಪುರದಲ್ಲಿ ಪರಿಷತ್ತು ನೆರೆಯುವದು.

ಹುನಗುಂದ ತಾಲೂಕ ಶಿಕ್ಷಕರ ಸಂಘದವರು ವೀರಶೈವ ತರುಣರ ಸಂಘದ ವಸತಿಗೃಹಕ್ಕೆ ೧೦ ರೂ ಕಾಣಿಕೆ ಕೊಟ್ಟರು. ಉಳಿದ ಸಂಘಗಳೂ ಇವರನ್ನು ಅನುಕರಿಸಿ, ವಸತಿಗೃಹಕ್ಕೆ ಸಹಾಯ ಮಾಡಬೇಕಾಗಿ ಕಾರ್ಯದರ್ಶಿಯವರ ಪ್ರಾರ್ಥನೆಯಿದೆ.

ಬೆಳಗಾವಿಯಲ್ಲಿ ಕರ್ನಾಟಕ ಮುಸಲ್ಮಾನ ಶಿಕ್ಷಣ ಪರಿಷತ್ತು ನೆರೆಯಿತು. ಪ್ರತಿಯೊಂದು ಜಿಲ್ಲೆಗೆ ಒಂದು ಉರ್ದು ಹೈಸ್ಕೂಲಿರಬೇಕಾಗಿ, ಸರಕಾರಕ್ಕೆ ಪ್ರಾರ್ಥಿಸುವ ಠರಾವು ಪಾಸಾಗಿದೆ. ಸರಕಾರೀ ನೌಕರಿಯ ಬಗ್ಗೆ ತಾವು ಆಸೆಪಡುವದು ಅತಿಯಾಗಿರಬಾರದೆಂದು ಅಧ್ಯಕ್ಷರು ಹೇಳಿದರು.

ನಿಜಾಮ ಕರ್ನಾಟಕ

ರಾಯಚೂರ ಜಿಲ್ಲೆಯ ಹನಮಸಾಗರದಲ್ಲಿ ಮುಸಲ್ಮಾನ—ಬ್ರಾಹ್ಮಣರಲ್ಲಿ ಜಗಳವಾಗಿ, ಮುಸಲ್ಮಾನರು ಪಟ್ವಾರೀ ಮತ್ತು ಅವನ ಮಗನನ್ನು ಗಾಯಪಡಿಸಲು, ಬ್ರಾಹ್ಮಣರು ಮಸೀದೆಯನ್ನು ಹೊಕ್ಕು, ಕುರಾಣ ಹರಿದು, ನಮಾಜ ಮಾಡುವ ಜಮಖಾನೆಯನ್ನು ಎತ್ತಿಕೊಂಡು ಹೋದರು.

ಕೊಡಗು ಕರ್ನಾಟಕ

ಶನಿವಾರ ಸಂತೆಯಲ್ಲಿ ಶ್ರೀ ವೀರಶೈವ ವಿದ್ಯಾನಿಧಿ ಸಂಘದ ೨ನೇ ವಾರ್ಷಿಕೋತ್ಸವವು ನಡೆಯಿತು.

ಕೊಡಗಿನಲ್ಲಿ ಸ್ತ್ರೀಯರ ಸಂಖ್ಯೆಯು ೧೦೦ಕ್ಕೆ ೯೦ ರಂತಿದೆ.

ಇದೋ ನೋಡಿ!

ಜಾಹೀರಾತ ಕೊಡತಕ್ಕವರೆ?

ಮೊದಲು "ಕನ್ನಡಿಗ"ನ ವ್ಯವಸ್ಥಾಪಕರಿಗೆ ಕಾಗದ ಬರೆದು ಈ ಪತ್ರವನ್ನು ಓದಿರಿ. ಆ ಮೇಲೆ ಯಾವ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತನ್ನು ಕೊಡತಕ್ಕದೆಂಬುದನ್ನು ನೀವೇ ನಿಶ್ಚಯಿಸಿರಿ.

ಕುಲಕರ್ಣಿ ಬ್ರದರ್ಸ ಮೋಟಾರ ಡ್ರೈವಿಂಗ ಇನ್ ಸ್ಟಿಟ್ಯೂಶನ್ ೪೯೫ ಶನವಾರ ಪೇಠ ಪುಣೆ ಶಹರ

ತಾರೀಖು ೨೮ ಜುಲೈ

ರಾ. ರಾ ವ್ಯವಸ್ಥಾಪಕ 'ಕನ್ನಡಿಗ' ಬಾಗಲಕೋಟ ಇವರಿಗೆ—ವಿ ವಿ ನಾನು ನಿಮಗೆ ಮುದ್ದಾಂ ಪತ್ರ ಬರೆಯಲು ಉದ್ಯುಕ್ತನಾಗಿದ್ದೇನೆ ಯಾಕಂದರೆ ನಿಮ್ಮ 'ಕನ್ನಡಿಗ'ನಲ್ಲಿ ಪ್ರಸಿದ್ಧವಾದ ನಮ್ಮ ಜಾಹಿರಾತಿನ ಪರಿಣಾಮವು ಬಹಳ ಚನ್ನಾಗಿ ಆಗಿದೆಂಬುದು ನಮಗೆ ಕಂಡು ಬರುತ್ತದೆ ಅದ್ದರಿಂದ ನಮ್ಮ ಮೊದಲಿನ ಸಣ್ಣ ಜಾಹೀರಾತನ್ನು ತೆಗೆದು, ಅದರ ಬದಲಾಗಿ ಈ ಪತ್ರದ ಜೊತೆಯಲ್ಲಿ ಕಳುಹಿಸಿದ ದೊಡ್ಡ ಜಾಹಿರಾತನ್ನು ನಿಮ್ಮ ಪತ್ರದ ಅರ್ಧಪುಟದಲ್ಲಿ ಹಾಕಬೇಕಾಗಿ ಬೇಡಿಕೆ. ಅದರ ಬೆಲೆ ಏನಾಗುವದು ಅದನ್ನು ತಿಳಿಸಬೇಕು. ಕೊಡುವೆನು **ಜಿ ಎಚ್. ಕುಲಕರ್ಣಿ ಮ್ಯಾನೇಜರ,**

"ಕನ್ನಡಿಗ"ದಲ್ಲಿ ನಿಮ್ಮ ಜಾಹೀರಾತನ್ನು ಕೊಟ್ಟು ಗಿರಾಕಿಗಳನ್ನು ಪಡೆದು, ಲಾಭ ಹೊಂದಿರಿ. ತಡಮಾಡದೆ ಈ ದಿನವೆ ಪತ್ರ ಬರೆಯಿರಿ.

—ವ್ಯವಸ್ಥಾಪಕ.

ಜಾಹೀರ ಲಿಲಾವು.

ಸೋಮವಾರ ತಾ|| ೨೩ ಮೇ ಸನ್ ೧೯೨೭ನೇ ದಿವಸ ಸಾಯಂಕಾಲ ೪ ಘಂಟೆಗೆ ಮತ್ತು ೪ ಘಂಟೆಯ ನಂತರ ಬಾಗಲಕೋಟೆಯ ಹಿತ್ತಲ ಮನಿಯವರ ಓಣಿಯಲ್ಲಿದ್ದ **ಕಿತ್ತೂರ ಸಾಹೇಬರ ಮನೆ** ಜಾಹೀರ ಲಿಲಾವಿನಿಂದಾ ಮಾರಲ್ಪಡುವದು. ತಕ್ಕೊಳ್ಳಲಿಚ್ಛಿಸುವವರು ಸದರಿ ಮನೆಯ ಮುಂದೆ ಆಗುವ ಲಿಲಾವಿಗೆ ಬರಬೇಕು. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕೆಳಗೆ ಸಹಿ ಮಾಡುವವರ ಕಡಿಂದಾ ತಿಳಕೊಳ್ಳಬೇಕಾಗಿ ವಿನಂತಿಯು.

ಬಾಗಲಕೋಟೆ ೧೭-೫-೨೭ — **ಬಸಯ್ಯನವರು ದಂಡಾವತಿ,** ಶಿವಾನಂದ ಫ್ಯಾಕ್ಟರಿ ಮ್ಯಾನೇಜರ ಬಾಗಲಕೋಟೆ.

ಮತ್ತು

ಆರ್. ಜಿ ಅಂದಾನಿಮಠ

C/o ವಿ. ಆರ್. ಕಿತ್ತೂರ

ಉಳವೀ ಬಸಪ್ಪನ ಗುಡ್ಡ ಧಾರವಾಡ.

ಜಾಹೀರ ನೋಟೀಸು

ಯಲಗುರದಪ್ಪಾ ತಂದಿ ಹಣಮಪ್ಪಾ ಹೆಬ್ಬಾಳ ಸಾ|| ನಾಯನೇಗಲಿ ತಾಲೂಕ ಬಾಗಲಕೋಟ ಇವರಿಗೆ

ನಾನು ಬಾಲಪ್ಪಾ ತಂದಿ ಯಲಗುರದಪ್ಪಾ ಅಜ್ಞಪಾಲಕನ ತಾಯಿ ಬಸವ್ವಾ ಗಂಡ ಬಸಪ್ಪಾ ಹೆಬ್ಬಾಳ ಸಾ|| ನಾಯನೇಗಲಿ ತಾ|| ಬಾ|| ನಾನು ಈ ನೋಟೀಸಿನಿಂದ ತಿಳಿಸುವದೇನಂದ್ರೆ ನನ್ನ ಖಾಸ ಮಗನಾದ ಬಾಲಪ್ಪಾ ಈತನನ್ನು ಮಳಗಡೆ ಅಜವಾಸ ಎಂಟು ಒಂಭತ್ತು ವರ್ಷದ ಕೆಳಗೆ ದತ್ತಕ ಪೂರ್ವಕ ದತ್ತಕ ತೆಗೆದು ಕೊಂಡಿಂತ್ರಿ ಆ ಸ್ತ್ರೀಂದ ದತ್ತಕ ಮುಗಾ ಈ ನಾತೆಯಿಂದ ನಿಮ್ಮ ಘರಾಣದ ಯಾವತ್ತೂ ಪಿತ್ರಾರ್ಜಿತ ಮಿಳಕತಿಯ ವಿವರ ಸರ್ವೆ ನಂಬರ ಯಕರೆ ಆಕಾರ ನಂಬರುಗಳು

೪೩/೩ ೮—೨೩ ೩೧೪

೯೬ ಪೊರಖರಾಬ—೪ ೧೭'೩

ನಾಯನೇಗಲಿ ಗ್ರಾಮದಲ್ಲಿಯು ಮನಿ ೧ ಅವನ ದಾದರೂ ಪೂರ್ಣ ಹಿತಸಂಬಂಧ ಇದ್ದು ಅವನಾದರೂ ಪೂರ್ಣ ಮಾಲೀಕನಿರುತ್ತಾನೆ. ಹೀಗೆ ಇದ್ದಾಗಿ ಸದರಿ ಹುಡುಗನನ್ನು ನಿಮ್ಮ ಮನಿಯೊಳಗೆ ಬರಕೊಡದೆ ಅವನ ಸಂರಕ್ಷಣ ಸಹ ಮಾಡುವದಿಲ್ಲಾ ಮತ್ತು ಸದರಿ ಅಜ್ಞಾನ ಹುಡುಗನ ಲುಕ್ಸಾನ ಮಾಡುವ ಇರಾದೆಯಿಂದ ಯಾವದೂ ಯೋಗ್ಯ ಕಾರಣ ಇಲ್ಲದೆ ಸದರಿ ಮೇಲೆ ಮೂದಲ ಮಾಡಿದ ಮಿಳಖತ್ತು ಕೈಗೆ ಸಿಕ್ಕಂತೆ ಲೀಲೆವಿಟ ಮಾಡುತ್ತಿದಿ ಅಂತಾ ತಿಳಿಯುತ್ತದೆ. ಹೀಗೆ ಮಾಡೋಣದರಿಂದ ಅಜ್ಞಾನ ಹುಡುಗನದು ನಮ್ಮ ಕುಟುಂಬದ ಯಾವದು ಹಿತ ಕಾಣಿಸುವದಿಲ್ಲ ಕಾರಣಾ ಸದರಿ ಮಿಳಕತ್ತಿನ ಯಾವದಾದರೂ ಭಾಗ ವಿಲೇವಾಟ ಮಾಡಿದರೆ ನನ್ನ ಅಜ್ಞಾನ ಮಗನ ಮೇಲೆ ಬೋಜಾ ಇಲ್ಲ

ಇ ಎಡಗೈ ಹೆಬ್ಬಿಚ್ಚಿನ ಗುರ್ತು ಬಸವ್ವಾ ಗಂಡಾ ಬಸಪ್ಪಾ ಇಕಿಯು ಅದೆ ದ|| ಸದರ

ವ್ಯವಸಾಯ ಪ್ರೇಮಿಗಳಾದ

ಕನ್ನಡ ತರುಣರಿಗೆ ಸುಗಂಧಿಯು!

ಕನ್ನಡ ಯುವಕರು ಮುಂದಾಗಬೇಕೆಂಬ ಲವಲವಿಕೆಯಿಂದ ನಾವು ಪ್ರತಿವರ್ಷ ಇಬ್ಬರಿಗೆ ನಮ್ಮ ವ್ಯವಸಾಯವಾದ '**ಫೋಟೋ** ಗ್ರಾಫಿ' ನಲ್ಲಿ, ಉತ್ತಮ ಶಿಕ್ಷಣ **ಕೊಡಬೇಕೆಂದು ನಿರ್ಧರಿಸಿ**ದ್ದೇವೆ. ಹುಡುಗರ ವಯಸ್ಸು ೧೨ ಕ್ಕೆ ಮಿಕ್ಕಿರಬಾರದು. **ಅವರು** ತಮ್ಮ ಗುಣಗಳಬಗ್ಗೆ ಸರ್ಟಿಫಿಕೇಟ ಕಳಿಸಬೇಕು. **ವಿಶೇಷತಃ** ಅನಾಥ ಸಂಘಗಳ ಚಾಲಕರು ಇತ್ತ ಲಕ್ಷ್ಯಕೊಡಬೇಕು. **ಸತತವಾಗಿ** ೫ ವರ್ಷ ನಮ್ಮಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ **ತಿಂಗಳಿಗೆ** ೫೦ ರೂ ಗಳಿಸುವಷ್ಟು ಯೋಗ್ಯತೆಯನ್ನು ತಂದುಕೊಡುವದು ಸಪ್ಪನ್ನು ಕೂಡಿದೆ. ಇತಿ,

ಕನ್ನಡಿಗರ ಸೇವಕ, ಭೀಮಾಚಾರ್ಯ ಚಿನ್ಮುಲಗಿ ಫೋಟೋ ಗ್ರಾಫರ ಪುಲ್ಲೀ ಬೋವಲಿ ಗೌಳೀಗುಡ್ಡ ಹೈದರಾಬಾದ (ದಕ್ಷಿಣ)

ಲಕ್ಷದಲ್ಲಿರಲಿ!

ಪ್ರಾರಂಭದ ದಿನವು ಸಮೀಪಿಸಿತು.

ಸಂಶಯ ಸಾಮ್ರಾಜ್ಯ

ಈ ಹೊಸ ಸಾಮಾಜಿಕ ನಾಟಕವು ಬೇಗನೇ ಪ್ರಯೋಗಿಸಲ್ಪಡುವದು.

ಬಾಗಲಕೋಟೆ ೧೦|೫|೩೭ } ವ್ಯವಸ್ಥಾಪಕ ಶ್ರೀ ಕೃಷ್ಣ ಸಂಗೀತ ನಾಟಕ ಮಂಡಳಿ.

ಲಿವರಿನ ಗಡಿಯಾರಗಳು.

ಲಿವರಿನ ಕೈ ಗಡಿಯಾರ ರೂ. ೯.

ಲಿವರಿನ ಕಿಸೆಯೊಳಗಿಡುವ ಗಡಿಯಾರ ರೂ. ೭.



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಮೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವದು; ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ತಾಳುವವು. ಬೆಲೆ ಕಡಿಮೆಯಿದೆಂದು ಅಂಜುವ ಕಾರಣವಿಲ್ಲ. ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚ ತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚ ಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ. ಅದರಿಂದ ಬೆಲೆ ಕಡಿಮೆ. ಸಂಶಯಕ್ಕೆ ಕಾರಣವಿಲ್ಲ.

ಲಿಬರ್ಟಿ ವಾಚ ಕಂ. (ಇಂಡಿಯಾ.) ಬಾಂಬೆ ೬ ೪.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರಿಗೆ ಬೇಕಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಯವು ಇನಾಂ!!! ೧. ಹಾಸಲು

ಅಲ್ಲದೆ ಸರ್ವರಿಗೂ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಪಿ. ಬಂಟರ—ಸಂಬಾಲಿಂಗಸ್ವಾಮಿ ಶಾಸ್ತ್ರೀ ವೈದ್ಯವಾದಿ.

ಸ್ಟೇಶನರ ಬಾಗಲಕೋಟೆ

ಕಾಯಿಪಲ್ಯೆ ಸಾಮಾನ ಬಳಿ ಕಾಲಿಗಂಟಿ

ಹಾ. ಜೋಶಾಪುಜಾರಿ ನ ಸಹಿತ

ಯಾವದೇ { ಆಕಾರದ / ಸ್ವರೂಪದ / ಕಂಪನಿಯ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ ೧೪, ಅರ್ಧ ಬೆಲೆ ರೂ. ೭



ಬರೇ ಒಂದು ತಿಂಗಳ ಒಳಗಾಗಿ ಈ ದರವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ಸಿದ್ಧೋತ್ತಮ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಕೊಡುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೀತಿಯ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂ. ೭

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ರ:— ಸ್ವಾನ ಹೌಸ ಪಿ. ಬಿ. ೩೦೮. ಪಿ. ೬ ಮದ್ರಾಸ

ಆಶ್ಚರ್ಯವಿದೆ! ಉಚಿತ!

ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ್ ರಜಿಸ್ಟರ್ಡ್ ಪೋಕೆಟ್ ವಾಚ್ ಗಳು ಕೆರೆಟ್ ಗೋಲ್ಡ್ ನಿಂದ ಲಿಪ್ತವಾಗಿರುವದು. ಮುಖಪಟ್ಟಿಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕಾರ್ಖಾನೆಯವರು ಅಚ್ಚು ಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಜಿಸ್ಟರ್ಡ್ ೧೮ ಕೆರೆಟ್ ಗೋಲ್ಡ್ ಗಿಲ್ಟಿನ ಪೋಕೆಟ್ ವಾಚ್ ಗಡಿಯಾರಗಳ ಕೂಡ ಬರೇ ರೂಪಾಯಿ ೬

ಕ್ಯಾಪ್ಟನ್ ವಾಚ್ ಕಂ, ಪಿ. ಬಿ. ೭೬೫ ಮದ್ರಾಸ

'ಕನ್ನಡಿಗ'ನ ವಾರ್ಷಿಕ ಚಂದಾ ನಿರ್ಣಯ.

ಪೋಷಕರಿಗೆ ವಾ. ೫ ರೂ. ಉಪಕಾರಕರ್ತೃಗಳಿಗೆ ವಾ. ೧೦ ರೂ ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ	೧ ರೂ. ಇಲ್ಲವೇ, ೧೫ ನಂಬರಿಗೆ ಕಡಿಮೆ ಯಾಗದಂಥ ೯೦೦೦ ಯಾರ್ಡ ಕೈನೂಲು
ಪರಸ್ಥಳದವರಿಗೆ	ಮನಿಯಾರ್ಡರದಿಂದ ೧-೧೩-೦ ವಿ. ಪಿ. ಯಿಂದ ೨-೧-೦ ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೬೦೦೦ ಯಾರ್ಡ ಕೈನೂಲು
ವಾಚನಾಲಯ ಸಭೆ, ಸಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ—	ಸ್ಥಳದವರಿಗೆ ೨-೦-೦ ಪರಸ್ಥಳಕ್ಕೆ ಮನಿಯಾರ್ಡರದಿಂದ ೨-೧೩-೦ ,, ವಿ. ಪಿ. ಯಿಂದ ೩-೧-೦
ಸರಕಾರ, ಮುನಸೀಪಾಲಿಟಿ, ಲೋಕಲ್ ಬೋರ್ಡ ಇತ್ಯಾದಿ.	ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೩-೦, ವಿ. ಪಿ. ಯಿಂದ ೫-೧-೦

ಬಿಡಿ ಸಂಚಿಕೆಗೆ ೯ ಪೈ. ಹಿಂದಿನಸಂಚಿಕೆಯೊಂದಕ್ಕೆ ೨ ಆಣೆ. ಧರ್ಮಾರ್ಥವಾಗಿಯಾಗಲೀ, ವರ್ಷದ ಕಡಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ. —ವ್ಯವಸ್ಥಾಪಕ

ಮನೆಯ ಮಾರಾಟ.

ಬಾಗಲಕೋಟೆ ಕಿಲ್ಲೇದಲ್ಲಿ ಹನ್ನೊಂದು ಓಣಿಯೊಳಗೆ ಶ್ರೀ ವೆಂಕಟೇಶ ದೇವರ ಗುಡಿಯ ಹತ್ತರ, ನಮ್ಮ ಉಭಯತರ ಸಮೂಹಕ ಮಾಲ್ಕೀ ವಹಿವಾಟಿಯ ಮನಿ (ಸಿ. ನಂ. ೨೨೭) ಮಾರತಕ್ಕದ್ದದೆ. ವಾಪಣಿಮಾಲಿನಿಂದಾ ರೇಲವೇ ಸ್ಟೇಶನಕ್ಕೆ ಹೋಗುವ ೩೦ ಫೂಟ ಅಗಲವಾದ ಹೊಸ ರಸ್ತೆಯನ್ನು ಮುನಶೀಪಾಲಿಟಿಯವರು ಈ ಮನೆಯಮುಂದೆ ಮಾಡಲಿಕ್ಕೆ ಸುರುಮಾಡುವವರಿದ್ದಾರೆ. ಕಾರಣಾ ಈ ಮನೆಯು ದೊಡ್ಡ ರಸ್ತೇದಮೇಲೆ ಇರುವದರಿಂದಾ ಬಹಳ ಸೋಯಿಸ್ಕರವಾಗುವದು. ಮನೆಯು ವಿಶಾಲ ಇರತಿದ್ದು ನದಿಗೆ ಸಮೀಪವಾಗಿದೆ. ಇದರಲ್ಲಿ ೨ ಕುಟುಂಬ ಇರುವಷ್ಟು ದೊಡ್ಡದು ಅದೆ. ರಸ್ತೆ ಹೊರ್ತಾಗಿ ಮನೆಯಮುಂದೆ ಅಂಗಳ ಇರುವದು. ಹೆಚ್ಚಿನ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರಾ ತಿಳಿಸಲಾದೀತು. ತಾ|| ೨೯-೪-೧೯೨೭ ಇಸ್ವಿ ಬಾಗಲಕೋಟೆ.

ಭೀಮರಾವ ಜೀವಣರಾವ ಮುತಾಲೀಕ ದೇಶಪಾಂಡೆ.
ಮಾಧವರಾವ ವೆಂಕಟರಾವ ಮುತಾಲೀಕ ದೇಶಪಾಂಡೆ.

ಇಡೀ ಕರ್ನಾಟಕದಲ್ಲಿ ಒಂದೇ ಒಂದಾದ

ಎಲ್ಲಕ್ಕೂ ದೊಡ್ಡ! ಎಲ್ಲಕ್ಕೂ ಅಗ್ಗ

ಸಚಿತ್ರ ಮಾಸಪತ್ರಿಕೆ.

ಜಯ ಕರ್ನಾಟಕ.

ವಾರ್ಷಿಕ ಚಂದಾ (೫-೮-೦) **ಚೈತ್ರದ ತಿಂಗಳಿಂದ**

[ಅಂಚೆ ವೆಚ್ಚ ಸೇರಿ] ಪ್ರಾರಂಭ ಮಾಡುವುದು।

ಸಂಪಾದಕರು **ಆಲೂರ ವೆಂಕಟೇಶರಾಯರು.** ಧಾರವಾಡ.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿಸಿ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಿಣೀ, ಜೀರ್ಣಜ್ವರ, ಅಗ್ನಿಮಾಂದ್ಯ ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು.) ಇದರಿಂದ ಮೈಯ್ಯುರಿ ವ ಗರಮಿಯ ಎಲ್ಲಾ ತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೇ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೨-೦, ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦ ೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯು ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸ:—

ಎಸ್. ಬಿ. ಕದಮ್ ಮತ್ತು ಸನ್ಸ್.
ಮು. ಪೋಸ್ಟ ನಿಪ್ಪಾಣಿ (ಜಿ. ಬೆಳಗಾಂವ.)

ಕರ್ನಾಟಕ ವೈಭವ.

ರಾಷ್ಟ್ರೀಯ ಪಕ್ಷದ ಉಜ್ವಲವಾದ ವಾರ ಪತ್ರಿಕೆಯು

(ಸಂಪಾದಕ **ಹನುಮಂತರಾವ ಮೋಹರೆ.**)

ಕಳೆದ ೩೭ ವರುಷಗಳಿಂದ ಈ ವಾರ ಪತ್ರಿಕೆಯು ಸ್ವಾತಂತ್ರ್ಯ ಸೇನೆಯ ಮುಂಭಾಗದಲ್ಲಿ ನಿಂತು ಬ್ಯೂರಾಕ್ರಸಿಯ ಕೂಡ ಹೋರಾಡುತ್ತಿರುತ್ತದೆ. ಬ್ಯೂರಾಕ್ರಸಿಯ ಅನ್ಯಾಯಗಳನ್ನು ನಿರ್ಭಯದಿಂದ ಬೈಲಿಗೆಳೆಯುವದರಲ್ಲಿಯೂ ಪ್ರಚಲಿತ ರಾಜಕೀಯ ವಿಷಯಗಳನ್ನು ನಿರ್ದಾಕ್ಷಿಣ್ಯದಿಂದ ಚರ್ಚಿಸುವದರಲ್ಲಿಯೂ ಅದು ಕಂಕಣಬದ್ಧವಾಗಿರುತ್ತದೆ. ಕರ್ನಾಟಕ ಸಂಸ್ಕೃತಿಯನ್ನೊಳಗೊಂಡಿರುವ ಆರ್ಯ ಸಂಸ್ಕೃತಿಯು ಪುನರುಜ್ಜೀವನವಾಗಬೇಕೆಂದು ಹಂಬಲಿಸುತ್ತದೆ. ನಾಣ್ಯಗಳ ಚಲನಪದ್ಧತಿ ಮೊದಲಾದ ಅರ್ಥಶಾಸ್ತ್ರದ ಮೇಲೆ ಸಾಮಾನ್ಯ ಜನರಿಗೆ ಸುಲಭವಾಗಿ ತಿಳಿಯುವಂಥ ಲೇಖಗಳು ಇದರಲ್ಲಿ ಬರುತ್ತವೆ. ರಾಷ್ಟ್ರೀಯ ಚಳವಳಿಯ ನಿಜವಾದ ರಹಸ್ಯ ತಿಳಿದುಕೊಳ್ಳಬೇಕಾದರೆ ಈ ಪತ್ರವನ್ನು ಅವಶ್ಯವಾಗಿ ಓದಬೇಕು.

ಇದರ ವ್ಯಾಪ್ತಿಯು ಮುಂಬಯಿ ಮದ್ರಾಸ ಕರ್ನಾಟಕಗಳಲ್ಲಿರುವದಲ್ಲದೆ ನಿಜಾಂ ಇಲಾಖೆ ಮೈಸೂರು ಮೊದಲಾದ ಸಂಸ್ಥಾನಗಳಲ್ಲಿ ಸಹ ಇರುತ್ತದೆ. ಜಾಹಿರಾತ ಕೊಡುವವರಿಗೆ ಒಳ್ಳೇ ಲಾಭದಾಯಕವಿರುತ್ತದೆ. ಸ್ವದೇಶಿ ಕಾರಖಾನೆದಾರರಿಗೆ ಸವಲತ್ತು ತೋರಿಸಲ್ಪಡುವದು.

ವಿಳಾಸ— ಮ್ಯಾನೇಜರ, **ಕರ್ನಾಟಕ ವೈಭವ**
ಪೋಸ್ಟ— ವಿಜಾಪೂರ

ಕಿರ್ಲೋಸ್ಕರ

ಕಬ್ಬಿಣ ನೇಗಿಲುಗಳು

ಹಿಂಗಾರು (ಸುಗ್ಗಿ) ಸಮಾಪಿಸಿತು. ಈ ವರ್ಷ ಮಳೆ ಬೆಳೆ ಚನ್ನಾಗಿರುವದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವದು. ಕಿರ್ಲೋಸ್ಕರ ನೇಗಿಲು ನಂ. ೧೧, ೯, ೮ ಇವು ಒಕ್ಕಲಿಗರಿಗೆ ಬಹಳೇ ಉಪಯೋಗ ಬೀಳುತ್ತವೆ. ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುತ್ತವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್. ಕಿರ್ಲೋಸ್ಕರವಾಡಿ, ಜಿಲ್ಲೆ ಸಾತಾರೆ

ಸ್ಟ್ಯಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲಕ್ಟ್ರಿಕ್ ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ವಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

೧ ನೇ ದರ್ಜೆ ಪುಡಿ (ಪ್ಯಾಕಿಂಗ್ ಸೇರಿ) ೧ ಪೌಂಡಿಗೆ ರೂ. ೧-೭-೦

೭ ನೇ ,, ,, ,, ರೂ. ೧-೩

ದಿ ಸ್ಟ್ಯಾಂಡರ್ಡ್ ಕಾಫಿ ಕಂಪನಿ
ಚಿಕ್ಕಪೇಟೆ ಬೆಂಗಳೂರು ಸಿಟಿ.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ॥ ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ. ೨೭೩೭ ಸಯ್ಯದ ಅಲ್ಲಿ ಅಸಗರ ಬಿಲ್‌ಗ್ರಾಮಿ ಸುಪರೆಂಟೆಂಡಂಟ್ ಸೆಕ್ರೆಟೆರಿಯೆಟ್ ಹೈದರಾಬಾದ ಡೆಕ್ಕನ್ನ ರೂ ೧೦೦೦

(೨) ಎಲ್. ಬಿ. ಸಿ. ನಂ ೧೯೭೭ ನಾರಾಯಣ ವಿಠ್ಠಲ ಲೋಣಕರ. ಕೇರ್ ಆಫ್ ಡಿ. ಈ. ಪುರಾಣಿಕ ೧೯೭ ನಿಹಾಲಪುರ ಇಂದೂರ. ೧೦೦೦

(೩) ಎಲ್ ಬಿ. ಸಿ. ನಂ. ೬೪೧ ರಾಮಚಂದ್ರ ಅನಂತ ಶಿರೋಳೆ. ಡಿವಿಜನಲ್ ಫಾರೆಸ್ಟ ಆಫೀಸರ ಧತಮ್ರಾ. ಪಶ್ಚಿಮಖಾನದೇಶ ರೂ. ೮೦೦

(೪) ಬಾಂಡ ನಂಬರು ೭೫೦೭ ಕೇ. ಜೆ. ಫರ್ನಾಂಡೋ ವ್ಯಾಪಾರಸ್ಥ. ಬ್ರಿಕ್‌ಸಾಯಿಡ ಸಿಲೋನ, ಕೊಲಂಬೋ. ರೂ ೧೦೦೦

(೫) ಬಾಂಡ ನಂಬರು ೧೬೭೬೪ ಎಸ್. ಜಿ. ಚವರೆ. ಅಶಿಸ್ಟಂಟ ಸ್ಟೇಶನ್‌ಮಾಸ್ತರ ಶೆಲಗಿ. ಜಿಲ್ಲಾ ವಿಜಾಪುರ ರೂ ೧೦೦೦

ಬಿ. ಎನ್. ಆರಾಧ್ಯ
ಚೀಫ ಏಜಂಟ ಹುಬ್ಬಳ್ಳಿ (ಧಾರವಾಡ ಜಿಲ್ಲಾ.)

ಜೀವ ವಿಮೆಯ ಕಾರ್ಯದಲ್ಲಿ ಅದ್ಭುತವಾದ ಜಯವು !

ಯಾಕಂದರೆ ತನ್ನ ೧೯ ನೇ ವರ್ಷದಲ್ಲಿಯೇ ಸಾವಿರಕ್ಕೆ ೨೦ ರೂಪಾಯಿ ಲಾಭ ಹಂಚಿದೆ.

ದಿ ಜನರಲ್ ಅಶ್ಯೂರನ್ಸ ಸೊಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮೆ ಕಂಪನಿಗಳನ್ನು ಹಿಂದೆ ಒಗೆದು ಮುಂದೆ ಬಂದಿದೆ. ಇದರಿಂದ ಇದರಲ್ಲಿಯ ಕತೃತ್ವ ಶಕ್ತಿಯು ವ್ಯಕ್ತವಾಗುವದಲ್ಲದೇ, ಇದಕ್ಕಿಂತಲೂ ಹೆಚ್ಚಿನ ಪ್ರಗತಿಪರವಾದ ಕಂಪನಿಯೇ ಇಲ್ಲವೆಂಬುದು ಸಿದ್ಧವಾಗುತ್ತದೆ.

ಸುಲಭ ಕಂತು! ಸಾಕಷ್ಟು ಸೌಕರ್ಯ! ಹೆಚ್ಚಾಗಿ ಲಾಭ!!!

ವಿಮೆಯ ಹಣ ಒಂದು ಕೋಟಿ! ೨೧ ತಿಂಗಳಲ್ಲಿ ಹೆಚ್ಚಾಗಿ ಉತ್ಪನ್ನವಾದದ್ದು ರೂ. ೧,೮೯,೦೦೦

ಏಜಂಟರು ಬೇಕು! ಧಾರಾಳವಾದ ಕಮಿಶನ್!

ವಿಳಾಸ:- ಎಸ್. ಕಪ್ಪೂರ ಬಿ. ಎ. ಎಫ್. ಎಸ್. ಎಸ್. (ಲಂಡನ್) ಅಸಿಸ್ಟಂಟ ಮ್ಯಾನೇಜರ (ಡೆಪ್ಯುಟೇಶನ್ನದ ಮೇಲೆ) ಜನರಲ್ ಅಶ್ಯೂರನ್ಸ ಸೋಸಾಯಿಟಿ ಅಜಮೀರ ಅಥವಾ ಬ್ರ್ಯಾಂಚ ಸೆಕ್ರೆಟರಿ. ಮಿಂಟೋ ಇನ್‌ಸ್ಟಿಟ್ಯೂಟದ ಎದುರು ಬೆಂಗಳೂರ;

GENERAL ASSURANCE SOCIETY LIMITED

ಈ ಪತ್ರಿಕೆಯು ಮಂಗಳವಾರಪೇಠೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿತು.

ರ ನಂ. ೫ ೧೯೪೭ ವಾ. ಚಂದಾ ೧—೧೪—೦ ಮಾತ್ರ

(ಇದರಲ್ಲಿ ಕನ್ನಡ ನವಜೀವನವು ಸಮ ವಿಷ್ಟವಾಗಿದೆ.)

यत्र नार्यस्तु पूज्यन्ते रमन्ते तत्र देवताः ॥ — मनु

ಸಂಪಾದಕರು—ಬಾಗಲಕೋಟೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟೆ ... ಶಕೆ ೧೮೪೯ ... ತಾ 15—5—1927. | ಸಂಚಿಕೆ ೭

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ

ನಿಮ್ಮ ಸಲುವಾಗಿಯೇ ಕನ್ನಡ ಸುಗಿ ... ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ... ನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ ... ಮೋಟಾರಗಳನ್ನು ನಡಿಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು, ಅಲ್ಲದೆ ... ಳಗಿನ ಕೆಟ್ಟಪಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುತ್ತೇವೆ. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಪಸಿಬಿಸಿಯುಳಿಯುವದಿಲ್ಲ ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ ಹಿಂದುಸ್ಥಾನದಲ್ಲೆಲ್ಲಿ ಮೋಟಾರ ನಡಿಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಬೇರೆಕಡೆ ಎಲ್ಲಿಯೂ ಇಷ್ಟು ಕಡಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪು! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದುಕೊಳ್ಳಿರಿ!

ವಿಳಾಸಃ—ಕುಲಕರ್ಣಿ ಮೋಟಾರ ಸ್ಕೂಲ.

೪೯೫ ಶನಿವಾರ ಪೇಠ ಜಮುಖಂಡಿಕರ ವಾಡ ಪುಣೆ ಶಹರ.

S.U. Narayanacharya & Co.

Chaukkamba Benares City.

S U N ... Benares City.

ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ ಜರಿಕಣ, ಜರಿಸೀರೆ, ಕಾಶ್ಮೀರೀ ಶಾಲು, ತಂಬಾರಿ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲಗಳ ಕ್ಯಾಟಲಾಗ ಕೇಳಿದವರಿಗೆ ಇನಾಮಾಗಿ ಕಳಿಸಲಾದೀತು

ವಿಳಾಸ-ಶಿರೋಮಣಿ ನಾರಾಯಣಾಚಾರ್ಯ ಕಂಪನಿ ಚೌಕಾಂಬಾ ಕಾಶಿ

ನಪುಂಸಕತ್ವ

ಧಾತು ವಿಕಾರ ಸ್ವಪ್ನಾವಸ್ಥೆ, ಅಶಕ್ತತೆ ಇತ್ಯಾದಿಗಳಮೇಲೆ ಖಂಡಿತವಾಗಿ ಗುಣಕೊಡುವ ಮತ್ತು ಕಡೆತನಕ ಬಾಳುವ ದಿವ್ಯ ಔಷಧಿ! ಒಂದೇ ಗುಳಿಗೆ!!

ವಿಶೇಷ ಮಾಹಿತಿ ಪತ್ರದ್ವಾರ ತಿಳಿಯಿರಿ

ವಾದಿರಾಜ ಜಹಾಗೀರದಾರ.

ಮು. ಪೋ. ಇಲಕಲ್ಲ. (ವಿಜಾಪೂರ)

ನೀಲಗಿರಿಯು ಕರ್ನಾಟಕವೋ?

೧೯೧೧ ರಲ್ಲಿಯ ಜನಗಣತಿಯಂತೆ ನೀಲಗಿರಿ ಜಿಲ್ಹೆಯ ಒಟ್ಟು ಜನಸಂಖ್ಯೆ ೧೧೮೬೧೮. ಅದರಲ್ಲಿ ೬೭೫೫ ಜನರು ಶುದ್ಧ ಕನ್ನಡಿಗರು ೩೪೦೭೬ ಜನರು ಬಡಗರು, ಅಂದರೆ ಕನ್ನಡದ ಅಪಭ್ರಂಶವಾದ ಬಡಗು ಎಂಬ ಭಾಷೆಯನ್ನಾಡುವರು. ಈ ಗುಡ್ಡದ ಮೂಲನಿವಾಸಿಗಳು ತೋಡರೆಂಬುವರು. ಈಗ ೭೦೦-೮೦೦ ಜನರು ಮಾತ್ರ ಉಳಿದಿರುವರು. ಅವರು ತೋಡ ಭಾಷೆಯನ್ನಾಡುವರು. ಆದರೆ ಅವರಿಗೆ ಕನ್ನಡವು ತಿಳಿಯುವದು. ಬಡಗರೆಂಬುವರು ಬಡಗಣದಿಂದ ಅಂದರೆ ಉತ್ತರದಿಂದ ಅಂದರೆ ಮೈಸೂರ ಕಡೆಯಿಂದ ಬಂದು ೧೭ ಶತಮಾನದಿಂದ ಇಲ್ಲಿ ವಾಸ ಮಾಡುತ್ತಿರುವರು. ಮುಖ್ಯವಾಗಿ ಭೂಮಿಯ ಸಾಗುವಳಿ ಮುಂತಾದವುಗಳನ್ನು ಮಾಡುವ ಜನರು ಇವರೇ. ಬಡಗರು ಹಾಗೂ ಶುದ್ಧ ಕನ್ನಡಿಗರು ಕೂಡಿ ೪೦೮೩೧ ಜನರಾಗುತ್ತಾರೆ. ಅಂದರೆ ಇಡೀ ಜನಸಂಖ್ಯೆಯ ಅರ್ಧದಷ್ಟು ಜನರು ಕನ್ನಡಿಗರಾಗುವರು. ತಮಿಳರು ೨೩೬೨೫ ಜನರಿರುವರು. ಅವರು ಬಹುಶಃ ಪಟ್ಟಣಗಳಲ್ಲಿಯೇ ಹೆಚ್ಚಾಗಿರುವರು. ೧೭೯೯ರ ವರೆಗೆ ನೀಲಗಿರಿಯು ಮೈಸೂರವರ ವಶಕ್ಕೆ ಇತ್ತು. ಅದನ್ನು ದಂಡನಾಯಕನ ಕೋಟೆಯ ಸರದಾರರು ಆಳುತ್ತಿದ್ದರು. ೧೭೯೯ ರಲ್ಲಿ ಅದು ಬ್ರಿಟಿಶ ಸರಕಾರಕ್ಕೆ ಸೇರಿ ಕೊಯಿಮುತ್ತೂರ ಜಿಲ್ಲೆಯ ಭಾಗವೆಂದು ಪರಿಗಣಿಸಲ್ಪಟ್ಟಿತು. ಮುಂದೆ ೧೮೨೦ರಲ್ಲಿ ಅದು ವಸಂತನಿವಾಸವಾಗಲಿಕ್ಕೆ ಒಳ್ಳೇ ಸ್ಥಳವೆಂದು ನಿಶ್ಚಯಿಸಲ್ಪಟ್ಟಿತು. ಅದು ಬ್ರಿಟಿಶರ ವಶವಾದಂದಿನಿಂದ ಕನ್ನಡಿಗರ ಸಂಬಂಧವು ಕಡಿಮೆಯಾಗುತ್ತ ನಡೆದು ಕೊಯಿಮುತ್ತೂರ ಜಿಲ್ಲೆಯ ತಮಿಳರ ಸಂಬಂಧವೇ ಹೆಚ್ಚಾಗುತ್ತ ನಡೆಯಿತು. ಅಧಿಕಾರಿಗಳು ಮುಂತಾದವರು ತಮಿಳರೇ ಬಂದರು. ಹೀಗಾಗಿ ಅದು ತಮಿಳ ಭಾಗವೋ ಏನೋ ಎಂಬ ಭ್ರಮೆಯುಂಟಾಗುವ ಪರಿಸ್ಥಿತಿಯುಂಟಾಯಿತು.

ಈಗಿನ ಸ್ಥಿತಿ

೧೯೨೧ ರಲ್ಲಿಯ ಜನಗಣತಿಯ ಪ್ರಕಾರ ನೀಲಗಿರಿಯಲ್ಲಿ ೧೨೬೫೯೯ ಜನರಿರುವರು. ಈ ವರ್ಷದ ಭಾಷಾವಾರು ಅಂಕಿಗಳು ಸಿಕ್ಕಿಲ್ಲ. ಆದರೆ ಅರ್ಧದಷ್ಟು ಜನರು ಕನ್ನಡಿಗರೆಂದು ಹೇಳಲು ಏನೂ ಅಡ್ಡಿ ಇಲ್ಲ. ಇಡೀ ಜಿಲ್ಲೆಯಲ್ಲಿ ಸದ್ಯಕ್ಕೆ ಒಂದು ಕನ್ನಡ ಶಾಲೆಯಿಲ್ಲ. ಕನ್ನಡ ಓದಲಿಕ್ಕೆ ಬರೆಯಲಿಕ್ಕೆ ಒಬ್ಬರಿಗೂ ಬರುವದಿಲ್ಲವೆಂದರೂ ಸಲ್ಲುವದು. ಅಲ್ಲಿ ಇಲ್ಲಿ ಯಾರಾದರೂ ಸ್ವಕಷ್ಟದಿಂದ ಕಲಿತವರೇ ಹೊರತು ಮಾತೃಭಾಷೆಯನ್ನು ಕಲಿಯುವ ಯಾವ ಸೌಕರ್ಯಗಳೂ ಇಲ್ಲ. ಈ ಪ್ರಕಾರವಾಗಿ ೬೦೦೦೦ ಕನ್ನಡಿಗರು ಮಾತೃಭಾಷೆಯನ್ನು ಓದುವ ಬರೆಯುವ ಸಾಧನವಿಲ್ಲದೇ ಈ ದಿನ ತೊಳಲುತ್ತಿರುವರು. ಇದಕ್ಕಿಂತ ನಗೆಗೇಡಾದ ಸ್ಥಿತಿಯು ಎಲ್ಲಿಯಾದರೂ ಇರಬಹುದೋ? ಇದಕ್ಕೂ ಹೆಚ್ಚಿನ ಮೈಮರೆಯುವಿಕೆಯು ಯಾವ ಜನಾಂಗದಲ್ಲಿಯಾದರೂ ಇರುವದೋ? ನಾನು ಅನೇಕ ಹಳ್ಳಿಗಾಡ ಬಡಗರಿಗೆ ಭೆಟ್ಟಿಯಾಗಿ ಕನ್ನಡದಲ್ಲಿ ಮಾತಾಡಿಸಿ ಕೇಳಲಾಗಿ ಅವರಿಗೆ ಅತ್ಯಂತ ಹರ್ಷವಾಯಿತು. ಕನ್ನಡದಲ್ಲಿ ಕಲಿಸಿದರೆ ನಿಮಗೆ ಲಾಭವಾಗಲಿಕ್ಕಿಲ್ಲವೋ? ಎಂದು ಕೇಳಲಾಗಿ ಅವರು ಅಹುದಹುದೆಂದು ತಲೆದೂಗುವರು. ಆದರೆ ಪಾಪ! ಸದ್ಯಕ್ಕೆ ಯಾವ ಸೋಯಿಯೂ ಇಲ್ಲದ ಪ್ರಾಥಮಿಕ ಶಾಲೆಗಳಲ್ಲಿ ಸಹ ತಮಿಳು ಕಲಿಯುವ ಒತ್ತಾಯವು ಅವರ ಮೇಲೆ ಆಗುತ್ತಲಿದೆ. ಇದನ್ನು ನಿಲ್ಲಿಸುವ ಪ್ರಯತ್ನ ಮಾಡುವದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಿರುವದು.

(ಕರ್ನಾಟಕವೀರ)

ವಾಙ್ಮಯ ಪರಿಚಯ.

ಜಾತ್ರೆಯ ಪುಸ್ತಕ—ದಾವಣಗೆರೆಯ ಜಾಹೀರಾತಿನ ಸಂಘದವರು ಹೊರಡಿಸಿದ ಚಿಕ್ಕ ಪುಸ್ತಕವು ಪುಕ್ಕಟೆಯಾಗಿ ಹಂಚಲ್ಪಡುವದರಿಂದ ನಡುವಿನ ೧೦-೧೫ ಪುಟಗಳನ್ನು ಬಿಟ್ಟು ಉಳಿದ ಭಾಗವೆಲ್ಲವು 'ಜಾಹೀರಾತು'ಗಳಿಗೆ ಆಸ್ಪದವಾಗಿದೆ. ಒಕ್ಕಲತನದ ಶ್ರೇಷ್ಠತೆ, ಸಾಧಾರಣ ಮೊದಲಾದ ಉದ್ದೇಶಗಳಿಗೆ 'ಒಕ್ಕಲತನ' ಮೊದಲಾದ ವಿಷಯಗಳು ಸುಸಂಸ್ಕೃತವಾಗಿರುವವು. ಆದರೆ 'ಜಾತ್ರೆಯ' ಪುಸ್ತಕವೆಂಬ ಹೆಸರೇಕೋ ತಿಳಿಯದು. ಜಾತ್ರೆಗಳ ಹೊರತಾಗಿ ಉಳಿದ ಪ್ರಸಂಗಗಳಲ್ಲಿಯೂ ಇವನ್ನು ಹಂಚಬಹುದಲ್ಲವೇ? 'ಜಾಣಪ್ಪನ ಜಾಣತನ'ವೆಂಬ ಚಿಕ್ಕ ಕತೆಯೂ, 'ಹೋಗು ಬೇಸಾ ಹಳ್ಳಿಗೆ' ಎಂಬ ಕವಿತೆಯೂ ಸರಸವಾಗಿಯೂ ವಿಚಾರಜನಕವಾಗಿಯೂ ಇರುವವು.

ಸುಶಿಕ್ಷಿತರ ಮನಸ್ಸನ್ನು ಸಾಧವಾಗಿಯೂ ಸರಲವಾಗಿಯೂ ಇರುವ ಒಕ್ಕಲತನದ ಕಡೆಗೆ ಎಳೆಯುವಂತೆ ಮಾಡುವದು ಸದ್ಯದ ಸ್ಥಿತಿಯಲ್ಲಿ ಅತ್ಯವಶ್ಯವಾದ ಸಂಗತಿಯು. ಪತ್ರಿಕೆಯ ಉದ್ದೇಶವು ಸಫಲವಾಗಲೆಂದು ಹಾರೈಸುವೆವು.

ಶ್ಯಾಮ.

ದೇವಿ ಜಾತ್ರೆಯೋ ಅಥವಾ ಯಮಲೋಕಯಾತ್ರೆಯೋ? ದಾವಣಗೆರೆಯ ಪ್ರಾಣಿದಯಾ ಸಂಘದವರು ಹೊರಡಿಸಿದ ೧೬ನೆಯ ಪುಸ್ತಕವು. ಇದೊಂದು ಚಿಕ್ಕ ಕತೆಯು. ದೇವಿಯ 'ಶಾಂತಿ'ಗೆಂದು ಮೂಢ ಭಕ್ತಿಯಿಂದ ಮೂಕ ಪ್ರಾಣಿಗಳನ್ನು ಬಲಿಕೊಡುವದನ್ನು ನಿಷೇಧಿಸುವದೇ ಈ ಕಥೆಯ ವಿಷಯವು. ಅಹಂಕಾರ ಅರಿಷಡ್ವರ್ಗಗಳ ತ್ಯಾಗವೇ ನಿಜವಾದ ಬಲಿಯೆಂದೂ, ಜಂ ಸಾರ್ವಹಿತವಾದ ಸಾತ್ವಿಕ ಪೂಜೆಯೇ ದೇವಿಗೆ ನಿಜವಾದ 'ಶಾಂತಿ'ಯನ್ನು ಮಾಡುವದೆಂಬ ಸಂಗತಿಯೂ ಸುಂದರವಾದ ರೂಪವಾಗಿ ಚನ್ನಾಗಿ ತಿಳಿಸಿರುವರು.

'Old prejudices die hard' ಎಂಬ ಇಂಗ್ಲೀಷ ನಾಣ್ಣುಡಿಯಂತೆ ಆಳವಾಗಿ ಬೇರು ಬಿಟ್ಟ ರೂಢಿಗಳು ಅಳಿದು ಹೋಗುವದು ಪ್ರಯಾಸದ ಸಂಗತಿಯು. ಆದರೂ ಕಳಕಳಿಯ ಪ್ರಯೋಗಕ್ಕೆ ತಡೆಯುಂಟೆ? ಪ್ರಾಣಿದಯಾ ಸಂಘದ ಈ ಮಾದರಿಯ ಪ್ರಯತ್ನವು ಸತತವಾಗಿ ಸಾಗಲೆಂದೂ ಸಿದ್ಧಿ ಹೊಂದಲೆಂದೂ ಬಯಸುವೆವು.

ಶ್ಯಾಮ.

ವಿದೇಶೀ ಬಟ್ಟೆಯ ಪೋಷಕರಿಗೆ.

ತೀರ ನುಣುಪಾದ ವಿದೇಶೀ ಅರಿವೆಯು ಬಹಳ ಅಗ್ಗವಾಗಿ ದೊರೆಯುತ್ತಿರುವಲ್ಲಿ, ಕಗ್ಗವಾದ ಖದಿರು ಬಟ್ಟೆಯನ್ನು ಹೆಚ್ಚು ರೊಕ್ಕ ಕೊಟ್ಟು ಕೊಳ್ಳುವದರಲ್ಲಿ ಏನು ಪುರುಷಾರ್ಥವಿದೆ? ಎಂದೆನ್ನುವ ವಿದೇಶೀ ಬಟ್ಟೆಯ ಪೋಷಕರು "ಯಂಗ ಇಂಡಿಯಾ"ದ ಕಳೆದ ಸಂಚಿಕೆಯಲ್ಲಿ ಬರೆಯಲ್ಪಟ್ಟ ಸ್ವಾರಸ್ಯದ ವಿಧಾನದಲ್ಲಿ ಪರಸ್ಪರದ ತತ್ವವೂ, ಕಾಳುಕಡಿಗಳೂ, ಇಲ್ಲಿಯಕಿಂತ ಅಗ್ಗ ದೊರೆಯಲಿಕ್ಕೆ ಹತ್ತಿದವೆಂದರೆ, ನಮ್ಮಲ್ಲಿಯ ಭೂಮಿಯು ಪಡಬಿದ್ದರೂ ಚಿಂತೆಯಿಲ್ಲ; ದನಕರುಗಳು ಉಪವಾಸದಿಂದ ಬಳಲಿದರೂ ಅಡ್ಡಿ ಇಲ್ಲ ವಿದೇಶದ ಕಾಳುಕಡಿಗಳನ್ನೂ ತುಪ್ಪವನ್ನೂ ನಾವು ಯಾಕೆ ಕೊಳ್ಳಬಾರದು? ಸದರ ವಸ್ತ್ರ ಭಾಂಡಾರಗಳಲ್ಲಿಯ ಖಾದಿಗಳು ಕೆಲವು ದಿವಸಗಳಲ್ಲಿಯೇ ಪೇಟೆಯಲೆಲ್ಲ ಅಗ್ಗವಾಗಿ ದೊರೆಯುವಂತೆ ಸ್ವದೇಶದ ಕಲಾಭಿಮಾನಿಗಳು ವಿಶ್ವಾಸದಿಂದ ಪ್ರಯತ್ನ ಮಾಡಿದರೆ, ಒಪ್ಪತ್ತು ಊಟ ಹೊಟ್ಟೆಗಿಲ್ಲದೆ ಕಷ್ಟಬಡುವ ಬಡಬಗ್ಗರಿಗೆ, ಹೊಟ್ಟೆಯ ಚಿಂತೆಯನ್ನಾದರೂ ಬಿಡಿಸಿದಂತಾಗುವದಿಲ್ಲವೇ?

ಕನ್ನಡಿಗ.

ಬಾಗಲಕೋಟೆ ವೈಶಾಖ ಶುದ್ಧ ೧೪ ಶಕೆ ೧೮೪೯

ಸಂಪಾದಕರ ಭೂಮಿ

(ಓಂ)

ನಿನ ಮನಸಿನ ಮೋಣವಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊನ್ನು।
ಚಿನ್ನದಾದರು ಚಿನ್ನ ಮೋಣಬಸ್ತಿಯು ನೊಂದು ಚಿನ್ನಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ಕನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯಿ॥

—ಅಂಜನಾ ತನಯ ದತ್ತ

ಮಂಗಳೂರ ಸಾಹಿತ್ಯ ಸಮ್ಮೇಲನದ ದಿನಗಳು ತೀರ ಸಮೀಪಿಸಿದವು. ಬಹು ದಿನಗಳ ಮೇಲೆ ಈ ಸಮ್ಮೇಲನವು ಮಂಗಳೂರಲ್ಲಿ ಸೇರಲಿಕ್ಕಿದೆ. ಅಲ್ಲಿಯ ವಾಙ್ಮಯ ಸೇವಕರು ಸಜ್ಜಾಗಿ ಪೂರ್ವ ಸಿದ್ಧತೆಯನ್ನು ರಭಸದಿಂದ ಸಾಗಿಸಿದ್ದಾರೆ. ಕರ್ನಾಟಕದ ಎಲ್ಲ ಭಾಗಗಳಿಂದಲೂ ಪ್ರತಿನಿಧಿಗಳು ಬರುವರೆಂದೂ ಅವರು ನಂಬಿರುವರು. ವಿಶೇಷತಃ ಉತ್ತರ ಕರ್ನಾಟಕದವರು ಹೆಚ್ಚಾಗಿ ಬರುವರೆಂದು ಆಶಿಸಿದ್ದಾರೆ. ಅವುದರಿಂದ ಔತ್ತರೇಯರು ತಂಡ ತಂಡವಾಗಿ ಹೋಗಬೇಕಾಗಿ ನಮ್ಮ ಇಚ್ಛೆಯಿದ್ದಿತು. ಆ ಬಗ್ಗೆ ಪ್ರಯತ್ನಮಾಡಿದ್ದು ಆಯಿತು. ಆದರೆ ಇಲ್ಲಿಯ ಬರಗಾಲದ ಸ್ಥಿತಿ; ಹಾಗೂ ಮಂಗಳೂರಿನ ವಿಶೇಷ ವೆಚ್ಚದ ಪ್ರವಾಸಗಳಿಂದ ಅನುಕೂಲತೆ ಇಲ್ಲದಾಗಿ, ನಮ್ಮ ಕಡೆಗೆ ಬಂದ ಪತ್ರಗಳಿಂದ ತಿಳಿಯುತ್ತದೆ. ಇದು ನಿಜವಾಗಿದ್ದರೂ ಹಲವು ಮುಖಂಡರಾದರೂ ಅವಶ್ಯವಾಗಿ ಮಂಗಳೂರಿಗೆ ಹೋಗಿ, ಮಂಗಳೂರ-ಕರ್ನಾಟಕ, ಉತ್ತರ ಕರ್ನಾಟಕಗಳ ಸ್ನೇಹವು ಬೆಳೆಯಲು ಅವಕಾಶವನ್ನುಂಟು ಮಾಡಬೇಕಾಗಿ ನಮ್ಮ ಆಗ್ರಹದ ಸೂಚನೆಯಿದೆ.

ಧಾರವಾಡದಲ್ಲಾದ ಕರ್ನಾಟಕ ಸ್ಥಾನಿಕ ಸ್ವರಾಜ್ಯ ಪರಿಷತ್ತಿನಲ್ಲಿ ಕನ್ನಡ ನುಡಿ, ಕನ್ನಡನಾಡುಗಳ ಅಭಾವ, ಹಾಗೂ ಬಾಯಿಗೆ ಹಾಕಿದ ಒಪಿಮ್ಮಾರಗಳು ಈ ಪರಿಷತ್ತಿನ ಸ್ವಭಾವ ಬಣ್ಣಗಳನ್ನು ಚನ್ನಾಗಿ ಹೊರಗೆಡವುತ್ತವೆ. ಸ್ಥಾನಿಕ ಸ್ವರಾಜ್ಯ ಪರಿಷತ್ತಿದು! ಆದರೂ ಸ್ಥಾನಿಕ ಭಾಷೆ, ಸ್ಥಾನಿಕ ಪ್ರಾಂತಗಳ ಬಗ್ಗೆ ಅಭಿಮಾನವು ಈ ಸ್ವರಾಜ್ಯವಾದಿಗಳಲ್ಲಿರಲಿಲ್ಲ! ಇಂತಹರು ರಾಜಕೀಯ ಸ್ವರಾಜ್ಯವನ್ನು ಭರತಖಂಡಕ್ಕೆ ಬೇಗನೇ ತಂದುಕೊಡುವ ಕಾರ್ಯದಲ್ಲಿ ಎಷ್ಟು ಸಹಾಯಕರಾಗುವರೆನ್ನುವದು ಸ್ಪಷ್ಟವಾಗುತ್ತದೆ. ಇರಲಿ ಪರಿಷತ್ತಾದರೂ ಯಶಸ್ವಿಯಾಯಿತೆ? ೪೦ ಜನ ಪ್ರತಿನಿಧಿಗಳು ಮಾತ್ರ ದಯಮಾಡಿಸಿದ್ದರು! ಹಳೇ ಮಾದರಿಯ ಗ್ರಾಮಪಂಚಾಯತಿಯನ್ನು ಸ್ವಾಗತಾಧ್ಯಕ್ಷರು ಹಳಿದರು! ಶ್ರೋತೃಗಳೂ ಕೇಳಿದರು!! ಈಗಿನ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ಜನರ ವಿಶ್ವಾಸವು ಕಡಿಮೆಯಾಗುತ್ತಿರುವದು! ಇಂತಹ ಸಮಯದಲ್ಲಿ ಈ ಪರಿಷತ್ತಿನವರು ತಮ್ಮ ಕೃತಿಯಿಂದ ಆ ವಿಶ್ವಾಸವನ್ನೇ ದೃಢೀಕರಿಸಬೇಕೆಂದು ನಿಯೋಜಿಸಿದಂತೆ ತೋರುತ್ತದೆ.

ಆಲೀಬಾಗದ ಸತ್ಯಾಗ್ರಹವು ಜರಗುತ್ತಲಿದೆ. ೩೦ ವರ್ಷಕ್ಕೊಮ್ಮೆ ಭೂಮಿಯ ಕಂದಾಯವನ್ನು ಏರಿಸುವ ಪದ್ಧತಿಯು ಮುಂಬಯಿ ಪ್ರಾಂತದಲ್ಲಿದೆಯಷ್ಟೇ? ಆ ಪ್ರಕಾರ, ಆಲೀಬಾಗದಲ್ಲಿ ಈಗ್ಗೆ ತೆರಿಗೆಯು ಹೆಚ್ಚಿಸಲ್ಪಟ್ಟಿದೆ. ಆದರೆ ಇದು ಬಹು ಅನ್ಯಾಯಕರವೆಂದೂ, ನೂರಕ್ಕೆ ೩೦ರಿಂದ ೬೦ರ ವರೆಗೆ ತೆರಿಗೆಯು ಹೆಚ್ಚಾದ್ದರಿಂದ ಮೊದಲೇ ಬಡವರಾಗಿದ್ದ ಕುಲಾಬಾ ಜಿಲ್ಲೆಯ ಜನರಿಗೆ ಇದರ ಭಾರವನ್ನು ಸಹಿಸುವದು ಅಸಾಧ್ಯವೆಂದೂ ಸತ್ಯಾಗ್ರಹಿಗಳ ವಿಧಾನ. ೩೦ ವರ್ಷದ ಪದ್ಧತಿಯೇ ಮೊದಲು ಅನ್ಯಾಯಪ್ರದವಾದುದೆಂದು ಅನೇಕ ದಿವಸಗಳಿಂದ ಲೋಕಪಕ್ಷವು ಹೇಳುತ್ತಿದೆ. ಆದರೆ ೩೦ ವರ್ಷದ ಅವಧಿಯಲ್ಲಿ ಉತ್ಪನ್ನವು ಬೆಳೆದರೆ ಮಾತ್ರ ತೆರಿಗೆಯು ಹೀಗೆ ಹೆಚ್ಚಿಸಲ್ಪಡುವದು; ಉತ್ಪನ್ನವು ಬೆಳೆದಾಗ್ಯೆ ಸರಕಾರಕ್ಕೆ ಅದರ ಅಂಶವನ್ನು ಕೊಡುವದು ಪ್ರಜೆಗಳ ಧರ್ಮವು. ವ್ಯವಹಾರ—ಬುದ್ಧಿವಂತರೆಲ್ಲ ಹೀಗೆ ಕೊಟ್ಟೇ ಕೊಡುತ್ತಿರುವಾಗ್ಗೆ, ಕೇವಲ ಭೂಕಂದಾಯವೇಕೆ ಅಪವಾದವಿರಬೇಕು? ಎಂಬದಾಗಿ ಸರಕಾರದ ಇತ್ತಲಿನ ವಿಧಾನ. ಈ ವಿಧಾನಗಳೆರಡೂ ವಿಚಾರಾರ್ಹವಾಗಿವೆ. ಸರಕಾರದ ತಾತ್ವಿಕ ವಿವೇಚನೆಯು ಬಹು ಸೊಗಸಾಗಿದೆ. ಆದರೆ ಬ್ರಿಟಿಶ್-ರಾಜ್ಯಪದ್ಧತಿಯಲ್ಲಿ ತತ್ವಕ್ಕೂ, ಕೃತಿಗೂ ಅಂತರವು ಹೆಚ್ಚಾಗಿದ್ದರಿಂದ, ಭಾರತೀಯರು ಪ್ರತಿಯೊಂದು ಮಾತನ್ನು ಚಿಂತಿಸಬೇಕಾಗಿದೆ. ಪ್ರಜೆಗಳು ಸುಖದಿಂದಿದ್ದು, ಧನಧಾನ್ಯದ ಸಮೃದ್ಧಿಯು ನಿಜವಾಗಿಯೂ ಇದ್ದುದಾದರೆ, ಸರಕಾರದ ವಿಧಾನದಂತೆ, ಹೆಚ್ಚಾದ ತೆರಿಗೆಯನ್ನು ರೈತರು ಆನಂದದಿಂದ ಕೊಡಬಹುದು. ಆದರೆ ಎಷ್ಟು ಹಾಕೊರೆದರೂ ಹಿಂದೀಯರಿಗೆ ಹೊಟ್ಟೆ ತುಂಬಿಕೊಳ್ಳಲು ಹಿಡಿ ಹಿಟ್ಟು ಸಹ ದೊರೆಯದು! ಅರ್ಧ ಹೊಟ್ಟೆಯಿಂದ ಕೋಟ್ಯಾವಧಿ ಜನರು ಜೀವಿಸುತ್ತಿರುವದೂ, ಹಿಂದೀಯರ ಹಾಗೂ ಉಳಿದ ರಾಷ್ಟ್ರಗಳ ಉತ್ಪನ್ನದ ಪ್ರಮಾಣವೂ ಸರಕಾರಕ್ಕೆ ಚನ್ನಾಗಿ ಗೊತ್ತಿದೆ. ಇಂತಹ ಹೃದಯದ್ರಾವಕ ಹಾಗೂ ಕಠಿಣ ಪ್ರಸಂಗಗಳಲ್ಲಿ ಸಹ ರೈತರಿಗೆ ಹೆಚ್ಚಾದ ತೆರಿಗೆಯನ್ನು ಕೊಡೆಂದರೆ ಹೇಗೆ ಕೊಡುವದು? ಭಾರತೀಯರ ಆರ್ಥಿಕ ಸ್ಥಿತಿಯು ಸುಧಾರಿಸುವಂತೆ ಸರಕಾರವು ಹೆಣಗಾಡಲಿ; ಭರತಖಂಡದಲ್ಲಿ ಬಂಗಾರದ ಹೊಗೆಯು ಮತ್ತೆ ಹಾಯಲಿ; ಆಗ್ಗೆ ಸರಕಾರದವರು ತೆರಿಗೆಯನ್ನು ಏರಿಸುವ ವಿಧಾನಗಳನ್ನೆಲ್ಲ ಮುಂದೆ ತರಲಿ; ಅಂದರೆ ರೈತರು ಯಾವ ಬಗೆಯಿಂದಲೂ ವಿರೋಧಿಸರು. ಇನ್ನು, ಆಲೀಬಾಗದ ಸತ್ಯಾಗ್ರಹಿಗಳ ಬಗೆಗೆ. ರೈತರಿಂದ ಹೆಚ್ಚಾದ ಲಾವಣಿಯನ್ನು ಭೂಮಿಯ ದೊರೆಗಳು ಬಹು ದಿನಗಳಿಂದ ತೆಗೆದುಕೊಳ್ಳುತ್ತಲಿದ್ದಾರೆ. ಈ ಲಾವಣಿಯ ಹಣವನ್ನು ಇದಕ್ಕೂ ಹೆಚ್ಚಾಗಿ ಏರಿಸುವದು ಶಕ್ಯವೇಯಿಲ್ಲ. ಲಾವಣಿಯ ಪ್ರಮಾಣದಿಂದ ಭೂ-ಕಂದಾಯವು ಏರಿಸಲ್ಪಟ್ಟಿದ್ದರಿಂದ, ಭೂಮಿಯ ಒಡೆಯರೇ ಈ ಹೆಚ್ಚಾದ ಕಂದಾಯವನ್ನು ತೆತ್ತಬೇಕಿದೆ. ಭೂ ಕಂದಾಯವು ಹೆಚ್ಚಾಗಿದೆ. ಲಾವಣಿಯನ್ನು ಹೆಚ್ಚಾಗಿ ಕೊಡಿರೆಂದು ರೈತರಿಗೆ ಕೇಳುವ ಧೈರ್ಯವು ಭೂಮಿಯ ಒಡೆಯರಲ್ಲಿಲ್ಲ. ಆದುದರಿಂದ ಸತ್ಯಾಗ್ರಹವೊಂದೇ ಮಾರ್ಗ ಉಳಿದಂತಾಗಿದೆ. ಆದರೆ ಸತ್ಯಾಗ್ರಹವ ಬುದ್ಧಿವಾದಪ್ರಿಯರೂ, ಲೆಕ್ಕ ಹಾಕುವವರೂ ಆದ ಮಹಾರಾಷ್ಟ್ರರಿಗೆ ಸಲ್ಲದು. ಮಿತಿಮೀರಿದ ಸಾತ್ವಿಕ ವೃತ್ತಿಯು ದ್ವಾರನೇ ಸತ್ಯಾಗ್ರಹದ ಧ್ವಜಪತಾಕೆಯನ್ನು ಮೊಗವೆತ್ತಿ ನಿಲ್ಲಬಲ್ಲದು.

ಮುಳಶೀಯಲ್ಲಿ ಪ್ರಾರಂಭಿಸಿದ ಮಹಾರಾಷ್ಟ್ರವೀರರ ಸತ್ಯಾಗ್ರಹದ ಚಳವಳಿಯು ವರಿಗೆ ಹತ್ತಿದೆ. "ಹೊಸ್ಕ ಬಂಗಾ"ವು ಹೊರಡಲಿಲ್ಲ. ಆದುದರಿಂದ ಸಂಪೂರ್ಣವಾಗಿ ಕೊನೆಗಾಣಿಸುವಾಗ ಅಚ್ಚುಕಟ್ಟಿನ ಪೂರ್ವ ಸಿದ್ಧತೆಯಿಲ್ಲದೇ, ಸತ್ಯಾಗ್ರಹಕ್ಕೆ ತೆಕ್ಕೆ ಬಿದ್ದುದು ಸರಿಯಾಗಲಿಲ್ಲ.

ಧಾರವಾಡ ಹಾಗೂ ಸುತ್ತಲಿನ ಹಳ್ಳಿಗಳ ಮಹಾಜನಗಳೆಲ್ಲ ಕೂಡಿ ಬೆಳಗಾವಿ—ಹುಬ್ಬಳ್ಳಿಯ ರೇಲ್ವೇ ಮಾರ್ಗವು ಬದಲಾಗಬೇಕಾಗಿ ರೇಲ್ವೇ ಕಂಪನಿಗೆ ಬೇಡಿದ್ದಾರೆ. ಬೆಳಗಾವಿಯಿಂದ ಈ ಮಾರ್ಗವು ಹೊರಡದೇ ಖಾನಾಪೂರದಿಂದ ಪ್ರಾರಂಭವಾಗಬೇಕಾಗಿ ಇವರ ಲಾಲಸೆ. ಬೆಳಗಾವಿಯು ಜಿಲ್ಹೆಯ ಸ್ಥಾನ. ಲಷ್ಕರಿನ ಕೇಂದ್ರ. ಕರ್ನಾಟಕದ ಮುಖ್ಯ ಪಟ್ಟಣ. ಇಂತಹ ಸ್ಥಳವು ರೇಲ್ವೇ ಕೂಟ (ಜಂಕ್ಶನ್) ವಾಗದೇ, ಖಾನಾಪೂರದಂತಹ ಅಪ್ರಸಿದ್ಧ ತಾಲೂಕಿನಿಂದ ರೇಲ್ವೆ ಪ್ರಾರಂಭವಾಗಬೇಕೆನ್ನುವದು ನಮಗೆ ಸಮಂಜಸ ತೋರದು. ರೇಲ್ವೇ ಕಂಪನಿಗೆ ಬೆಳಗಾವಿಯು ಈಗಾಗಲೇ ಮಹತ್ವದ ಸ್ಟೇಶನ್ನಿದ್ದದರಿಂದ ಅವರ ಅನೇಕ ಅಧಿಕಾರಿಗಳೂ, ಕಾರ್ಯಾಲಯಗಳೂ ಅಲ್ಲಿವೆ. ಇದರಿಂದ ಬೆಳಗಾವಿಯನ್ನೇ ಕೂಟ ಮಾಡುವದು ಅವರಿಗೆ ಸರ್ವವಿಧದಿಂದಲೂ ಅನುಕೂಲವಾಗುವದು. ಆದುದರಿಂದ ಧಾರವಾಡದ ಜನರ ಈ ಬೇಡಿಕೆಯು ಮನ್ನಿಸಲ್ಪಡುವ ಸಂಭವವು ತೀರ ಕಡಮೆ. ಇದನ್ನು ಧಾರವಾಡದವರು ಕೂಡ ಬಲ್ಲರೆಂತಲ್ಲ ಇದು ಶಕ್ಯವಿರದಿದ್ದರೆ, ಅವರು ಮತ್ತೊಂದು ಸೂಚನೆಯನ್ನು ಮಂಡಿಸಿರುವರು. ಬೆಳಗಾವಿಯಿಂದ ಹೊರಟು, ಈ ಮಾರ್ಗವು ಮರ್ಕಟ್ಟಿ ಕೋಳೇಕೊಪ್ಪಗಳಂತಹ ಸಣ್ಣ ಸಣ್ಣ ಹಳ್ಳಿಗಳ ಮೇಲಿಂದ ಹಾಯದೇ, ಗೇಬಪತಿ, ಮುಗಟಖಾನ-ಹುಬ್ಬಳ್ಳಿ, ನೇಗಿನಹಾಳಗಳಂತಹ ಪ್ರಮುಖ ಸ್ಥಳಗಳನ್ನಾಕ್ರಮಿಸಿದರೆ, ಜನರಿಗೂ ಕಂಪನಿಗೂ ಕೂಡಿಯೇ ಲಾಭವೆಂದು, ಈ ಜನರು ತೋರಿಸಿಕೊಟ್ಟಿದ್ದಾರೆ. ಈ ಸೂಚನೆಯು ಯೋಗ್ಯವಾಗಿರುವದರಿಂದ ರೇಲ್ವೇ ಕಂಪನಿಯವರು ಅವಶ್ಯವಾಗಿದಕ್ಕೆ ತಮ್ಮ ಗಮನ ಕೊಟ್ಟು, ಆ ಮೇಲೆ ಕಾರ್ಯ ಪ್ರಾರಂಭಿಸಬೇಕು. ಈ ಮಹಾಜನರು, ರೇಲ್ವೆಯ ಕೆಲ ಅಧಿಕಾರಿಗಳಿಂದ ಬಂದ ನಿರಾಶಜನಕವಾದ ಪತ್ರಗಳಿಗೆ ಹೆದರದೇ ಸಿಮ್ಲಾಯಲ್ಲಿರುವ "ರೇಲ್ವೇ ಬೋರ್ಡಿ"ನ ಕಾರ್ಯದರ್ಶಿಗಳಿಗೆ ಪತ್ರ ಬರೆದು, ಬೆಳಗಾವಿ ರೇಲ್ವೇ ಮಂಡಲದ ಬೆಳಗಾವಿ ಜಿಲ್ಹೆಯ ಕಾಯದೇ ಮಂಡಲದ ಪ್ರತಿನಿಧಿಗಳ ಹಾಗೂ ಶ್ರೀ ಬೆಳವಿಯವರ ಮುಖಾಂತರ ಕಾಯದೇ ಮಂಡಲಗಳಲ್ಲಿ ಪ್ರಶ್ನೆ ಕೇಳಿಸಬೇಕು. 'ಕನ್ನಡಿಗ'ನೂ ಈ ಬಗ್ಗೆ ಪ್ರಯತ್ನಿಸುವನೆಂದು ಆಶ್ವಾಸನವನ್ನೀಯುವೆವು.

ಈ ಭಾಗದ ಅಂಚೆ ಮನೆಗಳಲ್ಲಿ ಈಗ ಕನ್ನಡ "ಮನಿ ಆರ್ಡರು"ಗಳ ನಮೂನೆಗಳು ಸಿಗಹತ್ತಿರುವವೆಂದು ಸಂತೋಷ ಪಟ್ಟುಕೊಳ್ಳುವಷ್ಟರಲ್ಲಿ, ಅದರಲ್ಲಿಯ ಕೆಲವು ಕನ್ನಡ ಶಬ್ದಗಳನ್ನು ನೋಡಿದರೆ ಇವು ಇದ್ದೂ ಇಲ್ಲದ ಹಾಗೆ ಎಂದು ನಮಗೆ ಅನಿಸುವದು. ಇಂಗ್ಲೀಷ ನಮೂನೆಗಳು ಕನ್ನಡಿಗರಿಗೆ ತಿಳಿಯದಿರುವದರಿಂದಲೇ ಕನ್ನಡ ನಮೂನೆಗಳನ್ನು ಹೊರಡಿಸಿರೆಂದು ನಾವು ಕೇಳಿದೆವು. ಹೀಗೆಯು ಹೋಗಲೆಂದು ಕನ್ನಡಿಗರ ಬೇಡಿಕೆಗಳಿಗೆ ಮನ್ನಣೆಯನ್ನಿತ್ತು ಕನ್ನಡ ನಮೂನೆಗಳನ್ನು ಏನೋ ಹೊರಡಿಸಿದ್ದಾರೆ. ಆದರೆ ಅವುಗಳಲ್ಲಿಯ ಶಬ್ದಗಳ ಕಡೆಗೆ ಸರಕಾರವು ಲಕ್ಷ್ಯವನ್ನೇ ಕೊಟ್ಟಿಲ್ಲವೆಂಬಂತೆ ತೋರುತ್ತದೆ. ಯಾಕೆಂದರೆ ಕನ್ನಡ ನಮೂನೆಯೊಳಗಿನ "ದಾಖಲಾತಿಗಳನ್ನು ಫಾರಂ ಅಡ್ಕಲಾಗಿ, ರುಜು ಮಾಡಬೇಕು" ಮೊದಲಾದ ಶಬ್ದಗಳನ್ನು ತಿಳಿದುಕೊಳ್ಳುವದು ಎಂಥ ಸುಶಿಕ್ಷಿತನಿಗಾದರೂ ಶಕ್ಯವಿಲ್ಲ. ಅಂದ ಬಳಿಕ ಹಳ್ಳಿಯ ಒಕ್ಕಲಿಗನು ಎಂತು ತಿಳಿದುಕೊಳ್ಳುವನು? ಈ ಕನ್ನಡ ಭಾಷಾಂತರವು ಜನರ ತಿಳುವಳಿಕೆಗಾಗಿಯೇ ಹೊರತು, ಇಂಗ್ಲೀಷ ನಮೂನೆಯ ಶಬ್ದಶಃ ಪರಿವರ್ತನದ ಪಾಂಡಿತ್ಯವನ್ನು ತೋರಿಸುವದಕ್ಕಾಗಿ ಅಲ್ಲ. ಆದುದರಿಂದ ಅಧಿಕಾರಿಗಳು ಇತ್ತ ಕಡೆಗೆ ಲಕ್ಷ್ಯಗೊಡಬೇಕು. 'ಮನಿ ಆರ್ಡರಿ'ನ ನಮೂನೆಗಳನ್ನು ಕನ್ನಡದಲ್ಲಿ ಹೊರಡಿಸಿದಂತೆ, ಪಾವತಿ ನಮೂನೆಗಳನ್ನೂ, "ಸೇವಿಂಗ್ಸ" ಬ್ಯಾಂಕಿನ ಪುಸ್ತಕಗಳನ್ನೂ ಕನ್ನಡದಲ್ಲಿ ಹೊರಡಿಸಿದರೆ ಔಚಿತ್ಯವಾಗುವದು. ಸಾಮಾನ್ಯ ಜನರಿಗೂ ಸಹ ತಿಳಿಯುವಂತಹ ಶಬ್ದಗಳನ್ನೇ ಇವುಗಳಲ್ಲಿ ಉಪಯೋಗಿಸುವ ಬಗ್ಗೆ ಎಚ್ಚರರಾಗಬೇಕು. ಈ ಭಾಗದಲ್ಲಿ ಬಳಿಕೆಯಲ್ಲಿರುವ ಶಬ್ದಗಳನ್ನೇ ಉಪಯೋಗಿಸಬೇಕು. ಅಂದರೆ ಜನರಿಗೂ ತಿಳಿಯುವದು. ಕನ್ನಡದಲ್ಲಿ ಹೊರಡಿಸಿದ್ದೂ ಸಾರ್ಥಕವಾಗುವದು. ಮೇಲೆ ಕಾಣಿಸಿದ ಶಬ್ದಗಳನ್ನು ತೆಗೆದು ಹಾಕಿ ಬಳಿಕೆಯಲ್ಲಿದ್ದ ಶಬ್ದಗಳನ್ನೇ ಇನ್ನು ಮುಂದೆಯಾದರೂ ಉಪಯೋಗಿಸುವರೆಂದು ಆಶಿಸುತ್ತೇವೆ.

ಕೊಡಗಿನಲ್ಲಿ ಸ್ತ್ರೀಯರ ಸಂಖ್ಯೆಯು ನೂರಕ್ಕೆ ೯೦ರಷ್ಟು ಇರುವದರಿಂದ ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಪ್ರತ್ಯೇಕವಾದ ಏರ್ಪಾಡಿರಬೇಕೆಂದು ಅಲ್ಲಿ ಕೆಲವರು ವಿಚಾರಿಸಿದೆ. ಸ್ತ್ರೀ ಶಿಕ್ಷಣವೇನೋ ಬೇಕು. ಆದರೆ ಯಾವ ಬಗೆಯದೆಂಬುದು ಈ ವರೆಗೆ ನಿರ್ಧಾರವಾಗಿಲ್ಲ. 'ಗಂಡಸರ'ಗಳ ಶಿಕ್ಷಣಕ್ಕೂ, ಸ್ತ್ರೀಯರ ಶಿಕ್ಷಣಕ್ಕೂ ಭೇದವಿರಲೇ ಬೇಕು. ಗಂಡಸರು ಕಲಿಯುವ ಅನೇಕ ವಿಷಯಗಳು ಸರ್ವಸಾಧಾರಣ ಸ್ತ್ರೀಯರಿಗೆ ಉಪಯೋಗವಿಲ್ಲ. ಈ ಬಗ್ಗೆ 'ಲೋಕಸೇವಕ'ವು ಬರೆದುದು ಹೀಗಿದೆ:—

ಹಿಂದೆ ನಮ್ಮ ಅಜ್ಜಿಯಂದಿರ ಕಾಲದಲ್ಲಿ ಸ್ತ್ರೀವಿದ್ಯಾಭ್ಯಾಸಕ್ಕೆ ಹೀಗೊಂದು ಸ್ವರೂಪವಿದ್ದಿತು. ಮನೆಯ ಕೆಲಸ, ಕಸೂತಿ ಮುಂತಾದ ನಾಜೂಕು ಕೆಲಸ, ಸಂಸಾರವನ್ನು ನಿರ್ವಹಿಸುವ ಸಾಮರ್ಥ್ಯಕ್ಕೆ ತಕ್ಕ ಬುದ್ಧಿವಾದ ಓದು ಬರಹ, ಶಾಸ್ತ್ರ ಸಾಂಪ್ರದಾಯ ಇವೆಲ್ಲಕ್ಕೂ ಅನುಕೂಲತೆ ಇದ್ದಿತು. ವೃದ್ಧರಾದ ಗೃಹಿಣಿಯರಲ್ಲಿ ಗೃಹಸ್ಥ ಧರ್ಮದ ಉಪದೇಶವನ್ನು ಪಡೆದು ಹೆಣ್ಣು ಹುಡಿಗಿಯರು ಲಜ್ಜಾವತಿಗಳಾಗಿ ಗೃಹಕಾರ್ಯಗಳಲ್ಲಿ ನಿಪುಣರಾಗಿ ನಿಸ್ಪೃಹರಾಗುತ್ತಿದ್ದರು. ಈಗ ಗಂಡು ಹುಡುಗರ ಶಾಲೆಗೆ ನಮ್ಮ ಹೆಣ್ಣುಮಕ್ಕಳನ್ನು ಕಳುಹಿಸಿ ಫಲಿತಾಂಶವಾಗಿ ಸಂಸಾರದಲ್ಲಿ ಸುಖವೂ, ಶಾಂತಿಯೂ ಎತ್ತ ಹೋದವೆಂತೆ ದೂರ ಸರಿದುಕೊಂಡಿರುವದೇ ಕಾಣಬರುವದಾಗಿದೆ. ಅದಂತು ನಿಜವಾಗಿಯೂ ಆ ಬಗ್ಗೆ ಎಷ್ಟೆ ಕೊಡಬಾರದಾಗಿದೆ,

ಇನ್ನಿತರ ಶಿಕ್ಷಣದ ಮಾರ್ಪಾಡಾದರೆ ವಿಹಿತ,

ಸ್ವಲ್ಪೇ ವಿನೋದ.

೧ನೇ ಮಿತ್ರ:— ಈಗ್ಗೆ ತಮ್ಮ ಉದ್ಯೋಗವೇನು?

೨ನೇ ಮಿತ್ರ:— ಉದ್ಯೋಗವೇ ಏನೂ ಇಲ್ಲ. ಆದರೆ ಎಚ್. ಪಿ. ಅಭ್ಯಾಸ ನಡೆದಿದೆ!

ಗ್ರಾಮಜೀವನ.

ಇದೊಂದು ಹೊಸ ವಾರಪತ್ರಿಕೆ. ಇದು ಮೈಸೂರಿನಿಂದ ಪ್ರತಿ ಸೋಮವಾರ ಪ್ರಕಟಿಸಲ್ಪಡುವದು. ಇವರ ಮೊದಲನೆಯ ಸಂಚಿಕೆಯು ಈ ತಿಂಗಳು ೨ನೆಯ ತಾರೀಖಿನಲ್ಲಿ ಹೊರಬಿತ್ತು. ಮೈಸೂರಿನ ಗ್ರಾಮಾಭ್ಯುದಯ ಕಾರ್ಯಾಲಯದಲ್ಲಿದ್ದ ಮಂ॥ ಶೀತಾರಾಮಶಾಸ್ತ್ರಿಗಳೇ ಗ್ರಾಮಜೀವನಕ್ಕೆ ಸಂಪಾದಕರು. ಮುಖ್ಯವಾಗಿ ಇದರ ಧ್ಯೇಯವು ಹಳ್ಳಿಯ ಜನರನ್ನು ಉದ್ಧಾರ ಮಾಡುವದು. ಶೈಲಿಯು ಬಹಳ ಸುಲಭವಾಗಿರುವದು. ಹಳ್ಳಿಯ ಜನರು ಅತಿ ಸುಲಭವಾಗಿ ಅರ್ಥ ಮಾಡಿಕೊಳ್ಳಬಹುದು. ಇದರ ವಾರ್ಷಿಕ ಚಂದಾ ರೂ. ೩-೮-೦ ಈ ತೆರದ ಪತ್ರಿಕೆಯು ಅತ್ಯವಶ್ಯಕವಿದ್ದು, ಈಗ ಹೊರಟಿರುವದು ಅತ್ಯಂತ ಆನಂದದ ಸಂಗತಿಯು. ಮಂ॥ ರಾ॥ ಶಾಸ್ತ್ರಿಗಳಲ್ಲಿ, ಪಂಡಿತರಿಗೆ ಮಾತ್ರವಲ್ಲದೆ, ಕೇವಲ ನಿರಕ್ಷರ ಕುಕ್ಷಿಗಳೂ ಸಹ ಅರ್ಥ ಮಾಡಿಕೊಳ್ಳುವ ರೀತಿ ಬರೆಯುವ ಶಕ್ತಿಯುಂಟು

ಬೆಳಗಾಂವ ಜಿಲ್ಹೆಯ ಪತ್ರವು.

(ತಾ. ೪-೫-೧೯೨೭)

(ನಮ್ಮ ಸ್ವಂತ ಸುದ್ದಿಗಾರನಿಂದ)

ಬೆಳಗಾಂವಃ— ಬಿಸಿಲಿನ ತಾಪವು ಹೆಚ್ಚಾಗಿದೆ. ಮಳೆಯಿಲ್ಲ ಪಾರಿಶಾ ಬೇನೆಯ ಸುಳಿದಾಟವು ಕಡಮೆಯಾಗಿದೆ

ಖಾನಾಪೂರಃ— ಬಿಸಿಲಿನ ತಾಪಕ್ಕೆ ಒಳಲುತ್ತಿರುವ ಜನರು ವಿಶೇಷವಾಗಿ ಇಂಗ್ಲೀಷ ಶಾಲೆಯ ವಿದ್ಯಾರ್ಥಿಗಳ ಸೂಟಿಯಾದ ಮೂಲಕ ಅತ್ತಿತ್ತ ಸಂಚಾರವನ್ನು ಸಾಗಿಸುತ್ತಿರುವರು. ಬೆಳಗಾವಿಯ ಹತ್ತರ ಇರುವ ವೈಜನಾಥ ಗುಡ್ಡವು ಪ್ರಸಿದ್ಧವಾಗಿದೆ. ಖಾನಾಪೂರ ಹತ್ತರ ಮಲಪ್ರಭಾ ನದಿ ದಂಡೆಗಿರುವ 'ಅಸೋಗೆ' ಎಂಬ ಸ್ಥಳವು ಬಲು ರಮ್ಯವಾಗಿದೆ, ಇವುಗಳ ದರ್ಶನದಿಂದ ಬೆಳಗಾಂವಿಯ ಬಡವರ ಮನೋಲ್ಲಾಸವೆಂಬುದು ನಿದರ್ಶನಕ್ಕೆ ಬರುವದು.

ಅಥಣಿಃ— ನೀರಿನ ಕೊರತೆ ವಿಶೇಷವಾಗಿದೆ ಇಲ್ಲಿ ಉಗಾರ ಎಂಬ ಮಾರವಾಡಿ ಸದ್ಗೃಹಸ್ಥರು ತಮ್ಮ ಸ್ವಂತ ಖರ್ಚಿನಿಂದ ಕೃಷ್ಣಾನದಿಯಿಂದ ನೀರನ್ನು ತರಿಸಿ ದನಕರುಗಳಿಗೆ ಪೂರೈಸುತ್ತಿರುವರೆಂದು ಕೇಳಿದ್ದೇವೆ ಸತ್ಯ.

ಗೋಕಾಕಃ— ತಾಲೂಕಿನಲ್ಲಿ ಅನೇಕ ಕಡೆಗೆ ಮಾರಿಕಾ ಬೇನೆಯ ಉಪದ್ರವುಂಟು. ನೀರಿನ ಕೊರತೆಯು ಮೊದಲಿನಿಂದಲೂ ಈ ತಾಲೂಕಿಗೆ ಉಂಟೇ ಉಂಟು, ಈ ವರ್ಷ ದುರ್ಭಿಕ್ಷವೊಂದು ಹೆಚ್ಚಿನದು ಅದುದರಿಂದ

> ಮೊದಲೆ ಮಂಗವು ಮದ್ಯವನು ಮೇ।
> ಲದು ಕುಡಿಯು ಬಳಿಕೊಂದು ವೃಶ್ಚಿಕ।
> ವದು ಕಡಿಯೆ ತರುವಾಯ ಭೂತವು ಬಂದವನು
> ಹಿಡಿಯೆ ॥

ಎಂಬ ಪದ್ಯವು ಜ್ಞಾಪಕಕ್ಕೆ ಬರುವದು.

ಸಂಪಗಾಂವಃ— ಮಾರಿಕಾ ಬೇನೆಯ ಜನ್ಮಸ್ಥಾನವೇ. ಕೆಲ ದಿನ ಎಷ್ಟೋ ಪ್ರಾಥಮಿಕ ಶಾಲೆಗಳು ಮುಚ್ಚಲ್ಪಟ್ಟಿದ್ದವು. ಈ ತಾಲೂಕಿನ ಜನರು ವಿಶೇಷವಾಗಿ ಗಾಬರಿಯಾಗಿದ್ದರು. ಈಗ ಕೊಂಚ ಕಡಿಮೆಯಾಗಿದೆ,

ಹುಕ್ಕೇರಿಃ— "ಹೂವಿನಕೇರಿ" ಎನಿಸುತ್ತಿದ್ದ ಈ ಊರಲ್ಲಿಯೂ ನೀರಿನ ಕೊರತೆಯಾಗಿದೆ, ಎಲ್ಲ ಕಾರಂಜಿಗಳನ್ನು ಬಂದು ಮಾಡಿ ಒಂದೇ ಕಾರಂಜಿಗೆ ನೀರು ಬಿಡುತ್ತಿದ್ದರೂ, ಅದು ತುಂಬುವ ಲಕ್ಷಣವಿಲ್ಲ ಜನರು ಹಗ್ಗವನ್ನು ಉಪಯೋಗಿಸಿ ನೀರನ್ನು ಜಗ್ಗಬೇಕಾಗುತ್ತದೆ, ಗಡಗಡಿಯಲ್ಲಿ ಹಾಗೇ ಜಗ್ಗುವದು ವಿಶೇಷ ತ್ರಾಸದ ಯಾಕೆಂದರೆ ಸರಾಗಿ ಏಕಿಲ್ಲ? ಒಟ್ಟಿನ ಮೇಲೆ ಇದೇ ತಾಲೂಕಿನ ಪರಿಸ್ಥಿತಿ ನೆಟ್ಟಗಿದೆ!

ಸವದತ್ತಿಃ— ಬೆಳಗಾಂವ ಜಿಲ್ಹೆಯ ಪೂರ್ವದ ಮೂರು ತಾಲೂಕುಗಳಲ್ಲಿ ಇದು ಒಂದಾಗಿದ್ದು ಇದರ ದುರ್ದೈವವನ್ನು ವರ್ಣಿಸಲಿಕ್ಕೆ ಸಾಲದು. ಯರಗಟ್ಟಿ, ಸತ್ತಿಗೇರಿ ಮೊದಲಾದ ಸ್ಥಳಗಳಲ್ಲಿ ಕುಡಿಯಲಿಕ್ಕೆ ೩-೪ ಮೈಲಿನಿಂದ ನೀರನ್ನು ತರಬೇಕಾಗುವದರಿಂದ ದನಕರುಗಳ ಗತಿಯೇನು? ಜನರ ಸ್ನಾನದ ಹಾಗೂ ಬಟ್ಟೆಗಳ ಗತಿಯೇನು? ಅನುಭವಿಸುವ ಜನರೇ ಹೇಳಬೇಕಲ್ಲದೆ ಇತರರಿಗೆ ತಿಳಿಯದು

ಚಿಕ್ಕೋಡಿಃ— ಒಟ್ಟಿನ ಮೇಲೆ ಈ ತಾಲೂಕಿನ ಪರಿಸ್ಥಿತಿ ನೆಟ್ಟಗಿದೆ. ವಿಶೇಷ ಗೊಂದಲವು ಕೇಳಬರುವಂತಿಲ್ಲ

ತೃತೀಯ ಕರ್ನಾಟಕ ಆಯುರ್ವೇದ ಸಮ್ಮೇಲನ ಮತ್ತು ಪ್ರದರ್ಶನ ವಿಜಾಪುರ.

ವೈಶಾಖ ಬಹುಳ ೧೩, ೧೪, ೧೫ ದಿವಸ ಮಂಗಳೂರಿನ ಆಯುರ್ವೇದ ಭೂಷಣ ಶಾಸ್ತ್ರಿ ಇವರ ಅಧ್ಯಕ್ಷತೆಯ ಕೆಳಗೆ ನಡೆಯುವದು.

ಸ್ಥಳ— ನಗರದ ಮಧ್ಯದಲ್ಲಿದ್ದ "ಗವ್ಹರ್ಮೆಂಟ ಹಾಯಸ್ಕೂಲ" ಇದರಲ್ಲಿ ಪ್ರತಿನಿಧಿಗಳು ಇಳಿಯುವ, ಊಟದ, ಪ್ರದರ್ಶನದ ತಕ್ಕ ವಿಚಾರಮಾಡು ಮಾಡಿದೆ.

ವಿಜಾಪೂರ ನಗರವು ಉತ್ತಮ ಹವೆಯ ಸ್ಥಳವಿದ್ದು ರಮ್ಯವಾದ ಅನೇಕ ಉತ್ತಮೋತ್ತಮ ಹಳೇ ಕಟ್ಟಡಗಳಿಂದ ಬಹು ಪ್ರಸಿದ್ಧವದೆ. ಇದನ್ನು ನೋಡುವದಕ್ಕಾಗಿ ಪ್ರತಿವರ್ಷ ಎಷ್ಟೋ ಪರದೇಶಿಯರು ಬರುತ್ತಾರೆ "ಬೋಳಗುಮಟವೆಂಬ ಕಟ್ಟಡವು ಇಡೀ ಜಗತ್ತಿನಲ್ಲಿಯೇ ಭವ್ಯತೆಯಲ್ಲಿ ೨ನೇ ನಂಬರ ಪಡೆದದೆ. ಇದರ ಹೊರ್ತು ಇಬ್ರಾಹಿಮ ರೋಜಾ, ಮೆಹತರಿ ಮಹಾಲ, ಮುಂತಾದವುಗಳಲ್ಲಿ ಕಲ್ಲಿನ ಮೇಲಿನ ಕೆತ್ತಿಗೆಯ ಕೆಲಸವು ವರ್ಣನೀಯವಾಗಿದೆ, ಅದರಂತೆ ತಾಜಬಾವಡಿ; ಮುಲುಖ ಮೈದಾನ ತೋಫ ಮುಂತಾದವುಗಳು ನೋಡತಕ್ಕವುಗಳಾಗಿವೆ

ಚಾಲುಕ್ಯರ ರಾಜಧಾನಿಯಾದ ಬಾದಾಮಿಯು ಇದೇ ಜಿಲ್ಲೆಯಲ್ಲಿ ಸಮೀಪದಲ್ಲಿಯೇ ಅದೆ. ಅಲ್ಲಿ ಗುಡ್ಡದಲ್ಲಿ ಕೊರೆದ ಗುಡಿಗಳೂ, ಬನಶಂಕರಿಯೂ ದರ್ಶನಿಯವಾಗಿವೆ.

ಈ ಪ್ರಕಾರ ಒಂದರಿಂದ ಎರಡು ಕೆಲಸಗಳಾಗುವದರಿಂದ ಸಮ್ಮೇಲನಕ್ಕೆ ಬರುವ ಪ್ರಸಂಗವನ್ನು ಯಾರೂ ಕಳಕೊಳ್ಳಬಾರದಾಗಿ ವಿನಂತಿ ಅದೆ.

ಯಾವ ಗಾಡಿಯಿಂದ ಬರುವದು ತಿಳಿಸಿದರೆ ಸ್ವಯಂಸೇವಕರು ಸ್ಟೇಶನಕ್ಕೆ ಬಂದು ಎಲ್ಲ ವ್ಯವಸ್ಥೆಯನ್ನು ಮಾಡುವರು.

ವಿ. ಸು. ಪ್ರತಿನಿಧಿಗಳ ಭೋಜನಾದಿಗಳ ಖರ್ಚು ತೆಗೆದುಕೊಳ್ಳಲ್ಪಡುವದಿಲ್ಲ. ೨ ಪ್ರದರ್ಶನ ವಸ್ತುಗಳನ್ನು ಕೊಡುವ ಮುದ್ದತು ಮೇ ೨೫ ರ ವರೆಗೆ ಮುಂದೆ ಹಾಕಲ್ಪಟ್ಟಿದೆ.

ವಿಜಾಪೂರ
ವೈ. ಶು. ೭, ೧೮೪೯ } ವೈದ್ಯ ಅನಂತಾಚಾರ್ಯ ಆದ್ಯ ಕಾರ್ಯದರ್ಶಿ.

ಇಹವೃತ್ತ.

ಮಕ್ಕಳ ವಾರ (Baby week) ವನ್ನು ಜೂನ ತಿಂಗಳ ಕೊನೆಯಲ್ಲಿ ಬಾಗಲಕೋಟೆಯೊಳಗೆ ಪಾಲಿಸುವದು ನಿಶ್ಚಯವಾಗಿದೆ.

ಕುಲಕರ್ಣಿ ಹಾಗೂ ವಾಲೀ ಮಾಮಲೇದಾರರ ಅಕಾಲ ನಿಧನದಿಂದ ವೀರಶೈವ ಸಮಾಜಕ್ಕಾದ ಹಾನಿಯನ್ನು ಪ್ರದರ್ಶಿಸಲು ದುಃಖಪ್ರದರ್ಶನ ಸಭೆಯು ಕಳೆದ ವಾರ ತಾಜ ನಾಟಕ ಶಾಲೆಯಲ್ಲಿ ಶ್ರೀ ಮಂಗಳವೇಢೇ ಶ್ರೀನಿವಾಸರಾಯರ ಅಧ್ಯಕ್ಷತೆಯ ಕೆಳಗೆ ಕೂಡಿದ್ದಿತು. ಕುಲಕರ್ಣಿಯವರು ಶಿವಯೋಗ ಮಂದಿರಕ್ಕೆ ೫ ಸಾವಿರ ರೂಪಾಯಿಗಳನ್ನು ದಾನ ಮಾಡಿದ್ದಾರೆ ಇಷ್ಟು ಹಣವನ್ನು ಹೆಂಡರಿಗೆ ಸಹ ಮೃತ್ಯುಪತ್ರದಿಂದ ಕೊಟ್ಟಿಲ್ಲ ಹೀಗಿದ್ದರೂ ಶಿವಯೋಗ ಮಂದಿರದ ಅಭಿಮಾನಿಗಳು ಈ ಸಭೆಗೆ ಬರಲಿಲ್ಲವೆಂದು ಜನರು ಆಶ್ಚರ್ಯಪಟ್ಟರು

'ಅರ್ಬನ ಕೋ-ಆಪರೇಟಿವ ಬ್ಯಾಂಕಿನ' ಚೇರಮನ್ನ ಸ್ಥಾನಕ್ಕೆ ಶ್ರೀ ಮಂಗಳವೇಢೇ ಮಧ್ವರಾಯರು ಆರಿಸಲ್ಪಟ್ಟಿದ್ದಾರೆ.

ತಮಿಳರ ಗಂಡ.

ನಾವು ಕನ್ನಡನಾಡಿನವರು ನಮ್ಮ ದೇಶವು ಕನ್ನಡನಾಡು. ನಮ್ಮ ಭಾಷೆಯು ಕನ್ನಡವು. ನಮಗೆ ನಮ್ಮ ದೇಶಕ್ಕಿಂತಲೂ, ಭಾಷೆಗಿಂತಲೂ ಹೆಚ್ಚು ಯಾವದೂ ಇಲ್ಲ. ಏನೂ ಇಲ್ಲ

ನಮ್ಮ ದೇಶವನ್ನು ಅನೇಕ ರಾಜರು ಆಳಿದರು. ಅವರಲ್ಲಿ ಕಂಠೀರವ ನರಸರಾಜ ಒಡೆಯರು ಒಬ್ಬರು. ಅವರಿಗೆ ರಣಧೀರರೆಂದು ಬಿರುದು ಇದ್ದಿತು- ಅವರೇ ತಮಿಳರ ಗಂಡ ಎಂಬ ಬಿರುದನ್ನೂ ಸಂಪಾದಿಸಿದರು. ಅದು ಹೇಗೆ ಬಂದಿತೆಂಬುದನ್ನು ಈಗ ಹೇಳುವೆನು ಕೇಳಿ.

ರಣಧೀರ ಕಂಠೀರವ ನರಸರಾಜ ಒಡೆಯರ ಕಾಲದಲ್ಲಿ ತಿರುಚನಾಪಳ್ಳಿಯೆಂಬ ಪಾಳಯವಿದ್ದಿತು. ಅದರ ರಾಜನು ಬಹಳ ಅಹಂಕಾರದವನು. ಅವನು ಒಂದು ದಿನ ಸಭೆಯಲ್ಲಿ ಕನ್ನಡನಾಡಿನವರು ಹೇಡಿಗಳು, ಅಂಜುಬುರುಕರು ಎಂದೂ ಕನ್ನಡನಾಡಿನವರು ಕೈಲಾಗದವರು ಎಂದೂ ನಮ್ಮ ದೇಶದ ಜನರನ್ನು ನಿಂದಿಸಿದನು.

ಈ ಸಂಗತಿಯು ಕಂಠೀರವರಿಗೆ ತಿಳಿಯಿತು. ಆ ರಾಜನ ಮಾತಿನಿಂದ ತಮ್ಮ-ನಮ್ಮ ದೇಶಕ್ಕೆ ಆದ ಅವಮಾನವನ್ನು ಅವರು ಸಹಿಸಲು ಆಗಲಿಲ್ಲ. ಪರದೇಶಿಯು ನಮ್ಮ ಈ ನಮ್ಮ ನಾಡಿನ ಜನರನ್ನೂ ಅವರ ಶಕ್ತಿಯನ್ನೂ ಜರಿಯಬಹುದೆ?

ಒಡನೆಯೇ ಕಂಠೀರವರು ವೇಷವನ್ನು ಬದಲಯಿಸಿದರು ಯಾರಿಗೂ ತಿಳಿಯದಂತೆ ಅವರು ತಿರುಚನಾಪಳ್ಳಿಗೆ ಹೋದರು.

ತಿರುಚನಾಪಳ್ಳಿಗೂ ಮೈಸೂರಿಗೂ ಇದ್ದ ದಾರಿಯ ಮೇಲೆ ತಿರುಚನಾಪಳ್ಳಿಯ ರಾಜನು ಒಂದು ಚಲ್ಲಣವನ್ನು ಕಟ್ಟಿಸಿದನು ಆದು ಒಬ್ಬ ಜಟ್ಟಿಯದು ಅವನು ತಿರುಚನಾಪಳ್ಳಿಯ ರಾಜನ ಬಳಿಯಿದ್ದವನು ಬಹಳ ಬಲಶಾಲಿಯು. ಆ ದಾರಿಯಲ್ಲಿ ಓಡಾಡುವವರೆಲ್ಲಾ ಆ ಚಲ್ಲಣದ ಕೆಳಗೆ ಓಡಾಡಬೇಕಾಗಿದ್ದಿತು. ಅಂದರೆ ಅವರು ಕನ್ನಡನಾಡಿನವರಗಿಂತಲೂ ತಿರುಚನಾಪಳ್ಳಿಯವರೇ ಅಧಿಕ ಬಲಶಾಲಿಗಳು ಎಂದು ಒಪ್ಪಿದಂತೆ ಆಗುತ್ತಿದ್ದಿತು.

ಕಂಠೀರವರು ಆ ಚಲ್ಲಣವನ್ನು ಕೀಳಿಸಿ, ಬಿಸಾಡಿಸಿದರು. ತಿರುಚನಾಪಳ್ಳಿಯ ಧೊರೆಗೆ ಕೋಪ ಬಂದಿತು. ಅವನು ಕಂಠೀರವರನ್ನೂ ತನ್ನ ಜಟ್ಟಿಯನ್ನೂ ಕಾಳಗಕ್ಕೆ ಬಿಟ್ಟನು.

ಅನುವರೆಗೂ ಆ ಜಟ್ಟಿಯೊಡನೆ ಕಾಳಗವಾಡಿ ಯಾರೂ ಜಯಹೊಂದಲಿಲ್ಲ.

ಅಂತಹ ಬಹು ಬಲಶಾಲಿಯಾದ ಜಟ್ಟಿಯನ್ನು ಕಂಠೀರವರು ಸೋಲಿಸಿದರು

ಆಗ ತಿರುಚನಾಪಳ್ಳಿಯ ಧೊರೆಯ ಗರ್ವವು ಇಳಿಗಿತು. ಕನ್ನಡನಾಡಿನವರು ಶೂರರೂ, ಸಾಹಸಿಗಳೂ ಎಂದು ಅವನಿಗೆ ಚೆನ್ನಾಗಿ ತಿಳಿಯಿತು. ಕಂಠೀರವರಿಂದ ನಮ್ಮ ದೇಶದ ಮಾನವು ಉಳಿಯಿತು.

ತಿರುಚನಪಳ್ಳಿಯು ತಮಿಳರ ದೇಶವು ತಿರುಚನಾಪಳ್ಳಿಯವರನ್ನು ಗೆದ್ದುದರಿಂದ ಕಂಠೀರವರಿಗೆ ತಮಿಳರ ಗಂಡನೆಂಬ ಬಿರುದು ಬಂದಿತು.

ಇಂಥ ಶೂರರೂ ಧೀರರೂ ಆದ ರಣಧೀರ ಕಂಠೀರವ ನರಸರಾಜ ಒಡೆಯರು ನಮ್ಮ ದೇಶವನ್ನು ಬಹ ಕಾಲ ಚೆನ್ನಾಗಿ ಆಳಿದರು

ನಾವುಗಳೆಲ್ಲರೂ ಅವರಂತೆಯೇ ನಮ್ಮ ದೇಶದಲ್ಲಿಯೂ ಭಾಷೆಯಲ್ಲಿಯೂ ಗೌರವವನ್ನೂ ಅಭಿಮಾನವನ್ನೂ ಇಡಬೇಕು.

ಮಕ್ಕಳ ಪುಸ್ತಕ.

ತಮಿಳನಾಡಿನ ಕರ್ನಾಟಕ ಮಂತ್ರಿ.

ನಮ್ಮ ಕನ್ನಡನಾಡಿನ ವೈಭವವು ನಮ್ಮ ಕರ್ನಾಟಕ ದೇಶಕ್ಕಿಂತಲೂ ತಮಿಳು ದೇಶದಲ್ಲಿ ಸಹಸ್ರ ಮುಖದಿಂದ ವರ್ಣಿಸಲ್ಪಡುತ್ತಿರುವುದೆಂದು ಕೇಳಿದರೆ ಯಾವ ಕರ್ನಾಟಕನಿಗೆ ತಾನೇ ರೋಮಾಂಚನವಾಗದೆ ಇದ್ದೀತು? ನಾವು ಚೋಳರಾಜ್ಯದಲ್ಲಿ ಸಂಚರಿಸಿದಾಗ ತಿಳಿದುಬಂದ ಕರ್ನಾಟಕ ವೈಭವವನ್ನು ಕುರಿತು ಅನೇಕ ಗ್ರಂಥ ಧಾರಗಳಿಂದಲೂ ಸದ್ಗುರುವಾಕ್ಯಶ್ರವಣ ಬಲದಿಂದಲೂ ಈ ತಮಿಳನಾಡಿನ ಕರ್ನಾಟಕದ ವೈಭವವನ್ನೂ ಆ ತಮಿಳನಾಡಿನ ಕರ್ನಾಟಕ ಮಂತ್ರಿಯ ಚರಿತ್ರೆಯನ್ನೂ ಸಂಗ್ರಹಿಸಿ ವಾಚಕರ ಹಸ್ತದಲ್ಲಿ ಸಮರ್ಪಿಸಿರುತ್ತೇವೆ

ದಕ್ಷಿಣ ದೇಶವಾದ (ತಮಿಳ) ಚೋಳರಾಜ್ಯದಲ್ಲಿ ಇಷ್ಟು ಮಟ್ಟಿಗೆ ಕರ್ನಾಟಕರ ವೈಖರಿಯು ಅಂದಿನಿಂದಿಂದಿಗೂ ವಿರಾಜಿಸುತ್ತಿರುವಂತೆ ಮಾಡಿರುವವರು ಆದ್ಯ ಕರ್ನಾಟಕ ರಾಜರಾದ ಹೊಯ್ಸಳರು ಈ ಕರ್ನಾಟಕ ಹೊಯ್ಸಳರಾಜರ ಇತಿಹಾಸವನ್ನು ಸಂದರ್ಭಕ್ಕೆ ತಕ್ಕಷ್ಟನ್ನು ಮಾತ್ರ ಇಲ್ಲಿ ವಿವರಿಸುವೆವು.

ಕ್ರಿಸ್ತಶಕ ೧೨೩೪ ರಿಂದ ೧೨೬೪ ರ ವರಿಗೆ ಹೊಯ್ಸಳರಾಜನಾದ ಸೋಮೇಶ್ವರನೆಂಬವನು ಕರ್ನಾಟಕ ದೇಶದಲ್ಲಿ ಚಕ್ರವರ್ತಿಯಾಗಿದ್ದು ರಾಮೇಶ್ವರದ ತನಕ ರಾಜ್ಯವನ್ನು ವಿಸ್ತರಿಸಿದ್ದ ತನ್ನ ತಂದೆಯಾದ ನರಸಿಂಹನಿಂದ ಯೌವರಾಜ್ಯವನ್ನು ವಹಿಸಿ ಕ್ರಮೇಣ ಆ ಸಮುದ್ರಕ್ಷಿತೀಶನೆಂಬ ಹೆಸರು ಹೊಂದಿ ಚೋಳರಾಜ್ಯ ಪ್ರತಿಷ್ಠಾಪನಾಚಾರ್ಯನೆಂಬ ಬಿರುದನ್ನು ಪಡೆದನು.

ಆಗ್ಗೆ ಉತ್ತರ ದೇಶದಿಂದ ಪಲ್ಲವರೂ ದಕ್ಷಿಣದಲ್ಲಿದ್ದ ಪಾಂಡ್ಯರೂ ಇವನ ರಾಜ್ಯದ ಮೇಲೆ ದಂಡೆತ್ತಿ ಬಂದರು. ಸೋಮೇಶ್ವರನ್ನುಬಹು ಪರಾಕ್ರಮದಿಂದ ಕಾದಾಡಿ ಪಲ್ಲವರನ್ನೂ ಪಾಂಡ್ಯರನ್ನೂ ಹೊಡೆದೋಡಿಸಿ ತನ್ನ ರಾಜ್ಯವನ್ನು ಕಾಪಾಡಿಕೊಂಡನಲ್ಲದೆ ತಿರುಚನಾಪಳ್ಳಿಗೆ ಉತ್ತರದಲ್ಲಿರುವ ವಿಕ್ರಮಪುರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಅಲ್ಲದೆ ಅನೇಕ ಸ್ಥಳಗಳಲ್ಲಿ ದೇವಸ್ಥಾನಗಳನ್ನು ಕಟ್ಟಿಸಿದನು. ದಕ್ಷಿಣ ದೇಶದಲ್ಲಿ ಇವನು ಕಟ್ಟಿಸಿರುವ ಅನೇಕ ದೇವಾಲಯಗಳನ್ನು ಈಗಲೂ ನೋಡಬಹುದು. ಈ ಸೋಮೇಶ್ವರನೇ ತಿರುಚನಾಪಳ್ಳಿಯ ಬಳಿ ಇರುವ ಜಂಬುಕೇಶ್ವರಸ್ವಾಮೀ (ಜಂಬುನಾಥೇಶ್ವರ) ದೇವಸ್ಥಾನದ ಪ್ರಧಾನ ಗೋಪುರವನ್ನು ಕಟ್ಟಿಸಿದನು ಚೋಳರಾಜ್ಯವನ್ನು ಸಂರಕ್ಷಿಸಿ ಈಗ ನಾವು ಈಗ ಕಣನೂರೆಂಬ ಹೆಸರಿನಿಂದ ಪ್ರಸಿದ್ಧವಾಗಿರುವ ವಿಕ್ರಮಪುರದಲ್ಲಿ ಬಹುಕಾಲ ವಾಸವಾಗಿದ್ದುದರಿಂದ ಆ ಊರಿನಲ್ಲಿ ಒಂದು ಹೊಯ್ಸಳೇಶ್ವರ ಸ್ವಾಮಿಯವರ ದೇವಸ್ಥಾನವನ್ನು ಕಟ್ಟಿಸಿದನು. ಈ ದೇವಸ್ಥಾನವು ಈಗಲೂ ಹೊಸ ದೇವಾಲಯದಂತೆಯೇ ಇದೆ

ಈ ಸೋಮೇಶ್ವರನ ಕಾಲದ ಶಾಸನಗಳು ಈಗಲೂ ತಂಜಾವೂರ ತಿರುಚನಾಪಳ್ಳಿ ಜಿಲ್ಲೆಗಳಲ್ಲಿ ಬಹಳವಾಗಿ ಸಿಕ್ಕುತ್ತವೆ ಈ ಸೋಮೇಶ್ವರನಿಗೆ ದೇವಲ ಮಹಾದೇವಿಯೆಂದೂ, ಬಿಜ್ಜಳ ರಾಣಿಯೆಂದೂ ಈರ್ವರು ಪಟ್ಟಮಹಿಷಿಯರಿದ್ದರು ಮೊದಲನೆಯವಳ ಹೊಟ್ಟೆಯಲ್ಲಿ ವೀರರಾಮನಾಥನೆಂಬ ಮಗನೂ, ಎರಡನೆಯವಳ ಹೊಟ್ಟೆಯಲ್ಲಿ ನರಸಿಂಹನೆಂಬ ಮಗನೂ ಹುಟ್ಟಿದರು.

ಸೋಮೇಶ್ವರನು ತನ್ನ ರಾಜ್ಯವನ್ನು ಮಕ್ಕಳಿಬ್ಬರಿಗೂ ಸಮಭಾಗವಾಗಿ ಹಂಚಿಕೊಟ್ಟನು. ದ್ರಾವಿಡ ದೇಶದ ಹೊಯ್ಸಳ (ಚೇರ, ಚೋಳ, ಪಾಂಡ್ಯ) ರಾಜ್ಯವು ವೀರರಾಮನಾಥನ ಪಾಲಿಗೂ ಕರ್ನಾಟಕ ದೇಶದ ಹೊಯ್ಸಳ ರಾಜ್ಯವು ನರಸಿಂಹನ ಪಾಲಿಗೂ ಬಂದವು. ಕ್ರಿಸ್ತಶಕ ೧೨೫೪ ರಿಂದ ೧೨೯೨ ರ ವರೆಗೂ ಇವರಿಬ್ಬರೂ ತಮ್ಮ ತಮ್ಮ ಜಿಲ್ಲೆಗಳಲ್ಲಿ ರಾಜ್ಯಭಾರ ಮಾಡುತ್ತಿದ್ದರು. ಇವರ ಕಾಲಾನಂತರ ವಿಶ್ವನಾಥನೆಂಬ ಧೊರೆಯು ಕಣನೂರಿನಲ್ಲಿ ವಾಸವಾಗಿದ್ದು ರಾಜ್ಯವನ್ನು ಪರಿಪಾಲಿಸುತ್ತಿದ್ದನು.

ಮೇಲೆ ವಿವರಿಸಿದಂತೆ ವೀರರಾಮನಾಥನಿಗೆ ತಂದೆಯಿಂದ ದಕ್ಷಿಣ ದೇಶದ ಪ್ರಭುತ್ವವು ಕರಗತವಾಗಲು ದ್ರಾವಿಡ ದೇಶವನ್ನಾಳಲು ದಕ್ಷಿಣ ದೇಶದ, ಕಡೆ ಈತನು ಬಂದ ಕಾಲದಲ್ಲಿ ಈತನ ಜತೆಯಲ್ಲಿ ಕರ್ಣಾಟಕ ದೇಶದಿಂದ ಕೆಲವು ಮಂದಿ ಕರ್ನಾಟಕರೂ ಸಹ ಹೊರಟು ಬಂದಂತೆ ತಿಳಿದು ಬರುತ್ತದೆ. ಈಗಲೂ ಈ ರೀತಿ ಹೊಯ್ಸಳರ ಜತೆಯಲ್ಲಿ ವಲಸೆ ಹೋಗಿ ನಿಂತ ಅನೇಕ ಮಂದಿ ಹೊಯ್ಸಳರ ಕರ್ಣಾಟಕರು ಚೋಳ ದೇಶದಲ್ಲಿ ವಿಶೇಷವಾಗಿರುತ್ತಾರೆ. ಇವರಲ್ಲನೇಕರಿಗೆ ಕರ್ಣಾಟಕ ಲಿಪಿಯು ಸ್ವಲ್ಪವೂ ತಿಳಿಯುವದಿಲ್ಲ. ಮನೆಯಲ್ಲಿ ಮಾತನಾಡುವದು ಕನ್ನಡ ಭಾಷೆ. ಚೋಳರಾಜ್ಯವು ಸಂಪೂರ್ಣವಾದ ತಮಿಳ ದೇಶವಾದ್ದರಿಂದ ಸರಕಾರೀ ವ್ಯವಹಾರ ಭಾಷೆಯೂ, ಶಾಲೆಯಲ್ಲಿ ಕಲಿಸುವ ಭಾಷೆಯೂ ತಮಿಳೇ ಆಗಿದೆ. ಅಲ್ಲಿರುವ ಕನ್ನಡಿಗರಿಗೆ ಕನ್ನಡವನ್ನು ಕಲಿಸಲು ಸರಕಾರದವರು ಯಾವ ಪ್ರಯತ್ನವನ್ನೂ ಮಾಡಿಲ್ಲ. ಇವರಂತೆಯೇ ಹುಟ್ಟು ಕನ್ನಡಿಗರಾದ ಮಾಧ್ವರೂ ಬಡಗನಾಡು ಕರ್ಣಾಟಕರೂ ತಮಿಳ ರಾಜ್ಯದಲ್ಲಿ ಸಾವಿರಾರು ಮಂದಿ ಇದ್ದುಕೊಂಡು ಕನ್ನಡ ಮಾತನಾಡುತ್ತಿರುವರು. ಈ ರೀತಿ ತಮಿಳ ರಾಜ್ಯದ ಕನ್ನಡಿಗರಿಗೆ ಕನ್ನಡ ಲಿಪಿಯನ್ನು ಕಲಿಸಿ ಮಾತೃ ಭಾಷೆಯಲ್ಲಿ ಗೌರವವನ್ನುಂಟುಮಾಡಿ ಕರ್ಣಾಟಕರೆಂಬ ಜಾಗರೂಕತೆಯನ್ನು ಹುಟ್ಟಿಸುವದು ಕರ್ನಾಟಕ ಸಾಹಿತ್ಯ ಪರಿಷತ್ತಿನವರ ಮುಖ್ಯವಾದ ಕಾರ್ಯವಾಗಿದೆ. ಮದರಾಸು ಸರಕಾರದವರನ್ನು ಪರಿಷತ್ತಿನವರು ಕೇಳಿಕೊಂಡರೆ ಕನ್ನಡಿಗರ ಉದ್ಧಾರವಾಗುವದು ನಿಜ. (ಕಾ. ಸಂ.)

"ವಿಷಮ ವಿವಾಹ"

ಗದಗಿನ ಶ್ರೀ ದತ್ತಾತ್ರಯ ನಾಟಕ ಮಂಡಳಿಯವರು ಈ ಬಾರಿ ವಲ್ಲಿ ಆಡಿದ "ವಿಷಮ ವಿವಾಹ' ನಾಟಕವು ಐತಿಹಾಸಿಕವೋ! ಅಥವಾ ಸಾಮಾಜಿಕವೋ ಎಂಬದನ್ನು ಹೇಳುವದೇ ಕಠಿಣವಾಗಿದೆ. ಐತಿಹಾಸಿಕವೆಂದು ಕಲ್ಪಿಸಿದರೆ ಯಾವ ಕಾಲದ ಇತಿಹಾಸವೂ ಅದರಲ್ಲಿ ಸಮಾವಿಷ್ಟವಾಗಿಲ್ಲ. ಲೇಖಕರು ಕಲ್ಪಿಸಿದ ಕಾಲದಲ್ಲಿ ಬೂಟು, ಪಾಟ್ಲೂನ, ಸಿಗಾರೇಟ, ಸಾಯಕಲ್ಲು, ಸೂಚನೆಯ ಗಂಟೆ ಗಡಿಯಾರಗಳಿದ್ದವೋ ಹೇಗೆ? ಇನ್ನು ಸದ್ಯದ ಸಾಮಾಜಿಕ ನಾಟಕವೆಂದು ಕಲ್ಪಿಸಿದರೆ ಏದೂಷಕ ಮತ್ತು ಅಶೋಕರಾಜನ ದ್ವಿತೀಯ ಪತ್ನಿಯಾದ ಶರಾವತಿ ಇವೇ ಮುಂ ಪಾತ್ರಗಳನ್ನು ಮತ್ತು ಉಳಿದವುಗಳೆಲ್ಲವೂ ಪ್ರಾಚೀನ ಕಾಲದ ಐತಿಹಾಸಿಕ ನಾಟಕದಂತೆಯೇ ರಚಿಸಲ್ಪಟ್ಟಿರುತ್ತವೆ. ಸಾಮಾಜಿಕ ನಾಟಕದಲ್ಲಿ ಈಗಿನ ಸಮಾಜದ ಚಿತ್ರವು ಪ್ರತ್ಯಕ್ಷವಾಗಿ ಒಡಮೂಡಬೇಕಾಗುವದು. ಆದರೆ ವಿಷಮ ವಿವಾಹ ನಾಟಕದಲ್ಲಿ ಆ ತರದ ದೃಶ್ಯವು ಎಲ್ಲಕಡೆಗೂ ಕಂಡು ಬರುವದಿಲ್ಲ. ಒಂದೆರಡು ಪಾತ್ರಗಳನ್ನು ಸಾಮಾಜಿಕದಂತೆ ಪಾತ್ರಗಳನ್ನು ಚಿತ್ರಿಸಿ ಉಳಿದವು ಐತಿಹಾಸಿಕದಂತೆ ರಚಿಸಿದರೆ ಆ ನಾಟಕವು ಸಾಮಾಜಿಕವಾಗಬಲ್ಲದೋ? ಇನ್ನು ಐತಿಹಾಸಿಕವೆಂದರೆ ಕರಿ-ಪತಿ. ಮತ್ತು ವಿದೂಷಕನ ಪಾತ್ರಗಳಿಂದ ಇತಿಹಾಸಕ್ಕೆ ವ್ಯತ್ಯಾಸ ಉಂಟಾಗುವದು. ಇತ್ತ ಐತಿಹಾಸಿಕವೂ ಅಲ್ಲ ಅತ್ತ ಸಾಮಾಜಿಕವಂತೂ ಅಲ್ಲವೇ ಅಲ್ಲ' ಎಂದ ಮೇಲೆ ಯಾವ ಕಾಲದ ನಾಟಕವು? ಇದರ ಬಗ್ಗೆ ನಾಟಕಕರ್ತರು ಸಮರ್ಪಕವಾಗಿ ಉತ್ತರ ಕೊಡಬಲ್ಲರೋ?

ಇನ್ನು ನಾಟಕದ ಅಭಿನಯದ ಬಗ್ಗೆ ನಾಯಕನಾದ ಅಶೋಕನ ಪಾತ್ರವನ್ನು "ನಾಟಕಾಲಂಕಾರರು" ವಹಿಸುವರು. ಅವರ ಪಾತ್ರವು ಹೆಸರಿಗೆ ತಕ್ಕಂತೆ ರಂಗಭೂಮಿಗೆ ಶೋಭಿಸುವದು. ಆದರೆ ಕಂಠಶ್ರಾವ್ಯ ಇವು ಸ್ವಲ್ಪ ಕಡಿಮೆ. ನಾಲ್ಕಾರೆಯ ಪ್ರಭುಗಳಿಗೆ ಏನೂ ಕೇಳಿಸದು. ಪ್ರಯತ್ನ ಮಾಡಿ ಸ್ವಲ್ಪ ಜೋರಿನಿಂದ ಮಾತಾಡಬಹುದು. ಗಾಯನವಾದರೂ ಇದರಂತೆಯೇ! ಅಭಿನಯವು ಮಾತ್ರ ಈ ನಾಟಕದಲ್ಲಿ ಒಳ್ಳೆ ಶಾಗಿ ಸಾಧಿಸಿದೆ. ಸ್ತ್ರೀ! ಅಶೋಕರಾಜನ ದ್ವಿತೀಯ ಪತ್ನಿಯಾದ ಶರಾವತಿಯು ಈ ನಾಟಕದಲ್ಲಿ ಮುಖ್ಯ ನಾಯಿಕೆಯು. ಇವಳ ಅಭಿನಯವು ಹೊಗಳತಕ್ಕಂತಹದು. ಈ ಪಾತ್ರವು ರಂಗಭೂಮಿಗೆ ಬಹಳ ಒಪ್ಪುವದು. ಕನ್ನಡ ಕಂಪನಿಗಳಲ್ಲಿ ಈ ವರೆಗೂ ಈ ತರದ ಅಭಿನಯವನ್ನು ನಾವಂತೂ ಎಲ್ಲಿಯೂ ಕಂಡಿರುವದಿಲ್ಲ. ಅಭಿನಯದಲ್ಲಿ ನಿಪುಣರಾದ ವಿದೂಷಿಯರನ್ನು ಸಹ ಇವರ ಮೇಲೆ ನಿವಾಳಿಸಬಹುದೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಆದರೆ ಕಂಠತ್ರಾಣವು ಶಂಖ! ಗಾಯನವು ಸಹ ಅಷ್ಟಕಷ್ಟೇಯಾದರೂ ಅಶೋಕರಾಜನ ಪುತ್ರನಾದ ಕಮಲಾಕರನ ಪಾತ್ರವು ರಂಗಭೂಮಿಗೆ ಒಪ್ಪುವದು; ಕಂಠತ್ರಾಣವಾದರೂ ಬಲವಾಗಿರುವದು. ಆದರೆ ಅಭಿನಯದಲ್ಲಿ ಅಷ್ಟೇನು ನೈಪುಣ್ಯತೆಯು ಕಂಡುಬರುವದಿಲ್ಲ. ಗಾಯನವು ಅಷ್ಟಕಷ್ಟೇ! ಇನ್ನಷ್ಟು ಪ್ರಯತ್ನಿಸಿದರೆ ಗಾಯನವು ಕೊಂಚ ಸುಧಾರಿಸಬಹುದು. ಈ ನಾಟಕದಲ್ಲಿ ವಿದೂಷಕನ ಅಭಿನಯವು ಚನ್ನಾಗಿದೆ. ಮಾತಾಡುವಾಗ್ಗೆ ಸ್ವಲ್ಪ ಗಡಬಡಿ ಮಾಡುವದರಿಂದ ಮಾತುಗಳು ಸ್ಪಷ್ಟವಾಗಿ ಕೇಳಬರುವದಿಲ್ಲ. ಸಾವಕಾಶವಾಗಿ ಮಾತಾಡಿದರೆ ಈ ತರದ ದೋಷಗಳುಂಟಾಗಲಿಕ್ಕಿಲ್ಲ. ಇದರ ಬಗ್ಗೆ ಪ್ರಯತ್ನಿಸುವದು ಉತ್ತಮ. ಉಳಿದ ಪಾತ್ರಗಳಲ್ಲಿ ನಾಟಕಕ್ಕೆ ಅವಶ್ಯಕವಾದ ಅಭಿನಯ, ಗಾಯನ ಮೊದಲಾದವುಗಳು ಕಂಡು ಬರುವದಿಲ್ಲ.

ರಂಗಭೂಮಿಯ ಸೇವಕ.

"ನಮ್ಮ ತುಣಕು ಮಹಿಮಂದ"

ಮೈಸೂರು ಶ್ರೀಮನ್ಮಹಾರಾಜಾ ಕಲಾಶಾಲೆಯ ಸಂಸ್ಕೃತ ಭಟ್ಟರಾದ (Sanscrit Professur) ಶ್ರೀ ಹಿರಣ್ಣಯ್ಯನವರ ಅವಧಿಯು ಮುಗಿದಿರುವದು. ಕೆಲಸದಿಂದ ನಿವೃತ್ತಿ ಮಾಡಬೇಕೆಂದು ಕೇಳಿರುವರು. ಅವರ ಸ್ಥಾನಕ್ಕೆ ಹೊರಗಿನಿಂದ ಯಾವನಾದರೂ ಆಂಗ್ಲೇಯನನ್ನು ತರಬೇಕೆಂದು ಪ್ರಯತ್ನಗಳು ನಡೆಯುತ್ತಿರುವವಂತೆ. ಈ ಸುದ್ದಿಯು ನಿಜವಾದರೆ ಮೈಸೂರಿನ ಜನ್ಮ ಪಾವನವಾಯಿತು! ದಳಿಯ ಮ್ಯಾನೇಜ ಹವಿರುವುದಂತೂ ಕಂಡಂತೆಯೆ ಇದೆ. ಆದರೆ ಇಲ್ಲಿಯ ವರೆಗೆ ಬರಬೇಕೇ? ಸದ್ಯಕ್ಕೆ ಡಾ. ವೆಂಕಟಸುಬ್ಬಯ್ಯನವರನ್ನು ಆ ಸ್ಥಾನಕ್ಕೆ ನಿಯೋಜಿಸಲು ಯೋಜಿಸುತ್ತಿರುವರಂತೆ. ಆಸೆ ಪೂರ್ಣವಾಗಿ ತಪ್ಪಿಲ್ಲ. ಇರಲಿ ನೋಡುವ!!

† † † † †

ಹಿಂದಿಯರಿಗೆ ಚಿರಪರಿಚಿತರಾದ ಪಾಟಿಯಾಲದರಸರು ಸಿಖ್ ಧರ್ಮವನ್ನು ತ್ಯಜಿಸಿ ಹಿಂದೂ ಧರ್ಮವನ್ನು ಸ್ವೀಕರಿಸಿದರು! ಸ್ವಧರ್ಮದಲ್ಲಿಹಿತವಾಗಿರುವ ಮರ್ಮವನ್ನರಿಯದೆ ಸುಖಲೋಲುಪತೆಗಾಗಿ ಅದನ್ನು ತ್ಯಜಿಸುವ ಯಾವನಾದರೂ ನಿಂದ್ಯಾರ್ಹನೇ. ಇತರ ಸೇರುವಿಕೆಯಿಂದ ನಮಗೆ ನಷ್ಟವೇ ವಿನಃ ಕಿಂಚಿತ್ತಾದ ಲಾಭವೂ ಇಲ್ಲ. ಅರಸನಾಗಿದ್ದರೂ ಸಾಮಾನ್ಯ ಮನುಷ್ಯನಿಗಿರುವ ಸದ್ಗುಣಗಳನ್ನು ಕೂಡ ಪಡೆಯದ ಈ ಅರಸರನ್ನು ಯಾವ ಜೀವಕೋಟಿಗೆ ಸೇರಿಸಬೇಕೋ ದೊಡ್ಡ ಸಮಸ್ಯೆಯಾಗಿದೆ, ಸ್ವಾತಂತ್ರ್ಯ ಸಮರ ಸಹಾಯಕನಾದ ಶ್ರೀ ರಿಪುದಮನಸಿಂಗ್, (ಈಗಿವರು ಗುರುಚರಣಸಿಂಗ್‌ರಾಗಿದ್ದಾರೆ.) ನಾಭಾ ಪ್ರಭಾವವನ್ನು ರಾಜ್ಯಚ್ಯುತರನ್ನಾಗಿ ಮಾಡಿದ ಈ ಆಂಗ್ಲ ಮಾನಸಪುತ್ರ ಪಾಟಿಯಾಲದರಸರಲ್ಲಿ ಹಿಂದಿಯರು ಯಾವ ತೆರನ ಪ್ರೇಮಭಾವಗಳನ್ನಿರಿಸುವರು? ಅರಸರಾಗುವ ಹೊತ್ತಿಗೆ ಇವರಿನ್ನು ಉಳಿದಿರುವರು. ಸಾಮಾನ್ಯರಾಗಿ ಈ ಆಟಗಳನ್ನಾಡಬೇಕಾಗಿತ್ತು

ಕೆಲವು ಕಾಲದ ಹಿಂದೆ "ಕನ್ನಡಿಗ"ನಿಗೆ ನಾನು ಬರೆದ ಈ ಮಾಲೆಯ ಲೇಖನವೊಂದರಲ್ಲಿ ಮೈಸೂರು ಸರ್ಕಾರದ ವಿದ್ಯಮಾನಗಳೆಲ್ಲ ಬೈಲಿಗೆ ಬರುವ ವರೆಗೆ ಯಾವುದೂ ತಿಳಿಯುವ ಹಾಗಿಲ್ಲ. ಎಲ್ಲವೂ ಬಂಗಾಳದ ರಾಜ ಪರಿವರ್ತನ (Bengal Revolutionary) ಕಾರರ ಕೃತಿಗಳಂತೆ ಇವೆ ಎಂದರೆ ಅತಿಶಯೋಕ್ತಿಯಾಗಲಾರದು. ಬಹಿರಂಗವಾಗುವ ವರೆಗೂ ಒಡಕು ತಿಳಿಯುವ ಹಾಗಿಲ್ಲ" ಎನ್ನುವ ಅಭಿಪ್ರಾಯವನ್ನು ಸೂಚಿಸಿದೆ. ಅದರ ಸತ್ಯಾಂಶವು ದಿನೇ ದಿನೇ ಹೆಚ್ಚುತ್ತಿದೆ. ಈಗ ಬಂದಿರುವ ದೊಡ್ಡ ಸಮಸ್ಯೆಯೆಂದರೆ ಮುಂದೆ ನಮ್ಮ ವಿಶ್ವವಿದ್ಯಾನಿಲಯದ ಇವರ ಕುಲಪತಿಗಳಾರು? ಎಂಬುದೇ! ಸರ್ ಬ್ರಜೇಂದ್ರನಾಥ ಶೀಲರಿಗೆ ಒಂದು ವರ್ಷ ಹುದ್ದೆಯು ವ್ಯಾಪ್ತಿಯನ್ನಿತ್ತಿರುತ್ತಾರೆ? ಒಂದು ವರ್ಷ ಆದ ನಂತರವೋ? ಜನರು ವಿಧವಿಧವಾಗಿ ಆಲೋಚಿಸುತ್ತಿದ್ದಾರೆ. ಕೆಲವರು ಶ್ರೀ ಚಂದ್ರಶೇಖರಯ್ಯರವರು ಅಥವಾ ಶ್ರೀ ಬಾಲಸುಂದರಮಯ್ಯರ್ ರವರಾಗುತ್ತಾರೆನ್ನುತ್ತಾರೆ. ಸರ್ಕಾರದ ಗೂಢಾಲೋಚನೆ ತಪ್ಪುಗಳನ್ನು ಒಳ್ಳವರು ಶ್ರೀ ಮ್ಯಾಥಸ್ ರವರದ್ದೊಟ್ಟು ಜಾರಿ ತಪ್ಪುಕ್ಕೆ ಚಿತ್ರಿಸುತ್ತಿದ್ದಾರೆ. ಈ ಸ್ಥಾನಕ್ಕೆ ಇಡೀ ಭಾರತ ವರ್ಷದಲ್ಲಿ ಶ್ರೀ ಬ್ರಜೇಂದ್ರನಾಥರಂತೆ ಬಲ್ಲಿದರೂ, ಹೆಸರ್ಪಡೆದವರೂ, ದೊಡ್ಡ ತಿರ್ಗರೂ, ವಿಚಾರಶೀಲರೂ ಆದವರೇ ಅರ್ಹರು. ಮುಂದೆ ನಮ್ಮ ವಿಶ್ವವಿದ್ಯಾನಿಲಯವು "ಕರ್ನಾಟಕ ವಿಶ್ವವಿದ್ಯಾನಿಲಯ"ವಾಗಬೇಕೆಂದು ಹಂಬಲಿಸುತ್ತಿರುವ ನಾವು ಪಂಡಿತ ಈ ಮೂವರಲ್ಲಿ ಯಾರಿಗೂ ನಮ್ಮ ಮತವನ್ನು ಕೊಡಲಾರೆವು. ನಮ್ಮವರಾಗಿ, ಕನ್ನಡಿಗರಾಗಿ, ಸೇವಾತುರ ಉತ್ಸಾಹರಾಗಿ, ಇಡೀ ಹಿಂದುಸ್ಥಾನದಲ್ಲಿ ಅರ್ಥಶಾಸ್ತ್ರವಿಶಾರದರೆಂದು ಹೆಸರು ಪಡೆದಿರುವ ಶ್ರೀಯುತ ಎನ್. ಎಸ್. ಸುಬ್ಬರಾಯರೇ ಈ ಸ್ಥಾನಕ್ಕೆ ಅರ್ಹರು ಮತ್ತು ಮಾನ್ಯರೆಂದು ಕನ್ನಡಿಗರೆಲ್ಲ ಏಕಮುಖವಾಗಿ ಅಭಿಪ್ರಾಯ ಪಡುತ್ತಿದ್ದಾರೆ. ಈ ವಿಷಯದಲ್ಲಿ ಇಡೀ ಕರ್ನಾಟಕದ ಪತ್ರಿಕೆಗಳೆಲ್ಲ ಚಳವಳ ಹೂಡಬೇಕು. ನಮಗೆ ಶ್ರೀ ಸುಬ್ಬರಾಯರೇ ಬೇಕೆಂದು ಮೈಸೂರಿನವರೆಲ್ಲ ಸತ್ಯಾಗ್ರಹ ಮಾಡಬೇಕು. ಪ್ರಜಾವತ್ಸಲರಾದ ನಮ್ಮ ಪ್ರಭಾ ಪ್ರಧಾನರು ಖಂಡಿತವಾಗಿ ಜನತೆಯ ಈ ಆಶೆಯನ್ನು ಭಂಗ ಮಾಡಲಾರರೆಂದು ನನಗೆ ಪೂರ್ಣ ಭರವಸೆಯಿದೆ. ಕನ್ನಡಿಗರೇ' ಎಚ್ಚರಗೊಂಡಿದ ಕಣ್ಣು ಮುಚ್ಚಬೇಡಿರಿ.

"ವಿಶ್ವಭ್ರಾತಾ"

ದಕ್ಷಿಣ ಕನ್ನಡ ಜಿಲ್ಲೆಯ ವರ್ತಮಾನ.

(ನಮ್ಮ ಸ್ವಂತ ಬಾತ್ಮಿದಾರನಿಂದ)

ಸಾಹಿತ್ಯ ಪರಿಷತ್ತು

ಕರ್ನಾಟಕ ಸಾಹಿತ್ಯ ಪರಿಷತ್ತು ಮಂಗಳೂರಲ್ಲಿ ತಾ|| ೧೯, ೨೦, ೨೧ ರಲ್ಲಿ ಶ್ರೀಮಾನ್ ತಾತಾಚಾರ್ಯರ ಅಧ್ಯಕ್ಷತೆಯಲ್ಲಿ ಸೇರುವದೆಂದು ನಿಶ್ಚಯವಾಗಿದೆ. ಸ್ವಾಗತ ಕಮೀಟಿಯವರು ಬೇಕಾದಷ್ಟು ಪ್ರಚಾರವನ್ನು ನಮ್ಮ ಜಿಲ್ಲೆಯಲ್ಲಿ ಮಾಡಲಿಲ್ಲ. ಯೋಗ್ಯ ಪ್ರಚಾರ ಮಾಡಿದರೆ ತುಂಬಾ ಸಹಾನುಭೂತಿಯು ಸಿಗಬಹುದು. ಮಂಗಳೂರನ್ನು ಬಿಟ್ಟು ಹೊರಗೆ ಹೋದಲ್ಲಿ ಸಂದೇಹಪಡುತ್ತಾರೆಯೆಂದು ಕಾಣುತ್ತದೆ. ಅಂತು ಈ ಪರಿಷತ್ತು ಯಶಸ್ವಿಯಾಗಿ ನಡೆದರೆ ಒಂದು ಸಲ್ಪ ನಮ್ಮ ಜಿಲ್ಲೆಯ ಮಾನ ಉಳಿಯಬಹುದು.

ಉಡುಪಿಯಲ್ಲಿ ಶ್ರೀರಾಮೋತ್ಸವ

ಕಳೆದ ಮೂರು ವರ್ಷಗಳಲ್ಲಿ ನಡೆದಂತೆಯೇ ಈ ವರ್ಷದಲ್ಲಿಯೂ ಶ್ರೀರಾಮೋತ್ಸವವು ಬಹಳ ವಿಜೃಂಭಣೆಯಿಂದ ನಡೆಯಿತು. ಈ ಉತ್ಸವ ಸಮಯದಲ್ಲಿ ಉಡುಪಿಯವರು ಕರ್ನಾಟಕದ ಪ್ರಸಿದ್ಧ ಕೀರ್ತನಕಾರರಾದ ಶಿವಮೊಗ್ಗಾ ಶ್ರೀಪಾದ ದಾಸಾಚಾರ್ಯರಿಗೆ "ಕೀರ್ತನ ಭೂಷಣ"ವೆಂಬ ಬಿರುದನ್ನು ಕೊಟ್ಟಿದ್ದರು. ಇಂತಹ ಧಾರ್ಮಿಕ ಉತ್ಸವಗಳು ಹಿಂದೂ ಜನಾಂಗದ ಪುನರುದ್ಧಾರಕ್ಕೆ ಅತ್ಯವಶ್ಯಕ.

ಸುಧಾರಣಾ ಪರಿಷತ್ತು

ಮಂಗಳೂರಲ್ಲಿ ಶ್ರೀಯುತ ಕಾರ್ನಾಡ ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಜರುಗಿದ ಒಂದು ಸುಧಾರಣಾ ಪರಿಷತ್ತಿನಲ್ಲಿ ಹಾ| ಗೌಡರ "ಪ್ರಾಯದ ಸಮ್ಮತಿ" ಠರಾವಿಗೆ ಅನುಕೂಲವಾಗಿ ಕೆಲ ಠರಾವುಗಳು ಮಾಡಲ್ಪಟ್ಟವು. ಈ ಪರಿಷತ್ತು ಇದನ್ನು ಸಮರ್ಥಿಸುವದಕ್ಕಾಗಿಯೇ ಕರೆಯಲ್ಪಟ್ಟಿತ್ತು. ಕ್ರಿಶ್ಚಿಯನರ ಹಾವಳಿಯಿಂದ ದಿನೇ ದಿನೇ ಹಿಂದೂ ಜನಾಂಗವು ಕ್ಷೀಣವಾಗುತ್ತಿರುತ್ತದೆ. ಬಡ ಹಿಂದೂಗಳು ಮತಾಂತರಕ್ಕೆ ಹೋಗದ ಹಾಗೆ ಹಿಂದೂ ಮುಖಂಡರು ನೋಡಿಕೊಂಡರೆ ಒಳ್ಳೇದಿತ್ತು. ಶುದ್ಧಿ ಮತ್ತು ಸಂಘಟನ ಕಾರ್ಯಗಳು ನಮ್ಮ ಜಿಲ್ಲೆಯಲ್ಲಿ ಆಗತ್ಯವುಂಟು.

ಶ್ರೀಮತೀ ಲಕ್ಷ್ಮೀಬಾಯಿ

ಪಂಡಿತ ಶ್ರೀನಿವಾಸಶಾಸ್ತ್ರಿಯವರ ಧರ್ಮಪತ್ನಿಯಾದ ಉಷಾ ಲಕ್ಷ್ಮೀಬಾಯಿಯವರು ಬೆಂಗಳೂರಿಂದ ನಮ್ಮ ಜಿಲ್ಲೆಗೆ ಒಂದು ತಮ್ಮ ಗಾನ ಕಲೆಯನ್ನು ಕೆಲ ಕಡೆಗಳಲ್ಲಿ ಪ್ರದರ್ಶಿಸಿದರು. ಇವರಿಗೆ ಉಡುಪಿಯಲ್ಲಿ ಸುವರ್ಣಪದಕವೊಂದು ಕೊಡಲ್ಪಟ್ಟಿತು. ಶ್ರೀಮತಿಯವರು ದಕ್ಷಿಣ ಮತ್ತು ಹಿಂದುಸ್ಥಾನಿ ಸಂಗೀತಗಳಲ್ಲಿ ಅಸಾಧಾರಣ ಪಾಂಡಿತ್ಯವನ್ನು ಹೊಂದಿದ್ದಾರೆ. ಮೈಸೂರು ಸಂಗೀತವಿದ್ವತ್ಪರೀಕ್ಷೆಯಲ್ಲಿ ಉತ್ತೀರ್ಣರಾದದ್ದಲ್ಲದೆ ಅನೇಕ ಕಡೆಗಳಲ್ಲಿ ಬಹುಮಾನಗಳನ್ನು ಹೊಂದಿದ್ದಾರೆ. ಇಷ್ಟು ಸಣ್ಣ ವಯಸ್ಸಿನವರಾದರೂ ಸಂಗೀತ ಕಲೆಯಲ್ಲಿ ನೈಪುಣ್ಯವನ್ನು ಹೊಂದಿದ್ದು ನಮ್ಮ ಜಿಲ್ಲೆಗೆ ಭೂಷಣವೇ ಆಗಿದೆ. ಇವರು ಇಡೀ ಕರ್ನಾಟಕ ಸಂಚಾರವನ್ನು ಕೈಕೊಂಡು ಕರ್ನಾಟಕಕ್ಕೆ ನಮ್ಮ ಪರಿಚಯವನ್ನು ಮಾಡಿಕೊಟ್ಟರೆ ಒಳ್ಳೇದಿತ್ತು.

ನನಗೆ ಹೊಳೆದಮಾತೆ.

ಬೆಳಗಾವಿಯಲ್ಲಿ ಮುಸಲ್ಮಾನ ಶಿಕ್ಷಣ ಪರಿಷತ್ತು ರಾಜೆಯ ಕಲೆಕ್ಟರರಾದ ಶ್ರೀ ಶೇಖ ಇವರ ಅಧ್ಯಕ್ಷ ನೇತೃತ್ವದಲ್ಲಿ ಆಯಿತಷ್ಟೇ? ಆದರೆ, ಪೇಂಟರ ಸಾ|| ಅಧ್ಯಕ್ಷರಿದ್ದರೆಂದು 'ಕರ್ನಾಟಕ ಟಾಯಿಮ್ಸ' ಹೇಳುತ್ತದೆ! ಆದರೆ ನಿದ್ರೆಯಲ್ಲಿ ಬಂದ ಸಮಾಚಾರವಿದು!

ಮುಂಬೈಯಲ್ಲಿ "ಸಾಂಜ ವರ್ತಮಾನ" ಎಂಬ ಪತ್ರಿಕೆಗೆ ೨೫ ವರ್ಷ ತುಂಬಿದ್ದರಿಂದ, ಆ ಕಾರ್ಯಾಲಯದಲ್ಲಿ ಉತ್ಸವವು ನಡೆಯಿತು. ಸಾರ್ವಜನಿಕವಾಗಿ ಗುಜರಾತಿ, ಇಂಗ್ಲೀಷ ಪತ್ರಿಕೆಗಳಲ್ಲಿ, ಅದರ ಅಭಿನಂದನವೂ, ಅಭ್ಯುದಯದ ಬಗ್ಗೆ ಲೇಖಗಳೂ ಬಂದಿವೆ.

ಸೋಜಿಗದ ಸುದ್ದಿಗಳು.

ಟ್ರೆನೋವೋದ ಫಾತ್ಮಾ ಹೆಡಮಾ ಎಂಬ ಸ್ತ್ರೀಯು ೧೬೦ ವರ್ಷದವಳು. ಜಗತ್ತಿನಲ್ಲಿ ಇವಳೇ ಎಲ್ಲರಿಗಿಂತ ಹಿರಿಯಳು.

ತುರ್ಕಸ್ಥಾನದಲ್ಲಿ ಝಾರೋ ಆಘಾ ಎಂಬವನಿಗೆ ೧೫೪ ವರ್ಷ. ಇವನ ೧೧ನೇ ಹೆಂಡತಿಯ ವಯ ೬೫. ಈಕೆಯು ಮಡಿದರೆ, ಮತ್ತೆ ಮದುವೆಯಾಗುವೆನೆಂದು, ಅವನು ಹೇಳುತ್ತಲಿದ್ದಾನೆ. ಅವನ ೬೦ನೇ ವಯಸ್ಸಿನಲ್ಲಿ ಹಲ್ಲುಗಳೆಲ್ಲ ಬಿದ್ದವು. ಆ ಮೇಲೆ ೧೦೨ನೇ ವಯಸ್ಸಿನಲ್ಲಿ ಕೆಳಗಿನ ದವಡೆಯ ಎರಡು ಹಲ್ಲುಗಳು ಚಿಗಿತವೆ! ಈ ವರೆಗೂ ಸುಖದಿಂದಿರುವನು.

ಬೀದಿಗಳೆಲ್ಲ ಸುವಾಸಿಕವಾಸನವು!

ಓರ್ವ ಸುಗಂಧ ವರ್ತಕನು ೩ ತಿಂಗಳ ಹಿಂದೆ ಜರ್ಮನಿಯಿಂದ ಸಿಲೋನಕ್ಕೆ ಅನೇಕ ಬಗೆಯ ಸುವಾಸಿಕ ದ್ರವ್ಯಗಳನ್ನು ತರಿಸಿದನು. ಆದರೆ ಅವು ಯಾವ ವರ್ತಕನವೆನ್ನುವದು ಗೊತ್ತಾಗಲಿಲ್ಲ. ಯಾರೂ ಅವನ್ನು ಬೇಡಲೂ ಬರಲಿಲ್ಲ. ೩ ತಿಂಗಳಾದ್ದರಿಂದ ಹಲವು ದ್ರವ್ಯಗಳು ಕೊಳೆಯಲಾರಂಭಿಸಿದವು. ಕಡೆಗೆ ಅವೆಲ್ಲ ಬಂದರದ ಅಧಿಕಾರಿಗಳಿಂದ ನಾಶಮಾಡಲ್ಪಟ್ಟವು. ಕೂಲಿಯವರು, ಮಲ್ಲಿಗೆ, ಸಂಪಿಗೆ, ಗುಲಾಬಿ, ಸುಗಂಧ, ಎಲ್ಲ ಬಗೆಯ ಬೆಲೆ ಬಾಳುವ ಅತ್ತರುಗಳ ಬಾಟ್ಲಿಗಳನ್ನು ಬೀದಿಯಲ್ಲಿ ಸುರಿದಿದ್ದರಿಂದ ಆ ದಿನವೆಲ್ಲ ಬಂದರದ ಬೀದಿಗಳು ಒಳ್ಳೇ ಸುವಾಸನೆಯಿಂದ ತುಂಬಿದ್ದವು.

ನಿಝಾಂ ಕರ್ನಾಟಕ

ಬಳ್ಳಾರಿ ಜಿಲ್ಲೆಯಲ್ಲಿ ತುಂಗಭದ್ರೆಯ ನೀರು ಕಡಿಮೆಯಾದ್ದರಿಂದ, ನದಿಗೆ ಒಡ್ಡು ಹಾಕಿ ನೀರನ್ನು ತೆಗೆದುಕೊಳ್ಳಲು ಕಲೆಕ್ಟರರು ಅನುಮತಿಸಿದರು. ಅದಾದ ಕೂಡಲೇ, ಆಚೆಯ ದಡದ ನಿಝಾಂ ಕರ್ನಾಟಕದವರು ತಮಗೆ ಹಾನಿಯಾಗುವದೆಂದು, ಒಡ್ಡನ್ನು ಒಡೆದರು. ಕಲೆಕ್ಟರರ ಅಪ್ಪಣೆಗೆ ಗಮನ ಕೊಡಲಿಲ್ಲ. ಹೀಗಾಗಿ ಗೊಂದಲವಾಗಿದೆ.

ಚಿಂತಿಸಬೇಡಿ!

ಇದೇ ವಾರದಲ್ಲಿ

ಪ್ರಾರಂಭದ ದಿನವು

ನಿಶ್ಚಯವಾಗಿ ಪ್ರಕಟಿಸಲ್ಪಡುವದು.

ಬಾಗಲಕೋಟಿ } ವ್ಯವಸ್ಥಾಪಕ
ತಾ|| ೧೪|೫|೨೭ } ಶ್ರೀ ಕೃಷ್ಣ ಸಂಗೀತ ನಾಟಕ ಮಂಡಳಿ.

ಜಾಹೀರ ನೋಟೀಸು.

ಕೆಳಗೆ ಸಹಿಮಾಡುವವನು ಈ ನೋಟೀಸಿನಿಂದ ತಿಳಿಸುವದೇನಂದರೆ- ಹುನುಗುಂದ ತಾಲೂಕ ಪೈಕಿ ಕೆಲೂರ ಗ್ರಾಮದಲ್ಲಿರುವ ದ್ಯಾಮಣ್ಣಾ ತಂದಿ ಗೋವಿಂದಪ್ಪಾ ಕಂಬಾರ ಇತನ ೧ ಮನಿ ವ ಜಮೀನು ಈ ಮಿಳಕತು ಇವನು ಎರಡನೇದವರಿಗೆ ಕೆಳಗೆ ಸಹಿಮಾಡಿದವನ ವ ಅವನ ತಮ್ಮ ಬಸಪ್ಪಾ ತಂದಿ ದ್ಯಾಮಪ್ಪಾ ಇವರ ಸಮ್ಮತಿ ಹೊರ್ತು ವಿಲೇವಾಟಮಾಡಬಾರದು. ಸದರಿ ದ್ಯಾಮಪ್ಪನು ಕೆಳಗೆ ಸಹಿಮಾಡುವವನ ಖಾಸ ತಂದೆಯು. ಇವನು ತನ್ನ ಮನಸಿಗೆ ಬಂದಂತೆ ಸದರಿ ಮಿಳಕತಿಯನ್ನು ಎರಡನೇದವರಿಗೆ ವಿಲೇವಾಟಮಾಡುವಂತೆ ತಿಳಿಯುತ್ತದೆ. ಇವನಿಗೆ ದೇಣೆ ವಗೈರೆ ಯಾರೂ ಕೊಡಬಾರದು. ಕಾರಣಾ ಯಾರಾದರೂ ಅವನಿಗೆ ದೇಣೆ ಕೊಟ್ಟರೆ ಅಥವಾ ಏನಾದರೂ ಅವನ ಮಿಳಕತು ಕೆಳಗೆ ಸಹಿಮಾಡುವವನ ಸಮ್ಮತಿ ಇಲ್ಲದೆ ಖರಿಸಿಕೆಂಡರೆ ಕಾಯಿದೆ ಪ್ರಕಾರಾ ಅವನಿಗೆ ಫಾಯದೆ ಸಿಗಲಿಕ್ಕಿಲ್ಲ. ತಿಳಿಯುವದು.

ತಾ|| ೧೦-೫-೧೯೨೭

▯ ಈ ಎಡಗೈ ಹೆಬ್ಬೆಟ್ಟಿನ ಗುರ್ತು ಗೋವಿಂದಪ್ಪಾ, ತಂದಿ ದ್ಯಾಮಣ್ಣಾ ಕಂಬಾರ. ಸಾಕೀನ ಕೆಲೂರ.

ವರ್ಗೀಕೃತ ಪ್ರಕಟಣೆಗಳು

ಇದೊಂದು ಹೊಸ ಮಾದರಿಯನ್ನು ಕನ್ನಡಿಗರಿಗಾಗಿ ಕನ್ನಡಿಗನು ಪ್ರಾರಂಭಿಸಿರುವನು. ಈ ಪ್ರಕಟನೆಗಳಲ್ಲಿ ಜನರು ತಮಗೆ ಬೇಕಾದ ಯಾವ ವಸ್ತುಗಳ ಬಗ್ಗೆಯೂ ಜಾಹೀರಾತವನ್ನು ಕೊಡಬಹುದು. ಉದಾಹರಣಾರ್ಥವಾಗಿ ವಿದ್ಯಾರ್ಥಿಗಳು ಹಳೇ ಗ್ರಂಥಗಳಿಗಾಗಿ; ಸಾಮಾನುಗಳನ್ನು ಕಳೆದುಕೊಂಡವರು ದೊರಕಿಸಿಕೊಳ್ಳುವದಕ್ಕಾಗಿ; ಹಳೇ ಹೊಸ ಸಾಮಾನುಗಳನ್ನು ಮಾರತಕ್ಕವರು ಗಿರಾಕಿಗಳನ್ನು ದೊರೆಕಿಸಿಕೊಳ್ಳುವದಕ್ಕಾಗಿ; ಗಿರಾಕಿಗಳು ಸಾಮಾನುಗಳ ಬೆಲೆಯನ್ನು ಕೇಳುವದಕ್ಕಾಗಿ; ಭಾಡಿಗೆಯ ಬೇಕಾದವರು ಮನೆ ಬಾಡಿಗೆಯ ಕೊಡತಕ್ಕವರೂ, ಅನೇಕ ಬಾಡಿಗೆ ಮನೆ ತೆಗೆದುಕೊಳ್ಳುವವರೂ ಮನ್ನು ಇಷ್ಟ ಕೊರ್ಣಗಾಗಿ, ಇತ್ಯಾದಿ; ಇತ್ಯಾದಿ ಈ ಪದ್ಧತಿಯು ಇಂಗ್ಲೀಷ ಪತ್ರಿಕೆಗಳಲ್ಲೆಲ್ಲ ಲೋಕಪ್ರಿಯವಾಗಿದೆ. ಕನ್ನಡದಲ್ಲಿ ಆದರೂ, ಲೋಕಪ್ರಿಯವಾಗುವದೆಂದು ನಾವು ನಂಬುತ್ತೇವೆ. ಈ ಬಗ್ಗೆ ಕೆಳಗೆ ಕಾಣಿಸಿದಂತೆ ನಿಯಮಗಳಿರುತ್ತವೆ.

ನಿಯಮಗಳು.

ಮುಂದಿನ ಪ್ರತಿಯೊಂದು ಶಬ್ದಕ್ಕೆ ೧ ಆಣೆ

ಪ್ರಕಟನೆಯ ಹಣವು ಮುಂಗಡವಾಗಿ ಬರಬೇಕು.

ಜಾಹೀರಾತದಾರರು ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡಬೇಕು. ಅವಶ್ಯವಿದ್ದರೆ ಮಾತ್ರ ಅವು ಪ್ರಕಟಿಸಲ್ಪಡುವವು. ಹೆಸರು ವಿಳಾಸಗಳನ್ನು ಪ್ರಕಟಿಸಲು ಇಚ್ಛೆ ಇಲ್ಲದವರಿಗೆ ಒಂದು ಸಂಖ್ಯೆಯು ಕೊಡಲ್ಪಡುವದು "ವಿಳಾಸ, ಸಂಖ್ಯೆ...... ಕನ್ನಡಿಗ" ಇದಕ್ಕೆ ಸಹ ಬೆಲೆ ಕೊಡಬೇಕಾಗುವದು.

ಸ್ಥಳೀಕರು ನಮ್ಮ ಕಾರ್ಯಾಲಯಕ್ಕೆ ಬಂದು ಉತ್ತರವನ್ನು ನೋಡಿಕೊಳ್ಳಬೇಕು. ಪರಸ್ಥಳದವರಿಗೆ ಪೋಷ್ಟಿನಿಂದ ಅಂಚೇ ವೆಚ್ಚ ಪ್ರತೀ ವಿಲ್ಲದೆ ಉತ್ತರಗಳು ಕಳಿಸಲ್ಪಡುವವು. ಅದರ ಪತ್ರವ್ಯವಹಾರ ನಡೆದರೆ, ಅಂಚೇವೆಚ್ಚ ಕಳಿಸಬೇಕು. ಉತ್ತರಗಳು ಪರಸ್ಥಳದವರಿಗೆ ದೊರೆಯದೇ ಇದ್ದ ಪಕ್ಷದಲ್ಲಿ ನಾವು ಜವಾಬದಾರರಲ್ಲ. ನಾಲ್ಕಾಣೆ, 'ಪೋಷ್ಟೇಜ' ಕೊಟ್ಟಲ್ಲಿ ರಜಿಷ್ಟರ ಮೂಲಕ ತಿಳಿಸುವೆವು. ಜಾಹೀರಾತಗಳಿಗೆ ಉತ್ತರ ಬರೆಯುವವರು ಸ್ಪಷ್ಟವಾಗಿಯೂ ಶುದ್ಧವಾಗಿಯೂ ಕೆಳಗೆ ಕಾಣಿಸಿದಂತೆ ಬರೆಯಬೇಕು:— "ವಿಳಾಸ ಸಂಖ್ಯೆ ..... ಪ್ರಕಟನೆ ಶಾಖಾ. ಕನ್ನಡಿಗನ ಕಾರ್ಯಾಲಯ ಬಾಗಲಕೋಟಿ" ವಿಳಾಸಸಂಖ್ಯೆಗಳನ್ನು ಸ್ಪಷ್ಟವಾಗಿ ಬರೆಯುವವರ ಕಡೆಗೆ ಎಲ್ಲರೂ ಲಕ್ಷ್ಯಪೂರೈಸತಕ್ಕದ್ದು.

ಬೇಕಾಗಿದ್ದಾರೆ.

ಮಂಗಳೂರ ಕಡೆಯ ನುರಿತಂಥಹ ಮುದ್ರಕರು ಬೇಕಾಗಿದ್ದಾರೆ. ಯೋಗ್ಯತೆಯ ಪ್ರಕಾರ ಸಂಬಳ.

ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟಿ.

ಚಲುವೆಯಾದ ಬ್ರಾಹ್ಮಣ ಕನ್ಯೆ ಬೇಕಾಗಿದೆ, ಸುಶಿಕ್ಷಿತರಿರಬೇಕು. ವರನ ವಯಸ್ಸು ೨೪ ಉತ್ಪನ್ನವು ಚನ್ನಾಗಿದೆ.

ವಿಳಾಸ ಸಂಖ್ಯೆ ೯ "ಕನ್ನಡಿಗ"

ಕರ್ನಾಟಕದಲ್ಲಿ ಸ್ಥಾಪಿತವಾದ ಹೊಸ ಜಾಯಿಂಟ ಸ್ಟಾಕ ಕಂಪನಿಗೆ ಪಾಲುಗಾರರನ್ನು ಕೂಡಿಸುವವರು ಬೇಕಾಗಿದ್ದಾರೆ. ತಿಂಗಳಿಗೆ ೧೦೦ ರೂಪಾಯಿಗಳ ಅಥವಾ ಕಮಿಶನ್ ವಿಳಾಸ ಸಂಖ್ಯೆ ೩ "ಕನ್ನಡಿಗ"

ರಿಷ್ಟವಾಚದ ಸಲೀ ಬಂಗಾರ ನೀರಿನ ಸರಪಳಿ ಮಾರತಕ್ಕದ್ದಿದೆ. ಬೆಲೆ ೭-೮-೦ ವಿಳಾಸ ಸಂಖ್ಯೆ ೫ "ಕನ್ನಡಿಗ"

ಸ್ಟೇಶನ್, ಶಹರ, ಹಳ್ಳಿಗಳಲ್ಲಿ ಗ್ರಂಥಗಳನ್ನು ಮಾರಾಟಮಾಡಲು ಉತ್ಸಾಹಿ ಬ್ರಾಹ್ಮಣ ತರುಣರು ಬೇಕಾಗಿದ್ದಾರೆ. ದಲ್ಲಾಲಿ ದೊರೆಯುವದು. ವಿಳಾಸ:- "ಸ್ವಧರ್ಮ" ಧಾರವಾಡ.

ಡೇರೆ (Tents) ಗಳಿಗೆ ಉಪಯೋಗಿಸುವ ಬಾಜು ಗೋಡೆ (Side walls) ಗಳು ಹಳೇವು ಮಾರತಕ್ಕವಿವೆ.

ವಿಳಾಸ ಸಂಖ್ಯೆ ೭ "ಕನ್ನಡಿಗ"

ಕಳೆದ ಸಾಮಾನುಗಳು.

ಚೀಗದ ಎರಡು ಕೈಗಳುಳ್ಳ ಒಂದು ರಿಂಗು ಬಾಗಲಕೋಟೆ ಕಲಾದಗಿ ಬೀದಿಯಲ್ಲಿ ಬಿದ್ದುದನ್ನು ನಮ್ಮ ಕಡೆಗೆ ಓರ್ವರು ತಂದು ಕೊಟ್ಟಿದ್ದಾರೆ. ಕಳೆದುಕೊಂಡವರು ಅದರ ವರ್ಣನೆಯನ್ನು ನಮಗೆ ಹೇಳಿ, ಅದನ್ನು ತೆಗೆದುಕೊಂಡು ಹೋಗಬಹುದು.

ವ್ಯವಸ್ಥಾಪಕ "ಕನ್ನಡಿಗ"

ಮುದ್ರಿಸುವ

ಯಂತ್ರ!

ಸಿಂಗಲ್ ರಾಯಲ್ ಆಕಾರದ ಮುದ್ರಣ ಯಂತ್ರವನ್ನು ಮಾರತಕ್ಕದ್ದಿದೆ. ಯಂತ್ರವು ಉತ್ತಮ ಸ್ಥಿತಿಯಲ್ಲಿದ್ದು, ಕೆಲಸವನ್ನು ಚನ್ನಾಗಿ ಕೊಡುತ್ತದೆ. ಹೆಚ್ಚಿನ ಸಂಗತಿಗಳಿಗಾಗಿ ಬರೆಯಿರಿ:—

ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ.

ಬೇಕಾಗಿದೆ.

ಉತ್ತಮ ಫೋಟೋಗ್ರಾಫ ಕೆಲಸ ಬಲ್ಲಂತಹ, ಪ್ರತಿಯೊಂದು ಕೆಲಸದ ಮಾಹಿತಿಯುಳ್ಳಂತಹ ಮತ್ತು ಸ್ಟೂಡಿಯೋದಲ್ಲಿ ಕೆಲಸ ಮಾಡಿದಂತಹ ಅನುಭವಿಕರು ಬೇಕು. ಪಗಾರ ಯೋಗ್ಯತೆಯ ಮೇಲೆ! ಮುಂದೆ ವರ್ಷಕ್ಕೆ ೫ ರು. ಬಡತಿ ಸಿಗುವದು. ಕನ್ನಡಿಗರು ಯಾರಾದರೂ ಇದ್ದರೆ ಸರ್ಟಿಫಿಕೇಟ ಸಹಿತ ಅರ್ಜಿ ಕಳಿಸಬೇಕು.

ಬಿ. ಜಿ. ಚಿಮ್ಮಲಗಿಕರ,
(ಗ್ರಾಫಿಕ ಫೋಟೋಸ್ಟುಡಿಯೋ ಪಾವಲಿ ಹೈದ್ರಾಬಾದ ದಕ್ಷಿಣ.

ಲಿವರಿನ ಗಡಿಯಾರಗಳು.

ಲಿವರಿನ ಕೈ ಗಡಿಯಾರ ರೂ. ೯.

ಲಿವರಿನ ಕಿಸೆಯೊಳಗಿಡುವ ಗಡಿಯಾರ ರೂ. ೬.



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಮೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವುದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ತಾಳುವವು. ಬೆಲೆ ಕಡಿಮೆಯಿದೆಂದು ಅಂಜುವ ಕಾರಣವಿಲ್ಲ. ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ. ಆದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ.

ಲಿಬೋ ವಾಚ ಕಂ. (ಇಂಡಿಯಾ.) ಬಾಂಬೆ. ೪ ೪.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಾರ್ಥವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಮವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವರಿಗೆ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯೆ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಏಜಂಟರು:—ಬಂಬುಲಿಂಗಪ್ಪ ಜಾಬವಾದಿ.
ಸ್ಟೇಶನರ್ ಬಾಗಲಕೋಟೆ

ರಾಜವೈದ್ಯ ನಾರಾಯಣಜಿ ಕೇಶವಜಿ
೫೭ ಚೀನಾಬಜಾರ್ ಮದ್ರಾಸು

ಯಾವದೇ { ಆಕಾರದ / ನಕ್ಷೆಯ / ಸಂಬಂಧಿಸಿದ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ. ೧೪, ಅರ್ಧ ಬೆಲೆ ರೂ. ೭



ಬರೇ ಒಂದು ತಿಂಗಳ ವರೆಗೆ ನಾವು ಈ ದರವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ದಿವ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ಸಂಬಂಧಿಸಿದ ಕೈಗಡಿಯಾರವನ್ನು ಉತ್ಕೃಷ್ಟ ರೀತಿಯ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ ಬೆಲೆ ರೂ ೭

ಅಪ್ಪಣೆ ಇಂದೇ; ಈಗಲೇ ಬರೆಯಿರಿ.

ಪತ್ತೆ:— ಸ್ವಾನ ಹೌಸ ಪಿ. ಬಿ. ೫೦೮. ಪಿ. ಟಿ ಮದ್ರಾಸ

ಅತ್ಯಪೂರ್ವವಿದೆ ! ಉಚಿತ!

ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ ರಜಿಸ್ಟರ್ಡ ಪೋಕೆಟ ವಾಚ್ ೧೦ ಕೆರೆಟ್ ರೋಲ್ಡ್ ಗೋಲ್ಡಿನಗು ಮುಚ್ಚಳಿಕೆಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕೆತ್ತಿರುವ ಬಿಟ್ಟು ಹೊಂದಿರುವದು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "C" ರಜಿಸ್ಟರ್ಡ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ ಒಮ್ಮೆ ಕೊಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ ರಜಿಸ್ಟರ್ಡ ೧೦ ಕೆರೆಟ್ ರೋಲ್ಡ್ ಗೋಲ್ಡಿನ ಪೋಕೆಟ್ ವಾಚ್ ಗಡಿಯಾರಗಳಿಗೆ ಕೂಡ ಬರೇ ರೂ ೫ಾಯಿ

ಕ್ಯಾಪ್ಟನ್ ವಾಚ್ ಕಂ ಪಿ, ಬಿ. ಮದ್ರಾಸ. ೨೬೮

ಕಾಲರಾ ಎಂಬ ವಾಂತಿಭೇದಿ

ನಿಮ್ಮ ಊರಿನಲ್ಲಿ ಇದ್ದರೆ ಭಯಪಡಬೇಡಿ

ನೀವು ಅದನ್ನು ನಿಗ್ರಹಿಸಿಕೊಳ್ಳಬೇಕಾದರೆ

ಹೆನ್‌ರೀಸ್ ಓಮಂ ಕರ್‌ಪೂರ

ಸುಲಭವಾಗಿ ತಿನ್ನಬಹುದು.

ಸ್ವಲ್ಪ ತಣ್ಣೀರಿನಲ್ಲಿ ಅರ್ಧ ಟೀಸ್ಪೂನ್ ಅಳತೆ ಮೇಲೆ ತಿಳಿಸಿರುವಂಥ ಔಷದವನ್ನು ಹಾಕಿ ಯಾವ ಕಾಲದಲ್ಲಾದರು ಎಲ್ಲಿ ಯಾದರು ಎಷ್ಟುಸಲ ಬೇಕಾದರು ತಿನ್ನಬಹುದು. ಕಳೆದ 50 ವರ್ಷಗಳಿಂದ ವಿಷಬೇದಿಯನ್ನು ಸಕಲ ಹೊಟ್ಟೆನೋವು ಮೊದಲಾದ ವ್ಯಾಧಿಗಳನ್ನು ಎಷ್ಟೋ ಜನಗಳಿಗೆ ಗುಣವಾಗಿ ಹೆಸರುಹೋದದ್ದು.

ಉತ್ತಮವಾದ ಔಷದವೆಂದು ಪರಿಶೋಧಿಸಿ ಶ್ಲಾಘ್ಯವಾದದ್ದು. ಮೇಲೆ ತಿಳಿಸಿರುವಂಥ ವ್ಯಾಧಿಗಳನ್ನು ಗುಣವನ್ನು ಮಾಡುವಂಥಾದ್ದು. ಪುನಃ ಆ ವ್ಯಾಧಿಗಳು ಬಾರದೇ ಇರುವಹಾಗೆ ಮಾಡುವಂಥಾದ್ದು ಈ ಔಷಧವು.

ಈ ಔಷದವನ್ನು ಉಪಯೋಗಿಸಿದವರಲ್ಲಿ ಒಬ್ಬರು ಇದರಿಂದ ಪಿಳ್ಳೆಮಕ್ಕಳೂ ಮತ್ತು ಮುದುಕರು ಹೆಂಗಸರೂ ಸೌಖ್ಯ ಪಟ್ಟಿರುತ್ತಾರೆ ಎಂದು ಹೇಳಿದರು. ಮತ್ತೊಬ್ಬರು ಕಾಲರಾ ಬಂದಿರುವಂಥ ನಾಲ್ಕು ಜನಗಳು ಈ ಔಷಧವನ್ನು ತಿಂದು ಬದುಕಿರುತ್ತಾರೆ ಎಂದು ತಿಳಿಸಿದರು.

ನಿಮಗೆ ವಾಡಿಕೆಯಾಗಿರುವಂಥ ಔಷಧ ಅಂಗಡಿಯಲ್ಲಿ ಒಂದು ಸೀಸಾಯು ಔಷದವನ್ನು ತೆಗೆದುಕೊಳ್ಳಿ.

ಇಲ್ಲದೇಹೋದರೆ ಬೆಂಗಳೂರು ಕಂಟ್ಟೋನ್ಮೆಂಟು ಹೊಸ ಮಾರ್ಕೆಟು ಸ್ಕ್ವೆಯರ್ 47–19 ನಂ

ಮೆ ಸರ್ಸ್ ಡಿ. ಸ್ಪ್ರಯುಡ್ ಹೂಸ್‌ಮಾನ್ ಅಂಡ್ ಕಂಪನಿಯವರಿಗೆ

ಬರೆದು ತರಿಸಿಕೊಳ್ಳುವುದು.

Sole Manufacturers

LITTLE'S ORIENTAL BALM AND PHARMACEUTICALS

LIMITED.

15 Armenian Street, *MADRAS*

ವ್ಯವಸಾಯ ಪ್ರೇಮಿಗಳೇ

ಕನ್ನಡ ತರುಣರಿಗೆ ಸಂಧಿಯು!

ಕನ್ನಡ ಯುವಕರು ಮುಂದಾಗಬೇಕೆ ... ಅವಲಂಬಿಕೆಯಿಂದ ನಾವು ಪ್ರತಿವರ್ಷ ಇಬ್ಬರಿಗೆ ನಮ್ಮ ಸ್ವತಂತ್ರವಾದ 'ಫೋಟೊಗ್ರಾಫ್' ನಲ್ಲಿ, ಉತ್ತಮ ಶಿಕ್ಷಣ ಕೊಡಬೇಕೆಂದು ನಿರ್ಧರಿಸಿದ್ದೇವೆ. ಹುಡುಗರ ವಯಸ್ಸು ೧೨ ಕ್ಕೆ ಮಿಕ್ಕಿರಬಾರದು. ಅವರು ತಮ್ಮ ಗುಣಗಳಬಗ್ಗೆ ಸರ್ಟಿಫಿಕೇಟ ಕಳಿಸಬೇಕು. ವಿಶೇಷತಃ ಅನಾಥ ಸಂಘಗಳ ಚಾಲಕರು ಇತ್ತ ಲಕ್ಷ್ಯಕೊಡಬೇಕು. ಸತತವಾಗಿ ೫ ವರ್ಷ ನಮ್ಮಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ತಿಂಗಳಿಗೆ ೫೦ ರೂ ಗಳಿಸುವಷ್ಟು ಯೋಗ್ಯತೆಯನ್ನು ತಂದುಕೊಡುವದು ನಮ್ಮನ್ನು ಕೂಡಿದೆ ಇತಿ,

ವ್ಯಾಪಾರ ಸೇವಕ, ಭೀಮಾಚಾರ್ಯ ಚಿತ್ರಗಾರ ಫೋಟೋಗ್ರಾಫರ ಪುತ್ಳೀಬೌಲಿ. ಗೌಳೀಗುಡ್ಡ ಹೈದರಾಬಾದ (ದಕ್ಷಿಣ)

'ಕನ್ನಡಿಗ'ನ ವಾರ್ಷಿಕ ಚಂದಾ ನಿರ್ಣಯ.

ಸ್ಥಳದ ಚಂದಾದಾರರಿಗೆ	೧ ರೂ. ಇಲ್ಲವೇ, ೧೫ ನಂಬರಿಗೆ ಕಡಿಮೆಯಾಗದಂಥ ೯೦೦೦ ಯಾರ್ಡ ಕೈನೂಲು
ಪರಸ್ಥಳದವರಿಗೆ	ಮನಿಯಾರ್ಡರದಿಂದ ೧–೧೩–೦ ವಿ ಪಿ. ಯಿಂದ ೨–೧–೦ ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೬೦೦೦ ಯಾರ್ಡ ಕೈನೂಲು
ವಾಚನಾಲಯ ಸಭೆ, ಸಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ–	ಸ್ಥಳದವರಿಗೆ ೨–೦–೦ ಪರಸ್ಥಳಕ್ಕೆ ಮನಿಯಾರ್ಡರದಿಂದ ೨–೧೩–೦ ,, ವಿ. ಪಿ ಯಿಂದ ೩–೧–೦
ಸರಕಾರ, ಮುನಸಿಪಾಲಿಟಿ, ಲೋಕಲ್ ಬೋರ್ಡ ಇತ್ಯಾದಿ.	ಸ್ಥಳದವರಿಗೆ ೪–೦–೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪–೧೩–೦ ವಿ ಪಿ ಯಿಂದ ೫–೧–೦

ಪ್ರೋತ್ಸಾಹಕರಿಗೆ ವಾ. ೫ ರೂ. ಉಪಕಾರಕರ್ತರಿಗೆ ವಾ. ೧೦ ರೂ ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಬಿಡಿ ಸಂಚಿಕೆಗೆ ೯ ಪೈ. ಹಿಂದಿನ ಸಂಚಿಕೆಯೊಂದಕ್ಕೆ ೨ ಆಣೆ. ಧರ್ಮಾರ್ಥವಾಗಿಯಾಗಲೀ, ವರ್ಷದ ಕಡವೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ. —ವ್ಯವಸ್ಥಾಪಕ

ಕಿರ್ಲೋಸ್ಕರ

ಕಬ್ಬಿಣ ನೇಗಿಲುಗಳು

ಹಂಗಾಮು (ಸುಗ್ಗಿ) ಸಮೀಪಿಸಿತು ಈ ವರ್ಷ ಮಳೆ ಬೆಳೆ ಚನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವದು. ಕಿರ್ಲೋಸ್ಕರ ನೇಗಿಲು ನಂ ೧೧, ೯, ೮ ಇವು ಒಕ್ಕಲಿಗರಿಗೆ ಬಹಳೇ ಉಪಯೋಗ ಬೀಳುತ್ತವೆ ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಹಂದೇಶೀ ನೇಗಿಲುಗಳಿಂದ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುತ್ತವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು,	ಕಿರ್ಲೋಸ್ಕರವಾಡಿ
ಲಿಮಿಟೆಡ್.	ಜಿಲ್ಲೆ ಸಾತಾರೆ

ಸ್ಟಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲಕ್ಟ್ರಿಕ್ ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ಪಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೆ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು

೧ ನೇ ದರ್ಜೆ ಪುಡಿ (ಪ್ಯಾಕಿಂಗ್ ಸೇರಿ) ೧ ಪೌಂಡಿಗೆ ರೂ ೧-೬-೦

೨ ನೇ ,, ,, ,, ರೂ ೧-೩-೦

ದಿ ಸ್ಟಾಂಡರ್ಡ್ ಕಾಫಿ ಕಂಪನಿ

ಚಿಕ್ಕಪೇಟೆ ಬೆಂಗಳೂರು ಸಿಟಿ.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೭ ನೇ ಇಸ್ವಿಯ ಜನೇವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ. ೨೭೬೬ ಸಯ್ಯದ ಅಲ್ಲಿ ಅನ್ಸರ ಟೆಲಿಗ್ರಾಫಿ ಸುಪರಿಂಟೆಂಡಂಟ್ ಸೆಕ್ರೆಟರಿಯಟ್ ಹೈದರಾಬಾದ ಡೆಕ್ಕನ್ನ ರೂ ೧೦೦೦

(೨) ಎಲ್. ಬಿ. ಸಿ. ನಂ ೧೯೬೨ ನಾರಾಯಣ ವಿಠ್ಠಲ ಲೋಣಕರ. ಕೇರ್ ಆಫ್ ಡಿ. ಈ. ಪುರಾಣಿಕ ೧೬೭ ಸಿಹಾಲಪುರ ಇಂದೂರ. ೧೦೦೦

(೩) ಎಲ್ ಬಿ. ಸಿ. ನಂ ೩೪೧ ರಾಮಚಂದ್ರ ಅನಂತ ಶಿರೋಳೆ. ಡಿವಿಜನಲ್ ಫಾರೆಸ್ಟ ಆಫೀಸರ ಧಮ್ತರಿ. ಮಧ್ಯಪ್ರಾಂತ ರೂ. ೮೦೦

(೪) ಬಾಂಡ ನಂಬರು ೭೫೦೬ ಕೇ. ಜಿ. ಫನಾರ್ಂಡೋ ವ್ಯಾಪಾರಸ್ಥ. ಬ್ರೂಕ್‌ಸಾಯಿಡ್ಸ ಸಿಲೋನ, ಕೋಲಂಬೋ. ರೂ ೧೦೦೦

(೫) ಬಾಂಡ ನಂಬರು ೧೪೭೩೪ ಎಸ್. ಜಿ. ಚವರೆ. ಅಸಿಸ್ಟಂಟ ಸ್ಟೇಶನ ಮಾಸ್ತರ ಕೆಲಗಿ. ಜಿಲ್ಹಾ ವಿಜಾಪುರ ರೂ ೧೦೦೦

ಬಿ. ಎನ್. ಆರಾಧ್ಯ
ಚೀಫ ಏಜಂಟ ಹುಬ್ಬಳ್ಳಿ (ಎಸ್.ಎಮ್. ರೈಲ್ವೇ.)

ಜೀವ ವಿಮೆಯ ಕಾರ್ಯದಲ್ಲಿ

ಅದ್ಭುತವಾದ ಜಯವು !

ಯಾಕೆಂದರೆ ತನ್ನ ೧೯ ನೇ ವರ್ಷದಲ್ಲಿಯೇ ನಾಲ್ವತ್ತು ೩೦ ರೂಪಾಯಿ ಲಾಭ ಹಂಚಿದೆ.

ದಿ ಜನರಲ್ ಅಶ್ಯೂರನ್ಸ ಸೊಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮೆ ಕಂಪನಿಗಳನ್ನು ಹಿಂದ ಒಗೆದು ಮುಂದೆ ಬಂದಿದೆ. ಇದರಿಂದ ಇದರಲ್ಲಿಯ ಕರ್ತೃತ್ವ ಶಕ್ತಿಯು ವ್ಯಕ್ತವಾಗುವದಲ್ಲದೇ, ಜನಕ್ಕೆಲ್ಲ ಹೆಚ್ಚಿನ ಪ್ರಗತಿಪರವಾದ ಕಂಪನಿಯೇ ಇಲ್ಲವೆಂಬುದು ಸಿದ್ಧವಾಗುತ್ತದೆ.

ಸುಲಭ ಕಂತು! ನಾನಾಪ್ರಕಾರ ಸೌಕರ್ಯ! ಹೆಚ್ಚಾಗಿ ಲಾಭ!!!

ವಿಮೆಯ ಹಣ ಒಂದು ಕೋಟಿ! ೭೧ ತಿಂಗಳಲ್ಲಿ ಹೆಚ್ಚಾಗಿ ಉತ್ಪನ್ನವಾದದ್ದು ರೂ. ೧,೮೯,೦೦೦

ಏಜಂಟರು ಬೇಕು! ಧಾರಾಳವಾದ ಕಮಿಶನ್!

ಎಸ್. ಕಬ್ಬೂರ ಬಿ. ಎ. ಎಫ್. ಎಸ್. ಆಜಮೀರ.

Apply to:- M. Ramachandra Rao
Branch Secretary, opposit Minto Hospitle,
Bangalore City.

or

Agents at Bellary & Hubli

ಈ ಪತ್ರಿಕೆಯು ಮಂಗಳವೇಢೆ ರಾಘವೇಂದ್ರಾಚಾರ್ಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರ್ಣವ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ೮೨ ೧೯೪೭ | ವಾ. ಚಂದಾ ೧—೧೩—೦ ಮಾತ್ರ

ಕನ್ನಡಿಗ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ.)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು—ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ } ಬಾಗಲಕೋಟೆ ರವಿವಾರ ಮಿತಿ ವೈಶಾಖ ಬಹುಳ ೬ ಶಕೆ ೧೮೪೯ ತಾ|| ೨೨-೫-೧೯೨೭. Date 22—5—1927. { ಸಂಚಿಕೆ ೮

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ.

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವುದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು, ಅವುಗಳೊಳಗಿನ ಕಟ್ಟುಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ. ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಉಳಿದಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದುಕೊಳ್ಳಿರಿ !

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.
೪೯೫ ಶನಿವಾರ ಪೇಠ ಜಮಖಂಡಿಕರ ವ ಡ ಪುಣೆ ಶಹರ.

S.U. Narayanacharya & Co.
Chaukkamba Benares City.

S.U.N.& CO.
BENARES CITY.

ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ ಜರಿಕಣ, ಜರಿಸೀರೆ, ಕಾಶ್ಮೀರ್ ಶಾಲು, ತರವಾರಿ ರುದ್ರಾಕ್ಷಿ, ಕಸ್ತೂರಿ. ಲಿಂಗಗಳು, ಸ್ಫಟಿಕಮಣಿ ಮೊದಲಾದ ಮಾಲುಗಳ ಕ್ಯಾಟಲಾಗ ಕೋರುವವರಿಗೆ ಇನಾಮಾಗಿ ಕಳಿಸಲಾದೀತು.

ವಿಳಾಸ-ಶಿರೋಮಣಿನಾರಾಯಣಾಚಾರ್ಯ ಕಂಪನಿ ಚೌಕಾಂಬಾ ಕಾಶಿ

ನಪುಂಸಕತ್ವ

ಧಾತುವಿಕಾರ, ಸ್ವಪ್ನಾವಸ್ಥೆ, ಅಶಕ್ತತೆ ಇತ್ಯಾದಿಗಳಮೇಲೆ ಖಂಡಿತವಾಗಿ ಗುಣಕೊಡುವ ಮತ್ತು ಕಡೆತನಕ ಬಾಳುವ ದಿವ್ಯ ಔಷಧಿ! ಒಂದೇ ಗುಳಿಗೆ!!

ವಿಶೇಷ ಮಾಹಿತಿ ಪತ್ರದ್ವಾರ ತಿಳಿಯಿರಿ.

ವಾದಿರಾಜ ಜಹಾಗೀರದಾರ.
ಮು. ಪೋ. ಇಲಕಲ್ಲ. (ವಿಜಾಪೂರ)

ನೀಲಗಿರಿಯು ಕರ್ನಾಟಕವೋ?

(ಲೇ:- ದಿವಾಕರ ರಂಗರಾಯರು)

ನಾನು ಹೋದ ಎರಡು ಮೂರು ದಿವಸ ಏನೂ ಕೆಲಸವಾಗಲಿಲ್ಲ. ಅಲ್ಲಿ ಯಾರ ಪರಿಚಯವೂ ಇದ್ದಿಲ್ಲ. ಅಲ್ಲಿಯ ಪರಿಸ್ಥಿತಿಯೂ ಗೊತ್ತಿರಲಿಲ್ಲ. ಮೊದಲು ಗ್ಯಾಝೆಟಿಯರ ಓದಿ ಅಲ್ಲಿಯ ಜನರ ಇತಿಹಾಸ ಮುಂತಾದವುಗಳನ್ನು ನೋಡಿಕೊಂಡು ಆ ಮೇಲೆ ಶ್ರೀ ಎಮ್. ಎನ್. ಬೋರಲಿಂಗಯ್ಯ, ಮುನಿಸಿಪಲ್ ಕೌನ್ಸಿಲರ, ಮದ್ರಾಸ ಯುನಿವ್ಹರ್ಸಿಟೀ ಸೀನೇಟ ಮೆಂಬರ ಶ್ರೀಕೃಷ್ಣವಿಲಾಸ ನಿಧಿ (Bank) ಕಾರ್ಯದರ್ಶಿ ಇವರಿಗೆ ಭೆಟ್ಟಿಯಾದೆನು. ಅವರು ಕನ್ನಡದ ಒಳ್ಳೇ ಅಭಿಮಾನಿಗಳೂ ಕಾರ್ಯದಕ್ಷರೂ ಇರುವರು. ಅವರ ಮನೆತನವು ಮೈಸೂರ ಕಡೆಯದು. ಅಲ್ಲಿ ಹೋಗಿ ೮೦—೧೦೦ ವರ್ಷವಾಗಿ ಹೋಯಿತು. ಅವರು ಇತ್ತ ಕಡೆಯ ಗೌಡರು-ಒಕ್ಕಲಿಗರು. ಇತ್ತೀಚೆ ಅವರ ಪಂಗಡದವರು ಅಲ್ಲಿ ವ್ಯಾಪಾರ ಉದ್ಯೋಗ ಮುಂತಾದವುಗಳನ್ನು ಮಾಡಿಕೊಂಡು ಸಮಾಜದಲ್ಲಿ ಮುಂದೆ ಬರತೊಡಗಿದ್ದಾರೆ. ಶ್ರೀ ಚುಂಚೇಗೌಡರು, ಕೆ. ಸಿದ್ಧಯ್ಯಗೌಡರು ಮುಂತಾದವರು ಒಳ್ಳೇ ಸಂಪನ್ನರಿರುವರು. ಅವರು ಡಿ. ಎಲ್. ಬಿ. ಸಭಾಸದರೂ ಇರುವರು. ಶ್ರೀ ಬೋರಲಿಂಗಯ್ಯಾ ಇವರ ಕೂಡ ಸುಮಾರು ೨೦ ಕನ್ನಡಿಗರಿಗೆ ಬೇರೆ ಬೇರೆ ಭೆಟ್ಟಿಯಾಗಿ ಅವರಿಗೆ ಕನ್ನಡದ ಪರಿಸ್ಥಿತಿ ಕರ್ನಾಟಕ ಏಕೀಕರಣ ಹಾಗೂ ಕರ್ನಾಟಕ ವಿಶ್ವವಿದ್ಯಾಲಯ ಇವುಗಳ ಬಗ್ಗೆ ನಡೆದ ಚಳವಳಿ ಮುಂತಾದವುಗಳನ್ನು ತಿಳಿಸಿ ಹೇಳಿದೆನು. ಅವರು ಒಳ್ಳೇ ಪ್ರೀತಿಯಿಂದ ಹೇಳಿದ್ದನ್ನೆಲ್ಲ ಕೇಳಿಕೊಂಡರು. ಈ ಕಾರ್ಯದಲ್ಲಿ ಸಂಪೂರ್ಣ ಸಹಾಯವನ್ನು ಮಾಡುವ ಅಭಿವಚನವನ್ನಿತ್ತರು. ಆ ಮೇಲೆ ಅಲ್ಲಿಯ ಮುನಸಿಪಾಲ್ಟಿ ಅಧ್ಯಕ್ಷರಾದ ಮಿ। ಟೆಪ್ಲಿಸ ಇವರನ್ನು ಕಂಡೆವು. ಅವರು ಆಂಗ್ಲೋ ಇಂಡಿಯನ್ನರ ಪರವಾಗಿ ಮದ್ರಾಸ ಕೌನ್ಸಿಲದಲ್ಲಿ ಸಭಾಸದರಿರುವರು. ಇವರು ಅಲ್ಲಿ 'ಸೌಥ ಇಂಡಿಯನ್ನ ಅಬಝರವ್ಹರ್' ಎಂಬ ಪತ್ರಿಕೆಯನ್ನು ಹೊರಡಿಸುತ್ತಿದ್ದು ತಮ್ಮ ಸರಲ ಸ್ವಭಾವದ ಮೂಲಕ ಬಹಳೇ ಲೋಕಪ್ರಿಯರಾಗಿರುವರು. ತಮ್ಮ ಹಾಯಸ್ಕೂಲಿನಲ್ಲಿ ಕನ್ನಡ ಶಿಕ್ಷಕರನ್ನು ನೇಮಿಸುವ ವಿಷಯವನ್ನು ಅವರು ಹೇಳಿದರು. ಆದರೆ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡವಿಲ್ಲದೇ ಹೋದರೆ ಹಾಯಸ್ಕೂಲಿನಲ್ಲಿ ಕನ್ನಡವನ್ನಿಡುವದು ವ್ಯರ್ಥವೆಂದು ನಾನು ಹೇಳಲಾಗಿ ಅವರು ಒಪ್ಪಿಕೊಂಡು ಪ್ರಾಥಮಿಕ ಶಾಲೆಗಳಲ್ಲಿ ಕನ್ನಡವನ್ನಾರಂಭಿಸುವೆವೆಂದು ಅವರು ಹೇಳಿದರು. ಅದೇ ದಿವಸ 'ಹೆಬ್ರಾನ' 'ಆರೋಗ್ಯದ ವಾರ'ವೆಂಬ ಉತ್ಸವವಿತ್ತು. ಎಲ್ಲ ಶಾಲೆಯ ಹುಡುಗರನ್ನೂ, ವಿದ್ಯಾರ್ಥಿಗಳನ್ನೂ ಒಟ್ಟಿಗೆ ಕರೆದಿದ್ದರು. ವಿದ್ಯಾರ್ಥಿಗಳಿಗೆ ಬಹುಮಾನ ಕೊಡುವ ಸಮಾರಂಭವನ್ನು ಅಲ್ಲಿಯ ಕಲೆಕ್ಟರರ ಪತ್ನಿಯಾದ ಶ್ರೀ ಬಾಕೆನ್ ಬೆರಿಯೆಂಬವರು ಮಾಡುವವರಿದ್ದರು. ಆ ಕಾಲಕ್ಕೆ ಮಿ॥ ಟೆಪ್ಲಿಸ ಇವರು ನನಗೆ ಮಾತನಾಡಲಿಕ್ಕೆ ಅಪ್ಪಣೆ ಕೊಡಿಸಿದರು. ನಾನು ಕನ್ನಡದಲ್ಲಿಯೇ ೧೦ ನಿಮಿಷ ಕನ್ನಡ ನುಡಿ ಹಾಗೂ ವಿದ್ಯಾರ್ಥಿಗಳು ತಮ್ಮ ಆರೋಗ್ಯವನ್ನು ಕಾಯಕೊಳ್ಳಬೇಕು ಎಂಬ ವಿಷಯವನ್ನು ಹೇಳಿದೆನು. ಕದಾಚಿತ್ ನೀಲಗಿರಿಯಲ್ಲಿ ನೂರಾರು ವರ್ಷದಲ್ಲಿ ಇದು ಮೊದಲನೇ ಉಪನ್ಯಾಸವಾಗಿರಬಹುದು. ಎಲ್ಲರೂ ಸ್ತಿಮಿತಚಿತ್ತರಾಗಿ ಕೇಳಿದರು. ಕನ್ನಡವು ಎಲ್ಲರಿಗೂ ತಿಳಿಯಿತೋ ಇಲ್ಲವೋ ಎಂದು ಅನೇಕ ವಿದ್ಯಾರ್ಥಿಗಳನ್ನು ಕೇಳಿದೆನು. ಚನ್ನಾಗಿ ತಿಳಿಯಿತೆಂದು ಹೇಳಿದರು. ಬಡಗರಿಗಂತೂ ಒಂದು ವಿಶೇಷ ಆನಂದವಾದದ್ದು ಕಂಡುಬಂದಿತು.

ನಾಲ್ಕನೇ ದಿನ ಅರವನಕಾಡು— ಊಟಿಯಿಂದ ೧೨ ಮೈಲು— ಎಂಬಲ್ಲಿರುವ ಬಡಗರ ಮುಂದಾಳುಗಳೂ ವಿದ್ಯಾವಂತರೂ ಬೀ. ಏ. ಎಮ್. ಎಲ್. ಸೀ. ಇರುವ ಶ್ರೀ ಬಿ. ಅರಿಗೌಡರ ಇವರಿಗೆ ಭೆಟ್ಟಿಯಾಗಲಿಕ್ಕೆ ಅವರ ಊರಿಗೆ ಹೋದೆನು. ಆದರೆ ಅವರು ಮನೆಯಲ್ಲಿರಲಿಲ್ಲ. ಅವರ ತಂದೆಯವರಾದ ರಾವಸಾಹೇಬ ಬೆಳ್ಳೀಗೌಡರು ಭೆಟ್ಟಿಯಾದರು. ಅವರು ಸ್ವಲ್ಪ ವಯಸ್ಸಾದವರಿದ್ದರೂ ಬಹಳೇ ಉತ್ಸಾಹಿಗಳು. ನಮ್ಮನ್ನು ಅತಿಶಯ ಆನಂದದಿಂದ ಬರಮಾಡಿಕೊಂಡರು. ಆ ಊರಲ್ಲಿ ಅವರು ಒಂದು ಶಾಲೆಯನ್ನು ಸ್ವಂತ ಖರ್ಚಿನಿಂದ ನಡೆಸಿರುವರು. ಇವರು ರೇಲ್ವೆ ಕಂತ್ರಾಟದಾರರಿದ್ದು ಒಳ್ಳೇ ಸಂಪನ್ನರಿರುವರು. ಇವರು ನಡೆಸಿದ ಶಾಲೆಯಲ್ಲಿ ಮ॥ ಶಾಸ್ತ್ರಿ ಎಂಬ ಶಿಕ್ಷಕರು ಕನ್ನಡ ಬಲ್ಲವರಿರುವರು. ಬೆಳ್ಳೀಗೌಡರ ಕೂಡ ಮಾತನಾಡಿ ಅವರ ಸಹಾನುಭೂತಿಯನ್ನು ಸಂಪಾದಿಸಿದ ಮೇಲೆ ಅವರ ಶಾಲೆಗೆ ಹೋಗಿ ಅದನ್ನು ನೋಡಿಕೊಂಡು ಶಿಕ್ಷಕರ ಕೂಡ ಮಾತಾಡಿ ತಿರುಗಿ ಊಟಿಗೆ ಬಂದೆವು. ಮೂರನೇ ದಿವಸ ಊಟಿಯ ಮುನಿಸಿಪಾಲಿಟಿಯಲ್ಲಿ ಶ್ರೀ ಅರೀಗೌಡರಿಗೆ ಭೆಟ್ಟಿಯಾಗಲು ನಮ್ಮ ಎಲ್ಲ ಮಾತಿಗೆ ಅವರು ಒಪ್ಪಿಗೊಂಡರು. ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡವನ್ನಾರಂಭಿಸುವದು ಅವಶ್ಯ. ಆದರೆ ನಮಗೆ ಕನ್ನಡ ಹಾಗೂ ತಮಿಲು ಬಲ್ಲ ಶಿಕ್ಷಕರು ದೊರೆಯುವದು ಕಠಿಣವೆಂದು ಹೇಳಿದರು. ಆದರೆ ನಾವು ಮೈಸೂರ ಬೆಂಗಳೂರಿನಿಂದ ಕಳಿಸಬಹುದು. ೪—೮ ವರ್ಷಗಳಲ್ಲಿ ಇಲ್ಲಿಯವರೇ ಕಲಿತು ತಯಾರಾಗಬಹುದೆಂದು ಹೇಳಲಾಗಿ ಅವರು ಮನಸಾ ಒಪ್ಪಿದರು. ಸಾರ್ವಜನಿಕ ಸಭೆ ಮುಂತಾದವುಗಳೇನಾದರೂ ಬೇಕೋ ಹೇಗೆ ಎಂದು ಕೇಳಲಾಗಿ ಆ ಗದ್ದಲವು ಈಗಿಯೇ ಬೇಡ, ವಿಶೇಷತಃ ಹೊರಗಿನವರು ಬಂದು ಅದನ್ನು ಮಾಡಿದರೆ ಕೆಲವರ ಮನಸು ವಿರುದ್ಧವಾಗಬಹುದೆಂದು ಅವರು ಹೇಳಿದರು. 'ಇದು ನಮ್ಮ ಕೈಯಲ್ಲಿದ್ದ ಮಾತು. ಮುನಸಿಪಾಲ್ಟಿಯಲ್ಲಿ ಹಾಗೂ ಡೀ. ಎಲ್. ಬಿ. ಯಲ್ಲಿ ನಾವು ಠರಾವುಗಳನ್ನು ಪಾಸು ಮಾಡಿ ಶಾಲೆಗಳನ್ನಾರಂಭಿಸುತ್ತೇವೆಂದು ಅವರು ಅಭಿವಚನ ಕೊಟ್ಟರು. ಆ ಮೇಲೆ ಎರಡನೇ ದಿವಸ ಹಾಯಸ್ಕೂಲಿಗೆ ಹೋಗಿ ಅಲ್ಲಿ ಇರುವ ಶ್ರೀ ರಂಗನಾಥರಾವ ಶ್ರೀರಾಮಚಂದ್ರರಾವ ಮುಂತಾದ ೧೦ ಶಿಕ್ಷಕರಿಗೆ ಭೆಟ್ಟಿಯಾಗಿ ೧೦—೧೫ ನಿಮಿಷ ಎಲ್ಲ ವಿಷಯವನ್ನು ತಿಳಿಸಿಕೊಟ್ಟು, ಈ ಕೆಲಸದಲ್ಲಿ ಅವರ ಸಹಾನುಭೂತಿ ಹಾಗೂ ಸಹಕಾರದ ಯೋಚನೆಯನ್ನು ಮಾಡಲಾಗಿ ಅವರು ಬಹಳೇ ಸಂತೋಷದಿಂದ ಒಪ್ಪಿಕೊಂಡದ್ದಲ್ಲದೆ ತಾವು ಕನ್ನಡದಲ್ಲಿ ಹೇಳಿದ ಕೂಡಲೇ ವಿದ್ಯಾರ್ಥಿಗಳು ಎಷ್ಟು ಆನಂದದಿಂದ ವಿಷಯವನ್ನು ಕೇಳುತ್ತಾರೆಂಬ ತಮ್ಮ ಅನುಭವವನ್ನು ಹೇಳಿದರು.

ಈ ಪ್ರಕಾರ ಕೆಲಸವಾಗಿರುವದು. ಇನ್ನು ಹಳ್ಳಿಗೆ ಹೋಗಿ ಜಾಗ್ರತಿ ಮಾಡಿ ಕನ್ನಡದಲ್ಲಿಯೇ ಕಲಿಯುವದು ಎಷ್ಟು ಅವಶ್ಯ ಮುಂತಾದ್ದನ್ನು ತಿಳಿಸಿಕೊಟ್ಟರೆ ಕೆಲಸವು ಪೂರ್ಣವಾಗುವದು. ಆದರೆ ಆ ಕೆಲಸಕ್ಕೆ ಏನಿಲ್ಲಂದರೂ ೧೫ ದಿವಸದ ಅವಕಾಶ ಬೇಕು. ಇನ್ನೊಮ್ಮೆ ಅಥವಾ ಇನ್ನೊಬ್ಬರು ಯಾರಾದರೂ ಹೋದಾಗ ಆ ಕೆಲಸವನ್ನು ಮಾಡುವದು ಅತ್ಯವಶ್ಯ. ಇಲ್ಲದಿದ್ದರೆ ಕನ್ನಡ ಶಾಲೆಯನ್ನು ತೆರೆದರೂ ಅಲ್ಲಿ ವಿದ್ಯಾರ್ಥಿಗಳು ಬರುವದು ಕಷ್ಟ. ಅಜ್ಞಾನದ ಮೂಲಕ ತನ್ನ ಹಿತವು ಯಾತರಲ್ಲಿದೆ ಎಂಬವನ್ನು ಸಹ ಮನುಷ್ಯನು ನು[illegible] ತುಳಿಯುವನಲ್ಲವೇ?

ಈ ಮೇಲಿನ ವಿಷಯಗಳನ್ನೆಲ್ಲ ಓದಿ ಕನ್ನಡಿಗರು ಜಾಗೃತರಾಗುವರೋ ಇಲ್ಲವೋ? ಹಿಂದುಸ್ಥಾನದ ಎಲ್ಲ ಭಾಷೆಗಳ ಪ್ರಾಂತಗಳಲ್ಲಿ ಕನ್ನಡ ಭಾಷೆಯ ಪ್ರಾಂತವು ಅತ್ಯಂತ ದುರ್ದೈವಿ ಹಾಗೂ ಹಿಂದುಳಿದದ್ದಿರುವದು. ಆದರೆ ನಮ್ಮನೇ ಕೊರತೆಯಾಗುವದು? ಮಿಕ್ಕ ಪ್ರಾಂತಗಳು ಯತ್ನಿಸುತ್ತಿರುವಂತೆ ಕನ್ನಡಿಗರೂ ಯತ್ನಿಸಿದರೆ ತಮ್ಮ ಪ್ರಾಂತವು ಒಂದಾಗುವದು. ತಮ್ಮ ಭಾಷೆಗೆ ಪ್ರಾಶಸ್ತ್ಯವು ಉಂಟಾಗುವದು. ತಮ್ಮ ಸಮಾಜದ ಪ್ರಗತಿಯಾಗುವದು. ಇಲ್ಲದಿದ್ದರೆ ಹುದು ತುಂಡಾದ ಕರ್ನಾಟಕವು ಅಲ್ಲಿಯೇ ಚೈತನ್ಯ ರಹಿತವಾಗಿ ಲಯಹೊಂದುವದು.

(ಕರ್ಮವೀರ)

ಸ್ತ್ರೀ ವಿನೋದ.

"ಏನು? ನಿನ್ನೆ, ಮದುವೆಯು ಆಯಿತೇ? ನಿಜವೇ ಇದು! ನಾನು ನಂಬಬಹುದೇ ಒಳ್ಳೇದು! ಹೆಂಡತಿ ಎಲ್ಲಿಯವಳು?"

"ಸ್ವಲ್ಪ ಅಡ್ಡಾದೆನು! ದಂಪು ಹತ್ತಿತು! ಆಕೋ, ಅಲ್ಲಿ ನನ್ನ ಹೆಂಡತಿಯು ಸಿದ್ಧಳಾಗಿ ಬಂದಿದ್ದಳು!!!"

ಕನ್ನಡಿಗ.

ಬಾಗಲಕೋಟೆ ವೈಶಾಖ ಬಹುಳ ೬ ಶಕೆ ೧೮೪೯.

ಸಂಪಾದಕರ ಭೂಮಿ

(೬೦)

ನನ್ನ ಮನಸಿನ ಮೋಣವಾದಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮೆ!
ಅನ್ನದಾದರು ಚಿನ್ನ ಮೋಣಬಸ್ತ್ರಿಯ ನೊಂದು ಬಿನ್ನಯೊಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ಕನ್ನಸ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ಕನ್ನಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯಾ॥

—ಅಂಬಿಕಾತನಯ ದತ್ತ

ಕಣಿಯರ ಪತ್ರಿಕೆಯನ್ನು ಹೊರಡಿಸಿ, ಕಣಿಯರ ಜನಾಂಗದಲ್ಲಿ ಏಕಮತ್ಯ. ವಿದ್ಯಾಭ್ಯಾಸ, ಕೈಗಾರಿಕೆ ಮೊದಲಾದವುಗಳ ಅಭಿವೃದ್ಧಿ ಮಾಡಿ ಆ ಜನಾಂಗದ ಸರ್ವಾಂಗೀಣ ಸೌಭಾಗ್ಯವನ್ನು ಬೆಳೆಯಿಸಬೇಕೆಂದು ತಗಡೂರ ರಾಮಚಂದ್ರರಾಯರು ಪ್ರಯತ್ನ ಪಡುತ್ತಿರುವುದು ಕನ್ನಡಿಗರಿಗೆ ಗೊತ್ತಿದ್ದ ಸಂಗತಿಯು. "ತಮ್ಮ ಪತ್ರಿಕೆಯು ರಾಜಕೀಯವಲ್ಲದುದೂ, ನಿರ್ದುಷ್ಟವಾದುದೂ ಇರುತ್ತದೆಂದು ಅವರು ಸಾರಿ ಹೇಳಿದರು. ಮೈಸೂರ ಸರಕಾರದವರು ಅದನ್ನು ಹೊರಡಿಸಲು ಅಪ್ಪಣೆಯನ್ನು ಕೊಡದಿರುವುದು ವಿಲಕ್ಷಣವಾದ ಮಾತೇ ಸರಿ. ಮೈಸೂರ ಸರಕಾರದವರು ಅಪ್ಪಣೆ ಕೊಡದಿರುವದಕ್ಕೆ ಏನು ಕಾರಣವೆಂಬುದು ನಮಗಂತೂ ತಿಳಿಯದ ವಿಷಯವಾಗಿದೆ. ಶ್ರೀ ರಾಮಚಂದ್ರರಾಯರು ಈ ಬಗ್ಗೆ ತಮಗೂ ಸರಕಾರದವರಿಗೂ ನಡೆದು ಹೋದ ಪತ್ರವ್ಯವಹಾರವನ್ನೆಲ್ಲ ಎಲ್ಲ ಜನರ ತಿಳುವಳಿಕೆಗಾಗಿ ಪ್ರಕಟ ಮಾಡಿರುವರು. ನ್ಯಾಯವಿಧಾಯಕ ಸಭೆಯ ಮತ್ತು ಪ್ರಜಾಪ್ರತಿನಿಧಿಯ ಸಭಾಸದರ ಸನ್ನಿಧಿಯಲ್ಲಿ ಒಂದು ಅರಿಕೆಯನ್ನಾದರೂ ಮಾಡಿಕೊಂಡಿರುವರು. ಪತ್ರಿಕೆಯ ಉದ್ದೇಶವು ಕಣಿಯ ಜನಾಂಗದವರ ನೈತಿಕ, ಧಾರ್ಮಿಕ, ಆರ್ಥಿಕ, ಸಾಮಾಜಿಕ ಅಭಿವೃದ್ಧಿಯಿರುವುದು. ಅದರಲ್ಲಿ ಆಕ್ಷೇಪಾರ್ಹವಾದುದೇನೂ ಇರುವದಿಲ್ಲ. ಇದು ಲೋಕಸತ್ತೆಯ ಯುಗವು. ಸಂಪೂರ್ಣ ಸ್ವಾತಂತ್ರ್ಯದ ಯುಗವು. ಎಲ್ಲ ಕಡೆಯಲ್ಲಿಯೂ ಕನ್ನಡಿಗರ, ಅನ್ಯಾಯದ ನಿರ್ಬಂಧನಗಳು ನಿಲ್ಲಿಸಿ ಅಡಗಿ ಹೋಗುವ ಯುಗವು. ಇಂತಹ ಯುಗದಲ್ಲಿ ಪ್ರಗತಿಪರವೆಂದೂ ಉದಾರ ಧೋರಣವುಳ್ಳದೆಂದೂ ಕೀರ್ತಿಯನ್ನು ಪಡೆದ ಮೈಸೂರ ಸರಕಾರವು ಪತ್ರಿಕೆಯನ್ನು ಹೊರಡಿಸಲು ಅಪ್ಪಣೆ ಕೊಡದಿರುವುದು ಅನುಚಿತವೇ ಸರಿ. ಸರಕಾರದವರು ಕಾರಣವಿಲ್ಲದೆ ಬಲಾತ್ಕಾರದಿಂದ ... ಪತ್ರಿಕೆಯನ್ನು ಕುಗ್ಗಿಸಲು ಯತ್ನಮಾಡಿದರೆ, ಪ್ರಜೆಗಳಲ್ಲಿ ಅಸಂತುಷ್ಟಿಯಾಗಿ ಅದಕ್ಕೆ ಸ್ವೈರವು ಸ್ವಾತಂತ್ರ್ಯಕ್ಕೆ ಧಕ್ಕೆಯು ತಗಲದೆ ಇರದು.

ನೀಲಗಿರಿಯಲ್ಲಿ ಕನ್ನಡ ಸುದ್ದಿಯು ಎಂತಹ ದುರವಸ್ಥೆಯಲ್ಲಿದೆಂಬುದನ್ನು ... ತಮ್ಮ ಪ್ರವಾಸದ ವರ್ಣನೆಯಲ್ಲಿ ಚನ್ನಾಗಿ ವರ್ಣಿಸಿರುವರು. ಕರ್ನಾಟಕದ ದುರ್ದೈವಕ್ಕೆ ಎಣೆಯೇ ಇಲ್ಲದಂತಾಗಿದೆ. ಗಡಿನಾಡುಗಳಲ್ಲಿ ನೆರೆಹೊರೆಯ ನುಡಿಗಳು ಕನ್ನಡವನ್ನು ನುಂಗಿವೆ. ಮರಾಟರು ಉತ್ತರದ ಭಾಗದಲ್ಲಿಯೂ, ಆಂಧ್ರರು ಪೂರ್ವ ಭಾಗದಲ್ಲಿಯೂ ನಡಸಿದ ದಾಳಿಯ ಕ್ರಮವು ಕನ್ನಡಿಗರಿಗೆ ಗೊತ್ತಿದೆ. ತಮಿಳರಿಂದ ಕನ್ನಡನುಡಿಗಾದ ಹಾನಿಯ ಸುದ್ದಿಯು ಸಂಪೂರ್ಣವಾಗಿ ನಮಗೆ ತಿಳಿದಿರಲಿಲ್ಲ. ನೀಲಗಿರಿಯಲ್ಲಿ ನೂರಕ್ಕೆ ೬೦ ರಷ್ಟು ಜನರು ಕನ್ನಡ ಭಾಷೆಯನ್ನೇ ಆಡುವವರಿದ್ದರೂ, ಒಂದಾದರೂ ಕನ್ನಡ ಪ್ರಾಥಮಿಕ ಶಾಲೆಯಿಲ್ಲ! ನೀಲಗಿರಿ ತೆಳಗಿನ ಭಾಗದ ಕೊಯಿಮುತ್ತೂರ ಭಾಗದಲ್ಲಿ ಕನ್ನಡದ ಸ್ಥಿತಿಯು ಇನ್ನೂ ಹೆಚ್ಚು ಶೋಚನೀಯವಾಗಿರಬೇಕು! ಕನ್ನಡ ನಾಡಿನಲ್ಲಿದ್ದ, ಶಿಕ್ಷಣ ಸಮಿತಿಗಳು ಈ ಬಗ್ಗೆ ವಿಚಾರಿಸಿ, ಅಲ್ಲಲ್ಲಿ ಕನ್ನಡ ಶಾಲೆಗಳನ್ನು ತೆರೆಯಬಾರದೇಕೆ? ವಿದ್ಯಾಪ್ರಸಾರದ ಭಾರವನ್ನು ವಿದ್ಯಾದಾಯಕ ಸಂಸ್ಥೆಗಳು ಹೊರದಿದ್ದರೆ ಮತ್ತಾರು ಹೊರಬೇಕು? ಧಾರವಾಡದಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳಿವೆ. ಮತ್ತೆ ಮತ್ತೆ ಅಲ್ಲಿಯೇ ಹೊಸ ಸಂಸ್ಥೆಗಳನ್ನು ತೆಗೆಯುವದರ ಬದಲು, ಅವಶ್ಯವಿದ್ದ ನೀಲಗಿರಿ, ಕೊಯಿಮುತ್ತೂರಂತಹ ಸ್ಥಳಗಳಲ್ಲಿ ಕನ್ನಡ ಶಾಲೆಗಳನ್ನು ಈ ಸಂಸ್ಥೆಗಳು ತೆರೆದರೆ, ನೀರಡಿಸಿದವರಿಗೆ ಸಕಾಲದಲ್ಲಿ ನೀರನ್ನು ಕೊಟ್ಟ ಪುಣ್ಯವನ್ನು ಕಟ್ಟಿಕೊಳ್ಳುವರು. ಕರ್ನಾಟಕ ವಿದ್ಯಾವರ್ಧಕವೆಂಬ ಇಷ್ಟವಿದ್ದ ಹೆಸರನ್ನಿಟ್ಟುಕೊಂಡು ಕಾಲು ಶತಮಾನದಿಂದ ಜೀವಿಸುತ್ತಲಿದ್ದ ಧಾರವಾಡದ ಈ ಹಿರಿಯ ಸಂಸ್ಥೆಯು ಈ ಕಾರ್ಯದಲ್ಲೇಕೆ ಮನಸ್ಸನ್ನು ಹಾಕಬಾರದು?

ಬಾಗಲಕೋಟೆಯ ಮುನಸೀಪಾಲ್ಟಿಯು ಮಹಾಕಾಬೇನೆಯ ನಿವಾರಣೆಯ ಸಲುವಾಗಿ ಊರಲ್ಲಿಲ್ಲ ಭಾವಿಗಳಲ್ಲಿ ಔಷಧದ ಪುಡಿಯನ್ನು ಹಾಕುತ್ತಿರುವರು. ಈಗ್ಗೆ ಎಲ್ಲ ಭಾವಿಗಳಲ್ಲಿ ನೀರು ಕಡಿಮೆಯಾದ್ದರಿಂದ, ಊರಲ್ಲಿ ಅನೇಕರು ತಮ್ಮ ತಮ್ಮ ಹದ್ದಿನಲ್ಲಿಯ ಭಾವಿಗಳನ್ನು ಬಳಿಸಿರುವರು. ಆದರೆ ಮುನಸೀಪಾಲ್ಟಿಯ ಭಾವಿಗಳಲ್ಲಿ ಅನೇಕ ಕಡೆ ಕೊಡಗಳು ಸಂಪೂರ್ಣ ತುಂಬುವದಿಲ್ಲ. ಹೀಗಿದ್ದರೂ, ಅವನ್ನು ಬಳಿಸುವದರ ಕಡೆಗೆ ನಗರ ಸಂಸ್ಥೆಯು ಅಲಕ್ಷ್ಯ ಮಾಡಿದ್ದುದು ಆಶ್ಚರ್ಯವು. ಮೊದಲೇ ಕೊಡಗಳು ತುಂಬುವದಿಲ್ಲ. ಮೇಲಾಗಿ ವಾರದಲ್ಲಿ ಎರಡು ಸಲ ಪುಡಿಯನ್ನು ಹಾಕುವದರಿಂದ ಜನರಿಗೆ ಹೆಚ್ಚಾಗಿ ಅನನುಕೂಲತೆಯಾಗುವದು. ಆದುದರಿಂದ ಮುನಸೀಪಾಲ್ಟಿಯು ಯಾವ ಯಾವ ಭಾವಿಗಳಲ್ಲಿ ನೀರು ಇರುವದಿಲ್ಲವೋ ಆ ಎಲ್ಲ ಭಾವಿಗಳನ್ನು ಬಳಿಸಲು ಬೇಗನೇ ಏರ್ಪಾಡು ಮಾಡಬೇಕು. ಈಗ್ಗೆ ಭಾವೀ ಬಳಿಸುವದರ ವು ಸಹ ಕಡಿಮೆಯಾಗಿದೆ. ಇದರಿಂದ ನಗರ ಸಭೆಗೆ ಹೆಚ್ಚು ವೆಚ್ಚವೇನೂ ತಗಲದು. ಅಂದ ಮೇಲೆ ಜನರ ಕಲ್ಯಾಣಕ್ಕಾಗಿ ಈ ಅಲ್ಪ ಶ್ರಮದ ಕಾರ್ಯವನ್ನು ಮುಂದೆ ಮುಂದೆ ಹಾಕುವದು ಮುನಸೀಪಾಲ್ಟಿಗೆ ಶೋಭಿಸದು. ಹೊಸಪೇಟೆಯ ಜವಳೀ ಓಣಿಯಿಂದ ಬಜಕ್ಕೆ ... ಬೀದಿಯ ಕಡೆಗೆ ಹೊರಳುವ ಮೂಲೆಯಲ್ಲಿ ಕಂದೀಲಿನ ಕಲ್ಲು ಈ ವರೆಗೂ ಇದೆ. ಇದರಿಂದ ಚಕ್ಕಡಿಗಳು ಹೊರಳುವಾಗ್ಗೆ ಅದರ ಮೇಲೆ ಹಾಯ್ದು, ಒಗ್ಗಾಲಿಯಾಗಿ, ಜನರಿಗೂ, ಅಂಗಡಿಕಾರರಿಗೂ, ದನಗಳಿಗೂ ಬಹು ತೊಂದರೆಯಾಗುತ್ತಲಿದೆ. ಅದನ್ನು ನಾಶಪಡಿಸಲಿಕ್ಕೆ ಮುನಸೀಪಾಲ್ಟಿಗೆ ವೆಚ್ಚವೇನೂ ತಗಲದು. ಹೀಗಿದ್ದರೂ ಆ ಬಗ್ಗೆ ಏನೊಂದು ಏರ್ಪಾಡು ಮಾಡದಿರುವದೇಕೆ? ಇನ್ನು ಮೂರನೇ ಮಾತೆಂದರೆ, 'ಪಲ್ಲೆಯ ಮಾರ್ಕೇಟಿ'ನ ನಾಲ್ಕು ದಿಕ್ಕಿನ ಪ್ರವೇಶದ ಚಿಕ್ಕ ದಾರಿಯಲ್ಲಿ ಎರಡೂ ಮಗ್ಗಲಿನಲ್ಲಿ

ಜನರನೇಕರು ಮೂತ್ರವಿಸರ್ಜನೆಯಿಂದ ಬಹು ಹೊಲಸು ಮಾಡುವರು. ಜನರು ಹಾಯ್ದುಹೋಗುವಾಗ್ಗೆ ಮೂಗು ಹಿಡಿದುಕೊಂಡು ಹೋಗಬೇಕಾಗುತ್ತದೆ. ಪಲ್ಲೇಕಾಯಿಯವರು ಅಲ್ಲಿಯೇ ಕುಳಿತುಕೊಳ್ಳುವರು. ಇದು ಬಹು ಅನಾರೋಗ್ಯಕರವಾದ ಸ್ಥಿತಿಯು. ಆದುದರಿಂದ ನಗರ ಸಂಸ್ಥೆಯು ಇತ್ತ ಕಡೆಗಾದರೂ ದಕ್ಷತೆಯನ್ನು ತೋರ್ಪಡಿಸಬೇಕು.

ದತ್ತಾತ್ರೆಯ ನಾಟಕ ಮಂಡಳಿಯು ಕನ್ನಡ ನಾಡಿನಲ್ಲಿ ಹೆಸರಾದುದು; ಕನ್ನಡಿಗರ ಅಭಿಮಾನಕ್ಕೆ ಪಾತ್ರವಾದುದು. ಇಂತಹ ಮಂಡಳಿಯವರಲ್ಲಿ ಕುಂದುಗಳೇನೂ ಇರಬಾರದಾಗಿ ನಮ್ಮ ಲವಲವಿಕೆ. ಆದ್ದರಿಂದ ನಾವು ಅವರಿಗೆ ಕೆಲವು ಸೂಚನೆಗಳನ್ನು ಹಿಂದೆ ಮಾಡಿದ್ದೆವು. ಆದರೆ ಶ್ರೀ ಗರೂಡರು ಈ ಬಗ್ಗೆ ವಿಪರೀತವಾಗಿ ಅರ್ಥಮಾಡಿಕೊಂಡು ವಾದವನ್ನು ಬೆಳೆಯಿಸಿದರು. ಆದುದರಿಂದ ನಾವು ಅವರಿಗೆ ಎಂಟು ಪ್ರಶ್ನೆಗಳನ್ನು ಕೇಳಿದೆವು, ಆ ಬಗ್ಗೆ ಶ್ರೀ ಗರೂಡರು ನಿರುತ್ತರರಾದರು! ಈಗ್ಗೆ ವಿಜಾಪೂರದಲ್ಲಿ ಹಸ್ತ ಪತ್ರಿಕೆಗಳನ್ನು ಮರಾಠಿಯಲ್ಲಿ ಹೊರಡಿಸಿದ್ದೇಕೆ? ಕನ್ನಡಿಗರ ಅಭಿಮಾನಕ್ಕೆ ಆಸ್ಪದರಾದವರಿಗೆ ಇದು ಸಲ್ಲದು; ಮತ್ತು ಗಾಯನ ಕಲೆಯು ಈ ಮಂಡಲದಲ್ಲಿ ಇಲ್ಲವೇ ಇಲ್ಲವಾದ್ದರಿಂದ ಅದನ್ನು ಬೆಳಿಸಲು, ಒಡೆಯರು ಪ್ರಯತ್ನಿಸಬೇಕೆಂಬ ಇಚ್ಛೆಯಿಂದ ನಾವು ಕೆಲವು ಲೇಖಗಳನ್ನು ಪ್ರಕಟ ಮಾಡಿರುವೆವು. ಅವು ಶ್ರೀ ಗರೂಡರಿಗೆ ರುಚಿಸಲೊಲ್ಲವು! ಮತ್ತು ಅವರು ಅನ್ಯಥಾ ಭಾವಿಸಿರುವರು. ಶಿರಹಟ್ಟಿ, ಗುಬ್ಬಿ, ವಿಶ್ವಗುಣಾದರ್ಶ ಮೊದಲಾದ ಎಲ್ಲ ನಾಟಕ ಮಂಡಳಿಗಳ ಬಗ್ಗೆಯೂ ನಾವು ವಿಮರ್ಶಾತ್ಮಕ ಲೇಖಗಳನ್ನು ಪ್ರಕಟಿಸಿರುವೆವು. ಹೀಗಿದ್ದು, ಕೇವಲ ದತ್ತಾತ್ರೆಯ ನಾಟಕ ಮಂಡಲದ ಲೇಖಗಳನ್ನೇ ನಾವು ಪ್ರಕಟಿಸಿರುವೆವೆನ್ನುವದು ಸುಳ್ಳು. ೮-೧೦ ಪುಟ ಆಗುವಂತಹ ಇಲ್ಲದ ಹರಟೆಯ ಉತ್ತರಗಳನ್ನು ಬರೆದರೆ ಯಾವ ವೃತ್ತಪತ್ರಕಾರರೂ ಪ್ರಕಟಿಸರು. ಇದು ಶ್ರೀ ಗರುಡರಿಗೆ ಇನ್ನೂ ತಿಳಿದಿಲ್ಲ. ಈ ನಾಟಕ ಸಭೆಯ 'ಪಾದುಕಾ ಪಟ್ಟಾಭಿಷೇಕ'ದಲ್ಲಿ ಮೂವರು ಚನ್ನಾಗಿ ಅಭಿನಯಿಸಿದರೆಂದೂ, ಉಳಿದವರ, ಹಾಗೂ ಒಟ್ಟಿನ ವೇಳೆ ನೋಡಿದರೆ, ಮಂಡಳಿಯ ಗಾಯನಾಭಿನಯ ಕೌಶಲ್ಯಗಳು ಅಷ್ಟೇನು ಹೇಳಿಕೊಳ್ಳುವಹಾಗಿಲ್ಲವೆಂದೂ ಕನ್ನಡದಲ್ಲಿ ಬರೆದುದು, ಕರ್ನಾಟಕ ನಾಟಕಾಲಂಕಾರರಿಗೆ ತಿಳಿಯಲಿಲ್ಲವಂತೆ! ಹಸ್ತಪತ್ರಿಕೆಗಳು ಮರಾಠಿಯಲ್ಲೇಕೆಂಬುದಕ್ಕೆ ಉತ್ತರವಿಲ್ಲ! ಆದರೆ ಈ ಲೇಖವು 'ವೈಭವ'ಕಾರರಿಗೆ ಕಳಿಸಲ್ಪಟ್ಟಿತ್ತೆಂದೂ, ಅವರು ನಿರಾಕರಿಸಿದ್ದನ್ನು 'ಕನ್ನಡಿಗ'ನು ಪ್ರಕಟಿಸಿದನೆಂದೂ ಅಪಹಾಸ್ಯ ಮಾಡಲು ಕರ್ನಾಟಕ ನಾಟಕಾಲಂಕಾರರು ಪ್ರಯತ್ನಿಸಿದ್ದಾರೆ. ಒಬ್ಬರು ನಿರಾಕರಿಸಿದ ಲೇಖಗಳನ್ನು ಇನ್ನೊಬ್ಬರು ಪ್ರಕಟಿಸಬಾರದೆಂದು ನಾಟಕಾಲಂಕಾರರು ಒಂದು ಕಟ್ಟಳೆಯನ್ನು ಸರಕಾರಕ್ಕೆ ಹೇಳಿ ಮಾಡಿಸಲಿ! ಆ ಮೇಲೆ ಆ ಬಗ್ಗೆ ವಿಚಾರಿಸುವ. ಸುಪ್ರಸಿದ್ಧ ಪತ್ರಿಕೆಗಳಾದ; 'ಹೆರಾಲ್ಡ,' 'ಕ್ರಾನಿಕಲ್,' 'ಟಾಯಿಮ್ಸ್,' 'ಡೇಲೀಮೇಲ' ಪತ್ರಿಕೆಗಳು ಸಹ ಇನ್ನೊಂದು ಪತ್ರದಲ್ಲಿ ಇಂತಹ ಲೇಖವು ಪ್ರಕಟವಾಗದ್ದರಿಂದ ನಾವು ಪ್ರಕಟಿಸುರುವೆವೆಂದು ಪ್ರಕಟಿಸುವವು. 'ವೈಭವ'ಕಾರರೇ ಸ್ವತಃ ನಾವು ನಿರಾಕರಿಸಿದ ಒಂದು ಲೇಖವನ್ನು ಶ್ರೀ ಗರೂಡರ ಲೇಖವು ಪ್ರಕಟವಾದ ಸಂಚಿಕೆಯಲ್ಲಿಯೇ ಪ್ರಕಟಿಸಿದ್ದಾರೆ. ಈ ವೃತ್ತಪತ್ರ ವ್ಯವಸಾಯದ ಗುಟ್ಟನ್ನು ನಾಟಕದ ಶ್ರೀ ಗರೂಡರು ಅರಿಯಸಿದ್ದರೆ, ಆದು ಆಶ್ಚರ್ಯವಲ್ಲ! ಆದರೆ ಈ ಸಂಗತಿಯನ್ನರಿಯದೇ ಟೀಕಿಸುವ ಧೈರ್ಯ ಮಾಡಿದ್ದು ಮಾತ್ರ ಆಶ್ಚರ್ಯವಾದುದು! ಇನ್ನು ಶ್ರೀ ಗರೂಡರ ನಾಟಕ ಮಂಡಲವು ಬಾಗಲಕೋಟೆಗೆ ಬಂದುದು ೧೯೨೫ ನೆಯ ಫೇಬ್ರುವರಿಯಲ್ಲಿ! 'ಕನ್ನಡಿಗ'ನು ಪ್ರಕಟವಾದುದು ಅದೇ ವರ್ಷದ ಮಾರ್ಚದಲ್ಲಿ; ಮುಂದೆ ಸಪ್ಟಂಬರದ ವರೆಗೆ ಶ್ರೀ. ಗರೂಡರ ಬಗ್ಗೆ ಏನೂ ಬರೆದಿಲ್ಲ! ಮುಂದೆ ೧೯೨೬ ದಿಸೆಂಬರದಲ್ಲಿ ಮತ್ತೆ ಬರೆದವು! ಆದರೂ, ಬಾಗಲಕೋಟೆಯನ್ನು ಬಿಟ್ಟಾಗಿನಿಂದ 'ಕನ್ನಡಿಗ'ನು ದತ್ತಾತ್ರೆಯ ನಾಟಕ ಮಂಡಲದ ಬಗ್ಗೆ ಲೇಖಗಳನ್ನು ಪ್ರಕಟಿಸುತ್ತಲೇ ಇರುವನೆಂಬುದು ಎಷ್ಟೋ ಸುಳ್ಳು ವಿಧಾನವು! ೧೯ನೇ ಸಂಚಿಕೆಯ 'ವೈಭವ'ದಲ್ಲಿಯ ತಮ್ಮ ಲೇಖವನ್ನು ಮುಗಿಸುವಾಗ್ಗೆ 'ಫುಟ್‌ಬಾಲ'ದ ಸಾಮ್ಯವನ್ನು ಶ್ರೀ ಸದಾಸಿವರಾಯರು ಕೊಟ್ಟಿರುವರು. ಆದರೆ ಅದು ಇಲ್ಲಿ ಹೋಲದೆಂಬದು ಮೇಲಿನ ವಿವರಣೆಯಿಂದ ಸ್ಪಷ್ಟವದೆ. ಇನ್ನು ಇದಕ್ಕೂ ಹೆಚ್ಚಿನ ಸಾಮ್ಯವನ್ನು ಸಹ ಕೊಡುವದು ಶಕ್ಯವಿದೆ. ಆದರೆ ತಾಮಸಿಕ ಭಾವನೆಯಲ್ಲಿ ಲೋಲಾಡುವದಕ್ಕೆ 'ಕನ್ನಡಿಗ'ನು ಒಲ್ಲನು!

ಅಖಿಲ ಭಾರತ ಕಾಂಗ್ರೆಸ ಕಮಿಟಿಯ ಅಧಿವೇಶನವು ಮುಂಬೈಯಲ್ಲಿ ಕೊನೆಗಂಡಿತು. ಗೌಹಟಿ ಕಾಂಗ್ರೆಸದ ನಂತರ ಈ ಕಮಿಟಿಯು ಕೂಡಿದ್ದು ಇದೇ ಮೊದಲು. ಈಗಿದ್ದ ಮುಸಲ್ಮಾನ—ಮುಸಲ್ಮಾನೇತರ ಎಂಬ ಮತದಾರರ ಪಟ್ಟಿಯು ಪ್ರತ್ಯೇಕವಾಗಿರಕೂಡದೆಂದು ಮುಸಲ್ಮಾನರು ಮುಂದಿಟ್ಟ ಸೂಚನೆಯನ್ನು ಕಾಂಗ್ರೆಸ್ಸಿನವರು ಸ್ವೀಕರಿಸಿದರು. ಈ ಸೂಚನೆಗೆ ಮುಸಲ್ಮಾನರು ಏಕಮತ್ಯದಿಂದ ಒಪ್ಪಿಲ್ಲ. ಅವರು ಈ ಬಗೆಯ ಹೊಸ ವಿಚಾರವನ್ನು ಪ್ರಕಟಿಸಿದ ಒಳಕಾರಣಗಳು ಅಷ್ಟೊಂದು ಸ್ಪಷ್ಟವಾಗಿ ಗೊತ್ತಾಗಿಲ್ಲ. ಆದರೂ ಕಾಂಗ್ರೆಸ್ಸಿನವರು ಈ ಸೂಚನೆಗೆ ಮನ್ನಣೆಯನ್ನಿತ್ತು, ಹಿಂದೂ ಮುಸಲ್ಮಾನರ ಕಲಹವು ಬೇಗನೇ ಪಂಚ ಮಾತ್ರವಾಗಬೇಕೆಂಬ ತಮ್ಮ ಸರಳ ವಿಚಾರವನ್ನು ಸಿದ್ಧಪಡಿಸಿರುತ್ತಾರೆ. ಭಾಷಾನ್ವಯ ಪ್ರಾಂತಿಕ ರಚನೆಗೆ ಕಾಂಗ್ರೆಸ್ಸದ ಸಂಪೂರ್ಣ ಬೆಂಬಲವಿರುವದರಿಂದ, ಸಿಂಧಕ್ಕೆ ಮಾತ್ರವಲ್ಲದೇ ಆಂಧ್ರ ಕರ್ನಾಟಕಗಳಿಗೂ ಪ್ರಾಂತಿಕ ಸರಕಾರವು ಬೇಗನೇ ದೊರೆಯಬೇಕೆಂದು ಈ ಕಮಿಟಿಯು ಠರಾವುಗಳನ್ನು ಮಾಡಿದ್ದು, ಕಾಂಗ್ರೆಸ ಕಮಿಟಿಯ ಧೂರ್ತತನವನ್ನು ತೋರಿಸುತ್ತದೆ. ನವೀನ ಸುಧಾರಣೆಗಳ ಚೌಕಶಿಯು ೧೯೨೯ ರಲ್ಲಿ ನಡೆಯುವದರಿಂದ, ಕಾಂಗ್ರೆಸ್ಸದ ಯೋಜನೆಯನ್ನು ಪ್ರಕಟಿಸಬೇಕೆಂದು, ಶ್ರೀ ನೇಹರು ಇವರ ಸೂಚನೆಯಂತೆ ನಿರ್ಣಯಿಸಲ್ಪಟ್ಟಿದೆ. ರಾಜಕೀಯ ಪಂಗಡಗಳಲ್ಲಿರುವ ಕಲಹವು ಮಾಯವಾಗುವ ಹಾಗೆ ಕಾಂಗ್ರೆಸಿನ ಕಾರ್ಯಕ್ರಮವನ್ನು ಗೊತ್ತುಪಡಿಸಲಿಕ್ಕೂ, ನಾಗಪೂರ ಸತ್ಯಾಗ್ರಹದ ನಿಜಸ್ಥಿತಿಯನ್ನು ತಿಳಿದುಕೊಳ್ಳಲಿಕ್ಕೂ, ಮದ್ರಾಸದ ಸ್ವತಂತ್ರ ಪಕ್ಷೀಯರ ನಡೆಗೆಯನ್ನು ವಿಚಾರಿಸಲಿಕ್ಕೂ ಉಪಮಂಡಲಗಳು ನಿಯಮಿಸಲ್ಪಟ್ಟಿವೆ. ಚೀನ ಬಂಧುಗಳಿಗೆ ಸಹಾನುಭೂತಿಪರವಾದ ಹಾಗೂ ಅವರಿಗೆ ಆಕ್ಮಕ ಮಾಡಲು ಸ್ವಯಂಸೇವಕರ ಪಥಕವನ್ನು ಚೀನಕ್ಕೆ ಕಳಿಸುವ ಬಗ್ಗೆಯೂ ನಿರ್ಣಯಗಳಾಗಿವೆ. ಕರ್ನಾಟಕದ ಡಾ. ಹರ್ಡೀಕರ ನಾರಾಯಣರಾಯರ ಈ ವಿಚಾರಕ್ಕೆ ಮೂತದೆಸ್ಸೆಯೂ ಒರುವ ಚಿನ್ಹಗಳು ತೋರುತ್ತಲಿವೆ. ಈ ನಿರ್ಣಯಗಳೇನೋ ಸುಂದರವಾಗಿವೆ. ಆದರೆ ತಾಳವಿಲ್ಲದಂತೆ ಕುಣಿಯುತ್ತಿರುವ ಪಂಗಡಗಳು ತಮ್ಮ ತಮ್ಮ ಹಾಗೂ ಪಂಗಡಗಳ ದುರಭಿಮಾನವನ್ನು ತೊರೆದರೆ ಮಾತ್ರ ಏನಾದರೂ ಕಾರ್ಯವಾಗಬಹುದು. ಅಷ್ಟೊಂದು ಸುಬುದ್ಧಿಯು ಮುಖಂಡರಲ್ಲಿ ಇನ್ನಾದರೂ ಉದಯವಾಗಲಿ.

ಬೆಳಗಾಂವ ಜಿಲ್ಹೆಯ ಪತ್ರ.

(ನಮ್ಮ ಸ್ವಂತ ಸುದ್ದಿಗಾರರಿಂದ)

ಬೆಳಗಾಂವಿಯಿಂದ ಹುಬ್ಬಳ್ಳಿಯ ವರೆಗೆ ಹೋಗಲಿಕ್ಕಿರುವ ಉಗಿಬಂಡಿಯ ಹೊಸ ದಾರಿಯು ಈ ರೀತಿಯಿಂದ ಹೋದರೆ ಅನುಕೂಲವಾಗುವದೆಂದು ಪಾರ್ಶವಾಡದ ಗೃಹಸ್ಥರೊಬ್ಬರು ರಾ. ಬ. ಕಂಬಳಿಯವರಿಗೆ ಬೆಳಗಾವಿಯ ಸ್ಟೇಶನ್ನದಲ್ಲಿ ತಮ್ಮದೊಂದು ಮಾರ್ಗವನ್ನು ತಿಳಿಸಿದರಂತೆ! ಅದಕ್ಕೆ ರಾ. ಬ. ರವರು ಸ್ವರಾಜ್ಯ ಪಾರ್ಟಿಯ ಕಡೆಗೆ ಬೆರಳು ಮಾಡಿ ತೋರಿಸಿದರಂತೆ! ಹೀಗೆ ಆ ಗೃಹಸ್ಥರು ತಿಳಿಸಿದ್ದಾರೆ

ವಿಜಾಪೂರ ಜಿಲ್ಲೆಯ ಸೆರಗು ನಮ್ಮ ಜಿಲ್ಲೆಯ ಪೂರ್ವದ ಅಥಣಿ ಗೋಕಾಕ ತಾಲೂಕಗಳಿಗೆ ಹತ್ತಿಕೊಂಡಿದೆ. ಈ ತಾಲೂಕಗಳಲ್ಲಿ ಕೆಲ ಕಡೆಯಲ್ಲಿ ನೀರಿನ ದುರ್ಭಿಕ್ಷವು ಮಿತಿಮೀರಿದೆ. ಅಥಣಿಯ ಶಾಳಾ ಮಾಸ್ತರರು ನೀರಿನ ಅಭಾವವನ್ನ ಬೇಡಿರುತ್ತಾರೆ.

ಗೋಕಾಕ ತಾಲೂಕ ಪೈಕಿ ೧೪ ಹಳ್ಳಿಗಳಿಗೆ ಘಟಪ್ರಭಾ ನದಿಯ ಕಾಲುವೆಯಿಂದ ನೀರಿನ ಪೂರೈಕೆಯಾಗುತ್ತದಷ್ಟೇ! ಇದರ ಬಗ್ಗೆ ಬೇರೆ ಬೇರೆ ಬೆಳೆಗಳಿಗೆ ಬೇರೆ ಬೇರೆ ಆಕಾರ ಕೊಡಿಸಿರುತ್ತಾರೆ. ಜಮೀನ ಬಾಬು ಹೊರತಾಗಿ ಈ ನೀರಿನ ವಸೂಲಿಯ ಮೇಲೂ ರೂಪಾಯಿಗೆ ೩ ಆಣೆಯಂತೆ ಲೋಕಲ್‌ಫಂಡನ್ನು ಕೊಡಿಸಿರುತ್ತಾರೆ. ಕೊಡಿಸಲಿ. ಈ ಹೆಚ್ಚಿಗೆ ಲೋಕಲ್‌ಫಂಡನ್ನು ಕೊಡುವ ರೈತರಿಗೂ, ಜಮೀನದಾರರಿಗೂ ಇಲೆಕ್ಷನ್‌ದಲ್ಲಿ ಮತದಾನವು ಹೆಚ್ಚಿನ ಪ್ರಮಾಣದಿಂದ ಕೊಡುವದು ನ್ಯಾಯವಷ್ಟೇ! ೩೦ ರೂ ಜಮೀನಬಾಬು ಕೊಡುವ ಇತರ ಹಳ್ಳಿಯ ರೈತನಿಗಿಂತಲೂ ಹೆಚ್ಚಿಗೆ ಲೋಕಲ್‌ಫಂಡನ್ನು ಕೊಡುವ ರೈತರು ಈ ಹಳ್ಳಿಗಳಲ್ಲಿ ಇದ್ದು ಮತಾಧಿಕಾರವು ಇಲ್ಲದೆ ಸುಮ್ಮನೆ ಹಣವನ್ನು ಕೊಟ್ಟು ಕೈ ಮುಚ್ಚಿಕೊಂಡು ಕುಳಿತಿರುತ್ತಾರೆ. ಮೂಕ ಪ್ರಾಣಿಗಳಂತೆ ಈ ರೈತರು ಕೇಳುವದಿಲ್ಲೆಂದು ವಿಚಾರವಂತರು ಸುಮ್ಮನಿರಬೇಕೆ? ಆದುದರಿಂದ ನೀರಿನ ತೆರಿಗೆಯ ಮೇಲೆ ೪ ರೂ. ಲೋಕಲ್‌ಫಂಡನ್ನು ಕೊಡುವ ರೈತನಿಗೂ, ಜಮೀನದಾರನಿಗೂ ಡಿಸ್ಟ್ರಿಕ್ಟ ಲೋಕಲ್ ಬೋರ್ಡಿಗೆ ಮತ ಕೊಡುವ ಅಧಿಕಾರವಿರಬೇಕೆಂಬದು ನ್ಯಾಯಪ್ರಾಪ್ತವಾದದ್ದು. ಇತ್ತ ಕಡೆಗೆ ಬೆಳಗಾವಿ ಜಿಲ್ಲೆಯ ಬೋರ್ಡಿನವರು ಲಕ್ಷ್ಯ ಕೊಡುವರೋ?

ಈ ಸಾರೆ ಮುಲ್ಕೀ ಪರೀಕ್ಷೆಗೆ ಕುಳಿತಿದ್ದ ಹುಡುಗರ ಸಂಖ್ಯೆಯು ಸಾವಿರಕ್ಕೆ ಮೀರ ಸಮೀಪಿಸಿತ್ತು. ಮೊದಲು ೪೦೦—೫೦೦ ಹುಡುಗರು ಕೂಡುತ್ತಿದ್ದರು. ಇದು ಬೆಳಗಾಂವಿ ಜಿಲ್ಹೆಯಲ್ಲಿ ಪ್ರಾಥಮಿಕ ಶಾಲೆಗಳನ್ನು ಹೆಚ್ಚಿಸಿದ್ದರ ಪರಿಣಾಮವಲ್ಲದೆ ಮತ್ತೇನು?

ಇಹವೃತ್ತ.

ಗ್ರಾಮದೇವತೆಗಳಿಗೆ ಕಳೆದ ವಾರದಲ್ಲಿ ಉಡಿ ತುಂಬುವ ಸಮಾರಂಭವಾಯಿತು. ಬಹು ದಿನಗಳಿಂದ ಈ ಊರಲ್ಲಿ ಸಮಾರಂಭವಾಗಿರಲಿಲ್ಲ

ಮೋಡಗಳು ಮಾತ್ರ ಆಡಿದಾಡುತ್ತಲಿವೆ ಮಳೆಯಿಲ್ಲ

ಶ್ರೀಕೃಷ್ಣ ಸಂಗೀತ ನಾಟಕ ಮಂಡಲದವರ ಮೊದಲನೇ ನಾಟಕವಾದ "ಸಂತಯ ಸಾಮ್ರಾಜ್ಯ"ದ ಪ್ರಾರಂಭೋತ್ಸವವು ನಿನ್ನೆ ದಿನ ಆಯಿತು.

ಮುಂಬೈ ಸರಕಾರದ ಗ್ಯಾಝೆಟ.

ಮುಂಬೈ ಇಲಾಖೆಯಲ್ಲಿ ಒಟ್ಟು ೫೦೯೧ ಸಹಕಾರ ಸಂಘಗಳಿವೆ. ಅವುಗಳಲ್ಲಿ ೩೨೬, ಉತ್ತರ ಭಾಗ—೪೪೩; ಮಧ್ಯ ಭಾಗ—೧೮೫೬; ದಕ್ಷಿಣ ಭಾಗ—೧೯೦೪; ಧಾರವಾಡ ಜಿಲ್ಲೆ—೬೯೬, ಬೆಳಗಾವಿ ಜಿಲ್ಲೆ—೨೯೫ ವಿಜಾಪೂರ ಜಿಲ್ಲೆ—೨೦೯; ಕಾರವಾರ—೧೨೧.

ಮೈಸೂರ ಸರಕಾರೀ ಗ್ಯಾಝೇಟ.

ನೀರಿನ ಬರವನ್ನು ತಪ್ಪಿಸಲಿಕ್ಕೆ ಸರಕಾರವು ಹೀಗೆ ಏರ್ಪಾಡು ಮಾಡಿದೆ. ಜನರಿಗೆ ದನಗಳಿಗೆ ಬೇರೆ ಬೇರೆ ಹೊಸ ಕೆರೆಗಳನ್ನು ಕಟ್ಟಿಸಬೇಕು. ಕೆರೆಯ ನೀರನ್ನು ಬೆಳೆಗಳಿಗೆ ಕೊಡಬಾರದು. ಬೆಳೆಗಳಿಗೆ ಭಾವಿ ಕಡಿಸಲಿಕ್ಕೆ ರೈತರಿಗೆ ಸಹಾಯ ಮಾಡಿ, ಅವರ ತೆರಿಗೆಯನ್ನು ಕಡಿಮೆ ಮಾಡಬೇಕು. ನದಿಯ ಕಾಲಿವೆಗಳನ್ನು ಹೆಚ್ಚಿಸಬೇಕು. ಹಳೇ ಕೆರೆಗಳಿಗೆ ಒಡ್ಡು ಹಾಕಬೇಕು ಬೋರಿಂಗದಿಂದ ಆಳವಾದ ಬಾವಿಗಳನ್ನು ಕಟ್ಟಿಸಬೇಕು. ದನಗಳಿಗೆ ತೊಪ್ಪಲಗಳನ್ನು ತಿನ್ನಲಿಕ್ಕೆ ಬರುವಂತಹ ಗಿಡಗಳನ್ನು ಅರಣ್ಯ ಖಾತೇದವರು ಬೆಳೆಸಬೇಕು. ಅಸ್ಪೃಶ್ಯರಿಗೂ ಭೂಮಿ ಇಲ್ಲದ ರೈತರಿಗೂ ಭೂಮಿಗಳನ್ನು ಕೊಳ್ಳಲು ಎಲ್ಲ ರೀತಿಯಿಂದಲೂ ಸಹಾಯ ಮಾಡಬೇಕು.

ಇನ್ನು ನೀರು ಇದ್ದು, ಮಳೆಯಿಲ್ಲದೇ ದುಷ್ಕಾಳವಿರುವ ಪ್ರದೇಶದಲ್ಲಿ ಹೀಗೆ ಏರ್ಪಾಡಾಗಬೇಕು:— ಮೈಸೂರ ವಿಶ್ವವಿದ್ಯಾಲಯದಲ್ಲಿ ಒಕ್ಕಲತನದ ಶಿಕ್ಷಣದ ಅನುಕೂಲತೆಯಾಗಬೇಕು. ಗುಡಿಕಲ ಉದ್ಯೋಗಗಳನ್ನು ಹೆಚ್ಚಿಸಬೇಕು; ಅಸ್ಪೃಶ್ಯರಿಗೆ ಹೆಚ್ಚು ಸೌಕರ್ಯಗಳನ್ನು ಕೊಡಬೇಕು. ಕೆರೆ ಕಾಲಿವೆಗಳನ್ನು ಬೆಳೆಸಬೇಕು; ನೀರು ವಿಶೇಷವಾಗಿ ಬೇಕಾಗದ, ಉತ್ತತ್ತಿ, ತೆಂಗುಗಳನ್ನು ಬೆಳೆಸಬೇಕು ಹಳ್ಳಿಯ ಕಮ್ಮಾರ, ಬಡಿಗ, ನೇಕಾರರಿಗೆ ಸಾಲದ ಏರ್ಪಾಡು ಮಾಡಬೇಕು.

ಲಿಂಗಾಯತ ಧರ್ಮ ಪ್ರಚಾರಕ ಸಂಘ ಹುಬ್ಬಳ್ಳಿ.

ಪೂರ್ವದಿಂದಲೂ ವೀರಶೈವ ಸಮಾಜದವರಾಗಿ ಕಾಲಗತಿಯಿಂದ ಬಳಿಕ ತಪ್ಪಿದ ಹಡಪದವರೂ ಮಡಿವಾಳರೂ ಧರ್ಮಸಂಸ್ಕೃತಿಯನ್ನು ಹೊಂದಿ ಪುನೀತರಾಗಲು ಬಹಳ ಸ್ಥಳಗಳಲ್ಲಿ ಬಯಸುತ್ತಿರುವರು. ಆದ್ದರಿಂದ ಈ ಬಗ್ಗೆ ಏನಾದರೂ ನಿಶ್ಚಯಿಸಲು, ಹುಬ್ಬಳ್ಳಿಯ ವೀರಶೈವ ಧರ್ಮಪ್ರಚಾರಕ ಸಂಘದವರು ೯ ಪ್ರಶ್ನೆಗಳನ್ನು ಪ್ರಕಟಿಸಿ, ವೀರಶೈವರ ಅಭಿಪ್ರಾಯಗಳನ್ನು ಕೇಳಿದ್ದಾರೆ.

ವಿಜಾಪೂರ ಜಿಲ್ಲೆಯ ಸುದ್ದಿಗಳು.

(ನಮ್ಮ ಸ್ವಂತ ಬಾತ್ಮೀದಾರರಿಂದ)

ವಿಜಾಪೂರ ಶ್ರೀ ಕಲೆಕ್ಟರ ಡಿ. ಡಿ. ಸಿಯವರ ಪ್ರವಾಸಕ್ರಮ:— ಬಾಬಾನಗರ ೧೯ ರಿಂದ ೨೪, ೨೫ ಬಬಲೇಶ್ವರ ೨೫ ರಿಂದ ೨೮, ವಿಜಾಪೂರ, ೨೯-೩೦ ಬಾಗೇವಾಡಿ, ೩೧ ರಿಂದ ೪-೬-೨೭ ಮನಗೋಳಿ ೫–೮

ಇಂಡೀ ತಾಲೂಕ

ಸಾತಲಗಾವ ಈ ಊರ 'ಶಿವಯೋಗೇಶ್ವರ' ಜಾತ್ರೆಯು ಈ ಕಳೆದ ಜಾತ್ರೆಗಳಂತೆ ನಿಲ್ಲಿಸಲ್ಪಡದೆ ಸುಸೂತ್ರವಾಗಿ ನಡೆಯಿಸಲ್ಪಟ್ಟಿತು. ಜಾತ್ರೆಯ ಉತ್ಸವ ಪತ್ರಿಕೆಗಳನ್ನು ಮರಾಠಿಯಲ್ಲೇಕೆ ಪ್ರಕಟಿಸಿರುವರೋ ಕಾಣೆವು! ಮುಂದಿನ ಸಲ ಕನ್ನಡನಾಡಿನ ಹಳ್ಳಿಯೆಂಬುವ ನೆನಪುಗೊಂಡು ಹಾಗೆ ಮಾಡಬಾರದಾಗಿ ಕೋರುತ್ತೇವೆ.

ಮುದ್ದೇಬಿಹಾಳದಲ್ಲಿ ಬಿಸಿಲಿನ ತಾಪ ಬಹಳೇ ಆಗಿದೆ. ೨-೩ ದಿವಸಗಳಾಗಾಯಿತ ಮೇಘರಾಜನು ಮೋರೆ ತೋರಿಸಿ, ತೋರಿಸಿ ಹೋಗುತ್ತಿರುವನು.

ತಾಳಿಕೋಟೆಯಿಂದ ಹೂವಿನ ಹಿಪ್ಪರಗಿ ರಸ್ತೆಯ ಮೇಲೆ ಮಿಣಜಗಿಯ ಹತ್ತರ ದೋಣಿಯ ಪೂಲು ಕಟ್ಟಲಿಕ್ಕೆ ಮಂಜೂರ ಆಗಿದೆ. ಕೆಲಸವು ಪ್ರಾರಂಭವಾಗಿದೆ. ಇಲ್ಲಿ ನೀರಿನ ಕೊರತೆ ಬಹಳೇ ಇದ್ದು ಯಾವತ್ತೂ ಭಾವಿಗಳು ಬತ್ತಿಹೋಗಿವೆ. ಆದರೆ ದವಾಖಾನೆಯ ಭಾವಿಯು ೨-೩ ವರುಷದಿಂದ ಒಣಗಿ ಹೋಗಿದ್ದು ೪—೬ ದಿವಸಗಳ ಹಿಂದೆ ಒಮ್ಮಿಂದೊಮ್ಮೆ ಸೆಲೆ ಹೊರಟು ೪-೫ ಫೂಟು ನೀರು ಬಂದಿರುತ್ತವೆ; ಇದೊಂದು ಆಶ್ಚರ್ಯಕರ ಸಂಗತಿ! ಮುದ್ದೇಬಿಹಾಳ, ಆಲಮಟ್ಟಿ ಮಾರ್ಗವು ಬಹಳೇ ಕೆಟ್ಟಿದ್ದು, ಗಾಡಿಗಳು ಜಗ್ಗಾಲಿಯಾಗುತ್ತಲಿವೆ. ಯಾವತ್ತು ದೊಡ್ಡ ದೊಡ್ಡ ದೊಡ್ಡ ಅಧಿಕಾರಸ್ಥರು ಇಲ್ಲಿ ಹಾಯುತ್ತಿದ್ದು ಒಬ್ಬರೂ ಲಕ್ಷ್ಯ ತೆಗೆದುಕೊಂಡಿರುವದಿಲ್ಲ ಈ ಮಾರ್ಗವು ಇಂಜನಿಯರ ಆಫೀಸದಿಂದ ಆಗತಕ್ಕದ್ದಿದ್ದು, ಅವರು ಕಣ್ಣು ಮುಚ್ಚಿದಂತೆ [illegible] ಸರಕಾರದವರು ಈ ಪ್ರಕಾರ ಮಾಡಿದ್ದನ್ನು ನೋಡಿ [illegible]

ತಾ। ೧೨-೩ ೨೭

೨೨೫೦ ವರ್ಷಗಳ ಪೂರ್ವದಲ್ಲಿದ್ದ

ಅಶೋಕ ಮಹಾರಾಯನ ಆಳಿಕೆ.

(ಗೆಳೆಯರ ಗುಂಪಿನಿಂದ)

—ದ್ವಿತೀಯ ಲೇಖಾಂಕಃ—

“ ದೇವಪ್ರಿಯನೂ ಪ್ರಿಯದರ್ಶಿಯೂ ಆದ (ಅಶೋಕ) ರಾಜನು ಹೇಳುವದೇನಂದರೆ:— ಜನರು ತಮ್ಮ ಚಲೋ ಕೆಲಸಗಳನ್ನು ಮಾತ್ರ ಯಾವಾಗಲೂ ನೆನಪಿನಲ್ಲಿಟ್ಟುಕೊಂಡು, 'ಅಂಥ ಚಲೋ ಕೆಲಸ ಮಾಡಿದೆ, ಇಂಥ ಚಲೋ ಕೆಲಸ ಮಾಡಿದೆ'ನೆಂದು ಹೇಳಿಕೊಳ್ಳುತ್ತಾರೆ. ಅವರಿಗೆ ತಮ್ಮ ಕೆಟ್ಟ ಕೆಲಸಗಳನ್ನು ಮೂಲತಃ ಲಕ್ಷ್ಯಕ್ಕೇ ಬರುವದಿಲ್ಲ. ತಮ್ಮಿಂದ ಇಂಥದೊಂದು ಕೆಟ್ಟ ಕೆಲಸವಾಗಲಿ, ಇಂಥದೊಂದು ಕಾರ್ಯವಾಯಿತೆಂದಾಗಲಿ ಅವರು ಎಂದಿಗೂ ಯೋಚಿಸುವದಿಲ್ಲ. ಸ್ವದೋಷಗಳನ್ನು ಲೆಕ್ಕಿಸುವದು ಬಲು ಬಿಗಿಯಾದ ಕೆಲಸ. ಕಟುಕತನ, ನಿಷ್ಠುರತೆ, ಸಿಟ್ಟು, ಹೆಮ್ಮೆ ಹಟ ಇವು ಪಾಪದ ಕಾರಣಗಳೆಂಬುವನ್ನು ಸರ್ವರೂ ಲಕ್ಷ್ಯದಲ್ಲಿಡಬೇಕು. ಇವೆಲ್ಲ ಕಾರಣಗಳಿಂದ ನಾವು ಅಧೋಗತಿಗಿಳಿಯದಂತೆ ಸದಾ ಜಾಗೃತಿಯಿಂದಿರುವದು ಶ್ರೇಯಸ್ಕರವಾಗಿದೆ. ನಾವು ಯಾವ ಕೆಲಸವನ್ನೇ ಮಾಡಿದರೂ ಅದರಿಂದ ನಮ್ಮ ಐಹಿಕ ಪಾರತ್ರಿಕ ಮಂಗಳವುಂಟಾದೀತೋ ಇಲ್ಲವೋ ಎಂಬುದನ್ನು ಚನ್ನಾಗಿ ಯೋಚಿಸಬೇಕು ” ತೃತೀಯ ಸ್ತಂಭಲಿಪಿ.

“ ದೇವಪ್ರಿಯನಾದ ಪ್ರಿಯದರ್ಶಿ ರಾಜನು ಹೇಳುವದೇನಂದರೆ:— ಕಲ್ಯಾಣ ಮಾಡುವದು ಬಹಳೇ ಕಷ್ಟಕರ. ಕಲ್ಯಾಣಕರವಾದ ಕಾರ್ಯ ಮಾಡುವವನು ನಿಜವಾಗಿಯೂ ಬಲು ಕಷ್ಟಪಟ್ಟು ಕೃತಕೃತ್ಯನಾಗುವನು. ನನ್ನ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಮೊದಲಾದ ವಂಶಿಕರು ನನ್ನನ್ನು ಮೇಲ್ಪಂಕ್ತಿಯಾಗಿಟ್ಟುಕೊಂಡು ಮುಂದರಿಯಬೇಕೆಂದು ನಾನು ಎಷ್ಟೋ ಲೋಕಕಲ್ಯಾಣಕರವಾದ ಕಾರ್ಯಗಳನ್ನು ಮಾಡಿದೆನು...” ಪಂಚಮ ಗಿರಿಲಿಪಿ.

“ ದೇವಪ್ರಿಯನಾದ ಪ್ರಿಯದರ್ಶಿರಾಜನು ಹೇಳುವದೇನಂದರೆ:—ಹಾದಿಬೀದಿಗಳ ಬದಿಗೆ ಆಲದ ಮರಗಳನ್ನು ಬೆಳೆಸಿದ್ದೇನೆ. ಇವು ಮನುಷ್ಯರಿಗೂ ಪಶುಪಕ್ಷಿಗಳಿಗೂ ನೆರಳನ್ನು ಕೊಡುವವು. ಇಲ್ಲದೆ ಹಾದಿಕಾರರಿಗಾಗಿ ಮಾವಿನ ಬನಗಳನ್ನು ಸಿದ್ಧಪಡಿಸಿರುವೆ. ಅರ್ಧರ್ಧ ಹರದಾರಿ ಅಂತರದಲ್ಲಿ ಬಾವಿಗಳನ್ನು ತೋಡಿಸಿರುವೆ. ಮನುಷ್ಯರಿಗೂ ದನಕರುಗಳಿಗೂ ಅನುಕೂಲವಾಗುವಂತೆ ಧರ್ಮಶಾಲೆಗಳನ್ನು ಕಟ್ಟಿಸಿರುವೆ. ಅಲ್ಲಲ್ಲಿ ಅರವಟ್ಟಿಗೆಗಳನ್ನಿಡಿಸಿರುವೆ” ಸಪ್ತಮ ಸ್ತಂಭಲಿಪಿ.

“ ದೇವಪ್ರಿಯನೂ ಪ್ರಿಯದರ್ಶಿಯೂ ಆದ ರಾಜನು ತನ್ನ ಎಲ್ಲಾ ಕಡೆಗೂ, ಚೋಳ, ಪಾಂಡ್ಯ, ಸತಿಯಪುತ್ರ, ಕೇರಳಪುತ್ರ, ಮುಂತಾದ ದೇಶಗಳಲ್ಲಿಯೂ, ತನ್ನ ರಾಜ್ಯಕ್ಕೆ ಹೊಂದಿರುವ (ಪಶ್ಚಿಮ ಏಶಿಯಾಖಂಡದ) ಅಂತಿಯೋಕಸನೆಂಬ ಯವನ ರಾಜನ ರಾಜ್ಯದಲ್ಲಿಯೂ, ಅವನ ಹೊಂದಿಗಿರುವ ರಾಜರ ರಾಜ್ಯಗಳಲ್ಲಿಯೂ ದೇವಪ್ರಿಯ ಪ್ರಿಯದರ್ಶಿ ರಾಜನು ಮನುಷ್ಯರಿಗಾಗಿಯೂ, ಪಶುಗಳಿಗಾಗಿಯೂ ಎರಡು ಬಗೆಯ ವೈದ್ಯಶಾಲೆಗಳನ್ನು ಏರ್ಪಡಿಸಿರುವನು. ಮನುಷ್ಯರಿಗೂ ಪಶುಗಳಿಗೂ ಉಪಯುಕ್ತವಾದ ಔಷಧಿ ವನಸ್ಪತಿಗಳು ಸಿಗದಲ್ಲಿ ಅವುಗಳನ್ನು ಬೇರೆ ಕಡೆಯಿಂದ ತರಿಸಿ ಅಲ್ಲಲ್ಲಿ ಬೆಳೆಸಲಾಗಿದೆ.......” ದ್ವಿತೀಯ ಗಿರಿಲಿಪಿ

“ ದೇವಪ್ರಿಯನಾದ ಪ್ರಿಯದರ್ಶಿ ರಾಜನು ಹೇಳುವದೇನಂದರೆ:—ಹಿಂದೆ ಬಹು ಕಾಲದಿಂದಲೂ —ಎಲ್ಲಾ ಹೊತ್ತಿನಲ್ಲಿ ರಾಜಕಾರ್ಯವನ್ನು ಯೋಚಿಸುತ್ತಿದ್ದಿಲ್ಲ. ಎಲ್ಲಾ ಹೊತ್ತಿನಲ್ಲಿ ದೂತರ ಗುಪ್ತ ವರ್ತಮಾನವನ್ನು ಕೇಳುತ್ತಿದ್ದಿಲ್ಲ. ಆದರೆ ನಾನು ಮಾತ್ರ ಸರ್ವಸಮಯಗಳಲ್ಲಿ—ಎಂದರೆ ಉಣ್ಣುತ್ತಿರಲಿ, ಹೆಂಡರ ಹತ್ತಿರಲಿ, ಮಲಗಿರಲಿ, ಶೌಚಗೃಹದಲ್ಲಿರಲಿ, ಸ್ವಾರಿಯ ವಾಹನವನ್ನೇರಿ ಹೊರಟಿರಲಿ, ಉದ್ಯಾನ ವನದಲ್ಲಿರಲಿ, ಎಲ್ಲಿದ್ದರೂ ಬೇಕಾದಾಗ ನನಗೆ ಸುದ್ದಿ ತಿಳಿಸುವ ದೂತರಿರಬೇಕೆಂದು ನಿಯಮ ಮಾಡಿರುವೆ. ನಾನೆಲ್ಲಿದ್ದರೂ ಬೇಕಾದ ಸಮಯವಿದ್ದರೂ ಆ ದೂತರು ನನಗೆ ಪ್ರಜೆಗಳ ಸ್ಥಿತಿಗತಿಗಳನ್ನು ತಿಳಿಸುವರು. ಈ ರೀತಿಯಿಂದ ನಾನು ಸದಾ ಸರ್ವತ್ರ ಪ್ರಜೆಗಳ ಕಲ್ಯಾಣ ಕಾರ್ಯದಲ್ಲಿ ತೊಡಗಿರುವೆನು.........ಯಾಕಂದರೆ ಸಮಸ್ತ ಪ್ರಜೆಗಳ ಕಲ್ಯಾಣವನ್ನು ಸಾಧಿಸುವದೇ ನನ್ನ ಕರ್ತವ್ಯವೆಂದು ಭಾವಿಸಿರುವೆನು....... ಸರ್ವ ಜನರ ಹಿತಸಾಧನೆಗಿಂತ ಹೆಚ್ಚಿನ ಕರ್ಮವಿಲ್ಲ. ನಾನು ಬಹು ಪರಿಶ್ರಮದಿಂದ ಏನಾದರೂ ಅಲ್ಪಸ್ವಲ್ಪವಾದರೂ ಕಾರ್ಯ ಮಾಡುತ್ತಿದ್ದರೆ ಅದೆಲ್ಲಾ—ಸರ್ವ ಪ್ರಾಣಿಗಳಿಂದ ಋಣಮುಕ್ತನಾಗುವದಕ್ಕಾಗಿಯೇ ಸರಿ. ಅನ್ಯ ಸಕಲರಿಗೂ ನಾನು ಇಲ್ಲಿ ಸುಖದಲ್ಲಿಡುವುದಕ್ಕೆ ಯತ್ನಿಸುವೆನು. ಮುಂದೆ ಪರಲೋಕದಲ್ಲಿಯೂ ಅವರು ಸ್ವರ್ಗಸುಖವನ್ನು ಪಡೆಯಬೇಕೆಂದು ನಾನು ಚಿಂತಿಸುವೆನು...... ....” ಆರನೇ ಗಿರಿಲಿಪಿ.

“ ಹಿಂದೆ ಬಹು ಕಾಲದಿಂದಲೂ, ಎಷ್ಟೋ ಶತಮಾನಗಳಿಂದಲೂ – ಜೀವಿಗಳ ವಿಷಯದಲ್ಲಿ ನಿಷ್ಠುರವಾದ ಆಚರಣೆ, ಬಂಧುಬಳಗದ ಕೂಡ ಬ್ರಾಹ್ಮಣರ ಕೂಡ-ಶ್ರಮಣ ಸನ್ಯಾಸಿಗಳ ಕೂಡ ಅಯೋಗ್ಯವಾದ ವ್ಯವಹಾರ ಮುಂತಾದವುಗಳು ಬಹಳವಾಗಿ ಬೆಳೆದುಬಂದವು ....” (೪ನೇ ಗಿರಿಲಿಪಿ) —ಆದ್ದರಿಂದ

“ ಮುಂಚಿನ ರಾಜರು ಚಿಂತಿಸುತ್ತಿದ್ದದ್ದೇನಂದರೆ:— ಪ್ರಜೆಗಳು ಹೇಗೆ ತಕ್ಕಷ್ಟು ಧರ್ಮವಂತರಾದರು? ಅವರು ಸಾಕಷ್ಟು ಧರ್ಮೋನ್ನತಿಯನ್ನು ಹೊಂದಿಲ್ಲ. ಯಾವ ಉಪಾಯದಿಂದ ಪ್ರಜೆಗಳನ್ನು ಧರ್ಮಪ್ರವೃತ್ತರನ್ನಾಗಿ ಮಾಡಬೇಕು! ಅವರಲ್ಲಿ ಹಲಕೆಲವರಾದರೂ ಹೇಗೆ ನಿಜವಾದ ಧಾರ್ಮಿಕರಾದರು!— ಈ ವಿಷಯದಲ್ಲಿ ದೇವಪ್ರಿಯ ಪ್ರಿಯದರ್ಶಿ ರಾಜನು ಹೇಳುವದೇನಂದರೆ:— ಈ ಬಗೆಗೆ ನನಗೆ ತೋಚಿದ ಉಪಾಯವೇನಂದರೆ, ಸ್ವತಃ ನಾನೇ ಧರ್ಮ ಪ್ರಚಾರಕನೂ ಧರ್ಮೋಪದೇಶಕನೂ ಆದರೆ ನನ್ನ ಪ್ರಜೆಗಳು ಇದನ್ನು ನೋಡಿ ನನ್ನಂತೆ ನಡೆಯಬಲ್ಲರು. ಇಷ್ಟಾದರೆ ಅವರು ಮೇಲಾದವರಾಗುವದರಿಂದ ತಾನಾಗಿಯೆ ಧರ್ಮವೃದ್ಧಿಯಾಗುವದು — ಈ ಉದ್ದೇಶದಿಂದಲೇ ನಾನು ಧರ್ಮಪ್ರಚಾರಕ್ಕೆ ನಿಂತಿರುವೆನು....” (೭ನೇ ಸ್ತಂಭಲಿಪಿ) ಇದಲ್ಲದೆ

“ಧರ್ಮ ಪ್ರಚಾರವು ಹೆಚ್ಚಿನ ಕೆಲಸ. ದುಃಶೀಲರಿಂದ ಧರ್ಮಪ್ರಚಾರವೂ ಧರ್ಮಾಚರಣವೂ ನಡೆಯುವದು ಅಶಕ್ಯ” ೪ನೇ ಗಿರಿಲಿಪಿ.

“ಹಿಂದಿನ ಕಾಲದಲ್ಲಿ ಧರ್ಮ ಮಹಾಮಂತ್ರಿಗಳೆಂಬ ಸರಕಾರೀ ಅಧಿಕಾರಿಗಳಿದ್ದಿಲ್ಲ. ನಾನು ನನ್ನ ಆಳಿಕೆಯ ಹದಿಮೂರನೆಯ ವರ್ಷದಲ್ಲಿ ಧರ್ಮ ಮಹಾಮಂತ್ರಿಗಳನ್ನು ನಿಯಮಿಸಿರುವೆನು. ಸರ್ವ ಸಂಪ್ರದಾಯಗಳಲ್ಲಿ ಧರ್ಮ ಪರಿಪಾಲನವಾಗಿ ಧರ್ಮೋನ್ನತಿಯಾಗುವಂತೆ ಯತ್ನಿಸುವದೇ ಇವರ ಕೆಲಸ. ಇವರು

ಧಾರ್ಮಿಕ ಐಹಿಕ ಸ್ಥಿತಿಗತಿಗಳನ್ನೆಲ್ಲ ಚನ್ನಾಗಿ ವಿಚಾರಿಸಬೇಕು. ಇವರು— ಒಡೆಯ, ಆಳು, ಬ್ರಾಹ್ಮಣ, ಅನಾಥ, ವೃದ್ಧ ಮೊದಲಾದವರ ಹಿತ ಸುಖಗಳಿಗಾಗಿಯೂ, ನನ್ನ ಧಾರ್ಮಿಕ ಪ್ರಜೆಗಳನ್ನ ಅನ್ಯಾಯ ಅನಧಿಕಾರಗಳಿಂದ ತಪ್ಪಿಸಿ ಉಳಿಸಿಕೊಳ್ಳುವದಕ್ಕಾಗಿಯೂ ನಿಯಮಿಸಲ್ಪಟ್ಟಿರುವರು. ಮತ್ತು ಸೆರೆಮನೆಯ ಕೈದಿಗಳಲ್ಲಿ—ಮುಪ್ಪಿನವರು ಯಾರಾದರೂ ಇದ್ದಾರೆಯೇ? ಅವರಿಗೆ ಹೊಟ್ಟೆಯ ಕಷ್ಟದಿಂದ ಮರುಗುವ ಮಕ್ಕಳು ಮರಿಗಳೇನಾದರೂ ಇದನ್ನೆಲ್ಲ ವಿಚಾರಿಸಿ ಅನ್ಯಾಯದ ಜುಲುಮೆಯನ್ನೂ, ಅನ್ಯಾಯದ ಶಿಕ್ಷೆಗಳನ್ನೂ ತಪ್ಪಿಸಿ ಯೋಗ್ಯವಿದ್ದರೆ ಬಿಡುಗಡೆ ಮಾಡುವದಕ್ಕೂ ಇವರಿಗೆ ಅಧಿಕಾರವುಂಟು ......” ೫ನೇ ಗಿರಿಲಿಪಿ.

“ದೇವಪ್ರಿಯನಾದ ಪ್ರಿಯದರ್ಶಿ ರಾಜನು ಹೇಳುವದೇನಂದರೆ:— ನನ್ನ ಅಭಿಷೇಕದ ಇಪ್ಪತ್ತಾರನೆಯ ವರುಷ ಈ ಧರ್ಮಲಿಪಿಯನ್ನು ಬರೆಯಿಸಿರುವೆನು. ನನ್ನ ರಾಜುಕ (ರೆಂಬ ಅಧಿಕಾರಿಗಳು) ಬಹುಶತ ಸಹಸ್ರ ಜನಗಳನ್ನಾಳುವುದಕ್ಕೆ ನಿಯಮಿತರಾಗಿರುವರು. ನಿಶ್ಚಿಂತೆಯಿಂದ ನಿರ್ಭಯದಿಂದ ಕೆಲಸ ಮಾಡಬೇಕೆಂದು ಅವರಿಗೆ, ದಂಡಿಸುವದಕ್ಕೂ ಅನುಗ್ರಹಿಸುವದಕ್ಕೂ ಸ್ವತಂತ್ರತೆಯನ್ನು ಕೊಟ್ಟಿರುವೆನು. ಅವರು ನಾಗರಿಕರಿಗೂ ಗ್ರಾಮ್ಯರಿಗೂ ಅವರವರ ಹಿತ ಸುಖಗಳನ್ನನುಸರಿಸಿ ತಿಳಿಸಿ ಹೇಳಬೇಕು; ಮತ್ತು ಎಲ್ಲರ ಮೇಲೆ ಅನುಗ್ರಹವನ್ನು ತೋರಿಸಬೇಕು. ಮತ್ತು (ಪ್ರಜೆಗಳ) ಸುಖದುಃಖಗಳ ಮೂಲ ಕಾರಣಗಣಗಳನ್ನು ನಿಶ್ಚಯಿಸಬೇಕು. ನಾಗರಿಕರೂ ಗ್ರಾಮ್ಯರೂ ತಮ್ಮ ತಮ್ಮ ಸಂಸಾರಿಕ ಮತ್ತು ಪಾರಮಾರ್ಥಿಕ ಸೌಖ್ಯವನ್ನು ಪಡೆದುಕೊಳ್ಳುವದಕ್ಕೆ ಯತ್ನಿಸುವಂತೆ ಈ ಅಧಿಕಾರಿಗಳು ಅವರನ್ನು ಪ್ರೋತ್ಸಾಹಿಸಬೇಕು. ಈ ರಾಜುಕರು ನನ್ನ ಅಪ್ಪಣೆಯನ್ನು ನೆರವೇರಿಸುವದಕ್ಕೆ ತತ್ಪರರಿರುವರು. ನನ್ನ ಉಳಿದ ರಾಜಕರ್ಮಚಾರಿಗಳೂ ಕೂಡ ನನ್ನ ಆಜ್ಞೆಯನ್ನು ಪಾಲಿಸುವುದಕ್ಕೆ ಒಂಟಿಗಾಲ ಮೇಲೆ ನಿಂತಿರುವರು. ಅವರು ನನ್ನ ಸೇವೆಗಾಗಿ ಪ್ರಸಂಗಾನುಸಾರವಾಗಿ ರಾಜುಕರನ್ನು ಪ್ರೋತ್ಸಾಹಿಸುವರು. ಅಲ್ಲದೆ—ಚತುರಳಾದ ಧಾತ್ರಿಯ (=ಜೋಪಾನಗಾತಿಯ) ಕೈಯಲ್ಲಿ ಕೂಸನ್ನು ಕೊಟ್ಟು ನಿಶ್ಚಿಂತೆಯಿಂದ—ಈ ಧಾತ್ರಿಯು ನನ್ನ ಕೂಸನ್ನು ಕಾಪಾಡುವಳು' ಎಂದು ದುಗದುಗಿಯಿಲ್ಲದಿರುವಂತೆ ನಾನು ನನ್ನ ದೇಶವಾಸಿಗಳ ಸುಖಕ್ಕಾಗಿ ಕಲ್ಯಾಣಕ್ಕಾಗಿ ಈ ರಾಜುಕರೆಂಬ ಅಧಿಕಾರಿಗಳನ್ನು ನಿಯಮಿಸಿರುವೆನು...... ವಿಚಾರಣೆಯ ತೀರ್ಮಾನದಲ್ಲಿಯೂ ಶಿಕ್ಷಾ (ದಂಡನ) ವಿಧಾನದಲ್ಲಿಯೂ ಪಕ್ಷಪಾತವೂ ಅನ್ಯಾಯವೂ ಆಗಬಾರದೆಂದು ಎಲ್ಲರೂ ಬಯಸುವರಷ್ಟೇ. ಆದ್ದರಿಂದ ನಾನು ಇಂದಿನಿಂದ ಒಂದು ನಿಯಮವನ್ನೇ ಮಾಡಿಬಿಟ್ಟಿರುವೆನು. ಅದೇನೆಂದರೆ:—ಮರಣ ಶಿಕ್ಷೆಗೆ ಗುರಿಯಾದ ಸೆರೆಯಾಳುಗಳಿಗೆ ನಾನು ಮೂರು ದಿನಗಳ ಅವಕಾಶವನ್ನಿತ್ತಿರುವೆನು. ಯಾಕೆಂದರೆ ಅವನ ಬಂಧುಬಳಗದವರು ಅವನ ಜೀವನ ಲಾಭಕ್ಕಾಗಿ ಧ್ಯಾನ ದಾನಾದಿಗಳನ್ನು ಮಾಡಬಹುದ ... ಲೂ ಮಾಡಿಸಬಹುದು. ಈ ಬಗೆಯ ಸೆರೆಯಾಳುಗ ... ಪಾರಮಾರ್ಥಿಕ ಸಾಧನೆ ಮಾಡಲೆಂದೂ, ದೇಶದಲ್ಲಿ ವಿವಿಧ ... ಧರ್ಮಾಚರಣೆ, ಮನೋನಿಗ್ರಹ, ದಾನ ಮುಂತಾದುವು ... ಳೆಂದೂ ನಾನು ಹಾರೈಸುವೆನು.” ೪ನೇ ಸ್ತಂಭಲಿಪಿ.

“ನನ್ನ ಆಳಿಕೆಯ ... ಲ್ಲಿ ಗಿಳಿ, ಹಂಸ ... ಪಕ್ಕಿಪಕ್ಕಿಗಳನ್ನೂ ಮೃಗಗಳನ್ನೂ ಯಾರೂ ಕೊಲ್ಲಬಾರದೆಂದು ಕಟ್ಟಪ್ಪಣೆ ಮಾಡಿರುವೆನು. ಇದಲ್ಲದೆ ಗಬ್ಬವಿರುವ ಇಲ್ಲವೆ ಹಿಂಡುವ ಯಾವ ಪ್ರಾಣಿಗಳನ್ನೂ ಕೊಲ್ಲಕೂಡದು. ಆರು ತಿಂಗಳೊಳಗಿನ ಕರುಗಳನ್ನು ಕೊಲ್ಲಕೂಡದು. ಕೋಳಿಗಳನ್ನು ಯಾರೂ ಎಂದೂ ವಧಿಸಕೂಡದು. ಇದಲ್ಲದೆ ಬೆಳೆಯುವ ಹುಲ್ಲನ್ನು ಸುಡಕೂಡದು. ವ್ಯರ್ಥವಾಗಿ ಹಿಂಸೆಯ ಉದ್ದೇಶದಿಂದ ಬನಕ್ಕೆ ಬೆಂಕಿ ಹಚ್ಚಕೂಡದು. ಒಂದು ಪ್ರಾಣಿಯನ್ನು ಸಲಹುವದಕ್ಕೆ ಇನ್ನೊಂದು ಪ್ರಾಣಿಯನ್ನು ಕೊಲ್ಲಕೂಡದು. ಹಬ್ಬ ಹುಣ್ಣಿವೆಗಳಲ್ಲಿ ಯಾವ ಬಗೆಯ ಪ್ರಾಣಿಗಳನ್ನೂ ವಧಿಸಕೂಡದು; ಮತ್ತು ಮೀನು ಮುಂತಾದವನ್ನು ಮಾರಕೂಡದು. ಎತ್ತು ಎಮ್ಮೆ ಹೋರಿ ಕುರಿ ಮೊದಲಾದ ಯಾವ ಪ್ರಾಣಿಗಳಿಗೂ ವ್ಯರ್ಥವಾಗಿ ಶರೀರಪೀಡೆಯನ್ನು ಕೊಡಕೂಡದು.... ಗನಗಳನ್ನು ಕಾದಕಂಬಿಗಳಿಂದ ಬರೆಕೊಟ್ಟು, ಕಷ್ಟಪಡಿಸಕೂಡದು. ನನ್ನ ಈ ಇಪ್ಪತ್ತಾರು ವರುಷಗಳ ಆಳಿಕೆಯಲ್ಲಿ ಇಪ್ಪತ್ತೈದುಸಾರೆ ಸೆರೆಮನೆಯ ಕೈದಿಗಳನ್ನು ಬಂಧಮುಕ್ತಗೊಳಿಸಿ ಬಿಟ್ಟುಬಿಟ್ಟಿರುವೆನು.” ೫ನೇ ಸ್ತಂಭಲಿಪಿ.

“ದೇವಪ್ರಿಯನಾದ ಪ್ರಿಯದರ್ಶಿ ರಾಜನು ತನ್ನ ರಾಜ್ಯಾಭಿಷೇಕದ ಹನ್ನೆರಡನೆಯ ವರುಷದಲ್ಲಿ ಈ ಅಪ್ಪಣೆಯನ್ನು ಪ್ರಸಿದ್ಧಿಸುತ್ತಿದ್ದಾನೆ—ಯುತ, ರಾಜುಕ, ಪ್ರಾಂತಿಕರೆಂಬ ಅಧಿಕಾರಿಗಳು ಧರ್ಮಪ್ರಚಾರಕ್ಕೂ, ಬೇರೆ ರಾಜಕೀಯ ಕಾರ್ಯ ನಿರ್ವಹಿಸುವದಕ್ಕೂ ಪ್ರತಿ ಐನ್ನೆದು ವರುಷಕ್ಕೊಮ್ಮೆ ನನ್ನ ರಾಜ್ಯದ ಎಲ್ಲಾ ಕಡೆಯಲ್ಲಿ ಸಂಚರಿಸಬೇಕು. (ಇವರು ಪ್ರಚಾರಪಡಿಸಬೇಕಾದದ್ದೇನಂದರೆ)- ತಾಯಿತಂದೆಗಳ ಸೇವೆ, ಮಿತ್ರ ಪರಿಚಿತ ಬಾಂಧವರೊಡನೆ ಅಕ್ಕರತೆ, ಬ್ರಾಹ್ಮಣರ ಶ್ರಮಣರ ಪೂಜಾದಾನ, ಜೀವಿಗಳ ಅಹಿಂಸೆ ಇವೆಲ್ಲಾ ಅತ್ಯಂತ ಪವಿತ್ರ ಕಾರ್ಯಗಳು. ಸ್ವಲ್ಪ ಗಳಿಸುವದೂ ಸ್ವಲ್ಪ ವೆಚ್ಚ ಮಾಡುವುದೂ ಪ್ರಶಂಸನೀಯವು....” ಮೂರನೇ ಗಿರಿಲಿಪಿ.

ವಾಙ್ಮಯ ಪರಿಚಯ.

ಪರಮಾನಂದ ಸಾಧನ [ಸಂಪುಟ ೧-ಸಂ. ೨] ವಾರ್ಷಿಕ ಚಂದಾ ರೂ. ೨-೦-೦ ಪೋಸ್ಟ:— ಸಿರ್ಸಿ

ಶಿಂಗೇಹಳ್ಳಿ ಪರಮಾನಂದ ಮಠವೇ ಇದರ ಪ್ರಕಾಶನಸ್ಥಾನ. ಮಂಜುನಾಥ ದೇವರಹೆಗಡೆ ಮುಕ್ಕಳ ತಾಯಮನೆ ಇವರು ಸಂಪಾದಕರು. ಪರಮಾರ್ಥವೇ ಈ ಮಾಸಿಕದ ಧ್ಯೇಯವೆಂಬುದು ನಾಮಕರಣದಿಂದಲೇ ವಿದಿತವಾಗುತ್ತದೆ. ಇದಕ್ಕೂ ಹೆಚ್ಚಿನ ಪ್ರಾಶಸ್ತ್ಯವೆಂದರೆ ಶ್ರೀ ಶಿವಾನಂದ ಸ್ವಾಮಿಗಳವರು ಈ ಪತ್ರಿಕೆಯ ಆಧಾರಸ್ತಂಭವಾಗಿದ್ದಾರೆ. ಬೇರೆ ಉದ್ದಿಶ್ಯಗಳನ್ನು ತಿಳಿದುಕೊಳ್ಳಬೇಕೆಂದರೆ, ಪ್ರಥಮ ಸಂಚಿಕೆಯೇ ನಮ್ಮ ಕೈಸೇರಿಲ್ಲ. ಎರಡನೆಯ ಸಂಚಿಕೆಯ ಪರಾಮರ್ಶವನ್ನೇ ಕೆಲಮಟ್ಟಿಗೆ ಮಾಡೋಣ ಎನಿಸುತ್ತದೆ. ಸುಖದ ಪ್ರಾಪ್ತಿಯ ಬಗ್ಗೆ ವಿವೇಕವೊಂದು ಸಮರ್ಥವಾದ ಸಾಧನವೆಂದು ಮೊದಲನೆಯ ಲೇಖದಲ್ಲಿ ಪ್ರತಿಪಾದಿಸಿಯದೆ. ಆದರೆ ಶಬ್ದ-ಗುಂಫನದಲ್ಲಿ ತೇಲಿಹೋಗದೆ ಹೊಸ ರೀತಿಯಿಂದ ಪಾರಮಾರ್ಥಿಕ ನ್ಯೂನತೆಗಳನ್ನು ನೀಗಿಸಬೇಕು. ಅಂದರೆ, ಧರ್ಮಕ್ಕೆ ಮನುಷ್ಯನನ್ನು ಹಚ್ಚಬೇಕು. ಉನ್ನತ ತತ್ವಗಳ ಶಿಖರಕ್ಕೆ ಒಮ್ಮೆಲೆ ಕೈಮಾಡಿ ತೋರಿಸಬಾರದೆಂದು ನಮ್ಮ ಬೇಡಿಕೆ. ದ್ವಿತೀಯ ಲೇಖನವು ಹಿಂದಿನ ಸಂಚಿಕೆಯಿಂದ ಸಾಗಿದೆ. ಬ್ರಹ್ಮಶ್ರೀ ಕೆಕ್ಕಾರ ಶಿವಭಟ್ಟನ ಅಧ್ಯಾತ್ಮ ವಿಚಾರ'ವೆಂಬ ವಿಷಯ. ಅದರಲ್ಲಿ

ಮಾತ್ರ ನವೀನ ಪದ್ಧತಿಯ ಕುರುಹುಗಳಿವೆ. ಬರೆದವರು ಪಾಶ್ಚಾತ್ಯರ ಜೀವನ ಕಥೆಗಳಿಂದ ತತ್ವಗಳನ್ನು ಉದಹರಿಸಿದ್ದು ಚನ್ನಾಗಿದೆ. ಆದರೆ ಬರಹದಲ್ಲಿ 'ಸಂಧಿಯು (ಚಾನ್ಸ)' ಎಂದು ಕೊಟ್ಟಿರುವದೂ, 'ಖರೇಸುಖ'ವೆಂಬ ಪ್ರಯೋಗವೂ ಪರಕೀಯ—ಸಂಸ್ಕಾರವನ್ನು ಹೆಚ್ಚಾಗಿ ತೋರ್ಪಡಿಸುತ್ತವೆ. ಇದೇನು 'ಪರಮಾನಂದ ಸಾಧನ'ವಾಗದು. ಹಿಂದಿನಿಂದ ಸಾಗಿದ ವಿಷಯಗಳೇ ಬಹಳ. ಸುಲಭ ವೈದ್ಯಮಾರ ಜ್ಯೋತಿಷಿ ಸಾಧನಮಾಲೆ, ಇದಕ್ಕೇನು ಅಡ್ಡಿಯಿಲ್ಲ. ಆದರೆ 'ಚಾಲೂ' ಎಂದು ಬರೆಯುವದೇಕೆ ವಿಷಯ ಸೂಚಿಯಲ್ಲಿ? ಕನ್ನಡ ಶಬ್ದಗಳು ಗೊತ್ತಿವೆ. ಹೀಗಿರಲು, ತಿರುಗ ಮುರುಗರಾದ ಬಳಕೆಯೇಕೆ? 'ಕಲ್ಯಾಣಿ'ಯೆಂಬ ಕಾದಂಬರಿಯೂ ಈ ಪತ್ರಿಕೆಯಲ್ಲಿ ಅಡಕವಾಗಿದೆ. ಇನ್ನಿಷ್ಟು ರುಚಿಕರವಾಗಬೇಕಾದರೆ, ವಿವಿಧತೆಯು ಬೆಳೆಯಬೇಕೆಂದು ಆಶೆ.

ಖಾದಿಯ ಸುದ್ದಿಗಳು.

ಉತ್ಕಲ ಪ್ರಾಂತದಲ್ಲಿ ಖಾದಿಯ ಪ್ರಚಾರವೇ ಇಲ್ಲ. ಶ್ರೀ ಜಮನಲಾಲರು ಮೊನ್ನೆ ಅಲ್ಲಿ ಹೋದಾಗ್ಗೆ, ಅನೇಕ ವಕೀಲರೂ, ಡಾಕ್ಟರರೂ, ವ್ಯಾಪಾರಸ್ಥರೂ, ಇನ್ನಿತರರೂ, ತಮ್ಮ ಜನ್ಮದಲ್ಲಿ ಮೊದಲನೇ ಸಲ ಖಾದೀ ಬಟ್ಟೆಯನ್ನು ಕೊಂಡರು. ಉತ್ಕಲದ ೧॥ ಕೋಟಿ ಜನರಲ್ಲಿ ೧ ಕೋಟಿ ಜನರಿಗೆ ದಿನಾಲು ಹೊಟ್ಟೆ ತುಂಬುವಷ್ಟು ಆಹಾರವು ದೊರೆಯುವದಿಲ್ಲ. ಆದರೂ ಸುಶಿಕ್ಷಿತರನ್ನುವವರು, ಕಾಯಿದೇ ಮಂಡಲ, ಮುನಸಿಪಾಲ್ಟಿ, ಲೋಕಲ್‌ಬೋರ್ಡು ಮೊದಲಾದವುಗಳ ಆರಿಸುವಿಕೆಯಲ್ಲಿ ಮಾತ್ರ ಹುರುಪು ತೋರಿಸುತ್ತ ಹಣ ಅಪವ್ಯಯ ಮಾಡುತ್ತ ಕಾಲ ಕಳೆಯುವರು. ಆದ್ದರಿಂದ, ಈ ಪ್ರಾಂತದಲ್ಲಿ ಖಾದಿಯ ಕಾರ್ಯಕ್ಕಾಗಿ, ಹೊರಗಿನ ಕೆಲಸಗಾರರು ಹೋಗುವದವಶ್ಯವಾಗಿದೆ.

ಹಿಂದುಸ್ಥಾನದಲ್ಲಿ ೧೯೨೭ ಫೆಬ್ರುವರಿಯಲ್ಲಿ ೨,೦೦,೭೬೨, ರೂ. ಬೆಲೆಯ ಖಾದಿಯು ಹುಟ್ಟಿತು; ೧,೫೧,೮೨೪ ರೂ. ಬೆಲೆಯ ಖಾದಿಯು ಮಾರಾಟವಾಯಿತು. ಅದೇ ತಿಂಗಳ ಕರ್ನಾಟಕದೊಳಗೆ, ೫,೨೫೪ ರೂ. ಖಾದಿ ಹುಟ್ಟಿ, ೧೦,೭೫೮ ರೂ. ಖಾದಿಯು ಮಾರಾಟವಾಯಿತು.

ಹಿಂದುಸ್ಥಾನದ ಚಹವೂ ಅಮೇರಿಕೆಯೂ.

ಕರಕವು ಅಮೇರಿಕೆಯಲ್ಲಿ ನಿಲ್ಲಿಸಲ್ಪಟ್ಟಂದಿನಿಂದ ಚಹಾದ ಪ್ರಮಾಣವು ಅಲ್ಲಿ ವಿಪರೀತವಾಗಿ ಏರಿದೆ. ೧೯೨೬ ನೇ ಇಸ್ವಿಯ ಮೊದಲನೇ ಮೂರು ತಿಂಗಳಲ್ಲಿಯೇ ೬೦ ಲಕ್ಷ ಪೌಂಡು ಚಹವು ಕೇವಲ ಹಿಂದುಸ್ಥಾನದಿಂದ ಅಮೇರಿಕೆಗೆ ಹೋಗಿದೆ. ಕಳೆದ ೨೬ ವರ್ಷಗಳಿಂದ ಇಷ್ಟು ದೊಡ್ಡ ಪ್ರಮಾಣವು ಯಾವ ಮೂರು ತಿಂಗಳಲ್ಲಿಯೂ ಹಿಂದುಸ್ಥಾನದಿಂದ ಹೋಗಿಲ್ಲ. ಆದುದರಿಂದ ಅಮೇರಿಕೆಯು ಈ ಚಟವು ಶಾಶ್ವತವಾಗಿ ಉಳಿಯುವಂತೆ ಪ್ರಯತ್ನಿಸಲು, ಹಿಂದುಸ್ಥಾನದ ಚಹದ ವ್ಯಾಪಾರಸ್ಥರು ೪೦ ಸಾವಿರ ಪೌಂಡುಗಳನ್ನು ಮೊನ್ನೆ ತಮ್ಮ ಸಭೆಯಲ್ಲಿ ತೆಗೆದಿಟ್ಟರು! ಇಷ್ಟು ಮೇಲೆ ಹಿಂದೀ ಚಹದ ವ್ಯಾಪಾರಕ್ಕೆ ಹೆಚ್ಚು ಕಳೆ ಬರುವದರಲ್ಲಿ ಸಂದೇಹವಿಲ್ಲ. ಆದರೆ ಈ ವ್ಯವಹಾರದಲ್ಲಿ ಯುರೋಪಿಯನರೇ ಹೆಚ್ಚಾಗಿದ್ದುದರಿಂದ ಹಿಂದೀಯರಿಗೆ ಅಷ್ಟೊಂದು ಲಾಭವು ದೊರೆಯದು. ಆದ್ದರಿಂದ ಹಿಂದೀಯ ಕೂಲಿಕಾರರಿಗೆ ಲಾಭದ ಅಂಶವು ದೊರೆಯುವಂತೆ ವಿಚಾರ ಮಾಡಲು ಚಳವಳವನ್ನು ಈ ವ್ಯವಹಾರದಲ್ಲಿ ನಿರತ ಭಾರತೀಯರು ಪ್ರಾರಂಭಿಸುವದು ವಿಹಿತ. ಕಾಫೀ ಟೀಕದಲ್ಲಿಯೂ ಚಹವು ಬೆಳೆಯುತ್ತಿರುವದರಿಂದ ರಾಜಕಾರಣದಲ್ಲಿ ನಿರತರಂಥಹ ಕನ್ನಡ ನಾಡಿನ [illegible] ಇತ್ತ ಲಕ್ಷ್ಯಗೊಡುವದೊಳ್ಳೇದು. ಅಮೇರಿಕೆಯಲ್ಲಿ ಕಾಫೀ [illegible] ವೆಯಾಗಿದೆ.

ಸೋಜಿಗದ ಸುದ್ದಿಗಳು.

ಒಂದೇ ಒಂದು ಮುದ್ದು ಮನುಷ್ಯನ ಜೀವಮಾನದ ಅವಧಿಯನ್ನು ೩ ಮಿನಿಟುಗಳಿಂದ ಕಡಿಮೆ ಮಾಡುತ್ತದೆಂದು ಅಮೇರಿಕೆಯ ತಜ್ಞರಿಂದ ಕಂಡು ಹಿಡಿಯಲ್ಪಟ್ಟಿದೆ. ಒಂದು ಮುದ್ದು ತೆಗೆದುಕೊಂಡ ಕೂಡಲೇ ಮನುಷ್ಯನ ಎದೆಯಲಿ ರಕ್ತದ ವೇಗವು ೩ ಪಟ್ಟು ಹೆಚ್ಚುತ್ತದೆ. ೪೮೦ ಮುದ್ದುಗಳಿಂದ ಒಂದು ದಿನವೂ, ೩೩೬೦ ಮುದ್ದುಗಳಿಂದ ಒಂದು ವಾರವೂ ಆಯುಷ್ಯಕ್ರಮದಲ್ಲಿ ಕಡಿಮೆಯಾಗುತ್ತವೆಂಬುದನ್ನು ಪ್ರತ್ಯಕ್ಷ ಪ್ರಮಾಣದಿಂದ ಶೋಧಿಸಿರುವರು.

ನನಗೆ ಹೊಳೆದಂತೆ.

'ಕಂಠೀರವ'ನ ಮುಖ ಚಿತ್ರವು ಎಂದಿಗೋ ಕೆತ್ತಲ್ಪಟ್ಟಿದೆ. "ಯೂನಿಯನ್ ಜಾಕ" ಪತಾಕೆಯು ೧೯೨೬ನೇ ಇಸ್ವಿಯಲ್ಲಿ ಸಹ "ಕಂಠೀರವ"ನ ಮೇಲೆ ಹೊಯ್ದಾಡಬೇಕೇ? ರಾಷ್ಟ್ರೀಯ ಧ್ವಜವು 'ಕಂಠೀರವ'ನಿಗೆ ಬೆದರಿಕೆಯಾಗಿದ್ದರೆ 'ಕಂಠೀರವ' ಎಂಬ ಹೆಸರಾದರೂ ಬದಲಾಗಲಿ!

ಇಂಗ್ಲೀಷಿನಲ್ಲಿ ಪರಿಯೋದಿಗೆ 'ಡೆಕಾಯಿಟ್' ಎಂಬ ಹೆಸರು. ಇದಕ್ಕೆ ವಿಶ್ವಕರ್ನಾಟಕವು "ಡಕಾಯಿತಿ" ಎಂಬ ರೂಪ ಕೊಟ್ಟಿದೆ. ಇದಕ್ಕೆ ಸುಲಿಗೆಯೆನ್ನುತ್ತಾರೆ.

ಕರ್ನಾಟಕ ಏಕೀಕರಣಕ್ಕೂ ಕನ್ನಡಿಗ—ಕನ್ನಡಿಗರಲ್ಲಿಯ ಸಂಬಂಧದ ಬೆಳವಣಿಗೆಗೂ ಬಾದರಾಯಣ ಸಂಬಂಧವಿದೆಯಂತೆ! 'ವಿಜಯ'ಕಾರರ ಮತವಿದು. ಇಂತಹ ಬಾದರಾಯಣ ವಿಚಾರದಲ್ಲಿಯೇ ಮಗ್ನವಾದ ಹಳೆಯ ಎತ್ತುಗಳಿಗೆ ಬಡಿದಾದರೂ ಫಲವೇನು? ಹೊಡಿಸಿಕೊಂಡು ಹೊಡಿಸಿಕೊಂಡು ಆ ಎತ್ತುಗಳಿಗೆ ದಪ್ಪೇ ಬಿದ್ದು ಹೋಗಿರುತ್ತದೆ.

ಓದುಗ.

ರಂಗಭೂಮಿಯ ಸಮಾಚಾರ.

ವಾಮನರಾಯರ ವಿಶ್ವಗುಣಾದರ್ಶ ನಾಟಕ ಮಂಡಳಿಯು ಮೈಸೂರಿನಲ್ಲಿದೆ. ಅವರ ಮಹಾನಂದಾ, ಸಖೂಬಾಯಿ, ಸಂದೇಹ ಸಾಮ್ರಾಜ್ಯ ನಾಟಕಗಳು ಮೈಸೂರಿನವರ ಮನವನ್ನು ಆಕರ್ಷಿಸಿವೆ.

ಹಲಗೇರಿ ನಾಟಕ ಮಂಡಳಿಯು ಸಿರ್ಸಿಗೆ ಬಂದಿದೆ.

ಅಂಬಾಪ್ರಸಾದ ನಾಟಕ ಮಂಡಳಿಯವರಿಗೆ ಸಾಗರದಲ್ಲಿ ಯೋಗ್ಯ ಮರ್ಯಾದೆ ಸಿಕ್ಕಿತು. ಮುಂದೆ ತರಿಕೇರಿಗೆ ಹೋಗಬಹುದು.

ಹಿಂದುಸ್ಥಾನ.

ನಿಜಾಮ ಸಂಸ್ಥಾನದಲ್ಲಿ ರೇಲ್ವೇಗಳ ಹೊಸ ಯೋಜನೆಯು ರಭಸದಿಂದ ಸಾಗಿದೆ. ಸಿಕಂದರಾಬಾದ, ಗದ್ವಾಲ, ಮಹಬೂಬನಗರ, ಅಲಂಪೂರ, ಕರ್ನೂಲ, ಗೋದಾವರಿ ತೀರದ ಭದ್ರಾಚಲದ ಯಾತ್ರಿಕರ ಬಗ್ಗೆ ಕರಪಲ್ಲ—ಕೋಠಿಗುಡಿ, ಕಾಝಿಪೇಟೆ—ಬಳ್ಹಾರ್ಷ (ಮಧ್ಯ ಹಿಂದುಸ್ಥಾನ), ಹಿಂಗೋಳಿ—ವಸಯಿಗಳಿಗೆ ಹೊಸ ರೇಲ್ವೆಗಳಾಗುವವು. ವಾಡೀ ಗದಗದ ಸುದ್ದಿಯಿಲ್ಲ.

ಶ್ರೀ ಸುಭಾಸಚಂದ್ರ ಬೋಸರನ್ನು ಸರಕಾರದವರು ಬಿಟ್ಟಿದ್ದಾರೆ. ಅವರ ಪ್ರಕೃತಿಯು ಅತಿಶಯ ಅಶಕ್ತವಾಗಿದೆ. ನ್ಯಾಯಕ್ಕೆ ಸಹ ಅವರಿಗೆ ಬರುವಂತಿಲ್ಲ. ಅವರು ಪುರಿಯಲ್ಲಿ ಸದ್ಯಕ್ಕಿರುತ್ತಾರೆ.

ತೃತೀಯ ಕರ್ನಾಟಕ ಆಯುರ್ವೇದ

ಸಮ್ಮೇಲನ ಮತ್ತು ಪ್ರದರ್ಶನ ವಿಜಾಪೂರ

ವೈಶಾಖ ಬಹುಳ ೧೨, ೧೩, ೧೪, ತಾ. ೨೮, ೨೯, ೩೦

ಅಧ್ಯಕ್ಷ:—M. V. ಶಾಸ್ತ್ರಿ ಮಂಗಳೂರ

ವಾಸುದೇವಾಚಾರ್ಯರ
ಸ್ಮಾರಕದ ಬಗ್ಗೆ
ಬಿನ್ನಹ.

ಮಹನೀಯರೇ,

ಕನ್ನಡ ಸಾಹಿತ್ಯ ಸಾಮ್ರಾಟರಾದ ಶ್ರೀಮಾನ ಕೆರೂರ ವಾಸುದೇವಾಚಾರ್ಯರು ದಿವಂಗತರಾಗಿ ಈಗ ೬-೭ ವರ್ಷಗಳು ಕಳೆದು ಹೋದವು. ವಾಙ್ಮಯ ಸಾಮ್ರಾಜ್ಯಕ್ಕೆ ಈ ಶತಮಾನದಲ್ಲಿ ಚಕ್ರವರ್ತಿಗಳಂತೆ ಮೆರೆದು ತಮ್ಮ ಅದ್ವಿತೀಯ ಪ್ರತಿಭಾ ಲಾವಣ್ಯದಿಂದ ಕನ್ನಡ ನುಡಿಯನ್ನೇ ಮುದ್ದು ಸುರಿಸುವಂತೆ ಮಾಡಿ ದಿಗಂತ ಖ್ಯಾತಿಯನ್ನು ಹೊಂದಿ ಅವರ ಜೀವನ ಜ್ಯೋತಿಯು ಅಂತರ್ಧಾನವಾಯಿತು. ಇಂಥ ದಿವ್ಯಜ್ಯೋತಿಯ ಜನ್ಮಸ್ಥಾನವು ಇದೇ ಪಟ್ಟಣವಾದದ್ದು ನಮ್ಮೆಲ್ಲರಿಗೆ ಅತ್ಯಂತ ಅಭಿಮಾನದ ಸಂಗತಿಯಾಗಿದೆಯಷ್ಟೇ? ಇದೇ ಮೂಲಕವಾಗಿ ಈ ಪಟ್ಟಣವನ್ನು ಎಷ್ಟೋ ಸಾಹಿತ್ಯ ಭಕ್ತರು ವಾಙ್ಮಯದ ಪುಣ್ಯಕ್ಷೇತ್ರವೆಂದು ಭಾವಿಸಿದ ಸಂಗತಿಯು ದಿನಾಲು ಹೆಚ್ಚು ಹೆಚ್ಚು ನಮ್ಮ ಪ್ರತೀತಿಗೆ ಬರಹತ್ತಿದೆ. ಹೀಗಿದ್ದು ಆಚಾರ್ಯರ ವಿಷಯಕ್ಕೆ ನಮ್ಮೆಲ್ಲರ- ಹೃದಯದಲ್ಲಿರುವ ಭಕ್ತ್ಯಾದರಗಳ ದ್ಯೋತಕವು ಈ ಬಾಹ್ಯ ಸೃಷ್ಟಿಯಲ್ಲಿ ಇನ್ನೂ ರೂಪಗೊಂಡಿಲ್ಲ ಇದು ನಮ್ಮ ಅಭಿಮಾನಕ್ಕೆ ಒಪ್ಪದಾಗಿದೆ. ಆದ್ದರಿಂದ ಯತ್ಕಿಂಚಿತ್ತಾದರೂ ಈ ಬಗ್ಗೆ ಮಾಡಬೇಕೆಂದು ಬಯಸಿ ಅವರದೊಂದು ಭಾವಪಟವನ್ನು ಹಾರ್ಡಿಂಜ ಲಾಯಬ್ರರಿಯಲ್ಲಿ ನಿಲ್ಲಿಸಬೇಕೆಂದು ನಿಶ್ಚಯಿಸಿದ್ದೇವೆ. ಅದಕ್ಕಾಗಿ ಆಚಾರ್ಯರ ಸ್ನೇಹಿತರೂ, ಆಚಾರ್ಯರ ಹೊತ್ತಿಗೆಗಳನ್ನು ಉಬ್ಬಿನಿಂದ ಓದಿ ಓದಿ ದಣಿಯುತ್ತಿರುವ ಅಸಂಖ್ಯ ವಾಚಕ ವೃಂದವೂ ಅವರಲ್ಲಿ ತಮಗಿರುವ ಅಭಿಮಾನಕ್ಕೆ ದ್ರವ್ಯದಿಂದಲೂ, ಸಹಾನುಭೂತಿಯಿಂದಲೂ ನೆರವಾಗಬೇಕೆಂದು ಅತ್ಯಂತ ಆಸ್ಥೆಯಿಂದ ಕೋರುತ್ತಿರುವ.

(೧) **ಸೊಲ್ಲಾಪಟ್ಟಿ ರಾಮಣ್ಣನಾಯಿಕರು.**
(೨) **ಧಾರವಾಡ ಯಲಗುರ್ದರಾಯರು.**
(೩) **ಕಿರಸೂರ ಸ್ವಾಮಿರಾಚಾರ್ಯರು.**
(೪) **ಮಂಗಳವೇಢೇ ಮಧ್ವರಾಯರು.**
(೫) **ಜೋರಾಪುರದ ಗುರುರಾಯರು**

(ಕಾರ್ಯದರ್ಶಿಗಳು.)

ಕಳೆದ ಸಾಮಾನುಗಳು.

ಬೀಗದ ಎರಡು ಕೈಗಳುಳ್ಳ ಒಂದು ರಿಂಗು ಬಾಗಲಕೋಟೆ ಕಲಾದಗಿ ಬೀದಿಯಲ್ಲಿ ಬಿದ್ದುದನ್ನು ನಮ್ಮ ಕಡೆಗೆ ಒಬ್ಬರು ತಂದು ಕೊಟ್ಟಿದ್ದಾರೆ. ಕಳೆದುಕೊಂಡವರು ಅದರ ವರ್ಣನೆಯನ್ನು ನಮಗೆ ಹೇಳಿ, ಅದನ್ನು ತೆಗೆದುಕೊಂಡು ಹೋಗಬಹುದು.

ವ್ಯವಸ್ಥಾಪಕ " ಕನ್ನಡಿಗ "

ಮಾರಾಟ.

೪೬ 'X೨೪' 'X೨೪' ಆಕಾರದ ಹೊಸ ತಿಜೋರಿಯನ್ನು ಮಾರತಕ್ಕದ್ದಿದೆ.

" ಲೇಖ ಸಂಖ್ಯೆ ೧೧ "

ಗಂಗೂಬಾಯಿ ಗುಳೇದಗುಡ್ಡ ಇವರ

ಶ್ರೀಕೃಷ್ಣ ಸಂಗೀತ ಕನ್ನಡ ನಾಟಕ ಮಂಡಲವು.

ಬಾಗಲಕೋಟೆ- ರಾಜನಾಟಕಶಾಲೆ

ಬುಧವಾರ ತಾ|| ೨೫-೫-೨೭

ಸಂಶಯ

ಸಾಮ್ರಾಜ್ಯ

ಶನಿವಾರ ತಾ|| ೨೮-೫-೨೭.

ಸಖೂದೇವಿ.

ವ್ಯವಸ್ಥಾಪಕ.

ನೋಟೀಸು.

ಬಾಗಲಕೋಟ ಕೋ. ಅಪರೇಟಿವ್ಹ ಅರ್ಬನ್ ಬ್ಯಾಂಕದ ಯಾವತ್ತು ಮೆಂಬರ ಜನರು ತಾ|| ೧೨ ಜೂನ ೧೯೨೭ ರವಿವಾರ ದಿವಸ ಕೂಡುವ ವಾರ್ಷಿಕ ಸಭೆಗೆ ಬರಬೇಕೆಂದು ವಿನಂತಿ ಇರುತ್ತದೆ. ಸಭೆಯಲ್ಲಿ ಮುಂದಿನ ವರ್ಷದ ಚೇರಮನ್ ಮತ್ತು ಮ್ಯಾನೇಜಿಂಗ ಕಮಿಟಿಯ ಮೆಂಬರರನ್ನು ಆರಿಸತಕ್ಕದ್ದು. ಮುಂತಾದ್ದು ಕೆಲಸ ನಡೆಯತಕ್ಕದ್ದು ಅದೆ. ಆದ್ದರಿಂದ ಎಲ್ಲ ಮೆಂಬರರು ತಪ್ಪದೇ ಬರಬೇಕಾಗಿ ವಿನಂತಿ ಅದೆ.

ಬಾಗಲಕೋಟೆ.
೨೦-೫-೧೯೨೭.

ಚೇರಮನ್
M. S. Mangivedhekar

ಉಚಿತ! **ಸಮಯ!!** **ಉಚಿತ!**

ನನ್ನ ಶಾಸ್ತ್ರೀಯವಾದ ಶಾರೀರಕ ಶಿಕ್ಷಣ.

ಈ ಪುಸ್ತಕದಲ್ಲಿ ನನ್ನ ಮತ್ತು ನನ್ನ ಶಿಷ್ಯರ ಅಂಗಸೌಷ್ಠವವನ್ನು ತೋರಿಸುವ ಸೊಗಸಾದ ಚಿತ್ರಗಳಿರುವವಲ್ಲದೆ, ಅಂತಹ ಶರೀರ ದಾರಢ್ಯವು ಹೇಗೆ ಬಂದಿತೆಂಬ ವರ್ಣನೆಯೂ ಕೊಡಲ್ಪಟ್ಟಿರುವುದು. ನನ್ನಲ್ಲಿ ಕಲಿಯುತ್ತಿದ್ದವರ ಅಭಿಪ್ರಾಯಗಳೂ ಅದರಲ್ಲಿರುವವು. ಈ ಪುಸ್ತಕವನ್ನು ಓದಿದ ಪ್ರತಿಯೊಬ್ಬರೂ ತಮ್ಮ ದೇಹವನ್ನು ಹೇಗೆ ಬಲಪಡಿಸಿಕೊಳ್ಳಬೇಕೆಂಬ ಸರಿಯಾದ ಮಾರ್ಗವನ್ನು ತಿಳಿಯುತ್ತಾರೆ. ಟಪ್ಪಾಲು ಹಾಸಲು ೨ ಆಣೆಯ ಸ್ಟಾಂಪುಗಳನ್ನು ಕಳುಹಿಸಿಕೊಟ್ಟಮಾತ್ರಕ್ಕೆ ಈ ಪುಸ್ತಕವನ್ನು ನಿಮಗೆ ಉಚಿತವಾಗಿ ರವಾನಿಸುತ್ತೇವೆ ಈ ಸುಸಮಯವನ್ನು ಕಳೆದುಕೊಳ್ಳದೆ, ಕಾಲಾತೀತ ಮಾಡದೆ, ಇನ್ನು ಈ ಯೋಚನೆಯಲ್ಲಿ ನೀವಿರುವಾಗಲೇ ಈ ಪುಸ್ತಕಕ್ಕಾಗಿ ಬರೆಯಿರಿ.

ನಮ್ಮ ವಿಳಾಸ

ಪ್ರೊಫೆಸರ್ ಎಂ. ವಿ. ಕೃಷ್ಣರಾವ್.
ಬಸವನಗುಡಿ, ಬೆಂಗಳೂರುಸಿಟಿ.

ಬೇಕಾಗಿದೆ.

ಉತ್ತಮ ಫೋಟೋಗ್ರಾಫಿ ಕೆಲಸ ಬಲ್ಲಂತಹ, ಪ್ರತಿಯೊಂದು ಕೆಲಸದ ಮಾಹಿತಿಯುಳ್ಳಂತಹ ಮತ್ತೂ ಸ್ಟೂಡಿಓದಲ್ಲಿ ಕೆಲಸ ಮಾಡಿದಂತಹ ಅನುಭವಿಕರು ಬೇಕು. ಪಗಾರ ಯೋಗ್ಯ ರೀತಿ ಮೇಲೆ! ಮುಂದೆ ವರ್ಷಕ್ಕೆ ೩ ರು. ಒಡತಿ ಸಿಗುವದು. ಕನ್ನಡಿಗರು ಯಾರಾದರೂ ಇದ್ದರೆ ಸರ್ಟೀಫಿಕೆಟ ಸಹಿತ ಅರ್ಜಿ ಕಳಿಸಬೇಕು.

ಬಿ. ಜಿ. ಚಿಮ್ಮಲಗಿಕರ,

ಗ್ರಾಫರ ಮ ಫೋಟೋಗ್ರಾಫಿ ಬಾವಲಿ ಹೈದ್ರಾಬಾದ ದಕ್ಷಿಣ.

ಲೆವರಿನ ಗಡಿಯಾರಗಳು.

ಲೆವರಿನ ಕೈ ಗಡಿಯಾರ ರೂ. ೯.

ಲೆವರಿನ ಕಿಸೆಯೊಳಗಿಡುವ ಗಡಿಯಾರ ರೂ. ೭.



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಮೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವುದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ಬಾಳುವವು. ಬೆಲೆ ಕಡಿಮೆಯಿದೆಂದು ಅಂಜುವ ಕಾರಣವಿಲ್ಲ. ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚ ತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚ ಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ. ಆದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ.

ಲಿಬೋ ವಾಚ ಕಂ. (ಇಂಡಿಯಾ.) ಬಾಂಬೆ. ಕೆ ೪.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟಪ್ರದವಾದ ಧರ್ಮಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಮವು ಇನಾಂ!!! ಅಂ. ಹಾಸಲು

ಇಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯೆ

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಏಜಂಟರು—ಜಂಬುಲಿಂಗಪ್ಪಾ ಜಾಲವಾದಿ

ಸ್ಟೇಶನರ್ಸ ಬಾಗಲಕೋಟೆ

ರಾಜವೈದ್ಯ, ನಾರಾಯಣಜಿ ಕೇಶವಜಿ

೩೬. ಜೇಸಾಪ್ಪಜಾರ್. ಮದ್ರಾಸು

ಯಾವದೇ { ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ. ೧೪, ಅರ್ಧ ಬೆಲೆ ರೂ. ೭



ಬರೇ ಒಂದು ತಿಂಗಳ ಒಗ್ಗೆ ನಾವು ಈ ದಾವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೀತಿಯ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ. ಬೆಲೆ ರೂ. ೭

ಅಲ್ಪವೇ ಇವೆ; ಈಗಲೇ ಬರೆಯಿರಿ.

ಪತ್ತೆ:— ಸ್ವಾನ ಹೌಸ. ಪಿ. ಬಿ. ೫೦೮. ಪಿ. ಟಿ. ಮದ್ರಾಸ

ಅತ್ಯಲ್ಪವಿವೆ ! ಉಚಿತ !

ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ್ ಜೆಸ್ಟರ್ಡ್ ಪೋಕೆಟ್ ವಾಚ್ ೧೮ ಕೆರೆಟ್ ರೋಲ್ಡ್ ಗೋಲ್ಡಿನವು. ಮಶಿನರಿಯ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚುಮಾಡಿದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಜಿಸ್ಟರ್ಡ ೧೮ ಕೆರೆಟ್ ರೋಲ್ಡ್ ಗೋಲ್ಡಿನ ಪೋಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ೫

ಕ್ಯಾಪ್ಟನ್ ವಾಚ್ ಕಂ ಪಿ, ಬಿ. ಮದ್ರಾಸ: ೩೩೮

ಕಲರಾ ಎಂಬ ವಾಂತಿಬೇದಿ

ನಿಮ್ಮ ಊರಿನಲ್ಲಿ ಇದ್ದರೆ ಭಯಪಡಬೇಡಿ

ನೀವು ಅದನ್ನು ನಿಗ್ರಹಿಸಿಕೊಳ್ಳಬೇಕಾದರೆ

ಹೆನ್‌ಲೀಸ್ ಓಮಂ ಕರ್‌ಪೂರ

ಸುಲಭವಾಗಿ ತಿನ್ನಬಹುದು.

ಸ್ವಲ್ಪ ತಣ್ಣೀರಿನಲ್ಲಿ ಅರ್ಧ ಟೀಸ್ಪೂನ್ ಅಳತೆ ಮೇಲೆತಿಳಿಸಿರುವಂಥ ಔಷದವನ್ನು ಹಾಕಿ ಯಾವ ಕಾಲದಲ್ಲಾದರು ಎಲ್ಲಿಯಾದರು ಎಷ್ಟುಸಲ ಬೇಕಾದರು ತಿನ್ನಬಹುದು. ಕಳೆದ 50 ವರ್ಷಗಳಿಂದ ವಿಷಬೇದಿಯನ್ನು ಸಕಲ ಹೊಟ್ಟೆನೋವು ಮೊದಲಾದ ವುಪದ್ರಗಳನ್ನು ಎಷ್ಟೋ ಜನಗಳಿಗೆ ಗುಣವಾಗಿ ಹೆಸರುಹೋದದ್ದು.

ಉತ್ತಮವಾದ ಔಷದವೆಂದು ಪರಿಶೋಧಿಸಿ ಶ್ಲಾಘ್ಯವಾದದ್ದು. ಮೇಲೆ ತಿಳಿಸಿರುವಂಥ ವ್ಯಾಧಿಗಳನ್ನು ಗುಣಪನ್ನು ಮಾಡುವಂಥಾದ್ದು. ಪುನಹ ಆ ವ್ಯಾಧಿಗಳು ಬಾರದೇ ಇರುವಹಾಗೆ ಮಾಡುವಂಥಾದ್ದು ಈ ಔಷಧವು.

ಈ ಔಷದವನ್ನು ವುಪಯೋಗಿಸಿದವರಲ್ಲಿ ಒಬ್ಬರು ಇದರಿಂದ ಪಿಳ್ಳೆಮಕ್ಕಳೂ ಮತ್ತು ಮೂರುಜನ ಹೆಂಗಸರೂ ಸೌಖ್ಯ ಪಟ್ಟಿರುತ್ತಾರೆ ಎಂದು ಹೇಳಿದರು. ಮತ್ತೊಬ್ಬರು ಕಲರಾ ಬಂದಿರುವಂಥ ನಾಲ್ಕು ಜನಗಳು ಈ ಔಷಧವನ್ನು ತಿಂದು ಬದುಕಿರುತ್ತಾರೆ ಎಂದು ತಿಳಿಸಿದರು.

ನಿಮಗೆ ವಾಡಿಕೆಯಾಗಿರುವಂಥ ಔಷಧ ಅಂಗಡಿಯಲ್ಲಿ ಒಂದು ಸೀಸಾಯಿ ಔಷದವನ್ನು ತೆಗೆದುಕೊಳ್ಳಿ.

ಇಲ್ಲದೇಹೋದರೆ ಬೆಂಗಳೂರು ಕಂಟೋನ್‌ಮೆಂಟ್ ಹೊಸ ಮಾರ್ಕೆಟ್ ಸ್ಕ್ವೇರ್ 47-19 ನಂ

ಮೆಸರ್ಸ್ ಡಿ. ಸೈಯದ್ ಹುಸೇನ್ ಅಂಡ್ ಕಂಪನಿಯವರಿಗೆ

ಬರೆದು ತರಿಸಿಕೊಳ್ಳುವದು.

Sole Manufacturers

LITTLE'S ORIENTAL BALM AND PHARMACEUTICALS

LIMITED.

15 Armenian Street *MADRAS*

'ಕನ್ನಡಿಗ'ನ ವಾರ್ಷಿಕ ಚಂದಾ ನಿರ್ಣಯ.

ಪೋಷಕರಿಗೆ ವಾ. ೫ ರೂ ಉಪಕಾರಕರ್ತ್ರರಿಗೆ ವಾ. ೧೦ ರೂ. ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ } ೧ ರೂ. ಇಲ್ಲವೇ, ೧೫ ನಂಬರಿಗೆ ಕಡಿಮೆ ಇರಾಗದಂಥ ೯೦೦೦ ಯಾರ್ಡ ಕೈನೂಲು

ಪರಸ್ಥಳದವರಿಗೆ } ಮನಿಯಾರ್ಡರದಿಂದ ೧-೧೪-೦
ವಿ ಪಿ. ಯಿಂದ ೨-೧-೦
ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ
೧೬೦೦೦ ಯಾರ್ಡ ಕೈನೂಲು

ವಾಚನಾಲಯ ಸಭೆ, ಸಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ— } ಸ್ಥಳದವರಿಗೆ ೨ ೦-೦
ಪರಸ್ಥಳಕ್ಕೆ ಮನಿಯಾರ್ಡರದಿಂದ ೨-೧೪-೦
,, ವಿ ಪಿ ಯಿಂದ ೩-೧-೦

ಸರಕಾರ, ಮುನಸಿಪಾಲಿಟಿ, ಲೋಕಲ್ ಬೋರ್ಡ ಇತ್ಯಾದಿ. } ಸ್ಥಳದವರಿಗೆ ೪-೦-೦
ಪರಸ್ಥಳದವರಿ ಮನಿಯಾರ್ಡರದಿಂದ
೪-೧೩-೦ ವಿ ಪಿ ಯಿಂದ ೫-೧-೦

ಬಿಡಿ ಸಂಚಿಕೆಗೆ ೯ ಪೈ. ಹಿಂದಿನಸಂಚಿಕೆಯೊಂದಕ್ಕೆ ೨ ಆಣೆ. ಪೂರ್ವಾರ್ಧದಾಗಿಯಾಗಲೀ, ವರ್ಷದ ಕಡಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ. —**ವ್ಯವಸ್ಥಾಪಕ**

ಮುದ್ರಿಸುವ

ಯಂತ್ರ!

ಸಿಂಗಲ್ ರಾಯಲ್ ಆಕಾರದ ಮುದ್ರಣ ಯಂತ್ರವನ್ನು ಮಾರತಕ್ಕದ್ದಿದೆ. ಯಂತ್ರವು ಉತ್ತಮ ಸ್ಥಿತಿಯಲ್ಲಿದ್ದು, **ಕೆಲಸ** ವನ್ನು ಚನ್ನಾಗಿ ಕೊಡುತ್ತದೆ. ಹೆಚ್ಚಿನ ಸಂಗತಿಗಳಿಗಾಗಿ **ಬರೆಯು** ವಿಳಾಸ—

ವಿದ್ಯಾರಣ್ಯ ಮುದ್ರಾಮಂದಿರ ಬಾಗಲಕೋಟೆ.

ಕಿರ್ಲೋಸ್ಕರ

ಕಬ್ಬಿಣ ನೇಗಿಲಗಳು

ಹಂಗಾಮು (ಸುಗ್ಗಿ) ಸಮೀಪಿಸಿತು. ಈ ವರ್ಷ ಮಳೆ ಬೆಳೆ ಚನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವದು. ಕಿರ್ಲೋಸ್ಕರ ನೇಗಿಲು ನಂ ೧೧, ೯, ೮ ಇವು ಒಕ್ಕಲಿಗರಿಗೆ ಬಹಳೇ ಉಪಯೋಗಬೀಳುತ್ತವೆ ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುತ್ತವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್. } ಕಿರ್ಲೋಸ್ಕರವಾಡಿ ಜಿಲ್ಲೆ ಸಾತಾರೆ

ಸ್ಟಾಂಡರ್ಡ್ ಕಾಫಿಪುಡಿ.

ಇದು ಉತ್ತಮವಾದ ಬೀಜಗಳಿಂದ ಭಾರಿ ಎಲಕ್ಟ್ರಿಕ್ ಮಿಷನ್‌ಗಳಲ್ಲಿ ತಯಾರಾದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತದೆ. ಆರೋಗ್ಯವೂ ಬಹು ರುಚಿಕರವೂ ಆದದ್ದು.

ನಾಲ್ಕು ವಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ ರುಚಿಯನ್ನೂ, ಬಣ್ಣವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೇ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು

೧ ನೇ ದರ್ಜೆ ಪುಡಿ (ಪ್ಯಾಕಿಂಗ್ ಸೇರಿ) ೧ ಪೌಂಡಿಗೆ ರೂ. ೧-೬-೦

೨ ನೇ ,, ,, ,, ರೂ. ೧-೩-೮

ದಿ ಸ್ಟಾಂಡರ್ಡ್ ಕಾಫಿ ಕಂಪನಿ

ಚಿಕ್ಕಪೇಟ ಬೆಂಗಳೂರು ಸಿಟಿ.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ಪತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ. ೨೬೩೬ ಸಯ್ಯದ ಅಲ್ಲಿ ಅಸಗರ ಬಿಲ್‌ಗ್ರಾಮಿ ಸುಪರಿಂಟೆಂಡಂಟ್ ಸಕ್ರೆಟರಿಯಟ್ ಹೈದರಾಬಾದ ಡೆಕ್ಕನ್ನ ರೂ.೧೦೦೦

(೨) ಎಲ್. ಬಿ. ಸಿ. ನಂ ೧೯೬೨ ನಾರಾಯಣ ವಿಠ್ಠಲ ಲೋಣಕರ. ಕೇರ್ ಆಫ್ ಡಿ. ಈ. ಪುರಾಣಿಕ ೧೮೬ ನಿಹಾಲಪುರ ಇಂದೂರ. ೧೦೦೦

(೩) ಎಲ್. ಬಿ. ಸಿ. ನಂ. ೩೪೧ ರಾಮಚಂದ್ರ ಅನಂತ ಶಿರೋಳೆ. ಡಿವಿಜನಲ್ ಫಾರೆಸ್ಟ ಆಫೀಸರ ಧಮ್ತರಿ. ಪಶ್ಚಿಮಖಾನದೇಶ ರೂ. ೮೦೦

(೪) ಬಾಂಡ ನಂಬರು ೭೫೦೬ ಕೇ. ಜೆ. ಫರ್ನಾಂಡೋ ವ್ಯಾಪಾರಸ್ಥ ಬ್ರಿಕ್‌ಸಾಯಿಡ ಸಿಲೋನ, ಕೊಲಂಬೋ. ರೂ ೧೦೦೦

(೫) ಬಾಂಡ ನಂಬರು ೧೩೬೩೪ ಎಸ್. ಜಿ. ಚವರೆ ಆಶಿಸ್ಟಂಟ ಸ್ಟೇಶನ್‌ಮಾಸ್ತರ ತೆಲಗಿ. ಜಿಲ್ಲಾ ವಿಜಾಪುರ ರೂ ೧೦೦೦

ಬಿ. ಎನ್. ಆರಾಧ್ಯ

ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ.)

ಜೀವ ವಿಮೆಯ ಕಾರ್ಯದಲ್ಲಿ

ಅದ್ಭುತವಾದ ಜಯವು !

ಯಾಕಂದರೆ ತನ್ನ ೧೯ ನೇ ವರ್ಷದಲ್ಲಿಯೇ ಸಾವಿರಕ್ಕೆ ೩೦ ರೂಪಾಯಿ ಲಾಭ ಹಂಚಿದೆ

ದಿ ಜನರಲ್ ಅಶ್ಯೂರನ್ಸ

ಸೋಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮೆ ಕಂಪನಿಗಳನ್ನು ಹಿಂದೆ ಒಗೆದು ಮುಂದೆ ಬಂದಿದೆ. ಇದರಿಂದ ಇದರಲ್ಲಿಯ ಕರ್ತೃತ್ವ ಶಕ್ತಿಯು ವ್ಯಕ್ತವಾಗುವದಲ್ಲದೇ, ಇದಕ್ಕಿಂತಲೂ ಹೆಚ್ಚಿನ ಪ್ರಗತಿಪರವಾದ ಕಂಪನಿಯೇ ಇಲ್ಲವೆಂಬುದು ಸಿದ್ಧವಾಗುತ್ತದೆ.

ಸುಲಭ ಕಂತು! ಸಾಕಷ್ಟು ಸೌಕರ್ಯ! ಹೆಚ್ಚಾ[illegible] ಲಾಭ!!!

ವಿಮೆಯ ಹಣ ಒಂದು ಕೋಟಿ! ೨೧ ತಿಂಗಳಲ್ಲಿ ಹೆಚ್ಚಾಗಿ ಉಳಿತಾಯವಾದದ್ದು ರೂ ೧,೮೯,೦೦೦

ಏಜಂಟರು ಬೇಕು! ಧಾರಾಳವಾದ ಕಮಿಶನ್!

ಎಸ್. ಕಬ್ಬೂರ ಬಿ. ಎ. ಎಫ್. ಎಸ್. ಅಜಮೀರ.

Apply to:- ***A. Ramachandra Rao***

Branch Secretary, opposit Minto Hospitle,

Bengalore City.

or

Agents at Bellary & Hubli.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ ೧೯೪೭

ವಾ. ಚಂದಾ ೧—೧೩—೦ ಮಾತ್ರ

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ.)

ಯದ್ಯತ್ ಪರವಶಂ ದುಃಖಂ । ಯದ್ಯದಾತ್ಮವಶಂ ಸುಖಂ ॥ — ಮನು

ಸಂಪಾದಕರು — ಮಂಗಳವೇಢೇ ರಾಜೇಂದ್ರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ | ಬಾಗಲಕೋಟೆ ರವಿವಾರ ಮಿತಿ ವೈಶಾಖ ಬಹುಳ ೧೩ ಶಕೆ ೧೮೪೯ ತಾ|| ೨೯ ೫-೧೯೨೭. Date 29—5—1927. | ಸಂಚಿಕೆ ೯

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವದು ಮತ್ತು ಜೋಡಿಸುವದು, ಅವುಗಳೊಳಗಿನ ಕೆಟ್ಟುಹೋದ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯಾಗಿಯು ಇಲ್ಲ ಸುರಿತವರಾಗುತ್ತಾರೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕನ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸರಿ ಸಮಂತವಾಗುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಉಳಿದಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ. ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದುಕೊಳ್ಳಿರಿ!

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.
೪೫೫ ಶನಿವಾರ ಪೇಠ ಜಮಖಂಡಿಕರ ವಾಡ ಪುಣೆ ಶಹರ.

S.C. Narayanacharya & Co.
Chowkhamba Benares City.

ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ ಜರಿಕಣ, ಜರಿಸೀರೆ, ಕಾಶ್ಮೀರ ಶಾಲು, ತಂಬಾಕು ರುದ್ರಾಕ್ಷಿ, ಕಸ್ತೂರಿ ಲಿಂಗಗಳೂ, ಸ್ಫಟಿಕದ ಮಣಿ ಮುಂತಾದ ಮಾಲೆಗಳ ಕ್ಯಾಟಲಾಗ ಕೋರಿದವರಿಗೆ ಇನಾಮವಾಗಿ ಕಳಿಸಲಾದೀತು

ವಿಳಾಸ:— ಎಸ್. ಚೋಖಂಬಿ ನಾರಾಯಣಾಚಾರ್ಯ
ಬನಾರಸ ಚೌಖಾಂಬಾ ಕಾಶಿ

S.U.N.& CO.
BENARES CITY.

ನಪುಂಸಕತ್ವ

ಧಾತು ವಿಕಾರ, ಸ್ವಪ್ನಾವಸ್ಥೆ, ಅಶಕ್ತತೆ ಇತ್ಯಾದಿಗಳಮೇಲೆ ಖಂಡಿತವಾಗಿ ಗುಣಕೊಡುವ ಮತ್ತು ಕಡೆತನಕ ಬಾಳುವ ದಿವ್ಯ ಔಷಧಿ! ಒಂದೇ ಗುಳಿಗೆ!!

ವಿಶೇಷ ಮಾಹಿತಿ ಪತ್ರದ್ವಾರ ತಿಳಿಯಿರಿ.

ವಾದಿರಾಜ ಜಹಾಗೀರದಾರ.
ಮು. ಪೋ. ಇಲಕಲ್ಲ. (ವಿಜಾಪೂರ)

ಕೊಳ್ಳೆಗಾಲಿನ ಪ್ರವಾಸವೂ ಕರ್ನಾಟಕವೂ.

(ಲೇ:- ದಿವಾಕರ ರಂಗರಾಯರು)

ನೀಲಗಿರಿ ಜಿಲ್ಲೆಯು ಪ್ರಾಧಾನ್ಯವಾಗಿ ಕನ್ನಡ ಜಿಲ್ಲೆ ಎಂಬುದನ್ನು ತಿಳಿದುಕೊಂಡು ಅಲ್ಲಿ ವಿಶೇಷ ಕೆಲಸವಾಯಿತು. ಕನ್ನಡಿಗರ, ಯಾವ ಕು:ಖದಲ್ಲಿರುವರು ಮುಂತಾದ ವಿಷಯಗಳನ್ನು ಮೊದಲೇ ತಿಳಿಸಿದ್ದೇನೆ ಇನ್ನು ಕೊಯಿಮುತ್ತೂರ ಜಿಲ್ಲೆಗೆ ಒಳಗಾದ ಕೊಳ್ಳೇಗಾಲ ತಾಲೂಕಿನ ಪರಿಸ್ಥಿತಿಯನ್ನು ವಿಚಾರಿಸಬೇಕಾಗಿದೆ.

ನಾನು ಕೊಳ್ಳೇಗಾಲಿಗೆ ಮೈಸೂರಿನಿಂದ ಹೋದೆನು. ಮೈಸೂರಿನಿಂದ ಕೊಳ್ಳೇಗಾಲಿಗೆ ಎರಡು ದಾರಿಗಳು. ಒಂದು ಮದ್ದೂರಿನ ಮೇಲಿಂದ ಇನ್ನೊಂದು ಚಾಮರಾಜ ನಗರದ ಮೇಲಿಂದ. ನಾನು ಚಾಮರಾಜ ನಗರದ ಮೇಲಿಂದ ಹೋದೆನು. ರೈಲು ಮೈಸೂರಿನಿಂದ ನಂಜನಗೂಡ ಮಾರ್ಗವಾಗಿ ಚಾಮರಾಜ ನಗರದ ವರೆಗೆ ಹೋಗುತ್ತದೆ. ಒಂದು ತಿಕೀಟಿಗೆ ೧೧ ಆಣೆ ಬೀಳುತ್ತದೆ. ಚಾಮರಾಜ ನಗರದಿಂದ ಕೊಳ್ಳೇಗಾಲಿಗೆ ೨೬ ಮೈಲಿನ ಪ್ರವಾಸವು. ಬಸ್ಸುಗಳು ೮-೪-೬ಕ್ಕೆ ಜಿಬ್ಬರನ್ನು ಕೂಡ್ರಿಸಿಕೊಂಡು ಹೋಗುತ್ತವೆ. ದಾರಿಯು ಅಷ್ಟು ಚನ್ನಾಗಿಲ್ಲ. ನಾವು ಹೋದ ದಿವಸವಂತೂ ನಮ್ಮ ಮೋಟಾರಿನವನು ಕೆಟ್ಟ ಎರೀ ದಾರಿಯಿಂದ ೩-೪ ಮೈಲು ಮೋಟಾರು ಒಯ್ದನು. ಹೀಗೆ ಏಕೆ ಎಂದು ಕೇಳಿದರೆ ಇದು ಸಮೀಪವಾಗುತ್ತದೆ ಎಂದು ಉತ್ತರ ಕೊಟ್ಟನು. ಆದರೆ ದಾರಿಯು ಅತಿಶಯ ಕೆಟ್ಟಿತ್ತು, ರಾತ್ರಿಯು ಹೊತ್ತು. ಕೊಳ್ಳೇಗಾಲ ಸಮೀಪಸಾಗುವಷ್ಟರಲ್ಲಿ ಯಮನಗಡನ ಸಮೀಪವಾಗುವ ಪ್ರಸಂಗವು ಎರಡು ಮೂರು ಸಾರೆ ಬಂದಿತ್ತು. ಆಷ್ಟರಲ್ಲಿ ಏನೋ ದೈವವಶಾತ್ ಪಾರಾದೆವು. ರಾತ್ರಿ ೧೦ ಘಂಟೆಗೆ ಕೊಳ್ಳೇಗಾಲಿಗೆ ಮುಟ್ಟಿದೆವು. ಅಲ್ಲಿ 'ಹೊಟೆಲ'—ಖಾನಾವಳಿಯಲ್ಲಿ ಊಟ ಮಾಡಿ ಟೌನಹಾಲಿನಲ್ಲಿ ಮಲಗಿದೆವು. ಎಲ್ಲ ಪರಿಯಿಂದಲೂ ಹೊಸ ಸ್ಥಳ. ನಮ್ಮ ಜೊತೆಗೆ ಕಣಿಯರ ದರವಾಗಿ ಪ್ರಯತ್ನಿಸುತ್ತಿರುವ ಕಗಡೂರ ರಾಮಚಂದ್ರರಾಯರು ಇದ್ದರು. ಅವರಿಂದ ಎಷ್ಟೋ ಸಹಾಯವಾಯಿತು.

ಕೊಳ್ಳೇಗಾಲಿನ ಸೀಮೆ:— ಉತ್ತರಕ್ಕೆ ಅಚ್ಚಗನ್ನಡ ಮೈಸೂರು, ಪೂರ್ವಕ್ಕೆ ಸೇಲಂ ಜಿಲ್ಲೆಯ ಧರ್ಮಪುರಿ ಹಾಗೂ ಹೊಸೂರ ತಾಲೂಕುಗಳು (ಇಲ್ಲಿ ಕನ್ನಡ ಹಾಗೂ ತಮಿಲು ಎರಡೂ ಭಾಷೆಗಳು ನಡೆಯುತ್ತಿವೆ) ದಕ್ಷಿಣಕ್ಕೆ ಕೊಯಿಮುತ್ತೂರ ಜಿಲ್ಲೆಯ ತಲವಡಿ ಎಂಬ ಕನ್ನಡ ಫಿರಕಾ. ಪಶ್ಚಿಮಕ್ಕೆ ಮತ್ತೆ ಅಚ್ಚಗನ್ನಡ ಮೈಸೂರು. ಕೊಳ್ಳೇಗಾಲ ತಾಲೂಕನ್ನು ಭೂಗೋಲಿಕ ದೃಷ್ಟಿಯಿಂದ ನೋಡಿದರೆ ಅದು ಮೈಸೂರ ಪಠಾರ ಸೀಮೆ (Table land) ಯ ಭಾಗವೇ. ಸ್ವಪೂರ್ವ ದಕ್ಷಿಣ ಸೀಮೆಗಳಲ್ಲಿ ನೀಲಗಿರಿಯ ಪರ್ವತದ ಒಂದು ಭಾಗ ಹಾಗೂ ಕಾವೇರಿ ನದಿ ಇರುವದರಿಂದ ಕೊಯಿಮುತ್ತೂರಕ್ಕೂ ಈ ತಾಲೂಕಿಗೂ ಏನೂ ಸಂಬಂಧವಿಲ್ಲದಂತೆಯೇ ಇದೆ. ಇಲ್ಲಿಯವರು ಜಿಲ್ಲೆಯ ಮುಖ್ಯ ಸ್ಥಾನವಾದ ಕೊಯಿಮುತ್ತೂರಿಗೆ ಹೋಗಬೇಕಾದರೆ ಮಹಾಪ್ರಯಾಸವಿದೆ. ಇಲ್ಲಿಯ ಜನರು ಕೇವಲ ಕಚೇರಿಯ ಕೆಲಸಕ್ಕಾಗಿ ಮಾತ್ರ ಕೊಯಿಮುತ್ತೂರಿಗೆ ಹೋಗುತ್ತಾರೆ. ಮಿಕ್ಕ ಯಾವ ವಿಶೇಷ ಸಂಬಂಧವನ್ನು ಇಡುವ ಕಾರಣವಿಲ್ಲ. ಹಾಗೂ ಗಂಡು ಹೆಣ್ಣುಗಳ ಮೂಲಕ ಆ ತರದ ಸಂಬಂಧವನ್ನು ಕೊಯಿಮುತ್ತೂರಿನ ಕೂಡ ಇಡುವದು ದುಸ್ಸಾಧ್ಯವಿದೆ.

ಜನಸಂಖ್ಯೆ ಮುಂತಾದ್ದು:— ಈ ತಾಲೂಕಿನ ಕ್ಷೇತ್ರಫಲವು ೧೦೭೨ ಚೌರಸ ಮೈಲು. ೧೯೩೧—೩೫ ರಲ್ಲಿ ಶಿಕ್ಷಣ ಖಾತೆಯವರು ಸರ್ವೆ ಮಾಡಿ ನೋಡಿದ ಪ್ರಕಾರ ಇಲ್ಲಿಯ ಜನಸಂಖ್ಯೆಯು ಒಟ್ಟು ೧೫೩೯೫೬ ಇರುವದು. ೭೫೦೦೦ ಹಿಂದುಗಳು, ೧೯೭೫೦ ಹಿಂದುಳಿದವರು, ೩೬೮೩ ಮುಸಲ್ಮಾನರು, ೮೯೬ ಹಿಂದೀ ಕ್ರಿಶ್ಚನರು ಹೀಗೆ ಅಂಕಿಗಳಿರುವವು. ನೂರರಲ್ಲಿ ೯೦ ಜನರು ಕನ್ನಡವನ್ನೇ ನುಡಿಯುತ್ತಾರೆ. ಸರಕಾರೀ ಶಿಕ್ಷಣ ವಿಭಾಗದವರು ಇದು ಕನ್ನಡ ಭಾಗವೆಂದೇ ತಿಳಿದಿದ್ದಾರೆ ಹಾಗೂ ಈ ತಾಲೂಕಿನ ಎಲ್ಲ ಶಾಲೆಗಳಲ್ಲಿ ಕನ್ನಡವು ಕಲಿಸಲ್ಪಡುತ್ತಿದೆ. ಸಬ್‌ರಜಿಸ್ಟ್ರರ ಕಚೇರಿಯಲ್ಲಿ ಕನ್ನಡ ಕಾಗದಗಳು ರಜಿಸ್ಟರ ಮಾಡಲ್ಪಡುತ್ತಿವೆ. ಆದರೆ ಕೋರ್ಟಿನ ಭಾಷೆ ಮಾತ್ರ ತಮಿಲು. ಯಾಕಂದರೆ ಕೊಯಿಮುತ್ತೂರ ಜಿಲ್ಲೆಯು ತಮಿಲು ಜಿಲ್ಲೆಯು. ಆ ಜಿಲ್ಲೆಯ ೮ ಒಳಗಾದ ತಾಲೂಕುಗಳಿಗಾಗಿ ಎಲ್ಲವೂ ತಿರುವು ಮುರುವು. ಕೋರ್ಟಿನಲ್ಲಿ ತಮಿಲು ಇರುವದರಿಂದ ಎಲ್ಲ ಕಚೇರಿಗಳಲ್ಲಿ ತಮಿಳಿಗೆ ಪ್ರಾಧಾನ್ಯ. ಕನ್ನಡವು ಅನವಸ್ಥೆಯಲ್ಲಿದೆ.

ಅಲ್ಲಿ ನಡೆದ ಕೆಲಸವು:— ಅದಿ ನಾವು ಮೇ ೭ನೇ ತಾರೀಖಿನ ರಾತ್ರಿ ೧೦ ಘಂಟೆಗೆ ಹೋಗಿ ಮುಟ್ಟಿದೆವು. ರಾತ್ರಿಯಲ್ಲಿ ಯಾವ ಕೆಲಸವೂ ಆಗುವದು ಸಾಧ್ಯವಿರಲಿಲ್ಲ. ಆದರೆ ಬೆಳಗ್ಗೆ ಊರಲ್ಲಿಯ ಪ್ರಮುಖರನ್ನೂ ಕನ್ನಡ ಅಭಿಮಾನಿಗಳಾದ ಕೆಲವರನ್ನೂ ಕಂಡೆವು. ಅವರ ಮನೆಮನೆಗೆ ಹೋಗಿ ಅವರಿಗೆ ನಾವು ಬಂದ ಉದ್ದೇಶವನ್ನು ಮಾಡತಕ್ಕ ಕಾರ್ಯವನ್ನೂ ತಿಳಿಸಿ ಹೇಳಿದೆವು. ಸಾಯಂಕಾಲದಲ್ಲಿ ಸಭೆ ಕೂಡಿಸತಕ್ಕದ್ದೆಂದು ನಿಶ್ಚಯವಾಯಿತು.

ಅಲ್ಲಿ ಹೆಸರಿಗೊಂದು ಕಾಂಗ್ರೆಸ ಕಮೀಟಿ ಇದೆ. ಆದರೆ ಅದರ ಕೆಲಸವು ಏನೂ ನಡೆಯದ್ದರಿಂದ ಕೆಲವು ವ್ಯಾಪಾರಸ್ಥರು ಕೂಡಿ ಸ್ವದೇಶ ಧರ್ಮರಕ್ಷಣೀ ಸಭೆ ಎಂಬುದನ್ನು ಏರ್ಪಡಿಸಿ ಕೆಲವು ಜನಹಿತದ ವಿಷಯಗಳನ್ನು ಕೈಕೊಂಡು ಕೆಲಸವನ್ನು ನಡೆಸುತ್ತಲಿದ್ದಾರೆ. ಇಲ್ಲಿ ಲಿಂಗವಂತರು, ವೈಶ್ಯರು ಹಾಗೂ ದೇವಾಂಗರು ಇವರೇ ಮುಖ್ಯವಾದ ಜನರು. ಇಲ್ಲಿ ರೇಸಿಮೆಯ ಉತ್ತಮೋತ್ತಮ ಬಟ್ಟೆಗಳು ನೇಯಲ್ಪಡುತ್ತಿವೆ. ಹಾಗೂ ಅದರ ವ್ಯಾಪಾರವು ಒಳ್ಳೇ ದೊಡ್ಡ ಪ್ರಮಾಣದ ಮೇಲೆ ನಡೆಯುತ್ತಿದೆ. ಇದು ವ್ಯಾಪಾರದ ಸ್ಥಾನವಿರುವದರಿಂದ ಎಲ್ಲ ವಿಷಯಗಳಲ್ಲಿಯೂ ವ್ಯಾಪಾರೀ ದೃಷ್ಟಿಯು ಹೆಚ್ಚು. ಏಕೀಕರಣದಿಂದ ನಮಗೇನು ಲಾಭ ಎಂಬ ಪ್ರಶ್ನೆಯನ್ನು ಕೇಳುವವರೇ ಹೆಚ್ಚು.

ಮುಂಜಾನೆ ವ್ಯಕ್ತಿಶಃ ಅನೇಕರಿಗೆ ಭೆಟ್ಟಿಯಾಗಿ ಅವರಿಗೆ ಏಕೀಕರಣದ ವಿಷಯವನ್ನು ತಿಳಿಸಿ ಕೊಟ್ಟ ಮೇಲೆ ಸಾಯಂಕಾಲ ೫ ಘಂಟೆಗೆ ಮಹಾತ್ಮಾಜಿಯವರ ಭಾವಚಿತ್ರ ಹಾಗೂ ರಾಟೆಯ ಮೆರವಣಿಗೆ ತೆಗೆದು ಊರಲ್ಲಿ ತಿರುಗಾಡಿದೆವು. ಆ ಮೇಲೆ ೬॥ ಘಂಟೆಗೆ ಧಿಯಾಸಾಫಿಕಲ್ ಲಾಜದ ಬೈಲಿನಲ್ಲಿ ಸಾರ್ವಜನಿಕ ಸಭೆ ಸೇರಿತು. ೬೦೦—೭೦೦ ಜನರು ಬಂದಿದ್ದರು. ಶ್ರೀ. ಬಾಬುರಾವ ಪಟವರ್ಧನರೇ ಸಭೆಯ ಅಧ್ಯಕ್ಷರಾದರು. ಆ ವೇಳೆ ನಾನು ೧ ಘಂಟೆಯ ವರೆಗೆ ಎಲ್ಲ ವಿಷಯವನ್ನು ಚರ್ಚಿಸಿ ಕೊಳ್ಳೇಗಾಲಿನವರ ಕರ್ತವ್ಯವೇನೆಂಬುದನ್ನು ಏಕೀಕರಣವಾಗುವದರಿಂದ ಆಗುವ ಲಾಭಗಳನ್ನೂ, ಕೋರ್ಟಿನಲ್ಲಿ ಸಹ ಕನ್ನಡವೇ ನಡೆಯಬೇಕೆಂದು ನೀವು ಹಟ ಹಿಡಿಯಬೇಕೆಂದೂ ಹೇಳಿದೆನು. ಜನರು ಒಳ್ಳೇ ಆಸ್ಥೆಯಿಂದ ಕೇಳಿಕೊಂಡು ತಲೆದೂಗಿದರು. ಈ ಕಾರ್ಯದಲ್ಲಿ ಶ್ರೀ ಆರ್. ರಾಜೇರಾವ, ಎಸ್ ಸಂಜೀವರಾವ ಶೆಟ್ಟಿ, ಕಾರ್ಯದರ್ಶಿ ಕುಸುಮಾಂಬಾ ಗ್ರಂಥಾಲಯ, ಪಿ, ವೆಂಕಟಕೃಷ್ಣ ಶೆಟ್ಟಿ ಸರಾಫ, ಜೀ ಹೀ. ಮಲ್ಲಪ್ಪಾ ಮುಂತಾದವರು ಬಹಳೇ ಸಹಾಯ ಮಾಡಿದರು. ಕರ್ನಾಟಕ ಏಕೀಕರಣವಾಗಬೇಕು ಎಂಬ ಬಗ್ಗೆ ಬೇಕಾದ ಒಂದು ಲಕ್ಷ ಸಹಿಗಳನ್ನು ಮಾಡಿಸುವದರಲ್ಲಿ ನಾವು ಸಹಾಯ ಮಾಡುತ್ತೇವೆಂದು ಎಲ್ಲರೂ ಒಪ್ಪಿದರು.

ಮಾರನೇ ದಿನ ೬ ಘಂಟೆಗೆ ನಾವು ಶಿವಸಮುದ್ರಕ್ಕೆ ಹೋಗಿ ಮದ್ದೂರಿನ ಮೇಲಿಂದ ಬೆಂಗಳೂರಿಗೆ ಬಂದು ಮುಟ್ಟಿದೆವು. ಮದ್ದೂರು ಕೊಳ್ಳೇಗಾಲಿನಿಂದ ೪೦ ಮೈಲು. ಬಸ್ಸುಗಳಿವೆ. ಸರಿಗೆ ೨ ರೂಪಾಯಿ ದರವಿದೆ. ಮದ್ದೂರಿನಿಂದ ಬೆಂಗಳೂರು ರೇಲಿನಿಂದ ೪೪ ಮೈಲು ಇದೆ. (ಕರ್ಮವೀರ)

ಮಹಾತ್ಮರ ಪ್ರಕೃತಿಯು ಸುಧಾರಿಸುತ್ತಲಿದೆ. ಜೂನ ತಿಂಗಳ ಕೊನೆಯ ವರೆಗೆ ಸಂಪಿಯಲ್ಲಿಯೇ ಇರುವರು.

ಕನ್ನಡಿಗ.

ಬಾಗಲಕೋಟೆ ವೈಶಾಖ ಬಹುಳ ೧೩ ಶಕೆ ೧೮೫೧.

ಸಂಪಾದಕರ ಭೂಮಿ

(೬೦)

ನನ್ನ ಮನಸಿನ ಮೋಹವಾದಿ ಕಟ್ಟಿವೆನಾನು !
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊನ್ನು!
ಅಕ್ಷದಾದರು ಚಿನ್ನ ಮೋಹಬಸ್ತಿಯು ನೊಂದು ಬಿನ್ನಯಾಕಾಶದಲ್ಲಿ!
ನನ್ನೊದೇಹವು ನಿನ್ನ ವೀರಶಾಸನಕಾಗಿ !
ಕನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ಕಣ್ಣಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೊ॥

—ಅಂಬಿಕಾತನಯ ದತ್ತ

ಕೊಳ್ಳೇಗಾಲೆಂದರೆ ಕೊಯಿಮುತ್ತೂರ ಜಿಲ್ಲೆಯಲ್ಲಿ ಒಂದು ತಾಲೂಕ. ಈ ತಾಲೂಕಿನಲ್ಲಿಯ ಕನ್ನಡಿಗರ ಸ್ಥಿತಿಯನ್ನು ಶ್ರೀ ದಿವಾಕರರು ಚನ್ನಾಗಿ ಜನರ ಮುಂದಿಟ್ಟಿರುವರೆಂಬದು ಇದೇ ಸಂಚಿಕೆಯಲ್ಲಿ ಬೇರೆ ಕಡೆಗೆ ಪ್ರಕಟವಾದ ಅವರ ಲೇಖನದಿಂದ ತಿಳಿಯುವದು. ಈ ಬಗ್ಗೆ ಶ್ರೀ ದಿವಾಕರರನ್ನು ಕನ್ನಡಿಗರು ಅಭಿನಂದಿಸತಕ್ಕದ್ದು. ಕೊಯಿಮುತ್ತೂರ ಜಿಲ್ಲೆಯಲ್ಲಿ ಕನ್ನಡ ತಾಲೂಕುಗಳೆಷ್ಟಿವೆ; ಸೇಲಮ ಜಿಲ್ಲೆಯಲ್ಲಿ ಕನ್ನಡ ಭಾಗವೆಷ್ಟಿದೆಂಬದನ್ನು ಶ್ರೀ. ದಿವಾಕರರು ನೋಡಿಬಂದು ಅಲ್ಲಿಲ್ಲ ಕನ್ನಡಿಗರನ್ನು ಶ್ರೀ. ದಿವಾಕರರು ಎಚ್ಚರಗೊಳಿಸಿದ್ದರೆ ನಾವು ಇನ್ನೂ ಹೆಚ್ಚಾಗಿ ಅವರಿಗೆ ಋಣಿಯಾಗುತ್ತಲಿದ್ದೆವು ಇರಲಿ. ಈಗ್ಗೆ ಶ್ರೀ. ದಿವಾಕರರು ನೀಲಗಿರಿ ಹಾಗೂ ಕೊಳ್ಳೇಗಾಲಗಳಲ್ಲಿಯ ಕನ್ನಡಿಗರಲ್ಲಿ ಕೊಂಚ ಎಚ್ಚರಿಕೆಯ ಬೀಜಗಳನ್ನು ಬಿತ್ತಿ ಬಂದಿರುವರು. ಅವರಂತೆಯೇ ಉಳಿದ ಕನ್ನಡನಾಡಿನ ಧುರೀಣರು, ಇನ್ನು ಮೇಲಾದರೂ ಮೇಲಿಂದ ಮೇಲೆ ಅಲ್ಲಿಗೆ ಹೋಗಿ, ಅವರು ಬಿತ್ತಿದ ಬೀಜಕ್ಕೆ ನೀರೆರೆದು ಬರುವದು ಅತ್ಯವಶ್ಯವಾದುದು. ಸಾಹಿತ್ಯ ಪರಿಷತ್ತು, ಏಕೀಕರಣ ಸಭೆ, ವಿದ್ಯಾವರ್ಧಕ ಸಂಘ ಕಾಂಗ್ರೆಸ ಕಮೀಟಿ ಇವೇ ಮೊದಲಾದ ಸಂಸ್ಥೆಗಳಿಗೆ ಈ ವಿಷಯದಲ್ಲಿ ವಿಶೇಷ ಅಭಿಲಾಷೆಯಿದ್ದಂತೆ ಕಂಡುಬರುವದಿಲ್ಲ! ಹೆಸರಿಗೆ ದೊಡ್ಡ ಸಂಸ್ಥೆಗಳೇನೋ ನಿಜ ಕಾರ್ಯ ಮಾಡುವದರಲ್ಲಿ ಎಲ್ಲ ಸಂಸ್ಥೆಗಳಿಗೂ ಆಲಸ್ಯ. ಕಾಂಗ್ರೆಸ ಕಮೀಟಿಗೆ ಜನಸಹಾಯವೂ ಧನಸಹಾಯವೂ ಚನ್ನಾಗಿದೆ ಆದರೆ ದಕ್ಷಿಣ ದೇಶದ ಕನ್ನಡಿಗರ ಸ್ಥಿತಿಯೆಂದರೆ ನಮ್ಮ ಕಾಂಗ್ರೆಸ ಕಮೀಟಿಗಳಿಗೆ ಅಷ್ಟೊಂದು ಪ್ರೇಮವಿಲ್ಲ. ಅಂತೆಯೇ, ಕರ್ನಾಟಕಕ್ಕೆ ಕಾಂಗ್ರೆಸ ಪ್ರಾಂತವು ದೊರೆತು, ಎಂಟು ವರ್ಷಗಳಾಗುತ್ತ ಬಂದರೂ, ಅತ್ತ ಕಡೆಯ ಕರ್ನಾಟಕದ ಭಾಗಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವದರ ಕಡೆಗೆ ಕಾಂಗ್ರೆಸ ಕಮೀಟಿಯವರು ಕಿಂಚಿತ್ತಾದರೂ ಲಕ್ಷ್ಯ ಪುರೈಸಿಲ್ಲ. ಕರ್ನಾಟಕದ ಭಾಗವು ಎಷ್ಟೆಂಬದನ್ನು ಸರಿಯಾಗಿ ಕಂಡುಕೊಳ್ಳಲಿಕ್ಕೂ ಈ ಕಮೀಟಿಯು ಸಿದ್ಧವಾಗಿಲ್ಲವೆಂದ ಮೇಲೆ, ಅನಂತಪೂರ ಸೇಲಂ ಕೊಯಿಮುತ್ತೂರ, ನೀಲಗಿರಿಗಳಲ್ಲಿಯ ಕನ್ನಡಿಗರನ್ನು ಜಾಗೃತಗೊಳಿಸಲು ಇವರು ಪರ್ಯಟನ ಮಾಡುವ ಮಾತು ದೂರವೇ ಉಳಿಯಿತು. ಶ್ರೀ. ದೇಶಪಾಂಡೆ ಗಂಗಾಧರರಾಯರ ಮನಸ್ಸಂತೂ, ಈ ವಿಷಯದಲ್ಲಿ ಹೊರಳದು. ಅವರನ್ನು ಬಿಟ್ಟರೆ, ಈ ಬಗ್ಗೆ ಕಳವಳದಿಂದ ಕಾರ್ಯ ಮಾಡಿಸುವ ಕಾರ್ಯವು ಶ್ರೀ. ಕರ್ನಾಟಕಭೂಷಣ ಕೌಜಲಗಿ ಶ್ರೀನಿವಾಸರಾಯರನ್ನೇ ಕೂಡಿದೆ ಹಳೇ ಹುದ್ದರಿಗಳಲ್ಲಿ ಕರ್ನಾಟಕದ ಬಗ್ಗೆ ಚಿಂತಿಸುವರೆಂದರೆ ಕರ್ನಾಟಕ ಭೂಷಣರೇ. ಅಂತೆಯೇ ಅವರಿಗೆ ಕನ್ನಡಿಗರು ಪ್ರೀತಿಯಿಂದಲೂ ಅಭಿಮಾನದಿಂದಲೂ ಕರ್ನಾಟಕ ಭೂಷಣರೆಂದು ಕರೆಯುತ್ತಲಿರುವರು. ಈಗ್ಗೆ ಶ್ರೀ. ದಿವಾಕರರ ಅನುಭವವು ಕನ್ನಡಿಗರೆದುರಿನಲ್ಲಿದೆ ಕಾಂಗ್ರೆಸ ಕಮೀಟಿಗಾದರೂ ಜನರನ್ನು ಹುರಿದುಂಬಿಸುವಂತಹ ಕಾರ್ಯದ ಅಭಾವವಿದೆ. ಇಂತಹ ಸಮಯದಲ್ಲಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ಸ ಕಮೀಟಿಯು ಎಚ್ಚತ್ತು, ತನ್ನ ಕಾರ್ಯವನ್ನು ತಾನು ಮಾಡಿ, ಜನರ ಆದರಕ್ಕೆ ಹೆಚ್ಚಾಗಿ ಪಾತ್ರವಾಗುವದು ಹಿತ, ಇದು ಏಕೀಕರಣ ಸಂಘದ ಕಾರ್ಯವೆಂದು ಜವಾಬ್ದಾರಿಯನ್ನು ತಪ್ಪಿಸುವದು ಕಾಂಗ್ರೆಸ ಕಮೀಟಿಗೆ ಒಪ್ಪದು ಕರ್ನಾಟಕದ ಸಂಪೂರ್ಣ ಭಾಗಗಳನ್ನು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯ ವಶದಲ್ಲಿಟ್ಟುಕೊಳ್ಳುವದು, ಈ ಕಮೀಟಿಯ ಆದ್ಯ ಕರ್ತವ್ಯವು. ಇನ್ನು "ಆದ್ಯವಾಯಿತು; ಪಾತ್ಯವಾಯಿತ; ಕನ್ನಡ–ಪನ್ನಡ ನಮಗೆ ಬೇಕಿಲ್ಲ; ಖಾದೀ ಕೆಲಸವನ್ನು ಮಾತ್ರ ನಾವು ಮಾಡುವೆ"ವೆಂದು ಪ್ರಾಂತಿಕ ಮಂಡಲವು ಉಸುರ್ಗರೆದರೆ ಕರ್ನಾಟಕದ ಅದೃಷ್ಟದ ದಿನಗಳು ಇನ್ನೂ ಹೋಗಿಲ್ಲವೆಂದೆನ್ನಬೇಕಾಗುವದು.

'ತಾಸೇ' ಎಂಬದೊಂದು ವಿಚಿತ್ರ ವಾದ್ಯವು ಭರತಖಂಡದಲ್ಲಿ ರೂಢವಾಗಿದೆ. ಇದರ ಕರ್ಕಶ ಶಬ್ದವನ್ನು ಕೇಳಿದರೆ ಯಾವನಿಗಾದರೂ ಆನಂದವಾಗದು. ಆದರೂ ಮಂಗಳ ಪ್ರಸಂಗಗಳಲ್ಲೆಲ್ಲ ಈ ವಾದ್ಯವು ಮೆರೆದಾಡುತ್ತದೆ ಎಷ್ಟು ಬೇಗನೇ ನಮ್ಮ ಸಮಾಜದವರು ಇದಕ್ಕೆ ಬಹಿಷ್ಕಾರ ಹಾಕುವರೋ ಅಷ್ಟು ಕಲ್ಯಾಣವೇ ಇದೆ. ಪ್ರತಿಯೊಬ್ಬನು 'ತಾಸೇ' ಎಂದ ಮಾತ್ರಕ್ಕೆ ಅಸಹ್ಯಪಡುವನು; ಆದರೆ ಯಾವನೊಬ್ಬನು ಅವನ್ನು ಮಂಗಲ ಕಾಲದಲ್ಲಿ ಬರಮಾಡಿಕೊಳ್ಳದೇ ಇರುವದಿಲ್ಲ. 'ತಾಸೇ' ಈ ಶಬ್ದದಿಂದಲೇ ಇದು ಅರಬ್ಬೀ ದೇಶದಿಂದ ಬಂದುದೆಂಬದಾಗಿ ಊಹಿಸಬಹುದಾಗಿದೆ. ತಾಸೇ ಬಾರಿಸುವವರು ಕೇವಲ ಮುಸಲ್ಮಾನರೇ. ಮುಸಲ್ಮಾನರ ರಾಜ್ಯದಾಡಳಿತೆಯಲ್ಲಿ ಇದರ ಪ್ರಸರವು ಹೆಚ್ಚಿರಬೇಕು. ನಮ್ಮ ನಾಡಿನ ವಾದ್ಯಗಳಾದ 'ಸಂಬಾಳ,' 'ಕರಡೀಮಜಲು'ಗಳು ಬೇಕಾದಷ್ಟು, ಇಂಪಾಗಿವೆ. ಆದರೆ ಅವನ್ನು ನಾವು ತಿರಸ್ಕರಿಸಿ, ಈ 'ತಾಸೇ', 'ಬ್ಯಾಂಡ'ಗಳಿಗೆ ಮೋಹಿಸಿದ್ದು, ನಮ್ಮ ದೌರ್ಬಲ್ಯವನ್ನು ಸಿದ್ಧಪಡಿಸುತ್ತಲಿವೆ. ಈ ಬಗ್ಗೆ ಮುಖಂಡರುಗಳ ಸಂಗಡ ಮಾತನಾಡಿದರೆ, "ಆಗದು, ಅನೇನು ಸರಿಯಲ್ಲ"ವೆಂದು ಎಲ್ಲರೂ ಹೇಳುವರು. ಆದರೆ ಅದೋ ನೋಡಿ, ಅವರ ಸ್ವಂತ ಮನೆಯಲ್ಲಿ ಕಾರ್ಯಗಳು ನಡೆದರೆ ಅವೇ ಸಿದ್ಧವಾಗಿ ಬರುತ್ತಲಿವೆ. 'ಸಮಾಜದಲ್ಲಿಯ ರೂಢಿ'ಎಂಬದಾಗಿ ಅವರು ಸುಮ್ಮನಿರುತ್ತ ಹೋದರೆ, ಭಾರತೀಯರಲ್ಲಿ ನಿಜವಾದ ಕಳಕಳಿಯು ಉದ್ಭವವಾಗುವದು ಹೇಗೆ?

ನಾಗಪೂರ ಸತ್ಯಾಗ್ರಹಕ್ಕೆ ಈಗ್ಗೆ ಒಳ್ಳೇ ಕಳೆಯೇರಿದೆ. ಭಾರತೀಯರನ್ನು ಅನೇಕ ಕಾನೂನುಗಳಿಂದ ಬ್ರಿಟಿಶ ಸರಕಾರದವರು ಬಿಗಿದಿರುವದು ಸರಿಯಷ್ಟೇ ಅಂತಹ ಕಾನೂನುಗಳಲ್ಲಿ

ಶಸ್ತ್ರದ ಕಾನೂನು ಒಂದು. ಶಸ್ತ್ರ ಧರಿಸುವದು ಪ್ರತಿಯೊಬ್ಬ ಮಾನವನ ಹಕ್ಕಿನದು. ಇದಕ್ಕೆ ಸರಕಾರದ ಅಪ್ಪಣೆಯೇನೂ ಅವಶ್ಯವಿಲ್ಲೆಂದು ನಾಗಪೂರದಲ್ಲಿ ಶ್ರೀ ಅವಕೀಯೆಂಬವರು ಸಾರಿರುವರು. ಮತ್ತೂ ತಮ್ಮದೊಂದು "ಕ್ರಾಂತಿಕಾರರ ಚಿಕ್ಕ ಸೈನ್ಯ"ವನ್ನು ಸಿದ್ಧಪಡಿಸಿದ್ದಾರೆ. ೩೦೧ ಜನರು ಈಗಾಗಲೇ ಈ ಸೈನ್ಯವನ್ನು ಸೇರಿ, ಸರಕಾರದ ಅಪ್ಪಣೆಯಿಲ್ಲದೇ, ಶಸ್ತ್ರ ಧರಿಸಿ, ಬೀದಿಯಲ್ಲಿ ತಿರುಗುತ್ತಲಿದ್ದಾರೆ. ಸರಕಾರದವರು ಅವರನ್ನು ಹಿಡಿದು, ಖಟ್ಲೆ ಮಾಡಿ, ಶಿಕ್ಷಿಸುತ್ತಲಿದ್ದರೂ, ಒಬ್ಬರ ಹಿಂದೊಬ್ಬರು ಪುಟಪುಟಿದು "ಸೈನಿಕ"ರು ಬರುತ್ತಲಿರುವರು. ಹೀಗೆ ಈ ಚಳವಳವು ವೃದ್ಧಿಯಾಗುತ್ತಲಿರುವದನ್ನು ಕಂಡು, ಸರಕಾರದವರು ಮುಖ್ಯ ಸೈನಿಕನಾದ ಅವರಿಯವರನ್ನು ಒಂದಿಸಿದ್ದಾರೆ. ಅವರನ್ನು ಹಿಡಿದ ದಿನ ನಾಗಪೂರದಲ್ಲಿ ಹರ್ತಾಳವಾಯಿತು. ಜನರ ಬೆಂಬಲವು ಈ ಚಳವಳಕ್ಕೆ ಚನ್ನಾಗಿದೆಂಬುದು ಈ ಹರ್ತಾಳದಿಂದ ಸಿದ್ಧವಾಗುತ್ತದೆ. ಕಾಂಗ್ರೆಸ ಕಮಿಟಿಯವರು ಸಹ ಈ ಚಳವಳದ ಗುಟ್ಟನ್ನು ಪರೀಕ್ಷಿಸಲು ಪ್ರತಿನಿಧಿಗಳನ್ನು ನೇಮಿಸಿರುವರು. ಈ ಪ್ರತಿನಿಧಿಗಳ ವರದಿಯನ್ನು ನಾವು ಈಗ್ಗೆ ನಿರೀಕ್ಷಿಸಬೇಕಾಗಿದೆ.

ಬೆಂಗಳೂರಿನಲ್ಲಾದ ಕರ್ನಾಟಕ ಸಾಹಿತ್ಯ ಸಮ್ಮೇಲನದಲ್ಲಿ ನಡೆದ ತೀರ್ಮಾನುಗಳೆಲ್ಲ ಈ ವರೆಗೆ ನಮ್ಮ ಕೈಸೇರಿಲ್ಲ. ಕನ್ನಡ ನಾಡಿನ ಪ್ರಸಿದ್ಧ ಜನರ ಯಾದಿಯೊಂದನ್ನು ಒಂದು ವರ್ಷದಲ್ಲಿ ಪ್ರಸಿದ್ಧಿಸಬೇಕಾಗಿ ಒಂದು ತೀರ್ಮಾನವಾಗಿದೆ. ಇದರ ಯಾದಿಯಲ್ಲಿ ವ್ಯಾಪಾರಸ್ಥರ ಹೆಸರು ಇರುವದಿಲ್ಲ. ಪರಸ್ಪರ ಕರ್ನಾಟಕದ ಭಾಗಗಳ ನಿಕಟ ಸಂಬಂಧವು ವ್ಯಾಪಾರದಿಂದಲೇ ಹೆಚ್ಚು ಒದಗಿಬರುವದಾದ್ದರಿಂದ, ಯಾವ ಯಾವ ಭಾಗದಲ್ಲಿ ಯಾವ ವ್ಯಾಪಾರವು ಹೆಚ್ಚಾಗಿ ನಡೆಯುವದು; ಅವನ್ನು ನಡಿಸುವ ಜನರಾರೆಂಬದನ್ನು ಅವಶ್ಯವಾಗಿ ಸಾಹಿತ್ಯ ಪರಿಷತ್ತಿನವರು ಕಲೆಹಾಕಿ, ಈ ಗ್ರಂಥದಲ್ಲಿ ಪ್ರಕಟಿಸಬೇಕಾಗಿ ನಮ್ಮ ಸೂಚನೆ. ಕನ್ನಡಿಗರು ಕನ್ನಡದಲ್ಲಿಯೇ ಪತ್ರವ್ಯವಹಾರವನ್ನು ಬೆಳೆಸಬೇಕು; ಸಹಿ ಮಾಡಬೇಕೆಂದು 'ಕನ್ನಡಿಗ'ನು ಹುಟ್ಟಿದಾರಭ್ಯ ಹೇಳುತ್ತಿರುವನು. ಸಾಹಿತ್ಯ ಸಮ್ಮೇಲನದಲ್ಲಿ ಈ ಸಲ ನಿರ್ಣಯರೂಪದಿಂದ ಕನ್ನಡಿಗರೆದುರಿನಲ್ಲಿಡಲ್ಪಟ್ಟಿದೆ. ಇದಕ್ಕೆ ಅಖಿಲ ಕನ್ನಡನಾಡಿನ ಸಮ್ಮೇಲನದಂತಹ ಅಧಿಕಾರವುಳ್ಳ ಸಂಸ್ಥೆಯ ಬೆಂಬಲವೀಗ ದೊರೆತಿದ್ದು ಕನ್ನಡಿಗರು ಇನ್ನಾದರೂ ಅದನ್ನು ಆಚರಣೆಯಲ್ಲಿ ತರುವರಾಗಿ ಆಶಿಸುತ್ತೇವೆ. ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಕನ್ನಡಿಗರ ಸಹಿಯನ್ನು ದೊರಕಿಸಬೇಕಾಗಿ ಗೊತ್ತಾಗಿದೆ. ಬೆಂಗಳೂರಿನ ಡಿ. ವಿ. ಗುಂಡಪ್ಪನವರು ಈ ಮಂಡಲದ ಕಾರ್ಯದರ್ಶಿಗಳು. ಡಾ. ಯೂ. ರಾಮರಾಯರೂ, ಶ್ರೀ ಆಲೂರ ವೆಂಕಟರಾಯರೂ ಸಭಾಸದರು. ಕಾರ್ಯವು ಮಾತ್ರ ಹೇಗೆ ಕೊನೆಗಾಣುವದೋ ನೋಡಬೇಕು. ಕನ್ನಡ ಪಂಡಿತರುಗಳ ಅಧಿಕಾರ, ವೇತನ ಮೊದಲಾದವುಗಳು ಪದವೀಧರರಂತಿರಬೇಕಾಗಿಯೂ ನಿರ್ಣಯವಾಗಿದೆ.

ಮಕ್ಕಳ ವಾರವು (Baby week) ಅನೇಕ ಸ್ಥಳಗಳಲ್ಲಿ ಇತ್ತಿತ್ತ ಆಚರಿಸಲ್ಪಟ್ಟಿದೆ; ಪಡುತ್ತಲಿದೆ. ಈ ಸಲ ನಮ್ಮ ಬಾಗಲಕೋಟೆಗೂ ಈ ವಾರವು ಬರುವ ತಿಂಗಳಲ್ಲಿ ಬರುವದು! ಶಿಶುಸಂಗೋಪನೆಯ ವಿಷಯದಲ್ಲಿ ಜನರಲ್ಲಿದ್ದ ತಪ್ಪು ತಿಳುವಳಿಕೆಗಳನ್ನು ದೂರಮಾಡಿ, ಆಧುನಿಕ ಸುಧಾರಣೆಯ ಹೊಸ ಹೊಸ ಶೋಧಗಳ ಲಾಭವನ್ನು ಜನರಲ್ಲಿ ಹರಡಬೇಕೆಂಬ ಉದ್ದೇಶದಿಂದ ಈ ಶಿಶುಸಪ್ತಾಹವು ಆಚರಿಸಲ್ಪಡುವದು ಸುಯೋಗ. ಆದರೆ ಬಡತನದಲ್ಲಿ ಮುಳು ಮುಳುಗಿ ಜೀವ ಕಳೆದುಕೊಳ್ಳುತ್ತಿರುವ ಭರತಖಂಡದ ದರಿದ್ರ ರೈತರಲ್ಲಿ ಇಂತಹ "ವಾರ"ಗಳ ಲಾಭವನ್ನು ಹೊಂದುವಷ್ಟು ಉತ್ಸಾಹವಿಲ್ಲ. ಶ್ರೀಮಂತರ ಹಾಗೂ ಮಧ್ಯಮಸ್ಥಿತಿಯ, ಜನರಲ್ಲಿ ನಿಜವಾದ ಜ್ಞಾನಪ್ರಚಾರ ಮಾಡುವ ಉದ್ದೇಶದಿಂದ ಈ 'ವಾರ'ಗಳು ಏರ್ಪಡಿಸಲ್ಪಡುತ್ತಿದ್ದರೆ, ಆ ಮಾತು ಬೇರೆ. ಏನೇ ಆದರೂ, ಕೇವಲ ಪರದೇಶದ ಉಪಕರಣ, ಪರದೇಶದ ಔಷಧ, ಪರದೇಶದ ಗೊಂಬೆಗಳ ಪ್ರಚಾರಕ್ಕಾಗಿ ಈ ವಾರಗಳಿರದಿದ್ದರೆ ಭಾರತೀಯರು ಈ ಕಾರ್ಯದಲ್ಲಿ ಮನಸ್ಸನ್ನು ಹಾಕಬಹುದು. ಶಿಶುಗಳಿಗೆ ಕೊಡುವ ಅನ್ನಗಳಲ್ಲಿ (Foods) ನುರಿತ ದೇಶೀ ಜನರಿಂದಾದವುಗಳಿಗೂ ಆಯುರ್ವೇದ ಔಷಧಗಳಿಗೂ, ಚನ್ನಪಟ್ಟಣ, ಗೋಕಾವಿ ಪುಣೆ, ನಾಸಿಕ, ಮುಂಬೈಗಳಲ್ಲಿ ಸಿದ್ಧವಾಗುವ ಹುಡುಗರ ಆಟಿಗೆಗಳಿಗೂ, ಈ 'ವಾರ'ಗಳ ಚಾಲಕರಿಂದ ಪ್ರೋತ್ಸಾಹನವು ದೊರೆಯುವಂತಿದ್ದರೆ, ಬಾಗಲಕೋಟೆಯ ನಗರವಾಸಿಗಳು ಅವಶ್ಯವಾಗಿ ಈ ಕಾರ್ಯದಲ್ಲಿ ನೆರವಾಗಬಹುದು. ಆದರೆ ಕೇವಲ "ಮೆಲಿನ್ಸಫುಡ್" ಹಾಗೂ ಯುರೋಪಿಯ ಔಷಧಗಳಿಗೇ ಆಶ್ರಯ ದೊರೆತು, ದೇಶೀಯ ಉಪಕ್ರಮಗಳಿಗೆ ಬಹಿಷ್ಕಾರವು ದೊರೆತರೆ, ಈ ವಾರಕ್ಕೂ ಬಾಗಲಕೋಟೆಯ ನಾಗರಿಕರು ಬಹಿಷ್ಕಾರ ಹಾಕಬೇಕಾಗುವದು. ಈ ವಿಷಯವನ್ನು ಇಲ್ಲಿಯ ಕಾರ್ಯದರ್ಶಿಗಳೆದುರಿಗೆ ಇಟ್ಟು, ಅವರ ಅಭಿಪ್ರಾಯವನ್ನು ಕೇಳಿದೆವು. ರಾಷ್ಟ್ರೀಯ ದೃಷ್ಟಿಗೆ ಬಹಿಷ್ಕಾರ ಹಾಕುವ ಕಲ್ಪನೆಯು ಕೂಡ ತಮ್ಮಲ್ಲಿಲ್ಲವೆಂದೂ, ದೇಶೀಯ ಔಷಧ, ಅನ್ನ, ಆಟಗಳಿಗೂ ಸ್ಥಳ ದೊರೆಯುವದೆಂದೂ, ಕಾರ್ಯದರ್ಶಿಗಳು ಅಭಿವಚನ ಕೊಟ್ಟಿದ್ದರಾದ್ದರಿಂದ ಜನರು ಸಂಶಯಪಡುವ ಕಾರಣವಿಲ್ಲ.

ರಂಗಭೂಮಿಯ ಸಮಾಚಾರ.

ಅಂಬಾಪ್ರಸಾದಿಕರು 'ಸಂಪೂರ್ಣ ರಾಮಾಯಣ'ವನ್ನು ನಾಗರದಲ್ಲಿ ಅಭಿನಯಿಸಿ, ಈಗ್ಗೆ ಕಡೂರಿಗೆ ಬಂದಿರುವರು.

ಶ್ರೀ ಗರೂಡರು ಕೊಲ್ಹಾಪೂರದಲ್ಲಿ ಕನ್ನಡ ನಾಟಕ ಮಂಡಳಿಯ ವಿಜಯಧ್ವಜವನ್ನೇರಿಸಲು ನಿಶ್ಚಯಿಸಿ, ಅಲ್ಲಿಯ ನಾಟಕ ಶಾಲೆಯು ದೊರೆಯುವದಕ್ಕಾಗಿ, ವಿಜಾಪೂರದಲ್ಲಿ ಕಾದಿರುವರು. ಕೊಲ್ಹಾಪೂರಿನ ಹಂಡಬಂಡ ಕನ್ನಡಿಗರಲ್ಲಿ ಕರ್ನಾಟಕತ್ವದ ಕಲ್ಪನೆಯನ್ನು ಶ್ರೀ ಗರೂಡರು ಬಿತ್ತಿ, ಕನ್ನಡಿಗರ ಆದರಕ್ಕೆ ಹೆಚ್ಚಾಗಿ ಪಾತ್ರರಾಗಲಿ;

ಚಾತಕಪಕ್ಷಿಯಂತೆ ನಿರೀಕ್ಷಿಸುತ್ತಲಿದ್ದ ಬಾಗಲಕೋಟೆಯ ರಸಿಕವೃಂದವು ಶ್ರೀ ಕೃಷ್ಣ ಸಂಗೀತ ಕನ್ನಡ ನಾಟಕ ಮಂಡಳಿಯ ಮೊದಲಿನ 'ಸಂಶಯ ಸಾಮ್ರಾಜ್ಯ' ನಾಟಕವನ್ನು ಚನ್ನಾಗಿ ಪ್ರೋತ್ಸಾಹಿಸಿದರು. ಲಕಲಕಿಸುವ ಉಡುಪು, ಮನೋಹರ ಪಡದೆ, ಶ್ರೀ ದೇಶಪಾಂಡೆಯವರ ಮನಸ್ಸನ್ನಾಕರ್ಷಿಸುವ ಗಾಯನಪಟುತ್ವ, ಶ್ರೀ [illegible] ಗಂಗೂಬಾಯಿಯವರ ಇಂಪಾದ ಗಾಯನ ವಿಶೇಷತೆಯು. ಮಾ[illegible] ಅವರ ಹೆಂಡತಿ ಹಾಗೂ ವೃಶ್ಚಿಕ ಇತರ ಅಭಿನಯಗಳು ಜನರಿಗೆ ಚನ್ನಾಗಿ ರಂಜಿಸಿದವು. ದೇಶಪಾಂಡೆಯವರ, ಹೊಸ ಹುಡುಗರ ಅಭಿನಯ ಹಾಗೂ ಸೊಲ್ಲುಗಳನ್ನು ಹೆಚ್ಚು ಪರಿಶ್ರಮದಿಂದ ಬೆಳೆಸಿಕೊಂಡರೆ ಕರ್ನಾಟಕದಲ್ಲಿ ಈ ಮಂಡಳಿಯು ಒಳ್ಳೇ ಪ್ರಖ್ಯಾತಿಯನ್ನು ಹೊಂದುವದೆಂದು ಎಲ್ಲರೂ ಮಾತಾಡುತ್ತಾರೆ. [illegible] ಹೇಗಾದರೂ ಬಿಡಿಸಿಕೊಳ್ಳಬೇಕು, [illegible] ಕಡೆಗೆ ಮಂಡಳಿಯು ಹೆಚ್ಚು ಮನಸ್ಸನ್ನು ಕೊಡಬೇಕು.

ಶ್ರೀ ಗರೂಡರ [illegible], 'ವಸ್ತ್ರ ಹರಣ', [illegible] 'ಶಾಸ್ತ್ರ'ಗಳ [illegible] ಪ್ರಕಾರ ಪ್ರಸಿದ್ಧಿಸಲ್ಪಡುವವು.

ಪತ್ರವ್ಯವಹಾರ.

(೧) ಕನ್ನಡಿಗರೂ ಮರಾಠಿಯೂ

ಪರಭಾಷೆಯ ಮೋಹವು ನಮ್ಮವರಿಗೆ ಇನ್ನೂ ಬಿಡಲೊಲ್ಲದು. ಕಲಿತವರೂ ತಾಯ್ನಾಡು ನುಡಿಗಳ ಒಗ್ಗೆ ಕಳವಳಿಯುಳ್ಳವರೂ ಕೂಡ ಈ ಮೋಹದಲ್ಲಿ ಸಿಲುಕಿ ಬೀಳುವದನ್ನು ನೋಡಿ ಖೇದವೆನಿಸುತ್ತದೆ. ಕೆಲವರಿಗಂತೂ ತಮ್ಮ ಅಡ್ಡ ಹೆಸರದ ಮುಂದೆ 'ಕರ' ಎಂಬ ಪ್ರತ್ಯಯವನ್ನು ಹಚ್ಚುವ ಹುಚ್ಚು ಬಹಳ. ಅಷ್ಟೊಂದು ಮಾಡಿಬಿಟ್ಟರೆ ತಾವು ಕೃತಾರ್ಥರಾದೆವೆಂದವರ ಭಾವನೆ. ಇಂಥ ಮೋಹವು ಶ್ರೀ. ಮಂಗಳವೇಢೆ ಮಧ್ವರಾಯರಂಥ ಸುಶಿಕ್ಷಿತ ತರುಣರನ್ನೂ ಕೂಡ ಬಿಟ್ಟಿಲ್ಲವೆಂದು ಅತಿ ಖೇದದಿಂದ ಹೇಳಬೇಕಾಗುತ್ತದೆ. ಹೋದ ವಾರದ 'ಕನ್ನಡಿಗ'ದಲ್ಲಿ ಅವರು ತಮ್ಮ ಕೋ-ಆಪರೇಟಿವ್ಹ ಅರ್ಬನ್ ಬ್ಯಾಂಕಿನ ಮೆಂಬರ ಜನರಿಗೆ ವಾರ್ಷಿಕ ಸಭೆಗೆ ಬರಲು ವಿನಂತಿ ಮಾಡಿಕೊಂಡ ನೋಟೀಸು ಕನ್ನಡದಲ್ಲಿದೆ. ಕೆಳಗೆ ಸಹಿಯು ಮಾತ್ರ M. S. Mangala-wedhekar' ಎಂದು ಇಂಗ್ಲೀಷಿನಲ್ಲಿ. ಅದಾದರೂ ಸಂಪೂರ್ಣ ಇಂಗ್ಲೀಷೆಂದು ಹೇಳಬೇಕೆ? 'ಕರ' ಎಂಬ ಪ್ರತ್ಯಯವು ಮರಾಠಿಯದು. ಕನ್ನಡ ನೋಟೀಸಿಗೆ ಇಂಗ್ಲೀಷ ಅಕ್ಷರಗಳಿಂದ ಮರಾಠಿಯಲ್ಲಿ ಸಹಿ ಮಾಡುವ ಪದ್ಧತಿಯು ನಿಜವಾಗಿಯೂ ನಗೆ ಬರುವಂತಹದು. ನಾವೇನು ಶ್ರೀ. ಮಧ್ವರಾಯರಿಗೆ ಬೇರೆ ಹೇಳುವ ಕಾರಣವಿಲ್ಲ. ಶ್ರೀಯುತ ಮಧ್ವರಾಯರು ಇದನ್ನು ಅರಿಯದೆ ಮಾಡಿದರೆಂದು ಹೇಳಬೇಕೆ? ಹಾಗಾದರೆ 'ಕನ್ನಡಿಗ'ದ ಅದೇ ಪುಟದಲ್ಲಿದ್ದ 'ವಾಸುದೇವಾಚಾರ್ಯರ ಸ್ಮಾರಕದ ಬಗ್ಗೆ ಬಿನ್ನಹ' ವೆಂಬ ಲೇಖದ ಕೆಳಗಿನ ಅವರ ಸಹಿಯನ್ನು ನೋಡಿರಿ, 'ಮಂಗಳವೇಢೆ ಮಧ್ವರಾಯರು' ಎಂದು ಅಚ್ಚುಗನ್ನಡದಲ್ಲಿದೆ. ಅಂದ ಮೇಲೆ ಇದೇನು ಪರಭಾಷೆಯ ಮೋಹವೋ ತಾಯ್ನುಡಿಯ ದುರ್ದೈವವೋ ತಿಳಿಯದು.

ಇದು ಕನ್ನಡ ನಾಡಿನವರು ಒರೆಯುವ ಅಡ್ಡ ಹೆಸರಿನ ಕಥೆಯಾಯಿತು.

ಇನ್ನು ವ್ಯವಹಾರಸ್ಥರ ವಿಷಯವಾಗಿ ಮಾತನಾಡಬೇಕಾದರೆ ಈ ಊರ ಪ್ರಸಿದ್ಧ ಡಾಕ್ಟರರಾದ 'ವಾಸುದೇವಾಚಾರ್ಯ ಜಹಗೀರದಾರ' ಇವರ ಹೆಸರೇ ನೆನಪಿಗೆ ಬರುತ್ತದೆ. ಅವರಾದರೂ ತಮ್ಮ ವೈದ್ಯಕೀಯ ಹಲಿಗೆಯನ್ನು ಮರಾಠಿಯಲ್ಲಿ ಒರೆಯಿಸಿದ್ದಾರೆ. ಕನ್ನಡ ನಾಡಿನಲ್ಲಿದ್ದು ಮರಾಠಿಯಲ್ಲಿ ಹಲಿಗೆಯನ್ನು ಒರೆಯಿಸುವದು ಅಯೋಗ್ಯವೆಂದು ನಾವು ಜಹಗೀರದಾರರಿಗೆ ಪ್ರೀತಿಯಿಂದ ಸೂಚಿಸುತ್ತೇವೆ. ಇನ್ನು ಮುಂದಾದರೂ ಜಹಗೀರದಾರರು ಕನ್ನಡದಲ್ಲಿ ಹಲಿಗೆಯನ್ನು ಒರೆಯಿಸುವರೆಂದು ಆಶಿಸುವ —ಓರ್ವ ಹಿತೈಷಿ.

(೨) ಪೋಷ್ಟಿನ ಕನ್ನಡ ನಮೂನೆಗಳೂ ಬೆಳಗಾಂವಿ ಜಿಲ್ಲೆಯೂ.

ಬೆಳಗಾಂವ ತಾಲೂಕ ಪೈಕಿ ಹುದಲೀ ಗ್ರಾಮಕ್ಕೆ ತಾರೀಖು ೧೫-೫-೨೭ ದಿಂದ ಪೋಷ್ಟ ಆರಂಭವಾಗಿರುತ್ತದೆ. ಈ ಗ್ರಾಮಕ್ಕೆ ಪೋಷ್ಟ ಕೂಡುವದರ ಸಲುವಾಗಿ ಈಗ ಎಷ್ಟೋ ದಿವಸಗಳಿಂದ ಒದರ ಮೇಡಿಕೆ ಇತ್ತು. ಆದರೆ " ನೃಪತಿಜನಪದಾನಾಂ ದುರ್ಲಭಃ ಕಾರ್ಯಕರ್ತಾ " ಎಂಬಂತೆ ಯೋಗ್ಯ ರೀತಿಯಿಂದ ದಾದ ತಿಳಿಸುವವರಿಲ್ಲದ ಮೂಲಕ ಕಾರ್ಯವು ಸಾಧ್ಯವಾಗಲಿಲ್ಲ. ಈಗ ಮಿ. ಗೋಪಾಳ ಅಪ್ಪಾರಾವ ದೇಶಪಾಂಡೆ ಇವರು ಜನರ ವತಿಯಿಂದ ಪೋಷ್ಟದ ಅಧಿಕಾರಿಗಳಿಗೆ ಪೋಷ್ಟಿನ ಅಗತ್ಯವನ್ನು ತಿಳಿಸಿ ಹೇಳಿ ಪ್ರಯತ್ನ ಮಾಡಿದ್ದರಿಂದ ಪೋಷ್ಟ ದೊರೆತಿರುವದೆನ್ನಲಿಕ್ಕೆ ಅಡಿಯಿಲ್ಲ.

ಈ ಗ್ರಾಮದಲ್ಲಿ ಕನ್ನಡ ಭಾಷೆಯೇ ಹೆಚ್ಚು ಪ್ರಚಾರದಲ್ಲಿರುವದರಿಂದ ಪೋಷ್ಟಿನ ನಮೂನೆಗಳು ಕನ್ನಡ ಭಾಷೆಯವಿರಬೇಕೆಂದೂ ಪೋಷ್ಟದ ವ್ಯವಹಾರವು ಕೂಡ ಕನ್ನಡದಲ್ಲಿ ಸಾಗಬೇಕೆಂದೂ ಅರ್ಜಿ ಮಾಡಿದ್ದಕ್ಕೆ ಪೋಷ್ಟದ ಫಾರ್ಮುಗಳು ಕನ್ನಡ ಭಾಷೆಯವು ಬಂದಿದ್ದು ಪೋಷ್ಟದ ವ್ಯವಹಾರವು ಕನ್ನಡದಲ್ಲಿ ಸಾಗಬೇಕೆಂಬದಕ್ಕೆ ಸ್ವಲ್ಪ ದಿವಸಗಳಲ್ಲಿ ತಿಳಿಸುತ್ತೇವೆಂದು ಉತ್ತರ ಬರೆದಿರುವರು. ಮಿ. ಗೋಪಾಳ ಅಪ್ಪಾರಾವ ದೇಶಪಾಂಡೆ ಇವರು ಇದೇ ಪ್ರಕಾರ ಸಾರ್ವಜನಿಕ ಕಾರ್ಯಗಳಲ್ಲಿ ಮನಸ್ಸು ಹಾಕುತ್ತ ಬಂದಿರುವರು. ೪-೫ ತಿಂಗಳುಗಳ ಹಿಂದೆ ಸುಳಧಾಳ ಸ್ಟೇಶನಕ್ಕೆ ಇವರ ಪ್ರಯತ್ನದಿಂದಲೇ ಹೊಸ ಪ್ಲ್ಯಾಟಫಾರ್ಮ ಕಟ್ಟುವದರಲ್ಲಿ ಒಂದಿತು. ಹೀಗೆ ಲೋಕಹಿತದಲ್ಲಿ ಮನಸ್ಸು ಹಾಕಿ ಜನರ ತೊಂದರೆಗಳನ್ನು ಸರಕಾರದ ಮುಂದಿಟ್ಟು ಯೋಗ್ಯ 'ದಾದು' ಹಚ್ಚುವದು ಬಹು ಪ್ರಯಾಸದ ಕಾರ್ಯವು. ಇಂಥ ಕಾರ್ಯಗಳಲ್ಲಿ ಇವರು ವಿಶೇಷ ಶ್ರಮಬಡುವದರಿಂದ ಲೋಕಪ್ರಿಯರಾಗುತ್ತ ನಡೆದಿರುವರು. ಇದು ಇವರಿಗೆ ಭೂಷಣವು.

ಬೆಳಗಾಂವ ಜಿಲ್ಲೆಯ ಎಷ್ಟೋ ಊರುಗಳಲ್ಲಿ ಕನ್ನಡ ಭಾಷೆಯೇ ಪ್ರಮುಖವಿದ್ದು ಅಲ್ಲಿಯ ಬ್ರ್ಯಾಂಚ ಪೋಷ್ಟುಗಳಲ್ಲಿಯ ವ್ಯವಹಾರವು ಮರಾಠಿಯಲ್ಲಿ ಸಾಗುವದರಿಂದ ಜನರಿಗೂ ಕೆಲಸಕ್ಕೂ ಬಹಳೇ ತೊಂದರೆಯಾಗುವದು. ಆಯಾ ಊರವರು ಇಲ್ಲಿಯಂತೆ ಯೋಗ್ಯ ಅಧಿಕಾರಿಗಳ ಕಡೆಗೆ ದಾದು ಹಚ್ಚಿಕೊಂಡಲ್ಲಿ ಅವರಿಗಾದರೂ ಈ ಪ್ರಕಾರ ಅನುಕೂಲತೆ ದೊರೆತು ಕೆಲಸವು ಸುಲಭವಾಗಿ ಸಾಗುವದು. ಜನರಿಗೆ ನಮೂನೆಗಳು ಚನ್ನಾಗಿ ತಿಳಿದು ಅವರಿಗೆ ಪೋಷ್ಟಿನ ವ್ಯವಹಾರವು ಹಗುರಾಗುವದು.

ತಾ॥ ೨೪-೫-೨೭ ಓರ್ವ ಹುದಲೀಗ್ರಾಮವಾಸಿ.

ಇಹವೃತ್ತ.

ರೈತರು ಮಳೆರಾಜನನ್ನು ನಿರೀಕ್ಷಿಸುತ್ತಲಿರುವರು

ಡಿ. ಡಿ. ಕಲೆಕ್ಟರ ಶ್ರೀ ಹಿರೇಮಠರ ಕಚೇರಿಯು ೩೧ ರ ವರೆಗೆ ಇಲ್ಲಿರುವದು

ಡಿ. ಡಿ. ಕಲೆಕ್ಟರ ಶ್ರೀ ಹರೂಳಕರರ ಪ್ರವಾಸಕ್ರಮ:— ೧ನೇ ತಾ ವರೆಗೆ ವಿಜಾಪುರ ೨ ಜೂನದಿಂದ ೭ ಬಾಗೇವಾಡಿ; ೮-೧೧ ಮನಗೂಳಿ

ಗಂಗೂಬಾಯಿ ಗುಳೇದಗುಡ್ಡ ಇವರ

ಶ್ರೀಕೃಷ್ಣ ಸಂಗೀತ ಕನ್ನಡ ನಾಟಕ ಮಂಡಲವು.

ಬಾಗಲಕೋಟೆ-ರಾಜನಾಟಕಶಾಲೆ

ಬುಧವಾರ ತಾ॥ ೧-೬-೨೭

ಸಖೂದೇವಿ.

ವ್ಯವಸ್ಥಾಪಕ.

೨೨೫೦ ವರ್ಷಗಳ ಪೂರ್ವದಲ್ಲಿದ್ದ

ಅಶೋಕ ಮಹಾರಾಯನ ಆಳಿಕೆ.

(ಗೆಳೆಯರ ಗುಂಪಿನಿಂದ)

— ದ್ವಿತೀಯ ಲೇಖಾಂಕಃ —

"ದೇವಪ್ರಿಯನು ಹೇಳುವದೇನಂದರೆ:— ತಾಯ್ತಂದೆಗಳ ಸೇವೆ ಮಾಡಬೇಕು! **ಪ್ರಾಣಿಗಳ ಜೀವವು ಬಹಳೇ ಹೆಚ್ಚಿನದೆಂಬುದನ್ನು ಚೆನ್ನಾಗಿ ನೆನಪಿನಲ್ಲಿಡಬೇಕು** ಸತ್ಯವನ್ನೇ ನುಡಿಯಬೇಕು. ಇವೆಲ್ಲ ಗುಣವುಳ್ಳವರಾಗಿ ಧರ್ಮಪರಿಪಾಲನೆ ಮಾಡುವುದು ಕರ್ತವ್ಯವಾಗಿದೆ. ಶಿಷ್ಯರು ಗುರುಗಳನ್ನು ಆದರಿಸಬೇಕು. ಬಂಧು ಬಳಗದವರೊಡನೆ ಆತ್ಮೀಯ ಭಾವದಿಂದ ಚೆನ್ನಾಗಿ ನಡೆದುಕೊಳ್ಳಬೇಕು. ಇದು ಪುರಾತನ ವಿಧಿಯು. ಇದರಿಂದ ಆಯುಷ್ಯವು ಬೆಳೆಯುವದು. ಆದ್ದರಿಂದ ಎಲ್ಲರೂ ಇವನ್ನು ಕಾರ್ಯರೂಪದಲ್ಲಿ ಕೊನೆಗಾಣಿಸಬೇಕು."

(ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿಲಿಪಿ.)

"ದೇವಪ್ರಿಯನಾದ ಪ್ರಿಯದರ್ಶಿ ರಾಜನು ತನ್ನಾಳಿಕೆಯ ಎಂಟನೇ ವರ್ಷದಲ್ಲಿ ಕಳಿಂಗ ದೇಶವನ್ನು ಗೆದ್ದುಕೊಂಡನು. ಆ ಯುದ್ಧದಲ್ಲಿ ಒಂದೂವರೆ ಲಕ್ಷ ಜನರು ಸೆರೆಸಿಕ್ಕರು. ಒಂದು ಲಕ್ಷ ಜನರು ಕೊಲ್ಲಲ್ಪಟ್ಟರು. ಇದರ ಎಷ್ಟೋಪಟ್ಟು ಜನರು (ಯುದ್ಧದ ತೊಂದರೆ ಮುಂತಾದ ಉಪದ್ರವಕ್ಕೆ ಸಿಕ್ಕು) ಸತ್ತು ಹೋದರು. ಈಗ ದೇವಪ್ರಿಯ ಪ್ರಿಯದರ್ಶಿಯ ಧರ್ಮಪಾಲನವೂ, ಧರ್ಮಾನುರಾಗವೂ, ಧರ್ಮಪ್ರಚಾರವೂ ಹೆಚ್ಚಾಗಿ ಬೆಳೆದಿವೆ. ಕಲಿಂಗ ವಿಜಯದ ಬಳಿಕ ದೇವಪ್ರಿಯನಿಗೆ ದುಃಖವಾಯಿತು. ಯಾಕಂದರೆ ಗೆದೆಯದ ನಾಡನ್ನು ಗೆದ್ದುಕೊಳ್ಳುವಾಗ ಕೊಲೆ, ಸಾವು, ಸೆರೆ ಇವು ತಪ್ಪಲಾರವು. ದೇವಪ್ರಿಯನು ಇದನ್ನು ಕಷ್ಟಕರವು ಗುರುತರವೂ ಎಂದು ತಿಳಿದಿದ್ದಾನೆ. ದೇವಪ್ರಿಯನು ಎಲ್ಲಕ್ಕಿಂತ ಹೆಚ್ಚಿನ ಕೇಡೆಂದು ಇದನ್ನು ಭಾವಿಸಿದ ಇನ್ನೊಂದು ಕಾರಣವೇನಂದರೆ:—ಹಿರಿಯರ ಸೇವೆ ಮಾಡುವವರೂ, ತಾಯ್ತಂದೆಗಳ ಪರಾಂಬರಿಕೆ ಮಾಡುವವರೂ, ಗುರುಗಳ ಶುಶ್ರೂಷೆಯಲ್ಲಿ ನಿರತರಾದವರೂ, ಮಿತ್ರರೊಡನೆ, ಅನಾಥರೊಡನೆ, ಬಂಧು ಬಳಗದೊಡನೆ, ಆಳು ಹೋಳುಗಳೊಡನೆ ಕಕ್ಕುಲತೆಯಿಂದ ನಡೆದುಕೊಳ್ಳುವವರೂ ಮತ್ತು ದೃಢಭಕ್ತಿಯುಳ್ಳವರೂ-ಆದ-ಬ್ರಾಹ್ಮಣರೂ, ಶ್ರಮಣರೂ, ಬೇರೆ ಬೇರೆ ಸಾಂಪ್ರದಾಯಿಕ ಧರ್ಮನಿಷ್ಠರೂ, ಗೃಹಸ್ಥರೂ ಅಲ್ಲಿ ವಾಸ ಮಾಡಿಕೊಂಡಿರುವುದುಂಟು. ಇಂಥವರು ಆಂಥ ಪ್ರಸಂಗದಲ್ಲಿ ಅನ್ಯಾಯವಾಗಿ ದಂಡಿಸಲ್ಪಡುವರು, ನಾಶಹೊಂದುವರು, ಅಕ್ಕರತೆಯ ಜನರಿಂದ ಅಗಲುವರು, ದೇಶಭ್ರಷ್ಟರಾಗುವರು. ಇಂಥಿಂಥಾದ್ದನ್ನೆಲ್ಲ ಅವರು ಭೋಗಿಸಬೇಕಾಗುವದು. ತಾವು ತೊಂದರೆ ಇಲ್ಲದೆ ಬದುಕಿದರೂ, ತಮ್ಮ ಆಪ್ತೇಷ್ಟರಿಗೆ ಇವೆಲ್ಲ ವಿಪತ್ತುಗಳುಂಟಾದರೆ ಅದು ಅವರಿಗೂ ಒದಗಿದಂತೆಯೇ ಸರಿ. ದೇಶವಿಜಯದಿಂದ ಎಲ್ಲರೂ ಇಂಥ ವಿಪತ್ತಿಯನ್ನು ಭೋಗಿಸಲೇಬೇಕಾಗುವದು. ಇದನ್ನು ದೇವಪ್ರಿಯನು ತೀರ ಕೆಡುಕೆಂದು ಭಾವಿಸಿರುವನು. ಅಲ್ಲದೆ ಅಂಥ ಪ್ರಸಂಗದಲ್ಲಿ ಯಾವ ಧರ್ಮಾವಲಂಬಿಗೂ ಸುಖವಿಲ್ಲ. ಕಲಿಂಗ ದೇಶದಲ್ಲಿ ಸತ್ತ, ದಗ್ಧ, ಸೆರೆಸಿಕ್ಕಿದ್ದರ ಸಾವಿರನೆಯ ಅಂಶವೂ ಕೂಡ ಈಗ ದೇವಪ್ರಿಯನ ಅನುತಾಪಕ್ಕೆ ಕಾರಣವಾಗುವದು...... ದೇವಪ್ರಿಯನ ರಾಜ್ಯದಲ್ಲಿರುವ ಅರಣ್ಯವಾಸಿಗಳೆಲ್ಲರೂ ಧಾರ್ಮಿಕರಾಗಲೆಂದು ದೇವಪ್ರಿಯನು ಅವರನ್ನೆಲ್ಲ ದಯಾದೃಷ್ಟಿಯಿಂದ ನೋಡುವನು. ಅವರಿಗೆ ಕೆಟ್ಟ ಕೆಲಸ ಮಾಡದಂತೆ ಬೋಧಿಸುವನು. ಹೀಗಾದರೆ ಅವರು ಪೀಡೆಯಿಲ್ಲದೆ ಬಾಳುವರು. **ಸರ್ವ ಜೀವಿಗಳೂ ವಿಪತ್ತಿಯಿಲ್ಲದೆ ಚಿತ್ತಶುದ್ಧಿಯಿಂದ ಬಾಳಿ ಶಾಂತಿಯಲ್ಲಿಯೂ ಆನಂದದಲ್ಲಿಯೂ ಕಾಲಯಾಪನೆ ಮಾಡಲೆಂದು ದೇವಪ್ರಿಯನು ಹಾರೈಸುವನು** ಈ ಧರ್ಮವಿಜಯವನ್ನೇ ದೇವಪ್ರಿಯನು ಹೆಚ್ಚಿನದೆಂದು ಭಾವಿಸಿರುವನು. ದೇವಪ್ರಿಯನು ತನ್ನ ರಾಜ್ಯದಲ್ಲಿಯೂ ಬದಿಗಿರುವ ಆರುನೂರು ಯೋಜನ ವ್ಯಾಪಿಯಾದ ದೇಶದ ರಾಜರ ರಾಜ್ಯಗಳಲ್ಲಿಯೂ—ಎಂದರೆ, ಅಂತಿಯೋಕನನೆಂಬ (ಪಶ್ಚಿಮ ಏಶಿಯದ ಸಿರಿಯಾದ) ಯವನ ರಾಜನ ರಾಜ್ಯದಲ್ಲಿಯೂ, ಆದರ ನೆರೆಯ— (ಇಜಿಪ್ತದ) ತಾಲೇಮಿಯ ಮತ್ತು, (ಮಾಸಿಡೋನಿಯಾದ) ಅಂತಿಗೋನಸನ ಹಾಗೂ, (ಕಿರೇನದ) ಮ್ಯಾಕಸನ ಮತ್ತು, (ಎಪಿರಸದ) ಅಲೆಗ್ಝಾಂಡರನ (ಈ ನಾಲ್ಕು) ರಾಜರ ರಾಜ್ಯಗಳಲ್ಲಿಯೂ ಅಲ್ಲದೆ (ದೇವಪ್ರಿಯನು) ರಾಜ್ಯದ ತೆಂಕಣಕ್ಕಿರುವ ಚೋಳ, ಪಾಂಡ್ಯ, ಸಿಂಹಳ ರಾಜ್ಯಗಳಲ್ಲಿಯೂ, ಇದಲ್ಲದೆ ವಿಷ, ವಜ್ರಿ, ಯವನ, ಕಾಂಬೋಜ, ನಾಭಕ, ಭೋಜ, ಪೈತಣಿಕ, ಆಂಧ್ರ, ಪುಳಿಂದ ಮೊದಲಾದವರಲ್ಲಿಯೂ ದೇವಪ್ರಿಯನು ಈ ಧರ್ಮೋಪದೇಶವನ್ನು ಅನುಸರಿಸಿರುವರು......ನನ್ನ ಮಕ್ಕಳು ಮರಿಮಕ್ಕಳು ಮುಂತಾದ ವಂಶಿಕರು ಎಂದೆಂದಿಗೂ ಅನ್ಯ ದೇಶಗಳನ್ನು ಜಯಿಸಬಾರದೆಂಬ ಉದ್ದೇಶದಿಂದ ಈ ಧರ್ಮಲಿಪಿಯನ್ನು ಕೊರೆಯಿಸಲಾಯಿತು..."

೧೩ನೇ ಗಿರಿಲಿಪಿ.

"ದೇವಪ್ರಿಯನ ವಚನಾನುಸಾರವಾಗಿ 'ತೋಸಲಿ' ಯಲ್ಲಿರುವ ಮಂತ್ರಿಗಳಿಗೂ ಗ್ರಾಮಾಧಿಕಾರಿಗಳಿಗೂ ತಿಳಿಸುವದೇನೆಂದರೆ:— ನನ್ನ ಗಂಡುಗುರಿಯು ಪ್ರಚಾರವಾಗಲಿ, ಎಲ್ಲರೂ ನನ್ನ ಗುರಿಯನ್ನು ಅನುಸರಿಸಿ ಕೆಲಸ ಮಾಡಲಿ, ಇದೇ ನನ್ನ ಇಚ್ಛೆ. ನಿಮಗೆಲ್ಲಾ ಉಪದೇಶ ಮಾಡುವದೇ ನನ್ನ ಹರಿಕೆ ಕೈಗೂಡುವ ಉಪಾಯವೆಂದು ತಿಳಿದಿರುವೆನು. ನೀವೆಲ್ಲರೂ ಎಷ್ಟೋ ಸಾವಿರ ಜನಗಳ ಮೇಲೆ ಅಧಿಕಾರಿಗಳೆಂದು ನಿಯುಕ್ತರಾಗಿರುವಿರಿ. ನೀವೆಲ್ಲರೂ ಸಕಲ ಸಜ್ಜನರ ಪ್ರೇಮವನ್ನು ಗಳಿಸಿರಿ. **ಸರ್ವ ಮನುಷ್ಯರು ನನ್ನ ಮಕ್ಕಳು ನನ್ನ ಈ ಮಕ್ಕಳೆಲ್ಲರೂ ಇಹಪರ ಸುಖಗಳನ್ನು ಯಥೇಷ್ಟವಾಗಿ ಪಡೆಯಲೆಂದು ನನ್ನ ಹಾರೈಕೆ.** ನೀವು ನನ್ನ ಉದ್ದೇಶವನ್ನು ನೆಟ್ಟಗೆ ತುಂಬಾ ತಿಳಿದುಕೊಂಡು ನೀತಿಯನ್ನು ನೆಲೆಗೊಳಿಸಿರಿ. ಯಾವನಾದರೊಬ್ಬನಿಗೆ ಬಂಧನವುಂಟಾದರೆ, ಇಲ್ಲವೆ ದೇಹದಂಡನೆಯಾದರೆ, ಬಾಧಿತ ಅವಸ್ಥೆಯಲ್ಲಿಯೇ ಅವನು ಸತ್ತರೆ, ಬೇರೆ ಅನೇಕ ಜನಗಳಿಗೆ ದುಃಖವಾಗುವದು. ಆದ್ದರಿಂದ **ನೀವು ಶಿಕ್ಷೆಯನ್ನು ವಿಧಿಸುವಾಗ ತೀರ ಕಠೋರತೆಯನ್ನೂ, ತೀರ ಕರುಣೆಯನ್ನೂ ತೋರಿಸದೆ ಇವೆರಡರ ಮಧ್ಯಪಥವನ್ನು ಅವಲಂಬಿಸಿರಿ. ಈರ್ಷೆ, ಅನನುಭವ, ನಿಷ್ಠುರತೆ, ಕೀಳುತನ, ಬೇಸರ, ಆಲಸ್ಯ. ವಿಳಂಬ ಇವೇ ನಿಮ್ಮ ಕಾರ್ಯಹಾನಿಯ ಕಾರಣಗಳು. ಈ ದೋಷಗಳೊಂದೂ ನಿಮ್ಮಲ್ಲಿ ಉಳಿಯದಂತೆ ನೀವೆಲ್ಲರೂ ಯತ್ನಿಸಬೇಕು.** ನನ್ನ ಉದ್ದೇಶ್ಯವನ್ನು ಸಫಲಗೊಳಿಸುವದಕ್ಕೆ ಚಾಣಾಕ್ಷತನವೂ, ಧೈರ್ಯವೂ ಅಗತ್ಯವಾಗಿ ಬೇಕು. ಆಲಸಿಯಾಗದೆ ಉತ್ಸಾಹಿಯಾಗಿರಿ. ನೀವೆಲ್ಲರೂ ಮುಂದರಿಯುವುದಕ್ಕೆ ಯತ್ನಿಸಿರಿ. ನೀವೆಲ್ಲರೂ ನಿಮ್ಮ ಕರ್ತವ್ಯವನ್ನು ಯಾವಾಗಲೂ

ಲಕ್ಷ್ಯದಲ್ಲಿಟ್ಟು ನಡೆಯಿರಿ. ನಿಮಗೆ ನಾನು ಹೇಳುವದೇನಂದರೆ— ಈ ಎಲ್ಲ ಉಪದೇಶಗಳು ದೇವಪ್ರಿಯನ ಅನುಶಾಸನಗಳೆಂದು ತಿಳಿಯಿರಿ. ಇವುಗಳನ್ನು ಪಾಲಿಸುವುದು ಫಲದಾಯಕವಾಗಿದೆ. ಇಲ್ಲದಿದ್ದರೆ ಅಮಂಗಳವಾಗದೆ ಹೋಗದು. ನಿಮ್ಮೊಳಗೆ ಯಾರಾರು ರಾಜಾಜ್ಞೆಯನ್ನು ಪಾಲಿಸಿ ನೆರವೇರಿಸುವರೋ ಅವರಿಗೆ ಸ್ವರ್ಗಾರಾಧನೆಯ ಫಲವೂ, ರಾಜಾರಾಧನೆಯ ಫಲವೂ ಕೂಡಿಯೇ ಲಭಿಸುವದು. ಇಲ್ಲದಿದ್ದರೆ ನನ್ನ ಸಂತೋಷಲಾಭವು ಹೇಗೆ ಆದೀತು? **ಚೆನ್ನಾಗಿ ತಿಳಿದುಕೊಂಡು ಪಾಲಿಸಿದವನು ಸ್ವರ್ಗಲಾಭವನ್ನು ಹೊಂದುವನಲ್ಲದೆ ನನ್ನ ಋಣದಿಂದ ಮುಕ್ತನಾಗುವನು** ಈ ಲಿಪಿಯನ್ನು ನೀವು ಪ್ರತಿಯೊಂದು ಪರ್ವತಿಥಿಯಲ್ಲಿಯೂ ಶ್ರವಣಗೊಳಿಸಬೇಕು. ಉಪಯುಕ್ತವೆಂದು ಕಂಡಲ್ಲಿ ಒಬ್ಬನಿಗೂ ಕೂಡ ಓದಿ ಹೇಳಬೇಕು ಈ ರೀತಿಯಲ್ಲಿ ನೀವೆಲ್ಲರೂ ನನ್ನ ಅಭಿಪ್ರಾಯವನ್ನು ಸಫಲಗೊಳಿಸುವುದಕ್ಕೆ ಪ್ರಯತ್ನಿಸಿರಿ. ಈ ಲಿಪಿಯನ್ನು ಬರೆಯಿಸಿದ ಕಾರಣವೇನೆಂದರೆ—**ಗ್ರಾಮಾಧಿಕಾರಿಗಳು, ಗ್ರಾಮವಾಸಿಗಳಿಗೆ ಕಾರಣವಿಲ್ಲದೆ ತೊಂದರೆಯಾಗದಂತೆಯೂ ದೇಹದಂಡನೆಯಾಗದಂತೆಯೂ ಯಾವಾಗಲೂ ನೋಡಿಕೊಂಡಿರಬೇಕು.** ಈ ಕಾರಣದಿಂದಲೇ ನಾನು ಪ್ರತಿ ಐದು ವರುಷಕ್ಕೊಮ್ಮೆ ಧೀರಸ್ವಭಾವದ ಕ್ರೋಧಶೂನ್ಯರಾದ ಹಿಂಸಾರಹಿತರಾದ ಪ್ರಚಾರಕರನ್ನು ನಾಲ್ಕು ಕಡೆಗೆ ನನ್ನ ಆಜ್ಞಾಪ್ರಚಾರಕ್ಕಾಗಿ ಕಳುಹಿಸುವೆನು. ಅವರು ನನ್ನ ಉದ್ದೇಶವನ್ನು ಅರಿತು ನನ್ನ ಉಪದೇಶದಂತೆ ಕಾರ್ಯ ಮಾಡುವರು. ಇದರಂತೆ ಉಜ್ಜಯನಿಯಿಂದ ಮೂರು ವರುಷಕ್ಕೊಮ್ಮೆ ನನ್ನ ಕುಮಾರನೂ ಪ್ರಚಾರಕರನ್ನು ಕಳುಹಿಸುವನು. ತಕ್ಷಶಿಲೆಯಿಂದಲೂ ಕಳುಹಿಸಲ್ಪಡುವರು..........''

ಜಗನ್ನಾಥ ಪುರಿಯ ಬಳಿ ಇರುವ ಧೌಲಿಯ ಗಿರಿಲಿಪಿ.

ವಾಸುದೇವಾಚಾರ್ಯರ
ಸ್ಮಾರಕದ ಬಗ್ಗೆ
ಬಿನ್ನಹ.

ಮಹನೀಯರೇ,

ಕನ್ನಡ ಸಾಹಿತ್ಯ ಸಾಮ್ರಾಟರಾದ ಶ್ರೀಮಾನ ಕೆರೂರ ವಾಸುದೇವಾಚಾರ್ಯರು ದಿವಂಗತರಾಗಿ ಈಗ ೬-೭ ವರ್ಷಗಳು ಕಳೆದು ಹೋದವು. ವಾಙ್ಮಯ ಸಾಮ್ರಾಜ್ಯಕ್ಕೆ ಈ ಶತಮಾನದಲ್ಲಿ ಚಕ್ರವರ್ತಿಗಳೆನಿಸಿ ಮೆರೆದು ತಮ್ಮ ಅದ್ವಿತೀಯ ಪ್ರತಿಭಾಲಾವಣ್ಯದಿಂದ ಕನ್ನಡ ನುಡಿಯನ್ನೇ ಮುದ್ದು ಸುರಿಸುವಂತೆ ಮಾಡಿ ದಿಗಂತ ಖ್ಯಾತಿಯನ್ನು ಹೊಂದಿ ಅವರ ಜೀವನ ಜ್ಯೋತಿಯು ಅಂತರ್ಧಾನವಾಯಿತು. ಇಂಥ ದಿವ್ಯಜ್ಯೋತಿಯ ಜನ್ಮಸ್ಥಾನವು ಇದೇ ಪಟ್ಟಣವಾದದ್ದು ನಮ್ಮೆಲ್ಲರಿಗೆ ಅತ್ಯಂತ ಅಭಿಮಾನದ ಸಂಗತಿಯಾಗಿದೆಯಷ್ಟೇ! ಇದೇ ಮೂಲಕವಾಗಿ ಈ ಪಟ್ಟಣವನ್ನು ಎಷ್ಟೋ ಸಾಹಿತ್ಯ ಭಕ್ತರು ವಾಙ್ಮಯದ ಪುಣ್ಯಕ್ಷೇತ್ರವೆಂದು ಭಾವಿಸುವ ಸಂಗತಿಯು ದಿನಾಲು ಹೆಚ್ಚು ಹೆಚ್ಚು ನಮ್ಮ ಪ್ರತೀತಿಗೆ ಬರುತ್ತಿದೆ.

ಹೀಗಿದ್ದು ಆಚಾರ್ಯರ ವಿಷಯಕ್ಕೆ ನಮ್ಮೆಲ್ಲರ ಹೃದಯದಲ್ಲಿರುವ ಭಕ್ತ್ಯಾದರಗಳ ದ್ಯೋತಕವು ಈ ಬಾಹ್ಯ ಸೃಷ್ಟಿಯಲ್ಲಿ ಇನ್ನೂ ರೂಪಗೊಂಡಿಲ್ಲ. ಇದು ನಮ್ಮ ಅಭಿಮಾನಕ್ಕೆ ಒಪ್ಪದಾಗಿದೆ. ಆದ್ದರಿಂದ ಯತ್ಕಿಂಚಿತ್ತಾದರೂ ಈ ಬಗ್ಗೆ ಮಾಡಬೇಕೆಂದು ಬಯಸಿ ಅವರದೊಂದು ಭಾವಪಟವನ್ನು ಹಾರ್ಡಿಂಜ ಲಾಯಬ್ರರಿಯಲ್ಲಿ ನಿಲ್ಲಿಸಬೇಕೆಂದು ನಿಶ್ಚಯಿಸಿದ್ದೇವೆ. ಅದಕ್ಕಾಗಿ ಆಚಾರ್ಯರ ಸ್ನೇಹಿತರೂ, ಆಚಾರ್ಯರ ಹೊತ್ತಿಗೆಗಳನ್ನು ಉಬ್ಬಿನಿಂದ ಓದಿ ಓದಿ ತಣಿಯುತ್ತಿರುವ ಅಸಂಖ್ಯ ವಾಚಕ ವೃಂದವೂ ಅವರಲ್ಲಿ ತಮಗಿರುವ ಅಭಿಮಾನಕ್ಕೆ ಅನುರೂಪವಾಗಿ ದ್ರವ್ಯದಿಂದಲೂ, ಸಹಾನುಭೂತಿಯಿಂದಲೂ ನೆರವಾಗಬೇಕೆಂದು ಅತ್ಯಂತ ಆಸ್ಥೆಯಿಂದ ಕೋರುತ್ತಿರುವ

(೧) **ಸೊಲ್ಲಾಪಟ್ಟಿ ರಾಮಣ್ಣನಾಯಿಕರು.**
(೨) **ಧಾರವಾಡ ಯಲಗುರ್ದರಾಯರು.**
(೩) **ಕಿರಸೂರ ಸ್ವಾಮಿರಾಚಾರ್ಯರು.**
(೪) **ಮಂಗಳವೇಢೆ ಮಧ್ವರಾಯರು.**
(೫) **ಜೋರಾಪುರ ಗುರುರಾಯರು.**

(ಕಾರ್ಯದರ್ಶಿಗಳು.)

"ನನ್ನ ತುಣುಕು ವಹಿಯಿಂದ"

ಚೈನಾ ದೇಶದರಸು ತಾನು ಆರೋಗ್ಯವಂತನಾಗಿರುವಾಗ ಮಾತ್ರ ತನ್ನ ವೈದ್ಯರಿಗೆ ಸಂಬಳ ಕೊಡುತ್ತಿದ್ದನಂತೆ! ಅವನಿಗೆ ಬೇನೆ ಬಂತೆಂದರೆ ವೈದ್ಯರ ಸಂಬಳಕ್ಕೆ ಸೊನ್ನೆ ಬಿತ್ತೆಂದರ್ಥ. ಸೋಜಿಗವಾಗಿ ಚೈನಾದೇಶದರಸನಷ್ಟು ಆರೋಗ್ಯವಂತರು ಸೃಷ್ಟಿಯಲ್ಲೇ ಇರಲಿಲ್ಲವಂತೆ- ಅವನ ವೈದ್ಯರು ಸಂಬಳಗಳನ್ನು ಕಳೆದುಕೊಂಡದ್ದು ಅಪರೂಪ! † † † †

ಚೀನೀಯನಿಗೆ ನರವೇ ಇಲ್ಲ. ಅವನು ಎಷ್ಟು ಹೊತ್ತು ಕೆಲಸ ಮಾಡಿದರೂ ಶ್ರಮವಾಗಲೀ ಬೇಸರವಾಗಲೀ ಆಗುವದಿಲ್ಲ. ಅವನು ಎಂತಹ ಶಬ್ದವಾಗುತ್ತಿರುವ ಸ್ಥಳದಲ್ಲಿ ಬೇಕಾದರೂ ಮಲಗಿ ಸುಖವಾಗಿ ನಿದ್ರಿಸಬಲ್ಲನು. ಇದಕ್ಕೆ ಚೀನಿಯನು ತಿನ್ನುವ ಆಹಾರ, ವಾಸಿಸುವ ಸ್ಥಳಗಳೇ ಕಾರಣಗಳೆಂದು ಕೆಲವರೂ, ಚೀನಿಯರ ರಕ್ತದೊಂದಿಗೆ ಬೆರೆತ ಅಫೀಮಿನ ಫಲಿತಾಂಶವೆಂದು ಕೆಲವು ವೈದ್ಯರೂ ಅಭಿಪ್ರಾಯಪಡುತ್ತಾರೆ. ‡ ‡ ‡ ‡ ‡

ಇತಿಹಾಸದಲ್ಲಿ ಹೆಸರಾದ ಕೆಲವರ ಮೂಗಿನ ವಿಚಾರ ಬಹು ವಿನೋದಕರವಾಗಿದೆ. ಅಲೆಕ್ಸಾಂಡರ್, ರಿಷ್ಲ್ಯೂ, ಕಾರ್ಡಿನಲ್ ಉಲ್ಸೀ ಇವರಿಗೆ ದೊಡ್ಡ ಮೂಗುಗಳಿದ್ದವಂತೆ! ಮಹಮ್ಮದ ಪೈಗಂಬರನ ಮೂಗು ಬಗ್ಗಿದ್ದಾಗಿ ತುದಿಯು ತುಟಿಗಳ ಮಧ್ಯೆ ಸೇರಿಕೊಳ್ಳುತ್ತಿತ್ತು. ರೋಮಿನಲ್ಲಿ ನೂಮಾ ಎಂಬುವನಿಗೆ ಆರು ಅಂಗುಲಗಳ ಮೂಗಿತ್ತು; ಶೇಕ್ಸಪಿಯರ, ಬೇಕನ್, ಫ್ರಾಂಕ್ಲಿನ್, ಡಾ। ಜಾನ್ಸನ್ ಇವರ ಮೂಗುಗಳಿಗೆ ದೊಡ್ಡ ಹೊಳ್ಳೆಗಳಿದ್ದುವು. ಪ್ರಖರ ಮಹಾಶಯರಿಗೆ ಮುಖಕ್ಕೆಲ್ಲಾ ಪ್ರಾಧಾನ್ಯವಾದ ಮೂಗಿತ್ತಂತೆ. ‡ ‡

"ಒಬ್ಬನ ಆಹಾರ ಮತ್ತೊಬ್ಬನಿಗೆ ವಿಷ" ಎಂಬ ನಾಣ್ಣುಡಿಯಂತೆ ಜಗತ್ತಿನ ವಿವಿಧ ಭಾಗಗಳ ಜನರು ವಿವಿಧ ಪ್ರಾಣಿಗಳನ್ನು ತಿನ್ನುತ್ತಾರೆ. ಅರಬದೇಶದಲ್ಲಿ ಕಾದುರಿಯೇ ತಿನ್ನಲು ಉತ್ತಮವಾದ ಪ್ರಾಣಿ; ಈಜಿಪ್ತದಲ್ಲಿ ಒಂಟೆಯ ಮಾಂಸವನ್ನು ಬಹು ಹರ್ಷದಿಂದ ತಿನ್ನುತ್ತಾರೆ; ಹೊಟನ್‌ಟೀನೀಯರು ಜೇಡಿನ ಮೊಟ್ಟೆಗಳನ್ನು ಭಕ್ಷಿಸುತ್ತಾರೆ; ದಕ್ಷಿಣ ಅಮೇರಿಕಾ ವಾಸಿಗಳು ಹಾವು, ಹಲ್ಲಿ, ಕೆಲವು ಹುಳುಗಳು ಇವುಗಳನ್ನು ತಿನ್ನುತ್ತಾರೆ; ಚೀನೀಯನಿಗೆ ನಾಯಿ, ಬೆಕ್ಕು, ಹಾವು, ಹದ್ದುಗಳ ಮಾಂಸಗಳೆಂದರೆ ಪ್ರಿಯ; ಮೆಗ್ಡಲೆನ್ ನದಿಯ ಹತ್ತಿರ ಜೇಡಿ ಮಣ್ಣಿನಿಂದ ಪಾತ್ರೆಗಳನ್ನು ಮಾಡುತ್ತ ಹೋಗುತ್ತ ಜೇಡಿಯ ಮುದ್ದನ್ನು ಭಕ್ಷಿಸುತ್ತಾರೆ § § § §

ಕರ್ನಾಟಕ ಸಾಹಿತ್ಯ ಸಮ್ಮೇಳನ.

ಈ ೧೩ನೆಯ ಸಾಹಿತ್ಯ ಸಮ್ಮೇಳನವು ಮಂಗಳೂರು ಗವರ್ನ್‌ಮೆಂಟು ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯಲ್ಲಿ ಜರಗಿತು. ಸಾಧಾರಣ ೩೦೦ ಜನರು ಹಾಜರಿದ್ದರು. ಮೈಸೂರು, ಉತ್ತರ ಕನ್ನಡ ಬಿಜಾಪುರ ಮುಂತಾದ ಜಿಲ್ಲೆಗಳಿಂದ ಹಲವು ಮಂದಿ ಗ್ರಹಸ್ಥರೂ ಪತ್ರಿಕೆಗಳ ಸಂಪಾದಕರೂ ಬಂದಿದ್ದರು

ಶ್ರೀಯುತ ಕಡೆಕೋಡಿ ಸುಬ್ಬರಾಯರು ಭಾರತ ಮಾತೆಯನ್ನು ಸುರಸವಾದ ಹಾಡನ್ನು ಹಾಡಿದೊಡನೆಯೇ ಸಭಾಕಾರ್ಯವು ಪ್ರಾರಂಭವಾಯಿತು,

ಭಾರತಮಾತೆಯನ್ನು ಕುರಿತು ಪ್ರಾರ್ಥನೆಯಾದ ಮೇಲೆ ಸ್ವಾಗತ ಕಮಿಟಿಯ ಅಧ್ಯಕ್ಷರಾದ ಮಂಗಳೂರು ಮುನಿಸಿಪಾಲಿಟಿಯ ಚೆಯರ್‌ಮೇನರಾದ ರಾ| ನೆಲ್ಲಿಕಾಯ ವೆಂಕಟರಾಯರು ಸರಸವಾದ ಕನ್ನಡ ಭಾಷೆಯಲ್ಲಿ ಬಂದ ಸಭಿಕರಿಗೆ ಸ್ವಾಗತವನ್ನು ಮಾಡಿದರು. ನಂತರ ಸ್ವಾಗತ ಕಮಿಟಿಯ ಕಾರ್ಯದರ್ಶಿಯವರಾದ ಗವರ್ನ್‌ಮೆಂಟ ಟ್ರೈನಿಂಗ ಶಾಲೆಯ ಮುಖ್ಯ ಉಪಾಧ್ಯಾಯರಾದ ಶ್ರೀಯುತ ಉಳ್ಳಾಲ ಮಂಗೇಶರಾಯರು ಅನಾದಿಕಾಲದಿಂದಲೂ ಕನ್ನಡ ನಾಡಿನ ಭಾಗವಾದ ಈ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಳಿದ ಬೇರೆ ಬೇರೆ ರಾಜರುಗಳು ಕನ್ನಡ ಸಾಹಿತ್ಯ ಪ್ರಚಾರಕ್ಕೆ ಮಾಡಿದ ಸಹಾಯದ ವಿಷಯ ಯೋಗ್ಯವಾದ ಭಾಷಣವನ್ನು ಕೊಟ್ಟರು ಈ ಸಂದರ್ಭದಲ್ಲಿ ಇವರು ಈ ಜಿಲ್ಲೆಯನ್ನು ಹಲವು ವರುಷಗಳ ವರೆಗೆ ಆಳಿದ ಜೈನರಾಜರ ಇಲ್ಲಿ ಅನೇಕ ಕನ್ನಡ ಗ್ರಂಥಗಳು ಹುಟ್ಟಿವೆವೆಂದೂ ಹೇಳಿದರು.

ಈಗಲೂ ಈ ತುಳು ನಾಡಿನಲ್ಲಿ ಹಲವು ಕವಿಗಳೂ, ಲೇಖಕರೂ, ಇತರ ಗ್ರಂಥಕರ್ತರೂ ಹುಟ್ಟುತ್ತಲೇ ಇರುವರೆಂದೂ ಮುಂದೂರು ಲಕ್ಷ್ಮೀನಾರಾಯಣ ಪುಣಿಚಿತ್ತಾಯರು ಅನೇಕ ಕಾವ್ಯಗಳನ್ನು ಬರೆದು ಕವಿರತ್ನವೆಂಬ ಬಿರುದನ್ನು ಪಡೆದಿರುವರೆಂದೂ, ದಕ್ಷಿಣ ಕನ್ನಡ ಜಿಲ್ಲೆಯ ವಿಷಯವಾದ ಚರಿತ್ರಗ್ರಂಥಗಳು ಇಲ್ಲದ್ದರಿಂದ ಈ ಜಿಲ್ಲೆಯ ಬಿಷ ಉಪಾಧ್ಯಾಯರಲ್ಲಿ ಒಬ್ಬರಾದ ಎಮ್. ಗಣಪತಿರಾವ್ ಐಗಳರವರು ಚರಿತ್ರ ಸಂಬಂಧವಾದ ಸ್ಥಳಗಳನ್ನೂ, ಸ್ಥಳಪುರಾಣಗಳನ್ನೂ ಶಾಸನಗಳನ್ನೂ ಹುಡುಕಿ ತೆಗೆದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ ಎಂಬ ಗ್ರಂಥವನ್ನು ಬರೆದು ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆಯ ವಿಷಯ ಆದರ್ಶಪೂರ್ವಕವಾದ ಗ್ರಂಥವು ಇದೇ ಎಂದು ತೋರಿಸಿದುದಕ್ಕಾಗಿ ಕರ್ನಾಟಕ ದೇಶೀಯರು ಸಂತೋಷಗೊಳ್ಳಬೇಕೆಂದೂ ಹೇಳಿ ನಂತರ ಇನ್ನು ಮುಂದೆ ಸಾಹಿತ್ಯ ಅಭಿವೃದ್ಧಿಗೆ ಏನಾದರೊಂದು ದಾರಿ ಮಾಡಬೇಕೆಂದೂ ಸೂಚಿಸಿ ತಮ್ಮ ಭಾಷಣವನ್ನು ಮುಗಿಸಿದರು.

ಅನಂತರ ಶ್ರೀಯುತ ನೆಲ್ಲಿಕಾಯ ವೆಂಕಟರಾಯರವರು ಅಧ್ಯಕ್ಷರನ್ನು ಪೀಠದ ಮೇಲೆ ಏರಿಸಿ ಪುಷ್ಪಹಾರವನ್ನು ಹಾಕಿದರು.

ಅದಾದೊಡನೆಯೇ ಅಧ್ಯಕ್ಷರು ಭಾಷಣವನ್ನು ಬರೆದು ತಂದಿದ್ದರೂ ಅಲ್ಲಲ್ಲಿರುವ ಒಂದೆರಡು ಪದ್ಯಗಳನ್ನು ಹಾಡುವುದಕ್ಕಾಗಿ ಮಾತ್ರವೇ ಭಾಷಣ ಪತ್ರಿಕೆಯನ್ನು ಕೈಯಲ್ಲಿ ಹಿಡಿದಿದ್ದರಲ್ಲದೆ, ಸುಮಾರು ಒಂದು ಗಂಟೆಯ ವರೆಗೆ ಭಾಷಣವನ್ನು ಮಾಡಿದರು ಭಾಷಣದಲ್ಲಿ ಇವರು ಕರ್ನಾಟಕದ ವಿಸ್ತಾರವನ್ನು ಕನ್ನಡ ಭಾಷೆಗೆ ಒಂದು ನಿಘಂಟು ಅಗತ್ಯವಿದೆಯೆಂದೂ, ಹಳೆಯ ಗ್ರಂಥಗಳನ್ನು ಶೋಧಿಸಿ ಪ್ರಕಟಿಸುವ ಕಾರ್ಯವನ್ನು ಮುಂದರಿಸಬೇಕೆಂದೂ, ಕನ್ನಡ ಭಾಷೆಯ ಅಲಂಕಾರ ಶಾಸ್ತ್ರ, ಕಾವ್ಯಶಾಸ್ತ್ರ ಇತರ ಎಲ್ಲಾ ವಿಧದ ಶಾಸ್ತ್ರಗಳನ್ನು ಕನ್ನಡ ಭಾಷೆಯಲ್ಲಿ ಪ್ರಕಟಿಸಬೇಕೆಂದೂ ಹೇಳಿದರು. ಇವರ ಭಾಷಣವು ಬಹಳ ಯೋಗ್ಯವಾಗಿತ್ತು. ಕೂಡಿದ ಸಭಿಕರೆಲ್ಲರೂ ತಟಸ್ಥರಾಗಿ ಕೇಳುತ್ತಿದ್ದರು. ಪತ್ರಿಕಾ ಸಂವಾದಕರು ಮಾತ್ರವೇ ಬರೆಯುತ್ತಲೇ ಇದ್ದರು

ಇದಾದ ಮೇಲೆ ವಿಷಯನಿಯಾಮಕ ಕಮಿಟಿಯವರ ಸಭೆಯು ಜರಗಿತು ಈ ಸಭೆಯಲ್ಲಿ ಕರ್ನಾಟಕದ ಸಾಹಿತ್ಯ ರತ್ನಗಳೆಲ್ಲವೂ ಕೂಡಿದ್ದರು. ಶ್ರೀಯುತ ತಾತಾಚಾರ್ಯರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು ಈ ಸಭೆಯಲ್ಲಿ, ಕನ್ನಡ ಭಾಷೆಗೆ ಒಂದು ನಿಘಂಟನ್ನು ತಯಾರಿಸುವುದು ಅತೀ ಅಗತ್ಯವಾಗಿದೆ ಎಂದೂ ಕರ್ನಾಟಕದ ಎಲ್ಲಾ ಭಾಗಗಳಲ್ಲಿ ಒಂದೇ ತರದ ಕನ್ನಡ ಭಾಷೆಯ ಪಠ್ಯ ಪುಸ್ತಕಗಳನ್ನು ರಚಿಸಿ ಎಲ್ಲಾ ಶಾಲೆಗಳಲ್ಲಿ ಉಪಯೋಗಿಸಬೇಕೆಂದೂ, ಮೂಡಬಿದರೆ, ಕಾರ್ಕಳ, ವಾರಂಗ, ಬಸರೂರು ಮುಂತಾದ ಕಡೆಗಳಲ್ಲಿರುವ, ಪುಸ್ತಕ ಭಂಡಾರಗಳಲ್ಲಿರುವ ಕನ್ನಡ ಗ್ರಂಥಗಳಲ್ಲಿ ಇಷ್ಟರ ವರೆಗೆ ಬೆಳಕಿಗೆ ಬಾರದಿದ್ದ ಗ್ರಂಥಗಳನ್ನು ಹೊರಗೆ ತರುವಂತೆ ಸರ್ಕಾರ ಉಪಾಯಗಳಿಂದ ಸಾಧಿಸಬೇಕೆಂದೂ, ದಕ್ಷಿಣ ಕನ್ನಡ, ಬಳ್ಳಾರಿ ಜಿಲ್ಲೆಗಳಲ್ಲಿರುವ ಹಲವು ಶಿಲಾ ಮತ್ತು ತಾಮ್ರಶಾಸನಗಳು ನಾಶವಾಗದಂತೆ ಅವುಗಳನ್ನು ಬೇಗನೇ ಸಂಗ್ರಹಿಸಬೇಕೆಂದೂ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಸ್. ಎಸ್. ಎಲ್ ಸಿ, ಪರೀಕ್ಷೆಯ ವರೆಗೆ ಇಂಗ್ಲೀಷು ಒಂದನ್ನು ಬಿಟ್ಟು ಇತರ ಎಲ್ಲಾ ಪಾಠಗಳನ್ನು ಕನ್ನಡದಲ್ಲಿಯೇ ಕಲಿಸಬೇಕೆಂದು ಸರಕಾರಿ ಹುಕುಂ ಇದ್ದರೂ ಪಟ್ಟಣದ ಹುಡುಗರ ಶಾಲೆಯಲ್ಲಿಯೂ ಹುಡುಗಿಯರ ಶಾಲೆಗಳಲ್ಲಿಯೂ ದೇಶಭಾಷೆಯಲ್ಲಿ ಕಲಿಸುವ ಏರ್ಪಾಡನ್ನು ಮಾಡದೆ ಇರುವುದರಿಂದ ಇನ್ನಾದರೂ ಆ ಕ್ರಮವನ್ನು ಜಾರಿಗೆ ತರಲಿಕ್ಕೆ ಅಪ್ಪಣೆ ಕೊಡಲಿಕ್ಕೆ ಸರಕಾರದವರನ್ನು ಕೇಳಿಕೊಳ್ಳಬೇಕೆಂದೂ ಠರಾವುಗಳು ಪಾಸಾಗಿ ಸಭೆಯು ೨೦ನೇ ತಾರೀಖು ಬೆಳಗ್ಗೆ ೮ ಗಂಟೆಗೆ ಕೂಡುವುದೆಂದು ನಿರ್ಣಯವಾದ ಮೇಲೆ ಸಭೆಯು ಅಗಲಿತು.

ರಾತ್ರಿ ೯|| ಗಂಟೆಗೆ ಸರಿಯಾಗಿ ಟ್ರೈನಿಂಗ್ ಶಾಲೆಯ ಸಭಾಮಂದಿರದಲ್ಲಿ 'ವಿಧಿಯ ವೈಚಿತ್ರ' ಎಂಬ ನಾಟಕವನ್ನು ಚಲೋ ರೀತಿಯಲ್ಲಿ ಆಡಿತೋರಿಸಿದರು ಟ್ರೈನಿಂಗಿಗೆ ಬಂದಿದ್ದ ಹಲವು ಉಪಾಧ್ಯಾಯರು ನಟರಾಗಿದ್ದರು.

೨೦ನೇ ತಾರೀಖಿನ ಬೆಳಗ್ಗೆ ೮ ಗಂಟೆಯಿಂದ ವಿಷಯನಿಯಾಮಕ ಕಮಿಟಿಯ ಸಭೆಯು ಜರಗಿತು, ಮಧ್ಯಾಹ್ನ ೩ ಘಂಟೆಗೆ ಸಭೆಯು ಪ್ರಾರಂಭವಾಯಿತು ಹಲವು ಮಂದಿ ಎಲಿಮೆಂಟರಿ ಶಾಲಾ ಉಪಾಧ್ಯಾಯರು ಬಂದಿದ್ದರು ಸೆಕೆಂಡರಿ ಶಾಲೆಗಳ ಮತ್ತು ಕಾಲೇಜುಗಳ ಅಧ್ಯಾಪಕರಲ್ಲಿ ಅನೇಕರು ಮಂಗಳೂರಲ್ಲಿ ಇದ್ದರೂ ೪—೫ ಮಾತ್ರವೇ ಈ ಸಭೆಗೆ ಬಂದಿದ್ದರು ಕನ್ನಡ ಭಾಷೆಯ ವಿಷಯ ಇವರಿಗಿರುವ ಅನಾದರವೇ ಇದಕ್ಕೆ ಕಾರಣವೆಂದು ಹೇಳಬಹುದು, ದೇಶಭಾಷೆಯನ್ನು ಅಭಿವೃದ್ಧಿಗೆ ತರುವುದು ಮುಖ್ಯವಾಗಿ ಉಪಾಧ್ಯಾಯರ ಕೆಲಸವಾಗಿದೆ. ಇವರೇ ಈ ನಿದ್ರಾವಸ್ಥೆಯಲ್ಲಿದ್ದರೆ ಈ ಕೆಲಸವನ್ನು ಮುಂದುವರಿಸುವವರು ಯಾರು?

ಪುತ್ತೂರು ಬೋರ್ಡ್ ಶಾಲೆಯ ಉಪಾಧ್ಯಾಯರಾದ ಉಗ್ರಾಣ ಮಂಗೇಶರಾಯರು ಕಾರ್ಕಳ ತಾಲೂಕಿನ ಮಿಯಾರು ಶಾಲೆಯ ಉಪಾಧ್ಯಾಯರೊಬ್ಬರು ಬರೆದಿಟ್ಟ ಒಂದು ಹಳೆಯ ಗ್ರಂಥವಾದ ಉತ್ತರಕಾಂಡ ರಾಮಾಯಣದ ವಿಷಯ ಉಪನ್ಯಾಸವನ್ನು ಓದಿದರು. ಈ ಗ್ರಂಥದಿಂದ ಉದ್ಧರಿಸಿ ಈ ಗ್ರಂಥವನ್ನು ಬರೆದ ಕವಿಯಾದ ನಾಗರಾಜನ ವಿಷಯವಾಗಿಯೂ, ಅಲಂಕಾರ, ವಸಂತಕಾಲದ ವರ್ಣನೆ, ಆ ಮಹಾಕವಿಯ ಸ್ತ್ರೀವರ್ಣನೆ, ಮಂಗಳಹಾಡು ಇತ್ಯಾದಿಗಳ ವಿಷಯ ಆ ಕಾವ್ಯದಿಂದ ಕೆಲವು ಪದಗಳನ್ನು ಹಾಡಿ ಸಭೆಯನ್ನು ಆನಂದಗೊಳಿಸಿದರು.

ಇವರು ಓದಿ ಮುಗಿಸಿದ ನಂತರ ಕುಂದಾಪುರ ಹೈಸ್ಕೂಲಿನ ಕನ್ನಡ ಪಂಡಿತರಾದ ಎ ಶಿವರಾಮಯ್ಯನವರು ಕುಂದಾಪುರ, ಉಡುಪಿ ತಾಲೂಕುಗಳಲ್ಲಿರುವ ಶಂಕರನಾರಾಯಣ, ಕೊಲ್ಲೂರು, ಕೋಟ, ಕೋಟೇಶ್ವರ ಬಸರೂರು ಬಾರಕೂರು ಮುಂತಾದ ಊರುಗಳಲ್ಲಿರುವ ದೇವಸ್ಥಾನಗಳ ಸ್ಥಳ ಪುರಾಣಗಳನ್ನು ಒಳಕೊಂಡಿರುವ ಪ್ರಾಚೀನ ದೇವಸ್ಥಾನಗಳು ಎಂಬ ಉಪನ್ಯಾಸವನ್ನು ಓದಿದರು.

(ಎನೇ ಪುಟದಿಂದ ಬಂದದ್ದು)

ಶ್ರೀಯುತ ಗವಾನಂದ ಕೆರೆಹಳ್ಳಿ ಶಾಸ್ತ್ರಿಯವರು ತಮ್ಮ ಜನ್ಮ ಚರಿತ್ರೆಯನ್ನು ತಾವೇ ಕಾವ್ಯರೂಪದಲ್ಲಿ ಬರೆದುದನ್ನು ಸರಸವಾಗಿ ಓದಿ ತೋರಿದರು.

ಆನಂತರ ಕೆಳದಿನಾಯಕರು ಎಂಬ ಉಪನ್ಯಾಸವನ್ನು ಕೂಡಿದ ಸಭಿಯವರಿಗೆ ಮನವಟ್ಟಾಗುವಂತೆ ಎಂ. ಗಣಪತಿರಾವ್ ಐಗಳವರು ಓದಿದರು. ತಾನು ಇನ್ನು ಮುಂದೆಯೂ ಚರಿತ್ರಶೋಧನೆಯಲ್ಲಿ ಮಾಡುವ ಕಾರ್ಯಕ್ಕಾಗಿ ಬೇರೆ ಬೇರೆ ಊರುಗಳಿಗೆ ಸಂಚರಿಸಲಿಕ್ಕೆ ಬಂದಾಗ ತನಗೆ ಶೋಧಕಾ ಸಹಾಯವನ್ನು ಮಾಡಬೇಕಾಗಿ ಸಭೆಗೆ ಬಂದಿದ್ದ ಕರ್ನಾಟಕ ಮಹನೀಯರನ್ನು ಬೇಡಿಕೊಂಡರು.

ಆನಂತರ ಕೊಳಕೆ ಪರಮೇಶ್ವರಯ್ಯನು ಆಘಾತಶಾಸ್ತ್ರದ ವಿಷಯ ಸಾಧಾರಣ ಒಂದು ಘಂಟೆಯ ವರೆಗೆ ಓದಿದರು. ನಂತರ ಮೈಸೂರಿನಿಂದ ಬಂದವರೊಬ್ಬರು ಸಭಾಪರ್ವದಿಂದ ದ್ರೌಪದಿ ವಸ್ತ್ರಾಪಹರಣದ ಸಂಧಿಯಿಂದ ಕೆಲವು ಪದ್ಯಗಳನ್ನು ವಾಚಿಸಿದರು. ಸಭೆಯು ಮುಕ್ತಾಯವಾಯಿತು.

ರಾತ್ರಿ ಊಟ ಉಪಚಾರಂಗಳಾದ ವೇಳೆ ಕಾಳಮುಕ್ತೇಶ ಯಕ್ಷಗಾನ ಪ್ರಾರಂಭವಾಯಿತು, ಸಭಾಮಂಟಪದಲ್ಲಿ ತುಂಬಾ ಜನರಿದ್ದರು. ಗಂಟಾವಟಿ ಸುಗ್ರೀವಂ ಕಾಳಗ ಎಂಬ ಪ್ರಸಂಗದಿಂದ ಪಂಪಾ ಸರೋವರದಿಂದ ಹೊಂಟು ಕಿಷ್ಕಿಂಧಾ ಪರ್ವತದ ವರೆಗೆ ರಾಮ ಲಕ್ಷ್ಮಣರು ಹೋಗಿ ವಾಲಿಸಂಹಾರದ ವರೆಗಿನ ಭಾಗವನ್ನು ಸಣ್ಣಪ್ರಾಯದ ಭಾಗವತರೊಬ್ಬರು ಓದಿ ಹಾಡಿದರು. ಅರ್ಥಗಾರರೆಲ್ಲರೂ ತಮ್ಮ ಚಟುವಟಿಕೆಯನ್ನೂ ತಮಗೆ ಯಕ್ಷಗಾನದಲ್ಲಿರುವ ಅಭಿರುಚಿಯನ್ನು ಬಂದ ಕರ್ನಾಟಕ ಬಾಂಧವರಿಗೆ ತೋರ್ಪಡಿಸಿದರು (ಸ್ವದೇಶಾಭಿಮಾನಿ.)

ಶ್ರೀಕೃಷ್ಣ ಸಂಗೀತ ಕನ್ನಡ ನಾಟಕ ಮಂಡಲವು

ತಾಬ ನಾಟಕಶಾಲೆಯ ಮನೆ ವೆಂಕಟಪೇಟೆ, ಬಾಗಲಕೋಟೆ

ಗುಳೇದಗುಡ್ಡ ಶ್ರೀಮತಿ ಗಂಗೂಬಾಯಿಯವರ ಈ ಹೊಸ ನಾಟಕ ಕಂಪನಿಯಲ್ಲಿ ಅಭಿನಯಿಸಲು ಸುಸ್ವರೂಪ, ಸುಶೀಲ, ಸುಶಿಕ್ಷಿತ ಹಾಗೂ ಹಾಡು ಬಲ್ಲ ನಾಟ್ಯಕಲಾಭಿಜ್ಞರಾದ ಬಾಲ ಬಾಲಿಕೆಯರೂ, ಸ್ತ್ರೀ-ಪುರುಷರೂ

ಬೇಕಾಗಿದ್ದಾರೆ.

ಅದೇ ಪ್ರಕಾರ ಪೆಟ್ಟಿಗೆ ಹಾಗೂ ತಬಲಾ ಬಾರಿಸುವದರಲ್ಲಿ ನಿಪುಣರಾದವರೂ ಬೇಕಾಗಿದ್ದಾರೆ. ಇಚ್ಛೆಯಿದ್ದವರು ಸಮಕ್ಷಮ ಇಲ್ಲವೆ ಪತ್ರದ್ವಾರದಿಂದ ವಿಚಾರಿಸಿಕೊಳ್ಳಬೇಕು.

—ವ್ಯವಸ್ಥಾಪಕ

ಕಳೆದ ಸಾಮಾನುಗಳು.

ಹೀಗಿದ ಎರಡು ವಾರಗಳಲ್ಲಿ ಒಂದು ರಿಂಗು ಬಾಗಲಕೋಟೆ ಕಲಾದಗಿ ಬೀದಿಯಲ್ಲಿ ಬಿದ್ದುದನ್ನು ನಮ್ಮ ಕಡೆಗೆ ಓರ್ವರು ತಂದು ಕೊಟ್ಟಿದ್ದಾರೆ. ಕಳೆದುಕೊಂಡವರು ಅದರ ವರ್ಣನೆಯನ್ನು ನಮಗೆ ಹೇಳಿ, ಅದನ್ನು ತೆಗೆದುಕೊಂಡು ಹೋಗಬಹುದು.

ವ್ಯವಸ್ಥಾಪಕ "ಕನ್ನಡಿಗ"

ಮಾರಾಟ.

೩೭ 'X ೨೪' 'X ೨೪' ಆಕಾರದ ಹೊಸ ತಿಜೋರಿಯನ್ನು ಮಾರತಕ್ಕದ್ದಿದೆ. "ವಿಳಾಸ ಸಂಖ್ಯೆ ೧೧"

ಗೃಹಕೃತ್ಯದ ನೋಟೀಸು.

ಗಲಗಲಿ ಪಾಂಡುರಂಗಾಚಾರ್ಯ ಕಟ್ಟಿ ಎಂಬುವರು ಕಳೆದ ಜುಲೈ ೨೮ ನೇ ತಾರೀಖಿನಲ್ಲಿ ವಿಜಾಪೂರದಲ್ಲಿ ಮೃತಪಟ್ಟಿರುತ್ತಾರೆ. ಇವರಿಗೆ ಕೆಳಗೆ ರುಜು ಮಾಡುವ ಕಮಲಾಬಾಯಿ ಆದ ನಾನು ೨ ನೇ ಹೆಂಡತಿ ಆಗಿಯೂ ವೆಂಕುಬಾಯಿ ಎಂಬುವರು ೧ ನೇ ಹೆಂಡತಿ ಆಗಿಯು ಇರುತ್ತೇವೆ. ೧ ನೇ ಹೆಂಡತಿಯಾದ ವೆಂಕೂಬಾಯಿ ಎಂಬುವರು ನಮ್ಮ ಯಜಮಾನರು ತೀರಿಕೊಂಡ ಲಾಗಾಯಿತ ವಿಶ್ವಾಸವಿಲ್ಲದವರಾಗಿಯೂ ನನಗೆ ಎಲ್ಲ ಭಾಗದಲ್ಲಿಯೂ ನಮ್ಮ ಯಜಮಾನರ ಆಸ್ತಿ ವಿಷಯದಲ್ಲಿ ನಷ್ಟ ಪಡಿಸಲು ಅನೇಕ ಜನಗಳ ಸಹಾಯದಿಂದ ನನಗೆ ಮೋಸಪಡಿಸಬೇಕೆಂದಿರುತ್ತಾರೆ. ಅಲ್ಲದೇ ಇವರು ನನ್ನ ಸಮಕ್ಷಮ ವಿಜಾಪೂರದಲ್ಲಿ ನನ್ನ ತಂದೆ ಮತ್ತು ಚಿಕ್ಕಪ್ಪನವರು ಇವರ ಸೋದರಮಾವನವರಾದ ಹಣಮಂತಾಚಾರ್ಯರ ಸಮಕ್ಷಮ ಒಬ್ಬ ಹುಡಗನನ್ನು ದತ್ತಕವಮಾಡಿಕೊಂಡು ನನ್ನನ್ನು ಹಾಳು ಮಾಡುತ್ತೇನೆಂದು ಹೇಳಿರುತ್ತಾರೆ. ೧ ನೇ ಹೆಂಡತಿ ವೆಂಕುಬಾಯಿಯವರು ನನ್ನ ಸಮ್ಮತಿ ಇಲ್ಲದೆ ದತ್ತಕ ತೆಗೆದುಕೊಳ್ಳಕೂಡದು. ಯಜಮಾನರ ಆಸ್ತಿ ಪೈಕಿ (೨) ಜಮೀನುಗಳು ವ್ಯಾಜ್ಯದಲ್ಲಿ ಬಿದ್ದಿದೆ. ಇದೆಲ್ಲ ಹೋಗಲಾಗಿ ೮|೧೦ ವರ್ಷ ಆದ ನಂತರ ತನ್ನ ಭಾಗದ ಆಸ್ತಿಗೆ ದತ್ತಕ ಮಾಡಿಕೊಳ್ಳಬಹುದು. ಶಿವಾಯ ಈಗ ಮಾಡಿಕೊಂಡದ್ದಾಗಲೀ ಅಥವಾ ದತ್ತಕಕ್ಕಾಗಿ ಬಂದದ್ದಾಗಲಿ ಇದು ನಿರ್ಬ್ರಿಸುವದಲ್ಲ. ಮುಂದೆ ಸಂಭವಿಸುವ ಕಷ್ಟ ನಷ್ಟಗಳಿಗೆ ಗುರಿಯಾಗುತ್ತಾರೆ. ಖಂಡಿತ ತಿಳಿಯುವದು.

ಕಮಲಾಬಾಯಿ.

ಕರ್ನಾಟಕ ವೈಭವ.

ರಾಷ್ಟ್ರೀಯ ಪಕ್ಷದ ಉಜ್ವಲವಾದ ವಾರ ಪತ್ರಿಕೆಯು

(ಸಂಪಾದಕ ಹನುಮಂತರಾವ ಮೋಹರೆ.)

ಕಳೆದ ೩೭ ವರುಷಗಳಿಂದ ಈ ವಾರ ಪತ್ರಿಕೆಯು ಸ್ವಾತಂತ್ರ್ಯ ಸೇನೆಯ ಮುಂಭಾಗದಲ್ಲಿ ನಿಂತು ಬ್ಯೂರಾಕ್ರಶಿಯ ಕೂಡ ಹೋರಾಡಹತ್ತಿರುತ್ತದೆ. ಬ್ಯೂರಾಕ್ರಸಿಯ ಅನ್ಯಾಯಗಳನ್ನು ನಿರ್ಭಯದಿಂದ ಬೈಲಿಗೆಳೆಯುವದರಲ್ಲಿಯೂ ಪ್ರಚಲಿತ ರಾಜಕೀಯ ವಿಷಯಗಳನ್ನು ನಿರ್ದಾಕ್ಷಿಣ್ಯದಿಂದ ಚರ್ಚಿಸುವದರಲ್ಲಿಯೂ ಅದು ಕಂಕಣಬದ್ಧವಾಗಿರುತ್ತದೆ. ಕರ್ನಾಟಕ ಸಂಸ್ಕೃತಿಯು ನೆಲೆಗೆದೂಂಡಿರುವ ಆರ್ಯ ಸಂಸ್ಕೃತಿಯ ಪುನರುಜ್ಜೀವನವಾಗಬೇಕೆಂಮ ಹಂಬಲಿಸುತ್ತದೆ. ನಾಣ್ಯಗಳ ಚಲನಪದ್ಧತಿ ಮೊದಲಾದ ಅರ್ಥಶಾಸ್ತ್ರದ ಮೇಲೆ ಸಾಮಾನ್ಯ ಜನರಿಗೆ ಸುಲಭವಾಗಿ ತಿಳಿಯುವಂಥ ಲೇಖಗಳು ಇದರಲ್ಲಿ ಬರುತ್ತವೆ. ರಾಷ್ಟ್ರೀಯ ಚಳವಳಿಯ ನಿಜವಾದ ರಹಸ್ಯ ತಿಳಿದುಕೊಳ್ಳಬೇಕಾದರೆ ಈ ಪತ್ರವನ್ನು ಅವಶ್ಯವಾಗಿ ಓದಬೇಕು.

ಇದರ ವ್ಯಾಪ್ತಿಯು ಮುಂಬಯಿ ಮದ್ರಾಸ ಕರ್ನಾಟಕಗಳಲ್ಲಿ ದುವದಲ್ಲದೆ ನಿಜಾಂ ಇಲಾಖೆ ಮೈಸೂರು ಮೊದಲಾದ ಸಂಸ್ಥಾನಗಳಲ್ಲಿ ಸಹ ಇರುತ್ತದೆ. ಜಾಹಿರಾತ ಕೊಡುವವರಿಗೆ ಒಳ್ಳೇ ಲಾಭದಾಯಕವಿರುತ್ತದೆ. ಸ್ವದೇಶಿ ಕಾರಖಾನದಾರರಿಗೆ ಸವಲತ್ತು ತೋರಿಸಲ್ಪಡುವದು.

ವಿಳಾಸ— ಮ್ಯಾನೇಜರ, ಕರ್ನಾಟಕ ವೈಭವ
ಪೋಸ್ಟ— ವಿಜಾಪೂರ

ಬೇಕಾಗಿದೆ.

ಉತ್ತಮ ಫೋಟೋಗ್ರಾಫಿ ಕೆಲಸ ಬಲ್ಲಂತಹ, ಪ್ರತಿಯೊಂದು ಕೆಲಸದ ಮಾಹಿತಿಯುಳ್ಳಂತಹ ಮತ್ತು ಸ್ಟೂಡಿಓದಲ್ಲಿ ಕೆಲಸ ಮಾಡಿದಂತಹ ಅನುಭವಿಕರು ಬೇಕು. ಪಗಾರ ಯೋಗ್ಯತೆಯ ಮೇಲೆ! ಮುಂದೆ ವರ್ಷಕ್ಕೆ ೩ ರು. ಬಡತಿ ಸಿಗುವದು. ಕನ್ನಡಿಗರು ಯಾರಾದರೂ ಇದ್ದರೆ ಸರ್ಟಿಫಿಕೆಟ ಸಹಿತ ಅರ್ಜಿ ಕಳಿಸಬೇಕು.

ಬಿ. ಜಿ. ಚಿಮ್ಮಲಗಿಕರ,

(ಗ್ರಾಫಿಕ್ ಸ ಫೋಟೊಸ್ಟುಡಿಯೊ ಬಾವಲಿ ಹೈದ್ರಾಬಾದ ದಕ್ಷಿಣ.)

ಲಿವರಿನ ಗಡಿಯಾರಗಳು.

ಲಿವರಿನ ಕೈ ಗಡಿಯಾರ ರೂ. ೯.

ಲಿವರಿನ ಕಿಸೆಯೊಳಗಿಡುವ ಗಡಿಯಾರ ರೂ. ೬.

ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಮೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವುದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ತಾಳುವವು. ಬೆಲೆ ಕಡಿಮೆಯೆಂದು ಅಂಜುವ ಕಾರಣವಿಲ್ಲ. ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚ ಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ. ಅದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ.

ಲಿಬೋ ವಾಚ ಕಂ. (ಇಂಡಿಯಾ.) ಬಾಂಬೆ ಕೆ ೪.

ಭೂಲೋಕದ ಕಾಮಧೇನು.

ದೇವಲೋಕದ ಕಾಮಧೇನುವು ಹೇಗೆ ಬೇಡಿದವರ ಇಷ್ಟಾರ್ಥಗಳನ್ನು ಕೊಡುವದೋ ಹಾಗೆಯೇ ಮನುಷ್ಯರ ಇಷ್ಟ್ಯರ್ಥವಾದ ಧನಾರ್ಥ ಕಾಮಮೋಕ್ಷಾದಿಗಳನ್ನು ಕೊಡುವ —

ಕ್ರಮವು ಇನಾಂ!!! ಆ. ಹಾಸಲು

ಇಲ್ಲದೆ ಸರ್ವಸ್ವ ಉಚಿತವಾಗಿ ಕೊಡಲ್ಪಡುವ ನಮ್ಮ

ವೈದ್ಯವಿದ್ಯೆ.

ಎಂಬ ಪುಸ್ತಕವನ್ನು ತರಿಸಿ ಓದಿ ಪುರುಷಾರ್ಥಗಳನ್ನು ಪಡೆಯಿರಿ.

ಏಜಂಟರು:—ಜಂಬುಲಿಂಗಸ್ವಾ ಜಾಲವಾದಿ.

ಸ್ಟೇಶನರ್ ಬಾಗಲಕೋಟೆ.

ರಾಜವೈದ್ಯ ನಾರಾಯಣಜಿ ಕೇಶವಜಿ

೫೬. ಕೀಸಾ ಬಜಾರ್. ಮದ್ರಾಸು

ಯಾವದೇ { ಆಕಾರದ / ನಕ್ಷೆಯ / ನಂಬರಿನ } ಗಡಿಯಾರವನ್ನು

ಬರೇ ೭ ರೂಪಾಯಿಗಳಿಗೆ ಕೊಡುತ್ತೇವೆ.

ಮೂಲ ಬೆಲೆ ರೂ. ೧೪, ಅರ್ಧ ಬೆಲೆ ರೂ. ೭



ಬರೇ ಒಂದು ತಿಂಗಳ ಬಗ್ಗೆ ನಾವು ಈ ದರವನ್ನು ಈ ವರ್ಷದಲ್ಲಿ ಮಾತ್ರ ಕೊಡುತ್ತೇವೆ. ಎಲ್ಲಾ ಗಡಿಯಾರಗಳನ್ನು ಅರ್ಧ ಬೆಲೆಗೆ ಮಾರುತ್ತೇವೆ. ಅತ್ಯುತ್ತಮ ಚಲನೆ! ನಿರ್ದೋಷ ಯಂತ್ರ ರಚನೆ!! ಧರಿಸುವದಕ್ಕೆ ಯೋಗ್ಯ ಹಾಗೂ ರಮ್ಯ!!! ಎಲ್ಲಾ ಗಡಿಯಾರಗಳಿಗೆ ಗ್ಯಾರಂಟಿ ಇರುತ್ತದೆ. ಯಾವದೇ ಆಕಾರದ, ನಕ್ಷೆಯ, ನಂಬರಿನ ಕೈಗಡಿಯಾರವನ್ನು ಉತ್ಕೃಷ್ಟ ರೇಶಿಮೆ ಪಟ್ಟಿಯ ಸಹಿತ ಉಚಿತವಾಗಿ ಕೊಡುತ್ತೇವೆ **ಬೆಲೆ ರೂ. ೭**

ಅಲ್ಪವೇ ಇವೆ; ಈಗಲೇ ಬರೆಯಿರಿ

ಪತ್ತೆ:— ಸ್ವಾನ ಹೌಸ ಪೋ. ಬಿ ೫೦೮. ಜಿ. ಟಿ. ಮದ್ರಾಸ

ಅತ್ಯಲ್ಪವಿದೆ! ಉಚಿತ!

ಕೇವಲ ಉಚಿತ ಕೇವಲ ಉಚಿತ



"ತಾರಾ" ಲೀವರ್ ರಿಜಿಸ್ಟರ್ಡ್ ಪೋಕೆಟ್ ವಾಚ್ ೧೮ ಕೆರೆಟ್ ರೋಲ್ಡ್ ಗೋಲ್ಡಿನದು ಮತ್ತು ಇದರ ಮೇಲೆ ೫ ವರ್ಷದ ಗ್ಯಾರಂಟಿ ಇರುವದೆಂದು ಗಡಿಯಾರ ಕರ್ತರು ಅಚ್ಚು ಹೊಡೆದಿರುವರು. ಈ ಗಡಿಯಾರವನ್ನು ಕೊಂಡುಕೊಳ್ಳುವವರಿಗೆ ನಾವು ನಮ್ಮ "ಸಿ" ರಜಿಸ್ಟರ್ಡ್ ಟೈಂಪೀಸನ್ನು ಉಚಿತವಾಗಿ ಕೊಡುತ್ತೇವೆ. ಇದೊಂದು ಅಪೂರ್ವ ಕಾಣಿಕೆ. ಕೆಲವೇ ಗಡಿಯಾರಗಳಿವೆ. ಒಮ್ಮೆ ಕೊಂಡು ನೋಡಿರಿ! ಉಚಿತವಾಗಿ ಸಿಗುವ ಹಾಗು "ತಾರಾ" ಲೀವರ್ ರಿಜಿಸ್ಟರ್ಡ್ ೧೮ ಕೆರೆಟ್ ರೋಲ್ಡ್ ಗೋಲ್ಡಿನ ಪೋಕೆಟ್ ವಾಚ್ ಗಡಿಯಾರಗಳಿಗೆ ಕೂಡಿ ಬರೇ ರೂಪಾಯಿ ■

ಕ್ರೈಟ್ಟನ್ ವಾಚ್ ಕಂ ಪೋ, ಜಿ. ಮದ್ರಾಸ ■■■

ಕಲರಾ ಎಂಬ ಮಹಾಂತಿಬೇದಿ

ನಿಮ್ಮ ಊರಿನಲ್ಲಿ ಇದ್ದರೆ ಭಯಪಡಬೇಡಿ

ನೀವು ಅದನ್ನು ನಿಗ್ರಹಿಸಿಕೊಳ್ಳಬೇಕಾದರೆ

ಹೆನ್‌ರೀಸ್ ಓಮಂ ಕರ್‌ಪೂರ

ಸುಲಭವಾಗಿ ತಿನ್ನಬಹುದು.

ಸ್ವಲ್ಪ ತಣ್ಣೀರಿನಲ್ಲಿ ಅರ್ಧ ಟೀಸ್ಪೂನ್ ಅಳತೆ ಮೇಲೆತಿಳಿಸಿರುವಂಥ ಔಷದವನ್ನು ಹಾಕಿ ಯಾವ ಕಾಲದಲ್ಲಾದರು ಎಲ್ಲಿಯಾದರು ಎಷ್ಟುಸಲ ಬೇಕಾದರು ತಿನ್ನಬಹುದು. ಕಳೆದ 50 ವರ್ಷಗಳಿಂದ ವಿಷಬೇದಿಯನ್ನು ಸಕಲ ಹೊಟ್ಟೆನೋವು ಮೊದಲಾದ ಉಪದ್ರಗಳನ್ನು ಎಷ್ಟೋ ಜನಗಳಿಗೆ ಗುಣವಾಗಿ ಹೆಸರುಹೋದದ್ದು.

ಉತ್ತಮವಾದ ಔಷದವೆಂದು ಪರಿಶೋಧಿಸಿ ಶ್ಲಾಘ್ಯವಾದದ್ದು. ಮೇಲೆ ತಿಳಿಸಿರುವಂಥ ವ್ಯಾಧಿಗಳನ್ನು ಗುಣಪನ್ನು ಮಾಡುವಂಥಾದ್ದು. ಪುನಃ ಆ ವ್ಯಾಧಿಗಳು ಬಾರದೇ ಇರುವಹಾಗೆ ಮಾಡುವಂಥಾದ್ದು ಈ ಔಷಧವು.

ಈ ಔಷದವನ್ನು ಉಪಯೋಗಿಸಿದವರಲ್ಲಿ ಒಬ್ಬರು ಇದದರಿಂದ ಏಳುಮಕ್ಕಳೂ ಮತ್ತು ಮೂರುಜನ ಹೆಂಗಸರೂ ಸೌಖ್ಯಪಟ್ಟಿರುತ್ತಾರೆ ಎಂದು ಹೇಳಿದರು. ಮತ್ತೊಬ್ಬರು ಕಲರಾ ಬಂದಿರುವಂಥ ನಾಲ್ಕು ಜನಗಳು ಈ ಔಷಧವನ್ನು ತಿಂದು ಬದುಕಿದ್ದಾರೆ ಎಂದು ತಿಳಿಸಿದರು.

ನಿಮಗೆ ವಾಡಿಕೆಯಾಗಿರುವಂಥ ಔಷಧ ಅಂಗಡಿಯಲ್ಲಿ ಒಂದು ಶೀಶಾಯಿ ಔಷದವನ್ನು ತೆಗೆದುಕೊಳ್ಳಿ.

ಇಲ್ಲದೇಹೋದರೆ ಬೆಂಗಳೂರು ಕಂಟೋನ್ಮೆಂಟ್ ಹೊಸ ಮಾರ್‌ಕೆಟ್ ಸ್ಕ್ವೆಯರ್ 47-49 ನಂ

ಮೆಸ್‌ಸರ್‌ಸ್ ಡಿ. ಸ್ಯೆಯುದ್ ಹೂಸ್‌ಮಾನ್ ಅಂಡ್ ಕಂಪನಿಯವರಿಗೆ

ಬರೆದು ತರಿಸಿಕೊಳ್ಳುವುದು.

Sole Manufacturers

LITTLE'S ORIENTAL BALM AND PHARMACEUTICALS

LIMITED.

15 Armenian Street, *MADRAS*

'ಕನ್ನಡಿಗ'ನ ವಾರ್ಷಿಕ ಚಂದಾ ನಿರ್ಣಯ.

ಪೋಷಕರಿಗೆ ವಾ. ೫ ರೂ ಉಪಕಾರಕರ್ತೃಗಳಿಗೆ ವಾ. ೧೦ ರೂ ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ	೧ ರೂ ಇಲ್ಲವೇ, ೧೫ ನಂಬರಿಗೆ ಕಡಿಮೆಯಾಗದಂಥ ೯೦೦೦ ಯಾರ್ಡ ಕೈನೂಲು
ಪರಸ್ಥಳದವರಿಗೆ	ಮನಿಯಾರ್ಡರದಿಂದ ೧-೧೩-೦ ವಿ ಪಿ. ಯಿಂದ ೨-೧-೦ ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೬೦೦೦ ಯಾರ್ಡ ಕೈನೂಲು
ವಾಚನಾಲಯ ಸಭೆ, ಸಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ—	ಸ್ಥಳದವರಿಗೆ ೨ ೦-೦ ಪರಸ್ಥಳಕ್ಕೆ ಮನಿಯಾರ್ಡರದಿಂದ ೨-೧೩-೦ ,, ವಿ ಪಿ ಯಿಂದ ೩-೧-೦
ಸರಕಾರ, ಮುನಸಿಪಾಲಿಟಿ, ಲೋಕಲ್ ಬೋರ್ಡ ಇತ್ಯಾದಿ.	ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೩-೦ ವಿ ಪಿ ಯಿಂದ ೫-೧-೦

ಬಿಡಿ ಸಂಚಿಕೆಗೆ ೯ ಪೈ. ಹಿಂದಿನಸಂಚಿಕೆಯೊಂದಕ್ಕೆ ೨ಆಣೆ. ಧರ್ಮಾರ್ಥವಾಗಿಯಾಗಲೀ, ವರ್ಷದ ಕಡಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ. —**ವ್ಯವಸ್ಥಾಪಕ**

ಮುದ್ರಿಸುವ

ಯಂತ್ರ!

ಸಿಂಗಲ್ ರಾಯಲ್ ಆಕಾರದ ಮುದ್ರಣ ಯಂತ್ರವನ್ನು ಮಾರತಕ್ಕದ್ದಿದೆ. ಯಂತ್ರವು ಉತ್ತಮ ಸ್ಥಿತಿಯಲ್ಲಿದ್ದು, ಕೆಲಸವನ್ನು ಚನ್ನಾಗಿ ಕೊಡುತ್ತದೆ. ಹೆಚ್ಚಿನ ಸಂಗತಿಗಳಿಗಾಗಿ ಬರೆಯಬಹುದು:—

ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ.

ಕಿರ್ಲೋಸ್ಕರ

ಕಬ್ಬಿಣ ನೇಗಿಲುಗಳು

ಹಂಗಾಮು (ಸುಗ್ಗಿ) ಸಮೀಪಿಸಿತು. ಈ ವರ್ಷ ಮಳೆ ಬೆಳೆ ಚನ್ನಾಗಿರುವದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವದು. ಕಿರ್ಲೋಸ್ಕರ ನೇಗಿಲು ನಂ ೧೧, ೯, ೮ ಇವು ಒಕ್ಕಲಿಗರಿಗೆ ಬಹಳ ಉಪಯೋಗ ಬೀಳುತ್ತವೆ. ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುತ್ತವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್. — ಕಿರ್ಲೋಸ್ಕರವಾಡಿ, ಜಿಲ್ಲೆ ಸಾತಾರೆ

ಸ್ಟ್ಯಾಂಡರ್ಡ್ ಕಾಫಿಪುಡಿ.

ಇದು ಉ… ಬೀಜಗಳಿಂದ ಭಾರಿ ಎಲೆಕ್ಟ್ರಿಕ್ ಮಿಷನ್‌ಗಳಲ್ಲಿ ತ…ದ ಅತ್ಯುತ್ತಮ ಕಾಫಿಪುಡಿ. ಕೈಸೋಕದೆ ತಯಾರಾಗುತ್ತಿದ್ದು ಆರೋಗ್ಯವೂ ಬಹು ರುಚಿಕರವೂ ಆಗಿದ್ದು.

ನಾಲ್ಕು ಪಾಟಿ ಕಾಫಿಗೆ ಬೇಕಾಗುವ ಬೇರೆ ಪುಡಿಯ ಅರ್ಧ ಭಾಗದಷ್ಟು ಈ ಪುಡಿಯನ್ನು ಹಾಕಿದರೆ ಸಾಕಾಗುತ್ತದೆ. ಕಾಫಿಗೆ ಮನೋಹರವಾದ …ವನ್ನೂ, ಒಳ್ಳೆ ಸ್ವಾದವನ್ನೂ ಕೊಡುತ್ತದೆ. ಒಂದುಸಲ ಪರೀಕ್ಷಿಸಿ, ಬೇರೆ ಪುಡಿಗಳ ಕಡೆಗೆ ನಿಮ್ಮ ಮನಸ್ಸು ಹೋಗಲಾರದು.

೧ ನೇ ದರ್ಜೆ ಪುಡಿ (ಪ್ಯಾಕಿಂಗ್ …) ೧ ಪೌಂಡಿಗೆ ರೂ ೧-೭-೦

೨ ನೇ ,, ,, ,, ರೂ. ೧-೩-೦

ದಿ ಸ್ಟ್ಯಾಂಡರ್ಡ್ ಕಾಫಿ ಕಂಪನಿ
ಚಿಕ್ಕಪೇಟೆ ಬೆಂಗಳೂರು ಸಿಟಿ.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನೇವರಿ ೩೧ ನೇ ತಾ|| ದಿವಸ ೧೦-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಒಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ. ೨೭೭೭ ಸಯ್ಯದ ಅಲ್ಲಿ ಅಸಗರ ಬಲ್‌ಗ್ರಾಮಿ ಸುಪರಿಂಟೆಂಡಂಟ್ ಸಕ್ರೆಟೇರಿಯಟ್ ಹೈದರಾಬಾದ ಡೆಕ್ಕನ್ನ ರೂ ೧೦೦೦

(೨) ಎಲ್ ಬಿ. ಸಿ. ನಂ ೧೯೭೨ ನಾರಾಯಣ ವಿಠ್ಠಲ ಲೋಣಕರ. ಕೇರ್ ಆಫ್ ಡಿ. ಈ ಪುರಾಣಿಕ ೧೭೭ ಸಹಾಲಪುರ ಇಂದೂರ ೧೦೦೦

(೩) ಎಲ್ ಬಿ. ಸಿ. ನಂ ೩೪೧ ರಾಮಚಂದ್ರ ಅನಂತ ಪಿರೋಜ. ಡಿವಿಜನಲ್ ಫಾರೆಸ್ಟ ಆಫೀಸರ ಧತ್ತೂರಾ. ಪಶ್ಚಿಮಖಾನದೇಶ ರೂ ೮೦೦

(೪) ಬಾಂಡ ನಂಬರು ೭೫೧೭ ಕೇ. ಜೆ. ಫರ್ನಾಂಡೋ ವ್ಯಾಪಾರಸ್ಥ ಬ್ರಿಕ್‌ಸಾಯಿಡ ಸಿಲೋನ, ಕೊಲಂಬೋ. ರೂ ೧೦೦೦

(೫) ಬಾಂಡ ನಂಬರು ೧೩೭೩೪ ಎಸ್. ಜಿ ಜವರೆ ಅಸಿಸ್ಟಂಟ ಸ್ಟೇಶನ್ ಮಾಸ್ತರ ತಿಲಗಿ. ಜಿಲ್ಲಾ ವಿಜಾಪುರ ರೂ ೧೦೦೦

ಬಿ. ಎಸ್. ಆರಾಧ್ಯ
ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ)

ಜೀವ ವಿಮೆಯ ಕಾರ್ಯದಲ್ಲಿ ಅದ್ಭುತವಾದ ಜಯವು!

ಯಾಕಂದರೆ ತನ್ನ ೧೯ ನೇ ವರ್ಷದಲ್ಲಿಯೇ ಸಾವಿರಕ್ಕೆ ೨೦ ರೂಪಾಯಿ ಲಾಭ ಹಂಚಿದೆ

ದಿ ಜನರಲ್ ಅಶ್ಯೂರನ್ಸ ಸೋಸಾಯಿಟಿ ಲಿಮಿಟೆಡ್

ಇದು ಎಲ್ಲ ವಿಮಾ ಕಂಪನಿಗಳನ್ನು ಹಿಂದೆ ಒಗೆದು ಮುಂದೆ ಬಂದಿದೆ. ಇದರಿಂದ ಇದರಲ್ಲಿಯ ಕರ್ತೃತ್ವ ಶಕ್ತಿಯು ವ್ಯಕ್ತವಾಗುವದಲ್ಲದೇ, ಇದಕ್ಕಿಂತಲೂ ಹೆಚ್ಚಿನ ಲೋಕೋಪಕಾರವಾದ ಕಂಪನಿಯೇ ಇಲ್ಲವೆಂಬುದು ಸಿದ್ಧವಾಗುತ್ತದೆ.

ಸುಲಭ ಕಂತು! ಸಾಕಷ್ಟು ಸೌಕರ್ಯ! ಹೆಚ್ಚಾಗಿ ಲಾಭ!!!

ವಿಮೆಯ ಹಣ ಒಂದು ಕೋಟಿ! ೨೧ ತಿಂಗಳಲ್ಲಿ ಹೆಚ್ಚಾಗಿ ಉತ್ಪನ್ನವಾದದ್ದು ರೂ ೧,೦೯,೦೦೦

ಏಜಂಟರು ಬೇಕು! ಧಾರಾಳವಾದ ಕಮಿಶನ್!

ಎಸ್. ಕೆಬ್ಬೂರ ಬಿ. ಎ. ಎಫ್. ಎಸ್. ಅಜಮೀರ.

Apply to.- H. Ramachandra Rao
Branch Secretary, opposite Minto Hospital,
Bangalore City
or
Agents at Bellary & Hubli.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.